
ಹ್ಯೂಗೊ ಲೇ ಮಿಸರೆಬಲ್ಸ್

ದುಃಖಾರ್ತರು



ಅನುವಾದ

ಎ. ಪಿ. ಸುಬ್ಬಯ್ಯ

ದುಃಖಾರ್ತರು

ವಿಕ್ಟರ್ ಹ್ಯೂಗೊವಿರಚಿತ 'ಲೇ ಮಿಸರೆಬಲ್ಸ್' ಬೃಹತ್ ಇಂಗ್ಲಿಷ್ ಕಾದಂಬರಿಯ
ಸಂಕ್ಷಿಪ್ತ ಕನ್ನಡ ಭಾವಾನುವಾದ

ಅನುವಾದಕರು
ಎ. ಪಿ. ಸುಬ್ಬಯ್ಯ

೨೦೦೨
ಅತ್ರಿ ಬುಕ್ ಸೆಂಟರ್
೪ ಶರಾವತಿ ಕಟ್ಟಡ ಬಲ್ಮಠ ಮಂಗಳೂರು
ಸ್ಥಾಪನೆ ೧೯೭೫

DUHKHAARTARU— abridged Kannada version of the novel *Les Miserables* by Victor Hugo (1802-85). Source : The Nelson Classics in English. Translator: A. P. Subbayya (1901-77). The first edition of *Duhkhaartaru* was published in 1960 by Popular News Agency, Puttur 574202. The present vetted edition is published by G. N. Ashokavardhana (1952) *for* Athree Book Centre, 4 Sharavati Building, Balmatta, Mangalore 575001. Phone 0824 425161, 492397. e-mail : athreebook@sify.com

Pages 344 Rs 70

Cover design : N. S. Ram Goutham (1979)

ಅತ್ರಿ ಬುಕ್ ಸೆಂಟರಿನ ಖಜಿನೆಯ ಪ್ರಕಟಣೆ : ವಿಕ್ಟರ್ ಹ್ಯೂಗೊ ೨೦೦ ಮತ್ತು
ಎ. ಪಿ. ಸುಬ್ಬಯ್ಯ ೧೦೦ ಗೌರವಾರ್ಥ

ರೂಪಾಯಿ ಎಪ್ಪತ್ತು

Printed at
Sri Shakti Electric Press Jayanagar Mysore 570 014
Phone : 0821 567775, 463572
e-mail : rsmmurti@eth.net

ಅರ್ಪಣೆ

ವಿದ್ಯಾರ್ಥಿಯಾಗಿದ್ದವನೊಬ್ಬನು ಹಠಾತ್ತಾಗಿ ಸಂಸಾರದ ಜವಾಬ್ದಾರಿಯನ್ನು ಹೊತ್ತು, ಹಳ್ಳಿಯಲ್ಲಿ ಕೃಷಿವೃತ್ತಿಯಲ್ಲಿ ಜೀವಿಸುತ್ತಾ ಲೋಕವ್ಯವಹಾರಗಳಲ್ಲಿ ಸಿಕ್ಕಿ ಬೀಳುವಾಗ, ಅವನು ತುಂಬಾ ಗಾಬರಿಗೊಳ್ಳುವುದೂ ಸಮಸ್ಯೆಗಳ ಪರಿಹಾರಕ್ಕಾಗಿ ಇತರರ ಸಲಹೆಗಳನ್ನು ಕೇಳುವುದೂ ವಾಡಿಕೆ. ಇಂಥ ಸಂದರ್ಭಗಳಲ್ಲಿ ಅಯೋಗ್ಯರ ಸಹವಾಸಗಳು ದೊರೆತದ್ದಾದರೆ ಸಮಸ್ಯೆಗಳ ಪರಿಹಾರವಾಗುವುದರ ಬದಲು ಅವುಗಳು ಹೆಚ್ಚಿ ಕಷ್ಟ, ನಷ್ಟ, ಅಪಮಾನಾದಿಗಳೂ ದೊರಕುವುದಿದೆ.

ನನ್ನ ಜೀವನದಲ್ಲೂ ಒಂದು ಕಠಿಣ ಪ್ರಸಂಗ ಬಂದು, ಕೆಲವರು ಒಂದು ವಿಧದ ಆಲೋಚನೆಗಳನ್ನು ಹೇಳಿಕೊಡುತ್ತಿದ್ದಾಗಲೇ ಒಬ್ಬರೇ ಒಬ್ಬ ವ್ಯಕ್ತಿ ಒಂದು ಸ್ಪಷ್ಟವಾದ ಮಾರ್ಗವನ್ನು ಹೇಳಿಕೊಟ್ಟು ನನ್ನ ಭವಿಷ್ಯದ ಜೀವನ ಮಾರ್ಗವನ್ನೇ ಯೋಗ್ಯದಿಕ್ಕಿಗೆ ತೋರಿಸಿಕೊಟ್ಟಿರುತ್ತಾರೆ. ಅನೇಕ ವರ್ಷಗಳು ಕಳೆದು ಹಿಂದಿನ ಚರಿತ್ರೆಯನ್ನು ನೋಡು ವಾಗ, ಈ ಒಬ್ಬ ವ್ಯಕ್ತಿಯ ಮಾರ್ಗದರ್ಶನವಿಲ್ಲದಿದ್ದರೆ ನಾನು ಎಂಥ ಕಷ್ಟಕ್ಕೆಲ್ಲ ಬೀಳಬಹುದಿತ್ತೋ ಎಂದು ಊಹಿಸುವಾಗಲೇ ಹೆದರಿಕೆಯಾಗುತ್ತದೆ.

ಇದೇ ರೀತಿ ಲೌಕಿಕ ಧರ್ಮಸಂಕಟ ಬಂದಾಗಲೆಲ್ಲಾ ಆ ಒಬ್ಬರು ವ್ಯಕ್ತಿ ನನಗೂ, ನನ್ನಂತೆಯೇ ನೂರಾರು ಜನರಿಗೂ ದಕ್ಷಿಣಕನ್ನಡ ಜಿಲ್ಲೆಯಲ್ಲೇ ಒಬ್ಬ ಮಾರ್ಗದರ್ಶಕ ರಾಗಿದ್ದಾರೆ. ನನ್ನ ಒಂದು ಸಂದರ್ಭದಲ್ಲಿ ಆ ವ್ಯಕ್ತಿಯು ಜೀನ್‌ವಾಲ್‌ಜೀನನಿಗೆ ಬಿಷಪ್ ಮಿರಿಯಲ್‌ರಂತೆಯೇ ಕಾರ್ಯವೆಸಗಿರುವರು. ನೂರಾರು ಜೀನ್‌ವಾಲ್ ಜೀನರು—ಚಿಕ್ಕ ರೂಪದಲ್ಲಾದರೂ—ಇರಬಹುದಾದರೂ ಬಿಷಪ್ ಮಿರಿಯಲ್‌ರವ ರಂಥವರು ಸಾವಿರಕ್ಕೂ—ಹತ್ತುಸಾವಿರಕ್ಕೂ—ಒಬ್ಬರು ಸಿಕ್ಕುವುದು ಅಸಾಧ್ಯ.

ಈ ಅರ್ಪಣೆಯನ್ನು ಅವರನ್ನು ಕೇಳಿ ಮಾಡುತ್ತಿಲ್ಲ—ಅವರನ್ನು ವಿಚಾರಿಸಿದರೆ ಅನುಮತಿಯನ್ನು ಸಂತೋಷದಿಂದ ಕೊಡಲಾರರು. ಆದ್ದರಿಂದ ಅವರನ್ನು ಕೇಳದೆಯೇ ಮಾನಸಿಕವಾದ ಪ್ರಾರ್ಥನೆ, ನಮಸ್ಕಾರಗಳನ್ನರ್ಪಿಸಿ, ಅವರಿಗಿದನ್ನು ಅರ್ಪಿಸಿರುತ್ತೇನೆ.

ಆ ವ್ಯಕ್ತಿ ಪುತ್ತೂರಿನ

ಶ್ರೀಮಾನ್ ಮೊಳಹಳ್ಳಿ ಶಿವರಾಯರವರು

[೧೮೮೦-೧೯೬೭]

ಪುತ್ತೂರು
೨೦-೫-೧೯೫೭

ಎ. ಪಿ. ಸುಬ್ಬಯ್ಯ
ಅನುವಾದಕ

ಶಿವರಾಯರ ಬಗ್ಗೆ

ಪುತ್ತೂರು ತಾಲೂಕಿನ ಅನಭಿಷಿಕ್ತ ಚಕ್ರವರ್ತಿ, ಸಾಹಿತ್ಯ-ಶಿಕ್ಷಣ-ಸಹಕಾರ-ಗ್ರಾಮೋದ್ಧಾರ ಮುಂತಾದ ರಾಷ್ಟ್ರೋತ್ತಾರಕ ಕ್ರಿಯಾಕಲಾಪಗಳ ಪ್ರೇರಕ ಬಲ, ಶಿವರಾಮ ಕಾರಂತರಂಥ ಮಾನವ ವಿದ್ಯುಜ್ಜನಕವನ್ನು (human dynamo) ಪುತ್ತೂರಿಗೆ ಆಹ್ವಾನಿಸಿ ಪ್ರತಿಷ್ಠಾಪಿಸಿ ಇವರ ಅಸಂಖ್ಯ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತ ಕೃತುಶಕ್ತಿ, ವೃತ್ತಿಯಿಂದ ವಕೀಲರಾದರೂ ಪ್ರವೃತ್ತಿಯಿಂದ ಪ್ರೀತಿಯ ನ್ಯಾಯಾಲಯದಲ್ಲಿ ದ್ವೇಷ ವೈಷಮ್ಯಗಳನ್ನು ಬಿಡಿಸುತ್ತಿದ್ದ ದಯಾಮೂರ್ತಿ, ಮೇರುವ್ಯಕ್ತಿಯಾಗಿದ್ದರೂ ಎನಗಿಂತ ಕಿರಿಯರಿಲ್ಲವೆಂದು ತಿಳಿದು ಬಾಳುತ್ತಿದ್ದ ಕರುಣಾರ್ದ್ರ ಹೃದಯಿ, ಎ. ಪಿ. ಸುಬ್ಬಯ್ಯನವರಿಗೆ ಮಾತ್ರವಲ್ಲ ತಾಲೂಕಿನ ಅಸಂಖ್ಯ ಜೀನ್‌ವಾಲ್‌ಜೀನರಿಗೆ ಬಿಷಪ್ ಮಿರಿಯಲ್ ಆಗಿದ್ದ ದಾರಿದೀಪ, ಬರೆದಷ್ಟೂ ಮುಗಿಯದ, ಅಗೆದಷ್ಟೂ ದೊರೆಯುವ ಕಾರಣಪುರುಷ—ಇವರೇ ಮೊಳ್ಳಹಳ್ಳಿ ಶಿವರಾಯರು. ಶಿವರಾಮ ಕಾರಂತರ ನುಡಿಗಳಲ್ಲಿ, "ಹತ್ತು ಜನರಿಗಾಗಿ ದುಡಿಯುವುದರಲ್ಲಿ ಅವರನ್ನು ಮಿಗಿಸುವ ಜನರನ್ನೇ ನಾನು ಕಂಡಿಲ್ಲ. ಅವರ ನೇತೃತ್ವದಲ್ಲಿ ತಾಲೂಕು ಬೋರ್ಡು ನಡೆಯುತ್ತಿದ್ದಾಗ, ಎಷ್ಟು ಶಾಲೆಗಳಾದುವು! ಗ್ರಾಮ ಗ್ರಾಮಕ್ಕೂ ರಸ್ತೆಗಳಾದುವು. ಪ್ರತಿ ಶಾಲೆಗೂ ಅವರು ಹೋಗುತ್ತಿದ್ದರು. ಮಕ್ಕಳ ಪ್ರತಿಯೊಂದು ಚಟುವಟಿಕೆಯನ್ನೂ ಪರಿಶೀಲಿಸುತ್ತಿದ್ದರು. ಅವರ ಕೈಬರಹದ ಪತ್ರಿಕೆಗಳನ್ನೂ ನೋಡುವವರೇ! ತಾವು ಹಿಡಿದ ಕೆಲಸ ಯಾವುದೇ ಆಗಲಿ, ಅದರ ಸೂಕ್ಷ್ಮ ವಿವರಗಳೆಲ್ಲವೂ ಅವರಿಗೆ ಬೇಕು. ಮಕ್ಕಳ ಜೀವನ ಸೊಗಸಾಗುವುದರಲ್ಲಿ ವಿಶೇಷ ಆಸಕ್ತಿ ವಹಿಸಿದರು. ಅವರ ಈ ಆಸಕ್ತಿಯೇ ವಿದ್ಯಾವಿಷಯದ ಕೆಲಸಗಳಲ್ಲಿ ನನಗೆ ಮುಖ್ಯ ಪ್ರೇರಣೆಯಾಯಿತು. ಆ ವಿಷಯದಲ್ಲಿ ಅಥವಾ ಇನ್ನಿತರ ಚಟುವಟಿಕೆಗಳಲ್ಲಿ ನಾನು ಏನೇ ಕೆಲಸ ಕೈಗೊಂಡರೂ, ನನಗೆ ಅವರು ಬೆಂಬಲವಾಗಿ ನಿಂತರು. ನನ್ನ ಜೀವನದಲ್ಲಿ ಹಿರಿಯ ಅಣ್ಣನ ಸ್ಥಾನ ಅವರಿಗೆ ಸಲ್ಲುತ್ತದೆ. ಮುಂದೆ ಅವರು ಪುತ್ತೂರನ್ನು ಬಿಟ್ಟು, ಮದ್ರಾಸು ನಗರದಲ್ಲಿ ನೆಲೆಸಿದರು. ಅವರಿಲ್ಲದ ಪುತ್ತೂರು ಸತ್ತೂರಾಗಿಯೇ ನನಗೆ ಕಾಣಿಸುತ್ತಿದೆ. ಒಬ್ಬ ವ್ಯಕ್ತಿಯ ವರ್ಚಸ್ಸಿನಿಂದ ಜನಜೀವನ ಎಷ್ಟು ಸುಧಾರಿಸಬಹುದೋ, ಅಷ್ಟೆಲ್ಲವನ್ನೂ ಅವರು ಮಾಡಿದವರು. ನಮ್ಮ ಕನ್ನಡ ನಾಡೇ ಇನ್ನೊಬ್ಬ ಶಿವರಾಯರನ್ನು ಕೊಡಲಾರದು."

ಉದ್ಧರಣೆ : "ಹುಚ್ಚು ಮನಸ್ಸಿನ ಹತ್ತು ಮುಖಗಳು" ಪುಸ್ತಕದಿಂದ

ಮುನ್ನುಡಿ

'ಲೇ ಮಿಸರೆಬಲ್ಸ್' ಎಂಬ ಫ್ರೆಂಚ್ ಕಾದಂಬರಿಯು ಪ್ರಪಂಚದ ಈ ವರೆಗಿನ ಕಾದಂಬರಿಗಳಲ್ಲೆಲ್ಲ ಅತ್ಯುತ್ತಮವಾದುದು—ಅದು ಕಾದಂಬರಿಗಳ ರಾಜಾಧಿರಾಜ—ಎಂದು ಮೊದಲಾಗಿ ಪ್ರಕಟವಾಗಿರುವ ಆಂಗ್ಲಭಾಷಾಪಂಡಿತರ ಅಭಿಪ್ರಾಯವನ್ನು ನಾನು ಓದಿದ್ದೇನೆ, ಕೆಲವೊಮ್ಮೆ ಕೇಳಿದ್ದೇನೆ. ಆ ಕಾದಂಬರಿಯನ್ನು ನಾನು ಓದಿ ಸಂತೋಷಪಟ್ಟಿರುವಂತೆಯೇ ಕನ್ನಡ ಭಾಷೆ ಮಾತ್ರ ಬರುವವರು ಈ ಕನ್ನಡ ಅನುವಾದವನ್ನು ಓದಿ ಸಂತೋಷಪಡಲಿ ಎಂದು ನಾನು ಈ ಕಾರ್ಯವನ್ನು ಕೈಕೊಂಡಿದ್ದೇನೆ.

'ಲೇ ಮಿಸರೆಬಲ್ಸ್'ನ್ನು ಅನೇಕರು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿರುತ್ತಾರೆ. ಅಂಥ ತರ್ಜುಮೆಯಾದ ಒಂದು ಪುಸ್ತಕವನ್ನು ಅನುಸರಿಸಿ—ಅದರ ಯಾವ ಒಂದು ಅಧ್ಯಾಯವನ್ನೂ ಬಿಡದೆ—ಈ ಭಾವಾನುವಾದವನ್ನು ರಚಿಸಿರುತ್ತೇನೆ.

ಈ ಪುಸ್ತಕದ ಕೈಬರಹದ ಪ್ರತಿಯನ್ನು ಓದಿ, ಅದರಲ್ಲಿದ್ದ ಭಾಷಾದೋಷಗಳನ್ನು ಸರಿಪಡಿಸಿ ಕೊಟ್ಟಿರುವ ಕನ್ನಡ ಮತ್ತು ಸಂಸ್ಕೃತ ಭಾಷಾ ವಿದ್ವಾಂಸರಾದ ಶ್ರೀಮಾನ್ ಕಡವ ಶಂಭುಶರ್ಮರವರಿಗೂ [೧೮೮೫-೧೯೫೪] ಹೀಗೆ ಸರಿಪಡಿಸಲಾದನಂತರದ ಪ್ರತಿಯನ್ನು ಅಚ್ಚು ಹಾಕಿಸಬೇಕೋ ಬೇಡವೋ ಎಂದು ನಾನು ಹಿಂಜರಿಯುತ್ತಿದ್ದಾಗ, ಅದನ್ನೇ ತರಿಸಿಕೊಂಡು ತಾವು ಕೂಲಂಕಷವಾಗಿ ಓದಿ, ಮೂಲಕ್ಕೆ ಹೋಲಿಸಿ, ಅಗತ್ಯಬಿದ್ದಲ್ಲಿ ಪುನಃ ತಿದ್ದಿ, ಉತ್ತಮಪ್ರತಿಯನ್ನು ನನ್ನಿಂದ ಪುನಃ ಬರೆಸಿ, ತಾನು ಸಂತೋಷಿಸಿ—ತನ್ನ ಸಂತೋಷವನ್ನು ಇತರರಲ್ಲಿ ಹಂಚಿ—ಈ ಪ್ರಕಟನೆಯ ಸಾಹಸಕ್ಕೆ ತಕ್ಕ ನವಸ್ಫೂರ್ತಿಯನ್ನು ನನಗೆ ಕೊಟ್ಟು, ನನ್ನನ್ನು ಕಾರ್ಯೋನ್ಮುಖನಾಗಿ ಮಾಡಿರುವ ಕನ್ನಡ ಮತ್ತು ಇಂಗ್ಲಿಷ್ ಭಾಷಾವಿದ್ವಾಂಸರಾದ ಶ್ರೀಮಾನ್ ಉಗ್ರಾಣ ಮಂಗೇಶರಾಯರವರಿಗೂ [೧೮೮೩-೧೯೭೩] ನನ್ನ ಕೃತಜ್ಞತಾಪೂರ್ವಕವಾದ ಪ್ರಣಾಮಗಳನ್ನು ಇಲ್ಲಿ ಅರ್ಪಿಸುತ್ತೇನೆ.

ಈ ಪುಸ್ತಕವನ್ನು ಪ್ರಕಟಿಸುವ ಕಾರ್ಯವು ಇಂದಿನ ದಿನಗಳಲ್ಲಿ ಬಹುಕಷ್ಟತರದ್ದೇ ಆಗಿದೆ. ಈ ವಿಷಯವನ್ನು ಗ್ರಹಿಸಿ, ನಾನೊಮ್ಮೆ ನಿರುತ್ಸಾಹಿಯಾಗಿದ್ದಾಗ, ಪ್ರಕಟನೆಯ ಲಾಭ, ನಷ್ಟ, ಸಮಸ್ತ ಜವಾಬ್ದಾರಿಗಳನ್ನು ತಾನೇ ಸಹಿಸುವುದಾಗಿ ಒಪ್ಪಿ, ಮುಂದೆ ಬಂದು ಈ ಕಾರ್ಯವನ್ನು ಪೂರ್ತಿಗೊಳಿಸಿರುವ ಪುತ್ತೂರಿನ ಪೊಪ್ಯುಲರ್ ನ್ಯೂಸ್ ಏಜನ್ಸಿಯ ಶ್ರೀ ಕೆ. ಶಿವರಾಮ ಹೊಳ್ಳರವರಿಗೆ ನನ್ನ ವಂದನೆಗಳನ್ನು ಇಲ್ಲಿ ಒಪ್ಪಿಸುತ್ತೇನೆ.

ಪುತ್ತೂರು
೪-೧೨-೧೯೬೦

ಎ. ಪಿ. ಸುಬ್ಬಯ್ಯ
ಅನುವಾದಕ



ಎ. ಪಿ. ಸುಬ್ಬಯ್ಯ ಪಾರ್ವತಿಯಮ್ಮ

೧೯೦೧-೭೭ ೧೯೧೧-೮೮

ಪುಳ್ಳಿ ಕಂಡ ಅಜ್ಜ ಅಜ್ಜಿ

೧೯೩೦-೬೦ರ ಪುತ್ತೂರು ವಿಶಿಷ್ಟ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಂದೋಲನದ ಜೇನುಗೂಡಾಗಿತ್ತು. ಮುತ್ತು ಬೆಳೆವ ಪುತ್ತೂರಿನ ಕಂಪು ಅಂದು ಕನ್ನಡ ನಾಡಿನ ಒಳಗೂ ಹೊರಗೂ ಪಸರಿಸಿತ್ತು. "ಹತ್ತೂರು ಕೊಟ್ಟರೂ ಪುತ್ತೂರು ಕೊಡೆ" ಎಂಬ ಜನಜನಿತ ಉಕ್ತಿಗೆ ಅನ್ವರ್ಥಕವಾಗಿತ್ತು. ಕನ್ನಡ ವಾಙ್ಮಯಕ್ಕೆ ನೂತನಾಯಾಮ ನಿರ್ಮಿಸಿದ ಕೋಟ ಶಿವರಾಮ ಕಾರಂತ (೧೯೦೨-೯೭), ಸಹಕಾರಾಂದೋಲನದ ಅಧ್ವರ್ಯು ಜನಸೇವಕ ವಕೀಲ ಮೊಳಹಳ್ಳಿ ಶಿವರಾವ್ (೧೮೮೦-೧೯೬೭), ಸಂಸ್ಕೃತ-ಕನ್ನಡ ಉಭಯ ಭಾಷಾ ಪ್ರಕಾಂಡ ಪಂಡಿತ ಕಡವ ಶಂಭುಶರ್ಮ (೧೮೮೫-೧೯೬೪), "ಚಿರವಿರಹಿ" ಕಾದಂಬರೀಕರ್ತೃ ಮತ್ತು ನ್ಯಾಯವಾದಿ ಬೆಳ್ಳೆ ರಾಮಚಂದ್ರರಾವ್ (೧೯೦೦-೮೩), ಇಂಗ್ಲಿಷ್-ನ್ಯಾಯಶಾಸ್ತ್ರಕೋವಿದ ಚಕ್ರಕೋಡಿ ಶ್ಯಾಮಶಾಸ್ತ್ರಿ (೧೯೦೪-೮೩) ಮೊದಲಾದವರು ಈ ಹಿನ್ನೆಲೆ ಚೇತನಗಳು. ಈ ಎಲ್ಲ ಪ್ರಾತಃಸ್ಮರಣೀಯರ ಸಮಕಾಲೀನ, ಸಮಾನಸ್ಕಂಧ ಮತ್ತು ಸಹಮನೋವೃತ್ತಿಯ ಸ್ನೇಹಿತರು ಅಡಮನೆ ಪಳತಡ್ಕ ಸುಬ್ಬಯ್ಯ—ನನ್ನ ತಂದೆಯ ತಂದೆ.

ಅಜ್ಜ ನಮ್ಮನ್ನಗಲಿದಾಗ ನಾನು ಹದಿಮೂರರ ಹುಡುಗ. ಅಜ್ಜಿ ಪಾರ್ವತಿಯಮ್ಮ ಮತ್ತೂ ಹನ್ನೊಂದು ವರ್ಷ ನಮ್ಮೊಂದಿಗಿದ್ದರು. ಪೌರಾಣಿಕ ಪ್ರತಿಮೆ ಪಾರ್ವತೀ-ಪರಮೇಶ್ವರ (ವಾಗರ್ಥ) ದಾಂಪತ್ಯಕ್ಕೆ ವಾಸ್ತವ ನಿದರ್ಶನ ಪಾರ್ವತೀ-ಸುಬ್ಬಯ್ಯ ಸತಿಪತಿತ್ವ ಎಂದು ಈ ತುಂಬು ಕುಟುಂಬದ ನಿಕಟ ಬಂಧುತ್ವ ಮತ್ತು ಸಾಹಚರ್ಯ ಲಾಭವಿದ್ದ ಹಿರಿಯರೆಲ್ಲರೂ ಹೇಳುತ್ತಿದ್ದರು.

ಅಜ್ಜನೊಂದಿಗೆ ನಾನು ಆಡಿ ಬೆಳೆದ ಸಂತಸದ ಕ್ಷಣಗಳು ಇನ್ನೂ ಹಸುರಾಗಿಯೇ ಇವೆ. ಪುತ್ತೂರು ಪೇಟೆಯ ಕೋರ್ಟ್ ಬಳಿ ಇರುವ "ಪೊಲೀಸ್ ಲೇನ್"ನಲ್ಲಿ (ಓಣಿ) ಅಜ್ಜನ ಮನೆ ಇತ್ತು. ಅದೊಂದು ದೊಡ್ಡ ಮನೆ. ವಿಶಾಲ ಆವರಣ. ಎದುರಿನ ಅಂಗಳದಲ್ಲಿ ಮತ್ತು ಹಿತ್ತಲಿನಲ್ಲಿ ಹರಡಿಕೊಂಡಿದ್ದ ಮಾವಿನ ಮರಗಳು, ಗಗನಚುಂಬಿಯಾದ ತೆಂಗಿನ ಮರಗಳು. ರಜೆ ಸಿಕ್ಕೊಡನೆ ನಾವು ಹತ್ತಾರು ಮೊಮ್ಮಕ್ಕಳು ಅಲ್ಲಿಗೆ ಧಾವಿಸುತ್ತಿದ್ದೆವು, ಅಜ್ಜ ಅಜ್ಜಿಯರ ಪ್ರೀತಿಯ ಮಳೆಯಲ್ಲಿ ತೊಯ್ದು ಉಲ್ಲಸಿತರಾಗಲು.

ಅಜ್ಜ ನೋಡುವುದಕ್ಕೆ ತೆಳ್ಳಗೆ, ಬೆಳ್ಳಗೆ, ಎತ್ತರ ಮತ್ತು ನೇರ. ಸದಾ ಶುಭ್ರ ವಸನಧಾರಿ.

ಪೇಟೆಗೆ ಹೋಗುವಾಗ ಗರಿಗರಿಯಾದ ಕಚ್ಚೆ ಪಂಚೆ, ಖಾದಿ ಅಂಗಿ, ಬೂದು ಬಣ್ಣದ ಕೋಟು, ಕಪ್ಪು ಟೋಪ್ಪಿ.

ಅಜ್ಜ ಕೋಟು ತೊಟ್ಟು ಟೋಪ್ಪಿ ಏರಿಸಿದರೆಂದರೆ ಅವರ ಪೇಟೆ ಸವಾರಿಯ ಮೂರಿ ನಮಗೆ ಸಿಗುತ್ತಿತ್ತು. ಸರಿ ನಾವು—ಮಕ್ಕಳ ಸೈನ್ಯ—ಅವರ ಮುಂದೆ ಮತ್ತು ಹಿಂದೆ. ಕೈಯಲ್ಲಿ ಕಪ್ಪು ಬಣ್ಣದ ವಾಕಿಂಗ್ ಸ್ಟಿಕ್ ಹಿಡಿದು ನಿಧಾನವಾಗಿ ಹೆಜ್ಜೆ ಹಾಕುತ್ತ ಅಲ್ಲೇ ಮಾರ್ಗದೊತ್ತಿಗಿನ ಕಟ್ಟಡದ (ಈಗಲೂ ಇದೆ) ಮಹಡಿಯಲ್ಲಿದ್ದ ತನ್ನ ವಕೀಲ ಮಗನ (ಎ. ಪಿ. ಗೌರೀಶಂಕರ, ೧೯೩೪) ಆಫೀಸಿನಲ್ಲಿ ತುಸು ಹೊತ್ತು ವಿಶ್ರಮಿಸಿ ಮತ್ತೆ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಒಂದು ಸುತ್ತು ಹಾಕಿ ಮರಳುವ ಆ ಸಂಜೆಯ ಹೊತ್ತಿನಲ್ಲಿ ದೇವಸ್ಥಾನ ಮತ್ತು ಕೋರ್ಟಿನ ಬಳಿ ಇರುವ ಅಶ್ವತ್ಥ ಮತ್ತು ಅರಳೀ ಮರಗಳಲ್ಲಿ ಗೂಡು ಕಟ್ಟಿಕೊಂಡ ಬಾವಲಿಗಳು ಮತ್ತು ಹಕ್ಕಿಗಳ ಕಲರವ ನಮಗೆ ಕೇಳುತ್ತಿತ್ತು.

ಮನೆಯ ಎದುರಿನ ಉದ್ದನೆಯ ಹಜಾರದಲ್ಲಿ ಅಜ್ಜ ರಾತ್ರಿ ಬಹಳ ಹೊತ್ತಿನ ತನಕ ಓದುತ್ತಿದ್ದುದು ಮತ್ತು ಬರೆಯುತ್ತಿದ್ದುದು ನನಗಿನ್ನೂ ನೆನಪಿದೆ. ಅವರ ಇಂಗ್ಲಿಷ್ ಮತ್ತು ಕನ್ನಡ ಅಕ್ಷರಗಳೆರಡೂ ಸ್ಫುಟವಾಗಿ ಮುತ್ತು ಪೋಣಿಸಿದಂತಿದ್ದುವು. ಕೇವಲ ಅಕ್ಷರ ಮಾತ್ರವಲ್ಲ—ಅವರ ಜೀವನ ಶೈಲಿಯೇ ಹಾಗಿತ್ತು—ನೇರ, ನಿಖರ ಮತ್ತು ಪಾರದರ್ಶಕ.

ಎ. ಪಿ. ಸುಬ್ಬಯ್ಯ ಮೂಲತಃ ಕೊಡಗಿನವರು. ಸಂಪ್ರದಾಯಸ್ಥ ಬ್ರಾಹ್ಮಣ ಮನೆತನದಲ್ಲಿ ಜನನ (೧೯೦೧). ಇವರ ತಂದೆ ಎ. ಪಿ. ತಿಮ್ಮಪ್ಪಯ್ಯ ಮತ್ತು ತಾಯಿ ಲಕ್ಷ್ಮಿ. ಇವರಿಗೆ ಪುಟ್ಟ ತಂಗಿ ವೆಂಕಟಲಕ್ಷ್ಮಿ ಬಂದದ್ದು ನಾಲ್ಕು ವರ್ಷದ ಬಳಿಕ. ಮನೆಯಲ್ಲಿ ಹರ್ಷದ ಹೊನಲು ಹೆಚ್ಚು ಕಾಲ ಹರಿಯಲಿಲ್ಲ. ಅಜ್ಜನಿಗೆ ಹತ್ತು ವರ್ಷ ಪ್ರಾಯವಿದ್ದಾಗ ತಂದೆ ತೀರಿಕೊಂಡರು. ಮುಂದೆ ಇವರು ತಮ್ಮ ಅಜ್ಜನ ಕೃಪಾಶ್ರಯದಲ್ಲಿ ಬೆಳೆದರು.

ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪಡೆದ ಅಜ್ಜ ಮುಂದಿನ ವಿದ್ಯಾಭ್ಯಾಸಕ್ಕೆ ಮಂಗಳೂರಿನ ಗವರ್ನ್‌ಮೆಂಟ್ ಕಾಲೇಜ್ ಸೇರಿದರು. ಅಂದು ಆ ಕಾಲೇಜ್ ಮದ್ರಾಸು ವಿಶ್ವವಿದ್ಯಾಲಯಕ್ಕೆ ಸೇರಿದ್ದ ಅತ್ಯುತ್ತಮ ಕಾಲೇಜುಗಳಲ್ಲಿ ಒಂದಾಗಿತ್ತು. ಎರಡು ವರ್ಷಗಳ ಇಂಟರ್ಮೀಡಿಯಟ್ ಬಳಿಕ ಅನಿವಾರ್ಯ ಕಾರಣಗಳಿಗಾಗಿ ಓದು ನಿಲ್ಲಿಸಿ, ಪುತ್ತೂರು ಸನಿಹದಲ್ಲಿರುವ ಆರ್ಯಾಪಿನ ಮರಿಕೆಯಲ್ಲಿ ಪಿತ್ರಾರ್ಜಿತವಾಗಿ ಬಂದ ನೂರಾರು ಎಕರೆ ಆಸ್ತಿಯ ಚುಕ್ಕಾಣಿ ಹಿಡಿದರು. ಎಳೆಯ ಪ್ರಾಯದಲ್ಲೇ ಗುರುತರ ಹೊಣೆ ಹೆಗಲೇರಿತು. ತಮ್ಮ ಪಾಲಿಗೆ ಬಂದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋದರು. ಯಾವ ಕೆಲಸವನ್ನಾದರೂ ಅಚ್ಚುಕಟ್ಟಾಗಿ ನಿರ್ವಹಿಸುವುದು ಅವರ ಜಾಯಮಾನವಾಗಿತ್ತು.

ದಾಂಪತ್ಯ ಜೀವನಕ್ಕೆ ಅಜ್ಜ ಕಾಲಿರಿಸಿದಾಗ ಅಜ್ಜನಿಗೆ ಹತ್ತೊಂಬತ್ತರ ತಾರುಣ್ಯ. ಇವರ ಕೈ ಹಿಡಿದಾಕೆ—ಅಂದರೆ ನಮ್ಮ ಅಜ್ಜಿ—ಪಾರ್ವತಿಗೆ ಒಂಬತ್ತರ ಲಾವಣ್ಯ! ಪುತ್ತೂರಿನ ಸಮೀಪದ ಪಂಜಿಗುಡ್ಡೆ ಅಜ್ಜಿಯ ತವರೂರು. ಇವರಿಬ್ಬರದು ಸುಖೀ ಮತ್ತು ಸಮೃದ್ಧ ದಾಂಪತ್ಯ—ನಾಲ್ಕು ಗಂಡು ಮತ್ತು ಆರು ಹೆಣ್ಣು ಮಕ್ಕಳು. ಹಾಕಿ ಆಟದಲ್ಲಿ ತೀವ್ರ ಆಸಕ್ತಿ ಇದ್ದ ಅಜ್ಜ ತಮಾಷೆ ಮಾಡುತ್ತಿದ್ದರಂತೆ, "ನಮ್ಮದು ಹಾಕಿ ತಂಡ." ಅಂದು ಊರಿನಲ್ಲಿ ಇಂಥ ಹಲವು ತಂಡಗಳಿದ್ದುವು!

ಅಜ್ಜ ನೂರಕ್ಕೆ ನೂರು ಪ್ರಾಮಾಣಿಕರಾಗಿದ್ದರು; ನೈತಿಕವಾಗಿ ಪರಿಶುದ್ಧರಾಗಿದ್ದರು. ಧಾರ್ಮಿಕ ವಿಧಿ ನಿಯಮಗಳನ್ನು ಆಚರಿಸುತ್ತಿದ್ದರೂ ಕುರುಡು ನಂಬುಗೆಯ "ಅಶ್ವ ದೃಷ್ಟಿ" (ಕಣ್ಕಪ್ಪಡಿ)

ಇವರದಾಗಿರಲಿಲ್ಲ. ಜಮೀನುದಾರಿಕೆ ಇವರ ಪಾಲಿಗೆ ಬಂದದ್ದು ಹೌದಾದರೂ ಅದರೊಂದಿಗೆ ವಕ್ರಿಸುವ ಪಾಳೇಗಾರಿಕೆ ಮನೋಭಾವ ಬರಲಿಲ್ಲ.

ವಾಸ್ತವವಾಗಿ ಅಜ್ಜನಿಗೆ ಕೃಷಿಯಲ್ಲಿ ತೀವ್ರ ಆಸಕ್ತಿ ಏನೂ ಇರಲಿಲ್ಲ. ಆಸಕ್ತಿ ಇದ್ದದ್ದು—ಸಾಹಿತ್ಯದಲ್ಲಿ, ಬರವಣಿಗೆಯಲ್ಲಿ, ಸಾಂಸ್ಕೃತಿಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ. ಹಾಗಾಗಿಯೇ ಇರಬೇಕು—ತಮ್ಮ ಹಿರಿಯ ಮಗ ತಿಮ್ಮಪ್ಪಯ್ಯನಿಗೆ (೧೯೨೭) ಹದಿನಾರು ವರ್ಷ ತುಂಬುತ್ತಲೇ ಇಡೀ ಆಸ್ತಿಯ ಹೊಣೆಯನ್ನು ಹಸ್ತಾಂತರಿಸಿ ಪುತ್ತೂರಿನ ಪೊಲೀಸ್ ಲೇನಿನಲ್ಲಿ ಜಾಗ ಕೊಂಡು ಮನೆಕಟ್ಟಿಸಿ ನೆಲಸಿದರು (೧೯೪೫).

ಅಜ್ಜ ಇಲ್ಲಿ ಓದು ಬರವಣಿಗೆಗಳಿಗೆ ತಮ್ಮನ್ನು ಪೂರ್ಣವಾಗಿ ಸಮರ್ಪಿಸಿಕೊಂಡರು. ಫ್ರೆಂಚ್ ಕಾದಂಬರೀಕಾರ ವಿಕ್ಟರ್ ಹ್ಯೂಗೊ (೧೮೦೨-೮೫) ಬರೆದ *Les Miserables* ಇವರನ್ನು ಸರ್ವಾಪೋಶಿಸಿತ್ತು. ಇದು ರಾಮಾಯಣ, ಮಹಾಭಾರತಗಳಿಗೆ ಸರಿಸಮವಾದ ಮೇರುಕೃತಿ ಎಂದು ಹೇಳುತ್ತಿದ್ದರು. ಕನ್ನಡಿಗರಿಗೆ ಈ ಕಾದಂಬರಿ ತಲಪಲೇಬೇಕೆಂಬ ಅದಮ್ಯ ತುಡಿತ ಇವರನ್ನು ಅನುವಾದದ ಮಹತ್ಕಾರ್ಯಕ್ಕೆ ಪ್ರೇರೇಪಿಸಿತು. ಮಹಾನ್ ಕಾದಂಬರಿಯ ಸಂಗ್ರಹಾನುವಾದವನ್ನು "ದುಃಖಾರ್ತರು" ಎಂಬ ಹೆಸರಿನಲ್ಲಿ ಪ್ರಕಟಿಸಿದರು (೧೯೬೦). ಪುಸ್ತಕವನ್ನು ಮೊಳಹಳ್ಳಿ ಶಿವರಾಯರಿಗೆ ಸಮರ್ಪಿಸುತ್ತ ಅವರ ಮಾರ್ಗದರ್ಶನ ತನ್ನ ಜೀವನವನ್ನು ರೂಪಿಸಿತೆಂದು ವಿನಯದಿಂದ ಹೇಳಿಕೊಂಡಿದ್ದಾರೆ.

ಮುಂದೆ ಅಜ್ಜನ ಗಮನ ಹರಿದದ್ದು, ಆಂಗ್ಲ ಕಾದಂಬರೀಕಾರ ಚಾರ್ಲ್ಸ್ ಡಿಕನ್ಸನ (೧೮೧೨-೭೦) "ಡೇವಿಡ್ ಕಾಪರ್‌ಫೀಲ್ಡ್" ಕಡೆಗೆ. ಈ ಕಾದಂಬರಿಯನ್ನು ಅದೇ ಹೆಸರಿನಲ್ಲಿ ಅನುವಾದಿಸಿ ಪ್ರಕಟಿಸಿದರು (೧೯೬೬). ಪರಕೀಯ ದೇಶ ಮತ್ತು ಸಂಸ್ಕೃತಿಯ, ಅದರಲ್ಲೂ ಸಾಹಿತ್ಯಕವಾಗಿ ಶ್ರೇಷ್ಠ ದರ್ಜೆಯ, ಕೃತಿಗಳನ್ನು ಅನುವಾದಿಸಲು ಅಸಾಮಾನ್ಯ ಎದೆಗಾರಿಕೆ ಮತ್ತು ತಾಳ್ಮೆ ಬೇಕು. ಅಜ್ಜನಿಗೆ ಇವೆರಡೂ ಇದ್ದುವು. ಈ ಕೃತಿಯನ್ನು ಅಜ್ಜ ತಮ್ಮ ಗುರುಗಳಾದ ಉಬ್ಬಿಲ ಕಣ್ಣಪ್ಪನವರಿಗೆ ಅರ್ಪಿಸುತ್ತ ಅವರ ಪ್ರೇರಣೆ ಪ್ರೋತ್ಸಾಹವನ್ನು ಕೃತಜ್ಞತೆಯಿಂದ ಸ್ಮರಿಸಿದ್ದಾರೆ.

ಮೊಳಹಳ್ಳಿ ಶಿವರಾಯರ ಬಗ್ಗೆ ಅಜ್ಜನಿಗೆ ಅತೀವ ಗೌರವಾದರ. "ಕೆನರಾ ಸಾರಸ್ವತ್" ಎಂಬ ಆಂಗ್ಲ ಪತ್ರಿಕೆಯಲ್ಲಿ ಶಿವರಾಯರ ಬಗ್ಗೆ ಪ್ರಕಟವಾದ ಲೇಖನವನ್ನು ಅಜ್ಜ ಮತ್ತು ಸಿ. ಕೆ. ಪದ್ಮಯ್ಯಗೌಡ ಎಂಬವರು ಒಟ್ಟಾಗಿ ಅನುವಾದಿಸಿ ಪ್ರಕಟಿಸಿದ (೧೯೬೯) ಚಿಕ್ಕ ಹೊತ್ತಗೆ "ಶ್ರೀಯುತರಾದ ಮೊಳಹಳ್ಳಿ ಶಿವರಾಯರ ಜೀವನ ಚರಿತ್ರೆಯ ಕೆಲವು ವಿಷಯ ಪರಿಚಯ" ಸಾಕಷ್ಟು ಮಾಹಿತಿ ನೀಡುತ್ತದೆ. "ಒಬ್ಬ ವ್ಯಕ್ತಿಯ ಮಹತ್ತ್ವವನ್ನೋ, ಸಮಾಜದಲ್ಲಿನ ಅವನ ಸ್ಥಾನವನ್ನೋ ಆ ವ್ಯಕ್ತಿಯ ಕಾಲದ ಜನರ ಮೂಲಕ, ಅದರಲ್ಲೂ ಆ ವ್ಯಕ್ತಿಯ ಪರಿಚಯವಿದ್ದವರ ಮೂಲಕ, ತಿಳಿಯುವಷ್ಟು ಅಳೆಯುವಷ್ಟು ಸುಲಭ ಇತರ ಕಾಲದ ಅಪರಿಚಿತ ಜನರ ಮೂಲಕ ತಿಳಿಯುವುದೂ ಅಳೆಯುವುದೂ ಆಗಲಾರದು." ಪ್ರಸ್ತಾವನೆಯಿಂದ ಆಯ್ದ ನುಡಿ.

ಶೃಂಗೇರಿಯ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀಯವರ (೧೮೯೨-೧೯೫೪) ಬಗ್ಗೆ ಅಜ್ಜನಿಗೆ ಭಕ್ತಿ ಗೌರವಗಳಿದ್ದುವು. ಹಾಗಾಗಿಯೇ *Dialogues with the Guru* (ಆರ್. ಕೃಷ್ಣಸ್ವಾಮಿ ಐಯ್ಯರ್) ಎಂಬ ಪುಸ್ತಕವನ್ನು "ಗುರುಗಳೊಡನೆ ಸಂವಾದ" ಎಂಬ ಹೆಸರಿನಲ್ಲಿ ಅನುವಾದಿಸಿದರು (೧೯೫೯). ೨೦೦ ಪುಟಗಳಷ್ಟಿರುವ ಈ ಪುಸ್ತಕ ೧೯೬೫ರಲ್ಲಿ ದ್ವಿತೀಯ ಮುದ್ರಣ ಕಂಡಿತು.

ಚಕ್ರವರ್ತಿ ರಾಜಗೋಪಾಲಾಚಾರಿಯವರ (ರಾಜಾಜಿ, ೧೮೭೯-೧೯೭೨) ಬಗ್ಗೆ ಅಜ್ಜನಿಗೆ

ಅಪಾರ ಅಭಿಮಾನ. ರಾಜಗೋಪಾಲಾಚಾರಿಯವರನ್ನು ಇವರು ಬಣ್ಣಿಸುತ್ತಿದ್ದುದು ಹೀಗೆ :

ಚಕ್ರವರ್ತಿ : ಅಂತಾರಾಷ್ಟ್ರೀಯ ಖ್ಯಾತಿವಂತ
ರಾಜ : ಗವರ್ನರ್ ಜನರಲ್, ವೈಸರಾಯ್ ಮುಂತಾದ ಉನ್ನತಾಧಿಕಾರಿ
ಗೋಪಾಲ್ : ಗೋವುಗಳಂತಿರುವ ಮಂದಬುದ್ಧಿಯವರ ರಕ್ಷಕ
ಆಚಾರ್ಯ : ತ್ಯಾಗಿ, ಧರ್ಮ-ಕರ್ಮ-ಜ್ಞಾನ ಅನುಷ್ಠಾನಿ

ಚಾರಿ : ಯಾರಿಗೂ ದೊರಕುವವನು, ಲಾಚಾರಿ : ೮೦-೮೨ ವರ್ಷವಾಗಿ ಕೃಶ ದೇಹಿ. ಅಜ್ಜನ ಸುಹಾಸ ಪ್ರಜ್ಞೆಗೆ ನಿದರ್ಶನವಿದು.

ರಾಜಾಜಿಯವರ ದೂರದರ್ಶಿತ್ವದ ಚಿಂತನೆಗಳುಳ್ಳ ಇಂಗ್ಲಿಷ್ ಪುಸ್ತಕವನ್ನು "ಭಾರತಕ್ಕೆ ಬೇಕಾದ ಕೃಷಿ ಯೋಜನೆ" ಎಂಬ ಹೆಸರಿನಲ್ಲಿ ಹೊರತಂದರು (೧೯೫೫), ಅವರ ಭಾಷಣ ಮತ್ತು ಲೇಖನಗಳನ್ನು ಸಂಗ್ರಹಿಸಿ ಅನುವಾದಿಸಿ "ಸತ್ಯಮೇವ ಜಯತೇ" (೧೯೫೫) ಎಂಬ ಹೆಸರಿನಲ್ಲಿ ಪ್ರಕಟಿಸಿದರು.

ನಮ್ಮ ಅಜ್ಜನ ಬಳಿ ಆ ಕಾಲದ ಬೆರಗಾದ ಒಂದು ಗ್ರಾಮೊಫೋನ್ ಇತ್ತು. ಎಂ. ಎಸ್. ಸುಬ್ಬಲಕ್ಷ್ಮಿ, ಕುಂದನ್ಲಾಲ್ ಸೈಗಲ್, ಪಂಕಜ್ ಮಲ್ಲಿಕ್, ಮಹಮದ್ ರಫಿ, ಮುಖೇಶ್ ಮೊದಲಾದ ಅಮರ ಗಾಯಕರ ಧ್ವನಿತಟ್ಟೆ(ಗಾನದೋಸೆ)ಗಳಿದ್ದುವು. ಆದರೆ ಅಜ್ಜ ಅತ್ಯಂತ ಜತನದಿಂದ ಕಾಪಾಡಿಕೊಂಡು ಬಂದದ್ದು ರಾಜಾಜಿಭಾಷಣದ ಮುದ್ರಿಕೆಯನ್ನು. ಪುತ್ತೂರು ಮನೆಯ ಮಹಡಿಯಲ್ಲಿ ಆಗಾಗ ನಮಗೆ ಆ ಭಾಷಣವನ್ನು ಕೇಳಿಸುತ್ತಿದ್ದರು—ನಮಗೆ ಅವು ಅರ್ಥವಾಗುವುದಿಲ್ಲವೆಂದು ಖಾತ್ರಿ ಗೊತ್ತಿದ್ದರೂ!

ಅಜ್ಜ ತನ್ನನ್ನು ಸಾಹಿತ್ಯ ಮತ್ತು ಬರವಣಿಗೆಗಳಿಗಷ್ಟೇ ತೊಡಗಿಸಿಕೊಂಡವರಲ್ಲ. ಸಮಾಜಕ್ಕೆ ಉಪಕಾರಿಯಾಗಿ ತನ್ನಿಂದಾದಷ್ಟು ದೇಣಿಗೆ ನೀಡಬೇಕೆಂದು ಹೇಳುತ್ತಿದ್ದುದಲ್ಲದೇ, ಅನುಷ್ಠಾನಕ್ಕೂ ತಂದಿದ್ದರು. ಸುಮಾರು ಇಪ್ಪತ್ತೈದು ವರ್ಷ ಪರ್ಯಂತ ಆರ್ಯಾಪು ಪಂಚಾಯತಿನ ಅಧ್ಯಕ್ಷರಾಗಿ ಜನ ಮನ್ನಣೆ ಗಳಿಸಿದರು. ಪುತ್ತೂರು-ಕುಂಜೂರುಪಂಜ-ಪಾಣಾಜೆ ರಸ್ತೆಯ ಕಾಮಗಾರಿ ನಡೆದದ್ದು ಇವರ ಕಾಲದಲ್ಲಿ ಎನ್ನುವುದು ಇಲ್ಲಿ ಉಲ್ಲೇಖನೀಯ.

ಪ್ರಾರಂಭದಲ್ಲಿ ಇವರ ಒಲವಿದ್ದುದು ಕಾಂಗ್ರೆಸ್ ಪಕ್ಷದಲ್ಲಿ. ಆದರೆ ಪಕ್ಷದ ಧೋರಣೆಯಿಂದಾಗಿ ದೂರ ಸರಿದು ರಾಜಾಜಿ ಸ್ಥಾಪಿಸಿದ "ಸ್ವತಂತ್ರ ಪಕ್ಷದ" ಸಕ್ರಿಯ ಕಾರ್ಯಕರ್ತರಾದರು. ಗಮನಿಸಬೇಕಾದದ್ದು—ಇವರು ಎಂದಿಗೂ ಧುರೀಣತ್ವಕ್ಕಾಗಿ ಅಥವಾ ಅಧಿಕಾರಕ್ಕಾಗಿ ರಾಜಕಾರಣದಲ್ಲಿ ಭಾಗಿಯಾಗಿರಲಿಲ್ಲ. ಇವರದೇನಿದ್ದರೂ ಮೌಲ್ಯಪ್ರಧಾನ ರಾಜಕಾರಣ—ನಿಜ ಅರ್ಥದಲ್ಲಿ!

ರಡ್‌ಯಾರ್ಡ್ ಕಿಪ್ಲಿಂಗ್ (೧೮೬೫-೧೯೩೬) ಕವಿಯ *If* ಎಂಬ ಕವನ ಅಜ್ಜನಿಗೆ ಬಲು ಪ್ರಿಯವಾಗಿತ್ತು. ಆ ಕವನವನ್ನು ಅನುವಾದಿಸಿದ್ದಾರೆ ಕೂಡ. ಎಳೆಯರಾದ ನಮಗೆ ಕವನವನ್ನು ಹಲವು ಸಾರಿ ಓದಿ ಹೇಳುತ್ತಿದ್ದರು. ಅದರ ಒಂದು ಚರಣ ಹೀಗಿದೆ :

If you can talk with crowds and keep your virtues,
Or walk with kings nor lose the common touch,
If neither foes, nor loving friends can hurt you,
If all men count with you, but none too much,
If you can fill the unforgiving minute,

With sixty seconds' worth of distance run,
Yours is the Earth, and everything that's in it,
And—which is more—you will be a Man, my son !

ಅಜ್ಜ ಮಾಡಿದ ಭಾವಾನುವಾದ

ಎಲ್ಲರೊಳು ಎಲ್ಲಿಯುಂ ಬೆರೆತು ಮಾತಾಡಿದರು
ಶೀಲವನು ಸ್ವಚ್ಛವಾಗುಳಿಸಿಕೊಂಡಿರುತಿರೇ—
ರಾಜಾಧಿರಾಜರೊಳು ಮಿತ್ರತ್ವ ಬೆಳೆಸಿಯೂ
ಪ್ರಜಾಸಾಮಾನ್ಯರೊಳು ಬಾಂಧವ್ಯ ಬಿಡದಿರೇ—
ಓಡುತಿಹ ವೇಳೆಯನು ಎಳ್ಳಷ್ಟು ಕಳೆಯದೆಯೆ
ಎಡೆಬಿಡದೆ ಸಾಹಸ ಸತ್ಕಾರ್ಯ ಗೈದರೇ—
ಪೃಥ್ವಿಯಾ ಒಡೆಯನೂ ಅದಕಿಂತ ಮಿಗಿಲಾಗಿ
ಮಾನವ ಶ್ರೇಷ್ಠನೇ ನೀನಾಗಿ ಬಾಳುವೆ, ಎಲೆ ನನ್ನ ಮಗುವೇ !

ಇಂದು ಅರ್ಥವಾಗುತ್ತಿದೆ ಅಜ್ಜ ಅದೇತಕ್ಕೆ ನಮಗೆ ಈ ಕವನವನ್ನು ಮತ್ತೆ ಮತ್ತೆ ಓದಿ ಹೇಳುತ್ತಿದ್ದರೆಂದು, ಮನಸ್ಸು ಕಾತರಿಸುತ್ತದೆ ಮತ್ತೆ ಅಜ್ಜನ ಬಾಯಿಯಿಂದ ಇದೇ ಕವನವನ್ನು ಕೇಳಬೇಕೆಂದು. ಆದರೆ ಇಲ್ಲಿ ಅಜ್ಜ ಇಲ್ಲವಲ್ಲ! ಇದರೊಂದಿಗೆ ಮನದಲ್ಲಿ ಮಿಡಿಯುವ ಡಿವಿಜಿ-ಪಂಕ್ತಿಗಳು:

ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಡನೊಂದಾಗು ಮಂಕುತಿಮ್ಮ

ಅಜ್ಜನ ಸಾರ್ಥಕ ಸುದೀರ್ಘ ಜೀವನದ ಸಾರಸರ್ವಸ್ವವನ್ನೂ ಈ ಸಾಲುಗಳು ಅಮರವಾಗಿಸಿವೆ.

ಅಜ್ಜ ಮತ್ತು ಶಿವರಾಮ ಕಾರಂತರು ಆಪ್ತ ಸ್ನೇಹಿತರು. ನಿತ್ಯಪರಿವ್ರಾಜಕ ಕಾರಂತರು ಪುತ್ತೂರಿನಲ್ಲಿ ತಂಗಿದ್ದಾಗಲೆಲ್ಲ ಇಬ್ಬರೂ ಪ್ರತಿನಿತ್ಯ ಸಂಜೆ ೫ರ ಹೊತ್ತಿಗೆ ಮಹಡಿಯ ಆಫೀಸಿನಲ್ಲಿ ಭೇಟಿ ಆಗುತ್ತಿದ್ದುದು ದಿನಚರಿಯಾಗಿ ಹೋಗಿತ್ತು. ಕೆಲವೊಮ್ಮೆ ಇನ್ನೂ ಕೆಲವರು ಅಲ್ಲಿಯ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದುದುಂಟು. ಇದೊಂದು ಸತ್ಸಂಗ!

ಕಾರಂತ, ಬೆಳ್ಳೆ ರಾಮಚಂದ್ರರಾವ್, ಕಡವ ಶಂಭು ಶರ್ಮ, ಅಜ್ಜ ಮೊದಲಾದ ಸಮಾನ ಮನಸ್ಕರು ಸೇರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಕರ್ನಾಟಕ ಸಂಘವನ್ನು ಸ್ಥಾಪಿಸಿದರು (೧೯೫೨). ಅಜ್ಜನೇ ಸಂಘದ ಪ್ರಥಮ ಅಧ್ಯಕ್ಷರು ಮತ್ತು ೧೯೭೦ರ ತನಕವೂ ಅದೇ ಹೊಣೆಯನ್ನು ಪ್ರೀತಿಯಿಂದ ನಿರ್ವಹಿಸಿದರು. ಕಾರಂತರಿಗಾದರೋ ಅಂದು ಉತ್ಸಾಹ ಕೋಡಿ ಬಿರಿದು ಹರಿಯುತ್ತಿದ್ದ ಕಾಲ. ಇವರ ನೇತೃತ್ವ, ಹಿಂದಿನಿಂದ ಉತ್ಸಾಹೀ ಪಡೆ. ನಡೆದ ಸಾಹಿತ್ಯಕ ಕಾರ್ಯಕ್ರಮಗಳು, ರಂಗಪ್ರಯೋಗಗಳು ಅವೆಷ್ಟೋ. ಮಾಸ್ತಿ, ರಾಜರತ್ನಂ, ವಿಸೀ, ಬೇಂದ್ರೆ ಮೊದಲಾದ ಸಾಹಿತಿಗಳು ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು, ಉಪನ್ಯಾಸ ನೀಡಿದರು. ಸಂಘಕ್ಕೆ ಬಲುಬೇಗ ಅಖಿಲ ಕರ್ನಾಟಕ ಮಾನ್ಯತೆ ದೊರೆಯಿತು. ಅದೇ ಕರ್ನಾಟಕ ಸಂಘ ಮತ್ತಿನ ದಿನಗಳಲ್ಲಿ ಇನ್ನಷ್ಟು ಪ್ರವರ್ಧಿಸಿ ಇಂದು (೨೦೦೨) ಸುವರ್ಣ ಮಹೋತ್ಸವದ ಸಡಗರದಲ್ಲಿದೆ.

ಶಿವರಾಮ ಕಾರಂತರು ತಮ್ಮ "ಅಳಿದುಳಿದ ನೆನಪುಗಳು" ಎಂಬ ಪುಸ್ತಕದಲ್ಲಿ ತಮ್ಮ ನಾಲ್ಕು ದಶಕಗಳ ಪುತ್ತೂರು ವಾಸ್ತವ್ಯ ನೆನೆಸಿಕೊಳ್ಳುತ್ತ ಅಜ್ಜನನ್ನು ಆತ್ಮೀಯತೆಯಿಂದ ಸ್ಮರಿಸಿದ್ದಾರೆ :

"ಪುತ್ತೂರಿನ ಗೆಳೆಯರಲ್ಲಿ ದೀರ್ಘ ಕಾಲ ನನ್ನೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದವರು ಆರ್ಯಾಪು ಗ್ರಾಮದ ಎ. ಪಿ. ಸುಬ್ಬಯ್ಯ. ಅವರ ನಗರದ ಬಿಡಾರ ಸಮೀಪವಿತ್ತು. ಅವರು ನನ್ನ ಸಹಪಾಠಿಯಾಗಿದ್ದರು ಪ್ರಥಮ ಆರ್ಟ್ಸಿನಲ್ಲಿ. ಅವರ ಮೂಲ ಸ್ಥಳ ಕೊಡಗು. ಕೊಡಗಿನವರೆಲ್ಲ 'ಹಾಕಿ' ಆಟದ ವೀರರು. ಇವರೂ ಓದುವ ಕಾಲದಲ್ಲಿ ಹಾಕಿ ಪ್ರಿಯರಾಗಿದ್ದರು.

"ಪುತ್ತೂರಿನ ಬಳಿಯ ಆರ್ಯಾಪುವಿನಲ್ಲಿ ಅವರ ಆಸ್ತಿ ಮನೆಗಳಿವೆ. ಅವನ್ನು ಅವರ ಮಕ್ಕಳು ನೋಡುತ್ತಿದ್ದ ಕಾಲ ಅದು. ಇವರಿಗೆ ಸಹಕಾರ, ಸಾಹಿತ್ಯ ಮೊದಲಾದ ಆಸಕ್ತಿಗಳಿದ್ದುವು.

"ಅವರ ಮನೆಗೆ ಸಮೀಪದ ಒಬ್ಬ ಮಿತ್ರರ ಮಹಡಿಯ ಹೊರಜಗುಲಿಯಲ್ಲಿ ಪ್ರತಿ ಸಂಜೆ ತಪ್ಪದಂತೆ ನಾನೂ ಅವರೂ ಲೋಕಾಭಿರಾಮವಾಗಿ ಹರಟೆಕೊಚ್ಚುತ್ತಿದ್ದೆವು. ಅವರು ತಮ್ಮ ಸಹಪಾಠಿಗಳು ವಕೀಲರಾದ ಮೇಲೆ ತನ್ನಂಥ ಅರೆ ವಿದ್ಯಾವಂತನಿಗೆ ಏನೂ ತಿಳಿಯದು ಎಂಬಂತೆ ನಡೆಯಿಸುತ್ತಿದ್ದರೆಂಬ ಕೊರಗನ್ನು ತೋಡಿಕೊಂಡರು.

"ಅವರಿಗೆ ಮೊಳಹಳ್ಳಿ ಶಿವರಾಯರ ಸಹಕಾರಿ ಸಂಸ್ಥೆ, ಗ್ರಾಮ ಸುಧಾರಣಾ ಹಂಬಲ ಮೊದಲಾದ ಹಲವು ವಿಷಯಗಳಲ್ಲಿ ಆಸಕ್ತಿ ಇರುತ್ತಿತ್ತು. ಅವನ್ನು ಕುರಿತಂತೆ ನಮ್ಮಲ್ಲಿ ವಿಮರ್ಶೆ ನಡೆಯುತ್ತಿತ್ತು. ಅವರು 'ಡೇವಿಡ್ ಕಾಪರ್‌ಫೀಲ್ಡ್' ಕಾದಂಬರಿಯನ್ನು ಅನುವಾದಿಸಿದ್ದರು. ತಮ್ಮ ಗುರುಗಳ ಗುರು-ಶಿಷ್ಯ ಸಂಭಾಷಣೆಯನ್ನು ಪ್ರಕಟಿಸಿದ್ದರು. ತೂಕವರಿತ ಮಾತು ಅವರದು. ಆದರೆ, ತಮ್ಮ ಇಲ್ಲವೇ ಸಮಾಜದ ಯಾವ ನ್ಯೂನತೆಯನ್ನೂ ಮುಚ್ಚಿ ಇರಿಸುವವರಲ್ಲ. ನನ್ನ ಪಾಲಿಗೆ ಅವರ ಸಹವಾಸ ಬಲು ಅಚ್ಚು ಮೆಚ್ಚಿನದಾಗಿತ್ತು.

"ಎಷ್ಟೋ ವರ್ಷಗಳ ಕಾಲ ಅವರೇ ನಮ್ಮ ಪುತ್ತೂರಿನ ಕರ್ನಾಟಕ ಸಂಘದ ಅಧ್ಯಕ್ಷರಾಗಿ ವರ್ತಿಸಿದರು."

ಅಂದು ಕರ್ನಾಟಕ ಸಂಘದ ಜೀವ ಕಾರಂತರು, ದೇಹ ನನ್ನಜ್ಜ. ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು (೧೮೯೧-೧೯೮೬) ಪತ್ನಿ ಸಹಿತ ಅಜ್ಜನ ಬಿಡಾರದಲ್ಲಿ ಉಳಿದಿದ್ದುದು, ನಮಗೆಲ್ಲ ಸಾಹಿತ್ಯದ ಸವಿಯೂಟ ಬಡಿಸಿದುದು, ಆಗ ನಮ್ಮ ಅಂತಸ್ತು ಇದ್ದಕ್ಕಿದ್ದಂತೆ ಗಗನಕ್ಕೆ ನೆಗೆದುದು ಎಲ್ಲವೂ ನನ್ನ ನೆನಪಿನಲ್ಲಿವೆ. ನಿಜ (ಅಜ್ಜ 'ಭಜಗೋವಿಂದವಾಣಿ'ಯಿಂದ ಉಲ್ಲೇಖಿಸುತ್ತಿದ್ದಂತೆ) :

ಸತ್ಸಂಗತ್ವೇ ನಿಸ್ಸಂಗತ್ವಂ
ನಿಸ್ಸಂಗತ್ವೇ ನಿರ್ಮೋಹತ್ವಂ
ನಿರ್ಮೋಹತ್ವೇ ನಿಶ್ಚಲತತ್ತ್ವಂ
ನಿಶ್ಚಲ ತತ್ತ್ವೇ ಜೀವನ್ಮುಕ್ತಿಃ

ಆ ಋಷಿ ಹೆಚ್ಚು ವರ್ಷ ಉಳಿಯಲಿಲ್ಲ. ಪ್ರಾಯಸಹಜವಾಗಿ ಅಜ್ಜನ ಆರೋಗ್ಯ ಕುಸಿಯಲಾರಂಭಿಸಿತು. ೧೯೭೭ ಡಿಸೆಂಬರ್ ತಿಂಗಳಿನ ಒಂದು ದಿನ. ಕಾಲನ ಕರೆ ಬಂದೇ ಬಿಟ್ಟಿತು. ಪ್ರೀತಿಯ ಅಜ್ಜ ಚಿರನಿದ್ರೆಗೆ ತೆರಳಿದರು, ನಮ್ಮನ್ನೆಲ್ಲ ಬಿಟ್ಟು ಇನ್ನೆಂದೂ ಬರಲಾರದ ಲೋಕಕ್ಕೆ ಪಯಣ ಬೆಳೆಸಿದರು.

ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?
ಯಾವ ಬೃಂದಾವನವು ಸೆಳೆಯಿತು ನಿನ್ನ ಮಣ್ಣಿನ ಕಣ್ಣನು

ಸಪ್ತ ಸಾಗರದಾಚೆಯೆಲ್ಲೋ ಸುಪ್ತ ಸಾಗರ ಕಾದಿದೆ.
ಮೊಳೆಯದಲೆಗಳ ಮೂಕ ಮರ್ಮರ ಇಂದು ಇಲ್ಲಿಗು ಹಾಯಿತೆ ?
ವಿವಶವಾಯಿತು ಪ್ರಾಣ; ಹಾ ! ಪರವಶವು ನಿನ್ನೀ ಚೇತನ;
ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ ?

ಗೋಪಾಲಕೃಷ್ಣ ಅಡಿಗ

ರಾಜಾಜಿಯಯವರ ಪುಸ್ತಕವೊಂದರಲ್ಲಿ ರಾಜಾಜಿ ಹೇಳಿಕೆಯನ್ನು ತಮ್ಮ ಮುದ್ದಾದ ಅಕ್ಷರಗಳಲ್ಲಿ ಅನುವಾದಿಸಿ ಅಜ್ಜ ಬರೆದಿದ್ದಾರೆ. ರಾಜಾಜಿ ಅಲ್ಲಿ ಏನು ಹೇಳಿದ್ದಾರೋ ಅದು ಅಜ್ಜನ ಜೀವನದ ರೀತಿ ಆಗಿತ್ತು, ಉಸಿರಾಗಿತ್ತು, ಬೆಳಕಾಗಿತ್ತು :

> "ಸಂಕುಚಿತ ಮನೋಭಾವವೆಂಬುದು ಯಾವ ರೂಪದಲ್ಲೇ ಬರಲಿ, ಯಾವ ಸ್ವಭಾವ, ಬಣ್ಣದಲ್ಲೇ ಬರಲಿ ಅದನ್ನು ಪ್ರತಿರೋಧಿಸಬೇಕು, ಎಳ್ಳಷ್ಟೂ ಅಲಕ್ಷಿಸ ಕೂಡದು. ಆದರೆ ಅದನ್ನು ಬಲಾತ್ಕಾರವಾಗಿ ನಿಲ್ಲಿಸುವುದು ತೀರ ಅಯೋಗ್ಯರೀತಿ— ಗಾಳಿಯನ್ನು ಎದುರಿಸಲು ಕೋವಿ ಬಳಸಿದಂತೆ. ಜಾತಿ, ಮತ, ಪಂಗಡಗಳೆಂಬ ವಿವಿಧ ರೂಪದ ಸಂಕುಚಿತ ಭಾವನೆಗಳನ್ನು ಎದುರಿಸುವ ಸಾಧನೆಗಳೆಂದರೆ, ನಾವೇ ಆದರ್ಶಗಳನ್ನು ಅನುಸರಿಸಿ ಬಾಳುವ ಕ್ರಮವೂ ವಿದ್ಯಾಭ್ಯಾಸ ಮತ್ತು ವ್ಯಾಸಂಗಗಳೂ ಮಾತ್ರ ಆಗಿವೆ."

ಡಿಸೆಂಬರ್ ೩೧, ೨೦೦೧
'ಚೇತನ' ಸಂಟ್ಯಾರು, ಆರ್ಯಾಪು ಗ್ರಾಮ ೫೭೪೨೧೦
ಪುತ್ತೂರು, ದ. ಕ.
ದೂರವಾಣಿ ೦೮೨೫೧ ೪೫೫೦೩

ಎ. ಪಿ. ರಾಧಾಕೃಷ್ಣ*

ವಿಸ್ತಾರದಲಿ ಬಾಳು, ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನ ಸತ್ತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ

ನಗದು ಪುಸ್ತಕವನ್ನು ಒಪ್ಪವಾಗಿಟ್ಟಿರಲು
ನಗುನಗುತ ಖಾತೆಗಳು ಸಂತುಲತೆಯ್ಯೆದುವುವು
ಬಗೆ ನೇರ ನುಡಿ ನೇರ ನಡೆನೇರವಿರಲಲ್ಲಿ
ಸೊಗದಸಿರಿ ನಲುಮೆ ಝುರಿ ಹರಿಯುವುವು ಅತ್ರಿಸೂನು

---

* ಡಾ. ಎ. ಪಿ. ರಾಧಾಕೃಷ್ಣ (೧೯೬೩) ಪುತ್ತೂರಿನ ಸೇಂಟ್ ಫಿಲೊಮಿನಾ ಕಾಲೇಜಿನಲ್ಲಿ ಭೌತವಿಜ್ಞಾನ ಪ್ರಾಧ್ಯಾಪಕರು

‘ದುಃಖಾರ್ತರು’ ಕೃತಿ ಮೈದಳೆದ ಪರಿ

ಸ್ವರಚಿತ ಕಾದಂಬರಿ ಒಂದು ತೆರನಾದ ಆತ್ಮಕಥೆ—ವ್ಯಕ್ತಿ ಸ್ವಂತ ಜೀವನದ ವಿಸ್ತಾರ ವೈವಿಧ್ಯಗಳನ್ನು ಪ್ರತಿಭಾಮೂಸೆಯಲ್ಲಿ ಕಾಸಿ ಎರಕ ಹೊಯ್ದು ತಯಾರಿಸಿದ ರಸಪಾಕ. ಅನುವಾದಿತ ಹೀಗಲ್ಲ—ಪರ ಭಾಷೆಯಲ್ಲಿದ್ದೂ ತನ್ನನ್ನು ವಶೀಕರಿಸಿಕೊಂಡ ನೂತನ ವಸ್ತುವಿನ ಸೃಜನಶೀಲ ಸ್ವಭಾಷಾಪುನಸ್ಸೃಷ್ಟಿ. ಅದು ಈತನನ್ನು ‘ಹಿಡಿ’ಯಬೇಕಾದರೆ ಅದರಲ್ಲಿ ಈತ ತನ್ನ ಪ್ರತಿಬಿಂಬವನ್ನು ಪ್ರತಿಮಾರೂಪದಲ್ಲಿ ಕಾಣಬೇಕು, ಅದರ ವಾಚನ ಈತನಿಗೆ ರಸಸುಖ ಊಡಬೇಕು, ತತ್ಪರಿಣಾಮವಾಗಿ, ಈ ಸುಖವನ್ನು ಸ್ವಭಾಷೆಯಲ್ಲಿ ಪುನಸ್ಸೃಷ್ಟಿಸಬೇಕೆಂಬ ಒಳ ತುಡಿತ ಮಿಡಿಯಬೇಕು. ಇದೊಂದರಿಂದಲೇ ಈತ ಸಂಪೀಡಿತನಾಗಿರುತ್ತಾನೆ. ಅಂದರೆ ಮೊದಲು ವಶೀಕರಣ (possession) ಅಥವಾ ಹಿಡಿತ—ಹೊರಗಿನಿಂದ ಬಂದು ಹಿಡಿಯುವುದು; ಬಳಿಕ ಸಂಪೀಡನೆ (obsession) ಅಥವಾ ತುಡಿತ—ಒಳಗಡೆಯೇ ಸಿಡಿಯುವುದು. ಹಿಡಿತ-ತುಡಿತಗಳ ಸುಂದರ ಶಿಶು ಅನುವಾದಿತ ಕೃತಿ. ಇಂಥ ಒಬ್ಬ ಅನುವಾದಕಾರ ನಾಲ್ಕು ಪ್ರಧಾನ ಗುಣಾವಿಷ್ಟನಾಗಿರಲೇಬೇಕು: ಪರಭಾಷೆಯಲ್ಲಿ ಪಾಂಡಿತ್ಯ, ಸ್ವಭಾಷೆಯಲ್ಲಿ ಸೃಜನಶೀಲ ವೈದುಷ್ಯ, ಅನುವಾದ ಪ್ರಕ್ರಿಯೆ ಕುರಿತು ಪೂರ್ಣ ನಿಷ್ಠೆ, ಮತ್ತು ಎಂದೂ ಹಿಂಗದ ಉತ್ಸಾಹ. ವಿಕ್ಟರ್ ಹ್ಯೂಗೊ ವಿರಚಿತ *Les Miserables* ಇಂಗ್ಲಿಷ್ ಕಾದಂಬರಿಯನ್ನು ಕನ್ನಡದಲ್ಲಿ ‘ದುಃಖಾರ್ತರು’ ಕಾದಂಬರಿಯಾಗಿ (ಅಂಕಿತನಾಮಗಳನ್ನು ತದ್ವತ್ತಾಗಿ ಉಳಿಸಿ ಕೊಂಡು) ಸಂಕ್ಷಿಪ್ತ ಪುನಸ್ಸೃಷ್ಟಿಗೈದಿರುವ ಎ. ಪಿ. ಸುಬ್ಬಯ್ಯನವರು ಇಂಥ ಒಬ್ಬ ವಿರಳ ಅನುವಾದಕಾರ. ಇವರೊಂದಿಗಿನ ನಿಕಟ ಭೌತಿಕ-ಸಾಂಸಾರಿಕ ಮತ್ತು ಬೌದ್ಧಿಕ-ಆಧ್ಯಾತ್ಮಿಕ ಸಾಹಚರ್ಯ, ಮೂಲ-ಅನುವಾದಿತ ಕೃತಿಗಳ ತೌಲನಿಕ ಅಧ್ಯಯನ, ಮತ್ತು ವಿಜ್ಞಾನ ರಂಗದಲ್ಲಿ ಲೇಖನ ಮತ್ತು ಅನುವಾದ ಕುರಿತಂತೆ ನಾನು ಗಳಿಸಿರುವ ಅನುಭವ—ಈ ಹಿನ್ನೆಲೆಯಿಂದ ಮೇಲಿನ ಎಳೆಗಳನ್ನು ನೇಯ್ದಿದ್ದೇನೆ.

ಸುಬ್ಬಯ್ಯನವರ ತಂಗಿ ಮಗನಾಗಿ ನಾನು ಅವರ ಮನೆ, ಅಂದರೆ ತಾಯಿಯ ತವರ್ಮನೆ, ‘ಮರಿಕೆ’ಯಲ್ಲಿ ಹುಟ್ಟಿದೆ (೧೯೨೬). ಅವರು ನನಗಿಂತ ಕಾಲು ಶತಮಾನ ಹಿರಿಯರು. ಅವರಿಂದ ನಾನು ಸಮೃದ್ಧವಾಗಿ ಪಡೆದಿರುವುದು ನಿರ್ವ್ಯಾಜ ಅಂತಃಕರಣ, ನೈತಿಕ ಪಾತಳಿಯಲ್ಲಿ ಮಾನವೀಯತೆ ಸಹಿತ ಜೀವನದರ್ಶನ, ಸಾಹಿತ್ಯ-ಸಂಗೀತ-ನಿಸರ್ಗ ಪ್ರೀತಿ ಮುಂತಾದವು. ವ್ಯಕ್ತಿ ಇತರರಿಗಾಗಿಯೇ ಬಾಳುವುದು ಪರಮ ಪುರುಷಾರ್ಥ ಎಂದು ನಂಬಿ ಅನುಷ್ಠಾನಿಸುತ್ತಿದ್ದ ಇವರ ಬದುಕು ನನ್ನ ಮೇಲೆ ಬೀರಿರುವ ಪ್ರಭಾವ ಪಿತೃ-ಮಾತೃ ಸಮಾನವಾದದ್ದು. ವ್ಯಕ್ತಿ ಎಳವೆಯಲ್ಲಿ ಸನ್ನಿಕಟ ಹಿರಿಯರನ್ನು ಅನುಕರಿಸಲು ಪ್ರಯತ್ನಿಸಿ, ಅನುಸರಿಸಲು ಕಲಿತು, ಮುಂದೆ ಸ್ವಂತಪಥ ನಿರ್ಮಿಸಲು ಶಕ್ತನಾಗುತ್ತಾನೆ, ಅಲ್ಲವೇ? ನಾನು ಹಾಗೆ. ಅಂದಿನ (೧೯೩೦ರ ದಶಕ) ಪರಿಭಾಷೆಯಲ್ಲಿ ಮಾವ ಒಬ್ಬ ‘ಧನಿ’ ಸ್ಥಳೀಯರ ಆಡುನುಡಿಯಲ್ಲಿ ‘ಧನಿಕ್ಳು.’ ಶೀಲವೇ ಇವರ ‘ಧನ,’ ಜೀವನ ಶೈಲಿಯೇ ಇದರ ಪ್ರಕಟಿತ ರೂಪ. ಮಧ್ಯಮ ವರ್ಗದ ಕೃಷಿ ಕುಟುಂಬ. ಒಕ್ಕಲುಗಳಿಂದ ಬರುತ್ತಿದ್ದ ಗೇಣಿ ಮಾತ್ರ ಆದಾಯ. ಬಿಡಾರ ತುಂಬ ಮಕ್ಕಳು, ನೆಂಟರಿಷ್ಟರು, ಅತಿಥಿ ಅಭ್ಯಾಗತರು, ಪಾರಂಪರಿಕವಾಗಿ ಅನುಸರಿಸಿಕೊಂಡು ಬರುತ್ತಿದ್ದ ಧಾರ್ಮಿಕಾಚರಣೆಗಳು ಇತ್ಯಾದಿ ಇವರ ಮನೆ ಮನಗಳನ್ನು ಬೆಳಗುತ್ತಿದ್ದುವು. ಗಾಂಧೀಯುಗದ ಸರಳ ಸಜ್ಜನಿಕೆ ಮತ್ತು ಸ್ವದೇಶಾಭಿಮಾನ, ರಾಜಾಜಿ ಬೌದ್ಧಿಕ ವಲಯದ ತೀಕ್ಷ್ಣ ವಿಮರ್ಶಾ ಪ್ರಜ್ಞೆ ಮತ್ತು ಮೌಲ್ಯಯುತ ರಾಜಕಾರಣ, ಹಾಗೂ ಮೊಳಹಳ್ಳಿ ಶಿವರಾವ್ ಪರಿವೇಷದ ಸ್ವಾವಲಂಬನ ಸಾಮರ್ಥ್ಯ ಮತ್ತು ಸಾಮಾಜಿಕ ಸೇವಾಪರಾಯಣತೆ ಇವರ ವ್ಯಕ್ತಿತ್ವವನ್ನು ಕಂಡರಿಸಿದುವು : ಹೃದಯದಲ್ಲಿ ಗಾಂಧಿ, ಮಿದುಳಿನಲ್ಲಿ ರಾಜಾಜಿ, ಕರಗಳಲ್ಲಿ ಶಿವ (ರಾವ್).

ಸಾಂಸಾರಿಕ ಕಾರಣಗಳಿಂದಾಗಿ ಮಾವನ ಸಾಂಪ್ರದಾಯಿಕ ಶಿಕ್ಷಣ ಪದವಿಪೂರ್ವ ಮಟ್ಟಕ್ಕಿಂತ ಮೇಲೇರ ಲಿಲ್ಲ. ಆದರೆ ಜನಸೇವೆ, ಅಧ್ಯಯನ, ಅಧ್ಯಾಪನ ಮತ್ತು ಲೇಖನ ಎಂಬ ನಾಲ್ಕು ಪರಸ್ಪರ ಪೂರಕ ಕ್ರಿಯೆಗಳಲ್ಲಿ ಇವರು ಸದಾ ಮಗ್ನರಾಗಿರುತ್ತಿದ್ದರು. ಸಹಜವಾಗಿ ವ್ಯಾಪಕ ಜೀವನದರ್ಶನ, ಇಂಗ್ಲಿಷ್-ಕನ್ನಡ ಭಾಷಾ ಪಾಂಡಿತ್ಯ, ಮತ್ತು ಕಾರ್ಯನಿರ್ವಹಣ ದಕ್ಷತೆ ಸಂಪಾದಿಸಿದ್ದರು. ಎಂದೂ ಎಲ್ಲಿಯೂ ಮುನ್ನುಗ್ಗಿ ತಮ್ಮ

ಭೌತ ಅಸ್ತಿತ್ವ ಸ್ಥಾಪಿಸಿದವರಲ್ಲ, ಆದರೆ ಕೈಗೆತ್ತಿಕೊಂಡ ಪ್ರತಿಯೊಂದು ಕೆಲಸದಲ್ಲಿಯೂ ತಮ್ಮ ಅಸ್ಖಲಿತ ನೈತಿಕ ಪರಿಮುದ್ರೆ ಛಾಪಿಸಿದವರು. ಇವರ ಆದರ್ಶ ಆಧ್ಯಾತ್ಮಿಕ ಗುರು ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು (೧೮೬೩-೧೯೦೨). ಮಾವನಂಥ ಒಬ್ಬ ನಿಷ್ಕಾಮ ಕರ್ಮಿ ಮತ್ತು ಉದಾರ ಧರ್ಮಿ *Les Miserables* ಕಾದಂಬರಿಯಲ್ಲಿ ತಮ್ಮ ಬಾಳ ಪಡಿಯಚ್ಚು ಗುರುತಿಸಿದ್ದು ಅಚ್ಚರಿ ಏನೂ ಅಲ್ಲ. ಅದು ಇವರನ್ನು 'ಹಿಡಿ'ಯಿತು, ಅದನ್ನು ಕನ್ನಡಕ್ಕೆ ಅನುವಾದಿಸಲೇಬೇಕೆಂಬ 'ತುಡಿತ' ಒಳಗೆ ಸಿಡಿಯಿತು. ಸುಮಾರು ೧೨೦೦ ಪುಟಗಳ ಆ ಬೃಹತ್ಕಾದಂಬರಿಯನ್ನು ಅದರ ಮೂರನೆಯ ಒಂದಂಶಕ್ಕೆ ಸಂಕ್ಷಿಪ್ತ ಭಾವಾನುವಾದಿಸುವುದು ಹೇಗೆ ? ತಪಸ್ಸ್ವಾಧ್ಯಾಯನಿರತರಾಗುವುದೊಂದೇ ಶರಣು. ಇವರ ಈ ಸೃಜನಶೀಲ ಪ್ರಕ್ರಿಯೆಯಲ್ಲಿ, ಆ ವೇಳೆಗೆ ಕಾಲೇಜ್ ಮೆಟ್ಟಲೇರಿದ್ದ, ನಾನು ನಿರಂತರ ಭಾಗಿಯಾಗಿದ್ದೆ. ಮಾವನ ಹತ್ತು ಮಕ್ಕಳೂ (ಎಲ್ಲರೂ ಎನಗಿಂತ ಕಿರಿಯರು) ನಾನೂ, ನನ್ನ ರಜಾ ದಿನಗಳಲ್ಲಿ, ಸೋದರಮಾವನ 'ಆಸ್ಥಾನ'ದಲ್ಲಿ ಸಂಗಮಿಸಿದಾಗ ಸಂಭ್ರಮ, ಉತ್ಸಾಹ, ಉಲ್ಲಾಸ ದಂಡೆ ಮೀರಿ ಹರಿಯುತ್ತಿದ್ದುವು. ಆಗ ಅವರು ನಮಗೆ *Les Miserables* ಕಾದಂಬರಿಯ ದೃಶ್ಯಗಳನ್ನು ಮನಂಬುಗುವಂತೆ ವರ್ಣಿಸುತ್ತಿದ್ದರು : ಶ್ರವ್ಯವು ದೃಶ್ಯವಾಗುತ್ತಿದ್ದ ದಿವ್ಯಾನುಭವವದು. ಈ ಅನೌಪಚಾರಿಕ ವಿಶ್ವವಿದ್ಯಾಲಯದ ಅಘೋಷಿತ ಕುಲಪತಿ ಮಾವ, ಕುಲಸಚಿವ ಈ ಅಳಿಯ!

ಜಡವೆಂಬೆಯಾ ಹಿಮಾಲಯವ ? ನೋಡದರ ಶಿಶು
ಗಡಣ : ನದಿ ಕಾಡು ಹಸುರಿನ ಹರವಿನಲಿ ಜೀವ
ಮಿಡಿವಪರಿ ! ಅದು ಸ್ಥಾವರವಿದುಜಂಗಮವೀ ಎ-
ರಡರ ಮಧುಮೈತ್ರಿ ಋಜು ಜೀವನವೊ ಅತ್ರಿಸೂನು

ನನ್ನೂರು ಮಡಿಕೇರಿ. ಅಲ್ಲಿಯೇ ಶಾಲಾಶಿಕ್ಷಣ (೧೯೩೧-೪೨). ಹದಿಹರೆಯದ ಅಮಲಿನಲ್ಲಿ "ಕನ್ನಡದಲಿ ಕಗ್ಗ ಕೊರೆವ ಕೀಟವೆನ್ನ ಕರವ ಕುಕ್ಕಿತು!" ಬರೆದುದೆಲ್ಲವನ್ನೂ ಯಥಾವತ್ತಾಗಿ ಮಾವನಿಗೆ ರವಾನಿಸುತ್ತಿದ್ದೆ. ಒಂದು ವಿಶಿಷ್ಟ ವಿಚಿತ್ರ ಚಮತ್ಕಾರ ಮಾದರಿ (೧೯೩೯) :

ಜಿಗಣೆಯೊಂದು ಕಾಡಿಗ್ಹೋಗೆ
ತಿಗಣೆಯೊಂದು ಅದನು ನೋಡೆ ಎರಡು ನಿಂತುವು
ನಾಯಿಯೊಂದು ಇವನು ನೋಡುತಲ್ಲಿ ನಿಲ್ಲೆ
ರಾಜನೊಬ್ಬ ನಾಯ ನೋಡಿ ಅದನು ಬಡಿದನು
ಯರವನೊಬ್ಬ ತನ್ನ ನಾಯಿ ಸತ್ತುದ ನೋಡಿ ಓಡಿಬಾರೆ ರಾಜನವಗೆ ಹ-
ಣವ ಕೊಟ್ಟು ತೃಪ್ತಿಪಡಿಸಿದ !

೧೯೪೨ರಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿದ ಬಳಿಕ ಕಾಲೇಜ್ ಶಿಕ್ಷಣದ ಸಲುವಾಗಿ ಮಂಗಳೂರು ಸೇರಿದೆ. ಮಾವ ತುಂಬ ಭಾವಜೀವಿ, ಮಧುರ ಹೃದಯಿ, ಮೃದುಭಾಷಿ. ಪ್ರತಿಸಲವೂ ನಾನು ಮರಿಕೆಯಿಂದ ಮಂಗಳೂರಿಗೆ ತೆರಳಲಿದ್ದ ಹಿಂದಿನಿರುಳು ಇವರು ನಿದ್ರೆ ಬಾರದೆ ಚಡಪಡಿಸುತ್ತಿದ್ದರು, "ಇದೇ ಕೊನೆಯ ಸಲ ನಾನು ನಾರಾಯಣನನ್ನು ನೋಡುವುದಾಗಿರಬಹುದೇ? ಅವನು ಮತ್ತೆ ಮರಳುವಾಗ ಅವನನ್ನು ಕಣ್ತುಂಬ ನೋಡಿ ಹರಸಲು ನಾನು ಬದುಕಿರುವೆನೇ?" ಈ ಭಾವತರಂಗಗಳ ಶ್ರುತಿಗೆ ಅವರು ಆಗ ಈಗ ಪೋಣಿಸುತ್ತಿದ್ದ ಪಲ್ಲವಿ, "ಪೋಗದಿರೆಲೋ ರಂಗ ಬಾಗಿಲಿಂದಾಚೆಗೆ!" ಆಗ ನನಗೆ ಈ ಚಡಪಡಿಕೆ ಅರ್ಥವಾಗುತ್ತಿರಲಿಲ್ಲ. ಆದರೆ ಆ ವೇಳೆಗಾಗಲೇ ಈ ಜೀನ್‌ವಾಲ್‌ಜೀನ್ ನನ್ನಲ್ಲಿ ಮೇರಿಯಸನನ್ನು ಕಂಡಿರಬೇಕು ಎಂದು ಮುಂದೊಂದು ದಿನ ಅರಿವಿಗೆ ಬಂದಿತು. ನನ್ನ ೧೯೩೯ರ ಕಗ್ಗಕ್ಕೆ ಮಾವ ಜೂನ್ ೧೦, ೧೯೪೨ರಂದು ಒಂದು ಆಶೀರ್ವಚನ ಬರೆದರು :

ಜಿಗಣೆಯೊಂದು ಸಿಟೀಗ್ಹೋಗಿ
ತಿಗಣೆಯಂತೆ ಎಡೇಬಿಡದೆ
ನಯದಿ ಭಯದಿ ವಿದ್ಯೆಕಲಿತು
ರಸಿಕನಾಗಿ ಕಲಿತನಾಗಿ ಮರಳಿ ತಿರುಗಲಿ
ಯಶೋಧನೋವಂತನಾಗಿ
ನರರ ಮುಂದಾಳುತನದಿ ಜಿಗಣೆ ಬಾಳಲಿ !
ಅಡವಿ ನಡುವೆ ಮರಿಕೆಯಲ್ಲಿ
ಪರಾಕ್ರಮಿ ಮಹಾತಿಗಣೆ
ಸುಬ್ರಹ್ಮಣ್ಯ ಆಖ್ಯೆಯಿಂದ ಮೆರೆಯುತಿರುತಿದೆ
ಭಯದಿ ಭಾರಿ ಬ್ಯಾರಿಸ್ಟೋಮ ಭಜಕರಾಗಿ ಸದಾ ಬಂದು
ಯೋಗಕ್ಷೇಮ ಸದಾ ಕೇಳಿ ತಿಳಿದು ಅಭಯ ಪಡೆವರು
ಅಂಥ ಮಹಾತಿಗಣೆಯಿಂದು ಶಿವನ ನೆನೆದು ಆಶೀರ್ವದಿಸೆ
ವಪ್ಪ ಜಿಗಣೆ ಹರುಷಗೊಂಡು ದಕ್ಷನಾಗಿ ವಿದ್ಯವ್ಹೋದಿ ಅಳಿಯನಾಗಲೀ!—ಕಪಿಶಿಷ್ಯ APS

ಮುಂದೆ ೧೯೫೧ರಲ್ಲಿ ಇವರ ಹಿರಿ ಮಗಳು ಲಕ್ಷ್ಮಿ (೧೯೩೦) ನನ್ನ ಭಾರ್ಯೆ ಆದಾಗ ಈ ಆಶೀರ್ವಾದ ಫಲಿಸಿದ್ದು ಒಂದು ಪರಮಾಶ್ಚರ್ಯ. "ನನ್ನ ಮೇರಿಯಸ್ ನನ್ನ ಕೋಸೆಟ್ಟೆಯ ಕೈಹಿಡಿದದ್ದು ನನಗೆ ಪರಮಾನಂದ ನೀಡಿದೆ," ಎಂಬ ಭಾವವನ್ನು ಇವರು ಆಗ, ಮತ್ತು ತದನಂತರ ಆಗಾಗ, ಮುಕ್ತಮನದಿಂದ ಮಿಡಿಯುತ್ತಿದ್ದರು—"ಜೀವವಿಂತಜ್ಞಾತ ಸೂತ್ರದಾಟದ ಬೊಂಬೆ ಭಾವಿಸಾ ಸೂತ್ರಗಳ ಮಂಕುತಿಮ್ಮ." ಈಗ (೨೦೦೨) ಅದೇ 'ಮೇರಿಯಸ್' ೧೯೬೦ರ 'ದುಃಖಾರ್ತರು' ಕೃತಿಯನ್ನು ಪುನಸ್ಸಂಸ್ಕರಿಸುವಂತಾಗಿರುವುದು ಈ ಚಿರಂತನ ನಾಟಕದ ಇನ್ನೂ ಒಂದು ಮೋಹಕದೃಶ್ಯ. ಮೂಲವನ್ನೂ ಅನುವಾದಿತವನ್ನೂ ಅಧ್ಯಾಯ-ಅಧ್ಯಾಯ ಸಂವಾದಿತ್ವ ತುಲನಿಸಿ ಅಧ್ಯಯಿಸಿದ್ದೇನೆ, ಮಾವನವರ ಆಶಯದ ಮಿತಿಯೊಳಗೆ ಶೈಲಿಯನ್ನು ಸಂಸ್ಕರಿಸಿದ್ದೇನೆ. ಪ್ರತಿಹಂತದಲ್ಲೂ ಅವರ ಸಾಹಿತ್ಯ-ಸೌಂದರ್ಯ-ಔಚಿತ್ಯ ಪ್ರಜ್ಞೆಗೆ ಮಣಿದಿದ್ದೇನೆ.

ಮುದ್ರಣ ಕರಡು ತಿದ್ದುವಲ್ಲಿ ಸ್ವತಃ ಸಂಪಾದಕಿಯ ತಾಕತ್ತಿನಿಂದ ನನಗೆ ಸಹಕಾರವಿತ್ತ ಸೊಸೆ ರುಕ್ಮಿಣಿ ಮಾಲಾ (೧೯೬೯) ಸ್ವಯಂಪ್ರೇರಣೆಯಿಂದ ಬರೆದಿರುವ ಸಾಲುಗಳು, "ಈ ಕಾದಂಬರಿಯ ಕರಡು ಪ್ರತಿ ತಿದ್ದುವ ಸೌಭಾಗ್ಯ ನನಗೆ ಸಿಗದಿರುತ್ತಿದ್ದರೆ ಇಂಥ ಅದ್ಭುತ ಕೃತಿಯನ್ನು ಓದುವುದರಿಂದ ವಂಚಿತಳಾಗಿರುತ್ತಿದ್ದೆ. ಇದರಲ್ಲಿ ಬರುವ ಬಿಷಪ್ ಹಾಗೂ ಜೀನ್‌ವಾಲ್‌ಜೀನ್ ವ್ಯಕ್ತಿತ್ವ ಸದಾ ಅನುಸರಣೀಯ. ಫ್ಯಾಂಟೈನ್, ಫಾಶೆಲೆವೆಂಟ್ ಚಿತ್ರಣ ಹೃದಯಂಗಮ. ಈ ಕಾದಂಬರಿ ಮಹಾಭಾರತಕ್ಕೆ ಸಮೀಪವಾಗಿದೆ. ಬಿಷಪ್ ಮತ್ತು ಜೀನ್‌ವಾಲ್‌ಜೀನರನ್ನು ಧರ್ಮರಾಯನಿಗೂ ತೆನಾರ್ಡಿಯರನನ್ನು ದುರ್ಯೋಧನನಿಗೂ ಹೋಲಿಸಬಹುದು."

ಬೆರಳಚ್ಚುಗಾರ್ತಿ ಸಿ. ಕೆ. ದೇವಿಕ ಮತ್ತು ಕೃತಿಯ ಸಮಗ್ರ ವಿನ್ಯಾಸಕರ್ತೃ ರಾ. ಶ್ರೀ. ಮೋಹನಮೂರ್ತಿ ತಾವೇ ಇದರ ಸಂಪಾದಕರು ಎಂಬ ತನ್ಮಯತೆಯಿಂದ ಕೈಂಕರ್ಯ ಸಲ್ಲಿಸಿದ್ದಾರೆ. ಶ್ರೀ ಶಕ್ತಿ ಎಲೆಕ್ಟ್ರಿಕ್ ಪ್ರೆಸ್ಸಿನ ಕಾರ್ಮಿಕರು ಎಂದಿನ ದಕ್ಷತೆಯಿಂದ ಮುದ್ರಿಸಿದ್ದಾರೆ. ಎನ್. ಎಸ್. ರಾಮ್‌ಗೌತಮ್ ಕೆಲವೇ ರೇಖೆಗಳಲ್ಲಿ 'ಪಿರಿದರ್ಥ' ತುಂಬಿದ್ದಾರೆ. ಈ ಎಲ್ಲ ಚೇತನಗಳ ಮೇಲೂ ಬಿಷಪ್ (ಮೊಳಹಳ್ಳಿ) ಮತ್ತು ಜೀನ್‌ವಾಲ್‌ಜೀನ್ (ಎಪಿಸು) ದೈವಿಕ ಪ್ರಭೆ ಬೀರಲಿ !

ಅಪರಿಗ್ರಹದಲುಂಟು ಸಂತೃಪ್ತಿ ಸಾರ್ಥಕ್ಯ
ಸ್ವಪರಿಗ್ರಹದಲಿಲ್ಲ ನಿರಸೂಯೆ ನಿರ್ಮೋಹ
ನೃಪನಾತ ಧಾರಿಣಿಗೆ ಕೃಪನೀತ ಕೌರವಗೆ
ತಪನಪ್ರಕಾಶದೋಲ್ ಬಾಳೆಲೋ ಅತ್ರಿಸೂನು

ಜನವರಿ ೬, ೨೦೦೨ **ಜಿ. ಟಿ. ನಾರಾಯಣರಾವ್**

ಹೂರಣದ ರೂಪರೇಖೆ

ಪ್ರಥಮ ವಿಭಾಗ : ಫ್ಯಾಂಟೈನ್

ಒಂದನೆಯ ಸಂಪುಟ

ಎರಡನೆಯ ಸಂಪುಟ

ಮೂರನೆಯ ಸಂಪುಟ

ನಾಲ್ಕನೆಯ ಸಂಪುಟ

ಐದನೆಯ ಸಂಪುಟ

ಆರನೆಯ ಸಂಪುಟ

ಏಳನೆಯ ಸಂಪುಟ

ಎಂಟನೆಯ ಸಂಪುಟ

ದ್ವಿತೀಯ ವಿಭಾಗ : ಕೋಸೆಟ್ಟಿ

ಒಂದನೆಯ ಸಂಪುಟ

ಎರಡನೆಯ ಸಂಪುಟ

ಮೂರನೆಯ ಸಂಪುಟ

ನಾಲ್ಕನೆಯ ಸಂಪುಟ

ಐದನೆಯ ಸಂಪುಟ

ಆರನೆಯ ಸಂಪುಟ

ಏಳನೆಯ ಸಂಪುಟ

ತೃತೀಯ ವಿಭಾಗ : ಮೇರಿಯಸ್

ಒಂದನೆಯ ಸಂಪುಟ

ಎರಡನೆಯ ಸಂಪುಟ

ಮೂರನೆಯ ಸಂಪುಟ

ನಾಲ್ಕನೆಯ ಸಂಪುಟ

ಐದನೆಯ ಸಂಪುಟ

ಆರನೆಯ ಸಂಪುಟ

ಏಳನೆಯ ಸಂಪುಟ

ಎಂಟನೆಯ ಸಂಪುಟ

ಚತುರ್ಥ ವಿಭಾಗ : ಗಾವ್ರೋಚ್

ಒಂದನೆಯ ಸಂಪುಟ

ಎರಡನೆಯ ಸಂಪುಟ

ಹನ್ನೊಂದನೆಯ ಸಂಪುಟ

ಹನ್ನೆರಡನೆಯ ಸಂಪುಟ

ಪಂಚಮ ವಿಭಾಗ : ಜೀನ್‌ವಾಲ್‌ಜೀನ್

ಒಂದನೆಯ ಸಂಪುಟ

ಎರಡನೆಯ ಸಂಪುಟ

ಮೂರನೆಯ ಸಂಪುಟ

ನಾಲ್ಕನೆಯ ಸಂಪುಟ

ಐದನೆಯ ಸಂಪುಟ

ಆರನೆಯ ಸಂಪುಟ

ಏಳನೆಯ ಸಂಪುಟ

ಎಂಟನೆಯ ಸಂಪುಟ

ಪ್ರಥಮ ವಿಭಾಗ : ಫ್ಯಾಂಟೈನ್

ಒಂದನೆಯ ಸಂಪುಟ

೧. ಮಿಸ್ಟರ್ ಮಿರಿಯಲ್

೧೮೧೫ರಲ್ಲಿ ಮಿಸ್ಟರ್ ಚಾರ್ಲ್ಸ್ ಫ್ರ್ಯಾಂಕೋಸಿಸ್ ಮಿರಿಯಲ್ ಎಂಬವರು ಡಿ— ಪ್ರದೇಶದ ಬಿಷಪ್ ಆಗಿದ್ದರು. ವಯಸ್ಸು ಅಂದಾಜು ೭೫. ಸಾಕ್ಷಾತ್ ನೆಪೋಲಿಯನ್ನನೇ (೧೭೬೯-೧೮೨೧) ಮಿರಿಯಲರನ್ನು ಈ ಗೌರವಾನ್ವಿತ ಸ್ಥಾನಕ್ಕೆ ನೇಮಿಸಿದ್ದ. ಈ ಘಟನೆಯ ಹಿನ್ನೆಲೆ ಕಥೆ ಸ್ವಾರಸ್ಯಕರವಾಗಿದೆ.

ಬಾಲ್ಯದಲ್ಲಿ ಮಿರಿಯಲ್ ಸ್ತ್ರೀಲಂಪಟನಾಗಿದ್ದ. ಅಂದಿನ ಶ್ರೀಮಂತ ಕುಟುಂಬಗಳವರ ಸಂಪ್ರದಾಯದಂತೆ ಈತನ ಮದುವೆಯನ್ನು ಇಪ್ಪತ್ತರ ಹರೆಯದಲ್ಲೇ ಮಾಡಿದ್ದರೂ ಈತನಲ್ಲಿ ಹೆಣ್ಣಿನ ಮರುಳೇನೂ ಕಡಿಮೆ ಆಗಿದ್ದಂತೆ ತೋರಲಿಲ್ಲ. ಇದು ಜನರಲ್ಲಿ ಹಬ್ಬಿದ್ದ ವದಂತಿ.

ಕ್ರಾಂತಿಯ ಕಿಡಿ (ಫ್ರೆಂಚ್ ಮಹಾಕ್ರಾಂತಿ, ೧೭೮೯ರಲ್ಲಿ ಆರಂಭ) ಸಿಡಿದಾಗ ಶ್ರೀಮಂತ ವರ್ಗಗಳವರು ಮೊದಲ ಆಹುತಿಗಳಾದರು. ಆ ದುರ್ಭರ ಸನ್ನಿವೇಶದಲ್ಲಿ ಮಿರಿಯಲ್ ಪತ್ನೀಸಹಿತ ಫ್ರಾನ್ಸ್ ತೊರೆದು ಇಟಲಿಗೆ ಓಡಿಹೋದ. ಅಲ್ಲಿಂದಲೇ ತನ್ನ ದೇಶದ ರಾಜಕೀಯ ಸ್ಥಿತಿಗತಿಗಳನ್ನು ಓದಿ ಕೇಳಿ ತಿಳಿಯುತ್ತಿದ್ದ. ಇವು ಆತನ ಹೃನ್ಮನಗಳ ಮೇಲೆ ಅತಿಶಯ ಪ್ರಭಾವ ಬೀರಿದುವು. ಜೀವನಶೈಲಿಯ ಬದಲಾಯಿಸಿಕೊಂಡ. ಅನಾರೋಗ್ಯಪೀಡಿತೆ ಮಡದಿ ಇಟಲಿಯಲ್ಲಿಯೇ ಮಡಿದಳು.

ಮಿರಿಯಲ್ ಸ್ವದೇಶಕ್ಕೆ ಮರಳಿದ, ೧೮೦೪ರಲ್ಲಿ. ಈತ ಬಿ— ಎಂಬಲ್ಲಿ ಕ್ಯೂರ್ (ಧರ್ಮಾಧಿಕಾರಿ) ಆಗಿ ಹೊಸ ಬದುಕು ತೊಡಗಿದ.

ನೆಪೋಲಿಯನ್ ಚಕ್ರವರ್ತಿ ಒಮ್ಮೆ ತನ್ನ ಸಂಬಂಧಿ ಧರ್ಮಾಧಿಕಾರಿಯೊಬ್ಬನ ಮನೆಗೆ ಭೇಟಿ ನೀಡಿದ್ದ. ಆಗ ಅಲ್ಲಿದ್ದ ಮಿರಿಯಲ್, ಸ್ವಲ್ಪ ಅನುಚಿತವೋ ಎಂಬಂತೆ, ಮಹಾಪ್ರತಾಪ ಚಕ್ರವರ್ತಿಯನ್ನು ದಿಟ್ಟಿಸಿ ನೋಡಿದ. ಈ ನಗಣ್ಯ ವೃದ್ಧ ಧರ್ಮಾಧಿಕಾರಿಯ ಧೈರ್ಯ ಗಮನಿಸಿದ ಪರಮಗಣ್ಯ ಯುವಚಕ್ರವರ್ತಿ, "ನನ್ನನ್ನು ಈ ರೀತಿ ನೇರವಾಗಿ ನೋಡುತ್ತಿರುವ ಈ ಸರಳ ವ್ಯಕ್ತಿ ಯಾರು ?" ಎಂದು ವಿಚಾರಿಸಿದ.

ಇದಕ್ಕೆ ಉತ್ತರವೋ ಎಂಬಂತೆ ಮಿರಿಯಲ್ ಬಿನ್ನವಿಸಿಕೊಂಡ ಚಕ್ರವರ್ತಿಗೆ, "ಮಹಾಪ್ರಭು! ಒಬ್ಬ ಸರಳ ವ್ಯಕ್ತಿಯನ್ನು ತಾವು ನೋಡಿರುವುದು ಖರೆ. ಅದೇ ವೇಳೆ ಈ ಸರಳ ವ್ಯಕ್ತಿ ಒಬ್ಬ ಅಪ್ರತಿಮ ಪ್ರಭಾನ್ವಿತ ಪ್ರಭುವನ್ನೇ ಕಾಣುತ್ತಿದ್ದಾನೆ! ಉಭಯರಿಗೂ ಇದರಿಂದ ಲಾಭವಾದೀತು."

ನಮಗೆ ಅಷ್ಟೇ ಗೊತ್ತು. ಈ ಅಕಸ್ಮಾತ್ ಮಿಲನ ಕಳೆದ ಕೆಲವು ದಿನಗಳಲ್ಲೇ ಮಿರಿಯಲ್ ಡಿ— ಪ್ರದೇಶದ ಬಿಷಪ್ ಆಗಿ ನೇಮಕಗೊಂಡರು.

ಮಿ. ಮಿರಿಯಲ್ ಡಿ—ಗೆ ಬಂದು ಕೆಲವು ದಿನಗಳತನಕ, ಚಿಕ್ಕ ಪ್ರದೇಶಗಳಲ್ಲಿ ವಾಡಿಕೆಯಾಗಿರುವ ಸಣ್ಣಮಾತುಗಳಲ್ಲಿ ಸಿಕ್ಕಿಬೀಳಬೇಕಾಗಿ ಬಂತು. ಆಡಲು ಅನೇಕ ಬಾಯಿಗಳಿದ್ದರೂ ಆಲೋಚಿಸಲು ಕೆಲವೇ ತಲೆಗಳಿರುವ ಊರುಗಳಲ್ಲಿ ಯಾವ ಹೊಸ ವ್ಯಕ್ತಿ ಅಲ್ಲಿಗೆ ಬಂದರೂ ಆಗುವ ಅವಸ್ಥೆಯೇ ಇದು. ಬಿಷಪರೇ ಆಗಿದ್ದರೂ—ಅಥವಾ, ಬಿಷಪರಾಗಿ ಜನರ ದೃಷ್ಟಿಗೆ ಬಿದ್ದುದರಿಂದಲೋ ಏನೋ—ಹಗುರದ ಮಾತು, ಟೀಕೆ, ತಮಾಷೆಗಳಿಗೆ ಅವರು ಗುರಿಯಾಗಿ

ದ್ದರು. ಆದರೆ ಈ ಟೀಕೆ, ದೂಷಣೆ, ಕುಚೇಷ್ಟೆಗಳು ತಾವಾಗಿಯೇ ಮಾಯವಾಗಿ, ಹತ್ತುವರ್ಷಗಳ ಬಳಿಕ ಅವರ ಕುರಿತು ಅಗೌರವವಾಗಿ ಮಾತಾಡುವ ವ್ಯಕ್ತಿ ಡಿ—ಯಲ್ಲಿ ಯಾರೂ ಇರಲಿಲ್ಲ.

ಮಿರಿಯಲ್ ತಮ್ಮ ತಂಗಿ ಮೇಡಮ್ ಬೇಪ್ಟೆಸ್ಟೈನಳನ್ನು ತಮ್ಮ ಜೊತೆ ಡಿ—ಗೆ ಕರೆದು ಕೊಂಡು ಬಂದಿದ್ದರು. ಈಕೆ ಅಣ್ಣನಿಗಿಂತ ಎತ್ತರ, ಬಲು ಕೃಶ ಶರೀರಿ. ರೂಪ ಗಮನಾರ್ಹವಲ್ಲ. ಬ್ರಹ್ಮಚಾರಿಣಿ. ಮಾತೃತ್ವದ ಪೂಜ್ಯತೆಯಾಗಲೀ ಲೌಕಿಕ ಸೌಂದರ್ಯವಾಗಲೀ ಇವಳಲ್ಲಿ ಇರಲಿಲ್ಲ ವಾದರೂ ಇವಳ ಸಾನ್ನಿಧ್ಯದಲ್ಲಿ ವಿಶಿಷ್ಟ ಅಲೌಕಿಕ ಪೂಜ್ಯತಾಭಾವ ಉತ್ಪನ್ನವಾಗುತ್ತಿತ್ತು. ಧರ್ಮಕಾರ್ಯಗಳಲ್ಲೂ ಧರ್ಮ ಚಿಂತನೆಯಲ್ಲೂ ವೇಳೆ ಕಳೆಯುತ್ತಿದ್ದಳು. ಹೋದಲ್ಲೆಲ್ಲ ದೈವಿಕ ಶಾಂತಿ ಬೀರುತ್ತಿದ್ದಳು. ಈ ಸತ್‌ಜೀವನದ ಫಲವಾಗಿ ಇವಳು ಆಧ್ಯಾತ್ಮಿಕ ಸೌಂದರ್ಯ ಪಡೆದಿದ್ದಳೆಂದರೆ ಸರಿಯಾಗಬಹುದು. ಇವಳನ್ನು ಆಲಂಕಾರಿಕವಾಗಿ ವರ್ಣಿಸುವುದಾದರೆ ಇವ ಳೊಬ್ಬ ಆಧ್ಯಾತ್ಮಿಕ ಜ್ಯೋತಿಯೇ ಆಗಿದ್ದಳು—ಅರ್ಥಾತ್, ಯೌವನ ಕಾಲದ ಈಕೆಯ ತೆಳು ಶರೀರ ವಾರ್ಧಕ್ಯದಲ್ಲಿ ತೆಳುವಿನ ಜತೆಗೆ ಪಾರದರ್ಶಕತೆ ಪಡೆದು, ಈಕೆಯಲ್ಲಿ ಅಂತರ್ಗತವಾಗಿದ್ದ ದೈವತ್ವ ನೋಡಿದವರಿಗೆ ಭಾಸವಾಗುತ್ತಿತ್ತು. ಇವಳಿಗೆ ದೇಹವಾದರೂ ಇತ್ತೇ ಅಥವಾ ಪ್ರಭೆ ಮಾತ್ರ ಪ್ರಕಟವಾಗುತ್ತಿದ್ದುದೇ ಎಂಬಂತೆ ಇದ್ದಳು. ಹೇಗಿದ್ದರೂ ಇವಳಲ್ಲಿ ಸ್ತ್ರೀತ್ವವೇ ಇರಲಿಲ್ಲ —ಪ್ರಭೆ ಉಳಿದಿರಲು ತಕ್ಕಂಥ ಹಣತೆ ಇರುವಂತೆ, ದೈವಮಂದಿರವಾಗಿರಲು ತಕ್ಕಷ್ಟು ಮಾತ್ರ ಪಾರ್ಥಿವ ವಸ್ತು ಈ ಪ್ರಭೆಯನ್ನು ಆವರಿಸಿಕೊಂಡಿತ್ತು.

ಬಿಷಪರ ಮನೆ ಕೆಲಸಕ್ಕೆ ಮೇಡಮ್ ಮೆಗ್‌ಲೋಯರ್ ಎಂಬ ಹೆಂಗುಸಿದ್ದಳು. ಅವಳು ಬಿಷಪರ ಅಡುಗೆಯವಳೂ ಪರಿಚಾರಿಕೆಯೂ ಹೌದು. ಸುಲಕ್ಷಣೆ, ಪ್ರಾಮಾಣಿಕೆ ಮತ್ತು ಸುಟಿ. ಬಿಷಪರ ಮನೆಯಲ್ಲಿ, ಗೃಹಕೃತ್ಯದ ಮಟ್ಟಿಗೆ, ಇವಳೊಬ್ಬ ಯಜಮಾನಿಯೇ ಆಗಿದ್ದಳು.

ರಾಜಶಾಸನ ಪ್ರಕಾರ ಗೌರವದಲ್ಲಿ ಬಿಷಪರ ಅಧಿಕಾರ ಮೇಜರ್-ಜನರಲನದಕ್ಕೆ ಸಮಾನ. ಅವರು ಡಿ—ಗೆ ಬಂದು ರಾಜಮರ್ಯಾದೆಯಲ್ಲಿ ತಮ್ಮ ಅಧಿಕಾರ ವಹಿಸಿಕೊಂಡರು. ಸಂಪ್ರ ದಾಯ ಪ್ರಕಾರ ಡಿ—ಯ ನಗರಸಭಾಧ್ಯಕ್ಷರೂ ನಗರದ ಪೊಲೀಸ್ ಮತ್ತು ನ್ಯಾಯ ಖಾತೆಯ ಮುಖ್ಯಾಧಿಕಾರಿಗಳೂ ಇವರ ಅರಮನೆಗೆ ಬಂದು ಅವರ ಭೇಟಿಪಡೆದು ಹೋದರು. ಅದೇ ಸಂಪ್ರದಾಯ ಪ್ರಕಾರ ಬಿಷಪರೂ ಈ ಇಬ್ಬರಿಗೂ ಮರುಭೇಟಿ ಕೊಟ್ಟು ಗೌರವಿಸಿದರು. ಸಂಪ್ರದಾಯದ ಈ ಎಲ್ಲ ಕಾರ್ಯಗಳೂ ಮುಗಿದನಂತರ ಬಿಷಪರ ಧಾರ್ಮಿಕ ಕಾರ್ಯಗಳನ್ನು ಮಹಾಜನರು ಕುತೂಹಲದಿಂದ ನಿರೀಕ್ಷಿಸತೊಡಗಿದರು.

೨. ಮಿರಿಯಲ್ "ಸುದರ್ಶನ" ಆದುದು

ಬಿಷಪರ ಅರಮನೆ ವಿಶಾಲ ಹೂದೋಟಗಳೂ ಅಲಂಕಾರಕ್ಕಾಗಿ ನೆಡಲಾಗಿದ್ದ ಸಾಲು ಮರ ಗಳೂ ಸೊಗಸಾಗಿದ್ದ ರಸ್ತೆಗಳೂ ಇದ್ದ ಸುಂದರ ಪ್ರದೇಶದಲ್ಲಿತ್ತು. ಭವ್ಯವಾಗಿದ್ದ ಈ ಅರಮನೆ ಯಲ್ಲಿ ವಿಸ್ತಾರವಾದ ಭೋಜನಶಾಲೆ, ಉತ್ತಮ ತರದ ಪುಸ್ತಕಭಂಡಾರ, ಅಲಂಕೃತ ಬೈಠಖ್ಖಾನೆ ಮೊದಲಾದ ಶ್ರೀಮಂತಿಕೆಯ ಸೌಕರ್ಯಗಳಿದ್ದುವು.

ಇದರ ಪ್ರಾಕಾರದೊಳಗೆ ಬಿಷಪರ ಆಡಳಿತೆಗೆ ಒಳಪಟ್ಟ ಒಂದು ಆಸ್ಪತ್ರೆ ಇತ್ತು. ಆಸ್ಪತ್ರೆ ಕಟ್ಟಡವೂ ಅದಕ್ಕೆ ಸಂಬಂಧಿಸಿದ ರೋಗಿಗಳ ವಾಸಗೃಹವೂ ಬಲು ಚಿಕ್ಕವು.

ಅಧಿಕಾರವಹಿಸಿಕೊಂಡ ಒಂದು ವಾರದೊಳಗೆ ಒಂದು ದಿನ ಅವರು ಆಸ್ಪತ್ರೆಯನ್ನೂ

ರೋಗಿಗಳನ್ನೂ ಸಂದರ್ಶಿಸಿದರು. ಮನೆಗೆ ಮರಳಿದ ಕೂಡಲೇ ಆಸ್ಪತ್ರೆಯ ಮುಖ್ಯಾಧಿಕಾರಿಯನ್ನು ಬರಮಾಡಿಕೊಂಡು ಕೇಳಿದರು : "ನಿಮ್ಮಲ್ಲಿ ಎಷ್ಟು ಜನ ರೋಗಿಗಳಿದ್ದಾರೆ ?"

"ಪ್ರಭೂ! ಇಪ್ಪತ್ತಾರು ಜನ ರೋಗಿಗಳಿದ್ದಾರೆ."

"ನಾನು ಎಣಿಸಿದಾಗಲೂ ಹಾಗೆಯೇ ಕಂಡೆ."

"ಜಾಗ ಸಾಕಾಗದೆ ಹಾಸಿಗೆಗಳು ಇರಬೇಕಾದುದಕ್ಕಿಂತ ಹತ್ತಿರಹತ್ತಿರವಾಗಿಯೇ ಇವೆ, ಪ್ರಭು!"

"ನಾನೂ ಹಾಗೆಯೇ ಗ್ರಹಿಸಿದೆ."

"ಹೊರಗಾದರೂ ಸ್ಥಳವಿದೆಯೇ ಅಂದರೆ ಅದೂ ಇಲ್ಲ, ಪ್ರಭು!"

"ನನಗೆ ಅದೂ ಗೊತ್ತಾಗಿದೆ."

ಅಧಿಕಾರಿ ನಮ್ರತೆಯಿಂದ ಮಾತು ಮುಂದುವರಿಸುತ್ತ, "ಸಾಂಕ್ರಾಮಿಕ ರೋಗ ಬಂದಾಗ ಒಂದೊಂದಾವೃತ್ತಿ ನೂರಕ್ಕೂ ಮಿಕ್ಕಿ ರೋಗಿಗಳು ಬರುವರು. ಆಗಲಂತೂ ನಮ್ಮ ಕಷ್ಟ ಹೇಳಿ ತೀರದು, ಪ್ರಭು!"

"ಅದು ದುಃಖದ ವಿಷಯ."

"ಇದ್ದುದರಲ್ಲೇ ಸುಧಾರಿಸುವ ಪ್ರಯತ್ನ ಮಾಡುತ್ತಿದ್ದೇವೆ, ಪ್ರಭು!"

ಈ ಸಂಭಾಷಣೆ ನಡೆದದ್ದು ಬಿಷಪರ ಭೋಜನಶಾಲೆಯಲ್ಲಿ. ಅವರು ಅಧಿಕಾರಿಯ ಕಡೆ ಹೆಚ್ಚು ಗಮನ ಕೊಡದೆ, ತಮ್ಮ ಭೋಜನಶಾಲೆಯ ಉದ್ದ ಅಗಲ ನೋಡುತ್ತ, "ಈ ಒಂದು ಕೋಣೆಯಲ್ಲಿ ಎಷ್ಟು ಹಾಸಿಗೆಗಳನ್ನು ಹಾಸಬಹುದು?" ಎಂದು ಕೇಳಿದರು.

ಮುಖ್ಯಾಧಿಕಾರಿಗೆ ಈ ಪ್ರಶ್ನೆ ಬಹಳ ಆಶ್ಚರ್ಯ ಉಂಟುಮಾಡಿತು. ಅವನು ಬಲು ಗೌರವದಿಂದ, ಸ್ವಲ್ಪ ಅಂಜುತ್ತಲೂ, ನುಡಿದ, "ತಮ್ಮ ಭೋಜನಶಾಲೆಯಲ್ಲೆಂದು ಅಪ್ಪಣೆಕೊಡಿಸಿದರೇನು, ಪ್ರಭು ?"

ಬಿಷಪ್ ಈ ಸಮಯದಲ್ಲಿ ಅಲ್ಲಿಯ ಸ್ಥಳಾನುಕೂಲತೆಗಳನ್ನು ಗ್ರಹಿಸುತ್ತ ನಿಂತಿದ್ದರು. ಸ್ವಲ್ಪ ಆಲೋಚಿಸಿ ಅವರೆಂದರು, "ನೋಡಿ! ಈ ಆಸ್ಪತ್ರೆಯ ವ್ಯವಸ್ಥೆ ಒಂದು ತಮಾಷೆಯಂತಿದೆ. ನಿಮ್ಮ ನಾಲ್ಕಾರು ಕೋಣೆಗಳ ಸ್ಥಳ ಇಪ್ಪತ್ತಾರು ಜನ ರೋಗಿಗಳಿಗೆ ಸಾಕಾಗದಿರುವಾಗಲೇ ನಾವು ಮೂವರಿಗೆ ಮಾತ್ರ ಐವತ್ತು ರೋಗಿಗಳಿಗೆ ಸಾಕಾಗುವಷ್ಟು ಸ್ಥಳಾನುಕೂಲ್ಯವಿದೆ. ಇದನ್ನು ಸರಿಪಡಿಸಬೇಕು. ನಮ್ಮ ಮನೆಯನ್ನು ನಿಮ್ಮ ಆಸ್ಪತ್ರೆಗೆ ಕೊಡುತ್ತೇನೆ. ನಿಮ್ಮ ಆಸ್ಪತ್ರೆ ಕಟ್ಟಡವನ್ನು ನನಗೆ ಬಿಟ್ಟುಕೊಡಿ."

ಬಿಷಪರ ಮಾತೆಂದರೆ ಅಧಿಕಾರವಾಣಿಯೇ ಆಗಿತ್ತು. ಮರುದಿನವೇ ಆ ಇಪ್ಪತ್ತಾರು ರೋಗಿಗಳು ಆಸ್ಪತ್ರೆ ಸಮೇತ ಬಿಷಪರ ಅರಮನೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ಕಟ್ಟಡಗಳಲ್ಲಿ ಬಂದು ನೆಲಸಿದರು. ಬಿಷಪ್ ಹಳೆ ಆಸ್ಪತ್ರೆ ಕಟ್ಟಡಗಳಿಗೆ ವರ್ಗಮಾಡಿಕೊಂಡರು.

ಬಿಷಪರಿಗೆ ವರ್ಷಕ್ಕೆ ೧೫,೦೦೦ ಫ್ರ್ಯಾಂಕ್ ಸರಕಾರಿ ಸಂಬಳವಿತ್ತು. ಅವರ ತಂಗಿಗೆ ವರ್ಷಂಪ್ರತಿ, ಜೀವನಾಂಶದ ಹಣವಾಗಿ, ೫೦೦ ಫ್ರ್ಯಾಂಕ್ ಹಣ ಬರುತ್ತಿತ್ತು. ಈ ಉತ್ಪತ್ತಿಯಲ್ಲದೆ ಅಣ್ಣತಂಗಿಯರಿಗೆ ಬೇರೆ ಏನೂ ಇರಲಿಲ್ಲ. ಬಿಷಪ್ ಆಸ್ಪತ್ರೆ ಕಟ್ಟಡಕ್ಕೆ ವರ್ಗಮಾಡಿಕೊಂಡ ದಿನವೇ ತಮ್ಮ ವರ್ಷಾವಧಿ ಖರ್ಚಿನ ಮುಂಗಡಪತ್ರ ತಯಾರಿಸಿದರು. ಅದು ಈ ಮುಂದಿನಂತೆ ಇದೆ :

ಸ್ವಗೃಹವಾರ್ತೆ ವೆಚ್ಚ ಕುರಿತ ನಿಬಂಧನೆ

ಕೆಳತರಗತಿಯ ಶಾಲೆಗೆ ಸಹಾಯಧನ	...	೧೫೦೦ ಫ್ರ್ಯಾಂಕುಗಳು
ಧರ್ಮಗುರುಗಳ ಸಮ್ಮೇಳನ ವೆಚ್ಚ	...	೧೦೦
ಲಸಾರಿಸ್ಟ್ ಇಗರ್ಜಿಗಳಿಗೆ	...	೧೦೦
ಪ್ಯಾರಿಸಿನಲ್ಲಿರುವ ಪರಸ್ಥಳೀಯ ಧರ್ಮಸಂಘಗಳಿಗೆ	...	೨೦೦
ಪವಿತ್ರಾತ್ಮ (ಹೋಲಿ ಘೋಸ್ಟ್) ದಿನಾಚರಣೆ	...	೧೫೦
ಜೆರೂಸಲೆಮ್ಮಿನ ಧರ್ಮಸಂಸ್ಥೆಗಳಿಗೆ	...	೧೦೦
ಮಾತೃತ್ವ ಮತ್ತು ಶಿಶುಸಂಗೋಪನ ಸಂಸ್ಥೆಗಳಿಗೆ	...	೩೦೦
ಅಲ್ಸ್ ಪ್ರದೇಶದಲ್ಲಿಯ ಇದೇ ನಮೂನೆ ಸಂಸ್ಥೆಗೆ	...	೫೦
ಬಂದೀಖಾನೆಗಳಲ್ಲಿ ಕೈದಿಗಳ ಸೌಕರ್ಯಾರ್ಥ	...	೪೦೦
ಬಂದೀಖಾನೆಗಳಲ್ಲಿರುವವರಿಗೆ ಸ್ವಕುಟುಂಬಪೋಷಣೆ ನಿಮಿತ್ತ ಸಾಲವಾದುದರ ಪರಿಹಾರಕ್ಕೆ ನೆರವು	...	೧೦೦೦
ಬಂದೀಖಾನೆಗಳಲ್ಲಿರುವ ಸಾಮಾನ್ಯ ಕೈದಿಗಳಿಗೆ ಸಹಾಯ	...	೫೦೦
ಇಲ್ಲಿಯ ಶಾಲಾಧ್ಯಾಪಕರುಗಳಿಗೆ ಸರ್ಕಾರೀ ಸಂಬಳದ ಜೊತೆಗೆ ಸೇರಿಸಿ ಕೊಡಲು ನೆರವು	...	೨೦೦೦
ಆಲ್ಸ್ ಪರ್ವತಾಗ್ರದ ಸನಿಹದಲ್ಲಿ ವಾಸಿಸುವವರ ಸಹಾಯಾರ್ಥ		೧೦೦
ಬಡ ಹುಡುಗಿಯರಿಗೆ ಶಿಕ್ಷಣ ಕೊಡುವ ಮಹಿಳಾ ಸಂಸ್ಥೆಗಳಿಗೆ ಸಹಾಯ	...	೧೫೦೦
ಬಡವರನ್ನು ಬಡತನದಿಂದ ಮೇಲೆತ್ತುವ ಪ್ರಯತ್ನಗಳಿಗೆ	...	೬೦೦೦
ಸ್ವಂತ ವೆಚ್ಚಕ್ಕೆ	...	೧೦೦೦
ಜುಮ್ಲ	...	೧೫೦೦೦ ಫ್ರ್ಯಾಂಕುಗಳು

ಜನರು ಇವನ್ನೆಲ್ಲ ಕಂಡು ಬಿಷಪರನ್ನು ಸುದರ್ಶನ ಎಂದು ಕರೆಯುತ್ತಿದ್ದರು.

೩. ಕರ್ತವ್ಯಕ್ಕಾಗಿ ಕಷ್ಟ ಜೀವನ

ಬಿಷಪರು ಧರ್ಮಸಹಾಯಗಳ ಹಣಕ್ಕಾಗಿ ತಮ್ಮ ಸವಾರಿಯ ಸಾರೋಟು ಮಾರಿದರು ; ವಾಹನವಿಲ್ಲದಿದ್ದರೂ ದಲಿತವರ್ಗದವರಿಗೆ ತಾವು ಸಂದರ್ಶನವೀಯುವುದನ್ನು ಸ್ವಲ್ಪವೂ ಕಡಿಮೆ ಮಾಡಲಿಲ್ಲ. ಬಿಷಪರ ಕಾರ್ಯಕ್ಷೇತ್ರದಲ್ಲಿ ಬಹ್ವಂಶ ಪರ್ವತ ಪ್ರದೇಶ. ಅವರು ವರ್ಷಂಪ್ರತಿ ಹೋಗಬೇಕಾಗಿದ್ದ ಇಗರ್ಜಿಗಳು ಇನ್ನೂರಎಂಬತ್ತೈದು, 'ವಿಕಾರ್'ಗಳು ನಲವತ್ತೊಂಬತ್ತು, 'ಕ್ಯೂರ್' ಕ್ಷೇತ್ರಗಳು ಇಪ್ಪತ್ತೆರಡು. ಈ ಎಲ್ಲ ಸಂಸ್ಥೆಗಳಿಗೂ ಅವರು ತಪ್ಪದೆ ಸಂದರ್ಶನವೀಯುತ್ತಿದ್ದರು.

ಒಂದು ದಿನ ಸೆನೆಸ್ ಪಟ್ಟಣಕ್ಕೆ ಕತ್ತೆಯ ಮೇಲೆ ಕುಳಿತು ಹೊರಟರು. ಇಷ್ಟು ಗೌರವಾನ್ವಿತರು ಕತ್ತೆಯಿಂದಿಳಿಯುವುದನ್ನು ಕಂಡ ಆ ಪಟ್ಟಣಿಗರು ಕೆಲವು ಜನ ಬಹಿರಂಗವಾಗಿಯೇ ನಕ್ಕರು ; ಇನ್ನು ಕೆಲವರು ತಮ್ಮ ನಗುವನ್ನು ತಡೆಹಿಡಿದಿದ್ದವರಂತೆ ಕಾಣಿಸಿಕೊಂಡರು. ಬಿಷಪ್ ಮಾತ್ರ

ಯಾವುದನ್ನೂ ವಿಶೇಷ ಗಮನಕ್ಕೆ ತರದೆ, ತಮ್ಮನ್ನು ಎದುರುಗೊಳ್ಳಲು ಬಂದಿದ್ದವರನ್ನು ನೋಡಿ, "ಸೆನೆಸಿನ ಮಾನ್ಯ ಮೇಯರರೇ, ಮತ್ತು ಈ ಪಟ್ಟಣದ ಮಹನೀಯರೇ, ನಮ್ಮ ಆತ್ಮೋದ್ಧಾರಕ ಏಸು ಮಹಾಪ್ರಭು ಏರಿಕೊಂಡು ಹೋಗಿದ್ದ ವಾಹನದಲ್ಲಿ ನಾನು ಕುಳಿತು ಬಂದದ್ದು ನಿರ್ವಾಹವಿಲ್ಲದೆ ಮಾತ್ರ ಅಷ್ಟೇ ಹೊರತು, ಈ ವಾಹನದ ಸಂಬಂಧದಿಂದ ಏಸು ಪ್ರಭುವಿನ ಪೂಜ್ಯತೆಯ ಛಾಯೆಯನ್ನಾದರೂ ತಮ್ಮೆದುರು ಪ್ರದರ್ಶಿಸಿ ಮೆರೆಯುವುದಕ್ಕೋಸ್ಕರ ಅಲ್ಲ. ನನ್ನ ವಾಹನದ ಕುರಿತು ನಿಮಗಾಗಿರುವ ಬೇಸರವನ್ನು ಅರಿತಿರುವೆನು," ಎಂದು ಗಂಭೀರವಾಗಿ ನುಡಿದರು.

ಅವರು ಜನರೊಡನೆ ಸಂಭಾಷಿಸುತ್ತಿದ್ದರು, ಹೊರತು, ತಮ್ಮ ಅಧಿಕಾರಪ್ರಯುಕ್ತವಾಗಿ ಬೋಧಿಸುತ್ತಿರಲಿಲ್ಲ. ಒಂದೂರಿನವರಿಗೆ ಬೋಧಿಸುವಾಗ ಅವರ ನೆರೆಯೂರವರ ಉದಾಹರಣೆ ಕೊಡುತ್ತಿದ್ದರು, "ನೋಡಿ, ಆ ಊರಿನಲ್ಲಿ ಅನಾಥ ವಿಧವೆಯರ ಮನೆಯನ್ನು ಅನುಕೂಲಸ್ಥರು ದುರಸ್ತಿಮಾಡಿಕೊಡುತ್ತಾರೆ. ಅಲ್ಲಿ ಖೂನಿ ನಡೆಯದೆ ಒಂದು ನೂರು ವರ್ಷವಾಯಿತು—ದೇವರ ಕೃಪೆ ಪಡೆದ ಊರು ಅದು." ಇನ್ನೊಂದು ಕಡೆ, "ನೋಡಿ, ತಮ್ಮ ಮಕ್ಕಳನ್ನು ಯುದ್ಧಕ್ಕೆ ಕಳುಹಿಸಿರುವವರ ಗದ್ದೆಗಳನ್ನು ಊರಲ್ಲೇ ಇರುವವರೆಲ್ಲರೂ ಸೇರಿ, ಕೊಯ್ದು, ಧಾನ್ಯವನ್ನು ರೇಖೆ ಮಾಡಿಕೊಡುವ ಪದ್ಧತಿ ಎಂಬರ್ನ್‌ನಲ್ಲಿದೆ," ಎಂದು ಹೇಳಿದ್ದಿದೆ. ಈ ರೀತಿ ಅವರು ಉದಾಹರಣೆ, ಕಥೆ ಮೊದಲಾದವುಗಳಿಂದ, ಮನವೊಪ್ಪುವ ಮೃದು ನುಡಿಗಳಿಂದ, ಜನರಿಗೆ ಬೋಧಿಸಿ ಅವರನ್ನು ಸಂಸ್ಕಾರಗೊಳಿಸುತ್ತಿದ್ದರು.

೪. ನುಡಿದಂತೆ ನಡೆ

ಬಿಷಪರ ಮಾತುಗಳೆಲ್ಲ ಮಕ್ಕಳ ಮಾತಿನಂತೆ ಸರಳ. ಅಪರೂಪಕ್ಕೊಮ್ಮೆ ಅವರು ಅರ್ಥಗರ್ಭಿತ ವ್ಯಂಗ್ಯ ನುಡಿಯುವುದೂ ಇತ್ತು. ಶಿಷ್ಯವರ್ಗ ಅವರನ್ನು "ಮಹೋನ್ನತ ಮಹಾಪ್ರಭು" ಎಂದು ಕರೆಯುವ ಸಂಪ್ರದಾಯ. ಒಮ್ಮೆ ಅವರ ಕಪಾಟಿನಿಂದ ಪುಸ್ತಕ ತೆಗೆಯಲು ಅವರಿಗೆ ಕೈ ಎಟಕದಿದ್ದುದಕ್ಕೆ ಕೆಲಸದವಳನ್ನು ಕರೆದು, "ಇತ್ತ ನೋಡು, ನನ್ನ ಉನ್ನತಿ ಇಷ್ಟೆ! ನನ್ನ ಕಪಾಟೇ ನನಗಿಂತ ಎತ್ತರವಾಗಿದೆ!" ಎಂದು ಹೇಳಿ ಕಾಲುಮಣೆ ತರಿಸಿಕೊಂಡಿದ್ದರು.

ಒಂದು ದಿನ ಯಾವುದೋ ಇಗರ್ಜಿಯಲ್ಲಿ ಬಿಷಪರ ಎದುರು ಸ್ವರ್ಗ-ನರಕಗಳ ಕುರಿತು ಭಾಷಣಗಳು ನಡೆದನಂತರ ಒಬ್ಬ ಅನ್ಯಾಯಗಾರ ಲೋಭಿ ಆರು ಜನ ಬಡವರಿಗೆ ಒಟ್ಟಾಗಿ ೧ ಪೆನ್ನಿ ದಾನಮಾಡುತ್ತಿದ್ದುದನ್ನು ಕಂಡು ಇವರೆಂದರು, "ನೋಡಿ ಅವನು ೧ ಪೆನ್ನಿ ಕ್ರಯದ ಸ್ವರ್ಗವನ್ನು ಕೊಂಡುಕೊಳ್ಳುತ್ತಿದ್ದಾನೆ!"

ಅವರು ಎಂಥ ಕ್ರೂರಿಗೂ ಅಥವಾ ಪಾಪಿಗೂ ಕಠಿಣ ಮಾತು ಆಡುತ್ತಿರಲಿಲ್ಲ. ದುರ್ನಡತೆಗಳ ಕುರಿತು ಅವರ ಅಭಿಪ್ರಾಯ ಈ ತೆರನಾಗಿತ್ತು, "ಶರೀರವು ಮನುಷ್ಯನ ಹೊರೆ ಮಾತ್ರವಲ್ಲ, ಅದು ಅವನ ಕಾಮಮೋಹಗಳ ಪ್ರೇರಕವೂ ಆಗಿದೆ. ಪ್ರತಿಯೊಬ್ಬನೂ ತನ್ನ ಹೊರೆಯಿಂದಲೇ ತನ್ನ ಪ್ರಾಪಂಚಿಕ ಬಾಳನ್ನು ನಿರ್ಮಿಸಿಕೊಳ್ಳಬೇಕಾಗಿದೆ. ಮನುಷ್ಯನೆಂದರೆ ಶರೀರ ಮಾತ್ರ ಅಲ್ಲದಿರುವುದರಿಂದ, ಅವನು ತನ್ನ ಪ್ರಾಪಂಚಿಕ ಕಾರ್ಯಗಳನ್ನು ನಡೆಸಿ ಬರುವಾಗ ತನ್ನ ದೇಹದಿಂದ ಪ್ರೇರೇಪಿಸಲ್ಪಡುವ ಪ್ರವೃತ್ತಿಗಳ ಕುರಿತು, ಸದಾ ಗಮನವಿಟ್ಟುಕೊಂಡಿರಬೇಕು. ಈ ತೆರನಾದ ಜಾಗ್ರತೆಯಲ್ಲಿದ್ದು ಶರೀರದ ಕುಮಾರ್ಗಗಳನ್ನು ತ್ಯಜಿಸಬೇಕು; ಅದರ ಮೋಹದ ದುರಾಶೆಗಳನ್ನು ತಡೆಗಟ್ಟಬೇಕು; ಇಷ್ಟು ಮಾಡಿಯೂ ಕೆಲವೊಮ್ಮೆ ಅವನು ತನ್ನ ಹೊರೆಯ ಆಳಾಗಿ ಕೆಳಕ್ಕೆ

ಬೀಳಲೂ ಬಹುದು. ಆದರೆ, ತನ್ನ ಪ್ರಯತ್ನಗಳನ್ನೂ ಮೀರಿ ಬಿದ್ದಾಗ ಆದದ್ದು ಮಾನಸಿಕ ಅಪರಾಧವಲ್ಲ, ಕೇವಲ ದೈಹಿಕ. ಅಂಥ ಪತನವನ್ನೂ ಲಾಭಪ್ರದವಾಗಿ ಮಾಡಿಕೊಳ್ಳಬೇಕು. ಅಂದರೆ, ಈ ಬೀಳೋಣವನ್ನು ದೈವದ ಒಲುಮೆಗಾಗಿ ಮಾಡಿದ ದೀರ್ಘದಂಡ ನಮಸ್ಕಾರವಾಗಿ ಪರಿವರ್ತಿಸಿಕೊಳ್ಳಬೇಕು. ಪ್ರಪಂಚದಲ್ಲಿದ್ದೂ ಅದರ ಪಾಪಗಳಿಂದ ಅತೀತರಾಗಿರುವುದು ಕೆಲವರಿಗೆ ಮಾತ್ರ ಸಾಧ್ಯವಾಗುವ ವೈಶಿಷ್ಟ್ಯ; ಆದರೆ, ಪ್ರಪಂಚಭೂಷಣರಾಗಿ ಬಾಳಬೇಕಾದುದು ಎಲ್ಲ ಪ್ರಾಪಂಚಿಕರ ಕರ್ತವ್ಯ. ತಪ್ಪನ್ನು ಗ್ರಹಿಸಿದರೂ ತಪ್ಪಿ ನಡೆದರೂ ನಿಜತ್ವವನ್ನು ಶೋಧಿಸಿ, ಅದರ ಬಗ್ಗೆ ಚಿಂತಿಸಬೇಕು. ಇಂಥ ಪರಿಸ್ಥಿತಿಗಳಿಂದ ಪಶ್ಚಾತ್ತಾಪ ಬುದ್ಧಿಯನ್ನು ಅಭ್ಯಸಿಸಿ ಪಡೆಯಬೇಕು. ಪ್ರಪಂಚದ ಯಾವುದೇ ಪ್ರಾಣಿಗೆ ತಪ್ಪಿ ನಡೆಯದಿರುವುದು ಬಲು ಕಷ್ಟ. ಪರಿಪೂರ್ಣ ಪಾಪರಹಿತ ಸ್ಥಿತಿ ದೇವತೆಗಳ ಕನಸು—ಈ ಲೋಕದವರದ್ದಲ್ಲ. ಭೂಮಿಗೆ ಗುರುತ್ವಾಕರ್ಷಣಬಲ ಇರುವಂತೆ ಪಾರ್ಥಿವಮಯವಾದ ದೇಹಕ್ಕೆ ಪಾಪಾಕರ್ಷಣಬಲ ಇರುವುದು ಸಹಜ.''

ಇನ್ನು, ನಮ್ಮ ಬಿಷಪರು ವಿದ್ಯಾವಿಹೀನರ, ಬಡವರ, ವ್ಯಭಿಚಾರಕ್ಕೊಳಗಾದ ಹೆಂಗಸರ, ಮತ್ತು ಇಂಥ ಇತರರ ಕುರಿತು ಸಮಾಜ ಕಠಿಣ ಉದ್ಗಾರಗಳನ್ನೆತ್ತುವಾಗ, ಬಲು ಸಮಾಧಾನವಾಗಿ, ''ಹೆಂಗುಸರ, ಮಕ್ಕಳ, ಆಳುಗಳ, ಪಾಮರರ ತಪ್ಪುಗಳು ಅವರವಲ್ಲ. ಆ ತಪ್ಪುಗಳೆಲ್ಲ ಗಂಡಂದಿರ, ತಂದೆಯಂದಿರ, ಯಜಮಾನರ, ವಿದ್ಯಾವಂತರವು,'' ಎನ್ನುತ್ತಿದ್ದರು.

ಶಿರಚ್ಛೇದ ವಿಧಿಸಲ್ಪಟ್ಟ ಒಬ್ಬ ಅಪರಾಧಿಯ ವರ್ತಮಾನ ಕೇಳಿ ಬಿಷಪರು ಅವನಲ್ಲಿಗೆ ಹೋಗಿ, ಜೈಲಿನಲ್ಲಿ ದಿನವಿಡೀ ಇದ್ದರಂತೆ. ಅಲ್ಲಿ ಅವನಿಗೆ ಧರ್ಮಬೋಧೆ ಮಾಡಿ ಅವನೊಂದಿಗೆ ಶಿರಚ್ಛೇದದ ಗದ್ದುಗೆ ಏರಿ ಈ ರೀತಿ ಬೋಧಿಸಿದರಂತೆ, ''ಮನುಷ್ಯರಿಂದಲೇ ಮೃತಿಹೊಂದುವವನನ್ನು ದೇವರು ರಕ್ಷಿಸುವನು; ಸಮಾಜದಿಂದ ದೂರ ಇಡಲ್ಪಟ್ಟವನನ್ನು ದೇವರು ಆತ್ಮೀಯನನ್ನಾಗಿ ಮಾಡಿಕೊಳ್ಳುವನು. ದೇವರನ್ನು ಧ್ಯಾನಿಸು. ನಿನ್ನನ್ನು ಸಂಸ್ಕರಿಸಿ ಉದ್ಧಾರಗೈವನು.''

೫. ಮಿತವ್ಯಯ

ಬಿಷಪ್ ಮಿರಿಯಲರದು ಅಭಿಪ್ರಾಯಗಳಂತೆ ಆಚರಣೆ ಕೂಡ. ಅವರು ಉಪಯೋಗಿಸುತ್ತಿದ್ದ ಎಲ್ಲ ವಸ್ತುಗಳ ಕುರಿತೂ ಮಿತವ್ಯಯ ಅಭ್ಯಸಿಸುತ್ತಿದ್ದರು. ಜೀವಧಾರಣೆಗೆ ತಕ್ಕಷ್ಟು ಮಾತ್ರ ಸಾತ್ತ್ವಿಕಾಹಾರ ಸೇವಿಸುತ್ತಿದ್ದರು. ಸರಳ ಮತ್ತು ಬಡತನದ ಜೀವನ ನಡೆಸುತ್ತಿದ್ದರು. ಪ್ರಾಪಂಚಿಕ ಐಶ್ವರ್ಯದ ಕಡೆ ಗಮನವಿರಲಿಲ್ಲ. ಅವರ ಐಶ್ವರ್ಯವೆಲ್ಲ ಜ್ಞಾನ ಮತ್ತು ಅನುಕಂಪಸಂಬಂಧದ್ದಾಗಿತ್ತು. ಉಡುಪು ಅನಾಡಂಬರದ್ದು—ಅತ್ಯಂತ ಕನಿಷ್ಠ ಪರಿಮಿತಿಯದು.

ಮಿ. ಮಿರಿಯಲ್ ಅತ್ಯಲ್ಪ ಕಾಲ ಮಾತ್ರ ನಿದ್ರಿಸುತ್ತಿದ್ದರು. ಹೆಚ್ಚಿನ ಸಮಯವನ್ನೆಲ್ಲ ಪತ್ರವ್ಯವಹಾರ ಧಾರ್ಮಿಕಗ್ರಂಥ ಪಠನ, ಧರ್ಮಕರ್ಮ ಆಚರಣೆ ಮತ್ತು ಧರ್ಮಗ್ರಂಥವೊಂದರ ರಚನೆಯಲ್ಲಿ, ಅಂತೆಯೇ ಹೂ, ತರಕಾರಿತೋಟಗಳಲ್ಲಿ ಕೆಲಸ ಮಾಡುವುದರಲ್ಲೂ ವಿನಿಯೋಗಿಸುತ್ತಿದ್ದರು. ಅವರು ಮನಸ್ಸಿನ ಸಂಸ್ಕಾರವನ್ನು ''ಕೃಷಿ'' ಅನ್ನುತ್ತಿದ್ದರು.

೬. ಅವರ ಮನೆಗೆ ಯಾರು ಕಾವಲಿದ್ದರು ?

ಅವರ ಮನೆ ಹೇಗಿತ್ತೆಂದು ತಿಳಿಯುವುದು ಅಗತ್ಯ. ಅದಕ್ಕೆ ಒಂದಂತಸ್ತು ಮಹಡಿಯೂ ಮಹಡಿಯ ಮೇಲೆ ಬದಿಯಲ್ಲೊಂದು ಉಗ್ರಾಣವೂ ಇದ್ದುವು. ಮಹಡಿಯಲ್ಲಿ ಅವರ

ತಂಗಿಯೂ ಕೆಲಸದವಳೂ ಮಲಗುತ್ತಿದ್ದರು. ಕೆಳಭಾಗವನ್ನು ಪೂರ್ತಿ ಬಿಷಪರ ಉಪಯೋಗಕ್ಕೆ ಬಿಡಲಾಗಿತ್ತು.

ಈ ಮನೆ ಮೊದಲು ಆಸ್ಪತ್ರೆಯಾಗಿತ್ತೆಂಬುದು ಓದುಗರಿಗೆ ಜ್ಞಾಪಕವಿರಬಹುದಷ್ಟೆ ? ಇದರಲ್ಲಿ ಭೋಜನಶಾಲೆ ರಸ್ತೆಗೆ ಅತಿ ಸಮೀಪವಾಗಿತ್ತು—ಅಂದರೆ, ರಸ್ತೆಯಿಂದ ಮನೆಗೆ ನುಗ್ಗಿದ ಹಾಗೆ ಮೊದಲು ಸಿಕ್ಕುವುದೇ ಭೋಜನಶಾಲೆ, ಇದನ್ನು ದಾಟಿದನಂತರ ಸಿಕ್ಕುವ ಕೋಣೆಯಲ್ಲಿ ಬಿಷಪ್ ಮಲಗುತ್ತಿದ್ದರು. ಶಯ್ಯಾಗೃಹದ ಮುಂದಿನ ಕೋಣೆ ಪೂಜಾಗೃಹ. ಇದರಲ್ಲೇ ಪರದೆಗಳಿಂದ ವಿಂಗಡಿಸಿ ಒಂದು ಚಿಕ್ಕ ಕೋಣೆ ಮಾಡಿದ್ದರು—ವಿಶೇಷ ಅತಿಥಿಗಳು ಬಂದಾಗ ಮಲಗಲೋಸ್ಕರ. ಪೂಜಾಗೃಹದ ಕೋಣೆಯ ಹೊರಗಡೆ ಹೂದೋಟವಿತ್ತು.

ಬಿಷಪರಲ್ಲಿ ವಿಶೇಷತರದ ಮೇಜು, ಕಪಾಟು, ಕುರ್ಚಿ ಯಾವುದೂ ಇರಲಿಲ್ಲ. ಒಂದು ಕಪಾಟು, ಒಂದು ಮೇಜು, ಒಂದೆರಡು ಕುರ್ಚಿಗಳು, ಕೆಲವು ಕಾಲುಮಣೆಗಳು ಮಾತ್ರ ಇದ್ದುವು.

ಇನ್ನು ಅವರಲ್ಲಿ ಊಟದ ಉಪಯೋಗಕ್ಕಾಗಿ ಕೆಲವು ಬೆಳ್ಳಿ ತಟ್ಟೆಗಳೂ ಚಮಚಗಳೂ ಇದ್ದುವು. ಸ್ಪಷ್ಟವಾಗಿ ಹೇಳುವುದಿದ್ದರೆ ಇವು ಕೂಡ ಸಾಕಷ್ಟು ಇರಲಿಲ್ಲ. ವಿಶೇಷವಾಗಿದ್ದ ವಸ್ತುಗಳೆಂದರೆ ಬೆಳ್ಳಿಯ ಎರಡು ದೀಪಗಳು. ಅವನ್ನು ದಿನಾಗಲೂ ಉಪಯೋಗಿಸುತ್ತಿರಲಿಲ್ಲ. ವಿಶೇಷ ಗೌರವಾರ್ಹ ಅತಿಥಿಗಳು ರಾತ್ರಿ ಊಟಕ್ಕೆ ಬಂದಾಗಮಾತ್ರ ಕೆಲಸದ ಮೆಗ್‌ಲೋಯರ್‌ಳು ಸ್ವಯಂಪ್ರೇರಿತಳಾಗಿ ಅವನ್ನು ಹೊತ್ತಿಸಿ ಮೇಜದ ಮೇಲೆ ಇಡುತ್ತಿದ್ದಳು. ಬಿಷಪರ ಭೋಜನ ಶಾಲೆಯ ಗಾಂಭೀರ್ಯಕ್ಕೆ ಆ ಬೆಳ್ಳಿಯ ದೀಪಗಳಾದರೂ ಇರಬೇಕೆಂಬುದು ಅವಳ ಆಗ್ರಹ.

ಬಿಷಪ್ ತಮ್ಮ ಮನೆಗೆ ಎಂದೂ ಬೀಗಬಂದೋಬಸ್ತು ಮಾಡುತ್ತಿರಲಿಲ್ಲ. ಅಷ್ಟೂ ಅಲ್ಲದೆ, ರಸ್ತೆಗೆ ಬಲು ಹತ್ತಿರವಿದ್ದ ಅವರ ಭೋಜನಶಾಲೆಯ ಬಾಗಿಲಿಗೂ ಅಗಣಿ ಹಾಕುತ್ತಿರಲಿಲ್ಲ. ಈ ತೆರನಾದ ನಿರ್ಭಯ ಕುರಿತಾಗಿ, ಅವರನ್ನು ವಿಚಾರಿಸಲು ಧೈರ್ಯವಿದ್ದವರು ಯಾರಾದರೂ ಕೇಳಿದರೆ, ಅವರನ್ನುತ್ತಿದ್ದರು, "ವಿಶ್ವದ ಒಡೆಯನ ಕಾವಲನ್ನೇ ನಾನು ನಂಬಿದ್ದೇನೆ." ಕೆಲವೊಮ್ಮೆ ಅವರ ಸ್ನೇಹಿತರು ಇದೇ ನಿರ್ಭಯತೆಯ ಕುರಿತು ಅವರಲ್ಲಿ ಚರ್ಚಿಸಿದರೆ, "ದಳಪತಿಯ ಧೈರ್ಯದಂತೆಯೇ ಧರ್ಮಪತಿಗೂ ಧೈರ್ಯವಿದೆ—ಆದರೆ, ಧರ್ಮಪತಿಯ ಧೈರ್ಯ ಲೌಕಿಕ ಪ್ರಶಂಸೆಗೆ ಒಳಗಾಗದೆ ರಾರಾಜಿಸುತ್ತದಷ್ಟೆ," ಎನ್ನುತ್ತಿದ್ದರು.

೭. ದರೋಡೆಕಾರ ಮೆರೆದ ಹೃದಯವಂತಿಕೆ

ಇಲ್ಲೊಂದು ಚಿಕ್ಕ ಘಟನೆ ಹೇಳಬೇಕಾಗಿದೆ. ಇಂಥ ವಿಷಯಗಳ ನಿರೂಪಣೆಯಿಂದ ಮಾತ್ರ ನಾವು ಡಿ— ಪ್ರದೇಶದ ಬಿಷಪ್ ಎಂಥ ಮಹಾತ್ಮರಾಗಿದ್ದರೆಂದು ಚಿತ್ರಿಸಬಲ್ಲೆವು.

ಗ್ಯಾಸ್ಪರ್ಡ್ ಬೆಸ್ ಎಂಬ ದರೋಡೆಕಾರನ ಪಂಗಡದ ಹೆಚ್ಚಿನವರನ್ನು ಸರಕಾರ ನಾಶಪಡಿಸಿದ್ದರೂ ಬೆಸ್ಸನ ಬಲಗೈಬಂಟನಾಗಿದ್ದ ಕ್ರ್ಯಾವೆಟ್ ಮಾತ್ರ ತಲೆತಪ್ಪಿಸಿಕೊಂಡು ನೈಸ್‌ಪ್ರದೇಶದ ಪರ್ವತಗಳಲ್ಲಿ ಅಡಗಿಕೊಂಡಿದ್ದ. ಅವನು ತನ್ನ ಸುತ್ತುಮುತ್ತಲಿನ ಪ್ರದೇಶಗಳಿಗೆ ನುಗ್ಗಿ ಕೊಳ್ಳೆ ಹೊಡೆಯುತ್ತಿದ್ದ. ಎಂಬ್ರನ್ ಇಗರ್ಜಿಯನ್ನೂ ದರೋಡೆ ಮಾಡಿದ್ದ.

ಕ್ರ್ಯಾವೆಟ್ಟನ ಹಾವಳಿ ವಿಪರೀತವಾಗಿದ್ದ ಒಂದು ಊರಿಗೆ ನಮ್ಮ ಬಿಷಪ್ ಅಧಿಕಾರ ಸಂಬಂಧ ಭೇಟಿನೀಡಲು ಹೊರಟರು. ಅವರೊಬ್ಬರೇ ಈ ಪ್ರಯಾಣ ಕೈಗೊಳ್ಳುತ್ತಿದ್ದುದಕ್ಕೆ ಜನ ಗಾಬರಿಗೊಳ್ಳತೊಡಗಿದರು. ಆದರೆ, ಒಂಟಿಯಾಗಿ ಹೋಗುವುದು ಎಷ್ಟು ಅನುಚಿತ ವಾಗಿತ್ತೋ ಅಷ್ಟೇ

ಅನುಚಿತವಾಗಿತ್ತು ನಾಲ್ಕಾರು ಸಿಪಾಯಿಗಳ ಜೊತೆ ಹೋಗುವುದು ಕೂಡ. ಕ್ರ್ಯಾವೆಟ್ ಬಿಷಪ. ರನ್ನೂ ಸಿಪಾಯಿಗಳನ್ನೂ ಸದೆಬಡಿಯಬಲ್ಲಷ್ಟು ಬಲಿಷ್ಠನೆಂದು ಜನ ತಿಳಿದು ಅಂಜಿದ್ದರು.

ಹೀಗೆ ಬಿಷಪ್ ತಮ್ಮ ದಾರಿಹಿಡಿದು ಹೋಗುವಾಗ ಹಾದಿಯಲ್ಲಿ ಒಂದು ಪಟ್ಟಣ ದಾಟಬೇಕಾಗಿತ್ತು. ಡಿ—ಯ ಬಿಷಪ್ ಬರುವಾಗ ತಾವು ಅವರಿಗೆ ಗೌರವದ ಸ್ವಾಗತ ಕೊಡಬೇಕೆಂದು ಆ ಪಟ್ಟಣದ ಮೇಯರ್ ಮತ್ತು ಅಲ್ಲಿಯ ಇತರ ಮುಖಂಡರು ಬಿಷಪರನ್ನು ಎದುರುಗೊಂಡರು. ಸನ್ಮಾನ ಕಾರ್ಯಗಳೆಲ್ಲ ಮುಗಿದಬಳಿಕ ಆ ಪಟ್ಟಣದ ಮೇಯರ್ ದುಷ್ಟ ಕ್ರ್ಯಾವೆಟ್ಟನ ಚರಿತ್ರೆಯನ್ನೆಲ್ಲ ಬಿಷಪರಿಗೆ ತಿಳಿಸುತ್ತ, ಅವರು ಅಲ್ಲಿಂದಲೇ ಹಿಂತಿರುಗುವುದು ಉತ್ತಮವೆಂದು ವಾದಿಸತೊಡಗಿದ. ಅದಕ್ಕೆ ಬಿಷಪ್, "ಸಿಪಾಯಿಗಳು ಜೊತೆಗಿದ್ದರೂ ಅಪಾಯವಿದೆಯೆಂದು ನಿಮ್ಮ ಅಭಿಪ್ರಾಯವಿರುವುದಾದರೆ ನಾನೊಬ್ಬನೇ ಹೋಗುವೆನು," ಅಂದರು.

"ಹೀಗೂ ಆಲೋಚಿಸುವುದುಂಟೇ?" ಎಂದು ಮೇಯರ್ ಆಶ್ಚರ್ಯದಿಂದ ಕೇಳಿದ.

"ಖಂಡಿತವಾಗಿಯೂ ನಾನೊಬ್ಬನೇ ಇನ್ನೊಂದು ಗಂಟೆಯ ಒಳಗೆ ಇಲ್ಲಿಂದ ಹೊರಡುವೆನು. ಆ ಊರಿನ ಸಾಧುಜನರಿಗೂ ಪರಲೋಕ, ದೇವರು, ಧರ್ಮ ಮೊದಲಾದ ವಿಷಯಗಳನ್ನು ತಿಳಿಯುವ ಇಚ್ಛೆ ಇರುತ್ತದೆ. ಹೆದರಿ ಹಿಂತಿರುಗುವ ಬಿಷಪರ ವರ್ತಮಾನ ಕೇಳಿದರೆ ಅವರೇನಂದಾರು!" ಎಂದು ನಗುತ್ತ ಹೇಳಿದರು.

"ಆದರೆ, ಆ ಕ್ರೂರ ದರೋಡೆಕಾರರು ತಮ್ಮೆದುರು ಬಂದರೆ, ಪ್ರಭು ?"

"ಬಂದರೆ ಒಳ್ಳೆಯದೇ ಆಯಿತು! ಅವರೂ ದೇವರು, ಪರಲೋಕ, ಮೊದಲಾದ ವಿಷಯ ತಿಳಿಯಲಿ."

"ತಮ್ಮನ್ನು ಅವರು ಸುಲಿಗೆ ಮಾಡಿದರೆ ?"

"ಸುಲಿಗೆಗೆ ನನ್ನಲ್ಲೇನಿದೆ ?"

"ಕೊಲ್ಲಬಹುದಲ್ಲ!"

"ಈ ಬಡ ಬಿಷಪನನ್ನೇ ಕೊಲ್ಲುವುದು ! ನನ್ನನ್ನು ಕೊಂದು ಅವರಿಗೇನು ಲಾಭ ?"

"ಪ್ರಭೂ! ನಿಜವಾಗಿಯೂ ಅವರು ಎದುರು ಬಂದರೆ ತಾವೇನು ಮಾಡುವಿರಿ, ದಯಮಾಡಿ ಗ್ರಹಿಸಬೇಕು."

"ಬಡವರ ನಿಧಿಗೆ ವಂತಿಗೆ ಬೇಡುತ್ತೇನೆ. ಹೇಗಿದ್ದರೂ ನಾನು ಅಲ್ಲಿಗೆ ಹೋಗಲೇಬೇಕು. ನನ್ನ ಇರೋಣ ನನ್ನ ಜೀವ ಕಾಪಾಡಿಡುವುದಕ್ಕಲ್ಲ—ಪರರ ಜೀವಗಳನ್ನು ಪವಿತ್ರಗೊಳಿಸುವ ಬಗ್ಗೆ," ಎಂದನ್ನುತ್ತ ಬಿಷಪ್ ಕತ್ತೆ ಏರಿ ತಮ್ಮ ಪಯಣ ಮುಂದುವರಿಸಿದರು.

ಯಾವ ತೊಂದರೆಯೂ ಇಲ್ಲದೆ ತಲಪಬೇಕಾಗಿದ್ದ ಊರು ಸೇರಿದರು. ಆ ಊರವರು ಬಿಷಪ್ ಬಂದ ಸಂದರ್ಭಕ್ಕೆ ತಕ್ಕುದಾದ ಒಂದು ಘನ ಸಮಾರಂಭ ಜರಗಿಸಬೇಕೆಂದು ಸಮಾರಂಭಕ್ಕೆ ತಕ್ಕ ಒಡವೆ ವಸ್ತುಗಳನ್ನು ಸಂಗ್ರಹಿಸಲು ಪ್ರಯತ್ನಿಸಿದರು. ಆದರೆ ಆ ಬಡಜನರಲ್ಲಿ ವಿಶೇಷತರದ ಯಾವ ಸಲಕರಣೆಗಳೂ ದೊರಕದೆ, ಊರವರು ಬಿಷಪರ ಎದುರು ನಿಂತು ಚಿಂತಿಸುತ್ತಿದ್ದರು.

ಆಗಲೇ ಇಬ್ಬರು ಯೋಧರು ದೊಡ್ಡ ಪೆಟ್ಟಿಗೆ ಹೊತ್ತು ತಂದು ಬಿಷಪರ ಕಾಲಬುಡದಲ್ಲಿ ಇಟ್ಟು ಮಾತಾಡದೆ ಹಿಂತಿರುಗಿದರು. ಪೆಟ್ಟಿಗೆ ತೆರೆದು ನೋಡಿದಾಗ ಅದರೊಳಗೆ ಅಂದಿನ ಸಮಾರಂಭಕ್ಕೆ ತಕ್ಕವಾದ ಬಹು ಅಮೂಲ್ಯವಾದ ಒಡವೆ, ವಸ್ತು, ಬಟ್ಟೆ ಬರೆಗಳಿದ್ದುವು. ಅಲ್ಲದೆ, 'ಶ್ರೀ ಸುದರ್ಶನರಿಗೆ ಇವನ್ನೆಲ್ಲ ಕ್ರ್ಯಾವೆಟ್ ಅರ್ಪಿಸಿರುತ್ತಾನೆ,' ಎಂದು ಬರೆಯಲಾಗಿದ್ದ ಚೀಟಿಯೂ ಇತ್ತು !

ತಾವು ಆಶಿಸುತ್ತಿದ್ದ ಸಲಕರಣೆಗಳು ಯೋಗ್ಯಕ್ಷಣದಲ್ಲಿ ಸಮಾರಂಭಕ್ಕೆ ತಕ್ಕಂತೆ ಒದಗಿದ್ದಕ್ಕಾಗಿ ಜನ ಸಂತೋಷಪಟ್ಟರು.

ಆಗ, "ಪುರೋಹಿತನ ಪಂಚಪಾತ್ರೆಯನ್ನು ನಾವು ಬಯಸಿದ್ದಕ್ಕೆ ದೇವರು ಜಗದ್ಗುರುಗಳ ರಾಜಮರ್ಯಾದೆಯನ್ನೇ ಒದಗಿಸಿರುತ್ತಾನೆ," ಎಂದು ಬಿಷಪ್ ಅಂದುಕೊಂಡರು.

ಒಬ್ಬ ಪಾದ್ರಿ ತಾನು ಈ ವಿಷಯ ಸರಿಯಾಗಿ ತಿಳಿದಿರುವವನು ಎಂಬಂತೆ, "ದೇವರೋ, ಕ್ರ್ಯಾವೆಟ್ಟನೋ?" ಎಂದು ಹೇಳಿದ. ಅದಕ್ಕೆ ಬಿಷಪ್ ಅಧಿಕಾರವಾಣಿಯಿಂದ, "ದೇವರು ಒದಗಿಸಿದ್ದು," ಎಂದು ಸ್ಪಷ್ಟಪಡಿಸಿದರು.

ಬಿಷಪ್ ತಮ್ಮ ಮನೆಗೆ ಬಂದನಂತರ ಮನೆಯವರ ಹತ್ತಿರ ಮಾತಾಡುತ್ತ, "ದೇವರನ್ನು ನಂಬಿದರೆ ಕುಬೇರನಗರವನ್ನೇ ಕೊಡುವನು," ಎಂದರು.

ಬಿಷಪರಿಗೆ ಕ್ರ್ಯಾವೆಟ್ಟನಿಂದ ದೊರೆತ ಚಿನ್ನಾಭರಣ ವಜ್ರ ವೈಡೂರ್ಯಗಳು ಮಿ. ಮಿರಿಯಲರ ಅನಂತರ ಉಳಿದಿತ್ತಾಗಿ ಯಾವ ದಾಖಲೆಯಲ್ಲೂ ಕಂಡುಬರಲಿಲ್ಲ. ಆದರೆ, ಅವರ ಟಿಪ್ಪಣಿಯೊಂದರಲ್ಲಿ, "ಕ್ರ್ಯಾವೆಟ್ಟನ ದಾನ ಧರ್ಮಾಸ್ಪತ್ರೆಗೋ? ಧರ್ಮಪೀಠಕ್ಕೋ?" ಎಂಬ ಕೈಬರಹದ ಪ್ರಶ್ನಾರ್ಥಕ ಟಿಪ್ಪಣಿ ಕಂಡಿರುವೆವು.

೮. ಉನ್ಮತ್ತ ಅವಿಚಾರ

ಬಿಷಪರೂ ಕೂಡಿದ್ದ ಒಂದು ಸಮಾರಂಭದಲ್ಲಿ ಕುಡಿದು ಮತ್ತನಾಗಿದ್ದ ಶ್ರೀಮಂತನೊಬ್ಬ ಬಿಷಪರ ಹತ್ತಿರ ಹಗುರವಾಗಿ ಮಾತಾಡುತ್ತ, ದೇವರೇ ಇಲ್ಲವೆಂದೂ ಪ್ರತ್ಯಕ್ಷ ಕಾಣುವ ಜಗತ್ತು ಹೊರತಾಗಿ ಅಪ್ರತ್ಯಕ್ಷವಾಗಿ ಏನೂ ಇಲ್ಲವೆಂದೂ ಧರ್ಮ, ತ್ಯಾಗ, ಭಕ್ತಿ, ಆತ್ಮನ ಪೂರ್ಣತೆ—ಈ ಎಲ್ಲ ವಿಷಯಗಳೂ ಕೆಲಸವಿಲ್ಲದ ಮತಪ್ರವರ್ತಕರ ಕಲ್ಪನೆಗಳೆಂದೂ ಹೀಗಳೆದ.

ಈ ಮಾತುಗಳಿಂದ ಬಿಷಪ್ ಸಿಟ್ಟುಗೊಳ್ಳಲಿಲ್ಲ, ಆಶ್ಚರ್ಯಗೊಳ್ಳಲೂ ಇಲ್ಲ. ನಗುತ್ತ ಅವರಂದರು, "ಶ್ರೀಮಂತರೇ! ತಮ್ಮ ಅಭಿಪ್ರಾಯ ತಮ್ಮಂಥವರಿಗೆ ನ್ಯಾಯವಿರಬಹುದು ; ಆದರೆ, ಬಡವರಿಗೆ ಇನ್ನೊಂದು ವಿಧದ ಅಭಿಪ್ರಾಯವಿದ್ದರೆ ಯಾರಿಗೂ ತೊಂದರೆಯಿಲ್ಲವಷ್ಟೆ? ಬಡವರು ಲೌಕಿಕ ಸಂಪತ್ತು ತಮಗಿಲ್ಲದ ದುಃಖ ಶಮನಕ್ಕಾದರೂ ದೇವರನ್ನೂ ಸ್ವರ್ಗವನ್ನೂ ಕಲ್ಪಿಸಿಕೊಂಡು ಸಂತೋಷಪಟ್ಟರೆ ಸಿರಿವಂತರು ಆಕ್ಷೇಪಿಸರೆಂದು ನಂಬುತ್ತೇನೆ."

೯. ನವಜ್ಯೋತಿರ್ದರ್ಶನ

ಡಿ— ಪ್ರದೇಶದ ಹೊರವಲಯದಲ್ಲಿ ಜಿ— ಎಂಬ ಹೆಸರಿನ ದೈವವಿರೋಧಿ ಕ್ರಾಂತಿಕಾರಿಯೊಬ್ಬ ತನ್ನ ಆಯುಸ್ಸಿನ ಮುಖ್ಯಭಾಗವನ್ನು '೯೩ರ ಕ್ರಾಂತಿಯಲ್ಲಿ* ದುರುಪಯೋಗಿಸಿ,

---

* ೧೭೯೩ರಲ್ಲಿ ಸಿಡಿದ ರಾಜಕೀಯ ಕ್ರಾಂತಿ ಅತಿ ಹಿಂಸಾಮಯವಾಗಿತ್ತೆಂದು ಚರಿತ್ರೆಯಿಂದ ತಿಳಿದು ಬರುತ್ತದೆ. ಜನಸಾಮಾನ್ಯರು ರಾಜನ ಎದುರು ದಂಗೆ ಎದ್ದು ಆತನನ್ನೂ ರಾಜಮನೆತನದವರನ್ನೂ ಶ್ರೀಮಂತರನ್ನೂ ಧರ್ಮಗುರುಗಳನ್ನೂ ಸಕುಟುಂಬ ಹತಗೈದರು—ಅಧಿಕಾರಕೇಂದ್ರಿತರೇ ಮೊದಲ ಗುರಿ. ಕ್ರಾಂತಿಕಾರರನ್ನು ಸರ್ಕಾರ ಅತ್ಯಂತ ಕ್ರೂರವಾಗಿ ದಮನಿಸಿತು. ಕ್ರಾಂತಿ ನಿಂತ ಬಳಿಕ ರಾಜ ಇದ್ದರೂ ಈತನ ಸರ್ಕಾರ

ಸಮಾಜದಿಂದ ಬಹಿಷ್ಕೃತನಾಗಿ, ಜನವಸತಿ ದೂರ ಶ್ಮಶಾನಸದೃಶ ಸ್ಥಳವೊಂದರಲ್ಲಿ ನವೆಯುತ್ತಿದ್ದ. ಆ ವಠಾರಕ್ಕೆ ಹೋಗುವುದೇ ಅನಿಷ್ಟ ಮತ್ತು ಅಪಾಯಕಾರಿ ಎಂದು ಜನ ಮಾತಾಡಿಕೊಳ್ಳುತ್ತಿದ್ದರು.

ಜಿ— ಯನ್ನು ಭೇಟಿಯಾಗಬೇಕೆಂಬುದು ಬಿಷಪರ ಆಶಯ. ಆದರೆ ಆತ ದೈವದ್ರೋಹಿ ಮತ್ತು ಕ್ರೈಸ್ತಧರ್ಮವಿರೋಧಿ ಎಂದು ತಿಳಿದದ್ದರಿಂದ ತುಸು ಆತಂಕ. ಒಂದು ದಿನ ಜಿ—ಯ ಮನೆ ಕೆಲಸದ ಹುಡುಗ ಹತ್ತಿರದ ಪಟ್ಟಣಕ್ಕೆ ಬಂದು ಒಬ್ಬ ವೈದ್ಯನನ್ನು ಕರೆದುಕೊಂಡು ಹೋದನೆಂದು ತಿಳಿಯಿತು. ತತ್‌ಕ್ಷಣವೇ ಬಿಷಪ್ ಏಕಾಕಿಯಾಗಿ ಜಿ—ಯ ನೆಲೆಯೆಡೆಗೆ ಹೋದರು.

ಯಾರೊಬ್ಬನೂ ಆ ತನಕ ಸುಳಿಯದಿದ್ದ ತನ್ನ ಬಿಡಾರಕ್ಕೆ ಹಠಾತ್ತನೆ ಬಿಷಪ್ ಬಂದದ್ದು ಕಂಡು ಜಿ— ಆಶ್ಚರ್ಯಪಟ್ಟ. ಆದರೆ ಈತ ಮಾತ್ರ ಬಿಷಪರನ್ನು ಕೇವಲ ಸಾಮಾನ್ಯನಂತೆ ಕಾಣುತ್ತ, ಸಂತೋಷದಿಂದ ಸ್ವಾಗತಿಸಿ, ಹಸ್ತಲಾಘವಕ್ಕಾಗಿ ಬಲಗೈಯನ್ನು ಮುಂದೊಡ್ಡಿದ. ಜಿ—ಯನ್ನು ದೈವವಿರೋಧಿ ಮತ್ತು ಕ್ರಾಂತಿಕಾರ ಎಂದು ತಿಳಿದಿದ್ದ ಬಿಷಪ್ ತಮ್ಮ ಕೈಯನ್ನು ಚಾಚಲಿಲ್ಲ. ತಮ್ಮ ಹಸ್ತಾಲಿಂಗನ ಪಡೆಯಲು ಜಿ— ಅಪಾತ್ರನೆಂದು ಬಿಷಪರ ಭಾವನೆ. ಅಲ್ಲದೆ ಆತ ವ್ಯಾಧಿಗ್ರಸ್ತನಾಗಿರುವುದು ಸುಳ್ಳು, ಕೇವಲ ನಟನೆ ಮಾಡುತ್ತಿರುವನೆಂದು ಕೂಡ ಊಹಿಸಿದರು. ಜಿ—ಯ ಈ ನಟನೆಯಲ್ಲಿ ಏನೋ ದುರುದ್ದೇಶ ಹುದುಗಿರಬಹುದೆಂದು ಗ್ರಹಿಸಿದ ಬಿಷಪ್ ತುಸು ಕೊಂಕುನುಡಿಗಳಿಂದ ತಮ್ಮ ಅಭಿಪ್ರಾಯ ತಿಳಿಸಿದರು. ವಸ್ತುಸ್ಥಿತಿ ಏನೆಂದರೆ ಜಿ—ಗೆ ನಿಜಕ್ಕೂ ಪ್ರಾಣೋತ್ಕ್ರಮಣ ಕಾಲ ಸನ್ನಿಹಿತವಾಗುತ್ತಿತ್ತು. ಒಂದು ಬಗೆಯ ಲಕ್ವ ಬಡಿದು ಈತನ ಕಾಲುಗಳು ಮರಗಟ್ಟತೊಡಗಿದ್ದುವು. ಜಿ— ಸ್ವತಃ ಸ್ವಲ್ಪ ವೈದ್ಯಕೀಯ ಅರಿತಿದ್ದವನಾದ್ದರಿಂದ ತನ್ನ ದೇಹಸ್ಥಿತಿ ಉಲ್ಬಣಿಸುತ್ತಿದೆಯೆಂಬುದು ಗೊತ್ತಿತ್ತು.

ಅಯಾಚಿತವಾಗಿ ಆಗಮಿಸಿದ್ದ ಸಭ್ಯನೊಬ್ಬನ ಜೊತೆ ಮನಸ್ಸೀ ಹರಟಬಹುದೆಂದುಕೊಂಡಿದ್ದ ಜಿ—ಗೆ ಬಿಷಪರ ಓರೆ ಮಾತುಗಳು ನೋವುಂಟುಮಾಡಿದುವು. ಆದರೂ ಆತ ಮನಃಸ್ಥೈರ್ಯ ವಿಚಲಿತನಾಗದೆ, ಕೆಲಸದ ಹುಡುಗನಿಗೆ ಮಲಗಲು ಹೇಳಿ, ಪೂರ್ವದ ಉತ್ಸಾಹವನ್ನೇ ಮುಖದ ಮೇಲೆ ತಂದುಕೊಂಡು ಬಿಷಪರಿಗೆ ಆಸೀನರಾಗಲು ಸನ್ನೆ ಮಾಡಿದ. "ನನ್ನನ್ನು ನೋಡಲು ಈ ತನಕ ಯಾರೊಬ್ಬನೂ ಬರದಿರುವಾಗ ನೀವು ಬಂದದ್ದು ಆಶ್ಚರ್ಯವೇ ಸರಿ ! ನೀವು ಯಾರು ? ಏಕಾಗಿ ಬಂದಿದ್ದೀರಿ ?"

ಬಿಷಪರಿಗೆ ಈ ಪ್ರಶ್ನೆಯ ಸರಳತೆ ಅರ್ಥವಾಗಲಿಲ್ಲ, ವೈಯಕ್ತಿಕ ಮಾನಾಪಮಾನಗಳಿಂದ ಅವರು ಬಾಧಿತರಾಗದವರಾಗಿದ್ದರೂ ಈ 'ಧರ್ಮಲಂಡ' ಬಿಷಪ್‌ಪೀಠಕ್ಕೆ ಸಲ್ಲಬೇಕಾದ ಗೌರವ ಸೂಚಿಸದೆ ಕೇವಲ ಸಾಮಾನ್ಯನಂತೆ ತಮ್ಮನ್ನು ಸಂಬೋಧಿಸಿದ್ದರಿಂದ ತುಸು ವಿಚಲಿತರಾದರು. ಆಗ ಬಿಷಪ್ ಜಿ—ಗೆ ನೇರ ಉತ್ತರ ಕೊಡದೇ ಸ್ವಲ್ಪ ಹೀನೈಸುವ ದನಿಯಲ್ಲಿ ವಾಗ್ವಾದಕ್ಕೆ ಇಳಿದರು, "ನೀನೊಬ್ಬ ಕ್ರಾಂತಿಕಾರನಲ್ಲವೇ ? ಆದರೆ ಅರಸನ ಶಿರಚ್ಛೇದನಕ್ಕೆ ನೀನು ಮತವಿತ್ತಿರಲಾರೆ ಎಂದು ನಂಬುತ್ತೇನೆ. ನಿನ್ನಲ್ಲಿ ಉತ್ತಮ ಗುಣ ಇರಬಹುದಾದರೆ ಅದು ಶಿರಚ್ಛೇದನಕ್ಕೆ ಮತ

ತತ್ಪೂರ್ವದ ನಿರಂಕುಶ ಪ್ರಭುತ್ವವಾಗಲಿಲ್ಲ, ಬದಲು ಪ್ರಜಾಸತ್ತಾತ್ಮಕವಾಗಿ ಆಳ್ವಿಕೆ ನಡೆಸಲಾರಂಭಿಸಿತು. ಜನರು ಪುನಃ ರಾಜಭಕ್ತಿ, ರಾಜಮರ್ಯಾದೆ, ರಾಜದರ್ಬಾರುಗಳನ್ನು ಅಂಗೀಕರಿಸಿದರು. ಜನಮನಗಳಲ್ಲಿ ಕ್ರಾಂತಿಕಾರರು ಕ್ರೂರಿಗಳು, ನಾಸ್ತಿಕರು ಮತ್ತು ಸಮಾಜಘಾತಕರು ಎಂಬ ಭಾವನೆ ಆಳವಾಗಿ ಬೇರೂರಿತು. ಕೇವಲ 'ಅ' ಎಂದ ಮಾತ್ರಕ್ಕೆ ಈ ಕ್ರಾಂತಿ ಎಂಬ ಅರ್ಥ ಸಹ ರೂಢಿಗೆ ಬಂದಿತು—ಅನುವಾದಕ.

ನೀಡಿರದಿರುವುದು ಮಾತ್ರ, ಅಲ್ಲವೇ ?"

ಜಿ— ವಿಸ್ಮಿತನಾಗಲಿಲ್ಲ. ಆತ ಗಂಭೀರ ವಾಗ್ಯುದ್ಧದಲ್ಲಿ ಭಾಗಿ ಆಗಲು ಮುಂದಾದ, "ನಿಮ್ಮ ಅಭಿಪ್ರಾಯ ತಪ್ಪು. ನೀವಿತ್ತಿರುವ ಪ್ರಶಂಸೆಗೆ ನಾನು ಅಪಾತ್ರ. ರಾಜನ ಶಿರಚ್ಛೇದನಕ್ಕೆ ನಾನು ಸಮ್ಮತಿ ಕೊಟ್ಟಿದ್ದೇನೆ. ಜ್ಞಾನವಂತನಾಗಿ ಪ್ರಜಾಹಿತ ಸಾಧಿಸಬೇಕಾಗಿದ್ದ ರಾಜ ನಿರಂಕುಶ ಪ್ರಭು ವಾದ. ಕ್ರೂರಿ ಮತ್ತು ಪ್ರಜಾದ್ರೋಹಿ ರಾಜನ ಶಿರಚ್ಛೇದನಕ್ಕೆ ಮತ ಚಲಾಯಿಸಿದ್ದೇನೆ."

ಕ್ರಾಂತಿಯು ಜ್ಞಾನದಿಂದುಂಟಾದ ಪ್ರಗತಿ ಎಂದು ಕ್ರಾಂತಿಕಾರರು ವಾದಿಸುವುದನ್ನು ಆಧಾರ ವಾಗಿಟ್ಟುಕೊಂಡು ಬಿಷಪ್ ಕೊಂಕುನುಡಿ ಕುತ್ತಿದರು, "ಜ್ಞಾನವಂತರಾಗಿ ಮಾತ್ರ ಆಳ್ವಿಕೆ ಕೈ ಗೂಡದು. ಕೇವಲ ಜ್ಞಾನದಿಂದ ಪ್ರಜಾಹಿತ ಸಾಧಿಸದು. ಆಳುವವರಿಗೆ ಅನುಕಂಪವೂ ಇರ ಬೇಕಲ್ಲವೇ ?" ಕ್ರಾಂತಿಕಾರರು ಅನುಕಂಪರಹಿತರೆಂಬುದು ಧ್ವನಿ.

ಇದರಿಂದ ಜಿ— ತುಸು ಉದ್ವಿಗ್ನನಾಗಿ, "ಅನುಕಂಪ, ಅನುಕಂಪ ಎನ್ನುತ್ತೀರಿ. ಹಾಗೆಂದರೇನು ಗೊತ್ತೇ ನಿಮಗೆ ? ಜ್ಞಾನದ ಮೊತ್ತದಿಂದ ಉದ್ಭವಿಸುವ ಮತ್ತು ಜೀವನಕ್ಕೆ ಆಧಾರವಾದ ಗುಣವೊಂದೇ ಅನುಕಂಪ. ನೀವು ಪ್ರಸ್ತಾವಿಸಿರುವ ರಾಜನಲ್ಲಿ ವಿಶೇಷ ಜ್ಞಾನವಿದ್ದುದೇ ಆಗಿದ್ದರೆ ಆಗ ನಾನು ನಿಮ್ಮ ಅನುಕಂಪವನ್ನು ಒಪ್ಪಿರುತ್ತಿದ್ದೆ. ಆದರೆ ಆ ಅಜ್ಞಾನಿ ರಾಜನಲ್ಲಿ ಅನುಕಂಪ ಎಲ್ಲಿಂದ ತಾನೇ ಬರಬಲ್ಲುದಿತ್ತು ? ಅಂದ ಮೇಲೆ ಆತನ ಆಡಳಿತೆಯಲ್ಲಾದರೂ ಅನುಕಂಪ ವಿತ್ತೇ?" ಎಂದು ಮರುನುಡಿದ.

ಬಿಷಪ್ ಮೌನವಾಗಿ ಜಿ—ಯನ್ನು ಅರ್ಥಮಾಡಿಕೊಳ್ಳತೊಡಗಿದರು. ಜಿ— ತನ್ನ ಮಾತನ್ನು ಮುಂದುವರಿಸಿದ, "ಹದಿನಾರನೆಯ ಲೂಯಿಯನ್ನು ಕೊಲ್ಲಲು ನಾನು ಸಮ್ಮತಿ ಕೊಡಲಿಲ್ಲ. ಯಾರನ್ನು ಕೊಲ್ಲಲೂ ಕೊಲ್ಲಿಸಲೂ ನನಗೆ ಹಕ್ಕಿಲ್ಲ. ಆದರೆ ಸ್ವೇಚ್ಛಾಚಾರಿ ಹಿಂಸಾತ್ಮಕ ದೊರೆ ಯನ್ನು ವಧಿಸುವುದು ಸಮಸ್ತಪ್ರಜೆಗಳ ಕರ್ತವ್ಯ. ಇಂಥ ನಾಶದಿಂದ 'ವ್ಯಭಿಚಾರಕ್ಕಾಗಿ ಹೆಣ್ಣು, ದಾಸ್ಯಕ್ಕಾಗಿ ಗಂಡು' ಎಂಬ ಪಾಶವೀ ತತ್ತ್ವವೂ ನಿರ್ನಾಮವಾಗಿದೆ. ಜ್ಞಾನ, ಭ್ರಾತೃತ್ವ, ದೇಶಪ್ರೇಮ ಇವುಗಳ ಉತ್ಕರ್ಷಗಾಗಿಯೂ ನಾನು ರಾಜನ ಸಂಹಾರಕ್ಕೆ ಒಪ್ಪಿಗೆಯಿತ್ತಿದ್ದೇನೆ. ಪಾಪಕೂಪವನ್ನು ನಾಶಗೊಳಿಸಿ ಮಾನವವರ್ಗದ ಉತ್ಥಾನ ಸಾಧಿಸಿರುವುದಕ್ಕೆ ಈಗಲೂ ನಾನು ಸಂತೋಷಿಸು ತ್ತೇನೆ."

"ಹೌದು ನಾಶ ಮಾಡಿದೆ. ಕೇವಲ ತಾಮಸ ಬುದ್ಧಿಯಿಂದ ಆ ಕೆಲಸ ನಡೆದಿದೆ. ಸದುದ್ದೇಶದಿಂದ ಎಂಬುದು ಬರಿದೆ ಭ್ರಾಂತಿ. ಆದದ್ದೆಲ್ಲ ಹಿಂಸೆ," ಬಿಷಪರ ಕಠೋರವಾಣಿ.

ಜಿ— ಉದ್ರಿಕ್ತನಾದ, "ಹೌದು, 'ಹಿಂಸೆ' ಎಂದೇ ಒಪ್ಪೋಣ. ಆ 'ಹಿಂಸೆ'ಯಾದರೂ ಯಾವು ದರಿಂದ ಉದ್ಭವವಾಯಿತು ? ಗ್ರಹಿಸಿರುವಿರೇನು ? ಹದಿನೈದು ಶತಮಾನಗಳಿಂದ ಕಾರ್ಮುಗಿಲು ದಟ್ಟೈಯಿಸಿ ಅದರಿಂದ ಥಳುಕಿದ ಸಿಡಿಲು ಭೂಮಂಡಲವನ್ನು ಜರ್ಜರಗೊಳಿಸಿದರೆ ಸಿಡಿಲನ್ನು ದೂರಿ ಫಲವೇನು ? ಘೋರ ವಿದ್ಯುತ್ ಒಂದು ಕ್ಷಣ ಮಾರಕವಾಗಿ ಪ್ರಜ್ವಲಿಸಿ ಮರುಕ್ಷಣ ಸೃಷ್ಟಿದಾಯಿಯಾಗುವುದನ್ನು ನೀವರಿತಿಲ್ಲವೇ ? ಸತ್ತ್ವಗುಣ ಕಾರ್ಯವೆಸಗಲು ರಾಜಸ ಗುಣದ ಸಹಕಾರ ಪಡೆದುಕೊಳ್ಳಬೇಕು. ಇಂಥ ಮಿಶ್ರಣವಿಲ್ಲದಲ್ಲಿ ಪ್ರಗತಿ ನಾಸ್ತಿ. ಕ್ರೈಸ್ತನ ಕಾಲಾನಂತರ ಅವತರಿಸಿದ ಪರಾಶಕ್ತಿಯೆಂದರೆ ಪ್ರಸಕ್ತ ಕ್ರಾಂತಿಯೇ ಸರಿ. ನರಮೇಧದಿಂದ ನವಸಮಾಜ ನಿರ್ಮಾಣವಾಯಿತು. ವಿಕಾಸ ಕ್ರಿಯೆಗಳು ತ್ವರಿತಗತಿಯಲ್ಲಿ ಮುನ್ನಡೆದುವು. ಆದರೆ ಇನ್ನೂ ಅಪೂರ್ಣ ಎಂದು ಒಪ್ಪಬೇಕಾಗಿದೆ."

ಏನು ಪಾಟೀ ಸವಾಲು ಹಾಕುವುದೆಂದು ಬಿಷಪರಿಗೆ ತಿಳಿಯದೆ ಮುಜಗರವಾಯಿತು. ಆದರೂ

ಸೋಲೊಪ್ಪಲು ಸಿದ್ಧರಿರಲಿಲ್ಲ. ಚರಿತ್ರೆ ಬಲ್ಲವರಾದ್ದರಿಂದ ತಮ್ಮ ತರ್ಕದ ಗಾಳಕ್ಕೆ ಜಿ— ಎರೆಯಾಗಬಹುದೆಂದು ನಿರೀಕ್ಷಿಸಿ, "ಆದರೆ ಹದಿನೇಳನೆಯ ಲೂಯಿ ಮಾಡಿದ ಅಪರಾಧವೇನು?" ಎಂದು ಕೇಳಿದರು.

"ಪೂರ್ಣತೃಪ್ತಿಕರ ಜವಾಬು ಕೊಡಲಾರೆನೆಂದು ಒಪ್ಪುತ್ತೇನೆ. ಈ ಹಸುಳೆಯ 'ಅಪರಾಧ' ಈತ ಹದಿನೈದನೆಯ ಲೂಯಿಯ ಮೊಮ್ಮಗನಾಗಿದ್ದುದು ಮಾತ್ರ. ಹದಿನೇಳನೆಯ ಲೂಯಿಯ ಹತ್ಯೆ ಘಟಿಸಬಾರದಿತ್ತು. ಆದರೆ ಈ ಸನ್ನಿವೇಶಕ್ಕೆ ಸಂಬಂಧಿಸಿದ ಇತರ ಅಂಶಗಳನ್ನು ದಯಮಾಡಿ ಪರಾಂಬರಿಸಬೇಕು : ಕಾರ್ಟೋಟನ ತಪ್ಪಿಗಾಗಿ, ಈತನ ತಮ್ಮನನ್ನು ಇದೇ ಕಾರಣ ಒಡ್ಡಿ, ಬರ್ಜಿಗಳಿಂದ ಅಲೆ ಅಲೆಯಾಗಿ ಇರಿದು ಅತ್ಯಂತ ಯಾತನಾಮಯವಾಗಿ ಕೊಂದರಷ್ಟೆ—ರಾಜಪಕ್ಷದವರು ! ಈ ಎರಡು ದುಷ್ಕೃತ್ಯಗಳೂ ಸಮತೂಕದವು."

ಬಿಷಪರಿಗೆ ಸಹಿಸಲಾಗಲಿಲ್ಲ, "ನಿದರ್ಶನಗಳು ಸಮಂಜಸ ಉತ್ತರಗಳಲ್ಲ."

"ಉದಾಹರಣೆಗಳಿಂದಲೇ ನಿಮ್ಮನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿರುವೆನೆಂದು ಭಾವಿಸಬೇಡಿ. ಸ್ವಲ್ಪ ಕೇಳಿ. ಉಭಯ ಕುಕೃತ್ಯಗಳೂ ಸಮತೂಕದವು ಎಂದೆನಲ್ಲ. ಈಗ ನಿಮ್ಮ ಅನುಕಂಪ ಯಾರ ಕುರಿತು ಇದೆ ? ಒಂದೇ ಪಕ್ಷಕ್ಕೆ ಮಾತ್ರವೇಯೋ ? ಉಭಯ ಪಕ್ಷಗಳಿಗೂ ಇದೆಯೇ ? ನಾನು ಇಬ್ಬರ ಬಗೆಗೂ ಅನುಕಂಪ ತಳೆದವನಾಗಿದ್ದೇನೆ. ಆದರೆ ಇಂಥ ಕಾರ್ಯಗಳು ಅನಿವಾರ್ಯ. ಕ್ರಿಸ್ತನು ಲೋಕ ಕಲ್ಯಾಣವೆಸಗುವ ಮೊದಲು ಹಿಂಸೆ ಘಟಿಸಿದೆ. 'ಶಿಶುಗಳೇ ! ನನ್ನನ್ನು ಸೇರಲು ಕಷ್ಟ ಅನುಭವಿಸಬೇಕಾಗುವುದು' ಎಂದು ಆತ ಬೋಧಿಸಿದಾಗ ಅರಸ-ಬಡವ ಉಭಯರ ಶಿಶುಗಳನ್ನೂ ಸಂಬೋಧಿಸಿರುವನಷ್ಟೆ ?"

ಇಷ್ಟು ಹೊತ್ತಿಗೆ ಜಿ—ಯ ತ್ರಾಣ ಕುಂದುತ್ತ ಬಂದಿತ್ತು, ಸೊಂಟದಿಂದ ಕೆಳ ಪಾರ್ಶ್ವವೆಲ್ಲ ಕೋಡುತ್ತಿತ್ತು. ಇಂತಿದ್ದರೂ ತನ್ನ ಬದುಕಿನ ಮುಖ್ಯ ಧ್ಯೇಯವೇನೆಂದು ಅರ್ಥವಿಸಲು ಸಾಮರ್ಥ್ಯವಿದ್ದ ಈ ಹೊಸಬನಿಗೆ (ಬಿಷಪ್) ಅದನ್ನು ಅರುಹಲು ಉತ್ಸುಕನಾಗಿದ್ದ. ಹಾಗಾಗಿ ಜಿ— ಸ್ವಂತ ಮನಸ್ಸಂಕಲ್ಪದಿಂದ ನವ ಚೈತನ್ಯ ಪಡೆದು ಮಾತು ಮುಂದುವರಿಸಿದ, "ನಾವು ಅಳುವುದಿದ್ದರೆ ಎಲ್ಲ ನೊಂದವರ ಬಗೆಗೂ ಅಳೋಣ—ಅದರಲ್ಲಿಯೂ ಶತಮಾನಗಳಿಂದ ಆಳರಸರ ಪದಹತಿಗೆ ಸಿಕ್ಕಿ ನಲುಗಿದ ಪ್ರಜಾಕೋಟಿ ಬಗೆಗೆ. ನಮ್ಮ ಅಶ್ರುಗಳು ಇವರಿಗಾಗಿ ಹೆಚ್ಚು ಸುರಿಯಬೇಕು. ಸಂದ ಶತಮಾನಗಳಲ್ಲಿ ಜನರೊಂದು ಪ್ರಶ್ನೆಯನ್ನು ಲಾಲಿಸುತ್ತ ಬಂದವರು. ಅದಕ್ಕೆ ಉತ್ತರವಾಗಿಯೋ ಎಂಬಂತೆ '೯೩ ಬಂದಿತು. ಕೇವಲ ಬೌದ್ಧಿಕ ಉತ್ತರ ಅಲ್ಲ, ಪ್ರತ್ಯಕ್ಷ ಕಾರ್ಯ. ಇದೇನೋ ಕ್ರೂರತರವಾಗಿತ್ತು. ಆದರೂ ಇಲ್ಲಿ ಎರಡೂ ಪಕ್ಷಗಳ—ರಾಜ ಮತ್ತು ಪ್ರಜೆ—ಪಾತ್ರಗಳನ್ನು ತುಲನಿಸುವುದು ಉಚಿತವಲ್ಲವೇ ? ಸ್ವಲ್ಪ ಯೋಚಿಸಿ : ಪ್ರಜಾಪಕ್ಷದ ಕ್ಯಾರಿಯರ್ ದರೋಡೆಕಾರನಾದರೆ ಆ ಕಾಲದ ಅರಸನನ್ನು ನೀವು ಏನೆಂದು ಕರೆಯುವಿರಿ? ಅವನನ್ನು ದರೋಡೆಕಾರರ ಶಿಖಾಮಣಿ ಎಂದೆನ್ನದಿರಲು ಸಾಧ್ಯವೇ? ಅರಸರನ್ನೇ ಪರಿಶೀಲಿಸಿ : ಲೆಟೆಲಿಯರ್, ಲೂಯಿ, ಮಾರ್ಕ್ವಿಸ್ ಎಲ್ಲರೂ ನರಭಕ್ಷಕರೇ. ಕಿರಿಯ ರಾಣಿ ಎಂಟೋಯ್ನೆಟ್ ನಿರಪರಾಧಿ ಎಂದೇ ಒಪ್ಪೋಣ. ಅಂದ ಮಾತ್ರಕ್ಕೆ ಅರೆ ಬತ್ತಲೆಯಾಗಿ ಕಂಬಕ್ಕೆ ಬಿಗಿಯಲ್ಪಟ್ಟ ಒಬ್ಬ ತಾಯಿಯ ಎಳೆ ಕಂದನನ್ನು ಆಕೆಯ ಮೊಲೆ ಬಳಿ ಒಯ್ಯುತ್ತ ಆದರೆ ಮೊಲೆ ತೊಟ್ಟಿಗೆ ಶಿಶು ಬಾಯಿ ಇಕ್ಕದಂತೆ ಹಿಂದಕ್ಕೆ ಎಳೆಯುತ್ತ ನಿಷ್ಕರುಣವಾಗಿ ವಧಿಸಲ್ಪಟ್ಟ ಹ್ಯೂಜಿನಾಟ್ ಎಂಬ ಬಡ ಹೆಂಗುಸಿನ ಬಗ್ಗೆ ಕಂಬನಿ ಮಿಡಿಯುವವರಾರು? ಪ್ರಗತಿಯ ಕಾಠಿಣ್ಯವನ್ನು 'ಕ್ರಾಂತಿ' ಎಂದು ಕರೆಯುವುದು ವಾಡಿಕೆ. ಉದ್ದೇಶ ಸಿದ್ಧಿಸಿದಾಗ 'ಕ್ರಾಂತಿ'ಯೇ ಪ್ರಗತಿ ಎನ್ನಿಸಿಕೊಳ್ಳುವುದು. ಕೆಲವು ಕಠಿಣ ವಿಧಿಗಳು

ಪುನರ್ವಿಮರ್ಶೆಗೊಳಗಾದಾಗ ಪ್ರಗತಿ ಎಂದು ಪರಿಗಣಿಸಲ್ಪಡುವುದು ಪ್ರಪಂಚ ಧರ್ಮ." ಇಷ್ಟು ಮಾತಾಡಿ ಜಿ— ಕಣ್ಮುಚ್ಚಿ ಕುಳಿತ.

ಬಿಷಪ್ ಯೋಚನಾಮಗ್ನರಾದರು. ತುಸು ಕ್ಷಣವಾದ ಬಳಿಕ, ತಾವೊಬ್ಬ ಜಿಜ್ಞಾಸುವಿನಂತೆ, ಜಿ—ಯನ್ನು ಪ್ರಶ್ನಿಸಿದರು, "ದೇವರ ಅಸ್ತಿತ್ವ ನಂಬದವರು ಮಾನವ ಪ್ರಗತಿಯನ್ನು ಹೇಗೆ ತಾನೇ ಸಾಧಿಸಬಲ್ಲರು ?"

ಜಿ— ಕಣ್ತೆರೆದು ಬಿಷಪರನ್ನು ದಿಟ್ಟಿಸಿ ನೋಡಿದ. ತಾನು, ಅಥವಾ ವ್ಯಾಪಕವಾಗಿ ಕ್ರಾಂತಿಕಾರರು, ನಾಸ್ತಿಕರೆಂಬ ಧ್ವನಿ ಈತನನ್ನು ಕೆರಳಿಸಿತು. ಸಾಕಷ್ಟು ಆವೇಶಭರಿತನಾಗಿ, "ದೇವರು ಇಲ್ಲವೆನ್ನುವವ ನಾನಲ್ಲ. ನನ್ನ ಅಸ್ತಿತ್ವದ ಅರಿವು ನನಗಿರುತ್ತ ನನ್ನಂಥ ಸಹಸ್ರಾರು 'ನಾನು'ಗಳನ್ನು ಕಂಡಿರುವ ನಾನು, ಈ ಎಲ್ಲ 'ನಾನು'ಗಳನ್ನೂ ಒಳಗೊಂಡಿರುವ ಅನಂತವೊಂದು—ಶಾಶ್ವತನಾದ 'ನಾನು' ಅಥವಾ ದೇವರು—ಇದೆಯೆಂದು ಒಪ್ಪದಿರುವುದು ಸಾಧ್ಯವೇ?"

ಜಿ— ತನ್ನ ಅಂತ್ಯಕ್ಷಣ ಸಮೀಪಿಸುತ್ತಿದ್ದಾನೆಂದು ಬಿಷಪರಿಗೆ ಸ್ಪಷ್ಟವಾಯಿತು. ಆತನಿಗೆ ಧರ್ಮಸಂಸ್ಕಾರಬೇಕಾದೀತೆಂದು ಭಾವಿಸಿ—ಅಷ್ಟಾದರೂ ಉಪಕಾರ ತಾನವನಿಗೆ ಸಲ್ಲಿಸಬೇಡವೇ? —ಹೇಳಿದರು, "ನಮ್ಮ ಭೇಟಿಯ ಪ್ರಯೋಜನ ಪಡೆಯುವ ಇಚ್ಛೆ ನಿನಗಿದೆಯೇ?"

ಇದಕ್ಕೆ ಜಿ— ಅತಿ ಗಂಭೀರವಾಗಿ ಉತ್ತರ ಕೊಡಲು ತೊಡಗಿದ. ಆಗ ಆತನ ಪ್ರಾಣೋತ್ಕ್ರಮಣ ಮುಹೂರ್ತದ ಸನ್ನಿಹಿತತೆಯ ಕಾರಣದಿಂದಲೋ ಪರಿಶುದ್ಧ ಆತ್ಮದ ಪ್ರಖರ ತೇಜಸ್ಸಿನಿಂದಲೋ ಆತ ಒಬ್ಬ ಅಲೌಕಿಕ ವ್ಯಕ್ತಿಯಂತೆ ಪ್ರಭಾನ್ವಿತನಾಗಿ ಬೆಳಗುತ್ತಿದ್ದ. "ಬಿಷಪರೇ ಆಲಿಸಿ! ನನ್ನ ಆತ್ಮ ಸಂಸ್ಕಾರ ಕುರಿತಲ್ಲವೇ ನಿಮ್ಮ ಪ್ರಶ್ನೆ ? ದಯಮಾಡಿ ಆಲಿಸಿ ನನ್ನ ಜೀವನ ಚರಿತ್ರೆ. ಧ್ಯಾನ, ಧಾರಣ, ಅಧ್ಯಯನಗಳಲ್ಲಿ ನಾನು ಜೀವನ ಸವೆದಿದ್ದೇನೆ. ಅರುವತ್ತನೇ ವಯಸ್ಸಿನಲ್ಲಿ ದೇಶ ನನಗೆ ನನ್ನ ಪಾಲಿನ ಕರ್ತವ್ಯ ನಿರ್ವಹಿಸಬೇಕೆಂದು ಕರೆ ನೀಡಿತು. ನಾನು ಆ ಕರ್ತವ್ಯ ವಹಿಸಿಕೊಂಡೆ. ನನ್ನ ಕರ್ತವ್ಯವನ್ನು ಹೇಗೆ ನಿರ್ವಹಿಸಿದೆನೆಂದೂ ಕೇಳಿ ! ದೇಶಹಿತ ಕಾರ್ಯಗಳಲ್ಲಿ ಅತಿರೇಕಗಳನ್ನು ಎದುರಿಸಿದೆ, ಕ್ರೌರ್ಯ ನಿಲ್ಲಿಸಿದೆ; ಹಕ್ಕುಬಾಧ್ಯತೆಗಳ ಚರ್ಚೆಗಳಲ್ಲಿ ನ್ಯಾಯವಾದವನ್ನು ಸಮರ್ಥಿಸಿದೆ, ತಪ್ಪಾದವನ್ನು ದಮನಿಸಿದೆ; ಪರರು ದೇಶವನ್ನಾಕ್ರಮಿಸಿದಾಗ ನನ್ನ ಎದೆಗಾರಿಕೆಯಿಂದ ಹೋರಾಡಿದೆ. ನಾನೆಂದೂ ಹಣಗಾರನಾಗಲಿಲ್ಲ—ಬೇಕೆಂದೇ ಬಡವನಾಗಿಯೇ, ಉಳಿದೆ. ನಮ್ಮ ಸರಕಾರದ ಮುಖ್ಯಾಧಿಕಾರಿಗಳಲ್ಲಿ ನಾನೂ ಒಬ್ಬನಾಗಿದ್ದು, ಖಜಾನೆಗಳಲ್ಲಿ ಚಿನ್ನ, ಬೆಳ್ಳಿ, ಐಶ್ವರ್ಯಗಳು ತುಂಬಿ ಅವುಗಳ ಭಾರದಿಂದಲೇ ಕಟ್ಟಡಗಳು ಕುಸಿಯುವ ಸ್ಥಿತಿ ಬಂದಾಗಲೂ ನಾನು ಹೊಟೇಲುಗಳಲ್ಲಿ ಬಡತನದ ತಿಂಡಿತಿನಸು ತಿಂದು ಬದುಕಿದೆ. ದೀನ ದರಿದ್ರರಿಗೆ ಸಹಾಯವಿತ್ತೆ; ದುಃಖಿತರನ್ನು ಶಾಂತಗೊಳಿಸಲು ಅನುವಾಗುತ್ತಿದ್ದೆ; ಅರಮನೆ ಇಗರ್ಜಿಗಳ ಉಣ್ಣೆ-ರೇಷ್ಮೆಗಳನ್ನು ನಾನು ಸೆಳೆದು ತೆಗೆದದ್ದು ಹೌದಾದರೂ ಫ್ರಾನ್ಸಿನ ಗಾಯಗಳಿಗೆ ಸುತ್ತಲೋಸ್ಕರ ಹಾಗೆ ಮಾಡಿದೆ. ಕ್ರೂರತರದ ಮಾರ್ಪಾಟುಗಳನ್ನು ನನ್ನ ಎದೆಕೊಟ್ಟು ಎದುರಿಸಿದೆ; ನ್ಯಾಯವಿದ್ದಲ್ಲಿ ನನ್ನ ಶತ್ರುಪಕ್ಷದವರನ್ನೂ ಸಂರಕ್ಷಿಸಿರುತ್ತೇನೆ. ಹೀಗೆ ಸಹಾಯ ಹೊಂದಿದವರಲ್ಲಿ ಧರ್ಮಗುರುಗಳೂ ಇದ್ದಾರೆ, ಧರ್ಮ ಸಂಸ್ಥೆಗಳೂ ಇವೆ. ನನ್ನ ಶಕ್ತಿಗೆ ತಕ್ಕಷ್ಟು ಸತ್ಕಾರ್ಯ ಮಾಡಿರುತ್ತೇನೆ. ನನ್ನ ಧ್ಯಾನ, ಧಾರಣ, ಅಧ್ಯಯನಗಳೆಲ್ಲ ಈ ತೆರನಾಗಿದ್ದುವು. ನನ್ನ ಪಾಲಿನ ಕರ್ತವ್ಯವನ್ನು ನಾನು ಮಾಡಿ ಮುಗಿಸಿದನಂತರ ಜನರಿಗೆ ಬೇಡವಾದೆ. ಅವರು ನನ್ನನ್ನು ತಮ್ಮ ನಡುವಿನಿಂದ ಓಡಿಸಿದರು—ಓಡಿದವನನ್ನು ಹಿಂಬಾಲಿಸಿ ಬಂದು ಬೈದರು, ಹೆದರಿಸಿದರು, ಬಹಿಷ್ಕರಿಸಿದರು, ತುಚ್ಛೀಕರಿಸಿದರು, ಉಗುಳಿದರು, ಶಪಿಸಿದರು, ದೇಶಭ್ರಷ್ಟನೆಂದು ರಾಜ ರಕ್ಷಣೆ

ಯನ್ನು ತಡೆಹಿಡಿದು ನನ್ನನ್ನು ಹಿಂಸಿಸಲು ಎಲ್ಲರಿಗೂ ಹಕ್ಕುಕೊಟ್ಟರು. ಕೊನೆಕೊನೆಗೆ ಜನರಿಗೆ ಆ ಹಕ್ಕು ಉಂಟೆಂದು ನಾನೂ ನಂಬುವಂತೆ ನನ್ನನ್ನು ನಡೆಸಿಕೊಂಡು ಬಂದರು. ನನ್ನ ದರ್ಶನವೇ ಅನಿಷ್ಟವೆಂಬ ಭಾವನೆ ಜನರಲ್ಲಿದ್ದಾಗಲೇ ನಾನು ಎಲ್ಲವನ್ನೂ ಬುದ್ಧಿಪೂರ್ವಕ ಒಪ್ಪಿ, ಒಬ್ಬಂಟಿಗನಾಗಿ ಬದುಕಿ ಈಗ ಎಂಬತ್ತಾರು ವರ್ಷ ಪ್ರಾಯವಾಗಿದೆ. ಮೃತ್ಯುವನ್ನು ಈ ಕ್ಷಣದಲ್ಲೇ ಕಾಣುವವನಿದ್ದೇನೆ. ನನ್ನಂಥವನಲ್ಲಿಗೆ ಬಂದಿರುವ **ನಿಮಗೆ** ನನ್ನಿಂದೇನಾಗಬೇಕೆಂದು ಬೇಗ ತಿಳಿಸಿ," ಅಂದ ಜಿ—.

ಬಿಷಪ್ ಮೊಣಕಾಲೂರಿ ನಮಸ್ಕರಿಸುತ್ತ, "ತಮ್ಮ ಆಶೀರ್ವಾದ ಬೇಡುತ್ತೇನೆ," ಅಂದರು. ಅವರು ನಮಸ್ಕಾರ ಮಾಡಿ ಎದ್ದು ನೋಡುವಾಗ ಜಿ—ಯ ಮುಖ ಪ್ರಶಾಂತವಾಗಿತ್ತು. ಅವನು ಆಗ ತಾನೆ ಮೃತನಾಗಿದ್ದ.

ಬಿಷಪ್ ಊರಿಗೆ ತೆರಳಿದ ರಾತ್ರಿ ಇಡೀ ಧ್ಯಾನಾಸಕ್ತರಾಗಿಯೇ ಇದ್ದರು. ಈ ಘಟನಾನಂತರ ಬಿಷಪರು ದೀನ ದರಿದ್ರರ, ಮಕ್ಕಳ ಬಗ್ಗೆ ಮೊದಲಿಗಿಂತಲೂ ಹೆಚ್ಚು ಕರುಣೆಯುಳ್ಳವರಾಗಿದ್ದರು.

೧೦. ಬಿಷಪರ ಏಕಾಂತತೆ

ಬಿಷಪರ ಸ್ಥಾನ ಬಲು ದೊಡ್ಡದು. ಅವರ ಶಿಫಾರಸಾಗಲೀ ಪ್ರಶಂಸೆಯಾಗಲೀ ದೊರೆಯುವುದೆಂದರೆ ಅದೊಂದು ದೊಡ್ಡ ಗೌರವವೇ ಆಗಿತ್ತು. ಮಿ. ಮಿರಿಯಲ್ ಒಬ್ಬನನ್ನು ಒಂದು ಪದವಿಗೆ ಶಿಫಾರಸು ಮಾಡಿ ಕಳುಹಿಸಿದ್ದಾದರೆ, ಪುನಃ ಯಾವ ವಿಚಾರಣೆಯೂ ಇಲ್ಲದೆ ಅವನಿಗೆ ಅದು ಸಿಗುತ್ತಿತ್ತು. ಆದರೆ ಯುವಕರು ಅವರನ್ನು ಹೆಚ್ಚಾಗಿ ಆಶ್ರಯಿಸುತ್ತಿರಲಿಲ್ಲ. ಮಿರಿಯಲರು ಬಡತನವನ್ನೂ ಅನಾಡಂಬರವನ್ನೂ ಮೆಚ್ಚಿದ್ದರು. ಅವರ ಸಂಪರ್ಕಮಾತ್ರದಿಂದಲೇ ಬಡತನ ಮತ್ತು ಅನಾಮಧೇಯತ್ವ ಬರಬಹುದೆಂದು ಹೆದರುವವರೂ ಇದ್ದರು. ಈ ಕಾರಣದಿಂದ ನಮ್ಮ ಬಿಷಪರ ಕೈಕೆಳಗೆ ವೃದ್ಧರೇ ಹೆಚ್ಚಾಗಿ ಇರುತ್ತಿದ್ದರು. ಆ ವೃದ್ಧರು ಇವರ ಮಾರ್ಗಾನುಯಾಯಿಗಳಾಗಿದ್ದರು. ಆದರೂ ಅವರೆಲ್ಲರೂ ಬಿಷಪರನ್ನು ಹಿಂಬಾಲಿಸಲು ಪ್ರಯತ್ನಿಸಿ, ತಮ್ಮ ಶಕ್ತಿ ಸಾಕಾಗದೆ, ಅರ್ಧ ಪಥದಲ್ಲೇ ಮುಗ್ಗರಿಸಿ ಕುಳಿತಿದ್ದರು.

ಕೆಲವೊಮ್ಮೆ ಉದ್ದೇಶಗಳ ಸಿದ್ಧಿ ಪ್ರಯುಕ್ತಪ್ರಯತ್ನಕ್ಕೂ ಯೋಗ್ಯತೆಗೂ ಮೀರಿ ಆಗುವುದಿದೆ. ಸಿದ್ಧಿಯೇ ಯೋಗ್ಯತೆಯ—ಅಥವಾ, ಸಾಧನೆಗಳ—ಅಳತೆಯ ಮಾನಕವೆಂದು ಜನ ವಾಡಿಕೆಯಾಗಿ ಗ್ರಹಿಸಿಬಿಡುತ್ತಾರೆ. ಆದ್ದರಿಂದಲೇ ಯೋಗ್ಯತೆಯಿದ್ದವನೆಲ್ಲ ಐಶ್ವರ್ಯವಂತನಾಗುವನೆಂದೂ ಐಶ್ವರ್ಯವಂತರೆಲ್ಲ ಯೋಗ್ಯತೆ ಇದ್ದವರೆಂದೂ ಜನ ನಂಬುವುದುಂಟು. ಸಿದ್ಧಿಯ ಥಳಕು ಯೋಗ್ಯತೆಯ ನಿಜತ್ವವನ್ನು ಅಡಗಿಸಿಬಿಡುತ್ತದೆ. ಈ ಕಾರಣದಿಂದಲೇ ಲಾಟರಿಗಳಲ್ಲಿ ಹಣ ಪಡೆದು ಶ್ರೀಮಂತನಾದವ ತನ್ನ ಪರಿಶ್ರಮಗಳ ಫಲವಾಗಿ ಶ್ರೀಮಂತಿಕೆ ಪಡೆದವನಷ್ಟೇ ಗಣ್ಯನಾಗಿ ಮೆರೆಯುವನು. ವೈದ್ಯವೃತ್ತಿಯವ ಮೆಟ್ಟಿನ ವ್ಯಾಪಾರದಿಂದ ಮಾತ್ರ ಹಣಗಳಿಸಿದಾಗಲೂ ಅವನೊಬ್ಬ ಪ್ರಖ್ಯಾತ ವೈದ್ಯನಾಗಿಬಿಡುವುದೂ ಇದೆ—ಅರ್ಥಾತ್, ಬಣ್ಣದಿಂದಲೇ ಬಂಗಾರವೆಂದು ಗಣಿಸಲ್ಪಡುವುದು ವಾಡಿಕೆ.

ಮಿ. ಮಿರಿಯಲರು ಸದಾ ದೈವಚಿಂತನೆಯಲ್ಲಿ ಮಗ್ನರಾಗಿರುತ್ತಿದ್ದರು; ಅವರು ಈ ಲೋಕದ ಬಣ್ಣ ಬೆರಗುಗಳಿಗೆ ಮರುಳಾಗುತ್ತಿರಲಿಲ್ಲ. ಅವರು ಏಕಾಕಿಯಾಗಿ, ಏಕಾಂಗಿಯಾಗಿ, ಏಕಾಂತದಲ್ಲೇ ತನ್ನ ಕರ್ತವ್ಯಗಳನ್ನು ಮಾಡುತ್ತಿದ್ದರು.

೧೧. ಬಿಷಪರ ಮತ

ಬಿಷಪರ 'ಮತ' ಎಂಬ ಪದವನ್ನು ಅವರನ್ನೇ ಕುರಿತು ಉಪಯೋಗಿಸುವಾಗ ಅವರು ಕ್ರೈಸ್ತ ಧರ್ಮೀಯರೋ ಅಲ್ಲವೋ ಎಂಬ ವಾಡಿಕೆಯ ಕ್ರಮದಿಂದ ಪ್ರಯೋಗಿಸುತ್ತಿಲ್ಲ. ಅಂಥ ಮಹಾತ್ಮರ ಅಂತಃಕರಣವನ್ನು ಶೋಧನೆ ಮಾಡುವ ಹವ್ಯಾಸ ನಮಗಿಲ್ಲ. ಅವರ ಪರಿಪೂರ್ಣತೆ ನಮ್ಮನ್ನು ನಮ್ಮ ವಾಙ್ಮನಗಳಲ್ಲಿ ಸ್ತಂಭೀಭೂತರನ್ನಾಗಿ ಮಾಡಿ, ನಮ್ಮ ಸಾಷ್ಟಾಂಗ ಪ್ರಣಾಮಗಳನ್ನು ಸೆಳೆಯುತ್ತದೆ. ಅವರ ಕುರಿತು ಸಂಶಯ ಪರಿಹಾರಕ್ಕಾಗಿ ಶೋಧಿಸುವುದು ಅಸಾಧ್ಯ. ಅವರ ಬಗ್ಗೆ ಸಂಪೂರ್ಣ ನಂಬಿಕೆಯಿಂದಲೇ ಹೇಳುವುದಾದರೆ, ಮನುಷ್ಯನೊಬ್ಬನಲ್ಲಿ ಈ ಲೋಕದ ಸಕಲ ಸುಂದರ ಗುಣಗಳ ಕೂಡುವಿಕೆ ಸಾಧ್ಯವಿದೆಯೆಂದು ಸಮರ್ಥಿಸಿ ಹೇಳಿ, ಅಂಥ ಕೂಡುವಿಕೆಯಿರುವ ಮಹಾವ್ಯಕ್ತಿಯೇ ಅವರೆಂದು ಧೈರ್ಯದಿಂದ ತೋರಿಸಬಲ್ಲೆವು. ಅವರ ಪರಿಪೂರ್ಣವಾದ ಪರಿಚಯ ಯಾವ ಪರಿಪೂರ್ಣತೆಯಲ್ಲಿ ಅವರ ಮನಸ್ಸು ಸಮಾವೇಶ ಹೊಂದಿ ಲಯವಾಗುತ್ತದೋ ಆ ಪರಿಪೂರ್ಣತೆಗೆ ಮಾತ್ರ ಸಾಧ್ಯ. ಲೌಕಿಕ ಕರ್ಮಗಳನ್ನು ಮಾಡುವಾಗಲೂ ಪಾರಲೌಕಿಕ ವಿಷಯಗಳ ಪ್ರತಿಪಾದನೆಯಲ್ಲೂ ಅವರು ಎಳ್ಳಷ್ಟೂ ಆತ್ಮವಂಚನೆಯಿಂದ ವರ್ತಿಸುತ್ತಿರಲಿಲ್ಲ— ಬಂಗಾರಕ್ಕೆ ಜಂಗು ಹಿಡಿಯದಷ್ಟೆ !

ದೈವ ಸೃಷ್ಟಿಯ ಚರಾಚರಜೀವಿಗಳ ಮೇಲಿನ ಅವರ ಪ್ರೇಮ ಅವರ ದೈವಭಕ್ತಿಗಿಂತಲೂ ಹೆಚ್ಚಾಗಿಯೇ ಇತ್ತು. ಒಮ್ಮೆ ಒಂದು ಭಯಂಕರ ವಿಷಜಂತು ಅವರ ಎದುರು ಬರುತ್ತಿದ್ದಾಗ ಅದನ್ನು ನೋಡಿ ಅವರು ಹೆದರುವ ಬದಲು, "ತಾಮಸ ಜಂತುವೇ ನಿನ್ನ ಕ್ರೌರ್ಯ ನಿನ್ನ ತಪ್ಪಲ್ಲ," ಎಂದು ಆತ್ಮಗತವಾಗಿ ಅಂದಿದ್ದರು. ಒಮ್ಮೆ ಹೆಜ್ಜೆಯಿಡುವ ಕ್ಷಣದಲ್ಲಿ ಕಂಡ ಇರುವೆಯನ್ನು ರಕ್ಷಿಸಲು ಪ್ರಯತ್ನಿಸಿ ಕಾಲನ್ನೇ ಉಳುಕಿಸಿಕೊಂಡಿದ್ದರು.

ಅವರು ದೇಹಶ್ರಮವನ್ನು ತಮ್ಮ ಕರ್ತವ್ಯವೆಂದೇ ಕೊಟ್ಟುಕೊಳ್ಳುತ್ತಿದ್ದರು. ಅನೇಕ ವೇಳೆ ಲೌಕಿಕ ಕರ್ತವ್ಯಗಳನ್ನು ಮಾಡಿದನಂತರ ಅವರು ನಿದ್ರೆ ತೊರೆದು ಧ್ಯಾನಧಾರಣಗಳಲ್ಲಿ ಮಗ್ನರಾಗಿರುತ್ತಿದ್ದರು. ಪ್ರಾಪಂಚಿಕರು ನಿದ್ರೆಯಲ್ಲಿ ಮಗ್ನರಾಗಿದ್ದಾಗ ಆಕಾಶದಲ್ಲಿ ನಕ್ಷತ್ರ ರಾಶಿಗಳು ದೈವಲೀಲೆಯನ್ನು ತಮ್ಮ ರತ್ನಮಣಿ ದೀಪಗಳಿಂದ ಮೆರೆಸುತ್ತಿದ್ದಾಗ, ನಿಶಾಶಾಂತಿಯಲ್ಲಿ ಹೂಗಳು ತಮ್ಮ ಸೌರಭವನ್ನು ಬೀರಿ ಮರ್ತ್ಯಸ್ವರ್ಗಗಳ ಸಂಧಾನವನ್ನು ಬೆಳೆಸಿ ಬರುತ್ತಿದ್ದಾಗ, ನಮ್ಮ ಬಿಷಪರು ಪಾರಲೌಕಿಕ ವಿಷಯಗಳಲ್ಲಿ ಚಿಂತನಶೀಲರಾಗಿಯೂ ದೈವಲೀಲೆಯ ಸೊಬಗಿನ ಆನಂದದಲ್ಲಿ ತಲ್ಲೀನರಾಗಿಯೂ ಯಾಂತ್ರಿಕವಾಗಿ ಅವರ ಚಿಕ್ಕ ಹೂದೋಟದಲ್ಲಿ ಗಂಟೆಗಟ್ಟಲೆ ತಿರುಗಾಡುತ್ತಿದ್ದರು. ಅವರು ಅನಂತವನ್ನೂ ಅನಂತ ಲೀಲೆಯನ್ನೂ ಅರ್ಥಾತ್ ಅನಂತ ಮಹಿಮನನ್ನೂ ಕಾಣಬೇಕೆಂದು ಸತತವೂ ಪ್ರಯತ್ನಿಸಿ ತಮ್ಮ ಉದ್ದೇಶ ಎಷ್ಟು ಸಿದ್ಧಿಯಾಯಿತೋ ಅಷ್ಟಕ್ಕೇನೇ ತೃಪ್ತಿಪಟ್ಟುಕೊಂಡಿರುತ್ತಿದ್ದರು. ಅವರು ದೈವದ ಒಲುಮೆಯನ್ನು ಪಡೆಯಲು ಪ್ರಾರ್ಥನೆ, ಜಪಗಳಿಂದ ಪ್ರಯತ್ನಿಸುತ್ತಿದ್ದರೇ ಹೊರತು ರಾಜಸ ಪ್ರಯತ್ನ ಅಥವಾ ಹಠಸಾಧನೆಗಳಿಂದ ಅಲ್ಲ.

ದೈವಲೀಲೆಯನ್ನು ತಿಳಿಯಲು ಅವರಿಗೆ ವಿಶಾಲ ಪ್ರದೇಶವಾಗಲೀ ಪರ್ವತ, ನದಿ, ಸರೋವರಗಳಾಗಲೀ ಅಗತ್ಯವಿರಲಿಲ್ಲ. ತಮ್ಮ ಉದರಪೋಷಣೆಗೆ ಸಹಾಯಕವಾಗಿದ್ದ ಅವರ ಚಿಕ್ಕ ತೋಟದ ಸ್ಥಳ ಲೋಕವನ್ನೇ ತೋರಿಸುವುದು ಎಂದು ಅವರ ನಂಬಿಕೆ. ಹಗಲಿನಲ್ಲಿ ತಮ್ಮ ತೋಟದಲ್ಲಿ ಕೆಲಸಮಾಡಿ, ರಾತ್ರಿಯಲ್ಲಿ ಧ್ಯಾನದಿಂದ ಮೈಮರೆಯುವ ಅವರ ಆತ್ಮತೃಪ್ತಿ ಯಾವ ವಿಧದ್ದೆಂದು

ವರ್ಣಿಸುವುದು ಅಸಾಧ್ಯ. ಅವರ ಆತ್ಮವಿವೇಚನೆಗೆ ಸಹಾಯಕವಾದ ಅನಂತಾಕಾಶವೇ ಅವರದ್ದಾಗಿ ದೊರಕಿದ್ದಾಗ ಅವರಿಗೆ ಯಾವುದರಲ್ಲೂ ಅಸಂತುಷ್ಟಿಯಿರಲಿಲ್ಲ. ತಮ್ಮ ಕಾಲಬುಡದ ಕೋಮಲ ಪುಷ್ಪದಿಂದ ಪ್ರಾರಂಭವಾಗಿ ಆಕಾಶದಲ್ಲಿಯ ಸಹಸ್ರಾರು ನಕ್ಷತ್ರಗಳನ್ನೇ ಒದಗಿಸಿರುವ ಅನಂತ ಮಹಿಮನ ಅಸ್ತಿತ್ವದ ನಂಬಿಕೆಯೇ ಅವರ ಮತವಾಗಿತ್ತು.

೧೨. ಅವರು ಎಂಥ ಜಿಜ್ಞಾಸು ?

ಬಿಷಪರ ಜ್ಞಾನ ತರ್ಕಜನ್ಯವಾದದ್ದಾಗಿರಲಿಲ್ಲ, ಅನುಕಂಪಜನ್ಯವಾದದ್ದಾಗಿತ್ತು. ಅವರ ಹೃದಯದ ಹೊಂಬೆಳಕು ಅನುಭವಗಳ ಸಹಾಯದಿಂದ ಜ್ಞಾನಜ್ಯೋತಿಯಾಗಿ ಪ್ರಭೆಯಾಗಿ ಪ್ರಕಾಶಿಸುತ್ತಿತ್ತು. ತಮ್ಮ ಧರ್ಮದ ವಿಧಿ ಹೀಗೆಂಬ ನಿರ್ದಿಷ್ಟ ಮಾರ್ಗವನ್ನು ಅವರು ಹೇಳ ಲೊಲ್ಲರು. ಅದನ್ನು ಕಾರ್ಯಗಳಿಂದ ನಿರೂಪಿಸುತ್ತಿದ್ದರು ಮಾತ್ರ. ತರ್ಕಗಳಿಗೆ ಎಲ್ಲೆಯಿಲ್ಲ, ಮತ್ತು ವಿಷಯಗಳಿಗೆ ಕೊರತೆಯಿಲ್ಲ. ತರ್ಕಗಳು ಪಾಂಚಭೌತಿಕ ಬೀಜಗಳಂತೆ ಒಂದರಿಂದ ಸಹಸ್ರಾರು ಬೆಳೆದು ಜಿಜ್ಞಾಸುವಿನಲ್ಲಿ ಶ್ರದ್ಧೆ ಉತ್ಪನ್ನಮಾಡುವ ಬದಲು ಭಯಭ್ರಮೆಗಳನ್ನು ಉಂಟುಮಾಡಬಹುದು ಎಂದು ಅವರು ಹೆದರುತ್ತಿದ್ದರು. ಜ್ಞಾನದಿಂದಲೇ ಪರಮಾರ್ಥವನ್ನು ಸಿದ್ಧಿಸಿರುವ ಅಗಾಧ ಮಹಿಮರಿದ್ದಾರೆಂದು ಅವರು ಒಪ್ಪುತ್ತಿದ್ದರು. ಆದರೆ, ಅಂಥವರಿದ್ದಾರೆಂಬ ನಂಬಿಕೆಯೇ ತನ್ನ ಸಾಧನೆಗಳಿಗೆ ಸಾಕೆಂದು ಅವರು ತೃಪ್ತಿಪಟ್ಟುಕೊಂಡಿದ್ದರು. ಈ ತೃಪ್ತಿಯಿಂದಲೇ ಅವರು ಅವರ ಧರ್ಮಗುರುಗಳ ಕಾರ್ಯವನ್ನೂ ತಮ್ಮ ಆತ್ಮಪೂರ್ಣತೆಗೆ ಬೇಕಾದ ಪ್ರಯತ್ನ ಗಳನ್ನೂ ಮಾಡುತ್ತಿದ್ದರು. ಮೂಲವಸ್ತು ತಮಗೆ ಲಭಿಸದಿದ್ದರೂ ಅದರ ನೆರಳೇ ತಮ್ಮ ಉದ್ದೇಶ ಗಳ ನೆರವೇರಿಕೆಗೆ ಸಾಕೆಂದು ಅವರ ಅಭಿಪ್ರಾಯವಿತ್ತು. 'ದಾಸೋಹಂ' ಮಾತ್ರವಾಗುವುದೂ ಮಹತ್ತ್ವದ ವಿಷಯವೆಂಬ ನಮ್ರತೆ ಅವರದಿತ್ತು.

ಪ್ರಪಂಚವೇ ತಮೋಮಯವೆಂದೂ ಅದರ ಪರಿಹಾರ ಕರುಣೆ ಮತ್ತು ದೈವಭಕ್ತಿಗಳಿಂದ ಆಗಬೇಕೆಂದೂ ಚರಾಚರ ಜೀವಿಗಳ ಮೇಲಿನ ಪ್ರೇಮದಿಂದಲೇ ಬದುಕು ಸಾರ್ಥಕವಾಗುವು ದೆಂದೂ ಅವರು ತಿಳಿದಿದ್ದರು.

ನಮ್ಮ ಬಿಷಪರಿಗೆ ಪ್ರಪಂಚವೇ ದುಃಖದ ಖನಿಯಾಗಿತ್ತು. ಈ ಖನಿಯಿಂದ ಪರಸ್ಪರ ಪ್ರೇಮವೆಂಬುದನ್ನು ಉತ್ಪನ್ನ ಮಾಡಲು ಅವರು ಎಡೆಬಿಡದೆ ಪರಿಶ್ರಮಿಸುತ್ತಿದ್ದರು. ಆಧ್ಯಾತ್ಮಿಕ ಸಾಧನೆಗಳೆಲ್ಲ ಆಸ್ತಿಕರನ್ನು ದೇವರೆಡೆಗೂ ನಾಸ್ತಿಕರನ್ನು ಶೂನ್ಯಕ್ಕೂ ಸಾಗಿಸುವುವೆಂಬ ಅಭಿಪ್ರಾಯ ಅವರಿಗಿತ್ತು. ಆದ್ದರಿಂದ ಅವರು ಜ್ಞಾನಕ್ಕಿಂತಲೂ ಭಕ್ತಿಯೇ ಪ್ರಧಾನವೆಂದು ಗ್ರಹಿಸುತ್ತಿದ್ದರು. ಆಧ್ಯಾತ್ಮಿಕ ಸಾಧನೆಗಳಂಥ ಭವ್ಯಕಮಾನುಗಳನ್ನು ತಮ್ಮ ಕಡೆಯಿಂದ ಕಟ್ಟಲು ಪ್ರಾರಂಭಿಸಿ, ದೇವರೆಡೆಗೆ ತಲಪುವ ಮೊದಲೇ ಮುರಿಯಬಹುದಾದ ಪರಿಸ್ಥಿತಿಗಿಂತ ಉತ್ತಮವಾದುದು ದೇವರಲ್ಲಿಯ ಅನನ್ಯವಾದ ನಂಬಿಕೆ—ಅರ್ಥಾತ್ ಭಕ್ತಿಮಾರ್ಗ—ಸಮಾಜಕಲ್ಯಾಣಕ್ಕೆ ಸಾಕೆಂದು ಅವರು ತಿಳಿದುಕೊಂಡಿದ್ದರು.

ನೆರಳನ್ನು ಕಂಡದ್ದರಿಂದ ನೆರಳಿನ ಮೂಲವಿರಬೇಕೆಂದು ತಿಳಿಯಬಹುದಾದಂತೆ ವ್ಯಕ್ತಪ್ರಪಂಚ ವನ್ನು ನ್ಯಾಯವಾಗಿ ತಿಳಿಯುವ ಪ್ರಯತ್ನದಿಂದಲೇ ದೇವರನ್ನು ತಿಳಿಯುವಂತಾಗುತ್ತದೆಂದೂ ಈ ಪ್ರಪಂಚಸಂಬಂಧವಾದವುಗಳಲ್ಲಿ ಶ್ರದ್ಧೆವಹಿಸಿ, ಧರ್ಮಪರಾಯಣರಾಗಿದ್ದರೆ ಸಾಕೆಂದೂ ಅವರು ಅಭಿಪ್ರಾಯಪಡುತ್ತಿದ್ದರು. ಇದಕ್ಕಿಂತ ಮುಂದೆ ಸಾಗಲು ಅವರು ಪ್ರಯತ್ನಿಸುತ್ತಿರಲಿಲ್ಲ.

ಎರಡನೆಯ ಸಂಪುಟ

೧. ದಿನವಿಡೀ ಚಾರಣ

೧೮೧೫ರ ಅಕ್ಟೋಬರ್ ತಿಂಗಳ ಪ್ರಾರಂಭ ಭಾಗದ ಒಂದು ಸಂಜೆ—ಸೂರ್ಯಾಸ್ತಮಾನಕ್ಕೆ ಇನ್ನೂ ಸಾಧಾರಣ ಒಂದು ಗಂಟೆ ಸಮಯವಿರುವಾಗ—ಪಾದಚಾರಿಯಾಗಿ ಒಬ್ಬಾತ ಡಿ—ಪಟ್ಟಣ ಪ್ರವೇಶಿಸಿದ. ಅವನ ಮುಖ ಬಾಡಿತ್ತು; ಬಲು ಶ್ರಮಪಟ್ಟಿದ್ದವನೆಂದು ನಡಿಗೆಯಿಂದ ತಿಳಿಯುತ್ತಿತ್ತು; ಅವನು ಸ್ವಲ್ಪ ಕುಳ್ಳನಾಗಿಯೂ ದೃಢಕಾಯನಾಗಿಯೂ ಇದ್ದ. ಒಂದಾವೃತ್ತಿ ಬೋಳಿಸಲ್ಪಟ್ಟು ಈಗ ಸ್ವಲ್ಪ ಮಾತ್ರ ಬೆಳೆದಿದ್ದ ತಲೆ ಕೂದಲು ಬ್ರಶ್ಶಿನಂತೆ ಟೊಪ್ಪಿಯ ಕರೆಯಲ್ಲಿ ಕೆದರಿ ನಿಂತಿತ್ತು; ಗಡ್ಡ ಮೀಸೆಗಳು ದಟ್ಟವಾಗಿ ಬೆಳೆದಿದ್ದುವು. ಅರಸಿನ ಬಣ್ಣದ ಹರಕು ಶರಟು, ಹರಕು ಇಜಾರು ತೊಟ್ಟು, ತಲೆಯ ಮೇಲೊಂದು ಚಂದವಿಲ್ಲದ ಮತ್ತು ಗೋಪುರದಂತೆ ಎದ್ದು ನಿಂತಿದ್ದ, ಟೊಪ್ಪಿ ಧರಿಸಿದ್ದ.

ತುಂಬಿದ್ದ ಕೈಚೀಲವನ್ನು ಬೆನ್ನಿನ ಮೇಲೆ ಹೊತ್ತಿದ್ದ, ಬಲಗೈಯಲ್ಲಿ ಒರಟಾಗಿಯೂ ಬಲವಾಗಿಯೂ ಇದ್ದ ದೊಣ್ಣೆ ಹಿಡಿದಿದ್ದ.

ಅವನು ಡಿ—ಯ ಮಾರ್ಗದಲ್ಲೇ ನಡೆದುಹೋಗುತ್ತಿದ್ದಾಗ ರಸ್ತೆಬದಿಯ ಮನೆಗಳ ಜನರು ಅವರವರ ಮನೆಯ ಕಿಟಕಿಗಳಿಂದ ನೋಡಿ ಒಂದು ವಿಧದ ಜುಗುಪ್ಸೆ ಮತ್ತು ಭಯ ತಾಳಿದರು.

ಅವನು ಯಾವ ಕಡೆಯಿಂದ ಬಂದ? ದಕ್ಷಿಣದಿಂದಿರಬಹುದೇ? ಇಲ್ಲದಿದ್ದರೆ ಕ್ಯಾನ್ನೆಸಿನಿಂದ ಪ್ಯಾರಿಸಿಗೆ ಹೋಗುವ ರಸ್ತೆಯಲ್ಲೇಕೆ ಡಿ—ಗೆ ನುಗ್ಗಿದ ? ಅವನು ಅತ್ತಿತ್ತ ನೋಡುತ್ತ, ಮೇಯರರ ಆಫೀಸಿನ ಕಡೆಗೆ ಹೋದುದನ್ನು ಕೆಲವರು ಕಂಡರು. ಅಲ್ಲಿದ್ದ ಪೊಲೀಸಿನವರಿಗೆ ಈತ ನಮಸ್ಕರಿಸಿದರೂ ಅವರು ಇವನ ನಮಸ್ಕಾರವನ್ನು ಸ್ವೀಕರಿಸಿದಂತೆ ತೋರಲಿಲ್ಲ. ಮೇಯರರ ಆಫೀಸಿನ ಒಳಗೆ ಹೋಗಿದ್ದವನು ಸ್ವಲ್ಪ ಸಮಯದಲ್ಲೇ ಹೊರಗೆ ಬಂದು ಹಾದಿ ಹಿಡಿದ.

ಈ ಕಾಲದಲ್ಲಿ ಜ್ಯಾಕ್ವಿನ್ ಲೆಬೆರೆ ಎಂಬಾತ, ಶಿಲುಬೆ ಚಿಹ್ನೆ ಇದ್ದ ಹಲಗೆಯನ್ನು ತೂಗಹಾಕಿ, ಡಿ—ಯಲ್ಲಿ ಒಂದು ಹೊಟೇಲ್ ನಡೆಸುತ್ತಿದ್ದ. ಗ್ರೆನೋಬಲ್ ಪಟ್ಟಣದ ಪ್ರಖ್ಯಾತಿಪಟ್ಟ ಹೊಟೇಲ್ ಮಾಲಿಕ ಲೆಬೆರೆಯ ಹತ್ತಿರದ ಸಂಬಂಧಿಕನಿವನೆಂದು ಜನ ಗೌರವದಿಂದ ಮಾತಾಡಿಕೊಳ್ಳುತ್ತಿದ್ದರು. ಎಂದೇ ಡಿ—ಯ ಜನ ಲೆಬೆರೆಯನ್ನು ಬಲು ಮರ್ಯಾದೆಯಿಂದ ಕಾಣುತ್ತಿದ್ದರು.

ಹೊಸತಾಗಿ ಬಂದ ಪ್ರಯಾಣಿಕ ಲೆಬೆರೆಯ ಹೊಟೇಲಿಗೆ ಹೋದ. ಲೆಬೆರೆ ಒಂದು ಬಾಣಲೆಯಲ್ಲಿ ಏಕಧ್ಯಾನದಿಂದ ಏನನ್ನೋ ಹುರಿಯುತ್ತಿದ್ದ. ಒಳಗೆ ನುಗ್ಗಿದ ಪ್ರಯಾಣಿಕನ ಕಾಲಸಪ್ಪಳ ಕೇಳಿ, ಬಂದವನ ಮುಖ ನೋಡದೆ, ತನ್ನ ಕೆಲಸದಲ್ಲಿ ಮಗ್ನನಾಗಿರುತ್ತ, ಲೆಬೆರೆ, "ನಿಮಗೇನು ಬೇಕು, ಸರ್?" ಎಂದು ಕೇಳಿದ.

"ರಾತ್ರಿಯ ಊಟ ಮತ್ತು ಮಲಗಲು ಸ್ಥಳ," ಅಂದ ಆ ಪ್ರಯಾಣಿಕ.

"ಸಿಕ್ಕುತ್ತವೆ, ದಯಮಾಡಿ ಕುಳಿತುಕೊಳ್ಳಿ," ಎಂದು ಹೇಳುತ್ತ ಲೆಬೆರೆ ಬಂದಿದ್ದವನನ್ನು ನೋಡಿದ. ಹಾಗೆ ನೋಡಿದ ಮರುಕ್ಷಣ, "ಆದರೆ, ನಗದು ಹಣ. . . ," ಎಂದ. ಲೆಬೆರೆಯ ಮಾತು ಪೂರೈಸುವುದರ ಒಳಗೆ ಪ್ರಯಾಣಿಕ, "ಹಣ ಬೇಕಾದರೆ ಮುಂದಾಗಿ ಕೊಡುತ್ತೇನೆ," ಎಂದು ಹೇಳಿ ತನ್ನ ಹಣದ ಚೀಲವನ್ನು ಜೇಬಿನಿಂದ ತೆಗೆದ.

ಹೊಟೇಲ್ ಮಾಲೀಕ ಪುನಃ ಹೊಸಬನನ್ನು ನೋಡಿದ ; ಹಾಗೆ ನೋಡುತ್ತಿದ್ದಂತೆಯೇ ಅವನಿಗೆ ಏನೋ ಒಂದು ಆಲೋಚನೆ ಹೊಳೆದಿರಬೇಕು. ಒಂದು ಚೂರು ಕಾಗದ ತೆಗೆದುಕೊಂಡು ಅದರಲ್ಲಿ

ಏನೋ ಬರೆದು ಒಬ್ಬ ಆಳಿಗೆ ಆ ಕಾಗದಕೊಟ್ಟು ಹೊರಗೆ ಕಳುಹಿಸಿದ. ಅಕ್ಟೋಬರ್ ತಿಂಗಳಲ್ಲಿ ಡಿ—ಯಲ್ಲಿ ಬಹಳ ಚಳಿ. ಪ್ರಯಾಣಿಕ ಬೆಂಕಿಯ ಬದಿಯಲ್ಲಿ ತಲೆ ಕೆಳಹಾಕಿ ಕುಳಿತುಕೊಂಡು ವಿಶ್ರಮಿಸಿಕೊಳ್ಳುತ್ತಿದ್ದ. ಸ್ವಲ್ಪ ಹೊತ್ತಿನಲ್ಲಿ ಹೊರಗೆ ಹೋಗಿದ್ದ ಆಳು ಬಂದು ಹೊಟೇಲ್ ಮಾಲೀಕನಿಗೆ ಒಂದು ಚೀಟಿ ಕೊಟ್ಟ. ಅವನು ಅದನ್ನು ಓದಿ, ಪ್ರಯಾಣಿಕನನ್ನು ಕರೆದು, "ನೋಡು, ನಿನಗಿಲ್ಲಿ ಸ್ಥಳವಿಲ್ಲ," ಎಂದ.

ಪ್ರಯಾಣಿಕನಿಗೆ ಆಶ್ಚರ್ಯವಾಯಿತು. ಹಸಿವೆಯಿಂದ ಅವನು ಕಷ್ಟಪಡುತ್ತಲೂ ಇದ್ದುದರಿಂದ ದುಃಖವೂ ಆಯಿತು. ಅವನೆಂದ, "ಹಣವಿದೆ, ಸಂಶಯಪಡಬೇಡಿ."

"ಅದಕ್ಕಲ್ಲ, ಸ್ಥಳವಿಲ್ಲ, ಅಷ್ಟೆ."

"ಮಲಗಲು ಕುದುರೆಲಾಯ ಸಾಕು."

"ಲಾಯ ತುಂಬ ಕುದುರೆಗಳಿವೆ."

"ಹುಲ್ಲು ಮುಂಡದ ಬಳಿ ಮಲಗುವೆನು."

"ಊಟ ಸಿಗದು, ತಿಳಿಯಿತೇ?"

"ಅಷ್ಟೊಂದು ಆಹಾರವಸ್ತು ತೋರುತ್ತದೆ. ಅದೆಲ್ಲ ಯಾರಿಗೆ?"

"ಹನ್ನೆರಡು ಜನ ಟಪಾಲು ಸಿಬ್ಬಂದಿಯವರಿಗೆ."

"ಇಪ್ಪತ್ತು ಜನರಿಗೂ ಹೆಚ್ಚಾಗಿ ಉಳಿಯುವಷ್ಟಿದೆಯಲ್ಲ!"

"ಈ ಕಥೆಯೆಲ್ಲ ಮತ್ತೆ. ನನಗೆ ಮನಸ್ಸಿಲ್ಲ. ಸಮಾಧಾನದ ಮಾತು ನನ್ನ ವಾಡಿಕೆಯ ಅಭ್ಯಾಸ—ಇಲ್ಲದಿದ್ದರೆ—. . ." ಎಂದು ಹೇಳುತ್ತ ಲೆಬೆರೆ ಪ್ರಯಾಣಿಕನ ಕಿವಿಯಲ್ಲಿ, "ನೀನು ಜೀನ್‌ವಾಲ್‌ಜೀನ್ ಅಲ್ಲವೇ ?" ಎಂದ.

"ಹೌದು"

ಲೆಬೆರೆ ಮತ್ತೂ ಏನನ್ನೋ ಅವನ ಕಿವಿಯಲ್ಲಿ ಹೇಳಿದ್ದು ಕೇಳಿ ಪ್ರಯಾಣಿಕ ಅಲ್ಲಿಂದೆದ್ದು ಮುಂದೆ ಮಾರ್ಗಕ್ಕಿಳಿದ.

ಕೊನೆಗೆ ಒಂದು ಸೇಂದಿ ಅಂಗಡಿ ಬಾಗಿಲಿಗೆ ಹೋಗಿ ಅಲ್ಲಿ ಏನಾದರೂ ಅನುಕೂಲ ಸಿಗಬಹುದೋ ಎಂದು ವಿಚಾರಿಸುವುದರಲ್ಲಿದ್ದ. ಅಷ್ಟರಲ್ಲೇ ಅಂಗಡಿಯವ ಕೇಳಿದ, "ಏನು ಬೇಕು, ಸರ್ ?"

"ಊಟ ಮತ್ತು ಮಲಗಲು ಸ್ಥಳ."

"ಎರಡೂ ತಯಾರಿವೆ."

ಪ್ರಯಾಣಿಕ ಹೊಕ್ಕು ಬೇರೆ ಜನರೆಲ್ಲ ಕುಳಿತಿದ್ದ ಸ್ಥಳದಲ್ಲಿ ಕುಳಿತ. ದಣಿವಿನಿಂದಲೂ ಆ ಮೊದಲು ತನಗೆ ಲೆಬೆರೆ ಹೊಟೇಲಿನಲ್ಲಿ ಆಗಿದ್ದ ಕಷ್ಟ ಮತ್ತು ಅಪಮಾನಗಳಿಂದಲೂ ಅವನು ಸ್ವಲ್ಪ ಕೋಪಿಸಿಕೊಂಡೇ ಇಲ್ಲಿಗೆ ಬಂದಿದ್ದ. ಈಗ ದೊರೆತ ಆಶ್ವಾಸನೆಯಿಂದ ಅವನು ಸ್ವಲ್ಪ ಸಮಾಧಾನ ತಳೆಯತೊಡಗಿದ. ಅವನು ಕುಳಿತಲ್ಲಿಂದಲೇ ಹೊಟೇಲಿನ ಒಳಗಡೆಯನ್ನೆಲ್ಲ ನೋಡಿದ. ಅಲ್ಲಿದ್ದ ಆಹಾರವಸ್ತುಗಳ ಕಂಪು ಹಸಿದಿದ್ದ ಅವನ ಊಟದ ಉತ್ಸಾಹವನ್ನು ಹೆಚ್ಚಿಸಿತು. ಅಲ್ಲಿಯ ಪಾನೀಯಗಳ ಸುವಾಸನೆಯೂ ಕೆಲವರು ಊಟಮಾಡುತ್ತಿದ್ದ ಸೊಬಗೂ ತನಗೆ ಸದ್ಯ ಒದಗಲಿದ್ದ ಊಟದ ನಿರೀಕ್ಷಣೆಯನ್ನು ಚುರುಕುಪಡಿಸಿದುವು. ಇದೇ ಸಮಯದಲ್ಲಿ ಲೆಬೆರೆ ಹೊಟೇಲಿನಿಂದ ಇಲ್ಲಿಗೆ ಆಗ ತಾನೆ ಬಂದಿದ್ದವನೊಬ್ಬ ಇವನನ್ನು ಗುರುತಿಸಿ ಸೇಂದಿ ಅಂಗಡಿಯವನ ಕಿವಿಯಲ್ಲಿ ಏನನ್ನೋ ಉಸುರಿದ. ಅಂಗಡಿಯವ ಹೆಚ್ಚೇನೂ ಆಲೋಚಿಸದೆ,

ಕೇವಲ ನ್ಯಾಯವನ್ನೇ ಪಾಲಿಸುವವನಂತೆ, ಪ್ರಯಾಣಿಕನ ಹೆಗಲ ಮೇಲೆ ಕೈಯಿಟ್ಟು ಹೇಳಿದ, "ನೀನಿಲ್ಲಿಂದ ಈಗಲೇ ತೊಲಗಬೇಕು."

ಪ್ರಯಾಣಿಕ ದುಃಖದಿಂದ ಅವನನ್ನು ನೋಡಿ, "ನಿನಗೂ ಗೊತ್ತಾಯಿತೇ ?" ಎಂದ.

"ಹೌದು."

"ಆ ಹೊಟೇಲಿನವನು ಹೊರದಬ್ಬಿದ."

"ನೀನಾಗಿ ಹೋಗದಿದ್ದರೆ ನಾನೂ ಮಾಡುವುದು ಹಾಗೆಯೇ."

ಪ್ರಯಾಣಿಕ ಚೀಲವನ್ನೂ ದೊಣ್ಣೆಯನ್ನೂ ಹಿಡಿದುಕೊಂಡು ಅಲ್ಲಿಂದಲೂ ನಿರಾಶನಾಗಿ ಹೊರನಡೆದ. ಅವನನ್ನು ಹಿಂಬಾಲಿಸಿ ಬಂದು ಅಡಗಿ ನೋಡುತ್ತಿದ್ದ ಕೆಲ ಬಾಲಕರು ಅವನಿಗೆ ಕಲ್ಲೆಸೆದರು. ಅವನು ಹಿಂತಿರುಗಿ ಬಾಲಕರನ್ನು ನೋಡುತ್ತ, ಸಿಟ್ಟಿನಿಂದ ಮುಖದಲ್ಲಿ ಕಿಡಿ ಸುರಿಸಿದ. ಬಾಲಕರು ಹೆದರಿ ಓಡಿದರು.

ಅನಂತರ ಅವನು ಒಂದು ಜೈಲಿನ ಹೆಬ್ಬಾಗಿಲು ತಲಪಿದ. ಅಲ್ಲಿಯ ಕಾವಲುಗಾರರನ್ನು ಕಂಡು, "ನಾನಿಲ್ಲಿ ರಾತ್ರಿ ಮಲಗಲು ಸ್ಥಳ ಸಿಕ್ಕಬಹುದೇ?" ಎಂದು ಕೇಳಿದ.

"ಇದು ಹೊಟೇಲ್ ಅಲ್ಲ, ಜೈಲು. ಕೈದಿಯಾಗಿ ಬಾ, ಆಗ ಸ್ಥಳ ಕೊಡೋಣ," ಎಂದು ಜೈಲರ್ ಗದರಿಸಿ ಹೇಳಿದ.

ಅಲ್ಲಿಂದಲೂ ಮುಂದೆ ರಸ್ತೆಯಲ್ಲೇ ನಡೆಯತೊಡಗಿದ. ಹಾಗೆ ಹೋಗುವಾಗ ರಸ್ತೆ ಬದಿಯಲ್ಲಿ ಅಂದವಾದ ಹೂದೋಟದ ನಡುವೆ ಇದ್ದ ಸುಂದರಮನೆ ಕಂಡ. ಕನ್ನಡಿ ಕಿಟಕಿಗಳ ಮುಖಾಂತರ ಒಳಗಿನ ಸಂಪತ್ತು ತೋರಿಬರುತ್ತಿತ್ತು. ತುಂಬಿದ ಸಂಸಾರವೊಂದು ಆನಂದದಿಂದ ಮೇಜಿನ ಎದುರು ಊಟಕ್ಕೆ ಕುಳಿತಿತ್ತು. ಮನೆಯ ಯಜಮಾನ ಪತ್ನಿ, ಪುತ್ರ, ಪುತ್ರಿಯರ ಜೊತೆಯಲ್ಲಿ ಮಾತಾಡುತ್ತ ನಗುತ್ತ, ಚಿಕ್ಕ ಮಕ್ಕಳ ಮಾತಿನ ಸವಿಯನ್ನು ಭೋಜನದ ಸವಿಯೊಂದಿಗೆ ಬೆರೆಸಿ ಅನುಭವಿಸಲು ಅನುವಾಗಿ ಊಟದ ವ್ಯಂಜನಗಳನ್ನು ಮೇಜಿನ ಮೇಲೆ ಸರಿಪಡಿಸುತ್ತಿದ್ದ. ಒಳಗಿನ ಅಂದ, ಚಂದ, ಸುಖ, ಸಂಪತ್ತು, ಸಂತೋಷ ಪ್ರಯಾಣಿಕನಿಗೆ ಸ್ಪಷ್ಟವಾಗಿ ಗೋಚರಿಸಿದುವು. ಅಲ್ಲದೆ, ಇಂಥ ಪುಣ್ಯಸ್ಥಳದಲ್ಲಿ ಸಂತೃಪ್ತಿಯಲ್ಲಿದ್ದ ಸಂಸಾರದಲ್ಲಿ ದಯೆ, ಕರುಣೆ, ಉದಾರತೆಗಳೂ ಇರಲೇಬೇಕೆಂಬ ಆಸೆಯನ್ನೂ ತಳೆದ.

ಪ್ರಯಾಣಿಕ ಮೃದುವಾಗಿ ಕದ ತಟ್ಟಿದ. ಆ ಕೂಡಲೇ ಒಳಗಿದ್ದ ಗೃಹಸ್ಥ ಮೇಜಿನ ಬದಿಯಿಂದ ಹಸನ್ಮುಖಿಯಾಗಿ ಎದ್ದು ಬಂದು ಪ್ರಯಾಣಿಕನಿಗೆ ಏನು ಬೇಕೆಂದು ಕೇಳಿದ. ಪ್ರಯಾಣಿಕ ತನಗೆ ಒಂದೂಟವನ್ನೂ ಮಲಗಲು ಹೊರಗಾದರೂ ಒಂದು ಸ್ಥಳವನ್ನೂ ಕೊಡಬೇಕೆಂದು ಬಿನ್ನೈಸಿಕೊಂಡ.

"ನಿನ್ನ ಕೇಳಿಕೆ ಬಲು ಮಿತವಾದುದು. ಗೃಹಸ್ಥನಾದ ನಾನು ನಿರಾಕರಿಸೆನು. ಆದರೆ, ನೀನು ಹೊಟೇಲುಗಳಿಗೆ ಹೋಗಬಹುದಿತ್ತಲ್ಲ?" ಅಂದ ಗೃಹಸ್ಥ.

"ನನಗೆ ಅಲ್ಲಿ ಸ್ಥಳ ಸಿಕ್ಕಲಿಲ್ಲ."

"ಯಾವ ಹೊಟೇಲಿನಲ್ಲೂ ಸಿಕ್ಕಲಿಲ್ಲವೇ?"

"ಇಲ್ಲ. ಎಲ್ಲೆಡೆಯಲ್ಲೂ ನಿರಾಕರಿಸಿದರು."

ಈ ಉತ್ತರ ಕೇಳಿ ಗೃಹಸ್ಥ ಸ್ವಲ್ಪ ಆಲೋಚಿಸಿದ. ಥಕ್ಕನೆ ಅವನಿಗೆ ಏನೋ ಒಂದು ಆಲೋಚನೆ ಹೊಳೆಯಿತು. ಅವನು ಸ್ವಗತವಾಗಿ ಅಂದುಕೊಂಡ, "ಆ ಮನುಷ್ಯ ಈತನೇ ಆಗಿರಬಹುದೇನು?" ಎಂದು. ಹೀಗೆ ಹೇಳುತ್ತ ನಡುಗಿದ. ಮರುಕ್ಷಣದಲ್ಲಿ ಗೋಡೆಯಲ್ಲಿದ್ದ ಕೋವಿಯನ್ನು ಕೈಗೆ

ತೆಗೆದುಕೊಂಡ. ಇದನ್ನೆಲ್ಲ ನೋಡುತ್ತಲೂ ಕೇಳುತ್ತಲೂ ಇದ್ದ ಹೆಂಡತಿ ಮಕ್ಕಳನ್ನು ಕರೆದುಕೊಂಡು ಗಂಡನ ಹಿಂದೆ ನಿಂತು, "ಅಬ್ಬಾ ! ಆತನೇ ಇವನು, ನರಾಧಮಾ!" ಎಂದು ಉದ್ಗಾರವೆತ್ತಿದಳು. ಅಷ್ಟರಲ್ಲೇ ಗಂಡ ಪ್ರಯಾಣಿಕನನ್ನು ನೋಡಿ, "ನಡೆ ಇಲ್ಲಿಂದ—ಕೂಡಲೇ," ಅಂದ.

"ಸ್ವಲ್ಪ ದಯತೋರಿಸಿ, ಸ್ವಾಮೀ! ಒಂದು ಗುಟುಕು ನೀರನ್ನಾದರೂ ಕೊಡಿ."

"ನೀರಲ್ಲ—ನಾಲ್ಕು ಚಿಲ್ಲು," ಎಂದು ಹೇಳುತ್ತ ಕೋವಿ ಎತ್ತಿಹಿಡಿದ.

ಜೀನ್‌ವಾಲ್‌ಜೀನ್ ರಸ್ತೆಗೆ ಇಳಿದ. ಗೃಹಸ್ಥ ಮನೆಬಾಗಿಲನ್ನು ಅವಸರದಿಂದ ಮುಚ್ಚಿ ಭದ್ರಪಡಿಸಿದ; ಅಲ್ಲದೆ, ಒಳಗಿನ ಎಲ್ಲ ಅಗಣಿಗಳನ್ನು ಹಾಕಿದ. ಅಗಣಿ ಶಬ್ದ ಕೇಳುತ್ತಿದ್ದಂತೆಯೇ ಜೀನ್‌ವಾಲ್‌ಜೀನ್ ರಸ್ತೆಯಲ್ಲೇ ನಡೆದ.

ಹಾಗೆ ಹೋಗುತ್ತಿದ್ದಾಗ ರಸ್ತೆಯ ಅಂಚಿನಲ್ಲಿ ಒಂದು ಚಿಕ್ಕ ಮನೆ ಕಂಡ. ಚಳಿಯಿಂದ ಪಾರಾಗಲು ಅದರೊಳಗಾದರೂ ನುಗ್ಗೋಣವೆಂದು ಎಚ್ಚರಿಕೆಯಿಂದ ನುಗ್ಗಿದ. ಪೂರ ನುಗ್ಗುವುದರೊಳಗೆ ಒಳಗೆ ಮಲಗಿದ್ದ ದೊಡ್ಡ ಒಂದು ನಾಯಿ ಇವನನ್ನು ಕಚ್ಚಲು ಹಾರಿಕೊಂಡು ಬಂತು. ಆಗ ನಿರ್ವಾಹವಿಲ್ಲದೆ ಪುನಃ ರಸ್ತೆಗೆ ಹಾರಿ ಓಡಿದ. ಈ ಪ್ರಸಂಗದಲ್ಲಿ ಅವನ ಇಜಾರು ಶರಟುಗಳು ಹರಿದು ಹೋದುವು.

ಹೀಗೆ ನಾಯಿಯ ಗುಡಿಸಿಲಿನಲ್ಲೂ ಸ್ಥಳ ಸಿಗದೆ ಜೀನ್‌ವಾಲ್‌ಜೀನ್ ಸಂಪೂರ್ಣ ಹತಾಶನಾಗಿ, ಗೊತ್ತುಗುರಿಯಿಲ್ಲದೆ, ಬಲುಮಟ್ಟಿಗೆ ಮೈಮರೆತು, ರಸ್ತೆಯಲ್ಲೇ ಮುಂದುವರಿಯುತ್ತ ಪಟ್ಟಣದ ಹೊರಗೆ ಬಂದ.

ಆ ವೇಳೆಗೆ ಸೂರ್ಯ ಅಸ್ತಮಿಸಿದ್ದ. ಆಕಾಶದಲ್ಲಿ ಮಳೆಯ ಮೋಡಗಳು ಪೂರ್ವದಿಗಂತದಿಂದಲೇ ತುಂಬುತ್ತ ಬಂದಿದ್ದುವು. ಆಗ ತಾನೆ ಸೂರ್ಯಾಸ್ತಮಾನವಾಗಿದ್ದುದರಿಂದ ಬೆಳಕು ಪಶ್ಚಿಮ ದಿಗಂತದಲ್ಲಿ ಹೊನ್ನಕೆಂಪಾಗಿ ತೋರಿ, ನಡುಬಾನಿನಲ್ಲಿ ನೆತ್ತರಕೆಂಪಾಗಿ ಹೊಳೆಯುತ್ತಿತ್ತು. ಪ್ರತಿಫಲಿತವಾಗಿದ್ದ ಬೆಳಕು ಜೀನ್‌ವಾಲ್‌ಜೀನ್ ನಡೆದುಹೋಗುತ್ತಿದ್ದ ಪ್ರದೇಶದಲ್ಲೆಲ್ಲ ರೌದ್ರ ಕೆಂಪಾಗಿ ಪಸರಿಸಿತ್ತು. ಪೂರ್ವದಿಗಂತದಲ್ಲಿದ್ದ ಮೋಡಗಳು ಕಪ್ಪಾಗಿ, ಭಯಂಕರವಾಗಿ ಕಾಣುತ್ತಿದ್ದುವು. ಪ್ರಯಾಣಿಕನ ಎದುರು ಒಂದು ಬೋಳು ಗುಡ್ಡೆ ನಿರ್ಜನಪ್ರದೇಶವಾಗಿ ಎದ್ದುನಿಂತಿತ್ತು. ಮೃಗಮನುಷ್ಯರು ಯಾರೂ ತನಗೆ ಆಶ್ರಯಕೊಡದಿರುವಾಗ ಆ ಗುಡ್ಡೆಯಲ್ಲಾದರೂ ರಾತ್ರಿ ಕಳೆಯೋಣವೆಂದು ಅವನು ಒಮ್ಮೆ ಗ್ರಹಿಸಿದ. ಆದರೆ ಮಳೆ ಬರುವ ಸಂಭವವೂ ಅಲ್ಲಿಯ ಭೀಷಣತೆಯೂ ಅವನನ್ನು ಪಟ್ಟಣದ ಕಡೆಗೇ ಹಿಂತಿರುಗಿಸಿದುವು.

ಕೊನೆಗೆ ಪ್ರಯಾಣಿಕ ಡಿ—ಯ ಒಂದು ಇಗರ್ಜಿ ಬಳಿಗೆ ಬಂದು ಅದರ ಹೊರಗೆ ರಸ್ತೆ ಬದಿಯಲ್ಲಿದ್ದ ದೊಡ್ಡ ಹಾಸುಗಲ್ಲಿನ ಮೇಲೆ ಮಲಗಿದ.

ಆಗತಾನೆ ಇಗರ್ಜಿಗೆ ಹೋಗಿ ಹಿಂತಿರುಗಿ ಬರುತ್ತಿದ್ದ ಒಬ್ಬ ಮುದುಕಿ ಈ ಚಳಿ ಸಮಯದಲ್ಲಿ ರಸ್ತೆ ಬದಿಯಲ್ಲಿ ಕಲ್ಲಮೇಲೆ ಒರಗಿದ್ದವನನ್ನು ಕಂಡು, "ಈ ಚಳಿಯಲ್ಲಿ—ಕೋಡುತ್ತಿರುವ ಕಲ್ಲಿನ ಮೇಲೆ—ಮಲಗಿರುವ ಪುಣ್ಯಾತ್ಮ ಯಾರಪ್ಪಾ!" ಎಂದು ಅಂದುಕೊಂಡಳು.

ಈ ಮಾತು ಕೇಳಿ ಜೀನ್‌ವಾಲ್‌ಜೀನ್, "ಈ ಕಲ್ಲೇನು ನನಗೆ! ಹತ್ತೊಂಬತ್ತು ವರ್ಷ ಬರೇ ಮರದ ಹಲಗೆಯ ಮೇಲೆ ಮಲಗುತ್ತಿದ್ದ ಮೃಗಕ್ಕೆ!" ಎಂದು ಹೇಳಿದ.

"ಸಿಪಾಯಿಯಾಗಿದ್ದೆಯೇನು?"

"ಹೌದು, ಆಗಿದ್ದೆ."

"ಆದರೂ ಹೊಟೇಲಿಗೆ ಹೋಗಿ ಮಲಗಬಹುದಿತ್ತಲ್ಲ?"

"ದುಡ್ಡಿಲ್ಲ, ನನ್ನ ಹತ್ತಿರ."

"ನಾನಾದರೂ ಕೊಡೋಣವೆಂದರೆ ನನ್ನ ಹತ್ತಿರವಿರುವುದು ಎರಡು ಪೆನ್ಸ್ ಮಾತ್ರ."

"ಅದನ್ನಾದರೂ ಕೊಡಿ."

ಮುದುಕಿ ತನ್ನಲ್ಲಿದ್ದ ಎರಡು ಪೆನ್ನುಗಳನ್ನು ಕೊಡುತ್ತ ಸ್ವಲ್ಪ ಯೋಚಿಸಿ, ಪ್ರಯಾಣಿಕನನ್ನು ಕೇಳಿದಳು, "ಯಾರ ಮನೆಗಾದರೂ ಹೋಗಿ ಮಲಗಬಹುದಿತ್ತಲ್ಲ?"

"ನಾನು ಎಲ್ಲ ಮನೆಕದಗಳನ್ನೂ ತಟ್ಟಿ ನೋಡಿದೆ."

"ಅದಕ್ಕೇನಾಯ್ತು?"

"ಯಾರೂ ಕದ ತೆರೆಯಲಿಲ್ಲ, ಎಲ್ಲರೂ ಸ್ಥಳ ನಿರಾಕರಿಸಿದರು."

ಮುದುಕಿಗೆ ಬಲು ಬೇಸರವಾಯಿತು. ಜೀನ್‌ವಾಲ್‌ಜೀನನ ಕೈಹಿಡಿದು ಬಿಷಪರ ಚಿಕ್ಕ ಮನೆ ತೋರಿಸುತ್ತ, "ಅಲ್ಲಿ ಹೋಗಿ ನೋಡಿದೆಯೇನು?" ಎಂದು ಕೇಳಿದಳು.

"ಇಲ್ಲ," ಅಂದ ಪ್ರಯಾಣಿಕ.

"ಹಾಗಾದರೆ ಅಲ್ಲಿಗೆ ಹೋಗು," ಅಂದಳು ಮುದುಕಿ.

೨. ಬಾಗಿಲನು ತೆರೆದು ಒಳಗೆ ಬಾ ಯಾತ್ರಿಕನೇ!

ಈ ದಿನ ಡಿ—ಯ ಬಿಷಪರ ಊಟಕ್ಕೆ ಸ್ವಲ್ಪ ತಡವಾಗಿದೆ. ಅವರು ತಮ್ಮ ಮಲಗುವ ಕೋಣೆಯಲ್ಲಿ ಕುಳಿತು "ಕರ್ತವ್ಯ" ಎಂಬ ಹೆಸರಿನ—ಕರ್ತವ್ಯಸಂಬಂಧವಾದ—ಪುಸ್ತಕ ಬರೆಯುತ್ತಿದ್ದರು. ಹೀಗಾಗಿ ಸ್ವಲ್ಪ ತಡವಾದುದು ಅವರಿಗೆ ಗೊತ್ತಾಗಲಿಲ್ಲ. ಕೊನೆಗೆ, ಮನೆಯವರಿಗೆ ತೊಂದರೆಯಾಗಬಹುದೆಂದು ಗ್ರಹಿಸಿ ಬರಹದ ಕೆಲಸ ಬಿಟ್ಟು ಹೊರಟರು.

ಊಟದ ಕೋಣೆಯಲ್ಲಿ ಮೆಗ್‌ಲೋಯರ್ ಮೇಜಿನ ಮೇಲೆ ಪರಿಕರಗಳನ್ನೆಲ್ಲ ಜೋಡಿಸಿ ಬಿಷಪರ ತಂಗಿಯ ಹತ್ತಿರ ಮಾತಾಡುತ್ತಿದ್ದಳು. ಮಾತಿನ ವಿಷಯ ಬಲು ಗಹನವಾಗಿದ್ದಂತೆಯೂ ಸ್ವಲ್ಪ ಭಯಪ್ರದವಾಗಿದ್ದಂತೆಯೂ ಅವಳ ಮುಖದಿಂದ ತೋರಿಬರುತ್ತಿತ್ತು. ಮಾತು ಮುಂದುವರಿಸುತ್ತ ಮೆಗ್‌ಲೋಯರ್, "ಆದ್ದರಿಂದ, ಬುದ್ಧಿವಂತರಾದವರು ತಮ್ಮ ಬಾಗಿಲುಗಳನ್ನು ಭದ್ರಪಡಿಸಿಕೊಳ್ಳಬೇಕು, ಎಂದು ಹೇಳುತ್ತಿದ್ದಳು. ಈ ಮಾತು ನಡೆಯುತ್ತಿದ್ದ ಹಾಗೆಯೇ ಬಿಷಪ್ ಭೋಜನಶಾಲೆಗೆ ಬಂದುನಿಂತರು. ಈ ಹೆಂಗುಸರಿಬ್ಬರು ಯಾವುದೋ ಗಾಢ ಪ್ರಶ್ನೆ ಬಗೆಹರಿಸುವ ಪ್ರಯತ್ನದಲ್ಲಿದ್ದಾರೆಂದು ಅವರು ತಿಳಿದುಕೊಂಡರು. ಅಣ್ಣನಿಗೆ ಈ ವಿಷಯವನ್ನು ತಿಳಿಸಬೇಕೆಂದು ತಂಗಿ ನಿಶ್ಚೈಸಿದಳು. ಆದರೆ ಮೆಗ್‌ಲೋಯರಳೇ ಈ ವರ್ತಮಾನ ತಿಳಿಸುವುದು ಉಚಿತವೆಂದು ಮೇಡಮ್ ಬೇಪ್ಟೆಸ್ಟೈನ್, ಅಣ್ಣನನ್ನು ನೋಡುತ್ತ, "ಅಣ್ಣಾ! ಕೇಳಿದೆಯಾ, ಈ ವರ್ತಮಾನ?" ಎಂದು ಹೇಳಿ, ಮೆಗ್‌ಲೋಯರಳ ಕಡೆ ನೋಡಿದಳು.

"ಏನದು?" ಅಂದರು ಬಿಷಪ್.

"ಒಂದು ವಿಶೇಷವಿದೆ. ತಾವೇನೋ ಬುದ್ಧಿವಂತರು ಹೌದು. ಆದರೆ, ಪ್ರಕೃತದ ಸಂದರ್ಭ ಕಠಿಣತರದ್ದಿದೆ," ಅಂದಳು ಮೆಗ್‌ಲೋಯರ್.

"ಏನದು, ತಿಳಿಸು."

"ಕೇಳಿ ಪ್ರಭೂ! ಯಾರೋ ಒಬ್ಬ ಕ್ರೂರಿ, ಜಿಪ್ಸಿಯಂತೆ ಹರಕುಮುರುಕು ಬಟ್ಟೆ ತೊಟ್ಟು,

ಕಾಲಲ್ಲಿ ಮೆಟ್ಟಿಲ್ಲದೆ, ಈ ಊರಲ್ಲಿ ಒಂಟಿಗನಾಗಿ ಅಲೆದಾಡುತ್ತಿದ್ದಾನೆಂದು ಸಂಜೆ ಸಂತೆ ಕಟ್ಟೆಗೆ ಹೋದಾಗ ಜನರು ಮಾತಾಡುತ್ತಿದ್ದುದನ್ನು ಕೇಳಿದೆ. ಜೈಲಿನಿಂದ ತಪ್ಪಿಸಿಕೊಂಡವನೋ ಗಲ್ಲಿನಿಂದಲೇ ತಪ್ಪಿಸಿ ಓಡಿದವನೋ ಯಾವುದೋ ಒಂದು ವಿಧದ ಅಪರಾಧಿ—ನಿಶಾಚರನಾಗಿರಬೇಕು—ಅವನು. ಅವನಿಗೆ ಲೆಬೆರೆಯಾಗಲೀ ಸೇಂದಿಯಂಗಡಿಯವನಾಗಲೀ ಸ್ಥಳ ಕೊಡಲಿಲ್ಲವಂತೆ. ಮತ್ತೆ, ಮೇಯರರಿಗೂ ಪೋಲೀಸ್ ಮುಖ್ಯಾಧಿಕಾರಿಗೂ ಸರಿಯಿಲ್ಲದೆ, ಒಬ್ಬರು ಇನ್ನೊಬ್ಬರ ತಪ್ಪನ್ನು ಹುಡುಕಿ ಹಿಡಿಯಲು ಎಡೆಸಿಕ್ಕುವುದಕ್ಕಾಗಿ, ಏನಾದರೊಂದು ಅಘಟಿತ ಘಟನೆಗೆ ಎಡೆಕೊಡುತ್ತಿದ್ದಾರೆಂದೂ ಕೇಳಿದೆ. ನಮ್ಮೂರಿಗೆ ಹಾನಿ ನಿಶ್ಚಯ. ಭೋಜನಶಾಲೆಗಂತೂ ಬಾಗಿಲ ಅಗಣಿಯನ್ನೇ ತೆಗೆಸಿಬಿಟ್ಟಿದ್ದೀರಿ. ತಮ್ಮ ಅಪ್ಪಣೆಯಾದರೆ ಕಮ್ಮಾರನನ್ನು ಈಗಲೇ ಹೋಗಿ ಕರೆತರುವೆನು. ಅವರವರ ಪೋಲೀಸ್ ಅವರವರೇ ಆಗಬೇಕಾದ ಸಮಯವಿದು ಎಂದು ಊರವರು ಮಾತಾಡಿಕೊಳ್ಳುತ್ತಿದ್ದಾರೆ, ಪ್ರಭೂ! ಈ ವಿಷಯವನ್ನೇ ನಾವು ಮಾತಾಡಿಕೊಳ್ಳುತ್ತಿದ್ದೆವು. ತಾವು ಯಾವುದನ್ನೂ ಯೋಚಿಸದೆ ಕದ ತಟ್ಟಿದವರನ್ನು—ಮಧ್ಯರಾತ್ರಿಯಲ್ಲಾದರೂ—'ಬನ್ನಿ' ಅಂದುಬಿಡುತ್ತೀರಿ. ಏನು, ಅಗಣಿ . . ." ಎಂದು ಮೆಗ್‌ಲೋಯರ್ ಮಾತು ಮುಗಿಸುವುದರ ಒಳಗೆ ಭೋಜನಶಾಲೆಯ ಎದುರಿನ ಬಾಗಿಲನ್ನು ಯಾರೋ ಬಲವಾಗಿ ತಟ್ಟಿದರು.

"ಒಳಗೆ ಬನ್ನಿ," ಅಂದರು ಬಿಷಪ್.

೩. ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು

ಬಲವಾಗಿ ನೂಕಲ್ಪಟ್ಟ ಆ ಬಾಗಿಲು ಸದ್ದುಮಾಡುತ್ತ ಅಗಲವಾಗಿ ತೆರೆದು ನಿಂತಿತು. ಜೀನ್ ವಾಲ್‌ಜೀನ್ ಒಳಗೆ ಪ್ರವೇಶಿಸಿ, ತನ್ನ ಹರಕು ದುಸ್ತು, ಕೈಚೀಲ, ಕಷ್ಟಪರಂಪರೆಗಳಿಂದ ಉಂಟಾಗಿದ್ದ ದ್ವೇಷಪೂರಿತ ಮುಖಮುದ್ರೆ, ಯಾವ ಕಾರ್ಯವನ್ನಾದರೂ ಮಾಡಿಬಿಡಲು ಹೇಸದ ಪಾಶವಿಕ ಧೈರ್ಯ ಇವೆಲ್ಲವನ್ನೂ ಪ್ರದರ್ಶಿಸುತ್ತ, ದೃಢವಾಗಿ ನಿಂತ. ಆಗ್ಗೆ ಅವನು ಒಬ್ಬ ಭಯಂಕರ ರಾಕ್ಷಸನಂತೆ—ಒಂದು ರಣದೇವತೆಯಂತೆ—ತೋರುತ್ತಿದ್ದ. ತಾನು ತೆರೆದ ಕದವನ್ನು ಮುಚ್ಚುವಷ್ಟೂ ಸೌಜನ್ಯ ಕ್ರಮಗಳನ್ನರಿಯದ ಅವನು, ಈ ಮನೆಯವರು ಮಾತಾಡುವ ಮೊದಲೇ ತಾನು ತನ್ನ ಪರಿಚಯವನ್ನು ಮಾಡಿಕೊಡಬೇಕೆಂಬ ತವಕದಿಂದ ಮಾತಾಡಲಾರಂಭಿಸಿದ.

ಇತ್ತ ಮೆಗ್‌ಲೋಯರ್ ಹೆದರಿ, ಮುಖ ಬಿಳುಪೇರಿ, ಮಾತು ಹೊರಡದೆ, ಬಾಯಿ ಕಳೆದು ನಿಂತಳು. ಬಿಷಪರ ತಂಗಿ ಮೊತ್ತಮೊದಲು ತುಂಬ ದಿಗಿಲುಗೊಂಡಳು. ಆದರೆ, ಅಣ್ಣನ ಶಾಂತ ಮುಖಮುದ್ರೆ, ನಡೆನುಡಿ ಕಂಡು, ಸ್ವಲ್ಪ ಸಮಯದಲ್ಲಿ ಧೈರ್ಯಗೊಂಡು, ಶಾಂತಳಾಗಿ, ಎಲ್ಲರನ್ನೂ ನೋಡುತ್ತ ಕುಳಿತಳು.

ಜೀನ್‌ವಾಲ್‌ಜೀನ್ ಹೇಳಿದ, "ನನ್ನ ಹೆಸರು ಜೀನ್‌ವಾಲ್‌ಜೀನ್. ವಿರಾಮವಿಲ್ಲದೆ ದುಡಿಯುತ್ತಿರಬೇಕಾದ ಅಧಮ ವರ್ಗದ ಕೈದಿಯಾಗಿ ಜೈಲಿನಲ್ಲಿ ಹತ್ತೊಂಬತ್ತು ವರ್ಷ ಕಳೆದು ನಾಲ್ಕು ದಿನಗಳ ಹಿಂದೆ ಜೈಲಿನಿಂದ ಬಿಡಲ್ಪಟ್ಟಿದ್ದೇನೆ. ಈ ನಾಲ್ಕು ದಿನಗಳಲ್ಲೂ ನಡೆದು ಬಂದಿರುತ್ತೇನೆ. ಈ ಹೊತ್ತೇ ಮೂವತ್ತಾರು ಮೈಲು ನಡೆದಿದ್ದೇನೆ. ನನ್ನೂರು ಪಾಂಟರ್ಲೀಯರ್. ನಾನು ಹೋದಲ್ಲಿ ಸರಕಾರದ ಅಧಿಕಾರಿಗಳಿಗೆ ನನ್ನ ಆಗಮನ ತಿಳಿಸಬೇಕೆಂಬ ನಿಯಮ ನನ್ನ ಬೆನ್ನು ಹತ್ತಿ ಹಿಂಬಾಲಿಸಿ ಬರುತ್ತಿದೆ. ಈ ಸಂಬಂಧದ ಆಜ್ಞಾಪತ್ರದಲ್ಲಿ ನಾನೊಬ್ಬ ಹಿಂಸಾತ್ಮಕ, ಸಮಾಜಘಾತಕಿ ಎಂದು ಬರೆದಿದ್ದಾರೆ. ಹೀಗಾಗಿ ನನಗೆ ಊರಲ್ಲಿ ಯಾವ ಹೊಟೇಲಿನಲ್ಲೂ ಸ್ಥಳ ಸಿಕ್ಕಲಿಲ್ಲ.

ಜೈಲಿನಲ್ಲೂ ನನಗೆ ಈಗ ಸ್ಥಳ ಸಿಕ್ಕದು. ಒಂದು ನಾಯಿಯ ಗೂಡಿನಲ್ಲೂ ನನಗೆ ಮಲಗಲು ಎಡೆ ದೊರೆಯಲಿಲ್ಲ. ಮನುಷ್ಯರಂತೆಯೇ ನಾಯಿಯೂ ನನ್ನನ್ನು ತಿರಸ್ಕರಿಸಿತು—ಜೊತೆಗೆ ಕಚ್ಚಿತು. ಊರ ಹೊರಗೆ ಬೋಳುಗುಡ್ಡೆಯಲ್ಲಿ ನಕ್ಷತ್ರಗಳ ಬೆಳಕಿನಲ್ಲಾದರೂ ಮಲಗೋಣವೆಂದು ಹೋದಾಗ, ಆ ಸುಖವೂ ನನಗೆ ಸಿಕ್ಕಕೂಡದೆಂದು ಮೋಡಗಳೂ ಅಡ್ಡಬಂದು ಮಳೆಸುರಿಸುವುದಾಗಿ ಹೆದರಿಸಿದುವು. ಕೊನೆಗೆ ಒಂದು ಕಲ್ಲಿನ ಮೇಲೆ ಮಲಗಿದ್ದಾಗ ಮುದುಕಿಯೊಬ್ಬಳು ಈ ಮನೆ ತೋರಿಸಿದಳು. ನೀವು ಯಾರು? ಇದೇನು ಹೊಟೇಲೇ? ಹೊಟೇಲಾಗಲಿ ಆಗದಿರಲಿ, ನಾನು ಹಣ ಕೊಡುವೆನು. ನೀವು ಅಂಜಬೇಕಾದುದಿಲ್ಲ. ನನ್ನಲ್ಲಿ ಈಗ ೧೦೯ ಫ್ರ್ಯಾಂಕ್, ೧೫ ಸೌಗಳಿವೆ. ನನ್ನ ಅನುಕೂಲಕ್ಕಿಲ್ಲದ ಹಣ ಉಳಿಸಿ ಪ್ರಯೋಜನವೇನು? ನನಗೆ ಹಸಿವೆ ಮಿತಿ ಮೀರಿದೆ. ಹಣ ಕೊಡುವೆನು. ನಾನು ಇಂದು ಇಲ್ಲಿ ನಿಲ್ಲಲು ಸ್ಥಳ ಸಿಗಬಹುದೇನು?" ಈ ಮಾತು ಗಳನ್ನೆಲ್ಲ ಅವನು ತನ್ನ ಉದ್ದೇಶ ಸಿದ್ಧಿಯಾಗದಿರುವ ಹೆದರಿಕೆಯಿಂದಲೇ ಹೇಳಿದ.

ಬಿಷಪರು ಮೆಗ್‌ಲೋಯರಳನ್ನು ನೋಡಿ, "ಮೇಡಮ್ ಮೆಗ್‌ಲೋಯರ್! ಇನ್ನೊಬ್ಬರ ಊಟಕ್ಕೆ ಬೇಕಾದ ಸಿದ್ಧತೆಗಳನ್ನು ಮೇಜಿನಲ್ಲಿ ಮಾಡಿಡು," ಅಂದರು.

ಈ ವಿಧದ ಅನಿರೀಕ್ಷಿತ ಆದರವನ್ನೂ ಕರುಣೆಯನ್ನೂ ಅವನಿಗೆ ಪೂರ್ಣ ಅರ್ಥವಾಗದ ಭಾವನೆಗಳನ್ನೂ ಬಿಷಪರಲ್ಲಿ ಕಂಡು, ಮೇಜಿನ ಹತ್ತಿರಕ್ಕೆ ಬಂದು ನಿಂತು, ಇತರ ಕಡೆಗಳಲ್ಲಿ ತನಗೆ ಆಗಿದ್ದ ಆಶಾಭಂಗ, ಅಪಮಾನಗಳಂತೆ ಇಲ್ಲಿಯೂ ಆಗಬಾರದೆಂದು ಮೊದಲೇ ಏರ್ಪಡಿಸಿಕೊಳ್ಳುವುದಕ್ಕಾಗಿ, ಸ್ಪಷ್ಟವಾಗಿ ಪುನಃ ಮಾತಾಡತೊಡಗಿದ, "ನಿಮ್ಮ ಏರ್ಪಾಡು ತಿಳಿಯಿತು. ಮೊದಲು ಅವಸರ ಮಾಡಿ ಅನಂತರ ಮುಖಭಂಗ ಮಾಡದಿರಿ. ನಾನೊಬ್ಬ ಗುಲಾಮ—ಕ್ರಿಮಿನಲ್ ಕೈದಿಯಾಗಿ ಬಂಧನದಲ್ಲಿದ್ದವನು. ದರೋಡೆಗಾಗಿ ಐದು ವರ್ಷ, ಜೈಲಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ನಾಲ್ಕು ಸರ್ತಿಗೆ ಹದಿನಾಲ್ಕು ವರ್ಷ—ಒಟ್ಟಾಗಿ ಹತ್ತೊಂಬತ್ತು ವರ್ಷ—ಜೈಲಿನಲ್ಲಿದ್ದ ಘಾತಕ. ಸರಕಾರ ನನ್ನನ್ನು ಹಾಗೆ ಕರೆದಿದೆ. ಈ ಪತ್ರವನ್ನು ನೋಡಿ. ನನಗೆ ಓದಲು ಬರುತ್ತದೆ—ಜೈಲಿನಲ್ಲಿ ಕಲಿತೆ. ಇದರಲ್ಲಿ 'ಅಪಾಯಕಾರಿ. . .' ಎಂದು ಮೊದಲಾಗಿ ಬರೆದಿದೆ. ಈ ಪತ್ರದ ಬಣ್ಣದಿಂದಲೇ ಲೋಕಕ್ಕೆಲ್ಲ ಗೊತ್ತಾಗಬಹುದು; ನಾನು ಸರ್ವತ್ರ ಬಹಿಷ್ಕರಿಸಲ್ಪಡಬೇಕಾದವನೆಂದು, ಹೀಗೆ ಲೋಕವೇ ನನ್ನನ್ನು ಹೊರದಬ್ಬುವಾಗ ನೀವು ನನ್ನನ್ನು ಒಳಗೆ ಸೇರಿಸಿಕೊಳ್ಳಲು ಮನಸ್ಸಿದೆಯೇ ? ಗ್ರಹಿಸಿ ನೋಡಿ. ನನಗೆ ನಿಮ್ಮಲ್ಲಿ ಊಟ ಸಿಕ್ಕದಿದ್ದರೆ ಮಲಗಲು ಕುದುರೆಲಾಯ ಸಾಕು. ಇದು ಹೊಟೇಲಾದರೆ ಆಲೋಚಿಸಿ ಉತ್ತರಕೊಡಿ. ಒಂದಾವೃತ್ತಿ ಅನುಗ್ರಹಿಸಿದಂತೆ ಮಾಡಿ, ಅನಂತರ ಹಠಾತ್ತನೆ ನಿರಾಕರಿಸಬೇಡಿ," ಎಂದು ದುಃಖದಿಂದಲೂ ದ್ವೇಷದಿಂದಲೂ ಗಡಬಡಿಸಿದ.

"ಗಾಬರಿ ಪಡಬೇಡಿ. ನೀವು ಊಟಮಾಡುತ್ತಿರುವಾಗಲೇ ಮಲಗಲೂ ಏರ್ಪಾಡು ಮಾಡಲಾಗುತ್ತದೆ," ಎಂದು ಧೈರ್ಯ ಹೇಳಿ ಬಿಷಪ್ ಅತಿಥಿಗೆ ಪ್ರಾರ್ಥನಾಮಂದಿರದ ತುದಿಯಲ್ಲಿ ಮಲಗಲು ಹಾಸಿಗೆ ಮಾಡಿಡಬೇಕೆಂದು ಕೆಲಸದವಳ ಹತ್ತಿರ ಹೇಳಿದರು.

ಜೀನ್‌ವಾಲ್‌ಜೀನನ ಆಶ್ಚರ್ಯ ಆನಂದ ಏರುತ್ತ ಹೋದುವು. ಪುನಃ ಹೇಳಿದ, "ನನಗೆ ಹಾಸಿಗೆಯ ಏರ್ಪಾಡು ಮಾಡಿಸುವಿರೇನು? ಹತ್ತೊಂಬತ್ತು ವರ್ಷ ಹಲಗೆಯ ಮೇಲೆ ಮಲಗಿದ ಮೃಗಕ್ಕೆ ಹಾಸಿಗೆಯೇ? ನನ್ನನ್ನು ಏಕವಚನದಿಂದ ಕರೆಯುವ ಬದಲು ಮರ್ಯಾದೆಯಿಂದ 'ನೀವು' ಎಂದು ಕರೆಯುವ ನೀವು ಯಾರು? ನೀವು ಹೊಟೇಲ್ ಮಾಲೀಕರಲ್ಲವೇನು? ಈ ಅನಿರೀಕ್ಷಿತ ಕರುಣೆ ಇಲ್ಲಿ ಹೇಗೆ ಬಂತು?"

"ನಾನೊಬ್ಬ ಧರ್ಮಗುರು," ಅಂದರು ಬಿಷಪ್.

"ಗುರು ? ನೀವು ಎಲ್ಲ ಗುರುಗಳಂತಿಲ್ಲ! ಇಷ್ಟೊಂದು ಕರುಣೆಯೇ! ಧರ್ಮಗುರುಗಳೂ ಕರುಣಾಮಯರಾಗಿರುವರೇನು? ಹಾಗಾದರೆ ನಾನು ಹಣ ಕೊಡುವ ಅಗತ್ಯವಿಲ್ಲವಷ್ಟೆ?" ಎಂದು ಹೇಳಿ ತನ್ನ ದುಡಿತದ ಹಣ ಉಳಿಯುವ ಸಂತೋಷವನ್ನು ಮುಖದಲ್ಲಿ ತೋರಿಸಿದ.

ಊಟದ ಮೇಜಿನ ಬೆಳಕು ಸಾಲದೆಂದು ಬೆಳ್ಳಿಯ ದೀಪಗಳೆರಡನ್ನು ತರಿಸಿ ಹೊತ್ತಿಸಿಟ್ಟರು. ಈ ಬೆಳ್ಳಿ ದೀಪಗಳು ತನಗಾಗಿ ಹೊತ್ತುತ್ತಿದ್ದುದನ್ನು ಕಂಡು ಜೀನ್‌ವಾಲ್‌ಜೀನ್ ಬಲು ಆನಂದ, ಮತ್ತು ಆಶ್ಚರ್ಯಪಟ್ಟ. ಈ ಆನಂದದಿಂದ ಅವನು ಒಮ್ಮೆಗೇ ಹುಚ್ಚನಂತೆಯೂ ಹಸುಳೆಯಂತೆಯೂ ಆಗಿದ್ದ. ಈ ಹುಚ್ಚಿನಿಂದಲೇ ಆವೇಶಭರಿತನಾಗಿ ಪುನಃ ಮಾತಾಡತೊಡಗಿದ, "ಸ್ವಾಮೀ! ನಾನು ಯಾರೆಂದು ತಿಳಿದರೂ ನಿಮ್ಮ ಕರುಣೆ ಕಲ್ಲಾಗಲಿಲ್ಲ! ನನ್ನನ್ನು ನಿಮ್ಮ ಸ್ನೇಹಿತನಂತೆ ಕಂಡಿರಿ. ಈ ಬೆಳ್ಳಿಯ ದೀಪಗಳೂ ನಿಮ್ಮ ಆದರದ ಮಾತುಗಳೂ ಇತರ ಎಲ್ಲ ಪ್ರೀತಿಯ ಏರ್ಪಾಡುಗಳೂ ನಡೆಯುವುದು ನನ್ನ ಭಾಗ್ಯವೇ ಸರಿ. ನನ್ನ ಪರಿಚಯವನ್ನು ನಾನು ಸರಿಯಾಗಿ ಮಾಡಿಕೊಟ್ಟಿರುವೆನಷ್ಟೆ ? ಒಮ್ಮೆ ಗ್ರಹಿಸಿನೋಡಿ."

ಬಿಷಪರ ಬಲಗಡೆ ಜೀನ್‌ವಾಲ್‌ಜೀನ್ ಕುಳಿತ; ಎಡಗಡೆ ಬೇಪ್ಟೆಸ್ಟೈನ್ ಕುಳಿತಳು. ಬಿಷಪ್ ತಾವೇ ಸಾರನ್ನು ಬಡಿಸುತ್ತ ಅಂದಿನ ಅತಿಥಿಸತ್ಕಾರಕ್ಕೆ ಎಡೆಸಿಕ್ಕಿದ್ದ ಆನಂದಪರವಶತೆಯಿಂದ, "ಸರ್, ಊಟ ಪ್ರಾರಂಭಿಸಿ, ನೀವು ಏನೂ ಸಂಕೋಚಪಡಬೇಕಾದ್ದಿಲ್ಲ. ಇದು ಕ್ರೈಸ್ತದೇವನ ಮನೆ—ನನ್ನದಲ್ಲ. ಈ ಬಾಗಿಲುದಾಟಿ ಒಳಗೆ ಬರುವವನ ಹೆಸರು ಖ್ಯಾತಿಗಳನ್ನು ವಿಚಾರಿಸುವ ಸ್ಥಳವಿದಲ್ಲ. ಇಲ್ಲಿಗೆ ಬರುವವರಿಗೆ ದುಃಖವಿದೆಯೇ, ಹಸಿವೆಯಿದೆಯೇ, ಬಾಯಾರಿಕೆಯಾಗಿದೆಯೇ ಎಂಬವೇ ಇಲ್ಲಿ ಕೇಳಲ್ಪಡುವ ಪ್ರಶ್ನೆಗಳು. ನನಗೆ ನೀವು ಋಣಿಗಳಾಗಿರಬೇಕಾದುದೂ ಇಲ್ಲ. ಯಾರಿಗೆ ಸಹಾಯ ಅಗತ್ಯವಿದೆಯೋ ಅಂಥವರಿಗಾಗಿರುವ ಆಶ್ರಯಸ್ಥಾನವಿದು. ಸುಖವಾಗಿರುವ ನನಗೆ ಇಲ್ಲಿರುವ ಆನುಕೂಲ್ಯಗಳ ಮೇಲೆ ಹಕ್ಕಿರುವುದಕ್ಕಿಂತಲೂ ಹೆಚ್ಚು ಹಕ್ಕು ದುಃಖಿತರಾಗಿರುವ ನಿಮಗಿದೆ. ನಿಮ್ಮ ಹೆಸರನ್ನು ನಾನು ಕೇಳುವವನಲ್ಲ, ನೀವು ಹೆಸರನ್ನು ಹೇಳುವ ಮೊದಲೇ ನಿಮಗಿರುವ ಒಂದು ಹೆಸರನ್ನು ನಾನು ಬಲ್ಲೆ," ಅಂದರು.

ಪ್ರಯಾಣಿಕನಿಗೆ ಇದನ್ನು ಕೇಳಿ ಆಶ್ಚರ್ಯವಾಯಿತು. ತನ್ನ ಹೆಸರು ಈ ಗುರುಗಳಿಗೆ ಹೇಗೆ ತಿಳಿಯಿತೆಂದು ಆಶ್ಚರ್ಯಪಡುತ್ತ ಕೇಳಿದ, "ಪ್ರಭೂ ! ನನ್ನ ಹೆಸರನ್ನು ನೀವು ತಿಳಿದಿರುವುದು ನಿಜವೇ?"

"ಹೌದು! ನೀವು ನನ್ನ ಸಹೋದರ. ಸಹೋದರನೆಂದು ಮೊದಲೇ ತಿಳಿಯುವುದರಲ್ಲಿ ಆಶ್ಚರ್ಯವೇನಿದೆ?"

"ನನ್ನ ಹಸಿವು ಬಾಯಾರಿಕೆಗಳೇ ಮಾಯವಾದಂತೆ ತೋರುತ್ತವೆ, ಪ್ರಭೂ! ಆ ನಮ್ಮ ಕೆಂಪಂಗಿ, ಕೈಕೋಳ, ಸರಪಳಿ, ಛೆಟ್ಟು, ಕತ್ತಲೆಕೋಣೆ, ಉಸಿರೆತ್ತಿದರೆ ಹಿಂಸೆ, ನನ್ನ ನಲವತ್ತಾರು ವರ್ಷ ಪ್ರಾಯದಲ್ಲಿ ಹತ್ತೊಂಬತ್ತು ವರ್ಷಗಳ ಕ್ರೂರಕಾರಾಗೃಹವಾಸ, ಕೊನೆಗೆ ಸರಕಾರ ನನಗೆ ಒದಗಿಸಿರುವ ಶಿಫಾರಸುಪತ್ರ—ಈ ಎಲ್ಲ ಅನುಭವಗಳ ಎದುರು ತಮ್ಮ ಈ ಆದರಾತಿಥ್ಯದ ಕುರಿತು ನಾನು ಏನು ಹೇಳಲಿ?. . . . " ಎಂದು ಹೇಳಿ, ಮುಂದೆ ಮಾತು ತೋಚದೆ ಜೀನ್‌ವಾಲ್‌ಜೀನ್ ಅವಾಕ್ಕಾಗಿ ಕುಳಿತ.

ಈ ಮಧ್ಯೆ ಬಿಷಪರು ವಿಶೇಷಪಟ್ಟ ಅತಿಥಿಗಳಿಗೆ ಮಾಡತಕ್ಕ ಸನ್ಮಾನಗಳನ್ನು, ಮೇಜನ್ನು ಅಲಂಕರಿಸುವುದರ ಮೂಲಕವೂ, ವೈನ್‌ಪಾನೀಯವನ್ನು ಅವರೇ ಬಡಿಸುವುದರ ಮೂಲಕವೂ

ಮಾಡಿದರು. ಊಟ ಮುಂದುವರಿಯುತ್ತಿದ್ದ ಹಾಗೆಯೇ ಜೀನ್‌ವಾಲ್‌ಜೀನನ ಕಾರಾಗೃಹವಾಸ ಸಂಬಂಧವಾದ ದುಃಖ ಮತ್ತು ದ್ವೇಷಗಳ ಕುರಿತು ಸ್ವಲ್ಪ ಮೃದುವಾಗಿ ಮಾತಾಡಿದರು. ಅವರೆಂದರು, "ನೀವು ದುಃಖಸಾಗರದಿಂದಲೇ ಇಲ್ಲಿಗೆ ಬಂದಿರುವಿರಿ. ಈ ಲೋಕದಲ್ಲಿ ಮಾಡಿ ಹೋಗಿರುವ ತಪ್ಪುಗಳ ಬಗ್ಗೆ ಪಶ್ಚಾತ್ತಾಪ ಪಡುವವರಿಗೆ ದೇವರು ವಿಪುಲ ಆನಂದವನ್ನು ಸ್ವರ್ಗಲೋಕದಲ್ಲಿ ಕೊಡುವನು. ಪಶ್ಚಾತ್ತಾಪಪಡತಕ್ಕ ಕಾರ್ಯವೆಸಗದ ನೂರುಜನ ಧರ್ಮ ನಿರತರ ಮೇಲೆ ಇರುವ ಗಮನಕ್ಕಿಂತಲೂ ಹೆಚ್ಚಿನ ಗಮನವನ್ನು ದೇವರು ಪಶ್ಚಾತ್ತಾಪ ಪಡುವ ಒಬ್ಬ ಪಾಪಿಯ ಮೇಲಿಡುವನು. ನಿಮ್ಮ ದುಃಖಕ್ಕೆ ಕಾರಣರಾದವರ ಕುರಿತು ನಿಮಗೆ ದ್ವೇಷವಿದ್ದರೆ ನಿಮ್ಮನ್ನು ಕುರಿತು ಕನಿಕರಪಡಬೇಕು. ಅದರ ಬದಲು ಅವರ ಬಗೆಗೂ ನೀವು ಹಿತವನ್ನು ಬಯಸು ವವರಾದರೆ ನೀವು ಪರಮ ಪಾವನರೇ ಆಗುವಿರಿ."

೪. ಬಾ! ಇಲ್ಲಿದೆ ನಿನ್ನ ಊಟ!

ಅತಿಥಿಯೊಂದಿಗೆ ಬಿಷಪ್ ಊಟ ಮಾಡಿದ ಕಥೆಯನ್ನು ಅವರ ತಂಗಿ ತನ್ನ ಸ್ನೇಹಿತೆಯೊಬ್ಬ ಳಿಗೆ ಬರೆದು ತಿಳಿಸಿರುವಳು. ನಾವು ಆ ಪತ್ರದ ಭಾಗವನ್ನೇ ಇಲ್ಲಿ ಕೊಡುವುದು ಉತ್ತಮವೆಂದು ತೋರುತ್ತದೆ. ಏಕೆಂದರೆ, ಅವರು ಪ್ರತ್ಯಕ್ಷ ಕಂಡು ಬರೆದಷ್ಟು ಪರಿಷ್ಕಾರವಾಗಿ ನಾವು ಓದುಗರಿಗೆ ತಿಳಿಸಲಾರೆವು.

ಈ ಆತಿಥ್ಯದ ಕುರಿತಾದ ಭಾಗ ಪತ್ರದಲ್ಲಿ ಹೀಗಿತ್ತು :

". . . ಪ್ರಯಾಣಿಕನಿಗೆ ಹಸಿವೆ ಬಹಳವಾಗಿರಬೇಕು. ಅವನು ತುಂಬ ಊಟಮಾಡಿದ. ಅವನ ಊಟದ ಕ್ರಮ ಸಾಧಾರಣವಾಗಿ ಮೃಗ ಅದರ ಕವಳ ನುಂಗಿದಂತೆ ಇತ್ತು. ಊಟ ಮುಗಿಯುವ ಮೊದಲು ಅವನು ಏನೂ ಮಾತಾಡಲಿಲ್ಲ. ಊಟ ಮುಗಿದನಂತರ ಅಣ್ಣನನ್ನು ಕುರಿತು, 'ಸ್ವಾಮೀ! ನೀವು ಕೊಟ್ಟ ಊಟ ಚೆನ್ನಾಗಿತ್ತು. ಆದರೂ ಆ ಹೊಟೇಲುಗಳ ಊಟದಷ್ಟು ದೊಡ್ಡ ಸ್ಥಿತಿಯದು ಇದಲ್ಲವೆಂದು ತೋರುತ್ತದೆ. ನಿಮ್ಮದು ಬಡತನದ ಊಟವಾಗಿರಬೇಕು. ನಿಮ್ಮ ಒಳ್ಳೆಯ ಗುಣ ನೋಡುವಾಗ ನೀವು ಹೆಚ್ಚಿನ ಉತ್ಪತ್ತಿಯುಳ್ಳ ಸ್ಥಾನದಲ್ಲಿರಬೇಕಿತ್ತು' ಎಂದ. 'ದೇವರು ನನಗೆ ತಕ್ಕಷ್ಟು ಕೊಟ್ಟಿದ್ದಾನೆ. ನಾನು ಇರುವ ಸ್ಥಿತಿಯಲ್ಲೇ ತೃಪ್ತನಾಗಿದ್ದೇನೆ,' ಎಂದು ಅಣ್ಣ ಉತ್ತರ ಕೊಟ್ಟ. ಅನಂತರ ಸ್ವಲ್ಪ ಹೊತ್ತು ಸುಮ್ಮನಿದ್ದು ಮರ್ಯಾದೆಗೋಸ್ಕರ ಒಬ್ಬರು ಇನ್ನೊಬ್ಬರಲ್ಲಿ ಮಾತಾಡುವಂತೆ, ಪ್ರಯಾಣಿಕನನ್ನು ಉದ್ದೇಶಿಸಿ ಅಣ್ಣ ಹೇಳಿದ, 'ನೋಡಿ, ನೀವು ಪಾಂಟರ್ಲೀ ಯರಿಗೆ ಹೋಗಬೇಕೆಂದು ಹೇಳಿದ್ದಿರಷ್ಟೆ. ಆ ಸ್ಥಳದ ಪರಿಚಯ ನನಗೂ ಇದೆ. ಅಲ್ಲಿಯ ಕೈಗಾರಿಕೆಗಳಲ್ಲಿ ಮುಖ್ಯವಾದುದು ಮೊಸರನ್ನು ಗಟ್ಟಿಮಾಡಿ ಚೀಸ್ ತಯಾರಿಸುವುದು. ಇದರಲ್ಲೂ ಬಡವರ ಕೈಗಾರಿಕೆ ಒಂದು ಕ್ರಮದ್ದು, ತುಂಬ ಬಂಡವಾಳ ಉಳ್ಳವರದು ಮತ್ತೊಂದು ಕ್ರಮದ್ದು. ಹಾಲುಕೊಡುವ ದನಗಳ ಸಂಖ್ಯೆಗೆ ತಕ್ಕಂತೆ ಈ ಕ್ರಮಗಳನ್ನು ಅನುಸರಿಸಬೇಕು. ಕೆಲಸ ಮಾಡುವ ಮನಸ್ಸಿದ್ದವನಿಗೆ ಎರಡರಲ್ಲೂ ಒಳ್ಳೆ ಸಂಬಳ ಸಿಕ್ಕುವ ಕೆಲಸ ಅಲ್ಲಿ ತುಂಬ ಇದೆ.' ಅಣ್ಣ ಇನ್ನೂ ಅನೇಕ ಇತರ ಕೈಗಾರಿಕೆ ಮತ್ತು ವೃತ್ತಿಗಳ ಕುರಿತು ಮಾತಾಡಿದ. ಸ್ವಾವಲಂಬನ, ವೃತ್ತಿಗೌರವ, ಮತ್ತು ಈ ತೆರನಾದ ಬೋಧಪ್ರದ ವಿಷಯಗಳನ್ನು ಮಾತ್ರ ಅಣ್ಣ ಪ್ರಸ್ತಾವಿಸಿರುವನು. ಅತಿಥಿಯ ಜೀವನ ವೃತ್ತಾಂತವನ್ನಾಗಲೀ ಕುಟುಂಬದ ಪರಿಚಯವನ್ನಾಗಲೀ ವಿಚಾರಿಸಲಿಲ್ಲ. ಮುಖ್ಯವಾಗಿ, ಬಂದಿದ್ದವನು ಏನಾದರೊಂದು ಕಸಬಿನಲ್ಲಿ ಪ್ರವೃತ್ತನಾಗುವಂತೆ, ವಿನಯದಿಂದ ಬೋಧಿಸಿದಂತೆ

ಮಾತಾಡಿದ."

ಮತ್ತೂ, ಪತ್ರದಲ್ಲಿ ಹೀಗಿತ್ತು, ". . . ಅಣ್ಣ ವೈನ್ ಕುಡಿಯುವುದು ಬಲು ಕಡಿಮೆಯಾದರೂ ಅತಿಥಿಗೆ ತುಂಬ ವೈನ್ ಕೊಟ್ಟ—ಅದರಲ್ಲೂ ವಿಶೇಷಪಟ್ಟ ಅತಿಥಿಗಳಿಗೆ ಕೊಡುವಂಥ ಉತ್ತಮ ತರದ ವೈನನ್ನೇ ಅವನಿಗೆ ಕೊಟ್ಟ. ವೈನ್ ಕುಡಿದಾದನಂತರ ಅತಿಥಿಯನ್ನು ಕರೆದುಕೊಂಡು ಹೋಗಿ ಅತಿಥಿ ಮಲಗುನ ಸ್ಥಳವನ್ನೂ ತೋರಿಸಿಕೊಟ್ಟ."

೫. ನಿಶ್ಚಿಂತನಾಗಬೇಕಂತೀ!

ಪೂಜಾವಿಭಾಗಕ್ಕೆ ಹೋಗಬೇಕಾದರೆ ಬಿಷಪರ ಶಯ್ಯಾಗೃಹ ದಾಟಿಹೋಗಬೇಕೆಂಬುದನ್ನೂ ಪೂಜಾಗೃಹದ ಒಂದಂಶ ಅತಿಥಿಗಳು ಮಲಗುವುದಕ್ಕೆ ಪರದೆಯಿಂದ ಪ್ರತ್ಯೇಕಿಸಲ್ಪಟ್ಟಿತ್ತೆಂಬುದನ್ನೂ ಈ ಮೊದಲೇ ಪ್ರಸ್ತಾವಿಸಿರುವೆವಷ್ಟೆ.

ಭೋಜನಶಾಲೆಯಲ್ಲಿ ಉರಿಯುತ್ತಿದ್ದ ದೀಪಗಳ ಪೈಕಿ ಒಂದನ್ನು ಅತಿಥಿಗೆ ಕೊಟ್ಟು ಮತ್ತೊಂದನ್ನು ತಾನು ಹಿಡಿದುಕೊಂಡು ಬಿಷಪ್ ಅತಿಥಿಯನ್ನು ತಮ್ಮ ಶಯ್ಯಾಗೃಹದ ಮೂಲಕ ಆತ ಮಲಗುವ ಕೋಣೆಗೆ ಕರೆದುಕೊಂಡು ಹೋದರು. ಇವರಿಬ್ಬರೂ ಶಯ್ಯಾಗೃಹ ದಾಟುತ್ತಿದ್ದಾಗ ಮೆಗ್‌ಲೋಯರ್ ಬೆಳ್ಳಿತಟ್ಟೆ, ಬಟ್ಟಲು, ಚಮಚ ಮೊದಲಾದವನ್ನು ಬಿಷಪರ ಮಂಚದ ತಲೆ ಮೇಲ್ಗಡೆಯ ಕಪಾಟಿನಲ್ಲಿ ದಿನವಹಿಯ ಕ್ರಮದಂತೆ ಇಡುತ್ತಿದ್ದಳು.

ಅತಿಥಿ ಮಲಗಲು ಶುಭ್ರವಾದ ಬಿಳಿ ವಸ್ತ್ರ ಹಾಸಿದ್ದ ಹಾಸಿಗೆ ತಯಾರಾಗಿತ್ತು. ತುಂಬ ಕ್ರಯವಿದ್ದ ಮತ್ತು ವಿಶೇಷಪಟ್ಟವರು ಬಂದಾಗ ಅವರಿಗೆ ಹೊದೆಯಲು ಕೊಡುತ್ತಿದ್ದ ಚರ್ಮದ ಹೊದಿಕೆಯನ್ನೂ ಹಾಸಿಗೆಯ ಮೇಲೆ ಇಟ್ಟಿದ್ದರು.

ಬಿಷಪ್ ಅಲ್ಲಿಂದ ಹೊರಡುವ ಮೊದಲು ಅತಿಥಿಯ ಹತ್ತಿರ, "ನೋಡಿ, ನಾಳೆ ಬೆಳಗ್ಗೆ ಒಂದು ಲೋಟ ಹಾಲು ಕುಡಿದು ನೀವು ಹೋಗಬಹುದು; ನೀವು ಎಷ್ಟು ಬೇಗ ಎದ್ದರೂ ನಮ್ಮಲ್ಲಿ ಹಾಲು ತಯಾರಾಗಿರುತ್ತದೆ. ಸುಖವಾಗಿ ನಿದ್ರಿಸಿ," ಎಂದು ಬಲು ಪರಿಚಿತರಂತೆ ಹೇಳಿದರು.

ಅತಿಥಿ ತನ್ನ ಕೈಯಲ್ಲಿದ್ದ ದೀಪಸ್ತಂಭವನ್ನು ಮೇಜಿನ ಮೇಲಿಟ್ಟು, ತನಗೆ ಕೊಡಲಾಗಿದ್ದ ಹಾಸಿಗೆ ನೋಡಿದ. ಹಾಗೆ ನೋಡಿ ಬಿಷಪರನ್ನು ನೋಡುವಾಗ್ಗೆ ಅವನ ಮುಖದಲ್ಲಿ ಒಂದು ವಿಧದ ಜ್ವಾಲೆ ಉರಿಯುತ್ತಿದ್ದಂತೆ ತೋರಿತು—ಅಂದರೆ, ಅವನ ಮುಖ ಮೊದಲಿದ್ದಂತೆ ಶಾಂತವಾಗಿರಲಿಲ್ಲ. ಬಿಷಪರ ಉಪಚಾರಗಳೆಲ್ಲ ಅಸ್ವಾಭಾವಿಕ, ವ್ಯಂಗ್ಯ, ಅಪಹಾಸ್ಯಕರ ಎಂಬುದಾಗಿ ಅವನು ಗ್ರಹಿಸಿ ಹಾಗೆ ಕೋಪಿಸಿಕೊಂಡಿರಬೇಕೆಂದು ತೋರುತ್ತದೆ. ಅಥವಾ, ಸಂಸ್ಕಾರ ಹೊಂದದಿದ್ದ ಅವನ ಕ್ರೂರ ಮನಸ್ಸು ಬಿಷಪರ ಸಾತ್ತ್ವಿಕ ಗುಣದಲ್ಲಿ ಸಿಕ್ಕಿ, ಸೆಣಸಾಡಿ, ತನ್ನ ದುಷ್ಟತೆಯಿಂದಲೇ ಪ್ರಕ್ಷುಬ್ಧವಾಗಿ ಹಾಗೆ ತೋರಿಸಿಕೊಂಡಿರಲೂ ಬಹುದು. ಅಂತೂ ಅವನು ನಿಂತಿದ್ದ ಹಾಗೆಯೇ ರಾಕ್ಷಸನಂತೆ ತೋರ ತೊಡಗಿದ. ಬಿಷಪರನ್ನು ಅವನು ನೋಡಿ, ಗಟ್ಟಿ ಸ್ವರದಿಂದಲೇ, "ನಿಮ್ಮ ಆತಿಥ್ಯಕ್ಕಾಗಿ ವಂದನೆ. ಆದರೆ, ನಾನು ಯಾರೆಂದು ನೀವು ಪೂರ್ಣ ಗ್ರಹಿಸಿರುವಿರೇನು? ನಿಮ್ಮ ಇಷ್ಟೊಂದು ಸಮೀಪದಲ್ಲಿ ನನ್ನನ್ನು ಮಲಗಗೊಡಿಸುವುದರ ಪೂರ್ವಾಪರ ಪರಿಣಾಮ ಏನಿರಬಹುದೆಂದು ಊಹಿಸಿರುವಿರೇನು? ನಾನೊಬ್ಬ ನರಹತ್ಯಾಕಾರಿಯಾಗಿರ ಬಾರದೇಕೆ?" ಎಂದ.

ಅದಕ್ಕೆ ಬಿಷಪ್ ನಸುನಕ್ಕು, ಮತ್ತೆ ಗಂಭೀರಭಾವ ತಾಳಿ, "ಅದನ್ನೆಲ್ಲ ಗ್ರಹಿಸುವವನು ದೇವರು," ಎಂದು ಮಾತ್ರ ಹೇಳಿ, ಅತಿಥಿ ಮಲಗುವ ಭಾಗದ ಪರದೆ ಎಳೆದುಕೊಂಡು ಪೂಜಾ

ಗೃಹಕ್ಕೆ ಹೋದರು. ಅಲ್ಲಿ ಸ್ವಲ್ಪ ಹೊತ್ತು ಧ್ಯಾನದಲ್ಲಿದ್ದು, ಹೂವಿನ ತೋಟಕ್ಕೆ ಹೋಗಿ ದೈವ ಚಿಂತನೆಯಲ್ಲಿ ಅತ್ತಿತ್ತ ತಿರುಗಾಡುತ್ತ ಇದ್ದರು.

ಈ ಪ್ರಯಾಣಿಕ, ಕೈದಿಗಳು ಮಾತ್ರ ದೀಪ ನಂದಿಸುವ ಕ್ರಮದಲ್ಲಿ, ತನ್ನ ಮೂಗಿನ ನಿಶ್ವಾಸದಿಂದ ಅದನ್ನು ನಂದಿಸಿ, ಹೊದಿಕೆ ಹೊದೆಯದೆ ಹಾಸಿಗೆಯ ಮೇಲೆ ಮಲಗಿದ; ಮತ್ತು ಮಲಗಿದ ಕೂಡಲೇ ನಿದ್ರಿಸಿದ.

ಪಾರಮಾರ್ಥಿಗಳಿಗೆ ದೈವಲೀಲೆಯಾಗಿ ಶೋಭಿಸುವ ಕೋಟ್ಯನುಕೋಟಿ ನಕ್ಷತ್ರಗಳ ಬೆಳಕಿನಲ್ಲಿ ಬಿಷಪ್ ತಿರುಗಾಡುತ್ತ ರಾತ್ರಿಯ ಶಾಂತಿಯಿಂದ ದೈವಸಾನ್ನಿಧ್ಯದಲ್ಲೇ ತಾವಿರುವುದಾಗಿ ತಿಳಿದು ಆನಂದಿಸುತ್ತ, ಬಹಳ ಹೊತ್ತು ಹೂದೋಟದಲ್ಲಿದ್ದು ಅನಂತರ ಹೋಗಿ ತಮ್ಮ ಕೊಠಡಿಯಲ್ಲಿ ಪವಡಿಸಿದರು.

೬. ಕುರುಡು ಕಾನೂನು ಕೆಡೆದ ಬರಡು ಬಾಳು

ಜೀನ್‌ವಾಲ್‌ಜೀನನ ಹುಟ್ಟೂರು ಲಾ ಬ್ರಿ. ಅವನು ವಿದ್ಯೆ ಕಲಿತಿರಲಿಲ್ಲ. ಚಿಕ್ಕಂದಿನಲ್ಲೇ ಅವನ ತಂದೆತಾಯಿಗಳಿಬ್ಬರೂ ತೀರಿಹೋಗಿದ್ದುದರಿಂದ ಅವನನ್ನು ಅವನ ಅಕ್ಕ ಸಾಕಿದಳು. ಅಕ್ಕನ ಹಿರೇ ಮಗನಿಗೆ ಎಂಟು ವರ್ಷ ಪ್ರಾಯವೂ ಕಿರಿಯವನಿಗೆ ಒಂದು ವರ್ಷ ಪ್ರಾಯವೂ ಆಗುವಾಗ ಅವಳ ಗಂಡ ತೀರಿಹೋಗಿ ಆಕೆ ಮತ್ತು ಆಕೆಯ ಏಳು ಮಕ್ಕಳನ್ನು ಸಾಕುವ ಭಾರ ಜೀನ್‌ವಾಲ್ ಜೀನನ ಮೇಲೆ ಬಿತ್ತು. ಇವನಿಗೆ ಗೊತ್ತಿದ್ದ ವೃತ್ತಿ ಅಂದರೆ ಮರ ಕಡಿಯುವುದು ಮಾತ್ರ. ಈ ವೃತ್ತಿಯಿಂದ ತನ್ನ ಕುಟುಂಬ ಪೋಷಣೆಯನ್ನು ಬಹು ಕಷ್ಟದಿಂದ ಮಾಡಿಬರುತ್ತಿದ್ದ. ದಿನಕ್ಕೆ ಎರಡೂಟ ಮಾತ್ರ ಮಾಡುತ್ತಿದ್ದ. ಅದರಲ್ಲೇ, ಕೆಲವು ವೇಳೆ, ಅಕ್ಕನ ಮಕ್ಕಳೂ ಪಾಲಿಗೆ ಬರುವುದಿತ್ತು. ದಿನವಿಡೀ ಮೈಮುರಿದು ದುಡಿದು ಬಂದು ತಲೆ ಕೆಳಗೆ ಹಾಕಿಕೊಂಡು ಊಟ ಮಾಡುತ್ತಿದ್ದಾಗ ಅಕ್ಕನೇ ತನ್ನ ಮಕ್ಕಳಿಗಾಗಿ ಅವನ ಬಟ್ಟಲಿಂದ ಆಹಾರಪದಾರ್ಥಗಳನ್ನು ಕದ್ದರೂ ತಾನು ಕಾಣದವನಂತೆಯೇ ಇದ್ದು ಅವನು ತನ್ನ ಊಟ ಪೂರೈಸುವುದೂ ಇತ್ತು. ಮನೆಯಲ್ಲಿ ಹಾಲಿಲ್ಲದೆ, ಹೊಟ್ಟೆಗೂ ಏನೂ ಇಲ್ಲದಿದ್ದ ಮಕ್ಕಳು ಕೆಲವು ವೇಳೆ ತಾಯಿ ಹೇಳಿ ಕಳುಹಿಸಿದಳೆಂದು ನೆರೆಕರೆಯವರಲ್ಲಿ ಸುಳ್ಳು ಹೇಳಿ ಹಾಲನ್ನು ಸಾಲ ತಂದು, ತಾವು ಜಗಳವಾಡಿ ದಾರಿಯಲ್ಲೇ ಹಾಲು ಕುಡಿದಾಗಲೆಲ್ಲ ಜೀನ್‌ವಾಲ್‌ಜೀನ್, ಅಕ್ಕನ ಕೋಪಕ್ಕೆ ಮಕ್ಕಳನ್ನು ಗುರಿಮಾಡದೆ, ತಾನು ಗುಟ್ಟಾಗಿ ಹಾಲಿನ ಕ್ರಯವನ್ನು ಸಲಾಯಿಸಿಬಿಡುತ್ತಿದ್ದ. ತನ್ನ ಈ ಸಂಸಾರದ ಮೇಲೆ ಅವನಿಗೆ ಅಷ್ಟೊಂದು ಮಮತೆ.

ಒಂದು ಚಳಿಗಾಲದಲ್ಲಿ ಮನೆಯವರಿಗೆ ಯಾರಿಗೂ ಏನೂ ಊಟಕ್ಕಿಲ್ಲದೆ, ಮಕ್ಕಳು ರೋದಿಸುತ್ತಿದ್ದುದನ್ನು ಕೇಳಿ, ನಿರ್ವಾಹವಿಲ್ಲದೆ ಜೀನ್‌ವಾಲ್‌ಜೀನ್ ಯಾವುದೋ ರೊಟ್ಟಿಯಂಗಡಿಯ ಗಾಜಿನ ಪಡಿ ಒಡೆದು ತುಂಡು ಬ್ರೆಡ್ಡನ್ನು ಕದ್ದ. ಆದರೆ ಹಾಗೆ ಕದ್ದದ್ದನ್ನು ದಕ್ಕಿಸಲಾರದೆ ರಕ್ತ ಸುರಿಯುತ್ತಿದ್ದ ತನ್ನ ಕೈ ತೊಳೆಯುವ ಮೊದಲೇ ಬ್ರೆಡ್ ಸಮೇತ, ಪೊಲೀಸರಿಂದ ಹಿಡಿಯಲ್ಪಟ್ಟ. 'ವಾಸವಿರುವ ಮನೆಯಿಂದ ಹೇಸದೆ ಜರಗಿಸಿದ ದರೋಡೆ' ಎಂದು ಹೆಸರುಗೊಡಲಾಗಿದ್ದ ಕ್ರಿಮಿನಲ್ ತಕ್ಷೀರಿನಲ್ಲಿ ಅವನಿಗೆ ಐದು ವರ್ಷ ಕಠಿಣ ಸಜೆ ವಿಧಿಸಿದರು. ನಿರ್ಜೀವ ಬಿರುಗಾಳಿ ಹಡಗನ್ನು ನಾಶಮಾಡುವಂತೆ, ಅನೇಕ ಸಂದರ್ಭಗಳಲ್ಲಿ ನಿರ್ಜೀವ ಕಾನೂನುಗಳು ಮನಸ್ಸು, ಬುದ್ಧಿಯುಳ್ಳ ಚೇತನಯುತ ಸಂಸಾರಗಳನ್ನೇ ನಾಶಮಾಡಿ ಬಿಡುತ್ತವೆ. ಕುರುಡು ಕಾನೂನು ಜೀನ್

ವಾಲ್‌ಜೀನನ ಸಂಸಾರವನ್ನು ನಾಶಮಾಡುತ್ತ, ಅವನನ್ನು ಗ್ಯಾಲೀ ಗುಲಾಮನಾಗಿ ಮಾಡಿತು. ಮಾಂಟೆನೋಟ್ ಯುದ್ಧದಲ್ಲಿ ಫ್ರೆಂಚರಿಗೆ ಆದ ಜಯಕ್ಕಾಗಿ ಜನಾಂಗವೇ ಸಂತೋಷಪಡುತ್ತ ನಗರಗಳಲ್ಲಿ ಮೆರವಣಿಗೆ ಹೋಗುತ್ತಿದ್ದಾಗಲೇ ಜೀನ್‌ವಾಲ್‌ಜೀನನ ಕುತ್ತಿಗೆಗೆ ಕಬ್ಬಿಣದ ಕವಚ ತೊಡಿಸಿದರು. ಅವನನ್ನು ಸ್ವಲ್ಪ ಎತ್ತರದಲ್ಲಿ ಕುಳ್ಳಿರಿಸಿ, ಕವಚದ ಹಿಂಬದಿಗೆ ಮೊಳೆಗಳನ್ನು ಬಿಗಿದು ಭದ್ರಪಡಿಸುತ್ತಿದ್ದಾಗಲೇ ಅವನು, ಕಣ್ಣಿನಿಂದ ಅಶ್ರುಧಾರೆ ಸುರಿಸುತ್ತ, ತನ್ನ ಬಲಗೈಯನ್ನು ಏಳು ಸಲ ಮೇಲೆತ್ತಿ, ಮಕ್ಕಳ ತಲೆ ಸವರಿದಂತೆ ಮಾಡಿದ್ದನ್ನು ಕಂಡವರಿದ್ದಾರೆ.

ಟೌಲನ್ನಿನಲ್ಲಿ ಅವನ ಹೆಸರೇ ನಾಶವಾಯಿತು. ಅಲ್ಲಿಯ ಜೈಲಿನಲ್ಲಿ ಅವನನ್ನು ನಂಬರ್ ೨೪೬೦೧ ಎಂದು ಕರೆಯಲಾರಂಭಿಸಿದರು. ಕೆಂಪಂಗಿ ತೊಡಿಸಿದರು. ಸರಪಣಿಗಳನ್ನು ಬಿಗಿದರು. ಕೈದಿಗಳದೇ ಆಗಿದ್ದ ದೊಡ್ಡ ಸರಪಣಿಯಲ್ಲಿ ಅವನೊಂದು ಕೊಂಡಿಯಾಗಿ ಬಿಟ್ಟ. ಅವನ ಅಕ್ಕ ಏನಾದಳು? ಅವಳ ಮಕ್ಕಳೇನಾದರು? ಎಂದು ಯಾರಾದರೂ ವಿಚಾರಿಸಿದರೇ? ವಿಚಾರಿಸುವವರು ತಾನೇ ಯಾರು? ಮರಕಡಿದ ಮೇಲೆ ಮರದ ಚಿಗುರನ್ನು ಗಣಿಸುವುದಿದೆಯೇ? ಉಂಟುಮಾಡಿದ ದೇವರೇ ಆ ಮಕ್ಕಳನ್ನು ಉಂಡು ಜೀರ್ಣಿಸಿರಬೇಕು. ಅವರು ಬಂಧುಬಾಂಧವರಿಂದ ಬೇರ್ಪಟ್ಟು ಒಬ್ಬೊಬ್ಬರೇ ಆಗಿ, ಮಣ್ಣಲ್ಲೋ ಹಿಮದಲ್ಲೋ ಮಲಗಿ ಮೃತಿ ಹೊಂದಿರಬೇಕು. ಕಡೇ ಮಗುವಿನ ಕತೆ ಮಾತ್ರ ಜೀನ್‌ವಾಲ್‌ಜೀನನ ಕಿವಿಗೆ ಯಾರೋ ತಲಪಿಸಿದ್ದರು. ಆ ಚಿಕ್ಕ ಮಗು ತನ್ನ ತಾಯಿ ಪ್ರಿಂಟಿಂಗ್ ಪ್ರೆಸ್ಸಿನ ಒಳಗೆ ದಿನವಿಡೀ ಕೆಲಸ ಮಾಡುತ್ತಿದ್ದಾಗ ಹೊರಗಡೆ ಚಳಿಯಲ್ಲಿ, ಬೆಚ್ಚಗಾಗ ಲೆಂದು ಒಂದು ಬೆಕ್ಕನ್ನು ತಬ್ಬಿಕೊಂಡು, ಅರೆಜೀವದಿಂದ ಕುಳಿತಿದ್ದುದನ್ನು ನೋಡಿದವರಿದ್ದಾರೆ. ಇಷ್ಟು ಸುದ್ದಿ ಮಾತ್ರ ಜೀನ್‌ವಾಲ್‌ಜೀನ್ ಒಮ್ಮೆ ಕೇಳಿದ್ದ. ಮತ್ತೆ ಆ ತಾಯಿ, ಆ ಮಗುವೂ ಮೃತಪಟ್ಟಿರಬೇಕು.

ತಾನು ಇತರರಂತೆ ಬದುಕಬೇಕೆಂಬ ಆಸೆ, ಜೈಲಿನ ಹೊರಗಡೆ ತಮ್ಮವರು ಇರಬೇಕೆಂಬ ಊಹೆ, ಜೈಲಿನೊಳಗಿನ ಹಿಂಸೆ ಇವೆಲ್ಲ ಅವನನ್ನು ಜೈಲಿನಿಂದ ತಪ್ಪಿಸಿ ಓಡಲು ಪ್ರೇರೇಪಿಸಿದುವು. ಆದರೆ ಇಂಥ ಪ್ರಯತ್ನದಲ್ಲಿ ಪ್ರತಿ ತಪ್ಪಿಗೂ ಶಿಕ್ಷೆ ಪಡೆಯುತ್ತ ಒಟ್ಟಿನಿಂದ ಅವನು ೧೯ ವರ್ಷ ಕಾರಾಗೃಹವಾಸ ಅನುಭವಿಸಿದ್ದ.

ಈ ವಿಧದ ಕಾರಾಗೃಹವಾಸದಿಂದ ಜೀನ್‌ವಾಲ್‌ಜೀನ್ ಅರ್ಧ ಮನುಷ್ಯ ಅರ್ಧ ರಾಕ್ಷಸನೂ ಆಗಿದ್ದ. ತಾನು ಅನುಭವಿಸಿದ ದುಃಖಗಳ ಬಗ್ಗೆ ಏನಾದರೊಂದು ಕ್ರೂರಕೃತ್ಯವನ್ನು ಹಠಾತ್ತನೆ ಮಾಡಿಬಿಡಬೇಕೆಂದು ಅವನಿಗೆ ಒಮ್ಮೊಮ್ಮೆ ತೋರುತ್ತಿತ್ತು. ಕೆಲವೊಮ್ಮೆ, ಕ್ರಮಪ್ರಕಾರವಾಗಿ ಸಾಧಿಸಿ, ಸಮಾಜವನ್ನೇ ಹಿಂಸಿಸಬೇಕೆಂದೂ ಅನ್ನಿಸುತ್ತಿತ್ತು. ಸಮಾಜದಲ್ಲೂ ಸರಕಾರದಲ್ಲೂ ಒಳ್ಳೆಯ ಗುಣಗಳೇ ಇಲ್ಲವೆಂದು ಅವನು ನಂಬಿದ್ದ. ಶಿಶುಗಳನ್ನು, ಭೀರುಗಳನ್ನು, ನ್ಯಾಯವಂತ ರನ್ನು—ತಾರತಮ್ಯ ನೋಡದೆ—ಎಲ್ಲರನ್ನೂ ನಾಶಮಾಡುವ ಕಾಂಕ್ಷೆ ಅವನಿಗೆ ಇತ್ತು. ಅವನ ಸ್ವಭಾವವನ್ನು ಸರಕಾರವೂ ತಿಳಿದಿತ್ತಾದ್ದರಿಂದಲೇ ಅವನಿಗೆ ಕೊಡಲಾಗಿದ್ದ ಸರ್ಟಿಫಿಕೇಟಿನಲ್ಲಿ ಅವನು ಹಿಂಸಾಬುದ್ಧಿಯುಳ್ಳವ, ಅಪಾಯಕಾರಿ ಎಂದು ಮೊದಲಾಗಿ ಬರೆಯಲಾಗಿತ್ತು. ತುರಂಗ ಪ್ರವೇಶದ ಪ್ರಾರಂಭದಲ್ಲಿ ಅವನು ತನ್ನಕ್ಕನ ಮಕ್ಕಳನ್ನು ನೆನೆದು ಕಣ್ಣೀರು ಸುರಿಸಿದನಂತರ ಹತ್ತೊಂಬತ್ತು ವರ್ಷಗಳಲ್ಲಿ ಅವನ ಕಣ್ಣಿನಿಂದ ಒಂದು ಬೊಟ್ಟು ಕಣ್ಣೀರು ಕೂಡ ಸುರಿದಿರ ಲಿಲ್ಲ—ಜೈಲುವಾಸದಿಂದ ಅವನ ಹೃದಯವೇ ಬತ್ತಿಹೋಗಿತ್ತು.

೭. ಬೆಂಬತ್ತಿದ ಬೇತಾಳ

ಹತ್ತೊಂಬತ್ತು ವರ್ಷಗಳು ಕಳೆದನಂತರ "ನಿನ್ನನ್ನು ಬಿಡಲಾಗಿದೆ" ಎಂದು ಜೈಲಿನ ಅಧಿಕಾರಿಗಳು ಹೇಳಿದಾಗ ಜೀನ್‌ವಾಲ್‌ಜೀನನಿಗೆ ಆಶ್ಚರ್ಯವಾಯಿತು. ಹೊಸ ಬೆಳಕು ನೋಡುತ್ತ ಹೊಸ ಜೀವನ ನಡೆಸುವ ಅನುಕೂಲ ಒದಗಿದ್ದಕ್ಕಾಗಿ ಅವನು ಒಮ್ಮೆ ಸಂತೋಷಿಸಿದರೂ ಹಳದಿ ಸರ್ಟಿಫಿಕೇಟಿನ ಪರಿಣಾಮವೇನೆಂದು ತಿಳಿದ ಮೇಲೆ ಉತ್ಸಾಹಹೀನನಾದ. ಜೈಲಿನಲ್ಲಿ ತನ್ನ ದುಡಿತಕ್ಕೆ ೧೭೧ ಫ್ರ್ಯಾಂಕ್ ಸಂಬಳ ಸಿಕ್ಕಬೇಕೆಂದು ಅವನು ಲೆಕ್ಕ ಹಾಕಿಕೊಂಡಿದ್ದರೂ ಅವನನ್ನು ಬಿಡುವಾಗ ಸರಕಾರ ೧೦೯ ಫ್ರ್ಯಾಂಕ್ ಮತ್ತು ೧೫ ಸೌಗಳನ್ನು ಕೊಟ್ಟಿತ್ತು. ರಜಾದಿನಗಳ ಬಗ್ಗೆ ಕಾನೂನು ಪ್ರಕಾರವೇ ಆಗಿದ್ದ, ನ್ಯಾಯವಾದ ಕಡಿತದಿಂದ ಅವನಿಗೆ ಸಂಬಳ ಕಡಿಮೆ ದೊರೆತದ್ದೆಂದು ತಿಳಿಯುವಷ್ಟು ಬುದ್ಧಿ ಅವನಿಗಿರಲಿಲ್ಲ. ಸಮಾಜದ ಅಂಥ ನ್ಯಾಯ, ಧರ್ಮ, ಕ್ರಮಗಳೇ ತನ್ನ ಕಾರಾಗೃಹವಾಸಕ್ಕೆ ಕಾರಣವೆಂದು ಅವನ ಅಭಿಪ್ರಾಯವಿದ್ದುದರ ಜೊತೆಗೆ, ಸರಕಾರ ಜೈಲಿನಲ್ಲೂ ತನ್ನನ್ನು ವಂಚಿಸಿತೆಂದು ಗ್ರಹಿಸಿಕೊಂಡ.

ಈತ ಜೈಲಿನಿಂದ ಬಿಡುಗಡೆ ಹೊಂದಿ ಬರುತ್ತಿದ್ದಾಗ, ದಾರಿಯಲ್ಲಿ ಒಂದು ಕಡೆ ಇವನು ಕೆಲಸ ಮಾಡಿದ್ದಕ್ಕೆ ಇತರರಿಗೆ ಕೊಡುತ್ತಿದ್ದ ಸಂಬಳದ ಅರ್ಧದ ದರದಲ್ಲಿ ಇವನಿಗೆ ಸಂಬಳ ಕೊಟ್ಟಿದ್ದರು. ಚರ್ಚೆಮಾಡಿದಾಗ ಇವನ ಅರಸಿನ ಬಣ್ಣದ ದುಸ್ತನ್ನೂ ಸರ್ಟಿಫಿಕೇಟನ್ನೂ ತೋರಿಸಿ, ದೊಣ್ಣೆಯನ್ನೂ ಬೀಸಿದ್ದರು! ಇವನು ಜೈಲಿನಿಂದ ಬಿಡುಗಡೆ ಹೊಂದಿದ್ದರೂ ಸಮಾಜದ ಬಹಿಷ್ಕಾರ ತಿರಸ್ಕಾರಗಳಿಂದ ಬಿಡುಗಡೆಗೊಂಡಿರಲಿಲ್ಲ—ಅವು ಇವನನ್ನು ಹೆಚ್ಚು ಹೆಚ್ಚಾಗಿ ಹಿಂಬಾಲಿಸತೊಡಗಿದ್ದುವು. ಈ ಎಲ್ಲ ಅನುಭವಗಳೂ ಇವನಿಗೆ ಸಮಾಜದ ಮೇಲಿದ್ದ ದ್ವೇಷವನ್ನು ಹೆಚ್ಚಿಸಿದ್ದುವು. ಇವನು ಮುಂದೆ ಡಿ—ಯಲ್ಲೇ ಅನುಭವಿಸಿದ್ದ ಕಷ್ಟ ಮತ್ತು ಅಪಮಾನಗಳು ಇವನನ್ನು ಕ್ರೂರಿಯಾಗಿ ಮಾಡಿದ್ದುವು. ಮನಸ್ಸು ಕಲ್ಲಾಗಿ ಹೋಗಿ ಮೃದುಭಾವನೆಗಳೆಲ್ಲ ಮಾಯವಾಗಿದ್ದುವು.

೮. ಮೃಗೀಯ ಲಾಲಸೆಯೋ ? . . . .

ಇಗರ್ಜಿ ಗಂಟೆ ಎರಡು ಬಾರಿಸಿದಾಗ ಜೀನ್‌ವಾಲ್‌ಜೀನನಿಗೆ ಎಚ್ಚರವಾಯಿತು. ಅವನನ್ನು ಎಬ್ಬಿಸಿದ್ದು, ಹೆಚ್ಚಿನ ಅಂಶ, ಅವನ ಹಾಸಿಗೆ. ಸಾಧಾರಣ ಇಪ್ಪತ್ತು ವರ್ಷಗಳಿಂದ ಕಾಣದಿದ್ದ ಹಾಸಿಗೆಯ ಸುಖ ಇಂದು ಕಂಡಾಗ ಆ ಹಾಸಿಗೆ ಒಂದು ಹಿಂಸೆಯೇ ಆಗಿ ಅವನನ್ನು ಎಬ್ಬಿಸಿತು. ಎದ್ದ ಕೂಡಲೆ ಕಳೆದ ಹಗಲಿನ ಕಷ್ಟ ಮತ್ತು ಇರುಳಿನ ಸುಖ ಎರಡೂ ಅವನ ಮಿದುಳಿನಲ್ಲಿ ಆಲೋಚನಾತರಂಗಗಳನ್ನು ಎಬ್ಬಿಸಿದುವು. ನಿದ್ರೆ ಒಮ್ಮೆ ಬರುವಾಗ ತಾನಾಗಿ ಬಂದರೂ ಬಂದದ್ದನ್ನು ಬಿಟ್ಟನಂತರ ಪುನಃ ಆಗಲೇ ಬರಲು ನಿರಾಕರಿಸುತ್ತದೆ. ಹೀಗಾಗಿ ಅವನು ಪುನಃ ನಿದ್ರೆ ಮಾಡುವುದು ಅಸಾಧ್ಯವಾಯಿತು. ನಿದ್ರೆ ಬರದಿರಲು ಬೇರೆ ಕೆಲವು ಕಾರಣಗಳೂ ಇದ್ದುವು. ಅವುಗಳಲ್ಲಿ ಒಂದನೆಯದು, ಜೈಲಿಗೆ ಹೋಗುವ ಮೊದಲಿನ ಅವನ ಕಡು ದಾರಿದ್ರ್ಯ; ಎರಡನೆಯದು, ಜೈಲಿನಲ್ಲಿ ಅವನು ಕಾಯಕಷ್ಟದಿಂದ ಸಂಪಾದಿಸಿದ ಕಿಂಚಿತ್ ಹಣ; ಮತ್ತು, ಆ ದಿನವೇ ಅವನು ಕಂಡಿದ್ದ ಬಿಷಪರ ಬೆಳ್ಳಿ ಪರಿಕರಗಳು. ಪರಿಕರಗಳು ಜೀನ್‌ವಾಲ್‌ಜೀನನ ದೃಷ್ಟಿಯಲ್ಲಿ ಅತುಲೈಶ್ವರ್ಯವಾಗಿದ್ದುವು. ಅವನ್ನು ಬಿಷಪರ ಮಂಚದ ತಲೆಯ ಮೇಲ್ಗಡೆ ಇಡುತ್ತಿದ್ದುದನ್ನೂ

ಕಂಡಿದ್ದನಷ್ಟೆ. ಈ ಬೆಳ್ಳಿಸಾಮಾನುಗಳು ಅವನನ್ನು ಒಂದು ವಿಧದಿಂದ ಹಿಂಸಿಸುತ್ತಿದ್ದುವು.

ಹೀಗೆ ಆಲೋಚಿಸುತ್ತಿದ್ದ ಹಾಗೆಯೇ ಗಂಟೆ ಮೂರು ಬಾರಿಸಿದ್ದನ್ನೂ ಕೇಳಿದ. ಆ ಸಮಯಕ್ಕೆ ಅವನ ದೀರ್ಘಾಲೋಚನೆಗಳೆಲ್ಲ ಮುಗಿದು ನಿರ್ಧಾರಕ್ಕೆ ಬಂದಿದ್ದ. ಅವನ ಕೋಣೆಯ ಹೊರಗಡೆ ತಿಂಗಳಬೆಳಕು ಹಬ್ಬಿತ್ತು. ಚಂದ್ರನಿಗೆ ಸುತ್ತಸುತ್ತ ಅಲೆದಾಡುತ್ತಿದ್ದ ಮೋಡಗಳು ಬೆಳಕಿಗೇ ಚೇತನಕೊಟ್ಟಿದ್ದಂತೆ ಮಾಡಿದ್ದುವು. ಭೂಮಿಯ ಮೇಲೆ ನೆರಳೂ ಬೆಳಕೂ ಸ್ಥಿರವಾಗಿ ನಿಲ್ಲದೆ ಮೋಡಗಳಂತೆಯೇ ಚಲಿಸಿ ರಾತ್ರಿಯ ಪ್ರಶಾಂತತೆಗೂ ಚೇತನಕೊಟ್ಟಿದ್ದುವು. ಜೀನ್‌ವಾಲ್‌ಜೀನ್ ಕೋಣೆಯ ಹೊರಗಡೆ ನೋಡಿದ. ಕಿಟಕಿಗೆ ಸರಳುಗಳಿಲ್ಲದಿದ್ದುದರಿಂದ ಅದರ ಮೂಲಕ ಹೊರಗೆ ಹಾರಿ ಅಲ್ಲಿಯ ಹರವನ್ನು ಪರಿಚಯಿಸಿಕೊಂಡ. ಪಾಗಾರದ ಹೊರಗಡೆ ಸಾಲಾಗಿದ್ದ ಮರಗಳನ್ನು ಕಂಡು ರಾಜರಸ್ತೆಯನ್ನೂ ಗುರುತಿಸಿಕೊಂಡ.

ಮತ್ತೆ ತನ್ನ ಕೋಣೆಯ ಒಳ ನುಗ್ಗಿ ಕಿಟಕಿ ಬಾಗಿಲನ್ನು ಹಾಕಿಕೊಂಡ. ಚಳಿಗಾಲದ ಕುಳಿರ್ಗಾಳಿ ಒಳಗೆ ಬಂದು ಒಳಗಿದ್ದವರನ್ನು ಎಚ್ಚರಿಸಬಹುದೆಂದು ಆಲೋಚಿಸಿಯೇ ಹಾಗೆ ಮಾಡಿರಬೇಕು. ಬಳಿಕ ತನ್ನ ಸಾಮಾನುಗಳನ್ನು ತೆಗೆದುಕೊಂಡು ಬಿಷಪರ ಶಯ್ಯಾಗೃಹದ ಕಡೆಗೆ ಹೋದ. ತುದಿ ಮೊನಚಾಗಿದ್ದ ಕಬ್ಬಿಣದ ಚಿಕ್ಕ ಸರಳು ಅವನ ಕೈಯ್ಯಲ್ಲಿತ್ತು.

ಬಿಷಪರ ಕೋಣೆಯ ಕದ ತೆರೆದಿತ್ತು. ಅವರೇ ಅದನ್ನು ಹಾಗೆ ಬಿಟ್ಟಿದ್ದರು.

೯. . . . . ಮಾನವೀಯತೆಯ ಸೆಲೆಯೋ?

ಬಿಷಪರ ಕೋಣೆಯ ಬಾಗಿಲಲ್ಲಿ ನಿಂತು ಒಳಗಿನಿಂದ ಸದ್ದೇನಾದರೂ ಕೇಳುವುದೋ ಎಂದು ಆಲಿಸಿನೋಡಿದ. ಯಾವ ಶಬ್ದವೂ ಕೇಳಿಬರಲಿಲ್ಲ. ಒಳಗೆ ನುಗ್ಗಲು ಸ್ಥಳ ಸಾಲದೆಂದು ಕದ ತಳ್ಳಿದ. ಅದು ಸ್ವಲ್ಪ ಸರಿದು ಒಳಗಿದ್ದ ಕಾಲುಮಣೆಗೆ ತಗಲಿ ನಿಂತಿತು. ಮತ್ತೆ ಸ್ವಲ್ಪ ನಿಂತು ನೋಡಿದ. ಕೊನೆಗೆ ಕದವನ್ನು ಬಲವಾಗಿ ನೂಕಿದ. ಕಾಲುಮಣೆಯನ್ನು ನೂಕಿಕೊಂಡು ಅದು ಅಗಲವಾಗಿ ತೆರೆದು ನಿಂತಿತು. ಆದರೆ ಬಿಜಾಗರಿಯೇ ಜಾಗ್ರತೆಗೊಂಡಿದ್ದಂತೆ ಗರ್ರನೆ ಕೂಗಿಕೊಂಡಿತು. ಜೀನ್‌ವಾಲ್‌ಜೀನ್ ಎರಡು ಹೆಜ್ಜೆ ಹಿಂದೆ ಬಂದ. ಅವನಿಗೆ ತನ್ನ ಉಸಿರೇ ಗವಿಯಿಂದ ಹೊರಟ ಬಿರುಗಾಳಿಯಂತೆ ಕೇಳಿಸಿತು. ಗಾಬರಿಗೊಂಡ. ವೃದ್ಧಪಾದ್ರಿ ಏಳುವುದು, ಸ್ತ್ರೀಯರಿಬ್ಬರೂ ಕಿರುಚುವುದು, ಪೊಲೀಸರು ಧಾವಿಸಿ ಬರುವುದು, ಮುಂದೆ ತಾನು ಅನುಭವಿಸುವ ಯಾತನೆ—ಇವೆಲ್ಲವನ್ನೂ ಒಂದು ಕ್ಷಣದಲ್ಲಿ ಕಂಡ. ಅವನ ಹೃದಯ ಕಮ್ಮಾರನ ಚಿಮಟದ ಪೆಟ್ಟುಗಳಂತೆ ಒನಕೆಗಳಲ್ಲಿ ಬಡಿದು ಹೆದರಿಸಿತು. ಗಾಬರಿಯಿಂದ ಅವನು ನಿಂತಲ್ಲಿಯೇ ನಿಂತುಬಿಟ್ಟ.

ಹೀಗೆ ಸ್ವಲ್ಪ ಹೊತ್ತು ಆಲೋಚಿಸುತ್ತ ನಿಂತ. ಬೆಳುದಿಂಗಳ ಬೆಳಕು ತೆಳುಮೋಡಗಳನ್ನು ದಾಟಿ ಬಂದು ಮಸಕಾಗಿ ಹರಡಿತ್ತು. ಕೋಣೆಯೊಳಗಿನ ವಸ್ತುಗಳು ಅಸ್ಪಷ್ಟವಾಗಿ ಗೋಚರಿಸುತ್ತಿದ್ದುವು. ಮನಸ್ಸಿನ ಆವೇಗ ಹೆಚ್ಚಿದಾಗ ಅದು ಬುದ್ಧಿಯನ್ನು ಹಿಂದೆಬಿಟ್ಟು, ತಾನಾಗಿಯೇ ಕಾರ್ಯಗಳನ್ನು ಜರಗಿಸಿ, ಬುದ್ಧಿಯನ್ನು ಸೋಲಿಸುವಂತೆ, ಜೀನ್‌ವಾಲ್‌ಜೀನನ ಮನಸ್ಸಿನ ಉದ್ವೇಗ ಅವನಿಗೆ ತಿಳಿಯದೇ ಬಿಷಪರ ತಲೆಯ ಮೇಲ್ಗಡೆ ಅವನನ್ನು ಕರೆದುಕೊಂಡುಹೋಗಿ ನಿಲ್ಲಿಸಿತ್ತು. ಹೀಗೆ ಅವನು ಅಲ್ಲಿ ನಿಂತಾಗಲೇ ಚಂದ್ರ ಮೋಡಗಳನ್ನು ಹಿಂದೆ ಸರಿದಿಟ್ಟು ಪೂರ್ಣಪ್ರಕಾಶಮಾನನಾಗಿ ಅವರ ಮುಖದ ಮೇಲೆ ತನ್ನ ಬೆಳಕು ಹರಿಸಿದ.

ನಮ್ಮ ಕೆಲವು ಕೆಲಸಗಳ ನಡುವೆ ಆತ್ಮವಿಮರ್ಶನ ಯುಕ್ತವೆಂದು ಅಪ್ರತ್ಯಕ್ಷವಾಗಿ ಬೋಧಿಸು

ವಂತೆ ಪ್ರಕೃತಿ ಸನ್ನಿವೇಶಗಳನ್ನೊಡ್ಡುವುದನ್ನು ಓದುಗರು ನೋಡಿರಬಹುದೆಂದು ನಂಬುತ್ತೇವೆ. ಬಿಷಪರ ಸೌಮ್ಯ ನಿದ್ರಾ ಮುಖದ ಮೇಲೆ ಬೆಳುದಿಂಗಳು ಬಿದ್ದಾಗ ಅಂಥ ಸನ್ನಿವೇಶವನ್ನು ಜೀನ್ ವಾಲ್‌ಜೀನನ ಅಂತರಂಗ ಕಂಡಿತು. ಅವರ ಅಧಿಕಾರ ಚಿಹ್ನೆಯಾದ ಶಿರೋಭೂಷಣವನ್ನು ಹಗುರವಾಗಿ ತೊಟ್ಟಿದ್ದ ಮತ್ತು ಸಹಸ್ರಾರು ಉತ್ತಮ ಚಿಂತನೆಗಳನ್ನು ಮಾಡಿದ್ದ ಅವರ ತಲೆಯು ತಲೆದಿಂಬಿನ ಮೇಲೆ ಎದ್ದುಕಾಣುತ್ತಿತ್ತು. ಆತ್ಮತೃಪ್ತಿ, ದೈವಿಕಭಕ್ತಿ, ಶ್ರದ್ಧೆ, ಆಧ್ಯಾತ್ಮಿಕ ಆನಂದ ಅವರ ಮುಖದಲ್ಲಿ ಅರೆನಗುವಾಗಿ ತೋರಿಬರುತ್ತಿದ್ದುವು. ಅರ್ಥಾತ್, ದೇವಲೋಕದ ಪ್ರಭೆಯೇ ಅವರ ಮುಖದಲ್ಲಿ ಬೆಳಗುತ್ತಿತ್ತು. ಸಜ್ಜನರ ಆತ್ಮ ನಿದ್ರೆಯಲ್ಲಿ ಪರಮಾತ್ಮೈಕ್ಯವಾಗುವುದರಿಂದ ಪೂಜ್ಯ ಬಿಷಪರ ಮುಖದಲ್ಲಿ ದೈವಿಕ ಪ್ರಭೆಯಲ್ಲದೆ ಮತ್ತೇನು ತಾನೇ ತೋರಬಲ್ಲುದು! ನಭೋ ಮಂಡಲದಲ್ಲಿ ತೇಲುತ್ತಿದ್ದ ಚಂದ್ರ, ಆ ಪ್ರಕಾಶದಲ್ಲಿ ಮುಳುಗಿ ಮಲಗಿದ್ದ ಪೃಥ್ವಿ, ಅಲ್ಲಿಯ ನಿಶ್ಶಬ್ದತೆ, ಅವನ ಏಕಾಂತತೆ, ದೇವರಲ್ಲಿ ಶರಣು ಹೊಂದಿ ಹಸುಳೆಯಂತೆ ಮಲಗಿ ನಿದ್ರಿಸುತ್ತಿದ್ದ ಬಿಷಪರ ಸಾತ್ವಿಕ ಹೃದಯ ಈ ಎಲ್ಲವೂ ಜೀನ್‌ವಾಲ್‌ಜೀನನ ಕಠೋರ ಮನಸ್ಸಿನ ಮೇಲೆ ಅರೆಕ್ಷಣ ತಮ್ಮ ಪ್ರಭಾವ ಬೀರಿರಬೇಕು. ಕ್ಷಣ ಸ್ತಂಭಿತನಾಗಿ ನಿಂತ; ನಿಂತಿರುವಂತೆಯೇ ಧರ್ಮಪರಾಯಣರಾದ, ಅಂದೇ ರಾತ್ರಿ ತನ್ನನ್ನು ಅಷ್ಟೊಂದು ಪ್ರೇಮದಿಂದ ಕಂಡ ಬಿಷಪರ ವಿಶ್ರಾಂತಿಗೆ ಭಂಗತರುವ ತನ್ನ ಭೀಷಣ ಉದ್ದೇಶಗಳನ್ನು ಅವನೊಮ್ಮೆ ಗ್ರಹಿಸಿ ನೋಡಿದ.

ತನ್ನಂಥವನ ಅತಿಸಮೀಪದಲ್ಲಿ ಏಕಾಂಗಿಯಾಗಿ ಬಿಷಪ್ ನಿದ್ರಿಸುತ್ತಿದ್ದುದರಲ್ಲಿ ಒಂದು ವಿಧದ ಭವ್ಯತೆಯೂ ಸಾತ್ತ್ವಿಕ ನಿರ್ಭಯತೆಯೂ ಇತ್ತೆಂದು ಜೀನ್‌ವಾಲ್‌ಜೀನ್ ಅಸ್ಪಷ್ಟವಾಗಿ ತಿಳಿಯತೊಡಗಿದ. ಆ ಅಸ್ಪಷ್ಟ ತಿಳಿವಳಿಕೆಯಲ್ಲಿ ಗುರುತಿಸಲಾಗದ ಒಂದು ಆಕರ್ಷಣೆಯೂ ಇತ್ತು. ಬಿಷಪರನ್ನು ಅವನು ಒಮ್ಮೆ ನೋಡಿದ ಮೇಲೆ ಅವನ ದೃಷ್ಟಿಯನ್ನು ಅವರ ಮುಖದಿಂದ ತೆಗೆಯ ಲಾಗದಂತೆಯೂ ಅವನಿಗೆ ತೋರಿತು. ತನ್ನ ಉದ್ದೇಶದ ನೆನಪು ಬಿಷಪರ ಮುಖ ಇವೆರಡೂ ಅವನನ್ನು ಬಾಧಿಸತೊಡಗಿದುವು. ತನ್ನ ಕೈಯಲ್ಲಿದ್ದ ಕಬ್ಬಿಣದ ಸರಳಿನಿಂದ ಬಿಷಪರ ತಲೆಯನ್ನು ಒಡೆಯಬೇಕೆಂದು ತೋರುತ್ತಿದ್ದುದರ ಜೊತೆಯಲ್ಲೇ ಅವರ ಪಾದಗಳಿಗೆ ನಮಸ್ಕರಿಸಬೇಕೆಂದೂ ತೋರತೊಡಗಿತು. ಈ ದ್ವಂದ್ವಭಾವನೆಗಳು ಅವನ ಮನಸ್ಸನ್ನು ಬಲುವಾಗಿ ತಳಮಳಗೊಳಿಸಿ ದುವು. ಅವನೊಬ್ಬ ಪ್ರತ್ಯೇಕವಾಗಿ ನಿಂತು, ಅವನದೇ ಇನ್ನೆರಡು ರೂಪಗಳು ಕಾರ್ಯಕ್ಕೆ ಇಳಿಯುವ ಹವಣಿಕೆಯಲ್ಲಿದ್ದುದನ್ನು ಕಾಣತೊಡಗಿದ. ಅವನ ಪ್ರತಿರೂಪವಾಗಿ, ಪರಮ ತಾಮಸಿಯೊಬ್ಬ ಬಿಷಪರಿಗೆ ಹೊಡೆಯಲೋಸ್ಕರ ಬಲಗೈಯಿಂದ ಉಕ್ಕಿನ ಸರಳನ್ನು ಎತ್ತುತ್ತಿದ್ದಾಗಲೇ, ಮತ್ತೊಂದು ಪ್ರತಿರೂಪ ತನ್ನ ತಲೆಯಿಂದ ಟೊಪ್ಪಿಯನ್ನೆತ್ತಿ ಬಿಷಪರನ್ನು ಮನಸಾ ಪೂಜಿಸು ತ್ತಿತ್ತು. ಈ ತ್ರಿಮೂರ್ತಿಗಳಲ್ಲಿ ತಾನು ಯಾರೆಂದು ಗುರುತಿಸಲಾಗದೇ ಅವನು ಒಂದು ವಿಧದ ತಾಮಸ ಧ್ಯಾನದಲ್ಲೇ ನಿಂತುಬಿಟ್ಟ.

ಬಿಷಪರಾದರೋ ಈ ಭಯಂಕರ ಧ್ಯಾನದ ಸಮಯದಲ್ಲೇ, ಅವನ ಎದುರೇ, ನಿರ್ಭೀತಿ ಯಿಂದ, ಶಾಂತವಾಗಿ ನಿದ್ರಿಸುತ್ತಿದ್ದರು. ಇದೇ ಸಮಯದಲ್ಲಿ ಚಂದ್ರಕಿರಣಗಳು ಗೋಡೆಯಲ್ಲಿದ್ದ ಏಸುವಿನ ಒಂದು ಪ್ರತಿಮೆಯ ಮೇಲೆ ಬಿದ್ದುವು. ಈ ಪ್ರತಿಮೆ ಒಂದು ಕೈಯಿಂದ ಪಾಪಿಯನ್ನು ಮನ್ನಿಸುತ್ತಿರುವಂತೆಯೂ ಮತ್ತೊಂದರಿಂದ ಧರ್ಮಪರಾಯಣನನ್ನು ಆಶೀರ್ವದಿಸುತ್ತಿರು ವಂತೆಯೂ ತೋರಿತು. ಇವೆಲ್ಲವನ್ನೂ ನೋಡುತ್ತಿದ್ದ ಜೀನ್‌ವಾಲ್‌ಜೀನನ ಕೊನೆಯ ನಿರ್ಧಾರ ಆಗಲೇ ಪೂರ್ಣವಾಯಿತು. ಸರಳನ್ನು ಅಡಗಿಸಿಟ್ಟು, ಟೊಪ್ಪಿ ಎತ್ತಿ ಮತ್ತೆ ತಲೆಗಿಟ್ಟುಕೊಂಡು, ಕಪಾಟದ ಬಳಿಗೆ ಹೋದ. ಕಪಾಟಿನ ಬೀಗದ ಕೈ ಅದರಲ್ಲೇ ಇದ್ದುದರಿಂದ ಅದರ ಬಾಗಿಲನ್ನು

ಸುಲಭವಾಗಿ ತೆರೆದ. ಬುಟ್ಟಿಯಲ್ಲಿದ್ದ ಬೆಳ್ಳಿಯ ಸಾಮಾನುಗಳನ್ನು ಬುಟ್ಟಿಸಮೇತ ತೆಗೆದುಕೊಂಡು ಹೊರಗೆ ನಡೆದ. ಆಗುತ್ತಿದ್ದ ಅಲ್ಪಸ್ವಲ್ಪ ಶಬ್ದಗಳಿಂದ ಗಾಬರಿಗೊಳ್ಳದೆ, ಪ್ರಾರ್ಥನಾ ಮಂದಿರದ ಕಡೆ ಹೋಗಿ, ತನ್ನ ದೊಣ್ಣೆಯನ್ನು ತೆಗೆದುಕೊಂಡು, ಬುಟ್ಟಿಸಮೇತ ಕಿಟಕಿಯಿಂದ ಹೊರಗಿಳಿದ. ಅನಂತರ ಹೂ ತೋಟದಲ್ಲಿ ಬುಟ್ಟಿಯನ್ನು ಬಿಸಾಡಿ, ಬೆಳ್ಳಿ ಸಾಮಾನು ಸಮೇತ ಪಾಗಾರ ಗೋಡೆಯನ್ನೇರಿ, ಅಲ್ಲಿಂದ ರಸ್ತೆಗೆ ಹಾರಿ, ಮುಂದಕ್ಕೆ ಓಡಿದ.

೧೦. ಬಿಷಪರು ಬಿತ್ತಿದ ಉಪದೇಶ

ಮರುದಿನ ಬೆಳಗ್ಗೆ ಬಿಷಪ್ ಹೂದೋಟದಲ್ಲಿ ತಿರುಗಾಡುತ್ತಿದ್ದಾಗ ಕೆಲಸದಾಕೆ ಗಾಬರಿಯಿಂದ ಓಡಿಬಂದು, "ತಮ್ಮ ಬುಟ್ಟಿ ಎಲ್ಲಿದೆಯೆಂದು ಗೊತ್ತಿದೆಯೇ?" ಎಂದು ಕೇಳಿದಳು.

"ಅದು ಇಲ್ಲಿದೆ," ಎಂದನ್ನುತ್ತ ಅವರು ಬುಟ್ಟಿಯನ್ನು ಹೂಗಿಡದ ಮೇಲಿಂದ ತೆಗೆದು ಕೊಟ್ಟರು.

"ಇದು ಖಾಲಿ ಬುಟ್ಟಿ. ಬೆಳ್ಳಿ ಸಾಮಾನು?" ಎಂದು ಕೂಗಿಕೊಂಡಳು ಮೆಗ್‌ಲೋಯರ್.

"ನೀನು ಗಾಬರಿಪಟ್ಟದ್ದು, ಹಾಗಾದರೆ, ಬೆಳ್ಳಿಗಾಗಿ, ಬುಟ್ಟಿಗಾಗಿ ಅಲ್ಲ!" ಎಂದು ನಗುತ್ತ ಬಿಷಪ್ ಹೇಳಿದರು. ಕೆಲಸದವಳು ಉತ್ತರ ಕೊಡದೆ ಮನೆಯ ಕಡೆಗೆ ಓಡಿದಳು. ಪ್ರಾರ್ಥನಾ ಮಂದಿರಕ್ಕೆ ಹೋದಳು. ಜೀನ್‌ವಾಲ್‌ಜೀನನನ್ನು ಅಲ್ಲೆಲ್ಲಿಯೂ ಕಾಣದೆ, "ಅವನೇ ಕಳ್ಳ. ರಾತ್ರಿ ಓಡಿದ್ದಾನೆ. ಬೆಳ್ಳಿಯ ಸಾಮಾನನ್ನು ಹೊತ್ತಿದ್ದಾನೆ," ಎಂದು ಚೀರಿದಳು. ಹೂವಿನ ತೋಟವನ್ನೆಲ್ಲ ಸುತ್ತಿ ನೋಡಿದಳು. ಕೊನೆಗೆ ಕಳ್ಳ ಗೋಡೆ ಹತ್ತಿ ಹಾರಿದ್ದ ಸ್ಥಳ ಗುರುತಿಸಿ, "ಇಲ್ಲೇ ಅವನು ಹೋಗಿರಬೇಕು. ದೇವರೇ! ನಮ್ಮ ಬೆಳ್ಳಿ ಪರಿಕರವೆಲ್ಲ ಹೋಯಿತು," ಎಂದು ಹೇಳುತ್ತ ಅತ್ತಳು.

ಆಗ ಅವಳನ್ನು ಬಿಷಪ್ ನಗುಮುಖದಿಂದಲೇ ಪ್ರಶ್ನಿಸಿದರು, "ಅವೆಲ್ಲ ನಮ್ಮದಾಗಿತ್ತೇನು?"

ಕೆಲಸದವಳು ಆಶ್ಚರ್ಯದಿಂದ ಅವಾಕ್ಕಾದಳು; ಮತ್ತೂ ಮುಂದುವರಿಸಿ ಬಿಷಪ್ ಹೇಳಿದರು, "ಬಡವರ ಪಾಲಿನ ಬೆಳ್ಳಿಯನ್ನು ನಾವು ಈ ವರೆಗೆ ಇಟ್ಟುಕೊಂಡಿದ್ದುದೇ ತಪ್ಪು. ಇದನ್ನು ತೆಗೆದುಕೊಂಡು ಹೋದವನು ಯಾರೇ ಇರಲಿ, ಅವನೂ ಒಬ್ಬ ಬಡವನೇ ಎಂಬುದು ಸಂತೋಷವಲ್ಲವೇ?"

"ನಮಗಾಗಿ ಅಲ್ಲ ಪ್ರಭೂ! ತಮ್ಮ ಊಟಕ್ಕಾದರೂ ಪರಿಕರ ಬೇಕಲ್ಲ?"

"ಮಣ್ಣಿನ ಸಾಮಾನನ್ನು ತಂದರೆ ಆಯಿತಲ್ಲ?"

"ಮಣ್ಣಿನದು ಮಾಸಿ ವಾಸನೆ ಬರುವುದಷ್ಟೆ?"

"ಹಾಗಾದರೆ ಕಬ್ಬಿಣದ್ದುಂಟಷ್ಟೆ?"

"ಕಬ್ಬಿಣ ಕಿಲುಬುವುದಿಲ್ಲವೇ? ಪ್ರಭು?"

"ಚಿಂತೆಯಿಲ್ಲ, ಮರದ್ದು ಮಾಡಿಸೋಣ."

ಬಿಷಪರ ಈ ಮಾತುಗಳಿಗೆ ಅವರ ತಂಗಿಯಾಗಲೀ ಮೆಗ್‌ಲೋಯರಳಾಗಲೀ ಉತ್ತರ ಕೊಡಲಿಲ್ಲ. ಬಿಷಪರ ಮನಸ್ಸನ್ನು ಅವರು ಚೆನ್ನಾಗಿ ಅರಿತಿದ್ದರು. ಸ್ವಲ್ಪ ಹೊತ್ತಿನಲ್ಲಿ, ಬೆಳಗ್ಗಿನ ಊಟಮಾಡುವಾಗ ಬಿಷಪ್ ಅಂದರು, "ಚಮಚ ಸೌಟುಗಳ ಅಗತ್ಯವೆಲ್ಲಿದೆ? ದೇವರು ಕೊಟ್ಟಿರುವ ಕೈಬೆರಳುಗಳಿವೆಯಲ್ಲ!"

ಕೆಲಸದವಳ ಚಿಂತೆ ಹೇಳತೀರದು. ಅವಳು ನಿಟ್ಟುಸಿರು ಬಿಡುತ್ತ ಹೇಳಿದಳು, "ಅವನು

ನಮ್ಮನ್ನು ಕೊಲ್ಲದೆ ಬಿಟ್ಟನಲ್ಲ!"

ಇಷ್ಟರಲ್ಲೇ ಹೊರಗಿನಿಂದ ಯಾರೋ ಕದ ತಟ್ಟಿದರು.

ತೆರೆದಾಗ ಮೂವರು ಪೊಲೀಸರು ಜೀನ್‌ವಾಲ್‌ಜೀನನನ್ನು ಬೆಳ್ಳಿಸಾಮಾನುಗಳ ಸಮೇತ ಹಿಡಿದುತಂದು ಬಿಷಪರೆದುರು ನಿಲ್ಲಿಸಿದರು. ಅವರೆಲ್ಲರೂ ಬಿಷಪರಿಗೆ ಸೈನಿಕರ ಕ್ರಮದಿಂದ ನಮ್ರವಾಗಿ ನಮಸ್ಕರಿಸಿದರು. ಅನಂತರ ಅವರ ಮುಖ್ಯಸ್ಥ ಬಿಷಪರನ್ನು ಕುರಿತು, "ಮಹಾ ಪ್ರಭು!" ಎಂದು ಸಂಬೋಧಿಸಿ ಮುಂದೆ ಮಾತಾಡುವುದರಲ್ಲಿದ್ದ. ಅಷ್ಟರಲ್ಲೇ ಜೀನ್‌ವಾಲ್ ಜೀನ್, "ಹಾಗಾದರೆ ಇವರೊಬ್ಬ ಚಿಕ್ಕ ಪಾದ್ರಿಯಲ್ಲ!" ಎಂದ.

"ಆ ಪಂಚಾಯತಿಕೆಯೆಲ್ಲ ನಿನಗೇಕೆ? ಇವರು ಬಿಷಪ್" ಎಂದು ಪೊಲೀಸರ ಮುಖಂಡ ಹೇಳಿ ಮುಂದೆ ಮಾತಾಡುವುದರಲ್ಲಿದ್ದ. ಅದಕ್ಕೆ ಮೊದಲೇ ಬಿಷಪರು ಜೀನ್‌ವಾಲ್‌ಜೀನನ ಸಮೀಪಕ್ಕೆ ಹೋಗಿ ಅವನನ್ನು ನೋಡುತ್ತ, "ನಿನ್ನನ್ನು ಕಂಡು ಸಂತೋಷವಾಯಿತು. ನಿನಗೆ ಕೊಟ್ಟಿದ್ದ ಆ ಎರಡು ದೀಪಸ್ತಂಭಗಳನ್ನೇಕೆ ಬಿಟ್ಟು ಹೋದೆ? ಅವೆರಡಕ್ಕೆ ೨೦೦ ಫ್ರ್ಯಾಂಕ್ ಬೆಲೆ ಸಿಕ್ಕಬಹುದು. ಆ ಇತರ ಬೆಳ್ಳಿ ಸಾಮಾನುಗಳ ಜೊತೆಗೆ ಅವನ್ನೂ ಕೊಟ್ಟಿರುವೆನಷ್ಟೆ?" ಎಂದು ಹೇಳಿದರು.

"ಹಾಗಾದರೆ ಇವನಂದದ್ದು ನಿಜ, ಅಲ್ಲವೇ?" ಎಂದು ಪೊಲೀಸ್ ಮುಖಂಡ ತನ್ನ ಜೊತೆಯವರಲ್ಲಿ ಹೇಳಿ, ಬಿಷಪರನ್ನು ನೋಡುತ್ತ, "ಪ್ರಭು! ನಾವು ಇವನನ್ನು ಸಂಶಯದ ಮೇಲೆ ದಸ್ತಗಿರಿ ಮಾಡಿರುತ್ತೇವೆ," ಅಂದ.

"ಅವನಂದದ್ದು ನಿಜ. ಅವನು ರಾತ್ರಿ ಇಲ್ಲಿದ್ದ. ಆ ಬೆಳ್ಳಿ ವಸ್ತುಗಳನ್ನು ನಾನೇ ಕೊಟ್ಟದ್ದು. ಅವನನ್ನು ಬಿಟ್ಟುಬಿಡಿ," ಎಂದು ಬಿಷಪ್ ಹೇಳಿದರು.

ಪೊಲೀಸರು ಜೀನ್‌ವಾಲ್‌ಜೀನನನ್ನು ಬಂಧನದಿಂದ ಬಿಟ್ಟರು. ಆತ ಬಿಷಪರನ್ನು ಗಾಬರಿಯಿಂದ ನೋಡುತ್ತ, "ಹಾಗಾದರೆ ನಾನು ಹೋಗಬಹುದೇ?" ಎಂದು ಕೇಳಿದ.

"ಖಂಡಿತವಾಗಿಯೂ ಹೋಗಬಹುದು. ಇಗೋ, ನಿನ್ನೆಯೇ ಕೊಟ್ಟಿದ್ದ ದೀಪ ಸ್ತಂಭಗಳನ್ನೂ ತೆಗೆದುಕೊಂಡು ಹೋಗು. ನೀನು ಎದುರು ಬಾಗಿಲಿನಿಂದಲೇ ಹೋಗುವುದು ಉತ್ತಮ. ಅದಕ್ಕೆ ಒಂದು ಚಿಲಕ ಮಾತ್ರವಿದೆ. ನೀನು ಯಾವಾಗ ಬೇಕಾದರೂ ಈ ಮನೆಗೆ ಆ ಬಾಗಿಲಿಂದ ಬಂದು ಹೋಗಬಹುದು, ತಿಳಿದಿರು. ಗೋಡೆ ಹಾರುವ ಕಷ್ಟವೇಕೆ?" ಎಂದು ಬಿಷಪ್ ಉತ್ತರ ಕೊಡುತ್ತ, ಆ ಎರಡು ಬೆಳ್ಳಿ ದೀಪಸ್ತಂಭಗಳನ್ನೂ ಜೀನ್‌ವಾಲ್‌ಜೀನನಿಗೆ ಕೊಟ್ಟರು. ಅನಂತರ ಪೊಲೀಸರಿಗೆ ಅವರ ಕೆಲಸದ ಮೇಲೆ ಹೋಗುವಂತೆ ಅಪ್ಪಣೆಮಾಡಿದರು.

ಅವರು ಪುನಃ ನಮಸ್ಕರಿಸಿ ಹೊರಟುಹೋದರು. ಜೀನ್‌ವಾಲ್‌ಜೀನನಿಗೆ ಆಗಿದ್ದ ಆಶ್ಚರ್ಯದಿಂದ ಮೂರ್ಛೆ ಹೋಗುವುದರಲ್ಲೇ ಇದ್ದ. ಈ ಅನಿರೀಕ್ಷಿತ ಘಟನೆಗಳು ಅವನಿಂದ ಕಲ್ಪಿಸಿಕೊಳ್ಳಲೂ ಅರ್ಥಮಾಡಿಕೊಳ್ಳಲೂ ಅಸಾಧ್ಯವಾಗಿದ್ದುವು.

ಬಿಷಪರು ಜೀನ್‌ವಾಲ್‌ಜೀನನನ್ನೇ ನೋಡುತ್ತ, "ಈ ವಸ್ತುಗಳ ಮೌಲ್ಯದಿಂದ ನೀನೊಬ್ಬ ಪ್ರಾಮಾಣಿಕನಾಗುವೆಯಾಗಿ ನನಗೆ ನೀನು ಕೊಟ್ಟಿರುವ ವಚನವನ್ನು ಎಂದೂ ಮರೆಯದಿರು," ಅಂದರು. ಜೀನ್‌ವಾಲ್‌ಜೀನ್ ತಾನು ಬಿಷಪರಿಗೆ ಯಾವ ವಿಧದ ವಚನವನ್ನು ಕೊಟ್ಟದ್ದು ಎಂದು ಜ್ಞಾಪಕಕ್ಕೆ ಬರದೆ, ಆಶ್ಚರ್ಯದಿಂದ ಅವರ ಮುಖವನ್ನೇ ನೋಡುತ್ತ ನಿಂತ. ಬಿಷಪ್ ಪುನಃ ಜೀನ್‌ವಾಲ್‌ಜೀನನಿಗೆ ಬಲು ಮೃದುವಾಗಿ ಅಂದರು, "ತಮ್ಮ, ಜೀನ್‌ವಾಲ್‌ಜೀನ್! ನೀನು ಇನ್ನು ಮುಂದೆ ಸಾತ್ತ್ವಿಕನೇ ಆಗಿರುವೆ—ತಾಮಸಿಯಲ್ಲ. ನಿನ್ನ ತಾಮಸ ಜೀವನವನ್ನು ನಾನು ಪಡೆದು, ಪವಿತ್ರಗೊಳಿಸಿ ದೇವರಿಗೆ ಅರ್ಪಿಸಿರುವೆನು, ತಿಳಿದಿರು."

೧೧. ತಮಸೋಮಾ ಜ್ಯೋತಿರ್ಗಮಯ

ಅವನು ಓಡುತ್ತಿದ್ದ ಎಂದು ಹೇಳಿದರೂ ಸರಿಯಾಗಬಹುದಾದಷ್ಟು ತ್ವರೆಯಿಂದ ಜೀನ್ ವಾಲ್‌ಜೀನ್ ಬಿಷಪರ ಮನೆಯಿಂದ ಈ ಬಾರಿ ಧಾವಿಸಿದ. ಇಂಥ ರಸ್ತೆಯಲ್ಲೇ ತಾನು ಹೋಗುತ್ತಿರುವೆನೆಂಬ ಜ್ಞಾನ ಅವನಿಗಿರಲಿಲ್ಲ. ಯಾವುದರಲ್ಲಿ ತಾನು ಹೋಗಬೇಕೆಂದು ಅವನು ರಸ್ತೆಯನ್ನು ಚುನಾಯಿಸುವುದರ ಬದಲು ರಸ್ತೆಗಳೇ ತಮ್ಮೊಳಗೆ ನಿಶ್ಚೈಸಿಕೊಂಡು ಅವನನ್ನು ಸಾಗಿಸಿದುವು. ಈ ರೀತಿ ಸಂಜೆಯ ತನಕವೂ ನಡೆದ. ಹಸಿವೆ ಬಾಯಾರಿಕೆಗಳ ಅರಿವೂ ಅವನಿಗೆ ಇರಲಿಲ್ಲ. ಬಿಷಪರ ಮಾತುಗಳು ಅವನಿಗೆ ಒಮ್ಮೆ ಬಲು ಹಿತವಾಗಿ ತೋರುತ್ತಿದ್ದುವು; ಮರುಕ್ಷಣ ಆ ಮಾತುಗಳೇ ಹಿಂಸೆಯಾಗಿ ಇರಿಯುತ್ತಿದ್ದುವು; ಅವು ಅವನ ತಾಮಸ ಸ್ವಭಾವವನ್ನು ನಾಶ ಪಡಿಸುವ ಮಾತುಗಳಾದ್ದರಿಂದ, ಅವನಿಗೆ ಆ ರೀತಿ ಹಿಂಸೆಯಾಗಿ ತೋರಿರಬೇಕು.

ಈ ರೀತಿ ಶ್ರಮಪಡುತ್ತ ಕೊನೆಗೆ ರಸ್ತೆಬದಿಯ ಒಂದು ನಿರ್ಜನ ಪ್ರದೇಶದಲ್ಲಿ ಕುಳಿತುಬಿಟ್ಟ. ಅದು ಬಲು ವಿಶಾಲವಾಗಿತ್ತು. ಆಗ ಸೂರ್ಯಾಸ್ತಮಾನಕಾಲ. ಚಿಕ್ಕಚಿಕ್ಕ ಕಲ್ಲುಗಳೂ ಉದ್ದುದ್ದ ನೆರಳನ್ನು ನೆಲದಲ್ಲಿ ಬಿಟ್ಟು, ಸೂರ್ಯಪ್ರಭೆಯಲ್ಲಿ ರಂಜಿಸುತ್ತಿದ್ದುವು. ಆಗಿನ ಸುವರ್ಣಮಯ ಪ್ರಭೆಯಲ್ಲಿ ಆ ಸ್ಥಳವೆಲ್ಲ ಬಲು ಸೌಮ್ಯವಾಗಿಯೂ ಹಿತಕರವಾಗಿಯೂ ತೋರುತ್ತಿತ್ತು. ಇದೇ ಸಮಯದಲ್ಲಿ ಸಾಧಾರಣ ಹತ್ತು ವರ್ಷ ಪ್ರಾಯದ ಬೀದಿವ್ಯಾಪಾರೀ ಬಾಲಕನೊಬ್ಬ ಪಶ್ಚಿಮ ದಿಕ್ಕಿನಿಂದ ಜೀನ್‌ವಾಲ್‌ಜೀನನಿಗೆ ಎದುರಾಗಿ ಬರುತ್ತಿದ್ದ. ಹಿಂಬದಿಯ ಸೂರ್ಯಕಾಂತಿಯಿಂದ ಬಾಲಕನ ತಲೆಕೂದಲೆಲ್ಲ ಚಿನ್ನದ ಸರಿಗೆಗಳಂತೆ ಮಿರುಗುತ್ತಿದ್ದುವು. ಬಾಲಕ ತನ್ನ ವ್ಯಾಪಾರದ ವಸ್ತುಗಳನ್ನು ಕುತ್ತಿಗೆಯಿಂದ ನೇಲುವ ಚೀಲದೊಳಗಿಟ್ಟುಕೊಂಡು, ಹಕ್ಕಿಯಂತೆ ಹಗುರವಾಗಿ ಹಾರುತ್ತ, ಹಾಡುತ್ತ, ತೇಲುತ್ತಿದ್ದ. ಈ ಆನಂದದ ಜೊತೆಗೆ ತನ್ನ ಅಂದಿನ ಸಂಪಾದನೆಯ ಕೆಲವೇ ನಾಣ್ಯಗಳನ್ನು ಮೇಲಕ್ಕೆ ಎಸೆದು ಹಿಡಿಯುತ್ತಲೂ ಆಟವಾಡುತ್ತಿದ್ದ. ಬಾಲಕ ಜೀನ್‌ವಾಲ್‌ಜೀನನ ಹತ್ತಿರ ಬರುವವರೆಗೆ ಈತನ ಇರವಿನ ಅರಿವು ಅವನಿಗೆ ಆಗಿರಲಿಲ್ಲ. ನಾಣ್ಯಗಳನ್ನೆಸೆದು ಮೇಲೆ ನೋಡುವಾಗ ಜೀನ್‌ವಾಲ್‌ಜೀನನನ್ನು ಕಂಡು, ಕೈಗುರಿತಪ್ಪಿತು, ಒಂದು ನಾಣ್ಯ ನೆಲಕ್ಕೆ ಬಿದ್ದು ಉರುಳುತ್ತ ಜೀನ್‌ವಾಲ್‌ಜೀನನ ಕಾಲಬುಡಕ್ಕೆ ಬಂತು. ಈತ ತಿಳಿದೋ ತಿಳಿಯದೆಯೋ ತನ್ನ ಪಾದವನ್ನು ಅದರ ಮೇಲಿಟ್ಟ. ಇದನ್ನು ನೋಡುತ್ತಿದ್ದ ಬಾಲಕ ಅವನ ಹತ್ತಿರ ಬಂದು, "ನನ್ನ ನಾಣ್ಯಕೊಡೀ, ಸರ್," ಅಂದ.

"ನಿನ್ನ ಹೆಸರೇನು?" ಎಂದು ಕೇಳಿದ ಜೀನ್‌ವಾಲ್‌ಜೀನ್.

"ಪುಟ್ಟ ಜರ್ವಾಯಿಸ್, ಸರ್."

"ಹೊರಟು ನಡೀ, ಇಲ್ಲಿಂದಾ—"

"ನನ್ನ ಎರಡು ಫ್ರ್ಯಾಂಕ್, ಸರ್ ?"

ಬಾಲಕನ ಸರಳತೆ, ಎಳೆತನ, ಹುರುಪು, ಹರ್ಷ ಈ ಎಲ್ಲ ಗುಣಗಳೂ ಜೀನ್‌ವಾಲ್‌ಜೀನನಿಗೆ ವಿರೋಧವಾಗಿ ತೋರುತ್ತಿದ್ದುವು. ಅವನು ಆ ಮೊದಲೇ ಸೌಮ್ಯ ಮತ್ತು ಕಠೋರ ಭಾವನೆಗಳಿಂದ ತಾಡಿತನಾಗಿದ್ದುದರಿಂದ, ಬಾಲಕನ ಮಾತುಗಳು ಅವನ ರೂಪ, ಎಲ್ಲವೂ ಅವನನ್ನು ಮತ್ತಷ್ಟು ಹಿಂಸಿಸಿದುವು. ಕೋಪದಿಂದಲೇ ಅವನು ಅಂದ, "ನಡೀತೀಯೋ, ಇಲ್ಲವೋ ?" ಹೀಗೆಂದು ತನ್ನ ದೊಣ್ಣೆ ತೋರಿಸಿದ.

"ನಿಮ್ಮ ಹೆಜ್ಜೆ ಎತ್ತೀ, ಸರ್! ನನ್ನ ಇಡೀ ದಿನದ ಸಂಪಾದನೆ, ಸರ್!" ಎಂದು ಜರ್ವಾಯಿಸ್

ಅಳುತ್ತ ಹೇಳಿದ. ಜೀನ್‌ವಾಲ್‌ಜೀನ್ ಮತ್ತಷ್ಟು ಉಗ್ರನಾದ. ದೊಣ್ಣೆ ಹಿಡಿದು ಎದ್ದುನಿಂತ. ಜರ್ವಾಯಿಸ್ ಅಳುತ್ತ ಹಿಂತಿರುಗಿ ನೋಡುತ್ತ, ನೋಡುತ್ತ ಅಲ್ಲಿಂದ ಓಡಿಹೋದ.

ತಾನೊಬ್ಬನೇ ಇರುವ ಅರಿವು ಜೀನ್‌ವಾಲ್‌ಜೀನನಿಗೆ ಬಾಲಕ ಹೋದಕೂಡಲೇ ಆಯಿತು. ಪುನಃ ಅವನ ದ್ವಂದ್ವಭಾವನೆಗಳು ತಳಮಳಿಸಿದುವು. ಆದರೂ, ಈಗಿದ್ದವ ಬಿಷಪರ ಉಪದೇಶಾನಂತರದ ಜೀನ್‌ವಾಲ್‌ಜೀನ್. ಅವನ ಹಳೇ ವ್ಯಕ್ತಿತ್ವವೇ ಈಗ ನಾಶವಾಗಿದ್ದು, ಹೊಸಬ ಸತ್ತ ಹಳಬನನ್ನು ಮಾತ್ರ ನೋಡುತ್ತಿದ್ದ; ಜೊತೆಯಲ್ಲೇ ಅವನು ದೈವಿಕ ಪ್ರಭಾಯುತ, ಭಯಭಕ್ತಿ ಪ್ರೇರಕ, ಸದ್ಗುಣಿ ಬಿಷಪರನ್ನೂ ಕಾಣತೊಡಗಿದ. ಕೊನೆಗೆ, "ನೀನು ಇನ್ನು ಮುಂದೆ ಸಾತ್ತ್ವಿಕನೇ ಆಗಿರುವೆ—ತಾಮಸಿಯಲ್ಲ; ನಿನ್ನ ತಾಮಸ ಜೀವನವನ್ನು ನಾನು ಪಡೆದು, ಪವಿತ್ರಗೊಳಿಸಿ, ದೇವರಿಗೆ ಅರ್ಪಿಸಿರುವೆನು, ತಿಳಿದಿರು" ಎಂಬ ಮಾತುಗಳೂ ಕಿವಿಯಲ್ಲಿ ಮೊಳಗುತ್ತಿದ್ದುವು. ಜೀನ್‌ವಾಲ್‌ಜೀನ್ ಬಲುವಾಗಿ ಆಲೋಚಿಸಿದ. ತರ್ಕಮಾಡಿದ. ಕೊನೆಗೆ ಇಬ್ಬರು ಜೀನ್‌ವಾಲ್‌ಜೀನರು ಇರಲು ಸಾಧ್ಯವಿಲ್ಲವೆಂದು ತಿಳಿಯತೊಡಗಿದ. ಹಾಗಾದರೆ ಇನ್ನಾಗಬೇಕಾದುದೇನೆಂದೂ ಯೋಚಿಸಿದ. ಬಿಷಪರಿಗಿಂತಲೂ ಉನ್ನತನಾಗಿ, ಉತ್ತಮನಾಗಿ ತಾನು ಬದುಕದಿದ್ದರೆ ಹಿಂದಿನ ಜೀನ್‌ವಾಲ್‌ಜೀನನಿಗಿಂತಲೂ ಅಧಮನಾಗಿಯೇ ಉಳಿಯಬೇಕಾಗುವುದೆಂದೂ ಭಾವಿಸಿದ. ಇಷ್ಟು ತಿಳಿಯುವಾಗಲೇ ಅವನ ಮನೋಪಾಕ ಪೂರ್ಣವಾಯಿತು. ಅವನು ನೋಡುತ್ತಿದ್ದಂತೆಯೇ ರಾಕ್ಷಸೀ ಜೀನ್‌ವಾಲ್‌ಜೀನ್ ಚಿಕ್ಕದಾಗುತ್ತ, ಮಸಕಾಗುತ್ತ, ಮಾಯವಾದ. ಕೊನೆಗೆ ಬಿಷಪರೂ ಅವನೂ ಮಾತ್ರ ಉಳಿದುದನ್ನೇ ಕಂಡ.

ಆತ ಈ ರೀತಿ ಪರಿವರ್ತನೆ ಹೊಂದಿದ ಪುಣ್ಯ ಗಳಿಗೆಯ ಮರುಕ್ಷಣದಲ್ಲಿ ಸೂರ್ಯಾಸ್ತಮಾನವೂ ಪೂರ್ಣವಾಯಿತು. ಆಗ ಅವನ ಏಕಾಕಿತ್ವ, ಬಯಲಿನ ವೈಶಾಲ್ಯ, ಮುಂದುವರಿಯುತ್ತಿದ್ದ ರಾತ್ರಿ ಇವುಗಳೆಲ್ಲದರ ಅರಿವಾಯಿತು. ತಾನು ನಿಂತಲ್ಲಿಂದ ಮುಂದೆ ಹೆಜ್ಜೆ ಎತ್ತುವಾಗ ಪಾದದಡಿಯಲ್ಲಿದ್ದ ಎರಡು ಫ್ರ್ಯಾಂಕಿನ ನಾಣ್ಯ ಕಂಡ. ನಾಣ್ಯದ ಜೊತೆಯಲ್ಲೇ ಅವನಿಗೆ ಜರ್ವಾಯಿಸನ ನೆನಪೂ ಬಂದಿತು. ನಾಣ್ಯವಾದರೋ, ಅದಕ್ಕೆ ಜೀವ ಬಂದು ಅವನನ್ನೇ ತಿವಿಯುತ್ತಿರುವಂತೆ ಹೊಳೆಯಿತು; ಅವನನ್ನು ಹಿಯಾಳಿಸಿದಂತೆಯೂ ತೋರಿತು; ಸಂಸ್ಕಾರ ಹೊಂದಿದ್ದ ಅವನ ಮನಸ್ಸಿಗೆ ತುಂಬ ವೇದನೆ ಕೊಟ್ಟಿತು. ತನ್ನ ಅಚಾತುರ್ಯಕ್ಕಾಗಿ ಹೆದರಿ ನಡುಗಿದ, "ನಾನೊಬ್ಬ ಕಳ್ಳನಾಗಿಬಿಟ್ಟೆ—ಪಾಪಿಯಾಗಿ ಹೋದೆ," ಎಂದು ದುಃಖದಿಂದ ಅಂದುಕೊಂಡ. ಕೊನೆಗೆ ಯೋಚಿಸಿ, "ಜರ್ವಾಯಿಸ್, ಜರ್ವಾಯಿಸ್" ಎಂದು ಕರೆಯುತ್ತ ಜರ್ವಾಯಿಸ್ ಹೋದ ಕಡೆಗೆ ಓಡತೊಡಗಿದ.

ಜರ್ವಾಯಿಸ್ ಎಲ್ಲೂ ಸಿಕ್ಕಲಿಲ್ಲ. ತನಗೆದುರಾಗಿ ಬರುತ್ತಿದ್ದ ಪಾದ್ರಿಯೊಬ್ಬನನ್ನು ಕಂಡು ಜರ್ವಾಯಿಸನನ್ನು ಕಂಡದ್ದುಂಟೋ ಎಂದು ವಿಚಾರಿಸಿದ. ತಾನು ಜರ್ವಾಯಿಸನಂಥ ಯಾವ ಬಾಲಕನನ್ನೂ ಕಾಣಲಿಲ್ಲವಾಗಿ ಪಾದ್ರಿ ತಿಳಿಸಿದ. ಜೀನ್‌ವಾಲ್‌ಜೀನ್ ಜರ್ವಾಯಿಸನನ್ನು ನೆನೆದುಕೊಂಡು "ಬಡವರಿಗಾಗಿ" ಎಂದು ಹೇಳಿ ಪಾದ್ರಿಗೆ ಐದು ಫ್ರ್ಯಾಂಕ್ ದುಡ್ಡು ದಾನ ಮಾಡಿದ. ಪುನಃ ಜರ್ವಾಯಿಸನನ್ನು ಕರೆಯುತ್ತ ಮುಂದೆ ಓಡಿದ. ಮುಂದೆ ಸ್ವಲ್ಪ ದೂರ ಹೋಗಿಯೂ ಜರ್ವಾಯಿಸ್ ಸಿಕ್ಕದೆ, ತಾನು ಪಾದ್ರಿಗೆ ಕೊಟ್ಟ ದುಡ್ಡು ಕಡಿಮೆಯಾಯಿತೆಂದು ದುಃಖಪಡುತ್ತ, ಪಾದ್ರಿಯನ್ನೇ ಹುಡುಕಿಕೊಂಡುಹೋಗಿ, ಪುನಃ ಐದು ಫ್ರ್ಯಾಂಕ್ ದುಡ್ಡು ದಾನಮಾಡಿದ. ಅನಂತರ ಮೊದಲು ಹಿಡಿದಿದ್ದ ದಿಕ್ಕನ್ನೇ ಅನುಸರಿಸಿ ಓಡಿದ.

ಎಷ್ಟು ಪ್ರಯತ್ನಿಸಿದರೂ ಜೀನ್‌ವಾಲ್‌ಜೀನನಿಗೆ ಜರ್ವಾಯಿಸ್ ಸಿಕ್ಕಲಿಲ್ಲ. ಕೊನೆಗೆ ಒಂದು

ಕಡೆ ಕುಳಿತು ಅತ್ತ, ಅಳುತ್ತಿದ್ದ ಹಾಗೆಯೇ ಬಿಷಪರ ಚಿತ್ರವೂ ಅವರ ಮಾತುಗಳೂ ಅವನ ಮನಸ್ಸಿನಲ್ಲಿ ಮೂಡಿದುವು. ಅವನು ಆಗತಾನೆ ಗೈದಿದ್ದ ಪಾಪಕೃತ್ಯಕ್ಕಾಗಿ ಪಶ್ಚಾತ್ತಾಪ ಪಡ ತೊಡಗಿದ. ಪಶ್ಚಾತ್ತಾಪದಿಂದ ಮನಸ್ಸು ಸ್ವಲ್ಪ ಹಗುರವಾಯಿತು. ನಡೆದು ಹೋದುದನ್ನು ವಿಮರ್ಶಾಬುದ್ಧಿಯಿಂದ ನೋಡಿದ. ತಾನು ಬಿಷಪ್ ತೋರಿಸಿಕೊಟ್ಟ ದೇವಲೋಕದ ಮಾರ್ಗ ದಲ್ಲಿ ಮುಂದುವರಿಯುತ್ತಿದ್ದಾಗಲೇ ನರಕಾಸುರ ದೇವಲೋಕದ ಹೆಬ್ಬಾಗಿಲವರೆಗೆ ತನ್ನನ್ನು ಹಿಂಬಾಲಿಸಿ ಬಂದಂತೆ ಅವನು ಗ್ರಹಿಸಿ ವಿಸ್ಮಯಪಟ್ಟ. ಆದರೆ, ತನ್ನ ಗುರಿಯ ಕಡೆಯಿಂದ ಬರು ತ್ತಿದ್ದ ದೈವೀಕ ಪ್ರಭೆಯಲ್ಲೇ ನರಕಾಸುರನನ್ನೂ ಕಂಡದ್ದರಿಂದ, ಅವನು ಅಸುರನಿಂದ ತಪ್ಪಿಸಿ ಕೊಂಡಿರುವುದಾಗಿ ತಿಳಿದುಕೊಂಡ. ತಾನು ಪಾಪಾಸುರನಿಂದ ಸಂಪೂರ್ಣ ಪಾರಾದೆನೆಂದು ಕೊನೆಗೆ ಮನಸ್ಸಿನಲ್ಲೇ ಧೈರ್ಯ ತಂದುಕೊಂಡ.

ಜೀನ್‌ವಾಲ್‌ಜೀನ್ ಈ ವಿಧದ ಚಿಂತನೆಗಳನ್ನು ಮಾಡುತ್ತ ಅಲ್ಲೇ ಎಷ್ಟು ಹೊತ್ತು ಕುಳಿ ತಿದ್ದನೆಂದು ಹೇಳಲಾರೆವು. ಆದರೆ, ಆ ದಿನ ಬೆಳಗ್ಗಿನ ಜಾವದ ಮೂರು ಗಂಟೆಗೆ ಟಪಾಲು ಬಂಡಿ ಯವರು ಬಿಷಪರ ಮನೆ ಎದುರಿಗಾಗಿ ಹೋಗುತ್ತಿದ್ದಾಗ, ಅಲ್ಲಿ—ಬಿಷಪರ ಮನೆಯ ಬಾಗಿಲ ಬಳಿ—ಯಾರೋ ನಮಸ್ಕರಿಸಿ ಪ್ರಾರ್ಥಿಸುತ್ತಿದ್ದುದನ್ನು ಕಂಡ ಸುದ್ದಿ ಇದೆ.

ಮೂರನೆಯ ಸಂಪುಟ

೧. ಜಲಾನಯನ ವರ್ಷ ೧೮೧೭

ಇಸವಿ ೧೮೧೭ ಬಲು ವಿಶೇಷವಾದ ವರ್ಷ. ಹದಿನೆಂಟನೆಯ ಲೂಯಿ ದೊರೆ ಸ್ಥಿರವಾಗಿಯೂ ಅಹಂಭಾವಯುತವಾಗಿಯೂ ರಾಜ್ಯಭಾರ ಮಾಡುತ್ತ ಬಂದ ಇಪ್ಪತ್ತೆರಡನೆಯ ವರ್ಷ ಅದು. ಆ ವರ್ಷದಲ್ಲೇ ಕೌಂಟ್ ಲಿಂಚ್ ದೊಡ್ಡ ಸೈನ್ಯಾಧಿಕಾರಿಯಾಗಿದ್ದುಕೊಂಡೂ ಆದಿತ್ಯವಾರಗಳಲ್ಲಿ ಮಾತ್ರ ದೊಡ್ಡ ಬಿಷಪರಾಗಿ ಮೆರೆಯುತ್ತಿದ್ದುದು. ನೆಪೋಲಿಯನ್ನನಿಗೆ ಹೊಸಬಟ್ಟೆ ಒದಗಿಸಲು ಬ್ರಿಟಿಷರು ನಿರಾಕರಿಸಿದ್ದರಿಂದ ಹಳೆಕೋಟಿನ ಒಳಮೈಯನ್ನು ಹೊರಗೆ ಮಾಡಿ ದುಸ್ತು ಸರಿಪಡಿ ಸಿದ್ದೂ ಆ ವರ್ಷದಲ್ಲೇ. ಹೆಸರುಗಳ, ಮತ್ತು ಶಬ್ದಗಳ ಅಕ್ಷರಗಳನ್ನು ಬದಲಾಯಿಸಿದುದರ ಮೂಲಕ ಭಾಷಾಸುಧಾರಣೆ ಸಾಧಿಸಿದ್ದೂ ಆ ವರ್ಷದಲ್ಲೇ. ವೈಯಕ್ತಿಕ ಪತ್ರಗಳನ್ನು ಅಧಿಕಾರಿಗಳು ತನಿಖೆ ಮಾಡಿ ತಡೆಹಿಡಿಯುವ ಪದ್ಧತಿಯನ್ನು ಪ್ರಾರಂಭಿಸಿದ್ದೂ ಆ ವರ್ಷ. ರಾಜದ್ರೋಹಿಗಳು ರಾಜಭಕ್ತರೆನಿಸಿಕೊಂಡದ್ದು, ಕ್ರಾಂತಿಕಾರರನ್ನು ನಾಶಮಾಡಿ ರಾಜಸತ್ತೆಯನ್ನು ಹದಿನೆಂಟನೆಯ ಲೂಯಿ ಸ್ಥಿರಪಡಿಸಿದ್ದು, ಸಾಹಿತ್ಯ, ನೃತ್ಯ, ಗೀತ ಮೊದಲಾದ ವಿಮರ್ಶೆಯಿಲ್ಲದೆ ಸ್ವೇಚ್ಛೆಯಾಗಿ ಮೆರೆದದ್ದು, ದ್ರೋಹಿಗಳು, ಭಿಕ್ಷುಕರು, ಪಾಪಿಗಳು ಪಕ್ಷಗಳನ್ನೂ ತತ್ತ್ವಗಳನ್ನೂ ಬುದ್ಧಿವಂತಿಕೆ ಯಿಂದ ಮಾರ್ಪಡಿಸಿ, ಮುಖಂಡರೂ ಧನವಂತರೂ ಗಣನೀಯರೂ ಆದದ್ದು ಇದೇ ೧೮೧೭ರಲ್ಲಿ.

ಪ್ಯಾರಿಸ್ ನಗರದ ನಾಲ್ವರು ಯುವಕರು ಗಣನೀಯವಾದದ್ದೊಂದು ಪ್ರಹಸನ ನಡೆಸಿದ್ದೂ ಇದೇ ೧೮೧೭ರಲ್ಲೇ.

೨. ದ್ವಿಚತುಷ್ಕ

ಪ್ಯಾರಿಸಿನ ಈ ನಾಲ್ವರು ಯುವಕರು ಫ್ರಾನ್ಸಿನ ನಾಲ್ಕು ಕಡೆಗಳಿಂದ ಬಂದಿದ್ದರು. ಆದರೆ ಪ್ಯಾರಿಸ್ ನಗರದಲ್ಲಿ ವಿದ್ಯೆ ಓದುವುದೆಂದರೆ ಅಲ್ಲಿಯೇ ಹುಟ್ಟಿಬೆಳೆದಂತೆ ಸಂಪೂರ್ಣ ಪ್ಯಾರಿಸಿನವರೇ ಆಗಿಬಿಡುವುದು. ಈ ಯುವಕರು ತಮ್ಮೂರು ಬಿಟ್ಟ ಮೇಲೆ ಹೀಗಾಗಿದ್ದರು. ಯುವಕರ ಜೀವನ ಯಾವ ಸಡಗರದಲ್ಲಿ ನಡೆಯಬೇಕು, ಯಾವ ಎಲ್ಲ ಮೋಜುಗಳನ್ನು ಅಭ್ಯಸಿಸಬೇಕು ಎಂಬ ದಾಖಲೆ ಯಾರಿಗಾದರೂ ಬೇಕಾದರೆ ಈ ನಾಲ್ವರನ್ನು ನೋಡಿ ಪಡೆಯಬಹುದಿತ್ತು. ಇವರ ಹೆಸರು ತಾಲೋಮಿಸ್, ಲಿಸ್ಟೋಲಿಯರ್, ಫೇಮ್ಯುಯಲ್, ಮತ್ತೂ ಬ್ಲಾಚೆವೆಲ್. ಈ ನಾಲ್ವರಿಗೆ ನಾಲ್ವರು ಪ್ರೇಯಸಿಯರೂ ಇದ್ದರು. ಈ ಜೋಡಿಗಳನ್ನು 'ದಂಪತಿಗಳು' ಎನ್ನುವ ಹಕ್ಕು ನಮಗಿಲ್ಲ. ಹಾಗೆ ನಾವನ್ನದಿದ್ದರೂ ನಿಜಸ್ಥಿತಿ ಬದಲಾಗದು. ಪ್ರೇಯಸಿಯರೆಲ್ಲರೂ ತರುಣಿಯರೇ ಆಗಿದ್ದರು. ಅಂದರೆ, ಸದ್ಯ ಪ್ರಾಯಬಂದವರು, ಬಾಲಿಕೆಯರ ಮಿರುಗು ಮಾಸದವರು : ಫೇವರೈಟ್, ಡೇಲಿಯಾ, ಸೆಫೈನ್, ಮತ್ತು ಫ್ಯಾಂಟೈನ್. ಇವರ ಪೈಕಿ ಫ್ಯಾಂಟೈನ್ ಅತಿ ಚಿಕ್ಕವಳು. ಈ ನಾಲ್ವರು ತಂತಮ್ಮ ಯುವಕ ಸ್ನೇಹಿತರ ಸಹವಾಸದಿಂದ ತಮ್ಮ ದುಡಿತದ ಬಾಳ್ವೆಯನ್ನು ಬಿಟ್ಟು ವಿಲಾಸಮಯ ಬಾಳ್ವೆಗೆ ಸದ್ಯ ಬಂದಿದ್ದರು. ಫ್ಯಾಂಟೈನಳ ಹೊರತು ಇತರ ಮೂವರೂ ಇದಕ್ಕೆ ಮೊದಲು ಬೇರೆ ಯುವಕರ ಸ್ನೇಹವನ್ನು ಬೆಳೆಸಿಕೊಂಡು, ಮರೆದು, ಸದ್ಯ ಈಗಿನ ಜೋಡಿ ಸೇರಿದವರು. ಇವರೆಲ್ಲರೂ ಬಡವರ, ಅನಾಮಧೇಯರ ಮಕ್ಕಳು. ಒಯ್ಯಾರವೂ ಬಡತನವೂ ಇವರ ಅಂತರಂಗದ ಪ್ರೇರಕ ಸಲಹೆಗಾರರಾಗಿದ್ದುವು. ಒಯ್ಯಾರ ಅವರನ್ನು ಹೊಗಳುತ್ತಲೂ ಬಡತನ ತೆಗಳುತ್ತಲೂ ಇದ್ದುವು. ಈ ಸಲಹೆಗಾರರ ಮಾತನ್ನು ಕೇಳಿ ಅನೇಕ ಹಸುಳೆಯರು ಬಡತನವನ್ನು ಅಡಗಿಸಿ, ಒನಪನ್ನು ಅನುಕರಿಸಿ, ಗೊತ್ತುಗುರಿಯಿಲ್ಲದ ಪ್ರಪಾತಕ್ಕೆ ಬಿದ್ದು ಮಣ್ಣು ಪಾಲಾದುದುಂಟು. ತಂತಮ್ಮ ಜವ್ವನ, ರೂಪ, ಸ್ವರ ಇವುಗಳಿಂದ ಇವರು ಈ ನಾಲ್ವರು ಯುವಕರನ್ನು ಆಕರ್ಷಿಸಿದರು. ಅಥವಾ, ವಿಲಾಸಮಯ ಜೀವನದ ಆಸೆಯಿಂದ ಈ ಯುವಕರಿಂದ ಅವರೇ ಆಕರ್ಷಿಸಲ್ಪಟ್ಟು, ಕಾಣದ ಪ್ರಪಾತಕ್ಕೆ ದುಮುಕಿದ್ದರು.

ಫ್ಯಾಂಟೈನ್ ಸುಂದರಿ. ಬಲು ಸರಳ ಸ್ವಭಾವದ ಕೇವಲ ಹಸುಳೆ. ಸಂಶಯಗ್ರಸ್ತ ಕುಲೋತ್ಪನ್ನತೆಯ ಕಳೆ ಅವಳ ಮುಖದಲ್ಲಿ ಸ್ವಲ್ಪ ಕಾಣಬಹುದಾಗಿದ್ದರೂ ಅವಳ ಹೃದಯ ನಿಷ್ಕಳಂಕವಾಗಿದ್ದು, ಈ ಸ್ವಭಾವದಿಂದಲೇ ಅವಳು ತಾಲೋಮಿಸನನ್ನು ವರಿಸಿದ್ದಳು. ಅವಳು ಎಮ್—ಪಟ್ಟಣದಲ್ಲಿ ಹುಟ್ಟಿದವಳೆಂದು ಮಾತ್ರ ಅವಳಿಗೆ ಗೊತ್ತಿತ್ತು. ಅವಳ ತಂದೆ ಯಾರು, ತಾಯಿ ಯಾರು ಎಂಬುದು ಗೊತ್ತಿರಲಿಲ್ಲ. ತನ್ನ ಹೆಸರು ಫ್ಯಾಂಟೈನ್ ಎಂದು ಅವಳು ಹೇಳಿಕೊಂಡಿದ್ದಳು. ಏಕೆ ಹಾಗೆ ಅನ್ನಬೇಕು? ಬೇರೊಂದು ಹೆಸರಿನಿಂದ ಅವಳನ್ನು ಯಾರೂ ಕರೆಯದಿದ್ದುದರಿಂದ. ಇಷ್ಟೇ ಗೊತ್ತು ಅವಳಿಗೆ. ಚಿಕ್ಕವಳಾಗಿದ್ದಾಗ ಹಳ್ಳಿಯಲ್ಲಿದ್ದಳು. ಕೃಷಿ ಸಂಬಂಧದ ಕೆಲಸ ಮಾಡುತ್ತಿದ್ದಳು. ದೊಡ್ಡವಳಾದಾಗ ನಗರ ಸೇರಿ ತಾಲೋಮಿಸನ ಜೊತೆ ಸುಖವಾಗಿದ್ದಾಳೆ. ಇದಕ್ಕಿಂತ ಹೆಚ್ಚಿನ ಆಲೋಚನೆ ಅವಳಿಗಿರಲಿಲ್ಲ. ಹೊಟ್ಟೆ ಹಸಿವೆಗಾಗಿ ದುಡಿಯುತ್ತಿದ್ದವಳು, ಹೃದಯದ ಹಸಿವೆಗಾಗಿ ಗಂಡುಸನ್ನು ಪ್ರೀತಿಸುತ್ತಿದ್ದಾಳೆ. ಈ ಎರಡೂ ಭಾವನೆಗಳು ಸ್ವಾಭಾವಿಕ. ಇದರಲ್ಲಿ ಕೊರತೆಯಿರಲಿಲ್ಲ. ಫ್ಯಾಂಟೈನ್ ಸುಂದರಿ ಮಾತ್ರವಲ್ಲ, ಅವಳು ತಾಲೋಮಿಸನಿಗೆ ಮುತ್ತು ಚಿನ್ನಗಳ ಬಳುವಳಿ ತಂದಿದ್ದಳು—ಅವಳ ಹಲ್ಲುಗಳೇ ಮುತ್ತುಗಳು, ಕೂದಲೇ ಚಿನ್ನ !

ತಾಲೋಮಿಸ್ ಈ ಗುಂಪಿನ ಮುಖಂಡ. ಅವನ ಪ್ರಾಯ ಮೂವತ್ತು ವರ್ಷವಾಗಬಹುದು.

ಮೂವತ್ತಕ್ಕೇ ಮುದುಕನಾಗಿದ್ದ. ಹಲ್ಲು ಕಳಚಿತ್ತು. ತಲೆ ಸಾಣೆ ಹೋಗಿತ್ತು. ದೃಷ್ಟಿ ಮಂದವಾಗಿತ್ತು. ಜೀರ್ಣಾವಯವ ನಿಶ್ಶಕ್ತವಾಗಿತ್ತು. ಪ್ರಾಯ ಏರಿದ್ದನ್ನು ದೇಹಚಟುವಟಿಕೆಯಿಂದಲೂ ಹಲ್ಲು ಹೋಗಿದ್ದುದನ್ನು ಹಾಸ್ಯದಿಂದಲೂ ನಷ್ಟ ಆರೋಗ್ಯವನ್ನು ಕ್ರೂರ ಕುಚೋದ್ಯದಿಂದಲೂ ಅಡಗಿಸುತ್ತಿದ್ದ. ನೀರು ಸುರಿಯುತ್ತಿದ್ದ ಕಣ್ಣಿನಿಂದ ಸದಾ ನಗುತ್ತಿರುವವನಂತೆ ನಟಿಸಿ, ಕಣ್ಣಿನ ಕುರೂಪವನ್ನು ಮರೆಮಾಚುತ್ತಿದ್ದ. ಅವನಲ್ಲಿ ಯೌವನ ಕಾಣಿಸದಿದ್ದರೂ ಯೌವನದ ಕಾವು ತಣಿದಿರಲಿಲ್ಲ. ಅವನೊಬ್ಬ ಕವಿಯಾಗಿದ್ದ. ಎಲ್ಲದರಲ್ಲೂ ಅವನಿಗೆ ತಪ್ಪು ಕಂಡು ಬರುತ್ತಿತ್ತು. ಈ ಎರಡು ಗುಣಗಳೇ ಅವನಿಗೆ ಶಕ್ತಿಗಳಾಗಿ, ಅವನು ತನ್ನ ಗುಂಪಿನಲ್ಲಿ ವಿರಾಜಿಸುತ್ತಿದ್ದ.

ಒಂದು ದಿನ ತಾಲೋಮಿಸ್ ತನ್ನ ಯುವಕ ಸ್ನೇಹಿತರನ್ನು ಮಾತ್ರ ಕರೆದು ಅವರಲ್ಲಿ ಹೀಗೆಂದ, "ನಮ್ಮ ಪ್ರಿಯ ಸ್ನೇಹಿತೆಯರಿಗೆ ಮಹದಾಶ್ಚರ್ಯವೊಂದನ್ನು ತೋರಿಸುವೆವು ಎಂದು ವಾಗ್ದಾನ ಮಾಡಿ ಒಂದು ವರ್ಷವಾಗುತ್ತ ಬಂತು. ಅವರೂ ಆ ಮಹದಾಶ್ಚರ್ಯ ದರ್ಶನಕ್ಕಾಗಿ ನಮ್ಮನ್ನು ಒತ್ತಾಯಿಸುತ್ತಿದ್ದಾರಷ್ಟೆ. ನಾವು ಮನೆಗೆ ಹಿಂತಿರುಗಬೇಕೆಂದು ನಮ್ಮ ಹಿರಿಯರೂ ಪತ್ರ ಬರೆಯುತ್ತಿದ್ದಾರೆ. ಈ ಮಹದಾಶ್ಚರ್ಯವನ್ನು ತೋರಿಸಲು ಈಗಲೇ ತಕ್ಕ ಸಮಯ ಒದಗಿದೆ. ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನು ಉದುರಿಸೋಣ."

ಅನಂತರ ಅವರೆಲ್ಲರೂ ಬಲುಗುಟ್ಟಾಗಿ, ರಹಸ್ಯ ಸಂಗತಿಗಳನ್ನು, ಮಾತಾಡಿದರು. ಈ ಮಾತಿನ ಮಧ್ಯೆ ಅವರು ಸೇದುತ್ತಿದ್ದ ಚುಟ್ಟದ ಹೊಗೆಯಲ್ಲಿ ಅವರು ಸ್ವಲ್ಪಕಾಲ ಅಂತರ್ಧಾನ ವನ್ನೇ ಹೊಂದಿದ್ದರು.

ಈ ಧೂಮದಿಂದುಂಟಾದುದೇ ಪ್ರಕಾಶ: ಮರು ಆದಿತ್ಯವಾರ ಥಳುಕಿನ ವಿಹಾರ ಜರಗಿಸುವುದೆಂದು ನಿಶ್ಚೈಸಿದರು. ಈ ನಾಲ್ವರು ಯುವಕರು ಅವರವರ ಯುವತಿಯರನ್ನು ಈ ವಿಹಾರ ಕೂಟಕ್ಕೆ ಆಮಂತ್ರಿಸಿದರು.

೩. ಯಾರು ಸುಂದರರು ಈ ನಾಲ್ವರೊಳಗೆ ?

ನಾಲ್ಕು ಜೋಡಿಗಳು ಮೊದಲೇ ಏರ್ಪಡಿಸಿಕೊಂಡಿದ್ದಂತೆ ಆದಿತ್ಯವಾರ ಬೆಳಗ್ಗೆ ಐದು ಗಂಟೆಗೇ ಎದ್ದರು. ಸಿಂಗರಿಸಿಕೊಂಡರು. ಸಾರೋಟಿನಲ್ಲಿ ಕುಳಿತು ಹೋಟೇಲಿಗೆ ಹೋದರು. ಪ್ರಕಾಶಮಾನವಾದ ಆ ಪ್ರಾತಃಕಾಲ ಸಾರೋಟಿನಲ್ಲೇ ಕುಳಿತು ಸೇಂಟ್ ಕ್ಲೌಡಿನ ಪ್ರಪಾತ ನೋಡಲು ತೆರಳಿದರು. ಅಲ್ಲಿ ಜಲವಿದ್ದಿದ್ದರೆ ಬಲುಬೆಡಗಿನ ಜಲಪಾತವಾಗುತ್ತಿತ್ತೆಂದು ಎಲ್ಲರೂ ಘೋಷಿಸಿದರು. ಹೊಟೇಲಿನಲ್ಲೂ ತಿರುಗಾಡುತ್ತಿದ್ದಾಗಲೂ ತಿಂದರು, ಕುಡಿದರು, ಆಡಿದರು, ಹರಟಿದರು, ಹಾರಾಡಿದರು; ಹಕ್ಕಿಗಳಂತೆ ಚಲಪಿಲನೆ ಮಾತಾಡಿ, ನಕ್ಕು ನಲಿದರು. ರೆಕ್ಕೆ ಬಂದ ಪತಂಗಗಳಂತೆ ಈ ಸ್ತ್ರೀಯರು ನಲಿದಾಡಿ ಅಲೆದಾಡಿದರು. ಯುವತಿಯರ ಒಯ್ಯಾರವನ್ನೂ ಸೌಂದರ್ಯವನ್ನೂ ಕಂಡು ಯುವಕರು ಹರ್ಷೋನ್ಮತ್ತರಾದರು. ಯುವತಿಯರ ಕೈಹಿಡಿದು ಎಳೆದಾಡಿ ಒಟ್ಟೊಟ್ಟಿಗೆ ತಿರುಗಿದರು. ಓದುಗರೇ ನೀವು ಯಾರೇ ಇದ್ದರೂ ಈ ವಿಷಯ ಗ್ರಹಿಸಿರುವಿರೇನು? ನಿಮ್ಮ ಹಿಂದೆಯೇ ಬರುತ್ತಿರುವ ಮುದ್ದು ಮೊಗಕ್ಕೆ ಅಡ್ಡಬರುತ್ತಿರುವ ಗೆಲ್ಲುಗಳನ್ನು ಎಳೆದು ಹಿಡಿದು ಕಾಡಿನಲ್ಲಿ ನಡೆಸಿ ನೋಡಿರುವಿರೇನು? ಸುಂದರೀಮಣಿ ಒಬ್ಬಳನ್ನು ಜಾರುವ ಮಾರ್ಗದಲ್ಲಿ, ಕೈಸೇತುವೆಯಲ್ಲಿ, ಕೈಹಿಡಿದು ನಡೆಸಿದ್ದು ಜ್ಞಾಪಕವಿದೆಯೇ? ಈ ಎಲ್ಲ ಅನುಭವಗಳ ಸವಿಯನ್ನು, ಈ ಜೋಡಿಗಳವರು ಮೆದ್ದರು. ಈ ತರುಣ ತರುಣಿಯರ ಸೌಂದರ್ಯ, ಸೊಬಗು, ಬೆಡಗುಗಳನ್ನು

ಮರದಡಿಯಲ್ಲಿ ಮೌನವಾಗಿ ಕುಳಿತಿದ್ದ ಕವಿಯೊಬ್ಬ ಕಂಡು ಅಪ್ಸರೆ ಯರ ಸಂಖ್ಯೆಯಲ್ಲಿ ನಾಲ್ಕು ಕಡಿಮೆಯಾಯಿತೆಂದು ಈ ನಾಲ್ವರನ್ನು ಬಣ್ಣಿಸಿದನಂತೆ. ಈ ಸಮಯದಲ್ಲೇ ತಲೆಕೂದಲು ಜಡೆಯಾಗಿ ಶೋಭಿಸಬೇಕೋ, ಅಥವಾ, ಒಂದು ಕ್ರಮದಿಂದ ಹರಡಿ ಮೆರೆಯಬೇಕೋ ಎಂಬ ಚರ್ಚೆ ಅವರಲ್ಲಿ ನಡೆಯಿತು. ಫ್ಯಾಂಟೈನಳ ತಲೆಗೂದಲು ಹರಡಿಕೊಂಡಿರಲು ಪ್ರಾರಂಭಿಸಿ, ಸೌಜನ್ಯಕ್ಕಾಗಿ, ಅಲ್ಲಿಂದ ಅಮರಿ ಕುಳಿತುಕೊಂಡು, ಸಂದಿಗ್ಧ ತೀರ್ಪನ್ನು ಕೊಡುವಂತಿತ್ತು.

ಗುಂಪಿನ ಮುಖಂಡ ತಾಲೋಮಿಸ್ ಹೆಚ್ಚು ಕ್ರಯದ ಬೆತ್ತ ಹಿಡಿದುಕೊಂಡು, ಯಾರ ದಾಕ್ಷಿಣ್ಯಕ್ಕೂ ಅಂಜದೆ, ಅಳುಕದ ಎದೆಗಾರಿಕೆಯಿಂದ, ಸದಾ ಸಿಗರೆಟ್ ಸೇದುತ್ತ, ತಮ್ಮ ಕೂಟವನ್ನು ವ್ಯವಸ್ಥೆಯಲ್ಲಿಡುತ್ತಿದ್ದ.

ಈ ನಾಲ್ವರು ಯುವತಿಯರಲ್ಲಿ ಫ್ಯಾಂಟೈನಳೇ ಪರಮ ಸುಂದರಿ. ಸಂತೋಷವೇ ಮೈವೆತ್ತು ನಲಿಯುತ್ತಿರುವಂತೆ ತೋರುತ್ತಿದ್ದಳು. ನಗೆಯ ಸೊಬಗನ್ನು ಹೆಚ್ಚಿಸಲೋಸ್ಕರವೇ ಪ್ರಕೃತಿ ಅವಳಿಗೆ ಮುತ್ತಿನಂಥ ಹಲ್ಲುಕೊಟ್ಟಿತ್ತು. ತುಟಿಯ ಸೌಂದರ್ಯದಿಂದ ಅವಳ ಮಾತಿನ ಮಾಧುರ್ಯ ಮತ್ತಷ್ಟು ಹೆಚ್ಚುತ್ತಿತ್ತು. ಬಾಯಿ ಕೆನ್ನೆಗಳು ಮುತ್ತಿಟ್ಟುಬಿಡೋಣವೆಂದು ನೋಡಿದವರ ಮನಸ್ಸನ್ನು ಸೆಳೆಯುತ್ತಿದ್ದುವಾದರೂ ಅವಳ ಕಣ್ಣು, ರೆಪ್ಪೆ ಹಲ್ಲುಗಳು ನೋಡಿದವರ ಮನಸ್ಸಿನಲ್ಲಿ ಅವಳ ಕುರಿತು ಪೂಜ್ಯಭಾವವನ್ನು ಪ್ರೇರಿಸುತ್ತಿದ್ದುವು. ಅರೆಬತ್ತಲೆಯ ಉಡುಪಿನಿಂದ ಅಲಂಕಾರನೈಪುಣ್ಯ ಸಾಧಿಸುತ್ತಿದ್ದ ಆ ಮೂವರು ಯುವತಿಯರ ಎದುರು, ಇವಳು ತೆಳ್ಳಗಿನ ಬಟ್ಟೆಯಿಂದ ಮೈತುಂಬ ಮುಚ್ಚಿಕೊಂಡು, ಹಾಗೆ ಮುಚ್ಚಿಕೊಂಡಿರುವ ಧೈರ್ಯದಿಂದ ಮೈಮರೆತು ನಲಿದಾಗ್ಗೆ, ಅವಳಿಗೆ ತಿಳಿಯದೆ, ಅವಳು ಎಲ್ಲರಿಗಿಂತಲೂ ಹೆಚ್ಚಿನ ಸುಂದರಿಯಾಗಿ ಮೆರೆಯುತ್ತಿದ್ದಳು.

ಫ್ಯಾಂಟೈನಳ ರೂಪಲಾವಣ್ಯಗಳನ್ನು ಪೂರ್ಣ ವರ್ಣಿಸುವುದು ಅಸಾಧ್ಯ. ಅಂತಶ್ಚಕ್ಷುಸ್ಸಿನ ಭಾವನೆಗಳನ್ನು ಬಾಹ್ಯಸಾಧನೆಗಳಿಂದ ವರ್ಣಿಸಬಹುದಾದರೆ, ಅವಳನ್ನು ಎದುರಿನಿಂದ ನೋಡಿದಾಗ ಅವಳೊಂದು ಮಹಾತೇಜಸ್ಸಿನಂತೆ ಮಾತ್ರ ತೋರಿ, ನೋಡಿದವರನ್ನು ದಿಗ್ಭ್ರಮೆಗೊಳಿಸುತ್ತಿದ್ದಳು; ಪಕ್ಕದಿಂದ ನೋಡಿದರೆ ಅವಳ ಅಂಗಗಳು ಒಂದನ್ನೊಂದು ಎಷ್ಟೊಂದು ಲಲಿತವಾಗಿ ಸಹಕರಿಸಿ, ಅವಳ ರೂಪಕ್ಕೆ ಪರಿಪೂರ್ಣತೆ ಕೊಟ್ಟಿದ್ದುವೆಂದು ವಿಸ್ಮಯ ಪಡುತ್ತಿದ್ದೆವು. ನೀಲಿ ಮಿಶ್ರಿತ ಕಪ್ಪು ಕಣ್ಣುಗಳು, ಅಗಲ ರೆಪ್ಪೆಗಳು, ತುಂಬಿದ ಕತ್ತು, ಎಳೆಕೂಸಿನ ಮೃದುತ್ವವೂ ಪುಷ್ಟಿಯೂ ಇದ್ದ ದುಂಡು ಕೆನ್ನೆಗಳು, ಬಿಳಿದಾಗಿ, ಕೋಮಲವಾಗಿ, ಜೀವಕಳೆ ತುಂಬಿ ತೋರುವ ಚರ್ಮ, ಆಕಾಶನೀಲಿಯ ರಕ್ತನಾಳಗಳು ಕಂಡೂ ಕವಲೊಡೆದೂ ಕಾಣದೆ ಆಗುವ ಬಣ್ಣದ ಚಾಂಚಲ್ಯ, ತುಂಬಿದ ದುಂಡಾದ ತೋಳುಗಳಲ್ಲಿ ಚಿಕ್ಕ ಕುಳಿ—ಈ ತೆರನಾಗಿ, ಮೆರೆದು ಮೈಮರೆಸುವ ತಾರುಣ್ಯದ ಚೈತನ್ಯಯುತ ಸುಂದರ ಕೃತಿಯೇ ಫ್ಯಾಂಟೈನ್ ಆಗಿದ್ದಳು. ಅವಳು ಸುಂದರಿಯಾಗಿದ್ದರೂ ಅದರ ಅರಿವು ಇಲ್ಲದ ಕೋಮಲ ಹಸುಳೆಯೇ ಆಗಿದ್ದಳು. ಚೇತನ ಸ್ವರೂಪದ ರಕ್ತ, ಮತ್ತು ಸ್ಥಿರಸ್ವರೂಪದ ಅಸ್ಥಿಮಾಂಸಗಳಿಂದ ಕೂಡಿದ್ದ ಆಕೆಯ ಮೈಕಟ್ಟು ಕಲಾವಿದರ ಆರಾಧ್ಯದೇವತೆಯಲ್ಲಿ ಇರಬಹುದಾದಂತೆ ಇತ್ತು.

ಅವಳು ಚೇತನಾಮಯಿಯೂ ಆನಂದಮಯಿಯೂ ಆಗಿದ್ದಳು; ಅಲ್ಲದೆ, ವಿನಯ, ಗಾಂಭೀರ್ಯಯುತಳೂ ಹೌದು. ಅವರೆಲ್ಲರೂ ಎಷ್ಟೇ ಹರ್ಷೋನ್ಮತ್ತರಾಗಿ ನಲಿಯುತ್ತಿದ್ದರೂ ಫ್ಯಾಂಟೈನ್ ಮಾತ್ರ ಸ್ವಲ್ಪ ಸಂಕೋಚಭಾವದಲ್ಲಿಯೇ ಇರುತ್ತಿದ್ದಳು. ಅವಳು ಬ್ರಹ್ಮಚಾರಿಣಿಯ ತೇಜಸ್ಸಿನಿಂದ ಪ್ರಕಾಶಿಸುತ್ತಿದ್ದಳು. ಅವಳ ಮುಖದಲ್ಲಿ ಆನಂದ, ಆಶ್ಚರ್ಯ, ಅನುಕಂಪ, ಆಲೋಚನಾಪರತೆ, ಧ್ಯಾನತಲ್ಲೀನತೆ ಇವು ಗಡಿಕಾಣದ ಕ್ರಮದಲ್ಲಿ ಬೆರೆತು ತೋರ್ಪಡಿಸಿ

ಕೊಂಡು, ಅವಳನ್ನು ನೋಡುತ್ತಿದ್ದವರ ಮನಸ್ಸಿನಲ್ಲಿ ದೈವಸಾನ್ನಿಧ್ಯದ ಭಾವವನ್ನು ಪ್ರೇರಿಸುತ್ತಿದ್ದುವು. ಇಂಥ ಪರಮ ಅಕಳಂಕಿತೆ ಫ್ಯಾಂಟೈನ್ ತಾಲೋಮಿಸನಲ್ಲಿ ಪವಿತ್ರಪ್ರೇಮ ಇಟ್ಟಿದ್ದಳು. ಪ್ರಕೃತದ ಸಂದರ್ಭ ಸನ್ನಿವೇಶಗಳು ಫ್ಯಾಂಟೈನಳ ಪಾವಿತ್ರ್ಯಕ್ಕೆ ಸ್ವಲ್ಪ ಕಳಂಕವನ್ನೊಡ್ಡಬಹುದು ನಿಜ. ಅಂದರೆ, ಪಾಪಿಗಳ ಮೇಲಿಟ್ಟ ಪ್ರೇಮವೂ ಪಾಪವಾಗಿ ತೋರ್ಪಡುವುದುಂಟು.

ಆದರೆ, ಆಕೆ ಮಾತ್ರ ನಿಷ್ಕಳಂಕವೇ ಹೂವಾಗಿ ಪಾಪದ ಅಲೆಗಳ ಮೇಲೆ ತೇಲುವಂತಿದ್ದಳು.

೪. ನಗ್ನತೆಯ ಮೇಲೆ ಎಳೆದ ಹಾಡಿನ ಪರದೆ

ಈ ಎಂಟು ಜನ ವಿಲಾಸಿಗಳಿಗೆ ದಿನವೆಲ್ಲ ಸುಪ್ರಭಾತವೇ ಆಗಿತ್ತು. ಯಾರು ಎಷ್ಟು ಮಾತಾಡಿ, ನಕ್ಕು ನಲಿದರೂ ಶ್ರಮವೆಂಬುದನ್ನೇ ಅವರು ಕಾಣಲಿಲ್ಲ. ಆ ದಿನ ಆದಿತ್ಯವಾರವಾಗಿದ್ದುದರಿಂದ ಶ್ರಮವೇ ರಜೆ ತೆಗೆದುಕೊಂಡಿರಬೇಕೆಂದು ಅವರಲ್ಲೊಬ್ಬ ಹೇಳಿದ.

ಜನರ ವಿಶ್ರಾಂತಿ, ವಿಹಾರ, ವಿಲಾಸಗಳಿಗಾಗಿ ಪ್ಯಾರಿಸ್ ನಗರದಲ್ಲಿ ತಳಿರು ತೋರಣ, ಲತಾ ಪುಷ್ಪ, ಹಸುರುಹುಲ್ಲಿನ ಮೈದಾನ, ಸಮತಟ್ಟಾದ ಹಾಸುಗಲ್ಲಿನ ನೆರಳಡಿಯ ಶೀತಳ ನೆಲ, ಮೃದುವಾಗಿ ಏರಿತಗ್ಗುವ ಚಿಕ್ಕ ಗುಡ್ಡಗಳು, ಆಕಾಶಕ್ಕೆ ಮುಖವಾಗಿ ಬೆಳೆದ, ಮಂದಮಾರುತನ ಹತ್ತಿರ ತಮ್ಮ ಹತ್ತಾರು ಬಾಹುಗಳಿಂದ ಕೈಸನ್ನೆಮಾಡಿ ಮಾತಾಡಬಲ್ಲ ವೃಕ್ಷ ಸಮೂಹ—ಈ ಎಲ್ಲ ಅನುಕೂಲತೆಗಳಿವೆ. ಇವೆಲ್ಲವನ್ನೂ ಸುತ್ತಾಡಿ, ನೋಡಿ, ಅವುಗಳಲ್ಲಿ ಸವಿಯಬಹುದಾದ ಆನಂದವನ್ನು ಅನುಭವಿಸಿ ನೋಡಿ, ಬಯಲು ಹೊಲ ಪುಷ್ಪಗಳ ಸುವಾಸನೆ ಒಟ್ಟಾಗಿ ಗಾಳಿಯಲ್ಲಿ ಬರುವುದನ್ನು ಆಘ್ರಾಣಿಸಿ, ಕೊನೆಗೆ ಉಯ್ಯಾಲೆ ಕಡೆಗೆ ಈ ಯುವಕಯುವತಿಯರು ಹೋದರು. ದೊಡ್ಡ ಮರದ ಕೊಂಬೆಯಿಂದ ತೂಗಾಡುತ್ತಿದ್ದ ಹಗ್ಗದ ಉಯ್ಯಾಲೆಯಲ್ಲಿ ಫೇವರೈಟ್, ಢೇಲಿಯಾ ಮತ್ತು ಸೆಫೈನ್ ಒಬ್ಬರಾದ ಮೇಲೆ ಮತ್ತೊಬ್ಬರು ಕುಳಿತು ಓಲಾಡಿದರು. ಅವರ ಲಂಗರವಕೆಗಳು ಗಾಳಿಯಲ್ಲಿ ಹಾರಾಡಿ, ನೋಡುವವರನ್ನು ಬೆರಗುಗೊಳಿಸಿ, ಮತ್ತೊಮ್ಮೆ ನೋಡುವಂತೆಯೂ ನಾಚಿ ನೋಡದಿರುವಂತೆಯೂ ಮಾಡಿದುವು. ಫ್ಯಾಂಟೈನ್ ಬದಿಯಲ್ಲಿ ಶಿಲಾ ನಿರ್ಮಿತ ದೇವಕನ್ನೆಯಂತೆ ಕುಳಿತಿದ್ದಳು. ತಾಲೋಮಿಸ್ ಮರದಡಿಯಲ್ಲಿ ಕುಳಿತು ಸುಂದರೀ ಮಣಿಯರನ್ನು ನೋಡುತ್ತ, ವಿಲಾಸಮಯ ಅರ್ಥವುಳ್ಳ ಪದವನ್ನು ಬಲು ಮಧುರವಾಗಿ ಹಾಡಿದ. ಪದವನ್ನು ಕೇಳಿ ಎಲ್ಲರೂ ಸಂತೋಷಪಟ್ಟರು, ಕೈಚಪ್ಪಾಳೆ ಹೊಡೆದರು, ತಾಲೋಮಿಸನನ್ನು ಹೊಗಳಿದರು.

ಈ ಗಲಭೆಯಲ್ಲಿ ವಿಶೇಷ ಭಾಗವಹಿಸದಿದ್ದ ಫ್ಯಾಂಟೈನಳನ್ನು ನೋಡಿ ಡೇಲಿಯಾ ಅಂದಳು, "ಇಷ್ಟೊಂದು ನಾಚಿಕೆಯಿರಬಾರದು."

"ಅದು ಕಳ್ಳನಾಚಿಕೆ—ನಟನೆ," ಅಂದಳು ಫೇವರೈಟ್.

"ಆ ಕಥೆ ಹಾಗಿರಲಿ, ನಮಗೆ ತೋರಿಸುವುದಾಗಿ ವಾಗ್ದಾನವಿತ್ತ ಮಹದಾಶ್ಚರ್ಯದ ವಿನೋದವೆಲ್ಲಿ?" ಎಂದು ಯುವಕರನ್ನು ನೋಡುತ್ತ ಸೆಫೈನ್ ಕೇಳಿದಳು.

"ಸ್ವಲ್ಪ ಸಮಾಧಾನ ತಾಳು, ತೋರಿಸುತ್ತೇನೆ," ಅಂದ ತಾಲೋಮಿಸ್.

೫. ಬೊಂಬಾರ್ಡನ ಖಾನಾವಳಿಯಲ್ಲಿ bombardment !

ಆಟ ಮುಗಿದ ಹಾಗೆ ಊಟ ನೆನಪಾಯಿತು. ಬೊಂಬಾರ್ಡನ ಖಾನಾವಳಿ ಮಧ್ಯಮ ತರದ ಜನರಲ್ಲಿ ಬಹಳ ಪ್ರಖ್ಯಾತವಾಗಿತ್ತು. ಅವರೆಲ್ಲರೂ ಅಲ್ಲಿಗೇ ಹೋದರು. ಅಲ್ಲಿ ತರತರದ ತಿಂಡಿ ತೀರ್ಥಗಳನ್ನು ತಿಂದುಕುಡಿದರು. ಕೊನೆಗೆ ಗಂಡಸರು ಮಾದಕಪಾನೀಯಗಳನ್ನು ಕುಡಿಯ ಲಾರಂಭಿಸಿದರು.

ಮಾದಕ ಒಳಹೊಕ್ಕ ಹಾಗೆ ಮಾತು ಹೆಚ್ಚಾಯಿತು. ಕೆಲವರು ಪದ ಹಾಡಿದರು. ಮುಂದೆ ಭಾಷಣ ಪ್ರಾರಂಭವಾಯಿತು. ಭಾಷಣದಲ್ಲಿ ಶಬ್ದಗಳನ್ನು ವಿವಿಧವಾಗಿ ಉಚ್ಚರಿಸಿ ನಕ್ಕರು. ನಾನಾ ಅರ್ಥ ಬರುವಂತೆ ವ್ಯಂಗ್ಯಗಳನ್ನಾಡಿದರು. ವಿನೋದ ವೈಖರಿ ಏರುತ್ತ ಅಭಿನಯ ಮತ್ತು ನಾಟ್ಯ ಪ್ರಾರಂಭವಾದುವು.

ಖಾನಾವಳಿಯ ಹೊರಗಡೆ ಜನ, ವಾಹನಗಳ ಗೌಜೂ ವಾಹನ ಚಲಾವಣೆಯ ಧೂಳೂ ಎದ್ದು, ಬೊಂಬಾರ್ಡ ಜನರಲ್ಲಿ ಅಷ್ಟೊಂದು ಪ್ರಚಾರವಾಗಿತ್ತೆಂದು ತೋರಿಸಿದುವು. ಒಳಗಡೆ ಸಹ ಗದ್ದಲಕ್ಕೂ ಹೊಗೆಬತ್ತಿಗಳ ಹೊಗೆಗೂ ಏನೂ ಕಡಿಮೆಯಿರಲಿಲ್ಲ. ಸುಸಂಸ್ಕೃತರ ಜೀವನದ ಸುಖವೇ ಗದ್ದಲ ಎಂಬಂತೆ ಒಳಗೂ ಹೊರಗೂ ಅದು ತುಂಬಿತ್ತು. ಈ ನಾಲ್ವರು ಯುವಕರು ತಮ್ಮ ಹೃದಯೇಶ್ವರಿಯರನ್ನು ವಿವಿಧವಾಗಿ ಸಂತೋಷಗೊಳಿಸಿದ್ದಲ್ಲದೆ ತಮ್ಮ ಮತ್ತತೆಯ ಪ್ರದರ್ಶನದಿಂದಲೂ ಆನಂದಗೊಳಿಸಿದರು. ತಾಲೋಮಿಸ್ ತನ್ನ ಮುಖಂಡತ್ವವನ್ನು ಮರೆಯು ವಷ್ಟು ಮತ್ತನಾಗಿ ಇರಲಿಲ್ಲ. ಅವನು ಒಂದು ಭಾಷಣ ಬಿಗಿದ. “ಶೃಂಗಾರಲಲನಾಮಣಿಯರೇ, ಮತ್ತು ಆಪ್ತಮಿತ್ರರೇ! ಇಂಥ ಪ್ರಸಂಗಗಳಲ್ಲಿ ಗಾಂಭೀರ್ಯ ಆನಂದಕ್ಕೆ ಕಳೆಗೂಡಿಸುವುದು. ನಡೆ ವಿನೋದಗಳೆಲ್ಲ ಚಂಚಲವಾದವು, ಅಲ್ಪತರ ತೃಪ್ತಿಗಳು. ಇವು ಆಕಾಶದಿಂದ ಬಿದ್ದವು, ಆದ್ದರಿಂದಲೇ ಸ್ವರ್ಗೀಯ ಎಂದು ಒಮ್ಮೆ ತೋರಿಬರುವುವು. ಆದರೆ, ಆಕಾಶದ ಮಂಜಿನಂತೆ ಮಾಯಾವಾಗುವುವು. ಗಾಂಭೀರ್ಯವಾದರೆ ಗುರುತ್ವವುಳ್ಳದ್ದು. ಅದು ವಸ್ತುಸ್ಥಿತಿಯ ದರ್ಶನ ಮಾಡಿಕೊಟ್ಟು ಇರುವ ಸತ್ಯತೆಯನ್ನು ಮನಗಾಣಿಸುವುದು. ನಿಮಗೆ ಗೊತ್ತಿರುವಂತೆ ನಾನೊಬ್ಬ ಪರಮ ಆದರ್ಶ ಯುವಕ. ನನ್ನಂತೆಯೇ ಇತರ ಮೂವರು ಕೂಡ. ಆದರೆ, ನಾವೂ ಗಾಳಿಯಾಗಿ, ನೆರಳಾಗಿ, ಬೀಸಿ, ಮಾಸಿ ಹೋಗಲೂ ಬಹುದು. ಬದುಕಿನ ಗುರಿ ಸುಖವೆಂದು ಒಪ್ಪುವವರೆಲ್ಲ ಈ ಮೆಡೀರಾ ವೈನನ್ನು ಕುಡಿಯಬೇಕು. ಇದು ಮೂರು ಸಾವಿರದ ಹದಿನೇಳಡಿ ಸಮುದ್ರಮಟ್ಟದ ಮೇಲಿನ ಸ್ಥಳದಿಂದ ಬಂದದ್ದು. ಇದು ಸಹ ಕುಡಿದ ಮೇಲೆ ಮಾಯವಾಗುತ್ತದೆ. ಮನಸ್ಸು ಶಾಶ್ವತ ವಾಗಿದ್ದಿದ್ದರೆ ಮಾತ್ರ ಎಲ್ಲವೂ ಶಾಶ್ವತವಾಗಿರುತ್ತಿತ್ತು. ಆದರೆ ಮನಸ್ಸೇ ಚಂಚಲವಾದ ಮೇಲೆ ಎಲ್ಲವೂ ಅಸ್ಥಿರ.

“ಸ್ಫುರದ್ರೂಪೀ ನಾರೀಮಣಿಯರೇ! ನೀವೇಕೆ ಪ್ರಪಂಚದಲ್ಲಿ ಅವತರಿಸಿದಿರಿ? ಶಿಲಾಕವಿಗಳು ನಿಮ್ಮ ರೂಪಲಾವಣ್ಯವನ್ನು ತಮ್ಮ ಸ್ಥಿರಕೃತಿಗಳಾಗಿ ಮಾಡಬೇಕೆಂದು ಹಂಬಲಿಸುತ್ತಿದ್ದರೇನು? ನಿಮ್ಮ ದಂತಮಣಿಗಳ ಹೊಳಪು ಸಕ್ಕರೆಯ ರಮ್ಯತೆಯಂತೆ ಮಿನುಗುತ್ತಿದೆ. ಸಕ್ಕರೆಯನ್ನು ಹೆಚ್ಚಾಗಿ ನಂಬಬೇಡಿ. ಸಕ್ಕರೆಯೂ ಒಂದು ವಿಧವಾದ ಅಸ್ಥಿರ ಲಾವಣ್ಯ. ಅದು ಉಪ್ಪಿನಂತೆ ಕರಗಿ, ರಕ್ತ ವಾಗಿ, ನಿಮ್ಮ ಜೀವನವನ್ನೇ ಕ್ಷಯಿಸಬಹುದು.

“ಸುಂದರೀಮಣಿಯರೇ! ನಿಮ್ಮಂಥವರೇ ಜನಾಂಗಗಳ ಖ್ಯಾತಿಗೂ ಅಪಖ್ಯಾತಿಗೂ ನಾಶಕ್ಕೂ ಉತ್ಕರ್ಷಗೂ ಕಾರಣರು. ಪರರಾಷ್ಟ್ರಗಳನ್ನು ಆಕ್ರಮಿಸಲು ಅಲ್ಲಿ ತೋರುವ ಸುಖಸಂಪತ್ತುಗಳು

ಕಾರಣವಲ್ಲ—ಸೀರೆಕುಪ್ಪಸಗಳೇ ಕಾರಣ. ಸೆಬೈನ್ ದೇಶದ ಹೆಂಗಳೆಯರನ್ನು ರೋಮುಲಸ್ ಹೊತ್ತ; ಸ್ಯಾಕ್ಸನ್ ಸ್ತ್ರೀಯರನ್ನು ವಿಲಿಯಮ್ ಬಲಾತ್ಕಾರದಿಂದ ಭೋಗಿಸಿದ; ಸೀಸರ್ ರೋಮನ್ ನಾರಿಯರನ್ನು ಭೋಗಿಸಿದ—ಅರ್ಥಾತ್, ಸ್ತ್ರೀಯು ಪುರುಷನ ಸ್ವಾಭಾವಿಕವಾದ ಆಹಾರ." ಹೀಗೆಂದು, ಹಠಾತ್ತಾಗಿ ಭಾಷಣ ನಿಲ್ಲಿಸಿದ.

ಆನಂದಪರವಶತೆಯಲ್ಲಿ ತಾಲೋಮಿಸ್ ಫ್ಯಾಂಟೈನಳನ್ನು ಕರೆದು ಫೇವರೈಟಳನ್ನು ಚುಂಬಿಸಿದ !

೬. ಕುದುರೆ ಸತ್ತ ಪ್ರಸಂಗ

ಯುವಕರು ಮತಿಗೆಟ್ಟು ಮಾತಾಡುತ್ತ, ಬೊಂಬಾರ್ಡನ ಖಾನಾವಳಿ ಮೇಲೋ, ಈಡನ್ನ ನದೋ ಎಂದು ಚರ್ಚೆ ನಡೆಸಿದರು. ಆ ಚರ್ಚೆಯಿಂದ ಹೇಗೋ ದಾರಿತಪ್ಪಿ ತಾಲೋಮಿಸನಷ್ಟು ಸುಂದರ ಬ್ಯಾಚೆವೆಲ್ ಅಲ್ಲ ಎಂದು ಮಾತು ಪ್ರಾರಂಭವಾಯಿತು. ತಾಲೋಮಿಸ್ ತನ್ನ ಉತ್ತಮ ವಾಕ್‌ಶಕ್ತಿಯಿಂದ ಅವರೆಲ್ಲರನ್ನೂ ಸಮಾಧಾನಪಡಿಸಿ, ತನ್ನ ಭಾಷಣ ಮುಂದುವರಿಸಿದ, "....ಬೊಂಬಾರ್ಡನ ಹೆಸರು ಸ್ಥಿರವಾಗಲಿ! ಅವನು ಯಾರಿಗೂ ಸಿಕ್ಕದುದನ್ನೆಲ್ಲ ಆಲೋಚಿಸಿದ ಕೂಡಲೇ ಒದಗಿಸುವ ಶಕ್ತಿಯುಳ್ಳವನು—ಮದ್ಯವನ್ನಾಗಲೀ ಸ್ತ್ರೀಯನ್ನಾಗಲೀ ಆದರೆ 'ಇಲ್ಲದ ವಸ್ತುವನ್ನು ತರಲು ಸಾಧ್ಯವಿಲ್ಲ' ಎಂಬ ಸೋಲೊಮನ್ನನ ಮಾತನ್ನು ಇಲ್ಲಿ ಗ್ರಹಿಸಬೇಕು. ಅಂದರೆ ಸ್ತ್ರೀಯರಿಗೆ ಆತ್ಮವಿಲ್ಲವೆಂಬುದನ್ನೂ ತಿಳಿದಿರಬೇಕು."

ಹೀಗೆ ಹೇಳುತ್ತ ಇದ್ದಾಗ ರಸ್ತೆಯಲ್ಲಿ ಬಂಡಿಯನ್ನು ಎಳೆಯಲಾರದೆ, ಒಂದು ಕುದುರೆ ಯಜಮಾನನ ಪೆಟ್ಟು ತಿನ್ನುತ್ತ ಸತ್ತುಬಿದ್ದಿತು. ಖಾನಾವಳಿಯಲ್ಲಿದ್ದವರು ಅನೇಕರು ಅದನ್ನು ನೋಡಲು ಹೋದರು. ಆಗ ಈ ಯುವಕರ ಪೈಕಿ ಒಬ್ಬ ವಿಚಾರಿಸಿದ, "ಅಲ್ಲೇನು ವಿಶೇಷ ನಡೆದಿದೆ?"

"ಒಂದು ಕುದುರೆ ಸತ್ತಿದೆ," ಅಂದ ಇನ್ನೊಬ್ಬ.

"ಅದರಲ್ಲೇನು? ನಿಮ್ಮ ಮಹದಾಶ್ಚರ್ಯವೆಲ್ಲಿ?" ಮೂವರು ತರುಣಿಯರೂ ಕೇಳಿದರು.

"ಸರಿ ಸಮಯ ಸನ್ನಿಹಿತವಾಯಿತು. ಸ್ವಲ್ಪ ಇಲ್ಲೇ ಕುಳಿತಿರಿ. ಆಶ್ಚರ್ಯವನ್ನು ಕಾಣಿಸುವೆವು—ಆಶ್ಚರ್ಯದ ಆರಂಭ ಇದರಿಂದ," ಎಂದು ಹೇಳಿ ಪ್ರತಿಯೊಬ್ಬನೂ ತಂತಮ್ಮ ಪ್ರೇಯಸಿಯ ಹಣೆಯನ್ನು ಚುಂಬಿಸಿದರು. ಅನಂತರ "ನೋಡಿ, ಸದ್ಯ ಬರುತ್ತದೆ," ಎಂದು ಹೇಳುತ್ತ ಆ ನಾಲ್ವರೂ ಜನಸಂದಣಿಯಲ್ಲಿ ಮಹದಾಶ್ಚರ್ಯ ತರಲು ತೂರಿ ನಡೆದರು.

೭. ಫ್ಯಾಂಟೈನಳ ಸಂಕಟ

ಈ ತರುಣಿಯರು ಕುತೂಹಲದಿಂದ ಮಹದಾಶ್ಚರ್ಯ ನಿರೀಕ್ಷಿಸುತ್ತ ಕುಳಿತರು. ಅರ್ಧಗಂಟೆ ಕಳೆದನಂತರ ಖಾನಾವಳಿಯ ಆಳು ಬಂದು ಒಂದು ಪತ್ರವನ್ನು ಫೇವರೈಟಳ ಕೈಗೆ ಕೊಟ್ಟ. "ಇದನ್ನು ಯಾರು ಕೊಟ್ಟರು?" ಎಂದು ಅವಳು ಕೇಳಿದಳು.

"ಇಲ್ಲಿಂದ ಹೋದ ಯುವಕರು."

"ಇಷ್ಟು ತಡಮಾಡಿ ತಂದದ್ದೇಕೆ?"

"ಅರ್ಧ ಗಂಟೆ ತಡಮಾಡಿ ಪತ್ರ ಕೊಡಬೇಕೆಂದು ಅಪ್ಪಣೆ ಇತ್ತಿದ್ದಾರೆ, ಅಮ್ಮಾ!"

ಎಲ್ಲರಿಗೂ ಕೇಳಿಸುವಂತೆ ಫೇವರೈಟ್ ಪತ್ರವನ್ನು ಓದಿದಳು, "ಪರಮಪ್ರೀತಿಯ ಸ್ನೇಹಿತೆಯರೇ! ನಮಗೆ ಬಂಧುಗಳಿದ್ದಾರೆಂಬುದನ್ನು ನೀವು ಈಗಲಾದರೂ ತಿಳಿದುಕೊಳ್ಳಿರಿ. ಬಂಧುಗಳೆಂದರೆ ಏನೆಂದು ನಿಮಗೆ ಗೊತ್ತಿರಲಾರದು. ನಾವು ವಿವರಿಸುವೆವು. ಬಂಧುಗಳೆಂದರೆ ಸಮಾಜದ ಕಟ್ಟಿಗೆ ಒಳಪಟ್ಟ ನ್ಯಾಯಸಮ್ಮತವಾದ ತಂದೆತಾಯಿಗಳು. ನಮ್ಮ ಪುನರಾಗಮನವನ್ನು ಅವರು ಮನೆಯಲ್ಲಿ ಪ್ರೀತಿಯಿಂದ ಬಯಸುತ್ತಿದ್ದಾರೆ. ನಾವು ದುಂದುಗಾರರೆಂದು ಅವರಿಗೆ ಗೊತ್ತಿದ್ದರೂ ಅವರ ಪ್ರೀತಿಗೆ ಕೊರತೆಯಿಲ್ಲ. ನಾವು ಪಿತೃವಾಕ್ಯಪರಿಪಾಲನೆ ಮಾಡತಕ್ಕ ನಿಷ್ಠಾವಂತರು. ಆದ್ದರಿಂದಲೇ ಈಗ ಹೋಗುತ್ತಿರುವೆವು. ನೀವು ಈ ಪತ್ರವನ್ನು ಓದುತ್ತಿರುವಾಗಲೇ ಮಹಾಪ್ರತಾಪವುಳ್ಳ ಐದು ಕುದುರೆಗಳು ನಾವು ನಾಲ್ವರನ್ನು ನಮ್ಮ ಗೃಹಾಭಿಮುಖವಾಗಿ ಒಯ್ಯುತ್ತಿರುವುವು. ಈ ಕುದುರೆಗಳು ಪ್ರಪಾತದ ಅಪಾಯದಿಂದ ನಮ್ಮನ್ನು ಪಾರುಮಾಡುತ್ತಿವೆ. ಆ ಪ್ರಪಾತಗಳೇ ನೀವುಗಳು—ಸುಂದರಿಯರು. ನ್ಯಾಯ, ಧರ್ಮ, ಶೀಲ, ಸಮಾಜದ ಹಿರಿಮೆಯತ್ತ ಗಂಟೆಗೆ ಒಂಬತ್ತು ಮೈಲು ವೇಗದಿಂದ ನಾವು ಸಾಗುತ್ತಿರುವೆವು. ನಮ್ಮ ದೇಶದ ಅಭಿವೃದ್ಧಿಗೆ ನಮ್ಮ ಉತ್ಥಾನ ಅಗತ್ಯ. ನಾವು ನ್ಯಾಯಾಧಿಕಾರಿಗಳೂ ದಂಡಾಧಿಕಾರಿಗಳೂ ಸಂಸಾರಸಮೇತರಾದ ಗೌರವಾನ್ವಿತ ಮಾತಾಪಿತೃಗಳೂ ರಾಜಕಾರಣಿಗಳೂ ಸಮಾಜಭೂಷಣರಾದ ವಿಲಾಸಮುಖಂಡರೂ ಆಗಬೇಕಾಗಿದೆ. ನಮ್ಮ ತ್ಯಾಗವನ್ನು ಕೊಂಡಾಡುತ್ತ ನೀವು ನಮ್ಮ ಸ್ಮರಣೆಗೆ ಸತತವೂ ನಮಸ್ಕರಿಸುತ್ತ ಇರಿ. ನಿಮ್ಮ ಕಣ್ಣೀರನ್ನು ಶೀಘ್ರವಾಗಿ ಒರೆಸಿಕೊಳ್ಳಿರಿ. ನಮ್ಮ ಸ್ಥಾನಗಳನ್ನು ಭರ್ತಿಮಾಡಿಕೊಳ್ಳಿರಿ. ಈ ಪತ್ರ ನಿಮ್ಮ ಹೃದಯಕ್ಕೆ ಗಾಸಿಮಾಡುವುದಿದ್ದರೆ ಅದಕ್ಕೆ ಗಾಸಿಯೆಸಗಿ ನಾಶಪಡಿಸಿರಿ. ಸಾಧಾರಣ ಎರಡು ವರ್ಷ ನಿಮಗೆ ಆನಂದಮಯ ಜೀವನ ಒದಗಿಸಿರುತ್ತೇವೆಂಬುದನ್ನು ನೆನೆದು ನಿಮಗೆ ನಮ್ಮ ಮೇಲೆ ಇರಬಹುದಾದ ದ್ವೇಷವನ್ನು ನಾಶಗೊಳಿಸಿ ಬದುಕಿ ಬಾಳಿರಿ.

"ಮತ್ತು, ಈ ಖಾನಾವಳಿಯವರಿಗೆ ಕೊಡಬೇಕಾದ ಹಣವನ್ನು ನಾವೇ ಕೊಟ್ಟಿರುವೆವು."

ಪತ್ರ ಅಲ್ಲಿಗೆ ಮುಗಿಯಿತು; ನಾಲ್ಕು ಜನ ಯುವಕರು ರುಜು ಹಾಕಿದ್ದರು.

"ಒಳ್ಳೆ ವಿನೋದ, ನನಗೆ ಗಾಬರಿಯಿಲ್ಲ," ಎಂದು ಮೊದಲಾಗಿ ಮೂವರು ತರುಣಿಯರೂ ಪತ್ರ ಓದಿದನಂತರ ಹೇಳಿ ನಕ್ಕರು. ಫ್ಯಾಂಟೈನ್ ಮಾತ್ರ ಮೌನವಾಗಿದ್ದಳು.

ಆ ದಿನ ಅವಳೊಬ್ಬಳೇ ತನ್ನ ಕೋಣೆಯಲ್ಲಿ ಕುಳಿತು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು. ಕಟ್ಟಿಟ್ಟಿದ್ದ ದುಃಖ ಮೇರೆ ಮೀರಿ ಬಂದು ಅವಳು ಬಹಳ ಹೊತ್ತು ಅತ್ತಳು. ಹೃತ್ಪೂರ್ವಕ ನಂಬಿ ವರಿಸಿದ್ದ ತಾಲೋಮಿಸನಿಂದ ಅವಳು ಗರ್ಭಧಾರಣೆ ಮಾಡಿದ್ದಳು—ಪಾಪ!

ನಾಲ್ಕನೆಯ ಸಂಪುಟ

೧. ತಾಯಂದಿರಿಬ್ಬರ ಭೇಟಿ

ಹತ್ತೊಂಬತ್ತನೆಯ ಶತಮಾನದ ಆದಿ ಭಾಗದಲ್ಲಿ ಪ್ಯಾರಿಸ್ ನಗರಕ್ಕೆ ಸಮೀಪ ಮೊಂಟ್‌ಫರ್ಮಿಯಲ್ ಎಂಬ ಚಿಕ್ಕ ಊರಲ್ಲಿ ಮಿಸ್ಟರ್ ಮತ್ತು ಮಿಸೆಸ್ ತೆನಾರ್ಡಿಯರ್ ಎಂಬ ದಂಪತಿಗಳು ಒಂದು ಹೊಟೇಲ್ ನಡೆಸುತ್ತಿದ್ದರು. ಎಲ್ಲ ಹೊಟೇಲುಗಳಿಗೂ ಹೆಸರಿರುವಂತೆ ಇದಕ್ಕೂ ಇತ್ತು; ಮತ್ತು ಈ ಹೆಸರನ್ನೇ ವಿವರಿಸುವ ಒಂದು ಬಣ್ಣದ ಚಿತ್ರ ದೊಡ್ಡ ಹಲಗೆಯ ಮೇಲೆ

ಬರೆಯಲಾಗಿದ್ದು, ಆ ಹೊಟೇಲಿನ ಯೋಗ್ಯತೆಯನ್ನು ಪ್ರಕಟಿಸುತ್ತಿತ್ತು: 'ವಾಟರ್ಲೂವಿನ ಸಾರ್ಜೆಂಟ್.' ಹಲಗೆಯ ಮೇಲೆ ಒಬ್ಬ ಸಾರ್ಜೆಂಟ್ ಸೈನ್ಯದ ದೊಡ್ಡ ಅಧಿಕಾರಿಯನ್ನು ರಣರಂಗ ಮಧ್ಯದಿಂದ ಹೊತ್ತು ಸಾಗಿಸುತ್ತಿದ್ದಂತೆ ಚಿತ್ರವೂ ಮೆರೆಯುತ್ತಿತ್ತು.

೧೮೨೦ರ ವಸಂತಋತುವಿನ ಸಂಜೆ ವೇಳೆ ಈ ಹೊಟೇಲಿನ ಎದುರು ಯಾರಾದರೂ ನೋಡಿದ್ದರೆ ಫಿರಂಗಿಗಳನ್ನು ಸಾಗಿಸುವ ಎರಡು ಚಕ್ರದ ಒಂದು ಹಳೆ ಬಂಡಿ ರಸ್ತೆಯ ಬದಿಯಲ್ಲಿ ನಿಂತಿದ್ದುದನ್ನು ಕಾಣಬಹುದಿತ್ತು. ಬಂಡಿಯನ್ನು ಪರೀಕ್ಷಿಸಿದರೆ ಅದು ಅಲ್ಲಿಗೆ ಯಾವಾಗ್ಗೆ ಬಂದದ್ದೆಂದು ಯಾರಿಂದಲೂ ಹೇಳಲು ಸಾಧ್ಯವಾಗದಷ್ಟು ಹಳೆಯದಾಗಿತ್ತು. ಇಂಥ ಹಳೆಬಂಡಿಗಳು ರಸ್ತೆ ಬದಿಯಲ್ಲಿ ಇರುವುದು ವಿಶೇಷದ ಸಂಗತಿಯಲ್ಲದಿದ್ದರೂ ಈ ಸಂಜೆಯ ಮಟ್ಟಿಗೆ ಹಾಗೆ ಆಗಿತ್ತು.

ಅದರ ಎರಡೂ ಚಕ್ರಗಳನ್ನು ಬಂಧಿಸಿ ತೂಗಾಡುವ ಉಯ್ಯಾಲೆ ಮಾಡಿ ತೆನಾರ್ಡಿಯರಿಣಿ ತನ್ನ ಇಬ್ಬರು ಮಕ್ಕಳನ್ನು ಅದರಲ್ಲಿ ಕುಳ್ಳಿರಿಸಿ ತಾನು ಹೊಟೇಲಿನ ಮೆಟ್ಟಲಲ್ಲಿ ಕುಳಿತು ಹಗ್ಗ ಹಿಡಿದು ಆಡಿಸುತ್ತಿದ್ದಳು. ಬಂಡಿ ಎಷ್ಟೇ ಒರಟಾಗಿದ್ದರೂ ಎಷ್ಟೇ ಭಯಂಕರವಾಗಿ ತೋರಿ ದರೂ ಉಯ್ಯಲಾಡುತ್ತಿದ್ದ ಆ ಎರಡು ಹೆಣ್ಣು ಮಕ್ಕಳು ಮಾತ್ರ ಬಲು ಮುದ್ದಾಗಿದ್ದುವು. ಅವು ಒಪ್ಪುವ ಚಂದದ ದುಸ್ತು ತೊಡಿಸಿದ್ದರು. ಮಕ್ಕಳ ಪೈಕಿ ಹಿರೆಯವಳಿಗೆ ಸಾಧಾರಣ ಮೂರು ವರ್ಷ, ಕಿರಿಯವಳಿಗೆ ಒಂದರಿಂದ ಒಂದೂವರೆ ವರ್ಷದಷ್ಟು ಪ್ರಾಯ ಆಗಿದ್ದಿರಬಹುದು. ತಾಯಿ ಮಾತ್ರ ಕ್ರೂರಿ ಮತ್ತು ಕುರೂಪಿ. ಆದರೂ, ಈ ತನ್ನ ಮಕ್ಕಳನ್ನು ಆಡಿಸುತ್ತಿದ್ದಾಗ ಅವಳ ಮುಖದಲ್ಲಿ ಮಾತೃತ್ವದ ಮೃದುತ್ವ ತುಸು ಮಿನುಗುತ್ತಿತ್ತು.

ಇದೇ ಸಮಯದಲ್ಲಿ ಅಪರಿಚಿತ ಸ್ತ್ರೀಯೊಬ್ಬಳು ಕೈಯ್ಯಲ್ಲೊಂದು ತುಂಬಿದ ಚೀಲವನ್ನು ನೇಲಿಸಿಕೊಂಡು, ಹೆಗಲ ಮೇಲೊಂದು ಚಿಕ್ಕಪ್ರಾಯದ ಮಗುವನ್ನು ಎತ್ತಿಕೊಂಡು ಹೊಟೇಲ್ ಕಡೆಗೆ ಬರುತ್ತಿದ್ದಳು. ಈಕೆಗೆ ಬಂಡಿಯ ಅಡಿಯಲ್ಲಿ ಉಯ್ಯಲಾಡುತ್ತಿದ್ದ ಮಕ್ಕಳು ಕಾಣಿಸುತ್ತಿದ್ದುವು; ಮತ್ತು ಸಮೀಪ ಬಂದ ಹಾಗೆ ಆ ಮಕ್ಕಳ ಮಾತೆಯ ಮುಖವೂ ಕಾಣಿಸಿತು. ಆ ಎಳೆ ಮಕ್ಕಳನ್ನು ಅಷ್ಟೊಂದು ಮಮತೆಯಿಂದ ಆಟವಾಡಿಸುತ್ತಿದ್ದುದನ್ನು ಕಂಡು ಈ ಅಪರಿಚಿತೆಗೆ ಅಲ್ಲಿ ಸ್ವಲ್ಪ ನಿಲ್ಲುವ ಮನಸ್ಸಾಯಿತು. ಹೀಗೆ ನಿಂತು ಅಲ್ಲಿಯ ಸಂದರ್ಭ ಸನ್ನಿವೇಶಗಳನ್ನು ಕಂಡ ಅವಳಿಗೆ ಎರಡು ಮಾತು ಆಡುವ ಮನಸ್ಸೂ ಆಯಿತು. ದಾರಿಗಳು ಕೇಳಿದಳು, "ಆ ಚಂದದ ಮಕ್ಕಳಿಬ್ಬರೂ ನಿಮ್ಮ ಮಕ್ಕಳಲ್ಲವೇ, ಅಮ್ಮಾ?"

ಎಂಥ ಕ್ರೂರಿಗಳೇ ಆದರೂ ತಮ್ಮ ಮಕ್ಕಳನ್ನು ಪ್ರೀತಿಸುವವರ, ಅಥವಾ, ಅವನ್ನು ಹೊಗಳುವವರ ಕುರಿತು ಮೃದುತ್ವ ಹೊಂದುವುದು ಸ್ವಾಭಾವಿಕ. ತೆನಾರ್ಡಿಯರಿಣಿಯೂ ಈ ಕ್ರಮದಿಂದಲೇ ಬಲು ಮೃದುತ್ವ ಹೊಂದಿ ಸ್ವಲ್ಪ ನಗುತ್ತ, "ಹೌದು, ಅವು ನನ್ನ ಮಕ್ಕಳು," ಅಂದಳು. ಈ ಮಾತು ನಡೆಯುತ್ತಿದ್ದಾಗಲೇ ಅಪರಿಚಿತೆಯ ಹೆಗಲ ಮೇಲಿದ್ದ ಮಗುವಿಗೆ ಎಚ್ಚರವಾಯಿತು. ಆ ತಾಯಿ ತನ್ನ ಮಗುವನ್ನು ನೆಲದ ಮೇಲೆ ನಿಲ್ಲಿಸಿ ಉಯ್ಯಲಾಡುತ್ತಿದ್ದ ಮಕ್ಕಳನ್ನು ಅದಕ್ಕೆ ತೋರಿಸಿದಳು. ತೆನಾರ್ಡಿಯರಿಣಿ ತನ್ನ ಮಕ್ಕಳನ್ನು ಉಯ್ಯಾಲೆಯಿಂದಿಳಿಸಿ ಈ ಮೂರು ಮಕ್ಕಳನ್ನೂ ಒಟ್ಟಿಗೆ ನಿಲ್ಲಿಸಿದಳು. ಮಕ್ಕಳ ಸ್ವಭಾವಕ್ಕೆ ಸರಿಯಾಗಿ ಅವು ಒಬ್ಬರನ್ನೊಬ್ಬರು ಸ್ವಲ್ಪ ಹೊತ್ತು ನೋಡಿ, ಮುಖದಲ್ಲೇ ನಾನಾ ಭಾವಗಳನ್ನು ತೋರಿಸಿ, ಕೊನೆಗೆ ತುದಿಬೆರಳಿನಿಂದ ಮುಟ್ಟಿ, ಸ್ವಲ್ಪಸ್ವಲ್ಪವಾಗಿ ನಗುತ್ತ ತುಸು ಹೊತ್ತಿನಲ್ಲೇ ಹಳೆ ಪರಿಚಿತರಂತೆ ಜೊತೆಯಲ್ಲಿ ಆಟವಾಡತೊಡಗಿದುವು. ಆಗ ತೆನಾರ್ಡಿಯರಿಣಿ ಅಪರಿಚಿತೆಯನ್ನು ವಿಚಾರಿಸಿದಳು, "ನಿಮ್ಮ ಮಗುವಿನ ಹೆಸರೇನಮ್ಮಾ?"

"ಕೋಸೆಟ್ಟಿ."

"ಪ್ರಾಯ?"

"ಸಾಧಾರಣ ಮೂರು ವರ್ಷ ತುಂಬುತ್ತ ಬಂತು."

ಈ ಅಪರಿಚಿತ ಸ್ತ್ರೀಯೇ ಫ್ಯಾಂಟೈನ್. ಆ ಯುವಕರು ಈ ಯುವತಿಯರನ್ನು ಬಿಟ್ಟು ಓಡಿದ ಮೇಲೆ ಈಕೆ ನಿಶ್ಚಿತವಾದ ಒಂದು ಕಸಬು ದೊರಕದೆ, ಜೀವನ ನಡೆಸುವುದೇ ಬಲು ಕಷ್ಟವಾಗಿತ್ತು. ಸಾಲದುದಕ್ಕೆ ಫ್ಯಾಂಟೈನ್ ಈ ಮಗುವನ್ನು ಹೆತ್ತಳು. ತಾಯಿ ಮಗು ಇಬ್ಬರೂ ಪ್ಯಾರಿಸಿನಲ್ಲಿ ಬದುಕುವುದೇ ಕಷ್ಟತೋರಿ ಈಕೆ ತನ್ನ ಹುಟ್ಟೂರಾದ ಎಂ— ಪಟ್ಟಣದ ಕಡೆಗೆ ಹೊರಟಿದ್ದಳು. ಈಗ ದಾರಿಯಲ್ಲಿ ತೆನಾರ್ಡಿಯರಿಣಿಯನ್ನೂ ಅವಳ ಮಕ್ಕಳನ್ನೂ ಕಂಡು ಮನಸ್ಸಿನಲ್ಲೇ ಬಲುವಾಗಿ ಆಲೋಚಿಸಿ ಒಂದು ಪ್ರಯತ್ನ ಮಾಡುವುದಾಗಿ ನಿಶ್ಚೈಸಿದ್ದಳು; ಅಂದರೆ, ತನ್ನ ಅನಧಿಕೃತ ಮಗುವಿನ ಜೊತೆಯಲ್ಲಿ ಹುಟ್ಟೂರಾದ ಎಂ— ಪಟ್ಟಣದಲ್ಲಿ ವೃತ್ತಿ ಕೈಕೊಳ್ಳುವುದು ಕಷ್ಟವೆಂದು ತಿಳಿದು ತಾತ್ಕಾಲಿಕವಾಗಿ ತನ್ನ ಮಗುವನ್ನು ತೆನಾರ್ಡಿಯರಿಣಿ ವಶಕ್ಕೆ ಬಿಟ್ಟರೆ ಆಗಬಹುದೆಂದು ಗ್ರಹಿಸಿಕೊಂಡಿದ್ದಳು. ಈ ಸಂಬಂಧವಾಗಿ ತೆನಾರ್ಡಿಯರಿಣಿ ಹತ್ತಿರ ಮಾತಾಡಲು ಪ್ರಾರಂಭಿಸಿದ್ದಳು.

ಅತ್ತ ತಾಲೋಮಿಸ್ ಅವನ ಊರಿನಲ್ಲಿ ಪ್ರಭಾವಶಾಲಿಯಾದ ವಕೀಲನಾಗಿ, ಹಣವಂತನಾಗಿ, ಪರಮ ನ್ಯಾಯವಂತನೆಂದನ್ನಿಸಿಕೊಂಡು, ವಿಲಾಸಪ್ರಿಯನಾಗಿ ಜೀವನ ನಡೆಸುತ್ತಿದ್ದ.

ಈ ಮೂರು ಮಕ್ಕಳು ಅವರ ಕಡೆಗೆ ಹರಿದುಕೊಂಡು ಬರುತ್ತಿದ್ದ ಒಂದು ದೊಡ್ಡ ಹುಳುವನ್ನು ಕಂಡು ಗಾಬರಿಗೊಳ್ಳುತ್ತಲೂ ಆಶ್ಚರ್ಯಪಡುತ್ತಲೂ ಮೂರು ತಲೆಗಳನ್ನೂ ಒಟ್ಟುಹಾಕಿಕೊಂಡು ಪ್ರಪಂಚದಲ್ಲಿ ಆ ಹುಳು ಒಂದನ್ನು ಮಾತ್ರ ಕಾಣುತ್ತಲೂ, ಅದನ್ನು ನೋಡಿ ಭ್ರಮಿಸುತ್ತಲೂ ನಿಂತಿದ್ದುವು.

"ಮಕ್ಕಳು ಎಷ್ಟು ಬೇಗನೆ ಸ್ನೇಹಿತರಾಗಿ ಬಿಡುತ್ತಾರಮ್ಮ! ನೋಡುವವರಿಗೆ ಒಂದೇ ತಾಯಿಯ ಮಕ್ಕಳಂತೆ ತೋರುವರು," ಎಂದು ತೆನಾರ್ಡಿಯರಿಣಿ ಹೇಳಿದಳು.

ಈ ಮಾತು ಫ್ಯಾಂಟೈನಳ ಅಂತರಂಗವನ್ನು ಸ್ಪಷ್ಟವಾಗಿ ಸ್ಪರ್ಶಿಸಿತು. ಅವಳು ಸ್ವಲ್ಪ ಆಲೋಚಿಸಿ, ಆದರೂ ಹಿಂಜರಿಯುತ್ತ, ತೆನಾರ್ಡಿಯರಿಣಿಯ ಕೈ ಹಿಡಿದುಕೊಂಡು ವಿನಯದಿಂದ ಕೇಳತೊಡಗಿದಳು, "ನನ್ನ ಮಗುವನ್ನು ಕೆಲವು ದಿನಗಳ ಮಟ್ಟಿಗೆ ಸಾಕಿಕೊಳ್ಳಲು ನಿಮಗೆ ಅನುಕೂಲವಾಗಬಹುದೇ, ಅಮ್ಮಾ?"

ತೆನಾರ್ಡಿಯರಿಣಿ ಈ ಪ್ರಶ್ನೆ ಬಹಳ ಆಶ್ಚರ್ಯ ಉಂಟುಮಾಡಿತು. ಅವಳು ಫ್ಯಾಂಟೈನಳನ್ನು ಸ್ವಲ್ಪ ಹೊತ್ತು ನೋಡುತ್ತ ಕುಳಿತಳು. ಇವಳ ದುಃಖದ ಮುಖ, ಸೌಮ್ಯಸ್ವಭಾವ. ಮತ್ತು ಒಂದು ವಿಧದ ಆರ್ತತೆಯನ್ನು ತೆನಾರ್ಡಿಯರಿಣಿ ತಿಳಿದಳು. ಫ್ಯಾಂಟೈನಳ ಈ ಗುಣಗಳ ಕುರಿತು ತೆನಾರ್ಡಿಯರಿಣಿ ವಿಮರ್ಶೆ ಮಾಡುವ ಮೊದಲು, ಅವುಗಳ ಭಾವನೆ ಒಂದು ವಿಧದಿಂದ ಅವಳ ಮುಖದಲ್ಲಿ ಪ್ರತಿಫಲಿತವಾಗಿ, ಫ್ಯಾಂಟೈನ್ ಮತ್ತೂ ಮಾತಾಡಲು ಪ್ರೋತ್ಸಾಹಿತಳಾದಳು. ಸರಳ ಸ್ವಭಾವದ ಈಕೆ ಪುನಃ ಹೇಳಿದಳು, "ನಾನು ನಿಮ್ಮನ್ನು ಕಾಣುವಂತೆ ಮಾಡಿದ್ದು ದೇವರೇ ಸರಿ. ಈ ಮಗುವನ್ನು ಕಟ್ಟಿಕೊಂಡು ನಮ್ಮೂರಿನಲ್ಲಿ ಕೆಲಸ ದೊರಕಿಸಿಕೊಳ್ಳುವುದು ಬಲು ಕಷ್ಟ. ನಿಮ್ಮ ಮುದ್ದು ಮಕ್ಕಳನ್ನೂ ನಿಮ್ಮನ್ನೂ ಕಂಡು, ನನ್ನ ಮಗುವನ್ನು ನಿಮ್ಮ ವಶದಲ್ಲಿ ಸ್ವಲ್ಪ ಸಮಯ ಮಾತ್ರ ಬಿಟ್ಟು ಹೋದರೆ ಅನುಕೂಲವೆಂದು ತೋರಿತು. ನೀವು ಬಹಳ ಕರುಣಾಳುಗಳೆಂದು ನಿಮ್ಮನ್ನು ನೋಡಿದಾಗಲೇ ತಿಳಿದಿದ್ದೇನಮ್ಮ. ತಿಂಗಳೊಂದರ ಆರು ಫ್ರ್ಯಾಂಕ್ ಹಣವನ್ನು ಹೇಗಾದರೂ ಮಾಡಿ ಸಂಪಾದಿಸಿ ತಮಗೆ ಕಳುಹಿಸುವೆನು. ನನಗೆ ಸ್ವಲ್ಪ ಅನುಕೂಲವಾದ ಕೂಡಲೇ

ಬಂದು ಮಗುವನ್ನು ಕರೆದುಕೊಂಡು ಹೋಗುತ್ತೇನೆ. ಆ ವರೆಗೆ ಈ ಮೂವರು ಮಕ್ಕಳೂ ಸಹೋದರಿಯರಂತೆ ಬಾಳಲಿ. ಇಷ್ಟು ಉಪಕಾರವನ್ನು ದಯಮಾಡಿ ಒದಗಿಸಬಹುದೇ?" ಎಂದು ಕೇಳಿದಳು.

ಈ ಮಾತುಗಳನ್ನೆಲ್ಲ ಕೇಳುತ್ತಿದ್ದ ಒಬ್ಬ ಗಂಡಸು ಹೊಟೇಲ್ ಒಳಗಿನಿಂದಲೇ, ಫ್ಯಾಂಟೈನಳಿಗೆ ತಾನೇ ಉತ್ತರಕೊಡತಕ್ಕವನೆಂಬಂತೆ, ದೊಡ್ಡ ಸ್ವರದಿಂದ, "ತಿಂಗಳೊಂದರ ಏಳು ಫ್ರ್ಯಾಂಕಿಗಿಂತ ಕಡಿಮೆ ಅಸಾಧ್ಯ. ಅದೂ, ಆರು ತಿಂಗಳಿನದು ಮುಂದಾಗಿ ಬರಬೇಕು," ಎಂದು ಹೇಳಿದ.

"ಅಂದರೆ, ನಲವತ್ತೆರಡು ಫ್ರ್ಯಾಂಕ್ ಈಗಲೇ ಕೊಡಬೇಕು," ಎಂದು ತೆನಾರ್ಡಿಯರಿಣಿ ವಿವರಿಸಿದಳು; ಮತ್ತು, ಒಳಗಿನಿಂದ ಮಾತಾಡಿದುದು ತನ್ನ ಗಂಡನೆಂದೂ ತಿಳಿಸಿದಳು. ಹೆಂಡತಿಯ ಮಾತು ಮುಗಿದ ಕೂಡಲೇ ಗಂಡ ಪುನಃ ಹೇಳಿದ, "ಚಿಲ್ಲರೆ ಖರ್ಚಿನ ಬಗ್ಗೆ ಹದಿನೈದು ಫ್ರ್ಯಾಂಕ್ ಅಲಾಯದ ಸಲ್ಲಬೇಕು."

ತನ್ನ ಮಗುವನ್ನು ಸಾಕಲು ಒಪ್ಪುವರೋ, ಇಲ್ಲವೋ ಎಂದು ಹೆದರಿಕೆಯಲ್ಲಿದ್ದ ಫ್ಯಾಂಟೈನಳಿಗೆ ತೆನಾರ್ಡಿಯರರಿಬ್ಬರೂ ಮಗುವನ್ನು ಸಾಕಲು ಒಪ್ಪಿದ್ದೇ ಮಹತ್ತರವಾದ ಉಪಕಾರವೆಂದು ತೋರಿತು. ಹೇಗಿದ್ದರೂ, ಆರು ತಿಂಗಳಿನ ಒಳಗೆ ತಾನು ಮಗುವನ್ನು ಪುನಃ ಕರೆದುಕೊಂಡು ಹೋಗುವುದಾಗಿಯೂ ಅವಳು ನಿಶ್ಚೈಸಿಕೊಂಡಿದ್ದಳು. ಹಾಗಾಗಿ ಸ್ವಲ್ಪ ಸಂತೋಷದಿಂದಲೇ, "ಆಗಬಹುದಮ್ಮಾ, ನೀವು ಹೇಳಿದಷ್ಟು ಹಣ ಕೊಡುತ್ತೇನೆ. ನನ್ನಲ್ಲಿ ಈಗಿರುವ ಎಂಬತ್ತು ಫ್ರ್ಯಾಂಕಿನಿಂದ ನೀವು ಹೇಳಿದ ಹಣ ಕೊಟ್ಟರೂ ನನ್ನ ದಾರಿ ಖರ್ಚಿಗೆ ತಕ್ಕಷ್ಟು ಹಣ ಉಳಿಯುತ್ತದೆ," ಎಂದು ಹೇಳಿದಳು.

ಆದರೆ, ಗಂಡಸು ಪುನಃ, "ಬಟ್ಟೆಗಳನ್ನು ನೀನೇ ಒದಗಿಸಬೇಕು," ಅಂದ.

"ಬಟ್ಟೆ ನನ್ನಲ್ಲಿ ಹೇಗೂ ತಯಾರಾಗಿಯೇ ಇದೆ. ಈ ಮಗುವಿಗಾಗಿ ತಯಾರಿಸಿದ್ದನ್ನು ಸಂತೋಷದಿಂದ ಕೊಡುತ್ತೇನೆ," ಎಂದು ಫ್ಯಾಂಟೈನ್ ಹೇಳುತ್ತ, ತನ್ನ ಕೈಚೀಲದಿಂದ ಅಂಗಿ, ಲಂಗ, ಕಾಲುಚೀಲ ಮೊದಲಾದವನ್ನು ಒಂದೊಂದನ್ನೂ ಒಂದೊಂದು ಡಜನಿನಂತೆ ತೆಗೆದು ಕೊಟ್ಟಳು.

ಫ್ಯಾಂಟೈನ್ ಆ ರಾತ್ರಿ ಆ ಹೊಟೇಲಿನಲ್ಲೇ ತಂಗಿದ್ದು, ಮರುದಿನ ಬೆಳಗ್ಗೆ ಎಲ್ಲರೂ ಏಳುವ ಮೊದಲೇ ಎದ್ದು ತಾನೊಬ್ಬಳೇ ಎಂ— ಪಟ್ಟಣಾಭಿಮುಖವಾಗಿ ಹೊರಟುಹೋದಳು. ಅವಳ ಹೃದಯವೇ ಬಿಚ್ಚಿ ಒಡೆದು ಹೋಗಿದ್ದರೆ ಅಳಬಹುದಾದಷ್ಟು ದುಃಖದಿಂದ ಅಳುತ್ತ ಅವಳು ತನ್ನ ದಾರಿ ನಡೆಯುತ್ತಿದ್ದಳು.

"ನಮ್ಮ ಗಾಳ ಬಹಳ ಚೆನ್ನಾಗಿ ಆಯಿತು," ಎಂದು ತೆನಾರ್ಡಿಯರ್ ಹೆಂಡತಿಯೊಡನೆ ಆ ದಿನದ ವ್ಯಾಪಾರದ ಕುರಿತು ಮರುದಿನ ಅಂದುಕೊಂಡ. ಅದಕ್ಕೆ ಹೆಂಡತಿ, "ಮಕ್ಕಳನ್ನು ತೋರಿಸಿ ಗಾಳ ಹಾಕಿದ ಹಾಗಾಯ್ತು. ಆದರೆ, 'ಗಾಳಾ' ಅಂತ ನಮಗೂ ಗೊತ್ತಾಗದೆ ನಡೆದು ಹೋಯ್ತು, ಅದೇ ದುಃಖ," ಅಂದಳು.

೨. ಕುರೂಪ ದಾಂಪತ್ಯ

ತೆನಾರ್ಡಿಯರ್ ದಂಪತಿಗಳ ಪರಿಚಯವನ್ನು ಇಲ್ಲಿ ಸ್ವಲ್ಪ ಮಾಡಿಕೊಡಬೇಕಾಗಿದೆ. ಇವರು ಹೀನ ಕುಲದವರು. ಅಲ್ಪನಿಗೆ ಸುಲಭವಾಗಿ ಐಶ್ವರ್ಯ ಬಂದರೆ—ಅಥವಾ, ಬುದ್ಧಿವಂತ ಪಾಪ

ಕರ್ಮ ಮಾಡಲು ಪ್ರಾರಂಭಿಸಿದರೆ—ಆಗ್ಗೆ ಅವನಲ್ಲಿ ಇರಬಹುದಾದ ಗುಣಗಳೆಲ್ಲ ಈ ದಂಪತಿಗಳಲ್ಲಿದ್ದುವು. ಇವರ ಮಾನಸಿಕ ಕುಬ್ಜತೆಯೇ ಇವರ ಶಕ್ತಿಯಾಗಿದ್ದು, ಸಿಟ್ಟುಬಂದಾಗ ಬೃಹದಾಕಾರದ ರಾಕ್ಷಸರಾಗಿಬಿಡುತ್ತಿದ್ದರು. ತೆನಾರ್ಡಿಯರನ ಮುಖವನ್ನು ನೋಡಿದವರು ಅವನು ಶುದ್ಧ ಪೋಲಿಯೆಂದು ಆ ಕೂಡಲೇ ಹೇಳಬಹುದಾದಷ್ಟು ನೀಚತ್ವ ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವನ ಮುಖವನ್ನು ಸ್ವಲ್ಪ ಹೊತ್ತು ಪರೀಕ್ಷಿಸಿದರೆ ಅಲ್ಲಿ ಎದ್ದು ಮಾಯವಾಗುತ್ತಿದ್ದ ಭಾವನೆಗಳ ಸೆರೆಯಲ್ಲಿ ಅವನ ಸಂಚಿತ ಪಾಪರಾಶಿಯನ್ನೂ ಇನ್ನೂ ಮಾಡಲಿದ್ದುದನ್ನೂ ಕಾಣಬಹುದಿತ್ತು. ಇವನ ಮಾತನ್ನು ನಂಬಬಹುದಾದರೆ, ಇವನು ಹಿಂದೆ ಒಬ್ಬ ಸೈನ್ಯದ ಸಾರ್ಜೆಂಟನಾಗಿದ್ದ.

ತೆನಾರ್ಡಿಯರಿಣಿಗೆ ಓದುಬರಹ ಬರುತ್ತಿತ್ತು. ಅವಳು ಫ್ರೆಂಚ್ ಕ್ರಾಂತಿಯನಂತರ ಹೊರಬಿದ್ದ ಕಾದಂಬರಿಗಳನ್ನು ಮಾತ್ರ ಓದುತ್ತಿದ್ದಳು. ಈ ವ್ಯಾಸಂಗ ಅವಳನ್ನು ಗಂಡನ ಸಹಸ್ರಾರು ಹಿಂಸಾಕಾರ್ಯಗಳಲ್ಲಿ ಉತ್ತಮ ಸಹಕಾರಿಣಿಯನ್ನಾಗಿ ಮಾಡಿತ್ತು. ಅವಳು ಓದಿದ್ದ ಕಾದಂಬರಿಗಳ ಅನುಭವದಿಂದಲೇ ಅವಳ ಮಕ್ಕಳಿಗೆ ಎಪೊನಿನ್ ಮತ್ತು ಅಸೆಲ್ಮ ಎಂದು ಹೆಸರಿಟ್ಟಿದ್ದಳು.

ಇವರ ಮುಖ್ಯ ವೃತ್ತಿ ಹೊಟೇಲ್ ಉದ್ಯಮ. ಆದರೆ ಇವರಿಗೆ ಉಪವೃತ್ತಿಯೂ ಇತ್ತು. ಫ್ರೆಂಚ್ ಕ್ರಾಂತಿಯಿಂದ ಉದ್ಭವಿಸಿದ್ದ ಸಹಸ್ರಾರು ದುಷ್ಟ ವಹಿವಾಟುಗಳಲ್ಲಿ ಇವರು ಗುಪ್ತಭಾಗಿಗಳಾಗಿ ಕೆಲಸ ಮಾಡುತ್ತಿದ್ದುದೇ ಇವರ ಉಪವೃತ್ತಿ. ಇವರಿಗೂ ಒಂದು ಪ್ರಗತಿಯಿತ್ತು. ಏಡಿ ಸದಾ ಕತ್ತಲನ್ನೇ ಬಯಸಿ, ಮರೆಯಾಗಿದ್ದು ವಕ್ರಮಾರ್ಗದಲ್ಲಿ ಓಡುವಂತೆ ಇವರೂ ತಮ್ಮ ಜೀವನವನ್ನು ಅಂಧಕಾರದಲ್ಲಿ, ಗುಪ್ತವಾಗಿ ವಕ್ರಮಾರ್ಗದಿಂದ ನಡೆಸುತ್ತಿದ್ದರು. ಇವರ ಜೀವನದ ಮುಖ್ಯ ಗುರಿ ಮನುಷ್ಯತ್ವವನ್ನು ರಾಕ್ಷಸತ್ವಕ್ಕೂ ಜ್ಞಾನವನ್ನು ಅಜ್ಞಾನಕ್ಕೂ ತಮ್ಮ ಇಷ್ಟಾರ್ಥಸಿದ್ಧಿಗಾಗಿ ಪರಿವರ್ತಿಸಿಕೊಳ್ಳುವುದೇ ಆಗಿತ್ತು.

೩. ಮುಂಬೆಳಗಿನ ಕೋಗಿಲೆ

ಈ ಹೊಟೇಲ್ ಮಾಲೀಕರು ವರ್ಷಗಳು ದಾಟಿದ ಹಾಗೆ ಹೀನಸ್ಥಿತಿಗೆ ಇಳಿಯತೊಡಗಿದರು. ಅವರ ವೃತ್ತಿಯಲ್ಲಿ ಲಾಭ ಸಿಗುವ ಬದಲು ನಷ್ಟವೇ ಆಗತ್ತಿತ್ತು. ಸಾಲದ ಹೊರೆ ಹೆಚ್ಚಿತು. ಇದೇ ವೇಳೆ ಕೋಸೆಟ್ಟಿ ಇವರ ಜೊತೆಯಲ್ಲೇ ಬೆಳೆದುಬರುತ್ತಿದ್ದಳು. ಅವರಿಗೆ ಕೋಸೆಟ್ಟಿಯನ್ನು ಸಾಕುವುದೇ ಒಂದು ಲಾಭಪ್ರದವಾದ ಉದ್ಯಮವಾಯಿತು. ಅವಳ ಒಳ್ಳೆ ಉಡುಪುಗಳನ್ನೆಲ್ಲ ಅಡವಿಟ್ಟು ಹಣ ಸಂಪಾದಿಸಿದರು. ಉಳಿದವನ್ನು ತಮ್ಮ ಮಕ್ಕಳಿಗೆ ತೊಡಿಸಿ ಈ ಮಕ್ಕಳ ಹಳತು ಮತ್ತು ಹರಕು ಬಟ್ಟೆಗಳನ್ನು ಕೋಸೆಟ್ಟಿಗೆ ಕೊಟ್ಟರು. ನ್ಯಾಯಬದ್ಧವಾದ ಒಂದು ಒಪ್ಪಂದದ ಪ್ರಕಾರ ತಾವು ಕೋಸೆಟ್ಟಿಯನ್ನು ಸಾಕುವುದಲ್ಲ ಕೇವಲ ಔದಾರ್ಯದಿಂದ ಸಾಕುವುದು ಎಂದು ನಂಬುತ್ತಲೂ ತಮ್ಮ ಔದಾರ್ಯಕ್ಕೆ ಫ್ಯಾಂಟೈನ್ ಎಷ್ಟು ಕೃತಜ್ಞಳಾಗಿದ್ದರೂ ಸಾಲದೆಂದು ತಿಳಿಯುತ್ತಲೂ ಬಂದರು. ಕೋಸೆಟ್ಟಿ ವ್ಯಭಿಚಾರದಿಂದ ಹುಟ್ಟಿದವಳೆಂದು ಇವರು ಊಹಿಸಿ ಫ್ಯಾಂಟೈನಳನ್ನು ಹೆದರಿಸಿ, ಅವಳಿಂದ ಹೆಚ್ಚೆಚ್ಚು ಹಣ ಸುಲಿಯತೊಡಗಿದರು.

ಕೋಸೆಟ್ಟಿಗೆ ಊಟ ತಿಂಡಿಗಳಲ್ಲೂ ಅನ್ಯಾಯಗೈದರು. ಇತರರು ತಿಂದುಳಿದುದನ್ನು ಈಕೆಗೆ ಆಹಾರವಾಗಿ ಕೊಡುತ್ತಿದ್ದರು. ಕೋಸೆಟ್ಟಿ ತನ್ನ ಆಹಾರವನ್ನು ಮರದ ತಟ್ಟೆಯಲ್ಲಿ ಹಾಕಿಕೊಂಡು ಬೆಕ್ಕು ನಾಯಿಗಳ ಜೊತೆ ಮೇಜದ ಅಡಿ ನೆಲದಲ್ಲಿ ಕುಳಿತು ಉಣ್ಣುತ್ತಿದ್ದಳು. ಅವಳ ಆಹಾರ

ಬೆಕ್ಕಿನ ಆಹಾರಕ್ಕಿಂತ ಕೀಳುತರದ್ದಾಗಿಯೂ ನಾಯಿಯದಕ್ಕಿಂತ ಉತ್ತಮತರದ್ದಾಗಿಯೂ ಇತ್ತು.

ಒಬ್ಬರನ್ನು ದ್ವೇಷಿಸದೆ ಮತ್ತೊಬ್ಬರನ್ನು ಪ್ರೀತಿಸಲು ಸಾಧ್ಯವಿಲ್ಲದ ಸ್ವಭಾವದ ಜನರು ಕೆಲವರಿದ್ದಾರಷ್ಟೆ—ಈ ತೆನಾರ್ಡಿಯರನ ಹೆಂಡತಿ ಆ ಸ್ವಭಾವದವಳು. ತನ್ನ ಮಕ್ಕಳನ್ನು ಹೆಚ್ಚೆಚ್ಚು ಪ್ರೀತಿಸುವುದಕ್ಕಾಗಿ, ಅವಳು ಪ್ರತಿ ದಿನವೂ ತಪ್ಪದೆ ಕೋಸೆಟ್ಟಿಗೆ ಪೆಟ್ಟು, ನಿಷ್ಠುರವಚನ, ಹಿಂಸೆಗಳನ್ನು ಕೊಡುತ್ತಿದ್ದಳು; ಮತ್ತು ಈ ಮಾನಕದಿಂದಲೇ ಕೋಸೆಟ್ಟಿಯ ಎದುರು ತನ್ನ ಮಕ್ಕಳಿಗೆ ತಿಂಡಿ, ತಿನಸು, ಆಟ, ಸುಖ ಸಂತೋಷಗಳನ್ನು ಒದಗಿಸುತ್ತಿದ್ದಳು. ಮಕ್ಕಳು ಹೆಚ್ಚಾಗಿ ಹಿರಿಯರ ವರ್ತನೆಗಳನ್ನು ಅನುಕರಿಸುವ ಕ್ರಮದಿಂದ ಎಪೊನಿನ್ ಮತ್ತು ಅಸೆಲ್ಮರೂ ಕೋಸೆಟ್ಟಿಯನ್ನು ದ್ವೇಷಿಸತೊಡಗಿದರು. ತನ್ನ ಮಕ್ಕಳ ಪಾಲಿನ ಸ್ಥಳವನ್ನೂ ಅವರ ಪಾಲಿನ ಗಾಳಿಯನ್ನೂ ಕೋಸೆಟ್ಟಿ ಅನ್ಯಾಯವಾಗಿ ಆಕ್ರಮಿಸಿರುವಳೆಂಬಂತೆ ತೆನಾರ್ಡಿಯರಿಣಿ ಈ ಕೂಸನ್ನು ಕಾಣುತ್ತಿದ್ದಳು.

ಐದು ವರ್ಷ ಕಳೆದರೂ ಫ್ಯಾಂಟೈನಳಿಗೆ ಕೋಸೆಟ್ಟಿಯನ್ನು ಕರೆದುಕೊಂಡು ಹೋಗಲು ಅನುಕೂಲವಾಗಲಿಲ್ಲ. ಅವಳು ಎಂ—ನಲ್ಲಿ ಕೆಲಸಮಾಡಿ ಹಣ ರವಾನಿಸುತ್ತಿದ್ದಳು—ಕೊನೆಗೆ ತಿಂಗಳೊಂದರ ಹದಿನೈದು ಫ್ರ್ಯಾಂಕಿನಂತೆ. ತನ್ನ ಮಗಳ ಯೋಗಕ್ಷೇಮವನ್ನು ಫ್ಯಾಂಟೈನ್ ಪತ್ರ ಮುಖಾಂತರ ವಿಚಾರಿಸಿಕೊಂಡು, "ಬಲು ಚೆನ್ನಾಗಿದ್ದಾಳೆ," ಎಂದು ಉತ್ತರ ಪಡೆಯುತ್ತ, ತನ್ನ ಜೀವನದ ಕಷ್ಟ ಹೆಚ್ಚುತ್ತ ಬರುತ್ತಿದ್ದರೂ ಮಗಳ ಸುಖದಿಂದ ತಾನು ಸಂತೋಷಪಟ್ಟುಕೊಂಡು ದಿನಕಳೆಯುತ್ತಿದ್ದಳು.

ಕೋಸೆಟ್ಟಿಗೆ ಆಹಾರ ಮತ್ತು ವಿಶ್ರಾಂತಿ ಕಡಿಮೆಯಾಗುತ್ತ, ಕೆಲಸ ಮತ್ತು ಹಿಂಸೆ ಹೆಚ್ಚಾಗುತ್ತ ಬಂದುವು. ಅವಳು 'ಬೆಳೆದು ಬಂದಳು' ಎನ್ನುವುದು ಅಸತ್ಯವಾಗುವಂತೆ, ಅವಳ ಪ್ರಾಯ ಏರಿದರೂ ಅವಳ ದೇಹ ಕೃಶವಾಗತೊಡಗಿತ್ತು. ಅವಳ ಮುಖದಲ್ಲಿ ಗಾಬರಿ, ದುಃಖ, ಹೇಡಿತನಗಳು ಎದ್ದುತೋರುತ್ತಿದ್ದುವು. ಹಳೆಯಕುರುಹಾಗಿ. ಈಗ ಅವಳ ಎರಡು ಕಣ್ಣುಗಳು ಮಾತ್ರ ಮೊದಲಿನಂತೆಯೇ ಇದ್ದುವು.

ಸತ್ಯಸ್ಥಿತಿ ಹೀಗಿದ್ದರೂ ನೆರೆಕರೆಯವರು, "ತೆನಾರ್ಡಿಯರರು ಬಡವರಾದರೂ ಅನಾಥ ಬಾಲಿಕೆಯನ್ನು ಪ್ರೀತಿಯಿಂದ ಸಾಕುತ್ತಿರುವರು," ಎಂದನ್ನುತ್ತಿದ್ದರು.

ಮೊಂಟ್‌ಫರ್ಮಿಯಲಿನಲ್ಲಿ ಯಾರೂ ಏಳುವ ಮೊದಲು ಕೋಸೆಟ್ಟಿ ಏಳಬೇಕಾಗಿತ್ತು. ಹೊಟೇಲಿನ ಹೊರಗಿನ ವಠಾರವನ್ನೆಲ್ಲ ಗುಡಿಸಿ ಶುಚಿಪಡಿಸಬೇಕಾಗಿತ್ತು. ಯಾರಾದರೂ ಅಂಥ ಬೆಳಗ್ಗೆ ಎದ್ದು ಕೋಸೆಟ್ಟಿಯನ್ನು ನೋಡಿದ್ದರೆ—ನೋಡಿದವರ ಹೃದಯ ಕರಗುವಂತೆ—ಅವಳ ಕೈಯಲ್ಲಿ ಅವಳಿಗಿಂತ ಉದ್ದದ ಕಸಬರಿಗೆಯನ್ನೂ ಕಣ್ಣುಗಳಲ್ಲಿ ಎರಡು ಬೊಟ್ಟು ನೀರನ್ನೂ ಕಾಣಬಹುದಿತ್ತು.

ಉಷೆಯ ಜತೆಯಲ್ಲೇ ಎದ್ದು ಚಲಿಸುತ್ತಿದ್ದ ಕೋಸೆಟ್ಟಿಯನ್ನು ನೆರೆಕರೆಯುವರು 'ಮುಂಬೆಳಗಿನ ಕೋಗಿಲೆ' ಎಂದು ಕರೆಯುತ್ತಿದ್ದರು—ಈ ದುಃಖಾರ್ತಪಕ್ಷಿ ಮಾತ್ರ ಹಾಡುತ್ತಿರಲಿಲ್ಲ.

ಐದನೆಯ ಸಂಪುಟ

೧. ಕರಿಮಣಿ ಕೈಗಾರಿಕೆಯಲ್ಲಿ ನವಸುಧಾರಣೆ

ಮೊಂಟ್‌ಫರ್ಮಿಯಲಿನಲ್ಲಿ, (ಆ ಊರಿನವರು ಊಹಿಸುತ್ತಿದ್ದಂತೆ) ತನ್ನ ಮಗುವನ್ನು 'ಬಿಸಾಡಿ' ಹೋಗಿದ್ದ ಆ ಮಾತೆಯ ಮನಸ್ಸು ಹೇಗಿತ್ತು, ಅವಳು ಎಲ್ಲಿಗೆ ಹೋದಳು, ಇದನ್ನೆಲ್ಲ

ತಿಳಿಯಬೇಡವೇ? ಫ್ಯಾಂಟೈನ್ ಒಬ್ಬಂಟಿಯಾಗಿಯೇ ಹತ್ತು ವರ್ಷಗಳನಂತರ, ತನ್ನ ಹುಟ್ಟೂರಾದ ಎಂ— ಪಟ್ಟಣಕ್ಕೆ ತಲಪಿದಳು. ಈಕೆ ಪ್ಯಾರಿಸಿನಲ್ಲಿದ್ದಾಗಲೇ ಎಂ— ಪಟ್ಟಣ ಬಹಳ ಬದಲಾವಣೆಗೊಂಡಿತ್ತು. ಹೊಸತಾಗಿ ಸ್ಥಾಪಿಸಲಾಗಿದ್ದ ಒಂದು ಕೈಗಾರಿಕೆಯ ಕಾರ್ಖಾನೆಯ ಕಾರಣವಾಗಿ ಆ ಪಟ್ಟಣ ಬಹಳ ಅಭಿವೃದ್ಧಿ ಸ್ಥಿತಿಗೆ ಬಂದಿತ್ತು. ಈ ಕೈಗಾರಿಕೆ, ಮತ್ತು ಪಟ್ಟಣದ ಅಭಿವೃದ್ಧಿ ವಿವರಣೆಗಳ ಜೊತೆಯಲ್ಲೇ ಫ್ಯಾಂಟೈನಳ ಚರಿತ್ರೆಯನ್ನೂ ಹೇಳಲಿರುವೆವು.

ಇಂಗ್ಲೆಂಡ್ ಮತ್ತು ಜರ್ಮನಿಯ ಬಳೆ ಮತ್ತು ಮಣಿ ಕೈಗಾರಿಕೆಗಳಂತೆಯೇ ಎಂ— ಪಟ್ಟಣದಲ್ಲೂ ಬಳೆಕೈಗಾರಿಕೆ ಪುರಾತನ ಕಾಲದಿಂದಲೂ ನಡೆದುಬಂದಿತ್ತು. ಆದರೆ, ಈ ಕೈಗಾರಿಕೆಯ ಬಗ್ಗೆ ಕಚ್ಚಾಮಾಲನ್ನು ಫ್ರಾನ್ಸ್ ಪರದೇಶಗಳಿಂದ ತರಿಸುತ್ತಿತ್ತು. ೧೮೧೫ನೆ ಇಸವಿಯ ಆಖೈರು ಭಾಗದಲ್ಲಿ ಆಗಂತುಕನೊಬ್ಬ ಎಂ— ಪಟ್ಟಣಕ್ಕೆ ಬಂದು ಬಳೆಕೈಗಾರಿಕೆಯಲ್ಲಿ ನವ ಸುಧಾರಣೆ ಪ್ರಾರಂಭಿಸಿದ. ಪರದೇಶದಿಂದ ಹೆಚ್ಚು ಕ್ರಯಕೊಟ್ಟು ತರಿಸಬೇಕಾಗಿದ್ದ ಕಚ್ಚಾಮಾಲುಗಳಿಲ್ಲದೆಯೇ, ಸ್ವದೇಶೀ ಮಾಲುಗಳಿಂದಲೇ ಮಣಿಗಳನ್ನೂ ಬಳೆಗಳನ್ನೂ ತಯಾರಿಸ ತೊಡಗಿದ. ಇವನು ತಯಾರಿಸಿದ ಮಣಿ ಮತ್ತು ಬಳೆಗಳು ಮೊದಲು ತಯಾರಾಗುತ್ತಿದ್ದ ಮಾಲುಗಳಿಗಿಂತ ಉತ್ತಮತರದ್ದಾಗಿದ್ದುವು; ಅಲ್ಲದೆ ಈ ಕೈಗಾರಿಕೆ ಸಾಕಷ್ಟು ಲಾಭಪ್ರದವಾಗಿಯೂ ಇತ್ತು. ಆಗಂತುಕ ಸ್ವಲ್ಪ ಸ್ವಲ್ಪವಾಗಿ ಮುಂದುವರಿಸುತ್ತ ತನ್ನದೇ ಆದ ಒಂದು ಬಳೆಕೈಗಾರಿಕೆ ಕಾರ್ಖಾನೆಯನ್ನೇ ತೆರೆದ. ಈ ಕೈಗಾರಿಕೆಯಿಂದ ಗ್ರಾಹಕರೂ ಕೈಗಾರಿಕೆಯಲ್ಲಿ ನಿರತರಾಗಿದ್ದ ಕೂಲಿಯವರೂ ಕಾರ್ಖಾನೆ ಮಾಲೀಕನೂ ತುಂಬ ಲಾಭಪಡೆಯತೊಡಗಿದರು. ಕಾರ್ಖಾನೆಯ ಅಭಿವೃದ್ಧಿಯೇ ಎಂ— ಪಟ್ಟಣದ ಅಭಿವೃದ್ಧಿಗೂ ಕಾರಣವಾಯಿತು.

ಮೂರು ವರ್ಷಗಳಲ್ಲೇ ಆಗಂತುಕ ತನ್ನ ಪರಿಶೋಧನೆ ಪರಿಶ್ರಮಗಳ ಫಲದಿಂದ ತಾನು ಶ್ರೀಮಂತನಾಗಿ, ತನ್ನ ಆಶ್ರಯದಲ್ಲಿದ್ದವರನ್ನೆಲ್ಲ ಹಣವಂತರನ್ನಾಗಿ ಮಾಡಿದ. ಆತನ ಪರಿಚಯ ಆ ಮೊದಲು ಎಂ—ನಲ್ಲಿ ಯಾರಿಗೂ ಇರಲಿಲ್ಲ. ಆತ ಅಲ್ಲಿಗೆ ಬರುವಾಗ್ಗೆ ಅವನ ಕೈಯಲ್ಲಿ ಒಂದು ಒರಟು ದೊಣ್ಣೆ, ಹೆಗಲ ಮೇಲೊಂದು ತುಂಬಿದ್ದ ಚೀಲ ಇತ್ತಂತೆ. ದಿನಕೂಲಿಯವನಂತೆ ಉಡುಪು ತೊಟ್ಟಿದ್ದನಂತೆ. ಅವನಲ್ಲಿಗೆ ಬಂದದ್ದು ಡಿಸೆಂಬರ್ ತಿಂಗಳಿನ ಒಂದು ರಾತ್ರಿ. ಪಟ್ಟಣ ಪ್ರವೇಶಮಾಡಿ ಮುಂದುವರಿಯುತ್ತಿದ್ದಾಗಲೇ ಅಲ್ಲಿಯ ನಗರಭವನಕ್ಕೆ ಬೆಂಕಿ ತಗಲಿತ್ತು. ಪೊಲೀಸ್ ಮುಖ್ಯಾಧಿಕಾರಿಯ ಇಬ್ಬರು ಮಕ್ಕಳು ಬೆಂಕಿಯಲ್ಲಿ ಸಿಕ್ಕಿಬಿದ್ದು, ಅವರನ್ನು ಎತ್ತಿತರಲು ಯಾರಿಂದಲೂ ಸಾಧ್ಯವಾಗದಿದ್ದಾಗ, ಈ ಆಗಂತುಕ ಮಹಾಸಾಹಸದಿಂದ ಆ ಮಕ್ಕಳನ್ನು ಎತ್ತಿ ತಂದು ರಕ್ಷಿಸಿದ. ಆಗಲೇ ಅವನ ಹೆಸರೇನೆಂದು ಜನ ವಿಚಾರಿಸಿದಾಗ ಫಾದರ್ ಮೆಡಲೀನ್ ಎಂದು ತಿಳಿಸಿದ್ದ. ಅವನ ಪ್ರಾಯ ಆಗ್ಗೆ ಸಾಧಾರಣ ಐವತ್ತು ವರ್ಷ. ಪೊಲೀಸ್ ಮುಖ್ಯಾಧಿಕಾರಿ ಫಾದರ್ ಮೆಡಲೀನನನ್ನು ಬಲು ಪ್ರಶಂಸಿಸಿ ವಂದಿಸಿದ್ದ. ಈ ಕಾರಣದಿಂದಲೇ ಇವನ ಕುರಿತು ಆಗಲೂ ಅನಂತರವೂ ಯಾರೂ ಇತರ ಹೆಚ್ಚಿನ ವಿವರಗಳನ್ನಾಗಲೀ ಪಾಸ್‌ಪೋರ್ಟನ್ನಾಗಲೀ ಕೇಳಲಿಲ್ಲ.

ಫಾದರ್ ಮೆಡಲೀನನ ಮಾಲುಗಳು ಪರದೇಶಗಳಿಗೂ ರಫ್ತಾಗುತ್ತಿದ್ದುವು. ವ್ಯಾಪಾರ ಬೆಳೆದಂತೆಯೇ ಲಾಭಾಂಶವೂ ಬೆಳೆಯಿತು. ಲಾಭದಿಂದ ಕೆಲಸಗಾರರಿಗೆ ಅನೇಕ ಸೌಕರ್ಯಗಳನ್ನು ಒದಗಿಸಿಕೊಟ್ಟ. ಎರಡೇ ವರ್ಷಗಳಲ್ಲಿ ಹೆಂಗುಸರಿಗೊಂದು, ಗಂಡುಸರಿಗೊಂದು ಎಂಬಂತೆ ಎರಡು ಕಾರ್ಖಾನೆ ಕಟ್ಟಡಗಳನ್ನು ಕಟ್ಟಿಸಿದ. ಕೆಲಸವನ್ನು ಅಪೇಕ್ಷಿಸಿದ ಪ್ರತಿ ವ್ಯಕ್ತಿಗೂ ಈ ಕಾರ್ಖಾನೆಗಳಲ್ಲಿ ಕೆಲಸ ದೊರಕುತ್ತಿತ್ತು. ಈ ಕೆಲಸದಿಂದ ಬಡವರ ಜೀವನ ಹಗುರವಾಗಿ

ಸಾಗುತ್ತಿತ್ತು. ವ್ಯಾಪಾರದ ಅಭಿವೃದ್ಧಿಯಿಂದ ಎಂ— ಪಟ್ಟಣವೂ ಅಭಿವೃದ್ಧಿಗೊಂಡು, ಅದು ವ್ಯಾಪಾರದ ಒಂದು ಕೇಂದ್ರವಾಯಿತು. ಬಳೆ ಕೈಗಾರಿಕೆಯ ಮಾದರಿ ಸ್ಥಳವಾಗಿ ಆ ಜಿಲ್ಲೆಯಲ್ಲೇ ಎಂ— ಪಟ್ಟಣ ಪ್ರಖ್ಯಾತವಾಯಿತು. ಫಾದರ್ ಮೆಡಲೀನ್ ಆ ಊರಿನವರೆಲ್ಲರ ಪ್ರೀತ್ಯಾದರಗಳಿಗೆ ಪಾತ್ರನಾದ. ಬಡವರಂತೂ ಅವನನ್ನು ಬಲು ಮರ್ಯಾದೆಯಿಂದಲೂ ಪ್ರೀತಿಯಿಂದಲೂ ಕಾಣುತ್ತಿದ್ದರು. ತಾನು ಕೆಲಸಗಾರರಿಗೆ ಕೊಡುತ್ತಿದ್ದ ಸಂಬಳ ಮತ್ತು ಒದಗಿಸುತ್ತಿದ್ದ ಸೌಕರ್ಯಗಳಿಗೆ ಪ್ರತಿಯಾಗಿ ಫಾದರ್ ಮೆಡಲೀನ್ ಅವರಿಂದ ಅಪೇಕ್ಷಿಸುತ್ತಿದ್ದುದು ಕೆಲಸದಲ್ಲಿ ಶ್ರದ್ಧೆ, ನಡತೆಯಲ್ಲಿ ಪರಿಶುದ್ಧತೆ, ಮತ್ತು ಸರ್ವತ್ರ ಪ್ರಾಮಾಣಿಕತೆ ಮಾತ್ರ. ಹೆಂಗುಸರ ನಡತೆ ಮತ್ತು ನಿಷ್ಕಳಂಕ ಜೀವನದ ಬಗ್ಗೆ ಅವನು ವಿಶೇಷ ಲಕ್ಷ್ಯವಿಟ್ಟು ನೋಡಿಕೊಂಡಿರುತ್ತಿದ್ದ.

ತನ್ನ ಲಾಭದಿಂದಲೇ ಫಾದರ್ ಮೆಡಲೀನ್ ಎಂ— ಪಟ್ಟಣದ ಸೌಕರ್ಯಗಳಿಗಾಗಿ—ಮುಖ್ಯವಾಗಿ ಬಡವರ ಸೌಕರ್ಯಕ್ಕಾಗಿ—ಒಂದು ಮಿಲಿಯನ್ ಫ್ರ್ಯಾಂಕಿಗಿಂತಲೂ ಹೆಚ್ಚು ಹಣ ಖರ್ಚು ಮಾಡಿದ್ದ. ಇಷ್ಟು ಖರ್ಚುಮಾಡಿಯೂ ೧೮೨೦ರಲ್ಲೇ ಫಾದರ್ ಮೆಡಲೀನ್ ಆರುಲಕ್ಷದ ಮೂವತ್ತುಸಾವಿರ ಫ್ರ್ಯಾಂಕಷ್ಟು ಹಣವನ್ನು ಬ್ಯಾಂಕಿನಲ್ಲಿಟ್ಟಿದ್ದ. ಆ ಊರಿನ ಆಸ್ಪತ್ರೆಗೆ ಹತ್ತು ಜನರಿಗೆ ಸಾಕಾಗುವಷ್ಟು ಸ್ಥಳಾನುಕೂಲ್ಯವನ್ನೂ ಹಾಸಿಗೆಗಳನ್ನೂ, ತನ್ನ ಕಡೆಯಿಂದ ಒದಗಿಸಿದ. ಹುಡುಗಿಯರಿಗೊಂದು, ಹುಡುಗರಿಗೊಂದು ಎಂಬಂತೆ ಎರಡು ಶಾಲಾ ಕಟ್ಟಡಗಳನ್ನು ಕಟ್ಟಿಸಿ ಸರಕಾರಕ್ಕೆ ವಹಿಸಿಕೊಟ್ಟ. ಇಬ್ಬರು ಉಪಾಧ್ಯಾಯರಿಗೆ ಅವರ ಮೊದಲಿನ ಸಂಬಳದ ಮೂರರಷ್ಟು ಹೆಚ್ಚು ಸಂಬಳ ಸಿಕ್ಕಲು ಬೇಕಾದ ಮೊಬಲಗನ್ನು ಸರಕಾರದಲ್ಲಿ ಠೇವಣಿ ಇಟ್ಟ. ಪ್ರಯಾಣಿಕರಿಗೊಂದು ಧರ್ಮಾರ್ಥ ವಿಶ್ರಾಂತಿಭವನವನ್ನೂ ಧರ್ಮ ಆಸ್ಪತ್ರೆಯನ್ನೂ ಕಟ್ಟಿಸಿಕೊಟ್ಟ. ಬಡವೃದ್ಧರಿಗೂ ಅಂಗವಿಕಲರಿಗೂ ನಿರ್ಗತಿಕರಿಗೂ ಸಹಾಯನೀಡಲು ನಿರ್ಮಾಣಮಾಡಿಕೊಟ್ಟ. ಎಂ— ಪಟ್ಟಣದ ಹಾಳುಬಿದ್ದಿದ್ದ ಹೊರವಲಯಗಳಲ್ಲಿ ಅನೇಕಾನೇಕ ಬಡ ಕುಟುಂಬಗಳು ಬಂದು ತಮ್ಮ ವೃತ್ತಿಗಾಗಿ ಮನೆಕಟ್ಟಿ ನೆಲಸಿದುವು. ಈ ರೀತಿ ಎಂ— ಪಟ್ಟಣದ ಕ್ಷೇತ್ರ ವಿಸ್ತಾರವಾಗುತ್ತ ಬಂತು. ಹೀಗೆ ಫಾದರ್ ಮೆಡಲೀನ್ ಬಂದು ಎಂ— ಪಟ್ಟಣದಲ್ಲಿ ನೆಲಸಿದ ಕೆಲವೇ ವರ್ಷಗಳಲ್ಲಿ ಈ ಪಟ್ಟಣ ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿತು.

ಪರಗುಣ ವಿಮರ್ಶಕರು ಕೆಲವರು ಕರುಣೆಯಿಂದ "ಅವನೊಬ್ಬ ಲಕ್ಷ್ಮೀ ಆರಾಧಕ" ಎಂದು ಮೊದಮೊದಲು ಅನ್ನುತ್ತಿದ್ದರು. ಆದರೆ ಫಾದರ್ ಮೆಡಲೀನ್ ಊರಿನ ಹಿತಗಳನ್ನು ಮಾಡಿಕೊಟ್ಟ ಬಳಿಕ, ತನ್ನ ಬಂಡವಾಳವನ್ನು ಶೇಖರಿಸುತ್ತಿದ್ದುದನ್ನು ಕಂಡು ಉದಾರಿಗಳು ಕೆಲವರನ್ನುತ್ತಿದ್ದರು, "ಅವನೊಬ್ಬ ಪ್ರತಿಷ್ಠಾಕಾಂಕ್ಷಿ." ೧೮೧೯ರಲ್ಲಿ ಅವನನ್ನು ಮೇಯರನನ್ನಾಗಿ ಮಾಡುವರೆಂಬ ವದಂತಿ ಎದ್ದಿತು. ಆಗ ಮೊದಲಿನ ಜನ ತಂತಮ್ಮೊಳಗೆ ಅಂದುಕೊಂಡರು, "ಮೊದಲೇ ಹೇಳಿದ್ದೆವಷ್ಟೆ ಅವನೊಬ್ಬ ಪ್ರತಿಷ್ಠಾಕಾಂಕ್ಷಿ, ಎಂದು!" ಆದರೆ, ಈ ವರ್ತಮಾನದ ಹಿಂದೆಯೇ ಅವನು ಮೇಯರ್ ಪದವಿಯನ್ನು ನಿರಾಕರಿಸಿ ತ್ಯಜಿಸಿರುವುದಾಗಿ ಪತ್ರಿಕೆಗಳಲ್ಲಿ ವರ್ತಮಾನ ಪ್ರಕಟವಾಯಿತು. ಆಗ ಜನ ತಮ್ಮ ಸ್ಪಷ್ಟಾಭಿಪ್ರಾಯವನ್ನು ಬಹಿರಂಗಪಡಿಸುತ್ತ, "ಅವನು ಇಚ್ಛಿಸುವುದು ಧರ್ಮಾಂಗದ ಬಿರುದು ಪ್ರತಿಷ್ಠೆಗಳನ್ನು, ಗೊತ್ತಿದೆಯೇ?" ಎಂದು ಅಂದೇಬಿಟ್ಟರು. ಧರ್ಮಸಂಸ್ಥೆಯ ಒಂದು ಬಿರುದನ್ನು ಅವನಿಗೆ ಕೊಡಲು ಪ್ರಯತ್ನಿಸಿದಾಗ ಅವನು ಅದನ್ನೂ ಸ್ವೀಕರಿಸಲಿಲ್ಲ. ಆಗ ಜನರು ನಿರುತ್ಸಾಹಿಗಳಾಗಿ, "ಅವನೊಬ್ಬ ಗೊತ್ತುಗುರಿಯಿಲ್ಲದ ಸಾಹಸಿ," ಎಂದಂದು ನಕ್ಕರು.

ಫಾದರ್ ಮೆಡಲೀನನ ಐಶ್ವರ್ಯ ಹೆಚ್ಚಿದ ಹಾಗೆ ಜನರು ಅವನನ್ನು 'ಶ್ರೀಮಾನ್ ಮೆಡಲೀನ್'

ಎಂದು ಕರೆಯತೊಡಗಿದರು. ಕಾರ್ಮಿಕರನ್ನು ತಮ್ಮ ಸಭೆಗಳಲ್ಲಿ ಸೇರಿಸಿಕೊಳ್ಳಲು ಜುಗುಪ್ಸಿತರಾಗಿದ್ದ ಘನಕುಟುಂಬಗಳು ಶ್ರೀಮಾನ್ ಮೆಡಲೀನನನ್ನು ತಮ್ಮ ಸಭೆ, ಸಮಾರಂಭಗಳಿಗೆ ಅತ್ಯಾದರದಿಂದ ಆಮಂತ್ರಿಸುತ್ತಿದ್ದರು. ಆದರೂ ಅವನು ಯಾರ ಮನೆಗೂ ಸಂತೋಷ ಸಮಾರಂಭಗಳಿಗೂ ಹೋಗುತ್ತಿರಲಿಲ್ಲ. ಈಗ ಸಹೃದಯರು ತಮ್ಮ ಅಭಿಪ್ರಾಯಗಳನ್ನು, "ಅವನೊಬ್ಬ ಅವಿದ್ಯಾವಂತ ಪಶು—ಹಾಗಾಗಿ ಸುಸಂಸ್ಕೃತರ ಸಹವಾಸ ಅವನಿಗೆ ಮೆಚ್ಚದು," ಎಂದು ಪ್ರಕಟ ಮಾಡುತ್ತಿದ್ದರು.

೧೮೨೦ರಲ್ಲಿ ಇವನ ದೇಶಹಿತದ ಕಾರ್ಯಗಳನ್ನು ತಿಳಿದು, ಮೆಚ್ಚಿ, ರಾಜನೇ ಇವನನ್ನು ಎಂ—ಪಟ್ಟಣದ ಮೇಯರನನ್ನಾಗಿ ನೇಮಿಸಿದ. ಈ ನೇಮಕವನ್ನೂ ಅವನು ನಿರಾಕರಿಸುವುದರಲ್ಲಿದ್ದಾಗ ಒಬ್ಬಳು ಮುದುಕಿ ಬಂದು ಅಂದಳು, "ಮೇಯರ್ ಪದವಿಗೆ ಉತ್ತಮರು ಬಂದರೇನೇ ಊರಿಗೆ ಪ್ರಯೋಜನ. ಜನಹಿತವನ್ನು ಸಾಧಿಸಲು ಅನುಕೂಲ ಸಿಕ್ಕಿದಾಗ ದೂರ ನಿಲ್ಲುವುದು ಸದ್ಗುಣವಲ್ಲ." ಈ ಮಾತನ್ನು ಗ್ರಹಿಸಿ ಫಾದರ್ ಮೆಡಲೀನ್ ತನಗೆ ಸಿಕ್ಕಿದ ಪದವಿಯನ್ನು ಅಂಗೀಕರಿಸಿದ. ಅವನು ಈ ರೀತಿ ಮಾನ್ಸರ್ ಮೆಡಲೀನನಾಗಿ ಮೇಯರನಾದ.

೨. ಲೆಫಿಟ್ಟೆ ಬ್ಯಾಂಕಿನಲ್ಲಿ ಠೇವಣಿ

ಫಾದರ್ ಮೆಡಲೀನ್ ತನಗೆ ಯಾವ ಪದವಿ ಬಂದರೂ ತನ್ನ ಕ್ರಮಗಳನ್ನು ಬಿಡಲಿಲ್ಲ. ಮೇಯರರ ಕೆಲಸದ ಸಂಬಂಧವಾಗಿ ಎಷ್ಟು ಜನ ಸಂಪರ್ಕ ಬೆಳೆಸಬೇಕಾಗಿತ್ತೋ ಅಷ್ಟು ಮಾತ್ರ ಬೆಳೆಸಿಕೊಂಡಿದ್ದ. ಈಗೀಗ ಅವನ ತಲೆಕೂದಲು ಬೂದುಬಣ್ಣಕ್ಕೆ ತಿರುಗತೊಡಗಿತ್ತು. ಕಣ್ಣುಗಳನ್ನು ನೋಡಿದರೆ ಅವನು ಸದಾ ಏನೋ ಆಲೋಚನೆಯಲ್ಲಿದ್ದಂತೆ ತೋರುತ್ತಿದ್ದ. ಶ್ರಮಜೀವಿಗಳಿಗಿರುವಂಥ ಅವನ ಒರಟು ಮುಖದಲ್ಲಿ ತತ್ತ್ವಜ್ಞಾನಿಯ ಗಂಭೀರತೆ ತೋರಿಬರುತ್ತಿತ್ತು. ತನ್ನನ್ನು ಹೊಗಳಲು ಅವನು ಯಾರಿಗೂ ಎಡೆಕೊಡುತ್ತಿರಲಿಲ್ಲ. ತಾನು ನಗಬಾರದೆಂದು, ನಗು ತಪ್ಪಿಸುವುದಕ್ಕಾಗಿ, ನಸುನಗುವನ್ನು ಮಾತ್ರ ಬಿರಿದು ಮುಗಿಸುತ್ತಿದ್ದ. ನಸುನಗುವಿನಿಂದಲೂ ತಪ್ಪಿಸಿಕೊಳ್ಳುವುದಕ್ಕಾಗಿ, ಅನೇಕವೇಳೆ, ನಗಲೇಬೇಕಾದಾಗ ದಾನ, ಪರೋಪಕಾರ ಕಾರ್ಯಗಳಲ್ಲಿ ತತ್ಪರನಾಗಿಬಿಡುತ್ತಿದ್ದ. ಅವನು ತುಂಬ ಪುಸ್ತಕಗಳನ್ನು ಓದುತ್ತಿದ್ದ. ಜನಸಂಪರ್ಕದ ಲೋಪವನ್ನು ಪುಸ್ತಕ ಸಂಪರ್ಕದಿಂದ ಸರಿಪಡಿಸಿಕೊಳ್ಳುತ್ತಿದ್ದ. ವರ್ಷದಿಂದ ವರ್ಷಕ್ಕೆ ಅವನ ನಡೆನುಡಿಗಳೆಲ್ಲ ಸೌಮ್ಯವಾಗುತ್ತಲೂ ಉತ್ತಮವಾಗುತ್ತಲೂ ಆದರ್ಶತರದ್ದಾಗುತ್ತಲೂ ಬರುತ್ತಿದ್ದುವು.

ಅವನ ಬಿಡು ವೇಳೆಯಲ್ಲಿ ನೆರೆಯ ಹಳ್ಳಿಗಳಿಗೆ ಹೋಗಿ ತಿರುಗಾಡಿ ಬರುತ್ತಿದ್ದ. ಕೋವಿ ಹೊಡೆಯುವುದರಲ್ಲಿ ಆತ ಬಲು ನಿಪುಣನಾಗಿದ್ದರೂ ಅವನ ಕೋವಿ ಮೊಲ, ಹಕ್ಕಿ ಮೊದಲಾದ ಯಾವ ಸಾಧುಜೀವಿಗಳ ಪ್ರಾಣವನ್ನೂ ತೆಗೆಯುತ್ತಿರಲಿಲ್ಲ. ಅವನು ತಿರುಗಾಡಲು ಹೋಗುವಾಗ ಜೇಬು ತುಂಬ ಅರ್ಧಫ್ರಾಂಕಿನ ನಾಣ್ಯಗಳನ್ನು ತುಂಬಿಸಿಕೊಂಡು ಹೋಗಿ, ಖಾಲಿ ಜೇಬಿನಿಂದ ಮರಳುತ್ತಿದ್ದ. ಏಳಲಾರದೆ ಬಿದ್ದಿದ್ದ ಬಡಕಲು ಕುದುರೆಯನ್ನೆತ್ತಲು, ಕೆಸರಲ್ಲಿ ಹೂತುಹೋಗಿದ್ದ ಬಂಡಿಗಳನ್ನು ಎತ್ತಿ ನೂಕಲು, ತಪ್ಪಿಸಿ ಓಡುವ ದನಗಳನ್ನು ಕೊಂಬಿನಿಂದಲೇ ಹಿಡಿದು ನಿಲ್ಲಿಸಲು—ಈ ವಿಧದ, ಅಧಿಕ ಶಕ್ತಿಬೇಕಾದ ಕೆಲಸಗಳಲ್ಲಿ ಸಹಾಯನೀಡಲು—ಅವನು ಅನುವಾಗುತ್ತಿದ್ದ.

ಅವನೊಬ್ಬ ಹಳ್ಳಿಯ ಕೃಷಿಕನಿರಬೇಕೆಂದು ಅನೇಕರು ಊಹಿಸಿಕೊಂಡಿದ್ದರು. ಈ ಊಹನೆಗೆ ಸಾಕಷ್ಟು ಕಾರಣವೂ ಇತ್ತು. ಗೋದಿ ಕುಂಬಾಗದಂತೆ ಉಪ್ಪನ್ನು ಪ್ರಯೋಗಿಸುವ ಕ್ರಮ, ಧಾನ್ಯ

ಗಳನ್ನು ನಾಶಮಾಡುವ ಗುಗ್ಗುರು ಉತ್ಪನ್ನವಾಗದಂತೆ ಮಾಡಲು ಓರ್‌ವಿಯಟ್ ಗಿಡವನ್ನು ಧಾನ್ಯದ ಸಮೀಪ ತೂಗಬೇಕೆಂಬ ಉಪಾಯ, ನೆಟಲ್ಸ್ ಮುಳ್ಳುಗಿಡ ಮನುಷ್ಯ ತಿನ್ನುವ ತರಕಾರಿ, ದನದ ಆಹಾರ, ಮತ್ತು ಕೈಗಾರಿಕೆಯ ನಾರು ಎಂಬ ಸಂಗತಿ ಮುಂತಾದವನ್ನು ಜನರಿಗೆ ಹೇಳಿ ಕೊಡುತ್ತಿದ್ದ. ಕೃಷಿಯ ದೋಷದಿಂದಲೇ ಮನುಷ್ಯ ಅಥವಾ ವನಸ್ಪತಿ ಕೆಟ್ಟವುಗಳಾಗುವುದೇ ಹೊರತು, ಮೂಲದಲ್ಲಿ ಅವು ಉಪಕಾರೀ ವಸ್ತುಗಳು, ಕೆಟ್ಟವುಗಳಲ್ಲವೆಂದು ಆತ ಜನರಲ್ಲಿ ಹೇಳುವುದಿತ್ತು.

ಮಕ್ಕಳಿಗೂ ಅವನಲ್ಲಿ ಪ್ರೇಮವಿತ್ತು. ಅವರಿಗೆ ಹುಲ್ಲು, ಗೆರಟೆ ಮೊದಲಾದವುಗಳಿಂದ ಆಟದ ಸಾಮಾನುಗಳನ್ನು ಮಾಡಿಕೊಡುತ್ತಿದ್ದ. ಖಾಯಿಲಸ್ಥರ ಸುಖದುಃಖ ವಿಚಾರಿಸುವುದು, ಶವ ಸಂಸ್ಕಾರಕ್ಕಾಗಿ ಹೋಗುತ್ತಿದ್ದವರ ಜೊತೆ ಶ್ಮಶಾನದವರೆಗೆ ಹೋಗುವುದು—ಇವೆಲ್ಲ ಅವನ ಪ್ರೀತಿಯ ಕೆಲಸಗಳು. ಒಮ್ಮೊಮ್ಮೆ ಅವನು ಮನೆಯವರಿಲ್ಲದಿದ್ದಾಗ ಬಡವರ ಮನೆಗೆ ನುಗ್ಗಿ, ಮನೆಯವರು ಬಂದಾಗ ಸುಲಭವಾಗಿ ಅವರಿಗೆ ಸಿಕ್ಕುವಂತೆ, ಚಿನ್ನದ ನಾಣ್ಯಗಳನ್ನು ಅಲ್ಲಿ ಇಟ್ಟು ಬರುವುದೂ ಇತ್ತು.

ಜನ ಇವನನ್ನು ನಾನಾ ವಿಧವಾಗಿ ವರ್ಣಿಸುತ್ತಿದ್ದರು, "ಶ್ರೀಮಂತನಾದರೂ ನಿಗರ್ವಿ—ಅದೃಷ್ಟಶಾಲಿಯಾದರೂ ಸಂತೋಷರಹಿತ," ಎಂದು ಮಾತಾಡುತ್ತಿದ್ದರು. "ಅವನೊಬ್ಬ ವಿರಕ್ತ. ಅವನೊಬ್ಬ ಮಂತ್ರವಾದಿ. ಅಸ್ವಾಭಾವಿಕ ಮನುಷ್ಯ. ಅವನ ಶಯ್ಯಾಗೃಹದಲ್ಲಿ ಪಾರಲೌಕಿಕ ವಿಷಯದ ವಸ್ತುಗಳಿವೆ," ಎಂದು ಜನ ಅಂದುಕೊಳ್ಳುತ್ತಿದ್ದರು. ಉಚ್ಚಮನೆತನದ ಹೆಂಗುಸೊಬ್ಬಳು ಒಮ್ಮೆ ಆತನ ಶಯ್ಯಾಗೃಹವನ್ನು ನೋಡಬೇಕೆಂದು ಹಠಾತ್ತಾಗಿ ಗರ್ವದ ಸಲಿಗೆಯಿಂದ ಕೇಳಿದಾಗ ಆ ಕೂಡಲೇ ಅವನು ಆ ಹೆಂಗುಸಿಗೆ ಅದನ್ನು ಬಲುನಮ್ರತೆಯಿಂದ ತೋರಿಸಿದ. ಅವನ ಕೋಣೆ ಯಾವ ವಿಧದ ಆಡಂಬರ, ಅಥವಾ ವಿಲಾಸದ ವಸ್ತುಗಳನ್ನೂ ಒಳಗೊಳ್ಳದೆ ಕೇವಲ ಬಡವರ ಮಲಗುವ ಕೋಣೆಯಂತಿತ್ತು. ಬಲು ಹಳೆಮಾದರಿಯ ಎರಡು ಬೆಳ್ಳಿ ದೀಪಸ್ತಂಭಗಳ ಹೊರತಾಗಿ ಅಲ್ಲಿ ವಿಶೇಷ ವಸ್ತುಗಳು ಏನೂ ಇರಲಿಲ್ಲ.

ಈ ಭೂರಿಜನರೇ ಫಾದರ್ ಮೆಡಲೀನನ ಹಣದ ಲೆಕ್ಕಗಳನ್ನೂ ನೋಡಿಕೊಳ್ಳುತ್ತಿದ್ದರು. ಮೂರು ಮಿಲಿಯನ್ ಫ್ರ್ಯಾಂಕನ್ನು ಲೆಫಿಟ್ಟೆ ಬ್ಯಾಂಕಿನಲ್ಲಿಟ್ಟಿದ್ದಾನೆಂದೂ ಮೂರಲ್ಲ, ಎರಡೂವರೆಯೆಂದೂ ಇಟ್ಟ ಹಣ ಕೇಳಿದ ಕೂಡಲೆ ಸಿಕ್ಕುವ ಶರ್ತದಲ್ಲಿ ಇಟ್ಟಿದ್ದೆಂದೂ ಜನರು ಮಾತಾಡಿಕೊಳ್ಳುತ್ತಿದ್ದರು. ಆದರೆ, ಈ ಮಾತಿನಲ್ಲಿ ಸ್ವಲ್ಪ ಸತ್ಯಾಂಶವೂ ಇತ್ತು. ನಿಜವನ್ನು ಹೇಳುವುದಾದರೆ, ಒಂದಾವೃತ್ತಿ ಅವನ ಹತ್ತಿರ ಮೂರು ಮಿಲಿಯನ್ ಫ್ರ್ಯಾಂಕ್ ಹಣವೂ ಇತ್ತು. ಆದರೆ, ಅನಂತರ ಅನೇಕ ಸಾರ್ವಜನಿಕ ಸಹಾಯಕಾರ್ಯಗಳಿಗಾಗಿ ಆ ಹಣದಲ್ಲಿ ಹೆಚ್ಚಿನ ಅಂಶ ಖರ್ಚಾಗಿತ್ತು. ಈಗ ಲೆಫಿಟ್ಟೆ ಬ್ಯಾಂಕಿನಲ್ಲಿ ಫಾದರ್ ಮೆಡಲೀನನ ಹಣ ಕೇವಲ ಆರುನೂರ ಮೂವತ್ತು ಅಥವಾ ನಲವತ್ತುಸಾವಿರ ಫ್ರ್ಯಾಂಕ್ ಇಷ್ಟು ಮಾತ್ರ ಇತ್ತು.

೩. ಶೋಕವಸನಧಾರಿ ಮಾನ್ಸರ್ ಮೆಡಲೀನ್

ಡಿ— ಪ್ರದೇಶದ ಬಿಷಪ್ ಮಾನ್ಸರ್ ಮಿರಿಯಲ್ ಮೃತಪಟ್ಟಿರುವುದಾಗಿ ೧೮೨೧ರಲ್ಲಿ ಪತ್ರಿಕೆಗಳು ಪ್ರಕಟಿಸಿದುವು. ಈ ವರ್ತಮಾನ ಎಂ— ಪಟ್ಟಣದಲ್ಲಿ ಪ್ರಚಾರವಾದ ಮರುದಿನ ಮಾ. ಮೆಡಲೀನ್ ದುಃಖಸೂಚಕ ಕಪ್ಪುವಸ್ತ್ರ ಧರಿಸಿದ್ದ. ಮಾ. ಮೆಡಲೀನ್ ಬಿಷಪ್ ಮಿರಿಯಲರ

ಬಂಧುವಾಗಿರಬೇಕೆಂದು ಜನ ಮಾತಾಡಿಕೊಂಡರು. ಈ ನೆಂಟತನದ ಊಹೆಯೇ ಉಚ್ಚಮನೆತನದವರ ದೃಷ್ಟಿಯಲ್ಲಿ ಮಾ. ಮೆಡಲೀನನ ಗೌರವವನ್ನು ಹೆಚ್ಚಿಸಿತು. ಕುಲೀನತೆಯೇ ಸರ್ವಸ್ವವೆಂದು ಗ್ರಹಿಸಿಕೊಂಡಿದ್ದ ಸ್ತ್ರೀ ಒಬ್ಬಳು ಡಿ—ಯ ಬಿಷಪರಿಗೂ ಮಾ. ಮೆಡಲೀನನಿಗೂ ರಕ್ತಸಂಬಂಧವಿರಬೇಕೆಂದು ಊಹಿಸಿ ಸಂತೋಷಪಟ್ಟುಕೊಂಡು, ಆ ಕುರಿತಾದ ವಿವರನ್ನು ಮಾ. ಮೆಡಲೀನ್ ಹತ್ತಿರ ವಿಚಾರಿಸಿದಳು. . .

"ನನ್ನ ಯೌವನ ಕಾಲದಲ್ಲಿ ನಾನು ಅವರಲ್ಲೊಬ್ಬ ಆಳಾಗಿದ್ದೆ," ಎಂದು ಮಾತ್ರ ಮಾ. ಮೆಡಲೀನ್ ಉತ್ತರ ಕೊಟ್ಟ.

೪. ದಿಗಂತದಲ್ಲಿ ಕರಾಳ ಚಿಹ್ನೆ

ಜನರಿಗೆ ಮಾ. ಮೆಡಲೀನ್ ಮೇಲಿದ್ದ ವಿರೋಧ ಭಾವ ಕ್ರಮೇಣವಾಗಿ ಮಾಯವಾಯಿತು. ಅವರ ಗೌರವ ಪ್ರತಿಷ್ಠೆಗಳು ಏರತೊಡಗಿದುವು. ಜನರು ಇವರನ್ನು ಡಿ— ಪ್ರದೇಶದ ಬಿಷಪರನ್ನು ಕಾಣುತ್ತಿದ್ದಂತೆಯೇ ಗೌರವ, ಪ್ರೀತಿ, ಭಯ ಭಕ್ತಿಗಳಿಂದ ಕಾಣುತ್ತಿದ್ದರು. ಊರವರು ಮಾತ್ರವಲ್ಲದೆ ಪರ ಊರವರೂ ಇವರನ್ನು ತುಂಬ ಗೌರವಿಸುತ್ತಿದ್ದರು. ಇವರ ಅನುಭವಗಳನ್ನು ತಿಳಿದುಕೊಳ್ಳಲೂ ಚರ್ಚಾಸ್ಪದ ವಿಷಯಗಳಲ್ಲಿ ಇವರ ಮಧ್ಯಸ್ಥಿಕೆಯ ಇತ್ಯರ್ಥಗಳನ್ನು ಪಡೆದುಕೊಳ್ಳಲೂ ಪರಊರಿನವರು ಕೂಡ ಇವರಲ್ಲಿಗೆ ಬರುತ್ತಿದ್ದರು.

ಹೀಗೆ ಮಾ. ಮೆಡಲೀನರನ್ನು ಊರು ಪರಊರಿನವರು ಗೌರವಿಸುತ್ತಿದ್ದರೂ ಇದೇ ಎಂ— ಪಟ್ಟಣದ ಪೊಲೀಸ್ ಇನ್‌ಸ್ಪೆಕ್ಟರನೊಬ್ಬ ಮಾತ್ರ ತನ್ನ ಅಂತರಂಗದಲ್ಲಿ ಅವರನ್ನು ಗೌರವಿಸಲು ವಿರೋಧಿಸುತ್ತಿದ್ದ. ಈ ವಿರೋಧಕ್ಕೆ ಪ್ರತ್ಯಕ್ಷ ಕಾರಣವನ್ನು ಆ ಇನ್‌ಸ್ಪೆಕ್ಟರನೇ ಗುರುತಿಸಲಾರದೆ ಇದ್ದ. ಆದರೆ, ಅವನ ಒಂದು ವಿಧದ ಮೃಗೀಯ ಹುಟ್ಟುಬುದ್ಧಿಯೇ ಅವನನ್ನು ಹಾಗೆ ಮಾಡಿತ್ತು. ಆ ಇನ್‌ಸ್ಪೆಕ್ಟರನ ಪರಿಚಯವನ್ನು ಇಲ್ಲಿ ಮಾಡಿಕೊಡಬೇಕಾಗಿದೆ.

ಅವನ ಹೆಸರು ಜೇವರ್ಟ್. ಮಾ. ಮೆಡಲೀನ್ ಎಂ— ಪಟ್ಟಣದಲ್ಲಿ ಕಾರ್ಖಾನೆಯ ಶ್ರೀಮಂತ ಮಾಲೀಕರೂ ಪಟ್ಟಣದ ಮೇಯರರೂ ಆದನಂತರವೇ ಜೇವರ್ಟ್ ಈ ಪಟ್ಟಣಕ್ಕೆ ವರ್ಗವಾಗಿ ಬಂದಿದ್ದ. ಹಾಗಾಗಿ ಜೇವರ್ಟನಿಗೆ ಮಾ. ಮೆಡಲೀನರ ಪೂರ್ವ ಚರಿತ್ರೆ ಗೊತ್ತಿರಲಿಲ್ಲ. ಆದರೂ ಅವರನ್ನು ನೋಡಿದಾಗಲೆಲ್ಲ ಅವನ ಮನಸ್ಸಿನಲ್ಲಿ ವಿಧವಿಧವಾದ ಆಲೋಚನೆಗಳು ಮೂಡುತ್ತಿದ್ದುವು.

ಜೇವರ್ಟನ ಮುಖವನ್ನು ಒಮ್ಮೆ ಯಾರಾದರೂ ನೋಡಿದ್ದಾದರೆ ಅದನ್ನು ಎಂದೂ ಮರೆಯರು. ಅವನ ಮುಖದಲ್ಲಿ ಅಂಥ ಪ್ರಭಾವವಿತ್ತು. ಅವನ ಅಂತರಂಗ ಮುಖದಲ್ಲಿ ಎದ್ದು ನಲಿಯುತ್ತಿತ್ತು. ಅಷ್ಟು ಮಾತ್ರವಲ್ಲ—ಅವನು ಯಾರನ್ನಾದರೂ ಉದ್ದೇಶಪೂರ್ವಕವಾಗಿ ನೋಡಿದರೆ ಹಾಗೆ ನೋಡಲ್ಪಟ್ಟವರ ಹೃದಯವನ್ನೇ ಹಿಡಿದುಬಿಡುತ್ತಿತ್ತು. ಮನುಷ್ಯನ ಮನುಷ್ಯತ್ವ ಅಂತರಂಗದಲ್ಲೇ ಇರುವುದರಿಂದ ಜೇವರ್ಟನ ಅಂತರಂಗದ ಪರಿಚಯ ಮಾಡುವುದು ಅಗತ್ಯ. ಆದರೆ, ಅಂತರಂಗವನ್ನು ಬಾಹ್ಯ ಉಪಮಾನಗಳಿಂದ ಮಾತ್ರ ವಿವರಿಸಬೇಕಷ್ಟೆ. ಅದು ತೋಳನಷ್ಟು ಕ್ರೂರವೂ ಸಾಕುನಾಯಿಯಷ್ಟು ಸೂಕ್ಷ್ಮವೂ ಆಗಿದ್ದು, ಅವನೊಬ್ಬ ತೋಳವಂಶಜನಾದ ನಾಯಿಯಂತಿದ್ದ. ಜೇವರ್ಟನ ವೃತ್ತಿ ಸಮಾಜ ರಕ್ಷಣಕಾರ್ಯವಾಗಿದ್ದುದರಿಂದ ಈ ಗುಣಗಳು ಅವನಿಗೆ ಅಗತ್ಯವೂ ಭೂಷಣವೂ ಆಗಿದ್ದುವು. ತನ್ನ ಅಂತರಂಗವನ್ನು ಅರಿತಿದ್ದ ಜೇವರ್ಟ್ ತನ್ನ

ಈ ಗುಣಗಳಿಗಾಗಿ ತನ್ನನ್ನು ತಾನೇ ಮೆಚ್ಚಿಕೊಂಡಿದ್ದ. ಸ್ವಭಾವತಃ ಅವನು ಸಮಾಜದ್ವೇಷಿ. ಸಮಾಜ ತನ್ನ ಶತ್ರುಗಳನ್ನೂ ದಮನಕಾರೀ ಪಡೆಗಳನ್ನೂ ತನ್ನಿಂದ ದೂರವಿಡುವ ಪದ್ಧತಿಯನ್ನು ಜೇವರ್ಟ್ ಅರಿತಿದ್ದ. ಈ ಅರಿವು ಅವನ ಸಮಾಜದ್ವೇಷವನ್ನು ಹೆಚ್ಚಿಸಿತ್ತು; ಆದರೆ, ಅವನು ಕರ್ತವ್ಯನಿಷ್ಠನಾಗಿದ್ದುದರಿಂದ ಈ ತನ್ನ ಎಲ್ಲ ದ್ವೇಷವನ್ನೂ ಸಮಾಜಘಾತಕರ ಮೇಲೆ ಮಾತ್ರ ಸದಾ ಪ್ರಯೋಗಿಸುತ್ತಿದ್ದ.

ಅವನಲ್ಲಿ ಒಳ್ಳೆ ಗುಣಗಳಿರಲಿಲ್ಲವೇ? ಇದ್ದುವು. ತನಗೆ ಅಧಿಕಾರಕೊಟ್ಟಿದ್ದ, ತನ್ನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದ ಸರಕಾರಕ್ಕೆ ಅವನು ಸದಾ ವಿಧೇಯನಾಗಿದ್ದು, ತನ್ನ ಕರ್ತವ್ಯಕ್ಕಾಗಿ ದೇಹ ಮನಸ್ಸೆಲ್ಲವನ್ನೂ ಅರ್ಪಿಸಿದ್ದ. ರಾಜ, ಮಂತ್ರಿಗಳಿಂದ ಪ್ರಾರಂಭವಾಗಿ ಸರಕಾರದ ಅತ್ಯಂತ ಕೀಳು ನೌಕರರ ವರೆಗೂ ಎಲ್ಲರೂ ಅವನ ದೃಷ್ಟಿಯಲ್ಲಿ ಗಣ್ಯರು, ಗೌರವಾನ್ವಿತರು, ಮತ್ತು ತನ್ನ ವಿಧೇಯತೆ ಪಡೆಯಲು ಸಂದರ್ಭಾನುಸಾರ ಅರ್ಹರಾಗಿದ್ದರು. ಈ ವಿಧಾನದಿಂದಲೇ, ಇದೇ ತೀವ್ರತೆಯಿಂದಲೇ, ಅವನ ದ್ವೇಷ ಸಮಾಜಘಾತಕರ ಮೇಲೆ ಸದಾ ಕಾರ್ಯ ಜರಗಿಸುತ್ತಿತ್ತು. ಒಬ್ಬಾತ ಅಪರಾಧಿಯೆಂದು ನ್ಯಾಯಸ್ಥಾನದಿಂದ ಒಮ್ಮೆ ತೀರ್ಮಾನವಾದರೆ ಜೇವರ್ಟ್ ತನ್ನ ಎಲ್ಲ ಶಕ್ತಿಗಳನ್ನು ಆ ಅಪರಾಧಿಯ ಮೇಲೆ ಪ್ರಯೋಗಿಸುತ್ತಿದ್ದ.

ಜೇವರ್ಟನ ದೃಷ್ಟಿಯೇ ನಿಗೂಢವಾಗಿತ್ತು; ಅದು ನೋಡಿದವರ ಮನಸ್ಸಿನ ಅತ್ಯಂತ ಗೂಢ ಆಳಗಳಿಗೂ ಭೇದಿಸಿಕೊಂಡು ಹೋಗುತ್ತಿತ್ತು. ಅವನು ಕರ್ತವ್ಯಗಳ ಕುರಿತು ಸ್ಥಿರಸಂಕಲ್ಪಿ; ಸರಕಾರಕ್ಕೆ ವಿಧೇಯ; ಎಡೆಬಿಡದೆ ಪರಿಶ್ರಮಿಸುವ ಸಾಹಸಿ, ದಕ್ಷ, ಪ್ರಾಮಾಣಿಕ ನಿಷ್ಕಳಂಕ ನಡತೆಯುಳ್ಳವ. ಅವನು ನೀಳ ಹ್ಯಾಟ್ ಧರಿಸದೆ ಎಂದೂ ಎದುರು ಬರುತ್ತಿರಲಿಲ್ಲವಾದುದರಿಂದ ಅವನ ತಲೆ ಹೇಗಿತ್ತು, ಹಣೆ ಹೇಗಿತ್ತು ಎಂದು ಯಾರೂ ಹೇಳಲಾರರಾಗಿದ್ದರು. ಶರ್ಟಿನ ಕಾಲರ್ ತುಂಬ ಮೇಲೆದ್ದು ಅವನ ಗಲ್ಲವನ್ನೇ ಅಡಗಿಸಿಡುತ್ತಿದ್ದುದರಿಂದ ಮುಖದ ಬಲುಭಾಗ ಜನರಿಂದ ಕಣ್ಮರೆಯಾಗಿತ್ತು. ಅವನ ಕಣ್ಣುಗಳನ್ನೂ ಪೂರ್ಣ ನೋಡಿದವರಿರಲಿಲ್ಲ—ಏಕೆಂದರೆ ಹುಬ್ಬುಗಳು ಬಲುವಾಗಿ ಬೆಳೆದು, ಕಪ್ಪಾಗಿ ತೋರಿ, ನೋಡಿದವರ ದೃಷ್ಟಿಯನ್ನು ಅವೇ ಸೆಳೆದು ಬಿಡುತ್ತಿದ್ದುವು. ಸೀಸದ ಗುಂಡು ಇದ್ದ ಒಂದು ಬೆತ್ತ ಮಾತ್ರ ಅವನ ಕೈಯಿಂದ ಹೊರಬಂದದ್ದನ್ನು ಜನರು ನೋಡಿದ್ದರೇ ಹೊರತು ಅವನ ಕೈಗಳನ್ನು ಹೆಚ್ಚಿನವರಾರೂ ಕಂಡವರಿಲ್ಲ—ಏಕೆಂದರೆ, ಶರ್ಟಿನ ಕೈಯೊಳಗೆ ಅವನ ಮುಷ್ಟಿಗಳು ಅಡಗಿರುತ್ತಿದ್ದುವು. ಅಗತ್ಯ ಬಿದ್ದಾಗ ಈ ಜೇವರ್ಟ್ ಯಂತ್ರ ಬಹು ಭಯಂಕರವಾದ ಚಮತ್ಕಾರದಿಂದ ತನ್ನ ಕಾರ್ಯಗಳನ್ನು ಜರಗಿಸುತ್ತಿತ್ತು.

ಪುರಸೊತ್ತಿದ್ದಾಗ ಅವನು ಸ್ವಲ್ಪ ಓದುತ್ತಿದ್ದ. ಅವನಿಗೆ ಯಾವ ದುಷ್ಟ ಚಟವೂ ಇರಲಿಲ್ಲ. ತನ್ನಲ್ಲೇ ತನಗೆ ತೃಪ್ತಿಯುಂಟಾದಾಗ ಮಾತ್ರ ತನ್ನದೇ ಆಗಿದ್ದ ನಶ್ಯದ ಒಂದು ಚುಟುಕನ್ನು ಸೇದುತ್ತಿದ್ದ.

ಜೇವರ್ಟ್ ಮಾ. ಮೆಡಲೀನರನ್ನು ಸದಾ ಒಂದು ವಿಧದ ಪರೀಕ್ಷಾಕ್ರಮದಿಂದಲೇ ನೋಡುತ್ತಿದ್ದ. ಮಾ. ಮೆಡಲೀನ್ ಇದನ್ನು ಕಂಡುಕೊಂಡಿದ್ದರು. ಬೇಟೆನಾಯಿ ಮೂಸಿನೋಡುವಂತೆ, ಅಥವಾ ಪಂಚೇಂದ್ರಿಯಗಳಿಗಿಂತಲೂ ಬೇರಾದ ಒಂದು ಸೂಕ್ಷ್ಮ ಶಕ್ತಿಯಿಂದ ತನ್ನ ಮೃಗವನ್ನು ಹುಡುಕುವಂತೆ, ಜೇವರ್ಟ್ ಮಾ. ಮೆಡಲೀನರ ಜೀವನಚರಿತ್ರೆಯನ್ನು ಶೋಧಿಸುತ್ತಿದ್ದ. ಒಂದು ದಿನ ಜೇವರ್ಟ್ ತನ್ನ ಈ ಶೋಧನೆಯ ಮಾರ್ಗದಲ್ಲೇ ಮುಂದುವರಿಯುತ್ತ ಮಾ. ಮೆಡಲೀನರ ಹತ್ತಿರ ಸ್ವಲ್ಪ ವಿಚಿತ್ರರೀತಿಯಲ್ಲಿ ವರ್ತಿಸಿದ. ಆ ಸಂದರ್ಭ ಹೀಗಿತ್ತು.

೫. ಫಾದರ್ ಫಾಶೆಲೆವೆಂಟ್

ಒಂದು ಮುಂಜಾನೆ ಮಾ. ಮೆಡಲೀನ್ ಪಟ್ಟಣದ ಒಳರಸ್ತೆಯೊಂದರಲ್ಲಿ ಹೋಗುತ್ತಿದ್ದಾಗ ಕೆಲವು ಜನ ಒಂದೆಡೆ ಸೇರಿ ಸಾಮಾನುಭರ್ತಿ ಬಂಡಿಯೊಂದರ ಅಡಿಯಲ್ಲಿ ಸಿಕ್ಕಿ ಹೋಗಿದ್ದ ಒಬ್ಬ ನನ್ನು ರಕ್ಷಿಸುವ ಪ್ರಯತ್ನದಲ್ಲಿದ್ದುದನ್ನು ಕಂಡರು. ಬಂಡಿಯ ಕೆಳಗೆ ಬಿದ್ದಿದ್ದಾತ ಅದೇ ಬಂಡಿಯ ಮಾಲೀಕ ಫಾದರ್ ಫಾಶೆಲೆವೆಂಟ್. ಈತ ಒಮ್ಮೆ ಮಧ್ಯಮ ವರ್ಗದ ಕೃಷಿಕ. ಆದರೆ ಆ ವೃತ್ತಿಯಲ್ಲಿ ಜೀವನ ಸಾಗಿಸಲಾರದೆ ತನ್ನಲ್ಲಿ ಇದ್ದುದನ್ನೆಲ್ಲ ಮಾರಿ ಕೊನೆಗೆ ಈ ವೃತ್ತಿ ಹಿಡಿದಿದ್ದ. ಫಾಶೆಲೆವೆಂಟ್ ಬಡಸ್ಥಿತಿಗೆ ತಲಪುತ್ತಿದ್ದಾಗಲೇ ಅಪರಿಚಿತ ಫಾದರ್ ಮೆಡಲೀನ್ ಶ್ರೀಮಂತಿಕೆಯಲ್ಲಿ ಏರುತ್ತಿದ್ದು ದನ್ನು ಆತ ಮಾತ್ಸರ್ಯದಿಂದ ನೋಡುತ್ತಿದ್ದ. ಅನಾಮಧೇಯನೊಬ್ಬ ತನ್ನೆದುರಿಗೇ ಅಭಿವೃದ್ಧಿ ಹೊಂದುತ್ತಿದ್ದುದನ್ನು ನೋಡಿ ಸಹಿಸಲಾರದೆ ಫಾಶೆಲೆವೆಂಟ್ ತನಗೆ ಸಂದರ್ಭ ಸಿಕ್ಕಿದಾಗಲೆಲ್ಲ ಮಾ. ಮೆಡಲೀನರನ್ನು ಬೈಯುತ್ತಲೂ ಅಪಹಾಸ್ಯ ಮಾಡುತ್ತಲೂ ಅವರ ಬಗ್ಗೆ ಅಪಪ್ರಚಾರ ನಡೆಸುತ್ತಲೂ ಇದ್ದ.

ಕುದುರೆ ಕಾಲುಮುರಿದು ಬಂಡಿಯ ಎದುರು ಬಿದ್ದಿತ್ತು. ಭರ್ತಿ ಸಾಮಾನಿದ್ದ ಆ ಬಂಡಿಯ ಒಂದು ಚಕ್ರ ಫಾಶೆಲೆವೆಂಟನ ಎದೆಯ ಮೇಲೆ ನಿಂತಿತ್ತು. ಮತ್ತೊಂದು ಚಕ್ರ ಮಳೆಯಿಂದ ಒದ್ದೆಯಾಗಿ ಮೆತ್ತಗಾಗಿದ್ದ ನೆಲದ ಮೇಲೆ ಜಗ್ಗುತ್ತಿತ್ತು. ಇದು, ನೆಲದಡಿಗೆ ಮೆಲ್ಲಮೆಲ್ಲನೆ ಹೂತುಹೋಗತೊಡಗಿತ್ತು. ಈ ಪ್ರಸಂಗದಲ್ಲಿ ಬಂಡಿಯನ್ನು ಒಮ್ಮೆಗೇ ಮೇಲಕ್ಕೆತ್ತಿದರೆ ಮಾತ್ರ ಫಾಶೆಲೆವೆಂಟ್ ಅಪಾಯದಿಂದ ಪಾರಾಗಬಹುದಿತ್ತೇ ಹೊರತು ಅದನ್ನು ಅಲುಗಾಡಿಸಿದಷ್ಟೂ ಅಪಾಯ ಹೆಚ್ಚುತ್ತಿತ್ತು. ಫಾಶೆಲೆವೆಂಟ್ ಬಂಡಿಯ ಅಡಿಯಿಂದ ಗೋಳಿಡುತ್ತಿದ್ದ.

ಬಂಡಿಯ ಸುತ್ತಲೂ ಇದ್ದ ಜನರ ಮಧ್ಯೆ ಇನ್‌ಸ್ಪೆಕ್ಟರ್ ಜೇವರ್ಟನೂ ನಿಂತಿದ್ದ. ಅಲ್ಲಿಯ ಸಂದರ್ಭಗಳನ್ನು ನೋಡಿ ಜೇವರ್ಟ್ ಒಂದು ಸನ್ನೆ ಯಂತ್ರವನ್ನು ತರಲು ತನ್ನ ಕಡೆಯ ಜನರನ್ನು ಕಳುಹಿಸಿದ್ದ. ಆದರೆ ಅದು ಬಂದು ತಲಪುವ ಮೊದಲೇ ಫಾದರ್ ಫಾಶೆಲೆವೆಂಟನ ಪ್ರಾಣೋ ತ್ಕ್ರಮಣವಾಗಬಹುದೆಂದು ಜನ ಗಾಬರಿಗೊಂಡಿದ್ದರು. ಮಾ. ಮೆಡಲೀನ್ ಸಂದರ್ಭವನ್ನು ಪ್ರತ್ಯಕ್ಷ ಪರೀಕ್ಷಿಸಿ ನೋಡಿದರು. ಕಾಲ ವಿಳಂಬವಾಗಕೂಡದೆಂದು ಅವರಿಗೂ ತಿಳಿಯಿತು. ಅವರು ಜನರನ್ನೆಲ್ಲ ನೋಡಿ ಬಂಡಿಯ ಕೆಳಗೆ ಹೋಗಿ ಬೆನ್ನುಕೊಟ್ಟು ಒಮ್ಮೆಗೇ ಬಂಡಿಯನ್ನು ಎತ್ತ ಬಲ್ಲ ವರು ಯಾರಾದರೂ ಅಲ್ಲಿ ಇರುವರೋ ಎಂಬುದಾಗಿ ವಿಚಾರಿಸಿದರು. ಹಾಗೆ ಎತ್ತಿದವರಿಗೆ ತಾನು ಹತ್ತು ಲೂಯಿ (ಚಿನ್ನದ ನಾಣ್ಯ) ಬಹುಮಾನ ಕೊಡುವುದಾಗಿ ಕೂಗಿ ಹೇಳಿದರು. ಯಾರೂ ಉತ್ತರ ಕೊಡಲಿಲ್ಲ. ಹತ್ತಲ್ಲ, ಇಪ್ಪತ್ತು ಲೂಯಿಯನ್ನಾದರೂ ಕೊಡುವುದಾಗಿ ಪುನಃ ಘೋಷಿಸಿದರು. ಅದಕ್ಕೂ ಉತ್ತರ ಇಲ್ಲ. ಆದರೆ, ಇನ್‌ಸ್ಪೆಕ್ಟರ್ ಜೇವರ್ಟ್ ಮಾ. ಮೆಡಲೀನರನ್ನೇ ನೋಡುತ್ತ, "ಮಾನ್ಸ್ಯರ್ ಮೇಯರರೇ! ಜನರು ಈ ಕೆಲಸಕ್ಕೆ ಹಿಂಜರಿಯುತ್ತಿರುವುದು ಮನಸ್ಸಿಲ್ಲದೆ ಅಲ್ಲ, ಶಕ್ತಿಯಿಲ್ಲದೆ ಮಾತ್ರ. ಇಂಥ ಕೆಲಸ ಸರ್ವಸಾಧಾರಣ ಯಾರಿಂದಲೂ ಸಾಧ್ಯವಿಲ್ಲ. ಹಿಂದೊಮ್ಮೆ ನಾನು ಟೌಲನ್ ಜೈಲಿನಲ್ಲಿ ಈ ಕೆಲಸವನ್ನೂ ಮಾಡಬಲ್ಲ ಶಕ್ತಿವಂತ ಕೈದಿ ಒಬ್ಬನನ್ನು ಕಂಡಿದ್ದೇನೆ. ಅವನಾಗಿದ್ದರೆ ಈ ಕೆಲಸವನ್ನು ಈಗಲೇ ಮಾಡಿಬಿಡುತ್ತಿದ್ದ," ಎಂದ.

ಫಾದರ್ ಫಾಶೆಲೆವೆಂಟನ ಮುಖ ಬಲುವಾಗಿ ಕಳೆಗುಂದಿತ್ತು. ಅವನು ಗಟ್ಟಿಯಾಗಿ ರೋದಿ ಸುತ್ತಿದ್ದ. ಅತ್ಯಂತ ಅಪಾಯಸ್ಥಿತಿಯಲ್ಲಿದ್ದ.

ಮಾ. ಮೆಡಲೀನರಿಗೆ ಪರಿಸ್ಥಿತಿ ಅತಿ ಜರೂರಿನದಾಗಿ ಕಠಿಣವಾಗಿ ಕಂಡಿತು. ತಾವೇ ಒಂದು

ನಿರ್ಧಾರಕ್ಕೆ ಬಂದರು. ಬಂಡಿಯ ಅಡಿಗೆ ನುಗ್ಗಿದರು ; ಮೊಣಕೈ ಮೊಣಕಾಲುಗಳನ್ನು ನೆಲಕ್ಕೆ ಊರಿ ಬಂಡಿಗೆ ತೂಕನೋಡಿ ಬೆನ್ನುಕೊಟ್ಟರು ; ಒಂದೇ ಪ್ರಯತ್ನದಿಂದ ಬಂಡಿಯನ್ನು ಫಾಶೆಲೆವೆಂಟನ ಎದೆಯ ಮೇಲಿಂದ ಎತ್ತಿದರು. ಜನರು ಸಹಕರಿಸಿ ಆತನನ್ನು ಹೊತ್ತು ಸಾಗಿಸಿ ರಸ್ತೆಕರೆಯಲ್ಲಿ ಮಲಗಿಸಿದರು. ಇತ್ತ ಮೈ ಬಟ್ಟೆಗೆ ಎಲ್ಲ ಕೆಸರು, ಕೊಳೆ ಮೆತ್ತಿಸಿಕೊಂಡು ಮಾ. ಮೆಡಲೀನ್ ಬಂಡಿಯ ಅಡಿಯಿಂದ ಎದ್ದು ಬಂದು ಬೆವರು ಸುರಿಸಿಕೊಂಡು ಜನರ ಜತೆಯಲ್ಲಿ ನಿಂತರು. ಈ ಎಲ್ಲ ಸಮಯದಲ್ಲೂ ಜೇವರ್ಟ್ ಮಾ. ಮೆಡಲೀನರನ್ನು ತುಂಬ ಪರೀಕ್ಷಿಸು ವಂತೆಯೇ ನೋಡುತ್ತಿದ್ದ. ಜೇವರ್ಟ್ ತಮ್ಮನ್ನು ನೋಡುತ್ತಿದ್ದುದನ್ನು ತಿಳಿಯುತ್ತ ಮಾ. ಮೆಡಲೀನರು ಫಾದರ್ ಫಾಶೆಲೆವೆಂಟನ ಮತ್ತು ಜನರ ಹೃತ್ಪೂರ್ವಕ ವಂದನೆಗಳನ್ನು ಸ್ವೀಕರಿಸಿ ದರು. ಅತಿಯಾದ ದೇಹಶ್ರಮದ ಪರಿಣಾಮವೂ ಸತ್ಕಾರ್ಯವನ್ನೆಸಗಿದ್ದುದರ ಆತ್ಮಾನಂದದ ಪರಿಣಾಮವೂ ಮಾ. ಮೆಡಲೀನರ ಮುಖದಲ್ಲಿ ಪ್ರಭೆಯಾಗಿ ತೋರ್ಪಟ್ಟುವು. ಜನರ ದೃಷ್ಟಿಯಲ್ಲಿ ಆಗ್ಗೆ ಮಾ. ಮೆಡಲೀನ್ ಪ್ರತ್ಯಕ್ಷ ದೇವರೇ ಆಗಿ ತೋರಿದರು.

೬. ನೈತಿಕತೆಯ ಶೋಧನೆಗೆ ೩೫ ಫ್ರಾಂಕ್

ಫಾದರ್ ಫಾಶೆಲೆವೆಂಟನ ಮೊಣಕಾಲು ಚಿಪ್ಪು ಪುಡಿಯಾಗಿತ್ತು. ಹಾಗಾಗಿ ಮಾ. ಮೆಡಲೀನ್ ಅವನನ್ನು ತಮ್ಮ ಕಾರ್ಖಾನೆಯ ಆಸ್ಪತ್ರೆಗೆ ಕಳುಹಿಸಿ ಅಲ್ಲಿ ಚಿಕಿತ್ಸೆ ಮಾಡಿಸತೊಡಗಿದರು. ಕೆಲವು ದಿನಗಳಲ್ಲಿ ಆತ ಆಸ್ಪತ್ರೆಯಿಂದ ಬಿಡುಗಡೆ ಹೊಂದಲು ತಕ್ಕಷ್ಟು ಹುಷಾರಾದ. ಆ ಸಮಯದಲ್ಲಿ ಫಾದರ್ ಫಾಶೆಲೆವೆಂಟನಿಗೆ ಮಾ. ಮೆಡಲೀನ್ ಒಂದು ಸಾವಿರ ಫ್ರ್ಯಾಂಕಿನ ಒಂದು ಚೆಕ್ಕನ್ನೂ ಜೊತೆಯಲ್ಲಿ ಒಂದು ಪತ್ರವನ್ನೂ ಕಳುಹಿಸಿಕೊಟ್ಟರು. ಆತನ ಕುದುರೆ ಮತ್ತು ಬಂಡಿಯನ್ನು ತಾನು ಖರೀದಿಸಿರುವುದಾಗಿಯೂ ಆ ಬಾಬ್ತು ಚೆಕ್ ಎಂದೂ ಮೆಡಲೀನ್ ಈ ಪತ್ರದಲ್ಲಿ ಬರೆದಿ ದ್ದರು. ಫಾಶೆಲೆವೆಂಟನ ಕಾಲು ಗುಣವಾದ ಕೂಡಲೇ ತಮಗೆ ಪರಿಚಯವಿದ್ದ ಒಂದು ಕಾನ್ವೆಂಟಿ ನಲ್ಲಿ ಅವನಿಗೆ ಕೆಲಸ ಸಿಕ್ಕುವ ಏರ್ಪಾಡನ್ನೂ ಮಾ. ಮೆಡಲೀನ್ ಮಾಡಿದ್ದರು. ಆತನ ಕಾಲು ಸ್ವಲ್ಪ ಊನವಾಗಿದ್ದುದರಿಂದ ಕಾನ್ವೆಂಟಿನ ಕೆಲಸವೂ ಅವನಿಗೆ ತಕ್ಕುದಾಗಿಯೂ ಇತ್ತು. ಅಲ್ಲಿ ಅವನು ಹೂ, ತರಕಾರಿ ಮೊದಲಾದ ಚಿಕ್ಕ ತೋಟಗಳ ಕೆಲಸ ಮಾಡಬೇಕಾಗಿತ್ತು.

ಪ್ಯಾರಿಸಿನಿಂದ ಬಂದಿದ್ದ ಫ್ಯಾಂಟೈನ್ ಮಾ. ಮೆಡಲೀನರ ಕಾರ್ಖಾನೆಯಲ್ಲಿ ಕೆಲಸ ಪಡೆದಳು. ಅಲ್ಲಿ ಅವಳು ಚೆನ್ನಾಗಿ ದುಡಿಯುತ್ತಿದ್ದಳು. ದುಡಿಮೆಯಿಂದ ದೊರಕಿದ ಹಣದಿಂದ ಸುಖವಾಗಿ ಜೀವಿಸುತ್ತಿದ್ದಳು, ಮತ್ತು ತನ್ನ ಮಗಳಿಗಾಗಿ ಹಣವನ್ನೂ ಕ್ಲುಪ್ತವಾಯಿದೆಗಳಲ್ಲಿ ತೆನಾರ್ಡಿಯರ ರಿಗೆ ಕಳುಹಿಸುತ್ತಿದ್ದಳು. ಪ್ಯಾರಿಸಿನಲ್ಲಿ ಬಲು ಸುಖಜೀವನ ನಡೆಸುತ್ತಿದ್ದವಳು ಈ ಪಟ್ಟಣದಲ್ಲಿ ಚಿಕ್ಕ ಕೋಣೆಯನ್ನೂ ಕುರ್ಚಿ, ಕಪಾಟು, ಮೇಜು ಮೊದಲಾದವನ್ನೂ ಬಾಡಿಗೆಗೆ ವಹಿಸಿಕೊಂಡಿ ದ್ದಳು. ಇಲ್ಲಿ ವಿಲಾಸಮಯಜೀವನ ನಡೆಸುತ್ತಿರಲಿಲ್ಲ. ಇಲ್ಲಿಯ ಜೀವನದಿಂದ ಫ್ಯಾಂಟೈನಳ ಮನಸ್ಸಿಗೂ ದೇಹಕ್ಕೂ ಸುಖ ಸಿಕ್ಕಿತು. ಈ ಊರಿಗೆ ಬಂದು ಕೆಲವೇ ತಿಂಗಳಲ್ಲಿ ಅವಳ ಪೂರ್ವದ ರೂಪಲಾವಣ್ಯಗಳು ಕಾಣಿಸಿಕೊಳ್ಳತೊಡಗಿದುವು. ಫ್ಯಾಂಟೈನ್ ಸ್ತ್ರೀವಿಭಾಗದ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಅಲ್ಲಿ ಇವಳ ಜೀವನಕ್ರಮ, ಇವಳ ಮುದ್ದಾದ ಹಲ್ಲುಗಳು, ಹೊಳೆ ಯುತ್ತಿದ್ದ ತಲೆಕೂದಲು, ಈ ಎಲ್ಲವೂ ಇತರ ಸ್ತ್ರೀಯರಲ್ಲಿ ಮಾತ್ಸರ್ಯ ಉಂಟುಮಾಡಿದುವು. ಅಲ್ಲಿಯ ಕೆಲಸಗಾರರು ಇವಳ ನಡೆ, ನುಡಿ, ಜೀವನಕ್ರಮಗಳನ್ನು ಪರಿಶೋಧನಾದೃಷ್ಟಿಯಿಂದ

ನೋಡತೊಡಗಿದರು. ಈ ಪರಿಶೋಧನೆಯ ವರದಿ ಬಾಯಿಯಿಂದ ಬಾಯಿಗೆ ದಾಟುತ್ತ ಕಾರ್ಖಾನೆಯ ಸ್ತ್ರೀವಿಭಾಗದ ಮುಖ್ಯ ಅಧಿಕಾರಿಣಿಯಾಗಿದ್ದ ಮೇಡಮ್ ವಿಕ್ಟುರ್ನಿಯನ್‌ಳಿಗೂ ತಲಪಿತು.

ಈಕೆ ಒಬ್ಬ ಕ್ರೂರಿ ವೃದ್ಧ ವಿಧವೆ. ತನ್ನ ಸ್ವಭಾವಕ್ಕೆ ಅನುಗುಣವಾಗಿ ತನ್ನ ಅಧಿಕಾರದರ್ಪದ ಕಾರಣವಾಗಿ ಪೂರ್ವ ಚರಿತ್ರೆ ಪರಿಶೋಧಿಸಬೇಕೆಂದು ನಿರ್ಧರಿಸಿದಳು. ಫ್ಯಾಂಟೈನಳಿಗೆ ಬರೆಯಲು ಬರುತ್ತಿರಲಿಲ್ಲವಾಗಿದ್ದುದರಿಂದ ಅವಳು ಬರವಣಿಗೆ ಕಸಬುದಾರರ ಮೂಲಕ ಪತ್ರಗಳನ್ನು ಬರೆಸುತ್ತಿದ್ದಳು. ವಿಕ್ಟುರ್ನಿಯನ್ ಈ ಗುಟ್ಟು ತಿಳಿದುಕೊಂಡು ಬರವಣಿಗೆದಾರರಿಗೆ ಲಂಚಕೊಟ್ಟು, ಫ್ಯಾಂಟೈನ್, ಕೋಸೆಟ್ಟೆ ಮತ್ತು ತೆನಾರ್ಡಿಯರ್ ಇವರ ಕುರಿತು ಕೆಲವು ವಿಷಯಗಳನ್ನು ತಿಳಿದು ಕೊಂಡಳು. ಕೊನೆಗೆ ತನ್ನ ಕರ್ತವ್ಯನಿಷ್ಠೆಯಿಂದಲೇ ಅವಳು ಮೊಂಟ್‌ಫರ್ಮಿಲಿನವರೆಗೂ ಹೋಗಿ ಕೋಸೆಟ್ಟೆಯನ್ನು ನೋಡಿಯೇ ಬಂದಳು. ತನ್ನ ಶೋಧನೆ ಯಶಸ್ವಿಯಾದ ಸಂದರ್ಭದಲ್ಲಿ ಅವಳು ತನ್ನ ಕೈಕೆಳಗಿನ ಅಧಿಕಾರಿಣಿಗಳ ಸಂಗಡ, "ಕಳ್ಳಬಸುರಾಗಿ ಜನಿಸಿದ ಮಗುವನ್ನೇ ನೋಡಿಬಂದಿದ್ದೇನೆ—ಮೂವತ್ತೈದು ಫ್ರ್ಯಾಂಕ್ ಖರ್ಚಾದರೂ ನಡತೆಯ ಪರಿಶೋಧನೆಯ ಕಾರ್ಯದಲ್ಲಿ ಯಶಸ್ವಿಯಾದೆ," ಎಂದು ಹೇಳಿಕೊಂಡಿದ್ದಳು.

ಒಂದು ದಿನ ಇದ್ದಕ್ಕಿದ್ದ ಹಾಗೆಯೇ ಫ್ಯಾಂಟೈನಳಿಗೆ ಮೇಡಮ್ ವಿಕ್ಟುರ್ನಿಯನಳನ್ನು ನೋಡಬೇಕೆಂದು ಕರೆಬಂತು. ಫ್ಯಾಂಟೈನ್ ಆ ಆಫೀಸಿಗೆ ಹೋದಕೂಡಲೇ ವಿಕ್ಟುರ್ನಿಯನ್ ಅವಳಿಗೆ ಐವತ್ತು ಫ್ರ್ಯಾಂಕ್ ಹಣ ಕೊಡುತ್ತ ಅವಳನ್ನು ಕೆಲಸದಿಂದ ತೆಗೆದುಹಾಕಿರುವುದಾಗಿ ತಿಳಿಸಿದಳು; ಮತ್ತು ಫ್ಯಾಂಟೈನಳಿಗೆ ಯುಕ್ತ ಕಂಡರೆ, ಈ ವಜಾ ಕುರಿತಾಗಿ ಮಾ. ಮೆಡಲೀನರವರಲ್ಲಿ ಮೇಲ್ಮನವಿ ಸಲ್ಲಿಸಬಹುದೆಂದೂ ತಿಳಿಸಿದಳು.

ಮಾ. ಮೆಡಲೀನರನ್ನು ನೋಡಲು ಫ್ಯಾಂಟೈನಳಿಗೆ ಧೈರ್ಯ ಬರಲಿಲ್ಲ. ತನ್ನ ಪೂರ್ವ ಚರಿತ್ರೆ ಈ ಕಾರ್ಖಾನೆಯವರೆಲ್ಲರಿಗೂ ತಿಳಿದಿದೆ ಎಂದು ಊಹಿಸಿ, ಹೆದರಿ, ನಾಚಿಕೆಪಟ್ಟುಕೊಂಡಳು. ತನಗೆ ಐವತ್ತು ಫ್ರ್ಯಾಂಕು ಸಿಕ್ಕಬೇಕಾದರೆ ಮಾ. ಮೆಡಲೀನರಿಗೆ ಈ ವಜಾದ ವಿಷಯ ತಿಳಿದೇ ಇರಬೇಕೆಂದು ಗ್ರಹಿಸಿ ಹಣ ಸಿಕ್ಕಿದಷ್ಟಕ್ಕೇ ತೃಪ್ತಿಪಟ್ಟುಕೊಂಡಳು. ಹಾಗಾಗಿ ತನ್ನ ವಜಾಕ್ಕೆ ಮಾ. ಮೆಡಲೀನರೇ ಕಾರಣರೆಂದು ಗ್ರಹಿಸಿಕೊಂಡು ಕಾರ್ಖಾನೆಯನ್ನು ಬಿಟ್ಟು ಹೊರಟುಹೋದಳು.

೭. ಬೀದಿಪಾಲಾದ ಮುಗ್ಧತೆ

ಫ್ಯಾಂಟೈನಳು ವಜಾ ಆದದ್ದು ಮಾ. ಮೆಡಲೀನರಿಗೆ ಗೊತ್ತಿರಲಿಲ್ಲ. ಈ ವಿಭಾಗದ ಅಧಿಕಾರಗಳನ್ನೆಲ್ಲ ಮೇಡಮ್ ವಿಕ್ಟುರ್ನಿಯನಳೇ ಚಲಾಯಿಸುತ್ತಿದ್ದಳು. ಈಕೆ ಪ್ರಾಮಾಣಿಕಳೂ ಶಿಸ್ತುಳ್ಳವಳೂ ಆಗಿದ್ದಳು. ಇವಳ ಯೋಗ್ಯತೆಯನ್ನು ತಿಳಿದಿದ್ದುದರಿಂದಲೇ ಮಾ. ಮೆಡಲೀನರು ಇತ್ತಕಡೆ ವಿಶೇಷ ಗಮನಹರಿಸುತ್ತಿರಲಿಲ್ಲ. ಅವರಿಗೆ ತನ್ನದೇ ಆಗಿದ್ದ ಅನೇಕ ಕೆಲಸಗಳೂ ಇದ್ದುದರಿಂದ ಸ್ತ್ರೀವಿಭಾಗದ ಕುರಿತು ಹೀಗೆ ವರ್ತಿಸಬೇಕಾಗಿತ್ತು. ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಹೀಗೆ ನಡೆಯುವುದು ಅಸ್ವಾಭಾವಿಕವಲ್ಲ.

ಫ್ಯಾಂಟೈನಳಿಗೆ ಇತರ ಯಾವ ಕಸಬೂ ಬರುತ್ತಿರಲಿಲ್ಲವಾಗಿದ್ದುದರಿಂದ, ತನ್ನ ಜೀವನದ ವೃತ್ತಿಗಾಗಿ ಎಂ— ಪಟ್ಟಣದಲ್ಲಿ ಕೆಲಸ ಹುಡುಕುತ್ತ ಅಲೆಯಬೇಕಾಗಿ ಬಂತು. ಇವಳಿಗೆ ಕೆಲಸವೇ ದೊರಕಲಿಲ್ಲ. ಎಲ್ಲರೂ ಇವಳನ್ನು ತಿರಸ್ಕರಿಸತೊಡಗಿದರು. ಮಾ. ಮೆಡಲೀನರ ಕಾರ್ಖಾನೆಯಿಂದ

ವಜಾ ಆಗಿದ್ದುದೂ ಅವಳಿಗೆ ಕೆಲಸ ಸಿಕ್ಕದಿರಲು ಕಾರಣವಾಗಿತ್ತು. ಅವಳು ಬಾಡಿಗೆಗೆ ತಂದಿಟ್ಟು ಕೊಂಡಿದ್ದ ಕುರ್ಚಿ, ಮೇಜುಗಳ ಬಾಡಿಗೆ, ಮತ್ತೂ ಕೋಣೆಯ ಬಾಡಿಗೆ ಸಹ ಸಾಲವಾಗಿ ಉಳಿಯುತ್ತ ಬಂದುವು. ತನಗೆ ಸಿಕ್ಕಿದ ಐವತ್ತು ಫ್ರ್ಯಾಂಕಿನ ಪರಿಹಾರ ದ್ರವ್ಯವನ್ನು ಪೂರಾ ಸಾಲಿಗ ರಿಗೆ ತೆತ್ತರೂ ಅವಳ ಸಾಲ ಮತ್ತೂ ಬಾಕಿಯಿತ್ತು. ಸಾಲ ತೀರಿಸದೆ ಎಂ— ಪಟ್ಟಣವನ್ನು ಬಿಟ್ಟು ಹೋಗಲು ಅವಳು ತಯಾರಿರಲಿಲ್ಲ. ಕುರ್ಚಿ, ಮೇಜು, ಕಪಾಟುಗಳನ್ನು ಬಾಡಿಗೆಗೆ ಕೊಟ್ಟಿದ್ದವರು ವಾಪಾಸು ತೆಗೆದುಕೊಂಡು ಹೋದರು. ಇವಳಿಗೆ ಹೊಲಿಗೆ ಅಭ್ಯಾಸವಿದ್ದುದರಿಂದ, ಕೊನೆಗೆ, ಸೈನ್ಯಕ್ಕೆ ಬೇಕಾದ ಒರಟು ತರದ ಬಟ್ಟೆಗಳನ್ನು ಹೊಲಿದುಕೊಡುವ ವೃತ್ತಿ ಕೈಗೊಂಡಳು. ಸಂಪಾದನೆ ಕಡಿಮೆಯಾದ ಹಾಗೆ ಅವಳ ಸೌಕರ್ಯಗಳೂ ಕಡಿಮೆಯಾದುವು. ಚಳಿಗಾಲದಲ್ಲೂ ಅವಳು ಕೋಣೆಯಲ್ಲಿ ಬೆಂಕಿ ಉರಿಸುತ್ತಿರಲಿಲ್ಲ. ಕೊನೆಗೆ ತಾನು ತೊಟ್ಟಿದ್ದ ರವಕೆ ಲಂಗಗಳೇ ಅವಳ ಹಾಸಿಗೆ ಹೊದಿಕೆಗಳಾಗಿಬಿಟ್ಟವು. ಅವಳ ಊಟಕ್ಕೂ ಸಾಕಷ್ಟು ಸಂಪಾದನೆಯಾಗುವುದೇ ಕಷ್ಟ ವಾಯಿತು. ದಿನದಲ್ಲಿ ಐದು ಗಂಟೆಗಳಷ್ಟು ಮಾತ್ರ ನಿದ್ರೆ ಮಾಡಿ ಉಳಿದ ಸಮಯವನ್ನೆಲ್ಲ ಹೊಲಿಗೆ ಕೆಲಸ ಮಾಡಿದರೂ ಅವಳ ಜೀವನ ಸಾಗುವುದು ಕಷ್ಟವಾಯಿತು.

ಜನರ ತಿರಸ್ಕಾರ, ನಿಂದೆ, ಸಾಲಗಾರರ ಕೋಟಲೆ, ತೆನಾರ್ಡಿಯರರು ಹಣ ಕೇಳುವ ಕಾಟ, ಅತೀವ ಬಡತನ, ಇವೆಲ್ಲವುಗಳ ಪರಿಣಾಮವಾಗಿ ಅವಳು ಮಾನಮರ್ಯಾದೆಯನ್ನೇ ಮರೆಯಲು ಪ್ರಾರಂಭಿಸಿದಳು. ಆರೋಗ್ಯ ಕೆಡುತ್ತ ಬಂದು ಒಳಜ್ವರ ಕೆಮ್ಮು ಪ್ರಾರಂಭವಾಯಿತು—ಇವು ಅವಳನ್ನು ರಾತ್ರಿ ಇಡೀ ಬಾಧಿಸುತ್ತಿದ್ದುವು. ಈ ಎಲ್ಲ ಕಷ್ಟಗಳು ಏರಿದಂತೆಯೇ ಇವೆಲ್ಲಕ್ಕೂ ಮಾ. ಮೆಡಲೀನರೇ ಕಾರಣರೆಂದು ಅವರ ಮೇಲಿನ ಅವಳ ದ್ವೇಷವೂ ಹೆಚ್ಚತೊಡಗಿತು.

ಈ ಸ್ಥಿತಿಯಲ್ಲಿದ್ದಾಗ ಅವಳು ಒಬ್ಬ ತಿರುಕನನ್ನು ವರಿಸಿ ಅವನ ಜೊತೆ ಸಂಸಾರ ನಡೆಸಿ ನೋಡಿ ದಳು. ಇದರಿಂದ ಅವಳಿಗೆ ಹಣಸಂಪಾದನೆ ಮತ್ತು ಅನುಕೂಲಗಳು ಸಿಗುವ ಬದಲು ಈ ತಿರುಕ ನಿಂದ ಹಿಂಸೆಯೇ ಸಿಕ್ಕತೊಡಗಿತು. ಕೆಲವು ದಿನಗಳಲ್ಲೇ ಆ ತಿರುಕ ಇವಳನ್ನು ಬಿಟ್ಟು, ಹೇಳದೇ, ಪರಊರಿಗೆ ತಿರುಪೆ ಎತ್ತಲು ಓಡಿಹೋದ.

ಈ ಸಮಯದಲ್ಲಿ ಕೋಸೆಟ್ಟಿಗೆ ಚಳಿಗಾಲದ ಉಣ್ಣೆದುಸ್ತಿನ ಬಗ್ಗೆ ಹಣ ಕಳುಹಿಸಬೇಕೆಂದು ತೆನಾರ್ಡಿಯರನಿಂದ ಪತ್ರ ಬಂತು. ಈ ಉಣ್ಣೆ ಬಟ್ಟೆಗಳಿಗೆ ಬಹಳ ಕ್ರಯವಿದ್ದುದರಿಂದ, ಇವು ಗಳಿಗಾಗಿ ಅವಳಲ್ಲಿದ್ದ ಎಲ್ಲ ವಸ್ತುಗಳನ್ನು ಮಾರಿ ಹಣ ಕೂಡಿಟ್ಟು ನೋಡಿದಳು—ಆ ಹಣ ಸಾಕಾಗಲಿಲ್ಲ. ಹಾಗಾಗಿ ತನ್ನ ಸುಂದರವಾದ ತಲೆಕೂದಲನ್ನು ರಾತ್ರಿವೇಳೆ, ಗುಟ್ಟಾಗಿ ಹೋಗಿ, ಒಬ್ಬ ಕ್ಷೌರಿಕನಿಗೆ ಮಾರಿದಳು. ಈ ಎಲ್ಲ ಹಣವನ್ನು ಒಟ್ಟು ಸೇರಿಸಿ ಉಣ್ಣೆ ಬಟ್ಟೆಗಳನ್ನು ಕ್ರಯಕ್ಕೆ ಪಡೆದು ತೆನಾರ್ಡಿಯರನಿಗೆ ಕಳುಹಿಸಿಕೊಟ್ಟಳು. ಹಣ ಕೇಳಿದ್ದಕ್ಕೆ ಉಣ್ಣೆಬಟ್ಟೆ ಬಂದದ್ದನ್ನು ನೋಡಿ ತೆನಾರ್ಡಿಯರ್ ದಂಪತಿಗಳು ಫ್ಯಾಂಟೈನಳನ್ನು ಶಪಿಸುತ್ತ ಆ ಬಟ್ಟೆಗಳನ್ನೆಲ್ಲ ತಮ್ಮ ಮಕ್ಕಳಿಗಾಗಿ ಉಪಯೋಗಿಸಿದರು. ತಲೆಕೂದಲನ್ನು ಮಾರಿದ ಬಳಿಕ ಫ್ಯಾಂಟೈನ್ ಸದಾ ಟೊಪ್ಪಿಯನ್ನು ಧರಿಸತೊಡಗಿದಳು. ತನ್ನ ಸೌಂದರ್ಯವನ್ನರಿತು ಸಂತೋಷಪಟ್ಟುಕೊಳ್ಳುತ್ತಿದ್ದ ಫ್ಯಾಂಟೈನಳಿಗೆ ತಲೆಕೂದಲು ಹೋದದ್ದು ಬಲುವಾದ ದುಃಖಕೊಟ್ಟಿತು—ಅವಳು ಸ್ವಲ್ಪ ಅರೆಹುಚ್ಚಿಯೇ ಆಗಿ ಹೋದಳು.

ಇಷ್ಟೇ ದುಃಖ ಸಾಲದೆಂದು ವಿಧಿ ಗ್ರಹಿಸುತ್ತಿದ್ದಂತೆ ಫ್ಯಾಂಟೈನಳಿಗೆ ಮತ್ತೊಂದು ಪತ್ರ ಬಂದು ಕೋಸೆಟ್ಟಿಗೆ ಮಿಲಿಟರಿಜ್ವರ ಬಂದಿರುವುದಾಗಿ ತಿಳಿಯಿತು. ಅವಳ ಆರೈಕೆ ಬಗ್ಗೆ ನಲವತ್ತು ಫ್ರ್ಯಾಂಕ್ ಹಣ ಅಗತ್ಯವೆಂದು ತೆನಾರ್ಡಿಯರ್ ಬರೆದಿದ್ದ. "ಮಿಲಿಟರಿಜ್ವರ" ಎಂದರೆ ಬಲು

ಕಠಿಣ ಖಾಯಿಲೆ ಎಂದು ಜನ ಮಾತಾಡಿಕೊಳ್ಳುತ್ತಿದ್ದರು. ಇಷ್ಟು ಹಣ ಸಂಗ್ರಹಿಸಲು ಚೈತನ್ಯವಿಲ್ಲದೆ ಫ್ಯಾಂಟೈನ್ ದುಃಖದಲ್ಲಿ ಬೀದಿಬೀದಿ ಅಲೆಯತೊಡಗಿದಳು. ಹೀಗೆ ಅವಳು ಅಲೆದಾಡುತ್ತಿದ್ದಾಗ ರಸ್ತೆ ಅಂಚಿನಲ್ಲಿ, ಒಬ್ಬ ಮೇಜಿನ ಮೇಲೆ ನಿಂತು ಆಕರ್ಷಣೀಯವಾಗಿ ಭಾಷಣಮಾಡುತ್ತಿದ್ದುದನ್ನು ಕಂಡಳು. ಅದನ್ನು ಕೇಳಲು ತುಂಬ ಜನ ಸೇರಿದ್ದರು. ಭಾಷಣ ಮಾಡುತ್ತಿದ್ದವ ಒಬ್ಬ ದಂತವೈದ್ಯ, ಮತ್ತು ದಂತವ್ಯಾಪಾರಿ. ಅವನು ಫ್ಯಾಂಟೈನಳನ್ನು ನೋಡುತ್ತ, "ಹಲ್ಲುಗಳು ಬೇಕಾಗಿವೆ—ಕ್ರಯಕೊಡಲು ತಯಾರಿದ್ದೇನೆ. ಉತ್ತಮ ತರದ ಹಲ್ಲುಗಳಿಗೆ ಹೆಚ್ಚಿನ ದರದ ಕ್ರಯ. ಒಂದು ಹಲ್ಲಿಗಾದರೆ ಹದಿನೈದು ಫ್ರ್ಯಾಂಕ್—ಒಂದು ಜೊತೆಗಾದರೆ ನಲವತ್ತು ಫ್ರ್ಯಾಂಕ್, ರಖಂ ಗಟ್ಟಳೆಯಲ್ಲಿ ಹಲ್ಲು ಕೊಡುವುದಿದ್ದರೆ ಇನ್ನೂ ಹೆಚ್ಚು ಕ್ರಯಕೊಡಲಾಗುವುದು," ಎಂದು ಹೇಳತೊಡಗಿದ.

ಉತ್ತಮ ಹಲ್ಲಿದ್ದವರು ಬಾಯಿಬರಿದು ಮಾಡಿಕೊಂಡು ಹೇರಳ ಹಣ ಸಂಪಾದಿಸಬಹುದಾಗಿದ್ದ ಈ ಜಾಹೀರಾತು ಫ್ಯಾಂಟೈನಳನ್ನು ಆಕರ್ಷಿಸಿತು. ತನ್ನ ಅಂಗದ ನಿರ್ಜೀವ ಒಂದಂಶವನ್ನು ಮಾರಿದರೂ ತನ್ನ ದೇಹದ ಜೀವಿತಾಂಶವಾದ ಕೋಸೆಟ್ಟೆ ಬದುಕುವಳೆಂಬ ಸಮಾಧಾನದಿಂದ, ರಾತ್ರಿ ವೇಳೆ ದಂತವೈದ್ಯನಲ್ಲಿಗೆ ಹೋಗಿ ತನ್ನ ಎದುರುಗಡೆಯ ಉತ್ತಮ ಹಲ್ಲುಗಳೆರಡನ್ನು ಮಾರಿ ನಲವತ್ತು ಫ್ರ್ಯಾಂಕನ್ನು ಸಂಪಾದಿಸಿದಳು. ಈ ಹಣವನ್ನು ಕೋಸೆಟ್ಟೆ ಬಗ್ಗೆ ಎಂದು ತೆನಾರ್ಡಿಯರನಿಗೆ ಕಳುಹಿಸಿಕೊಟ್ಟಳು. ಅನಂತರ ಕೆಲವು ದಿನ ಹಲ್ಲು ಹೋದ ವೇದನೆಯಿಂದಲೂ, ಹಲ್ಲಿಲ್ಲದಿದ್ದ ದುಃಖದಿಂದಲೂ, ಒಬ್ಬಳೇ ಇದ್ದಾಗ ಬಿಕ್ಕಿಬಿಕ್ಕಿ ಅಳುತ್ತಿದ್ದಳು.

ಹಲ್ಲು ಹೋಗಿ, ತಲೆಗೆ ಟೊಪ್ಪಿ ಇಟ್ಟುಕೊಂಡು, ಜ್ವರ, ಕೆಮ್ಮುಗಳಿಂದ ಕೃಶಳಾಗಿದ್ದ ಫ್ಯಾಂಟೈನ್ ಈಗ ಭೀಕರಳಾಗಿ ತೋರುತ್ತಿದ್ದಳು. ಹೀಗೆ ಕೆಲವು ದಿನ ಕಳೆಯುವಾಗ ಕೋಸೆಟ್ಟೆ ಮಿಲಿಟರಿ ಜ್ವರದಿಂದ ಪಾರಾಗಿರುವುದಾಗಿಯೂ, ಇನ್ನು ಮುಂದಿನ ಆರೋಗ್ಯವರ್ಧನೆಗಾಗಿ ಒಂದು ನೂರು ಫ್ರ್ಯಾಂಕಾದರೂ ಹಣಬೇಕೆಂದೂ ತೆನಾರ್ಡಿಯರನಿಂದ ಪತ್ರ ಬಂತು.

ಈ ಪತ್ರ ನೋಡಿ ಮುಂದಿನ ದಾರಿ ತೋಚದೆ ಅವಳು ತನ್ನದಾಗಿ ಇನ್ನು ಮಾರಬಹುದಾದದ್ದೇನಿದೆಯೆಂದು ಚಿಂತಿಸತೊಡಗಿದಳು. ದೇಹ ಒಂದಲ್ಲದೆ ತನ್ನಲ್ಲಿ ಮತ್ತೇನೂ ಇಲ್ಲವೆಂಬ ಅರಿವೂ ಇರುತ್ತ ಚಿಂತಿಸಿ, ಚಿಂತಿಸಿ, ದಾರಿತೋಚದೆ, ಶುದ್ಧ ಬೀದಿಭಿಕಾರಿಯಾಗಿ ಫ್ಯಾಂಟೈನ್ ಜನರ ದೃಷ್ಟಿಗೆ ಬೀಳುವಂತೆ ಎಂ— ಪಟ್ಟಣದಲ್ಲಿ ತಿರುಗಲಾರಂಭಿಸಿದಳು.

೮. ಮುಗ್ಧತೆಗೆ ಬಿದ್ದ ಬರೆ

ಎಲ್ಲ ಪಟ್ಟಣಗಳಲ್ಲಿ ಇರುವಂತೆ ಎಂ—ನಲ್ಲೂ ತಮ್ಮ ಆಯುಷ್ಯವನ್ನು ವಿಲಾಸಗಳಲ್ಲಿ, ಜುಗಾರಿಯಲ್ಲಿ, ಮೈಗಳ್ಳತನದಲ್ಲಿ ಮತ್ತು ಇತರ ಇಂಥ ದುರ್ವ್ಯಸನಗಳಲ್ಲಿ ಕಳೆಯುವ ಯುವಕರು ಕೆಲವರಿದ್ದರು. ಆಸ್ತಿವಂತರೆನ್ನಿಸಿಕೊಳ್ಳಲು ತಕ್ಕಷ್ಟು ಆಸ್ತಿಯೂ ವಿದ್ಯಾವಂತರೆನ್ನಿಸಿಕೊಳ್ಳಲು ದೈನಿಕ ಪತ್ರಿಕೆಗಳನ್ನು ಓದುವಷ್ಟು ಓದುಬರಹವೂ ಧೈರ್ಯಸ್ಥರೆನ್ನಿಸಿಕೊಳ್ಳಲು ಕೆಲವು ಸೈನಿಕರೊಡನೆ ತಕ್ಕಷ್ಟು ಜಗಳಗಳೂ ಮತ್ತು ಕುಶಾಲುಗಾರರು ಹಾಗೂ ಬೇಟೆಗಾರರು ಎಂದೆನ್ನಿಸಿಕೊಳ್ಳಲು ತಕ್ಕ ಕೋವಿಗಳುಳ್ಳವರೂ ಆಗಿ ಈ ಯುವಕರು ಎಂ—ನಲ್ಲಿ ಮೆರೆಯುತ್ತಿದ್ದರು. ಇವರ ನಡೆ, ನುಡಿ, ದುಸ್ತು, ಶಿಸ್ತನ್ನೆಲ್ಲ ಇಂಗ್ಲೆಂಡಿನಿಂದ ಪ್ಯಾರಿಸಿಗಾಗಿ ಈ ಊರಿಗೆ ತರಿಸಿಕೊಂಡಿದ್ದರು. ಪ್ಯಾರಿಸಿನವರಿಗೆ ಇವರು ಹಳ್ಳಿಯ ಹೆಡ್ಡರು ಅಂಧಾನುಕರಣೆಯ ಮೂಢರು ಎಂಬುದಾಗಿ ತೋರ

ಬಹುದಾಗಿದ್ದರೂ ಎಂ— ಪಟ್ಟಣದ ಉಚ್ಚಮಟ್ಟದ ಹೋಟೇಲಿನ ಮುಖ್ಯ ಕೊಠಡಿಗಳಲ್ಲಿ ಇವರು ಈ ಊರಿನ ಆದರ್ಶ ಗೃಹಸ್ಥರೂ ಸುಧಾರಕರೂ ಆಗಿ ತೋರಿಬರುತ್ತಿದ್ದರು.

೧೮೨೩ನೆ ಇಸವಿಯ ಜನವರಿ ತಿಂಗಳ ಒಂದು ರಾತ್ರಿ ಸೈನ್ಯದ ಅಧಿಕಾರಿಗಳಿಗಾಗಿ ತೆರೆಯಲಾಗಿದ್ದ ಭವ್ಯ ಹೋಟೇಲಿನ ಬೆಚ್ಚಗಿನ ಕೋಣೆಯಲ್ಲಿ ಈ ಯುವಕರ ಪೈಕಿ ಮಾನ್ಸರ್ ಬಮಟಬಾಯ್ಸ್ ಎಂಬಾತ ಕಿಟಕಿಯ ಬಳಿ ಕುಳಿತಿದ್ದ. ಹೊರಗಡೆ, ರಸ್ತೆಯಲ್ಲಿ ತುಂಬ ಮೈತೋರುವ ಕ್ರಮದಿಂದ ದುಸ್ತು ಮಾಡಿಕೊಂಡು, ಸ್ವಲ್ಪ ಅಲಂಕಾರ ಮಾಡಿಕೊಂಡಿದ್ದ ಯುವತಿಯೊಬ್ಬಳು ಅತ್ತಿಂದಿತ್ತ ಗಂಡುಸರ ದೃಷ್ಟಿಯನ್ನು ತನ್ನ ಕಡೆಗೆ ಸೆಳೆಯಲೋಸ್ಕರವೇ ಎಂದು ಗೊತ್ತಾಗುವಂತೆ ಆಗಾಗ ತಿರುಗಾಡುತ್ತಿದ್ದಳು.

ಮಾ. ಬಮಟ್‌ಬಾಯ್ಸ್ ಈ ಅರೆನಗ್ನಸ್ತ್ರೀಯನ್ನು ನೋಡಿ ಕೆಣಕುತ್ತಿದ್ದ. ಆ ಸ್ತ್ರೀಯನ್ನು ಕೆಣಕುತ್ತ, "ನಾಯಿ! ಹಲ್ಲಿಲ್ಲದ ಮುದುಕೀ! ಭಿಕಾರೀ, ನಿನ್ನ ಸ್ವರೂಪವೇ!" ಎಂದೂ ಹೀಯಾಳಿಸಿದ. ಆದರೂ ಆ ಸ್ತ್ರೀ ಈ ಮಾತುಗಳಿಗೆ ಲಕ್ಷ್ಯಕೊಡದೆ ತನ್ನ ನಿರ್ದಿಷ್ಟ ಗುರಿಯಿಂದ ಅತ್ತಿಂದಿತ್ತ ತಿರುಗಾಡುತ್ತಲೇ ಇದ್ದಳು. ಮಾ. ಬಮಟ್‌ಬಾಯ್ಸನಿಗೆ ಅವಳ ಅಲಕ್ಷ್ಯವರ್ತನೆ ಅಪಮಾನಕರವಾಗಿ ತೋರಿತು; ಅವನ ಹಾಸ್ಯಭಾವವೋ ಕೋಪವೋ ಯಾವುದೋ ಒಂದು ಉದ್ರೇಕಗೊಂಡಿತು. ಈ ಹೆಂಗುಸಿಗೆ ಗೊತ್ತಾಗದಂತೆ, ಹಿಂಬದಿಯಿಂದ, ಅವಳ ರವಕೆಯ ಒಳಗೆ, ಬೆನ್ನಿಗೆ ಇಳಿಯುವಂತೆ, ಒಂದು ಮುದ್ದೆ ಮಂಜನ್ನು ಎಸೆದ. ಮಂಜು ಹಠಾತ್ತನೆ ಅವಳ ಬೆನ್ನ ಮೇಲೆ ಎರಗಿ ಕರಗತೊಡಗಿ ಕೆಳಗಿಳಿದು ಹೆಂಗುಸಿಗೆ ಅತಿ ವೇದನೆ ಕೊಟ್ಟು ಅವಳನ್ನು ಸಿಟ್ಟಿನಿಂದ ರೇಗಿಸಿತು. ಆ ಕೂಡಲೇ ಅವಳು ಚಿರತೆಯಂತೆ ಹಿಂದಕ್ಕೆ ಹಾರಿ ಮಾ. ಬಮಟ್‌ಬಾಯ್ಸನನ್ನು ಹಿಡಿದು, ಅವನ ಮುಖ ಪರಚಿ, ಅವನನ್ನು ರಸ್ತೆಯಲ್ಲಿ ಕೆಡವಿದಳು. ಅವಳು ಬ್ರಾಂಡಿ ಕುಡಿದು ಸ್ವಲ್ಪ ಮತ್ತಳಾಗಿದ್ದುದರಿಂದ ಅವನನ್ನು ಅಷ್ಟಕ್ಕೇ ಬಿಡದೆ, ಯಾರೂ ಬೈಸಿಕೊಳ್ಳಲಾರದಿದ್ದಂಥ ಬೈಗಳನ್ನೆಲ್ಲ ಬೈದು, ಗುದ್ದಿ, ಒದೆದು ಅವನ ಟೊಪ್ಪಿಯನ್ನೇ ಒದ್ದು ಹಾರಿಸಿಬಿಟ್ಟಳು. ಈ ಗಲಾಟೆಯನ್ನು ಸ್ವಲ್ಪ ದೂರದಿಂದ ನೋಡುತ್ತಿದ್ದವರೂ ಕೇಳುತ್ತಿದ್ದವರೂ ಓಡಿ ಬಂದು ಮಾ. ಬಮಟ್‌ಬಾಯ್ಸ್ ಬಿದ್ದಲ್ಲಿ ಸೇರಿದರು. ಎಲ್ಲರೂ ಬಂದು ಸೇರುವ ಮೊದಲೇ ಮಾ. ಬಮಟ್‌ಬಾಯ್ಸ್ ತನ್ನ ಕುಚೋದ್ಯದ ಫಲ ಉಂಡು ಅಲ್ಲಿಂದ ಓಡಿದ. ಆಗಲೇ ಅಲ್ಲಿ ನೆರೆದಿದ್ದವರ ಮಧ್ಯದಲ್ಲೊಬ್ಬ ಎತ್ತರ ಗಂಭೀರ ಪೊಲೀಸ್ ಅಧಿಕಾರಿ ಕಾಣಿಸಿಕೊಂಡ. ಆತ ಆ ಹೆಂಗುಸು ತನ್ನನ್ನು ಹಿಂಬಾಲಿಸಿ ಬರತಕ್ಕದ್ದೆಂದು ಆಜ್ಞೆಯಿತ್ತು ಪೊಲೀಸ್ ಠಾಣ್ಯದ ಕಡೆಗೆ ನಡೆದ. ಹೆಂಗುಸು ಪೊಲೀಸ್ ಅಧಿಕಾರಿಯ ಗುರುತನ್ನು ತಿಳಿದು ಅವನನ್ನೇ ಹಿಂಬಾಲಿಸಿದಳು.

ಠಾಣ್ಯಕ್ಕೆ ಹೋಗುತ್ತಿದ್ದ ಹೆಂಗುಸು ಫ್ಯಾಂಟೈನ್, ಗಂಡುಸು ಇನ್‌ಸ್ಪೆಕ್ಟರ್ ಜೇವರ್ಟ್.

೯. ಪೊಲೀಸ್ ಠಾಣ್ಯದಲ್ಲಿ ಅಭಯ ಪ್ರದಾನ

ಜೇವರ್ಟ್ ಫ್ಯಾಂಟೈನಳನ್ನು ಕರೆದುಕೊಂಡು ಹೋಗಿ ಠಾಣ್ಯದ ಒಳಗೆ ಒಂದು ಮೂಲೆಯಲ್ಲಿ ಕೂತುಗೊಳಿಸಿದ. ಅವರನ್ನು ಹಿಂಬಾಲಿಸಿ ಬಂದಿದ್ದ ಜನ ಸ್ವಲ್ಪ ಹೊತ್ತು ಅಲ್ಲೇ ನಿಂತಿದ್ದು ಹಿಂತೆರಳಿದರು. ಜೇವರ್ಟ್ ಠಸ್ಸೆ ಪತ್ರದ ಮೇಲೆ ಏನನ್ನೊ ಬರೆಯತೊಡಗಿದ. ಏನು ಬರೆಯುತ್ತಿದ್ದನೆಂಬುದರ ಕುರುಹು ಅವನ ಮುಖದಲ್ಲಿ ಸ್ವಲ್ಪವೂ ಕಾಣುತ್ತಿರಲಿಲ್ಲ. ಸಂಪೂರ್ಣ ನಿರುದ್ವೇಗದಿಂದ, ಆಗ ತಾನೇ ನಡೆದಿದ್ದ ತಕ್ಷೀರಿನ ಕುರಿತಾಗಿ, ಬರೆಯುತ್ತಿದ್ದ. ಆ ದಿನಗಳಂದು

ಪೊಲೀಸ್ ಅಧಿಕಾರಿಗಳು ಕೆಲವು ಬಗೆಯ ತಕ್ಷೀರುಗಳಲ್ಲಿ ತಾವೇ ತಪ್ಪು ಹೊರಿಸಿ ಅನಂತರ ಆಪಾದಿತರನ್ನು ವಿಚಾರಿಸಿ ಶಿಕ್ಷಿಸುವ ಕ್ರಮ ಜಾರಿಯಲ್ಲಿತ್ತು. ಜೇವರ್ಟ್ ಈ ತಕ್ಷೀರಿನ ಕುರಿತು ಆಲೋಚಿಸುತ್ತಿದ್ದುದು ಈ ತೆರನಾಗಿತ್ತು.

ಮೊದಲನೆಯದಾಗಿ ಫ್ಯಾಂಟೈನಳು ಮಾ. ಬಮಟ್‌ಬಾಯ್ಸನನ್ನು ಬೈದುದನ್ನು ಜೇವರ್ಟ್ ಸ್ವತಃ ಕೇಳಿರುತ್ತಾನೆ; ಅಲ್ಲದೆ ಅವಳು ಅವನನ್ನು ಗುದ್ದಿ ಒದ್ದದ್ದನ್ನು ಕಂಡಿರುತ್ತಾನೆ. ಎರಡನೆಯದಾಗಿ, ಮಾ. ಬಮಟ್‌ಬಾಯ್ಸ್ ಒಬ್ಬ ಮತದಾರ, ಒಬ್ಬ ಕುಲೀನ ಗೃಹಸ್ಥ; ಫ್ಯಾಂಟೈನ್ ವ್ಯಭಿಚಾರಿ, ಬೀದಿಭಿಕಾರಿ, ಅಗಣನೀಯ ತಿರುಕುಳಿ; ಸಮಾಜದೊಳಗಿನ ನ್ಯಾಯನೆಮ್ಮದಿಗಳನ್ನು ಕಾಪಾಡುವ ಜವಾಬ್ದಾರಿಯನ್ನು ಸರಕಾರ ಅವನಿಗೆ (ಜೇವರ್ಟ್) ಒಪ್ಪಿಸಿರುತ್ತದೆ. ಇಂಥ ಪ್ರಸಂಗದಲ್ಲಿ ಔದಾಸೀನ್ಯ, ದಾಕ್ಷಿಣ್ಯಗಳನ್ನು ತೋರಿಸಿದರೆ ಧರ್ಮದ್ರೋಹವಾಗುವುದು. ಹೀಗೆ ತರ್ಕಿಸಿಕೊಂಡು ಅವನು ಕೆಲಸವನ್ನು ಚುಟುಕಾಗಿಯೂ ಚುರುಕಾಗಿಯೂ ಪೂರೈಸಿ ಕೈದಿ ಫ್ಯಾಂಟೈನಳನ್ನು ಕುರಿತು, "ನಿನ್ನ ಅಪರಾಧಕ್ಕೆ ಆರು ತಿಂಗಳ ಜೈಲುವಾಸವನ್ನು ನೀನು ಅನುಭವಿಸತಕ್ಕದ್ದು," ಎಂದು ತೀರ್ಪು ಹೇಳಿದ.

ಇದನ್ನು ಕೇಳಿ ಅವಳು ಬಲು ಗಾಬರಿಗೊಂಡಳು. ಜೇವರ್ಟನನ್ನು ಬಲು ವಿನೀತತೆಯಿಂದ ನೋಡುತ್ತ, "ಆರು ತಿಂಗಳಿನ ಸಜೆ! ದಿನಕ್ಕೆ ಏಳು ಸೌ ಮಾತ್ರ ಸಂಪಾದಿಸಬಹುದಾದ ಜೈಲು ವಾಸ! ದೇವರೇ ನನ್ನ ಕೋಸೆಟ್ಟೆಗೆ ಏನು ಗತಿ! ನನ್ನ ಸಾಲವನ್ನು ತೀರಿಸುವವರು ಯಾರು?" ಎಂದು ಹೇಳಿಕೊಂಡು ಅವನ ಪಾದಗಳಿಗೆ ಬಿದ್ದಳು. ಜೇವರ್ಟ್ ಸುಮ್ಮನೆ ಕುಳಿತಿದ್ದ.

ಫ್ಯಾಂಟೈನ್ ಬಲು ದುಃಖದಿಂದ ಮುಂದುವರಿಸಿದಳು, "ಮಾನ್ಸರ್ ಜೇವರ್ಟರೇ! ನಾನು ತಮ್ಮ ಕ್ಷಮೆಬೇಡುತ್ತೇನೆ. ಈ ಸರ್ತಿ ದಯಮಾಡಿ ನನ್ನನ್ನು ಬಿಟ್ಟುಬಿಡಿ. ನಾನು ವಿಶೇಷ ತಪ್ಪು ಮಾಡಿಲ್ಲ. ಆ ಗೃಹಸ್ಥ ನನ್ನ ರವಕೆಯ ಒಳಗೆ ಅನಿರೀಕ್ಷಿತವಾಗಿ ಮಂಜು ಮುದ್ದೆಯನ್ನು ಹಾಕಿದ್ದು ನನಗೆ ಅತಿಯಾದ ವೇದನೆ ಕೊಟ್ಟಿತು. ಆದ್ದರಿಂದಲೇ ನನ್ನ ಬುದ್ಧಿಗೂ ಮೀರಿ ಕೋಪ ಬಂತು. ಆ ಗೃಹಸ್ಥ ನನ್ನನ್ನು ಅದಕ್ಕೂ ಮೊದಲು ಬಲುವಾಗಿ ಬೈದು, ಹೀಯಾಳಿಸಿ, ಕುಚೇಷ್ಟೆ ಮಾಡಿದ್ದ. ನನಗೆ ಕೋಪಬರಬಾರದಿತ್ತೆಂದು ಈಗ ನಾನು ತಿಳಿಯುತ್ತೇನಾದರೂ ಆಗ ನನಗೆ ಕೋಪವನ್ನು ತಡೆದುಕೊಳ್ಳಲು ಸಾಧ್ಯವಾಗಲಿಲ್ಲ. ನನ್ನ ಕೆಮ್ಮು, ಒಳಜ್ವರ, ನನ್ನ ಹೀನ ಕಸಬನ್ನು ಆದಷ್ಟು ಮರೆಯುವುದಕ್ಕಾಗಿ ಕುಡಿದಿದ್ದ ಬ್ರಾಂಡಿ, ಇವೆಲ್ಲವುಗಳ ಜೊತೆಗೆ ತಣ್ಣಗಿನ ಮಂಜು ಜ್ವರ ಬಂದಿದ್ದ ಮೈಗೆ ಮುಟ್ಟಿದಾಗ ಆಗಿದ್ದ ವೇದನೆ ನನ್ನನ್ನು ಆ ತೆರನಾಗಿ ರೇಗಿಸಿದುದರಿಂದ ನಾನು ಅಂಥ ದುಡುಕು ಕೆಲಸ ಮಾಡಿದೆ. ನನ್ನ ಜೀವನದ ದಾರಿಯೇ ಈ ಕಸಬು. ಈ ದುಡಿತದ ಸಂಪಾದನೆಯಿಂದಲೇ ಚಿಕ್ಕಪ್ರಾಯದ ನನ್ನ ಮಗಳು ಕೋಸೆಟ್ಟೆಯ ಜೀವನದ ಖರ್ಚಿಗೆಂದು ತೆನಾರ್ಡಿಯರನಿಗೆ ಹಣ ಕಳುಹಿಸಬೇಕು. ಅವರಿಗೆ ಹಣ ಕಳುಹಿಸದಿದ್ದರೆ ಸ್ವತಃ ಕೆಲಸ ಮಾಡಿ ಬದುಕಲಾರದ ನನ್ನ ಮಗು ಮಾರ್ಗದಲ್ಲಿ ನಿರ್ಗತಿಕವಾಗಿ ಬೀಳುವುದು. ನಾನು ಜೈಲಿನಲ್ಲಿದ್ದರೆ ಬರೇ ಏಳು ಸೌ ಮಾತ್ರ ಸಂಪಾದಿಸಬಲ್ಲೆ. ಸರಕಾರದ ಸಂಬಳ ಅಷ್ಟೇ ತಾನೆ ? ಹೊರಗಿದ್ದರೆ ನಾನು ಹೆಚ್ಚು ಹಣ ಸಂಪಾದಿಸಿ ಮಗುವನ್ನು ಸಾಕಬಲ್ಲೆ. ಆ ಅಪರಿಚಿತ ಗೃಹಸ್ಥ ನನಗೆ ಮಾಡಿದ್ದ ಅನ್ಯಾಯವನ್ನೆಲ್ಲ ನೀವು ನೋಡಿದ್ದರೆ ನನ್ನನ್ನು ಖಂಡಿತವಾಗಿಯೂ ಕ್ಷಮಿಸಿರುತ್ತಿದ್ದಿರಿ, ದಯಮಾಡಿ ನನ್ನನ್ನು ಬಿಟ್ಟುಬಿಡಿ."

ಜೇವರ್ಟ್ ಅಚಲನಾಗಿದ್ದ. ಅವನು ಪೊಲೀಸರನ್ನು ನೋಡಿ ನುಡಿದ—"ಹೇಳಬೇಕಾದ್ದನ್ನೆಲ್ಲ ಅವಳು ಹೇಳಿದ್ದಾಯಿತು. ನಾನು ಕೇಳಿದ್ದೂ ಆಯಿತು. ಇನ್ನು ಅವಳನ್ನು ಕಾರಾಗೃಹಕ್ಕೆ ಸಾಗಿಸಿ."

ಈ ಆಜ್ಞೆಯಂತೆ ಪೊಲೀಸರು ಅವಳನ್ನು ಹಿಡಿದು ಎಳೆಯಲು ಪ್ರಾರಂಭಿಸಿದರು. ಇಷ್ಟು ನಡೆಯುತ್ತಿದ್ದಾಗಲೇ ಯಾರಿಗೂ ತಿಳಿಯದಂತೆ ಅಪರಿಚಿತ ವ್ಯಕ್ತಿಯೊಬ್ಬ ಅಲ್ಲಿಗೆ ಬಂದು ನಿಂತಿದ್ದ. ಅವನು ಪೊಲೀಸರನ್ನು ಉದ್ದೇಶಿಸಿ, "ದಯಮಾಡಿ ಸ್ವಲ್ಪ ತಡೆಯಿರಿ."

ಈ ಹೊಸ ವ್ಯಕ್ತಿ ಮಾ. ಮೆಡಲೀನರೆಂದು ಜೇವರ್ಟ್ ಕೂಡಲೇ ಗುರುತಿಸಿ ಗಾಬರಿಗೊಂಡ. ಅವನು ವಿಧೇಯತೆಯಿಂದ ಹೇಳಿದ, "ಮಾನ್ಸ್ಯರ್ ಮೇಯರರೇ! ದಯಮಾಡಿ ಕೇಳಿರಿ . . . "

ಜೇವರ್ಟನ ಈ ಮಾತು ಕೇಳಿ, ಫ್ಯಾಂಟೈನ್ ಫಕ್ಕನೆ ಎದ್ದು ಮಾ. ಮೆಡಲೀನರ ಹತ್ತಿರ ಬಂದು, "ಓಹೋ, ಮೇಯರ್ ಅಂದರೆ ನೀನೇಯೋ," ಎಂದು ತುಚ್ಛೀಕರಿಸಿ ಹೇಳಿ ಗಹಗಹಿಸಿ ನಕ್ಕು, ಅವನ ಮುಖಕ್ಕೆ ಉಗುಳಿದಳು. ಮಾ. ಮೆಡಲೀನ್ ತಮ್ಮ ಮುಖವನ್ನು ಉಜ್ಜಿಕೊಂಡು ಜೇವರ್ಟನನ್ನು ನೋಡಿ "ಇನ್‌ಸ್ಪೆಕ್ಟರ್ ಜೇವರ್ಟರೇ! ಈ ಹೆಂಗುಸನ್ನು ಬಿಟ್ಟುಬಿಡಿ," ಎಂದು ಗಂಭೀರ ಸ್ವರದಿಂದ ಹೇಳಿದರು.

ಜೇವರ್ಟ್ ತಬ್ಬಿಬ್ಬಾದ. ಈ ಅನಿರೀಕ್ಷಿತ ಹುಕುಂ ಅವನ ಜೀವಿತವನ್ನೇ ಅಲುಗಾಡಿಸಿತು. ರಾಜ ಅಧಿಕಾರಯುತ, ರಾಜ ಬಿರುದಾಂಕಿತ ಮೇಯರರ ಮುಖಕ್ಕೆ ತನ್ನೆದುರೇ ಉಗಿದ ಅಪರಾಧಿಯನ್ನು ಶಿಕ್ಷಿಸದೆ ಬಿಡುವುದು ಹೇಗೆಂಬ ಕರ್ತವ್ಯ ದೃಷ್ಟಿ ಅವನಿಗೆ ಸ್ಪಷ್ಟವಾಗಿ ಗೋಚರಿಸಿತು. ಅಲ್ಲದೆ ಇಂಥ ವ್ಯಭಿಚಾರಿ, ದರಿದ್ರೆ, ಪಾಪಿ, ಮೊದಲೇ ಅಪರಾಧಿಯಾಗಿದ್ದವಳು ಮಾಡಿದ್ದ ಪ್ರತ್ಯಕ್ಷದ ಅಪಮಾನವನ್ನು ಇಷ್ಟು ಸುಲಭದಲ್ಲಿ ನುಂಗುವ ಈ ವ್ಯಕ್ತಿಯ ಹೀನಚರಿತ್ರೆ ತನಗೆ ತಿಳಿಯದೆ ಇರುವುದು ಸಾಧ್ಯವೇ ಎಂಬ ವಿಮರ್ಶಾಭಾವನೆಗಳೂ ಅವನಿಗೆ ಗೋಚರಿಸಿದುವು. ಈ ಎರಡು ಸಂಗತಿಗಳನ್ನು ಗ್ರಹಿಸುತ್ತ ಜೇವರ್ಟ್ ನಿಂತಲ್ಲಿಯೇ ಅಲುಗಾಡದೆ ನಿಂತುಬಿಟ್ಟ.

ಮಾ. ಮೆಡಲೀನರ ಮಾತು ಫ್ಯಾಂಟೈನಳಿಗೂ ಆಶ್ಚರ್ಯ ಉಂಟುಮಾಡಿತು. ತಮ್ಮ ಕಾರ್ಖಾನೆಯಿಂದ ತಾವೇ ವಜಾ ಮಾಡಿದ್ದ ಮಾ. ಮೆಡಲೀನ್ ಆ ಮಾತು ಆಡಲಾರರೆಂದೇ ಅವಳು ನಿಶ್ಚೈಸಿಕೊಂಡಳು. ಆದರೂ ತನ್ನ ಬಿಡುಗಡೆಯ ಕುರಿತಾದ ಮಾತುಗಳನ್ನು ತನ್ನ ಕಿವಿಯಿಂದಲೇ ಕೇಳಿದ್ದ ಫ್ಯಾಂಟೈನ್ ಜೇವರ್ಟನನ್ನು ನೋಡುತ್ತ, "ಬಿಡುಗಡೆ, ಸ್ವಾತಂತ್ರ್ಯ! ಈ ಮಾತುಗಳನ್ನು ಯಾವ ಪುಣ್ಯಾತ್ಮರು ಆಡಿದರು, ಅಪ್ಪಾ! ಆ ಮಾತುಗಳನ್ನಾಡಿದ್ದು ನೀವಲ್ಲವೇ, ಕರುಣಾಮಯ ಮಾನ್ಸ್ಯರ್ ಜೇವರ್ಟರೇ? ನಿಜ, ನಿಮಗೆ ಸಂಗತಿಗಳೆಲ್ಲವೂ ತಿಳಿದಿದೆ. ಈ ರಾಕ್ಷಸ ಮೇಯರ್ ಕೆಲವು ಚಾಡಿಕಾರರ ಮಾತನ್ನು ಕೇಳಿ ನನ್ನನ್ನು ಕೆಲಸದಿಂದ ವಜಾ ಮಾಡಿದ. ನನ್ನ ಮಗಳು ಕೋಸೆಟ್ಟಿಗೆ ಹಣಕಳುಹಿಸುವುದಕ್ಕಾಗಿ ಹೊಲಿಗೆ ಕೆಲಸ ಮಾಡತೊಡಗಿದೆ ; ನಾನು ಹೊಲಿಗೆ ಕೆಲಸದಲ್ಲಿ ದಿನಕ್ಕೆ ಹನ್ನೆರಡು ಸೌ ಸಂಪಾದಿಸುತ್ತಿದ್ದಾಗ ಸರಕಾರ ಧರ್ಮದ ಅನ್ನವನ್ನು ಕೈದಿಗಳಿಗೆ ಕೊಟ್ಟು ಅವರಿಂದ ಹೊಲಿಗೆ ಕೆಲಸಮಾಡಿಸಿ ಹೊಲಿಗೆ ಮಜೂರಿಯನ್ನು ಊರಲ್ಲೇ ಇಳಿಸಿಬಿಟ್ಟಿತು. ಹಾಗಾಗಿ ನನ್ನ ಸಂಪಾದನೆ ಬರೇ ಏಳು ಸೌ ಆಯಿತು. ಆಗ ನಿರ್ವಾಹವಿಲ್ಲದೆ ನಾನು ಮತ್ತಷ್ಟು ಹೀನವೃತ್ತಿಯನ್ನು ಅವಲಂಬಿಸಿದೆ. ನನ್ನ ರಾತ್ರಿಯ ವೃತ್ತಿಗಾಗಿ ನನ್ನಲ್ಲಿದ್ದ ಒಂದು ಒಳ್ಳೆ ರವಕೆಯನ್ನು ತೊಟ್ಟು, ದುಃಖದಿಂದ ತಿರುಗಾಡುತ್ತಿದ್ದಾಗ ಆ ಗೃಹಸ್ಥ, ಜ್ವರದಿಂದ ಬಿಸಿಯಾಗಿದ್ದ ನನ್ನ ಮೈಗೆ, ಮಂಜು ಮುದ್ದೆ ಎಸೆದು ನನ್ನನ್ನು ನೋಯಿಸಿದನಲ್ಲದೆ, ನನ್ನ ಆ ಒಂದೇ ರವಕೆಯನ್ನು ಹಾಳು ಮಾಡಿದ. ಇಂಥ ಪರಿಸ್ಥಿತಿಯಲ್ಲಿ ನನಗೆ ಸಿಟ್ಟುಬಂದದ್ದು ತಪ್ಪೋ? ನನ್ನ ಇಂದಿನ ಸ್ಥಿತಿಗೆ ಕಾರಣನಾದ ಆ ಮೇಯರನ ಮುಖಕ್ಕೆ ನಾನು ಉಗಿದಿದ್ದನ್ನು ನೋಡಿದಿರಷ್ಟೆ! ಅವನು ಇಲ್ಲಿಗೂ ಬಂದು ನಿಮ್ಮೆದುರು ನನ್ನನ್ನು ಹೆದರಿಸಿದರೆ ನಾನು ಹೆದರೆನು. ನಾನು ಹೆದರುವುದು ನಿಮಗೆ ಮಾತ್ರ," ಎಂದು ಹೇಳುತ್ತ ಬಾಗಿಲು ತೆರೆದು ಹೊರಗೆ ಹೋಗಲುದ್ಯುಕ್ತಳಾದಳು.

ಈ ವರೆಗೆ ಅಚಲನಾಗಿದ್ದ ಜೇವರ್ಟ್ ಅವಳು ಹೊರಗೆ ಹೋಗುತ್ತಿದ್ದುದನ್ನು ಕಂಡು ಎಚ್ಚತ್ತವನಾಗಿ, "ಸಾರ್ಜಂಟ್, ಕೈದಿಯನ್ನು ತಡೆದು ನಿಲ್ಲಿಸು. ಅವಳನ್ನು ಹೋಗಲು ಬಿಟ್ಟವರು ಯಾರು?" ಅಂದ.

"ನಾನು, ನಾನು ಅವಳನ್ನು ಹೋಗಲು ಬಿಟ್ಟದ್ದು," ಅಂದರು ಮಾ. ಮೆಡಲೀನ್.

ಜೇವರ್ಟ್ ಈ ಮಾತು ಕೇಳಿ ಕಲ್ಲಾಗಿ ಹೋದ. ಮುಂದಿನ ದಾರಿ ತೋಚದೆ ಪ್ರಜ್ಞಾಹೀನನಾದ. ಸರಕಾರದ ಒಂದು ಅಂಗವಾದ ಪೊಲೀಸನ್ನು ತಡೆದು ನಿಲ್ಲಿಸುವ ಅದೇ ಸರಕಾರದ ಮತ್ತೊಂದು ಅಂಗವಾದ ಮೇಯರರ ಅಧಿಕಾರವನ್ನು ಪ್ರತಿಭಟಿಸುವುದೋ, ಅಥವಾ ಆ ಅಧಿಕಾರವನ್ನು ಒಪ್ಪಿ ನಮಸ್ಕರಿಸುವುದೋ ಎಂದು ತಿಳಿಯದವನಾದ. ಅವನ ಕರ್ತವ್ಯ, ನಿಯಮನಿಷ್ಠೆ, ಪ್ರಾಮಾಣಿಕತೆಗಳು ಅವನನ್ನು ಜಾಗ್ರತಗೊಳಿಸಿದುವು. ಅವನು ಹೇಳತೊಡಗಿದ, "ಮಾನ್ಯರ್ ಮೇಯರರೇ! ಅವಳನ್ನು ಬಿಡಕೂಡದು."

"ಏಕೆ ?"

"ಅವಳು ಕೌನ್ಸಿಲರೂ, ಮತದಾರರೂ ಆಗಿರುವ ಮಾ. ಬಮಟ್‌ಬಾಯ್ಸರನ್ನು ಅಪಮಾನಪಡಿಸಿರುತ್ತಾಳೆ."

"ನಿಮ್ಮ ಮಟ್ಟಿಗೆ ಅದು ಸರಿ; ಆದರೆ ನೀವು ನೋಡುವ ಮೊದಲೇ ನಾನು ಆ ರಸ್ತೆಯಲ್ಲೇ ಬಂದಿದ್ದೇನೆ. ಈಗ ಹೇಳಿದ ಸಂಗತಿಗಳೆಲ್ಲ ಅವಳು ಹೇಳಿದಂತೆಯೇ ನಡೆದಿವೆ. ಮಾ. ಬಮಟ್‌ಬಾಯ್ಸ್ ಮಾಡಿದ ಅಪರಾಧವನ್ನು ನಾನೇ ಕಂಡಿದ್ದೇನೆ. ಅವರನ್ನು ದಸ್ತಗಿರಿಮಾಡಬೇಕಾಗಿತ್ತು."

"ಆದರೆ, ಈ ಪಾಪಿ ಸಾಕ್ಷಾತ್ ಮಾನ್ಯರ್ ಮೇಯರರಿಗೆ ಅಪಮಾನ ಮಾಡಿರುವಳಷ್ಟೆ !"

"ಅದು ನನ್ನ ಸ್ವಂತದ ವಿಷಯ. ಅದರ ಕುರಿತು ನೀವು ಗ್ರಹಿಸಬಾರದು."

"ಅದು ವ್ಯಕ್ತಿಸಂಬಂಧವಾದುದಲ್ಲ, ಅಧಿಕಾರಕ್ಕೆ ಸಂಬಂಧಿಸಿದುದು, ಅದು ಸಿವಿಲ್ ಕೋರ್ಟ್ ಇತ್ಯರ್ಥಿಸಬೇಕಾದ ವಿಷಯವಷ್ಟೆ ?"

"ಅಂತರಾತ್ಮನ ಕೋರ್ಟಿನಲ್ಲಿ ಎಲ್ಲವನ್ನೂ ವಿಚಾರಿಸಿರುತ್ತೇನೆ. ನನ್ನ ಮಾರ್ಗದ ನ್ಯಾಯವನ್ನು ಅರಿತೇ ನಾನು ಇದರಲ್ಲಿ ಪ್ರವೇಶಿಸಿರುವೆನು."

"ನಾನು ಸ್ವತಃ ಕಂಡ ವಿಷಯದಲ್ಲಿ ನನ್ನ ಕರ್ತವ್ಯವನ್ನು ಮಾಡಬೇಡವೇ ?"

"ನಿಮಗೆ ಈಗ ನಾನು ಪ್ರತ್ಯಕ್ಷ ಕೊಡುವ ನನ್ನ ಹುಕುಮಿಗೂ ಮೇಲ್ಪಟ್ಟಿರುವುದೇ ನಿಮ್ಮ ಅನುಭವದ ಇತ್ಯರ್ಥ ?"

"ಈ ವಿಷಯದಲ್ಲಿ ನಾನು ತಮ್ಮನ್ನು ಪ್ರತಿಭಟಿಸುವೆನೆಂದು ದಯಮಾಡಿ ಗ್ರಹಿಸಬೇಡಿ. ಕಾನೂನು ಪ್ರಕಾರ ಈ ಅಧಿಕಾರ ಗಸ್ತಿನ ಪೊಲೀಸರದು."

"ಇದು ಕ್ರಿಮಿನಲ್ ಕೋಡಿನ ಸೆಕ್ಷನ್ ಒಂಬತ್ತು, ಹದಿನೈದು, ಮತ್ತು ಅರುವತ್ತಾರರ ಪ್ರಕಾರ ನನ್ನ ಅಧಿಕಾರಕ್ಕೊಳಪಟ್ಟದ್ದು. ಹೆಂಗುಸನ್ನು ಬಿಡತಕ್ಕದ್ದು. ಇದು ನನ್ನ ಹುಕುಂ."

"ಆದರೆ, ಮಾನ್ಯರೆ,—"

"೧೭೯೯ರ ಡಿಸೆಂಬರ್ ೧೩ರ ಸರಕಾರಿ ಹುಕುಮಿನ ಸೆಕ್ಷನ್ ೮೧ನ್ನು ನೋಡಿ."

"ಆದರೂ ಒಂದು ಮಾತು—"

"ಒಂದು ಶಬ್ದವೂ ಕೂಡದು."

"ಒಂದೇ ಒಂದು—"

"ಈ ಕೊಠಡಿಯಿಂದ ಹೊರಗೆ ನಡೆಯಿರಿ," ಎಂದು ಅಪ್ಪಣೆಯಿತ್ತರು. ಮಾ. ಮೆಡಲೀನ್

ಜೇವರ್ಟನಿಗೆ.

ಜೇವರ್ಟನಿಗೆ ಎದುರಿಸಲು ಅಸಾಧ್ಯವಾದಂಥ ಪೆಟ್ಟುಬಿದ್ದಂತೆ ಆಯಿತು. ಶಿಸ್ತು ತಿಳಿದಿದ್ದ ಜೇವರ್ಟ್ ಮೇಯರರಿಗೆ ನಮಸ್ಕರಿಸಿ ಹೊರಗೆ ನಡೆದ. ಫ್ಯಾಂಟೈನ್ ದಿಗ್ಭ್ರಮೆ ಹೊಂದಿದಳು. ಈ ವರೆಗೆ ನಡೆದಿದ್ದ ಮಾತುಗಳನ್ನೆಲ್ಲ ಅವಳು ಪರಿಪೂರ್ಣವಾಗಿ ಕೇಳಿ ಅರ್ಥಮಾಡಿಕೊಂಡಿದ್ದಳು. ಮಾ. ಮೆಡಲೀನರ ಮೇಲಿನ ತನ್ನ ಅಭಿಪ್ರಾಯ ತಪ್ಪಾಗಿರಬೇಕೆಂದು ತಿಳಿಯತೊಡಗಿದಳು. ಫ್ಯಾಂಟೈನಳಿಗೆ ಮಾ. ಮೆಡಲೀನ್ ಪ್ರತ್ಯಕ್ಷ ದೇವರೇ ಆಗಿ ತೋರಿದರು.

ಮಾ. ಮೆಡಲೀನ್ ಫ್ಯಾಂಟೈನಳನ್ನು ನೋಡಿ ಅಂದರು, "ನಿನ್ನ ದುಃಖದ ಚರಿತ್ರೆಯನ್ನು ನಿನ್ನ ಬಾಯಿಯಿಂದಲೇ ಇಂದು ಕೇಳಿ ತಿಳಿದೆ. ನೀನು ನಮ್ಮ ಕಾರ್ಖಾನೆಯಿಂದ ವಜಾ ಆದದ್ದೇ ನನಗೆ ಗೊತ್ತಿಲ್ಲ. ನಿನ್ನ ಸಾಲಗಳನ್ನೆಲ್ಲ ನಾನೇ ಕೊಟ್ಟು ನಿನ್ನ ಮಗಳನ್ನು ಕರೆದುಕೊಂಡು ಬರುವೆನು. ನೀವಿಬ್ಬರೂ ಮರ್ಯಾದಸ್ಥರಾಗಿ ಬದುಕಲು ತಕ್ಕ ವ್ಯವಸ್ಥೆ ಮಾಡಿಕೊಡುವೆನು. ನೀನು ಎಂಥ ಪಾಪ ಮಾಡಿದವಳೆಂದು ನೀನು ಗ್ರಹಿಸಿಕೊಂಡಿದ್ದರೂ ದೇವರ ಸನ್ನಿಧಿಯಲ್ಲಿ ಪಾಪರಹಿತಳು. ಪವಿತ್ರಳೇ ಆಗಿರುವೆ."

ಮಾ. ಮೆಡಲೀನರ ಮಾತುಗಳನ್ನು ಕೇಳಿ ಫ್ಯಾಂಟೈನಳಿಗೆ ಆನಂದ ಬಾಷ್ಪ ಉಕ್ಕಿ ಹರಿಯಿತು. ಅವಳು ಮಾ. ಮೆಡಲೀನರ ಪಾದದ ಬಳಿ ಕುಳಿತು ಅವರನ್ನು ವಂದಿಸಿದಳು. ತನ್ನ ಮಗಳನ್ನು ಪಡೆದು ಮರ್ಯಾದಸ್ಥಳಾಗಿ ಬಾಳುವ ಚಿತ್ರವನ್ನು ಅವಳು ಊಹಿಸಿದಷ್ಟೂ ಮಾ. ಮೆಡಲೀನರು ದೇವರೇ ಪ್ರತ್ಯಕ್ಷವಾದದ್ದೆಂದು ಹೆಚ್ಚೆಚ್ಚು ತಿಳಿಯತೊಡಗಿದಳು. ಫ್ಯಾಂಟೈನ್ ಮಾ. ಮೆಡಲೀನರ ಪಾದಗಳಿಗೆ ನಮಸ್ಕರಿಸಿದಳು. ಹಾಗೆ ಮಾಡುವುದು ಬೇಡವೆಂದು ಅವರು ಅವಳ ಕೈಯನ್ನು ಹಿಡಿಯುವಾಗ ಅವಳು ಮೂರ್ಛಿತಳಾಗಿದ್ದಳು.

ಆರನೆಯ ಸಂಪುಟ

೧. ಸ್ವಾಸ್ಥ್ಯಾರಂಭ

ಫ್ಯಾಂಟೈನಳನ್ನು ಮಾ. ಮೆಡಲೀನರ ಮನೆಯ ಆವರಣದಲ್ಲಿದ್ದ ಚಿಕಿತ್ಸಾಲಯಕ್ಕೆ ಸಾಗಿಸಿದರು. ಅವಳಿಗೆ ಬಂದಿದ್ದ ಜ್ವರ ಒಂದೂವರೆ ದಿನ ಬಿಡಲಿಲ್ಲ. ಜ್ವರ ಬಿಟ್ಟ ದಿನ ಅವಳು ಕಣ್ಣುಬಿಟ್ಟು ನೋಡುವಾಗ ಮಾ. ಮೆಡಲೀನ್ ಅವಳ ತಲೆಯ ಮೇಲ್ಗಡೆ ಇದ್ದ ಏಸುಕ್ರಿಸ್ತನ ಪ್ರತಿಮೆಯನ್ನೇ ನೋಡುತ್ತ ಧ್ಯಾನದಲ್ಲಿದ್ದರು. ಮಾ. ಮೆಡಲೀನ್ ತನ್ನ ಹಿತಚಿಂತಕರೆಂದೂ ಅವರ ಏರ್ಪಾಡಿನಿಂದಲೇ ತಾನು ಅಲ್ಲಿ ಚಿಕಿತ್ಸೆ ಹೊಂದುತ್ತಿದ್ದುದೆಂದೂ ಫ್ಯಾಂಟೈನ್ ತಿಳಿದಿದ್ದಳು. ಮಾ. ಮೆಡಲೀನರ ಏಕಾಗ್ರತೆಯನ್ನು ಕಂಡು ಕೇಳಿದಳು, "ನೀವೇನು ಮಾಡುತ್ತಿದ್ದೀರಿ ?"

ಈ ಪ್ರಶ್ನೆಗೆ ಉತ್ತರಕೊಡುವ ಮೊದಲು ಮಾ. ಮೆಡಲೀನ್ ಅವಳ ದೇಹಸ್ಥಿತಿ ಕುರಿತು ವಿಚಾರಿಸಿದರು. ಅನಂತರ ಅದೇ ಪ್ರತಿಮೆಯನ್ನು ಮೊದಲಿನಂತೆಯೇ ನೋಡುತ್ತ, ತುಂಬ ಅನುಕಂಪದಿಂದ ಅಂದರು, "ಧರ್ಮಕ್ಕಾಗಿ ತನ್ನನ್ನು ತಾನೇ ಬಲಿಕೊಟ್ಟುಕೊಂಡ ಕ್ರೈಸ್ತನನ್ನು ಪ್ರಾರ್ಥಿಸುತ್ತಿದ್ದೆ." ಹೀಗೆ ಉತ್ತರಕೊಡುತ್ತ, ತಮಗೆ ತಾವೇ ಅಂದುಕೊಂಡರು, "ನಿನ್ನ ಬಲಿ ಏನು ಕಡಿಮೆ! ಸಮಾಜದ ತಪ್ಪಿಗಾಗಿ ಬಲಿಯಾದ ನಿನಗೋಸ್ಕರವೂ ಪ್ರಾರ್ಥಿಸುತ್ತಿದ್ದೇನೆ!"

ಮಾ. ಮೆಡಲೀನರು ಫ್ಯಾಂಟೈನಳ ಜೀವನ ಚರಿತ್ರೆಯನ್ನು ವಿಚಾರಿಸಿ ಅಷ್ಟರಲ್ಲೇ ಬಲುಮಟ್ಟಿಗೆ ತಿಳಿದುಕೊಂಡಿದ್ದರು. ಅವರು ಆಗಿಂದಾಗ್ಗೆ ಅವಳ ಮಂಚದ ಬಳಿ ಕುಳಿತುಕೊಂಡು ಅವಳನ್ನು

ಅನೇಕ ವಿಧದಲ್ಲಿ ಸಮಾಧಾನಪಡಿಸುತ್ತಿದ್ದರು. ಒಮ್ಮೆ ಅವರಂದರು, "ನೀನು ಬಲು ಕಷ್ಟ ಪಟ್ಟಿರುವೆ. ಇನ್ನು ನೀನು ದುಃಖಿಸುವ ಅಗತ್ಯವಿಲ್ಲ. ನರಕದ ಅಂತ್ಯದಿಂದ ತಾನೇ ಸ್ವರ್ಗದ ಪ್ರಾರಂಭ; ನಿನ್ನ ನರಕದ ಅನುಭವ, ಪೂರ್ತಿಯಾದುದರಿಂದ ಇನ್ನು ನಿನಗೆ ಸಿಕ್ಕಬೇಕಾದುದೇ ಸ್ವರ್ಗಸುಖ, ಆನಂದ. ಕೋಸೆಟ್ಟಿಯಂತೂ ಇಲ್ಲಿಗೇ ಬರುವಳು."

ಜೇವರ್ಟ್ ತನಗೆ ಆಗಿದ್ದ ಅಪಮಾನಕ್ಕಾಗಿ ತನ್ನ ಹುದ್ದೆಗೆ ರಾಜಿನಾಮೆಕೊಟ್ಟನೆಂದು ಊರಲ್ಲೆಲ್ಲ ವರ್ತಮಾನ ಹಬ್ಬಿತು. ತೆನಾರ್ಡಿಯರ್ ಕೋಸೆಟ್ಟಿಯನ್ನು ಕಳುಹಿಸಿಕೊಡಲು ನೂರಾರು ಹಣದ ಆತಂಕಗಳನ್ನೊಡ್ಡುತ್ತ ಬಂದ. ಫ್ಯಾಂಟೈನಳನ್ನು ಯಾವನೋ ಒಬ್ಬ ಶ್ರೀಮಂತ ಪ್ರೀತಿಸಿ ಇಟ್ಟುಕೊಂಡು ಅವಳ ಇಚ್ಛೆ ಪ್ರಕಾರ ತನಗೆ ಹಣಕಳುಹಿಸುತ್ತಿರುವುದಾಗಿ ಅವನು ಊಹಿಸಿಕೊಂಡಿದ್ದ. ಒಮ್ಮೆ ೧೨೦ ಫ್ರ್ಯಾಂಕ್ ಹಣ ಇನ್ನೂ ತನಗೆ ಬರಲು ಬಾಕಿ ಇದೆಯೆಂದು ತಿಳಿಸಿದ. ಅಷ್ಟು ಹಣವನ್ನು ಮಾ. ಮೆಡಲೀನ್ ಕಳುಹಿಸಿ, ಕೋಸೆಟ್ಟಿಯನ್ನು ಕಳುಹಿಸಿಕೊಡಬೇಕೆಂದು ಪತ್ರ ಬರೆದರು. ಈ ಪತ್ರಕ್ಕೆ ಉತ್ತರವಾಗಿ ಕೋಸೆಟ್ಟಿ ಬರುವ ಬದಲು ಮತ್ತೊಂದು ಪತ್ರ ಬಂತು. ಅವಳ ಖಾಯಿಲದ ಖರ್ಚು ೫೦೦ ಫ್ರ್ಯಾಂಕ್ ಹಣವನ್ನು ಶೀಘ್ರವಾಗಿ ತಲಫಿಸಬೇಕೆಂದು ಆ ಪತ್ರದಲ್ಲಿ ಬರೆಯಲಾಗಿತ್ತು. ಮುಖ್ಯವಾಗಿ, ತೆನಾರ್ಡಿಯರ್ 'ಕೋಸೆಟ್ಟಿ ವ್ಯವಸಾಯ'ದಿಂದ ಹೇರಳ ಹಣ ಸಂಪಾದಿಸತೊಡಗಿದ.

ಇತ್ತ ಫ್ಯಾಂಟೈನಳ ಖಾಯಿಲೆ ಜೋರಾಗತೊಡಗಿತು. ಬೆನ್ನಿಗೆ ಮಂಜು ತಗಲಿದ್ದ ಸ್ಥಳದಲ್ಲೇ ನೋವು ಹೆಚ್ಚಾಗುತ್ತ ಬಂದು, ಜ್ವರವೂ ಕೆಮ್ಮೂ ಹೆಚ್ಚಿದುವು. ಅವಳ ಪರಿಸ್ಥಿತಿ ಬಲು ಹದಗೆಡತೊಡಗಿತು. ಕೋಸೆಟ್ಟಿಯ ಹಂಬಲವಂತೂ ಅವಳಿಗೆ ದಿನದಿಂದ ದಿನಕ್ಕೆ ಹೆಚ್ಚತೊಡಗಿತು. ಕೋಸೆಟ್ಟಿಯನ್ನು ಕರೆತಂದರೆ ಫ್ಯಾಂಟೈನಳ ಖಾಯಿಲೆ ಸ್ವಲ್ಪ ಹಿಮ್ಮೆಟ್ಟಬಹುದೆಂದು ವೈದ್ಯರೂ ಅಭಿಪ್ರಾಯಪಟ್ಟರು. ಕೊನೆಗೆ ಮಾ. ಮೆಡಲೀನರೇ ಸ್ವತಃ ಮೊಂಟ್‌ಫರ್ಮಿಯಲ್ಲಿಗೆ ಹೋಗಿ ಬರುವುದಾಗಿ ನಿರ್ಧರಿಸಿದರು. ಕೋಸೆಟ್ಟಿಯನ್ನು ಕರೆತರುವ ಬಗ್ಗೆ ಒಂದು ಅಧಿಕಾರಪತ್ರವನ್ನೂ ಮಾ. ಮೆಡಲೀನ್ ಫ್ಯಾಂಟೈನಳಿಂದ ಪಡೆದುಕೊಂಡರು.

ಈ ಸಮಯದಲ್ಲಿ ಮಹತ್ತ್ವದ್ದೊಂದು ಘಟನೆ ಸಂಭವಿಸಿತು. ಇದು ಮಾ. ಮೆಡಲೀನರ ಭವಿಷ್ಯ ಕುರಿತು ತೀವ್ರಭಯಪ್ರದ ಚಿಹ್ನೆಗಳನ್ನು ಸೂಚಿಸುತ್ತಿತ್ತು. ಅವರು ದುಃಖಾರ್ತರಾಗಿಯೇ ಬದುಕಿ ಸಾಯಬೇಕೆಂದು ವಿಧಿನಿಯಮವಿದ್ದರೆ, ಅವರ ಯಾವ ಪ್ರಯತ್ನ ಸಹ ಅಂಥ ನಿಯಮವನ್ನು ತಪ್ಪಿಸಬಲ್ಲುದು?

೨. "ಜೀನ್" ಪದ "ಚೇಂಪ್" ಕೂಡ ಆದೀತು

ಒಂದು ದಿನ ಮಾ. ಮೇಡಲೀನ್ ಮೇಯರರ ಆಫೀಸಿನಲ್ಲಿ ಕುಳಿತು ಕೆಲಸ ಮಾಡುತ್ತಿದ್ದಾಗ ಜೇವರ್ಟ್ ಹೊರಗೆ ಕಾದು ನಿಂತಿದ್ದಾನೆಂದು ಪೇದೆ ತಿಳಿಸಿದ. ಅವನನ್ನು ಒಳಗೆ ಕರೆತರುವಂತೆ ಹೇಳಿ ತಮ್ಮ ಕೆಲಸ ಮಾಡುತ್ತಲೇ ಇದ್ದರು. ಒಳಗೆ ಬಂದ ಜೇವರ್ಟ್ ಮೇಯರರಿಗೆ ನಮಸ್ಕರಿಸಿ ಅವರು ಮಾತಾಡಿಸುವವರೆಗೆ ಮೌನವಾಗಿ ಶಿಸ್ತಿನಿಂದ ನಿಂತಿದ್ದ. ಸ್ವಲ್ಪ ಹೊತ್ತಿನಲ್ಲಿ ಮಾ. ಮೆಡಲೀನ್ ತಾವು ಬರೆಯುತ್ತಿದ್ದುದನ್ನು ನಿಲ್ಲಿಸಿ, "ಏನು ವಿಶೇಷ, ಜೇವರ್ಟ್?" ಎಂದು ಕೇಳಿದರು.

"ನಾನು ಶಿಕ್ಷಾರ್ಹವಾದ ಒಂದು ತಪ್ಪು ಮಾಡಿರುತ್ತೇನೆ, ಸರ್."

"ಏನದು ?"

"ಗೌರವಾನ್ವಿತ ಮ್ಯಾಜಿಸ್ಟ್ರೇಟರೊಬ್ಬರನ್ನು ತುಚ್ಛವಾಗಿ ಕಂಡ ತಪ್ಪು, ಸರ್."

"ಯಾವ ಮ್ಯಾಜಿಸ್ಟ್ರೇಟ್ ?"

"ತಾವು, ಸರ್."

ಮಾ. ಮೆಡಲೀನ್ ಆಶ್ಚರ್ಯದಿಂದ ಜೇವರ್ಟನನ್ನು ನೋಡಿದರು. ಆತ ಮುಂದುವರಿಸಿದ, "ತಾವು ಅಪರಾಧಿಗಳೆಂದು ನಾನು ತಪ್ಪಾಗಿ ಗ್ರಹಿಸಿ, ನನ್ನ ಮೇಲಾಫೀಸರರಿಗೆ ತಮ್ಮ ಮೇಲೆ ದೂರು ಕಳುಹಿಸಿರುತ್ತೇನೆ, ಸರ್, ಕೆಳನೌಕರನ ಈ ವರ್ತನೆ ಶಿಕ್ಷಾರ್ಹ. ನನ್ನನ್ನು ದಯಮಾಡಿ ಶಿಕ್ಷಿಸಬೇಕು, ಸರ್."

"ಅದೇನಿದ್ದರೂ ನನ್ನ ಮಟ್ಟಿಗೆ ಅದನ್ನೆಲ್ಲ ಯೋಚಿಸಬೇಡಿ."

"ಮೇಯರರೂ ಮ್ಯಾಜಿಸ್ಟ್ರೇಟರೂ ಆಗಿರುವ ತನ್ನ ಮೇಲಧಿಕಾರಿಯ ಮೇಲೆ ಕೆಳನೌಕರ ಇನ್‌ಸ್ಪೆಕ್ಟರನೊಬ್ಬ ತಪ್ಪಾಗಿ ಅಪರಾಧ ಕಲ್ಪಿಸಿ ವರದಿ ಬರೆದದ್ದಾದರೆ ಅಂಥ ಇನ್‌ಸ್ಪೆಕ್ಟರ್ ಎಂದೂ ಕ್ಷಮಾರ್ಹನಲ್ಲ. ನಾನು ಅಂಥವನನ್ನು ಎಂದೂ ಕ್ಷಮಿಸೆನು. ಈ ಕ್ರಮದಿಂದಲೇ ನನ್ನನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ, ಸರ್."

ಜೇವರ್ಟನ ಸ್ಥಿರತೆ ಪಾಷಾಣದಂಥಾದ್ದು; ಪರಿಶುದ್ಧತೆ ಸ್ಫಟಿಕದಂಥಾದ್ದು. ನಿಗರ್ವದಿಂದ, ಭಕ್ತಿಯಿಂದ, ಶ್ರದ್ಧೆಯಿಂದ ಮತ್ತು ಧೈರ್ಯದಿಂದಲೇ ತನ್ನ ನಿವೃತ್ತಿಯನ್ನು ತಾನೇ ಬಯಸಿ ಅಪ್ಪಣೆ ಬಗ್ಗೆ ಪ್ರಾರ್ಥಿಸುತ್ತಿದ್ದ. ಅವನು ನಿರುದ್ವಿಗ್ನನಾಗಿದ್ದ; ನಮ್ರನಾಗಿದ್ದ; ಅಧಿಕಾರಿಯ ಎದುರಿದ್ದ ಕೆಳ ನೌಕರನಂತೆಯೂ ನ್ಯಾಯಾಧೀಶರ ಎದುರಿದ್ದ ಅಪರಾಧಿಯಂತೆಯೂ ಆತ ವಿಧೇಯನಾಗಿ ನಿಂತಿದ್ದ. ಮಾ. ಮೆಡಲೀನ್, "ನನ್ನ ಮೇಲಿನ ವರದಿ ಏನೆಂದು ಕಳುಹಿಸಿರುವಿರಿ— ಅಪರಾಧವನ್ನು ನೋಡೋಣ," ಎಂದು ಸ್ವಲ್ಪ ಅರೆನಗುವಿನಿಂದಲೇ ಅಂದರು.

"ತಾವೇ ಕೇಳಿದ್ದರಿಂದ ಎಲ್ಲವನ್ನೂ ಹೇಳುವೆನು. ದಯಮಾಡಿ ಕೇಳಿರಿ; ಈಗ್ಗೆ ಇಪ್ಪತ್ತು ವರ್ಷ ಗಳ ಹಿಂದೆ ನನಗೆ ಪರಿಚಿತನಾಗಿದ್ದ ಜೀನ್‌ವಾಲ್‌ಜೀನನೆಂಬ ಕೈದಿ ತಾವೆಂದು ನಾನು ಊಹಿಸಿ, ತರ್ಕಿಸಿ, ನಿಶ್ಚೈಸಿ ವರದಿ ಬರೆದಿರುತ್ತೇನೆ."

"ಅದಕ್ಕೆ ಏನು ಉತ್ತರ ಬಂತು ?"

"ನನಗೆ ಹುಚ್ಚೊಂತ! ನಿಜವಾದ ಜೀನ್‌ವಾಲ್‌ಜೀನನನ್ನು ಆರಾಸ್ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಿದ್ದಾರೆ. ನಾನು ಅಲ್ಲಿಗೆ ಸಾಕ್ಷಿ ಹೇಳಲು ಹೋಗಬೇಕಾಗಿದೆ. ಈಗಾಗಲೇ ನಾನಲ್ಲಿಗೆ ಹೋಗಿ ಜೀನ್‌ವಾಲ್‌ಜೀನನನ್ನು ನೋಡಿಯೂ ಬಂದಿರುತ್ತೇನೆ."

"ಓಹೋ! ಹಾಗೋ! ಆ ಹಳೆಕಥೆಗಳಿಗೆಲ್ಲ ಋಜುವಾತೇನು ?"

"ಋಜುವಾತು ಸ್ಪಷ್ಟವಾಗಿದೆ. ಜೀನ್‌ವಾಲ್‌ಜೀನ್ ಫೇವರೋಲ್ಸ್ ಎಂಬಲ್ಲಿ ಮರ ಕಡಿ ಯುವ ವೃತ್ತಿಯವನಾಗಿದ್ದ. ಅವನ ತಂದೆ 'ಜೀನ್' ಮನೆತನದವ. ತಾಯಿ 'ಮೆತ್ಯೂ' ಮನೆತನ ದವಳು. ಸದ್ಯ ಈಚೆಗೆ ಚೇಂಪ್ ಮೆತ್ಯು ಎಂಬ, ಸಾಧಾರಣ ಐವತ್ತು ಐವತ್ತನಾಲ್ಕು ವರ್ಷ ಪ್ರಾಯದ, ಮರಕಡಿಯುವ ಕೆಲಸದವನೊಬ್ಬ ಇತರರ ಹಿತ್ತಲಿನಿಂದ ಮರದ ಗೆಲ್ಲು ಸಮೇತ ಸೇಬು ಹಣ್ಣನ್ನು ನಡುಹಗಲಲ್ಲಿ ಕದ್ದಿದ್ದಾನೆ. ಕದ್ದ ಮಾಲಿನ ಸಮೇತ ಚೇಂಪ್‌ಮೆತ್ಯೂವನ್ನು ಆರಾಸ್‌ಜೈಲಿಗೆ ಕಳುಹಿಸಿಕೊಟ್ಟರು. ಆ ಜೈಲಿನಲ್ಲಿದ್ದ ಅವನ ಹಿಂದಿನ ಕಾಲದ ಜೊತೆ ಕೈದಿಗಳು ಮೂವರೂ ಅವನು ಜೀನ್‌ವಾಲ್‌ಜೀನನೆಂದು ಸ್ಪಷ್ಟವಾಗಿ ಗುರುತಿಸಿರುವರು."

ಅಷ್ಟರಲ್ಲಿ ಮಾ. ಮೆಡಲಿನ್ ಕೇಳಿದರು, "ಯಾರ್ಯಾರು ಏನೇನಂದರೂ, ಚೇಂಪ್‌ಮೆತ್ಯೂ ಏನನ್ನುತ್ತಾನೆ?"

"ಅವನೋ! ಮಹಾ ಠಕ್ಕ! ಅರೆಮರುಳನಂತೆ ನಟಿಸುತ್ತಾನೆ. ತನ್ನ ಹೆಸರು ಚೇಂಪ್‌ಮೆತ್ತ್ಯೂ ಎಂದು ಹಠಹಿಡಿಯುತ್ತಾನೆ, ಅವನ ಊರಿನಲ್ಲಿ 'ಜೀನ್' ಶಬ್ದವನ್ನು 'ಚೀನ್' ಎಂದೂ ಉಚ್ಚರಿಸುತ್ತಾರೆ. ಈ ಠಕ್ಕ 'ಜೀನ್' ಶಬ್ದವನ್ನು 'ಚೀನ್' ಮಾಡಿಕೊಂಡು 'ಚೀನ್' ಅನ್ನು 'ಚೇಂಪ್' ಮಾಡಿ ತನ್ನ ತಾಯಿಯ ಕುಟುಂಬದ ಹೆಸರು ಸಮೇತವಾಗಿ ತನ್ನನ್ನು 'ಚೇಂಪ್‌ಮೆತ್ತ್ಯೂ' ಎಂದು ಕರೆದುಕೊಳ್ಳುತ್ತಾನೆ. ಹೀಗೆಲ್ಲ ಹೇಳಿಕೊಂಡರೆ ನಂಬುವವರ್ಯಾರು?" ಎಂದು ಜೇವರ್ಟ್ ಉತ್ತರ ಕೊಟ್ಟ.

"ಇನ್ನು ಚೇಂಪ್ ಮೆತ್ತ್ಯೂವಿಗೆ ಏನಾಗತಕ್ಕದ್ದಿದೆ," ಎಂದು ಮೆಡಲೀನ್ ಕೇಳಿದರು.

"ಅವನಿಗೆ ಜೀವಾವಧಿ ಜೈಲು. ಸೇಬು ಹಣ್ಣನ್ನು ಕದ್ದದ್ದು ಬಾಲಕರಲ್ಲಿ ಆಟವಾಗುತ್ತದೆ, ದೊಡ್ಡವರಲ್ಲಿ ತಪ್ಪು, ಹಳೆಕೈದಿಗಳಲ್ಲಿ ಮಹಾಪರಾಧ. ಅಲ್ಲದೆ, ಜೀನ್‌ವಾಲ್‌ಜೀನ್ ಡಿ— ಪ್ರದೇಶದ ಬಿಷಪರಿಂದ ಬೆಳ್ಳಿ ಸಾಮಾನುಗಳನ್ನು ಕದ್ದಿದ್ದ ಆರೋಪ ಹಾಗೆಯೇ ದಾಖಲೆಯಲ್ಲಿ ಉಳಿದಿದೆ; ಮತ್ತೂ, ಚಿಲ್ಲರೆ ಸಾಮಾನುಗಳನ್ನು ಮಾರುತ್ತಿದ್ದ ಜರ್ವಾಯಿಸನೆಂಬ ಬಾಲಕನಿಂದ, ರಾಜರಸ್ತೆಯಲ್ಲಿ, ಹಗಲಲ್ಲೇ ಮಾಡಿದ ಸುಲಿಗೆ ತಕ್ಷೀರೂ ವಿಚಾರಣೆಗೆ ಬಾಕಿಯಿದೆ. ಈ ಸರ್ತಿ ಜೀನ್‌ವಾಲ್ ಜೀನ್ ಬಿಡುಗಡೆ ಹೊಂದಲಾರ," ಅಂದ ಜೇವರ್ಟ್.

"ಇವೆಲ್ಲ ಕಥೆಗಳು. ಈಗ ಆಗಬೇಕಾದ ಕೆಲಸ ತುಂಬ ಇದೆ. ಅದೂ ನಿಮ್ಮಿಂದಲೇ ಆಗಬೇಕಾಗಿದೆ," ಎಂದು ಹೇಳಿ ಮಾ. ಮೆಡಲೀನ್ ಜೇವರ್ಟನ ಕೈಯ್ಯಲ್ಲಿ ಕೆಲವು ಹುಕುಮುಗಳನ್ನು ಕೊಟ್ಟರು.

"ಆದರೆ ನಾನು ನಾಳೆಯೇ ಆರಾಸ್ ಕೋರ್ಟಿಗೆ ಹೋಗಬೇಕು. ಸಾಕ್ಷಿ ನುಡಿಯುವ ಬಗ್ಗೆ ನನಗೆ ಕೋರ್ಟಿನಿಂದ ಸಮ್ಮನ್ಸ್ ಬಂದಿದೆ. ನಾಳೆ ರಾತ್ರಿಯೇ ಈ ಪ್ರಕರಣದ ತೀರ್ಪು ಆಗಬಹುದು. ದಯಮಾಡಿ ನನ್ನನ್ನು ವಜಾ ಮಾಡಿ, ಸರ್," ಎಂದು ಜೇವರ್ಟ್ ಪುನಃ ಕೇಳಿಕೊಂಡ.

"ಆ ವಿಷಯವನ್ನು ಹಿಂದಿನಿಂದ ಆಲೋಚಿಸೋಣ. ಸದ್ಯ, ಬೇಕಾದರೆ ನೀವು ಆರಾಸ್ ಕೋರ್ಟಿಗೆ ಹೋಗಿ ಬನ್ನಿ," ಅಂದರು ಮಾ. ಮೆಡಲೀನ್.

"ಆಗಬಹುದು, ಸರ್. ಆದರೆ, ನನ್ನ ಬದಲಿಗೆ ಇನ್ನೊಬ್ಬ ಬರುವವರೆಗೆ ನಾನು ಕೆಲಸವನ್ನು ಮಾಡುತ್ತೇನೆ. ಅಂತೂ ವಜಾ ಆಗಲೇಬೇಕು, ಸರ್," ಎಂದು ಹೇಳಿ, ನಮಸ್ಕರಿಸಿ, ಜೇವರ್ಟ್ ಮೇಯರರ ಆಫೀಸಿನಿಂದ ಹೊರಟು ಹೋದ.

ಜೇವರ್ಟ್ ಸ್ಥಿರ ಪದಗತಿಯಿಂದ ನಡೆದುಹೋಗುತ್ತಿದ್ದ ಸದ್ದು ಆಲಿಸುತ್ತ ಮಾ. ಮೆಡಲೀನ್ ಏನನ್ನೋ ತುಂಬ ಆಲೋಚಿಸುತ್ತ ಕುಳಿತಿದ್ದರು.

ಏಳನೆಯ ಸಂಪುಟ

೧. ಸಿಸ್ಟರ್ ಸಿಂಪ್ಲಿಸ್

ಫ್ಯಾಂಟೈನ್ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದ್ದಳು. ಅವಳ ಶುಶ್ರೂಷೆಯನ್ನು ಸಿಸ್ಟರ್ ಸಿಂಪ್ಲಿಸ್ ಎಂಬೊಬ್ಬ ದಾದಿ ಮಾಡುತ್ತಿದ್ದಳು. ಈಕೆ ಕೃಶಾಂಗಿಯಾಗಿದ್ದು ವೃದ್ಧೆಯಂತೆ ತೋರಿದರೂ ಬಲು ಶಕ್ತಿ ಮತ್ತು ಚಟುವಟಿಕೆಯುಳ್ಳವಳು. ಈಗ ಕಾಣುವ ಹೊರತಾಗಿ ಈಕೆ, ಇನ್ನು ಯಾವ ಬಗೆಯ ರೂಪ, ದುಸ್ತು, ನಡೆನುಡಿಗಳಿಂದ ಯಾರಿಗೂ ಹಿಂದೆಂದೂ ತೋರಿ ಬಂದಿಲ್ಲ. ಎಂದೂ ಅನಾವಶ್ಯಕವಾಗಿ ಮಾತಾಡಿದ್ದಿಲ್ಲ. ಆಡುವ ಮಾತು ಬಲು ಮೃದುವಾಗಿದ್ದು, ಕೇಳಿಸಲೂ ಕಷ್ಟ

ವಾಗುವಷ್ಟು ಮೆಲ್ಲಗೆ ಇರುತ್ತಿತ್ತು. ಸಿಂಪ್ಲಿಸ್ ಮಾತಾಡುತ್ತಿದ್ದಾಗ ನಿಶ್ಯಬ್ದತೆ ಆ ಮಾತಿನ ಜೊತೆಯಲ್ಲಿ ಬೆರೆತು ಹಿಂಬಾಲಿಸುತ್ತಿದ್ದಿತೆಂದು ಹೇಳಿದರೂ ತಪ್ಪಾಗದು. ಅವಳ ಮಾತು ಹಾಗಿತ್ತು. ಸತ್ಯ ಹೊರತು ಬೇರೆ ಏನನ್ನೂ ಮಾತಾಡಳು. ಅವಳ ಬಟ್ಟೆಬರೆ ಒರಟಾಗಿದ್ದರೂ ಚೊಕ್ಕಟವಾಗಿದ್ದುವು. ಅವಳನ್ನು 'ಅವಳು' ಎಂದು ಸ್ತ್ರೀಲಿಂಗ ಶಬ್ದದಿಂದ ಕರೆಯುವ ಅಗತ್ಯವಿಲ್ಲದಿದ್ದಷ್ಟು ಅವಳು ಸ್ತ್ರೀತ್ವರಹಿತಳಾಗಿದ್ದಳು. ಅವಳೊಬ್ಬ ವ್ಯಕ್ತಿ ಮಾತ್ರ. ಸುಖ, ಸಂತೋಷ, ಸೌಂದರ್ಯ ಎಲ್ಲವೂ ಪಾರಲೌಕಿಕ ವಿಷಯಗಳೆಂದು ಅವಳು ನಂಬಿಕೊಂಡಿದ್ದುದರಿಂದ ಈ ಲೋಕದ ಯಾವ ಸುಖ, ಸಂತೋಷ, ಸೌಂದರ್ಯಗಳನ್ನು ಅವಳು ಎಂದೂ ನಂಬುತ್ತಿರಲಿಲ್ಲ. ಆ ಕಡೆಗೆ ಅವಳು ಲಕ್ಷ್ಯವನ್ನೇ ಕೊಡುತ್ತಿರಲಿಲ್ಲ. ಅತೀವ ವಿರಕ್ತಳಾಗಿದ್ದಳು. ರೋಗಿಗಳ ಮಟ್ಟಿಗೆ ಸಿಸ್ಟರ್ ಸಿಂಪ್ಲಿಸ್ ಮಮತೆಯ ಮಾತೆಯೇ ಹೌದು. ಫ್ಯಾಂಟೈನಳ ಶುಶ್ರೂಷೆ ಇಂಥ ದಾದಿಯ ವಶದಲ್ಲಿತ್ತು.

ಜೇವರ್ಟನನ್ನು ಕಂಡ ದಿನ ಮಾ. ಮೆಡಲೀನ್ ಸಿಸ್ಟರ್ ಸಿಂಪ್ಲಿಸಳನ್ನು ಕರೆದು ಫ್ಯಾಂಟೈನಳ ಬಗ್ಗೆ ಬಲು ಎಚ್ಚರಿಕೆಯಿಂದ ಇರಬೇಕೆಂದು ತಿಳಿಸಿದರು. ಅಲ್ಲಿ ಎಲ್ಲರ ಹತ್ತಿರವೂ ಈ ಎಚ್ಚರಿಕೆಯ ಕುರಿತು ಪುನಃ ಪುನಃ ತಿಳಿಸಿದರಲ್ಲದೆ, ಫ್ಯಾಂಟೈನಳ ಬಗ್ಗೆ ಎಷ್ಟು ಖರ್ಚು ಅಗತ್ಯ ಬಿದ್ದರೂ ಮಾಡಬೇಕೆಂದೂ ಹೇಳಿದರು. ಈ ಮಾತುಗಳನ್ನಾಡುವಾಗ ಅವರ ಮುಖದಲ್ಲಿ ಏನೋ ಒಂದು ಭಯದ ಚಿಹ್ನೆ ತೋರಿಬರುತ್ತಿತ್ತು. ಫ್ಯಾಂಟೈನಳ ಆರೋಗ್ಯ ತೀವ್ರಗತಿಯಿಂದ ಕೆಡುತ್ತಿದೆಯಾಗಿ ವೈದ್ಯರು ಹೇಳಿದ್ದರಿಂದಲೇ ಅವರು ಈ ರೀತಿ ಭಯದಿಂದ ಇದ್ದದ್ದಾಗಿ ಅಲ್ಲಿನವರೆಲ್ಲ ಊಹಿಸಿದರು.

ಆ ದಿನ ಅವರು ಮೇಯರರ ಆಫೀಸಿನ ಗೋಡೆಯಲ್ಲಿದ್ದ ಫ್ರಾನ್ಸಿನ ಭೂಪಟವನ್ನು ಬಹಳ ಹೊತ್ತು ನೋಡುತ್ತ ನಿಂತಿದ್ದರೆಂದೂ ಒಂದು ಚಿಕ್ಕತುಂಡು ಕಾಗದದಲ್ಲಿ ಏನನ್ನೊ ಬರೆದುಕೊಳ್ಳುತ್ತಿದ್ದರೆಂದೂ ಅವರ ಕಛೇರಿ ಗುಮಾಸ್ತ ಹೇಳುತ್ತಿದ್ದ.

೨. ಸ್ಕಾಫ್ಲೇರನ ಸಂಶೋಧನೆ

ಅಂದು ಸಂಜೆ ಮಾ. ಮೆಡಲೀನ್ ಬಂಡಿಗಳನ್ನೂ ಕುದುರೆಗಳನ್ನೂ ಬಾಡಿಗೆಗೆ ಕೊಡುತ್ತಿದ್ದ ಆ ಊರಿನ ಸ್ಕಾಫ್ಲೇರ್ ಎಂಬವನ ಮನೆಗೆ ಹೋಗಿ ಉತ್ತಮ ತರದ ಒಂದು ಕುದುರೆ ಬಂಡಿಯನ್ನು ಗೊತ್ತುಮಾಡಿ, ಬಾಡಿಗೆಯನ್ನು ಮುಂದಾಗಿಯೇ ಕೊಟ್ಟು, ಬಂಡಿ ಅದೇ ನಸುಮುಂಜಾನೆ ನಾಲ್ಕೂವರೆ ಗಂಟೆಗೆ ತನ್ನ ಮನೆಗೆ ಬರಬೇಕೆಂದು ತಿಳಿಸಿ ತಮ್ಮ ಮನೆಕಡೆ ಹಿಂತಿರುಗಿದರು. ಆದರೆ, ಸ್ವಲ್ಪ ದೂರ ಹೋಗುವುದರೊಳಗೇ ಏನೋ ಆಲೋಚಿಸಿ, ಹಿಂತಿರುಗಿ ಬಂದು ಬಂಡಿ ಬಲುವೇಗವಾಗಿ ೧೯-೨೦ ಹರದಾರಿ ದೂರ ಹೋಗಬೇಕಾಗಿದ್ದುದರಿಂದ, ಬಂಡಿಗೂ ಕುದುರೆಗೂ ಏನಾದರೂ ಅಪಾಯ ಸಂಭವಿಸಿದ ಪಕ್ಷದಲ್ಲಿ, ಅಂಥ ಸಂದರ್ಭದ ಭದ್ರತೆಗಾಗಿ ಸ್ಕಾಫ್ಲೇರನಿಗೆ ಎಷ್ಟು ಹಣ ಮುಂದಾಗಿಯೇ ಕೊಡಬೇಕೆಂದು ಕೇಳಿದರು. ಈತ ಸ್ವಲ್ಪ ಆಲೋಚಿಸಿ ಐನೂರು ಫ್ರ್ಯಾಂಕ್ ಹಣ ಕೊಡಬೇಕೆಂದ. ಮಾ. ಮೆಡಲೀನ್ ಐನೂರು ಫ್ರ್ಯಾಂಕಿನ ಚೆಕ್ ಕೊಟ್ಟು, ಬೆಳಗಿನ ಜಾವದ ನಾಲ್ಕೂವರೆ ಗಂಟೆಯ ಕ್ಲುಪ್ತತೆ ಕುರಿತು ಪುನಃ ಎಚ್ಚರಿಸಿ, ತಮ್ಮ ಮನೆಗೆ ಹೋದರು.

ಮಾ. ಮೆಡಲೀನ್ ಹೋದ ಮೇಲೆ ತಾನು ಒಂದು ಸಾವಿರ ಫ್ರ್ಯಾಂಕನ್ನು ಸಹ ವಸೂಲ್ಮಾಡಬಹುದಿತ್ತಲ್ಲ ಎಂದು ಸ್ಕಾಫ್ಲೇರ್ ಬೇಸರಪಟ್ಟುಕೊಂಡ. ಕೇಳಿದಷ್ಟು ಹಣ ಕೊಟ್ಟು ಅಷ್ಟೊಂದು ತ್ವರಿತದಿಂದ ೧೯-೨೦ ಹರದಾರಿ ದೂರ ಮಾ. ಮೆಡಲೀನ್ ಹೋಗುವುದು ಎಲ್ಲಿಗಿರಬಹುದೆಂದು

ಅವನೂ ಅವನ ಹೆಂಡತಿಯೂ ಮಾತಾಡಿಕೊಂಡರು. ಮೊದಲು ಮಾ. ಮೆಡಲೀನ್ ಚೆಕ್ ಕೊಡುತ್ತಿದ್ದಾಗ ಬೀಳಿಸಿದ್ದ ಒಂದು ಚಿಕ್ಕ ಕಾಗದದ ತುಂಡನ್ನು ಸ್ಕಾಫ್ಲೇರ್ ಕಂಡು, ಅದನ್ನು ಹೆಕ್ಕಿ ತೆಗೆದು ನೋಡಿದ. ಆ ಕಾಗದದಲ್ಲಿ ೫, ೬, ೮೧/೨ ಎಂದು ಬರೆದಿದ್ದ ಅಂಕೆಗಳನ್ನು ಸ್ಕಾಫ್ಲೇರ್ ಕಂಡು, ಅದನ್ನು ಪುನಃ ಪುನಃ ಓದಿ, ಆ ಅಂಕೆಗಳು ಸ್ಥಳಗಳ ಅಂತರವಾಗಿರಬೇಕೆಂದು ಊಹಿಸಿ, ಕೊನೆಗೆ ಆ ಸಂಖ್ಯೆಗಳು ತೋರಿಸುವಷ್ಟೇ ದೂರದಲ್ಲಿರುವ ಸ್ಥಳಗಳನ್ನು ಎಂ—ನಿಂದ ಪ್ರಾರಂಭಿಸಿ, ವಿಚಾರಪೂರ್ವಕವಾಗಿ ಪರಿಶೀಲಿಸಿ, ಮಾ. ಮೆಡಲೀನ್ ಆರಾಸ್ ಪಟ್ಟಣಕ್ಕೇ ಹೋಗುವುದಿರಬೇಕೆಂದು ನಿಶ್ಚೈಸಿಕೊಂಡ.

ಆ ರಾತ್ರಿ ಮಾ. ಮೆಡಲೀನ್ ಮಲಗುವ ಮಹಡಿಯ ಮೇಲಿನ ಕೋಣೆಯಿಂದ ಏನೇನೋ ಸದ್ದು ಕೇಳಿಸುತ್ತಿದ್ದಿತೆಂದೂ ಕಿಟಕಿಯಿಂದ ರಾತ್ರಿಯಿಡೀ ಬೆಳಕು ಕಾಣಿಸುತ್ತಿದ್ದಿತೆಂದೂ ಕೆಳಭಾಗದ ಕೋಣೆಯಲ್ಲಿ ಮಲಗುತ್ತಿದ್ದ ಒಬ್ಬ ಗುಮಾಸ್ತ ಮರುದಿನ ಮತ್ತೊಬ್ಬನ ಹತ್ತಿರ ಹೇಳುತ್ತಿದ್ದ. ರಾತ್ರಿ ಅಲ್ಲಿ ನಡೆದಿದ್ದ ಸಂಗತಿ ವಿಶೇಷತರದ್ದೇ ಇತ್ತು.

೩. ಮನದೊಳಗೆದ್ದ ಚಂಡಮಾರುತ

ಮಾ. ಮೆಡಲೀನರೇ ಜೀನ್‌ವಾಲ್‌ಜೀನನೆಂದು ಓದುಗರಿಗೆ ಗೊತ್ತಾಗಿದೆಯಷ್ಟೆ. ಈ ಹೊತ್ತು ಆತನ ಮನಸ್ಸು ಹೇಗಿದೆ—ಬಿಷಪರ ಮನೆಯಿಂದ ಅವನು ಆ ಹೊತ್ತು ಹೊರಟಾಗ ಹೇಗಿತ್ತು, ಎಂಬುದನ್ನೆಲ್ಲ ಪೂರ್ತಿ ಹೇಳಲು ಪ್ರಯತ್ನಿಸಿದರೆ ಅದು ಬರೆದು ಮುಗಿಯದಷ್ಟು ಇದೆ. ಇಂದಿನ ಪರಿಸ್ಥಿತಿಯೇ ಮಹತ್ತ್ವದ್ದಿರುವಾಗ ಹಿಂದಿನದನ್ನು ಬರೆಯುವ ಪ್ರಯತ್ನವಾದರೂ ಬೇಕೇ ಎಂಬುದೂ ಆಲೋಚಿಸತಕ್ಕ ವಿಷಯ. ಮನಸ್ಸು ಬಿಚ್ಚಿದಷ್ಟು ವಿಶಾಲವಾಗಬಲ್ಲದು. ಮನಸ್ಸಿನ ತರಂಗಗಳನ್ನೆಲ್ಲ—ಪ್ರಕೋಪ, ಪ್ರಶಾಂತತೆಗಳನ್ನೆಲ್ಲ—ಶಬ್ದಗಳಿಂದ ಚಿತ್ರಿಸಲು ಸಾಧ್ಯವಾಗಬಹುದಾದರೆ, ಜೀನ್‌ವಾಲ್‌ಜೀನನ ಮನಸ್ಸಿನ ಇಂದಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ಬರೆದರೆ, ಹಾಗೆ ಬರೆಯಲಾಗದ ಬರಹ, ಈ ವರೆಗಿನ ಎಲ್ಲ ಪುರಾಣಗಳಿಗಿಂತಲೂ ಹೆಚ್ಚೇ ಆಗಬಹುದು.

ಬಿಷಪರ ಮಾರ್ಮಿಕ ಬೋಧನೆಯಿಂದ ಜೀನ್‌ವಾಲ್‌ಜೀನ್ ಪರಿಪೂರ್ಣ ಪರಿವರ್ತನೆ ಹೊಂದಿದ್ದ (ಅಂಥಾದ್ದು ಸಾಧ್ಯವಾಗಬಹುದಾಗಿದ್ದರೆ). ಅವನು ಬಿಷಪರಿಗಿಂತಲೂ ಮೇಲಾದ ಪವಿತ್ರಪುರುಷನಾಗಲು ಪ್ರಯತ್ನಿಸುತ್ತಿದ್ದ. ಬಿಷಪರು ಆಶೀರ್ವಾದಪೂರ್ವಕವಾಗಿ, ತನ್ನ ಆತ್ಮೋದ್ಧಾರಕ್ಕಾಗಿ, ಕೊಟ್ಟಿದ್ದ ಆ ಎರಡು ಬೆಳ್ಳಿಯ ದೀಪಗಳು ಬಿಷಪರ ಸ್ಥಿರ ಸ್ಮಾರಕಗಳಾಗಿ ಅವನಿಂದ ಸದಾ ಪೂಜಿಸಲ್ಪಡುತ್ತಿದ್ದುವು. ಅವನ ಎಲ್ಲ ಕಾರ್ಯಗಳ ಪ್ರೇರಣೆಯ ಸ್ಥೂಲ ಪ್ರತೀಕಗಳೇ ಅವಾಗಿದ್ದುವು. ಅವನ ಉತ್ತರಾರ್ಧದ ಜೀವನಕ್ರಮ ಪೂರ್ವಾರ್ಧದ್ದಕ್ಕೆ ಸಂಪೂರ್ಣ ವಿರೋಧ ತರದ್ದಾಗಿತ್ತು. ಅವನ ಜೀವನದ ಗುರಿ ಈ ತೆರನಾಗಿತ್ತು: ಹಿಂದಿನ ಭಾವನೆ, ಕುರುಹು, ವಾಸನೆಗಳನ್ನೆಲ್ಲ ನಾಶಮಾಡಿ, ಮುಂದಿನ ಜೀವನವನ್ನು ಪವಿತ್ರಗೊಳಿಸುತ್ತ ಲೋಕಕಲ್ಯಾಣಕ್ಕಾಗಿ ಜೀವವನ್ನು ಸವೆಸುವುದು. ಹೀಗೆ ಜೀವನ ನಡೆಸುವಾಗ ತನ್ನ ಸುಖ ಮತ್ತು ರಕ್ಷಣೆಗೆ ಅವನು ಗಮನ ಕೊಡುತ್ತಿರಲಿಲ್ಲ. ಫಾದರ್ ಫಾಶೆಲೆವೆಂಟನನ್ನು ಜೇವರ್ಟನ ಎದುರೇ ಅವನು ರಕ್ಷಿಸಿದಾಗ ತನ್ನ ಪರಿಚಯ ಜೇವರ್ಟನಿಗೆ ಆಗಬಹುದೆಂಬುದನ್ನು ಅರಿತಿದ್ದ; ಆದರೂ, ಸ್ವಾರ್ಥವನ್ನು ಬದಿಗೊತ್ತಿ ಪರಹಿತವನ್ನು ಸಾಧಿಸಿದ್ದ. ಈಗ ಚೇಂಪ್‌ಮೆತ್ಯೂವಿನ ಚರಿತ್ರೆ, ಅವನ ಕುರಿತಾದ ನ್ಯಾಯಾಲಯ ಖಟ್ಲೆ, ಮೊದಲಾದ ಸಂಗತಿಗಳನ್ನು ಅವನು ಜೇವರ್ಟನಿಂದ ತಿಳಿದಂದಿನಿಂದ ಅವನ ಮನಸ್ಸಿನ

ಪರಿಸ್ಥಿತಿಯೂ ಅದೇ ತೆರನಾಗಿತ್ತು—ಅಂದರೆ, ತನ್ನ ಕಷ್ಟಗಳನ್ನು ಮರೆತು ಚೇಂಪ್‌ಮೆತ್ಯೂವನ್ನು ಬದುಕಿಸಲೇಬೇಕು. ಆದರೂ ಮನಸ್ಸಿನ ಸ್ವಭಾವಕ್ಕೆನುಗುಣವಾಗಿ ಅವನು ಪೂರ್ವಾಪರ ತುಂಬ ಆಲೋಚಿಸತೊಡಗಿದ.

ಅವನು ಆರಾಸಿಗೆ ಹೋಗಲೇಬೇಕೆಂದು ನಿರ್ಧರಿಸಿ ಅದಕ್ಕೆ ತಕ್ಕ ಏರ್ಪಾಡುಗಳನ್ನೆಲ್ಲ ಮಾಡಿದ್ದರೂ ಮನಸ್ಸಿನ ಚಾಂಚಲ್ಯ ಅವನ ಶಕ್ತಿಗೂ ಮೀರಿ ಬಾಧಿಸುತ್ತಿತ್ತು. ಬಿಷಪರ ಆಶೀರ್ವಾದ, ಅನಂತರದ ಜೀವನಕ್ರಮ, ತನ್ನ ಜೀವನದಲ್ಲಿಯ ನಿರ್ದಿಷ್ಟಗುರಿ—ಇವೆಲ್ಲ ಅವನು ಚೇಂಪ್‌ಮೆತ್ಯೂವಿನ ರಕ್ಷಣೆಗಾಗಿ ಕೂಡಲೇ ಹೋಗಬೇಕೆಂದು ಅವನನ್ನು ಒತ್ತಾಯಿಸುತ್ತಿದ್ದರೂ ಚೇಂಪ್‌ಮೆತ್ಯೂವಿನ ಪ್ರಕರಣದ ಬಹುಭಾಗವೆಲ್ಲ ತನಗೆ ಗೊತ್ತಿಲ್ಲದಿದ್ದುದರಿಂದ, ತಾನು ತನ್ನ ದಿನನಿತ್ಯದ ಕಾರ್ಯ, ಸುಖ ಸಂಪತ್ತುಗಳನ್ನೆಲ್ಲ ತ್ಯಜಿಸಿ ಕಾಣದ ಕಗ್ಗತ್ತಲ ಕೂಪಕ್ಕೆ ದುಮುಕಬಾರದೆಂದು ಅವನ ದೇಹ (ಅವನ ಇನ್ನೊಂದು ಮುಖ) ಅವನನ್ನು ಆ ಕೆಲಸದಿಂದ ತಡೆದು ನಿಲ್ಲಿಸುತ್ತಿತ್ತು.

ತಾನು ಜೀನ್‌ವಾಲ್‌ಜೀನನೆಂಬ ಜ್ಞಾನ ಅವನನ್ನು ಯಾರೂ ಗೊತ್ತುಹಿಡಿಯದಂತೆ ಅಡಗಿರಲೂ ಶತ್ರುಗಳಿಂದ ತಪ್ಪಿಸಿಕೊಂಡು ಬದುಕುವ ಚಮತ್ಕಾರಗಳನ್ನು ನಡೆಸಲೂ ಪ್ರೇರೇಪಿಸುತ್ತಿತ್ತು. ಹೀಗೆ ಅಡಗಿ ಕುಳಿತಿರುವ ಆಲೋಚನೆಯೇ ಕೃತಿಯಾಗಿ ಕಾಣಿಸಿಕೊಂಡು, ಕೋಣೆಯ ಬಾಗಿಲುಗಳನ್ನು ಅವನಿಂದಲೇ ಹಾಕಿಸಿ, ಕೋಣೆಯೊಳಗೆ ಉರಿಯುತ್ತಿದ್ದ ಬೆಂಕಿಯನ್ನೂ ನಂದಿಸಿತು. ಆದರೆ ಹೀಗೆ ಮಾಡಿದ ಮರುಕ್ಷಣವೇ ಆಗ ರಾತ್ರಿಯ ಸಮಯವೆಂದೂ ತನಗೆ ಗೊತ್ತಿರುವಂತೆ ಯಾರೂ ಶತ್ರುಗಳಿಲ್ಲವೆಂದೂ ತಾನೊಬ್ಬನೇ ತನ್ನ ಕೋಣೆಯಲ್ಲಿ ಇರುವುದೆಂದೂ ಅವನಿಗೆ ಅರಿವಾಯಿತು. ಶತ್ರು, ಕತ್ತಲು, ಬೆಳಕು ಎಲ್ಲವೂ ಮನಸ್ಸಿನಲ್ಲೇ ಇರುವುವೆಂದು ತಿಳಿಯತೊಡಗಿದ. ಸ್ಥೂಲ ಅವಕಾಶದೊಳಗಿನ ಸ್ಥೂಲಬಾಗಿಲನ್ನು ಹಾಕಿಕೊಂಡು ಕುಳಿತರೂ ಪ್ರಪಂಚವನ್ನೆಲ್ಲ ತನ್ನೊಳಗೆ ಕಾಣತೊಡಗಿದ. ಕೊನೆಗೆ, ಚೇಂಪ್‌ಮೆತ್ಯೂ ಯಾರಿರಬಹುದು? ರೂಪದಲ್ಲಿ ತನ್ನ ಹಾಗೆಯೇ ಅವನೂ ಇರಲು ಸಾಧ್ಯವಿರಬಹುದೇ? ಈಗ ತನ್ನ ಕರ್ತವ್ಯ ಏನು? ಹೀಗೆಲ್ಲ ಯೋಚಿಸತೊಡಗಿದ. ಒಬ್ಬ ಸಮುದ್ರದ ಅಲೆಗಳಲ್ಲಿ ಸಿಕ್ಕಿ ಪ್ರಾಣೋತ್ಕ್ರಮಣ ಕಾಲದಲ್ಲಿ ಕೈಗಳನ್ನು ಬೀಸಬಹುದಾದಂತೆ ಜೀನ್‌ವಾಲ್‌ಜೀನ್ ಈ ಆಲೋಚನೆಗಳಲ್ಲಿ ಸಿಕ್ಕಿ ಪಾರಾಗಲಾರದೆ ಕೈಗಳನ್ನು ಬೀಸಿಕೊಂಡು ಅತ್ತಿತ್ತ ತಿರುಗಾಡಿದ. ಕೊನೆಗೆ ತಿರುಗಾಡಿ ಬಳಲಿ ಒಂದು ಕಡೆ ಕುಳಿತು ತನ್ನ ತಲೆಯನ್ನು ಎರಡೂ ಕೈಗಳಿಂದ ಹಿಡಿದುಕೊಂಡ. ಪುನಃ ಯೋಚನಾತರಂಗಗಳಲ್ಲಿ ಹೊಡೆದಾಡತೊಡಗಿದ.

ಯಾವ ವಿಧದ ಶಾಂತಿಯೂ ಸಿಗದೆ, ಕುಳಿತಲ್ಲಿಂದೆದ್ದು, ಕಿಟಕಿ ಬಾಗಿಲುಗಳನ್ನು ತೆರೆದು ಆಕಾಶದ ಕಡೆಗೆ ನೋಡಿದ. ಕೋಣೆಯಲ್ಲಿ ಮಾತ್ರ ಕತ್ತಲೆ ಇದ್ದುದಲ್ಲ, ಹೊರಗೂ ಪಸರಿಸಿತ್ತು. ಒಂದೇ ಒಂದು ನಕ್ಷತ್ರ ಕಾಣುತ್ತಿರಲಿಲ್ಲ. ಪುನಃ ಕುಳಿತು ತನ್ನ ಅಸಂಖ್ಯ ಆಲೋಚನೆಗಳ ಅಸ್ಪಷ್ಟತೆಯಿಂದ ಸ್ಪಷ್ಟತೆಯನ್ನು ತರಲು ಪ್ರಯತ್ನಿಸಿದ. ಈಗ ಜೀನ್‌ವಾಲ್‌ಜೀನ್ ಮನಸ್ಸಿನ ಪಟವನ್ನೇ ನೋಡುತ್ತಿದ್ದ; ಅದರಲ್ಲಿ ಇವನು ಹಿಂದೆ ಜೈಲಿನಲ್ಲಿದ್ದ ಸ್ಥಳ ಖಾಲಿಯಾಗಿ ತೋರಿತು; ಆ ಸ್ಥಳಕ್ಕೆ ಚೇಂಪ್‌ಮೆತ್ಯೂ ಸ್ವಲ್ಪಸ್ವಲ್ಪವಾಗಿ ಜಾರುತ್ತಿರುವುದನ್ನೂ ಕಂಡ; ಕೊನೆಗೆ ಜೀನ್‌ವಾಲ್‌ಜೀನ್ ಪ್ರಪಂಚದಿಂದ ಅದೃಶ್ಯನಾಗಿ, ಅವನಿದ್ದ ಸ್ಥಳದಲ್ಲಿ ಚೇಂಪ್‌ಮೆತ್ಯೂ ಶೃಂಖಲೆಗಳಿಂದ ಬಂಧಿತನಾಗಿ ದುಃಖಪಡುತ್ತಿರುವುದನ್ನೂ ನೋಡಿದ. ಈ ಚಿತ್ರದ ಜೊತೆಯಲ್ಲಿ ಮಾ. ಮೆಡಲೀನ್ ಮೇಯರರಾಗಿ ಮೆರೆಯುತ್ತಿರುವುದನ್ನೂ ಕಂಡ. ಪರಿಸ್ಥಿತಿ ಹೀಗಾಗುವುದು ಸರಿಯೆಂದು ತೋರುತ್ತ, ಆ ಚಿತ್ರ ಸ್ಥಿರವಾಗಲೆಂದು ಹಾರೈಸಿ ಸುಮ್ಮನೆ ಕುಳಿತಿರಲು ಪ್ರಯತ್ನಿಸಿದ.

ಆದರೆ ಬಿಷಪರಿಂದ ಅವನು ಹೊಂದಿದ್ದ ಪರಿವರ್ತನೆ, ಸಂಸ್ಕಾರ, ಅವನನ್ನು ಹಾಗೆಯೇ

ಕುಳಿತಿರಲು ಬಿಡಲಿಲ್ಲ. ಅವನ ಅಂತರಂಗ ಪ್ರತಿಭಟಿಸಿತು. ಅವನನ್ನು ತುಚ್ಛೀಕರಿಸಿತು. ಗಹಗಹಿಸಿ ನಕ್ಕಿತು. ಜೀನ್‌ವಾಲ್‌ಜೀನ್ ತನ್ನ ಸ್ವಾರ್ಥ ತಿಳಿದು ಪಶ್ಚಾತ್ತಾಪಪಡತೊಡಗಿದ. ಕೋಣೆಯಲ್ಲಿ ದೀಪ ಉರಿಸಿದ; ದೀಪದ ಬೆಳಕಿನಿಂದ ತನ್ನ ಸ್ಥಳ ಮತ್ತು ಸ್ಥಾನಗಳ ಅರಿವು ಚೆನ್ನಾಗಿ ಆಯಿತು. ಈ ಸ್ಥಿತಿಯಲ್ಲಿ ಮನಸ್ಸು ಮತ್ತೊಂದು ವಿಧದಿಂದ ತರ್ಕಿಸತೊಡಗಿತು. ಸಾಮಾನ್ಯನಲ್ಲದ ಜೇವರ್ಟನೇ ಚೇಂಪ್‌ಮೆತ್ಯೂನಲ್ಲಿ ಜೀನ್‌ವಾಲ್‌ಜೀನನನ್ನು ಕಂಡ ಮೇಲೆ ತನ್ನ ಜವಾಬ್ದಾರಿ ಏನಿದೆ? ಚೇಂಪ್‌ಮೆತ್ಯೂ ದುರದೃಷ್ಟವಂತ. ತಾನೂ ಹಾಗೆಯೇ ಅಲ್ಲವೇ? ತಮ್ಮಿಬ್ಬರ ದುರ ದೃಷ್ಟಕ್ಕೂ ದೇವರೇ ಕಾರಣನಾಗಿರುವಾಗ ಈ ಪ್ರಸಂಗದಲ್ಲಿ ತಾನು ಮಾಡತಕ್ಕದ್ದೇನಿದೆ? ವಿಧಿ ತಾನಾಗಿಯೇ ಈ ಸಂಗತಿಗಳನ್ನು ನಡೆಸಿ ಬಂದಿರುವಾಗ ತನ್ನ ಕರ್ತವ್ಯವಾದರೂ ಏನಿದೆ? ಏನೂ ಇಲ್ಲ ಎಂದು ಕೊನೆಗೆ ನಿರ್ಧರಿಸಿದ.

ಈ ನಿರ್ಧಾರವೂ ಸ್ಥಿರವಾಗಿ ನಿಲ್ಲಲಿಲ್ಲ. ಸಮುದ್ರ ಉಬ್ಬಿ ಅಲೆಗಳನ್ನೆಬ್ಬಿಸಿ, ತನ್ನ ಅಂತರಾಳ ವನ್ನು ಶೋಷಿಸಿ, ಅಲ್ಲಿ ಹುದುಗಿದ್ದ ವಸ್ತುಗಳನ್ನು ದಡಕ್ಕೆ ಎಸೆಯುವಂತೆ, ಜೀನ್‌ವಾಲ್‌ಜೀನನ ಅಂತರಂಗದಲ್ಲಿ ಸುಪ್ತವಾಗಿದ್ದ ಒಂದು ಪರಿಶುದ್ಧ ನಿರ್ಧಾರ ಇತರ ಎಲ್ಲ ತೋರ್ಕೆ ನಿರ್ಧಾರ ಗಳನ್ನೂ ನಾಶಪಡಿಸುತ್ತ, ಹೃದಯದಲ್ಲಿ ಸಹಸ್ರಾರು ಅಲೆಗಳನ್ನೆಬ್ಬಿಸಿ, ಹೃದಯವನ್ನೇ ಶೋಷಿಸಿ, ತನ್ನನ್ನು ತಾನೇ ಬಾಹ್ಯದಡಕ್ಕೆ ತಂದಿರಿಸಿಕೊಳ್ಳುತ್ತಿತ್ತು. ಇಂಥ ದಡದಲ್ಲೇ ತನ್ನ ಆಖೈರು ನಿರ್ಧಾರವೂ ಆಗತಕ್ಕದ್ದಿದೆಯೆಂಬ ಇಂಗಿತವೂ ಅವನಿಗಿತ್ತು. ಆದರೂ ಅಲೆಗಳಿಂದ ಬಾಧಿತ ನಾಗಿಯೇ ಕಷ್ಟಪಡುತ್ತಿದ್ದ.

ಈ ಕಷ್ಟಗಳಿಂದಲೇ ಇಂಥ ತರ್ಕಸರಣಿ ಉತ್ಪನ್ನವಾಯಿತು. ಅವನನ್ನು ಅವನೇ ಪ್ರಶ್ನಿಸತೊಡ ಗಿದ: ಚೇಂಪ್‌ಮೆತ್ಯೂ ತಾನಾಗಿಯೇ ಜೈಲಿಗೆ ಹೋಗುತ್ತಿದ್ದಾಗ, ಯಾವ ಸಂಬಂಧವೂ ಇಲ್ಲದೇ ಇಷ್ಟು ದೂರದಲ್ಲಿರುವ ತನ್ನ ಕರ್ತವ್ಯಲೋಪವಾಗುವುದು ತಾನೇ ಹೇಗೆ? ಈ ಪ್ರಶ್ನೆಗೆ ಉತ್ತರವೂ ಸಿಕ್ಕಿತು: ಒಬ್ಬ ನಿರಪರಾಧಿಯ ಸ್ವಾತಂತ್ರ್ಯವನ್ನು ಜೀನ್‌ವಾಲ್‌ಜೀನನೇ ದರೋಡೆ ಮಾಡಿದ ಹಾಗಾಗುವುದಿಲ್ಲವೇ? ಮತ್ತು ಚೇಂಪ್‌ಮೆತ್ಯೂನ ಅಪರಾಧ ಅಷ್ಟೊಂದು ಕಠೋರತರದ್ದಾಗಿ ತೋರುವುದೂ ಅವನು ಜೀನ್‌ವಾಲ್‌ಜೀನ್ ಎಂಬ (ತನ್ನ ಕಾರಣದ) ಭ್ರಮೆಯಿಂದಲ್ಲವೇ? ಆದ್ದರಿಂದ ತನ್ನ ದುಷ್ಪ್ರಭಾವ ನಿರಪರಾಧಿಯ ಮೇಲೆ ಬೀಳುವಾಗ ತನ್ನ ಕಡೆಯ ಕರ್ತವ್ಯ ಏನೂ ಇಲ್ಲವೆನ್ನುವುದು ತಪ್ಪಲ್ಲವೇ? ಬಿಷಪರ ಮಾತುಗಳೂ ಇದೇ ಸಂದರ್ಭದಲ್ಲಿ ಸ್ಪಷ್ಟವಾಗಿ ಗೋಚರಿಸಿದುವು. ತಾನು ಆತ್ಮಪರಿಶುದ್ಧತೆ ಹೊಂದಬೇಕೆಂದಲ್ಲವೇ ಬಿಷಪರು ಬೋಧಿಸಿದ್ದು? ಈಗ ಬಿಷಪರು ದೇಹಬಿಟ್ಟಿದ್ದುದರಿಂದ ಅವರು ಮೊದಲಿಗಿಂತಲೂ ಹೆಚ್ಚಾಗಿ ತನ್ನ ಸಮೀಪವಿದ್ದು ತನ್ನನ್ನು ನೋಡುತ್ತಿರಬೇಕಲ್ಲವೇ? ಜೀನ್‌ವಾಲ್‌ಜೀನ್ ಧರಿಸಿದ್ದ ಮಾ. ಮೆಡಲೀನರ ಮೊಗ ವಾಡವನ್ನು ಜನ ಕಂಡು ಮೆಚ್ಚುತ್ತಿದ್ದರೂ ಬಿಷಪರು ಮಾತ್ರ ಮೊಗವಾಡದ ಹಿಂದಿದ್ದ ಜೀನ್ ವಾಲ್‌ಜೀನನ ಅಂತರಂಗವನ್ನೇ ನೋಡಿ ಶಪಿಸಿರಲಾರರೆ? ಈ ತರ್ಕಗಳಿಂದ ಬಿಷಪರ ಅಭಿಮತ ದಂತೆಯೇ ತಾನು ನಡೆಯುವುದಾಗಿ ಜೀನ್‌ವಾಲ್‌ಜೀನ್ ನಿಶ್ಚೈಸಿದ.

ಹೀಗೆ ಚೇಂಪ್‌ಮೆತ್ಯೂನ ರಕ್ಷಣೆಗಾಗಿ ತಾನು ಹೋಗಬೇಕೆಂದು ನಿಶ್ಚೈಸಿ, ಆ ಕುರಿತು ಕೆಲವು ಕಾರ್ಯಗಳನ್ನು ಮಾಡತೊಡಗಿದ. ಬಡವರಿಂದ ತನಗೆ ಬರಬೇಕಾಗಿದ್ದ ಸಾಲಗಳ ಲೆಕ್ಕಪತ್ರ ಗಳನ್ನೆಲ್ಲ ಸುಟ್ಟುಹಾಕಿದ. ಲೆಫಿಟ್ಟೆ ಬ್ಯಾಂಕಿಗೆ ಒಂದು ಪತ್ರ ಬರೆದು ತನ್ನ ಜೇಬಿನಲ್ಲಿಟ್ಟುಕೊಂಡ. ಅನಂತರ ಕೋಣೆಯಲ್ಲಿ ಅತ್ತಿತ್ತ ತಿರುಗಾಡತೊಡಗಿದ. ಅವನ ಮುಂದಿನ ಕರ್ತವ್ಯ ಗೋಡೆಯಲ್ಲಿ ಲಿಖಿತವಾಗಿದ್ದಷ್ಟು ಸ್ಪಷ್ಟವಾಗಿ ಅವನಿಗೆ ಗೋಚರಿಸುತ್ತಿತ್ತು. ಬಿಷಪ್ ತನಗೆ ಅನುಗ್ರಹಿಸಿದ್ದ

ಸಜ್ಜೀವನದ ಸಾರ್ಥಕ್ಯ ಇಂದು ಚೇಂಪ್‌ಮೆತ್ಯೂನ ರಕ್ಷಣೆಯಲ್ಲಿ ಕಾಣಬೇಕೆಂದು ಇತ್ಯರ್ಥಿಸಿದ.

ಆದರೂ ಮನಸ್ಸು ಕೂಡಲೇ ಚಲಿಸಿತು. ಮತ್ತೊಂದು ತರ್ಕ ಮೂಡಿಬಂತು: ಸೇಬುಹಣ್ಣನ್ನು ಕದ್ದು ಜೈಲಿಗೆ ಹೋಗುವವನ ರಕ್ಷಣೆಯ ಭಾರ ತನಗೇಕೆ? ಆದರೆ, ಅದಕ್ಕೆ ಉತ್ತರವಾಗಿ, ಜರ್ವಾಯಿಸನಿಂದ ಹಣಕಿತ್ತ ಅಪರಾಧಕ್ಕೆ ಚೇಂಪ್‌ಮೆತ್ಯೂ ಜವಾಬ್ದಾರನಾಗುವುದು ಹೇಗೆ? ಅಲ್ಲದೆ, ಜೀನ್‌ವಾಲ್‌ಜೀನನ ಹೆಸರಿಗೆ ಅಂಟಿಕೊಂಡಿರುವ ಅಪಾರ ಹೊರೆಯನ್ನು ಜೀನ್‌ವಾಲ್‌ಜೀನನೇ ಹೊರಬೇಕಲ್ಲದೆ ಚೇಂಪ್‌ಮೆತ್ಯೂ ಏಕೆ ಹೊರಬೇಕು? ಈ ರೀತಿ ಪ್ರಶ್ನೋತ್ತರಗಳು ಮೂಡಿ, ಕೊನೆಗೆ, ತಾನೇ ಎಲ್ಲ ಜವಾಬ್ದಾರಿಯನ್ನೂ ಹೊರುವುದು ನ್ಯಾಯವೆಂದು ಸಿದ್ಧಾಂತ ಮಾಡಿದ. ಮಾ. ಮೆಡಲೀನ್ ಮೇಯರರ ಸದ್ಗುಣ, ಪರೋಪಕಾರ, ಆದರ್ಶಜೀವನ ಇವೆಲ್ಲ ತನ್ನ ಸಹಾಯಕ್ಕೆ ಬರಲಾರವೇ ಎಂದು ಅವನು ಒಮ್ಮೆ ಗ್ರಹಿಸಿದ. ಆದರೆ, ಕಾನೂನಿನ ಅಂಧತೆ, ಯಾಂತ್ರಿಕತೆಯನ್ನು ಅವನು ತಿಳಿದಿದ್ದುದರಿಂದ, ತಾನೊಮ್ಮೆ ಅವುಗಳಲ್ಲಿ ಸಿಕ್ಕಿದರೆ ತನ್ನ ಉಳಿಗಾಲವೇ ಇಲ್ಲವೆಂದು ಭಾವಿಸಿದ.

ಇಷ್ಟರಲ್ಲಿ ಮಧ್ಯರಾತ್ರಿಯ ಗಂಟೆ ಬಾರಿಸಿದುದು ಇಗರ್ಜಿಗಳಿಂದಲೂ ಟೌನ್‌ಹಾಲಿನಿಂದಲೂ ಕೇಳಿಬಂತು. ರಾತ್ರಿ ಮುಂದುವರಿದಂತೆ ಚಳಿ ಹೆಚ್ಚಾಗುತ್ತ ಬಂದಿದ್ದುದನ್ನೂ ತಿಳಿದ. ಅಗ್ಗಿಷ್ಟಿಕೆಯಲ್ಲಿ ಬೆಂಕಿ ಉರಿಸಿದ. ಈ ಕಾರ್ಯಗಳಲ್ಲಿ ಆಸಕ್ತನಾದ ಹಾಗೆಯೇ ಅವನಿಗೆ ಫ್ಯಾಂಟೈನಳ ಜ್ಞಾಪಕ ಹಠಾತ್ತನೆ ಬಂದಿತು.

ಆಗ ಅವನಷ್ಟಕ್ಕೇ ಮನಸ್ಸಿನಲ್ಲೇ ಅಂದುಕೊಂಡ, "ಸ್ವಲ್ಪ ನಿಲ್ಲು, ಇದೊಂದು ಹೊಸ ಸಂದರ್ಭ, ಈ ವರೆಗೆ ನೀನು ನಿನ್ನ ಆತ್ಮ, ನಿನ್ನ ಕೀರ್ತಿ, ನಿನ್ನ ಕರ್ತವ್ಯ, ಇಂಥ 'ನಿನ್ನ' ವಿಷಯವನ್ನೇ ಮುಖ್ಯವಾಗಿಟ್ಟುಕೊಂಡು ಚೇಂಪ್‌ಮೆತ್ಯೂನ ಉದ್ಧಾರಕ್ಕೆ ಹೊರಟಿರುವೆಯಷ್ಟೆ, ಆದರೆ ಇವೆಲ್ಲವೂ 'ನಾನು' ಎಂಬ ಅಹಂಭಾವದಿಂದ ಹೊರಟವೆಂದು ಕಾಣಲಿಲ್ಲವೇನು? ಇದೂ ಸ್ವಾರ್ಥವಲ್ಲವೇ? ಹಾಳು ಬಿದ್ದಿದ್ದ ಊರನ್ನು ಉದ್ಧರಿಸಿ, ಬಡವರಿಗೆ ವೃತ್ತಿ ಕಲ್ಪಿಸಿಕೊಟ್ಟು, ದಾರಿದ್ರ್ಯ ಅವಿದ್ಯೆ, ಕಳ್ಳತನ ವ್ಯಭಿಚಾರಗಳನ್ನು ನಿಲ್ಲಿಸಿ, ಈ ಊರಿನ ಏಕೈಕ ಮುಖಂಡನಾಗಿರುವ ನೀನು ಜೈಲನ್ನು ಸೇರಿದರೆ, ಊರಿನ, ಈ ಕೆಲಸಗಾರರ ಇತರ ನಿನ್ನ ಆಶ್ರಯದಲ್ಲಿರುವ ಅನೇಕರ ಗತಿಯೇನು? ಅನಾಥೆಯಾದ ಫ್ಯಾಂಟೈನ್ ಸಾಯುವಳು; ಕೋಸೆಟ್ಟೆ ನಿರ್ಗತಿಕಳಾಗುವಳು; ಎಂ— ಪಟ್ಟಣದ ಆಧಾರಸ್ತಂಭವಾಗಿ ಇನ್ನು ಯಾರಿದ್ದಾರೆ, ನಿನ್ನ ಹೊರತು! ಚೇಂಪ್‌ಮೆತ್ಯೂ ಕಳ್ಳ, ವೃದ್ಧ, ಇನ್ನು ಹೆಚ್ಚುವರ್ಷ ಬದುಕಲಾರದವ. ಅವನು ಕೈದಿಯಾಗಿ ಜೈಲಿಗೆ ಹೋಗದೆ ಉಳಿದರೂ ಅವನ ಜೀವನದ ಸುಖ ಒಬ್ಬ ಕೈದಿಯದಕ್ಕಿಂತ ಹೆಚ್ಚು ಇರಲಾರದು. ಸುಖವೇನೆಂಬುದನ್ನೇ ಅರಿಯದ, ಮಂದಬುದ್ಧಿಯಾದ ಒಬ್ಬ ಕಳ್ಳನಿಗಾಗಿ ಊರು, ಕಾರ್ಖಾನೆ, ಬಡವರು, ಸಮಾಜ ಇವೆಲ್ಲವನ್ನೂ ಮರೆಯುವ ಅಗತ್ಯವಿದೆಯೇ? ವಿಧಿಯ ನಿಯಮದಂತೆ ಕಾರ್ಯಗಳು ಜರಗಲಿ. ನೀನಾಗಿಯೇ ಏನೂ ಮಾಡುವ ಅಗತ್ಯವಿಲ್ಲ."

ಹೀಗೆಲ್ಲ ಮನಸ್ಸಿನಲ್ಲೇ ಅಂದುಕೊಂಡು ಕಪಾಟಿನಲ್ಲಿ ಅಡಗಿಸಿಟ್ಟಿದ್ದ ತನ್ನ ಹಳೆಕೋಟು, ಟೊಪ್ಪಿ, ಇಜಾರು, ಚೀಲ ದೊಣ್ಣೆಗಳನ್ನು ಬೆಂಕಿಯಲ್ಲಿ ಹಾಕಿ ಸುಟ್ಟ. ಜೀನ್‌ವಾಲ್‌ಜೀನನ ಕುರಿತಾದ ಎಲ್ಲ ಕುರುಹುಗಳನ್ನೂ ನಾಶಪಡಿಸಿ, ಮಾ. ಮೆಡಲೀನರಾಗಿ ಮಾತ್ರ ಉಳಿಯಬೇಕೆಂದು ಹೀಗೆ ಮಾಡಿದ. ಆಗ ಅವನ ಹಳೆ ಅಂಗಿಯೊಳಗಿದ್ದ ಜರ್ವಾಯಿಸನ ಎರಡು ಫ್ರ್ಯಾಂಕ್ ನಾಣ್ಯ ಬೆಂಕಿಯಿಂದ ಜಾರಿ, ನೆಲದ ಮೇಲೆ ಬಿದ್ದು ಹೊಳೆಯಿತು. ಅಲ್ಲದೆ, ಬಿಷಪರ ಬೆಳ್ಳಿ ದೀಪಗಳೆರಡೂ ಬೆಂಕಿಯ ಬೆಳಕಿನಲ್ಲಿ ಹೊಳೆದು ಬೆಳಗಿದುವು. ಆ ದೀಪಗಳನ್ನು ಕಂಡು ಚಕಿತನಾಗಿ, ಆದರೂ, ಆ

ಮೊದಲಿನ ಉದ್ವಿಗ್ನತೆಯಿಂದ ಶಾಂತನಾಗದೆ, ಅವನ್ನೂ ಬೆಂಕಿಗೆ ಎಸೆದು ಕುಳಿತ.

ಹೀಗೆ ಆ ಬೆಳ್ಳಿ ದೀಪಗಳನ್ನು ಅವನು ಬೆಂಕಿಗೆ ಹಾಕಿದುದೇ ತಡ, ಅವನ ಹೃದಯದಿಂದಲೇ ಎದ್ದುಬರುತ್ತಿದ್ದ ಒಂದು ಸ್ವರ ಅವನನ್ನು ಕರೆಯುತ್ತ ಸ್ತುತಿ ನಿಂದೆಯಾಗಿ ಅನೇಕ ಮಾತುಗಳನ್ನು ಹೇಳತೊಡಗಿತು. ಆ ಆಂತರಿಕವಾಣಿ ನುಡಿಯಿತು, "ಸರಿ! ಒಳ್ಳೇ ಕೆಲಸ ಮಾಡಿದೆ! ಸುಡು—ಬಿಷಪರ ಕುರುಹುಗಳನ್ನು ಸುಟ್ಟುಬಿಡು. ಜೊತೆಯಲ್ಲೇ ಚೇಂಪ್‌ಮೆತ್ಯೂನನ್ನೂ ಸುಟ್ಟುಬಿಡು. ನಿರಪರಾಧಿ, ಅನಾಥ, ವೃದ್ಧ ಇಂಥವನಿಗೆ ನಿನ್ನ ಬಟ್ಟೆ, ನಿನ್ನ ಚರಿತ್ರೆ, ಹೆಸರು ಇವನ್ನೆಲ್ಲ ಕೊಟ್ಟು, ನಿನ್ನ ಪಾಪಗಳನ್ನು ಅವನಿಗೆ ಹೊದಿಸಿ, ನೀನು ಪುನೀತನಾಗಿ, ಪುಣ್ಯವಂತ, ಧನವಂತ, ಧರ್ಮಿಷ್ಠ, ದೇಶಪ್ರೇಮಿ, ಜನನಾಯಕ, ನಗರಾಧಿಕಾರಿ ಎಂದೆನಿಸಿಕೊಂಡು ಸಹಸ್ರಾರು ಜನರಿಂದ ಹೊಗಳಿಸಿಕೊಂಡು, ಹರಸಿಕೊಂಡು, ಸುಖಸಂತೋಷ ಅನುಭವಿಸುತ್ತ ಬಾಳಿಕೊಂಡಿರು! ತನ್ನ ಅಪರಾಧವೇ ಏನೆಂದರಿಯದ ಹೆಡ್ಡ, ಹೇಡಿ, ವೃದ್ಧ ಸಂಕೋಲೆಗಳನ್ನು ಹೊತ್ತು, ಎಡೆಬಿಡದೆ ದುಡಿದು ನಿಟ್ಟುಸಿರುಬಿಡುತ್ತ, ಕಣ್ಣೀರು, ರಕ್ತ, ಬೆವರನ್ನು ಸುರಿಸಿ, ಕ್ರಮೇಣವಾಗಿ ನಶಿಸಿ ನಿನ್ನ ಹೆಸರನ್ನು ಸ್ಥಿರಗೊಳಿಸಲಿ! ಹೀಗಲ್ಲವೇ ನಿನ್ನ ತರ್ಕ? ಈ ವಿಷಯ ಗೊತ್ತಿದೆಯೇ ನಿನಗೆ : ಸಹಸ್ರಾರು ಜನಗಳ ಈ ಆಶೀರ್ವಾದ ಹೊಗಳಿಕೆಗಳೆಲ್ಲ ದೈವಸಾನ್ನಿಧ್ಯದಲ್ಲಿ ಕಳಚಿ ಮಾಯವಾಗಿ, ನಿನ್ನ ಕೊಳಕು ಮಾತ್ರ ಕರಾಳವಾಗಿ ಬೆಳೆದು, ನಿನ್ನನ್ನು ಶಾಶ್ವತವಾದ ಪಾಪಿಯಾಗಿ ಮಾಡುವುವೆಂದು? ಓ! ಬಲು ಚೆನ್ನಾಗಿ ಮಾಡಿದೆ!"

ಈ ಮಾತುಗಳನ್ನು ಕೇಳುತ್ತಿದ್ದ ಹಾಗೆಯೇ ಜೀನ್‌ವಾಲ್‌ಜೀನನ ಮೈಯೆಲ್ಲ ಬೆವರಿತು. ಅಸ್ಪಷ್ಟವಾಗಿ ಪ್ರಾರಂಭಿಸಿದ್ದ ವಾಣಿ ಕೊನೆಕೊನೆಗೆ ಬಲು ಭಯಂಕರವಾದ ಸ್ಪಷ್ಟತೆಯಿಂದಲೇ ಕೇಳತೊಡಗಿತು. ತನ್ನ ಕೋಣೆಯೊಳಗೇ ಯಾರೋ ಇರಬೇಕೆಂದು ಗ್ರಹಿಸಿ, ಹೆದರಿ, "ಯಾರದು, ಇಲ್ಲಿ?" ಎಂದು ಗಟ್ಟಿಯಾಗಿ ಕೂಗಿ ವಿಚಾರಿಸಿದ. ತನ್ನ ಸ್ವರವನ್ನೇ ಕೇಳಿ ಪರಿಸ್ಥಿತಿಯ ಅರಿವಾಗಿ ಹುಚ್ಚನಂತೆ ನಕ್ಕ. ಬೆಂಕಿಯಲ್ಲಿದ್ದ ದೀಪಗಳನ್ನು ಹಠಾತ್ತನೆ ಕಂಡ. ಅವೆರಡನ್ನೂ ಹೆಕ್ಕಿ ತೆಗೆದು ಬದಿಯಲ್ಲಿಟ್ಟ. ಅನಂತರ ಒಮ್ಮೆ ಸ್ವಲ್ಪ ಸಮಾಧಾನ ತೋರಿ ಕೋಣೆಯಲ್ಲೇ ತಿರುಗಾಡತೊಡಗಿದ.

ಹೀಗೆ ತಿರುಗಾಡುವಾಗಲೂ ಮನಸ್ಸು ಅವನನ್ನು ಬಿಡದೆ ಹಿಂಸಿಸುತ್ತಿತ್ತು: ಆರಾಸಿಗೆ ತಾನು ಹೋಗಬೇಕೇ, ಬೇಡವೇ ಪ್ರಶ್ನೆ ಅವನೆದುರಿಗೆ ಎದ್ದು ನಿಲ್ಲುತ್ತಿತ್ತು. ಅವನ ಇಂದಿನ ಜೀವನವನ್ನು ಮುಂದೆ ಅವನು ಕೈದಿಯಾಗಿ ಇರುವ ಕಾಲದ ಜೀವನದ ಎದುರು ಹೋಲಿಸಿ ನೋಡಿದ; ಲೌಕಿಕ ಸ್ವರ್ಗದಲ್ಲಿ ಅಂತರಂಗದ ರಾಕ್ಷಸನಾಗಿ ಬಾಳಬೇಕೇ, ಅಥವಾ ಲೌಕಿಕ ನರಕದಲ್ಲಿ ಅಂತರಂಗದ ಸ್ವರ್ಗಜೀವನವನ್ನು ಅನುಭವಿಸಬೇಕೇ ಎಂದು ತರ್ಕಿಸಿ ನೋಡಿದ.

ಎಲ್ಲ ಪರಿಸ್ಥಿತಿಗಳು ಸಾಧ್ಯವೇ ನಿಜವೇ ಎಂಬಿತ್ಯಾದಿಯಾಗಿ ಯೋಚಿಸಿ, ತರ್ಕಿಸಿ, ಒಂದು ವಿಧದ ಸಿದ್ಧಾಂತಕ್ಕೆ ಬರುತ್ತಿದ್ದಂತೆ ತೋರುವಾಗಲೇ, ಅದರಿಂದ ಜಾರಿಬೀಳುತ್ತ ದೇಹ ಮನಸ್ಸಿನಲ್ಲೆಲ್ಲ ಬಳಲಿ, ಬೆಂಡಾಗಿ ನಿಲ್ಲಲೂ ಶಕ್ತಿಯಿಲ್ಲದೆ, ನೆಲದಲ್ಲಿ ತತ್ತರಿಸಿ ಕುಳಿತು ದುಃಖಿಸಿದ—ದುಃಖಿಸಿ, ಬೆಳಕಿಲ್ಲದ ಬೆಂಕಿಯಲ್ಲಿ ಬೆಂದ ಜೀನ್‌ವಾಲ್‌ಜೀನ್.

೪. ನಿದ್ರೆಯಲ್ಲಿಯ ಭಯಂಕರ ಅನುಭವ

ರಾತ್ರಿ ಗಂಟೆ ಮೂರಾಗುವ ಸಮಯಕ್ಕೆ ಜೀನ್‌ವಾಲ್‌ಜೀನನಿಗೆ ನಿದ್ರೆಬಂತು. ನಿದ್ರೆಯೂ ಸುಖಕರವಾಗಿರಲಿಲ್ಲ. ತುಂಬ ಸ್ವಪ್ನಗಳನ್ನು ಕಂಡ. ಒಂದು ಸ್ವಪ್ನವನ್ನು ಅವನೇ ಬರೆದಿಟ್ಟಿರು

ತ್ತಾನೆ. ಅದನ್ನೇ ನಾವು ಇಲ್ಲಿ ಓದುಗರ ಎದುರು ಇಡುತ್ತೇವೆ:

"ಮರಗಿಡಗಳು ವಿಶೇಷವಾಗಿ ಬೆಳೆದಿರದಿದ್ದ, ಮತ್ತು ಎಲ್ಲೂ ಹುಲ್ಲು ಮೊಳೆತಿರದಿದ್ದ, ಮಣ್ಣು ಬಣ್ಣದ ವಿಶಾಲ ಮೈದಾನದಲ್ಲಿ ನಾನೊಬ್ಬನ ಜೊತೆ ಪಯಣಿಸಿದೆ. ಜೊತೆಗಾರ ಬಾಲ್ಯದ ನನ್ನ ಸಹೋದರನೆಂದು ಅವನೇ ತಿಳಿಸಿದ. ಸ್ವಲ್ಪ ದೂರ ನಡೆಯುತ್ತಿದ್ದ ಹಾಗೆಯೇ ಅವನು ಕಾಣದೇ ಹೋದ. ಆ ಸಮಯದಲ್ಲೇ ನಗ್ನನಾಗಿದ್ದ ಒಬ್ಬ ಕುದುರೆ ಸವಾರ ಮಣ್ಣುಬಣ್ಣದ ಕುದುರೆ ಏರಿ ನನಗೆ ಎದುರಾಗಿ ಬರುತ್ತಿದ್ದ. ಅವನ ತಲೆಬುರುಡೆಯ ಅಸ್ಥಿ ನನಗೆ ಪೂರ್ಣವಾಗಿ ಕಾಣುತ್ತಿತ್ತು; ಜೊತೆಗೆ ಅವನ ಕೆನ್ನೆಗಳೆರಡರಲ್ಲಿ ರಕ್ತನಾಳಗಳನ್ನೂ ಕಂಡೆ. ಅವನ ಕೈಯಲ್ಲಿ ಬೆತ್ತದಂತೆ ಬಗ್ಗುವ, ಆದರೆ ಸೀಸದಂತೆ ಭಾರವಾದ, ಒಂದು ಕೋಲು ಇತ್ತು. ಅವನು ನನ್ನನ್ನೇ ನೋಡುತ್ತ ಮೌನ ವಾಗಿದ್ದುಕೊಂಡೇ ದಾಟಿದ. ನಾನು ಮುಂದುವರಿಯುತ್ತ ಒಂದು ಗುಹೆಯೊಳಗೆ ನುಗ್ಗಿದೆ. ಗುಹೆ ಯಲ್ಲೂ ರಸ್ತೆಯಿದ್ದು, ಆ ರಸ್ತೆಯಲ್ಲೇ ಮುಂದುವರಿದು, ಒಂದು ನಿರ್ಜನ ಪ್ರದೇಶ ತಲಪಿದೆ. ಆ ಪ್ರದೇಶವೆಲ್ಲ ಮಣ್ಣಿನ ಬಣ್ಣದಲ್ಲಿತ್ತು. ದೂರದೂರಕ್ಕೆ ಮರಗಳಿದ್ದುವು. ಹುಲ್ಲಿರಲಿಲ್ಲ. ಪ್ರತಿ ಮರದಡಿಯಲ್ಲೂ ಒಬ್ಬೊಬ್ಬ ಮನುಷ್ಯ ನಿಂತಿದ್ದ. ಅವರನ್ನು ನಾನು ಮಾತಾಡಿಸಿ ನೋಡಿದಾಗ ಯಾರೂ ಉತ್ತರವೀಯಲಿಲ್ಲ. ಎಲ್ಲರೂ ನನ್ನನ್ನು ನೋಡುತ್ತಿದ್ದರಾದರೂ ಪ್ರತಿಮೆಗಳಂತೆ ಅಚಲ ರಾಗಿ ನಿಂತಿದ್ದರು. ಆ ಪ್ರದೇಶವೆಲ್ಲ ಹಾಳುಬಿದ್ದಿದ್ದಂತೆ ದುಃಖಮಯವಾಗಿ ತೋರಿತು. ಬಲು ದೂರದಲ್ಲಿ ಜನಸಮೂಹವೊಂದು ನಾನಿದ್ದ ಕಡೆಗೆ ಮೆರವಣಿಗೆಯಲ್ಲಿ ಬರುತ್ತಿತ್ತು. ಅಷ್ಟೊಂದು ಜನ ಜೊತೆಸೇರಿ ನಡೆದುಬರುತ್ತಿದ್ದರೂ ಕಾಲ ಸಪ್ಪಳವಾಗಲೀ ಮಾತಿನ ಶಬ್ದವಾಗಲೀ ಕೇಳಿಸುತ್ತಿರ ಲಿಲ್ಲ. ಆ ಪ್ರದೇಶದಲ್ಲೆಲ್ಲೂ ಸೂರ್ಯನಾಗಲೀ ಚಂದ್ರನಾಗಲೀ ನಕ್ಷತ್ರಗಳಾಗಲೀ ಬೆಳಕಿಗೆ ಆಧಾರವಾದ ಯಾವುದೇ ಒಂದು ತೇಜೋರಾಶಿಯಾಗಲೀ ಇರಲಿಲ್ಲ. ಆದರೂ ಆ ಪ್ರದೇಶ ದಲ್ಲೆಲ್ಲ ದುಃಖವನ್ನು ಪ್ರಚೋದಿಸುತ್ತಿದ್ದ ಬೆಳಕು ಮಸಕಾಗಿ, ಭಯಪ್ರದವಾಗಿ ಹರಡಿತ್ತು. ಜನ ಸಮೂಹದಲ್ಲಿದ್ದವನೊಬ್ಬ ನನ್ನನ್ನು ಕೇಳಿದ, 'ನೀನೆತ್ತ ಸಾಗುತ್ತಿರುವೆ? ನೀನು ಸತ್ತು ಬಲುಕಾಲ ವಾಗಿದೆಯೆಂದು ಗೊತ್ತಿಲ್ಲವೆ?'

"ಅವನಿಗೆ ಉತ್ತರವೀಯಲೆಂದು ನಾನು ಬಾಯಿ ತೆರೆಯುವಾಗ ಎಚ್ಚರವಾಯಿತು. ಭೀತಿ ಯುತವಾದ ಈ ಸ್ವಪ್ನದ ಪ್ರಭಾವ ಎಚ್ಚತ್ತ ಬಳಿಕವೂ ನನ್ನನ್ನು ಆವರಿಸಿತ್ತು."

* * *

ಜೀನ್‌ವಾಲ್‌ಜೀನ್ ತಾನು ಪ್ರಪಂಚದಲ್ಲಿರುವುದಾಗಿ ನಿಶ್ಚೈಸಿಕೊಳ್ಳಲೋಸ್ಕರ ಕಿಟಕಿಯಿಂದ ಹೊರಗೆ ನೋಡಿದ. ಹೊರಗೆಲ್ಲ ಕಡುಕತ್ತಲೆಯೇ ಇತ್ತು. ಒಂದೇ ಮಟ್ಟದಲ್ಲಿ ಸ್ವಲ್ಪ ದೂರದ ಲ್ಲಿದ್ದ ಎರಡು ಬೆಳಕುಗಳು ಮಾತ್ರ ಮಂಜಿನಲ್ಲಿ ಉದ್ದವಾಗುತ್ತಲೂ ಗಿಡ್ಡವಾಗುತ್ತಲೂ ಕಾಣಿಸು ತ್ತಿದ್ದುವು. ಆಗಲೇ ಹೊರಗಿನಿಂದ ಮನೆಯ ಆಳು ಜೀನ್‌ವಾಲ್‌ಜೀನನ ಕೋಣೆಯ ಕದ ತಟ್ಟಿದ. ಜೀನ್‌ವಾಲ್‌ಜೀನ್ ಕೇಳಿದ "ಯಾರದು?"

"ನಾಲ್ಕು ಗಂಟೆ ಆಯ್ತು ಸರ್."

"ಆದರೇನು?"

"ಬಂಡಿ ಬಂದಿದೆ."

"ಏಕೆ?"

"ನೀವೇ ಹೇಳಿದ್ದೀರಂತೆ—ಮಾ. ಸ್ಕಾಫ್ಲೇರ ಬಂಡಿ, ಸರ್."

"ಸರಿ, ಈಗಲೇ ಬಂದೆ."

೫. ವಿಘ್ನಗಳು

ಬೆಳಗಿನ ಜಾವದಲ್ಲಿ ಎಂ— ಪಟ್ಟಣಕ್ಕೆ ಬರುತ್ತಿದ್ದ ಟಪ್ಪಾಲು ಬಂಡಿ ಎಂ— ಕಡೆಯಿಂದ ಹೋಗುತ್ತಿದ್ದ ಒಂದು ಬಂಡಿಗೆ ರಸ್ತೆಯ ಒಂದು ತಿರುವಿನಲ್ಲಿ ಸ್ವಲ್ಪ ಢಿಕ್ಕಿ ಹೊಡೆಯಿತು. ಟಪ್ಪಾಲು ಬಂಡಿಯವ ಈ ಪಟ್ಟಣದಿಂದ ಹೋಗುತ್ತಿದ್ದ ಬಂಡಿಯವನನ್ನು ಕರೆದು ಗದರಿಸಿದರೂ ನಿಲ್ಲದೆ ಆ ಬಂಡಿ ಓಡುತ್ತಿತ್ತು. "ಬಹಳ ಅವಸರದಿಂದ ಓಡುತ್ತಾನೆ" ಎಂದಂದುಕೊಂಡ ಟಪ್ಪಾಲು ಬಂಡಿಯವ.

ಈ ಬಂಡಿಯಲ್ಲಿ ಕುಳಿತುಹೋಗುತ್ತಿದ್ದವನ ಮನಸ್ಸು ಅಸ್ತವ್ಯಸ್ತವಾಗಿತ್ತು. ಅವನ ಮನಃಸ್ಥಿತಿಯನ್ನು ಯಾರೇ ತಿಳಿದಿದ್ದರೂ ಅವನನ್ನು ಕುರಿತು ಕನಿಕರಪಡುವಂತಿತ್ತು. ಬೆಳಗಾಗುವ ಮೊದಲಿನ ಅರೆಕತ್ತಲಲ್ಲಿ ರಸ್ತೆ ಕರೆಯ ಮನೆಗಳನ್ನೂ ಮರಗಳನ್ನೂ ದಾಟುವಾಗ ತಾನು ಮುಂದೆಂದಾದರೂ ಅಲ್ಲೇ ಪುನಃ ಬರುವುದಿದೆಯೇ ಎಂದು ಸಂಶಯದಿಂದ ಚಿಂತಿಸುತ್ತಿದ್ದ. ಒಂಟಿ ಮನೆಗಳು ಹಿಮದಲ್ಲಿ ಮುಳುಗಿ ಮಲಗಿ ನಿದ್ರಿಸುತ್ತಿದ್ದಂತೆ, ನಿಶ್ಶಬ್ದವಾಗಿ ದೂರದಿಂದ ತೋರಿ, ಹತ್ತಿರ ಬಂದು, ಹಿಂದೆ ಸರಿಯುವಾಗ ಅವುಗಳೊಳಗೆ ಮಲಗಿದ್ದವರೆಲ್ಲ ಹೇಗೆ ಇರಬಹುದು, ಚಿಕ್ಕ ಮಕ್ಕಳಾದರೂ ಬೆಚ್ಚಗೆ ಮಲಗಿರಬಹುದೇ, ಆ ಮನೆಯಲ್ಲೇ, ಅವರ ಜೊತೆ ಎಷ್ಟೊಂದು ದುಃಖ ತಾತ್ಕಾಲಿಕವಾಗಿ ಅಡಗಿ ಕುಳಿತಿರಬಹುದು ಎಂದು ಮೊದಲಾಗಿ ಗ್ರಹಿಸುತ್ತಿದ್ದ. ಪ್ರಪಂಚಕ್ಕೆಲ್ಲ ನವಚೈತನ್ಯವನ್ನೂ ಹೊಸಹುರುಪನ್ನೂ ಕೊಡುತ್ತಿದ್ದ ಸೂರ್ಯೋದಯ ಈ ದಾರಿಗನಿಗೆ ಹೊಸ ನಷ್ಟವನ್ನೂ ಹೊಸ ದುಃಖವನ್ನೂ ಒದಗಿಸುತ್ತಿತ್ತು. ದಾರಿಗನ ದೃಷ್ಟಿಯಲ್ಲಿ ತನ್ನ ಆಯುಸ್ಸಿನ ಹೊಸತೊಂದು ದಿನ ದಿಗಂತದಲ್ಲಿ ಎದ್ದು, ಧಾವಿಸಿಬಂದು, ತನ್ನ ಸಮೇತ ಮುಂದಿನ ದುಃಖಕ್ಕೆ ದುಮುಕುವ ಚಿಹ್ನೆಯೇ ಈ ಸೂರ್ಯೋದಯವಾಗಿತ್ತು. ಆರಾಸಿನ ಕೋರ್ಟಿಗೆ ಹೋಗಲು ಹಿಂಜರಿಯುತ್ತಿದ್ದ ಒಂದು ಮನಸ್ಸನ್ನು ಧರ್ಮನಿಷ್ಠೆಯ ಮತ್ತೊಂದು ಮನಸ್ಸು ಹಿಂಗಟ್ಟು ಮುರಿಗಟ್ಟು ಕಟ್ಟಿ, ಮೂಲೆಗೊತ್ತಿ, ಇವನನ್ನು ಕೋರ್ಟು ಕಡೆಗೆ ಎಳೆದೊಯ್ಯುತ್ತಿತ್ತು. ಬಂಡಿಯ ಪ್ರಯಾಣಿಕ ಜೀನ್‌ವಾಲ್‌ಜೀನನೆಂದು ಹೇಳುವ ಆವಶ್ಯಕತೆಯಿಲ್ಲವಷ್ಟೆ?

ಹೆಸ್ಡಿನ್ನಿಗೆ ತಲಪುವಾಗ ಪೂರ್ಣ ಬೆಳಗಾಯಿತು. ಅಲ್ಲಿ ಕುದುರೆಗೆ ಆಹಾರ ಕೊಡಿಸಿದ. ಆಗ ರಸ್ತೆಯಲ್ಲಿ ನಿಂತಿದ್ದ ಬಂಡಿಯವನೊಬ್ಬ ಇವನ ಬಂಡಿಯ ಚಕ್ರ ಮುರಿದಿದ್ದುದನ್ನು ತೋರಿಸಿದ. ಟಪ್ಪಾಲು ಬಂಡಿಗೆ ಡಿಕ್ಕಿಹೊಡೆದಾಗ ಚಕ್ರ ಮುರಿದಿರಬೇಕೆಂದು ಜೀನ್‌ವಾಲ್‌ಜೀನ್ ಊಹಿಸಿದ. ಆ ಊರಲ್ಲಿ ಬಂಡಿ ರಿಪೇರಿ ಮಾಡುವವರಾಗಲೀ ಬಂಡಿಯನ್ನು ಬಾಡಿಗೆಗೆ ಕೊಡುವವರಾಗಲೀ ಸಿಕ್ಕಲಾರರೆಂದು ವಿಚಾರಿಸಿದಾಗ ತಿಳಿದುಬಂತು. ಚಕ್ರ ರಿಪೇರಿಗಾಗಿ ನಿರ್ವಾಹವಿಲ್ಲದೇ ಒಂದು ದಿನ ಅಲ್ಲೇ ನಿಲ್ಲಬೇಕಾದ ಪ್ರಸಂಗ ಬಂತೆಂದು ತಿಳಿದ. 'ಆರಾಸಿಗೆ ಹೋಗು' ಎಂದು ಇವನ ಹೃದಯವನ್ನು ಹಿಂಡಿ ಹಿಂಸಿಸುತ್ತಿದ್ದ ಕಬ್ಬಿಣದ ಮುಷ್ಟಿ ಈಗ ಅದಾಗಿಯೇ ಸಡಿಲವಾಯಿತೆಂದು ಸಂತೋಷಪಟ್ಟ. ಜೀನ್‌ವಾಲ್‌ಜೀನನ ಜವಾಬ್ದಾರಿ ಇಲ್ಲದೆ ಆಗುತ್ತಿದ್ದ ವಿಳಂಬ ದೈವಲೀಲೆಯೇ ಎಂದು ಸಮಾಧಾನಪಟ್ಟುಕೊಂಡ.

ಆದರೆ ಜೀನ್‌ವಾಲ್‌ಜೀನ್ ತನ್ನ ಬಂಡಿಯ ಕುರಿತಾಗಿ ರಸ್ತೆಯಲ್ಲಿ ನಿಂತು ಬಹಿರಂಗವಾಗಿ ಮಾತಾಡುತ್ತಿದ್ದುದನ್ನು ಕೇಳುತ್ತಿದ್ದ ಚಿಕ್ಕ ಬಾಲಕನೊಬ್ಬ ಓಡಿಹೋಗಿ, ಅವನ ಅಜ್ಜಿಯನ್ನು ಕರೆದುಕೊಂಡು ಬಂದು ನಿಲ್ಲಿಸಿ, ಅವಳಲ್ಲಿ ಕ್ರಯಕ್ಕೆ ಕೊಡುವ ಬಂಡಿ ಇದೆಯಾಗಿ ಅತ್ಯುತ್ಸಾಹದಿಂದ ತಿಳಿಸಿದ. ಅಲ್ಲಿ ಬಂದು ನಿಂತಿದ್ದ ಮುದುಕಿಯ ಮುಖವೇ ಇವನಿಗೆ ಕ್ರೂರವಾಗಿ ಕಂಡಿತು.

ಬಾಲಕನ ಚಟುವಟಿಕೆಗಳಿಗಾಗಿ ಇವನ ಅಂತರಂಗ ಬಾಲಕನನ್ನು ಶಪಿಸುತ್ತಿತ್ತು. ಆದರೂ, ಬಂಡಿಯನ್ನು ಖರೀದಿಸಿ, ಅದನ್ನೇರಿ ಜೀನ್‌ವಾಲ್‌ಜೀನ್ ಹೊರಟ. ತನ್ನ ಪ್ರಯತ್ನಗಳ ಬಗ್ಗೆ ತನಗೇನಾದರೂ ಪುರಸ್ಕಾರವನ್ನು ಕೊಡಬೇಕೆಂದು ಆ ಬಾಲಕ ಬೇಡಿದ್ದಕ್ಕೆ, ಎಲ್ಲರಿಗೂ ಉದಾರ ಹಸ್ತದಿಂದ ದಾನವೀಯುತ್ತಿದ್ದ ಜೀನ್‌ವಾಲ್‌ಜೀನ್, ಇಂದು ಬಾಲಕನನ್ನು ಕ್ರೂರವಾಗಿ ನೋಡಿ, ಗದರಿಸಿ ಓಡಿಸಿಬಿಟ್ಟ.

ಸಂಜೆ ಸೇಂಟ್‌ಪೋಲ್ ಪಟ್ಟಣಕ್ಕೆ ತಲಪಿ, ಒಂದು ಹೊಟೇಲಿನಲ್ಲಿ ಸ್ವಲ್ಪ ಆಹಾರ ಸೇವಿಸಲು ಕುಳಿತ. ಚೊಕ್ಕಟವಾಗಿ, ಪುಷ್ಟಿಯಾಗಿ, ಸುರೂಪಿಯಾಗಿದ್ದ ಹೊಟೇಲ್ ಕೆಲಸದವಳು ವಿನಯದಿಂದ ತಿನಿಸುಗಳನ್ನು ಅವನೆದುರಿಗೆ ತಂದಿಟ್ಟಾಗ ಅವು ಮೆಚ್ಚುವಂತೆ ತೋರಿದುವು. ಆದರೆ, ತುಂಡು ಬ್ರೆಡ್ಡನ್ನು ಕಚ್ಚಿ, ಎಲ್ಲವನ್ನೂ ಅಲ್ಲೇ ಬಿಟ್ಟು, ಹೊಟೇಲಿನ ದುಡ್ಡು ಕೊಟ್ಟು, ಹೊರಟ. ಅವನ ಎದುರು ಕುಳಿತಿದ್ದವನೊಬ್ಬ, "ಬ್ರೆಡ್ ಕಹಿಯಾಗಿದೆಯೇ, ಸರ್?" ಎಂದು ಕೇಳಿದ್ದಕ್ಕೆ ಜೀನ್ ವಾಲ್‌ಜೀನ್ ಉತ್ತರವನ್ನೇ ಕೊಡಲಿಲ್ಲ. ಅವನ ಮನಸ್ಸೆಲ್ಲವೂ ವಿಧಿರೂಪದ ಆ ಕಬ್ಬಿಣದ ಮುಷ್ಟಿಯೇ ಮುದುಕಿಯ ಬಂಡಿಯಾಗಿ ಬಂದಿದ್ದ ದುಃಖ, ಆಶ್ಚರ್ಯದಲ್ಲಿ ಮಗ್ನವಾಗಿತ್ತು.

ಒಂದು ಕಡೆ ರಸ್ತೆ ರಿಪೇರಿಯಾಗುತ್ತಿದ್ದುದರಿಂದ ಇವನ ಬಂಡಿ ಸ್ವಲ್ಪ ಬಳಸಾಗಿ ಹೋಯಿತು; ಮತ್ತೂ ಮುಂದೆ ಹೋಗುವಾಗ ಕುದುರೆ ಸೋತು ಬಂಡಿ ಎಳೆಯಲಾರದೆ ಇದ್ದುದರಿಂದ, ಹೊಸ ಕುದುರೆಯನ್ನು ಕ್ರಯಕ್ಕೆ ಪಡೆದು ಮುಂದೆ ಸಾಗಿದ. ದಾರಿಯಲ್ಲಿ ಬಂಡಿಯ ನೀಳಸಲಾಕೆಗೂ ಒಂದು ಚಿಕ್ಕ ರಿಪೇರಿ ಕೆಲಸ ಬೇಕಾಗಿತ್ತು. ಆ ಕೆಲಸವನ್ನೂ ಇವನೇ ಮಾಡಿದ.

ಮೊಂಟ್ ಸೇಂಟ್ ಇಲಾಯ್‌ಗೆ ತಲಪುವಾಗ ಸಂಪೂರ್ಣ ಸಂಜೆಯೇ ಆಗಿತ್ತು. ಸಂಜೆ ಇತರರಿಗೆ ಶಾಂತಮಯವಾಗಿ ತೋರಿಬರುತ್ತಿದ್ದರೂ ಇವನಿಗೆ ದುಃಖಾಗ್ನಿಯಿಂದ ತಪಿಸುತ್ತಿದ್ದಂತೆ ತೋರುತ್ತಿತ್ತು. ಆಗಿನ ಪಶ್ಚಿಮದಿಗಂತದಲ್ಲಿ ಬೆಳಕು, ಮೋಡ ಮತ್ತು ಆ ಸಂಜೆಯ ವಾತಾವರಣ ಎಲ್ಲವೂ ಎಂಟು ವರ್ಷಗಳ ಹಿಂದೆ ಜೀನ್‌ವಾಲ್‌ಜೀನ್ ಬಿಷಪರ ಭೇಟಿಗೆ ಹೋಗುವ ಮೊದಲು ಡಿ— ಪಟ್ಟಣದ ಹೊರಬದಿಯಲ್ಲಿ ಅವನು ಕಂಡ ದಿಗಂತ, ಆಕಾಶ, ವಾತಾವರಣದಂತೆ ರೌದ್ರವಾಗಿ ತೋರಿದುವು. ಅಲ್ಲಿಯ ಸೇತುವೆ ದಾಟುವಾಗ ಇಗರ್ಜಿ ಗಂಟೆಗಳು ಏಳು ಗಂಟೆ ಬಾರಿಸಿದ್ದನ್ನೂ ಕೇಳಿದ. ತಾನು ಆರಾಸಿಗೆ ತಲಪುವಾಗ ಚೇಂಪ್‌ಮೆತ್ಯೂನ ವಿಚಾರಣೆ ಮುಗಿದುಹೋಗಬಹುದೇ ಎಂದು ಸ್ವಲ್ಪ ಹೆದರಿದ. ಆದರೂ ತಾನು ಉದ್ದೇಶಪಟ್ಟು ಪ್ರಯಾಣದಲ್ಲಿ ವಿಳಂಬ ಮಾಡಿಲ್ಲವೆಂಬ ತೃಪ್ತಿಯಿಂದ ಆರಾಸಿನ ಕಡೆಗೆ ಮುಂದುವರಿಸಿದ.

೬. ಫ್ಯಾಂಟೈನಳ ಕನವರಿಕೆ

ಫ್ಯಾಂಟೈನಳ ಖಾಯಿಲೆ ವಿಷಮಿಸುತ್ತಿತ್ತು. ಅವಳು ರಾತ್ರಿ ನಿದ್ರೆ ಮಾಡುವುದೇ ಕಡಿಮೆಯಾಗಿತ್ತು. ಈ ದಿನವಂತೂ ಅವಳು ರಾತ್ರಿ ನಿದ್ರೆ ಮಾಡಿಯೇ ಇರಲಿಲ್ಲ. ಸ್ವಲ್ಪ ನಿದ್ರೆ ಬಂದರೂ ತುಂಬ ಕನವರಿಸುತ್ತ ಹುಚ್ಚುಚ್ಚಾಗಿ ಮಾತಾಡುತ್ತಿದ್ದಳು. ಅವಳ ಕೆಮ್ಮು ಈ ದಿನ ರಾತ್ರಿ ತೀವ್ರವಾಗಿತ್ತು. ಕೆಲವೊಮ್ಮೆ ಅವಳು ಹಾಸಿಗೆಯಲ್ಲಿ ಎದ್ದು ಕುಳಿತು, "ಮಾ. ಮೆಡಲೀನರನ್ನು ನೋಡಬೇಕು," ಎಂದನ್ನುತ್ತಿದ್ದಳು. ಅವಳ ಕನವರಿಕೆಯಲ್ಲಿ ರಸ್ತೆ ಕಡೆಯ ಕೆಲವು ಸ್ಥಳಗಳ ಹೆಸರುಗಳನ್ನೂ ಅವುಗಳ ಪರಸ್ಪರ ಅಂತರಗಳನ್ನೂ ಹೇಳಿಕೊಂಡು ಬೆರಳಲ್ಲಿ ಲೆಕ್ಕ ಮಾಡುತ್ತಿದ್ದಳು; ಇದು ಕೋಸೆಟ್ಟೆ ನಡೆದುಬರುವುದಾದರೆ ಎಷ್ಟು ದೂರ ನಡೆಯಬೇಕಾಗುವುದೆಂದು ಲೆಕ್ಕ ಹಾಕು

ತ್ತಿರುವುದಾಗಿ ಫ್ಯಾಂಟೈನಳ ಸಮೀಪ ಇದ್ದವರು ಊಹಿಸುತ್ತಿದ್ದರು. ಕೋಸೆಟ್ಟೆಯ ಬರೋಣವನ್ನು ಈಕೆ ಬಹುವಾಗಿ ಹಂಬಲಿಸುತ್ತಿದ್ದಳು. ಸ್ಫುರದ್ರೂಪಿ ಫ್ಯಾಂಟೈನಳು ಈಗ ಮಾತ್ರ ಕುರೂಪದ ಅಸ್ಥಿಪಂಜರಕ್ಕೆ ಹೊದಿಸಿದ ಚಕ್ಕಳಮಾತ್ರವೆಂಬಂತೆ ತೋರುತ್ತಿದ್ದಳು.

ಮಾ. ಮೆಡಲೀನ್ ಪ್ರತಿದಿನವೂ ಅಪರಾಹ್ಣ ಮೂರು ಗಂಟೆಗೆ ಫ್ಯಾಂಟೈನಳನ್ನು ನೋಡಲು ಬರುವ ಕ್ರಮವಿತ್ತು. ಈ ದಿನ ಅವರು ಬರದಿದ್ದುದೂ ಅವಳ ದುಃಖವನ್ನು ಹೆಚ್ಚಿಸಿತು. ಒಮ್ಮೆ ಅವಳು ಎದ್ದು ಕುಳಿತು, "ನಾನು ನಾಳೆ ಹೋಗುವೆನು, ಮಾ. ಮೆಡಲೀನ್ ಬಂದರೆ ಈ ಹೊತ್ತು ಬರಬೇಕು," ಎಂದು ಹೇಳಿ ನಿಟ್ಟುಸಿರು ಬಿಡುತ್ತ ಮಲಗಿದಳು. ಹಾಗೆ ಮಲಗಿದವಳು ನಿದ್ರಿಸಿದ್ದಂತೆ ತೋರುತ್ತಿದ್ದಳು. ಆ ನಿದ್ರೆಯಲ್ಲೇ ದುಃಖಭಾವಪ್ರದವಾದ ಮಾಧುರ್ಯದಿಂದ, ಕೇಳಿಯೂ ಕೇಳಿಸದಷ್ಟು ಹಗುರವಾಗಿ ಒಂದು ಜೋಗುಳ ಪದ ಹಾಡಿದಳು. ಅವಳು ಕಣ್ಣುಮುಚ್ಚಿಕೊಂಡೇ ಹಾಡಿದ್ದರೂ ಹಾಡುವಾಗ ಅವಳ ಮುಖದಲ್ಲಿ ಕೋಸೆಟ್ಟೆಯನ್ನು ತೂಗಾಡಿಸಿ ನಿದ್ರೆ ಮಾಡಿಸುತ್ತಿದ್ದ ಭವ್ಯವಾದ ಆನಂದದ ಭಾವಗಳು ಹೊಮ್ಮುತ್ತಿದ್ದುವು. ಮಾ. ಮೆಡಲೀನ್ ಎಂದಿನಂತೆ ಬರದಿದ್ದುದು ಫ್ಯಾಂಟೈನಳಿಗೆ ಮಾತ್ರವಲ್ಲ, ಎಲ್ಲರಿಗೂ ಆಶ್ಚರ್ಯದ ಸಂಗತಿಯಾಗಿತ್ತು. ಬೆಳಗಿನ ಜಾವದಲ್ಲಿ ಅವರು ಬಂಡಿ ಏರಿ ಹೋಗಿದ್ದರಾಗಿ ಕಂಡವರು ಕೆಲವರು ಫ್ಯಾಂಟೈನಳ ಹಿಂಬದಿಯಲ್ಲಿ ಸಿಸ್ಟರ್ ಸಿಂಪ್ಲಿಸಳಿಗೆ ತಿಳಿಸಿದರು. ಫ್ಯಾಂಟೈನಳಿಗೆ ಈ ಪಿಸುಮಾತೂ ಅರ್ಥವಾಯಿತು. ಅವಳು ಬಲು ಚುರುಕಿನಿಂದ, "ನನಗೆಲ್ಲ ಗೊತ್ತಾಗುತ್ತದೆ, ನೀವು ಮಾ. ಮೆಡಲೀನರ ಸಂಗತಿ ಮಾತಾಡುತ್ತಿದ್ದೀರಿ. ಅವರೇಕೆ ಬರಲಿಲ್ಲ, ತಿಳಿಸಿ," ಅಂದಳು.

"ಮುನಿಸಿಪಲ್ ಸಭೆಗೆ ಹೋಗಿದ್ದಾರೆ," ಎಂದೊಬ್ಬಳು ಹೇಳಿದಳು.

"ಒಂದು ಪ್ರಯಾಣ ಬೆಳೆಸಿದ್ದಾರೆ," ಎಂದು ಸಿಸ್ಟರ್ ಸಿಂಪ್ಲಿಸಳು ಹೇಳಿದಳು. ಅವಳು ಹೇಳಿದುದರಲ್ಲಿ ಏನೂ ಸುಳ್ಳಿರಲಿಲ್ಲವೆಂಬುದೇ ಅವಳ ಮುಖ್ಯ ಗುರಿಯಾಗಿತ್ತು. ಫ್ಯಾಂಟೈನಳೂ ಆ ಮಾತಿನಿಂದ ತೃಪ್ತಳಾದಳು. ಮಾ. ಮೆಡಲೀನ್ ಕೋಸೆಟ್ಟೆಯನ್ನು ಕರತರಲು ಹೋಗಿರಬೇಕೆಂದು ಊಹಿಸಿ ಸಂತೋಷಿಸಿದಳು. ಸಿಸ್ಟರ್ ಸಿಂಪ್ಲಿಸ್ ಫ್ಯಾಂಟೈನ್ ಬಗ್ಗೆ ಎಲ್ಲ ವಿಧದ ಎಚ್ಚರಿಕೆಯನ್ನೂ ವಹಿಸಬೇಕಾಗಿತ್ತು. ಅವಳು ಧರ್ಮಬುದ್ಧಿಯಿಂದ ತನ್ನ ಕೆಲಸವನ್ನು ಪರಿಷ್ಕಾರವಾಗಿ ಮಾಡುತ್ತಲೂ ಇದ್ದಳು.

ಏಳು ಗಂಟೆಗೆ ವೈದ್ಯರು ಬಂದರು. ಆಗ ಫ್ಯಾಂಟೈನ್ ನಿದ್ರೆ ಮಾಡುತ್ತಿದ್ದಂತೆ ತೋರಿದಳು. ಅವರು ಮಂಚದ ಸಮೀಪಕ್ಕೆ ಬಂದಾಗ ಅವಳು ಕಣ್ಣು ತೆರೆದು ವೈದ್ಯರನ್ನು ನೋಡಿ, "ಡಾಕ್ಟರರೇ, ನಾನು ಮೊದಲಿಗಿಂತ ಹುಷಾರಾಗಿದ್ದೇನೆ. ಮಾ. ಮೆಡಲೀನ್ ಕೋಸೆಟ್ಟೆಯನ್ನು ಕರೆತರಲು ಹೋಗಿದ್ದಾರೆ. ಅವಳು ಬಂದರೆ ಇನ್ನಷ್ಟು ಹುಷಾರಾಗುತ್ತೇನೆ, ಕೋಸೆಟ್ಟೆ ಬಂದು ಇಲ್ಲಿ ಮಲಗಿದರೆ ಆಗದೇ, ಡಾಕ್ಟರ್?" ಎಂದು ಹೇಳುತ್ತ ಕೋಸೆಟ್ಟೆ ಬಂದರೆ ಮಲಗಲಿರುವ ತನ್ನ ಹಾಸಿಗೆಯ ಬದಿಯನ್ನು ಮುಟ್ಟಿತೋರಿಸಿದಳು. ವೈದ್ಯರು "ಆಗಬಹುದು" ಎಂಬಂತೆ ತಲೆಯನ್ನು ಮಾತ್ರ ಅಲ್ಲಾಡಿಸಿ ನಿಂತರು. ಫ್ಯಾಂಟೈನ್ ಮತ್ತೂ ಹೇಳತೊಡಗಿದಳು, "ನಾನಂದದ್ದು ನಿಜ ಡಾಕ್ಟರರೇ! ಅವಳು ಬಂದರೆ ನಾನು ಬೇಗನೇ ಹುಷಾರಾಗುತ್ತೇನೆ. ನನಗೆ ನಿದ್ರೆ ಬರದಿದ್ದಾಗ ಕೋಸೆಟ್ಟೆ ಮಲಗಿ ನಿದ್ರಿಸುವುದನ್ನು ನೋಡುತ್ತ ನನ್ನ ಖಾಯಿಲೆಯನ್ನು ಮರೆಯಬಲ್ಲೆ; ಡಾಕ್ಟರರೇ, ಕೋಸೆಟ್ಟೆಯ ಉಸಿರೇ ನನ್ನ ಖಾಯಿಲೆಯನ್ನು ಗುಣಮಾಡುವುದು. ರಾತ್ರಿ ನಿದ್ರಿಸಿದ ಮಗು ಬೆಳಗ್ಗೆ ಕಣ್ತೊಡದು ನೋಡುವ ಆ ಮುದ್ದುಮುಖದ ಎದುರು ಯಾವ ದುಃಖತಾನೇ ಉಳಿದೀತು?" ಎಂದು ಇಷ್ಟು ಮಾತಾಡಿದ್ದೇ ಅವಳಿಗೆ ಶ್ರಮವಾಗಿರಬೇಕು. ಸುಸ್ತಿನಿಂದ ಮಲಗಿದಳು.

ಫ್ಯಾಂಟೈನ್ ಎಷ್ಟೇ ಮಲಗಿದರೂ ಬಹಳ ಅವಿಶ್ರಾಂತವಾಗಿ ವರ್ತಿಸುತ್ತಿದ್ದಳು. ಕನವರಿಸುವುದು, ಕಣ್ಣುಬಿಟ್ಟು ನೋಡುತ್ತ ಏನೇನೋ ಮಾತಾಡುವುದು, ತನ್ನ ಹಾಸಿಗೆ, ಬಟ್ಟೆಬರೆಗಳನ್ನೆಲ್ಲ ಸುರುಳಿಸುತ್ತಿ ಎತ್ತಲು ಪ್ರಯತ್ನಿಸುವುದು, ಹೀಗೆಲ್ಲ ಮಾಡುತ್ತಿದ್ದಳು. ವೈದ್ಯರು ಸ್ವಲ್ಪ ಔಷಧಿ ಕುಡಿಸಿ, "ಖಾಯಿಲೆ ಬಹಳ ಕಠಿಣವಾಗಿದೆ. ಮಗಳು ಬಂದರೆ ಸ್ವಲ್ಪ ಪ್ರಯೋಜನವಾಗಬಹುದು. ಅಂತೂ ಪರಿಸ್ಥಿತಿ ಪ್ರಕೋಪಿಸಿದೆ," ಎಂದು ಹೇಳಿ ಹೊರಟುಹೋದರು.

೭. ಆರಾಸಿನ ಶರತಲ್ಪ

ಜೀನ್‌ವಾಲ್‌ಜೀನ್ ಆರಾಸ್ ತಲಪುವಾಗ ರಾತ್ರಿಯಾಗಿತ್ತು. ಕೋರ್ಟ್ ಸಮೀಪಕ್ಕೆ ಹೋಗುವವರೆಗೂ ಯಾರನ್ನು ವಿಚಾರಿಸಲೂ ಅವನಿಗೆ ಧೈರ್ಯವಿರಲಿಲ್ಲ. ಈ ಮೊದಲೇ ಚೇಂಪ್ ಮೆತ್ಯೂನ ವಿಚಾರಣೆ ಮುಗಿದಿರಬಹುದೆಂದು ಅಂತರಂಗದಲ್ಲಿ ಸಮಾಧಾನಪಟ್ಟುಕೊಳ್ಳುತ್ತಿದ್ದ. ವಿಚಾರಿಸಿ, ಸಂದರ್ಭವಶದಿಂದ ವಿರೋಧತರದ ವರ್ತಮಾನವನ್ನು ಕೇಳಲು ಅವನ ಮನಸ್ಸು ಒಡಂಬಡುತ್ತಿರಲಿಲ್ಲ. ಆದರೂ ವಿಚಾರಿಸುವ ಜವಾಬ್ದಾರಿ ತನ್ನದಿದೆಯೆಂದು ಸಂಪೂರ್ಣವಾಗಿ ತಿಳಿದು ಕೋರ್ಟ್ ತಲಪಿದ.

ಕೋರ್ಟ್ ನಡೆಯುತ್ತಿದ್ದುದು ಒಂದು ಭವ್ಯ ಕಟ್ಟಡದಲ್ಲಿ. ಅಲ್ಲಿ ತುಂಬ ಜನರಿದ್ದರು. ಎಲ್ಲೆಲ್ಲೂ ದೀಪಗಳನ್ನು ಉರಿಸಿದ್ದರು. ಕಟ್ಟಡಕ್ಕೆ ಎದುರಿನ ಅಂಗಳದಿಂದ ನುಗ್ಗಿದ ಕೂಡಲೇ ಎದುರು ಸಿಕ್ಕುವುದು ನೀಳವಾದ ಒಂದು ದೊಡ್ಡ ಕೊಠಡಿ. ಅದರ ತುಂಬ ಜನ ನಿಂತಿದ್ದರು. ಆ ಕೊಠಡಿಯಿಂದ ಒಂದು ದೊಡ್ಡ ಹೆಬ್ಬಾಗಿಲು ದಾಟಿಹೋದರೆ ಕೋರ್ಟ್ ನಡೆಯುತ್ತಿದ್ದ ಸ್ಥಳವೇ ಸಿಕ್ಕುತ್ತಿತ್ತು. ಜೀನ್‌ವಾಲ್‌ಜೀನ್ ಹೊರಗಿನ ಕೊಠಡಿಗೆ ಹೋಗುವಾಗ ಅವನಿಗೆ ಎದುರಾಗಿ ಒಬ್ಬ ವಕೀಲ ಒಳಗಿನ ಕೋರ್ಟಿನಿಂದಲೇ ಬರುತ್ತಿದ್ದ. ಜೀನ್‌ವಾಲ್‌ಜೀನ್ ಅವನನ್ನು ವಿಚಾರಿಸಿದ, "ವಿಚಾರಣೆ ಮುಗಿಯಿತೇ, ಸರ್?"

"ಓಹೋ, ಮುಗಿಯಿತು; ತೀರ್ಪನ್ನೂ ಹೇಳಿದರು."

"ತೀರ್ಪು ಏನೆಂದು?"

"ಜೀವಾವಧಿ ಜೈಲೆಂದು."

"ಸಾಕ್ಷಿಯೆಲ್ಲ ವಿಚಾರಣೆಯಾಗಿತ್ತೇನು?"

"ಆಗದೆ ತೀರ್ಪುಕೊಡುತ್ತಾರೇನು? ಮಗುವನ್ನು ಅವನೇ ಕೊಂದದ್ದಕ್ಕೆ ಪ್ರತ್ಯಕ್ಷ ನೋಡಿದ ಸಾಕ್ಷಿಯೇ ಇರುವಾಗ ಕಷ್ಟವೇನು?"

"ಕೋರ್ಟ್ ಈಗಲೂ ನಡೆಯುತ್ತಿರುವಂತೆ ತೋರುತ್ತದೆಯಲ್ಲ?"

"ಅದು ಮತ್ತೊಂದು ಖಟ್ಲೆ."

"ಯಾವ ಖಟ್ಲೆ?"

"ಆ ಕಳ್ಳ, ಸೇಬು ಹಣ್ಣು ಕದ್ದಿದ್ದಾನಲ್ಲ. ಆ ಖಟ್ಲೆ, ಅದೂ ಸುಲಭದ ಖಟ್ಲೆ. ಅವನು ಈ ಮೊದಲೇ ಜೈಲು ಕಂಡವ. ಅವನು ಈ ಸರ್ತಿ ಕದ್ದಿದ್ದರೂ ಕದಿಯದಿದ್ದರೂ, ನಾನಾಗಿದ್ದರೆ, ಅವನನ್ನು ಜೈಲಿಗೆ ಕಳುಹಿಸುತ್ತಿದ್ದೆ—ಅಂಥ ಮೋರೆಯವನು!"

"ಸಾಕ್ಷಿ ವಿಚಾರಣೆಯೆಲ್ಲ ಆಗಿದೆಯೇನು?"

"ಎಲ್ಲ ಆಗಿದೆ. ಆಪಾದಿತನ ಕಡೆಯ ವಕೀಲರ ವಾದ ಮಾತ್ರ ಬಾಕಿಯಿದೆ. ನೀವು ಅವರ

ಕಡೆಯುವರೇನು?" ಎಂದು ಕೇಳಿ ಆ ವಕೀಲ ಜೀನ್‌ವಾಲ್‌ಜೀನನ ಉತ್ತರವನ್ನು ಕೇಳಲೂ ನಿಲ್ಲದೇ ಬೇರೆ ಕಡೆಗೆ ಹೋದ.

ಮುಂದೆ ಜೀನ್‌ವಾಲ್‌ಜೀನ್ ಒಳ ನುಗ್ಗಲು ಎಲ್ಲೂ ಸ್ಥಳವಿರಲಿಲ್ಲ. ಒಳಗೆ ಯಾರನ್ನೂ ಬಿಡದಂತೆ ಪೊಲೀಸ್ ಪಹರೆಯೂ ಇತ್ತು. ಒಳಗೆ ಇದ್ದ ಸ್ಥಳದಲ್ಲೆಲ್ಲ ನ್ಯಾಯಾಲಯಕ್ಕೆ ಸಂಬಂಧಪಟ್ಟವರೂ ಪ್ರೇಕ್ಷಕರೂ ತುಂಬಿದ್ದರು. ಮುಖ್ಯ ನ್ಯಾಯಾಧೀಶರ ಹಿಂದೆ ದೊಡ್ಡ ದೊಡ್ಡ ಅಧಿಕಾರಿಗಳು ಬಂದರೆ ಮಾತ್ರ ಕುಳಿತುಕೊಳ್ಳಲಿರುವ ಮೂರು ಕುರ್ಚಿಗಳು ಖಾಲಿ ಇವೆಯೆಂದು ಪಹರೆಯವನಿಂದ ತಿಳಿದುಬಂತು. ಇಷ್ಟು ತಿಳಿದದ್ದರಿಂದ ಜೀನ್‌ವಾಲ್‌ಜೀನ್ ಚಿಕ್ಕ ಒಂದು ತುಂಡು ಕಾಗದದಲ್ಲಿ 'ಎಂ— ಪಟ್ಟಣದ ಮೇಯರ್ ಮಾ. ಮೆಡಲೀನ್' ಎಂದು ಮಾತ್ರ ಬರೆದು ಪಹರೆಯ ಪೊಲೀಸನ ಪೈಕಿ ಒಬ್ಬನ ಹತ್ತಿರ ಕೊಟ್ಟ. ಅದನ್ನು ಓದಿ ಪಹರೆಯವ ಬಲುವಿನಯದಿಂದ ನ್ಯಾಯಾಧೀಶರಕಡೆಗೆ ಹೋದ. ಉತ್ತರ ಬರುವ ನಿರೀಕ್ಷಣೆಯಿಂದ ಜೀನ್‌ವಾಲ್‌ಜೀನ್ ಅಲ್ಲೇ ಕಾದು ನಿಂತ.

೮. ನ್ಯಾಯಾಲಯದ ನಿಷ್ಠುರ ನಿಕಷ

ಆ ಜಿಲ್ಲೆಯಲ್ಲೆಲ್ಲ ಮಾ. ಮೆಡಲೀನರ ಹೆಸರು ಉದಾರತೆಗೂ ಕರುಣೆಗೂ ಪ್ರಖ್ಯಾತವಾಗಿತ್ತು. ಆ ಜಿಲ್ಲೆಯಲ್ಲಿ ಅವರಿಂದ ಹಣಸಹಾಯ ಪಡೆಯದಿದ್ದ ಕಸಬುಗಳಿರಲಿಲ್ಲ, ಆಸ್ಪತ್ರೆಗಳಿರಲಿಲ್ಲ, ಶಾಲೆಗಳಿರಲಿಲ್ಲ, ಅನಾಥಾಲಯಗಳಿರಲಿಲ್ಲ. ಇಂದಿನ ಕೋರ್ಟಿನ ನ್ಯಾಯಾಧೀಶರಿಗಂತೂ ಇವರ ಹೆಸರೂ ಖ್ಯಾತಿಯೂ ಚೆನ್ನಾಗಿ ಗೊತ್ತಿತ್ತು. ಪೊಲೀಸ್ ಪೇದೆ ಕೊಟ್ಟ ಚೀಟಿಯನ್ನು ಅವರು ನೋಡಿ ಸಂತೋಷಪಟ್ಟು, ಆ ಚೀಟಿಯಲ್ಲೇ ಮಾ. ಮೆಡಲೀನರಿಗೆ ಗೌರವದ ಆಮಂತ್ರಣ ಬರೆದು ಕಳುಹಿಸಿದರು. ಮೊದಲು ತನ್ನ ಸ್ಥಾನದಲ್ಲಿ ಒಂದು ವಿಧದ ಗರ್ವದಿಂದ ವರ್ತಿಸುತ್ತಿದ್ದ ಪೊಲೀಸ್ ಪೇದೆ ಈ ಆಮಂತ್ರಣ ತಲಪಿಸುವಾಗ ಮಾ. ಮೆಡಲೀನರಿಗೆ ನೆಲದ ವರೆಗೆ ಬಗ್ಗಿ ನಮಸ್ಕರಿಸಿದ. ಅನಂತರ ಮಾ. ಮೆಡಲೀನರನ್ನು ಕಟ್ಟಡದ ಒಳಗಾಗಿ ಜಡ್ಜರ ಹಿಂಬದಿಯ ಕೋಣೆಗೆ ಕರೆದುಕೊಂಡು ಹೋದ. ಅದು ಬಲು ಚೊಕ್ಕಟವಾಗಿ, ಘನಸ್ತಿಕೆಯಿಂದ ಕುರ್ಚಿ, ಸೋಫಾ, ಮೇಜು, ಕಪಾಟು, ಕನ್ನಡಿಗಳಿಂದ ಕೂಡಿ ವ್ಯವಸ್ಥಿತವಾಗಿತ್ತು. ನ್ಯಾಯಾಧೀಶರೂ ಜೂರಿಯವರೂ ಕುಳಿತು ವಿಚಾರಣೆ ನಡೆಸುತ್ತಿದ್ದ ಕೊಠಡಿಗೆ ಹೋಗಲು ಇದ್ದ ಕದ ಮುಚ್ಚಿತ್ತು. ಪೊಲೀಸ್ ಪೇದೆ ಮಾ. ಮೆಡಲೀನರಿಗೆ ಅದನ್ನು ತೆರೆಯಲು ಇದ್ದ ಹಿತ್ತಾಳಿ ಹಿಡಿ ತೋರಿಸಿ, ನಮಸ್ಕರಿಸಿ, ಹಿಂದೆ ಸರಿದು, ತನ್ನ ಮೊದಲಿನ ಸ್ಥಳಕ್ಕೆ ಹೋದ.

ಜೀನ್‌ವಾಲ್‌ಜೀನ್ ಆ ಕೊಠಡಿಯಲ್ಲಿ ಒಬ್ಬನೇ ನಿಂತಕೂಡಲೇ ಬಾಗಿಲಿನ ಹೊಳೆಯುತ್ತಿದ್ದ ಹಿತ್ತಾಳೆ ಹಿಡಿ ಎದ್ದು ಕಾಣಿಸಿತು. ಇದು ಒಂದು ವಿಧದಿಂದ ವಿಕರ್ಷಣೀಯವಾಗಿ ತೋರುತ್ತಿದ್ದರೂ ಇನ್ನೊಂದು ವಿಧದಿಂದ ಆಕರ್ಷಣೀಯವಾಗಿಯೂ ಕಾಣುತ್ತಿತ್ತು. ತಕ್ಸೀರುಗಳ ವಿಚಾರಣೆ ನಡೆದ ಬಳಿಕ ಅವನು ನಿಂತಿದ್ದ ಕೋಣೆಯಲ್ಲೇ ಕುಳಿತು ನ್ಯಾಯಾಧೀಶರುಗಳು ಅನೇಕ ಜನರ ಸ್ವಾತಂತ್ರ್ಯ, ಜೀವ ಮೊದಲಾದವನ್ನು ತೆಗೆಯುವ ತೀರ್ಪನ್ನು ಬರೆದಿರಬೇಕೆಂದು ಜೀನ್‌ವಾಲ್‌ಜೀನ್ ಗ್ರಹಿಸಿಕೊಂಡ. ಆ ಹಿತ್ತಾಳೆ ಹಿಡಿಯನ್ನು ನೋಡುತ್ತಿದ್ದ ಹಾಗೆಯೇ ಅದು ಮೇಕೆಗೆ ಹುಲಿಯ ಕಣ್ಣು ಕಾಣುವಂತೆ ಅವನಿಗೆ ಭಯಾನಕ ದೃಶ್ಯವಾಗಿ ತೋರಿತು. ತಾನು ಉದ್ದೇಶಿಸದೆಯೇ—ಕೇವಲ ಆಕರ್ಷಣೆಯಿಂದ—ಅವನು ಬಾಗಿಲವರೆಗೂ ಹೋದ. ಅಷ್ಟರಲ್ಲೇ ಅವನ

ಮೈ ಹಠಾತ್ತನೆ ಕಂಪಿಸಿತು; ಬೆವರಿತು; ಕ್ಷಣಕಾಲ ಪ್ರಜ್ಞಾಹೀನನಾದ; ಆದರೂ ಸುತ್ತಲಿನ ಗೋಡೆ ಮತ್ತು ಬೆಳಕು ಕಂಡು, ಸ್ವಲ್ಪ ಧೈರ್ಯಗೊಂಡು, ಅದೇ ಕೋಣೆಯಲ್ಲೇ ಇನ್ನು ಸ್ವಲ್ಪ ಸಮಯದಲ್ಲೇ ತಾನೂ ಒಂದು ತೀರ್ಪಿಗೆ ತುತ್ತಾಗಿ ಶಾಶ್ವತ ಅಪಮಾನಕ್ಕೆ ಗುರಿಯಾಗುವೆನೆಂದು ಹೆದರುತ್ತ, ಆ ಕೋಣೆ ಒಳಗೆ ಬಂದ ಬಾಗಿಲಿನಿಂದಲೇ ಹೊರಗೆ ಹೋಗಿ, ಆ ಕೋರ್ಟಿನ ಪ್ರಾಂಗಣದಲ್ಲಿ—ಕತ್ತಲೆಯಲ್ಲಿ—ನಿಂತ. ಅಲ್ಲಿ ಕ್ಷಣಕಾಲ ಅವನ ದೃಷ್ಟಿ ಮನಸ್ಸೆಲ್ಲ ಶೂನ್ಯದಲ್ಲಿ ನೆಲಸಿತ್ತು.

ಆಗ ರಾತ್ರಿಯ ಚಳಿಗಾಳಿ ಬೀಸಿ ಅವನಿಗೆ ಸ್ಪಷ್ಟ ಪ್ರಜ್ಞೆ ಬಂತು. ಅವನ ಹೃದಯದಿಂದಲೇ ಅವನದೇ ಮಾತು ಸ್ಪಷ್ಟವಾಗಿ ಕೇಳಿಸುವಂತೆ, ಮನಸ್ಸಿನಲ್ಲಿ ಮಾತುಗಳು ಮೂಡಿ, ಕೇಳಿಸಿದುವು, "ಇಷ್ಟೆಯೇ ನಿನ್ನ ನಿರ್ಧಾರ!" ಈ ವಾಕ್ಯವೇ ಅವನಿಗೊಂದು ವಿದ್ಯುತ್ ಶೃಂಖಲೆಯೂ ಆಯಿತು. ಆ ಶೃಂಖಲೆಯೇ ಅವನನ್ನು ಪುನಃ ನ್ಯಾಯಾಧೀಶರ ಕೋಣೆಗೆ ಎಳೆದು ತಂದಿತು. ಆ ಕೋಣೆಗೆ ಪ್ರವೇಶಿಸಿದಾಗ ಅವನು ಮೊದಲು ಕಂಡದ್ದು ಆ ಪ್ರಕಾಶಮಾನ, ಕ್ರೂರ, ಕಠೋರ ಹಿತ್ತಾಳೆ ಹಿಡಿ ಮಾತ್ರ. ಇವನನ್ನೇ ನಿರೀಕ್ಷಿಸಿ ಕಾದು ಕುಳಿತಿದ್ದಂತೆ ತೋರಿತು. ಬಾಗಿಲಿಗೆ ಯಾಂತ್ರಿಕವಾಗಿ, ತನಗರಿಯದೆ ಎಂಬಂತೆ, ತಲಪಿದ. ಬಾಗಿಲ ಹಿಡಿಯನ್ನು ಅವನು ಹಿಡಿದದ್ದೇ ತಡ ಆ ಕದ ಸರಾಗವಾಗಿ ತೆರೆದುಕೊಂಡಿತು. ಮರುಕ್ಷಣದಲ್ಲಿ ಜೀನ್‌ವಾಲ್‌ಜೀನ್ ನ್ಯಾಯಾಧೀಶರು ಮಂಡಿಸಿದ್ದ ವಿಶಾಲ ಕೊಠಡಿಯಲ್ಲಿದ್ದ.

೯. ವಿಚಾರಣೆ

ಆ ವಿಶಾಲ ಕೊಠಡಿಯಲ್ಲಿ ತುಂಬ ಜನರಿದ್ದರು. ವಕೀಲರೂ ಪೊಲೀಸರೂ ಪ್ರೇಕ್ಷಕರೂ ಅವರವರಿಗೆ ಗೊತ್ತುಮಾಡಲಾಗಿದ್ದ ಸ್ಥಳಗಳಲ್ಲಿ ಕುಳಿತುಕೊಂಡೋ ನಿಂತುಕೊಂಡೋ ಇದ್ದರು. ಕೊಠಡಿಯ ಒಂದು ತುದಿಯಲ್ಲಿ ಜಡ್ಜರಿಗೂ ಜ್ಯೂರಿಯವರಿಗೂ ಸರಕಾರೀ ದೊಡ್ಡ ಉದ್ಯೋಗಸ್ಥರಿಗೂ ಕೂರಲು ಮಾಡಿದ್ದ ಎತ್ತರ ಸ್ಥಳವಿತ್ತು, ಜೀನ್‌ವಾಲ್‌ಜೀನ್ ಈ ಸ್ಥಳದ ಒಂದು ಕರೆಯಲ್ಲಿ ನಿಂತು ಎಲ್ಲರನ್ನೂ ನೋಡಿದ. ಜ್ಯೂರಿಯವರ ಪೈಕಿ ಮಾ. ಬಮಟ್‌ಬಾಯ್ಸನೂ ಒಬ್ಬನಾಗಿ ಕುಳಿತಿದ್ದ.

ಜಡ್ಜರಿಗೂ ಜ್ಯೂರಿಯವರಿಗೂ ಕಾಣುವಂತೆ, ಸ್ವಲ್ಪ ದೂರದಲ್ಲಿ, ಇಬ್ಬರು ಸಶಸ್ತ್ರ ಪೊಲೀಸರ ಮಧ್ಯದಲ್ಲಿ ಒಂದು ಬೆಂಚಿನಲ್ಲಿ ಕೈದಿ ಕುಳಿತಿದ್ದ. ಜೀನ್‌ವಾಲ್‌ಜೀನನ ದೃಷ್ಟಿ ಸ್ವಾಭಾವಿಕವಾಗಿಯೇ ಆತನ ಕಡೆಗೆ ಹರಿಯಿತು. ಆತ ಬಲುಮಟ್ಟಿಗೆ ಜೀನ್‌ವಾಲ್‌ಜೀನನನ್ನು ಹೋಲುತ್ತಿದ್ದ. ಕೈದಿಯ ಮುಖದಲ್ಲಿ ಬುದ್ಧಿಶೂನ್ಯತೆ, ನಿರುತ್ಸಾಹ, ಆಲಸ್ಯ, ಕುರೂಪ, ಮೃಗಸ್ವಭಾವ ಎಲ್ಲವೂ ಪ್ರಕಟವಾಗುತ್ತಿದ್ದುವು. ಜೀನ್‌ವಾಲ್‌ಜೀನ್ ಬಿಷಪ್ ಮಿರಿಯಲರ ದರ್ಶನಮಾಡುವಾಗ ಇದ್ದಂತೆ ಇಂದಿನ ಕೈದಿ ತೋರುತ್ತಿದ್ದ.

ಮಾ. ಮೆಡಲೀನರನ್ನು ಕಂಡೊಡನೆ ಅಲ್ಲಿದ್ದವರೆಲ್ಲರೂ ಅವರಿಗೆ ನಮಸ್ಕರಿಸಿದರು. ಇವರು ಎಲ್ಲರಿಗೂ ನಮಸ್ಕರಿಸಿ, ಜಡ್ಜರ ಹಿಂದೆಯೇ ಇದ್ದ ಕುರ್ಚಿಯಲ್ಲಿ ಆಸೀನರಾದರು. ಈ ನಮಸ್ಕಾರ, ಪರಸ್ಪರ ಪರಿಚಯಗಳೆಲ್ಲ ಯಾಂತ್ರಿಕವಾಗಿ ನಡೆದಿದ್ದುವು.

ಮಾ. ಮೆಡಲೀನ್ ಕುಳಿತನಂತರ, ಜಡ್ಜರ ಸೂಚನೆ ಪ್ರಕಾರ ಪಬ್ಲಿಕ್ ಪ್ರಾಸಿಕ್ಯೂಟರ್ ಅವನ ವಾದಗಳನ್ನು ಪ್ರಾರಂಭಿಸಿದ. ಅವನ ವಾದವೆಲ್ಲವೂ ಜರ್ಬಿನಿಂದ ಕೂಡಿತ್ತು. ಆ ಮಾತುಗಳ ಶಬ್ದ ಜೋಡಣೆಯೇ ಒಂದು ವಿಶೇಷತರದ್ದೆಂದು ಎಲ್ಲರಿಗೂ ಗೊತ್ತಿರಬಹುದು. 'ಗಂಡ' ಎನ್ನುವ

ಬದಲು 'ಜೀವನದ ಸಂಗಾತಿ,' 'ಪ್ಯಾರಿಸ್' ಎನ್ನುವ ಬದಲು 'ನಾಗರಿಕತೆಯ ಕೇಂದ್ರ,' 'ರಾಜ' ಎನ್ನುವ ಬದಲು 'ರಾಜಾಧಿರಾಜ,' ಬಿಷಪರನ್ನು 'ಇಹಲೋಕದ ದೇವರು,' ಸಂಗೀತವನ್ನು 'ಶ್ರವಣೋತ್ಸಾಹ' ಹೀಗೆಲ್ಲ ಹೇಳಿ, ಕರೆದು ವಾದಿಸಿದ. ಪಬ್ಲಿಕ್ ಪ್ರಾಸಿಕ್ಯೂಟರನ ವಾದದ ಸಾರಾಂಶ ಈ ತೆರನಾಗಿತ್ತು:

"ಆಗ ತಾನೇ ಮುರಿದಿದ್ದ, ಸೇಬುಹಣ್ಣು ಸಮೇತವಾದ, ಗೆಲ್ಲನ್ನು ಕೈಯಲ್ಲಿ ಹಿಡಿದುಕೊಂಡಿದ್ದ ಚೇಂಪ್‌ಮೆತ್ಯೂನನ್ನು ಸೇಬಿನ ತೋಟದ ಬಲು ಸಮೀಪದಲ್ಲೇ, ಗೆಲ್ಲು ಮುರಿದಿದ್ದ ಮರದ ಹತ್ತಿರ, ಪಾಗಾರಗೋಡೆಯ ಹೊರಗಡೆ ನೋಡಿರುವ ಸಾಕ್ಷಿಗಳು ಈ ಖಟ್ಲೆಯಲ್ಲಿ ಸಾಕ್ಷಿ ನುಡಿದಿದ್ದಾರೆ. ಅಪರಾಧಿಯನ್ನು ಹಿಡಿದು ಬಂಧಿಸಿದ್ದೂ ಅಲ್ಲೇ. ಸೇಬಿನ ಗೆಲ್ಲು ತಾನಾಗಿಯೇ ಮುರಿದು, ಪಾಗಾರ ಗೋಡೆ ದಾಟಿ, ಅಪರಾಧಿಯ ಕೈಗೆ ಬರಲಾರದಷ್ಟೆ! ಇದು ಒಂದನೆಯ ವಿಷಯ.

"ಎರಡನೆಯದಾಗಿ, ಚೇಂಪ್‌ಮೆತ್ಯೂ ಫೇವರೋಲ್ಸಿನವನೆಂದೂ ಮರಕಡಿವ ವೃತ್ತಿಯವನೆಂದೂ ಅವನ ಮಾತುಗಳಿಂದಲೂ ಸಾಕ್ಷಿಗಳಿಂದಲೂ ಋಜುಪಡಿಸಲಾಗಿದೆ; ಮತ್ತು ಸಾಕ್ಷಿಗಳಿಂದ 'ಚೇಂಪ್' ಶಬ್ದ 'ಜೀನ್' ಶಬ್ದದ ಮತ್ತೊಂದು ಪ್ರಯೋಗವೆಂದೂ ಜೀನ್‌ವಾಲ್‌ಜೀನನ ತಂದೆಯದು 'ಜೀನ್' ಕುಟುಂಬವೆಂದೂ ತಾಯಿಯದು 'ಮೆತ್ಯೂ' ಕುಟುಂಬವೆಂದೂ ಋಜುಪಡಿಸಲಾಗಿದೆ. ಈ ವಿಷಯದಲ್ಲಿ ಕೆಲವು ದಾಖಲೆಗಳನ್ನೂ ಸಾಕ್ಷಿಯಾಗಿ ಹಾಜರುಪಡಿಸಲಾಗಿದೆ. ಹೀಗೆ 'ಜೀನ್‌ಮೆತ್ಯೂ' ಶಬ್ದವೇ 'ಚೆಂಪ್‌ಮೆತ್ಯೂ' ಆಗುತ್ತದೆಂದೂ 'ಜೀನ್‌ವಾಲ್‌ಜೀನ್' ಎಂಬುದನ್ನೇ 'ಚೇಂಪ್‌ಮೆತ್ಯೂ' ಆಗಿ ಪರಿವರ್ತಿಸಿಕೊಂಡದ್ದೆಂದೂ ಆದ್ದರಿಂದಲೇ ಕೈದಿ ಚೇಂಪ್‌ಮೆತ್ಯೂನ ಹೆಸರು ಜೀನ್‌ವಾಲ್‌ಜೀನ್ ಎಂದೂ ಋಜುಪಡಿಸಲಾಗಿದೆಯೆಂದು ನಂಬುತ್ತೇನೆ.

"ಮೂರನೆಯದಾಗಿ, ಅಪರಾಧಿ ಚೇಂಪ್‌ಮೆತ್ಯೂನ ಜೊತೆಯಲ್ಲಿ ಹತ್ತೊಂಬತ್ತು ವರ್ಷಗಳಿದ್ದ ಮೂವರು ಕೈದಿಗಳೂ ಇವರೆಲ್ಲರನ್ನೂ ಬಲ್ಲ ಅನುಭವಸ್ಥರೂ ಪ್ರಾಮಾಣಿಕರೂ ಆಗಿರುವ ಇನ್‌ಸ್ಪೆಕ್ಟರ್ ಜೇವರ್ಟರೂ ಈ ಅಪರಾಧಿಯೇ ಜೀನ್‌ವಾಲ್‌ಜೀನನೆಂದು ಗುರುತಿಸಿ, ಪ್ರಮಾಣಪುರಸ್ಸರವಾಗಿ ಸಾಕ್ಷಿ ನುಡಿದಿರುತ್ತಾರಷ್ಟೆ!

"ಆಖೈರಿನದಾಗಿ, ಈತ ತನ್ನ ಹೆಸರಿನಿಂದ ಪ್ರಾರಂಭಿಸಿ ಸೇಬುಹಣ್ಣಿನ ಗೆಲ್ಲನ್ನು ಕದ್ದವರೆಗೂ ಎಲ್ಲವನ್ನೂ ನಿರಾಕರಿಸುವುದರಲ್ಲಿ ಇವನಿಗೆ ಎರಡು ಉದ್ದೇಶಗಳಿವೆಯೆಂದು ಹೇಳಬೇಕಾಗಿದೆ. ಯಾವ ತಪ್ಪನ್ನೂ ತಾನು ಮಾಡಿಲ್ಲವೆಂದು ಸಂಪೂರ್ಣ ನಿರಾಕರಿಸುವ ಉದ್ದೇಶ ಮೊದಲನೆಯದು; ಮತ್ತು ತಾನು ಹೆಡ್ಡ, ಬುದ್ಧಿಯಿಲ್ಲದವ ಎಂಬುದಾಗಿ ನಟಿಸಿ ನ್ಯಾಯಾಧೀಶರ ಕರುಣೆ ಸಂಪಾದಿಸಲು ಪ್ರಯತ್ನಿಸುವುದು ಎರಡನೆಯದು.

"ಇಂಥ ಸಾಕ್ಷಿ, ದಾಖಲೆ, ಪೂರ್ವದ ಅಪರಾಧಗಳು ಈತನಿಗೆ ವಿರೋಧವಾಗಿರುವಾಗ ಈ ಎರಡನೆ ಬಾರಿಯ ಅಪರಾಧಕ್ಕೆ ಇವನಿಗೆ ಜೀವಾವಧಿ ಕಠಿಣಸಜೆಯನ್ನೇ ವಿಧಿಸಬೇಕೆಂಬುದಾಗಿ ವಿನಂತಿಸಿಕೊಳ್ಳುತ್ತೇನೆ."

ಅಪರಾಧಿಕಡೆಯಿಂದ ವ್ಯವಹರಿಸಲು ಸರಕಾರ ಒಬ್ಬ ವಕೀಲನನ್ನು ಗೊತ್ತುಮಾಡಿತ್ತು. ಈ ವಕೀಲ ಆಪಾದಿತನ ಕಡೆಯಿಂದ ಈ ತೆರನಾಗಿ ವಾದಿಸಿದ, "ಸೇಬುಹಣ್ಣಿನ ಮರದ ಗೆಲ್ಲು ಆಪಾದಿತನ ಕೈಗೆಬಂದದ್ದು ಹೇಗೆಂದು ಋಜು ಮಾಡಿರುವುದಿಲ್ಲ. ಆ ಗೆಲ್ಲಿನ 'ಮೂಲ ಮರ' ಎನ್ನುವ ಮರಕ್ಕೂ ಆಪಾದಿತನಿದ್ದಲ್ಲಿಗೂ ಮಧ್ಯದಲ್ಲಿ ಸ್ಥಳದ ಅಂತರವಿದೆ, ಮಾತ್ರವಲ್ಲದೆ, ಪಾಗಾರಗೋಡೆಯೂ ಇದೆ. ಈ ಪಾಗಾರ ಗೋಡೆಯನ್ನು ಆಪಾದಿತ ಹತ್ತಿ ಇಳಿದದ್ದನ್ನು ಕಂಡವ

ರಿಲ್ಲ; ಮತ್ತು ಈ ಕುರಿತು ಪಬ್ಲಿಕ್ ಪ್ರಾಸಿಕ್ಯೂಟರ್ ಸಾಕಷ್ಟು ವಿಚಾರಣೆ ನಡೆಸಿರುವುದಿಲ್ಲ. ಊರೊಳಗೆ ಕಳ್ಳರು ಎಷ್ಟು ಜನರೂ ಇರಬಹುದು. ಇನ್ನೊಬ್ಬನ ತೋಟದ ಒಳಗೆ ಗೆಲ್ಲನ್ನು ಮುರಿದು, ತೋಟದ ಒಳಗೇ ಬರುವಾಗ, ತಾನು ಸಿಕ್ಕಿಬೀಳುವ ಸಂಭವ ಕಂಡು, ಗೆಲ್ಲನ್ನು ಗುರಿಯಿಲ್ಲದೆ ಬಿಸಾಡಿ, ತಾನು ಏಕೆ ಓಡಿಹೋಗಿರಬಾರದು? ಹಾಗೆ ಬಿದ್ದಿದ್ದ ಗೆಲ್ಲನ್ನು ಬಡ ಮುದುಕ ಹಣ್ಣಿಗಾಗಿ ಏಕೆ ತನ್ನ ಕೈಯಲ್ಲಿ ಹಿಡಿದಿರಬಾರದು? ಆದ್ದರಿಂದ, ಒಂದನೆಯದಾಗಿ, ಕಳವನ್ನು ಅಪರಾಧಿಯೇ ಮಾಡಿದ್ದೆಂದು ಋಜುಪಡಿಸಲಾಗಿರುವುದಿಲ್ಲ."

ಜೀನ್‌ವಾಲ್‌ಜೀನನೇ ಚೇಂಪ್‌ಮೆತ್ಯೂ ಎಂಬ ವಿಷಯದಲ್ಲಿ ಅಪರಾಧಿಯ ಕಡೆ ವಕೀಲ ವಿಶೇಷ ಮಾತಾಡಲಿಲ್ಲ. ಆದರೂ, ಅವನ ತರ್ಕ ಈ ತೆರನಾಗಿತ್ತು: "ತರ್ಕಕ್ಕಾಗಿ ಜೀನ್‌ವಾಲ್ ಜೀನನೇ ಚೇಂಪ್‌ಮೆತ್ಯೂ ಎಂದೊಪ್ಪಿದರೂ ಸೇಬು ಹಣ್ಣನ್ನು ಕದ್ದ ಕೇಸು ಋಜುವಾಗದಿರುವಾಗ ಹೆಸರು ಬದಲಾಯಿಸಿದ ಸಂಗತಿ ಕೋರ್ಟಿನ ಗಮನಕ್ಕೆ ಬರುವಂಥಾದ್ದಲ್ಲ. ಹೆಸರು ಬದಲಾಯಿಸಿ ದನೆಂಬುದಕ್ಕೆ ಆಪಾದಿತನ ಮೇಲೆ ಯಾವ ಕೇಸೂ ಇಲ್ಲವಷ್ಟೆ.

"ಆಪಾದಿತ ತನ್ನ ಮೇಲಿನ ಆರೋಪಣೆಗಳನ್ನೆಲ್ಲ ನಿರಾಕರಿಸುವನೆಂಬುದನ್ನು, ಮಹತ್ತರವಾದ ವರ್ಣನೆಗಳಿಂದ, ಆಪಾದಿತನ ನಡತೆ ಬಗೆಗಿನ ಕೊರತೆಯೆಂದು ಸರಕಾರಿ ವಕೀಲರಿಂದ ಸಾಧಿಸ ಲಾಗಿದೆ. ಆಪಾದಿತ ನಿಜವಾಗಿಯೂ ಒಬ್ಬ ಹೆಡ್ಡ. ಹೆಡ್ಡನಾಗಿರುವುದು ತಪ್ಪಲ್ಲವಷ್ಟೆ? ಆ ಬಗ್ಗೆ ನಾವು ಆಪಾದಿತನ ಕುರಿತು ಕನಿಕರಪಡಬೇಕಾಗಿದೆ. ಅಲ್ಲದೇ, ಜೀನ್‌ವಾಲ್‌ಜೀನನೇ ಚೇಂಪ್ ಮೆತ್ಯೂ ಆಗಿದ್ದ ಪಕ್ಷಕ್ಕಂತೂ ನಿರಾಕರಿಸಿದುದು ಕೇವಲ ಸ್ವಾಭಾವಿಕ. ಏಕೆಂದರೆ ಹಿಂದೆ ತಾನು ಅನುಭವಿಸಿದ್ದ ಹತ್ತೊಂಬತ್ತು ವರ್ಷಗಳ ಕಾರಾಗೃಹವಾಸದ ಸ್ಮರಣೆಯೇ ಒಬ್ಬನನ್ನು ಆ ರೀತಿ ನಿರಾಕರಿಸುವಂತೆ ಮಾಡದಿರದು. ಈ ಖಟ್ಲೆಯನ್ನು ದಯಮಾಡಿ ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ."

ಸರಕಾರಿ ವಕೀಲನ ಆಖೈರು ಭಾಷಣ ಹೀಗಿತ್ತು, "ಇಂಥ ಅವಿದ್ಯಾವಂತ, ಪಾಶವೀಸ್ವಭಾವದ ದರಿದ್ರಕುಟುಂಬಗಳ ಜೀವನದ ದಾರಿ ಕಳ್ಳತನ, ದರೋಡೆ, ಹಿಂಸೆ ಎಂಬುದು ಎಲ್ಲರಿಗೂ ಗೊತ್ತಿದೆಯಷ್ಟೆ. ಇಂಥವರ ಮನೋರಂಜನೆಗಾಗಿಯೂ ಅವರ ಕುಮಾರ್ಗಗಳಲ್ಲಿ ನೈಪುಣ್ಯ ಪಡೆಯಲೆಂದೂ ಒಂದು ಸಂಘವೇ ಪುಸ್ತಕಗಳನ್ನೂ ಇನ್ನಿತರ ಪ್ರಚಾರಕಾರ್ಯಗಳನ್ನೂ ಮಾಡು ತ್ತಿದೆ ಎಂಬುದು ಸಮಾಜ ತಿಳಿದಿರುವ ವಿಷಯ. ಪುನಃ ಪುನಃ ತಪ್ಪುಮಾಡುವವರ ಕುರಿತು ಕರುಣೆ ಸಮಾಜದ ಹಿತದೃಷ್ಟಿಯಿಂದ ಅಯೋಗ್ಯವೆಂಬುದನ್ನು ಜ್ಞಾನಸಂಪನ್ನ ಜ್ಯೂರಿಯವರೂ ಜಡ್ಜರೂ ತಿಳಿದಿರುವರೆಂದು ನಂಬಿದ್ದೇನೆ. ಜರ್ವಾಯಿಸಿನ ಕೇಸನ್ನು ಇಲ್ಲಿ ಪ್ರಸ್ತಾವಿಸಕೂಡದೆಂದು ಒಪ್ಪಿ ದರೂ ಆಪಾದಿತನ ಮಾನಸಿಕ ಚೇತನಗಳ ಮೇಲೆ ಅದು ಒಂದು ಬೆಳಕಾಗಬಹುದೆಂದು ನಂಬು ತ್ತೇನೆ. ಈ ಎಲ್ಲ ಕಾರಣಗಳಿಂದ ಆಪಾದಿತನಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸೋಣವಾಗಬೇಕೆಂದು ವಿನಂತಿಸಿಕೊಳ್ಳುತ್ತೇನೆ."

ಇಷ್ಟೆಲ್ಲ ಮಾತುಗಳು ನಡೆಯುತ್ತಿದ್ದಾಗ ಚೇಂಪ್‌ಮೆತ್ಯೂಗೆ ಯಾವುದೂ ಅರ್ಥವಾಗಲಿಲ್ಲ ವೆಂದು ಅವನ ಮುಖದಿಂದ ತಿಳಿಯಬಹುದಾಗಿತ್ತು. ಆದರೂ, ಮನುಷ್ಯರ ಬಾಯಿಯಲ್ಲಿ ಅಷ್ಟೊಂದು ಶಬ್ದಗಳು, ಅಷ್ಟು ಸರಾಗವಾಗಿ ಹೊರಡುತ್ತಿದ್ದ ಚಮತ್ಕಾರ ಕಂಡು ಅವನು ಆಶ್ಚರ್ಯಪಡುತ್ತಿದ್ದಂತೆ ತೋರಿದ. ಆದರೂ, ಅವನೇ ಜೀನ್‌ವಾಲ್‌ಜೀನ್ ಎಂದನ್ನುವಾಗ ಮಾತ್ರ ತಾನಲ್ಲವೆಂಬುದನ್ನು ತಲೆಯನ್ನು ಅತ್ತಿಂದಿತ್ತ ಅಲ್ಲಾಡಿಸಿ ತೋರಿಸುತ್ತಿದ್ದ. ಅಲ್ಲಿ ನೆರೆದಿದ್ದ ಸರ್ವಸಾಮಾನ್ಯರ ಅಭಿಪ್ರಾಯ ಪ್ರಕಾರ ಖಟ್ಲೆ ಋಜುಮಾಡಲಾಗಿತ್ತು.

೧೦. ಪ್ರತ್ಯಕ್ಷವಾದ ಸತ್ಯ

ನ್ಯಾಯಾಧೀಶರು ತುಂಬ ಕರುಣಾಳು. ನ್ಯಾಯಾಲಯದ ಕ್ರಮದಂತೆ ಅವರು ಚೇಂಪ್‌ಮೆತ್ಯೂ ಕೈದಿಯನ್ನು ಉದ್ದೇಶಿಸಿ ಪ್ರಶ್ನೆ ಕೇಳತೊಡಗಿದರು, "ಚೇಂಪ್‌ಮೆತ್ಯೂ, ಎದ್ದು ನಿಲ್ಲು. ಈ ವರೆಗೆ ನಡೆದ ವಿಚಾರಣೆಯನ್ನು ನೀನು ಕೇಳಿರುವೆಯಷ್ಟೆ. ನೀನು ಏನಾದರೂ ಹೇಳಿಕೊಳ್ಳುವುದಿದ್ದರೆ ಹೇಳು."

ಚೇಂಪ್‌ಮೆತ್ಯೂಗೆ ಯಾವ ಮಾತೂ ಅರ್ಥವಾಗಲಿಲ್ಲ. ಅವನು ಸುಮ್ಮನೆ ನಿಂತುಕೊಂಡಿದ್ದ. ಜಡ್ಜರು ಮೊದಲಂದಂತೆಯೇ ಪುನಃ ಹೇಳಿದಾಗ ಅವನು ಎಚ್ಚತ್ತು ಉತ್ತರಕೊಟ್ಟ, "ಇಷ್ಟೆಲ್ಲ ಬಂದದ್ದು ನಾನು ನನ್ನ ಯಜಮಾನ ಬಲೋಪರನ್ನು ವಿಚಾರಿಸದಿದ್ದುದರಿಂದ. ನಾನು ಅವರ ಕೈಕೆಳಗೆ ಬಂಡಿಚಕ್ರಗಳನ್ನು ಮಾಡುವ ದಿನಕೂಲಿ. ಚಿಕ್ಕಂದಿನಿಂದಲೂ ನನ್ನ ಕೆಲಸ ಅದೇ. ಅದೆಲ್ಲ ಮಾನ್ಸೈರ್ ಬಲೋಪರಿಗೆ ಗೊತ್ತಿದೆ. ನನಗೆ ಪ್ರಾಯ ದಾಟುತ್ತ ಬಂದ ಹಾಗೆ ಜೀವನ ನಡೆಸುವುದು ಕಷ್ಟವಾಯಿತು. ಆವರಣವಿಲ್ಲದ ವಿಶಾಲವಾದ ಸ್ಥಳದಲ್ಲಿ ಹಗಲಿಡೀ ಚಳಿಯಲ್ಲಿ ಕೆಲಸಮಾಡಿದರೆ ಮೈರಕ್ತವೆಲ್ಲ ಆರಿಹೋಗುತ್ತದೆ. ಬೇಸಗೆಯ ಸೆಕೆಯಲ್ಲಿ ಕೆಲಸ ಮಾಡುವುದು ಇನ್ನೂ ಹೆಚ್ಚಿನ ಕಷ್ಟ. ನನಗೊಬ್ಬ ಮಗಳಿದ್ದಳು. ಅವಳಿಗೆ ಅಗಸರ ಕೆಲಸ. ಚಳಿಗಾಲದಲ್ಲಿ ಅಗಸರ ಕೆಲಸ ಬಲು ಕಷ್ಟ. ನೀರು ಹೆಪ್ಪುಗಟ್ಟುವಾಗ ಮೈರಕ್ತವೂ ಹೆಪ್ಪುಗಟ್ಟುತ್ತದೆ. ಮಗಳ ಗಂಡ ಹೆಂಡತಿಯನ್ನು ಹಿಂಸಿಸುತ್ತಿದ್ದ. ಈಗ ಸತ್ತಿದ್ದಾನೆ. ಎಲ್ಲ ಮಾನ್ಸೈರ್ ಬಲೋಪರನ್ನು ವಿಚಾರಿಸಿದರೆ ಗೊತ್ತಾಗುತ್ತದೆ." ಇಷ್ಟು ಹೇಳಿ ಚೇಂಪ್‌ಮೆತ್ಯೂ ನೋಡುತ್ತ ನಿಂತ.

ಜಡ್ಜರು ಪುನಃ ಅಂದರು, "ಕೈದೀ! ಇತ್ತನೋಡು, ಈ ಪ್ರಶ್ನೆಗೆ ಉತ್ತರಕೊಡು. ಒಂದೋ 'ಅಲ್ಲ,' ಅಥವಾ 'ಇಲ್ಲ' ಎಂದು ಹೇಳು, ಇಲ್ಲದಿದ್ದರೆ, 'ಹೌದು' ಎಂದು ಹೇಳು. ನಾನು ಕೇಳುವ ಪ್ರಶ್ನೆ ಇಷ್ಟೇ : ಒಂದನೆಯದಾಗಿ, ನೀನು ಸೇಬುಹಣ್ಣು ಗೆಲ್ಲು ಸಮೇತ, ಗೋಡೆ ಏರಿ ಕದ್ದಿರುವೆಯೋ, ಅಥವಾ, ಕದ್ದಿರುವುದಿಲ್ಲವೋ? ಎರಡನೆಯದಾಗಿ, ಜೀನ್‌ವಾಲ್‌ಜೀನನೆಂಬ ನಿವೃತ್ತ ಕೈದಿ ನೀನು ಹೌದೋ, ಅಥವಾ ಅಲ್ಲವೋ?"

ಚೇಂಪ್‌ಮೆತ್ಯೂ ಕಕ್ಕುಬಿಕ್ಕಾದವನಂತೆ ನ್ಯಾಯಾಧೀಶರನ್ನೂ ಕೋರ್ಟಿನೊಳಗಿದ್ದವರನ್ನೂ ನೋಡಿದ. ಪಬ್ಲಿಕ್ ಪ್ರಾಸಿಕ್ಯೂಟರ್ ನ್ಯಾಯವನ್ನು ಎದುರುಬರಲು ಸಹಾಯ ನೀಡುವವನಂತೆ, ನ್ಯಾಯಾಧೀಶರ ಮಾತುಗಳನ್ನೇ, 'ಹೌದು' ಎಂದು ಉತ್ತರ ಬರಲು ಅನುಕೂಲವಾಗುವಂತೆ, ಸ್ವಲ್ಪ ತಿರುಗಿಸಿ ಹಾಕಿ, ಅವೇ ಪ್ರಶ್ನೆಗಳನ್ನು ಕೇಳಿದ.

ಚೇಂಪ್‌ಮೆತ್ಯೂ ಈ ಪ್ರಶ್ನೆಗೆ ಒಂದು ವಿಧದ ಉತ್ತರವಿತ್ತ. ಹಾಗೆ ಉತ್ತರವಿತ್ತದ್ದು ಅವನನ್ನು ಆಶ್ಚರ್ಯಗೆ ಪ್ರಶ್ನಿಸಿದ ಪಬ್ಲಿಕ್ ಪ್ರಾಸಿಕ್ಯೂಟರನಿಗೆ ಮುಖ್ಯವಾಗಿಯೂ ಅನಂತರ ಜಡ್ಜರಿಗೂ ಆಗಿತ್ತು. ಉತ್ತರ ಹೀಗಿತ್ತು, "ನಿಮಗೆ ಬುದ್ಧಿ ಇಲ್ಲ. ನಾನು ಏನೋ ಹೇಳಬೇಕೂಂತ ಇದ್ದಾಗ ನೀವು ಮಧ್ಯೆಬಾಯಿಹಾಕಿ ನನಗೆ ಅದೆಲ್ಲ ಮರೆತುಹೋಯ್ತು. ಆದರೂ ಜ್ಞಾಪಕಬಂದಷ್ಟು ಹೇಳುತ್ತೇನೆ. ಸೇಬುಹಣ್ಣನ್ನು ನಾನು ಕದೀಲಿಲ್ಲ. ನಾನು ಎರಡು ದಿನ ಊಟವಿಲ್ಲದೆ ಐಲಿಯಿಂದ ನಡೆದುಬರುತ್ತಿದ್ದಾಗ ದಾರಿಯಲ್ಲಿ ಬಿರುಗಾಳಿ, ಮಳೆ ಬಂತು. ಕೆಲವು ಕಡೆ ನೆರೆ ಬಂದಿತ್ತು. ನಾನು ಬರುವ ದಾರಿಯಲ್ಲೇ ಅದಾಗಿಯೇ ಬಿದ್ದಿದ್ದ ಸೇಬುಹಣ್ಣನ್ನು ತಿಂದದ್ದು ನಿಜ. ಹಸಿವೆಗಾಗಿ ಬಿದ್ದು ಸಿಕ್ಕಿದ ಹಣ್ಣನ್ನು ತಿಂದದ್ದು ತಪ್ಪಾಯ್ತೂಂತ ಈಗ ಗೊತ್ತಾಯಿತು. ಇದೆಲ್ಲ ಮಾನ್ಸೈರ್ ಬಲೋಪರನ್ನು ವಿಚಾರಿಸಿದರೆ ಗೊತ್ತಾಗುತ್ತದೆ. ನಾನು ಹುಟ್ಟಿದ್ದೆಲ್ಲಿ, ನನ್ನ ತಂದೆ ತಾಯಿ ಯಾರೂಂತೆಲ್ಲ

ನನಗೆ ಗೊತ್ತಿಲ್ಲ. ನೀವು ಅದನ್ನೆಲ್ಲ ಹುಡುಕಿ ಹಿಡಿದದ್ದು ಬುದ್ಧಿವಂತಿಕೆಯೇ ಸರಿ. ನನಗೂ ತಂದೆತಾಯಿ ಇದ್ದಿದ್ರಾಗ್ತಿತ್ತೂಂತ ಕಾಣುತ್ತದೆ. ನನಗೆ ಮನೆ, ಮಠ ಒಂದೂ ಇಲ್ಲ. ನನ್ನ ಹೆಸರು ಚೇಂಪ್‌ಮೆತ್ತ್ಯೂ ಅಂತ. ಅದಕ್ಕೆ ಕೂಡಿಸಿಕೊಂಡು ಹಿಂದೂ ಇಲ್ಲ, ಮುಂದೂ ಇಲ್ಲ. ನಾನು ಚಿಕ್ಕವನಾಗಿದ್ದಾಗ ನನ್ನನ್ನು 'ಬಾಲಕ ಚೇಂಪ್' ಎಂತ ಹೇಳ್ತಿದ್ರು; ಮುದುಕನಾದಾಗ ಮುದ್ಕ 'ಚೇಂಪ್‌ಮೆತ್ತ್ಯೂ' ಅಂತ ಹೇಳ್ತಾರೆ. ಜೀನ್‌ವಾಲ್‌ಜೀನ್ ಎಂತ ಹೆಸರು ನಾನು ಕೇಳಿಲ್ಲ. ಫೇವರೋಲ್ಸಿಗೂ ಎವರ್ಗಂಜಿಗೂ ಹೋಗಬೇಕಾದರೆ ಕೈದಿಯಾಗಿರಬೇಕೂಂತ ನನಗೆ ಗೊತ್ತಿಲ್ಲ —ಕೇಳಿ ಬೇಕಾದ್ರೆ, ಮಾನ್ಯರ್ ಬಲೋಪರನ್ನು !"

ಅನಂತರ ಮೂವರು ಹಳೆ ಕೈದಿಗಳನ್ನು ಚೇಂಪ್‌ಮೆತ್ತ್ಯೂನ ಎದುರು ನಿಲ್ಲಿಸಿ ಅವರಿಗೆ ಅವನ ಗುರುತು ಇದೆಯೋ ಎಂದು ಜಡ್ಜರು ಕೇಳಿದರು. ಅವನ ಗುರ್ತು ಗೊತ್ತಿದೆಯಾಗಿ ಎಲ್ಲರೂ ಹೇಳಿದರು, ಅವನ ಹೆಸರನ್ನು ಹೇಳಿದರು; ಅವನು ತಮ್ಮ ಜೊತೆಯಲ್ಲೇ ಇದ್ದವನೆಂದೂ ಹೇಳಿದರು. ಅನಂತರ ಕೋರ್ಟಿನಲ್ಲಿ ಜೇವರ್ಟನ ಸಾಕ್ಷಿಯ ಒಕ್ಕಣೆಗಳನ್ನು ಓದಿ ಹೇಳಿದರು.

ನ್ಯಾಯಾಧೀಶರು ಚೇಂಪ್‌ಮೆತ್ತ್ಯೂವನ್ನು ಕರೆದು, ಆ ಮೂವರು ಸಾಕ್ಷಿಗಳ ಕುರಿತು ಏನಾದರೂ ಹೇಳುವುದಕ್ಕಿದೆಯೋ ಎಂದು ಕೇಳಿದರು. "ಓ, ಅವರು ಬಹಳ ಹುಷಾರಿನವರು !" ಎಂದು ಮಾತ್ರ ಚೇಂಪ್‌ಮೆತ್ತ್ಯೂ ಹೇಳಿ ಸುಮ್ಮನಾದ.

ಈ ಸಮಯದಲ್ಲೇ ಬಲು ಗಂಭೀರವಾದ ದೊಡ್ಡ ಸ್ವರದಿಂದ ಹಳೇಕೈದಿಗಳನ್ನು ಸಂಬೋಧಿಸಿ, "ಬ್ರಿವೆಟ್, ಚೆನಿಲ್‌ಡ್ಯೂ, ಕೊಚ್‌ಪಿಲ್ಲೇ! ಇತ್ತ ನೋಡಿ," ಎಂದು ಅಂದದ್ದು ಎಲ್ಲರಿಗೂ ಕೇಳಿಸಿತು. ಮಾ. ಮೆಡಲೀನ್ ತಮ್ಮ ಸ್ಥಳದಿಂದೆದ್ದು, ಜಡ್ಜರ ಎದುರಿನ ಚಂದದ ಕಟಕಟೆಯನ್ನು ದಾಟಿ, ಹಳೆ ಕೈದಿಗಳಿಗೆ ಕಾಣುವಂತೆ ನಿಂತು ಹೀಗಂದಿದ್ದರು. ಜಡ್ಜರೂ ಜ್ಯೂರಿಗಳೂ ಮಾ. ಬಮಟ್‌ಬಾಯ್ಸನೂ ಏಕಕಂಠದಿಂದ "ಮಾನ್ಯರ್ ಮೆಡಲೀನ್ !" ಎಂದು ಆಶ್ಚರ್ಯದಿಂದ ನುಡಿದರು.

೧೧. ಸತ್ಯವು ಸುಂದರವೇ?

ಸರಿ, ಅವರು ಮಾ. ಮೆಡಲೀನರೇ ಆಗಿದ್ದರು. ಯಾವ ವಿಧದ ಉದ್ವೇಗವೂ ಇಲ್ಲದೆ, ಸ್ಥಿರವಾಗಿ ನಿಂತು, ಶಾಂತವಾಗಿ ಜನರ ದೃಷ್ಟಿಯನ್ನು ಎದುರಿಸುತ್ತಿದ್ದ ಮಾ. ಮೆಡಲೀನರನ್ನು ಕಂಡು, ಅಲ್ಲಿ ಕೇಳಿಬಂದ ಮಾತು ಯಾರ ಬಾಯಿಯಿಂದ ಹೊರಟಿರಬಹುದೆಂದು ನೆರೆದಿದ್ದ ಜನರು ಆಶ್ಚರ್ಯಪಟ್ಟರು. ಮಾ. ಮೆಡಲೀನ್ ಅವರ ಹಿಂದಿನ ಜೊತೆಗಾರರಾಗಿದ್ದ ಮೂವರು ಕೈದಿಗಳ ಸಮೀಪಕ್ಕೆ ಹೋಗಿ ನಿಂತು, ಅವರಿಗೆ ತಮ್ಮ ಗುರುತು ಇದೆಯೋ ಎಂದು ವಿಚಾರಿಸಿದರು. ಕೈದಿಗಳು ಆಶ್ಚರ್ಯಪಡುತ್ತ ತಮಗೆ ಯಾರಿಗೂ ಅವರ ಗುರುತು ಇಲ್ಲವಾಗಿ ಹೇಳಿದರು. ಅನಂತರ ಮಾ. ಮೆಡಲೀನ್ ಜ್ಯೂರಿಯವರನ್ನು ನೋಡಿ, ನಿರುದ್ವಿಗ್ನತೆಯಿಂದ, "ಜ್ಯೂರಿ ಮಹಾಶಯರೇ, ಈಗ ನಿಮ್ಮ ಎದುರು ಅಪರಾಧಿಯೆಂದು ಕೈದಿ ಆಗಿರುವ ಚೇಂಪ್‌ಮೆತ್ತ್ಯೂ ನಿರಪರಾಧಿಯೆಂದು ದಯಮಾಡಿ ತೀರ್ಮಾನಿಸಿ. ನೀವು ಅಪೇಕ್ಷಿಸುತ್ತಿರುವ ವ್ಯಕ್ತಿಯೇ ನಾನು. ನಾನೇ ಜೀನ್‌ವಾಲ್ ಜೀನ್," ಎಂದು ಅಂದರು.

ಅಲ್ಲಿ ನೆರೆದಿದ್ದವರೆಲ್ಲರ ಉಸಿರು ತತ್ಕಾಲ ನಿಂತಿತು. ಚಿಕ್ಕ ಒಂದು ಸದ್ದೇ ಆದರೂ ದೊಡ್ಡದಾಗಿ ಕೇಳಿಸುವಂಥ ಪರಿಸ್ಥಿತಿ ಅಲ್ಲಿತ್ತು, ಕರುಣಾಳುವಾಗಿದ್ದ ಜಡ್ಜರು ತಮ್ಮ ಕಣ್ಣುಗಳನ್ನು

ಒರೆಸಿಕೊಂಡು ಸರಕಾರಿ ವಕೀಲರ ಹತ್ತಿರ ಪಿಸುಮಾತಿನಿಂದ ಏನೋ ಹೇಳಿದರು.

ಸರಕಾರಿ ವಕೀಲರು ಜನರನ್ನು ನೋಡಿ, "ಇಲ್ಲಿ ನಿಮ್ಮ ಪೈಕಿ ವೈದ್ಯರು ಯಾರಾದರೂ ಇದ್ದರೆ ದಯಮಾಡಿ ತಿಳಿಸಿ. ಎಂ— ಪಟ್ಟಣದ ಮೇಯರರಾದ, ಪರಮ ಗೌರವಾನ್ವಿತ ಮಾನ್ಸರ್ ಮೆಡಲೀನರ ಕೀರ್ತಿ, ಯೋಗ್ಯತೆಗಳ ಜೊತೆ ಇಂದಿನ ದುಃಖವನ್ನು ಗಣಿಸಿ ಪ್ರಸ್ತಾವಿಸುವ ಸಮಯವಿದಲ್ಲ. ಯಾರಾದರೂ ತಮ್ಮೊಳಗೆ ವೈದ್ಯರಿದ್ದರೆ ದಯಮಾಡಿ ಎದುರುಬನ್ನಿ," ಎಂದು ಗಟ್ಟಿಯಾಗಿ ಹೇಳಿದರು.

ಸರಕಾರಿ ವಕೀಲರು ಮತ್ತೇನನ್ನೋ ಹೇಳುವುದರಲ್ಲಿದ್ದರು. ಅಷ್ಟರಲ್ಲೇ ಮಾ. ಮೆಡಲೀನ್ ಗಂಭೀರವಾಗಿ ಹೇಳತೊಡಗಿದರು, "ನಿಮ್ಮ ಹೃತ್ಪೂರ್ವಕ ಪ್ರೀತಿಗಾಗಿ ನಾನು ನಿಮ್ಮನ್ನು ವಂದಿಸುವೆನು. ಆದರೆ, ನನಗೆ ಹುಚ್ಚುಹಿಡಿದಿಲ್ಲ. ಮಹತ್ತಾದ ಅನ್ಯಾಯವೊಂದು ನಿಮ್ಮೆಲ್ಲರಿಂದ ಅರಿಯದೇ ಇಲ್ಲಿ ಆಗುವುದಿತ್ತು. ನಾನದನ್ನು ಧರ್ಮದೃಷ್ಟಿಯಿಂದ ತಪ್ಪಿಸಿರುವೆನು. ನೀವು ಹುಡುಕುತ್ತಿದ್ದ ದಲಿತ, ದುಃಖಿತ ಕೈದಿಯೇ ನಾನು. ಈ ಸಮೂಹದಲ್ಲಿ ವಸ್ತುಸ್ಥಿತಿಯನ್ನು ಸರಿಯಾಗಿ ತಿಳಿದಿರುವಾತ ನಾನೊಬ್ಬ ಮಾತ್ರ. ನನ್ನ ಈ ಕರ್ತವ್ಯಪಾಲನೆಯನ್ನು ದೇವರು ನೋಡುತ್ತಿರುವನೆಂಬ ಜ್ಞಾನವೇ ನನಗೆ ಸಿಕ್ಕಿರುವ ಪ್ರತಿಫಲ. ನಾನು ಅದರಿಂದ ತೃಪ್ತನಾಗಿಯೂ ಇದ್ದೇನೆ. ಕೃತಕ ಹೆಸರಿನ ಮರೆಯಲ್ಲಿ ನಾನು ಸಿರಿವಂತನಾದೆ, ಮೇಯರನಾದೆ, ನ್ಯಾಯಧರ್ಮಸಮ್ಮತವಾದ ತಮ್ಮೆಲ್ಲರ ಸಮಾಜದೊಳಗೆ ಪ್ರವೇಶಿಸಿ ಬದುಕಲು ಪ್ರಯತ್ನಿಸಿದೆ. ಆದರೆ ವಿಧಿಯ ಗುರಿಯೇ ಬೇರೊಂದು ಇರುವುದಾಗಿ ತೋರುತ್ತದೆ. ನನ್ನ ಚರಿತ್ರೆಯನ್ನು ಪ್ರಕೃತ ನಾನು ಹೇಳುವುದಿಲ್ಲ. ಅದು ಅದಾಗಿಯೇ ಹೊರಬೀಳುವುದು. ಬಿಷಪರ ಮನೆಯಿಂದ ಬೆಳ್ಳಿ ಸಾಹಿತ್ಯವನ್ನು ಕದ್ದದ್ದೂ ಜರ್ವಾಯಿಸನಿಂದ ಹಣವನ್ನು ಸೆಳೆದದ್ದೂ ನಾನೇ. ಜರ್ವಾಯಿಸನ ನಾಣ್ಯ ನನ್ನ ಮನೆಯಲ್ಲಿ ಈಗಲೂ ಇದೆ. ಇದೆಲ್ಲ ಪರಿಪೂರ್ಣ ನಿಜ. ಜೀನ್‌ವಾಲ್‌ಜೀನ್ ಭಯಂಕರವಾದ ವ್ಯಕ್ತಿ ಎಂಬುದು ಆಧಾರಪೂರ್ವಕವಾದ ಮಾತು. ಆದರೆ, ಆ ರೀತಿ ನಾನು ಆಗಲು ನಾನೇ ಪೂರ್ಣ ಕಾರಣನಲ್ಲ. ನನ್ನಂಥ ಹೀನ ತಮ್ಮಂಥ ನ್ಯಾಯಶಾಲಿಗಳಿಗೂ ಸಮಾಜಕ್ಕೂ ಬುದ್ಧಿಹೇಳುವುದು ನ್ಯಾಯವಾಗಲಾರದು. ಆದರೂ ದಯಮಾಡಿ ನನ್ನ ಎರಡು ಮಾತುಗಳನ್ನು ಕೇಳಿ. ಅಪಕೀರ್ತಿ ಮನುಷ್ಯನ ಉತ್ಕರ್ಷೆಯನ್ನು ತಡೆಹಿಡಿಯುತ್ತದೆ. ಹಾಗೆಯೇ ಜೈಲುಗಳು ಮನುಷ್ಯತ್ವವನ್ನು ನಾಶಪಡಿಸುತ್ತವೆ. ಇದಕ್ಕೆ ನಾನೇ ಉದಾಹರಣೆ. ಟೌಲನ್ ತುರಂಗವನ್ನು ಸೇರುವ ಮೊದಲು ನಾನೊಬ್ಬ ಅಶಿಕ್ಷಿತ, ಮಂದಬುದ್ಧಿಯ ಕೃಷಿಕನಾಗಿದ್ದೆ. ತುರಂಗ ನನ್ನನ್ನು ಬದಲಿಸಿತು. ಮಂದಬುದ್ಧಿಯಿಂದ ಕ್ರೂರಬುದ್ಧಿಗೆ ಪರಿವರ್ತನೆ ಹೊಂದಿದೆ. ನಿಸ್ತೇಜ ಕುಂಟೆಯಾಗಿದ್ದವನು ಉರಿಯುವ ಕೊಳ್ಳಿಯಾದೆ. ತುರಂಗದಲ್ಲಿಯ ಕ್ರೂರ ಹಿಂಸೆಗಳು ನನ್ನ ಮನುಷ್ಯತ್ವವನ್ನು ನಾಶಪಡಿಸಿದುವು. ಅನಂತರ ಡಿ— ಪ್ರದೇಶದ ಬಿಷಪರ ಅನುಕಂಪ, ಧರ್ಮಬೋಧೆ, ಆಶೀರ್ವಾದಗಳಿಂದ ಉತ್ತಮನಾದೆ. ಆದರೆ, ಇಂದು ಹಿಂದಿನ ನನ್ನ ಅಪಕೀರ್ತಿಯೇ ನನ್ನ ಅಭ್ಯುದಯವನ್ನು ತಡೆಹಿಡಿಯಲಿದೆ. ಈಗ ಜೇವರ್ಟ್ ಇಲ್ಲಿ ಇದ್ದಿದ್ದರೆ ನಾನು ಹೇಳುವುದನ್ನೆಲ್ಲ ಅರ್ಥಮಾಡುತ್ತಿದ್ದ."

ಹೀಗೆ ಹೇಳಿ, ಬ್ರಿವೆಟ್ ಹಿಂದೆ ತನ್ನ ಜೊತೆಯಲ್ಲಿದ್ದಾಗ ಎಂಥ ದುಸ್ತು ಧರಿಸುತ್ತಿದ್ದನೆಂದು ವಿವರಿಸಿದರು. ಚೆನಿಲ್‌ಡ್ಯೂನ ಬಲಭುಜದಲ್ಲಿ ಬಟ್ಟೆಯ ಒಳಗಿದ್ದ T.F.P ಎಂಬ ಮೂರು ಅಕ್ಷರಗಳನ್ನು ಅವರೇ ತೋರಿಸಿದರು; ಮತ್ತೂ ಕೊಚ್‌ಪಿಲ್ಲೆಯ ಕಂಕುಳಲ್ಲಿದ್ದ ಮಾರ್ಚ್ ೧, ೧೮೧೫ ಎಂಬ ಅಂಕೆಗಳನ್ನು ಇದೇ ರೀತಿಯಲ್ಲಿ ತೋರಿಸಿದರು.

ಅಲ್ಲಿದ್ದವರೆಲ್ಲರಿಗೂ ಭಯವೂ ಆಶ್ಚರ್ಯವೂ ಬಡಿದುವು. ಮನುಷ್ಯರಿಂದ ಅಸಾಧ್ಯವೆಂಬ

ಧರ್ಮತತ್ಪರತೆ, ತ್ಯಾಗ, ದೈವಿಕ ಒಲುಮೆಗಾಗಿ ನಡೆದಿದ್ದ ಸಾಹಸಗಳು ಆ ಮಹಾಸಭೆಯನ್ನೇ ವಿಸ್ಮಯಗೊಳಿಸಿದುವು. ಅವರೆಲ್ಲರೂ ಒಂದು ವಿಧದ ಪಾರಲೌಕಿಕ ವಾತಾವರಣದಲ್ಲಿ ತಾವಿದ್ದಂತೆ ಗ್ರಹಿಸತೊಡಗಿದರು. ಮಾ. ಮೆಡಲೀನ್ ಮತ್ತೂ ಮುಂದುವರಿಸಿ ಮಾತಾಡಿದರು, "ನಾನೇ ಜೀನ್ ವಾಲ್‌ಜೀನನೆಂದು ಋಜುಪಡಿಸಿದ್ದಾಯಿತು. ಇನ್ನು ನಾನು ದಸ್ತಗಿರಿ ಮಾಡಲ್ಪಡಲು ನಿಂತಿದ್ದೇನೆ. ಆದರೆ, ತಾವು ಯಾವ ಕೆಲಸವನ್ನೂ ಕೈಗೊಳ್ಳದಿದ್ದರೆ ನಾನಾಗಿಯೇ ಕೋರ್ಟಿನ ಸಮಯವನ್ನು ಹಾಳುಮಾಡುವುದಿಲ್ಲ. ನನ್ನ ಹೆಸರು, ವಿಳಾಸಗಳನ್ನು ಬಲ್ಲ ಸರಕಾರಿ ವಕೀಲರು ನನ್ನನ್ನು ಎಂದಾದರೂ ಕೈದು ಮಾಡಿಸಬಹುದಷ್ಟೆ. ನನ್ನಿಂದ ಆಗತಕ್ಕ ಕೆಲಸ ಅಪಾರವಿದೆ. ಆದ್ದರಿಂದ ಸದ್ಯ ನಾನು ಹೋಗುವೆನು." ಹೀಗೆಂದು, ಮಾ. ಮೆಡಲೀನ್ ಅಲ್ಲಿಂದ ಹೊರಗೆ ನಡೆದರು.

ಲಕ್ಷಜನರಲ್ಲಿ ಒಬ್ಬನಿರದಂಥ ಈ ಮಹಾವ್ಯಕ್ತಿ ಈ ತೆರನಾಗಿ ಜನಸ್ತೋಮದ ಮಧ್ಯೆ ದಾಟುವಾಗ ಜನರು ತಾವಾಗಿಯೇ, ಯಾಂತ್ರಿಕವಾಗಿ, ಬಾಗಿಲುಗಳನ್ನು ತೆರೆದು ಅವರು ಹೋಗಲು ಭಕ್ತಿಯಿಂದ ದಾರಿ ಬಿಟ್ಟುಕೊಟ್ಟರು.

ಸ್ವಲ್ಪ ಹೊತ್ತಿನ ಮೇಲೆ ಜಡ್ಜರು ಚೇಂಪ್‌ಮೆತ್ಯೂ ನಿರಪಾಧಿಯೆಂದು ತೀರ್ಪು ಕೊಟ್ಟು ಅವನನ್ನು ಬಿಟ್ಟುಕೊಟ್ಟರು.

ಈ ಎಲ್ಲ ಮಾತುಗಳನ್ನು ಕೇಳುತ್ತಲೂ ಎಲ್ಲ ಪ್ರಸಂಗಗಳನ್ನು ನೋಡುತ್ತಲೂ ಇದ್ದ ಚೇಂಪ್‌ಮೆತ್ಯೂಗೆ ಯಾವುದೂ ಅರ್ಥವಾಗಲಿಲ್ಲ. ತನ್ನನ್ನು ಬಿಟ್ಟರೆಂದು ಮಾತ್ರ ತಿಳಿಯುತ್ತ, ಅಲ್ಲಿದ್ದವರೆಲ್ಲ ಅಷ್ಟೊಂದು ಹುಚ್ಚರಾದುದು ಹೇಗೆಂದು ಪರಮಾಶ್ಚರ್ಯಪಟ್ಟುಕೊಂಡು ಕೋರ್ಟಿನಿಂದ ಹೊರಟು ಹೋದ.

ಎಂಟನೆಯ ಸಂಪುಟ

೧. ಬೆಳ್ಳಗಾದ ತಲೆಕೂದಲು

ರಾತ್ರಿಯ ಹೆಚ್ಚಂಶದಲ್ಲಿ ಎಚ್ಚರವಾಗಿದ್ದ ಫ್ಯಾಂಟೈನ್ ಬೆಳಗಿನಜಾವದಲ್ಲಿ ಸ್ವಲ್ಪ ನಿದ್ರೆ ಮಾಡುತ್ತಿದ್ದಳು. ಸಿಸ್ಟರ್ ಸಿಂಪ್ಲಿಸ್ ಪಕ್ಕದ ಕೋಣೆಯಲ್ಲಿ ಕಷಾಯ ತಯಾರಿಸುತ್ತಿದ್ದಳು. ಸೂರ್ಯೋದಯಕ್ಕೆ ಸಮೀಪವಾಗಿತ್ತು. ಇಂಥ ವೇಳೆ ಬಲು ಅನಿರೀಕ್ಷಿತವಾಗಿ ಮಾ. ಮೆಡಲೀನ್ ಫ್ಯಾಂಟೈನಳ ಕೋಣೆಯಲ್ಲಿ ಬಂದು ನಿಂತರು. ಸಿಸ್ಟರ್ ಸಿಂಪ್ಲಿಸಳಿಗೆ ಬಹಳ ಆಶ್ಚರ್ಯ. ಅಲ್ಲಿ ನಿಂತಿದ್ದವರು ಮಾ. ಮೆಡಲೀನರೇ ಹೌದೆಂದು ಪೂರ್ಣ ಖಚಿತವಾದ ಮೇಲೆ ಫ್ಯಾಂಟೈನಳ ಆರೋಗ್ಯಸ್ಥಿತಿಯನ್ನೆಲ್ಲ ಅವರಿಗೆ ತಿಳಿಸಿದಳು. ಹೀಗೆ ಅವರೊಡನೆ ಮಾತಾಡುತ್ತ ಇದ್ದಹಾಗೆಯೇ ಅವಳು ಮಾ. ಮೆಡಲೀನರನ್ನು ನೋಡಿ ಗಾಬರಿಯಿಂದ, "ನಿಮಗೇನಾಗಿದೆ, ಸರ್? ನಿಮ್ಮ ತಲೆಕೂದಲೆಲ್ಲ ಬೆಳ್ಳಗಾಗಿದೆಯಲ್ಲ!" ಎಂದು ಕೇಳಿದಳು. ಅಲ್ಲದೆ, ಒಂದು ಕನ್ನಡಿ ತಂದು ಮಾ. ಮೆಡಲೀನರ ಕೈಗೆ ಕೊಟ್ಟಳು. ಅವರು ತನ್ನ ಮುಖ ಮತ್ತು ತಲೆಯನ್ನೆಲ್ಲ ನೋಡಿಕೊಂಡು, "ಬೆಳ್ಳಗಾದದ್ದಷ್ಟೆ! ಹಾಗಾದದ್ದು ಸರಿ," ಎಂದಂದುಕೊಂಡರು.

ಅನಂತರ ಅವರು ಫ್ಯಾಂಟೈನಳ ಮಂಚದ ಹತ್ತಿರ ಬಂದು ನಿಂತರು. ಅವರು ಬಂದದ್ದು ಅವಳಿಗೆ ಹೇಗೋ ತಿಳಿಯಿತು. ಅವಳು ಕಣ್ಣು ತೆರೆದು ಮಾ. ಮೆಡಲೀನರನ್ನು ನೋಡಿ, ಅರೆನಗುವಿನಿಂದ, "ಮತ್ತೆ, ನನ್ನ ಕೋಸೆಟ್ಟ್?" ಎಂದು ಕೇಳಿದಳು.

೨. ಫ್ಯಾಂಟೈನ್ ಸಂತುಷ್ಟಳಾದಳು

ಫ್ಯಾಂಟೈನಳ ಆನಂದ ಹೇಳತೀರದು. ಮಾ. ಮೆಡಲೀನ್ ಕೋಸೆಟ್ಟೆಯನ್ನು ಕರೆತಂದಿರ ಬೇಕೆಂಬ ದೃಢನಂಬಿಕೆಯಿಂದಲೇ ಅವಳು ಅಷ್ಟೊಂದು ಹರ್ಷಿತಳಾಗಿದ್ದಳು. ಅವಳ ಪ್ರಶ್ನೆಗಳಿಗೆ ಉತ್ತರಕೊಡಲು ಮಾ. ಮೆಡಲೀನರಿಗೆ ಕಷ್ಟವಾಯಿತು. ಅವರ ಬದಲು ವೈದ್ಯರೆಂದರು, "ನೋಡು, ನಿನ್ನ ಕಾತರತೆಯೇ ನಿನ್ನ ಖಾಯಿಲೆಯನ್ನು ಹೆಚ್ಚಿಸುವುದು. ನೀನು ಶಾಂತಳಾಗಬೇಕು. ಕೋಸೆಟ್ಟೆಯನ್ನು ನಿನಗೆ ತೋರಿಸಬಹುದೆಂದು ನಿನ್ನ ಸ್ಥಿತಿಯನ್ನು ಪರೀಕ್ಷಿಸಿ ನಾನು ಹೇಳಿದ ಕೂಡಲೆ ಅವಳನ್ನು ತೋರಿಸುವರು. ಸದ್ಯ ನೀನು ಶಾಂತಳಾಗು."

"ನೀವು ಹೇಳಿದ ಹಾಗೆ ಕೇಳುತ್ತೇನೆ, ಡಾಕ್ಟರರೇ! ನಾನು ಎಚ್ಚತ್ತು ಕಣ್ಣು ಬಿಡುವಾಗ ಕೋಸೆಟ್ಟೆಯನ್ನು ನನ್ನ ಬಳಿ ಮಲಗಿಸಿರುವರು ಎಂದು ಸ್ವಪ್ನ ಕಂಡಿದ್ದೆ; ಹಾಗಾಗಿ ಹಾಗೆ ಕೇಳಿದೆ," ಎಂದು ಹೇಳಿ ಸುಮ್ಮನಾದಳು.

ವೈದ್ಯರು ಅಲ್ಲಿಂದ ಹೋದನಂತರ ಫ್ಯಾಂಟೈನ್ ಮಾ. ಮೆಡಲೀನರನ್ನು ನೋಡಿ, "ಆ ಡಾಕ್ಟರ್ ಒಬ್ಬ ಕತ್ತೆ. ನಾನೊಂದಾವೃತ್ತಿ ಕೋಸೆಟ್ಟೆಯನ್ನು ನೋಡಿದರೆ ನನಗೆ ತುಂಬ ಸುಖವಾಗುತ್ತಿತ್ತು. ಮಾನ್ಯರರೇ! ಕೋಸೆಟ್ಟೆ ಹೇಗಿರುವಳು? ಅವಳು ಬಲು ಸುಂದರಿಯಲ್ಲವೇ? ಬಂಡಿಯಲ್ಲಿ ಬರುವಾಗ ತುಂಬ ಚಳಿ ಆಗಲಿಲ್ಲವೇನು?" ಎಂದು ಮೊದಲಾಗಿ ಕೇಳಿದಳು.

ಇದೇ ಸಮಯದಲ್ಲಿ ಹೊರಗೆ ಅಂಗಣದಲ್ಲಿ ಒಬ್ಬಳು ಹುಡುಗಿ ಗಹಗಹಿಸಿ ನಗುತ್ತ ಗುಬ್ಬಚ್ಚಿಗಳನ್ನು ಹಿಡಿಯಲು ಓಡಿದಳು. ಆ ನಗುವನ್ನು ಕೇಳಿ ಫ್ಯಾಂಟೈನ್ ಬಲು ಚುರುಕಾದಳು. ಮಾ. ಮೆಡಲೀನರ ಹತ್ತಿರ ಪುನಃ, "ಮಾನ್ಯರರೇ! ನೀವೆಲ್ಲ ಒಂದಾಗಿ ಕೋಸೆಟ್ಟೆಯನ್ನು ಅಡಗಿಸಿಟ್ಟರೂ ಅವಳು ಬಂದಿರುವುದು ನನಗೆ ಗೊತ್ತಾಗುತ್ತದೆ. ಅವಳು ನಕ್ಕ ಸ್ವರ ಗೊತ್ತಾಗಲಿಲ್ಲಾಂತ ಗ್ರಹಿಸಿದಿರೊ? ಇರಲಿ, ಅವಳಿಗೆ ಓದುಬರಹ ಬರುತ್ತದೋ, ಅವಳಿಗೀಗ ಏಳು ವರ್ಷ ಪ್ರಾಯವಾಯ್ತು. ಇನ್ನು ಐದು ವರ್ಷದಲ್ಲಿ ಬಿಳಿಬಲೆಯ ಗವಸನ್ನು ಮುಚ್ಚಿಕೊಂಡು ಇಗರ್ಜಿಗೆ ಹೋಗುವ ಚಿಕ್ಕ ರಾಣಿಯಾಗಿ ಬಿಡುವಳು." ಹೀಗೆ ಅವಳು ಮಾತಾಡುತ್ತಿದ್ದ ಹಾಗೆಯೇ ಅವಳ ಮುಖದಲ್ಲಿ ಕಾಂತಿಯೆಲ್ಲ ಮಾಯವಾಯಿತು. ಕಣ್ಣುಗಳು ವಿಕಾರವಾದುವು. ಅವಳು ನೆಟ್ಟ ದೃಷ್ಟಿಯಿಂದ ಮಾ. ಮೆಡಲೀನರ ಹಿಂಬದಿಯನ್ನು ನೋಡುತ್ತಿದ್ದಳು.

ಮಾ. ಮೆಡಲೀನ್ ಇದನ್ನು ಕಂಡು ಗಾಬರಿಗೊಂಡರು. ಅವಳ ದೃಷ್ಟಿಯನ್ನೇ ಹಿಂಬಾಲಿಸಿ ತಮ್ಮ ಹಿಂಭಾಗ ನೋಡಿದರು. ಅಲ್ಲಿ ಕೋಣೆಯೊಳಗೆ ಇನ್‌ಸ್ಪೆಕ್ಟರ್ ಜೇವರ್ಟ್ ನಿಂತಿದ್ದ.

೩. ಜೇವರ್ಟನ ಜಯಭೇರಿ

ಆರಾಸ್ ಕೋರ್ಟಿನ ಪಬ್ಲಿಕ್ ಪ್ರಾಸಿಕ್ಯೂಟರನ ಪರಿಸ್ಥಿತಿ ಸ್ವಲ್ಪ ಅಪಮಾನಾಸ್ಪದವಾಯಿತು. ಚೇಂಪ್‌ಮೆತ್ಯೂ ನಿರಪರಾಧಿಯೆಂದು ಅವನನ್ನು ನ್ಯಾಯಾಧೀಶರು ಬಿಟ್ಟುಬಿಟ್ಟರಷ್ಟೆ. ಮಾ. ಮೆಡಲೀನರ ವ್ಯಕ್ತಿಪ್ರಭಾವದಿಂದ ದಿಗ್ಭ್ರಮೆ ಹೊಂದಿದ್ದ ಪ್ರಾಸಿಕ್ಯೂಟರ್ ಎಚ್ಚತ್ತು, ಮಾ. ಮೆಡಲೀನರನ್ನು ದಸ್ತಗಿರಿ ಮಾಡಲು ಅಗತ್ಯವಿದ್ದ ಹುಕುಮನ್ನು ನ್ಯಾಯಾಧೀಶರಿಂದ ಪಡೆದು, ಮುದ್ದಾಂ ಜನರ ಮೂಲಕ ಆ ಹುಕುಮನ್ನು ಇನ್‌ಸ್ಪೆಕ್ಟರ್ ಜೇವರ್ಟನಿಗೆ ಕಳುಹಿಸಿಕೊಟ್ಟ.

ಈ ಹುಕುಂ ಪ್ರಕಾರವೇ ಜೇವರ್ಟ್ ಬಂದದ್ದು. ನೆರಳೇ ಒಳ ನುಗ್ಗಿದಂತೆ ಅಥವಾ, ಮೃದು

ಹೆಜ್ಜೆಯ ನರ್ಸ್ ಬಂದಂತೆ—ಜೇವರ್ಟ್ ಫ್ಯಾಂಟೈನಳ ಕೋಣೆಗೆ ಪ್ರವೇಶಿಸಿದ್ದ. ಜೇವರ್ಟ್ ಈಗ ಈ ಲೋಕದಲ್ಲಿರಲಿಲ್ಲ, ಸ್ವರ್ಗದಲ್ಲಿದ್ದ. ಇಂದು ಜೇವರ್ಟ್ ಕೋಟ್ ಹ್ಯಾಟ್, ಗುಬ್ಬಿ, ಸೀಸದ ಗೊಂಡೆಯಿದ್ದ ದೊಣ್ಣೆ, ಕರ್ತವ್ಯಪಾಲನೆ, ರಾಜನಿಷ್ಠೆ, ಪ್ರಾಮಾಣಿಕತೆ ಎಲ್ಲದರಲ್ಲೂ ಪರಿಪೂರ್ಣನಾಗಿದ್ದ. ಅವನ ಇಂಗಿತವೂ ತರ್ಕವೂ ಎಂದೂ ತಪ್ಪನ್ನು ಮಾಡವು ಎಂಬ ಸಿದ್ಧಾಂತವೇ ಇಂದು ಅವನೆದರು ಮಾ. ಮೆಡಲೀನ್ ಜೀನ್‌ವಾಲ್‌ಜೀನನೇ ಆಗಿದ್ದುದರಲ್ಲಿತ್ತು. ಹೀಗಿದ್ದ ಮೇಲೆ ಅವನು ಸ್ವರ್ಗದಲ್ಲೇ ನಿಂತು ಮನುಷ್ಯಲೋಕವನ್ನು ನೋಡಿದುದರಲ್ಲಿ ತಪ್ಪಿಲ್ಲ. ಉತ್ಸಾಹ, ಅಧಿಕಾರ, ಅನುಭವ, ಬುದ್ಧಿ ಎಲ್ಲವೂ ಅವನಲ್ಲಿ ಪರಿಪೂರ್ಣವಾಗಿ ಜಾಗೃತವಾಗಿದ್ದುವು. ಸಮಾಜಘಾತಕರನ್ನು ನಾಶಮಾಡತಕ್ಕ ಬೆಂಕಿ ಸಿಡಿಲುಗಳನ್ನು ಕಾನೂನುಗಳಿಂದ ನಿರ್ಮಿಸಬಲ್ಲ ಚತುರನೇ ಇಂದು ಜೇವರ್ಟನಾಗಿದ್ದ. ಅವನ ಉದ್ದೇಶ ಸಮಾಜರಕ್ಷಣೆ, ಮತ್ತು ಅಧಿಕಾರ ಸಮರ್ಥನೆಗಳಾಗಿದ್ದುವು. ಇದನ್ನು ಸಾಧಿಸುವ ಕ್ರಮ ಪ್ರಾಮಾಣಿಕತೆ, ಸರಳತೆ, ಶಿಲಾಸದೃಶಸ್ಥಿರತೆ, ದಾಕ್ಷಿಣ್ಯ ಅನುಕಂಪಗಳನ್ನು ಬದಿಗಿಟ್ಟು ಮುಂದರಿಸಬಲ್ಲ ವೀರಕಾರ್ಯತತ್ಪರತೆಗಳಾಗಿದ್ದುವು. ಈ ರೀತಿ ಅವನು ತನ್ನ ಕಾರ್ಯಚಾಲನೆಯಲ್ಲಿ ಮತಾಂಧನೂ ಧರ್ಮಾಂಧನೂ ಭಯಂಕರನೂ ಕಾಲನೂ ಆಗಿಬಿಡುತ್ತಿದ್ದ. ಅವನ ಮುಖದಲ್ಲಿ ನ್ಯಾಯ, ಧರ್ಮಗಳ ಅತಿರೇಕದ ದೌಷ್ಟ್ಯ ಎದ್ದು ಕಾಣುತ್ತಿತ್ತು.

೪. ಅಧಿಕಾರದ ಯಥಾಯೋಗ್ಯ ಪ್ರತಿಷ್ಠಾಪನೆ

ಜೇವರ್ಟನನ್ನು ಕಂಡು ಗಾಬರಿಗೊಂಡಿದ್ದ ಫ್ಯಾಂಟೈನಳಿಗೆ ಮಾತಾಡುವ ಶಕ್ತಿ ಕ್ರಮೇಣ ಬಂತು. ಆತ ಬಂದಿದ್ದುದು ತನ್ನನ್ನು ಕೈದುಮಾಡಲೆಂದೇ ಆಗಿರಬೇಕೆಂದು ಗ್ರಹಿಸಿ ಕೂಗಿ ಹೇಳಿದಳು, "ಮಾನ್ಸೈರ್ ಮೆಡಲೀನರೇ, ರಕ್ಷಿಸಿ."

"ಜೇವರ್ಟ್ ಬಂದದ್ದು ನಿನಗಾಗಿ ಅಲ್ಲ, ಫ್ಯಾಂಟೈನ್," ಎಂದು ಮಾ. ಮೆಡಲೀನ್ ಹೇಳಿ, ಅನಂತರ ಜೇವರ್ಟನನ್ನು ನೋಡಿ, "ನಿಮಗೆ ಬೇಕಾದವರು ಯಾರೆಂದು ಗೊತ್ತಿದೆ," ಅಂದರು.

"ತಡಮಾಡದೆ ಬೇಗಹೊರಡು," ಅಂದ ಜೇವರ್ಟ್.

ಜೇವರ್ಟ್ ಇಂದು ಮಾ. ಮೆಡಲೀನರ ಅಡಿಯಾಳಾಗಿರಲಿಲ್ಲ. ಅಲ್ಲದೆ ಅವನಿಗೆ ಇಂದಿನ ಕೆಲಸ ಹೊಸತೆಂದು ತೋರುತ್ತಿರಲಿಲ್ಲ. ಈ ಕೆಲಸವನ್ನು ಅವನು ಐದು ವರ್ಷಗಳ ಹಿಂದೆಯೇ ಪ್ರಾರಂಭಿಸಿದ್ದ. ಆದ್ದರಿಂದ ಇಂದು ಅವನು ಸಂಪೂರ್ಣ ನಿರುದ್ವಿಗ್ನತೆಯಿಂದ ಮಾ. ಮೆಡಲೀನರು—ಮೇಯರ್—ಎಂಬ ಯಾವ ಭಾವನೆಯನ್ನೂ ಇಡದೆ, ಕೇವಲ ಜೀನ್‌ವಾಲ್‌ಜೀನನ ಹತ್ತಿರ ಇನ್‌ಸ್ಪೆಕ್ಟರನಾಗಿ ವರ್ತಿಸುತ್ತಿದ್ದ. ಹಿಂದೆ ಅವನು ದೇಹರಹಿತ ರಾಕ್ಷಸನನ್ನು ಅಂತಶ್ಚಕ್ಷುಸ್ಸಿನಿಂದ ಕಂಡಾತ ಇಂದು ದೇಹಸಹಿತ ಆ ರಾಕ್ಷಸನನ್ನು ಪ್ರತ್ಯಕ್ಷ ನೋಡುತ್ತಿದ್ದ. "ತಡಮಾಡದೆ ಬೇಗ ಹೊರಡು," ಎಂದು ಅವನು ಅಂದಾಗ ಕಾಣದ ಕಡಿಯದ ಉಕ್ಕಿನ ಸರಪಣಿಯಿಂದ ಜೀನ್‌ವಾಲ್‌ಜೀನನ್ನು ಸೆಳೆಯುತ್ತಿದ್ದ. ಮಾ. ಮೆಡಲೀನ್ ವಿನಯದಿಂದ ಅಂದರು "ಜೇವರ್ಟ್! ಸ್ವಲ್ಪ . . . . ."

ಆ ಮಾತು ಪೂರೈಸುವುದರ ಮೊದಲೇ ಜೇವರ್ಟ್, " 'ಜೇವರ್ಟ್' ಎಂದನ್ನಕೂಡದು—'ಮಾನ್ಸೈರ್ ಇನ್‌ಸ್ಪೆಕ್ಟರ್ ಜೇವರ್ಟ್' ಎಂದನ್ನಬೇಕು," ಎಂದು ಗದರಿಸಿದ.

"ಸರ್, ಎರಡು ಮಾತುಗಳನ್ನು ಗುಟ್ಟಾಗಿ. . . . ."

"ಯಾವುದೂ ಗುಟ್ಟು ಕೂಡದು. ಹೇಳುವುದನ್ನು ಗಟ್ಟಿಯಾಗಿ ಹೇಳು."

"ಮೂರು ದಿನ ಪುರಸೊತ್ತು ಕೊಡಿ. ಇವಳ ಮಗುವನ್ನು ತಂದು ಕೊಡಬೇಕಾಗಿದೆ."

"ಆ ಠಕ್ಕೆಲ್ಲ ನನ್ನ ಹತ್ತಿರ ನಡೆಯದು. ಈ ವ್ಯಭಿಚಾರಿಣಿಗೂ ಒಂದು ಮಗುವೆ? ನನ್ನಿಂದ ತಪ್ಪಿಸಿ ಓಡಲಿರುವ ಸಂಚನ್ನು ಬಲ್ಲೆ," ಎಂದು ಗದರಿಸಿದ ಜೇವರ್ಟ್.

ಈ ಮಾತುಗಳನ್ನು ಕೇಳುತ್ತಿದ್ದ ಫ್ಯಾಂಟೈನ್ ಬಹು ಆರ್ತತೆಯಿಂದ, "ನನ್ನ ಮಗು ಬೇಕು. ಮಾನ್ಸೂರ್ ಮೆಡಲೀನರೇ! ನನ್ನ ಮಗುವನ್ನು ದಯಮಾಡಿ ತಂದುಕೊಡಿ. ಸಿಸ್ಟರ್ ಸಿಂಪ್ಲಿಸರೇ! ನನ್ನ ಮಗು," ಎಂದು ಹೇಳುತ್ತ ಗಟ್ಟಿಯಾಗಿ ರೋದಿಸತೊಡಗಿದಳು.

ಜೇವರ್ಟ್ ಸಿಟ್ಟಿನಿಂದ ರೇಗುತ್ತ, "ಹಾದರಗಿತ್ತೀ, ಬಾಯಿಮುಚ್ಚು ! ಇದೊಂದು ಸೊಗಸಾದ ಕೂಟವೇ ಆಗಿದೆಯಲ್ಲ! ಆಜನ್ಮ ಕೈದಿಯೊಬ್ಬ ಆದರ್ಶ ಮ್ಯಾಜಿಸ್ಟ್ರೇಟನಾಗಿ ಮೆರೆದದ್ದಾಯಿತು; ಬೀದಿಹಾದರಗಿತ್ತಿಗೆ ಇಲ್ಲಿ ರಾಣೀವಾಸದ ಶುಶ್ರೂಷೆ ! ಇವೆಲ್ಲ ನಿಲ್ಲುವ ಕಾಲ ಬಂದಿದೆ," ಅಂದ.

ಫ್ಯಾಂಟೈನ್ ತನ್ನ ಹಾಸಿಗೆಯಲ್ಲೇ ಎದ್ದು ಕುಳಿತಳು. ಎಲ್ಲರನ್ನೂ ಆರ್ತತೆಯಿಂದ ನೋಡಿದಳು. ಏನೋ ಮಾತಾಡಲೆಂದು ಬಾಯಿತೆರೆದಳು. ಗಂಟಲಿನಿಂದ ಗರಗರ ಸದ್ದು ಕೇಳಿಸಿತು. ಯಾರನ್ನೋ ಅಪ್ಪಿಹಿಡಿದಂತೆ ತನ್ನ ಎರಡು ಕೈಗಳನ್ನು ಎದೆಗೆ ಒತ್ತಿ ಹಿಡಿದುಕೊಂಡಳು. ಹಠಾತ್ತನೆ ಹಾಸಿಗೆಗೆ ಬಿದ್ದಳು, ಮೃತಳಾದಳು.

ಜೀನ್‌ವಾಲ್‌ಜೀನ್ ಸ್ವಲ್ಪ ಧೈರ್ಯದಿಂದಲೇ ಜೇವರ್ಟನನ್ನು ನೋಡುತ್ತ ಹೇಳಿದ, "ಅವಳನ್ನು ಕೊಂದದ್ದು ನೀವು."

"ಬಾಯಿಮುಚ್ಚು ಅಂಗಳದಲ್ಲಿ ನಾಲ್ವರು ಪೊಲೀಸರಿದ್ದಾರೆ. ನಿನಗೆ ಈಗಲೇ ಕೋಳಹಾಕ ಬೇಕೇ?" ಎಂದು ಕೇಳುತ್ತ ಜೇವರ್ಟ್ ಹತ್ತಿರಬಂದು ಜೀನ್‌ವಾಲ್‌ಜೀನನ ಕೈಹಿಡಿದ.

ಆದರೆ ಜೀನ್‌ವಾಲ್‌ಜೀನ್ ಎಳೆಮಕ್ಕಳ ಮುಷ್ಟಿ ಬಿಡಿಸುವಷ್ಟು ಸುಲಭದಲ್ಲಿ ಜೇವರ್ಟನ ಮುಷ್ಟಿ ಬಿಡಿಸಿಕೊಂಡು, ಮಂಚದ ಅಡಿಭಾಗದ ಒಂದು ಕಬ್ಬಿಣದ ಸರಳನ್ನು ಮುರಿದು ಎತ್ತಿ ತೋರಿಸುತ್ತ, "ಸದ್ಯ ಸಮೀಪ ಬಂದರೆ ಜೋಕೆ !" ಅಂದ.

ಜೇವರ್ಟ್ ಪರಿಸ್ಥಿತಿಯನ್ನು ತಿಳಿದು ಮೌನವಾಗಿ ದೂರ ನಿಂತ. ಜೀನ್‌ವಾಲ್‌ಜೀನ್ ಫ್ಯಾಂಟೈನಳ ತಲೆಯನ್ನು ತನ್ನ ಅಂಗೈಯಲ್ಲಿಟ್ಟುಕೊಂಡು, ಅವಳ ಮುಖವನ್ನೊಮ್ಮೆ ಸ್ವಲ್ಪ ನೋಡಿ, ಅವಳ ಕಿವಿಯಲ್ಲಿ ಏನೋ ಹೇಳಿದ.

ಈ ಪಾಪಿ, ಸಮಾಜದಿಂದ ಬಹಿಷ್ಕೃತನಾದ ಜೀನ್‌ವಾಲ್‌ಜೀನ್ ಏನಂದಿರಬಹುದು? ನಮಗೇನು ಗೊತ್ತು! ಆದರೆ ಸಿಸ್ಟರ್ ಸಿಂಪ್ಲಿಸ್ ನೋಡಿದುದನ್ನೇ ತಿಳಿಸಿದ ಪ್ರಕಾರ, ಜೀನ್‌ವಾಲ್‌ಜೀನ್ ಫ್ಯಾಂಟೈನಳ ಕಿವಿಯಲ್ಲಿ ಮಾತಾಡಿದಾಗ, ಆಕೆಯ ಮುಖದಲ್ಲಿ ದೈವಿಕವಾದ ಒಂದು ಪ್ರಭೆ ಒಂದರೆಕ್ಷಣ ಮಿನುಗಿ ಚಲಿಸಿ, ಮಾಯವಾಯಿತಂತೆ. ಮಾತೆ ತನ್ನ ಶಿಶುವನ್ನು ಮುಟ್ಟುವಂತೆ ಜೀನ್‌ವಾಲ್‌ಜೀನ್ ಫ್ಯಾಂಟೈನಳ ತಲೆ ಸವರಿ ಹಾಸಿಗೆಯಲ್ಲಿ ಮೃದುವಾಗಿಟ್ಟು, ತೆರೆದಿದ್ದ ಅವಳ ಕಣ್ಣುರೆಪ್ಪೆಗಳನ್ನು ಮುಚ್ಚಿದ, ಅನಂತರ ಎದ್ದು, ಜೇವರ್ಟನನ್ನು ನೋಡಿ, "ನಾನು ತಯಾರಿದ್ದೇನೆ," ಅಂದ.

೫. ಯುಕ್ತ ಸಮಾಧಿ

ಜೀನ್‌ವಾಲ್‌ಜೀನನನ್ನು ಅದೇ ಪಟ್ಟಣದ ಜೈಲಿನಲ್ಲಿಟ್ಟರು. ಮಾ. ಮೆಡಲೀನರ ದಸ್ತಗಿರಿ ಜನರನ್ನು ನಾನಾ ವಿಧದ ಊಹಾಪೋಹಗಳಿಗೂ ದುಃಖಗಳಿಗೂ ಎಡೆ ಮಾಡಿತು. ಆದರೂ ಕೇವಲ

ಎರಡು ಗಂಟೆಗಳ ಒಳಗೆ ಅವರಿಂದ ದೊರಕಿದ್ದ ಅನೇಕಾನೇಕ ಸಹಾಯಗಳೂ ಅವರ ಗುಣಗಳೂ ಜನರ ಮನಸ್ಸಿನಿಂದ ಮಾಯವಾಗಲು ಪ್ರಾರಂಭವಾದುವು.

"ಅವನೊಬ್ಬ ಹಳೆ ಅಪರಾಧಿ, ನಿವೃತ್ತ ಕೈದಿ. ಅವನು ಸಾಧಾರಣನಲ್ಲ. ಮೆಡಲೀನ್ ಎಂಬ ಹೆಸರೇ ಕಳ್ಳನ ಕಳ್ಳ ಹೆಸರು. ನಿಜವಾಗಿ ಅವನು ಯಾರು ಗೊತ್ತಿದೆಯೇ? ಆ ದರೋಡೆಕಾರ—ಭಯಂಕರ ಜೀನ್‌ವಾಲ್‌ಜೀನ್! ನನಗೆ ಮೊದಲೇ ಸಂಶಯವಿತ್ತು. ಠಕ್ಕ ಅಲ್ಲದಿದ್ದರೆ ಅಷ್ಟೊಂದು ದಯೆ, ದೈವಭಕ್ತಿ, ಇವೆಲ್ಲ ಎಲ್ಲಿಂದ ಬರುತ್ತವೆ? ಇದು ಡಂಭಾಚಾರದ ಕಾಲ! ಬಿರುದು ಕೊಟ್ಟರೆ ಬೇಡ, ಹೊಗಳಿದರೆ ಸಂತೋಷಪಡ, ಬಡ ಬಾಲಕರಿಗೆಲ್ಲ ಹಣದ ದಾನ—ಇವೆಲ್ಲ ಏಕೆ ಗೊತ್ತಿದೆಯೇ? ಇವನ ಹಿಂದಿನ ಚರಿತ್ರೆಯನ್ನು ಅಡಗಿಸೋದಕ್ಕೆ!" ಎಂದು ಮೊದಲಾಗಿ ಜನ ಮಾತಾಡಿಕೊಂಡರು.

ಯಾರು ಏನೆಂದರೂ ಮಾ. ಮೆಡಲೀನರ ಮನೆಕೆಲಸದ ಹೆಂಗುಸು, ಸಿಸ್ಟರ್ ಸಿಂಪ್ಲಿಸ್, ಮತ್ತೊಂದೆರಡು ಜನ ಮಾತ್ರ ಅವರ ಗುಣಗಳನ್ನು ನೆನೆದು, ದುಃಖಿಸಿ, ಅವರು ಮರೆಯಾದುದಕ್ಕೆ ಅಳುತ್ತ ಇದ್ದರು. ಕಾರ್ಖಾನೆಗಳೆಲ್ಲ ಮುಚ್ಚಲ್ಪಟ್ಟವು.

ಮಾ. ಮೆಡಲೀನರ ಮನೆಕೆಲಸದ ಹೆಂಗುಸು ಮಾತ್ರ ಯಾವತ್ತಿನಂತೆ ಮನೆಯನ್ನೆಲ್ಲ ಗುಡಿಸಿ, ಶುಚಿಪಡಿಸಿ, ಕೇವಲ ಯಾಂತ್ರಿಕವಾಗಿ ತನ್ನ ನಿತ್ಯಕೆಲಸಗಳನ್ನು ಮಾಡುತ್ತ, ಬೀಗದಕೈಗೊಂಚಲನ್ನು ಯಾವತ್ತೂ ಇಡುವ ಸ್ಥಳದಲ್ಲೇ ಬಿಟ್ಟು, ಅಲ್ಲೇ ಕುಳಿತು ದುಃಖಿಸುತ್ತಿದ್ದಳು.

ಹೀಗೆ ಮನೆಕೆಲಸದವಳು ದುಃಖಿಸುತ್ತಿರುವಾಗಲೇ ಹಠಾತ್ತಾಗಿ ಮಾನ್ಸಿಯರ್ ಮೆಡಲೀನ್ ಕಾಣಿಸಿಕೊಂಡರು. ಅವರು ಬೀಗದಕೈಗಳನ್ನು ತೆಗೆದುಕೊಂಡು, ಸಿಸ್ಟರ್ ಸಿಂಪ್ಲಿಸ್ ಮಹಡಿಯ ಮೇಲೆ ಬರಬೇಕೆಂದು ಹೇಳಲು ಈ ಕೆಲಸದವಳಿಗೆ ಹೇಳಿ, ತಾವು ಮಹಡಿಯ ಮೇಲೆ ಹೋದರು.

ಮಹಡಿಗೆ ಹೋದಕೂಡಲೆ ಹಳೆ ಅಂಗಿಬಟ್ಟೆಗಳನ್ನು ಒಂದು ಕಪಾಟಿನಿಂದ ತೆಗೆದುಕೊಂಡರು; ಬಿಷಪರ ಬೆಳ್ಳಿ ದೀಪಸ್ತಂಭಗಳನ್ನು ಒಂದು ಬಟ್ಟೆಯಲ್ಲಿ ಕಟ್ಟಿಕೊಂಡರು; ಜರ್ವಾಯಿಸನಿಂದ ನಾಣ್ಯವನ್ನು ತಾನು ತೆಗೆದಿದ್ದ ಸಂದರ್ಭವನ್ನು ಒಂದು ಚೀಟಿಯಲ್ಲಿ ಸೂಕ್ಷ್ಮವಾಗಿ ಬರೆದು ಮೇಜಿನ ಮೇಲಿಟ್ಟು, ಅದು ಹಾರಿಹೋಗದಿದ್ದ ಹಾಗೆ ಜರ್ವಾಯಿಸನ ನಾಣ್ಯವನ್ನು ಅದರ ಮೇಲಿಟ್ಟರು. ಈ ಮಧ್ಯೆ, ಒಂದು ಚೂರು ಜೈಲುಬ್ರೆಡ್ಡನ್ನು ತಿಂದರು.

ಸಿಸ್ಟರ್ ಸಿಂಪ್ಲಿಸ್ ಈ ಸಮಯದಲ್ಲಿ ಮಹಡಿ ಕೋಣೆಗೆ ಬಂದಳು. ಮಾ. ಮೆಡಲೀನರನ್ನು ಕಂಡೊಡನೆ ಅವಳು ಅತ್ತಳು. ತಾನು ಜೈಲಿನ ಕಿಟಕಿಯ ಸರಳನ್ನು ಮುರಿದು ತಪ್ಪಿಸಿಕೊಂಡು ಬಂದದ್ದಾಗಿಯೂ ಪೊಲೀಸರು ತನ್ನನ್ನು ಹುಡುಕುತ್ತ ಬರುತ್ತಿರುವುದಾಗಿಯೂ ಅವಸರದಿಂದ ಮಾ. ಮೆಡಲೀನ್ ಸಿಸ್ಟರ್ ಸಿಂಪ್ಲಿಸಳ ಹತ್ತಿರ ಹೇಳಿದರು. ಅಲ್ಲದೆ, ಅವರ ಚರ, ಸ್ಥಿರ ಆಸ್ತಿಗಳ ವಿನಿಯೋಗ ಹೇಗೆ ಆಗಬೇಕೆಂದು ಒಂದು ಪತ್ರ ಬರೆದು, ಅದೇ ಪತ್ರದಲ್ಲಿ ತನ್ನ ಉತ್ತರಾಧಿಕಾರಿಯಾಗಿ ಎಂ—ನ ಬಿಷಪ್ ಈ ಕಾರ್ಯಗಳನ್ನು ಜರಗಿಸಬೇಕೆಂದೂ ಬರೆದು ಸಿಸ್ಟರ್ ಸಿಂಪ್ಲಿಸಳ ಕೈಯಲ್ಲಿ ಕೊಟ್ಟರು. ಆ ಪತ್ರಪ್ರಕಾರ ಅವರ ಆಸ್ತಿಯೆಲ್ಲ ಬಡವರಿಗೂ ಅನಾಥರಿಗೂ ಆಸ್ಪತ್ರೆಗೂ ಬಿಟ್ಟುಕೊಟ್ಟಿದ್ದರು. ತನ್ನ ಬಗ್ಗೆಯ ಕೋರ್ಟು ವ್ಯವಹಾರ ಖರ್ಚು, ಮತ್ತು ಫ್ಯಾಂಟೈನಳ ಸಮಾಧಿ ಖರ್ಚು ಸಹ ಆ ಹಣದಿಂದಲೇ ಸಲ್ಲಬೇಕೆಂದು ಆ ಪತ್ರದಲ್ಲಿ ಬರೆದಿದ್ದರು.

ಇಷ್ಟರಲ್ಲೇ ಪೊಲೀಸರು ಬಂದು ಮಾನ್ಸಿಯರ್ ಮೆಡಲೀನ್ ಕುರಿತು ಕೆಲಸದವಳನ್ನು ವಿಚಾರಿಸುತ್ತಿದ್ದರು. ಅವಳು ಮಾನ್ಸಿಯರ್ ಮೆಡಲೀನರನ್ನು ಆ ದಿನವಿಡೀ ತಾನು ನೋಡಿರಲಿಲ್ಲವಾಗಿ ಪ್ರಮಾಣಪುರಸ್ಸರವಾಗಿ ಹೇಳುತ್ತಿದ್ದುದು ಮಹಡಿಗೆ ಕೇಳಿಬರುತ್ತಿತ್ತು. ಈ ವಿಚಾರಣೆ ಮುಗಿದ ಹಾಗೆಯೇ

ಯಾರೋ ಮಹಡಿಯ ಕಡೆಗೆ ಹತ್ತಿ ಬರುವ ಸದ್ದು ಕೇಳಿಸಿತು.

ಸಿಸ್ಟರ್ ಸಿಂಪ್ಲಿಸ್ ಗಾಬರಿಗೊಂಡು, ದಾರಿಗಾಣದೆ, ದೇವರನ್ನೇ ಶರಣು ಹೊಕ್ಕು, ಮಹಡಿ ಕೋಣೆಯ ಎದುರು ಬಾಗಿಲಿನ ಮೇಲ್ಗಡೆ, ಒಳಗಡೆಯಿದ್ದ ಏಸುಕ್ರಿಸ್ತನ ಪ್ರತಿಮೆಗೆ ಎರಡು ಕೈಗಳನ್ನೂ ಎತ್ತಿ ನಮಸ್ಕರಿಸಿ ಪ್ರಾರ್ಥಿಸುತ್ತ ಕುಳಿತುಬಿಟ್ಟಳು. ಜೇವರ್ಟ್ ಮಹಡಿ ಹತ್ತಿ ಬಂದ ಹಾಗೆಯೇ ತನಗೆದುರಾಗಿ ಒಳಗಡೆ ಪ್ರಾರ್ಥಿಸುತ್ತ ಬಾಗಿಲಲ್ಲೇ ಕುಳಿತು ಪ್ರಾರ್ಥನೆಯಲ್ಲಿ ತನ್ಮಯಳಾಗಿದ್ದ ಸಿಸ್ಟರ್ ಸಿಂಪ್ಲಿಸಳನ್ನು ಕಂಡ.

ಜೇವರ್ಟ್ ಸರಕಾರಕ್ಕೆ ತೋರಿಸುತ್ತಿದ್ದ ಭಯಭಕ್ತಿಗಿಂತಲೂ ಹೆಚ್ಚಾಗಿ ಧರ್ಮಪೀಠಕ್ಕೂ ಅದರ ಅಧಿಕಾರಿಗಳಿಗೂ ಅದಕ್ಕೆ ಸಂಬಂಧಪಟ್ಟವರೆಲ್ಲರಿಗೂ ತೋರಿಸುತ್ತಿದ್ದ. ಸಿಸ್ಟರ್ ಸಿಂಪ್ಲಿಸ್ ತನ್ನ ಸಮೀಪದಲ್ಲಿ ಕಾಲು ಸಪ್ಪಳ ಕೇಳಿ ಕಣ್ಣುತೆರೆದು ನೋಡುವಾಗ ಜೇವರ್ಟ್ ಹ್ಯಾಟನ್ನು ಕೈಯಲ್ಲಿ ಹಿಡಿದುಕೊಂಡು ಬಲು ವಿನಯ, ಭಯ, ಭಕ್ತಿಯಿಂದ ತನ್ನನ್ನೇ ನೋಡುತ್ತ ನಿಂತಿದ್ದು ದನ್ನು ಕಂಡಳು. ಜೇವರ್ಟ್ ಸಿಸ್ಟರ್ ಸಿಂಪ್ಲಿಸಳಿಗೆ ನಮಸ್ಕರಿಸಿ, "ಅಮ್ಮಾ, ಇದರ ಒಳಗೆ ನೀವು ಮಾತ್ರ ಇರುವುದೇ, ಅಥವಾ, ಬೇರೆ ಯಾರಾದರೂ ಇದ್ದಾರೆಯೇ?" ಎಂದು ಕೇಳಿದ.

ಸಿಸ್ಟರ್ ಸಿಂಪ್ಲಿಸ್ ಧ್ಯಾನತತ್ಪರಳಾಗಿದ್ದಲ್ಲಿಂದಲೇ, ಮೆಲ್ಲಗೆ ಅಂದಳು, "ನಾನೊಬ್ಬಳೇ ಇರುವುದು."

ಆಕೆ ಎಂದೂ ಯಾವ ಸಂದರ್ಭದಲ್ಲೂ ಸುಳ್ಳು ಹೇಳುವವಳಲ್ಲವೆಂದು ಜೇವರ್ಟನಿಗೆ ಗೊತ್ತಿತ್ತು. ಅವನು ಪುನಃ ಕೇಳಿದ, "ಈ ದಿನ ಈ ವಠಾರದಲ್ಲೆಲ್ಲಾದರೂ ನಾವು ಹುಡುಕುತ್ತಿರುವ ಜೀನ್‌ವಾಲ್‌ಜೀನನೆಂಬ ಹೆಸರಿನವನೊಬ್ಬನನ್ನು ಕಂಡಿದ್ದೀರಾ ?"

"ಇಲ್ಲ ."

"ನಿಮಗೆ ತೊಂದರೆ ಕೊಟ್ಟದ್ದಕ್ಕೆ ದಯಮಾಡಿ ಕ್ಷಮಿಸಿ," ಎಂದು ಹೇಳಿ ಜೇವರ್ಟ್ ಹೊರಟು ಹೋದ.

ಈ ಮಾತು ನಡೆಯುತ್ತಿದ್ದಾಗ ಜೀನ್‌ವಾಲ್‌ಜೀನ್ ಎದುರು ಬಾಗಿಲ ಹಿಂದೆಯೇ ಅಡಗಿ ನಿಂತಿದ್ದ. ಈ ಸಂಗತಿಗಳು ನಡೆದು ಒಂದು ಗಂಟೆ ಕಳೆಯುವಾಗ ಪ್ಯಾರಿಸ್ ರಸ್ತೆಯಲ್ಲಿ ಒಂದು ಗಂಟು ಹಿಡಿದುಕೊಂಡು, ಹಳೆಕುಪ್ಪಸವನ್ನು ತೊಟ್ಟಿದ್ದ, ನಡುಪ್ರಾಯದವನೊಬ್ಬ ನಡೆದುಹೋಗುತ್ತಿದ್ದ. ಅವನು ಜೀನ್‌ವಾಲ್‌ಜೀನ್.

ಇನ್ನು ಫ್ಯಾಂಟೈನಳ ಕುರಿತು ಎರಡು ಮಾತುಗಳನ್ನು ಹೇಳಲು ಬಾಕಿಯಿದೆ. ನಮ್ಮೆಲ್ಲರಿಗೂ ಸರಿಸಮಾನ ಸಂಬಂಧವಿರುವ ಭೂಮಾತೆಯ ವಶಕ್ಕೆ ಅವಳನ್ನು ಒಪ್ಪಿಸಿದರು. ಮಾ. ಮೆಡಲೀನರ ಹಣವನ್ನು ಆದಷ್ಟು ಉಳಿಸುವ ದೃಷ್ಟಿಯಿಂದ ಆ ಸಮಾಧಿಯ ಖರ್ಚನ್ನು ಬಲು ಕಡಿಮೆ ಮಟ್ಟದಲ್ಲೇ ಮಾಡಿದ್ದರು. ಅಂದರೆ, ಆಜೀವ ಕೈದಿಯೊಬ್ಬ ಬೀದಿ ಭಿಕಾರಿಯೊಬ್ಬಳಿಗೆ ಎಂಥ ಸಮಾಧಿ ಮಾಡಬಹುದೋ ಅಂಥ ಸಮಾಧಿಯನ್ನು ಮಾತ್ರ ಮಾ. ಮೆಡಲೀನರ ಹೇರಳ ಹಣದಲ್ಲಿ ಬಿಷಪ್ ಮಾಡಿಸಿದ್ದರು. ಯಾರೂ ಮಲಗಬಹುದಾದ, ಎಲ್ಲರಿಂದಲೂ ಮರೆಯಲ್ಪಡುವ, ಸಾರ್ವಜನಿಕ ಶ್ಮಶಾನದ ಮೂಳೆಗಳ ರಾಶಿಯಲ್ಲಿ ಫ್ಯಾಂಟೈನ್ ಮಲಗಿ ಜನರಿಂದ ಮರೆಯಾದಳು. ದೇವನೊಬ್ಬ ಎಲ್ಲರನ್ನು ನೋಡುತ್ತಿರುವನೆಂಬ ನಂಬಿಕೆ ನಮಗಿರುವುದರಿಂದ ಈ ವಿಧದ ಸಮಾಧಿಗಾಗಿ ನಾವು ದುಃಖಿಸುವ ಅಗತ್ಯವಿಲ್ಲ. ಆದರೂ ಆ ಆರ್ತಳ ಸಮಾಧಿ ಅವಳ ಮೃತ್ಯುಶಯ್ಯೆಯಂತೆ ಅನಾಮಧೇಯವೂ ಅಲಕ್ಷ್ಯವೂ ಆಗಿತ್ತೆಂದು ಹೇಳಬಯಸುವೆವು.

ದ್ವಿತೀಯ ವಿಭಾಗ : ಕೋಸೆಟ್ಟೆ

ಒಂದನೆಯ ಸಂಪುಟ

೧. ನಿವೆಲ್ಸ್ ರಸ್ತೆಯಲ್ಲಿ

೧೮೬೧ನೆ ಇಸವಿಯ ಮೇ ತಿಂಗಳ ಬೆಳಗ್ಗೆ ಈ ಕತೆ ಬರೆಯುವಾತ ನಿವೆಲ್ಸ್ ರಸ್ತೆಯಲ್ಲಿ ಲಾ ಹುಲ್ಪ್ ಕಡೆಗೆ ನಡೆದುಹೋದ. ರಸ್ತೆಯ ಎರಡು ಬದಿಗಳಲ್ಲೂ ಸುಂದರ ಸಾಲುಮರಗಳಿದ್ದುವು. ಏರುತಗ್ಗು ಇದ್ದ ನೆಲದ ಮೇಲೆ ಇವು ಉದ್ದಕ್ಕೂ ನಿಂತಿರುವಾಗ, ರಸ್ತೆಗೆ ಸುಂದರ ಅಂಚಿನ ಚಾಪೆ ಹಾಸಿದ್ದಂತೆ ತೋರುತ್ತಿತ್ತು. ಈ ರಸ್ತೆಯಲ್ಲೇ ಸ್ವಲ್ಪ ದೂರ ಹೋಗುವಾಗ ದಾರಿಗೆ ಅಡ್ಡವಾಗಿ ಹರಿಯುತ್ತಿದ್ದ ಒಂದು ಚಿಕ್ಕ ಹೊಳೆ ಬಲಬದಿಯಿಂದ ಬರುತ್ತಿತ್ತು. ಇದರ ಅಂಚಿನಲ್ಲೇ ಒಂದು ಉಪರಸ್ತೆ ಬಂದು ಮುಖ್ಯರಸ್ತೆಗೆ ಸೇರಿತ್ತು. ಉಪರಸ್ತೆ ಮುಖ್ಯರಸ್ತೆಗೆ ಸೇರುವಲ್ಲೇ ಒಂದು ಹೊಟೇಲೂ ಇತ್ತು. ಇದರ ಬದಿಯಲ್ಲೇ ಉಪರಸ್ತೆಯಲ್ಲಿ ಮುಂದುವರಿಸಿ ಹೋದ ಹಾಗೆ ಜನವಸತಿ ಕಡಿಮೆಯಾಗುತ್ತ ಕೊನೆಗೆ ಕಾಡೇ ಸಿಕ್ಕುತ್ತಿತ್ತು. ಕಾಡಿನ ಅಂಚಿನಲ್ಲೇ ಒಂದು ಬಲು ಎತ್ತರ ಗೋಡೆ ಎದ್ದು, ಉದ್ದಕ್ಕೂ ಹೋಗಿ ಕಾಡಿನಲ್ಲಿ ಮರೆಯಾಗಿತ್ತು. ಅದೊಂದು ಬೃಹತ್ತಾದ ಪಾಗಾರ ಗೋಡೆಯೆಂದೂ ಅದು ವಿಶಾಲ ಪ್ರಸ್ಥಭೂಮಿಯನ್ನು ಆವರಿಸಿತ್ತೆಂದೂ ಮುಂದೆ ನಡೆದು ಹೋಗುವಾಗ ತಿಳಿಯಿತು. ಪ್ರಸ್ಥಭೂಮಿಯ ನಡುವೆ ಮನುಷ್ಯನಿಂದಲೇ ಏರಿಸಿ ಕಟ್ಟಲಾಗಿದ್ದ ಎತ್ತರ ಸ್ಥಳದಲ್ಲಿ ಸಿಂಹದ ದೊಡ್ಡ ಪ್ರತಿಮೆಯೂ ಇತ್ತು. ಈ ನಿರ್ಜನ ಪ್ರದೇಶಕ್ಕೆ ತನ್ನ ಸ್ವಂತ ಕೆಲಸಕ್ಕಾಗಿ ಬಂದಿದ್ದ ಒಬ್ಬ ಕೃಷಿಕರ ಹೆಂಗುಸನ್ನು ಈ ಕಥೆಗಾರ ವಿಚಾರಿಸುತ್ತ, ಆ ಸ್ಥಳದ ಹೆಸರೇನೆಂದು ಕೇಳಿದ. ಅವಳೆಂದಳು, "ಸರ್! ಈ ಸ್ಥಳದ ಹೆಸರು ಹ್ಯೂಗೊಮೊಂಟ್." ಅಷ್ಟು ತಿಳಿದ ಕೂಡಲೇ ಮುಂದಿನ ವಿವರಗಳೆಲ್ಲ ಅವನಿಗೆ ಸುಲಭವಾಗಿ ತಿಳಿಯಿತು. ಆ ವಿಷಯವನ್ನು ಅವನು ಮೊದಲೇ ಓದಿದ್ದ.

ದಾರಿಗ ಆಗ ನಿಂತಿದ್ದುದು ಹಿಂದೆ ನಡೆದಿದ್ದ ವಾಟರ್ಲೂ ಯುದ್ಧದ ರಣಾಂಗಣದಲ್ಲಿ.

೨. ಹ್ಯೂಗೊಮೊಂಟ್

ಚರಿತ್ರೆ ಬಲ್ಲವರಿಗೆ ಹ್ಯೂಗೊಮೊಂಟ್ ಒಂದು ಭಯೋತ್ಪಾದಕ ಸ್ಥಳ. ಯೂರೊಪನ್ನು ನಾಶಪಡಿಸಿದ ಪರಶುಧಾರಿ ನೆಪೋಲಿಯನ್ನನಿಂದ ಬಿಡಿಸಲಾಗದ ಗಂಟಾಗಿ ನಿಂತಿದ್ದ ಸ್ಥಳವದು. ಇಂಗ್ಲಿಷರಿಗೂ ಫ್ರೆಂಚರಿಗೂ 'ವಾಟರ್ಲೂ ಕದನ' ಎಂದು ನಡೆದಿದ್ದ ರಣಾಂಗಣವೇ ಅದು. ಫಿರಂಗಿಗಳ ಹೊಡೆತದಿಂದ ಪುಡಿಪುಡಿಯಾದ ಮನೆಗಳ, ಇಗರ್ಜಿಗಳ ಕೆಲವು ಮರಗಳ ಕುರುಹುಗಳು ಈಗಲೂ ಅಲ್ಲಿವೆ.

ಹ್ಯೂಗೊಮೊಂಟ್ ಹಿಂದೆ ಒಂದು ಕೃಷಿಕ್ಷೇತ್ರವಾಗಿತ್ತು. ಆ ಸ್ಥಳದ ಯಜಮಾನ ಅಲ್ಲೇ ಬೇಸಾಯ ಮಾಡಿಸುತ್ತ ತನ್ನ ಧರ್ಮಬುದ್ಧಿಯಿಂದ ಹೆಚ್ಚು ಜನರನ್ನು ಅಲ್ಲಿ ನೆಲೆಗೊಳಿಸಿ ಅವರಿಗಾಗಿ ಬಾವಿ, ಕೆರೆ, ಮನೆ ಇಗರ್ಜಿಗಳನ್ನು ಕಟ್ಟಿಸಿಕೊಟ್ಟಿದ್ದ. ಈಗಲೂ ಅಲ್ಲಿ ಸುಂದರವಾದ ಕೆತ್ತನೆ ಕಲ್ಲುಗಳಿಂದ ಕಟ್ಟಲ್ಪಟ್ಟ ಬಾವಿಯಿದೆ. ಇದು ಈಗ ಹಾಳುಬಿದ್ದು, ಚರಿತ್ರೆಯ ದೃಷ್ಟಿಯಲ್ಲಿ ಅಳುತ್ತಲೇ ಇದೆ. ಬಾವಿ ಮತ್ತು ಅದರ ನೀರು ಸೊಗಸಾಗಿದ್ದರೂ ಆ ನೀರನ್ನು ಯಾರೂ ಮುಟ್ಟು

ವವರಿಲ್ಲ. ವಾಟರ್ಲೂ ಯುದ್ಧದಲ್ಲಿ ಮೃತಪಟ್ಟವರು ತಿಳಿದೊ ತಿಳಿಯದೆಯೊ ಆಖೈರಾಗಿ ಕುಡಿದದ್ದು ಈ ಬಾವಿಯ ನೀರನ್ನೇ. ಆ ಯುದ್ಧದಲ್ಲಿ ಸೈನಿಕರು ಮೃತರಾದಂತೆಯೇ ಆ ಸೈನಿಕರನ್ನೇ ತನ್ನೊಳಗೆ ತುಂಬಿಕೊಂಡು ಈ ಬಾವಿಯೂ ಅವಸಾನ ಹೊಂದಿತು. ವದಂತಿಯ ಪ್ರಕಾರ ಈ ಬಾವಿಯ ಆರ್ತರವ ಯುದ್ಧ ಮುಗಿದು ಎರಡು ದಿನ ಕಳೆದ ಮೇಲೂ ಕೇಳಿಬರುತ್ತಿತ್ತಂತೆ. ಸತ್ತವರೆಂದು ಬಾವಿಗೆ ಹಾಕಿದ ಜನರಲ್ಲಿ ಕೆಲವರಿಗಾದರೂ ಜೀವವಿದ್ದು, ಅಂಥವರು ಸಾಯುವವರೆಗೆ ನರಳುತ್ತಿದ್ದ ಶಬ್ದವೇ ಹಾಗೆ ಕೇಳಿಸಿರಬೇಕು. ಅಂದಿನ ಅಲ್ಲಿಯ ಭೀಕರತೆ ಚರಿತ್ರೆಯಲ್ಲಿ ಮಾತ್ರ ಉಳಿದು ಇಂದು ಈ ಸ್ಥಳ ರಮ್ಯವಾಗಿದೆ.

ಇಲ್ಲಿ ಫ್ರೆಂಚ್, ಜರ್ಮನ್ ಮತ್ತು ಇಂಗ್ಲಿಷ್ ರಕ್ತಗಳು ಬೆರೆತು ಕಾಲುವೆಯ ನೀರಿನಂತೆ ಹರಿದಿದ್ದುವು. ಆ ಸಿಂಹದ ಪ್ರತಿಮೆಯನ್ನು ಯುದ್ಧಸ್ಮಾರಕವಾಗಿ ನಿರ್ಮಿಸಲಾಗಿದೆ. ಇಂಥ ಚರಿತ್ರಾರ್ಹ ಸ್ಥಳ ಇಂದು, "ಸ್ವಾಮೀ! ಮೂರು ಪೆನ್ನಿ ಕೊಟ್ಟರೆ ತೋರಿಸುತ್ತೇನೆ," ಎಂದೆನ್ನುವ ಭಿಕ್ಷುಕರ ಬಂಡವಾಳವಾಗಿ ನಿಂತಿದೆ.

೩. ಜೂನ್ ೧೮, ೧೮೧೫

ಕಥೆಗಾರನಿಗಿರುವ ಸಾಂಪ್ರದಾಯಿಕ ಸೌಲಭ್ಯ ಮತ್ತು ಸ್ವಾತಂತ್ರ್ಯಗಳಿಂದ ನಾವು ಈಗ ಓದುಗರನ್ನು ೧೮೧೫ನೇ ಇಸವಿಗೆ ಕರೆದುಕೊಂಡು ಹೋಗಬೇಕಾಗಿದೆ; ಮತ್ತು ೧೮೧೫ ಜೂನ್ ೧೭ ಮತ್ತು ೧೮ರ ಪರಿಚಯವನ್ನೂ ವಿಶೇಷವಾಗಿ ಮಾಡಿಕೊಡಬೇಕಾಗಿದೆ.

ಅದೇ ಜೂನ್ ೧೭-೧೮ರ ರಾತ್ರಿಯಲ್ಲಿ ವಾಟರ್ಲೂ ಪ್ರದೇಶದಲ್ಲಿ ಮಳೆ ಬಂದಿದೆ. ಆ ಮಳೆ ಬರದಿರುತ್ತಿದ್ದರೆ ಯೂರೋಪಿನ ಇಂದಿನ ಪರಿಸ್ಥಿತಿಯೇ ಬೇರೆ ಬಗೆಯದಾಗಿರುತ್ತಿತ್ತು. ಕೆಲವೇ ಮಳೆಹನಿಗಳು ಸ್ಥಿರಮನಸ್ಸಿನ ನೆಪೋಲಿಯನ್ನನನ್ನು ಅಲುಗಾಡಿಸಿದುವು. ಅಕಾಲವೃಷ್ಟಿಯ ಪರಿಣಾಮ ಪ್ರಪಂಚಕ್ಕೆಲ್ಲ ಸಂಬಂಧಿಸಿದ ಘಟನೆಯೊಂದನ್ನು ಪೂರ್ತಿಗೊಳಿಸಿದೆ.

ಬೆಳಗ್ಗೆ ೧೧-೩೦ ಗಂಟೆಯ ಮೊದಲು ಯುದ್ಧವನ್ನಾರಂಭಿಸಬೇಕೆಂದಿದ್ದ ನೆಪೋಲಿಯನ್ನನಿಗೆ ಅಡ್ಡಿಯಾಗಿ ಈ ಮಳೆ ಬಂದಿತು. ವೆಲ್ಲಿಂಗ್‌ಟನ್ನನ ಸಹಾಯಕ್ಕೆ ಬರುತ್ತಿದ್ದ ಬ್ಲುಚರನಿಗೆ ಸಮಯದ ಅವಕಾಶ ಕೊಟ್ಟದ್ದೇ ಈ ಮಳೆ. ಅದೃಷ್ಟ ಬಲವೆಂದರೆ ಇಂಥ ಪ್ರಸಂಗಗಳೇ!

ನೆಪೋಲಿಯನ್ನನ ಯುದ್ಧಕೌಶಲ ಫಿರಂಗಿಯ ಹೊಡೆತದಲ್ಲಿ; ವೆಲಿಂಗ್‌ಟನ್ನನಿಗೆ ನೂರೈವತ್ತೊಂಬತ್ತು ಫಿರಂಗಿಗಳಿದ್ದಾಗ ನೆಪೋಲಿಯನ್ನನಿಗೆ ಇನ್ನೂರನಲವತ್ತು ಇದ್ದುವು. ಬೆಳಗ್ಗೆ ಯುದ್ದ ಆರಂಭಿಸಲು ಬಿಡದಿದ್ದ ಮಳೆ, ತಡವಾಗಿ ಬಂದ ಬ್ಲುಚರನಿಗೆ ಸಹಾಯಕೊಟ್ಟು, ಹೂತು ಹೋಗಿದ್ದ ಫಿರಂಗಿಗಳನ್ನು ಎತ್ತಿತರುವ ಅವಕಾಶ ಕೊಟ್ಟಿತು. ಜಯಾಪಜಯಗಳ ಕಾರಣ ಈ ರೀತಿಯಲ್ಲಿ ಪ್ರಕೃತಿಯಿಂದಲೇ ನಿರ್ಣೀತವಾಗಿತ್ತು.

೪. A

ಇಂಗ್ಲಿಷ್ A ಅಕ್ಷರವನ್ನು ಬರೆದು ಉಭಯ ಪಕ್ಷದ ಸೇನೆಗಳು ನಿಂತು ಕಾದಾಡಿದ್ದನ್ನು ಈ ಅಕ್ಷರದ ಸಹಾಯದಿಂದ ವಿವರಿಸುವುದು ಸುಲಭವಾಗಬಹುದು. Aಯ ಶೃಂಗದಲ್ಲಿ, ಸೋಯಿನ್ಸ್ ಕಾಡಿನೊಳಗೆ, ವೆಲ್ಲಿಂಗ್‌ಟನ್ನನ ಸೈನ್ಯವಿದೆ. Aಯ ಎರಡು ಬಾಹುಗಳು ಅಗಲವಾಗುತ್ತ ಬಂದ ಹಾಗೆ ಆಕ್ರಮಿಸುವ ಸ್ಥಳವೇ ಮೊಂಟ್-ಸೇಂಟ್-ಜೀನ್. ನೆಪೋಲಿಯನ್ Aಯ ಎರಡು ಬಾಹು

ಗಳ ತುದಿಗಳಲ್ಲಿ, ಸೈನ್ಯಗಳನ್ನಿಟ್ಟುಕೊಂಡು ಯುದ್ಧಕ್ಕೆ ಕಾದುಕೊಂಡಿದ್ದಾನೆ. ವೆಲ್ಲಿಂಗ್ಟನ್ ಎತ್ತರದ ಪ್ರದೇಶದಲ್ಲಿದ್ದರೆ, ನೆಪೋಲಿಯನ್ನನಿರುವುದು ತಗ್ಗುಪ್ರದೇಶದಲ್ಲಿ. Aಯ ಅಡ್ಡರೇಖೆ ಒಳಕೊಳ್ಳುವ ತ್ರಿಕೋಣ ಪ್ರದೇಶವೇ ಹ್ಯೂಗೊಮೊಂಟಿನ ಮೊಂಟ್- ಸೇಂಟ್-ಜೀನ್ ಎಂಬ ಸ್ಥಳ. ಸಿಂಹದ ಪ್ರತಿಮೆ ನಿಂತಿರುವುದೇ ಈ ತ್ರಿಕೋಣದಲ್ಲಿ. ಇಲ್ಲೇ ಯುದ್ಧದ ಕೊನೆಯ ಇತ್ಯರ್ಥ ಆದುದು.

ಶತ್ರುವಿನ ದೃಷ್ಟಿಯೂ ಶಕ್ತಿಯೂ ಇಬ್ಭಾಗವಾಗುವ ಗುರಿಯಿಂದ ನೆಪೋಲಿಯನ್ Aಯ ಎರಡು ಕಾಲುಗಳ ಮಾರ್ಗವಾಗಿ ತನ್ನ ಸೈನ್ಯಗಳನ್ನು ಕಳಹಿಸಿದ್ದ. ಸಮಯ ಸಂದರ್ಭಗಳನ್ನು ನೋಡಿ, ಅಡಗಿ ನಿಂತಿದ್ದ ವೆಲ್ಲಿಂಗ್ಟನ್, ಇದೇ ಹ್ಯೂಗೊಮೊಂಟಿನಲ್ಲಿ ನೆಪೋಲಿಯನ್ನನನ್ನು ಸಂಧಿಸಿ ಜಯಿಸಿದುದು. ಚರಿತ್ರೆಯ ಘಟನೆಗಳು ಪುನರಾವರ್ತಿಸುವುವೆಂಬ ಘೋಷಣೆಯನ್ನು ರುಜುಪಡಿಸಿದ ಸ್ಥಳವೇ ಈ ಹ್ಯೂಗೊಮೊಂಟ್. ನೆಪೋಲಿಯನ್ ಯೂರೊಪನ್ನೆಲ್ಲ ಗೆದ್ದು ಸಹಸ್ರಾರು ಸಾಹಸಗಳಿಂದ ಜಯಕೀರ್ತಿ ಪ್ರಭೆಯನ್ನು ಪಡೆದು ಶೋಭಿಸಿದ. ಆದರೆ ದೇಶ, ಸಮಾಜ, ಸಂಸಾರಗಳಿಗೆ ಆಗಿದ್ದ ಹಾನಿ ಈ ಪ್ರಭೆಯ ಹಿಂದೆಯೇ ನೆರಳಿನಂತೆ ಕರಾಳವಾಗಿ ಹಿಂಬಾಲಿಸುತ್ತಿತ್ತು. ಸಿಕಂದರ್, ಸೀಸರ್, ಟಿಟಸ್ ಇವರೂ ಅನೇಕ ದೇಶಗಳನ್ನೂ ಜನಾಂಗ ಗಳನ್ನೂ ಜಯಿಸಿ ಪ್ರಭಾನ್ವಿತರಾದುದು ನಿಜ; ಆದರೆ, ಅವರ ಕೀರ್ತಿ ಪ್ರಭೆಯ ಬೆನ್ನಿಗೇ ಹಾನಿಯ ಕರಾಳಸ್ವರೂಪವೂ ಹಿಂಬಾಲಿಸಿ ಬಂದಿತ್ತಲ್ಲವೆ? ಪಾಶವೀ ಶಕ್ತಿ ಒಮ್ಮೆ ಪ್ರಭೆಯಾಗಿ ಮೆರೆದರೂ ಮರುಕ್ಷಣವೇ ಅಂಧಕಾರವೂ ಆಗಿ ಮೃತ್ಯುವನ್ನೂ ತಂದೊಡ್ಡದಿರದು. ವಿಧಿ ನೆಪೋಲಿಯನ್ನನ ಅಂತ್ಯ ತಂದದ್ದೂ ಈ ಕ್ರಮದಿಂದಲೇ !

೫. ತರ್ಕಕ್ಕೂ ಮೀರಿದ ಕೆಲವು ಪ್ರಸಂಗಗಳು

ವಾಟರ್ಲೂ ಯುದ್ಧದ ಆರಂಭ ಭಾಗದಲ್ಲಿ ಇಂಗ್ಲಿಷರೇ ಸೋಲುತ್ತ ಬಂದಿದ್ದರೆಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಮಧ್ಯಾಹ್ನದ ಹನ್ನೆರಡು ಗಂಟೆಗೆ ಇಪ್ಪತ್ತೈದು ಮಿನಿಟುಗಳಿರು ವಾಗಲೇ ಫ್ರೆಂಚರಿಂದ ಮೊದಲನೆಯ ಫಿರಂಗಿ ಹಾರಿಸಲ್ಪಟ್ಟಿತು. ನೆಪೋಲಿಯನ್ನನ ಸೈನ್ಯ ಎರಡು ಭಾಗದಿಂದ ಹ್ಯೂಗೊಮೊಂಟ್ ಕಡೆಗೆ ಮುಂದುವರಿಯತೊಡಗಿತು. ಮುಖ್ಯಘರ್ಷಣೆ ನಡೆಯು ವುದು ಹ್ಯೂಗೊಮೊಂಟಿನಲ್ಲೇ ಎಂದು ಉಭಯರಿಗೂ ಗೊತ್ತಿತ್ತು. ಒಂದೇ ಕಡೆ ನಿಂತಿದ್ದ ಇಂಗ್ಲಿಷ್ ಸೈನ್ಯವನ್ನು ಇಬ್ಭಾಗವಾಗಿ ಬರಮಾಡಿಕೊಳ್ಳಲೋಸ್ಕರವೇ ನೆಪೋಲಿಯನ್ ಈ ರೀತಿ ವರ್ತಿಸಿದುದು. ಇಂಗ್ಲಿಷ್ ಸೈನ್ಯದ ಕೇವಲ ಯುವಕರ ವಿಭಾಗವೊಂದು ಈ ಗಾಳಕ್ಕೆ ಸಿಕ್ಕಿಬಿದ್ದು ನಾಶವೂ ಆಯಿತು.

ಸಾಧಾರಣ ೪ ಗಂಟೆಯ ವರೆಗೆ ಯಾವ ಸೈನ್ಯಕ್ಕೆ ಏನಾಯಿತೆಂದು ಹೇಳಲಾರದಿದ್ದ ಸ್ಥಿತಿಯಲ್ಲಿ ಯುದ್ಧ ನಡೆಯುತ್ತಿತ್ತು. ಫ್ರೆಂಚ್ ಸೈನ್ಯ ಹ್ಯೂಗೊಮೊಂಟ್ ಕಡೆಗೆ ಮುಂದುವರಿಯುತ್ತಲೆ ಇತ್ತು.

೬. ಅಪರಾಹ್ಣ ೪ ಗಂಟೆಗೆ

ಹೀಗೆ ಫ್ರೆಂಚ್‌ಸೈನ್ಯ ಮುಂದುವರಿಯುತ್ತಿದ್ದುದನ್ನು ನೋಡುತ್ತಿದ್ದ ಇಂಗ್ಲಿಷ್ ಸೈನ್ಯ ಕೊನೆಗೆ ಕಾಡೊಳಗಿಂದ ಹೊರಗೆ ಬಂತು. ಆದರೆ, ಅವರು ಇಬ್ಭಾಗವಾಗಿ ಬರದೆ, ಹ್ಯೂಗೊಮೊಂಟ್ ಕಡೆಗೆ, ಕೇಂದ್ರೀಕರಿಸಿ ಬಂದರು. ಫ್ರೆಂಚರು ಇಬ್ಬದಿಗಳಿಂದಲೂ ಫಿರಂಗಿ ಹೊಡೆಯುತ್ತಿದ್ದ

ಹಾಗೆಯೇ ಇಂಗ್ಲಿಷರು ಎರಡು ದಿಕ್ಕುಗಳಿಗೂ ಫಿರಂಗಿಗಳನ್ನು ಹಾರಿಸುತ್ತಿದ್ದರು. ಈ ಸೈನ್ಯಗಳು ಇನ್ನೂ ಕೆಲವು ದೂರದಿಂದಲೇ ಯುದ್ಧಮಾಡುತ್ತಿದ್ದುದರಿಂದ ಅವರವರು ಉದ್ದೇಶಪಡುತ್ತಿದ್ದಷ್ಟು ಹಾನಿ ಉಭಯಪಕ್ಷಗಳಿಗೂ ಆಗುತ್ತಿರಲಿಲ್ಲ. ಆದರೂ ಒಂದು ಪ್ರಸಂಗದಲ್ಲಿ ಎರಡು ಕಡೆಗಳಿಂದ ಪೆಟ್ಟು ತಿಂದ ಇಂಗ್ಲಿಷ್ ಸೈನ್ಯ ಒಮ್ಮೆ ಹಿಂದೆ ಸರಿಯಿತು. ಇದನ್ನು ಕಂಡು ನೆಪೋಲಿಯನ್ ಸಂತೋಷಪಟ್ಟ. ಆಗ ನಾಲ್ಕು ಗಂಟೆ ಕಳೆದಿತ್ತು.

೭. ನೆಪೋಲಿಯನ್ ಉತ್ಸಾಹಭರಿತನಾಗಿದ್ದಾನೆ

೧೮ನೆಯ ತಾರೀಕಿನಂದು ಬೆಳಗ್ಗಿನಿಂದಲೇ ನೆಪೋಲಿಯನ್ ಉತ್ಸಾಹಭರಿತನಾಗಿದ್ದಾನೆ. ಅವನ ಆರೋಗ್ಯ ಚೆನ್ನಾಗಿರಲಿಲ್ಲವಾದರೂ ಅವನು ಕುದುರೆಯಿಂದ ಇಳಿಯದೆ ಅತ್ತಿತ್ತ ತಿರುಗಾಡುತ್ತ ಸೈನಿಕರನ್ನು ಹುರಿದುಂಬಿಸುತ್ತಿದ್ದ. ಆಕಾಶದಲ್ಲಿ ಮೋಡಕವಿದು ಸಿಡಿಲುಮಿಂಚು ತೋರಿತು. ಆಗ್ಗೆ ಅವನು ಗಗನ ನೋಡಿ, "ನಾವು ನಿನ್ನ ಹಾಗೆಯೇ ಇದ್ದೇವೆ—ಶತ್ರುಭಯಂಕರರಾಗಿ!" ಎಂದು ಮೋಡವನ್ನು ಸಂಬೋಧಿಸಿದ್ದ.

ಮೊಂಟ್-ಸೇಂಟ್-ಜೀನ್ ಎಂಬುದು ವಾಟರ್ಲೂ ಗ್ರಾಮದ ಒಂದು ಅಂಶ. ಅದೊಂದು ಪ್ರಸ್ಥಭೂಮಿ. ಇಂಗ್ಲಿಷರು ಪ್ರಸ್ಥಭೂಮಿಯ ಶಿಖರಭಾಗದಲ್ಲಿದ್ದುದರಿಂದ ಆ ಪ್ರದೇಶವೆಲ್ಲ ಅವರಿಗೆ ತೋರುತ್ತಿತ್ತು. ಫ್ರೆಂಚರು ಪ್ರಸ್ಥಭೂಮಿಯ ಕೆಳಗಡೆಯಿಂದ ಮುಂದುವರಿಸಿ ಬರುತ್ತಿದ್ದುದರಿಂದ ಅವರಿಗೂ ಇಂಗ್ಲಿಷರಿಗೂ ಇದ್ದ ಸ್ಥಳ ಫ್ರೆಂಚರಿಗೆ ಚೆನ್ನಾಗಿ ಕಾಣುತ್ತಿರಲಿಲ್ಲ. ಫ್ರೆಂಚರಿಗೆ ಸ್ಥಳಪರಿಚಯ ಮಾಡಿಕೊಟ್ಟವರ ಲೋಪದಿಂದಲೋ ಅಥವಾ ಫ್ರೆಂಚರ ಇನ್ಯಾವುದೋ ಕಾರಣದಿಂದಲೋ ಮೊಂಟ್‌ಸೇಂಟ್-ಜೀನಿನ ಭೂಸ್ಥಿತಿಯ ಒಂದು ವೈಶಿಷ್ಟ್ಯ ಇವರಿಗೆ ಗೊತ್ತಾಗಲಿಲ್ಲ. ಫ್ರೆಂಚ್ ಸೈನ್ಯಕ್ಕೂ ಹ್ಯೂಗೊಮೊಂಟಿಗೂ ನಡುವಿನಲ್ಲೇ ಕಡಿದಾದ, ಪ್ರಕೃತಿ ನಿರ್ಮಿತ ಕಂದಕವಿತ್ತು. ಇದನ್ನು ಒಹೇನ್ ಕಣಿವೆಯೆಂದು ಕರೆಯುತ್ತಾರೆ. ಇದು ಬಲು ಕಡಿದಾಗಿಯೂ ಆಳವಾಗಿಯೂ ಅಗಲವಾಗಿಯೂ ನೀಳವಾಗಿಯೂ ಇತ್ತು. ಇದರ ಬದಿಗಳು ಮನುಷ್ಯ ಮೃಗಗಳಿಂದ ಹತ್ತಲಾರದಷ್ಟು ಕಡಿದಾಗಿದ್ದುವು. ಇಬ್ಬದಿಗಳಲ್ಲೂ ಪೊದರು, ಹುಲ್ಲು ಮುಂತಾದವು ಬೆಳೆದು, ಪ್ರಸ್ಥಭೂಮಿಯನ್ನು ಹತ್ತುತ್ತ ಬರುವವರಿಗೆ ಅಗೋಚರವಾಗಿತ್ತು. ದೂರದಿಂದ ನೋಡುವವರಿಗೆ ಈ ಭೂಭಾಗ ಸಮತಟ್ಟಾಗಿ ಕಾಣುತ್ತಿತ್ತು. ಈ ಪ್ರಕೃತಿ ನಿರ್ಮಿತ ಕಂದರ ಫ್ರೆಂಚರ ಮಹಾವಿರೋಧಿಯಾಗಿ ಪರಿಣಮಿಸಿತು.

೮. ಆಳು ಹೇಳಿದ್ದು ಹಾಳು

ಯುದ್ಧ ನಡೆಯುತ್ತಲೇ ಇತ್ತು. ಫ್ರೆಂಚರ ಕಡೆ ಬರ್ಗೋಯಿಸ್, ಡಾಂಟಲ್, ಡ್ಯೂರಟ್ಟೆ ಮೊದಲಾದವರು ಪರಾಜಿತರಾಗಿದ್ದರು. ಕ್ರಿಮೈಟ್ ಹಿಮ್ಮೆಟ್ಟಿದ್ದ. ಮಾರ್ಕೊನೆಟ್ಟನ ಸೈನ್ಯ ಅರ್ಧ ನಾಶವಾಗಿತ್ತು. ಇಂಗ್ಲಿಷರಿಗೆ ಇದಕ್ಕಿಂತಲೂ ಹೆಚ್ಚು ನಷ್ಟವಾಗಿತ್ತು. ಹಾಗಾಗಿಯೋ, ಎಂಬಂತೆ ಅವರು ಹಿಂತಿರುಗಿದ್ದರು. ಅದನ್ನು ನೋಡಿಯೇ ನೆಪೋಲಿಯನ್ ಸಂತೋಷ ಪಟ್ಟದ್ದು.

ತಮ್ಮ ಜಯವನ್ನು ಪ್ಯಾರಿಸಿಗೆ ತಿಳಿಸಬೇಕೆಂದು ನೆಪೋಲಿಯನ್ ಒಬ್ಬ ದೂತನನ್ನು ಅಲ್ಲಿಗೆ ಕಳುಹಿಸಿದ. ಇಂಗ್ಲಿಷರನ್ನು ಸಾವಿರಗಟ್ಟಲೆ ಸೆರೆಹಿಡಿಯಬೇಕೆಂಬ ಇಚ್ಛೆಯಿಂದ, ತನ್ನ ಒಬ್ಬ

ನಂಬುಗೆಯ ಆಳನ್ನು ಕರೆದು, ನೆಪೋಲಿಯನ್ ಏನೋ ಗುಟ್ಟಾಗಿ ವಿಚಾರಿಸಿದ. ಶತ್ರುಗಳನ್ನು ಸೆರೆಹಿಡಿಯುವ ದೃಷ್ಟಿಯಿಂದ ಮುಂದುವರಿಯಬೇಕಾದ ದಾರಿಯಲ್ಲಿ ಪ್ರಕೃತಿಸಿದ್ಧ ಅಡಚಣೆಗಳೇನಾದರೂ ಇವೆಯೋ ಎಂದು ವಿಚಾರಿಸಿರಬೇಕೆಂದು ತೋರುತ್ತದೆ. ಏಕೆಂದರೆ, ಆ ಆಳಿನ ಉತ್ತರ ಸಿಕ್ಕಿದ ಕೂಡಲೇ ನೆಪೋಲಿಯನ್ ಕುದುರೆ ಮೇಲೆ ನೆಟ್ಟಗೆ ಕುಳಿತ, ರಾಹುತರ ದಳವಾಯಿ ಮಲ್ಹಾಡನನ್ನು ಕರೆದ, ಮತ್ತು ಅವನ ಸೈನ್ಯ ಕೂಡಲೇ ಮೊಂಟ್-ಸೇಂಟ್-ಜೀನನ್ನು ಪ್ರವೇಶಿಸಿ, ಹ್ಯೂಗೊಮೊಂಟಿನಲ್ಲಿ ತಮ್ಮ ಧ್ವಜವನ್ನು ಊರಬೇಕೆಂದು ಅಪ್ಪಣೆಯಿತ್ತ.

೯. ಕಂದಕ ಒಡ್ಡಿದ ಕಂಟಕ

ಉಕ್ಕಿನ ಕವಚ, ಪಿಸ್ತೂಲ್, ನೀಳ ಕತ್ತಿ ಮೊದಲಾದವುಗಳಿಂದಲೂ ಅವರ ಸೈನ್ಯಕ್ಕೆ ಇದ್ದ ಮರ್ಯಾದಾಸೂಚಕ ಪದಕ, ಗುಬ್ಬಿ, ಸರಪಣಿ ಇತ್ಯಾದಿಗಳಿಂದಲೂ ಕೂಡಿ ಶೋಭಿಸುತ್ತಿದ್ದ ಮೂರುಸಾವಿರದೈನೂರು ರಾಹುತರು ತಮ್ಮ ಕುದುರೆಗಳನ್ನು ಏರಿ ಠೀವಿಯಿಂದ ಮುಂದೆ ಸಾಗಿದರು. ಇವರಿಗಿಂತ ಒಂದಂತಸ್ತು ಕೆಳತರಗತಿಯ ಒಂದು ಸಾವಿರದ ನೂರತೊಂಬತ್ತೇಳು ರಾಹುತರು ಇವರ ಹಿಂದೆ ಹೋದರು. ಈ ಎರಡು ಸೈನ್ಯದ ಹಿಂಬದಿ ಅಸ್ತ್ರಧಾರಿ ಕಾಲಾಳು ಸೈನಿಕರೂ ಕತ್ತಿಬರ್ಜಿಗಳ ಸೈನಿಕರೂ ಒಟ್ಟಾಗಿ ಒಂಬೈನೂರ ಎಂಬತ್ತಾರು ಜನರು ಶಿಸ್ತಿನಿಂದ ಹೋದರು.

ಇಂಗ್ಲಿಷ್ ಸೈನ್ಯ ಕಾಡೊಳಗೆ ಅಡಗಿ ನಿಂತಿತ್ತು. ಫ್ರೆಂಚ್ ಸೈನ್ಯಕ್ಕೆ ಇಂಗ್ಲಿಷ್ ಸೈನ್ಯ ಕಾಣದಿದ್ದರೂ ಇಂಗ್ಲಿಷ್ ಸೈನ್ಯಕ್ಕೆ ಫ್ರೆಂಚ್ ಸೈನ್ಯ ಕಾಣುತ್ತಿತ್ತು. ಒಂದು ಅನಿರೀಕ್ಷಿತ ಪ್ರಸಂಗದಿಂದ ಈ ಎರಡೂ ಪಕ್ಷಗಳಲ್ಲೂ ಈಗ ತಲಾ ಇಪ್ಪತ್ತಾರು ಡಿವಿಶನ್ ಸೈನ್ಯವಿತ್ತು.

ನೀಳವಾದ ದೊಡ್ಡ ಮರದ ತೊಲೆಯನ್ನು ಒಂದು ತುದಿಯಿಂದ ಮುಂದೆ ನೂಕುತ್ತಿದ್ದ ಕ್ರಮದಿಂದ ಫ್ರೆಂಚ್ ಸೈನ್ಯ ಸರಾಗವಾಗಿ, ಯಂತ್ರದಂತೆ ಶಿಸ್ತಿನಿಂದ ನಿರ್ದಿಷ್ಟ ಗುರಿಯತ್ತ ಮುಂದುವರಿಯುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಇದ್ದಕ್ಕಿದ್ದ ಹಾಗೆಯೇ ಫ್ರೆಂಚ್ ಸೈನ್ಯದ ಮುಂಭಾಗದಲ್ಲಿ ಗಲಿಬಿಲಿಯುಂಟಾಯಿತು. ಕುದುರೆಗಳು ಮುಂದುವರಿಯಲೊಲ್ಲದೆ ಎರಡು ಕಾಲುಗಳಲ್ಲಿ ನಿಂತು ಕುಸಿದುಬೀಳತೊಡಗಿದುವು.

ಅಲ್ಲೇ ಒಹೇನ್ ಕಣಿವೆ ಫ್ರೆಂಚ್ ಸೈನ್ಯಕ್ಕೆ ಅಡ್ಡವಾಗಿತ್ತು.

ಇದೇ ಸಂದರ್ಭವನ್ನು ಕಾದು ನಿಂತಿದ್ದ ಇಂಗ್ಲಿಷ್ ಸೈನ್ಯ ಮೊಂಟ್-ಸೇಂಟ್-ಜೀನನ್ನು ಪ್ರವೇಶಿಸಿತು, ಮತ್ತು ಗಲಿಬಿಲಿಗೊಂಡಿದ್ದ ಫ್ರೆಂಚ್ ಸೈನ್ಯಕ್ಕೆ ಅಲ್ಲಿಂದಲೇ ಫಿರಂಗಿ ಹಾರಿಸತೊಡಗಿತು.

ಫ್ರೆಂಚ್ ಸೈನ್ಯ ಮಹಾರೌದ್ರತಾಳಿತು. ಶತ್ರುಗಳ ಫಿರಂಗಿದಾಳಿ, ತಮ್ಮವರು—ಮುಂದಿನ ಸನ್ನಿವೇಶವನ್ನರಿಯದೆ—ಮುಂದೊತ್ತಿ ಬರುತ್ತಿದ್ದಾಗ ಆಗುತ್ತಿದ್ದ ಸೈನ್ಯದ ನಾಶ, ಇವನ್ನೆಲ್ಲ ಕಂಡು, ಆ ಸೈನ್ಯ ಅತ್ಯುಗ್ರತಾಳಿ, ಹಿಂದೆ ಮುಂದೆ ನೋಡದೆ ಕಂದಕಕ್ಕೆ ದುಮುಕಿತು. ಡೂಬಾಯಿಯ ಸೈನ್ಯದ ಮೂರನೆ ಒಂದಂಶದಷ್ಟು ಬೇಕೆಂದೇ ಕಂದಕಕ್ಕೆ ದುಮುಕಿ ಭೂಗತವಾಯಿತು. ಈ ಸೈನ್ಯ ತಮ್ಮ ಅಸ್ಥಿ, ಮಾಂಸ ರಕ್ತದಿಂದ ಹಿಂದಿನ ಸೈನ್ಯಕ್ಕೆ ಕಂದಕ ದಾಟಲಿರುವ ಹೊಸ ಮಾರ್ಗ ಕಲ್ಪಿಸಿಕೊಟ್ಟಿತು. ಹೀಗೆ ಒಹೇನ್ ಕಣಿವೆ ಕುದುರೆ ಮನುಷ್ಯರಿಂದ ತುಂಬಿ ಭರ್ತಿಯಾಗಿ, ಆ ಮಾರ್ಗದಿಂದ ಫ್ರೆಂಚ್‌ಸೈನ್ಯ ಮೊಂಟ್-ಸೇಂಟ್-ಜೀನನ್ನು ಪ್ರವೇಶಿಸಿತು.

ಚಕ್ರವರ್ತಿಯ ಸೋಲಿನ ಆರಂಭ ಈ ಕಂದಕದಲ್ಲಾಯಿತು. ಇದನ್ನು ದೈವದತ್ತ ಅಪಜಯ ಎಂದು ಮಾತ್ರ ಹೇಳಬೇಕಾಗುವುದು. ಹೊಳೆಯಂತೆ ಹರಿಯುತ್ತಿದ್ದ ಮೃಗ ಮನುಷ್ಯರ ರಕ್ತ, ಶ್ಮಶಾನಗಳಲ್ಲಿ ಸತ್ತು ಸೇರಿದವರ ಒತ್ತಡ, ಹೆತ್ತ ಹೃದಯಗಳ ಅಶ್ರುಧಾರೆ ಇವೆಲ್ಲ ಒಟ್ಟಾಗಿ ದೇವರಲ್ಲಿ ಮೊರೆಯಿಟ್ಟು ದೇವರೇ ಕುಪಿತನಾಗಿರಬೇಕು; ಮತ್ತು, ಪ್ರಾಪಂಚಿಕಶಕ್ತಿಯ ಹಂಚೋಣದರಲ್ಲಿ ಒಂದು ವಿಧದ ಸಮತೆಯಿರಬೇಕೆಂದು ನಿಶ್ಚೈಸಿರಬೇಕು; ಸಮಾಜದ ಸರ್ವ ಶಕ್ತಿಗಳೂ ಒಬ್ಬ ನೆಪೋಲಿಯನ್ನನಲ್ಲಿ ಕ್ರೋಡೀಕರಿಸಿರುವುದು ಪ್ರಪಂಚಕ್ಕೆ ಹಿತಕರವಲ್ಲವೆಂದೂ ದೇವರು ಗ್ರಹಿಸಿರಬೇಕು. ಈ ತತ್ತ್ವವನ್ನೆಲ್ಲ ಪ್ರಕೃತಿನಿಯಮವೆಂದು ಕರೆಸಿಕೊಂಡು, ದೇವರೇ ನೆಪೋಲಿಯನ್ನನ ಎದುರು ವಾಟರ್ಲೂವನ್ನು ತಂದಿರಿಸಿದ.

೧೦. ಮೊಂಟ್-ಸೇಂಟ್-ಜೀನ್ ಪ್ರಸ್ಥಭೂಮಿ

ತಮ್ಮ ಸೈನ್ಯದ ಸಮಾಧಿಯನ್ನೇ ತುಳಿಯುತ್ತ ಮುಂದುವರಿಯುತ್ತಿದ್ದ ವೀರಯೋಧರ ಎದುರು ಏನಿತ್ತು? ಆಗ ತಾನೇ ಕಾಣಿಸಿಕೊಂಡು ಚತುರ್ವ್ಯೂಹ ರಚಿಸಿ ನಿಂತಿದ್ದ ಇಂಗ್ಲಿಷರ ಸೈನ್ಯ, ಮತ್ತು ಅದರ ಅರುವತ್ತು ಫಿರಂಗಿಗಳ ಮತ್ತು ಸೈನಿಕರ ಗುಂಡಿನ ಮಳೆ! ಹಠಾತ್ತನೆ ಮುಂದೆ ನುಗ್ಗಿ ನಡೆಸಿದ್ದ ಇಂಗ್ಲಿಷ್ ಸೈನ್ಯದ ಈ ಪ್ರಯೋಗದಿಂದ ಫ್ರೆಂಚ್ ಸೈನ್ಯದಲ್ಲಿ ನೂರರ ಲೆಕ್ಕದಲ್ಲಿ ಜನರು ಮಡಿಯತೊಡಗಿದರು.

ಆದರೂ, ಫ್ರೆಂಚರಲ್ಲಿ ಯಾರೂ ಹಿಂತಿರುಗುವ ಇಚ್ಛೆಯುಳ್ಳವರಾಗಿರಲಿಲ್ಲ. ಅವರ ಮನಸ್ಸು ಕಲ್ಲಾಗಿತ್ತು; ದೃಷ್ಟಿ ಒಂದೇ ಕಡೆ ನೆಟ್ಟಿತ್ತು; ಅವರೆಲ್ಲರೂ ಶಕ್ತಿಮೀರಿ ಕಾದಾಡಿದರು. ಬಂಡೆಗಳೇ ಘರ್ಷಿಸಿದರೆ ಆಗುವಂಥ ಜ್ವಾಲೆ, ಉರಿ, ಶಬ್ದ, ಹಾನಿ ಅಲ್ಲುಂಟಾದುವು. ಮಡಿಯಬೇಕೆಂದೇ ಮುಂದುವರಿಯುತ್ತಿದ್ದ ಫ್ರೆಂಚ್‌ಸೈನ್ಯದ ಶೌರ್ಯ, ಕ್ರೌರ್ಯ ಅದ್ಭುತವಾಗಿದ್ದುವು. ಅದು ಬೆಂಕಿಗೂ ಬಿರುಗಾಳಿಗೂ ನಡೆದ ಯುದ್ಧ! ಪಂಚೇಂದ್ರಿಯಗಳಿಂದ ತಿಳಿಯಲಾರದ ಪಾರಲೌಕಿಕ ಶಕ್ತಿಗಳ ಪರಸ್ಪರ ರೌದ್ರಘರ್ಷಣೆಯೇ ಆ ಯುದ್ಧ. ಊಹನೆ, ಆಲೋಚನೆಗಳನ್ನು ಮೀರಿದ ಮಾರಣಭೀಕರತೆಯಿಂದ ಅದು ನಡೆಯಿತು. ಸತ್ತ ಜನರ ಸಂಖ್ಯೆ ಸಾವಿರಗಟ್ಟಲೆ. ಸತ್ತ ಕುದುರೆಗಳ ಸಂಖ್ಯೆ ಅದಕ್ಕಿಂತಲೂ ಹೆಚ್ಚು! ಸರ್ವತ್ರ ರಕ್ತ, ಮಾಂಸ, ಅಸ್ಥಿ, ದೇಹಗಳ ನುಚ್ಚು ನೂರು! ಮೃಗಮನುಷ್ಯರ ಕೂಗು, ಆರ್ಭಟೆ. ಫಿರಂಗಿಬಂದೂಕುಗಳ ಅಮಾನುಷ ಢಂಢಂ ಢೇಂಕಾರ; ವಾಟರ್ಲೂರಂಗವೆಂದರೆ ಇಂಥ ಅತಿಮಾನುಷ, ಭೀಕರ ಪ್ರದೇಶವಾಗಿ ಹೋಯಿತು.

ಯಾವ ಕಡೆಯವರಿಗೂ ತಂತಮ್ಮ ಪರಿಸ್ಥಿತಿ ಗೊತ್ತಾಗಿರಲಿಲ್ಲ. ವೆಲ್ಲಿಂಗ್‌ಟನ್ ತನ್ನ ಗಡಿಯಾರ ನೋಡಿ, ನಿಟ್ಟುಸಿರು ಬಿಡುತ್ತ, "ಬ್ಲುಚ್ಚರ್, ಅಥವಾ ಘೋರಾಂಧಕಾರ!" ಎಂದು ಕೊಂಡನಂತೆ. ಯಾರಿಗೂ ಯುದ್ಧದ ಜಯಾಪಜಯಗಳ ತಿಳಿವು ಇರಲಿಲ್ಲ. ಪರಿಸ್ಥಿತಿಯ ಭೀಷಣತೆಯನ್ನು ಮಾತ್ರ ತಿಳಿಯುತ್ತ ಉಭಯಪಕ್ಷಗಳೂ ಕಾದಾಡುತ್ತಿದ್ದುವು.

೧೧. ನೆಪೋಲಿಯನ್ನನ ಪತನ

ನೆಪೋಲಿಯನ್ ಮೋಸಹೋದ ಈ ಸಂದರ್ಭ ಎಲ್ಲರಿಗೂ ಗೊತ್ತಿದೆ. ಅವನು ತನ್ನ ಕಡೆಯ ಗ್ರೌಚಿಯನ್ನು ನಿರೀಕ್ಷಿಸುತ್ತಿದ್ದಾಗ ಬಂದದ್ದು ಇಂಗ್ಲಿಷರ ಕಡೆಯ ಬ್ಲುಚರ್! ಅಂದರೆ, ಉಳಿವಿನ ಬದಲು ಅಳಿವು.

ಬ್ಲುಚರ್ ಮತ್ತು ಅವನ ಕೆಳಗಿನ ಬುಲೌ ತಂತಮ್ಮ ಸೈನ್ಯದ ಸಮೇತ ವೆಲ್ಲಿಂಗ್‌ಟನ್ನನ ಸಹಾಯಕ್ಕಾಗಿ ಬರುತ್ತಿದ್ದರು. ಎರಡೂ ಸೈನ್ಯಗಳು ಒಟ್ಟಾಗಿ ಯುದ್ಧರಂಗವನ್ನು ಪ್ರವೇಶಿಸ ಬೇಕೆಂದು ಬರುತ್ತಿದ್ದಾಗ ಬ್ಲುಚರನ ಫಿರಂಗಿಬಂಡಿಗಳು ಮಳೆಯಿಂದ ಒದ್ದೆಯಾಗಿದ್ದ ನೆಲದಲ್ಲಿ ಹೂತುಹೋಗಿ ಬುಲೌ ಮಾತ್ರ ಮುಂದೆ ಬಂದು, ಮುಂದಿನ ಆಜ್ಞೆಯನ್ನು ಬ್ಲುಚರನಿಂದ ನಿರೀಕ್ಷಿ ಸುತ್ತ ನಿಂತಿದ್ದ.

ನಿಂತಿದ್ದ ಬುಲೌ-ಸೈನ್ಯವನ್ನು ನೆಪೋಲಿಯನ್ ದುರ್ಬೀನಿನಿಂದ ಕಂಡು, ಅದು ತನ್ನ ಸಹಾಯ ಕ್ಕಾಗಿ ಬರುತ್ತಿದ್ದ ಗ್ರೌಚಿಯ ಸೈನ್ಯವೆಂದು ಸಂತೋಷಪಡುತ್ತಿದ್ದಾಗಲೇ, ಬುಲೌ ಅವನ ಸೈನ್ಯದ ಮಟ್ಟಿಗಾದರೂ ಕೂಡಲೇ ವೆಲ್ಲಿಂಗ್‌ಟನ್ನನ ಸಹಾಯಕ್ಕೆ ಹೋಗಿ ಯುದ್ಧಭಾಗಿಯಾಗಬೇಕೆಂದು ಬ್ಲುಚರ್ ಬುಲೌಗೆ ಆಜ್ಞೆಯಿತ್ತ. ಆ ಅಪ್ಪಣೆ ಪ್ರಕಾರ ಬುಲೌ ವೆಲ್ಲಿಂಗ್‌ಟನ್ನನ ಸಹಾಯಕ್ಕೆ ಧಾವಿಸಿ ಬಂದ. ಮುಂದೇನಾಯಿತೆಂದು ಗೊತ್ತಿದೆಯಷ್ಟೆ?

ನೆಪೋಲಿಯನ್ನನಿಗೆ ಸಾರ್ವಭೌಮ ಸಿಂಹಾಸನ ಏರುವ ಬದಲು ಸೇಂಟ್ ಹೆಲೀನದ ಕಾರಾ ಗೃಹಕ್ಕೆ ಕೆಡೆದ. ವಿಧಿಯ ವೈಚಿತ್ರ್ಯವೆಂದರೆ ಇದೇ!

೧೨. ಫ್ರೆಂಚ್ ಸೈನ್ಯದ ಹನನ

ಮುಂದಿನ ವಿಷಯ ಗೊತ್ತಿದೆಯಷ್ಟೆ. ಎಂಬತ್ತಾರು ಉತ್ಕೃಷ್ಟ ಫಿರಂಗಿಗಳನ್ನೂ ಹೊಸ ಸೈನ್ಯವನ್ನೂ ಫ್ರೆಂಚ್ ಸೈನ್ಯ ಎದುರಿಸಬೇಕಾಯಿತು. ಮೊದಲೇ ಪುಡಿಪುಡಿಯಾಗತೊಡಗಿದ್ದ ಈ ಸೈನ್ಯಕ್ಕೆ ಆಗಲು ಬಾಕಿ ಉಳಿದಿದ್ದುದು ಸಂಪೂರ್ಣ ನಾಶ ಮಾತ್ರ. ಪ್ರಶ್ಯನರ ಮತ್ತು ಇಂಗ್ಲಿಷರ ಗುಂಡಿಗೆ ಪ್ರತಿ ನಿಮಿಷವೂ ಫ್ರೆಂಚ್ ಸೈನ್ಯ ಹೆಚ್ಚು ಹೆಚ್ಚು ನಾಶವಾಗತೊಡಗಿತು.

ಆಕಾಶವೆಲ್ಲವೂ ಮೋಡಗಳಿಂದ ಆವೃತವಾಗಿತ್ತು. ಪೃಥ್ವಿಯ ಮೇಲಿನ ಭೀಕರತೆ ಆಕಾಶದ ವರೆಗೂ ತುಂಬಿತ್ತು. ನೆಪೋಲಿಯನ್ನನ ಅಂಗರಕ್ಷಕ ದಳ ಮುಂದೊತ್ತಿ ಯುದ್ಧಮಾಡಿತು. ಚಕ್ರ ವರ್ತಿಯ ವಿಶೇಷ ಅಂಗರಕ್ಷಕ ದಳದ ಯುದ್ಧವೆಂದ ಮೇಲೆ ಅದನ್ನು ವರ್ಣಿಸುವುದು ತಾನೇ ಹೇಗೆ? ಅವರು ಈ ಲೋಕದವರೇ ಆಗಿರಲಿಲ್ಲ. ಮೃತ್ಯುಲೋಕದಿಂದಲೇ ಬಂದವರಾಗಿದ್ದರು. ಹಾಗೆಯೇ ಮಹಾವೀರರಾಗಿ ಕಾದಾಡಿದರು. "ಚಕ್ರವರ್ತಿ ಚಿರಾಯುವಾಗಿ ಬಾಳಲಿ," ಎಂದು ಘೋಷಿಸುತ್ತ ಮಡಿದರು. ಫ್ರೆಯಂಟೆ, ಮೈಕೇಲ್, ರೋಗೆಟ್, ಹಾರ್ಲಟ್, ಮೂರ್ಲಟ್ ಎಲ್ಲರೂ ಮಡಿದರು. ನೈ ಒಬ್ಬನೇ ಒಂದಾದ ಮೇಲೆ ಒಂದರಂತೆ ನಾಲ್ಕು ಕುದುರೆಗಳನ್ನೇರಿ ಅವೆಲ್ಲವೂ ಅವನ ಕಾಲ ಅಡಿಯಲ್ಲೇ ಮಡಿದು ಬಿದ್ದವಾದರೂ ಸಾಯದೆ ಐದನೆಯ ಕುದುರೆ ಏರಿ ಕಾದಾಡಿದ. ತಾನೇಕೆ ಸಾಯಲಿಲ್ಲವೆಂದು ದುಃಖದ ಉದ್ಗಾರವೆತ್ತಿ ಕಾದಾಡಿದರೂ ಅವನು ಸಾಯಲಿಲ್ಲ. ಪಾಪ! ವೀರ ನೈ ತನ್ನವರ ಗುಂಡಿನಿಂದಲೇ ಮುಂದೆ ಮಡಿಯಬೇಕೆಂದು ವಿಧಿ ನಿರ್ಣಯಿಸಿದ್ದಾಗ ಅಲ್ಲಿ ಹೇಗೆ ತಾನೇ ಸಾಯಬಲ್ಲ!

ಈ ಯುದ್ಧದ ಭೀಕರತೆಯನ್ನೂ, ಅವಸಾನವನ್ನೂ ಫ್ರೆಂಚರ ಜಯವನ್ನು ಆಸ್ಟ್ರಿಲಿಸ್ ಯುದ್ಧ ದಲ್ಲಿ ಉದಯಿಸುತ್ತ ನೋಡಿದ ಸೂರ್ಯ ಅಸ್ತಂಗತನಾಗುತ್ತ ಮೋಡಗಳ ಮರೆಯಿಂದ ಒಮ್ಮೆ ನೋಡಿದ!

೧೩. ಸರ್ವನಾಶ

ಅಂಗರಕ್ಷಕಪಡೆಯ ಹಿಂಭಾಗದ ವಿನಾಶ ವಿಪರೀತ, ಅತಿದಾರುಣ. ಇದ್ದಕ್ಕಿದ್ದ ಹಾಗೆಯೇ ಸೈನ್ಯ ಸೋಲನ್ನು ಒಪ್ಪಿಕೊಂಡಿತು. "ವಿಶ್ವಾಸಘಾತ. ಸಾಧ್ಯವಿದ್ದವರು ಬದುಕಿ," ಎಂಬ ಘೋಷಣೆಯನ್ನು ಯಾರೋ ಎಬ್ಬಿಸಿದರು. ಮಂಜುಕರಗಿ ಮಾಯವಾಗುವಂತೆ ಫ್ರೆಂಚ್‌ಸೈನ್ಯ ಭಾಗವಾಗಿ, ಒಡೆದು ಚೂರಾಗಿ ಚದರಿತು. ಓಟದಲ್ಲೂ ಘರ್ಷಣೆ ಹೊಂದುತ್ತ ಎಲ್ಲೆಲ್ಲೂ ಸೋತು ಓಡಿದರು.

ಇಂಗ್ಲಿಷ್ ಮತ್ತು ಪ್ರಶ್ಯನ್ ಸೈನ್ಯಗಳು ನಾಶಕಾರ್ಯವನ್ನು ಅತ್ಯುಗ್ರವಾಗಿ ಮಾಡತೊಡಗಿದುವು. ಓಡುವವರೂ ಅದರಂತೆಯೇ ಚುರುಕಾದರು. ಕುದುರೆಗಳೂ ಓಡಿದುವು, ಮನುಷ್ಯರೂ ಓಡಿದರು. ಕುದುರೆ ಕಾಲ ಅಡಿಯಲ್ಲಿ ಸಿಕ್ಕಿ ಕೆಲವು ಜನ ಸತ್ತರು. ಸ್ನೇಹಿತರು, ಸಂಬಂಧಿಕರು, ಹಿರಿಯರು, ಕಿರಿಯರು ಎಂದು ನೋಡದೆ ತಂತಮ್ಮ ಮಾರ್ಗವನ್ನು, ಅಗತ್ಯ ಬಿದ್ದಲ್ಲಿ ಕತ್ತಿಯ ಮೊನೆಯಿಂದ ಕಡಿದುಕೊಂಡು ಓಡಿದರು. ಮನುಷ್ಯ, ಕುದುರೆ, ತಲೆ, ಕೈ, ಕಾಲು, ಅಂಗಾಂಗಗಳು ಯುದ್ಧಭೂಮಿಯಲ್ಲೆಲ್ಲ ಎರಚಾಡಿ ಹೋದುವು. ಅರ್ಧ ಮಾತ್ರ ಕಂಡುಬರುತ್ತಿದ್ದ ಕುದುರೆಗಳು ತಲೆಯಿಲ್ಲದ ಮನುಷ್ಯರ ಮುಂಡಗಳು, ಚಕ್ರವಿಲ್ಲದ ಅಡಿ ಮಗುಚಿ ಬಿದ್ದಿದ್ದ ಬಂಡಿಗಳು, ಸತ್ತವರು, ಸಾಯುತ್ತಲಿದ್ದವರು, ನರಳುತ್ತಿದ್ದವರು, ಜಯಘೋಷಕ್ಕಾಗಿ ಬಾಯಿತೆರೆದು ಅಷ್ಟರಲ್ಲೇ ಮೃತಿಹೊಂದಿದವರು ಈ ರೀತಿ ನಾನಾ ಭೀಕರತೆಯನ್ನು ಪ್ರದರ್ಶಿಸುವ ಮೃಗ, ಮನುಷ್ಯ, ವಸ್ತುಗಳಿಂದ ರಣರಂಗ ತುಂಬಿತ್ತು.

ಆಗಲೇ ಜಿನೇಪಿನ ರಸ್ತೆಯಲ್ಲಿ ಕುದುರೆ ಲಗಾಮನ್ನು ತನ್ನ ಕೈಯ ಮೇಲೆ ಹಾಕಿಕೊಂಡು ಏಕಾಕಿ-ಏಕಾಂಗಿಯಾಗಿ, ಚಿಂತಾಮಗ್ನನಾಗಿ, ನಿಸ್ತೇಜನಾಗಿ, ಕಡುಭಯಂಕರ ಪ್ರತಿಕಾರ್ಯವನ್ನೆಸಗಬೇಕೆಂಬ ಭವಿಷ್ಯ ಚಿಂತನೆಯಿಂದ ಕೂಡಿದವನಾಗಿ ನೆಪೋಲಿಯನ್ ವಾಟರ್ಲೂ ಹಳ್ಳಿಯ ಕಡೆಗೆ, ತನ್ನ ಕುದುರೆಯ ಬಳಿ ನಡೆಯುತ್ತ, ಸಾಗುತ್ತಿದ್ದ.

೧೪. ಕೊನೆತನಕವೂ ಕದಲದವರು

ಯುದ್ಧದ ಅಂತ್ಯಭಾಗ ತಮಗೆ ಅಪಜಯ ತಂದಿತ್ತೆಂದು ತಿಳಿದಿದ್ದರೂ ಕೆಲವು ವೀರಸೈನಿಕರು, ಪ್ರವಾಹದಲ್ಲಿ ಎದ್ದು ತೋರುವ ಬಂಡೆಗಳಂತೆ, ಅಲ್ಲಲ್ಲಿ ಗುಂಪಾಗಿ ನಿಂತು, ಸಾಯಲೋಸ್ಕರವೇ ಯುದ್ಧಮಾಡಿ ಸತ್ತರು. "ಶಸ್ತ್ರಗಳನ್ನು ಕೆಳಗಿಳಿಸಿ," ಎಂದನ್ನುತ್ತಿದ್ದ ಇಂಗ್ಲಿಷ್ ಸೈನಿಕರ ಮಾತುಗಳು ಇವರನ್ನು ಮತ್ತಷ್ಟು ಉಗ್ರತೆಗೆ ಮುಟ್ಟಿಸಿದುವು. ಮತ್ತಷ್ಟು ಕ್ರೌರ್ಯದಿಂದಲೇ ಯುದ್ಧಮಾಡಿ ಮಡಿದರು.

ಇಂದು ಟಪಾಲು ಬಂಡಿಯ ಜೋಸೆಫ್ ಅರುಣೋದಯದ ಸ್ಫೂರ್ತಿಯಲ್ಲಿ ಶಿಳ್ಳು ಹಾಕುತ್ತ ಆನಂದಪರವಶತೆಯಿಂದ ತನ್ನ ಬಂಡಿ ಹೊಡೆದು ಮುಂದುವರಿಯುವಾಗ, ಶಾಂತವಾಗಿಯೂ ಸುಂದರವಾಗಿಯೂ ತೋರುವ ಮೊಂಟ್-ಸೇಂಟ್-ಜೀನ್ ಆ ರಾತ್ರಿ ರಕ್ತದಿಂದ ತೊಯ್ದು, ಮಳೆಯಿಂದ ಒದ್ದೆಯಾಗಿ, ಬಲುಭೀಕರವಾಗಿ ತೋರುತ್ತಿತ್ತು.

೧೫. ವೆಲ್ಲಿಂಗ್‌ಟನ್-ನೆಪೋಲಿಯನ್ ತುಲನೆ

ವಾಟರ್ಲೂ ಯುದ್ಧವೇ ಒಂದು ಒಗಟು. ಸೋತವರಿಗೆ ಅದು ಎಷ್ಟು ಅರ್ಥವಾಗದ ವಿಷಯ

ವಾಗಿತ್ತೊ, ಗೆದ್ದವರಿಗೂ ಅಷ್ಟೇ ಅರ್ಥವಾಗದ್ದಾಗಿತ್ತು. ನೆಪೋಲಿಯನ್ ಅದರಲ್ಲಿ ಕಂಡದ್ದು ಸೈನ್ಯ ಗಾಬರಿಗೊಂಡು ಚದರಿದ್ದನ್ನು ಮಾತ್ರ. ಬ್ಲುಚರನಿಗೆ ಅದು ತೋರಿದ್ದು ಉರಿಯುತ್ತಿದ್ದ ಒಂದು ಮಹಾ ಬೆಂಕಿಯಂತೆ ಮಾತ್ರ. ವೆಲ್ಲಿಂಗ್‌ಟನ್ನನಿಗೆ ಅದರ ಅರ್ಥವಾಗದೆ ವಿಸ್ಮಯ ಗೊಂಡಿದ್ದ. ಈ ಯುದ್ಧದ ಕುರಿತಾದ ಖಾಸಗೀ ವರದಿಗಳನ್ನು ನೋಡಿದರೂ ಅಧಿಕಾರೀ ವರದಿಗಳನ್ನು ನೋಡಿದರೂ ಎಲ್ಲದರಲ್ಲೂ ತೋರುವುದು ಅಸ್ಪಷ್ಟತೆ—ಗೊಂದಲ ಮಾತ್ರ.

ಏನಿದ್ದರೂ ವಾಟರ್ಲೂ ಯುದ್ಧದಲ್ಲಿ ಸೈನ್ಯದ ಸಾರ್ವಭೌಮತ್ವ ನಾಶವಾಯಿತು. ಪ್ರಧಾನ ವಾದುದು ಸಮಾಜವೇ ಹೊರತು ಸೈನ್ಯವಲ್ಲವೆಂಬ ಅಂತಿಮ ತೀರ್ಪು ವಾಟರ್ಲೂನಲ್ಲಾಯಿತು.

ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ ಮೊದಲಾದ ಜನಾಂಗಗಳು ಸೈನ್ಯದ ಕೈಗೊಂಬೆಗಳಲ್ಲ ಎಂಬುದನ್ನು ಇಂದು ತಿಳಿಯಲು ಸಂತೋಷವಾಗುತ್ತದೆ. ಜೀವನಸೌಕರ್ಯಗಳನ್ನು ಖಡ್ಗ ಒದಗಿಸಲಾರದೆಂಬುದು ಶಾಶ್ವತ ಅನುಭವ. ಬ್ಲುಚರನ ಬದಲು ಜರ್ಮನಿಯಲ್ಲಿ ಸಾಹಿತಿ ಶಿಲ್ಲರನೂ ವೆಲ್ಲಿಂಗ್‌ಟನ್ನನ ಬದಲು ಇಂಗ್ಲೆಂಡಿನಲ್ಲಿ ಕವಿ ಬೈರನನೂ ಇದ್ದಾರೆಂಬುದು ಹೆಮ್ಮೆ ಪಡಬೇಕಾದ ವಿಷಯ. ವಾಟರ್ಲೂ ಯುದ್ಧ ಬರೇ ಒಂದು ಸೋಡ್ತಿ. ಇದರಲ್ಲಿ ಗೆದ್ದದ್ದು ಯೂರೊಪ್, ಇದರ ಖರ್ಚನ್ನು ಭರಿಸಿದ್ದು ಫ್ರಾನ್ಸ್.

ಯುದ್ಧದಲ್ಲಿ ಗೆದ್ದದ್ದು ವೆಲ್ಲಿಂಗ್‌ಟನ್ ಅಲ್ಲ—ಇಂಗ್ಲಿಷ್ ಜನ; ಸೋತದ್ದು ಫ್ರೆಂಚರಲ್ಲ—ನೆಪೋಲಿಯನ್. ಕೆಳತರಗತಿಯ ಕ್ಯಾಪ್ಟನ್ನೊಬ್ಬ ಮೇಲ್ತರಗತಿಯ ಯುದ್ಧದಲ್ಲಿ ಗೆದ್ದ ಪ್ರಸಂಗವೇ ವಾಟರ್ಲೂ ಯುದ್ಧ. ಯಾರೇ ಕ್ಯಾಪ್ಟನ್ ಆಗಿದ್ದರೂ ಗೆಲ್ಲಬೇಕಾಗಿದ್ದಂಥ ವೀರರು ಇಂಗ್ಲಿಷರು. ಫ್ರೆಂಚರಲ್ಲಿ ಪ್ರಧಾನವಾಗಿದ್ದುದು ಸೈನ್ಯವಲ್ಲ—ಅವರ ಮುಖಂಡ ನೆಪೋಲಿಯನ್. ಒಬ್ಬ ನೆಪೋಲಿಯನ್ನನೇ ಫ್ರೆಂಚರ ಏಕೈಕಶಕ್ತಿ. ಅವನೇ ಸೈನ್ಯ. ಅವನೇ ಸ್ಫೂರ್ತಿ. ಅವನೊಬ್ಬನ ಶಕ್ತಿ ಗುಡ್ಡ, ಬೆಟ್ಟ, ನದಿ, ಮರಗಳ ಮೇಲೂ, ಅರ್ಥಾತ್, ಖುದ್ದು ಪ್ರಕೃತಿಯ ಮೇಲೆಯೇ ವ್ಯಾಪಿಸಿ, ಅವೆಲ್ಲವನ್ನೂ ತನಗೆ ಇಷ್ಟಬಂದಂತೆ ನಡೆಸಿಕೊಳ್ಳುತ್ತಿತ್ತು. ಯುದ್ಧಕೌಶಲದಲ್ಲಿ ವೆಲ್ಲಿಂಗ್‌ಟನ್ ಯಂತ್ರದ ಒಂದು ಕೀಲಿ ಸ್ಥಾನದವ. ನೆಪೋಲಿಯನ್ ಆದರೋ ಯಂತ್ರ, ಯಂತ್ರಬುದ್ಧಿ, ಯಂತ್ರಶಕ್ತಿ, ಅನುಭವ ಮತ್ತು ಸರ್ವಸ್ವ ಆಗಿದ್ದ. ಇಂಗ್ಲಿಷ್ ಸೈನ್ಯದಿಂದ ವೆಲ್ಲಿಂಗ್‌ಟನ್ನನನ್ನು ತೆಗೆದರೂ ಆ ಸೈನ್ಯ ಸಮರ್ಥವಾಗಿ ಉಳಿಯಬಲ್ಲುದು. ಫ್ರೆಂಚ್‌ಸೈನ್ಯದ ಜೀವವೇ, ತಿರುಳೇ, ಸಮಸ್ತ ಶಕ್ತಿಗಳ ಭಂಡಾರವೇ ನೆಪೋಲಿಯನ್. ಶಕ್ತಿಯೆಲ್ಲ ಒಬ್ಬನಲ್ಲೇ ಕ್ರೋಡೀಕರಿಸಿದ್ದು ಅದನ್ನು ಪ್ರಯೋಗಿಸಬಲ್ಲಂಥ ಚೈತನ್ಯ ಪುರುಷನೇ ನೆಪೋಲಿಯನ್. ಇಂಥ ಶಕ್ತಿಕೇಂದ್ರೀಕೃತ ವಾಗಿರುವಲ್ಲಿ ವಿದ್ಯುತ್ ಪ್ರವಾಹವುಂಟಾಗಬೇಕು, ಪ್ರಭೆಯುಂಟಾಗಬೇಕು. ನೆಪೋಲಿಯನ್ ವಿದ್ಯುತ್ತೂ ಪ್ರಭೆಯೂ ಆಗಿದ್ದ.

ಆದರೆ ಜಗತ್ತಿನ ಕಲ್ಯಾಣಕ್ಕೆ ಶಕ್ತಿಗಳ ವಿಕೇಂದ್ರೀಕರಣ ಅಗತ್ಯ. ನೆಪೋಲಿಯನ್ನನನ್ನು ಗೆದ್ದದ್ದು ವೆಲ್ಲಿಂಗ್‌ಟನ್ನನಲ್ಲ—ಅವನೊಬ್ಬ ಕಾರಣ—ಗೆದ್ದುದು ಕಾಲ, ರಾಜಕೀಯ ಸಂದರ್ಭ, ಪ್ರಪಂಚದ ಇತಿಹಾಸಕ್ಕಿರುವ ಒಂದು ವಿಶಿಷ್ಟಗುರಿ—ಇವು ಮಾತ್ರ. ಪ್ರಪಂಚಕ್ಕೇ ಎದುರುನಿಂತಿದ್ದ ನೆಪೋಲಿಯನ್ ವಿಧಿಯ ತೀರ್ಮಾನಕ್ಕೆ ತಲೆಬಾಗುವುದು ಅನಿವಾರ್ಯವಾಯಿತು.

೧೬. ವಾಟರ್ಲೂ ಯುದ್ಧವನ್ನು ಪ್ರಶಂಸಿಸಬೇಕೇ?

ಫ್ರೆಂಚರು ವಾಟರ್ಲೂನಲ್ಲಿ ಸೋತದ್ದಕ್ಕೆ ಸಂತೋಷಿಸುವ ಫ್ರೆಂಚರಿದ್ದಾರೆಂದು ನಮಗೆ

ಗೊತ್ತಿದೆ. ನಾವು ಮಾತ್ರ ಅದಕ್ಕೆ ತಯಾರಿಲ್ಲ. ಈ ಯುದ್ಧ ನಮ್ಮ ಸ್ವಾತಂತ್ರ್ಯ ಸಾಧನೆಯ ಪಥದಲ್ಲಿ ಬಂದ ಒಂದು ವಿಘ್ನ. ರಾಜಸತ್ತೆಯ ನಾಶಕಾರಿಯಾಗಿದ್ದ ಪ್ರಜಾಸತ್ತಾತ್ಮಕದ ಕ್ರಾಂತಿ ಹಿಂದಿನ ಶತಮಾನದಲ್ಲಿ ಉದ್ಭವಿಸಿತ್ತು. ಈ ಕ್ರಾಂತಿಗೆ ದೊರೆಯಬೇಕಾಗಿದ್ದ ಫಲವನ್ನು ಈ ಯುದ್ಧ ತಡೆಹಿಡಿದಿದೆ. ಈ ಸೋಲಿನಲ್ಲಿ ರಾಜಮುಕುಟಗಳ ಉತ್ಥಾನವೂ ಪ್ರಜಾಸ್ವಾತಂತ್ರ್ಯದ ಸ್ತಬ್ಧತೆಯೂ ಪ್ರಕಟವಾಗಿವೆ. 'ಸ್ತಬ್ಧತೆ' ಮಾತ್ರವೆಂಬುದನ್ನು ನಾವು ತಿಳಿದಿರಬೇಕು. ಜನ ಎಂದೂ ಸೋಲಲರು. ಆದ್ದರಿಂದಲೇ ನಾವನ್ನುವುದು ಈ ಸೋಲು ಫ್ರೆಂಚರದಲ್ಲ, ಇದು ನೆಪೋಲಿಯನ್ನನದು ಮಾತ್ರ.

ರಷ್ಯ, ಆಸ್ಟ್ರಿಯ, ಜರ್ಮನಿ, ಫ್ರಾನ್ಸಿನ ಪ್ರಜಾಸತ್ತಾತ್ಮಕ ಚಳವಳಿಗಳನ್ನು ತಡೆಹಿಡಿದ ವಾಟರ್ಲೂ ಯುದ್ಧವನ್ನು ನಾವು ಪ್ರಶಂಸಿಸಬೇಕೇ?

೧೭. ಕಾಲಾಯ ತಸ್ಮೈ ನಮಃ

ಹದಿನೆಂಟನೆಯ ಲೂಯಿ ಅರಸನಾಗಿ ಫ್ರಾನ್ಸನ್ನು ಪ್ರವೇಶಿಸಿದ. ಹಿಂದಿನ ರಾಜವೈಭವಗಳೆಲ್ಲವೂ ಜುಲೈ ಎರಲ್ಲಿ ಪುನರುತ್ಥಾನವಾದುವು. ಧರ್ಮಸಂಸ್ಥೆಯೂ ರಾಜಸಂಸ್ಥೆಯೂ ತಮ್ಮ ಪೂರ್ವ ಬಾಂಧವ್ಯವನ್ನು ಹೊಸ ಹುರುಪಿನಿಂದ ವೃದ್ಧಿಸಿಕೊಂಡುವು. ದೇಶಭ್ರಷ್ಟರಾಗಿದ್ದ ರಾಜರುಗಳು ಸಿಂಹಾಸನ ಏರುತ್ತಿದ್ದಾಗಲೇ ಯೂರೋಪಿನ ಏಕೈಕ ಪ್ರಭುವಾಗಿದ್ದ ನೆಪೋಲಿಯನ್ ಸೆರೆಮನೆ ಸೇರಿದ. ಫ್ರೆಂಚ್‌ಜನಾಂಗದ ಇಂಥ ದುಃಸ್ಥಿತಿಗೆ ಹಳ್ಳಿಯ ಒಬ್ಬ ಕುರಿಹೈದ ಕಾರಣನೆಂಬುದನ್ನು ಅನೇಕರು ಕೇಳಿರಲಾರರು. ಆ ಕುರಿಹೈದ ಗ್ರೌಚಿಯ ಸೈನ್ಯಕ್ಕೆ "ಈ ಕಡೆ ಅಲ್ಲ—ಆ ಕಡೆ," ಎಂದು ದಾರಿತೋರಿಸಿದ ನಾಲ್ಕು ಮಾತುಗಳೇ ಈ ಸೋಲಿಗೆ ಕಾರಣ!

ಲೂಯಿ ದೊರೆ ಪ್ರಜೆಗಳ ಹಕ್ಕೆಂದು ಹೊರಡಿಸಿದ್ದ ನಿರೂಪದ ಒಳಗೆ ರಾಜರ ಮತ್ತು ರಾಜಪಕ್ಷದವರ ಪಾರಂಪರ್ಯ ಹಕ್ಕು ಅಡಗಿ ಕುಳಿತಿದೆ. ಆ ಮೊದಲು ಅಸ್ಥಿರವಾಗಿದ್ದ ಹಕ್ಕುಗಳೆಲ್ಲವನ್ನೂ ಈಗ ದೈವದತ್ತವೆಂದು ಸ್ಥಿರಗೊಳಿಸಲಾಗಿದೆ. ತಾನು ಸತ್ತಿರುವೆನೆಂದು ಸರ್ಪ ತನ್ನ ಪೊರೆಯನ್ನು ತೋರಿಸಿ ಎದುರು ಬರಬಹುದಾದಂತೆ, ರಾಜಸತ್ತೆ ಈ ನಿರೂಪವನ್ನು ತೋರಿಸುತ್ತ ಹೊಸಹುರುಪಿನಿಂದ ಬಲಗೊಂಡಿತು. ನೆಪೋಲಿಯನ್ ಸೆರೆಮನೆಯಲ್ಲಿ ನವೆದು ತನ್ನ ಅಂತ್ಯಕ್ಕೆ ಸಮೀಪಸ್ಥನಾಗುತ್ತಿದ್ದ ಹಾಗೆಯೇ ಯುದ್ಧದಲ್ಲಿ ಮಡಿದ ಅರುವತ್ತು ಸಾವಿರ ಸೈನಿಕರ ಶವಗಳೂ ಕೊಳೆತು ಮಣ್ಣಾಗತೊಡಗಿದ್ದುವು.

ಚಿಕ್ಕ ಗರಿಕೆಯ ಹುಲ್ಲಿನಿಂದ ಹುಲ್ಲಿಗೆ ಹಾರುವ ಹಾತೆಯನ್ನೂ ಗಗನಗಳನ್ನೇ ಭೇದಿಸುವ ಗೋಪುರಗಳ ಶಿಖರದಿಂದ ಶಿಖರಕ್ಕೆ ಹಾರಾಡುವ ಹದ್ದನ್ನೂ ಸಮಭಾವದಿಂದ ನೋಡಿ ನಡೆಸುವ ಪ್ರಪಂಚದ ಏಕೈಕ ವ್ಯವಸ್ಥಾಪಕ "ಕಾಲ" ಯೂರೋಪಿನ ಭವಿತವ್ಯವನ್ನು ತನ್ನಿಚ್ಛೆಯಂತೆ ನಿರ್ಮಿಸುತ್ತಿದ್ದಾನೆ. ಆ ದಿವ್ಯಮಹಿಮನ ಬೆಳಕಿನಲ್ಲಿ ಮುನ್ನಡೆಯುವ ಯೂರೋಪಿಗೆ ಈ ವಾಟರ್ಲೂವಿನ ತತ್ಕಾಲದ ಅಂಧಕಾರ ಎಷ್ಟರದು! ಕಾಲಾಯ ತಸ್ಮೈ ನಮಃ.

೧೮. ಇರುಳಲ್ಲಿ ವಾಟರ್ಲೂ

ನಮ್ಮ ಕಥೆಗಾಗಿ ಪುನಃ ರಣರಂಗ ಪ್ರವೇಶಿಸಬೇಕಾಗಿದೆ. ವಾಟರ್ಲೂ ಎಂಬುದೊಂದು ಚಿಕ್ಕ ಹಳ್ಳಿ. ಆ ಹಳ್ಳಿಗೂ ಯುದ್ಧ ನಡೆದ ಮೊಂಟ್-ಸೇಂಟ್-ಜೀನಿಗೂ ನಡುವೆ ಒಂದೂವರೆ ಮೈಲು

ಅಂತರವಿದೆ. ವಾಟರ್ಲೂನಲ್ಲಿ ಯಾವ ಯುದ್ಧ ನಡೆಯದಿದ್ದರೂ ಚರಿತ್ರೆಯಲ್ಲಿ ಈ ಯುದ್ಧವನ್ನು ವಾಟರ್ಲೂ ಯುದ್ಧವೆಂದು ಕರೆಯುವುದೇ ಒಂದು ಆಶ್ಚರ್ಯ.

ವೆಲ್ಲಿಂಗ್‌ಟನ್ ವಾಟರ್ಲೂನಲ್ಲಿ ಕುಳಿತು ಲಾರ್ಡ್ ಬಾತ್‌ಹರ್ಸ್ಟ್‌ಗೆ ಯುದ್ಧವರದಿ ಬರೆಯುತ್ತಿದ್ದ. ಮೊಂಟ್-ಸೇಂಟ್-ಜೀನಿನಲ್ಲೂ ಒಹೇನ್ ಕಣಿವೆಯಲ್ಲೂ ರಕ್ತದ ಹೊಳೆ ಹರಿಯುತ್ತಿತ್ತು. ಚಂದ್ರ ಪ್ರಶಾಂತನಾಗಿ ಪೃಥ್ವಿಯ ಈ ಅನಾಹುತವನ್ನು ನೋಡುತ್ತಿದ್ದ. ಈ ಸಮಯದಲ್ಲೇ ಯುದ್ಧರಂಗದಲ್ಲಿ ಒಂದು ವಿಚಿತ್ರ ಘಟಿಸುತ್ತಿತ್ತು.

ಯುದ್ಧಗಳ ವೀರಗಾಂಭೀರ್ಯದ ಹಿಂದೆಯೇ ಹೀನ ಪಿಶುನತ್ವವೂ ನುಸಿಳಿರುವುದು ಬಲು ಹಿಂದಿನಿಂದಲೂ ನಡೆದುಬಂದಿರುವ ಸಂಗತಿ. ಸಮವಸ್ತ್ರಕವಚಗಳ ಸಹಿತ ಮಡಿದುಬಿದ್ದವರು ಒಂದು ಇರುಳು ಕಳೆಯುವುದರೊಳಗೆ ನಗ್ನದೇಹಿಗಳಾಗಿಬಿಡುವುದೇ ಈ ಪಿಶುನತ್ವ. ಕೀರ್ತಿಯ ಕಿಸೆಯಲ್ಲಿ ಅಪಕೀರ್ತಿ ಅಡಗಿ ತುಂಬಿದ್ದು ಈ ಕಾರ್ಯವೆಸಗುತ್ತದೆ.

ಪ್ರತಿ ಸೈನ್ಯದ ಹಿಂದೆ, ಸೈನಿಕರ ಉಡುಪಿನಲ್ಲಿ, ಸೈನಿಕರಂತೆ ಅಥವಾ, ಅವರ ನೂರಾರು ವಿಧದ ಸಹಾಯಕರಂತೆ, ಸೈನ್ಯವನ್ನು ಹಿಂಬಾಲಿಸಿ ಬರುತ್ತಿದ್ದ ಪಿಶುನರದ್ದೇ ಒಂದು ಸೈನ್ಯವಿರುತ್ತಿತ್ತು. ಈ ಜನ ಹೊರಗೆ ಕಾಣುವಂತೆ ಯೋಧರು; ಅಂತರಂಗದಲ್ಲಿ ಹೇಡಿಗಳು—ಕೇವಲ ಕಿಸೆಗಳ್ಳರು. ಇಂಗ್ಲಿಷರಿಗೆ ಇಂಗ್ಲಿಷರಂತೆಯೂ ಫ್ರೆಂಚರಿಗೆ ಫ್ರೆಂಚರಂತೆಯೂ ಕಾಣಿಸಿಕೊಂಡು, ಮಾತಾಡಿ ಅನುಭವ ಕೊಡಬಲ್ಲವರು. ಇವರು ಧೈರ್ಯಸ್ಥರೆದುರು ದೀನರು; ಹೇಡಿಗಳೆದುರು ಹಗಲು ದರೋಡೆಕಾರರು. ಇವರೆಲ್ಲರೂ ಹೆಚ್ಚಾಗಿ ನಿಶಾಚರರು. ಈ ಯುದ್ಧದಲ್ಲೂ ಇಂಥ ನರಹದ್ದುಗಳು ಬೇಕಾದಷ್ಟಿದ್ದರು. ಆದರೆ, ವೆಲ್ಲಿಂಗ್‌ಟನ್ ಅಂಥವರು ಸಿಕ್ಕಿದರೆ ಕೂಡಲೇ ಗುಂಡು ಹೊಡೆದು ಕೊಲ್ಲಬೇಕೆಂದು ಕಟ್ಟಾಜ್ಞೆಯನ್ನು ತನ್ನ ಸೈನಿಕರಿಗಿತ್ತಿದ್ದ. ಅಂಥ ಆಜ್ಞೆಗಳನ್ನು ಎದುರಿಸಿಯೇ ಜೂನ್ ತಾರೀಕಿನ ೧೮-೧೯ರ ರಾತ್ರಿ, ಮೃತರ ಸ್ವಾಧೀನವಿರಬಹುದಾದ ಒಡವೆವಸ್ತುಗಳನ್ನು ಅಪಹರಿಸಲೋಸ್ಕರ, ಈ ವಿಧದ ಲೂಟಿಗಾರರು ತಮ್ಮ ಗುಪ್ತದಳವನ್ನು ರಣರಂಗಕ್ಕೆ ಇಳಿಸಿದ್ದರು.

ಒಹೇನ್ ಕಣಿವೆ ಆಳ ಕಡಿಮೆಯಾಗಿರುವಲ್ಲಿ ಹೆಣಗಳ ಒತ್ತಡವೂ ಕಡಿಮೆಯಿರಬೇಕೆಂದೇ ಗ್ರಹಿಸಿ, ಒಬ್ಬ ಲೂಟಿಗಾರ ಈ ಕಣಿವೆಯ ಒಂದು ತುದಿಯಲ್ಲಿ ಮೆಲ್ಲಮೆಲ್ಲಗೆ ಹೆಣಗಳನ್ನು ಪರೀಕ್ಷಿಸುತ್ತ ಸಿಕ್ಕಿದುದನ್ನು ದೋಚಿಕೊಳ್ಳುತ್ತ, ಮುಂದೆ ಮುಂದೆ ಸಾಗಿಬರುತ್ತಿದ್ದ. ಅವನನ್ನು ಪರೀಕ್ಷಿಸಿ ನೋಡಿಬರೆ ಅವನು ಇಂಗ್ಲಿಷರವನಂತೆಯೂ ಫ್ರೆಂಚರವನಂತೆಯೂ ಜರ್ಮನರವನಂತೆಯೂ ತೋರುತ್ತಲೂ ಇವರು ಯಾರೂ ಅಲ್ಲದಂತೆಯೂ ಇದ್ದ. ಅವನ ಕೈಯಲ್ಲಿ ಆಯುಧವಿರಲಿಲ್ಲ; ಚೀಲವಿರಲಿಲ್ಲ. ಸೈನ್ಯಕ್ಕೆ ಸಂಬಂಧಪಟ್ಟವನಂತೆ ದುಸ್ತುಮಾಡಿದ್ದ. ಈತ ಒಂಟಿಯಾಗಿ, ಅನುಭವಸ್ಥನಾಗಿ, ಒಮ್ಮೆ ಅಂಜಿದರೂ ಬುದ್ಧಿಸೂಕ್ಷ್ಮತೆಯಿಂದ ಮರುಕ್ಷಣ ಧೈರ್ಯ ತಳೆಯುತ್ತ ತನ್ನ ಕಾರ್ಯವನ್ನು ಬಲು ನುರಿತವನಂತೆ ನಡೆಸುತ್ತಿದ್ದ. ನಿಲುವಂಗಿಯ ಒಳಗಡೆ ಗುಟ್ಟಾದ ಚೀಲಗಳೂ, ಕಿಸೆಗಳೂ ಇದ್ದಿರಬೇಕೆಂದು ತೋರುತ್ತದೆ. ಹೆಣಗಳಿಂದ ಸಂಗ್ರಹಿಸಿದ ವಸ್ತುಗಳನ್ನು ಇವನು ಆಗಿಂದಾಗ್ಗೆ ಅಂಗಿಯ ಒಳಗಡೆ ಇಟ್ಟು ಕೈಬೀಸಿಕೊಂಡು ಮುಂದುವರಿಯುತ್ತಿದ್ದ. ಇವನ ಪರಿಚಯ ಹಗಲಿಗೆ ಇರುವುದಕ್ಕಿಂತಲೂ ಹೆಚ್ಚು ಇರುಳಿಗೇ ಇರಬೇಕೆಂದು ತೋರುತ್ತದೆ—ಈ ರಾತ್ರಿ ಇವನು ಬಲು ಸ್ವಾಭಾವಿಕವಾಗಿ ತನ್ನ ಕೆಲಸ ಮಾಡುತ್ತಿದ್ದ. ಇವನನ್ನೇ ದೃಷ್ಟಿಯಿಂದ ಹಿಂಬಾಲಿಸುತ್ತ ಗಂಡುಮುಖದ ಕ್ರೂರ ಹೆಂಗುಸೊಬ್ಬಳು ಅನತಿ ದೂರದಲ್ಲಿ ಬಂಡಿಯೊಳಗೆ ಕುಳಿತುಕೊಂಡಿದ್ದಳು.

ಈ ಮನುಷ್ಯ ಹೆಣಗಳನ್ನು ನೋಡುತ್ತಿದ್ದ ಹಾಗೆಯೇ ಅವನಿಂದ ಸ್ವಲ್ಪ ದೂರದಲ್ಲಿ ಚಂದ್ರ ಪ್ರಕಾಶದಲ್ಲಿ ಏನೋ ಹೊಳೆಯುತ್ತಿತ್ತು. ಬೆಕ್ಕಿಗಿಂತಲೂ ಹೆಚ್ಚು ಕಣ್ಣು ಚುರುಕಿದ್ದ ಈತ ಆ ಹೊಳೆಯುತ್ತಿದ್ದ ವಸ್ತುವಿದ್ದಲ್ಲಿಗೆ ಹೋಗಿ ನೋಡಿ, ಹೆಣಗಳ ಜೊತೆ ಬಿದ್ದಿದ್ದ ಒಬ್ಬ ಮೇಲ್ತರಗತಿಯ ದಳಪತಿಯ ಶರೀರವನ್ನು ಎಳೆದು ತಂದ. ದಳಪತಿಯ ಕೈಯ್ಯಲ್ಲಿ ಹೊಳೆಯುತ್ತಿದ್ದ ವಜ್ರಕಟ್ಟಿದ್ದ ಚಿನ್ನದ ಉಂಗುರ ತೆಗೆದು, ಅನಂತರ ಅವನ ಕಿಸೆಯೊಳಗಿದ್ದ ಒಂದು ಸುಂದರ ಗಡಿಯಾರವನ್ನೂ ಲಪಟಾಯಿಸಿ ತನ್ನ ಕಿಸೆಯೊಳಗೆ ಇಟ್ಟುಕೊಂಡ. ಪುನಃ ತನಿಖೆ ಮಾಡಿ ದಳಪತಿಯ ಒಳಕೋಟಿನಲ್ಲಿದ್ದ ಹಣದ ಚೀಲವನ್ನು ಅಪಹರಿಸಿದ. ದಳಪತಿಯ ಅಂಗಿಯಲ್ಲಿ ಹೊಲಿದು ಭದ್ರಪಡಿಸಿದ್ದ ಚಿನ್ನದ ಪದಕ ಮತ್ತು ಇತರ ಅಲಂಕಾರಗಳನ್ನೂ ಎಳೆದು ಕಿತ್ತ.

ಹೆಣವಾದರೂ ಎದ್ದು ಆಕ್ಷೇಪಿಸಬೇಕಾಗಿದ್ದ ಈ ಕಾರ್ಯಗಳಿಂದ, ಸಾಯದೆ ಉಳಿದಿದ್ದ, ದಳಪತಿಗೆ ಸಂಪೂರ್ಣ ಸ್ಮೃತಿಬಂತು. ಅಲ್ಲದೆ, ರಾತ್ರಿಯ ತಂಗಾಳಿಯೂ ಅವನಿಗೆ ಸ್ಮೃತಿಬರಲು ಸಹಾಯವಿತ್ತಿತ್ತು. ಸ್ಮೃತಿಬಂದ ಕೂಡಲೇ ಅವನು ಹತ್ತಿರ ನಿಂತಿದ್ದ ಕಳ್ಳನನ್ನು ನೋಡಿ, "ಯಾರಪ್ಪಾ ನೀನು, ನನ್ನ ಸಹಾಯಕ್ಕೆ ಬಂದ ಪುಣ್ಯಾತ್ಮ!" ಅಂದ.

ಕಳ್ಳ ಮಾತಾಡಲಿಲ್ಲ.

"ಯಾರು ಗೆದ್ದರು?" ಎಂದು ಕೇಳಿದ ಆ ದಳಪತಿ.

"ಇಂಗ್ಲಿಷರು," ಎಂದು ಉತ್ತರವಿತ್ತ ಕಳ್ಳ.

ದಳಪತಿ ಸ್ವಲ್ಪಸ್ವಲ್ಪವಾಗಿ ಚೇತರಿಸಿಕೊಳ್ಳುತ್ತ, "ನನ್ನ ಜೇಬಿನಲ್ಲಿ ಒಂದು ಗಡಿಯಾರ ಮತ್ತು ಹಣದ ಚೀಲವಿರಬೇಕು. ಅವನ್ನು ತೆಗೆದುಕೋ," ಅಂದ.

ಕಳ್ಳ ದಳಪತಿಯ ಜೇಬುಗಳನ್ನು ಶೋಧಿಸಿ ಅಲ್ಲಿ ಏನೂ ಇಲ್ಲವೆಂದು ತಿಳಿಸಿದ.

"ಯಾರೋ ಕದ್ದಿರಬೇಕು," ಎಂದು ದಳಪತಿ ಹೇಳುತ್ತ, "ನೀನು ನನ್ನ ಜೀವವನ್ನು ಉಳಿಸಿದೆ. ನಿನ್ನ ಹೆಸರೇನು? ನಿನ್ನ ವೃತ್ತಿಯೇನು?" ಎಂದು ವಿಚಾರಿಸಿದ.

"ನನ್ನ ಹೆಸರು ತೆನಾರ್ಡಿಯರ್. ನಾನೊಬ್ಬ ಸಾರ್ಜೆಂಟ್," ಅಂದ ಕಳ್ಳ.

ಈ ಸಮಯದಲ್ಲಿ ಗಸ್ತಿನ ಸೈನಿಕನೊಬ್ಬನು ದೂರದಲ್ಲಿ ಬರುತ್ತಿರುವುದನ್ನು ತೆನಾರ್ಡಿಯರ್ ಕಂಡು, "ನಾನು ಕೂಡಲೇ ಹೋಗಬೇಕಾಗಿದೆ, ನಿಮ್ಮ ದಾರಿಯನ್ನು ನೀವು ನೋಡಿಕೊಳ್ಳಿ" ಎಂದು ಹೇಳುತ್ತ ಹೊರಡಲುದ್ಯುಕ್ತನಾದ.

"ನಿನ್ನನ್ನು ನಾನೆಂದೂ ಮರೆಯೆ. ನನ್ನನ್ನು ನೀನು ನೆನಪಿನಲ್ಲಿಟ್ಟುಕೊಂಡಿರು. ನನ್ನ ಹೆಸರು —ಪೋಂಟ್‌ಮರ್ಸಿ," ಎಂದು ದಳಪತಿ ಹೇಳಿದ. ತೆನಾರ್ಡಿಯರ್ ಆ ಕೂಡಲೇ ಅಲ್ಲಿಂದ ಓಡಿದ.

ಎರಡನೆಯ ಸಂಪುಟ

೧. ಸಂಖ್ಯೆ ೨೪೬೦೧ ಈಗ ೯೪೩೦

ಜೀನ್‌ವಾಲ್‌ಜೀನನನ್ನು ಪುನಃ ಸೆರೆಹಿಡಿದರು. ಈ ಕುರಿತಾದ ದುಃಖದ ವಿವರಗಳನ್ನು ನಾವೇ ಬರೆದು ತಿಳಿಸುವುದಕ್ಕಿಂತ ಜುಲೈ ೨೫, ೧೮೨೩ರ ದೈನಿಕ ಪತ್ರಿಕೆಗಳ ಪ್ರಕಟಣೆಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಕೊಡುವೆವು. ಪ್ರಕಟಣೆಯ ಸಾರಾಂಶ ಹೀಗಿತ್ತು : "ಸಾರ್ವಜನಿಕ ಗಮನವನ್ನು ಸೆಳೆಯುವಂಥ ಪ್ರಸಂಗವೊಂದು ಎಂ— ಪಟ್ಟಣದಲ್ಲಿ ನಡೆದಿದೆ. ೧೮೯೬ರಲ್ಲಿ ದೀರ್ಘಕಾಲದ ಕೈದಿಯಾಗಿ ಇಡಲ್ಪಟ್ಟಿದ್ದ ಜೀನ್‌ವಾಲ್‌ಜೀನ್ ಎಂಬಾತ ವಾರ್ ಕೋರ್ಟಿನಲ್ಲಿ ಒಂದು ತಕ್ಷೀರಿ

ನಲ್ಲಿ ಸಿಕ್ಕಿಬಿದ್ದು ವಿಚಾರಣೆಗೆ ಒಳಗಾದ. ಈ ದ್ರೋಹಿ ತನ್ನ ಬುದ್ಧಿಶಕ್ತಿಯಿಂದ ಬಳೆಕೈಗಾರಿಕೆಯನ್ನು ಎಂ— ಪಟ್ಟಣದಲ್ಲಿ ಸ್ಥಾಪಿಸಿ ಹೇರಳ ಹಣಸಂಪಾದಿಸಿದ. ಇಷ್ಟೂ ಅಲ್ಲದೆ ತನ್ನ ಗುರುತು ಮರೆಸಿಕೊಂಡು ಸರಕಾರವನ್ನೇ ವಂಚಿಸಿ ಎಂ— ಪಟ್ಟಣದ ಮೇಯರನೂ ಆಗಿಬಿಟ್ಟ. ಆದರೆ ಪೊಲೀಸರ ಮೆಹನತ್ತಿನಿಂದ ಇವನ ಸಂಚು ಹೊರಬಿದ್ದು, ಈತ ದಸ್ತಗಿರಿ ಮಾಡಲ್ಪಟ್ಟ. ಈತ ಇಟ್ಟುಕೊಂಡಿದ್ದ ಸೂಳೆಯೊಬ್ಬಳು ಇವನು ಕೈದಾದ ಗಾಬರಿಯಿಂದಲೇ ಮೃತಳಾದಳು. ದಸ್ತಗಿರಿಯಾಗಿದ್ದ ಜೀನ್‌ವಾಲ್‌ಜೀನ್ ತನ್ನ ಬಾಹುಶಕ್ತಿಯಿಂದಲೇ ತಪ್ಪಿಸಿಕೊಂಡು ಒಮ್ಮೆ ಓಡಿದರೂ ಚಾಣಾಕ್ಷರಾದ ಪೊಲೀಸರು ಮೊಂಟ್‌ಫರ್ಮಿಯಲಿನಲ್ಲಿ ಅವನು ಪ್ಯಾರಿಸಿನ ಬಂಡಿ ಏರುತ್ತಿದ್ದಾಗ ಪುನಃ ದಸ್ತಗಿರಿ ಮಾಡಿ, ವಿಚಾರಣೆಗೆ ಗುರಿಪಡಿಸಿದರು. ಈತ ಚಿಲ್ಲರೆ ವ್ಯಾಪಾರಿ ಬಾಲಕನೊಬ್ಬನಿಂದ ಹಗಲಲ್ಲೇ ಹೆದರಿಸಿ ಹಣಸುಲಿದಿರುತ್ತಾನೆಂದೂ ಕೋರ್ಟಿನಲ್ಲಿ ಇವನ ಕುರಿತಾಗಿ ಆಪಾದನೆಯಿತ್ತು. ನ್ಯಾಯಾಲಯ ಈ ಅಪರಾಧಿಗೆ ಮರಣದಂಡನೆಯನ್ನೇ ವಿಧಿಸಿತು. ಆದರೆ ದಯಾಳುಗಳಾದ ಮಹಾರಾಜರವರು ಎಂ— ಪಟ್ಟಣದಲ್ಲಿ ಈತನಿದ್ದಷ್ಟು ಕಾಲ ನಡೆಸಿದ್ದ ಸತ್ಕಾರ್ಯಗಳನ್ನು ಗಮನಕ್ಕೆ ತಂದುಕೊಂಡು ಇವನಿಗೆ ಆಜೀವ ಸಜೆಯನ್ನು ವಿಧಿಸುತ್ತ ಮರಣದಂಡನೆಯನ್ನು ರದ್ದುಗೊಳಿಸಿರುತ್ತಾರೆ. ಈತ ಲೆಫಿಟ್ಟೆಬ್ಯಾಂಕಿನಲ್ಲಿ ದಾಸ್ತಾನವಿಟ್ಟಿದ್ದ ಹೇರಳ ಹಣವನ್ನೆಲ್ಲ ತಾನೇ ಹಿಂದೆ ಪಡೆದಿದ್ದಾನೆ. ಆದರೆ, ಈ ಹಣದ ಪತ್ತೆ ಈ ವರೆಗೂ ಆಗಿರುವುದಿಲ್ಲ. ಹಣವನ್ನು ಅವನು ಹೂತಿಟ್ಟಿರಬೇಕೆಂದು ಊಹಿಸಲಾಗಿದೆ. ಈಗ ಅವನು ಟೌಲನ್ ಜೈಲಿನಲ್ಲಿದ್ದಾನೆ.''

ಜೀನ್‌ವಾಲ್‌ಜೀನನ ಕೈದಿ ಸಂಖ್ಯೆ ಈ ಸರ್ತಿ ೯೪೩೦ ಎಂದಾಯಿತು. ಮಾ. ಮೆಡಲೀನ್ ಕೈದಾದನಂತರ ಅವರ ಕಾರ್ಖಾನೆ ಕ್ರಮೇಣವಾಗಿ ಮುಚ್ಚಿಹೋಯಿತು. ಅದರ ಮುಖ್ಯಾಧಿಕಾರಿಗಳು ಸ್ವಂತ ಕೈಗಾರಿಕೆಗಳನ್ನು ಸ್ಥಾಪಿಸಿ, ತಂತಮ್ಮೊಳಗೆ ಪೈಪೋಟಿ ನಡೆಸಿ, ಮಾಲಿನ ಯೋಗ್ಯತೆಯನ್ನಿಳಿಸಿ, ಸದುದ್ದೇಶಗಳನ್ನು ಬಿಟ್ಟು, ಸ್ವಾರ್ಥಪರತೆ ಹೆಚ್ಚಿದ ಕಾರಣ ಎಂ— ಪಟ್ಟಣವೂ ಅದರ ಕೈಗಾರಿಕೆಯೂ ಹಾಳಾದುವು.

೨. ಹಣ ಕಾಯುವ ರಣ

ಭೂತಪ್ರೇತದ ಕುರಿತಾದ ವರ್ತಮಾನಗಳು ಎಲ್ಲ ಊರಿನಲ್ಲಿರುವುದಕ್ಕಿಂತ ಸ್ವಲ್ಪ ಹೆಚ್ಚು, ಆಧಾರಪೂರ್ವಕವಾಗಿಯೇ, ಮೊಂಟ್‌ಫರ್ಮಿಯಲಿನಲ್ಲಿದ್ದುವು. ಭೂತಪ್ರೇತಗಳಿಗೆ ಅಗತ್ಯವಾಗಿ ಬೇಕಾದ ವಿಶಾಲ ಮತ್ತು ದಟ್ಟ ಕಾಡು ಅಲ್ಲಿತ್ತು. ಈ ಕಾಡಿನಲ್ಲಿ ಭೂತ, ಪ್ರೇತ ಪಿಶಾಚಿಗಳೂ ಅಲ್ಲದೆ, ದೊಡ್ಡ ಜಾತಿಯ 'ರಣ' ಸಹ ಇತ್ತು. ಈ 'ರಣ'ವೂ ಇತರ ಎಲ್ಲ ರಣಗಳಂತೆ ತನ್ನ ಹಣವನ್ನು ಕಾಡಿನಲ್ಲಿ ಹೂತಿಟ್ಟಿರುವುದಾಗಿ ಅನೇಕರು ಮಾತಾಡಿ ಕೊಳ್ಳುತ್ತಿದ್ದರು. ಅಲ್ಲದೆ, ಈ ರಣವನ್ನು ಪ್ರತ್ಯಕ್ಷವಾಗಿ ಕಂಡವರೂ ಮೊಂಟ್‌ಫರ್ಮಿಯಲಿನಲ್ಲಿದ್ದಾರೆ.

ರಣದೊಂದಿಗೆ ತಿಳಿಯದೆ ಮಾತಾಡಿದವರು ಹಾಗೆ ಮಾತಾಡಿ ಒಂದು ತಿಂಗಳು ಪೂರ್ತಿಯಾಗುವುದರ ಒಳಗೆ ಸಾಯುತ್ತಿದ್ದರು. ರಣ ಹೂತಿಟ್ಟ ಹಣವನ್ನು ತಂದವರು ಹಣ ಮನೆಗೆ ಬಂದ ನಂತರ ಒಂದು ತಿಂಗಳು ಬದುಕಿದ್ದು ಸಾಯುತ್ತಿದ್ದರು. ರಣವನ್ನು ಬರೇ ನೋಡಿದವರು ಒಂದು ವರ್ಷದವರೆಗೂ ಬದುಕಿದ್ದು ಅನಂತರ ಹೇಗೂ ಸಾಯುತ್ತಿದ್ದರು. ಈ ಕಾರಣಗಳಿಂದ ಮೊಂಟ್‌ಫರ್ಮಿಯಲಿನಲ್ಲಿದ್ದವರೆಲ್ಲ ಸೂರ್ಯಾಸ್ತಮಾನ ಸಮೀಪವಾದಂತೆ ಕಾಡಿನ ಕಡೆಗೇ ನೋಡುತ್ತಿರಲಿಲ್ಲ.

ಮೊಂಟ್‌ಫರ್ಮಿಯಲಿನಲ್ಲಿ ಒಬ್ಬ ನಿವೃತ್ತ ಕೈದಿ ಒಬ್ಬಂಟಿಗನಾಗಿ ರಸ್ತೆಕೆಲಸ ಮಾಡಿಕೊಂಡು ಜೀವಿಸುತ್ತಿದ್ದ. ಅವನ ಸಂಪಾದನೆಯಲ್ಲಿ ಹೆಚ್ಚಿನ ಅಂಶವನ್ನು ಹೆಂಡಕುಡಿದೇ ಮುಗಿಸುತ್ತಿದ್ದ. ಅವನ ಹೆಸರು ಬೌಲಟ್ರೂಲ್. ಒಂದು ದಿನ ಈತ ತಾನು ಜೈಲಿನಲ್ಲಿದ್ದಾಗ ಗುರುತು ಮಾಡಿ ಕೊಂಡಿದ್ದ ಜೀನ್‌ವಾಲ್‌ಜೀನ್ ಎಂಬಾತ ಮೊಂಟ್‌ಫರ್ಮಿಯಲಿಯ ಕಾಡೊಳಗೆ ನುಗ್ಗುತ್ತಿದ್ದು ದನ್ನು ಕಂಡ. ಜೀನ್‌ವಾಲ್‌ಜೀನನ ಹೆಗಲಲ್ಲಿ ಒಂದು ಪೆಟ್ಟಿಗೆಯಿತ್ತು; ಕೈಯಲ್ಲೊಂದು ಹಾರೆ ಯಿತ್ತು. ಅವನನ್ನು ಅಡಗಿ ನೋಡುವುದೇ ಲಾಭಪ್ರದವೂ ಸುಖಕರವೂ ಎಂದು ಬೌಲಟ್ರೂಲ್ ಜೀನ್‌ವಾಲಜೀನನನ್ನು ಅಡಗಿ ಹಿಂಬಾಲಿಸಿದ. ಆದರೆ ಇವನು ಹೆಂಡಕುಡಿದಿದ್ದುದರಿಂದಲೂ ಜೀನ್‌ವಾಲ್‌ಜೀನ್ ಬಲುಚುರುಕಾಗಿದ್ದುದರಿಂದಲೂ ಅವನನ್ನು ಹೆಚ್ಚುದೂರ ಹಿಂಬಾಲಿಸಲಾಗ ಲಿಲ್ಲ. ಕೊನೆಗೆ ಬಹಳ ಹೊತ್ತು ಕಳೆದ ಮೇಲೆ ಜೀನ್‌ವಾಲ್‌ಜೀನ್ ಪೆಟ್ಟಿಗೆ ಹೊರತಾಗಿ ವಾಪಾಸು ಬಂದದ್ದನ್ನೂ ಬೌಲಟ್ರೂಲ್ ಕಂಡ.

ಮೊಂಟ್‌ಫರ್ಮಿಯಲ್ಲಿಯ ಶಾಲಾ ಉಪಾಧ್ಯಾಯರೂ ಹೊಟೇಲ್ ಮಾಲಿಕ ತೆನಾರ್ಡಿ ಯರನೂ ರಣದ ವರ್ತಮಾನವನ್ನು ಹೇಗೋ ತಿಳಿದು ಬೌಲಟ್ರೂಲನಿಂದ ನಿಜಾಂಶ ತಿಳಿಯಲು ಪ್ರಯತ್ನಿಸಿದರು. ಈ ಬಗ್ಗೆಗಾಗಿ ಅವರು ಬೌಲಟ್ರೂಲನಿಗೆ ಕುಡಿಸಿದ ಹೆಂಡವನ್ನೆಲ್ಲ ಬೌಲಟ್ರೂಲ್ ಸ್ಪಷ್ಟವಾಗಿ ಕುಡಿದರೂ ರಣದ ವರ್ತಮಾನವನ್ನು ಸ್ಪಷ್ಟವಾಗಿ ತಿಳಿಸಲಾರದವನಾಗಿದ್ದ. ಆದರೂ ಆ ಕಾಡಿಗೆ ರಣಬಂದದ್ದು ನಿಜವಿರಬೇಕೆಂದು ಅಲ್ಲಿದ್ದವರೆಲ್ಲ ನಂಬಿದರು.

೩. ಒರಯನ್ ಹಡಗದ ಧಕ್ಕೆಯಲ್ಲಿ

೧೮೨೩ರ ಅಕ್ಟೋಬರ್ ತಿಂಗಳಲ್ಲಿ 'ಒರಯನ್' ಹಡಗು ದುರಸ್ತಿಗಾಗಿ ಟೌಲನ್ ಬಂದರಕ್ಕೆ ಬಂದು ತಂಗಿತ್ತು. ಅದನ್ನು ದುರಸ್ತುಗೊಳಿಸುತ್ತಿದ್ದ ಸಂದರ್ಭದಲ್ಲಿ ಒಂದು ವಿಶೇಷಘಟನೆ ಸಂಭವಿಸಿತು. ಹಡಗಿನ ಧ್ವಜಸ್ತಂಭದಿಂದ ಅಡ್ಡವಾಗಿ ಹೋಗಿದ್ದ ಮರದ ಉದ್ದ ತೊಲೆಯ ತುದಿಯಲ್ಲಿ ರಿಪೇರಿ ಕೆಲಸ ಮಾಡುತ್ತಿದ್ದ ಕೆಲಸಗಾರನೊಬ್ಬ ಅಕಸ್ಮಾತ್ತಾಗಿ ಜಾರಿ ಕೆಳಗೆ ಬೀಳುವು ದರಲ್ಲಿದ್ದ. ಅವನು ಆ ತೊಲೆಯ ತುದಿಯಿಂದ ಜಾರುತ್ತಿದ್ದ ಹಾಗೆಯೇ ತನ್ನ ಕಾಲಿಗೆ ಸಿಕ್ಕಿದ್ದ ಒಂದು ಹಗ್ಗವನ್ನು ಹಿಡಿದುಕೊಂಡಿದ್ದುದರಿಂದ ಬೀಳದೆ, ಧಕ್ಕೆಯಿಂದ ಮೇಲೆ ಬಲು ಎತ್ತರದಲ್ಲಿ ತೂಗಾಡ ತೊಡಗಿದ. ಆ ಹಗ್ಗವನ್ನೇ ಹಿಡಿದುಕೊಂಡು ಮೇಲೆ ಬರುವಷ್ಟು ತ್ರಾಣ ಅವನಿಗೆ ಇರಲಿಲ್ಲ. ಅಲ್ಲದೇ ಅಲುಗಾಡಿದರೆ ಆ ಹಗ್ಗವೇ ತುಂಡಾಗಬಹುದೆಂದು ಅವನು ಗಾಬರಿ ಗೊಂಡಿದ್ದ. ನಿಂತರೂ ಕೂಗಾಡಿದರೂ ಅಲುಗಾಡಿದರೂ ತನ್ನ ನಾಶ ಶೀಘ್ರ ಸನ್ನಿಹಿತವೆಂದು ಹೆದರಿ ಅವನು ಮೌನವಾಗಿ ಮರಣವನ್ನು ನಿರೀಕ್ಷಿಸುತ್ತ ನೇತಾಡುತ್ತಿದ್ದ. ಧಕ್ಕೆಯ ಮೇಲಿದ್ದವರು ಯಾವ ವಿಧದ ರಕ್ಷಣೆಯನ್ನೂ ಕೊಡಲಾರದೆ ಕಂಗಾಲಾಗಿ ನಿಂತಿದ್ದರು.

ಇದೇ ಸಮಯದಲ್ಲಿ ಧಕ್ಕೆಯ ಇನ್ನೊಂದು ತುದಿಯಲ್ಲಿ ಕೆಲಸಮಾಡುತ್ತಿದ್ದ ಕೈದಿಯೊಬ್ಬ ನೇತಾಡುತ್ತಿದ್ದ ಕೆಲಸಗಾರನನ್ನೂ ಅಲ್ಲಿಯ ಇತರ ಪರಿಸ್ಥಿತಿಗಳನ್ನೂ ಕಂಡು ವ್ಯಸನಪಟ್ಟ. ಎಲ್ಲರೂ ಹತಾಶರಾಗಿದ್ದುದನ್ನು ಕಂಡು ಅವನು ತನ್ನ ಪಹರೆಯ ಪೊಲೀಸನ ಸಮೀಪಕ್ಕೆ ಹೋಗಿ ತನ್ನನ್ನು ಬಿಟ್ಟರೆ ಆ ನೇತಾಡುತ್ತಿರುವವನನ್ನು ರಕ್ಷಿಸುವುದಾಗಿ ತಿಳಿಸಿದ. ಒಬ್ಬ ಕೈದಿಗೆ ಒಂದು ವೇಳೆ ಅಪಾಯ ಬಂದರೂ ಕೆಲಸಗಾರ ಉಳಿಯಲೆಂದಸಾ ಪೊಲೀಸ್ ಗ್ರಹಿಸಿ ಈ ಕೈದಿಯ ಸಂಕೋಲೆ ಬಿಚ್ಚಿಸಿ ಬಿಟ್ಟುಕೊಟ್ಟ.

ಕೈದಿ ಕೂಡಲೇ ಧ್ವಜಸ್ತಂಭ ಏರಿದ. ನೇತಾಡುತ್ತಿದ್ದ ಕೆಲಸಗಾರನ ಸಮೀಪ, ತೊಲೆಯ ತುದಿ ತಲಪಿದ. ತಾನು ಹೋಗುವಾಗಲೇ ಹಲ್ಲಿನಲ್ಲಿ ಕಚ್ಚಿಕೊಂಡು ಹೋಗಿದ್ದ ಗಟ್ಟಿಯಾದ ಒಂದು ಹಗ್ಗದ ಒಂದು ತುಂಡನ್ನು ತೊಲೆಗೆ ಭದ್ರವಾಗಿ ಕಟ್ಟಿ, ಅದೇ ಹಗ್ಗದಲ್ಲಿ, ತಾನು ನೇಲುತ್ತ ಕೆಳಗಿಳಿದು, ಒಂದು ಕೈಯಿಂದ ನೇಲುತ್ತ, ಮತ್ತೊಂದರಿಂದ, ಅದೇ ಹಗ್ಗದ ಅಂಶವನ್ನು ಕೆಲಸಗಾರನ ಸೊಂಟಕ್ಕೆ ಸುತ್ತಿಕಟ್ಟಿ ತಾನು ಮೇಲೆ ಬಂದು ತೊಲೆಯಲ್ಲಿ ಕ್ಷಣಕಾಲ ವಿಶ್ರಮಿಸಿಕೊಂಡ. ಈ ಕೆಲಸವನ್ನೆಲ್ಲ ಬಲು ಜಾಣ್ಮೆಯಿಂದಲೂ ಚುರುಕಾಗಿಯೂ ಮಾಡಿದ.

ಬಳಿಕ ಕೈದಿ ಕೆಲಸಗಾರನನ್ನು ಈ ಹೊಸ ಹಗ್ಗದಿಂದ ಮೇಲಕ್ಕೆ ಎಳೆದು ಅಡ್ಡತೊಲೆಗಾಗಿ ಧ್ವಜಸ್ತಂಭದ ಕಡೆಗೆ ಎಚ್ಚರಿಕೆಯಿಂದ ಕಳಿಸಿ ಕೊಟ್ಟ. ಕೆಲಸಗಾರ ಧಕ್ಕೆಯಲ್ಲಿಳಿದಾಗ ನೆರೆದಿದ್ದ ಜನರೆಲ್ಲ ಕೈದಿಯ ಸಾಹಸಕ್ಕೂ ಉಪಕಾರಕ್ಕೂ ಮೆಚ್ಚಿ ಆನಂದಬಾಷ್ಪ ಸುರಿಸಿದರು.

ಆ ವರೆಗಿನ ಕೆಲಸದಿಂದ ತುಂಬ ಶ್ರಮವಾಗಿದ್ದ ಕೈದಿ ಎದ್ದು ಅಡ್ಡ ತೊಲೆಯಲ್ಲೇ ನಿಂತು ಸುತ್ತಲೂ ನೋಡುವಾಗ, ಭಾರದ ಹೆಚ್ಚುಕಡಿಮೆಯಿಂದ ಆ ತೊಲೆ ತೂಗಾಡುತ್ತ, ಒರಯನ್ ಹಡಗದ ಪಕ್ಕದಲ್ಲಿದ್ದ 'ಆಲ್ಜಿಸಿರಾಸ್' ಹಡಗದ ಕಡೆಗೆ ಚಾಚಿನಿಂತಿತು. ಕೈದಿ ತೊಲೆಯಲ್ಲೇ ಮುಂದುವರಿಯುವಾಗ ಅವನು ನಡುಗುತ್ತಿದ್ದ. ಅವನಿಗೆ ತಲೆತಿರುಗುತ್ತಿದ್ದಿರಬೇಕು. ಅಂತೂ ನಾಲ್ಕು ಹೆಜ್ಜೆ ಮುಂದುವರಿಯುವಷ್ಟರಲ್ಲಿ ಹಠಾತ್ತನೆ ಸಮುದ್ರಕ್ಕೆ ಬಿದ್ದ.

ಮುಂದಿನ ವಿಷಯವನ್ನು ಟೌಲನ್ ನಗರದ ತಾರೀಕು ನವಂಬರ್ ೧೭, ೧೮೨೩ರ ಒಂದು ದೈನಿಕದ ವರದಿ ಓದಿದರೆ ತಿಳಿಯಬಹುದು: "ಒಬ್ಬ ಹಡಗದ ಕೆಲಸಗಾರನನ್ನು ರಕ್ಷಿಸಲೋಸ್ಕರ ಸಾಹಸಪಟ್ಟು, ಕೊನೆಗೆ ರಕ್ಷಿಸಿದ, ಟೌಲನ್ ಜೈಲಿನ ಕೈದಿಯೊಬ್ಬ ಆಕಸ್ಮಿಕವಾಗಿ ಧ್ವಜಸ್ತಂಭದಷ್ಟು ಎತ್ತರದಿಂದ ಸಮುದ್ರಕ್ಕೆ ಬಿದ್ದು ಮೃತನಾದ. ಅವನ ಕಳೇಬರ ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಅದು ಹಡಗದ ಅಡಿಭಾಗದ ಯಂತ್ರೋಪಕರಣಗಳಲ್ಲಿ ಸಿಕ್ಕಿಹೋಗಿರಬೇಕೆಂದು ಊಹಿಸಲಾಗಿದೆ.

"ಕೈದಿಯ ಹೆಸರು : ಜೀನ್‌ವಾಲ್‌ಜೀನ್, ಅವನ ಸಂಖ್ಯೆ ೯೪೩೦."

ಮೂರನೆಯ ಸಂಪುಟ

೧. ಮೊಂಟ್‌ಫರ್ಮಿಯಲಿನಲ್ಲಿ ನೀರಿನ ಕೊರತೆ

ಈ ಕಥೆ ನಡೆದ ಕಾಲದಲ್ಲಿ ಮೊಂಟ್‌ಫರ್ಮಿಯಲ್ ಬರೇ ಒಂದು ಚಿಕ್ಕ ಹಳ್ಳಿ. ಅಲ್ಲಿ ಸಾರ್ವಜನಿಕ ಕಟ್ಟಡಗಳಾಗಲೀ, ವಿಶೇಷ ವಹಿವಾಟದ ಅಂಗಡಿಗಳಾಗಲೀ ಇರಲಿಲ್ಲ. ಕ್ರಿಸ್‌ಮಸ್ ಸಮಯದಲ್ಲಿ ಕೆಲವು ಹಂಗಾಮಿ ಅಂಗಡಿಗಳು ಅಲ್ಲಿಗೆ ಬಂದು, ಕೆಲವು ದಿನ ಇದ್ದು, ಕ್ರಿಸ್‌ಮಸ್ ಕಳೆದ ತರುವಾಯ ಹಿಂತಿರುಗುತ್ತಿದ್ದುವು. ಹಳ್ಳಿಯ ಒಂದು ಕೊನೆಯಲ್ಲಿ ಇಗರ್ಜಿ. ಅದರ ಸಮೀಪವೇ ಶ್ರೀಮಂತರ ಒಂದೆರಡು ಹಳ್ಳಿ ಮನೆಗಳೂ ಒಂದೆರಡು ಚಿಕ್ಕ ಅಂಗಡಿಗಳೂ ಓದುಗರಿಗೆ ಮೊದಲೇ ಪರಿಚಯವಿರುವ ತೆನಾರ್ಡಿಯರನ ಹೋಟೇಲೂ ಇದ್ದುವು. ಇಗರ್ಜಿ ವಠಾರದವರೆಲ್ಲ, ಇಗರ್ಜಿಯಿಂದ ನಡೆದು ಹೋದರೆ ಕಾಲು ಗಂಟೆಸಮಯ ಬೇಕಾಗಬಹುದಾದಷ್ಟು ದೂರದಲ್ಲಿದ್ದ ನೀರಿನ ಒಂದು ಬುಗ್ಗೆಯಿಂದ ನೀರು ಹೊತ್ತು ತರುತ್ತಿದ್ದರು. ಈ ಬುಗ್ಗೆ ನೆಲದಿಂದ ಸ್ವಾಭಾವಿಕವಾಗಿ ಎದ್ದು, ಚಿಕ್ಕ ಒಂದು ಚಿಲುಮೆಯಲ್ಲಿ ತುಂಬಿ, ಅಲ್ಲಿಂದ ಮುಂದುವರಿದು ಪುಟ್ಟ ತೋಡಾಗಿ ಹರಿಯುತ್ತಿತ್ತು. ಚಿಲುಮೆ ಇದ್ದುದು ಕಾಡೊಳಗೆ. ಅನುಕೂಲವಿದ್ದವರು ತಮ್ಮ ಮನೆಗೆ ನೀರನ್ನು ಆಳುಗಳಿಂದ ತರಿಸುತ್ತಿದ್ದರು. ಬಡವರೆಲ್ಲ ತಮತಮಗೆ ಬೇಕಾದಷ್ಟು

ನೀರನ್ನು ತಾವೇ ತಂದುಕೊಳ್ಳುತ್ತಿದ್ದರು. ಈ ಹಳ್ಳಿಯಲ್ಲಿ ನೀರಿನ ಕೊರತೆಯಿದ್ದುದರಿಂದ ಕೆಲವರು ನೀರನ್ನು ಸಾಗಿಸಿಕೊಟ್ಟೂ ಹಣಸಂಪಾದಿಸುತ್ತಿದ್ದುದಿತ್ತು.

ತೆನಾರ್ಡಿಯರನ ಹೋಟೇಲಿಗೆ ಬೇಕಾದ ನೀರನ್ನೆಲ್ಲ ಕೋಸೆಟ್ಟಿ ಹೊತ್ತು ತರುತ್ತಿದ್ದಳು. ಹೀಗೆ ನೀರು ತಂದು ಶೇಖರಿಸಿಡುವುದು ಅವಳ ಕೆಲಸಗಳಲ್ಲಿ ಅತಿ ಮುಖ್ಯದ್ದು. ಡಿಸೆಂಬರ್ ತಿಂಗಳ ಕೊನೆಯ ವಾರದ ಒಂದು ರಾತ್ರಿ ತೆನಾರ್ಡಿಯರನ ಹೋಟೇಲಿನಲ್ಲಿ ತುಂಬ ಜನ ನೆರೆದಿದ್ದರು. ಅದು ಕ್ರಿಸ್‌ಮಸ್ ಕಾಲವಾದ್ದರಿಂದ ಅಷ್ಟೊಂದು ಜನರು ಸೇರಿದುದಾಗಿದೆ. ಜನರು ಕಾಫಿ, ಚಾ, ಬ್ರಾಂಡಿ ಮೊದಲಾದವನ್ನು ಸೇವಿಸುತ್ತ, ಆ ವರ್ಷದ ಚಳಿಯಿಂದ ಪೈರುಗಳ ಮೇಲೆ ಆಗಬಹುದಾದ ಪರಿಣಾಮ ಚರ್ಚಿಸುತ್ತ ಕುಳಿತಿದ್ದರು. ಕಾಲಿಗೆ ಮರದ ಹಾವುಗೆಗಳನ್ನು ಹಾಕಿಕೊಂಡು ಕೋಸೆಟ್ಟಿ ಮೇಜದ ಅಡಿಯಲ್ಲಿ ಕುಳಿತು ಉಣ್ಣೆಯ ಕಾಲುಚೀಲವನ್ನು ಹೆಣೆಯುತ್ತಿದ್ದಳು. ತಾನು ಹರಕು ಚಿಂದಿ ಬಟ್ಟೆಗಳನ್ನೇ ತೊಟ್ಟಿದ್ದರೂ ಅಂಥ ಚಳಿಯಲ್ಲೂ ಅಲ್ಲಿ ಕುಳಿತು ಅವಳು ತನ್ನ ಯಜಮಾನಿಯ ಮಕ್ಕಳಿಗಾಗಿ ಈ ಹೊಲಿಗೆ ಕೆಲಸ ಮಾಡಬೇಕಾಗಿತ್ತು, ಅವಳ ಎದುರೇ, ತೆನಾರ್ಡಿಯರನ ಹೆಣ್ಣು ಮಕ್ಕಳು ಎಪೊನಿನ್ ಮತ್ತು ಅಸೆಲ್ಮ ಮೈತುಂಬ ಬಟ್ಟೆ ತೊಟ್ಟು ಬೆಚ್ಚಗೆ, ಬೆಳಕಿನಲ್ಲಿ ನಲಿದಾಡುತ್ತಿದ್ದರು. ಈ ಮಕ್ಕಳಿಗೆ ಸಾಧಾರಣ ಕೋಸೆಟ್ಟಿಯಷ್ಟೇ ಪ್ರಾಯವಾಗಿತ್ತೆಂಬುದು ಓದುಗರಿಗೆ ಜ್ಞಾಪಕವಿರಬಹುದಷ್ಟೆ.

ದೂರದ ಒಂದು ಕೋಣೆಯಿಂದ ಜನಗಳ ಮಾತಿನ ಗೌಜನ್ನೂ ಮೀರಿಸಿ ಕೇಳುವಂತೆ ತೆನಾರ್ಡಿಯರನ ಮೂರು ವರ್ಷ ಪ್ರಾಯದ ಗಂಡು ಮಗುವೊಂದು ಕೂಗುತ್ತಿತ್ತು. "ಈ ಹಾಳು ಮಾರಿ ಏತಕ್ಕೋಸ್ಕರ ಹುಟ್ಟಿತೋ," ಎಂದು ತನ್ನ ಮಗನ ಕೂಗನ್ನು ಕೇಳಿ ಬೈದುಕೊಳ್ಳುತ್ತ ತೆನಾರ್ಡಿಯರಿಣಿ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು.

೨. ಅವರ ಪೂರ್ಣ ಚಿತ್ರಣ

ಈ ಮೊದಲು ಸ್ವಲ್ಪ ಮಾತ್ರ ಪರಿಚಯ ಮಾಡಿಕೊಟ್ಟಿರುವ ತೆನಾರ್ಡಿಯರ್ ದಂಪತಿಗಳ ಪೂರ್ಣ ಚಿತ್ರಣವನ್ನು ಇಲ್ಲಿ ಕೊಡುವೆವು. ತೆನಾರ್ಡಿಯರನ ಪ್ರಾಯ ಐವತ್ತು, ಹೆಂಡತಿಯದು ಹತ್ತು ವರ್ಷ ಕಡಿಮೆ. ಆದರೆ, ಅವಳು ಐವತ್ತು ವರ್ಷ ಪ್ರಾಯದವಳಂತೆ ತೋರಿ ಪ್ರಾಯದ ಮಟ್ಟಿಗೆ, ಗಂಡನ ಸಮಸ್ಕಂಧಳಾಗಿದ್ದಳು. ತೆನಾರ್ಡಿಯರಿಣಿ ಮನುಷ್ಯಳೆನ್ನಬಹುದಾದಂತೆ ಇರಲಿಲ್ಲ, ರಾಕ್ಷಸಿ ಎನ್ನಬಹುದಾದಂತೆ ಇದ್ದಳು. ಅವಳು ಎತ್ತರ, ಸ್ಥೂಲ, ಗಟ್ಟಿ ಚುರುಕು ಮತ್ತು ಒರಟು. ಮನೆಯ ವಿಶಿಷ್ಟ ಕೆಲಸಗಳನ್ನೂ ಮಾಡುತ್ತಿದ್ದಳು. ಒಂದು ವೇಳೆ ಕೆಲಸವನ್ನೇನಾದರೂ ಮಾಡದೆ ಬಿಟ್ಟಿದ್ದಿದ್ದರೆ ಅದು ಕೋಸೆಟ್ಟಿಗೆ ಹಿಂಸೆ ಕೊಡುವುದಕ್ಕಾಗಿ ಮಾತ್ರವಾಗಿರುತ್ತಿತ್ತು. ಅವಳ ಸಹಾಯಕ್ಕಾಗಿ ಇದ್ದ ಕೆಲಸದವಳೆಂದರೆ ಈ ಚಿಕ್ಕ ಕೋಸೆಟ್ಟಿ ಮಾತ್ರ. ಅಂದರೆ ಆನೆಯ ಸಹಾಯಕ್ಕೆ ಇಲಿಯೊಂದು ಇದ್ದಂತೆ. ಆ ಮನೆಯವರ ಸುಖ, ಸಂತೋಷ, ಅಗತ್ಯಬಿದ್ದಾಗ ಸಿಡಿಲು, ಮಿಂಚು, ಮಳೆ, ಬೆಳಕುಗಳನ್ನು ಮಾಡಿಕೊಡುತ್ತಿದ್ದ ಅಪಾರ ಶಕ್ತಿಯ ಭಂಡಾರವೇ ಈ ರಾಕ್ಷಸಿ. ಇವಳನ್ನು ರಾಕ್ಷಸಿ ಎಂದು ಕರೆದರೆ ಯಾರೂ ಆಶ್ಚರ್ಯಪಡಬಾರದು. ಇವಳು ತನ್ನ ಮುಷ್ಟಿಯಲ್ಲಿ ಬಾದಾಮಿಯನ್ನೇ ಪುಡಿಮಾಡಿ ಬಿಡುತ್ತಿದ್ದಳು. ತನ್ನ ಸ್ವರದಿಂದ ಕುರ್ಚಿ, ಮೇಜು, ಕಿಟಕಿ, ಮನುಷ್ಯರನ್ನೂ ಅಲುಗಾಡಿಸಿಬಿಡುತ್ತಿದ್ದಳು. ಇವಳನ್ನು ನೋಡದೆ, ಇವಳ ಮಾತನ್ನು ಮಾತ್ರ ಕೇಳಿದವರು "ಅವನೊಬ್ಬ ಸಿಪಾಯಿ" ಎಂದು ಹೇಳುತ್ತಿದ್ದರು. ತೆನಾರ್ಡಿಯರಿಣಿ ಮಾದಕ ಪಾನೀಯ ಕುಡಿಯು

ವುದನ್ನು ಕಂಡವರು, "ಇಂಥ ಕುಡುಕರು ಮನುಷ್ಯರಲ್ಲಿ ಅಪರೂಪ," ಎನ್ನುತ್ತಿದ್ದರು. ಅವಳು ಕೋಸೆಟ್ಟೆಯ ಮೇಲೆ ತನ್ನ ಅಧಿಕಾರ ಚಲಾಯಿಸುತ್ತಿದ್ದುದನ್ನು ಮಾತ್ರ ಕಂಡವರು, "ಕಟುಕನೇ ಕಾರ್ಯತತ್ಪರನಾಗಿದ್ದಾನೆ," ಎಂದು ಉದ್ಗರಿಸುತ್ತಿದ್ದರು. ಅವಳು ಶಾಂತಸ್ವರೂಪದಿಂದ ತೋರಿ ಬರುತ್ತಿದ್ದುದೇ ಬಲು ವಿರಳ. ಅವಳೊಬ್ಬಳೇ ಸುಮ್ಮನೆ ಕುಳಿತಿದ್ದಾಗ ಅವಳ ಎದುರಿನ ಎರಡು ಹಲ್ಲುಗಳು ಎಲ್ಲರಿಗೂ ಕಂಡು ಬಂದು, ಆಗಲೂ ಭೀಕರಳಾಗಿಯೇ ತೋರುತ್ತಿದ್ದಳು. ಅವಳ ಮನೋದಾರ್ಢ್ಯ, ದೇಹದಾರ್ಢ್ಯಗಳನ್ನು ನೋಡಿದ್ದಾದರೆ ಅವಳನ್ನು ಗಂಡುಸು ಎಂದು ಧಾರಾಳ ಹೇಳಬಹುದಿತ್ತು. ಆದ್ದರಿಂದಲೇ ಅವಳನ್ನು ಅವಳ ಗಂಡನ ಹೊರತಾಗಿ ಹೇಳುವಾಗ, ಸೌಲಭ್ಯ ಕ್ಕಾಗಿ, 'ತೆನಾರ್ಡಿಯರಿಣಿ' ಎಂದು ಇಲ್ಲಿ ಹೇಳಲಾಗಿದೆ.

ತೆನಾರ್ಡಿಯರ್ ಕುಳ್ಳ, ಕೃಶಾಂಗಿ. ಅವನ ಮುಖದಲ್ಲಿ ಸುಕ್ಕು, ಪರೆಗಳೂ ತುಂಬಿದ್ದುವು. ಅವನು ರೋಗಿಷ್ಠನಂತೆ ತೋರುತ್ತಿದ್ದ. ಅವನ ವಂಚನೆಯ ಪ್ರಾರಂಭ ಇಲ್ಲಿಂದಲೇ ಆಗಿತ್ತು ! ಅಂದರೆ, ಅವನು ರೋಗಿ ಅಶಕ್ತ ಎಂದು ತೋರಿದರೂ ನಿಜವಾಗಿ ನಿರೋಗಿ, ಸುಟಿ, ಬುದ್ಧಿ ಸೂಕ್ಷ್ಮತೆಯುಳ್ಳವ ಮತ್ತು ಕಾರ್ಯಚತುರ. ಅವನ ನಸುನಗೆಯ ಹಿಂದೆ ಸಮಸ್ತ ವಂಚನೆಗಳೂ ಮರಸು ಕುಳಿತಿದ್ದುವು. ಸಾಹಿತಿ, ರಾಜಕಾರಣಿ, ಧರ್ಮಗುರುಗಳ ಮಾತುಗಳನ್ನು ಉದಾಹರಿಸಿ ತನ್ನ ಮೋಸ, ಲೋಭ, ಸ್ವಾರ್ಥ, ಧರ್ಮಬಾಹಿರತ್ವ ಇಂಥವನ್ನೆಲ್ಲ ಅಡಗಿಸಬಲ್ಲ ವಾಕ್‌ಚತುರನೂ ಅವನಾಗಿದ್ದ. ಶಿಸ್ತು-ಕ್ರಮ-ನಿಯಮಗಳನ್ನು ಕೊಂಡಾಡುತ್ತ, ತನ್ನ ನಡತೆ ಅವುಗಳಿಂದಲೇ ವ್ಯವ ಸ್ಥಿತವಾಗಿದೆಯೆಂದು ನಂಬಿಸಿ, ಹೋಟೇಲಿಗೆ ಬಂದವರಿಂದ ನ್ಯಾಯಮೀರಿ ಹಣ ಎಳೆಯುತ್ತಿದ್ದ. ಊಟ, ತಿಂಡಿ, ಪಾನೀಯ, ವಸತಿಗಳ ಬಗ್ಗೆ ಹಣ ಪಡೆಯುತ್ತಿದ್ದುದರ ಜೊತೆಗೆ ಪ್ರತ್ಯೇಕವಾಗಿ ಮೇಜು, ಕುರ್ಚಿ, ಹಾಸಿಗೆ, ಹತ್ತುಸರ್ತಿ ಹೊದೆದ ಬಟ್ಟೆಯನ್ನು ಒಗೆಯದೆ ಹನ್ನೊಂದನೆಯ ಸರ್ತಿ ಕೊಟ್ಟು ಅವೆಲ್ಲವುಗಳ ಬಗ್ಗೆ ಬಾಡಿಗೆ ವಸೂಲಿಸುತ್ತಿದ್ದ. ಕಿಟಕಿ ತೆರೆದಿರುವ ಸೌಕರ್ಯ, ಮುಚ್ಚಿರುವ ಅನುಕೂಲ ಇವೆಲ್ಲಕ್ಕೂ ಬಲುನಯವಾಗಿ ಹಣ ಸುಲಿಯುತ್ತಿದ್ದ. ಅರ್ಥಾತ್, ಅವನ ಸುಲಿಗೆಯ ಧೋರಣೆ ಪ್ರಕಾರ, ಕನ್ನಡಿಯಲ್ಲಿ ಒಬ್ಬ ಮುಖ ನೋಡಿದ್ದಾದರೆ ಆ ಮುಖಕ್ಕೆ ತಕ್ಕಂತೆ ಕನ್ನಡಿ ಸವೆಯುತ್ತದೆಂದೂ ಸಿದ್ಧಾಂತಮಾಡಿ ಬಾಡಿಗೆ ವಸೂಲಿಸುವ ಕ್ರಮ ಸೇರಿತ್ತು!

ವಾಟರ್ಲೂ ರಣರಂಗದಲ್ಲಿ, ನಿಶಾಚರನಾಗಿ, ಏಕಾಂಗಿಯಾಗಿ, ಶವಗಳನ್ನೇ ದರೋಡೆ ಮಾಡಿ ದವನ ಮನೋಧರ್ಮ ಹೀಗಲ್ಲದೆ ಮತ್ತೆ ಹೇಗೆ ತಾನೆ ಇರಬಲ್ಲದು? ಅವನ ವೀರ ಸಾಹಸಗಳ ನೆನಪಿಗಾಗಿ ಎಂಬಂತೆ, ಮತ್ತೂ ತನ್ನ ಹೋಟೇಲಿನ ಪ್ರಚಾರ ವಿಭಾಗದ ಮೂಲಧನದಂತೆ, ಅವನು ತನ್ನ ಹೋಟೇಲ್ ಎದುರುಗಡೆ "ವಾಟರ್ಲೂ ಸಾರ್ಜೆಂಟ್" ಎಂಬ ಹೆಸರನ್ನೂ ರಣರಂಗದಲ್ಲಿ ಸಾರ್ಜೆಂಟ್ ಒಬ್ಬ ತನ್ನ ಮೇಲಧಿಕಾರಿಯನ್ನು ಹೊತ್ತು ಸಾಗಿಸುತ್ತಿದ್ದ ಬಣ್ಣದ ಚಿತ್ರವನ್ನೂ ಹಲಗೆ ಯಲ್ಲಿ ಬರೆಸಿ ತೂಗಾಡಿಸಿದ್ದ.

ತೆನಾರ್ಡಿಯರ್ ದೈಹಿಕವಾಗಿ ಹೆಂಡತಿಗಿಂತ ಚಿಕ್ಕವ. ಆದರೆ ಬುದ್ಧಿ ಮನಸ್ಸುಗಳಲ್ಲಿ ಹೆಂಡತಿ ಗಿಂತ ಹತ್ತುಪಾಲು ಹೆಚ್ಚು ಬೆಳೆದಿದ್ದ. ಈ ಸಂಗತಿ ಗಂಡ ಹೆಂಡಂದಿರ ಕಾರ್ಯಗಳಲ್ಲಿ ತೋರಿ ಬರುತ್ತಿತ್ತು. ಹೆಂಡತಿ ತನ್ನ ಆತ್ಮ ಸಂತೋಷಕ್ಕಾಗಿ ಕೋಸೆಟ್ಟೆಯನ್ನು ಹಿಂಸಿಸುತ್ತಿದ್ದುದಾದರೆ, ಗಂಡ ತನ್ನ ಮನಸ್ಸನ್ನು (ಹೆಂಡತಿಯ ಮನಸ್ಸಿನಂಥದೆ) ಲಾಭಮಾರ್ಗವಾಗಿ ಪರಿವರ್ತಿಸಿ, ಕೋಸೆಟ್ಟೆಯಿಂದ—ರಾತ್ರಿ, ಚಳಿ, ಅರೆನಗ್ನಾವಸ್ಥೆ ಎಂದು ಗ್ರಹಿಸಿಯೂ ಸುಮ್ಮನಿರದೆ—ಅಗತ್ಯ ಬಿದ್ದಾಗಲೆಲ್ಲ ಹೋಟೇಲಿಗೆ ಬೇಕಾದ ನೀರನ್ನೆಲ್ಲ, ಮತ್ತು ಸಾಧ್ಯವಾದ ಇತರ ಸಾಮಾನುಗಳನ್ನೂ ಹೊರಿಸಿ, ತರಿಸಿಕೊಳ್ಳುತ್ತಿದ್ದ.

ಎಳೆ ಕೋಸೆಟ್ಟಿ ಜೇಡನ ಬಲೆಯಲ್ಲಿ ಬಿದ್ದ ನೊಣದಂತೆ ಈ ದಂಪತಿಗಳ ಹಿಂಸಾಜಾಲದಲ್ಲಿ ಸಿಕ್ಕಿ, ಸದಾ ದುಃಖಿಸಿ, ನಡುಗುತ್ತಿದ್ದಳು.

೩. ಮನುಷ್ಯರಿಗೆ ಬೇಕು ವೈನ್, ಕುದುರೆಗಳಿಗಾದರೋ ನೀರು

ಇದೇ ಕ್ರಿಸ್‌ಮಸ್ ರಾತ್ರಿ ಕೋಸೆಟ್ಟಿ ತನ್ನ ಹೊಲಿಗೆ ಕೆಲಸ ಮಾಡುತ್ತ ಹೊಟೇಲಿಗೆ ಬಂದು ಹೋಗುವವರನ್ನು ನೋಡುತ್ತ, ಮೇಜದ ಕೆಳಗೆ ಕುಳಿತಿದ್ದಳು. ಆ ಹೊತ್ತೇ ಬೆಳಗ್ಗೆ ತೆನಾರ್ಡಿಯರಿಣಿ ಕೋಸೆಟ್ಟಿಯ ಮುಖಕ್ಕೆ ಗುದ್ದಿದ್ದುದರ ಪರಿಣಾಮವಾಗಿ ಕಣ್ಣು ಊದಿಕೊಂಡು ಕೋಸೆಟ್ಟಿ ಸ್ವಲ್ಪ ಕುರೂಪಿಯಾಗಿಯೇ ಕಾಣುತ್ತಿದ್ದಳು. ಕೋಸೆಟ್ಟಿ ನೋಡುತ್ತಿದ್ದ ಹಾಗೆಯೇ ತೆನಾರ್ಡಿಯರಿಣಿ ನೀರಿನ ಪೀಪಾಯಿಯಿಂದ ತಿರುಗಣಿ ತಿರುಗಿಸಿ ಸ್ವಲ್ಪ ನೀರು ತೆಗೆದುಕೊಂಡು ಹೋದಳು. ಇದನ್ನು ನೋಡುತ್ತಿದ್ದ ಕೋಸೆಟ್ಟಿಗೆ ಪೀಪಾಯಿಯಲ್ಲಿ ನೀರು ಕಡಿಮೆಯಾಗಿದೆಯೆಂದು ಗೊತ್ತಾಯಿತು. ಆದರೂ ಆಗ ರಾತ್ರಿ ಆಗಿದ್ದುದರಿಂದಲೂ ಬಂದವರೆಲ್ಲರೂ ವೈನ್ ಕುಡಿದು ತೃಪ್ತರಾಗಿದ್ದುದರಿಂದಲೂ ಪೀಪಾಯಿಯಲ್ಲಿ ನೀರು ಕಡಿಮೆಯಾದುದಕ್ಕೆ ಅವಳು ವಿಶೇಷ ಗಾಬರಿಗೊಳ್ಳಲಿಲ್ಲ. ತೆನಾರ್ಡಿಯರಿಣಿ ಕೋಸೆಟ್ಟಿಯನ್ನು ನೋಡಿ, "ಅವಳ ಮುಖ ಎಷ್ಟು ವಿಕಾರವಪ್ಪಾ!" ಎಂದು ಹೇಳಿ ಹೋಗಿದ್ದಳಷ್ಟೆ.

ಆದರೆ, ಹೊಟೇಲಿಗೆ ಆ ಬೆಳಗ್ಗೆ ತನ್ನ ಬಂಡಿಯಲ್ಲೇ ಬಂದಿದ್ದ ರೈತನೊಬ್ಬ ಆಗಲೇ ಒಳಗೆ ಬಂದು ತೆನಾರ್ಡಿಯರಿಣಿ ಬಳಿ, "ಅಮ್ಮಾ, ನನ್ನ ಕುದುರೆಗೆ ನೀರು ಕೊಡಲಿಲ್ಲವಷ್ಟೆ," ಎಂದ. ಕೋಸೆಟ್ಟಿ ಗಾಬರಿಗೊಳ್ಳುತ್ತ, ಕೇವಲ ಆತ್ಮರಕ್ಷಣೆಗಾಗಿ, "ಕೊಟ್ಟಿದ್ದೇನೆ, ನಾನೇ ನೀರು ಕೊಟ್ಟದ್ದು," ಎಂದು ಹೇಳಿದಳು.

"ನೀನ್ಯಾರೆ ಕಳ್ಳಹುಡುಗಿ, ನನ್ನ ಕುದುರೆ ವಿಷಯ ಹೇಳುವವಳು? ಅದು ನೀರು ಕುಡಿದಿದ್ದರೂ ಕುಡಿಯದೆ ಇದ್ದರೂ ನನಗೆ ಗೊತ್ತಾಗುತ್ತದೆ. ಖಂಡಿತವಾಗಿ ನೀರು ಕೊಡಲಿಲ್ಲ," ಎಂದು ರೈತ ಗದರಿದ.

ತೆನಾರ್ಡಿಯರಿಣಿಗೆ ಕೋಪ ಬಂತು. ಅವಳು ಕೋಸೆಟ್ಟಿಯನ್ನು ನೋಡಿ, "ಕೂಡಲೇ ನೀರು ತಂದುಕೊಡು. ಪೀಪಾಯಿಯಲ್ಲಿಲ್ಲದಿದ್ದರೆ ಹೊರಗೆ ಹೋಗಿ ತೆಗೆದುಕೊಂಡು ಬಾ," ಅಂದಳು. ಅಲ್ಲದೆ, ಕೋಸೆಟ್ಟಿಯನ್ನು ಎಳೆದು ನೂಕುವುದಕ್ಕಾಗಿ ಮುಂದುವರಿಸಿ ಬಂದಳು. ಕೋಸೆಟ್ಟಿ ನಿರ್ವಾಹವಿಲ್ಲದೆ ಬಾಲ್ದಿಯನ್ನು ಎತ್ತಿಕೊಂಡು ಹೊರಟಳು. ಆಗಲೇ, ಅಂಗಡಿಯಿಂದ ಹದಿನೈದು ಸೌ ಕ್ರಯದ ಬ್ರೆಡ್ ತರಬೇಕೆಂದೂ ಆಜ್ಞಾಪಿಸಿ, ತೆನಾರ್ಡಿಯರಿಣಿ ಹದಿನೈದು ಸೌವಿನ ಒಂದು ನಾಣ್ಯವನ್ನೂ ಕೋಸೆಟ್ಟಿಗೆ ಕೊಟ್ಟಳು.

ಕೋಸೆಟ್ಟಿ ಬಾಲ್ದಿ ಹಿಡಿದುಕೊಂಡು ಆ ಚಳಿಯ ರಾತ್ರಿಯಲ್ಲಿ ರಸ್ತೆಗಿಳಿದಳು.

೪. ಆಟಿಕೆ ಗೊಂಬೆಯ ಪ್ರವೇಶ

ಮೊಂಟ್‌ಫರ್ಮಿಯಲಿನಲ್ಲಿ ಕ್ರಿಸ್‌ಮಸ್ ಸಮಯದಲ್ಲಿ ಜಾತ್ರೆ ನಡೆಯುತ್ತಿತ್ತು. ಈ ಕ್ರಿಸ್‌ಮಸಿನಲ್ಲಿ ಕೆಲವು ಹೊಸ ಅಂಗಡಿಗಳೂ ಅಲ್ಲಿಗೆ ಬಂದಿದ್ದುವು. ಅಂಗಡಿಕಾರರೆಲ್ಲರೂ ತಂತಮ್ಮ ಅಂಗಡಿಗಳನ್ನು ಸಿಂಗರಿಸಿಟ್ಟಿದ್ದರು. ತೆನಾರ್ಡಿಯರನ ಹೊಟೇಲಿನ ಎದುರು ಆಟದ ಸಾಮಾನುಗಳ

ಅಂಗಡಿಯಿತ್ತು. ಸಾಮಾನುಗಳಲ್ಲಿ ನಾನಾ ಬಣ್ಣದ, ಆಕಾರದ ಮತ್ತು ಎತ್ತರದ ಗೊಂಬೆಗಳೂ ಇದ್ದುವು. ಅವುಗಳ ಪೈಕಿ ಸಾಧಾರಣ ಒಂದೂವರೆ ಮೊಳದಷ್ಟು ಎತ್ತರದ ಹುಡುಗಿಯ ಗೊಂಬೆಯೊಂದು ಬಲು ಅಂದವಾಗಿತ್ತು. ಅದಕ್ಕೆ ಗಿಲಿಟಿನ ಆಭರಣಗಳನ್ನೂ ಜರತಾರಿ ಲಂಗ ಕುಪ್ಪುಸಗಳನ್ನೂ ತೊಡಿಸಿದ್ದರು. ಗೊಂಬೆಯ ಅಂದವು ಮೊಂಟ್‌ಫರ್ಮಿಯಲಿಯ ಸಾಧಾರಣ ಎಲ್ಲ ಹೆಣ್ಣು ಮತ್ತು ಗಂಡುಮಕ್ಕಳನ್ನೂ ಆ ಅಂಗಡಿಗೆ ಬರುವಂತೆ ಆಕರ್ಷಿಸುತ್ತಿತ್ತು. ತೆನಾರ್ಡಿಯರನ ಮಕ್ಕಳು ತಮ್ಮ ಸಮಯವನ್ನೆಲ್ಲ ಆ ಗೊಂಬೆಯನ್ನು ನೋಡಿ ಆನಂದಿಸುವುದರಲ್ಲೇ ಕಳೆಯುತ್ತಿದ್ದರು. ಕೋಸೆಟ್ಟೆಯೂ ಸಮಯವಿದ್ದಾಗಲೆಲ್ಲ ಅದನ್ನು ನೋಡಿ ಹರ್ಷಿಸುತ್ತಿದ್ದಳು. ಪ್ರಪಂಚದ ಎಲ್ಲ ಸಂತೋಷಗಳ ಮೊತ್ತವೇ ಆ ಗೊಂಬೆಯೆಂದು ಅವಳಿಗೆ ತೋರುತ್ತಿತ್ತು.

ಹೊಟೇಲಿನಿಂದ ಹೊರಗೆ ಬಂದಿದ್ದ ಕೋಸೆಟ್ಟೆ ಈ ಗೊಂಬೆಯನ್ನು ನೋಡುತ್ತ ನಾಲ್ಕು ಮಿನಿಟ್ ರಸ್ತೆಯಲ್ಲಿ ನಿಂತಳು. ತೆನಾರ್ಡಿಯರಿಣಿ ಬಾಗಿಲಸೆರೆಯಿಂದಲೇ ಕೋಸೆಟ್ಟೆಯನ್ನು ಕಂಡು ನೀರನ್ನು ಬೇಗ ತರಬೇಕೆಂದು ಗದರಿಸಿದಳು.

ಕೂಡಲೇ ಕೋಸೆಟ್ಟೆ ಬಾಲ್ದಿ ಹಿಡಿದುಕೊಂಡು ಮುಂದೆ ನಡೆದಳು. ಅಂಗಡಿ ಮನೆಗಳನ್ನು ದಾಟುವ ವರೆಗೆ ಧೈರ್ಯವಾಗಿದ್ದಳು. ಅವನ್ನು ದಾಟಿ, ಮುಂದೆ ಹೋಗುತ್ತ ಹೋಗುತ್ತ ಕತ್ತಲೆ ದಟ್ಟವಾಗುತ್ತ ಬಂತು. ಅವಳು ಹೆದರತೊಡಗಿದಳು. ಭೂತಪ್ರೇತಗಳ ಕಥೆಯನ್ನು ಅವಳು ಚೆನ್ನಾಗಿ ಕೇಳಿದ್ದುದರಿಂದ, ಹಾದಿಬದಿಯ ಮರಗಳ ಹಿಂದೆಲ್ಲ ಭೂತ, ಪ್ರೇತ, ಪಿಶಾಚಿಗಳು ನಿಂತಿರಲೇ ಬೇಕೆಂದು ಭಯಗೊಳ್ಳುತ್ತಿದ್ದಳು. ಕೊನೆಗೆ ತನ್ನ ಭಯನಿವಾರಣೆಗಾಗಿ ಬಾಲ್ದಿಯನ್ನು ಅಲುಗಾಡಿಸುತ್ತ ಸದ್ದುಮಾಡಿಕೊಂಡು ಮುಂದೆ ನಡೆದಳು. ಆದರೆ, ನೀರಿನ ಸೆಲೆ ಸಮೀಪವಾದ ಹಾಗೆ ಕಾಡೂ ದಟ್ಟವಾಗುತ್ತಿದ್ದುದರಿಂದ, ಪ್ರೇತಪಿಶಾಚಿಗಳ ಜೊತೆ ಕಾಡಿನ ಕ್ರೂರಮೃಗಗಳೂ ಇವಳ ಮನಸ್ಸಿನೊಳಗೆ ಎದ್ದು ಹೆದರಿಸಿದುವು. ಒಮ್ಮೆ ಊರಿನ ಕಡೆಗೆ ಹೆದರಿ ಹಿಂತಿರುಗತೊಡಗಿದಳು. ಆದರೆ, ಊರಿನತ್ತ ಮುಖ ಹಾಕಿದ ಕೂಡಲೇ ಅವಳೆದುರು ಎದ್ದು ತೋರುತ್ತಿದ್ದ ತೆನಾರ್ಡಿಯರಿಣಿ ಸ್ವರೂಪ, ಮತ್ತು ಭಾವನೆಗಳು ಅವಳನ್ನು ಕಾಡಿನತ್ತ ಹಿಂತಿರುಗಿ ಹೋಗುವಂತೆ ಮಾಡಿದುವು. ಕೊನೆಗೆ ಅವಳು ನೀರಿನ ತಾಣ ತಲಪಿದಳು.

ಕೆರೆಯ ಮೇಲೆ ಚಿಕ್ಕ ಮರ ಚಾಚಿಕೊಂಡಿತ್ತು. ಕೋಸೆಟ್ಟೆ ನೀರು ತೆಗೆಯುವಾಗಲೆಲ್ಲ ಅವಳ ಎಡದ ಕೈಯ್ಯಿಂದ ಅದರ ಕೊಂಬೆ ಹಿಡಿದು ಬಲಗೈಯ್ಯಿಯಿಂದ ಬಾಲ್ದಿಯನ್ನು ನೀರೊಳಗೆ ಅದ್ದುತ್ತಿದ್ದಳು. ಈಗಲೂ ಹಾಗೆಯೇ ಮಾಡಿ ಬಾಲ್ದಿ ತುಂಬ ನೀರು ಎತ್ತಿ ತೆಗೆದಳು. ಅವಳು ನೀರಿಗಾಗಿ ಬಗ್ಗಿದಾಗ ಅವಳ ಜೇಬಿನಲ್ಲಿದ್ದ ಹದಿನೈದು ಸೌನ ನಾಣ್ಯ ಅವಳಿಗೆ ತಿಳಿಯದೆ ನೀರಿಗೆ ಜಾರಿಬಿದ್ದು ಸದ್ದಿಲ್ಲದೆ ಮುಳುಗಿತು. ಕೋಸೆಟ್ಟೆ ಒಂದು ನಿಮಿಷ ವಿಶ್ರಮಿಸಿಕೊಂಡು ಬಾಲ್ದಿ ಎತ್ತಿಕೊಂಡು ಮನೆಯತ್ತ ಹೊರಟಳು.

ಮೊದಲೇ ಚಳಿಯಿಂದ ಕಷ್ಟಪಡುತ್ತಿದ್ದವಳು ನೀರು ಸ್ವಲ್ಪ ಸ್ವಲ್ಪ ಮೈಗೆ ತುಳುಕುತ್ತಿದ್ದಾಗ ಮತ್ತಷ್ಟು ನಡುಗತೊಡಗಿದಳು. ಚಳಿ, ಶ್ರಮ, ಹೆದರಿಕೆಗಳಿಂದ ಅವಳು ಬಹಳ ನಿಶ್ಶಕ್ತಳಾಗಿದ್ದಳು. ಹೀಗಾಗಿ ಅಲ್ಲಲ್ಲಿ ನಿಂತು ಮುಂದುವರಿಯುತ್ತಿದ್ದಳು. ಒಮ್ಮೆ ಹೀಗೆ ನೀರ ನ್ನೆತ್ತಲು ಶಕ್ತಿಸಾಲದೆ "ಓ! ದೇವರೇ" ಎಂದಂದುಕೊಂಡು ಎತ್ತಲು ಪ್ರಯತ್ನಿಸಿದಳು. ಆಗಲೇ, ಅತಿ ಆಶ್ಚರ್ಯವಾಗಿ ಭಯವೂ ಆಗುವಂತೆ ಬಾಲ್ದಿಯನ್ನು ಯಾರೋ ಹಿಡಿದೆತ್ತಿದರು. ಕೋಸೆಟ್ಟೆ ಒಮ್ಮೆ ಬಹಳವಾಗಿ ಗಾಬರಿಗೊಂಡಳು. ಆದರೆ, ಮರುಕ್ಷಣವೇ ಹಾಗೆ ತನ್ನ ಬಾಲ್ದಿಯನ್ನೆತ್ತಿದ ಕೈಯಿಗೆ ಅದನ್ನು ಬಲು ಸ್ವಾಭಾವಿಕವಾಗಿಯೇ ಬಿಟ್ಟುಕೊಟ್ಟಳು. ಅಷ್ಟು ಮಾತ್ರವಲ್ಲದೆ ಆ ಅಪರಿಚಿತ ವ್ಯಕ್ತಿಯ ಜೊತೆ

ಯಲ್ಲೇ ನಡೆಯತೊಡಗಿದಳು. ನಾವು ಇನ್ನೊಬ್ಬರನ್ನು ಭೇಟಿಮಾಡುವಾಗ ನಮ್ಮ ಪಂಚೇಂದ್ರಿಯಗಳಿಗೆ ಆಗೋಚರವಾದ ಆಂತರಿಕ ಕಾರಣಗಳಿಂದ ಆ ಇನ್ನೊಬ್ಬರ ಕುರಿತು ಸಮಾಧಾನವನ್ನೋ ವಿರೋಧವನ್ನೋ ತಾಳುವೆವು. ಇದು ಮನುಷ್ಯರಲ್ಲಿರುವ ಒಂದು ಗುಣ. ಈಗ ಕೋಸೆಟ್ಟೆಗೂ ಅಂಥ ಅಂತರಂಗದ ಭಾವನೆಗಳು ಈ ಅಪರಿಚಿತನ ಕುರಿತು ಧೈರ್ಯವನ್ನೂ ಮೆಚ್ಚುಗೆಯನ್ನೂ ಕೊಟ್ಟಿದ್ದುವು.

೫. ಬೌಲಟ್ರೂಲನ ಅಭಿಪ್ರಾಯ ನಿಜವಾಗಿರಲೂಬಹುದು

ಹಿಂದಿನ ಅಧ್ಯಾಯದಲ್ಲಿ ಹೇಳಿದ ಸಂಗತಿ ನಡೆದ ದಿನ ಅಪರಾಹ್ನ ಪ್ಯಾರಿಸ್ ನಗರದ ಬೌಲ್ವಾ ಡಿ ಎಲ್'ಹಾಪಿತಲ್ ಎಂಬ ಒಂದು ನಿರ್ಜನ ವಿಭಾಗದಲ್ಲಿ ಒಬ್ಬ ವೃದ್ಧ ನಡೆದು ಹೋಗುತ್ತಿದ್ದುದನ್ನು ಇಲ್ಲಿ ತಿಳಿಸಬೇಕಾಗಿದೆ. ತನ್ನ ವಾಸಸ್ಥಳವನ್ನು ಅವನು ಅಲ್ಲಿ ಹೊಸತಾಗಿ ಏರ್ಪಡಿಸಿಕೊಂಡಿದ್ದವನಂತೆ ತೋರುತ್ತಿದ್ದ. ಅವನ ದುಸ್ತು ಒರಟು ಮತ್ತು ಹಳೆಯ ಬಟ್ಟೆಯದಾಗಿತ್ತು. ಚಡ್ಡಿ, ಶರ್ಟು, ಕೋಟು, ಹ್ಯಾಟ್ ಕೈಯಲ್ಲಿದ್ದ ಬಲವಾದ ದೊಣ್ಣೆಗಳನ್ನೆಲ್ಲ ನೋಡುವಾಗ ಅವನು ಫ್ರಾನ್ಸ್ ದೇಶದವನೇ ಅಲ್ಲವೆಂಬಂತೆ ತೋರುತ್ತಿದ್ದ. ತಲೆಕೂದಲು ಸಂಪೂರ್ಣ ನರೆತು ಬಿಳುಪಾಗಿತ್ತು. ಪ್ರಾಯ ಸಾಧಾರಣ ಅರುವತ್ತು ವರ್ಷ ಆಗಿರಬಹುದಾದಂತೆ ಕಾಣುತ್ತಿದ್ದ.

ಅವನು ಅದೇ ಸಂಜೆ ನಾಲ್ಕು ಗಂಟೆಗೆ ಲೆಗ್ನಿಗೆ ಹೋಗುವ ಕುದುರೆ ಬಂಡಿ ಏರಿ, ಲೆಗ್ನಿವರೆಗೆ ಟಿಕೇಟ್ ತೆಗೆದುಕೊಂಡಿದ್ದರೂ ಚೆಲ್ಲಿಸಿನಲ್ಲೇ ಇಳಿದು, ರಸ್ತೆಯಲ್ಲೇ ನಡೆದು ಮಾಯವಾದ. ಅವನ ಮಾತುಕಥೆ, ಉಡುಪು ಮೊದಲಾದವನ್ನು ನೋಡಿ ಟಿಕೇಟ್ ಕೊಡುವಾತ ಬಂಡಿಯವನೊಂದಿಗೆ, "ಅವನೊಬ್ಬ ಆಶ್ಚರ್ಯಕರ ಜನ. ಅರ್ಧ ಪೆನ್ನಿಗೆ ಗತಿಯಿಲ್ಲದವನಂತೆ ತೋರಿದರೂ ಲೆಗ್ನಿ ವರೆಗೆ ಟಿಕೇಟ್ ಪಡೆದುಕೊಂಡು ಚೆಲ್ಲಿಸಿನಲ್ಲೇ ಬಂಡಿಯನ್ನು ಬಿಟ್ಟಿರುವನು. ಈ ರಾತ್ರಿ ಎಲ್ಲರೂ ಮಲಗಬೇಕೆನ್ನುವಾಗ, ಇವನು ಒಬ್ಬನೇ ಚಳಿಯಲ್ಲಿ ಕಾಡಿನ ಮಧ್ಯೆ ನಡೆದು ಹೋಗಬೇಕಾದರೆ ಅವನೊಬ್ಬ ಭಯಂಕರ ವ್ಯಕ್ತಿಯೇ ಆಗಿರಬೇಕು," ಅಂದ.

ಬಂಡಿಯಿಂದಿಳಿದವನು ರಸ್ತೆಯಲ್ಲೇ ಮುಂದುವರಿದಿದ್ದರೆ ಸಮೀಪದಲ್ಲೇ ಮೊಂಟ್‌ಫರ್ಮಿಯಲ್ ಆದರೂ ಸಿಕ್ಕುತ್ತಿತ್ತು. ಅವನು ಹಾಗೆ ಹೋಗುವುದರ ಬದಲು ಮೊಂಟ್‌ಫರ್ಮಿಯಲಿನ ಕಾಡೊಳಗೆ ನುಗ್ಗಿ ನಡೆದ. ಆ ಕಾಡಿನಲ್ಲೇ ಬಲುದೂರ ಹೋಗಿ ಬಂಡೆಗಳೂ ದೊಡ್ಡ ದೊಡ್ಡ ಮರಗಳೂ ಇದ್ದ ಒಂದು ಸ್ಥಳಕ್ಕೆ ತಲಪಿದ. ಅಲ್ಲಿ ಬಂಡೆಗಳ ಮತ್ತು ಮರಗಳ ಗುರುತಿನಿಂದ ಏನನ್ನೋ ಹುಡುಕಿ ಹಿಡಿದು ಅದರ ಬದಿಯಲ್ಲಿ ಸ್ವಲ್ಪ ನಿಂತಿದ್ದು, ಆ ಕಾಡಿನ ಮತ್ತೊಂದು ದಿಕ್ಕಿಗಾಗಿ ಮೊಂಟ್‌ಫರ್ಮಿಯಲಿನ ಕಡೆಗೆ ಬಂದ.

ಹೀಗೆ ಬರುತ್ತಿದ್ದವನಿಗೆ ಕೋಸೆಟ್ಟೆ ಕಾಣ ಸಿಕ್ಕಿದಳು. ಇವಳ ಕಷ್ಟಗಳನ್ನು ಕಂಡು ಅವನು ಸಹಾಯಕ್ಕೆ ಬಂದ ಸಂಗತಿಯನ್ನು ಈ ಮೊದಲೇ ತಿಳಿಸಿರುವೆವಷ್ಟೆ.

೬. ಅಪರಾತ್ರಿ ಅಪರಿಚಿತನ ಜೊತೆ ಅಣುಗಿ ಕೋಸೆಟ್ಟೆ

ಈ ಹೊಸಬನನ್ನು ಕಂಡು ಕೋಸೆಟ್ಟೆ ಹೆದರಲಿಲ್ಲ. ಅಪರಿಚಿತನಾದರೋ ಕೋಸೆಟ್ಟೆ ಜೊತೆ ಬಲುಮೃದುವಾಗಿ, ವಿಚಾರಿಸಿ, ಮೆಲ್ಲಗೆ ಮಾತಾಡುತ್ತಿದ್ದ. ಇವಳು ಶಾಂತಳಾಗಿ ಸಂತೋಷ

ದಿಂದಲೇ ಉತ್ತರ ಕೊಡುತ್ತಿದ್ದಳು. ಅಪರಿಚಿತ ಬಾಲ್ದಿಯನ್ನು ನೇಲಿಸಿಕೊಂಡು ನಡೆಯುತ್ತ, "ಮಗೂ, ಈ ಬಾಲ್ದಿಯಲ್ಲಿರುವುದು ನೀರಲ್ಲವೇ?" ಎಂದು ಕೇಳಿದ.

"ಹೌದು, ನೀರು, ಸರ್."

"ಈ ನೀರೆಲ್ಲಿಗೆ ?"

"ನಮ್ಮ ಹೊಟೇಲಿಗೆ, ಸರ್."

"ಹೊಟೇಲಿಗೆ ಇನ್ನೆಷ್ಟು ದೂರವಿದೆ, ಮಗೂ ?"

"ಇನ್ನೂ ಕಾಲುಗಂಟೆ ನಡೆಯಬೇಕು."

"ನಿನಗೆ ಪ್ರಾಯವೆಷ್ಟು, ಹುಡುಗೀ ?"

"ಎಂಟು ವರ್ಷವಾಗಬಹುದು, ಸರ್."

"ಈ ರಾತ್ರಿ, ಚಳಿಯಲ್ಲಿ ನೀರುಹೊರುತ್ತೀಯಲ್ಲ, ನಿನಗೆ ತಂದೆತಾಯಿಗಳಿಲ್ಲವೇನು, ಮಗು?"

"ನನಗೆ ಗೊತ್ತಿಲ್ಲ, ಸರ್. ಇಲ್ಲಾಂತ ಕಾಣುತ್ತದೆ."

"ನಿನ್ನ ಹೆಸರೇನು ?"

"ಕೋಸೆಟ್ಟೆ ಎಂದು ಸರ್."

ಈ ಹೆಸರನ್ನು ಕೇಳಿ ಆಗಂತುಕ ಚಕಿತನಾದ ಒಂದು ವಿಧದ ವಿದ್ಯುತ್ ಅವನನ್ನು ಸೋಂಕಿದಂತೆ ಅವನಿಗೆ ಅನ್ನಿಸಿತು. ಕತ್ತಲಲ್ಲೇ ಆದರೂ ಅವಳನ್ನು ಮುಟ್ಟಿ ನೋಡಿದ. ಕೋಸೆಟ್ಟೆಗೆ ಆಗಂತುಕ ಒಂದು ವಿಧದ ಆಧಾರವಾಗಿ ತೋರುತ್ತಿದ್ದ. ಅವನಲ್ಲಿ ಮಾತಾಡಲು ಅವಳಿಗೆ ಧೈರ್ಯಮಾತ್ರ ವಲ್ಲ, ಪ್ರೇಮವೂ ಸೂಸುತ್ತಿತ್ತು. ಅವರಿಬ್ಬರ ಸಂಭಾಷಣೆಯಲ್ಲಿ ಕೋಸೆಟ್ಟೆ ತನ್ನ ಹೃದ್ಗತವಾಗಿದ್ದ ವೇದನೆಗಳನ್ನು ಹೇಳಿಕೊಂಡಳು. ಅವಳು ಹೇಳಿಕೊಂಡಳೆನ್ನುವುದಕ್ಕಿಂತಲೂ ಅವಾಗಿಯೇ ಹೊರ ಬಿದ್ದುವು ಎಂದು ಹೇಳಿದರೆ ತಪ್ಪಾಗಲಾರದು. ತೆನಾರ್ಡಿಯರರ ಮಕ್ಕಳ ಅಂದಚಂದದ ದುಸ್ತು, ಅವರ ಊಟ ತಿಂಡಿ, ಅವರ ಆಟಪಾಠ, ಇವನ್ನೆಲ್ಲ ವಿವರಿಸುತ್ತ, ತನ್ನ ಬಡತನದ ನಿಕೃಷ್ಟ ದುಸ್ತು, ಜೀವನಕ್ರಮ, ತನಗೆ ಅವರು ಕೊಡುತ್ತಿದ್ದ ದಿನನಿತ್ಯದ ಹಿಂಸೆ, ಆ ಮಕ್ಕಳೊಂದಿಗೆ ತಾನು ಆಟ, ಮಾತು ಯಾವುದನ್ನೂ ಆಡಕೂಡದೆಂದು ತನ್ನ ಮೇಲಿದ್ದ ನಿರ್ಬಂಧ, ಇವನ್ನೆಲ್ಲ ಅವಳು ಸಂದರ್ಭಾನುಸಾರವಾಗಿ, ಅವಳಿಗೆ ತಿಳಿದ ಕ್ರಮದಲ್ಲಿ ಹೇಳಿದಳು.

ಅಪರಿಚಿತ ಆ ದಿನ ರಾತ್ರಿ ತೆನಾರ್ಡಿಯರರ ಹೊಟೇಲಿನಲ್ಲಿ ನಿಲ್ಲುವುದಾಗಿ ತಿಳಿಸುತ್ತ, ಹೊಟೇಲ್ ವರೆಗೂ ನೀರಿನ ಬಾಲ್ದಿ ತಂದುಕೊಟ್ಟ. ಹೊಟೇಲ್ ಬಳಿಗೆ ಬಂದೊಡನೆಯೇ ಕೋಸೆಟ್ಟೆ ಬಾಲ್ದಿಯನ್ನು ತಾನೇ ತೆಗೆದುಕೊಂಡು ಹೋಗಿ ಕದ ತಟ್ಟಿದಳು.

೭. ಆತ ಧನಿಕನೇ ದರಿದ್ರನೇ ?

ತೆನಾರ್ಡಿಯರಿಣಿ ಕೋಸೆಟ್ಟೆಯನ್ನು ಬಾಯಿ ತುಂಬ ಬೈಯುತ್ತ ಕದ ತೆರೆದಳು. ಕೋಸೆಟ್ಟೆ ಅಂಗಡಿಯಲ್ಲಿದ್ದ ಗೊಂಬೆಯನ್ನು ಒಮ್ಮೆ ಕಣ್ಣು ತುಂಬ ನೋಡಿ ಒಳಗೆ ನುಗ್ಗಿದಳು. ಅವಳ ಹಿಂದೆಯೇ ಅಪರಿಚಿತನೂ ಪ್ರವೇಶಿಸಿದ.

ತನ್ನ ಜೊತೆ ಬಂದಿದ್ದ ಗೃಹಸ್ಥನಿಗೆ ಮಲಗಲು ಸ್ಥಳ ಬೇಕೆಂದು ಕೋಸೆಟ್ಟೆ ತೆನಾರ್ಡಿಯರಿಣಿಗೆ ತಿಳಿಸಿದಳು. ಬಂದಿದ್ದವನ ದುಸ್ತು ನೋಡಿ ಅಲ್ಲಿ ಸ್ಥಳ ಸಿಗಲಾರದೆಂದು ಹೇಳಿಬಿಟ್ಟಳು. ಆದರೆ, ಬುದ್ಧಿವಂತ ಗಂಡ ತೆನಾರ್ಡಿಯರ್ ಬಂದು, ಸ್ವಲ್ಪ ಚರ್ಚಿಸಿ, ನಲವತ್ತು ಸೌ ಬಾಡಿಗೆ ಕೊಡುವು

ದಾದರೆ ಸ್ಥಳ ಸಿಗಬಹುದೆಂದು ತಿಳಿಸಿದ. ಅಪರಿಚಿತ ಅದಕ್ಕೊಪ್ಪಿ ಒಂದು ಕಡೆ ಕುಳಿತುಕೊಂಡ. ಆ ಬಾಡಿಗೆ ಬಲು ಹೆಚ್ಚಾಯಿತೆಂದು ಹೋಟೇಲಿಗೆ ಬಂದಿದ್ದ ಮತ್ತೊಬ್ಬ ಮಾತಾಡಿದಾಗ ತೆನಾರ್ಡಿಯರ್, "ನೋಡಿ ನಿಮ್ಮಂಥ ಗೃಹಸ್ಥರಿಗಾದರೆ ಇಪ್ಪತ್ತು ಸೌ ಬಾಡಿಗೆ ಸಾಕು. ಅವನಂಥವರು ನಮ್ಮ ಹೋಟೇಲಿಗೆ ಬಂದರೆ ನಮಗಾಗುವ ಗೌರವದ ನಷ್ಟಭರ್ತಿಗೆ ನಲವತ್ತು ಸೌ ಬಾಡಿಗೆ ವಸೂಲ್ಮಾಡದಿರಲು ಸಾಧ್ಯವಿಲ್ಲ," ಎಂದ.

ಕೋಸೆಟ್ಟಿ ತಂದಿದ್ದ ನೀರನ್ನು ಕುದುರೆ ಮಾಲೀಕನೇ ತೆಗೆದುಕೊಂಡು ಹೋದ. ತನ್ನ ಖಾಯಂ ಸ್ಥಳದಲ್ಲಿ ಕೋಸೆಟ್ಟಿ ಕುಳಿತು ಎಪೊನಿನ್ ಮತ್ತು ಅಸೆಲ್ಮರು ಆಡುತ್ತಿದ್ದುದನ್ನು ನೋಡುತ್ತಿದ್ದಳು. ಅಪರಿಚಿತ ಕೋಸೆಟ್ಟಿಯನ್ನು ಬಲುಶ್ರದ್ಧೆಯಿಂದ ನೋಡುತ್ತ ಕುಳಿತ. ಹರಕು ಲಂಗ ರವಕೆಗಳು ಅವಳ ಮೈಯನ್ನು ಪೂರ್ತಿಯಾಗಿ ಮುಚ್ಚುತ್ತಿರಲಿಲ್ಲ. ಅವಳು ತಿಂದಿದ್ದ ಪೆಟ್ಟಿನ ಗಾಯಗಳು ಮೈಕಾಣುವಲ್ಲೆಲ್ಲ ಕಪ್ಪುಕಪ್ಪಾಗಿ ಕಾಣುತ್ತಿದ್ದುವು. ಕೃಶಾಂಗವೂ, ಮೈಯ ಮೂಳೆಗಳೂ ಬಟ್ಟೆ ಮುಚ್ಚಿದ್ದರೂ ಎದ್ದು ಕಾಣುತ್ತಿದ್ದುವು. ಸದಾ ಅಳುತ್ತಿರುವಂತೆ ಮುಖವಿತ್ತು. ಜನ್ಮಕೈದಿಗಳ ದುಃಖದಿಂದ ನೊಂದ ಬಾಯಿತುಟಿಗಳಂತೆ ಕೋಸೆಟ್ಟಿಯ ಬಾಯಿತುಟಿಗಳು ಕಾಣುತ್ತಿದ್ದುವು. ನೋಡಿದರೂ ನಿಂತರೂ ನಡೆದರೂ ದುಃಖದ ದೀನತೆಯೇ ಮೂರ್ತಿವಂತವಾಗಿ ನೋಡಿ, ನಿಂತು, ನಡೆಯುತ್ತಿದ್ದಂತೆ ಅವಳು ಕಾಣುತ್ತಿದ್ದಳು.

ಇಷ್ಟರಲ್ಲೇ ತೆನಾರ್ಡಿಯರಿಣಿಗೆ ಬ್ರೆಡ್ಡಿನ ಜ್ಞಾಪಕ ಬಂದು ಗುಡುಗಿದಳು, "ಕೋಸೆಟ್ಟೀ! ಬ್ರೆಡ್ಡೆಲ್ಲಿ?"

"ಸಿಕ್ಕಲಿಲ್ಲ ಅಮ್ಮಾ! ಬ್ರೆಡ್ಡಿನ ಅಂಗಡಿ ಬಾಗಿಲು ಹಾಕಿತ್ತು."

"ಅವರನ್ನು ಕರೆದು ಕೇಳಬೇಕಿತ್ತು."

"ಕರೆದೆ ಅಮ್ಮಾ, ಕರೆದರೂ ಅವರು ಬಾಗಿಲು ತೆರೆಯಲಿಲ್ಲ."

"ಅದು ನಿಜವೋ, ಸುಳ್ಳೋಂತ ನಾಳೆ ನೋಡ್ತೇನೆ ಹಾಗಾದರೆ ದುಡ್ಡನ್ನು ಇತ್ತಕೊಡು," ಎಂದು ಕೈ ನೀಡಿದಳು ತೆನಾರ್ಡಿಯರಿಣಿ.

ಕೋಸೆಟ್ಟಿ ತನ್ನ ಕಿಸೆಗೆ ಕೈಹಾಕಿ ಹುಡುಕಿದಳು ಅಂಗಿ, ಲಂಗ ಎಲ್ಲ ಕೊಡಹಿ ನೋಡಿದಳು. ಹಣ ಸಿಕ್ಕಲಿಲ್ಲ. ರಾಕ್ಷಸಿಗೆ ಕೋಪ ಬಂತು. ಸಿಟ್ಟಿನಿಂದ ಎರಡು ಹೆಜ್ಜೆ ಮುಂದಿಟ್ಟಳು.

ಈ ಸಮಯದಲ್ಲಿ ಇದನ್ನೆಲ್ಲ ನೋಡುತ್ತಿದ್ದ ಆ ಅಪರಿಚಿತ ಯಾರಿಗೂ ತಿಳಿಯದಂತೆ ತನ್ನ ಜೇಬಿನಿಂದ ನಾಣ್ಯ ತೆಗೆದು ಕೈಯಲ್ಲಿ ಹಿಡಿದುಕೊಂಡು ತನ್ನೆದುರಿನ ಮೇಜದ ಅಡಿಯಲ್ಲಿ ನೆಲದ ಮೇಲೆ ಏನೋ ಹುಡುಕುತ್ತಿರುವವನಂತೆ ದೃಷ್ಟಿಸಿ ನೋಡುತ್ತ, ಹಠಾತ್ತನೆ ನಾಣ್ಯ ಕಾಣಸಿಕ್ಕಿದಂತೆ, ಮೇಜದಡಿಯಿಂದ ಅದನ್ನು ತೆಗೆದು ಕೋಸೆಟ್ಟಿಯ ಯಜಮಾನಿಗೆ ಕೊಟ್ಟ. ಆ ನಾಣ್ಯವನ್ನು ಕೊಡುತ್ತ, "ನೋಡಿ ತಾಯೀ! ಇದು ಈ ಮೇಜದಡಿಯಲ್ಲಿತ್ತು. ಹುಡುಗಿಯ ಅಂಗಿಯಿಂದ ಬಿದ್ದಿರಬೇಕು," ಎಂದು ಹೇಳಿದ.

ತಾನು ಕೊಟ್ಟಿದ್ದುದು ಹದಿನೈದು ಸೌವಿನ ನಾಣ್ಯವಾಗಿತ್ತು. ಅಪರಿಚಿತ ಹೆಕ್ಕಿ ಕೊಟ್ಟದ್ದು ಇಪ್ಪತ್ತು ಸೌವಿನ ನಾಣ್ಯ! ಈ ಸಂಗತಿ ತೆನಾರ್ಡಿಯರಿಣಿಗೆ ಬಲು ಆಶ್ಚರ್ಯವಾಗಿ ತೋರಿತು. ಆದರೂ ಅಪರಿಚಿತ ಹೋಟೇಲಿನಲ್ಲಿ ಹೆಕ್ಕಲು ಸಿಕ್ಕಿದ ಹಣವನ್ನು ತಾನೇ ಅಪಹರಿಸದೆ ತನಗೆ ಕೊಟ್ಟಿದ್ದರಿಂದ, ತಾನು ಕೊಟ್ಟಿದ್ದುದೇ ಇಪ್ಪತ್ತು ಸೌವಿನ ನಾಣ್ಯವೆಂಬಂತೆ ತೋರಿಸಿಕೊಂಡು, ಮುಂದೇನೂ ಮಾತಾಡದೆ ಅವಳ ಕೆಲಸದ ಮೇಲೆ ಹೋದಳು.

ತೆನಾರ್ಡಿಯರರ ಹೆಣ್ಣುಮಕ್ಕಳು ಚಿಕ್ಕ ಮರದ ಗೊಂಬೆಯನ್ನು ಹಿಡಿದುಕೊಂಡು ಆಟವಾಡು

ತ್ತಿದ್ದರು. ಕೋಸೆಟ್ಟಿಯಷ್ಟೇ ಪ್ರಾಯವಾಗಿದ್ದ ಆ ಮಕ್ಕಳು ಒಳ್ಳೊಳ್ಳೆ ಬಟ್ಟೆಗಳನ್ನು ತೊಟ್ಟು ಗೊಂಬೆಯನ್ನು ಅಲಂಕರಿಸಿ, ಬಲು ಮುದ್ದುಮುದ್ದಾಗಿ ಕಾಣುತ್ತಿದ್ದರು. ತನಗೆ ಆ ಗೊಂಬೆ ಸಿಕ್ಕಿದ್ದರೆ ಆಗಬಹುದೆಂದು ಆಸೆ ಪಡುತ್ತಿದ್ದ ಕೋಸೆಟ್ಟಿ ಅದನ್ನು ಮುಟ್ಟುವ ಹಕ್ಕೂ ತನಗಿಲ್ಲ ವೆಂಬುದನ್ನು ಅರಿತಿದ್ದಳು. ಆದರೂ ಆ ಮಕ್ಕಳ ಆನಂದವನ್ನು ತನ್ನ ಕಣ್ಣಿನಿಂದ ನೋಡುವುದ ರಿಂದಲೇ ಸಂತೋಷಗೊಂಡಿದ್ದಳು. ಅದು ಅವಳ ಮುಖದಲ್ಲಿ ಪ್ರಕಟವಾಗುತ್ತಿತ್ತು. ಮೃಗಗಳಲ್ಲಿ ತಮ್ಮ ಮಕ್ಕಳ ಪರ ಪ್ರೇಮವೂ, ಪರರ ಮಕ್ಕಳ ವಿರುದ್ಧ ವೈರವೂ ಜೊತೆಜೊತೆಯಲ್ಲೇ ಇದ್ದು, ಸಂದರ್ಭ ಬಿದ್ದಾಗ, ವೈರ ಅತಿ ತೀಕ್ಷ್ಣತೆಯಿಂದ ಹೊರಬೀಳುವಂತೆ, ತೆನಾರ್ಡಿಯರರ ಮಕ್ಕಳ ಆಟದ ಆನಂದದಲ್ಲಿ ಕೋಸೆಟ್ಟಿ (ದೃಷ್ಟಿಮುಖಾಂತರವಾದರೂ) ಭಾಗಿಯಾಗುತ್ತಿದ್ದುದನ್ನು ಕಂಡು ತೆನ್ನಾರ್ಡಿಯರಿಣಿ ಹಠಾತ್ತನೆ, "ಕೋಸೆಟ್ಟೀ! ಮೈಗಳ್ಳೆ! ನಿನ್ನ ಕೆಲಸ ನೋಡು" ಅಂದಳು.

ಕೋಸೆಟ್ಟಿ ಗಾಬರಿಗೊಂಡು ಅರ್ಧ ಕೆಲಸವಾಗಿದ್ದ ಕಾಲುಚೀಲ ತೆಗೆದುಕೊಂಡು ಹೆಣೆಯ ತೊಡಗಿದಳು. ಈ ಪ್ರಸಂಗದಲ್ಲಿ ಆಗುತ್ತಿದ್ದ ಅನ್ಯಾಯವನ್ನು ಅಪರಿಚಿತ ಸಹಿಸಲಾರದೆ, ಬಲು ಕನಿಕರದಿಂದ, ಸ್ವಲ್ಪ ಗದ್ಗದ ಕಂಠದಿಂದಲೇ, ತೆನಾರ್ಡಿಯರಿಣಿಯನ್ನು ಕೇಳಿದ, "ಅಮ್ಮಾ, ಅವಳು ಹೆಣೆಯಬೇಕಾದುದು ಏನು ?"

"ನನ್ನ ಮಕ್ಕಳಿಗಿರುವ ಉಣ್ಣೆಯ ಕಾಲು ಚೀಲ."

"ಆ ಕೆಲಸ ಪೂರೈಸಲು ಇನ್ನೆಷ್ಟು ದಿನ ಬೇಕಾಗಬಹುದು ?"

"ಸಾಧಾರಣ ಒಂದು ವಾರ."

"ಹೊಸ ಜೊತೆ ಖರೀದಿಸುವುದಿದ್ದರೆ ಎಷ್ಟು ಬೆಲೆ ಇರಬಹುದು ?"

"ಸಾಧಾರಣ ಮೂವತ್ತು ಸೌ ಕ್ರಯವಿರಬಹುದು."

"ಅಪೂರ್ಣವಾಗಿರುವ ಆ ಕಾಲುಚೀಲಗಳಿಗೆ ಐದು ಫ್ರ್ಯಾಂಕ್ ಕ್ರಯ ನಾನು ಕೊಟ್ಟರೆ ಅದನ್ನು ನನಗೆ ಕೊಡಬಹುದೇ? ಹೀಗೆನ್ನುತ್ತ, ಅಪರಿಚಿತ ಐದು ಫ್ರ್ಯಾಂಕ್ ಹಣವನ್ನು ತೆಗೆದು ತೆನಾರ್ಡಿ ಯರಿಣಿಗೆ ಕೊಟ್ಟ. ಅನಂತರ ಕೋಸೆಟ್ಟಿ ಬೇಕಾದರೆ ಆಟವಾಡಬಹುದೆಂದೂ ಕೋಸೆಟ್ಟಿಗೆ ಹೇಳಿದ. ಇದನ್ನೆಲ್ಲ ನೋಡುತ್ತಲೂ ಕೇಳುತ್ತಲೂ ಇದ್ದ ತೆನಾರ್ಡಿಯರ್ ಎದ್ದು ಬಂದು ಹೆಂಡತಿಯಿಂದ ಆ ಐದು ಫ್ರ್ಯಾಂಕ್ ನಾಣ್ಯವನ್ನು ತೆಗೆದುಕೊಂಡು, ಪರೀಕ್ಷಿಸಿ, ತನ್ನ ಜೇಬೊಳಗೆ ಹಾಕಿಕೊಂಡು, ಅಪರಿಚಿತನನ್ನು ಪರೀಕ್ಷಿಸುವಂತೆ ಒಮ್ಮೆ ನೋಡಿ, ಅಲ್ಲಿಂದ ಹೊರಟು ಹೋದ. ಕೋಸೆಟ್ಟಿ ತನ್ನ ಕೈಯಲ್ಲಿದ್ದ ಅರ್ಧ ಮುರಿದಿದ್ದ ಒಂದು ಚೂರಿಯನ್ನು ಮಗುವೆಂದು ಹೇಳಿಕೊಂಡು ಆಡತೊಡಗಿ ದಳು. ಎಪೊನಿನ್ ಮತ್ತು ಅಸೆಲ್ಮರಿಗೆ ಮರದ ಗೊಂಬೆ ಆಟ ಸಾಕಾಗಿ, ಅದನ್ನು ಬದಿಗಿಟ್ಟು, ಅಲ್ಲೇ ಆಡುತ್ತಿದ್ದ ಅವರ ಮನೆಯ ಬೆಕ್ಕಿನ ಮರಿಯನ್ನು ಹಿಡಿದುಕೊಂಡು, ಅದೇ ಮಗುವೆಂದು ಹೇಳುತ್ತ, ಬೆಕ್ಕು ಬಡಿದಾಡಿದರೂ ಬಿಡದೆ, ಆಡತೊಡಗಿದರು.

ತೆನಾರ್ಡಿಯರ್ ದಂಪತಿಗಳು ಒಂದು ಮೂಲೆಯಲ್ಲಿ ಸೇರಿ ಈ ಅಪರಿಚಿತ ಯಾರಿರಬಹುದು, ಅವನು ತೋರುವಂಥ ದರಿದ್ರನೇ, ಅಥವಾ ಶ್ರೀಮಂತನೊಬ್ಬನು ವೇಷಪಲ್ಲಟಿಸಿಕೊಂಡು ಬಂದಿರುವವನೇ, ಲೆಫಿಟ್ಟೆ ಬ್ಯಾಂಕಿನ ಯಜಮಾನನೇ, ಅಥವಾ ಕಾದಂಬರಿಗಳಲ್ಲಿ ಕಾಣಬಹು ದಾದಂಥ ಶ್ರೀಮಂತನೊಬ್ಬ ವಿನೋದಕ್ಕಾಗಿ ಈ ರೀತಿ ತಿರುಗಾಡುತ್ತಿರುವನೇ ಎಂದು ಮಾತಾಡಿ ಕೊಂಡರು.

ತೆನಾರ್ಡಿಯರಿಣಿಯ ಕುತೂಹಲ ಹರಿತವಾಗಿತ್ತು. ಹಾಗಾಗಿ ಆಗಂತುಕನನ್ನು ಪರೀಕ್ಷಿಸ ಬೇಕೆಂದು ಏನೋ ಕೆಲಸವಿದ್ದವಳಂತೆ ಈ ಕಡೆ ಬರುತ್ತ ಅವನನ್ನು ನೋಡಿ, "ನಮ್ಮ ಕೋಸೆಟ್ಟಿ

ನಿಮ್ಮಿಷ್ಟದಂತೆ ಆಟವಾಡುತ್ತಿದ್ದಾಳೆ ನೋಡಿದಿರೇನು, ಸರ್ ? ಆದರೆ, ನೋಡಿ ನಾವು ಬಡವರು, ಅನಾಥ ಬಾಲಕಿಯನ್ನು ಸಾಕುವಾಗ ಅವಳಿಂದ ಸ್ವಲ್ಪ ಕೆಲಸ ಮಾಡಿಸದೆ ನಿರ್ವಾಹವಿಲ್ಲ," ಅಂದಳು.

"ಹಾಗಾದರೆ ಅವಳು ನಿಮ್ಮ ಮಗಳಲ್ಲವೇ ?" ಎಂದು ಕೇಳಿದ ಆಗಂತುಕ.

ಕೋಸೆಟ್ಟಿಯಂಥ ಅಧಮಾಧಮ ಹುಡುಗಿ ತನ್ನ ಮಗಳಾಗಿರಬೇಕೆಂದು ಊಹಿಸಿದುದಕ್ಕೆ ತೆನಾರ್ಡಿಯರಿಣಿಗೆ ಆಗಂತುಕನ ಮೇಲೆ ಕೋಪ ಬಂದಿತ್ತು. ಆದರೂ, ಅವನು ಶ್ರೀಮಂತನಾಗಿರಬೇಕೆಂದು ಊಹಿಸಿ, ಕೋಪ ಸಹಿಸಿಕೊಂಡು, "ಅವಳು ನನ್ನ ಮಗಳು! ಅಲ್ಲವಪ್ಪಾ ಅಲ್ಲ! ಕುಲಗೋತ್ರವಿಲ್ಲದ ಒಬ್ಬ ಅನಾಮಧೇಯಳ ಮಗಳು, ಅವಳು. ಅವಳ ತಾಯಿಯೇ ಅವಳನ್ನಿಲ್ಲಿ ಬಿಸಾಡಿ ಹೋಗಿರುತ್ತಾಳೆ. ಅವಳ ತಾಯಿಗೆ ಎಷ್ಟು ಪತ್ರ ಬರೆದರೂ ಉತ್ತರ ಬರದೆ ಈಗ ಆರು ತಿಂಗಳ ಮೇಲಾಯಿತು. ಅವಳ ತಾಯಿ ಸತ್ತಿರಬೇಕು. ಹೀಗೆ ಅನಾಥೆಯನ್ನೇ ನಾವು ಸಾಕುವಾಗ, ಅವಳಿಗೆ ಕೆಲಸಕೊಡದೆ ಸಾಕಲು ನಮ್ಮಿಂದ ಸಾಧ್ಯವಿಲ್ಲ," ಅಂದಳು.

ಕೋಸೆಟ್ಟಿ ಈ ಮಾತುಗಳನ್ನೆಲ್ಲ ಕೇಳುತ್ತಿದ್ದಳು. ಇವು ಅವಳ ಕುತೂಹಲವನ್ನು ಕೆರಳಿಸಿದ್ದುವು. ಆಗಂತುಕನ ಪ್ರಶ್ನೆ, ಸ್ವರ ಎಲ್ಲವೂ ಅವಳ ಹೃದಯಕ್ಕೆ ಶಾಂತಿಯನ್ನೀಯುತ್ತಿದ್ದುವು. ತನ್ನ 'ಚೂರಿ' ಮಗುವಿನ ಜೊತೆಯ ಆಟದಲ್ಲಿ ಅವಳು ಒಂದು ವಿಧದ ತಲ್ಲೀನತೆ ಹೊಂದಿದ್ದಳು. ಈ ತಲ್ಲೀನತೆಯಲ್ಲಿ ಅಸ್ಪಷ್ಟವಾಗಿ ತನ್ನ ಮನಸ್ಸೊಳಗೆ ಆಗತಾನೆ ನುಗ್ಗಿದ ತನ್ನ ತಾಯಿ ಸತ್ತಿರಬೇಕೆಂಬ ಭಾವನೆ ಒಂದು ಪದವಾಗಿ ಹೊರಟು, "ನನ್ನ ತಾಯಿ ಸತ್ತಿದ್ದಾಳೆ, ನನ್ನ ತಾಯಿ ಸತ್ತಿದ್ದಾಳೆ," ಎಂದು ದುಃಖಮಿಶ್ರಿತ ಸ್ವರದಿಂದ ಹಾಡುತ್ತಿದ್ದಳು.

ಆಗಲೇ ಅಕಸ್ಮಾತ್ತಾಗಿ ತೆನಾರ್ಡಿಯರರ ಮಕ್ಕಳ ಮರದ ಗೊಂಬೆಯನ್ನು ಕೋಸೆಟ್ಟಿ ಕಂಡಳು. ಅದರೊಂದಿಗೆ ತಾನು ಆಡಬೇಕೆಂದು ಅವಳಿಗೆ ತೋರಿತು. ಆ ಗೊಂಬೆ ಅವಳ ಚೂರಿಗಿಂತ ಎಷ್ಟೆಷ್ಟೋ ಚಂದವಾಗಿತ್ತು. ಆಕರ್ಷಣೀಯವಾಗಿತ್ತು. ಗೊಂಬೆಗಳನ್ನು ಮಕ್ಕಳೆಂದು ಪ್ರೀತಿಸಿ, ಸ್ನಾನಮಾಡಿಸಿ, ಮಲಗಿಸಿ, ಹಾಡಿ ತೂಗಾಡಿಸಿ, ನಿದ್ರೆಮಾಡಿಸಿ ಎಚ್ಚೆತ್ತಂತೆ ಗ್ರಹಿಸಿ ಅಲಂಕರಿಸಿ ಆಟವಾಡುವ ಹಂಬಲ ಎಲ್ಲ ಹೆಣ್ಣು ಮಕ್ಕಳಿಗೂ ಸ್ವಾಭಾವಿಕವಾಗಿಯೇ ಇರುತ್ತದೆ. ಮಕ್ಕಳಿಲ್ಲದ ಸ್ತ್ರೀಯ ದುಃಖದಂತೆಯೇ ಗೊಂಬೆಯಿಲ್ಲದ ಬಾಲಕಿಯ ದುಃಖ. ಆ ಬಾಲಕಿಯರು ಹೆರುವ ಪ್ರಥಮ ಶಿಶು ಅವರು ಬಾಲ್ಯದಲ್ಲಿ ಗೊಂಬೆಯೆಂದು ಆಟವಾಡಿಸಿದ ಮಗುವೇ ಎಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಒಂದು ಬದಿಯಲ್ಲಿದ್ದ ಆ ಮರದ ಗೊಂಬೆಯನ್ನು ಕೋಸೆಟ್ಟಿ ತನ್ನದಾಗಿ ಮಾಡಿಕೊಳ್ಳದೆ ನಿರ್ವಾಹ ತೋರಲಿಲ್ಲ. ಕೋಸೆಟ್ಟಿ ಮೆಲ್ಲಮೆಲ್ಲನೆ ಹೋಗಿ ಮರದ ಗೊಂಬೆಯನ್ನು ತಂದು, ತನ್ನ ಚಿಂದಿಲಂಗದ ತುದಿಯನ್ನು ಅದಕ್ಕೆ ಹೊದೆಸಿ, ತೂಗಾಡಿಸುತ್ತ ಸಂತೋಷಪಡತೊಡಗಿದಳು. ಕೋಸೆಟ್ಟಿಯ ಆನಂದ ತಲ್ಲೀನತೆಯು ಎಪೊನಿನ್, ಅಸೆಲ್ಮರ ದೃಷ್ಟಿಯನ್ನು ಆ ಕಡೆ ಸರಿಯುವಂತೆ ಮಾಡಿತು. ಆ ಮಕ್ಕಳು ತಮ್ಮ ಗೊಂಬೆಯನ್ನು ಕೋಸೆಟ್ಟಿ ಹಿಡಿದುಕೊಂಡಿರುವ ಸಂಗತಿಯನ್ನು ತಾಯಿಗೆ ತಿಳಿಸಿದರು. ಅವಳು ಸಾಧಾರಣ ಓಡುತ್ತಲೇ ಬಂದಳು.

ತೆನಾರ್ಡಿಯರಿಣಿಗೆ ಮೊದಲು ಆದದ್ದು ಪರಮಾಶ್ಚರ್ಯ—ಹೀಗೂ ಆಗಬಹುದೇ ಎಂದು! ಅನಂತರ ಬಂದದ್ದು ಕೋಪ, ದುಃಖ, ಮಾತ್ಸರ್ಯ, ಪ್ರತಿಷ್ಠಾಭಂಗ. ಅವಳ ಪ್ರತಿಷ್ಠಾಭಂಗ ಎಷ್ಟೆಂದು ವರ್ಣಿಸುವುದೇ ಅಸಾಧ್ಯ. ರಶ್ಯದ ರಾಜಮುಕುಟವನ್ನು ಭಿಕ್ಷುಕನೊಬ್ಬ ತನ್ನ ತಲೆಯಲ್ಲಿ ಇಟ್ಟು ಆನಂದಿಸುವುದನ್ನು ರಾಜಮಾತೆ ಕಂಡಿದ್ದರೆ ಅವಳಿಗೆ ಆಗಬಹುದಾಗಿದ್ದಷ್ಟು ಪ್ರತಿಷ್ಠಾ

ಭಂಗ, ಅಪಮಾನ, ಕೋಪಕ್ಕಿಂತ ಹೆಚ್ಚು ಈ ನೀಚಕುಲೋತ್ಪನ್ನ ಕೋಸೆಟ್ಟಿ ತನ್ನ ಮಕ್ಕಳ ಗೊಂಬೆಯನ್ನು ಹಿಡಿದುಕೊಂಡಿದ್ದುದರಲ್ಲಿ ತೆನಾರ್ಡಿಯರಿಣೆಗೆ ಆಗಿತ್ತು! "ಕೋಸೆಟ್ಟೀ !" ಎಂದು ಅವಳು ಆರ್ಭಟಿಸಿದುದರಲ್ಲೇ ಅವಳ ವಿಶಿಷ್ಟ ಭಾವನೆಯೂ ಅಡಕವಾಗಿದ್ದುವು. ಕೋಸೆಟ್ಟಿ ಅರೆಜೀವದಿಂದ "ಏನಮ್ಮಾ," ಅಂದಳು.

"ಇಡು ಕೆಳಗೆ—ಅದು ಯಾರ ಗೊಂಬೆ ಎಂದು ಗೊತ್ತಿಲ್ಲವೆ ?" ಎಂದು ಗದರಿಸಿದಳು. ಕೋಸೆಟ್ಟಿ ಗೊಂಬೆಯನ್ನು ಮೊದಲಿದ್ದಲ್ಲೇ ಇಟ್ಟು ತನ್ನ ಜಾಗದಲ್ಲೇ ಕುಳಿತಳು. ಆಗಂತುಕ ಇದನ್ನೆಲ್ಲ ಕಂಡು ದುಃಖಿಗೊಂಡು, "ಅವಳು ಚಿಕ್ಕವಳಲ್ಲವೇ, ತಾಯೀ," ಎಂದಂದುಬಿಟ್ಟ.

"ಆ ಪಾಪಿ ಅವಳ ಕೊಳಕು ಕೈಯಿಂದ ನನ್ನ ಮಕ್ಕಳ ಗೊಂಬೆಯನ್ನು ಮುಟ್ಟುವುದೆಂದರೆ ಏನು?" ಎಂದು ಹೇಳಿಕೊಂಡಳು ತೆನಾರ್ಡಿಯರಿಣಿ.

ಆಗಂತುಕ ಹೊಟೇಲಿಗೆ ಬರುವ ಮೊದಲು ಗೊಂಬೆ ಅಂಗಡಿಯ ಚಂದದ ಗೊಂಬೆಯನ್ನು ನೋಡಿದ್ದ. ಅವನು ಅಲ್ಲಿಗೆ ಹೋಗಿ ಅದನ್ನು ತಂದು ಕೋಸೆಟ್ಟಿಗೆ ಆಡಲು ಕೊಟ್ಟ. ಕೋಸೆಟ್ಟಿ ಗೊಂಬೆಯನ್ನು ಕಂಡು ಮೊದಲು ಗಾಬರಿಗೊಂಡಳು. ಅನಂತರ ಆಶ್ಚರ್ಯಗೊಂಡಳು. ಆಗಂತುಕನ ಮಾತುಗಳೇ ಅವಳಿಗೆ ಅರ್ಥವಾಗಲಿಲ್ಲ. ಆಗಂತುಕ ಪುನಃ ಪುನಃ ಆ ಗೊಂಬೆಯು ಕೋಸೆಟ್ಟಿಯದೇ ಎಂದು ಹೇಳುತ್ತ, ಅವಳು ಅದನ್ನು ತೆಗೆದುಕೊಂಡು ಆಟವಾಡಬಹುದೆಂದೂ ಹೇಳಿದ. ಕೊನೆಗೆ ಆ ಮಾತಿನ ಅರ್ಥ ಅವಳಿಗೆ ಆಗಿದ್ದರೂ ತಾನು ಗೊಂಬೆಯನ್ನು ತೆಗೆದುಕೊಂಡರೆ ಯಜಮಾನಿ ಒಪ್ಪುವಳೋ, ಕೋಪಿಸುವಳೋ ಎಂದು ಹೆದರತೊಡಗಿದಳು. ಕೊನೆಗೆ ಯಜಮಾನಿ ಒಪ್ಪಿದ ಮೇಲೆ ಬೊಂಬೆಯನ್ನು ಹಿಡಿದುಕೊಂಡು ಆಡತೊಡಗಿದಳು. ಯಜಮಾನಿ ಅಂಥ ಒಪ್ಪಿಗೆಯನ್ನಿತ್ತದ್ದೂ ಮಾತ್ಸರ್ಯದಿಂದಲೇ ಆಗಿತ್ತು. ಆಗಂತುಕ ಶ್ರೀಮಂತನಿರಬೇಕೆಂಬ ಅವಳ ಊಹೆಯೇ ಮಾತ್ಸರ್ಯವನ್ನು ಅಡಗಿಸಿ, ಒಪ್ಪಿಗೆಯನ್ನು ಬಹಿರಂಗವಾಗಿ ಕೊಡಿಸಿತ್ತು.

ತೆನಾರ್ಡಿಯರ್ ಎಲ್ಲವನ್ನೂ ನೋಡುತ್ತಿದ್ದ. ಅವನ ಹೀನ ಮತ್ತು ದುಷ್ಟಚಟಗಳೆಲ್ಲ ಅವನಲ್ಲಿ ಎದ್ದು ನಲಿಯತೊಡಗಿದುವು. ನಾಯಿ ತನ್ನ ಕೊಳ್ಳೆಯ ಸುಳಿವನ್ನು ಮೂಸಿ ಪರೀಕ್ಷಿಸುವಂತೆ, ತೆನಾರ್ಡಿಯರ್ ಕೆಲಸವಿದ್ದವನಂತೆ ಅತ್ತಿತ್ತ ತಿರುಗಾಡುತ್ತ ಆಗಂತುಕನ ಕುರಿತಾಗಿ ತುಂಬ ಆಲೋಚಿಸತೊಡಗಿದ. ಕೊನೆಗೆ ಒಂದು ನಿರ್ಧಾರಕ್ಕೆ ಬಂದು, ತನ್ನ ಹೆಂಡತಿಯನ್ನು ಕರೆದು ಗುಟ್ಟಾಗಿ, "ಎಚ್ಚರ, ಈತನ ಪಾದಧೂಳಿಯನ್ನಾದರೂ ನೆಕ್ಕಲು ತಯಾರಿರಬೇಕು. ಪ್ರಕೃತ ನಮ್ಮ ಮಾರ್ಗ ಅದು. ಅವನೊಬ್ಬ ಲಕ್ಷಾಧಿಪತಿ," ಅಂದ.

ಕೊನೆಗೆ ತೆನಾರ್ಡಿಯರ್ ಸ್ವತಃ ಬಂದು ಆಗಂತುಕನನ್ನು ಮಲಗಲು ತಯಾರಿಸಿದ ಉಚ್ಚ ತರದ ಕೊಠಡಿಗೆ ಕರೆದುಕೊಂಡು ಹೋಗಿ ಅವನು ಅಲ್ಲಿ ಮಲಗಬಹುದೆಂದು ಅತಿ ವಿನಯದಿಂದ ಬಿನ್ನೈಸಿಕೊಂಡ. ಮಂಚ, ಹಾಸಿಗೆ, ಸೋಫಾ, ಮೇಜು, ಕುರ್ಚಿ, ತುಂಬ ಬೆಳಕು ಇದ್ದ ಆ ಸ್ಥಳ ಬೇಡವೆಂದು ಆಗಂತುಕ ಹೇಳಿದರೂ ಕೇಳಿಸದವನಂತೆ ನಟಿಸುತ್ತ, ಇಂದಿನ ರಾಜವೈಭವದ ಶಯ್ಯಾಗೃಹದ ಬಾಡಿಗೆಯನ್ನು ಮರುದಿನ ರಾಜರೀತಿಯಿಂದ ವಸೂಲ್ಮಾಡುವುದಾಗಿ ಆಲೋಚಿಸುತ್ತ ತೆನಾರ್ಡಿಯರ್ ಆಗಂತುಕನನ್ನು ಅಲ್ಲೇ ಬಿಟ್ಟು ಹೊರಗೆ ಹೋದ.

ಕ್ರಿಸ್‌ಮಸ್ ದಿನಗಳಲ್ಲಿ ಚಿಕ್ಕ ಬಾಲಕಬಾಲಕಿಯರು ರಾತ್ರಿ ಮಲಗುವ ಮೊದಲು ಬಿಚ್ಚಿಟ್ಟ ಪಾದರಕ್ಷೆಗಳಲ್ಲಿ ದೇವದೂತರು ಮಕ್ಕಳ ಯೋಗ್ಯತಾನುಸಾರ ಪುರಸ್ಕಾರಗಳನ್ನು ಹಣ, ಅಥವಾ ವಿಶೇಷ ವಸ್ತುಗಳ ರೂಪದಲ್ಲಿ ಕೊಡುವ ಕ್ರಮವಿದೆಯಷ್ಟೆ. ಈ ನಿರೀಕ್ಷಣೆಯಿಂದ ಎಪೊನಿನ್, ಅಸೆಲ್ಮ, ಕೋಸೆಟ್ಟಿಯರು ತಂತಮ್ಮ ಪಾದರಕ್ಷೆಗಳನ್ನು ಆ ರಾತ್ರಿ ತಮ್ಮ ಗುಟ್ಟಿನ ಸ್ಥಳಗಳಲ್ಲಿಟ್ಟು

ಮಲಗಿದ್ದರು. ಕೋಸೆಟ್ಟಿ ಆಗಂತುಕನ ಶಯ್ಯಾಗೃಹದ ಹೊರಬದಿ, ಏಣಿಯ ಅಡಿಯಲ್ಲಿ ಮಲಗಿ ನಿದ್ರಿಸುತ್ತಿದ್ದಳು. ಆಗಂತುಕ ರಾತ್ರಿ ಕಳೆದ ಹಾಗೆ ಮೆಲ್ಲಗೆ ಎದ್ದು, ಕೋಸೆಟ್ಟಿ ಮಲಗಿದ್ದಲ್ಲಿಗೆ ಹೋಗಿ, ಅವಳ ಮರದ ಪಾದರಕ್ಷೆಗಳೆರಡರಲ್ಲೂ ಒಂದೊಂದು ಚಿನ್ನದ ನಾಣ್ಯ ಇಟ್ಟು ಮಲಗಿದ.

೮. ತೆನಾರ್ಡಿಯರನ ಲೆಕ್ಕ

ತೆನಾರ್ಡಿಯರ್ ಸೂರ್ಯೋದಯಕ್ಕೆ ಮೊದಲೇ ಎದ್ದು, ಮೇಜದ ಬಳಿ ಕುಳಿತು, ಅನೇಕ ಸರ್ತಿ ಬರೆದು, ಉಜ್ಜಿ, ಪುನಃ ಬರೆದು ಒಂದು ಹಣ ವಸೂಲಿ ಪಟ್ಟಿ ತಯಾರಿಸಿದ. ಊಟ, ಹಾಸಿಗೆ, ದೀಪ, ಬೆಂಕಿ, ಉಸ್ತುವಾರಿ ಎಂಬ ವಿವಿಧ ಬಾಬುಗಳಿಗೆ ಒಟ್ಟಾಗಿ ಇಪ್ಪತ್ತಮೂರು ಫ್ರ್ಯಾಂಕ್ ಬರತಕ್ಕದ್ದೆಂದು ಪಟ್ಟಿಯಲ್ಲಿತ್ತು. ಈ ಪಟ್ಟಿಯನ್ನು ತಾನೇ ಕೊಟ್ಟರೆ ಮುಂದೆ ಏನಾದರೂ ಸಂದರ್ಭ ಸಿಕ್ಕಿದರೂ ವಸೂಲಿ ಹಣವನ್ನು ಏರಿಸಲು ತೊಂದರೆಯಾಗುವುದೆಂದು ಯೋಚಿಸಿ ಅದನ್ನು ಹೆಂಡತಿಯ ಕೈಯಲ್ಲಿ ಕಳುಹಿಸಿಕೊಟ್ಟ.

ಆಗಂತುಕ ಬಲು ಬೆಳಗ್ಗೆ ಎದ್ದು, ತನ್ನ ಕೈಚೀಲ ದೊಣ್ಣೆ ಸಮೇತವಾಗಿ ಶಯ್ಯಾಗೃಹದಿಂದ ಹೊರಗೆ ಬಂದ. ತೆನಾರ್ಡಿಯರಿಣಿ ಅವನನ್ನು ಕಂಡೊಡನೆ ಪ್ರಾಸ್ತಾವಿಕವಾಗಿ, "ನೀವೇನು ಇಷ್ಟು ಬೆಳಗ್ಗೆ ಹೊರಟಿರಿ?" ಅಂದಳು.

"ನಾನು ಮುಂದೆ ಹೋಗತಕ್ಕವ. ರಾತ್ರಿಯಾಗಿದ್ದುದರಿಂದ ನಿನ್ನೆ ಇಲ್ಲಿಗೆ ಬಂದೆ. ನನ್ನಿಂದ ಸಲ್ಲಬೇಕಾದ ಹಣವೆಷ್ಟು?"

ತೆನಾರ್ಡಿಯರಿಣಿ ಅವಳ ಕೈಯಲ್ಲಿದ್ದ ಬಿಲ್ಲನ್ನು ಕೊಟ್ಟಳು. ಪ್ರಯಾಣಿಕ ಅದನ್ನು ಕೈಯಲ್ಲಿ ಹಿಡಿದುಕೊಂಡು, ಮರ್ಯಾದೆಯಾಗಿ ಎರಡು ಮಾತಾಡುವ ಉದ್ದೇಶದಿಂದ, "ಈ ಸ್ಥಳದಲ್ಲಿ ನಿಮ್ಮ ವ್ಯಾಪಾರ ಚೆನ್ನಾಗಿ ನಡೆಯುತ್ತಿದೆಯೇನು?" ಎಂದು ಕೇಳಿದ.

"ಏನು ವ್ಯಾಪಾರ ಈ ಹಾಳೂರಲ್ಲಿ! ಈಗೀಗ ನಮ್ಮ ಜೀವನ ನಡೆಸುವುದೇ ಕಷ್ಟವಾಗಿದೆ—ಈ ಲೈಸೆನ್ಸ್ ಫೀ, ಸುಂಕ, ಟ್ಯಾಕ್ಸ್, ಇವೆಲ್ಲ ನಮ್ಮ ಉತ್ಪತ್ತಿಯ ಅಧಿಕಭಾಗವನ್ನು ತಿಂದುಬಿಡುವುವು. ಇವುಗಳ ಜೊತೆಗೆ ಈ ಹುಡುಗಿಯೊಬ್ಬಳನ್ನೂ ಸಾಕಬೇಕು. ತಮ್ಮಂಥವರು ಕೆಲವರಾದರೂ ಇಲ್ಲಿಗೆ ಆಗಿಂದಾಗ್ಗೆ ಬರುವುದೇ ನಮ್ಮ ಭಾಗ್ಯ," ಅಂದಳು.

ಇದಕ್ಕೆ ಉತ್ತರವಾಗಿ, ಏನೂ ಅರ್ಥವಾಗದವನಂತೆ ಪ್ರಯಾಣಿಕ ಕೇಳಿದ, " 'ಹುಡುಗಿ' ಅಂದಿರಲ್ಲ ಯಾವ ಹುಡುಗಿ?"

"ಅವಳು, ಅನಾಥೆ ಎಂದು ನಿನ್ನೆ ಹೇಳಿದೆನಲ್ಲ, ಅವಳು—ಕೋಸೆಟ್ಟಿ. ನಾವು ಇತರರಿಂದ ಧರ್ಮ ಸಹಾಯ ಬೇಡುವವರಲ್ಲವಾದರೂ ಧರ್ಮಸಹಾಯವನ್ನು ನೀಡುವಷ್ಟು ಧನಿಕರೂ ನಾವಲ್ಲ. ಅವಳನ್ನು ಸಾಕುವುದು ಸುಲಭದ ಕೆಲಸವಲ್ಲ."

ಅಪರಿಚಿತ ವಿಶೇಷ ಗಮನ ಕೊಡದವನಂತೆ, ಅಥವಾ ತನ್ನ ಮಾತಿನ ಕುರಿತು ವಿಶೇಷ ಆಸಕ್ತನಾಗಿರದವನಂತೆ, "ಕೋಸೆಟ್ಟಿ ನಿಮಗೆ ಬೇಡದಿದ್ದರೆ ನಮಗಿರಲಿ. ನಿಮಗೆ ಸಮಾಧಾನ ವಿದ್ದರೆ ನಾನು ಕರೆದುಕೊಂಡು ಹೋಗುವೆನು," ಅಂದ.

"ಅದಕ್ಕೇನಡ್ಡಿ, ಅವಳನ್ನು ಬೇಕಾದರೆ ಈಗಲೇ ಕರೆದುಕೊಂಡು ಹೋಗಿ. ಅವಳನ್ನು ಅಲಂಕರಿಸಿ, ಹಾಲು, ತುಪ್ಪ, ಸಕ್ಕರೆ ಅಭಿಷೇಕವನ್ನೇ ನೀವು ಮಾಡಿಸುವುದಕ್ಕೆ ನಮ್ಮ ಅಡ್ಡಿಯಿಲ್ಲ. ಅವಳು ಇಲ್ಲಿಂದ ಹೋದರೆ ನಮಗೆ ಅನುಕೂಲ. ಅವಳನ್ನು ಈಗಲೇ ಕರೆತರಲೇ?" ಎಂದು ತೆನಾ

ರ್ಡಿಯರಿಣಿ ಉತ್ಸಾಹದಿಂದ ಕೇಳಿದಳು.

ಅಪರಿಚಿತ ಇಪ್ಪತ್ತಮೂರು ಫ್ರ್ಯಾಂಕ್ ಹಣವನ್ನು ತಾನು ಕೊಡಬೇಕೆಂದು ಬರೆದಿದ್ದ ಚೀಟಿಯನ್ನು ನೋಡಿ, ಒಮ್ಮೆ ಸ್ವಲ್ಪ ಗಾಬರಿಗೊಂಡು, ತೆನಾರ್ಡಿಯರಿಣಿ ಇಪ್ಪತ್ತೈದು ಫ್ರ್ಯಾಂಕ್ ಹಣಕೊಟ್ಟ.

ಅವಳು ಕೋಸೆಟ್ಟೆಯನ್ನು ಕರೆತರಲು ಹೋದಾಗಲೇ ಆ ವರೆಗೆ ಮರೆಯಲ್ಲಿದ್ದು ಮಾತು ಆಲಿಸುತ್ತಿದ್ದ ತೆನಾರ್ಡಿಯರ್ ಎದುರು ಬಂದ. ಅವನು ಗಂಭೀರವಾಗಿ ಬಂದು, ಪ್ರಯಾಣಿಕನಿಗೆ ಒಂದು ಕುರ್ಚಿ ಕೊಟ್ಟು, ಕೂರುವಂತೆ ಹೇಳಿ, ತಾನು ಮತ್ತೊಂದು ಕುರ್ಚಿಯಲ್ಲಿ ಕುಳಿತು ಮಾತಾಡತೊಡಗಿದ. "ಸರ್, ಬೇಸರ ಪಡಬೇಡಿ. ನಿನ್ನೆಯ ಬಿಲ್ ಇಪ್ಪತ್ತಮೂರು ಫ್ರ್ಯಾಂಕಿಗೆ ಮಾತ್ರವಿದೆ. ಇನ್ನು ಮಲಗುವ ಕೋಣೆ ಬಾಡಿಗೆ, ಮತ್ತು ಚಿಲ್ಲರೆ ಖರ್ಚು ಸೇರಿ, ತಮ್ಮಿಂದ ಇನ್ನೂ ಇಪ್ಪತ್ತಾರು ಸೌ ಬರಲು ಬಾಕಿಯಿದೆ. ಮತ್ತು ನನ್ನ ಹೆಂಡತಿ ಪ್ರಸ್ತಾವಿಸಿದಳಲ್ಲ, ಕೋಸೆಟ್ಟೆಯನ್ನು ತಮಗೆ ಒಪ್ಪಿಸುವ ವಿಷಯ ಅದಕ್ಕೆ ನಾನು ತಯಾರಿಲ್ಲ."

"ಯಾವ ಹುಡುಗಿ?" ಎಂದು ಪ್ರಯಾಣಿಕ ಏನೂ ಅರಿಯದವನಂತೆ ಹಗುರವಾಗಿಯೇ ಕೇಳಿದ.

"ಯಾವ ಹುಡುಗಿ! ಆ ಕೋಸೆಟ್ಟೆ. ಅವಳನ್ನು ಚಿಕ್ಕಂದಿನಿಂದಲೇ ಸಾಕಿ ಸಲಹಿದವರು ನಾವು. ಅವಳ ಒಂದು ಖಾಯಿಲೆಯಲ್ಲೇ ನಮಗೆ ನೂರು ಫ್ರ್ಯಾಂಕ್ ಹಣ ಖರ್ಚಾಗಿದೆ. ನೋಡಿ, ಅದನ್ನೆಲ್ಲ ಪ್ರೀತಿಯಿಂದ ಮಾಡಿರುವೆವು. ಪ್ರೀತಿಯೆಂಬುದು ಸಹ ನಾವು ಬೆಳೆಸಿದಂತೆ ಬೆಳೆಯುತ್ತದೆ. ಇಂದು ಅವಳು ಹೋಗುವ ಸ್ಥಳದ ಹೆಸರು, ತಮ್ಮ ಪರಿಚಯ, ಯಾವುದನ್ನೂ ಗೊತ್ತು ಮಾಡಿಕೊಳ್ಳದೆ—ಮತ್ತು, ನಾವು ಪ್ರೀತಿಯಿಂದ ಸಾಕಿದವಳನ್ನು ಒಮ್ಮೆ ನೋಡಿಬರಬೇಕೆಂದು ತೋರಿದಾಗ ಹೋಗಿಬರಲು ತಕ್ಕ ವ್ಯವಸ್ಥೆಗಳನ್ನು ಮಾಡಿಕೊಳ್ಳದೆ—ನಾನವಳನ್ನು ಬಿಟ್ಟುಕೊಡಲಾರೆ," ಎಂದು ತೆನಾರ್ಡಿಯರ್ ಕೋಸೆಟ್ಟೆಯ ಮೇಲಿನ ಮಮತೆಯಿಂದಲೇ ನುಡಿದವನಂತೆ ಮಾತಾಡಿದ.

ಆಗಂತುಕ ನಿರುದ್ವಿಗ್ನನಾಗಿಯೇ ಇದ್ದ. ಅವನು ಬಲು ಶಾಂತವಾಗಿ, ಗಂಭೀರತೆಯಿಂದ, ತನ್ನ ಆಖೈರು ನಿರ್ಧಾರವನ್ನೇ ತಿಳಿಸುವವನಂತೆ ಅತಿ ಸ್ಪಷ್ಟತೆಯಿಂದ ನುಡಿದ. "ಪರಿಚಯ, ಹೆಸರು, ವಿಳಾಸ, ಮುಂದಿನ ವ್ಯವಸ್ಥೆ ಇವೆಲ್ಲ ಅನಾವಶ್ಯಕ ಮಾತುಗಳು. ಅನಾಥಬಾಲಿಕೆಯನ್ನು ಸಾಕುವ ಜವಾಬ್ದಾರಿಯನ್ನು ನೀವು ಹೊತ್ತಂತೆ ನಾನೂ ಹೊರಬಲ್ಲೆ. ನಿಮಗೆ ಮನಸ್ಸಿದ್ದರೆ ಅವಳನ್ನು ಒಪ್ಪಿಸಿಕೊಡಿ. ಇಲ್ಲದಿದ್ದರೆ ನನ್ನ ದಾರಿಯಲ್ಲಿ ನಾನು ಹೋಗುವೆನು."

"ವಿಶೇಷ ಚರ್ಚೆ ಉಭಯತ್ರರಿಗೂ ಅನಾವಶ್ಯಕ. ನನಗೆ ಒಂದೂವರೆ ಸಾವಿರ ಫ್ರ್ಯಾಂಕ್ ಹಣ ಕೊಟ್ಟರೆ ಕೋಸೆಟ್ಟೆಯನ್ನು ಬಿಟ್ಟುಕೊಡಬಹುದು, ಇಲ್ಲದಿದ್ದರೆ ಅಸಾಧ್ಯ," ಅಂದ ತೆನಾರ್ಡಿಯರ್.

ಪ್ರಯಾಣಿಕನೂ ಅಷ್ಟೇ ಸ್ಪಷ್ಟವಾಗಿ ಮಾತಾಡುತ್ತ, ಆ ಮೊತ್ತದ ನೋಟನ್ನು ತೆಗೆದು ತೋರಿಸಿ, "ಕೋಸೆಟ್ಟೆಯನ್ನು ತಂದೊಪ್ಪಿಸಿ ಈ ಹಣ ತೆಗೆದುಕೊಳ್ಳಿ," ಅಂದ.

ಈ ಮಾತುಗಳು ಹೋಟೇಲಿನ ಮುಖ್ಯ ಕೋಣೆಯಲ್ಲಿ ನಡೆಯುತ್ತಿದ್ದಾಗಲೇ ಎಪೊನಿನ್ ಮತ್ತು ಅಸೆಲ್ಮರು ತಂತಮ್ಮ ಬೂಟ್ಸುಗಳಲ್ಲಿ ಸಿಕ್ಕಿದ ಬೆಳ್ಳಿ ನಾಣ್ಯಗಳನ್ನು ನೋಡಿ ಸಂತೋಷಪಡುತ್ತಿದ್ದರು. ಕೋಸೆಟ್ಟೆಯೂ ತನಗೆ ಸಿಕ್ಕಿದ ಚಿನ್ನದ ನಾಣ್ಯಗಳನ್ನು ನೋಡಿ ಹಿಗ್ಗುತ್ತಿದ್ದಳು. ತೆನಾರ್ಡಿಯರಿಣಿ ಸ್ವಲ್ಪ ಹೊತ್ತಿನಲ್ಲೇ ಕೋಸೆಟ್ಟೆಯನ್ನು ಕರೆತಂದು ಪ್ರಯಾಣಿಕನ ಎದುರು ನಿಲ್ಲಿಸಿದಳು. ತೆನಾರ್ಡಿಯರ್ ಹಣ ತೆಗೆದುಕೊಂಡು ಕೋಸೆಟ್ಟೆಯನ್ನು ಬಿಟ್ಟುಕೊಟ್ಟ.

ಆ ದಿನ ಬೆಳಗ್ಗೆ ಮೊಂಟ್‌ಫರ್ಮಿಯಲಿನಲ್ಲಿಯ ರಾಜರಸ್ತೆಯಲ್ಲಿ ಈ ಪ್ರಯಾಣಿಕ, ಬಲಗೈಯಲ್ಲಿ ದೊಣ್ಣೆ ಮತ್ತು ಚೀಲ ಹಿಡಿದುಕೊಂಡು, ಎಡಗೈಯಲ್ಲಿ ಕೋಸೆಟ್ಟಿಯ ಕೈ ಹಿಡಿದುಕೊಂಡು ಮೆಲ್ಲಗೆ ನಡೆದುಹೋಗುತ್ತಿದ್ದ. ಪ್ರಯಾಣಿಕ ತನ್ನ ಚೀಲದಲ್ಲೇ ತಂದಿದ್ದ ಶೋಕವಸನ ಕ್ರಮದ ಕರಿದುಸ್ತನ್ನು ಕೋಸೆಟ್ಟಿಗೆ ತೊಡಿಸಿದ್ದ. ಅವಳ ಕೈಯಲ್ಲಿ ದೊಡ್ಡ ಗೊಂಬೆಯೂ ಇತ್ತು.

ತೆನಾರ್ಡಿಯರನ ಹೊಟೇಲ್ ವಾತಾವರಣದಿಂದ ದೂರ ಸಾಗಿದ ಹಾಗೆಯೇ ಕೋಸೆಟ್ಟಿ ತನ್ನ ಪುಟ್ಟ ನಯನಗಳಿಂದ ವಿಶಾಲ ಆಕಾಶವನ್ನೂ, ತನ್ನ ಕಿಸೆಯೊಳಗಿದ್ದ ಚಿನ್ನದ ನಾಣ್ಯಗಳನ್ನೂ ತನ್ನನ್ನು ನಡೆಸಿಕೊಂಡು ಹೋಗುತ್ತಿದ್ದ ತನ್ನ ಭಾಗ್ಯವಿಧಾತನ ಮುಖವನ್ನೂ ಆಗಿಂದಾಗ್ಗೆ ನೋಡುತ್ತ, ಅಂತರಂಗದಲ್ಲಿ ತೋರಿಬರುತ್ತಿದ್ದ ಸ್ವಾತಂತ್ರ್ಯ ಜೀವನದ ವೈಶಾಲ್ಯವನ್ನು ಗ್ರಹಿಸುತ್ತ ಹರ್ಷಿಸುತ್ತಿದ್ದಳು. ಆ ಚಿನ್ನದ ನಾಣ್ಯಗಳಿಗೂ ತನ್ನನ್ನು ನಡೆಸಿಕೊಂಡು ಹೋಗುತ್ತಿದ್ದವನಿಗೂ ಸಂಬಂಧವಿರಬೇಕೆಂದು ಅವಳ ಅಂತರಂಗ ಹೇಳುತ್ತಿತ್ತು; ಈ ಅಂತರಂಗಾನುಭವವೂ ಅವಳನ್ನು ಮುದಗೊಳಿಸಿತ್ತು.

೯. ತೆನಾರ್ಡಿಯರ್ ಬೇಸ್ತುಬಿದ್ದ

ತನ್ನ ಪತಿಯ ಸಾಮರ್ಥ್ಯವನ್ನರಿತಿದ್ದ ತೆನಾರ್ಡಿಯರಿಣಿ ಸ್ವಲ್ಪ ಹೊತ್ತಿನಲ್ಲೇ ಪತಿಯ ಎದುರು ಬಂದಳು. ತನ್ನ ಆ ದಿನದ ಸಂಪಾದನೆಯನ್ನು ಪತ್ನಿಗೆ ಪ್ರದರ್ಶಿಸಬೇಕೆಂದು ಹೆಮ್ಮೆಯಿಂದ ಕುಳಿತಿದ್ದ ತೆನಾರ್ಡಿಯರ್ ಆ ಒಂದುವರೆ ಸಾವಿರ ಫ್ರ್ಯಾಂಕಿನ ನೋಟುಗಳನ್ನು ತೋರಿಸಿದ. ಪತಿಯಲ್ಲಿ ಎಂದೂ ತಪ್ಪನ್ನು ಕಾಣದಿದ್ದ, ಅಥವಾ ಕಂಡಾಗಲೂ ಹೇಳಲು ಅಂಜುತ್ತಿದ್ದ ಪತ್ನಿ, ಈ ದಿನ ಮಾತ್ರ, ಹಣವನ್ನು ನೋಡಿ, “ಇಷ್ಟೇ ತಾನೆ!” ಅಂದು ಬಿಟ್ಟಳು.

ಈ ‘ಇಷ್ಟೇ ತಾನೆ’ ಎಂಬ ಶಬ್ದಗಳಲ್ಲಿ ಧ್ವನಿಯಾಗಿ ಅಡಗಿದ್ದ ‘ಇದಕ್ಕಿಂತ ಹೆಚ್ಚು ಸಂಪಾದಿಸಬಹುದಿತ್ತು’ ಎಂಬ ಅಭಿಪ್ರಾಯವನ್ನು ತೆನಾರ್ಡಿಯರ್ ಕೂಡಲೇ ತಿಳಿದ. ಆಗಂತುಕ ತನ್ನ ಸಾಂಪತ್ತಿಕ ಸ್ಥಿತಿಯನ್ನು ಸ್ವಲ್ಪ ಸ್ವಲ್ಪವಾಗಿ ತೋರಿಸಿದ್ದುದನ್ನು ನೆನೆನೆನೆದು, ತೆನಾರ್ಡಿಯರ್ ತನ್ನ ಮಂದ ಬುದ್ಧಿಗಾಗಿ ದುಃಖಪಟ್ಟ. ಕೊನೆಗೆ, “ನಾನೊಬ್ಬ ಕತ್ತೆಯೇ ಆಗಿಬಿಟ್ಟೆ,” ಎಂದು ಉದ್ಗಾರ ಎತ್ತಿದ.

ತೆನಾರ್ಡಿಯರನ ಆಲೋಚನೆಯೆಂದರೆ ಕಾರ್ಯವೇ ಆಗಿರುತ್ತಿತ್ತು. ಅವನು ಅಂಗಿಬಟ್ಟೆಗಳನ್ನು ಧರಿಸಿ, ರಸ್ತೆಗೆ ಇಳಿದು ಕೋಸೆಟ್ಟಿ ಹೋಗಿದ್ದ ದಿಶೆಯಲ್ಲೇ ಓಡಿದ. ಪ್ರಯಾಣಿಕ ಹೊಟೇಲ್ ಬಿಟ್ಟು ಹೊರಟು ಸ್ವಲ್ಪ ವೇಳೆ ಕಳೆದಿದ್ದುದರಿಂದ ಅವನನ್ನು ಹಿಡಿಯಲು ಸ್ವಲ್ಪ ಕಾಲ ಬೇಕಾಯಿತು. ಇತ್ತ, ಪ್ರಯಾಣಿಕನ ಜೊತೆಯಲ್ಲಿ ಕೋಸೆಟ್ಟಿಯೂ ಇದ್ದುದರಿಂದ ಅವರಿಬ್ಬರ ನಡಿಗೆ ಸ್ವಲ್ಪ ನಿಧಾನವಾಗಿಯೂ ಇತ್ತು.

ಒಂದೆರಡು ಮೈಲು ಹೋಗುವಾಗ್ಗೆ ತೆನಾರ್ಡಿಯರನಿಗೆ ಪ್ರಯಾಣಿಕನೂ ಕೋಸೆಟ್ಟಿಯೂ ಮರದ ನೆರಳಿನಲ್ಲಿ ವಿಶ್ರಮಿಸಿಕೊಂಡು ಕುಳಿತಿದ್ದುದು ಕಂಡಿತು. ತೆನಾರ್ಡಿಯರ್ ಆ ಪ್ರಯಾಣಿಕನ ಎದುರಿನಿಂದ ಹೋಗಬಾರದೆಂದು, ಮರೆಯಿಂದಲೇ ಹೋಗಿ, ಹಠಾತ್ತನೆ ಸಂಧಿಸಿದ. ಮರ್ಯಾದೆಯಿಂದಲೇ ಹೇಳಿದ, “ನೋಡಿ ಸರ್, ನಮ್ಮ ವಹಿವಾಟದಲ್ಲಿ ಸ್ವಲ್ಪ ಎಡವಟ್ಟಾಗಿದೆ. ನಿಮ್ಮ ಒಂದುವರೆ ಸಾವಿರ ಫ್ರ್ಯಾಂಕನ್ನು ಹಿಂದೆ ತೆಗೆದುಕೊಂಡು ಕೋಸೆಟ್ಟಿಯನ್ನು ದಯಮಾಡಿ ಬಿಟ್ಟುಕೊಡಿ.”

ಪ್ರಯಾಣಿಕ ತನ್ನ ಮುಖದಿಂದ ಯಾವ ಭಾವವನ್ನೂ ತೋರಿಸದೆ, ಅದಕ್ಕುತ್ತರವಾಗಿ, "ಬಿಟ್ಟುಕೊಡಬೇಕೇ? ಇದಕ್ಕರ್ಥವೇನು?" ಅಂದ.

"ಇದರ ಅರ್ಥ ಇಷ್ಟೇ. ಕೋಸೆಟ್ಟೆ ನನ್ನ ಮಗಳಲ್ಲ. ಅವಳ ತಾಯಿಯ ಪತ್ರವಿಲ್ಲದೆ ಅನ್ಯರ ವಶಕೊಡುವುದೂ ಸರಿಯಲ್ಲ, ಧರ್ಮವೂ ಅಲ್ಲ. ನನಗೆ ಯಾವಾಗಲೂ ಹಣಕ್ಕಿಂತ ಧರ್ಮವೇ ಮೇಲು. ಆದ್ದರಿಂದ ಕೋಸೆಟ್ಟೆಯನ್ನು ಬಿಟ್ಟುಕೊಡಿ."

ಪ್ರಯಾಣಿಕ ತನ್ನನ್ನು ಯಾರೂ ಹಿಂಬಾಲಿಸಿ ಬಂದಿಲ್ಲವೆಂದು ಹಿಂದೆಮುಂದೆ ನೋಡಿ ನಿಶ್ಚೈಸಿಕೊಂಡು ತನ್ನ ಕೈಚೀಲದ ಬಾಯಿ ತೆರೆದ. ಅದರೊಳಗಿರುವ ಬ್ಯಾಂಕ್ ನೋಟುಗಳ ಕಟ್ಟನ್ನು ಕಂಡು ತೆನಾರ್ಡಿಯರನಿಗೆ ರೋಮಾಂಚನವಾಯಿತು. ಪ್ರಯಾಣಿಕ ಮಾತ್ರ ಹಣ ಹೊರಗೆ ತೆಗೆಯಲಿಲ್ಲ. ಅದರ ಬದಲು ಒಂದು ಚಿಕ್ಕ ಕಾಗದದ ತುಂಡು ತೆಗೆದು ತೆನಾರ್ಡಿಯರನಿಗೆ ಕೊಡುತ್ತ, "ಇದನ್ನು ನೋಡಿ ಸಮಾಧಾನಪಟ್ಟುಕೊಳ್ಳಿ," ಅಂದ.

ಪತ್ರ ಫ್ಯಾಂಟೈನಳದಾಗಿತ್ತು. ಅದು ಹೀಗಿತ್ತು! "ಮಾನ್ಯರ್ ತೆನಾರ್ಡಿಯರ್ ಅವರಿಗೆ, ಈ ಪತ್ರ ತರುವವರ ವಶಕ್ಕೆ ನನ್ನ ಕೋಸೆಟ್ಟೆಯನ್ನು ದಯಮಾಡಿ ಬಿಟ್ಟುಕೊಡಿ. ಚಿಲ್ಲರೆ ಲೆಕ್ಕ ಸಲ್ಲುವುದಿದ್ದರೆ ಅವರೇ ಕೊಡುವರು.

ಫ್ಯಾಂಟೈನ್"

ತೆನಾರ್ಡಿಯರ್ ಸ್ತಂಭಿತನಾದ.

ಇದ್ದಕ್ಕಿದ್ದ ಹಾಗೆಯೇ ಆತ ಕಠಿಣಪರಿಸ್ಥಿತಿಗೆ ಬಂದ. ನಿರ್ದಾಕ್ಷಿಣ್ಯದಿಂದ, ಸ್ಪಷ್ಟವಾಗಿ, ಸ್ವಲ್ಪ ಗದರಿಸುವಂತೆಯೇ, ಹೇಳಿದ, "ಸರ್ ನೀವು ಯಾರೇ ಇರಬಹುದು, ಅದು ನನಗೆ ಸಂಬಂಧ ವಿಲ್ಲದ ವಿಚಾರ. ಮೂರು ಸಾವಿರ ಫ್ರ್ಯಾಂಕ್ ಹಣವನ್ನು ನೀವು ತತ್‌ಕ್ಷಣ ಕೊಡಬೇಕು; ಇಲ್ಲದಿದ್ದರೆ ನಾನು ಈಗಲೇ ಕೋಸೆಟ್ಟೆಯನ್ನು ಕರೆದುಕೊಂಡು ಹೋಗುವೆನು."

ಅಷ್ಟೇ ನಿಷ್ಠುರವಾಗಿ, ಸ್ಪಷ್ಟವಾಗಿ ಪ್ರಯಾಣಿಕ ಹೇಳಿದ, "ಯಾವ ಧರ್ಮವೆಂದು ನೀವು ಹೀಗೆ ಮಾತಾಡುತ್ತೀರಿ? ಫ್ಯಾಂಟೈನಳಿಗೂ ನಿಮಗೂ ಇರುವ ಲೆಕ್ಕಾಚಾರದಲ್ಲಿ ನಿಮಗೆ ಒಂದು ನೂರು ಫ್ರ್ಯಾಂಕ್ ಹಣ ಈ ಮೊದಲೇ ಹೆಚ್ಚಾಗಿ ಸಂದಿದೆ. ಈ ಒಂದುವರೆ ಸಾವಿರ ಫ್ರ್ಯಾಂಕು ನಿಮಗೆ ಕಾರಣವಿಲ್ಲದೆ ಸಿಕ್ಕಿದಹಣ." ಈ ಮಾತನ್ನು ಹೇಳುತ್ತ, ಕೋಸೆಟ್ಟೆಯ ಕೈಯನ್ನು ಹಿಡಿದುಕೊಂಡು ಎದ್ದುನಿಂತು, ತೆನಾರ್ಡಿಯರನನ್ನು ಬಿರಬಿರನೆ, ನೋಡಿ, ಪ್ರಯಾಣಿಕ ಸ್ಥಿರಗತಿಯಿಂದ ಮುಂದೆ ಸಾಗಿದ.

ಪ್ರಯಾಣಿಕನ ದೃಷ್ಟಿ, ದೇಹ, ಅವನ ದೊಣ್ಣೆ ಇವೆಲ್ಲವೂ ಅರ್ಥಗರ್ಭಿತವಾಗಿಯೇ ತೆನಾರ್ಡಿಯರನಿಗೆ ತೋರಿದುವು. ಇವನು ತನ್ನ ಅಶಕ್ತತೆಯನ್ನು ಸ್ಪಷ್ಟವಾಗಿ ಕಂಡುಕೊಂಡ. ತಾನು ಕೋವಿ ತರದಿದ್ದ ಒಂದೇ ಒಂದು ಅಚಾತುರ್ಯಕ್ಕಾಗಿ ದುಃಖಪಡುತ್ತ ತೆನಾರ್ಡಿಯರ್ ತನ್ನ ಹೊಟೇಲಿಗೆ ವಾಪಾಸಾದ.

ನಾಲ್ಕನೆಯ ಸಂಪುಟ

೧. ಗಾರ್ಬೂ ಕಟ್ಟಡ

ಈಗ್ಗೆ ನಲವತ್ತು ವರ್ಷಗಳ ಹಿಂದೆ ಯಾರಾದರೂ ಪ್ಯಾರಿಸ್ ನಗರದ ಸಾಲ್ಪ್ ಪೀಟರ್ ಪ್ರದೇಶಕ್ಕೆ ಹೋಗಿ ನೋಡಿದ್ದರೆ ಅಲ್ಲಿ ನಗರ ಹೇಗೆ ಕ್ರಮೇಣವಾಗಿ ನಿರ್ಜೀವವಾಗುತ್ತ, ಪ್ಯಾರಿಸಿನ

ತುಚ್ಛ, ಹೀನ ಹೊರವಲಯವಾಗುತ್ತ, ಕೊನೆಗೆ ನಗರವೇ ಮಾಯವಾಗಿತ್ತೆಂಬುದನ್ನು ಕಾಣಬಹುದಿತ್ತು. ಆ ಪ್ರದೇಶದಲ್ಲಿ—ಅದು ನಗರದ ಅಂಶವೇ ಆಗಿದ್ದರೂ—ಜನರ ಒತ್ತಡವಿರಲಿಲ್ಲ. ನಿರ್ಜನ ಪ್ರದೇಶವೆಂದೆನ್ನಿಸಿಕೊಳ್ಳಲು ತಕ್ಕುದಾಗಿತ್ತು. ಆದರೆ, ಅಂಥ ನಿರ್ಜನತೆಯನ್ನು ಸ್ಪಷ್ಟಪಡಿಸಲೋಸ್ಕರವೊ ಎಂಬಂತೆ ದೂರದೂರದಲ್ಲಿ ಕೆಲವು ಜನ ಅಲ್ಲಿ ವಾಸಿಸುತ್ತಿದ್ದರು. ಇದು ಪ್ಯಾರಿಸ್ ಅಲ್ಲ ನಿಜ, ಹಳ್ಳಿಯೂ ಅಲ್ಲ. ಅಲ್ಲಲ್ಲಿ ಕೆಲವು ಹಳೆಕಟ್ಟಡಗಳು ಕುಸಿದು ಬಿದ್ದು, ತಮ್ಮ ಗತಕಾಲದ ಭವ್ಯತೆಯನ್ನು ಸೂಚಿಸುತ್ತಿದ್ದುವು. ರಸ್ತೆಗಳಲ್ಲಿ ವಾಹನಸಂಚಾರವಿಲ್ಲದೆ ಹುಲ್ಲು, ಪಾಚಿ, ಗಿಡಗಳು ಬೆಳೆದಿದ್ದುವು. ಒಂದು ಕಾಲದಲ್ಲಿ ಹೂದೋಟವಾಗಿದ್ದ ಸ್ಥಳದಲ್ಲಿ ದೊಡ್ಡ ದೊಡ್ಡ ಮರಗಳು ಬೆಳೆದು, ಕೆಲವೆಡೆ ಸಮೀಪದ ಮನೆಗಳನ್ನೇ ಆವರಿಸಿ, ರಸ್ತೆಯ ಸಾಲುಮರಗಳಿಗಿಂತಲೂ ದೊಡ್ಡವಾಗಿ ಮೆರೆಯುತ್ತಿದ್ದುವು. ಇಲ್ಲಿ ಹಗಲೇ ದರೋಡೆ ನಡೆದರೆ, ಖೂನಿ ನಡೆದರೆ ನೋಡುವವರಿರಲಿಲ್ಲ, ಕೇಳುವವರಿರಲಿಲ್ಲ. ಅಲ್ಲಲ್ಲಿ ಪಾಶಿಕಂಬಗಳೂ ಕೆಲವು ವಿಧದ ತಪ್ಪಿತಸ್ಥರನ್ನು ಅವರು ಸಾಯುವವರೆಗೂ—ಅನಂತರ ಹದ್ದು ಕಾಗೆಗಳೂ ತಿಂದು ಮುಗಿಸುವ ವರೆಗೂ—ಕಬ್ಬಿಣದ ಸರಪಣಿಗಳಿಂದ ಬಂಧಿಸುವ ಶಿಲಾಸ್ತಂಭಗಳೂ ಇದ್ದುವು.

ಇಂಥ ಸ್ಥಳದಲ್ಲಿ 'ಗಾರ್ಬೊ ಕಟ್ಟಡ' ಎಂದು ಹೆಸರಿದ್ದ, ಮುನಿಸಿಪಲ್ ಸಂಖ್ಯೆ ೫೦-೫೨ರ, ಒಂದು ಕಟ್ಟಡವಿತ್ತು. ಜೀವನಕ್ಕೆ ಸ್ವಲ್ಪ ಅನುಕೂಲವಿದ್ದವರು ಯಾರೂ ಈ ಕಟ್ಟಡದಲ್ಲಿ ವಾಸಿಸುತ್ತಿರಲಿಲ್ಲ. ಕೇವಲ ದರಿದ್ರರೂ ಭಿಕ್ಷುಕರೂ ಅನಾಥರೂ ತಲೆತಪ್ಪಿಸಿಕೊಂಡು ಅಡಗಿ ಜೀವಿಸುವವರೂ ಇಲ್ಲಿ ನೆಲಸಿದ್ದರು. ಗಾರ್ಬೊ ಕಟ್ಟಡದ ಒಂದು ಕೊನೆಯ ರಸ್ತೆಯ ಕರೆಯಿಂದ ಪ್ರಾರಂಭವಾಗಿ, ಉದ್ದಕ್ಕೆ ಮುಂದೆ ಬೆಳೆದಿತ್ತು. ಈ ಕಟ್ಟಡದ ಕೆಳಭಾಗದಲ್ಲಿ ಅನೇಕ ಗೋದಾಮುಗಳೂ ಹಾಳುಬಿದ್ದ ಕಾರ್ಖಾನೆಗಳ ಅವಶೇಷಗಳೂ ಇದ್ದುವು. ಇದರ ಮೇಲ್ಭಾಗ ಹಲವಾರು ಕೋಣೆಗಳು ಇದ್ದ ಮಹಡಿ. ಅದಕ್ಕೆ ಏರಲು ಕಲ್ಲಿನ ಮೆಟ್ಟಲುಗಳು. ಮಹಡಿಯ ಉದ್ದಕ್ಕೂ ನಡುವಿನಲ್ಲಿ ಒಂದು ಓಣಿ. ಇದರ ಎಡಬಲಗಳಲ್ಲಿ ಕೋಣೆಗಳ ಸಾಲುಗಳು.

ಈ ಭಗ್ನ ಗೃಹವನ್ನು (ಇನ್ನೊಬ್ಬರ ಪರವಾಗಿ) ಒಬ್ಬಳು ಮುದುಕಿ ಕೆಲವರಿಗೆ ಬಾಡಿಗೆಗೆ ಕೊಟ್ಟು, ಬಾಡಿಗೆ ವಸೂಲ್ಮಾಡುತ್ತ, ಈ ಕಟ್ಟಡ ಕುರಿತು ಯಜಮಾನಿಕೆ ನಡೆಸುತ್ತ, ಅದರಲ್ಲಿ ವಾಸಮಾಡಿಕೊಂಡಿದ್ದವರ ಕೆಲಸಗಳನ್ನು ಸಂಬಳಕ್ಕಾಗಿ ಮಾಡುತ್ತ, ಅದರಲ್ಲೇ ವಾಸವಾಗಿದ್ದಳು.

೨. ಗೂಬೆ ಗೂಡಿನಲ್ಲಿ ಕೋಗಿಲೆ

ತೆನಾರ್ಡಿಯರನ ಹೋಟೇಲಿನಿಂದ ಕೋಸೆಟ್ಟಿಯನ್ನು ಕರೆತಂದಾತ ಜೀನ್‌ವಾಲ್‌ಜೀನನೇ ಎಂದು ಓದುಗರು ಈ ಮೊದಲೇ ನಿಶ್ಚೈಸಿರಬಹುದಷ್ಟೆ. ಈತ ಗಾರ್ಬೊ ಕಟ್ಟಡದ ಎರಡು ಕೋಣೆಗಳನ್ನು ಮೊದಲೇ ಬಾಡಿಗೆಗೆ ತೆಗೆದುಕೊಂಡಿದ್ದ. ಮೊಂಟ್‌ಫರ್ಮಿಯಲಿನಿಂದ ಇಲ್ಲಿಗೆ ಬರುವಾಗ ರಾತ್ರಿಯಾಗಿತ್ತು. ತನ್ನ ಕೋಣೆಯ ಬಾಗಿಲ ಬೀಗ ತೆರೆದು ಒಳಗೆ ಹೋಗಿ, ಹೆಗಲಮೇಲೆ ಮಲಗಿ ನಿದ್ರಿಸುತ್ತಿದ್ದ ಕೋಸೆಟ್ಟಿಯನ್ನು ಚಾಪೆಯ ಮೇಲೆ ಮಲಗಿಸಿದ. ಕೋಣೆಯಲ್ಲಿ ಎರಡು ಕುರ್ಚಿ ಒಂದು ಮೇಜು ಇದ್ದುವು. ಕೆಲಸದ ಹೆಂಗುಸು ಆಗ ತಾನೆ ತಂದಿಟ್ಟ ಅಗ್ಗಿಷ್ಟಿಕೆಯ ಬೆಂಕಿ ಆ ಕೋಣೆಗೆ ತಕ್ಕಮಟ್ಟಿಗೆ ಶಾಖ ಒದಗಿಸುತ್ತಿತ್ತು. ಪ್ರಯಾಣದ ಆಯಾಸದಿಂದ ಬಳಲಿದ್ದ ಕೋಸೆಟ್ಟಿ ಸುಖವಾಗಿ ನಿದ್ರೆ ಮಾಡುತ್ತಿದ್ದಳು. ಬೆಳಗಾದರೂ ಅವಳಿಗೆ ಎಚ್ಚರವಾಗಲಿಲ್ಲ.

ಡಿಸೆಂಬರ್ ತಿಂಗಳಿನ ಚಳಿಯನ್ನು ಹೊರಗೆ ದಟ್ಟವಾಗಿ ಬೀಳುತ್ತಿದ್ದ ಮಂಜು ಮತ್ತಷ್ಟು

ಹೆಚ್ಚಿಸಿತ್ತು. ನಿಸ್ತೇಜವಾಗಿದ್ದ ಸೂರ್ಯ ಕಿರಣಗಳು, ಮುಚ್ಚಿಕೊಂಡಿದ್ದ ಕಿಟಕಿಯ ಬಾಗಿಲ ಸೆರೆಯಿಂದ ಅಡ್ಡವಾಗಿ ಬಂದು ಕೋಣೆಯೊಳಗೆ ಬೀಳುತ್ತ, ಜೀನ್‌ವಾಲ್‌ಜೀನನಿಗೆ ಹೊರಗೆ ಬೆಳಗಾಗಿತ್ತೆಂದು ತಿಳಿಸಿದುವು. ಅದೇ ಸಮಯದಲ್ಲಿ ರಸ್ತೆಯಲ್ಲಿ ತುಂಬಿದ ಒಂದು ಬಂಡಿ ಹೋಗುತ್ತಿತ್ತು. ಅದರ ಶಬ್ದದಿಂದ ಕೋಸೆಟ್ಟೆಗೆ ಎಚ್ಚರವಾಗತೊಡಗಿತು. ಈ ಅರೆ ನಿದ್ರಾವಸ್ಥೆ ಯಲ್ಲಿ ಕೋಸೆಟ್ಟೆ ಕಣ್ಣುಮುಚ್ಚಿಕೊಂಡೇ ಏನನ್ನೋ ಹುಡುಕುವವಳಂತೆ ಕೈ ಆಡಿಸುತ್ತ, "ಅಮ್ಮಾ, ಯಜಮಾನಿ, ಬಂದೆ—ಕಸಬರಿಗೆ ಸಿಕ್ಕಲಿಲ್ಲ," ಎಂದು ಕನವರಿಸಿದಳು. ಅವಳ ಪ್ರತಿ ದಿನದ ಕಾರ್ಯ ಇಂದು ಬೆಳಗ್ಗೆಯೂ ಅವಳಿಗೆ ನೆನಪಾಗಿ ಹಾಗೆ ಉದ್ಗರಿಸಿರಬೇಕು. ಜೀನ್‌ವಾಲ್‌ಜೀನ್ ಅವಳನ್ನು ಪೂರ್ತಿ ಎಚ್ಚರಿಸಿದ. ಏಳುತ್ತಿದ್ದ ಹಾಗೆಯೇ ಅವಳು ಅನೇಕ ಪ್ರಶ್ನೆಗಳನ್ನು ಕೇಳಿ, ತೆನಾರ್ಡಿಯರರು ಬಲುದೂರ ಇದ್ದಾರೆಂದೂ ಅವರ ಹಿಂಸೆ ಬಂಧನಗಳಿಂದ ಅವಳು ಪೂರ್ಣವಾಗಿ ವಿಮುಕ್ತಳಾಗಿ ಇರುವಳೆಂದೂ ತಿಳಿದುಕೊಂಡಳು. ಈ ಹೊಸ ಸ್ಥಳವನ್ನು ಕಂಡು ಅವಳಿಗೆ ಬಹಳ ಸಂತೋಷ ವಾಯ್ತು. "ಇದೆಂಥ ಸುಂದರ ಮತ್ತು ಸುಖಕರ ಸ್ಥಳ, ಅಪ್ಪಾ," ಎಂದು ಹೇಳಿಕೊಂಡಳು. ಈ ಸ್ಥಳವನ್ನು ಗುಡಿಸಿ, ಚೊಕ್ಕಟಪಡಿಸುವ ಕೆಲಸ ತನ್ನದೆಂದುಕೊಂಡು ಅವಳು ಹೊರಡುವಾಗ, ಅದನ್ನು ಮಾಡುವವರು ಬೇರೆಯವರಿದ್ದಾರೆಂದೂ, ಕೋಸೆಟ್ಟೆ ಮನಬಂದಂತೆ ಈ ಕೋಣೆ ಯೊಳಗೆ ಆಟವಾಡಿಕೊಂಡಿರಬಹುದೆಂದೂ ಜೀನ್‌ವಾಲ್‌ಜೀನ್ ಹೇಳಿದ.

ಸರಳ ಮನಸ್ಸಿನ ಕೋಗಿಲೆಯಂತಿದ್ದ ಕೋಸೆಟ್ಟೆಗೆ, ವೃದ್ಧನೂ ಸಮಾಜಬಹಿಷ್ಕೃತನೂ ಅಡಗಿ ಬದುಕಬೇಕಾದವನೂ ಆಗಿ ಗೂಬೆಯಂತಿದ್ದ ಜೀನ್‌ವಾಲ್‌ಜೀನನ ಗೂಡು ಪರಮಪ್ರೇಮದ, ಆನಂದದ, ಸುಖದ ಮಂದಿರವಾಗಿತ್ತು.

೩. ದುಃಖ + ದುಃಖ = ಸುಖ !

ಇಂದು ಅವರು ಈ ಮನೆಗೆ ಬಂದ ಮೂರನೇ ದಿನ. ಜೀನ್‌ವಾಲ್‌ಜೀನ್ ಒಂಬತ್ತು ತಿಂಗಳ ಹಿಂದೆ ಫ್ಯಾಂಟೈನಳ ಹಾಸಿಗೆಯ ಬದಿಯಲ್ಲಿ ನಿಂತು ಅವಳನ್ನು ನೋಡಿದ್ದಂತೆ, ಈ ದಿನ ಆಕೆಯ ಮಗಳನ್ನು ಅವಳ ಹಾಸಿಗೆ ಬದಿಯಲ್ಲಿ ನಿಂತು ನೋಡುತ್ತಿದ್ದಾನೆ.

ಹಿಂದೆ, ಒಂದು ಕಾಲದಲ್ಲಿ, ಜೀನ್‌ವಾಲ್‌ಜೀನ್ ಅವನ ಸಹೋದರಿಯನ್ನೂ ಅವಳ ಮಕ್ಕ ಳನ್ನೂ ಪ್ರೀತಿಸುತ್ತಿದ್ದುದು ನಿಜ. ಆದರೆ, ಅನಂತರ ಅವನು ಜೈಲಿನಲ್ಲಿ ಕಳೆದ ಅನೇಕ ವರ್ಷಗಳಲ್ಲಿ ಮನುಷ್ಯತ್ವ ಕಳೆದುಕೊಳ್ಳುತ್ತ, ಕ್ರೂರಮೃಗವಾಗಿ ಬದುಕಿದ್ದ. ಜೈಲಿನಿಂದ ಬಿಡುಗಡೆ ಹೊಂದಿದ ವೇಳೆಗೆ ಅವನಲ್ಲಿ ಪ್ರೇಮ, ಕರುಣೆ, ದಯೆ, ದಾಕ್ಷಿಣ್ಯ ಮೊದಲಾದ ಎಲ್ಲ ವಿಧದ ಸದ್ಗುಣಗಳೂ ಮಾಯವಾಗಿದ್ದುವು. ಮನುಷ್ಯರು ಪರಸ್ಪರ ಪ್ರೇಮದಿಂದ ಸಹಕರಿಸಿ ಬದುಕಬಲ್ಲರೆಂಬುದನ್ನೇ ಅವನು ಮರೆತಿದ್ದ. ಆದರೆ, ಬಿಷಪರ ದರ್ಶನ, ಭೇಟಿ ಅವನನ್ನು ಪರಿವರ್ತಿಸಿದುವು. ಅವನು ನ್ಯಾಯ, ಧರ್ಮ, ಪ್ರೀತಿ, ಸಹಕಾರ, ಸಹನೆಗಳೆಂಬುದನ್ನೆಲ್ಲ ಸಂಪೂರ್ಣ ಅರಿತು, ಅಭ್ಯಸಿಸಿ, ಅವುಗಳಂತೆ ತನ್ನ ಉತ್ತಮ ಜೀವನವನ್ನೂ ನಡೆಸಿಬಂದ. ಆದರೆ, ಇಂಥ ಪರಿವರ್ತನೆ, ತಪಸ್ಸು, ಕರ್ತವ್ಯ ಪಾಲನೆಗಳಿಗೆ ಅವನಿಗೆ ಕೊನೆಗೆ ಸಮಾಜದಿಂದ, ಅಥವಾ, ಸಮಾಜದ ಪ್ರತಿನಿಧಿಯಾದ ಸರಕಾರದಿಂದ ದೊರಕಿದುದು ಏನು? ದೊರಕಿದ್ದು ಸಮಾಜದ ವೈರ, ಪುನರಪಿ ಜೈಲುವಾಸ, ಜೇವರ್ಟನ ಕರ್ತವ್ಯನಿಷ್ಠೆಯೆಂಬ ಪಾಷಾಣಸದೃಶ ನಿರ್ಜೀವ, ಅಮಾನುಷ ಕ್ರೌರ್ಯ ಮಾತ್ರ! ಸಮಾಜದ ಹಿತಕ್ಕಿರುವುದೆಂಬ ನ್ಯಾಯ, ಧರ್ಮ, ಶಿಸ್ತು ಎಲ್ಲವೂ ಜೀನ್‌ವಾಲ್‌ಜೀನನ ಪಾಲಿಗೆ

ದುಃಖ ಉದ್ರೇಕಿಸಲೂ ಉದ್ರೇಕಿಸಿ ಅದನ್ನೇ ಶಾಶ್ವತೀಕರಿಸಲೂ ಇದ್ದ ಸಾಧನಗಳಾಗಿದ್ದುವು. ಫ್ಯಾಂಟೈನಳ ಜೀವನವನ್ನು ನೋಡಿದಾಗಲೂ ಅವನು ಕಂಡದ್ದು ಈ ವಿಧದ ಅನುಭವ ಮಾತ್ರ. ಅನುಭವಗಳು ಅವನಿಗೆ ಬದುಕಿನಲ್ಲೇ ಜುಗುಪ್ಸೆ ತಂದೊಡ್ಡಿದ್ದುವು. ಪಾಪಕೃತ್ಯಗಳ, ಅಥವಾ, ಅಪರಾಧಿಗಳ ಮೂಲ ಶೋಧಿಸುವವರಿರಲಿಲ್ಲ. ನ್ಯಾಯಪರಿಪಾಲನೆ ಹೃದಯಕ್ಕೆ ಸಂಬಂಧವಿಲ್ಲದೆ, ಕೇವಲ ಯಾಂತ್ರಿಕವಾಗಿ ಕುರುಡಾಗಿ ನಡೆಯುತ್ತಿತ್ತು. ಅಬಲರೆಲ್ಲರೂ ಈ ಯಂತ್ರದಲ್ಲಿ ಸಿಕ್ಕಿ, ಹಿಂಸೆಗೊಳಗಾಗಿ, ಅಗಣ್ಯರಾಗಿ, ಸಮಾಜದಿಂದಲೇ ಮಾಯವಾಗುತ್ತಿದ್ದುದನ್ನೂ ಅವನು ಕಾಣುತ್ತಿದ್ದ. ಸಮಾಜದ ಅನ್ಯಾಯವೂ ಈ ತೆರನಾದ ನ್ಯಾಯಪಾಲನೆಯೂ ಅತಿಯಾಗಿ ನಡೆದುದರ ಉದಾಹರಣೆಯೇ ಫ್ಯಾಂಟೈನಳಾಗಿ ಅವನಿಗೆ ತೋರಿದಳು. ಈ ವಿಧದ ಜೀವನಾನುಭವ ಅವನು ಬಿಷಪರಿಂದ ಉದ್ಧರಿಸಲ್ಪಟ್ಟಿದ್ದರೂ ಕ್ರಮೇಣ ಜೀವನದಲ್ಲಿ ಸುಖಕಾಣದಂತೆ ಮಾಡಿತ್ತು. ಅಂದರೆ, ಬಿಷಪರ ಜ್ಯೋತಿ ಮಸಕಾಗತೊಡಗಿತ್ತು, ಅವನ ಜೀವವೇ ಭಾರವಾಗಿತ್ತು.

ಇಂಥ ಮಾನಸಿಕ ಪರಿಸ್ಥಿತಿಯಲ್ಲಿದ್ದಾಗಲೇ ಜೀನ್‌ವಾಲ್‌ಜೀನನಿಗೆ ಕೋಸೆಟ್ಟಿ ದೊರಕಿದಳು. ಇವಳು ಅವನ ಅಪೂರ್ಣತೆಯನ್ನು ಪೂರ್ಣಗೊಳಿಸಲಿದ್ದ ಸಾಧನವಾದಳು. ಕೋಸೆಟ್ಟಿಯ ಪ್ರಥಮ ದರ್ಶನವಾದಾಗ, ಮತ್ತು ತರುವಾಯ, ಅವನ ಭಾವನೆಗಳು ಮಾರ್ಪಾಡಾದುವು. ಅವಳ ದುಃಖದಲ್ಲಿ ಇವನಿಗೆ ಅನುಕಂಪ ಮೂಡಿತು. ಅವಳ ನಿಷ್ಕಪಟ ಪ್ರೇಮ ಮತ್ತು ಸರಳತೆ ಇವನಲ್ಲಿ ಒಲುಮೆ ಉಂಟು ಮಾಡಿದುವು. ಅವಳ ಕೋಮಲತೆ ಇವನ ಮನಸ್ಸನ್ನು ಮೃದುತ್ವಕ್ಕೆ ತಂದಿತು. ಸ್ತ್ರೀತ್ವವನ್ನು ಹಿಂದೊಮ್ಮೆ ಇವನು ಗ್ರಹಿಸಿದ್ದು, ಅನಂತರ ಅದು ಮರೆತೇ ಹೋಗಿತ್ತಾದರೂ, ಇಂದು ಈ ಅನಾಥ ಬಾಲಕಿಯ ರಕ್ಷಕ ಇವನಾದಾಗ, ಇವನು ಕೋಸೆಟ್ಟಿಯ ಮಮತೆಯ ಮಾತೆಯೇ ಆಗಿಬಿಟ್ಟ. ಜೀನ್‌ವಾಲ್‌ಜೀನನೇ ತನ್ನ ಜೀವನದ ಆಧಾರವೆಂಬ ಕೋಸೆಟ್ಟಿಯ ದೃಢ ಸರಳ ನಂಬಿಕೆ ಜೀನ್‌ವಾಲ್‌ಜೀನನನ್ನು ಕೋಸೆಟ್ಟಿಯ ಜವಾಬ್ದಾರೀ ತಂದೆಯಾಗಿಯೂ ಮಾಡಿಬಿಟ್ಟಿತು. ಈ ಹೊಸ ಜವಾಬ್ದಾರಿಗಳು ಅವನಲ್ಲಿ ನವಚೈತನ್ಯ ತರತೊಡಗಿದುವು. ಕೋಸೆಟ್ಟಿಗೆ ಜೀನ್‌ವಾಲ್‌ಜೀನ್ ಜೀವನದ ಆಧಾರಸ್ತಂಭವಾದದ್ದಾದರೆ, ಅವಳು ಅವನಿಗೆ ಅವನ ಮುಂದಿನ ಜೀವನ ಪಥದ ಜ್ಯೋತಿಯಾಗಿ ತೋರಿದಳು. ಈ ಇಬ್ಬರ ಸಹಜೀವನ ಪವಿತ್ರ ಪ್ರೇಮಮಯ, ಆನಂದಭರಿತ ಸಂಸಾರಜೀವನವೇ ಆಗಿಬಿಟ್ಟಿತು. ಬದುಕಿರುವುದರಲ್ಲಿ ಆನಂದ ಮತ್ತು ಸಾರ್ಥಕ್ಯವಿದೆಯೆಂಬ ನಂಬಿಕೆ ಜೀನ್‌ವಾಲ್‌ಜೀನನಲ್ಲಿ ಮೂಡಿತು. ಬದುಕೆಲ್ಲ ದುಃಖವಲ್ಲ, ಜನರೆಲ್ಲ ತೆನಾರ್ಡಿಯರರಲ್ಲ ಎಂಬ ಭಾವನೆಯೂ ಬದುಕಿ ಆನಂದ ಪಡೆಯಬೇಕೆಂಬ ಆಸೆ, ಉತ್ಸಾಹ, ಧೈರ್ಯವೂ ಉದ್ಭವಿಸಿದುವು. ಈ ರೀತಿ ಇಂದಿನ ದಿನ ಅವರಿಬ್ಬರ ಪುನರ್ಜನ್ಮ ದಿನವಾಗಿತ್ತು.

ಜೀನ್‌ವಾಲ್‌ಜೀನ್ ಕ್ಷಣಕಾಲ ಹೀಗೆಯೇ ಕೋಸೆಟ್ಟಿಯನ್ನು ನಿಂತು ನೋಡಿ, ಅವಳ ಕೈಗೆ ಮುತ್ತುಕೊಟ್ಟ. ತನ್ನ ಮತ್ತು ಫ್ಯಾಂಟೈನಳ ಬಾಳ್ವೆಯಂತೆ ಕೋಸೆಟ್ಟಿಯದು ಆಗಕೂಡದೆಂದು ಆಗಲೇ ನಿರ್ಧರಿಸಿಕೊಂಡ. ಅನಂತರದ ಅವನ ಕಾರ್ಯಗಳೆಲ್ಲವೂ ಈ ನಿರ್ಧಾರಕ್ಕೆ ಅನುಸಾರವಾಗಿಯೇ ನಡೆಯುತ್ತಿದ್ದುವು.

ಕೋಸೆಟ್ಟಿಗೆ ಓದುಬರಹ ಹೇಳಿಕೊಡಲು ಪ್ರಾರಂಭಿಸಿದ. ಇಬ್ಬರೂ ಸಂಜೆಯ ವೇಳೆ ಒಂದೆರಡು ಗಂಟೆಗಳ ಸಮಯ ನಿರ್ಜನ ಪ್ರದೇಶಗಳಲ್ಲಿ ತಿರುಗಾಡಿಬರುತ್ತಿದ್ದರು. ಅವರ ಮನೆ ಕೆಲಸವನ್ನೆಲ್ಲ ಆ ಕಟ್ಟಡದ ಕಾವಲಿನ ಮುದುಕಿಯೇ ಮಾಡಿಕೊಡುತ್ತಿದ್ದಳು. ಅಂಗಡಿಯಿಂದ ಸಾಮಾನು ತಂದಿಡುವುದೂ ಮನೆಯನ್ನು ಗುಡಿಸಿ ಶುಚಿಪಡಿಸುವುದೂ ಪಾತ್ರೆಗಳನ್ನು ತೊಳೆದು ಕೊಡುವುದೂ ಅವಳ ಕೆಲಸವಾಗಿತ್ತು.

ಕೋಸೆಟ್ಟ್ ದಿನಗಳು ಕಳೆದಂತೆ ಉತ್ಸಾಹ, ಸಂತೋಷ ಚಟುವಟಿಕೆಗಳನ್ನು ತೋರಿಸುತ್ತ ಓದುಬರಹ ಕಲಿಯುತ್ತ ಉತ್ತಮ ಬಾಲಿಕೆಯಾಗಿ ಅರಳತೊಡಗಿದಳು.

ಜೀನ್‌ವಾಲ್‌ಜೀನ್ ಅಲ್ಪಸ್ವಲ್ಪ ಪಿಂಚಣಿ ಹಣದಿಂದ ಜೀವನ ಸಾಗಿಸುತ್ತಿರುವವನು ತಾನೆಂದು ಕೆಲಸದ ಮುದುಕಿಗೆ ತಿಳಿಸಿದ.

ವಿಧಿ ಈ ರೀತಿ ಇಬ್ಬರ ದುಃಖಗಳನ್ನು ಒಂದು ಹಂತಕ್ಕೆ ತಂದಿರಿಸಿ, ಇವರ ಕೂಡುವಿಕೆಯಿಂದ ದುಃಖನಾಶವಾಗಿ ಆನಂದವೇ ಉದ್ಭವಿಸುವಂತೆ ಏರ್ಪಡಿಸಿತ್ತು.

೪. ಮುದುಕಿ ಕಂಡ ಗುಟ್ಟು

ತನ್ನ ಗುರುತು ಯಾರಿಗೂ ಸಿಕ್ಕದಂತೆ ಇರಲು ಬೇಕಾದ ಏರ್ಪಾಡುಗಳನ್ನೆಲ್ಲ ಜೀನ್‌ವಾಲ್ ಜೀನ್ ಮಾಡಿಕೊಂಡಿದ್ದ. ಅವನು ಕೇವಲ ದರಿದ್ರನೆಂದು ಆಸುಪಾಸಿನವರೆಲ್ಲ ತಿಳಿದುಕೊಂಡಿದ್ದರು. ಅವನಿಗೆ ಕೆಲವರು ಭಿಕ್ಷೆ ಕೊಡುವುದೂ ಇತ್ತು. ಅವನು ಭಿಕ್ಷೆಯನ್ನು ದೈನ್ಯದಿಂದಲೇ ಸ್ವೀಕರಿಸುತ್ತಿದ್ದ. ಅವನೂ ಕೆಲವರಿಗೆ ಯಾರಿಗೂ ಗೊತ್ತಾಗದಂತೆ ದಾನಧರ್ಮ ಮಾಡುತ್ತಿದ್ದ. ಈ ಕಾರಣದಿಂದ ಕೆಲವರು ಅವನನ್ನು 'ದಾನಿಯಾದ ಭಿಕ್ಷು' ಎಂದು ಮರ್ಯಾದೆಯಿಂದ ಕರೆಯುತ್ತಿದ್ದರು.

ಮನೆಕೆಲಸದ ಮುದುಕಿ ಅವನ ಜೀವನಕ್ರಮಗಳನ್ನೆಲ್ಲ ಬಲು ಕುತೂಹಲದಿಂದ, ಕೂಲಂಕಷವಾಗಿ, ವಿಚಾರಪೂರ್ವಕವಾಗಿ ನೋಡುತ್ತಿದ್ದಳು. ಅವಳು ತನ್ನ ಮನಸ್ಸಿನ ಚಟುವಟಿಕೆಯನ್ನು ಮಾತ್ಸರ್ಯದಲ್ಲಿ ಪರಿವರ್ತನೆಗೊಳಿಸುತ್ತಿದ್ದಳು. ಅವರಿವರ ಗುಟ್ಟನ್ನು ತಿಳಿದುಕೊಂಡು, ಆ ಗುಟ್ಟನ್ನೇ ಅವರ ಮೇಲೆ ಪ್ರಯೋಗಿಸಿ ಫಲಿತಾಂಶವನ್ನು ತಮಾಷೆಯೆಂದು ನೋಡುವ ಅಭ್ಯಾಸ ಅವಳದಾಗಿತ್ತು. ಒಂದು ದಿನ ಜೀನ್‌ವಾಲ್‌ಜೀನ್ ಅವನ ಕೋಣೆಯಲ್ಲಿ ಒಬ್ಬನೇ ನಿಂತು ಏನೋ ಕೆಲಸ ಮಾಡುತ್ತಿದ್ದಾಗ, ಹೊರಗೆ ಇದ್ದ ಈ ಮುದುಕಿ ಬಾಗಿಲಲ್ಲಿದ್ದ ಒಂದು ಬಿರುಕಿನಿಂದ ಒಳಗೆ ಇಣುಕಿ ನೋಡಿದಳು. ಜೀನ್‌ವಾಲ್‌ಜೀನ್ ತನ್ನ ಕೋಟಿನ ಒಳಗಡೆಯ ಬಟ್ಟೆ ಬಿಚ್ಚಿ, ಅಲ್ಲಿಂದ ನೂರುನೂರು ಫ್ರ್ಯಾಂಕಿನ ನೋಟುಗಳನ್ನು ಹೊರ ತೆಗೆಯುತ್ತಿದ್ದ. ಅವಳು ಇನ್ನೂ ನೋಡುತ್ತಿದ್ದ ಹಾಗೆಯೇ ಬಿಚ್ಚಿದ್ದ ಬಟ್ಟೆಯನ್ನು ಪುನಃ ಹೊಲಿದು ಸರಿಪಡಿಸುತ್ತಿದ್ದುದನ್ನು ಕಂಡಳು. ಮರುದಿನವೇ ಜೀನ್‌ವಾಲ್‌ಜೀನ್ ತಾತ್ಕಾಲಿಕವಾಗಿ ಕೋಣೆಯಿಂದ ಹೊರಗೆ ಹೋಗಿ ಕೋಣೆಯೊಳಗೆ ಯಾರೂ ಇಲ್ಲದಿದ್ದಾಗ, ಈ ಮುದುಕಿ ಆತನ ಕೋಟನ್ನು ಮುಟ್ಟಿ ಪರೀಕ್ಷಿಸಿದಳು. ಅದರ ಬಟ್ಟೆಯ ಒಳಗಡೆ ತುಂಬ ಕಾಗದದ ತುಂಡುಗಳಿರುವುದಾಗಿ ತಿಳಿದುಕೊಂಡಳು. ಅನಂತರ ಈ ಕೋಟಿನ ಜೇಬುಗಳನ್ನೆಲ್ಲ ಕೈಹಾಕಿ ನೋಡಿ ಪರೀಕ್ಷಿಸಿದಳು. ಅಲ್ಲಿ ಕತ್ತರಿ, ನೂಲು, ಸೂಜಿ, ಚೂರಿ, ಕೃತಕ ಗಡ್ಡ, ಮೀಸೆ, ತಲೆಗೂದಲು ಮೊದಲಾದವು ಇದ್ದುವು. ಜೀನ್‌ವಾಲ್‌ಜೀನ್ ಪಿಂಚಣಿ ಹಣದಿಂದ ಬಾಳುತ್ತಿರುವವನಲ್ಲವೆಂದೂ ಅವನು ಸದಾ ಅಪಾಯವನ್ನು ನಿರೀಕ್ಷಿಸುತ್ತಿದ್ದನೆಂದೂ ಅಡಗಿ ಜೀವಿಸುತ್ತಿದ್ದನೆಂದೂ ಅಪಾಯದಿಂದ ತಪ್ಪಿಸಿಕೊಳ್ಳಲಿರುವ ಕೆಲವು ಸಲಕರಣೆಗಳು ಅವನಲ್ಲಿದ್ದುವೆಂದೂ ಅವಳು ತಿಳಿದುಕೊಂಡಳು.

೫. ಹೊಸ ಒಕ್ಕಲು

ಜೀನ್‌ವಾಲ್‌ಜೀನ್ ಕೆಲವೊಮ್ಮೆ ರಾತ್ರಿಕಾಲದಲ್ಲಿ ಇಗರ್ಜಿಗೆ ಹೋಗಿಬರುವುದಿತ್ತು. ಹೆಚ್ಚಾಗಿ ಹೋಗುತ್ತಿದ್ದುದು ಸೇಂಟ್ ಮೆಡಾರ್ಡ್ ಇಗರ್ಜಿಗೆ. ಅದರ ಬಳಿಯಲ್ಲಿ ಯಾವಾಗಲೂ ಒಬ್ಬ ಅಂಗಹೀನ ಭಿಕ್ಷುಕ ಕುಳಿತು ಬೇಡುತ್ತಿದ್ದ. ಜೀನ್‌ವಾಲ್‌ಜೀನ್ ಇವನಿಗೆ ಸ್ವಲ್ಪ ಹಣವನ್ನು ಗುಟ್ಟಾಗಿ ಪ್ರತಿಸಲವೂ ಕೊಡುತ್ತಿದ್ದ. ಭಿಕ್ಷುಕ ಇವನನ್ನು ಬಲು ಕೃತಜ್ಞತಾಪೂರ್ವಕವಾಗಿ ಯಾವಾಗಲೂ ನೋಡುತ್ತಿದ್ದ. ಒಂದು ರಾತ್ರಿ ಜೀನ್‌ವಾಲ್‌ಜೀನ್ ಎಂದಿನಂತೆ ಅವನಿಗೆ ಭಿಕ್ಷೆ ಕೊಡುವಾಗ ಆ ಭಿಕ್ಷುಕ ಯಾವತ್ತಿನ ಕ್ರಮದಿಂದ ವರ್ತಿಸಲಿಲ್ಲ. ಭಿಕ್ಷೆ ಪಡೆದು ಜೀನ್‌ವಾಲ್‌ಜೀನನನ್ನು ಬಲು ತೀಕ್ಷ್ಣವಾಗಿ ನೋಡುತ್ತಿದ್ದ. ಆ ದೃಷ್ಟಿಯನ್ನು ತಾನು ಎಂದೋ ಎಲ್ಲೋ ಅನೇಕ ಸರ್ತಿ ನೋಡಿರುವಂತೆ ಅವನಿಗೆ ಜ್ಞಾಪಕ ಬಂತು. ಆದರೂ ಆಗ ಆ ಭಿಕ್ಷುಕನನ್ನು ಪರೀಕ್ಷಿಸುವ ಮನಸ್ಸು ಆಗಲಿಲ್ಲ. ಅದರಲ್ಲಿ ತನಗೆ ಸುಖವಿಲ್ಲವೆಂದು ಜೀನ್‌ವಾಲ್‌ಜೀನ್ ತಿಳಿಯತೊಡಗಿದ.

ಮರುಸಂಜೆ ಜೀನ್‌ವಾಲ್‌ಜೀನ್ ಅವನ ಕೋಣೆಯಲ್ಲಿ ಕುಳಿತುಕೊಂಡಿದ್ದಾಗ ಬಲಿಷ್ಠ ಹೆಜ್ಜೆಗಳನ್ನು ಹಾಕುತ್ತ ಉಪ್ಪರಿಗೆಯ ಮೆಟ್ಟಲನ್ನು ಯಾರೋ ಹತ್ತಿದ ಸದ್ದು ಕೇಳಿಸಿತು. ಮೊದಲೇ ಸ್ವಲ್ಪ ಗಾಬರಿಗೊಂಡಿದ್ದ ಇವನು ಆ ಸದ್ದಿನಿಂದ ಸ್ವಲ್ಪ ಚಕಿತನಾದ. ಹಾಗಾಗಿ ಅದನ್ನು ಗಮನವಿಟ್ಟು ಆಲಿಸತೊಡಗಿದ. ಆದರೆ ಸದ್ದು ಮುಂದುವರಿದು ಕೇಳಲಿಲ್ಲ. ಇದೇನಿರಬಹುದೆಂದು ತನ್ನ ಕಿಟಿಕಿಯ ಸೆರೆಯಿಂದ ಉಪ್ಪರಿಗೆ ಮೆಟ್ಟಲ ಕಡೆಗೆ ನೋಡಿದ. ಮೊದಲು ಉಪ್ಪರಿಗೆಯ ಮೆಟ್ಟಲು ಹತ್ತಿದ ವ್ಯಕ್ತಿಯೇ ಆಗಿರಬಹುದಾದಂತೆ, ಒಬ್ಬ ತನ್ನ ಕಾಲುಗಳಿಂದ ಬೂಟ್ಸನ್ನು ಕಳಚಿ, ಕೈಯಲ್ಲಿ ಹಿಡಿದುಕೊಂಡು, ಬರೇ ಕಾಲಿನಿಂದ ಬರುತ್ತಿದ್ದ. ಆ ವ್ಯಕ್ತಿ ಜೀನ್‌ವಾಲ್‌ಜೀನನ ಸಮೀಪವಾಗಿಯೇ ಹೊರಗಡೆ ದಾಟಿದಾಗ, ಅವನ ನಿಲವು, ಎತ್ತರ, ಅವನ ಕಂಕುಳಲ್ಲಿದ್ದ ಗುದಿಗೆ ಎಲ್ಲವೂ ಇನ್‌ಸ್ಪೆಕ್ಟರ್ ಜೇವರ್ಟನನ್ನು ಜ್ಞಾಪಕಕ್ಕೆ ತಂದುಕೊಟ್ಟವು.

ಆ ವ್ಯಕ್ತಿ ಪಕ್ಕದ ಒಂದು ಕೋಣೆಗೆ ಹೋಗಿ ಕದಮುಚ್ಚಿದ.

ಮರುದಿನ ಕೆಲಸದ ಹೆಂಗುಸು ಬಂದವಳು ಅವಳಾಗಿಯೇ ಜೀನ್‌ವಾಲ್‌ಜೀನನನ್ನು ಕೇಳಿದಳು, “ನಿನ್ನೆ ಒಬ್ಬರು ಈ ಕಡೆ ಬಂದದ್ದು ನಿಮಗೆ ಗೊತ್ತಾಯಿತೇ?”

“ಹೌದು, ಯಾರೋ ಒಬ್ಬರು ಇಲ್ಲೇ ಹೋದರೆಂದು ತೋರುತ್ತದೆ. ನಾನು ಕೆಲಸದಲ್ಲಿದ್ದೆ.”

“ಅವರೊಬ್ಬ ಹೊಸ ಒಕ್ಕಲು.”

“ಅವರ ಹೆಸರು?”

“ಡ್ಯೂಮಾಂಟ್.”

“ವೃತ್ತಿ?”

“ನಿಮ್ಮ ಹಾಗೆಯೇ ಸ್ವಂತ ಶೇಖರಿಸಿಟ್ಟ ಹಣದಿಂದ ಜೀವನ.”

ಮುದುಕಿಯ ಈ ಉತ್ತರದಲ್ಲಿ ಧ್ವನಿತವಾದ ಅಭಿಪ್ರಾಯವೇನಾದರೂ ಇತ್ತೇ, ಅಥವಾ, ‘ಪಿಂಚಣಿ’ ಅಂದರೂ ಶೇಖರಿಸಿಟ್ಟ ಹಣವೆಂಬ ಸರಳ ಅಭಿಪ್ರಾಯ ಮಾತ್ರವೇ ಎಂದು ಜೀನ್‌ವಾಲ್‌ಜೀನ್ ಮುದುಕಿಯ ಮುಖದಿಂದ ತಿಳಿಯಲಾರದೆ ಇದ್ದ.

ಆದರೂ ತನ್ನ ಜಾಗ್ರತೆಗಾಗಿ ಆ ರಾತ್ರಿ, ಯಾರೂ ಕಾಣದ ರೀತಿಯಲ್ಲಿ ಕೋಸೆಟ್ಟಿಯನ್ನು ಕರೆದುಕೊಂಡು ಜೀನ್‌ವಾಲ್‌ಜೀನ್ ಮನೆ ತೆರವು ಮಾಡಿದ.

ಐದನೆಯ ಸಂಪುಟ

೧. ಆತ್ಮರಕ್ಷಣೆಗಾಗಿ ವಕ್ರಗತಿ

ಜೀನ್‌ವಾಲ್‌ಜೀನ್ ಕೋಸೆಟ್ಟಿ ಸಮೇತ ರಸ್ತೆಗಿಳಿದು ನಡೆಯತೊಡಗಿದ. ಎಲ್ಲಿಗೆ ಹೋಗಬೇಕೆಂಬ ಗುರಿ ಅವನಿಗಿರಲಿಲ್ಲ. ಎಲ್ಲಿಗಾದರೂ ಹೋಗಿ ತನ್ನ ಕುರುಹು ಸಿಕ್ಕದಂತೆ ಮಾಡಿಕೊಳ್ಳುವುದಷ್ಟೇ ಗುರಿ. ಆದರೂ ಶತ್ರುಗಳನ್ನು ತಪ್ಪಿಸಿ ಓಡುವ ಜಿಂಕೆಯಂತೆ ತನ್ನ ಜೀವರಕ್ಷಣೆಗಾಗಿ ಅಂಕುಡೊಂಕು ಮಾರ್ಗವಾಗಿ ಹೋಗಬೇಕೆಂದು ತಿಳಿದಿದ್ದ. ಅಲ್ಲಲ್ಲಿ ಅಡಗಿ ನಿಂತು, ಹಿಂದೆ ಮುಂದೆ ನೋಡಿ, ಯಾರೂ ತನ್ನನ್ನು ಹಿಂಬಾಲಿಸಿ ಬರುತ್ತಿರಲಿಲ್ಲವೆಂದು ಗೊತ್ತಾದನಂತರ ಶೀಘ್ರಗತಿಯಿಂದ ಮುಂದುವರಿಯುತ್ತಿದ್ದ. ರಾತ್ರಿ ಚಂದ್ರಪ್ರಕಾಶವಿದ್ದುದರಿಂದ ಮುನಿಸಿಪಲ್ ದೀಪಗಳನ್ನು ಉರಿಸಿರಲಿಲ್ಲ. ನಗರ ರಸ್ತೆಗಳ ಇಬ್ಬದಿಗಳಲ್ಲೂ ಕಟ್ಟಡಗಳಿದ್ದುದರಿಂದ, ಒಂದು ಬದಿಯಲ್ಲಿ ನೆರಳೂ ಮತ್ತೊಂದು ಬದಿಯಲ್ಲಿ ಚಂದ್ರಪ್ರಕಾಶವೂ ಬಿದ್ದು, ಅವನಿಗೆ ಅಡಗಿ ಓಡಲು ಕತ್ತಲು ಸಾಕಷ್ಟು ಅನುಕೂಲ ಒದಗಿಸುತ್ತಿತ್ತು. ಅಲ್ಲದೆ, ತನ್ನನ್ನು ಹಿಂಬಾಲಿಸಿ ಯಾರಾದರೂ ಬರುವವರಿದ್ದರೆ ಚಂದ್ರಪ್ರಕಾಶದಲ್ಲಿ ಅವರನ್ನು ಸ್ಪಷ್ಟವಾಗಿ ಕಾಣಬಹುದಾದ ಅನುಕೂಲತೆಯೂ ಇತ್ತು. ಆದರೆ, ಇವನು ಕತ್ತಲೆಯ ಸಹಾಯ ಪಡೆಯುತ್ತಿದ್ದಂತೆ, ಅವರೂ ಏಕೆ ಪಡೆದಿರಲಾರರು ಎಂಬುದನ್ನು ಇವನು ಯೋಚಿಸಿದ್ದಂತೆ ತೋರುವುದಿಲ್ಲ.

ಕೋಸೆಟ್ಟಿ ಹಿಂದಿನ ಆರು ವರ್ಷಗಳ ಜೀವನದಲ್ಲಿ ಹೆದರಿಕೆಯನ್ನು ಸಹಿಸಲು, ದುಃಖವನ್ನು ಮೌನವಾಗಿ ಅನುಭವಿಸಲು ಕಲಿತಿದ್ದಳು. ಅಲ್ಲದೆ, ಅವಳ ಪಾಲಿಗೆ ಜೀನ್‌ವಾಲ್‌ಜೀನ್ ದೇವರೇ ಆಗಿದ್ದುದರಿಂದ, ಅವನ ಇಚ್ಛೆಯಂತೆ, ಮರುಪ್ರಶ್ನೆಯಿಲ್ಲದೆ, ಎಲ್ಲ ಕಾರ್ಯಗಳಲ್ಲೂ ತನ್ನಿಂದಾದಷ್ಟು ಸಹಕಾರವನ್ನು ಕೊಡುತ್ತಿದ್ದಳು. ಆದ್ದರಿಂದ, ಈ ರಾತ್ರಿ, ಇಂಥ ಪರಿಸ್ಥಿತಿಯಲ್ಲೂ ಗಾಬರಿಗೊಳ್ಳದೆ, ಪ್ರಶ್ನಿಸದೆ ಅವಳು ಜೀನ್‌ವಾಲ್‌ಜೀನನ ಮಾತಿಗೂ ಮನಸ್ಸಿಗೂ ತಕ್ಕಂತೆ, ಸ್ವಾಭಾವಿಕವಾಗಿಯೇ ನಡೆಯುತ್ತ ಬಂದಳು.

ಇತ್ತ ಜೀನ್‌ವಾಲ್‌ಜೀನನಿಗೆ ಕೋಸೆಟ್ಟಿ ದೇವರಿಂದಲೇ ತನಗೆ ಒಪ್ಪಿಸಲ್ಪಟ್ಟಿದ್ದ ಒಂದು ಅಮೋಘ ವಸ್ತುವಾಗಿದ್ದಳು. ಬಿಷಪರ ಆಶೀರ್ವಾದ ಅವನ ಜೀವನಮಾರ್ಗವನ್ನು ನಿರ್ಮಿಸಿಕೊಟ್ಟಿದೆಯೆಂಬ ನಂಬಿಕೆಯಂತೆ ಇಂದು ದೇವರೇ ತನಗೆ ಒಪ್ಪಿಸಿರುವವಳ ಕುರಿತಾದ ತನ್ನ ಕಾರ್ಯಗಳಲ್ಲಿ ಖಂಡಿತವಾಗಿಯೂ ಸಹಾಯ ಕೊಡುವನೆಂದು ಅವನು ನಂಬಿಕೊಂಡಿದ್ದ. ಈ ನಂಬಿಕೆ ಅವನಿಗೆ ಧೈರ್ಯವನ್ನೂ ಶಕ್ತಿಯನ್ನೂ ಸ್ಫೂರ್ತಿಯನ್ನೂ ಕೊಡುತ್ತಿತ್ತು.

ಈ ಭಾವನೆಗಳಿಂದಲೂ ಅವನ ಸ್ವಾಭಾವಿಕ ಅನುಭವಗಳಿಂದಲೂ ಅವನು ಮುಂದೆ ಮುಂದೆ ಸಾಗುತ್ತ ಆಸ್ಟರ್ಲಿಟ್ಸ್ ಸೇತುವೆ ವರೆಗೆ ತಲಪಿದ. ಆದರೆ, ಇಷ್ಟರಲ್ಲೇ ತನ್ನನ್ನು ಯಾರೋ ಹಿಂಬಾಲಿಸಿ ಬರುತ್ತಿದ್ದಾರೆಂದು ಅವನಿಗೆ ಅನ್ನಿಸಿತು. ಅವನ ಹತ್ತೊಂಬತ್ತು ವರ್ಷದ ಕಾರಾಗೃಹವಾಸದ ಕಾಲದಲ್ಲಿ ಮೃಗೀಯವಾದ ಹುಟ್ಟುಬುದ್ಧಿಯೂ ಸೂಕ್ಷ್ಮವಾದ ಅಂತರಂಗ ಬಹಿರಂಗ ದೃಷ್ಟಿಯೂ ಅವನಲ್ಲಿ ಬಲುಮಟ್ಟಿಗೆ ಬೆಳೆದಿದ್ದುವು. ತನ್ನ ಶತ್ರುಗಳಿರುವುದನ್ನು ಕೇವಲ ಹುಟ್ಟುಬುದ್ಧಿಯಿಂದಲೇ ತಿಳಿದುಬಿಡುತ್ತಿದ್ದ. ಈ ಸರ್ತಿ ಆ ಬುದ್ಧಿ ಅಗತ್ಯ ಬೀಳದಷ್ಟು ಸ್ಪಷ್ಟವಾಗಿ, ದೂರದಲ್ಲಿ ಜನರು ಇವನ ಮಾರ್ಗವನ್ನೇ ಅನುಸರಿಸಿ ಬರುವುದನ್ನು ಇವನು ಬೆಳುದಿಂಗಳ ಬೆಳಕಿನಲ್ಲಿ ಕಂಡ. ಬರುತ್ತಿದ್ದವರು ಸಿಪಾಯಿಗಳೆಂದೂ ಏಳು ಜನರಿದ್ದರೆಂದೂ ಅವರ ಮುಂದಾಳು ಜೇವರ್ಟನೇ ಎಂದೂ ಜೀನ್‌ವಾಲ್‌ಜೀನನಿಗೆ ಸ್ಪಷ್ಟವಾಯಿತು. ತತ್‌ಕ್ಷಣವೇ ಕೋಸೆಟ್ಟಿಯನ್ನು

ಬೆನ್ನಮೇಲೆ ಹೊತ್ತುಕೊಂಡು ಒಮ್ಮೆ ತನಗೊಬ್ಬನಿಗೆ ಎಂದು ಸುಂಕ ಕೊಟ್ಟು, ಸುಂಕದವನು ಕೋಸೆಟ್ಟಿಯನ್ನು ತೋರಿಸಿ ಆಕ್ಷೇಪಿಸಿದಾಗ ಕೋಸೆಟ್ಟಿ ಬೆನ್ನಮೇಲಿದ್ದುದನ್ನರಿತು, ಇಬ್ಬರ ಬಗೆಗೂ ಸುಂಕ ತೆತ್ತು ಸೇತುವೆ ದಾಟಿದ. ಹೀಗೆ ಸ್ವಲ್ಪ ಗಾಬರಿಯಿಂದಲೇ ಮುಂದುವರಿದು ಸೇಂಟ್ ಎಂಟೋನಿ ಎಂಬ ಸ್ಥಳ ತಲಪಿದ.

೨. ೧೭೨೭ರಲ್ಲಿ ಪ್ಯಾರಿಸ್ ನಗರದ ಯೋಜನೆ

ಪ್ಯಾರಿಸ್ ನಗರದ ಬೀದಿಗಳ ಹೆಸರೂ ಸ್ಥಳಗಳ ಹೆಸರೂ ಈಗ ಅನೇಕ ಕಡೆಗಳಲ್ಲಿ ಬದಲಾಗಿವೆ. ಪಟ್ಟಣದ ನವನಿರ್ಮಾಣದ ಯೋಜನೆಗಳಲ್ಲಿ ಕೆಲವು ವೇಳೆ ನವನಾಮಧೇಯ ಮಾತ್ರ ನಡೆದು ಪೂರ್ತಿಯಾಗುವುದೂ ಇದೆ. ಇದೇ ಕ್ರಮದಿಂದ ಹೊಸಸ್ಥಳಗಳಿಗೆ ಹಳೆ ಹೆಸರಿಟ್ಟು ಪುರಾತನ ಸ್ಥಳಗಳನ್ನು ಪುನರುಜ್ಜೀವನ ಮಾಡಿದವೆಂದು ಕೆಲವು ವೇಳೆ ದಾಖಲೆಗಳು ತಯಾರಾಗುವುದೂ ಉಂಟು. ಈ ಕಥೆಯ ಪ್ರಸಂಗಗಳನ್ನು ಮನದಟ್ಟು ಮಾಡಿಕೊಳ್ಳಲು ಪ್ಯಾರಿಸ್ ನಗರದ ೧೭೨೭ರ ಯೋಜನೆ ಸಹಾಯವಾಗುವುದೆಂದು ತಿಳಿಸಲಿಚ್ಛಿಸುತ್ತೇವೆ.

ಹೇಗಿದ್ದರೂ, ನಮ್ಮ ಮಟ್ಟಿಗೆ ಜೀನ್‌ವಾಲ್‌ಜೀನ್ ಸೇಂಟ್ ಎಂಟೋನಿಯಿಂದ ಲಿಟಲ್ ಪಿಕ್‌ಪಸ್ ತ್ರಿಕೋಣಕ್ಕೆ ತಲಪಿದನೆಂದರೆ ಸಾಕು. ಇಲ್ಲಿಂದಲೇ ಎಡಕ್ಕೂ ಬಲಕ್ಕೂ ಒಂದೊಂದು ರಸ್ತೆ ಕವಲೊಡೆದು, ಎಡರಸ್ತೆ ತುಂಬ ಜನವಸತಿಯಿರುವ ಸ್ಥಳಕ್ಕೂ ಬಲರಸ್ತೆ ಜನವಸತಿ ಕಡಿಮೆ ಇದ್ದು, ಖಾಲಿ ಕಟ್ಟಡಗಳೂ ತೋಟಗಳೂ ಇರುವ ಸ್ಥಳಕ್ಕೂ ಹೋಗುತ್ತವೆ. ಜೀನ್‌ವಾಲ್‌ಜೀನ್ ಇಲ್ಲೇ ಸ್ವಲ್ಪ ನಿಂತು ಆಲೋಚಿಸಿ ಬಲಬದಿಯ ರಸ್ತೆಯಲ್ಲೇ ಮುಂದುವರಿದ. ಆದರೆ, ಆ ರಸ್ತೆಯಲ್ಲೇ ಅರೆವಾಸಿ ಸಾಗುವುದರೊಳಗೆ ರಸ್ತೆಯ ಕೊನೆಯಲ್ಲಿ ಪಹರೆ ನಿಂತಿದ್ದ ಸಿಪಾಯಿಯನ್ನು ಕಂಡ. ಹೀಗೆ ಇಕ್ಕಡೆಗಳಲ್ಲೂ—ಅಂದರೆ, ಹಿಂದೆ ಮುಂದೆ—ಆವರಿಸಲ್ಪಟ್ಟು, ಆ ರಸ್ತೆಯಿಂದಲೇ ಕವಲೊಡೆಯುವ ಎಡೆದಾರಿಯಿದೆಯೇ ಎಂದು ಜೀನ್‌ವಾಲ್‌ಜೀನ್ ಹುಡುಕಬೇಕಾಯಿತು. ಇತ್ತ ಸಿಪಾಯಿಗಳು ಎರಡೂ ಕೊನೆಗಳಿಂದ ಕ್ರಮವಾಗಿ ಪರಸ್ಪರ ಸಮೀಪವಾಗ ತೊಡಗಿದರು.

ಈ ರೀತಿ ವಿಧಿಯೇ ಜೇವರ್ಟನಿಂದ ಬಲೆಬೀಸಿಸಿ ಜೀನ್‌ವಾಲ್‌ಜೀನನನ್ನು ಕಟ್ಟಿ ಹಿಡಿಯಲು ಪ್ರಯತ್ನಿಸುತ್ತಿತ್ತು.

೩. ಇರುಕಿನಲ್ಲಿ ಸಿಕ್ಕಿಹಾಕಿಕೊಂಡ ಜೀವ

ಈ ಸರ್ತಿ ಜೀನ್‌ವಾಲ್‌ಜೀನ್ ಸರಕಾರದ ಕೈಗೆ ಸಿಕ್ಕಿದ್ದಾದರೆ ಮುಂದೆಂದೂ ಜೈಲಿನಿಂದ ಹೊರಗೆ ಬರಲಾರೆನೆಂದು ಅವನಿಗೆ ಗೊತ್ತಿತ್ತು. ತಾನೊಬ್ಬನೇ ತಪ್ಪಿಸಿ ಓಡುವುದಾಗಿದ್ದರೆ ಸ್ವಲ್ಪ ಸುಲಭದಲ್ಲೇ ತಪ್ಪಿಸಿಕೊಳ್ಳಬಹುದೆಂದು ಅವನು ಅರಿತಿದ್ದರೂ, ಹಾಗೆ ಒಬ್ಬನೇ ಓಡಲು ತಯಾರಾಗಿರಲಿಲ್ಲ. ಕೋಸೆಟ್ಟಿಯನ್ನು ಬಿಟ್ಟು ಎಲ್ಲೇ ಬದುಕಿದರೂ ಅವನು ಜೈಲಿನಲ್ಲಿದ್ದ ಫಲವೇ ಎಂದು ಅವನಿಗೆ ಸ್ಪಷ್ಟವಾಗಿದ್ದುದರಿಂದ ಯಾವ ಎಡೆ ಸಿಕ್ಕಿದರೂ ಎಷ್ಟೇ ಶ್ರಮ ಸಾಹಸಗಳನ್ನು ಮಾಡಬೇಕಾದರೂ ಮಾಡಲೇಬೇಕೆಂದು ನಿರ್ಧರಿಸಿಕೊಂಡು ಈ ನಿರ್ಧಾರದ ಪ್ರಕಾರ ರಸ್ತೆಯ ಅಂಚಿನಲ್ಲೇ ಅಡಗುವ ಮಾರ್ಗವನ್ನು ಹುಡುಕತೊಡಗಿದ. ಸಿಪಾಯಿಗಳಿಗೆ ಜೀನ್‌ವಾಲ್‌ಜೀನ್ ಈ ಕಡೆ ಇದ್ದಾನೆಂದು ಮಾತ್ರ ಗೊತ್ತಿತ್ತೇ ಹೊರತು ಅವರು ಅವನನ್ನು ಕಂಡಿರಲಿಲ್ಲ. ಅವರು

ರಸ್ತೆಯನ್ನು ಚೆನ್ನಾಗಿ ಬಲ್ಲವರಾಗಿದ್ದುದರಿಂದ, ರಸ್ತೆಯ ಎಲ್ಲ ಕೊನೆಗಳಲ್ಲೂ ಕಾವಲಿಟ್ಟು, ಬಲು ಪರಿಷ್ಕಾರವಾಗಿ ಹುಡುಕುತ್ತ ಮುಂದುವರಿಯುತ್ತಿದ್ದರು. ಅವರು ರಸ್ತೆಯ ಎಲ್ಲ ಸಂದುಗೊಂದುಗಳನ್ನೂ ಮನೆಗಳ ಜಗಲಿ, ಕಂಬಗಳು ಅಡ್ಡವಾಗಿರುವ ಸ್ಥಳ ಎಲ್ಲವನ್ನೂ ಪರೀಕ್ಷಿಸಿಕೊಂಡು ನಿರ್ದಿಷ್ಟ ಗುರಿಯಿಂದ ಮುಂದೆ ಸಾಗುತ್ತಿದ್ದರು.

ಸಿಪಾಯಿಗಳು ತಮ್ಮ ಶೋಧನೆಯ ಪರಿಷ್ಕಾರದಲ್ಲಿ ಮಗ್ನರಾಗಿದ್ದಾಗಲೇ ಜೀನ್‌ವಾಲ್‌ಜೀನ್ ತಾನು ತಪ್ಪಿಸಿಹೋಗುವ ಮಾರ್ಗವನ್ನು ಅಷ್ಟೇ ವಿಚಾರಪೂರ್ವಕವಾಗಿ ಹುಡುಕುತ್ತಿದ್ದ. ಪರಿಣಾಮವಾಗಿ ಮುಖ್ಯರಸ್ತೆಯಿಂದ ಕವಲೊಡೆದು ಹೋಗುತ್ತಿದ್ದ ಚಿಕ್ಕ ಒಂದು ಒಳರಸ್ತೆ ಕಂಡ. ಅದು ಒಂದು ಬಗೆಯ ಓಣಿ. ಎರಡು ಬದಿಗಳಲ್ಲೂ ಎತ್ತರವಾಗಿ ಎದ್ದುನಿಂತಿದ್ದ ದೊಡ್ಡ ಕಟ್ಟಡಗಳ ಹಿಂಬದಿಯ ಓಣಿ ಮಾತ್ರ ಅದಾಗಿತ್ತೆಂದು ಜೀನ್‌ವಾಲ್‌ಜೀನ್ ಮುಂದೆ ಹೋದಾಗ ತಿಳಿಯಿತು. ಕೋಸೆಟ್ಟಿಯನ್ನು ಎತ್ತಿಕೊಂಡೇ ಮುಂದೆ ಹೋಗಿ, ಸಾಧಾರಣ ಮುಕ್ಕಾಲು ಫರ್ಲಾಂಗ್ ಕ್ರಮಿಸುವಾಗ ಅಲ್ಲಿ ರಸ್ತೆ ಅಂತ್ಯವಾಗಿತ್ತು. ಓಣಿಯ ಎರಡೂ ಬದಿಯ ಎತ್ತರ ಕಟ್ಟಡಗಳನ್ನು ಭದ್ರವಾಗಿ ಜೋಡಿಸಿ, ಓಣಿಯಿಂದ ಮುಂದೆಲ್ಲಿಗೂ ದಾರಿ ಇರದಂತೆ ಬಲವಾದ, ಸಾಧಾರಣ ಹದಿನೆಂಟು ಅಡಿ ಎತ್ತರದ, ಬಿರುಕಿಲ್ಲದ, ಸೆರೆಯಿಲ್ಲದ, ಚಡಿಯಿಲ್ಲದ ಗೋಡೆಯೊಂದು ಭಯಂಕರವಾಗಿ ನಿಂತಿತ್ತು. ಪ್ರಕೃತ ರಸ್ತೆಯ ಈ ಪರಿಸ್ಥಿತಿ ಗೊತ್ತಿದ್ದುದರಿಂದಲೇ ಈ ಕೊನೆಯಲ್ಲಿ ಪೊಲೀಸರಾಗಲೀ ಸಿಪಾಯಿಗಳಾಗಲೀ ನಿಂತಿರಲಿಲ್ಲ. ಇಲ್ಲಿಂದ ಹಿಂತಿರುಗಿ ಹೋದರೆ ಸಿಪಾಯಿಗಳು ಎದುರು ಸಿಕ್ಕುವರೆಂದು ಜೀನ್‌ವಾಲ್‌ಜೀನ್ ತಿಳಿದಿದ್ದ. ಅಡ್ಡಗೋಡೆಯೂ ಕಟ್ಟಡಗಳ ಗೋಡೆಯೂ ಸಂಧಿಸಿದಲ್ಲಿ ತನ್ನ ತೊಡೆ ಮತ್ತು ತೋಳಿನ ಬಲದಿಂದ ತಾನೊಬ್ಬ ಮಾತ್ರ ಏರಿ ಹೋಗಬಲ್ಲನೆಂದು ಅವನು ತಿಳಿಯುತ್ತಿದ್ದರೂ ಕೋಸೆಟ್ಟಿ ಸಮೇತವಾಗಿ ಹತ್ತುವುದು ಅಸಾಧ್ಯವೆಂದೂ ಗೊತ್ತಿತ್ತು. ಕೊನೆಗೆ ಅವನು ಸಂಪೂರ್ಣ ಹತಾಶನಾಗಿ ನಿಂತ. ಪ್ರತಿ ನಿಮಿಷವೂ ಜೇವರ್ಟ್ ಅವನ ಸಮೀಪಕ್ಕೆ ಬರುತ್ತಿದ್ದಂತೆ ಜೀನ್‌ವಾಲ್‌ಜೀನನನ್ನು ಇಬ್ಬದಿಗಳಿಂದ ತಡೆಕಟ್ಟಿ, ವಿಧಿಯೇ ಅವನನ್ನು ನೋಡಿ ವಿಕಟಹಾಸ್ಯ ಮಾಡುತ್ತಿದ್ದಂಥ ಪ್ರಸಂಗ ಅದಾಗಿತ್ತು.

೪. ಘನ ಉದ್ದೇಶ, ದೃಢ ನಿರ್ವಹಣೆ

ಸಿಪಾಯಿಗಳು ಬರುವ ಹೆಜ್ಜೆ ಸಪ್ಪುಳ ಹೆಚ್ಚುಹೆಚ್ಚು ಸ್ಪಷ್ಟವಾಗಿ ಕೇಳಿಸತೊಡಗಿತು. ಅಡ್ಡಗೋಡೆಯನ್ನು ಅದರ ಒಂದು ಮೂಲೆಯಿಂದ ಏರಿ ತಲಪುವ ಚಮತ್ಕಾರ ಮತ್ತು ಸಾಮರ್ಥ್ಯ ಜೀನ್‌ವಾಲ್‌ಜೀನನಿಗಿದ್ದರೂ ಕೋಸೆಟ್ಟಿಯನ್ನು ಸಾಗಿಸುವ ದಾರಿ ಕಾಣದೆ ಅರೆಕ್ಷಣ ನಿಂತುಬಿಟ್ಟ. ಇಂಥ ಸನ್ನಿವೇಶಗಳಲ್ಲಿ ಅವನಿಗೆ ಎರಡು ವಿಧದ ಮನಸ್ಸು ಸಹಾಯಕ್ಕೆ ಬರುತ್ತಿದ್ದುವು. ಒಂದು ಮನಸ್ಸಿನಿಂದ ದೈವಿಕ ಮತ್ತು ಧಾರ್ಮಿಕ ಭಾವನೆಗಳನ್ನು ಸದಾ ಕಾದಿಟ್ಟು, ಅವನ್ನು ಋಷಿವರ್ಯನಂತೆ ಅನುಷ್ಠಾನಕ್ಕೆ ತರುತ್ತಿದ್ದ; ಮತ್ತೊಂದರಿಂದ ಮಹಾ ದರೋಡೆಕಾರನ ಚಮತ್ಕಾರ, ಸಾಹಸ, ಹುಟ್ಟುಬುದ್ಧಿ, ಅನುಭವಗಳನ್ನು ಕಾದಿಟ್ಟು, ಈ ಎರಡನೆಯದನ್ನು ಮೊದಲನೆಯದರ ಅಡಿಯಾಳಾಗಿರಿಸಿ ಸಹಾಯಕ್ಕೆ ಮಾತ್ರ ಉಪಯೋಗಿಸುತ್ತಿದ್ದ. ಈಗ ಅವನ ಸಹಾಯಕ್ಕೆ ಈ ಎರಡೂ ಮನಸ್ಸುಗಳು ಧಾವಿಸಿ ಬಂದಿದ್ದುವು. ದೈವದತ್ತವಾಗಿ ತನಗೆ ದೊರಕಿದ್ದ ಕೋಸೆಟ್ಟಿಯ ರಕ್ಷಣೆಯ ಜೊತೆಯಲ್ಲೇ ತನ್ನ ರಕ್ಷಣೆಗೆ ಸಹ ಸಹಾಯವಾಗುವ ಸಾಧನ ಅವನಿಗೆ ರಸ್ತೆ ಕರೆಯ ದೀಪಕಂಬದಲ್ಲಿ ತೋರಿಬಂತು. ಬೆಳುದಿಂಗಳ ಇರುಳಾದ್ದರಿಂದ ದೀಪ ಉರಿಯುತ್ತಿರಲಿಲ್ಲ. ಅದನ್ನು ಹಗ್ಗದಿಂದ

ಎತ್ತರದಲ್ಲಿ ತೂಗಲಾಗಿತ್ತು. ದೀಪಕ್ಕೆ ಬೇಕಾದಷ್ಟು ಉದ್ದದ ಹಗ್ಗ ಕಂಬದ ಬುಡಕ್ಕೆ ಚಕ್ರ ಸುತ್ತಿ ಕೊಂಡಿತ್ತು. ಜೀನ್‌ವಾಲ್‌ಜೀನ್ ಹಗ್ಗವನ್ನು ಕಂಡೊಡನೆ ಜಾಗೃತನಾಗಿ ಕೂಡಲೇ ಕಾರ್ಯ ಪ್ರವೃತ್ತನಾದ. ಮೊದಲು ಅದನ್ನು ಸದ್ದುಮಾಡದೆ ಬಿಚ್ಚಿ ತೆಗೆದುಕೊಂಡ. ಗೋಡೆಯ ಮೇಲಿನ ಕೊನೆಯನ್ನು ನೋಡಿ, ಒಂದು ಕೊನೆಯಲ್ಲಿ ಗೋಡೆಗೆ ಮುಟ್ಟಿಕೊಂಡಿದ್ದ ಮರದ ಗೆಲ್ಲನ್ನು ಗುರುತಿಸಿದ. ಕೋಸೆಟ್ಟಿಯನ್ನು ಆ ಗೆಲ್ಲಿದ್ದ ಕಡೆಯ ಮೂಲೆಯಲ್ಲಿ ನಿಲ್ಲಿಸಿದ. ಅನಂತರ ತನ್ನ ಅಂಗವಸ್ತ್ರವನ್ನು ಅವಳ ಕಂಕುಳ ಅಡಿಗಾಗಿ ತಂದು, ಎದೆಗೆ ಸುತ್ತಿ, ಹಿಂದುಗಡೆ ಗಂಟು ಹಾಕಿದ. ಈ ಅಂಗವಸ್ತ್ರದ ಗಂಟಿನ ಮುಂದೆ ಉಳಿದಿದ್ದ ಎರಡೂ ಕೊನೆಗಳಿಗೆ ದೀಪಸ್ತಂಭದಿಂದ ತೆಗೆದಿದ್ದ ಹಗ್ಗದ ಒಂದು ಕೊನೆಯನ್ನು ಗಟ್ಟಿಯಾಗಿ ಕಟ್ಟಿದ. ಇದನ್ನೆಲ್ಲ ಕಂಡು ಕೋಸೆಟ್ಟಿ ಹೆದರಿ, ಬಲು ಮೆಲ್ಲಗೆ ಕೇಳಿದಳು, "ಅಪ್ಪಾ, ನನಗೆ ಹೆದರಿಕೆಯಾಗುತ್ತದೆ. ಯಾರು ಬರುತ್ತಾರೆ ?"

"ಮಾತಾಡದಿರು. ತೆನಾರ್ಡಿಯರ್ ಬರುತ್ತಿದ್ದಾನೆ. ನಾನು ಹೇಳಿದ ಹಾಗೆ ಕೇಳು." ಎಂದ. ಹೀಗೆ ಮಾತಾಡುತ್ತಿದ್ದ ಹಾಗೆಯೇ ತನ್ನ ಬೂಟ್ಸುಗಳನ್ನು ಕಳಚಿ ಗೋಡೆಯ ಮೇಲಾಗಿ ಆಚೆ ಬದಿಗೆ ಎಸೆದ. ಅನಂತರ, ಹಗ್ಗದ ಇನ್ನೊಂದು ಕೊನೆಯನ್ನು ಹಲ್ಲಿನಲ್ಲಿ ಕಚ್ಚಿಕೊಂಡು, ಅಡ್ಡ ಗೋಡೆಯೂ ರಸ್ತೆಯ ಕಟ್ಟಡಗಳೂ ಕೂಡಿದ್ದ ಸಂದಿನಲ್ಲೇ ಮೇಲೆ ಏರತೊಡಗಿದ. ತನ್ನ ಒಂದೊಂದು ಕೈ ಮತ್ತು ಕಾಲುಗಳಿಂದ ಗೋಡೆಯನ್ನು ನೂಕುವುದರ ಮೂಲಕ ಜೀನ್‌ವಾಲ್ ಜೀನ್ ಆ ಗೋಡೆಯ ತುದಿಗೆ ತಲಪಿದ. ಕೂಡಲೇ ತನ್ನ ಬಾಯಿಯಲ್ಲಿ ಕಚ್ಚಿಕೊಂಡಿದ್ದ ಹಗ್ಗವನ್ನೆಳೆಯುತ್ತ ಕೋಸೆಟ್ಟಿಯನ್ನು ಮೇಲಕ್ಕೆ ಸಾಗಿಸಿದ.

ಅನಂತರ ಮೊದಲೇ ನೋಡಿದ್ದ ಮರದ ಗೆಲ್ಲಿಗಾಗಿ ಅವನು ಕೋಸೆಟ್ಟಿ ಸಮೇತನಾಗಿ ಗೋಡೆಯ ಆಚೆ ಬದಿಯ ನೆಲಕ್ಕೆ ಇಳಿದ. ಆ ಗಳಿಗೆಯಲ್ಲೇ ಸಿಪಾಯಿಗಳ ಕಾಲಸಪ್ಪುಳ ಗೋಡೆಯ ಹೊರ ಬದಿಯಿಂದ ಕೇಳುತ್ತಿತ್ತು. ಜೇವರ್ಟ್ ಸಿಪಾಯಿಗಳನ್ನು ಗದರಿಸುತ್ತಿದ್ದುದನ್ನೂ ಜೀನ್ ವಾಲ್‌ಜೀನ್ ಕೇಳಿದ.

೫. ಒಗಟಿನ ಆರಂಭ

ಜೀನ್‌ವಾಲ್‌ಜೀನ್ ಇಳಿದಿದ್ದುದು ಒಂದು ತೋಟದಲ್ಲಿ. ಅದು ವಿಶಾಲವಾಗಿದ್ದರೂ ಹಾಳು ಬಿದ್ದಿದ್ದಂತೆ ತೋರುತ್ತಿತ್ತು. ಅದರ ಅಂಚಿನಲ್ಲಿ ನೆಲಕ್ಕೆ ಕಲ್ಲು ಹಾಸಿದ್ದ ಕಾಲುದಾರಿಯೂ ತೋಟದ ಒಂದು ತುದಿಯಲ್ಲಿ ಮರಗಳ ಒಂದು ತೋಪೂ ಇದ್ದುವು. ಅವನು ನೋಡುತ್ತಿದ್ದುದು ಇರುಳಿನಲ್ಲಿ, ಅದೂ ಬೆಳುದಿಂಗಳಿನಲ್ಲಿ ಆಗಿದ್ದುದರಿಂದ, ಆ ಸ್ಥಳವೆಲ್ಲ ಶತಮಾನಗಳಿಂದ ಹಾಳು ಬಿದ್ದಿದ್ದಂತೆ ಭಾಸವಾಗುತ್ತಿತ್ತು. ಆದರೆ, ಅವನಿಗೆ ನಿಚ್ಚಳವಾಗಿ ಕಾಣುವಷ್ಟು ದೂರದಲ್ಲಿ ಸೊಗಸಾದ ಸಿಹಿಸೌತೆ ಬಳ್ಳಿಗಳ ಸಾಲುಗಳು ಇದ್ದುವು.

ತೋಪು ಇರದ ಮತ್ತೊಂದು ಬದಿಯಲ್ಲಿ ಎತ್ತರವಾದ ಪುರಾತನ ಕಾಲದ್ದೆಂದು ತೋರಿ ಬರು ತ್ತಿದ್ದ ಕಟ್ಟಡಗಳಿದ್ದುವು. ಇವುಗಳ ಹಿಂಭಾಗ ಮಾತ್ರ ಜೀನ್‌ವಾಲ್‌ಜೀನನಿಗೆ ತೋರುತ್ತಿತ್ತು. ಈ ಕಡೆಗೆ ಬಾಗಿಲುಗಳೇ ಇದ್ದಂತೆ ಕಾಣಲಿಲ್ಲ. ಅಲ್ಲಲ್ಲಿ ಇದ್ದ ಕೆಲವು ಕಿಟಕಿಗಳೂ ಮುಚ್ಚಿಕೊಂಡಿ ದ್ದುವು. ಕಟ್ಟಡದ ಹಿಂಭಾಗ ಜನರಿಂದ ಎಂದೂ ಉಪಯೋಗಿಸಲ್ಪಡದಿದ್ದಂತೆ ತೋರುತ್ತಿತ್ತು. ಅಲ್ಲೆಲ್ಲೂ ಮೃಗವಾಗಲೀ ಮನುಷ್ಯನಾಗಲೀ ಇದ್ದಂತೆ ಕಾಣಲಿಲ್ಲ.

ಈ ಅಪರಿಚಿತ ಸ್ಥಳದಲ್ಲಿ ಬಂದಿಳಿದಿದ್ದ ಅವನಿಗೆ ಮುಂದಿನ ಹಾದಿ ಹೊಳೆಯಲಿಲ್ಲ.

ಬಹಿರಂಗದ ಅರೆಬೆಳಕೂ ಕುಳಿರೂ ಇದ್ದುದರ ಜತೆಗೆ ಅವನ ಅಂತರಂಗದ ಕತ್ತಲೂ ಚಳಿಯೂ ಬಂದು ತುಂಬತೊಡಗಿದುವು. ಹೀಗೆ ಅವನು ನಿಂತಿದ್ದಾಗ ತುಸು ದೂರದಿಂದ ಸಂಗೀತ ಘೋಷ ಕೇಳತೊಡಗಿತು. ಅದು ಒಮ್ಮೆ ಸ್ವಲ್ಪ ಕೇಳಿ, ಅಲ್ಲಿಗೆ ನಿಂತು ಪುನಃ ಕೇಳಿಸುತ್ತ ಕ್ರಮೇಣ ಬಲು ಸ್ಪಷ್ಟವಾಗಿ ಕೇಳತೊಡಗಿತು. ಆ ಘೋಷ ಬಲು ಸೌಮ್ಯ. ಅದರ ಇಂಪನ್ನು ಗ್ರಹಿಸುವಾಗ ಅದು ದೇವಲೋಕದ್ದೇ ಆಗಿರಬೇಕು ಹೊರತು ಮನುಷ್ಯಲೋಕದ್ದಲ್ಲವೆಂಬಂತೆ ಅನ್ನಿಸುತ್ತಿತ್ತು. ಸದ್ಯ ಜನಿಸಿದ ಶಿಶು ತಾನು ದೇವಲೋಕದಲ್ಲಿ ಕೇಳುತ್ತಿದ್ದ ಸಂಗೀತವನ್ನು ಈ ಲೋಕಕ್ಕೆ ತಂದಿದ್ದ ಹಾಗಿತ್ತು ಆ ಘೋಷ. ದೇವರಲ್ಲಿ ಭಕ್ತಿಯೂ ಪ್ರೇಮವೂ ಇದ್ದ ಜೀನ್‌ವಾಲ್‌ಜೀನನಿಗೆ ಅದು ಮಹಾಪುರುಷರು ಇಹಲೋಕವನ್ನು ಬಿಟ್ಟೊಡನೆ ಕೇಳುವ ದೇವಲೋಕದ ಅಮರಗಾನದಂತೆ ಭಾಸವಾಯಿತು. ಆ ಘೋಷ ಅನೇಕ ಕೋಮಲ ಕಂಠಗಳಿಂದ ಹೊರಟಂತೆ ಇತ್ತು. ಕನ್ನಿಕೆಯರೂ ಎಳೆಬಾಲಕಿಯರೂ, ದೇವರ ಸ್ತೋತ್ರವನ್ನು ಪಠಿಸುತ್ತ, ಆ ಸ್ತೋತ್ರದಲ್ಲೇ ಮೈಮರೆತು ಹಾಡುತ್ತಿದ್ದಂತೆ ಭಾಸವಾಗುತ್ತಿತ್ತು. ಅದು ಇಂಪಾಗಿ, ಅಲೆಅಲೆಯಾಗಿ ಪಸರಿಸಿ ಬರುತ್ತಿತ್ತು. ಜೀನ್‌ವಾಲ್‌ಜೀನನೂ ಕೋಸೆಟ್ಟಿಯೂ ತಂತಮ್ಮ ಹೃದಯದ ಪ್ರೇರಣೆಯಿಂದ ಮೊಣಕಾಲೂರಿ ದೇವರ ಧ್ಯಾನಗೈದರು. ಜೀನ್‌ವಾಲ್‌ಜೀನ್ ಭಾವಪರವಶನಾಗಿ ತಾನು ಯಮಲೋಕದಿಂದ ದೈವಸಹಾಯದಿಂದ ದೇವಲೋಕಕ್ಕೇ ಬಂದಿಳಿದಿರುವುದಾಗಿ ಗ್ರಹಿಸಿದ. ಈ ಘೋಷ ಕ್ರಮೇಣ ಮೃದುವಾಗಿ ಮಾಯವಾಗುತ್ತ ಸಂಪೂರ್ಣ ನಿಂತಿತು. ಆಗಲೇ ಅವನಿಗೆ ಕೋಸೆಟ್ಟಿಯ ನೆನಪು ಚೆನ್ನಾಗಿ ಬಂದು ಕೇಳಿದ, "ನಿದ್ರೆ ಬರುತ್ತದೆಯೇ ಕೋಸೆಟ್ಟಿ?"

"ಇಲ್ಲ ಚಳಿ ಬಹಳವಾಗಿದೆ. ತೆನಾರ್ಡಿಯರ್ ಇನ್ನೂ ಬರುತ್ತಿದ್ದಾನೆಯೇ ?" ಎಂದು ಕತ್ತಲೆಯ ಕಡೆಗೆ ಕೈತೋರಿಸಿ ಕೇಳಿದಳು.

"ಅವನು ಆಗಲೇ ಹೋಗಿದ್ದಾನೆ. ಇನ್ನು ಹೆದರುವ ಅಗತ್ಯವಿಲ್ಲ," ಎಂದು ಹೇಳುತ್ತ ಜೀನ್‌ವಾಲ್‌ಜೀನ್ ತನ್ನ ಹೊರಕೋಟನ್ನು ಕೋಸೆಟ್ಟಿಗೆ ಹೊದೆಸಿದ. ಅನಂತರ ಅವಳನ್ನು ಅಲ್ಲೇ ಮಲಗಿಸಿ ಅನುಕೂಲ ಸ್ಥಳ ಯಾವುದಾದರೂ ಸಿಕ್ಕುತ್ತದೋ ಎಂದು ಹುಡುಕುತ್ತ ಹೊರಟ.

ಹೀಗೆ ಹುಡುಕುತ್ತ ಹೋದಾಗ ದೊಡ್ಡ ಕಟ್ಟಡದ ಒಂದು ಕೋಣೆಯಿಂದ ಕೊಂಚಬೆಳಕು ಸೂಸುತ್ತಿದ್ದುದನ್ನು ಕಂಡ. ಅದರ ಕಡೆಗೆ ಬಲು ಮೃದು ಹೆಜ್ಜೆಯಿಂದ, ಅಡಗಿಕೊಂಡೇ ಹೋಗಿ, ಅಲ್ಲೇನಾದರೂ ಸ್ಥಳಾನುಕೂಲವಿರಬಹುದೇ ಎಂದು ನೋಡಿದ. ಒಳಗೆ ನೆಲದ ಮೇಲೆ ಒಂದು ಹೆಣದಂತೆ ಏನೋ ಯಾರೋ ಬಿದ್ದಿದ್ದುದನ್ನು ಕಂಡ. ಹೆಣದ ಎರಡೂ ಕೈಗಳು ಚಾಚಿದ್ದು, ಮುಖ ನೆಲವನ್ನು ಮುಟ್ಟಿಕೊಂಡಿತ್ತು. ಕುತ್ತಿಗೆಯ ಬಳಿ ಒಂದು ಹಗ್ಗವೂ ಇತ್ತು. ಅದು ಶಿಲುಬೆಯಿಂದಿಳಿಸಿದ್ದ ಹೆಣದಂತಿತ್ತು. ಅರೆಬೆಳಕಿನಲ್ಲಿ ಅಸ್ಪಷ್ಟವಾಗಿದ್ದು, ನೋಡುತ್ತ ಹೋದ ಹಾಗೆ ಅಲುಗಾಡುವಂತೆ ತೋರುತ್ತ ಬಲು ಭೀಕರ ಭಾವನೆ ಪ್ರಚೋದಕವಾಗುತ್ತಿತ್ತು. ಇವನು ಗಾಬರಿಯಿಂದ ಹೆದರಿ ಓಡಿ ಬಂದುಬಿಟ್ಟ.

ಅದು ಹೆಣವೇ ಆಗಿತ್ತೇ ಅಥವಾ ಯಾರಾದರೂ ಯಾವುದಾದರೊಂದು ವಿಧದ ಹಠಯೋಗಗೈಯುತ್ತಿದ್ದುದೇ ಯಾವುದಾದರೊಂದು ಪ್ರಾಯಶ್ಚಿತ್ತ ಕರ್ಮ ಅದಾಗಿತ್ತೇ ಇಂಥ ಯಾವ ಅಭಿಪ್ರಾಯವೂ ಜೀನ್‌ವಾಲ್‌ಜೀನನಿಗೆ ಆಗಲೂ ಆಗಲಿಲ್ಲ, ಮುಂದೆ ಕೂಡ ಎಂದೂ ಆಗಲಿಲ್ಲ. ಅಂತೂ ಅದು ಅತಿ ಭಯಂಕರ ಸನ್ನಿವೇಶ.

ಹಿಂದೆ ಬಂದು ನೋಡುವಾಗ ಕೋಸೆಟ್ಟಿ ಚಳಿಯಲ್ಲಿ ಕಲ್ಲೇ ಆಗಿದ್ದಳು. ಇನ್ನು ಕಾಲುಗಂಟೆಯ ಒಳಗಾದರೂ ಅವಳಿಗೆ ಶಾಖ ಒದಗಿಸದಿದ್ದರೆ ಅವಳು ಸಾಯುವುದು ಖಂಡಿತವೆಂದು ತೋರಿತು.

ಈ ವಿಷಯದಲ್ಲಿ ಅವನು ಚಿಂತಾಮಗ್ನನಾಗಿದ್ದಾಗ ಸೌತೆ ತೋಟದಿಂದ ಗಂಟೆಯ ಸದ್ದು ಕೇಳಿಸಿತು. ಗಂಟೆಯನ್ನು ಯಾರೋ ಆಗಾಗ ಅಲುಗಾಡಿಸುತ್ತಿದ್ದಂತೆ ಕೇಳುತ್ತಿತ್ತು. ಜೀನ್‌ವಾಲ್ ಜೀನ್ ಸದ್ದು ಕೇಳಿಬರುತ್ತಿದ್ದ ತೋಟದ ಕಡೆಗೆ ಹೋಗಿ, ಎಚ್ಚರಿಕೆಯಿಂದ ಪರೀಕ್ಷಿಸತೊಡಗಿದ. ಆಗ ಅಲ್ಲಿ ಯಾರೋ ಒಬ್ಬ ಸೌತೆಕಾಯಿಗಳಿಗೆ ಚಾಪೆ ಮುಚ್ಚುತ್ತಿರುವುದನ್ನು ಕಂಡ. ಆ ಮನುಷ್ಯ ಅತ್ತಿತ್ತ ನಡೆದಾಗಲೆಲ್ಲ ಸದ್ದು ಕೇಳಿಸುತ್ತಿತ್ತು. ಇದನ್ನು ಕಂಡು ಗಂಟೆಯೇ ಆ ಮನುಷ್ಯನಲ್ಲಿರ ಬೇಕೆಂದೂ ಇದೆಂಥ ವಿಚಿತ್ರ ಮನುಷ್ಯನೆಂದೂ ಅವನಿಗೆ ಆಶ್ಚರ್ಯವಾಯಿತು.

೬. ಘಂಟಾಪುರುಷ

ತಾನು ಸುಮ್ಮನೆ ನಿಂತರೆ ಕೋಸೆಟ್ಟಿ ಸಾಯುವಳೆಂದು ಜೀನ್‌ವಾಲ್‌ಜೀನ್ ಗಾಬರಿಗೊಂಡಿದ್ದ. ಪ್ರಕೃತ ಅವಶ್ಯವಿರುವ ಸಹಾಯ ಮನುಷ್ಯನಿಂದಲೇ ಆಗಬೇಕಾಗಿದ್ದುದರಿಂದ, ಸೌತೆ ತೋಟದ ಮನುಷ್ಯನನ್ನಾದರೂ ಮಾತಾಡಿಸುವುದೆಂದು ನಿಶ್ಚೈಸಿಕೊಂಡ. ಈ ಉದ್ದೇಶದಿಂದ, ಕೈಯಲ್ಲಿ ನೂರು ಫ್ರ್ಯಾಂಕ್ ಹಣ ಹಿಡಿದುಕೊಂಡು, ಧೈರ್ಯವಾಗಿ ಸೌತೆತೋಟದ ಕೆಲಸಗಾರನ ಎದುರು ಹೋಗಿ ನಿಂತು, ಕೈಯಲ್ಲಿ ಹಣ ತೋರಿಸುತ್ತ, "ಒಂದು ನೂರು ಫ್ರ್ಯಾಂಕ್ ಇನಾಂ ಕೊಡುವೆನು, ದಯಮಾಡಿ ಸ್ವಲ್ಪ ಸಹಾಯ ಒದಗಿಸುವೆಯೇನು ?" ಎಂದು ಕೇಳಿದ.

ಕೆಲಸಗಾರ ತಲೆಯೆತ್ತಿ ನೋಡಿದ. ಜೀನ್‌ವಾಲ್‌ಜೀನ್ ಬೆಳುದಿಂಗಳಿನಲ್ಲಿ ನಿಂತಿದ್ದುದರಿಂದ ಕೆಲಸಗಾರನಿಗೆ ಇವನ ಮುಖ ಚೆನ್ನಾಗಿ ಕಂಡಿತು. ಆತ ಪರಮಾಶ್ಚರ್ಯದಿಂದ, "ಮಹಾತ್ಮಾ ಫಾದರ್ ಮೆಡಲೀನರಲ್ಲವೆ ಈಗ ದರ್ಶನ ಕೊಡುತ್ತಿರುವುದು?" ಎಂದು ತನಗೆ ತಾನೇ ಅಂದು ಕೊಂಡ.

ಜೀನ್‌ವಾಲ್‌ಜೀನನಿಗೆ ಬಲು ಹೆದರಿಕೆಯೂ ಆಶ್ಚರ್ಯವೂ ಆದುವು. ಯಾರೂ ತನ್ನನ್ನು ಗುರುತಿಸಬಾರದೆಂದಿದ್ದಾಗಲೇ ಈ ಅಪರಿಚಿತ ಸ್ಥಳದಲ್ಲಿ ಈ ವಿಚಿತ್ರ ವೃದ್ಧನೊಬ್ಬ ತನ್ನನ್ನು ಗುರುತಿಸಿದುದನ್ನು ಕಂಡು ಮುಂದೆ ಏನೂ ಮಾಡಲಾರದೆ ಆದ. ಅವನೆದುರಿಗಿದ್ದ ವೃದ್ಧನ ಒಂದು ಕಾಲು ಸರಿಯಿರಲಿಲ್ಲವೆಂದು ಕಂಡ. ಅವನು ಮೊಣಕಾಲಿಗೆ ಚರ್ಮದ ಕವಚ ಕಟ್ಟಿಕೊಂಡಿದ್ದ. ಅದರಲ್ಲೇ ಒಂದು ಘಂಟಾಮಣಿ ನೇತಾಡುತ್ತಿತ್ತು. ಜೀನ್‌ವಾಲ್‌ಜೀನ್ ಇದನ್ನೆಲ್ಲ ನೋಡಿ ಮಾತಾಡುವ ಮೊದಲೇ, ಆ ವೃದ್ಧ ಬಹು ಭಕ್ತಿ ಆದರಗಳಿಂದ ಮಾತಾಡತೊಡಗಿದ, "ತಮ್ಮ ದರ್ಶನಲಾಭಕ್ಕಾಗಿ ದೇವರನ್ನು ಎಷ್ಟು ಕೊಂಡಾಡಿದರೂ ಸಾಲದು. ತಾವು ದೇವಲೋಕದಿಂದಲೇ ಬಂದಿರಬೇಕು. ತಾವು ಅಲ್ಲಿಂದಲ್ಲದೆ ಮತ್ತೆಲ್ಲಿಂದ ತಾನೆ ಬರುವಿರಿ? ಈ ರಾತ್ರಿ ಅಂಗಿ ಸಹ ತೊಡದೆ ಬಂದದ್ದೇನು? ಈ ದರ್ಶನ ಕೊಡೋಣದರ ಅಮೋಘ ಮರ್ಮ ಏನಿದೆ, ಮಹಾತ್ಮಾ!" ಎಂದು ಆ ವೃದ್ಧ ಪರಮ ಭಕ್ತಿ, ಆನಂದ, ಭಾವಪರವಶತೆಯಿಂದ ಹೇಳಿದ.

ಜೀನ್‌ವಾಲ್‌ಜೀನನಿಗೆ ಈ ಮಾತು ಅರ್ಥವಾಗಲಿಲ್ಲ. ಆದರೆ, ಕೆಲಸಗಾರ ಹುಚ್ಚನಲ್ಲವೆಂದು ತೋರುತ್ತಿದ್ದ. ಹಾಗಾಗಿ ಅವನು ಕೇಳಿದ, "ಅಯ್ಯಾ, ನನ್ನ ಹೆಸರು ನಿನಗೆ ಹೇಗೆ ಗೊತ್ತು ?"

"ನನ್ನ ಜೀವ ಉಳಿಸಿದವರು ತಾವಲ್ಲವೇ, ಪ್ರಭೂ ?" ಎಂದು ಹೇಳುತ್ತ ಆ ಕೆಲಸಗಾರ ಜೀನ್‌ವಾಲ್‌ಜೀನನನ್ನು ಪ್ರಶ್ನಿಸುತ್ತಿರುವವನಂತೆ ನೋಡಿದ. ಜೀನ್‌ವಾಲ್‌ಜೀನನಿಗೆ ಕೆಲಸಗಾರನ ಮುಖ ಚೆನ್ನಾಗಿ ಕಂಡಿತು, ಅವನು ಫಾಶಲೆವೆಂಟನೆಂದು ಗೊತ್ತಾಯಿತು. ಅವನನ್ನು ಮಾತಾಡ ಬಿಟ್ಟರೆ ಸಮಯ ಹಾಳಾದೀತೆಂದು ತಾನೇ ಅವನಿಗೆ ಕೇಳಿದ, "ಇಲ್ಲಿ ಈ ರಾತ್ರಿ ನೀನು ಮಾಡುತ್ತಿರು

ವುದೇನಯ್ಯ, ಫಾಶೆಲೆವೆಂಟ್ ?"

"ಇಬ್ಬನಿ ಬಿದ್ದರೆ ಸೌತೆ ಹಾಳಾಗುತ್ತದೆ. ಹಾಗಾಗಿ ಚಾಪೆ ಮುಚ್ಚುತ್ತಿದ್ದೇನೆ."

"ನಿನ್ನ ಕಾಲಿಗೆ ಗಂಟೆ ಕಟ್ಟಿರುವುದೇಕೆ ?"

"ಅವರಿಗೆ ತಿಳಿಯಬೇಕೆಂದು."

"'ಅವರು' ಅಂದರೆ ಯಾರು ?"

"'ಅವರು' ಅಂದರೆ ಕಾನ್ವೆಂಟಿನವರು. ನನ್ನ ಕಾಲು ಮುರಿದ ಮೇಲೆ ಕಾನ್ವೆಂಟಿನಲ್ಲಿ ಕೆಲಸ ಕೊಡಿಸಿದ್ದು ನೀವೇ ಅಲ್ಲವೆ, ಪ್ರಭೂ ?"

"ಅವರಿಗೆ ತಿಳಿಯಬೇಕೇಕೆ ? ಅಥವಾ, ತಿಳಿದೇನು ಪ್ರಯೋಜನ ?"

"ಅವರು ಹೆಂಗುಸರಲ್ಲವೆ, ಪ್ರಭು? ಗಂಡುಸರನ್ನು ಅವರು ನೋಡಬಾರದಂತೆ. ಈ ಸದ್ದು ಕೇಳಿ ನಾನಿದ್ದಲ್ಲಿಗೆ ಅವರು ಬರದಂತೆ ಅವರೇ ನೋಡಿಕೊಳ್ಳುವರು. ಇರಲಿ ಪ್ರಭು! ತಾವು ಇಲ್ಲಿಗೆ ಬಂದದ್ದು ಹೇಗೆ ?"

"ನಿನ್ನ ಪ್ರಶ್ನೆಗೆ ಉತ್ತರ ಮತ್ತೆ, ಫಾಶೆಲೆವೆಂಟ್. ಸದ್ಯ ನಾನು ಬಂದು ಆಗಿದೆಯಷ್ಟೆ. ನನಗೆ ಸ್ವಲ್ಪ ಸ್ಥಳ ಈಗ ಬೇಕು, ಮತ್ತು, ಬೇರೆ ಉಪಕಾರವೂ ಬೇಕು."

"ತಮಗೆ ನಾನು ಏನುತಾನೆ ಮಾಡುವುದಿಲ್ಲ, ಅಪ್ಪಣೆಯಾಗಲಿ."

"ನನಗೆ ಸದ್ಯ ಬೇಕಾದುದು ಬೆಚ್ಚಗಿರುವ ಸ್ಥಳ ಮತ್ತು ಬೆಂಕಿ. ನನ್ನ ಜೊತೆಯಲ್ಲೊಬ್ಬಳು ಹುಡುಗಿಯಿದ್ದಾಳೆ. ಅವಳಿಗೆ ಬೆಂಕಿ ಈಗ ಅಗತ್ಯವಾಗಿದೆ."

"ಎಲ್ಲ ಕೊಡೋಣ. ನನಗೆ ಅನುಕೂಲವಾದ ಮೂರು ಕೋಣೆಗಳಿವೆ. ಅವೆಲ್ಲವನ್ನೂ ತಮಗೆ ಒಪ್ಪಿಸುವೆನು. ಆದರೆ ಪ್ರಭೂ, ಆ ಹುಡುಗಿ . . .?"

ಫಾಶೆಲೆವೆಂಟ್ ಮಾತನ್ನು ಮುಂದುವರಿಸುವ ಮೊದಲೇ ಜೀನ್‌ವಾಲ್‌ಜೀನ್ ಹೇಳಿದ, "ನಾನು ಮೊದಲೇ ಅಂದಿದ್ದೇನಲ್ಲ. ನಿನ್ನಿಂದಾಗುವ ಉಪಕಾರ ಮಾಡಬೇಕೂಂತ. ನೀನು ಯಾವ ಪ್ರಶ್ನೆಯನ್ನೂ ಕೇಳಕೂಡದು, ಮತ್ತು ನನ್ನ ಕುರಿತಾಗಿ ಯಾರಲ್ಲೂ ಏನೂ ಪ್ರಸ್ತಾವಿಸಲೂ ಬಾರದು. ಇದೇ ನಿನ್ನಿಂದ ಬೇಕಾದ ಒಂದನೆಯ ಉಪಕಾರ."

"ತಮ್ಮಂಥ ಮಹಾತ್ಮರ ಪರೀಕ್ಷೆ ನನಗೇಕೆ? ತಮ್ಮ ಅಪ್ಪಣೆಯಂತೆ ನಡೆಯುತ್ತೇನೆ. ತಮ್ಮ ಧರ್ಮವಚನಗಳನ್ನು ಕೇಳಿ ಕೆಟ್ಟವರಿಲ್ಲ! ತಮಗೆ ಸ್ಥಳ ಬೇಕಷ್ಟೆ? ಬನ್ನಿ ಕೊಡುತ್ತೇನೆ," ಎಂದು ಹೇಳುತ್ತ ಜೀನ್‌ವಾಲ್‌ಜೀನನನ್ನು ಅವನ ಮನೆಗೆ ಕರೆದುಕೊಂಡು ಹೋದ. ಫಾಶೆಲೆವೆಂಟನ ಮನೆ ಅದೇ ತೋಟದಲ್ಲಿ ಒಂಟಿಯಾಗಿತ್ತು. ಅದರಲ್ಲಿ ಬೆಂಕಿಯೂ ಬೆಚ್ಚಗಿನ ಸ್ಥಳವೂ ಇದ್ದುವು. ಜೀನ್‌ವಾಲ್‌ಜೀನ್ ಕೋಸೆಟ್ಟಿಯನ್ನು ಎತ್ತಿಕೊಂಡು ಹೋಗಿ ಮಂಚದ ಮೇಲೆ, ಬೆಂಕಿಗೆ ಸಮೀಪವಾಗಿ ಮಲಗಿಸಿ ಬೆಚ್ಚಗಿನ ಬಟ್ಟೆಗಳನ್ನು ಹೊದೆಸಿದ.

ಫಾದರ್ ಮೆಡಲೀನರಿಗೆ ಅಷ್ಟಾದರೂ ಉಪಕಾರ ಮಾಡುವ ಸಂದರ್ಭ ಒದಗಿದ್ದಕ್ಕೆ ಫಾಶೆಲೆವೆಂಟ್ ಆನಂದಬಾಷ್ಪ ಸುರಿಸಿದ. ಮೇಜಿನ ಮೇಲೆ ಬಿಸ್ಕೆಟ್, ವೈನ್, ಮೊದಲಾದ ತಿಂಡಿ, ಪಾನೀಯಗಳನ್ನಿಟ್ಟು, ಜೀನ್‌ವಾಲ್‌ಜೀನ್ ಅವನ್ನು ಸ್ವೀಕರಿಸಬೇಕೆಂದು ಕೇಳಿಕೊಂಡ. ಆನಂದ ಪರವಶತೆಯಲ್ಲಿ, ನಿಂದಾ ಸ್ತುತಿ ಮಾಡಿದ, "ಪ್ರಭೂ, ತಮ್ಮ ಅಮೋಘ ಗುಣವೇ! ತಾವು ಜನರಿಗೆ ಜೀವದಾನ ಮಾಡಿದ ಅನಂತರ ಅವರನ್ನು ಮರೆತೇಬಿಡುವುದೇ? ಅದೂ ಕೃತಘ್ನತೆಯಲ್ಲವೇ? ತಮ್ಮಿಂದ ಉಪಕಾರ ಹೊಂದಿದವರಿಗೆ ಕೃತಜ್ಞತಾಬುದ್ಧಿ ಇರಬಾರದೆಂದು ತಾವು ಹಾಗೆ ವರ್ತಿಸುವಿರೇನು?"

೭. ಹಕ್ಕಿ ಸಿಕ್ಕಲಿಲ್ಲ, ದಕ್ಕಿದ್ದು ಗೂಡು ಮಾತ್ರ!

ಹಿಂದಿನ ಚರಿತ್ರೆಯನ್ನು ಇಲ್ಲಿ ಸ್ವಲ್ಪ ಹೇಳಬೇಕಾಗಿದೆ. ಫ್ಯಾಂಟೈನಳ ಮರಣ ಕಾಲದಲ್ಲಿ ಕೈದಾಗಿದ್ದ ಜೀನ್‌ವಾಲ್‌ಜೀನ್ ಜೈಲಿನಿಂದ ತಪ್ಪಿಸಿ ಹೋಗಿದ್ದನಷ್ಟೆ. ಹೀಗೆ ಓಡಿದವ ಪ್ಯಾರಿಸಿನಲ್ಲೇ ಇರಬೇಕೆಂದು ಪೊಲೀಸರು ಊಹಿಸಿದ್ದರು. ಅವರಿಂದ ತಲೆತಪ್ಪಿಸಿಕೊಂಡು ಬದುಕಬೇಕಾದವರಿಗೆ ಈ ನಗರದಷ್ಟು ಅನುಕೂಲ ಸ್ಥಳ ಬೇರೊಂದು ಇಲ್ಲವೆಂದು ಸರಕಾರಕ್ಕೂ ಅಪರಾಧಿಗಳಿಗೂ ಗೊತ್ತಿತ್ತು. ಹಾಗಾಗಿ ಅವನನ್ನು ಹುಡುಕಿ ಹಿಡಿಯಲೋಸ್ಕರವೇ ಸರಕಾರ ಜೇವರ್ಟನನ್ನು ಪ್ಯಾರಿಸಿಗೆ ಕರೆಸಿಕೊಂಡಿತ್ತು. ಜೇವರ್ಟನ ಸಾಹಸದಿಂದಲೇ ಪುನಃ ಅವನು ಕೈದಾಗಿದ್ದುದು. ಮುಂದೆ ಹಡಗದ ಧ್ವಜಸ್ತಂಭದಿಂದ ಬಿದ್ದ ಜೀನ್‌ವಾಲ್‌ಜೀನ್ ನೀರುಪಾಲಾಗಿ ಸತ್ತಿರುವನೆಂಬುದರಲ್ಲಿ ಜೇವರ್ಟನಿಗೆ ಸಂಶಯವಿರಲಿಲ್ಲ.

ಆದರೆ ಮೊಂಟ್‌ಫರ್ಮಿಯಲ್ಲಿಯ ಒಂದು ಹೊಟೇಲಿನಿಂದ ಆರೇಳು ವರ್ಷದ ಬಾಲಿಕೆಯನ್ನು ಒಬ್ಬ ಮುದುಕ ಅಪಹರಿಸಿದನೆಂಬ ವರ್ತಮಾನ ಜೇವರ್ಟ್ ಕೇಳಿ ಅವನ ಹಳೆ ವಿಧದ ಸಂಶಯಗಳು ಪುನಃ ಜೀವತಳೆದುವು. ಜೀನ್‌ವಾಲ್‌ಜೀನ್, ಕೋಸೆಟ್ಟಿ, ಫ್ಯಾಂಟೈನ್, ಮೊಂಟ್ ಫರ್ಮಿಯಲ್ ಈ ಹೆಸರುಗಳ ಪರಸ್ಪರ ಸಂಬಂಧ ಮತ್ತು ಚರಿತ್ರೆಗಳನ್ನು ಒಟ್ಟು ಮಾಡಿನೋಡಿ, ಜೀನ್‌ವಾಲ್‌ಜೀನ್ ಜೀವಂತನಾಗಿರಬೇಕೆಂದು ಜೇವರ್ಟ್ ತರ್ಕಿಸಿದ. ಈ ವಿಷಯದಲ್ಲಿ ಜೇವರ್ಟ್ ಸ್ವತಃ ಮೊಂಟ್‌ಫರ್ಮಿಯಲ್‌ವರೆಗೆ ಹೋಗಿ ತೆನಾರ್ಡಿಯರನನ್ನು ವಿಚಾರಿಸಿದ. ತೆನಾರ್ಡಿಯರ್ ಕೋಸೆಟ್ಟಿಯನ್ನು ಅವಳ ಅಜ್ಜ ಗುಲಿಯಾಮ್ ಲ್ಯಾಂಬರ್ಟ್ ಕರೆದುಕೊಂಡು ಹೋಗಿರುವನೆಂದೂ ಆತನ ವಿಳಾಸ ನನಗೆ ಗೊತ್ತಿಲ್ಲವೆಂದೂ ಸುಳ್ಳೇ ಹೇಳಿದ. ಸದಾ ಕ್ರಿಮಿನಲ್ ಸ್ವಭಾವದ ಕಾರ್ಯಗಳಲ್ಲಿರುತ್ತಿದ್ದ ತೆನಾರ್ಡಿಯರ್ ಪೊಲೀಸರು ಆಗಿಂದಾಗ್ಗೆ ಮೊಂಟ್ ಫರ್ಮಿಯಲಿಗೆ ಬರಬಾರದೆಂದು ಈ ರೀತಿ ಸುಳ್ಳಾಡಿದ.

ಜೇವರ್ಟನಿಗೆ ಇದಕ್ಕಿಂತ ಹೆಚ್ಚು ಅನುಭವ ದೊರಕಲಿಲ್ಲ. ಆದರೂ ಅವನ ಅಂತರಂಗ ಜೀನ್‌ವಾಲ್‌ಜೀನನ ವಾಸನೆಯನ್ನು ತಿಳಿದಿತ್ತು. ಅದು ಸದಾ ಎಚ್ಚರವಾಗಿಯೂ ಇತ್ತು. ಇದೇ ಸಮಯದಲ್ಲಿ ಪೊಲೀಸ್ ವರದಿಗಳನ್ನು ನೋಡುವಾಗ ಹಾಳುಬಿದ್ದ ಗಾರ್ಬೂ ಕಟ್ಟಡದ ದಾನಿಯಾಗಿದ್ದ ಭಿಕ್ಷುಕನೂ ಅವನ ರಕ್ಷಣೆಯಲ್ಲಿದ್ದ ಹುಡುಗಿಯೂ ಜೇವರ್ಟನ ಗಮನಕ್ಕೆ ಬಂದರು. ಸೇಂಟ್ ಮೆಡಾರ್ಡ್ ಇಗರ್ಜಿ ಬಳಿಯ ಮುದುಕ ಭಿಕ್ಷುಕ ಒಬ್ಬ ನಿವೃತ್ತ ಪೊಲೀಸನಾಗಿದ್ದುದರಿಂದ, ಅವನನ್ನು ಸುಲಭದಲ್ಲಿ ತನ್ನ ಕಡೆಗೆ ತೆಗೆದುಕೊಂಡು, ಆ ಭಿಕ್ಷುಕನ ವೇಷವನ್ನೇ ಜೇವರ್ಟ್ ಧರಿಸಿ ಜೀನ್‌ವಾಲ್‌ಜೀನನನ್ನು ಪರೀಕ್ಷಿಸಿದ. ಮುಂದೆ ನಡೆದ ಸಂಗತಿ ಗೊತ್ತಿದೆಯಷ್ಟೆ.

ಜೇವರ್ಟನಿಗಿದ್ದ ಅಧಿಕಾರದಲ್ಲಿ ಸಂಶಯಗ್ರಸ್ತನನ್ನು ಯಾವ ವಿಧದ ವಿಚಾರಣೆಯನ್ನೂ ಮಾಡದೆ ಕೈದುಮಾಡುವ ಅಧಿಕಾರವೂ ಸೇರಿತ್ತು. ಆದರೂ ಅವನು ಈ ದಾರಿಯನ್ನು ಹಿಡಿಯಲು ಹೆದರುತ್ತಿದ್ದ. ಒಂದನೆಯದಾಗಿ ಜೇವರ್ಟ್ ತನ್ನ ಕರ್ತವ್ಯದಲ್ಲಿ ಎಷ್ಟು ದಕ್ಷನಾಗಿದ್ದನೋ ಅಷ್ಟೇ ದಕ್ಷತೆಯಿಂದ ನಿರಪರಾಧಿಗಳ ಸ್ವಾತಂತ್ರ್ಯವನ್ನೂ ಕಾಯುತ್ತಿದ್ದ. ಆದ್ದರಿಂದಲೇ ನೂರಕ್ಕೆ ನೂರರಷ್ಟೂ ಸ್ಪಷ್ಟವಾದ ರುಜುವಾತು ಸಿಕ್ಕದೆ ಅವನು ಯಾರನ್ನೂ ಕೈದು ಮಾಡುತ್ತಿರಲಿಲ್ಲ. ಎರಡನೆಯದಾಗಿ, ಅವನು ಸರಕಾರಕ್ಕೂ ಹೆದರುತ್ತಿದ್ದ. ಪ್ರಜೆಗಳನ್ನು ತಮ್ಮ ಅಜಾಗ್ರತೆಯಿಂದ ಅಪಮಾನಪಡಿಸುವ ಅಧಿಕಾರಿಗಳನ್ನು ಸರಕಾರ ಕಟುವಾಗಿ ಶಿಕ್ಷಿಸುತ್ತಿತ್ತು. ಇಷ್ಟೂ ಅಲ್ಲದೆ, ಜೇವರ್ಟ್ ತನ್ನ ಇಲಾಖೆಯವರನ್ನೂ ಹೆದರಿಸಬಲ್ಲ, ಪಾರ್ಲಿಮೆಂಟಿಗೂ ಪತ್ರಿಕಾಸಂಪಾದಕರ

ಟೀಕೆಗಳಿಗೂ ಹೆದರುತ್ತಿದ್ದ. ಈ ಎಲ್ಲ ಕಾರಣಗಳೂ ಅಲ್ಲದೆ, ಅವನ ಸ್ವಭಾವಕ್ಕೆ ಮಾತ್ರ ಸಂಬಂಧಿಸಿದ ಇನ್ನೂ ಒಂದೆರಡು ಕಾರಣಗಳಿಂದ ಜೀನ್‌ವಾಲ್‌ಜೀನನನ್ನು ಏಕಾಏಕಿ ಕೈದು ಮಾಡಲಿಲ್ಲ. ಮೃಗ ತನ್ನ ಬೇಟೆಯನ್ನು ಓಡಲು ಅವಕಾಶಕೊಟ್ಟು, ಬಳಲಿಸಿ, ಚಮತ್ಕಾರವಾಗಿ ಹಿಡಿಯುವಂತೆ, ಜೀನ್‌ವಾಲ್‌ಜೀನನನ್ನು ಪ್ಯಾರಿಸ್ ನಗರದಲ್ಲಿ ಓಡಿಸಿ, ಬಳಲಿಸಿ, ಹಿಡಿಯ ಬೇಕೆಂಬ ಆಸೆ ಅವನಿಗೆ ಇತ್ತು. ಈ ವಿಧದ ಪರಿಶ್ರಮದಲ್ಲಿ ಅವನಿಗೊಂದು ಆತ್ಮತೃಪ್ತಿಯಿತ್ತು. ಇಷ್ಟೂ ಅಲ್ಲದೆ, ಕೊನೆಯದಾಗಿ, ತನಗೆ ಪರಿಪೂರ್ಣ ಪರಿಚಯವಿದ್ದ ಪ್ಯಾರಿಸ್ ನಗರದಲ್ಲಿ ವ್ಯೂಹಗಳನ್ನು ರಚಿಸಿ, ಕ್ರಮಬದ್ಧವಾಗಿ ಸಿಪಾಯಿಗಳನ್ನು ನಿಯೋಜಿಸಿ, ಸರಕಾರ ಹಿಡಿದುತರ ಬೇಕೆಂದು ಕಾಂಕ್ಷೆಪಡುತ್ತಿದ್ದ. ಆದರೆ ಯಾರಿಗೂ ಸಿಕ್ಕದಿದ್ದ ಬಹುಪ್ರಖ್ಯಾತವಾಗಿಯೇ ಅಪಖ್ಯಾತಿ ಪಡೆದಿದ್ದ ಅನೇಕಸಾರಿ ಸರಕಾರವನ್ನೇ ವಂಚಿಸಿದ್ದ, ಪುನಃ ಪುನಃ ಅಪರಾಧಗೈಯುತ್ತಿದ್ದ, ಜೀನ್‌ವಾಲ್‌ಜೀನನನ್ನು ಹಠಾತ್ತನೆ ಒಂದು ರಾತ್ರಿ ಹಿಡಿದು, ದೇಶದ ಎದುರೇ ಎಲ್ಲವನ್ನೂ ನಾಟಕೀಯವಾಗಿ ಪ್ರಚಾರಗೊಳಿಸುತ್ತ, ಸರಕಾರದಿಂದ ಶಿಫಾರಸನ್ನು ಪಡೆಯಬೇಕೆಂಬ ಹಂಬಲವೂ ಜೇವರ್ಟನಿಗೆ ಇತ್ತು.

ಆದರೆ ಎಂಥ ಮಹಾಪುರುಷರೂ ತಪ್ಪು ಮಾಡುವುದಿದೆಯಷ್ಟೆ? ನೆಪೋಲಿಯನ್ ರಷ್ಯದ ಯುದ್ಧದಲ್ಲೂ ಅಲೆಗ್ಸಾಂಡರ್ ಹಿಂದುಸ್ಥಾನದ ಯುದ್ಧದಲ್ಲೂ ಸೀಸರ್ ಆಫ್ರಿಕದ ಯುದ್ಧದಲ್ಲೂ ತಪ್ಪು ಮಾಡಿದಂತೆ ಜೇವರ್ಟ್ ಜೀನ್‌ವಾಲ್‌ಜೀನನ ಮೇಲಿನ 'ಯುದ್ಧ'ದಲ್ಲಿ ತಪ್ಪು ಮಾಡಿದ, ಹಾಗೆ ಮಾಡಿ ಸೋತ.

ಜೀನ್‌ವಾಲ್‌ಜೀನ್ ಆ ಗೋಡೆಯನ್ನು ದಾಟಿ ಬಯಲು ಪ್ರದೇಶಕ್ಕೆ ಓಡಿರಬೇಕೆಂದು ಊಹಿಸಿ ಒಂದೆರಡು ದಿನ ಆ ಕಡೆ ಬಯಲನ್ನೆಲ್ಲ ಹುಡುಕಿಸಿದ. ಆ ಬೀದಿಯಲ್ಲೂ ಗುಪ್ತ ಪೊಲೀಸರು ಎರಡು ದಿನ ಕಾವಲಿದ್ದರು.

ಆರನೆಯ ಸಂಪುಟ

೧. ಸಂಖ್ಯೆ ೬೨ರ್ರ್ಯೂ ಪಿಕ್‌ಪಸ್

ಸಂಖ್ಯೆ ೬೨ ಎಂಬ ಮುನಿಸಿಪಲ್ ಗುರುತಿದ್ದ ಕಟ್ಟಡ ಪ್ಯಾರಿಸ್ ನಗರದಲ್ಲಿದ್ದರೂ ಅದು ಅನಾಕರ್ಷಣೀಯವಾಗಿತ್ತು. ಅದರ ಒಳಗೆ ಹೋಗಲು ಹೆಚ್ಚಾಗಿ ಯಾರಿಗೂ ಅನುಮತಿ ದೊರಕುತ್ತಿರಲಿಲ್ಲ. ಹೊರಬಾಗಿಲಿನಲ್ಲಿ ಒಬ್ಬ ಪಹರೆಯವನಿಂದ ಪರೀಕ್ಷಿಸಲ್ಪಟ್ಟು, ಅವನ ಒಪ್ಪಿಗೆ ಪಡೆದು ಮುಂದೆ ಹೋದರೆ ಎರಡು ಕಿಟಕಿಗಳಿದ್ದ ಒಂದು ಕೊಠಡಿಗೆ ತಲಪುತ್ತಿದ್ದೆವು. ಆ ಎರಡರ ಪೈಕಿ ಒಂದು ರಸ್ತೆಗೆ ಮುಖಹಾಕಿದ್ದು, ಕೊಠಡಿಗೆ ಇದರ ಮೂಲಕ ಬೆಳಕು ಬರುತ್ತಿತ್ತು. ಮತ್ತೊಂದು ಕಿಟಕಿ ಮನೆಯ ಒಳಭಾಗಕ್ಕೆ ಮುಖವಾಗಿದ್ದು, ಬಂದವರನ್ನು ವಿಚಾರಿಸಲೋಸ್ಕರ ಉಪಯೋಗಿಸಲಾಗುತ್ತಿತ್ತು. ಇದಕ್ಕೆ ಉಕ್ಕಿನ ಸರಳು, ಉಕ್ಕಿನ ತಂತಿ ಪರದೆಗಳು ಒಳಗಿನಿಂದಲೇ ಇದ್ದು, ಯಾರಿಗೂ ಯಾರ ದೃಷ್ಟಿಗೂ ಒಳಗೆ ಪ್ರವೇಶ ಕೊಡುತ್ತಿರಲಿಲ್ಲ. ಕಿಟಕಿಯ ಪಕ್ಕದಲ್ಲಿದ್ದ ಒಂದು ಸರಪಣಿಯನ್ನೆಳೆದರೆ ಕರೆಗಂಟೆ ಬಾರಿಸಲ್ಪಟ್ಟು, ಒಳಗಿನಿಂದ ಒಬ್ಬ ಸ್ತ್ರೀ ಬಂದು ಬಂದವನ ಕಾರ್ಯವೇನೆಂದು ಬಲು ಸೌಮ್ಯವಾಗಿ ಮರ್ಯಾದೆಯಿಂದ ವಿಚಾರಿಸುತ್ತಿದ್ದಳು. ಈ ವಿಚಾರಣೆ ಸಮರ್ಪಕವಾಗಿ ತೀರ್ಮಾನವಾದರೆ, ಮುಂದೆ ಇನ್ನೊಂದು ಕೋಣೆಯಲ್ಲಿ ಇದೇ ಕ್ರಮದಿಂದ ಬಲವಾದ, ಮತ್ತು ಸಂಪೂರ್ಣವಾಗಿ ಪರದೆಯಿಂದ ಮುಚ್ಚಿದ್ದ ಕಿಟಕಿಯ ಹಿಂಬದಿಯಿಂದ

ಒಬ್ಬಳು ಸ್ತ್ರೀ ಹೋದವನ ಕಾರ್ಯಗಳನ್ನು ಮುಗಿಸುವುದಾಗಲೀ ಅಧಿಕಾರಯುತವಾಗಿ ಉತ್ತರ ಕೊಡುವುದಾಗಲೀ ಮಾಡುತ್ತಿದ್ದಳು.

ಈ ಕಟ್ಟಡದೊಳಗೆ ಪಿಕ್‌ಪಸ್ ಕಾನ್ವೆಂಟ್ ಇತ್ತು. ಈ ರೀತಿ ಪಿಕ್‌ಪಸ್ ಕಾನ್ವೆಂಟ್ ಗಂಡುಸರ ಸಂಪರ್ಕವಿರದೆ, ಅತಿ ಗೂಢವಾಗಿ, ಗಂಭೀರವಾಗಿ ತನ್ನ ಧರ್ಮಕರ್ಮಗಳನ್ನು ನಡೆಸಿಬರುತ್ತಿತ್ತು.

೨. ಮಾರ್ಟಿನ್ ವೆರ್ಗ ಪಂಥದ ಕಾನ್ವೆಂಟ್

ಈ ಕಾನ್ವೆಂಟಿನ ಸನ್ಯಾಸಿನಿಯರು ಹಠಯೋಗಾಭ್ಯಾಸಿಗಳು. ಸೇಂಟ್ ಬೆನಿಡಿಕ್ಟೈನ್ ಪಂಥದವರು. ಕುತ್ತಿಗೆಯ ಮತ್ತು ಎದೆ ಭಾಗ ಹೊರತಾಗಿ ಬಾಕಿ ಎಲ್ಲ ಭಾಗದ ಇವರ ಉಡುಪು ಶುದ್ಧ ಕಪ್ಪುಬಟ್ಟೆಯದಾಗಿತ್ತು. ಆಹಾರದಲ್ಲಿ ಮಾಂಸ ಸಂಪೂರ್ಣ ವರ್ಜ್ಯ. ವರ್ಷದ ಅನೇಕ ಗೊತ್ತಾದ ದಿನಗಳಲ್ಲಿ ಇವರು ನಿರಾಹಾರದಿಂದಿರಬೇಕಿತ್ತು. ಅವರು ದಂತಧಾವನ ಮತ್ತು ಸ್ನಾನವನ್ನೂ ಮಾಡಕೂಡದಿತ್ತು. ಸುಖಕ್ಕಾಗಿ ಅವರು ಬೆಂಕಿಯ ಶಾಖವನ್ನೂ ಉಪಯೋಗಿಸುತ್ತಿರಲಿಲ್ಲ. ಮಲಗಲು ಹುಲ್ಲಿನ ಚಾಪೆ ಮಾತ್ರ ಬಳಕೆ. ಯಾವ ಗಂಡುಸನ್ನೂ ಅವರು ನೋಡಕೂಡದಿತ್ತು.

ಈ ಕಾನ್ವೆಂಟಿಗೆ ಧರ್ಮಬೋಧನೆಗಾಗಿ ಅಪರೂಪಕ್ಕೆ ಆರ್ಚ್‌ಬಿಷಪ್ ಬರುತ್ತಿದ್ದರು. ಅವರು ಬಂದಾಗ ಕೂಡ ಅವರಿಗೂ ಸನ್ಯಾಸಿನಿಗಳಿಗೂ ಮಧ್ಯದಲ್ಲಿ ಒಂಬತ್ತಡಿ ಎತ್ತರಕ್ಕೆ, ಬೇಕಾದಷ್ಟು ಅಗಲದ, ಮತ್ತು ಬಲುದಪ್ಪದ, ಬಟ್ಟೆಯ ಪರದೆ ಕಟ್ಟುತ್ತಿದ್ದರು. ಇಲ್ಲಿಗೆ ಉಚ್ಚ ಮಟ್ಟದ ಆರ್ಚ್‌ಬಿಷಪ್ ಮತ್ತು ಗಂಡುಸರು ಬರುತ್ತಿದ್ದಂತೆಯೇ, ಕೀಳುಮಟ್ಟದಲ್ಲಿ ಒಬ್ಬ ತೋಟದ ಕೆಲಸಗಾರ ಅಂಗಹೀನ ಮುದುಕನೊಬ್ಬ ಹೊರ ವಠಾರದಲ್ಲಿ ತೋಟ ಕೆಲಸದ ನಿಮಿತ್ತವಾಗಿ ಮಾತ್ರ ತಿರುಗಾಡಬಹುದಿತ್ತು. ಹಾಗೆ ತಿರುಗಾಡುವಾಗ ಅವನು ಒಂದು ಗಂಟೆಯನ್ನು ತನ್ನ ಕಾಲಿಗೆ ತಪ್ಪದೆ ಕಟ್ಟಿಕೊಳ್ಳಬೇಕಿತ್ತು. ಈ ಮುದುಕನ ಗಂಟೆ ಸದ್ದು ಕೇಳಿದೊಡನೆಯೇ ಸನ್ಯಾಸಿನಿಯರೆಲ್ಲ ಅವನನ್ನು ಕಾಣದಷ್ಟು ದೂರ ಸರಿದು ನಿಲ್ಲುತ್ತಿದ್ದರು.

ಸನ್ಯಾಸಿನಿಯರು ಕ್ರೈಸ್ತಧರ್ಮಕ್ಕೆ ಸಂಬಂಧಿಸಿದ ಗುಣಗಳನ್ನೋ ನಿಯಮಗಳನ್ನೋ ತಮ್ಮ ಹೆಸರುಗಳಾಗಿ ಇಟ್ಟುಕೊಂಡು, ಆ ಹೆಸರಿನಿಂದಲೇ ಒಬ್ಬರನ್ನೊಬ್ಬರು ಕರೆಯುತ್ತಿದ್ದರು. 'ಮೋಕ್ಷ,' 'ನಿಯಮಾ,' 'ನಿಷ್ಠೆ,' 'ನಿಷ್ಕಳಂಕಾ'—ಈ ರೀತಿಯಾದ ಹೆಸರುಗಳೇ ಇವರಲ್ಲಿ ವಾಡಿಕೆ. ಇವರು ಯಾರೂ 'ನಾನು,' 'ನನ್ನದು' ಎಂದೆನ್ನಕೂಡದಿತ್ತು. ಎಲ್ಲರೂ ಒಂದು ಅವಿಭಾಜ್ಯ ಸಮೂಹವಾಗಿಯೇ ಪರಿಗಣಿಸಿಕೊಂಡು 'ನಾವು,' 'ನಮ್ಮದು' ಎಂದು ಹೇಳುತ್ತಿದ್ದರು.

ಇಲ್ಲಿಗೆ ಸೇರಿದವರ ಮಾತಾಪಿತೃಗಳಾದರೂ ಆಗಿಂದಾಗ್ಗೆ ಬಂದು ತಮ್ಮ ಮಕ್ಕಳನ್ನು ನೋಡಕೂಡದಿತ್ತು. ಲೌಕಿಕ ಹಾಸ್ಯ, ವಿನೋದ ಮೊದಲಾದವನ್ನು ಇವರು ಎಂದೂ ಮಾಡುತ್ತಿರಲಿಲ್ಲ. ಇವರು ನಗಲೂ ಕೂಡದಿತ್ತು. ಸನ್ಯಾಸಿನಿ ದೀಕ್ಷೆಯನ್ನು ಪಡೆಯುವ ಮೊದಲೇ ಈ ವಿಧದ ಜೀವನ ನಡೆಸಿ, ತಮ್ಮ ನಡತೆಯನ್ನು ಸರಿಪಡಿಸಿಕೊಳ್ಳಬೇಕಿತ್ತು. ಈ ಕುರಿತಾಗಿ ಅವರಿಗೆ ಕಠಿಣ ಶಿಕ್ಷಣವೂ ದೊರೆಯುತ್ತಿತ್ತು. ದೈವಭಕ್ತಿ, ದೈವಚಿಂತನೆ, ಧ್ಯಾನ, ದೇವರ ಸ್ತೋತ್ರ ಈ ವಿಷಯಗಳಿಗೆ ಮಾತ್ರ ಅವರು ಪ್ರಾಮುಖ್ಯ ಕೊಟ್ಟು ಅನುಷ್ಠಾನಕ್ಕೆ ತರುತ್ತಿದ್ದರು. ಇವರ ಈ ವಿಧದ ಶಿಸ್ತಿನಿಂದ ಒಮ್ಮೆ ಮೂರು ಜನ ಸನ್ಯಾಸಿನಿಯರಿಗೆ ಹುಚ್ಚೇ ಹಿಡಿದಿತ್ತು.

೩. ಬೋರ್ಡಿಂಗ್ ಶಾಲೆ

'ಮಾರ್ಟಿನ್ ವೆರ್ಗ' ಪಂಥಕ್ಕೆ ಸೇರುವ ಸ್ತ್ರೀಯರು ನಾಲ್ಕಾರು ವರ್ಷ ಆ ಪಂಥಕ್ಕೆ ಇರುವ ಶಿಸ್ತಿನ ಜೀವನ ನಡೆಸಿ, ಶಾಸ್ತ್ರಾಭ್ಯಾಸಮಾಡಿ, ಆ ಸಂಬಂಧದ ವಿದ್ಯೆ ಕಲಿತು, ಕೊನೆಗೆ ಒಂದು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾಗಿತ್ತು. ಇಪ್ಪತ್ತೆರಡು ವರ್ಷದ ಒಳಗಿನ ಪ್ರಾಯದವರನ್ನೂ ವಿಧವೆಯರನ್ನೂ ಈ ಪಂಥಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ.

ದೀಕ್ಷೆ ಸ್ವೀಕರಿಸಲಿರುವ ಮಹಿಳೆ, ದೀಕ್ಷೆಗೆ ಮೊದಲು ಒಂದು ಕ್ರಿಯೆಗೆ ಒಳಗಾಗಬೇಕಾಗಿತ್ತು. ದೀಕ್ಷಾದಿನದಂದು ಅವಳು ತನ್ನ ಉತ್ತಮ ಲೌಕಿಕ ಉಡುಪನ್ನು ಧರಿಸಿ ಹೂಗಳಿಂದ ಅಲಂಕೃತಳಾಗಿ, ಸನ್ಯಾಸಿಯರ ಎರಡು ಸಾಲುಗಳ ಮಧ್ಯೆ ದೀರ್ಘದಂಡದಂತೆ ಮಲಗಬೇಕು; ಅವಳ ಮೇಲೆ ಶವಕ್ಕೆ ಹೊದೆಸುವಂತೆ ಕಪ್ಪುವಸ್ತ್ರ ಹೊದೆಸುವರು; ಅನಂತರ ಒಂದು ಸಾಲಿನ ಸನ್ಯಾಸಿನಿಯರು ಏಕಕಂಠದಿಂದ, "ಅವಳು ಮೃತಳಾಗಿದ್ದಾಳೆ" ಅನ್ನಬೇಕು; ಇದಕ್ಕೆ ಪ್ರತಿಯಾಗಿ ಮತ್ತೊಂದು ಸಾಲಿನವರು, "ಅವಳು ಏಸುವಿನಲ್ಲಿ ಐಕ್ಯಳಾಗಿ ಬದುಕಿದ್ದಾಳೆ" ಅನ್ನಬೇಕು; ಇಷ್ಟಾದನಂತರ ಅವಳು ಈ ಪಂಥದ ಒಬ್ಬ ಸನ್ಯಾಸಿನಿಯೆಂದು ಅಂಗೀಕರಿಸಲ್ಪಡುವಳು.

ತಮ್ಮ ಮಗಳಂದಿರನ್ನು ಸನ್ಯಾಸಿನಿಯರಾಗಿ ಮಾಡ ಬಯಸುವ ಮಾತಾಪಿತೃಗಳು ಅವರನ್ನು ಎಳೆಪ್ರಾಯದಲ್ಲೇ ಕಾನ್ವೆಂಟಿಗೆ ಸೇರಿಸುತ್ತಿದ್ದರು. ಇಂಥ ಬಾಲಕಿಯರ ವಿದ್ಯಾಭ್ಯಾಸಕ್ಕಾಗಿ ಒಂದು ಶಾಲೆಯೂ ಇಲ್ಲಿತ್ತು. ವಿದ್ಯಾರ್ಥಿಗಳ ಊಟ, ವಸತಿ, ವಸ್ತ್ರ ಮೊದಲಾದವನ್ನೆಲ್ಲ ಕಾನ್ವೆಂಟಿನವರೇ ಕೊಡುತ್ತಿದ್ದರು. ವಿದ್ಯಾರ್ಥಿನಿಯರೆಲ್ಲ ನೀಲಬಣ್ಣದ ಲಂಗರವಕೆ ತೊಟ್ಟು, ಬಿಳಿ ಟೊಪ್ಪಿ ಧರಿಸಬೇಕಿತ್ತು. ಕಾನ್ವೆಂಟಿನ ಶಿಸ್ತಿನ ಹೆಚ್ಚಿನ ಅಂಶವನ್ನೆಲ್ಲ ಈ ಬಾಲಕಿಯರೂ ಅಭ್ಯಸಿಸಬೇಕಿತ್ತು. ಊಟ, ತಿಂಡಿ, ವಸತಿ ಎಲ್ಲವೂ ಬಡತನ ಮಟ್ಟದ್ದೇ ಆಗಿರಬೇಕೆಂಬುದು ಕಡ್ಡಾಯ. ಎಲ್ಲವನ್ನೂ ಸಾಮುದಾಯಿಕವಾಗಿಯೇ ಮಾಡಬೇಕಿತ್ತು. ಆಡಲು ಬಿಟ್ಟಾಗ ಮಾತ್ರ ಈ ಬಾಲಕಿಯರು ಹಾಸ್ಯ, ನಗುಗಳನ್ನು—ಅವನ್ನೂ ಮಿತವಾಗಿ—ಪ್ರಕಟಿಸಬಹುದಿತ್ತು. ಈ ಕಾನ್ವೆಂಟಿಗೆ ಒಮ್ಮೆ ಸೇರಿದರೆ ಅನಂತರ ಅವರ ಪಾಲಿಗೆ ಬಾಹ್ಯ ಪ್ರಪಂಚವೇ ನಾಶವಾಗಿರುತ್ತಿತ್ತು.

೪. ವಿದ್ಯಾರ್ಥಿನಿಯರ ವಿನೋದಗಳು

ಈ ಶಾಲೆಯಲ್ಲಿ ಮತ್ತು ಇದಕ್ಕೆ ಸಂಬಂಧಿಸಿದ ಇತರ ಸ್ಥಳಗಳಲ್ಲಿ ಮೇಜು, ಕುರ್ಚಿ, ಬೆಂಚು ಎಲ್ಲವೂ ಕಪ್ಪು ಬಣ್ಣದವು.- ಗೋಡೆಗಳಿಗೆ ಮಾತ್ರ ಬಿಳಿ ಬಣ್ಣ ಬಳಿಯುತ್ತಿದ್ದರು. ಕೆಲವೊಮ್ಮೆ ಈ ಕರಿ ಮತ್ತು ಬಿಳುಪಿನ ಮಿಶ್ರ ಬಣ್ಣವನ್ನು ಮಾತ್ರ ಉಪಯೋಗಿಸುವುದೂ ಇತ್ತು. ಇಷ್ಟು ಹೊರತು ಇತರ ಬಣ್ಣಗಳ ಸುಖ ಅವರಿಗೆ ಇರಲಿಲ್ಲ.

ಅವರು ತಿರುಗಾಡಲು ತಕ್ಕದಾದ ಕಲ್ಲುಹಾಸಿದ್ದ ರಸ್ತೆಗಳಿದ್ದುವು. ವಿಶ್ರಾಂತಿಗಾಗಿ ಕುಳಿತಿರಲು, ಅಥವಾ ಕುಳಿತು ಆಟವಾಡಲೂ ತಕ್ಕದಾದ ಮರಗಳ ತೋಪೂ ಕಾನ್ವೆಂಟ್‌ವಠಾರದಲ್ಲೇ ಇತ್ತು. ಅಲ್ಲಲ್ಲಿ ಕೆಲವು ಫಲವೃಕ್ಷಗಳೂ ಇದ್ದುವು. ಎಳೆಪ್ರಾಯದ ಬಾಲಕಿಯರು ಶಿಸ್ತಿನ ನಿರ್ಬಂಧದಿಂದ ಬಿಡುಗಡೆಹೊಂದಿ ಆಡಲು ಬಂದಾಗ ಅಂಥ ವೃಕ್ಷಗಳ ಹೂ, ಕಾಯಿ, ಹೀಚು, ಕೊಳೆತ ಫಲವನ್ನು ಕೂಡ ತಿಂದು ಬಿಡುತ್ತಿದ್ದರು. ಆಗ ಅವರಿಗೆ ಆಗುತ್ತಿದ್ದ ಆನಂದವನ್ನು ಹಕ್ಕಿಗಳ ಆನಂದಕ್ಕೆ ಮಾತ್ರ ಹೋಲಿಸಬಹುದು. ಹಾರಾಡುವ ಹಕ್ಕಿಗಳ ಗುಂಪಿಗೆ ನಾಲ್ಕಾರು ಕಾಳು ಧಾನ್ಯ ಸಿಕ್ಕಿದರೆ

ಅವು ಹೇಗೆ ಆ ಧಾನ್ಯವನ್ನು ತಿಂದು ನಲಿಯುತ್ತವೋ ಹಾಗೆ ಈ ಮಕ್ಕಳು ಆನಂದದಿಂದ ಉಲಿಯುತ್ತಿದ್ದರು.

ಬಾಲಕಿಯರು ತಂತಮ್ಮೊಳಗೆ ಮಾತ್ರ ಮಾತಾಡಿಕೊಳ್ಳಬಹುದಿತ್ತೇ ಹೊರತು ಸನ್ಯಾಸಿನಿಯರೊಡನೆ ಕೂಡದು. ಇವರ ಆಟದ ಕಾಲದಲ್ಲಿ ಮಾತ್ರ, ಹಿಮದೊಳಗೆ ತೂರಿಬಂದ ಅರೆಬೆಳಕಿನಂತೆ, ಜೀವನದ ಹುರುಪನ್ನೋ ಸಂತೋಷವನ್ನೋ ಇವರು ಅನುಭವಿಸಬೇಕಿತ್ತು. ಹೊರಗಿನ ಪ್ರಪಂಚದ ಅರಿವೇ ಇಲ್ಲದಿದ್ದ ಇವರಿಗೆ ಅಪರೂಪಕ್ಕೆ ಹೊರಗಿನಿಂದ ಕೇಳಿಬರುತ್ತಿದ್ದ ಶಬ್ದವೇ ಆಶ್ಚರ್ಯದ ವಿಷಯವಾಗಿ ಬಿಡುವುದಿತ್ತು. ಒಮ್ಮೆ ಯಾವನೋ ಒಬ್ಬ ಕಾನ್ವೆಂಟಿನ ಹೊರಗಡೆ ಕೊಳಲು ನುಡಿಸಿದಾಗ, ಗಾಳಿಯಲ್ಲಿ ತೇಲಿಬರುತ್ತಿದ್ದ ಅದರ ಅಸ್ಪಷ್ಟ ನಿನಾದವನ್ನು ಕೇಳಿ ಈ ಬಾಲಕಿಯರು ಬೆರಗಾಗಿ ಹೋಗಿದ್ದರಂತೆ. ಒಬ್ಬಳು ಕೊಳಲಿನ ಗಾನಕ್ಕೆ ಮರುಳಾಗಿ ಅದರ ಮೂಲವನ್ನು ಹುಡುಕಲು ಶಾಲೆಯ ಮಾಡಿನಮೇಲೇ ಹತ್ತಿ ನಿಂತಿದ್ದಳಂತೆ !

೫. ನೆರಳಿನಿಂದ ಹೊರಗೆಳೆದ ಕೆಲವು ರೇಖಾಚಿತ್ರಗಳು

ಕಾನ್ವೆಂಟಿನಲ್ಲಿ ದೇವರ ಸ್ತೋತ್ರಗಳನ್ನು ಸಾಮುದಾಯಿಕವಾಗಿ ಹಾಡಲು ತಕ್ಕಂಥ ಸಂಗೀತ ಹೇಳಿಕೊಡುತ್ತಿದ್ದರು. ಅಲ್ಲಿ ತೋಟದ ಕೆಲಸಗಾರನಲ್ಲದೆ ಇನ್ನೂ ಇಬ್ಬರು ಗಂಡು ಕೆಲಸಗಾರರಿದ್ದರು. ಅವರಲ್ಲೊಬ್ಬ ಡ್ರಾಯಿಂಗ್ ಮಾಸ್ಟರ್ ; ಮತ್ತೊಬ್ಬ ಶಾಲೆಯ ಪ್ರಾರ್ಥನಾ ಮಂದಿರವನ್ನು ಸಜ್ಜುಗೊಳಿಸಿ, ಪ್ರಾರ್ಥನೆಗಳನ್ನು ವ್ಯವಸ್ಥೆಗೊಳಿಸುವ ನೌಕರ. ಇವರಿಬ್ಬರೂ ಹುಟ್ಟು ಕುರೂಪಿಗಳಾಗಿದ್ದರು ; ಅಲ್ಲದೆ ವೃದ್ಧರಾದ ಮೇಲೆ ಮಾತ್ರ ಆ ಕೆಲಸಗಳಿಗೆ ನೇಮಕಗೊಂಡಿದ್ದರು.

ಏಳನೆಯ ಸಂಪುಟ

೧. ಕಾನ್ವೆಂಟ್ ಪ್ರವೇಶ ಹೇಗೆ?

ಜೀನ್‌ವಾಲ್‌ಜೀನ್ ಜೇವರ್ಟನಿಂದ ತಪ್ಪಿಸಿಕೊಂಡು ಬಂದು ತಲಪಿದ ಸ್ಥಳದಲ್ಲಿ ಆ ರಾತ್ರಿ ಕೇಳಿದ ಗಾನಘೋಷ ಕಾನ್ವೆಂಟಿನಿಂದ ಹೊರಟದ್ದು. ಆ ರಾತ್ರಿ ಅರೆಕತ್ತಲ ಕೋಣೆಯಲ್ಲಿ ಹೆಣದಂತೆ ಬಿದ್ದಿದ್ದುದು ಒಬ್ಬ ಸನ್ಯಾಸಿನಿ. ಯಾವುದೋ ಒಂದು ಪ್ರಾಯಶ್ಚಿತ್ತ ಕರ್ಮವಾಗಿ ಅವಳು ಕೊಡುವ ಆ ನೆಲದಲ್ಲಿ ಮಲಗಿದ್ದಳು.

ಮುಂದೆ ಕಾನ್ವೆಂಟಿನಲ್ಲಿ ಜೀನ್‌ವಾಲ್‌ಜೀನ್ ಇರುವುದು ಸಾಧ್ಯವೋ ಹೇಗೆ ಎಂಬಿತ್ಯಾದಿ ಗಳ ವಿಷಯದಲ್ಲಿ ಅವರಿಬ್ಬರೂ ಮಾತಾಡತೊಡಗಿದರು. ಕಾನ್ವೆಂಟಿನ ಒಳಗೆ ಹೇಗೂ ಬಂದು ಸೇರಿರುವ ತನ್ನನ್ನು ಹೊರಗೆ ಹೋಗದಂತೆ ಉಳಿಸುವ ಮಾರ್ಗವನ್ನು ಯೋಚಿಸಬೇಕೆಂದು ಜೀನ್‌ವಾಲ್‌ಜೀನನೂ ಹಾಗೆ ಕಾನ್ವೆಂಟಿನಲ್ಲಿ ನಿಲ್ಲಬೇಕಾದರೆ ಒಂದಾವೃತ್ತಿ ಕ್ರಮಬದ್ಧವಾಗಿ ಹೊರಗಿನಿಂದ ಬಂದರೆ ಮಾತ್ರ ಸಾಧ್ಯವೆಂದೂ ಆದ್ದರಿಂದ ಒಂದಾವೃತ್ತಿ ಹೊರಗೆ ಹೋಗುವುದಾದರೂ ಹೇಗೆಂದು ಫಾಶೆಲೆವೆಂಟನೂ ಯೋಚಿಸತೊಡಗಿದರು. ಒಂದೇ ವಿಷಯಕ್ಕಿದ್ದ ಎರಡು ಮುಖಗಳಂತೆ ಈ ಸಮಸ್ಯೆ ಒಂದಕ್ಕೊಂದು ಸಂಬಂಧಿಸಿ, ಅಳಿವು ಉಳಿವಿನ ಪ್ರಶ್ನೆಯಾಗಿ ಅವರನ್ನು ಬಾಧಿಸಿತು. ಯಾರಿಂದಲೂ ಒಳಗೆ ಬರಲು ಸಾಧ್ಯವಿಲ್ಲದ ಕಾನ್ವೆಂಟಿನ ಒಳಗೆ ತಮ್ಮ ಅಮೋಘ

ಶಕ್ತಿಯಿಂದ ಪ್ರವೇಶಿಸಿದ ಮಾನ್ಸಿಯರ್ ಮೆಡಲೀನರು, ತಮ್ಮ ಅದೇ ಶಕ್ತಿಯಿಂದ ಹೊರಗೆ ಹೋಗಬೇಕೆಂದು ಫಾಶೆಲೆವೆಂಟ್ ತನ್ನ ಸರಳತೆಯಿಂದಲೂ ಅವರ ಮೇಲಿನ ಪ್ರೇಮ, ಭಯ, ಭಕ್ತಿಗಳಿಂದಲೂ ಬಿನ್ನವಿಸುತ್ತಿದ್ದ. ಒಮ್ಮೆ ಹೊರಗೆ ಹೋದರೆ ಅವರನ್ನು ಒಳಗೆ ತರುವ ಜವಾಬ್ದಾರಿ ತನ್ನದೆಂದು ಅವನು ಪ್ರಮಾಣ ಪುರಸ್ಸರವಾಗಿ ಭರವಸೆ ಕೊಡುತ್ತಿದ್ದ. ಮಾನ್ಸಿಯರ್ ಮೆಡಲೀನರಿಗೆ ಹೆಚ್ಚು ಸಹಾಯಮಾಡಬೇಕೆಂಬ ಮನಸ್ಸು ಅವನಿಗೆ ಇದ್ದರೂ ಅವರು ಹೇಗೆ ಒಳಗೆ ಬಂದರು, ಏತಕ್ಕಾಗಿ ಬಂದರು ಎಂದು ಕೇಳಲು ಅವನಿಗೆ ಧೈರ್ಯವೂ ಇರಲಿಲ್ಲ, ಮನಸ್ಸೂ ಒಡಂಬಡುತ್ತಿರಲಿಲ್ಲ. ಅವರ ಮನಸ್ಸನ್ನು ಎಷ್ಟು ಮಾತ್ರಕ್ಕೂ ನೋಯಿಸಕೂಡದೆಂದು ತಿಳಿದಿದ್ದ. ಆದರೂ ಅವರು ಯಾವುದೋ ಒಂದು ರಾಜಕೀಯ ಚಳವಳಿಯಲ್ಲಿ ಸಿಕ್ಕಿಬಿದ್ದು ಅಲ್ಲಿಗೆ ಬಂದಿರಬೇಕೆಂದು ಊಹಿಸಿಕೊಂಡಿದ್ದ.

ಒಂದು ದಿನ ಇಬ್ಬರೂ ಒಟ್ಟಿಗೆ ಕುಳಿತು ಈ ವಿಷಯದಲ್ಲಿ ಆಲೋಚಿಸತೊಡಗಿದರು. ಅಲ್ಲಿ ಹೆಚ್ಚು ದಿನಗಳು ಇರುವುದು ಅಸಾಧ್ಯವೆಂದು ಉಭಯತ್ರರೂ ತಿಳಿದು ಆ ಕುರಿತು ಮಾತಾಡುತ್ತಿದ್ದರು. ಜೀನ್‌ವಾಲ್‌ಜೀನ್ ಅಂದ, "ಇಲ್ಲಿ ಅಡಗಿಕೊಂಡೇ ಹೆಚ್ಚುದಿನ ಉಳಿಯಲು ಸಾಧ್ಯವಿಲ್ಲ ನಿಜ; ಆದರೆ, ನಾವು ಇಲ್ಲೇ ಉಳಿಯದೇ ನಿರ್ವಾಹವೂ ಇಲ್ಲವಷ್ಟೆ?"

"ಇಲ್ಲಿ ಉಳಿಯಬೇಕಾದುದು ನಿಜ; ಆದರೆ, ಆ ಬಗ್ಗೆ ಒಮ್ಮೆ ಹೊರಗೆ ಹೋಗಲೇಬೇಕು. ಉಳಿಯಬೇಕೆನ್ನುವುದು ನಿಮ್ಮ ಚಿಂತೆಯಾದರೆ, ನಿಮ್ಮನ್ನು ಒಮ್ಮೆ ಹೊರಗೆ ಕಳುಹಿಸಬೇಕೆನ್ನುವುದು ನನ್ನ ಚಿಂತೆ !" ಅಂದ ಫಾಶೆಲೆವೆಂಟ್.

ಹೀಗೆ ಅವರು ಮಾತಾಡುತ್ತಿದ್ದಾಗ ಕಾನ್ವೆಂಟಿನಿಂದ ಗಂಟೆ ಕೇಳಿಸಿತು. ಆ ಗಂಟೆಗಳ ಸ್ವರ, ಕೆಲವೊಮ್ಮೆ ಅವುಗಳ ಲೆಕ್ಕ, ಇವನ್ನೆಲ್ಲ ಫಾಶೆಲೆವೆಂಟ್ ಅರ್ಥಮಾಡಬಲ್ಲವನಾಗಿದ್ದ. ಅದನ್ನು ಆಲಿಸುತ್ತ ಅಂದ, "ನೋಡಿ ಮಾನ್ಸಿಯರ್ ಮೆಡಲೀನರೇ, ಈಗ ಕಾನ್ವೆಂಟಿನಲ್ಲಿ ಒಬ್ಬ ಸನ್ಯಾಸಿನಿ ಮೃತಪಟ್ಟಿರಬೇಕು. ಅವಳು ಸದ್ಯ ಮೃತಪಡುವಳೆಂದು ನಾನು ಈ ಮೊದಲೇ ತಿಳಿದಿದ್ದೆ. ಇನ್ನು ಅವಳ ದಫನ ಆಗುವವರೆಗೆ—ಅಂದರೆ ಮೂರು ದಿನಗಳಲ್ಲಿ—ಇಲ್ಲಿಗೆ ಯಾರೂ ಬರುವುದಿಲ್ಲ. ಪ್ರಾರ್ಥನೆಗಳ ಬಗ್ಗಾಗಿಯೂ ಉತ್ತರಕ್ರಿಯೆಗಳ ಬಗ್ಗಾಗಿಯೂ ಇತರ ಎಲ್ಲ ಕೆಲಸಗಳನ್ನು ನಿಲ್ಲಿಸುವರು. ನೀವು ಇಲ್ಲಿಂದ ಹೊರಗೆ ಹೋಗುವ ಕೆಲಸವೂ ಈ ಮೂರು ದಿನಗಳೊಳಗೇ ನಡೆಯಬೇಕು. ಮೃತರಾದವರ ದಫನ ಬಗ್ಗೆ ನನಗೂ ತುಂಬ ಕೆಲಸವಿರುತ್ತದೆ. ಆಗ್ಗೆ ಸಂದರ್ಭ ನೋಡಿ ನಿಮ್ಮ ಬಗ್ಗೆ ಯೋಚಿಸುತ್ತೇನೆ. ಕೋಸೆಟ್ಟಿಯನ್ನು ಹೊರಗೆ ಸಾಗಿಸುವುದು ಕಷ್ಟವಲ್ಲ—ಅವಳನ್ನು ನನ್ನ ತರಕಾರಿ ಬುಟ್ಟಿಯಲ್ಲಿ ಕುಳ್ಳಿರಿಸಿ, ಮುಚ್ಚಳ ಹಾಕಿ ಹೊರಗೆ ಕರೆದುಕೊಂಡು ಹೋಗಿ, ಬರುವಾಗ ತರಕಾರಿ ತಂದರೆ ಒಂದು ಕೆಲಸ ಪೂರೈಸಿದ ಹಾಗಾಗುತ್ತದೆ."

ಇಷ್ಟರಲ್ಲೇ ಪುನಃ ಕಾನ್ವೆಂಟಿನ ಗಂಟೆ ಸದ್ದು ಕೇಳಿಸಿತು. ಫಾಶೆಲೆವೆಂಟನನ್ನು ಕರೆಯಲು ಅವರು ಯಾವಾಗಲೂ ಗಂಟೆಯನ್ನು ಉಪಯೋಗಿಸುತ್ತಿದ್ದರು. ಈ ಸಲದ ಗಂಟೆ ಅಂಥ ಕರೆ ಆಗಿತ್ತು, ಎಂದೇ ಅವನು ಒಡನೆ ಕಾನ್ವೆಂಟಿಗೆ ಹೋದ.

೨. ಕಷ್ಟದಿಂದ ಪಾರಾಗುವ ಪ್ರಯತ್ನ

ಫಾದರ್ ಫಾಶೆಲೆವೆಂಟ್ ಯಾವ ತರದ ವ್ಯಕ್ತಿಯೆಂದು ಇಲ್ಲಿ ಪುನಃ ಸ್ವಲ್ಪ ಹೇಳಬೇಕಾಗಿದೆ. ಹಳ್ಳಿಯಲ್ಲಿ ಕೃಷಿಕನಾಗಿದ್ದು, ಆ ವೃತ್ತಿಯಲ್ಲಿ ಜುಗುಪ್ಸೆ ತೋರಿ, ಒಳವಕೀಲನಾಗಿ ಪಟ್ಟಣದಲ್ಲಿ

ನೆಲಸಿದ್ದ. ಈ ವೃತ್ತಿಯಲ್ಲಿ ಜನರ ಯೋಗ್ಯತಾಯೋಗ್ಯತೆ ತಿಳಿಯುವಷ್ಟು ಅರಿವನ್ನೂ ಇತರ ಬಗೆಯ ಲೌಕಿಕಾನುಭವಗಳನ್ನೂ ಪಡೆದು ಜೀವನ ಸಾಗಿಸತೊಡಗಿದ್ದ. ಇದರಲ್ಲೂ ಜೀವನ ನಡೆಸಲಾಗದೆ ಅವನು ಬಂಡಿಮಾಲಿಕನಾಗಿದ್ದು, ಅನಂತರ ಮಾನ್ಸಿಯರ್ ಮೆಡಲೀನರ ಸಹಾಯ ದಿಂದ ಈ ತೋಟಗಾರನ ಕೆಲಸದಲ್ಲಿ ಸೇರಿದ್ದು ಓದುಗರಿಗೆ ಗೊತ್ತಿರಬಹುದಷ್ಟೆ.

ಈ ವಿಧದ ನಾನಾ ವೃತ್ತಿ, ಜೀವನ ಕ್ರಮಗಳ ಅನುಭವದಿಂದ ಅವನು ಚಮತ್ಕಾರವಾಗಿ ಮಾತಾಡಬಲ್ಲವನಾಗಿದ್ದ. ಸಂದರ್ಭಾನುಸಾರ ನಟನೆ, ಸೌಮ್ಯವಂಚನೆ ಮೊದಲಾದವನ್ನೂ ಪ್ರದ ರ್ಶಿಸಬಲ್ಲವನಾಗಿದ್ದ. ಅವನ ವೃದ್ಧಾಪ್ಯವೂ ಮುರಿದಿದ್ದ ಮೊಣಕಾಲೂ ಅವನ ನಯನಟನೆಗೆ ಸಹಾಯಕಗಳಾಗಿದ್ದುವು. ಅವನು ಇತರರ ಗುಟ್ಟನ್ನು ತಿಳಿಯಲು ಕಿವುಡನಂತೆಯೂ ಕುರುಡ ನಂತೆಯೂ ನಟಿಸಬಲ್ಲವನಾಗಿದ್ದ. ಈ ಮನುಷ್ಯ ಮಾತಿನಲ್ಲಿ ಸಿಕ್ಕಿಬೀಳುವ ಪ್ರಸಂಗ ಬಂದಾಗ ಶುದ್ಧ ಮೂಢ ಅಥವಾ ಮಂಕನಂತೆಯೂ ವರ್ತಿಸಬಲ್ಲವನಾಗಿದ್ದ. ಇವನು ಕಾನ್ವೆಂಟಿನ ಅಧಿಕಾರಿಗಳಿಗೆ ಬಲು ನಂಬಿಕೆಯ ಆಳಾಗಿದ್ದು ಅಲ್ಲಿಯ ಅನೇಕ ಗುಟ್ಟುಗಳನ್ನು ತಿಳಿದಿದ್ದ.

ಅವನನ್ನು ಕರೆದಿದ್ದ ಗಂಟೆಯ ಹುಕುಂ ಪ್ರಕಾರ ಅವನು ಮುಖ್ಯಾಧಿಕಾರಿ ಮದರ್ ಇನ್ನೊ ಸೆಂಟಳ ಎದುರು ಹೋಗಿ ತಲೆ ಕೆಳಗೆ ಹಾಕಿ ನಿಂತುಕೊಂಡ. ಏನೋ ಒಂದು ಬಲು ಗುಟ್ಟಿನ ಸಂಗತಿ ಮಾತಾಡಲಿರುವವಳಂತೆ ಮದರ್ ಇನ್ನೊಸೆಂಟ್ ಕುಳಿತಿದ್ದಳು. ಇವನನ್ನು ಕಂಡೊಡನೆ ಅವಳು, "ಫಾದರ್ ಫಾಶಲೆವೆಂಟ್," ಅಂದಳು.

"ಹಾಜರಿದ್ದೇನೆ ತಾಯಿ," ಅಂದ ಫಾಶಲೆವೆಂಟ್.

"ಸ್ವಲ್ಪ ಮಾತಾಡತಕ್ಕ ಕಾರ್ಯವಿದೆ."

"ಅಪ್ಪಣೆಯಾಗಲಿ ತಾಯಿ."

"ನೀನು ಸೌಖ್ಯವಷ್ಟೆ, ಮುದುಕ?"

"ತಕ್ಕಮಟ್ಟಿಗೆ ಸೌಖ್ಯ ತಾಯೀ, ಆದರೂ ಮೊದಲಿನಷ್ಟು ಕೆಲಸಮಾಡೋದಕ್ಕೆ ಆಗೋದಿಲ್ಲ ; ಈ ವಿಷಯ ತಮ್ಮಲ್ಲಿ ಅರಿಕೆಮಾಡಿಕೊಳ್ಳಬೇಕೆಂದಿದ್ದೆ, ತಾಯಿ."

"ಆಗಲಿ, ನೀನು ಹೇಳಬೇಕಾದುದನ್ನೆಲ್ಲ ಹೇಳು, ನಿನ್ನ ಮಾತು ಮೊದಲು ಆಗಲಿ."

"ವಿಶೇಷವೇನೂ ಇಲ್ಲ. ಈಗೀಗ ನನಗೆ ತೋಟದ ಕೆಲಸ ಕಷ್ಟಕಾಣುತ್ತದೆ. ನನ್ನ ತಮ್ಮ ಒಬ್ಬ ಮುದುಕನಿದ್ದಾನೆ, ತಾಯಿ. ಅಪ್ಪಣೆಯಾದರೆ ಅವನನ್ನು ನನ್ನ ಜೊತೇಲಿ ಕೆಲಸಕ್ಕೆ ಸೇರಿಸಿಕೊಂಡರೆ ಆಗಬಹುದೂಂತ ಕಾಣುತ್ತೆ, ತಾಯಿ."

ಮದರ್ ಇನ್ನೊಸೆಂಟ್ ಏನೂ ಉತ್ತರವೀಯಲಿಲ್ಲ. ಎಲ್ಲವನ್ನೂ ಸಹಾನುಭೂತಿಯಿಂದ ಕೇಳುತ್ತಿದ್ದಳು. ಫಾಶಲೆವೆಂಟ್ ತನ್ನ ಮಾತನ್ನು ಮುಂದುವರಿಸಿದ, "ನಮಗೆ ಯಾರೂ ಇಲ್ಲ, ತಾಯಿ. ನನ್ನ ತಮ್ಮನ ಜೊತೆಯಲ್ಲಿ ಒಬ್ಬ ಚಿಕ್ಕ ಹುಡುಗಿ ಮಾತ್ರ ಇದ್ದಾಳೆ. ತಮ್ಮ ಒಳ್ಳೆ ಕೆಲಸ ಗಾರ. ತಮ್ಮ ಇಲ್ಲಿ ಕೆಲಸಕ್ಕೆ ಸೇರಿ, ಹುಡುಗಿಯನ್ನು ಕಾನ್ವೆಂಟಿಗೆ ಸೇರಿಸಿದರೆ ಆಗಬಹುದೆಂದು ನಮ್ಮ ನಮ್ರ ವಿನಂತಿ, ತಾಯಿ. ಕೊನೆಗೆ ದೇವರು ಇಚ್ಛೆಪಟ್ಟರೆ ಆ ಹುಡುಗಿ ದೀಕ್ಷೆ ತೆಗೆದು ಕೊಳ್ಳುತ್ತಾಳೆ. ಇಷ್ಟು ತಮ್ಮಲ್ಲಿ ಅರಿಕೆಮಾಡಿಕೊಳ್ಳಬೇಕೆಂದಿದ್ದೆ, ತಾಯಿ."

ಮದರ್ ಇನ್ನೊಸೆಂಟ್ ಈ ಮಾತುಗಳಿಗೆ ಉತ್ತರವೀಯದೆ ಅವಳ ಕಡೆಯ ಮಾತನ್ನು ಪ್ರಾರಂಭಿಸಿದಳು, "ಫಾಶಲೆವೆಂಟ್, ನನ್ನ ಆವಶ್ಯಕತೆ ಏನೆಂದು ಹೇಳುತ್ತೇನೆ, ಕೇಳು, ಒಂದು ಉಕ್ಕಿನ ಸಬ್ಬಲ್ ಬೇಕು."

"ಎಂಥ ಕೆಲಸಕ್ಕೆಂದು ಅಪ್ಪಣೆಕೊಡಿಸಿದರಾಗಬಹುದು, ತಾಯಿ."

"ಸನ್ನೆಯಾಗಿ ಉಪಯೋಗಿಸೋದಕ್ಕೆ, ಭಾರವನ್ನೆತ್ತಲು, ಫಾಶೆಲೆವೆಂಟ್."

"ಆಗಬಹುದು. ಯಾವಾಗ ತರಬೇಕು, ತಾಯಿ?"

ಇಷ್ಟರಲ್ಲೇ ಒಳಗಿನಿಂದ ಒಂದು ಅವಸರದ ಕರೆಬಂದು ಅಧಿಕಾರಿಣಿ ತಾನು ಸದ್ಯ ಬರುವುದಾಗಿ ಹೇಳಿ ಒಳಗೆ ಹೋದಳು.

೩. ಮದರ್ ಇನ್ನೊಸೆಂಟ್

ಸಾಧಾರಣ ಕಾಲುಗಂಟೆ ಕಳೆದನಂತರ ಮದರ್ ಇನ್ನೊಸೆಂಟ್ ಮರಳಿದಳು. ಫಾಶೆಲೆವೆಂಟ್ ಶುದ್ಧಭಕ್ತಿಯುಳ್ಳ ಕ್ರಿಶ್ಚಿಯನ್ನನೆಂದೂ ವಿಶ್ವಾಸಾರ್ಹನೆಂದೂ ನಿಷ್ಕಪಟಿಯೆಂದೂ ಮದರ್ ಇನ್ನೊಸೆಂಟ್ ತಿಳಿದಿದ್ದಳು. ಆದ್ದರಿಂದ ಅವಳು ಅವಳ ಅಂತರಂಗವನ್ನೇ ಬಿಚ್ಚಿ ಮಾತಾಡತೊಡಗಿದಳು.

"ಫಾಶೆಲೆವೆಂಟ್, ನೀನು ನಮ್ಮ ಪ್ರಾರ್ಥನಾಮಂದಿರದ ಹಿಂದಿನ ಭಾಗವನ್ನು ನೋಡಿರುವೆಯಷ್ಟೆ?"

"ಹೌದು ತಾಯಿ, ನೋಡಿದ್ದೇನೆ."

"ಅಲ್ಲಿ ನೆಲಮಾಳಿಗೆಗೆ ಉಂಗುರಗಳಿರುವ ಕಲ್ಲನ್ನು ಮುಚ್ಚಿರುವುದನ್ನೂ ನೋಡಿರುವೆಯಷ್ಟೆ?"

"ಅಂಥ ಸೂಕ್ಷ್ಮದೃಷ್ಟಿ ನನಗೆಲ್ಲಿಂದ ಬರಬೇಕು ತಾಯಿ? ತಾವನ್ನುವಂತೆ ಅಂಥ ಕಲ್ಲು ಇರಬಹುದು. ಆದರೆ, ನನ್ನಿಂದೇನಾಗಬೇಕು ತಾಯಿ?"

"ಆ ಮುಚ್ಚಳವನ್ನೆತ್ತಬೇಕು."

"ಇನ್ನೊಬ್ಬ ಗಂಡಸು ಬೇಕಲ್ಲ, ತಾಯಿ?"

"ನಿನ್ನ ಸಹಾಯಕ್ಕೆ ಎರಡು ಜನ ಸನ್ಯಾಸಿನಿಯರು ಬರುತ್ತಾರೆ."

"ಹೆಂಗುಸರು ಗಂಡುಸರ ಹಾಗಲ್ಲವಲ್ಲ ತಾಯಿ?"

"ಬೇರೆ ಉಪಾಯವಿಲ್ಲ."

"ನನ್ನ ತಮ್ಮನನ್ನು ಕರೀಬಹುದಲ್ಲ?"

"ಅದು ಕೂಡದು. ಆ ಕೆಲಸ ಇಲ್ಲಿದ್ದವರಿಂದಲೇ ಆಗಬೇಕು. ಉಂಗುರದ ಮೂಲಕ ಸಬ್ಬಲ್ಲಿನಿಂದ ಬಾಗಿಲು ಎತ್ತಬೇಕು, ಫಾಶೆಲೆವೆಂಟ್."

"ತೆರೆದು?"

"ನೆಲಮಾಳಿಗೆಯಲ್ಲಿ ಒಂದು ಅಮೂಲ್ಯ ಮತ್ತು ಪವಿತ್ರ ವಸ್ತುವನ್ನಿಡಬೇಕು."

"ಎಂಥ ವಸ್ತು? ಭಾರವಾದದ್ದೆ? ಅದೂ ಗೊತ್ತಾಗಬೇಡವೆ, ತಾಯಿ?"

"ಫಾಶೆಲೆವೆಂಟ್ ಗಂಟೆಬಾರಿಸಿದ್ದನ್ನು ಕೇಳಲಿಲ್ಲವೇನು? ಮದರ್ ಕ್ರೂಸಿಫಿಕ್ಸ್ ಮೃತಳಾಗಿದ್ದಾಳೆ. ಅವಳ ಶವವನ್ನು ನೆಲಮಾಳಿಗೆಯಲ್ಲಿಡಬೇಕು."

"ಸರಿ ನನ್ನಿಂದೇನಡ್ಡಿ, ತಾಯಿ?"

"ಈಗ ಇಪ್ಪತ್ತು ವರ್ಷಗಳಿಂದಲೂ ಅವಳು ತನ್ನ ಶವಪೆಟ್ಟಿಗೆಯಲ್ಲೇ ಮಲಗಿರುತ್ತಾಳೆ. ಅಂಥ ಮಹಾತ್ಮಳ ಮರಣಕಾಲದ ಅಪ್ಪಣೆಯನ್ನು ನಾವು ಶಿರಸಾವಹಿಸಬೇಕು."

"ಸರಕಾರದ ಆಕ್ಷೇಪ ಬರದೇನು, ತಾಯಿ?"

"ದೈವಸಾನ್ನಿಧ್ಯದಲ್ಲಿ ಸರಕಾರವಿಲ್ಲ, ಫಾಶೆಲೆವೆಂಟ್! ಮಹಾತ್ಮರುಗಳನ್ನು ಗುಡಿಯೊಳಗೆ ಸ್ಥಾಪನೆ ಮಾಡಿದ್ದಾದರೆ ಅಲ್ಲಿ ದೈವಸಾನ್ನಿಧ್ಯ ಮತ್ತಷ್ಟು ಹೆಚ್ಚುವುದು, ಅದು ಗೊತ್ತಿದೆಯೇ?"

"ಕೇಳಿದ್ದೇನೆ, ತಾಯಿ."

"ಮದರ್ ಕ್ರೂಸಿಫಿಕ್ಸಳನ್ನು ನಮ್ಮ ಪ್ರಾರ್ಥನಾಮಂದಿರದಲ್ಲಿ ಸ್ಥಾಪನೆ ಮಾಡಿದರೆ ಇಲ್ಲಿಯ ಪ್ರಭಾವ ಮಹತ್ತ್ವದ್ದಾಗುವುದು. ಇದೊಂದು ಪುಣ್ಯಕ್ಷೇತ್ರವಾಗುವುದು."

"ಶವಸಂಪುಟ ಮುಚ್ಚುವ ಕೆಲಸವನ್ನು ಯಾರು ಮಾಡಬೇಕು, ತಾಯಿ?"

"ಆ ಕೆಲಸವೆಲ್ಲ ನಿನ್ನಿಂದಲೇ ಆಗಬೇಕು, ಫಾಶೆಲೆವೆಂಟ್. ಸಂಪುಟ ಈಗಲೇ ತಯಾರಾಗಿದೆ. ಅದರ ಕೆಲಸವನ್ನೆಲ್ಲ ನಿನ್ನ ಕೋಣೆಯಲ್ಲಿ ನೀನೊಬ್ಬನೇ ಗುಟ್ಟಾಗಿ ಮಾಡಿ ನಮಗೆ ತಿಳಿಸಿದರೆ, ನಮ್ಮ ಕಡೆ ಜನ ಅದನ್ನು ಹೊತ್ತುಸಾಗಿಸಿ ನೆಲಮಾಳಿಗೆಯಲ್ಲಿಡುತ್ತಾರೆ."

"ನೆಲಮಾಳಿಗೆ ಒಳಗಿಳಿಸುವ ಸಂಪುಟ ತಮ್ಮದೇ ಆದರೆ, ತಾಯಿ, ಸರಕಾರದಿಂದ ಬರುವ ಸಂಪುಟವನ್ನು ಏನುಮಾಡುವುದು? ಪೊಲೀಸ್ ಇದ್ದಾರಲ್ಲ?"

"ಅದನ್ನೂ ನೀನೇ ಮುಚ್ಚಿ ಬಂದೋಬಸ್ತು ಮಾಡಿಡು. ಅನಂತರ ಸರಕಾರದ ಆಳುಗಳು ಬಂದು ಶ್ಮಶಾನಕ್ಕೆ ಅದನ್ನು ಒಯ್ಯಲಿ."

"ಅದು ಅಷ್ಟು ಸುಲಭವಲ್ಲ, ತಾಯೀ. ಪೆಟ್ಟಿಗೆಯನ್ನೆತ್ತಿದರೆ ಗೊತ್ತಾಗಬಹುದಲ್ಲಾಂತ ಯೋಚಿಸುತ್ತಿದ್ದೇನೆ."

ಮದರ್ ಇನ್ನೊಸೆಂಟಳಿಗೆ ಸಂದರ್ಭಗಳ ಕಷ್ಟ ತಿಳಿಯಿತು. ಅವಳು ಗಾಬರಿಯಾದಳು. ಅಷ್ಟರಲ್ಲೇ ಫಾಶೆಲೆವೆಂಟನಿಗೆ ಒಂದು ಆಲೋಚನೆ ಸ್ಫುರಿಸಿತು. ಅವನೆಂದ, "ಹೆದರಬೇಡಿ, ತಾಯಿ ಪೆಟ್ಟಿಗೆಯೊಳಗೆ ಮಣ್ಣು ತುಂಬಿ ಮೊಳೆ ಹೊಡೆದರೆ ಆಯಿತಲ್ಲ! ಅದನ್ನೆಲ್ಲ ನಾನು ಮಾಡಿಬಿಡ್ತೇನೆ!"

ಮದರ್ ಇನ್ನೊಸೆಂಟಳಿಗೆ ಸಂತೋಷವಾಯಿತು. ಅವಳು ಅಂದಳು, "ನಿನ್ನ ಆಲೋಚನೆ ಸರಿ, ಹೆಣವಾದರೂ ಕೊನೆಗೆ ಮಣ್ಣೇ ಆಗಬೇಕಷ್ಟೆ !"

"ಮತ್ತೆಲ್ಲ ನಾನು ನೋಡಿಕೊಳ್ಳುತ್ತೇನೆ, ತಾಯಿ; ಕಾನ್ವೆಂಟ್-ಶ್ಮಶಾನದ ದಫನಗಾರ ನನ್ನ ಸ್ನೇಹಿತ," ಎಂದ ಫಾಶೆಲೆವೆಂಟ್.

ಮದರ್ ಇನ್ನೊಸೆಂಟ್ ಅಲ್ಲಿಂದ ಹೋಗುವಾಗ, "ಫಾಶೆಲೆವೆಂಟ್, ನಿನ್ನ ಮೆಹನತ್ತು ಕೇಳಿ ಸಂತೋಷವಾಯಿತು. ದಫನ ಕೆಲಸ ಮುಗಿದನಂತರ ನಿನ್ನ ತಮ್ಮನನ್ನೂ ಅವನ ಮಗಳನ್ನೂ ಕರೆದುಕೊಂಡು ಬಾ," ಎಂದಳು.

೪. ಪಾರಾಗುವ ಏರ್ಪಾಡು

ಫಾಶೆಲೆವೆಂಟ್ ಕಾನ್ವೆಂಟಿನಿಂದ ಬರುವಾಗ ಜೀನ್‌ವಾಲ್‌ಜೀನ್ ಕೋಸೆಟ್ಟಿಯ ಹತ್ತಿರ ಮಾತಾಡುತ್ತ ಕುಳಿತಿದ್ದ. ಕೋಸೆಟ್ಟಿಯನ್ನು ತರಕಾರಿ ಬುಟ್ಟಿಯಲ್ಲಿ ಕುಳ್ಳಿರಿಸಿ, ಕಾನ್ವೆಂಟಿನಿಂದ ಹೊರಗೆ ಕರೆದುಕೊಂಡು ಹೋಗಿ ಒಬ್ಬ ಹಣ್ಣು ವ್ಯಾಪಾರಿಯ ವಶದಲ್ಲಿ ಬಿಡುವ ಕ್ರಮ, ಏರ್ಪಾಡು, ಮೊದಲಾದ್ದನ್ನೆಲ್ಲ ಜೀನ್‌ವಾಲ್‌ಜೀನ್ ಕೋಸೆಟ್ಟಿಗೆ ತಿಳಿಸಿ, ಅವಳ ಸಹಕಾರದ ಕುರಿತು ಬೋಧನೆ ಕೊಟ್ಟ. ಈ ಕಷ್ಟಗಳೆಲ್ಲ ತೆನಾರ್ಡಿಯರನಿಂದ ಆಖೈರಾಗಿ ತಪ್ಪಿಸಿಕೊಳ್ಳಲಿರುವ ಮಾರ್ಗವೆಂದೂ ಹೇಳಿದ. ತನ್ನ ಪ್ರೀತಿಯ ಮತ್ತು ನಂಬಿಕೆಯ ಜೀನ್‌ವಾಲ್‌ಜೀನನ ಮಾತುಗಳನ್ನು ಶಾಂತವಾಗಿ ಕೇಳಿ ತಾನು ಸಹಕರಿಸಲು ಸಂತೋಷದಿಂದ ಕೋಸೆಟ್ಟಿ ಒಪ್ಪಿಕೊಂಡಳು.

ಫಾಶೆಲೆವೆಂಟ್ ಕಾನ್ವೆಂಟಿನಲ್ಲಿ ತನಗೂ ಕಾನ್ವೆಂಟಿನ ಮುಖ್ಯಾಧಿಕಾರಿಣಿಗೂ ನಡೆದ ಮಾತುಕಥೆ

ಗಳನ್ನೆಲ್ಲ ಜೀನ್‌ವಾಲ್‌ಜೀನನಿಗೆ ತಿಳಿಸಿ, ಇಂಥ ಸಂದರ್ಭವನ್ನು ಹೇಗೆ ಉಪಯೋಗಿಸಿಕೊಳ್ಳ ಬಹುದೆಂಬುದರಲ್ಲಿ ತನಗೆ ದಾರಿತೋರದೆ, ಇವನು ಸ್ವಲ್ಪ ಆಲೋಚಿಸಬೇಕೆಂದು ವಿನಂತಿಸಿ ಕೊಂಡ. ಆದರೆ ಇಂಥ ಸನ್ನಿವೇಶಗಳಲ್ಲಿ ಬಹಳ ಪ್ರತಿಭೆಯಿದ್ದ ಜೀನ್‌ವಾಲ್‌ಜೀನ್ ಹಠಾತ್ತನೆ, "ಸರಕಾರದಿಂದ ಬರುವ ಸಂಪುಟದ ಒಳಗೆ ಮಣ್ಣು ತುಂಬಿಸುವ ಬದಲು ನನ್ನನ್ನು ತುಂಬಿಸಿ ಬಿಡು. ಉಸಿರಾಡಲು ತಕ್ಕಂಥ ನಾಲ್ಕು ರಂಧ್ರಗಳನ್ನು ಸಂಪುಟದಲ್ಲಿ ನಾನೇ ಮಾಡಿಡುತ್ತೇನೆ. ಮುಂದೆ ಶ್ಮಶಾನದಲ್ಲಿ ನೀನು ನಿನ್ನ ಸ್ನೇಹಿತನ ಮೂಲಕ ಉಪಾಯ ನಡೆಸಬಹುದಷ್ಟೆ," ಅಂದ.

ಈ ಕ್ರಮದಿಂದ ಪಾರಾಗುವುದನ್ನು ಫಾಶೆಲೆವೆಂಟ್ ಮೊದಲು ಒಪ್ಪಲಿಲ್ಲ. ಇದು ಮಾನ್ಯರ್ ಮೆಡಲೀನರಿಗೆ ಅಗೌರವವೆಂದೇ ಅವನ ಅಭಿಪ್ರಾಯವಿದ್ದು ಹೀಗೆ ಅಸಮ್ಮತಿ ಹೇಳಿದ. ಕೊನೆಗೆ ಬೇರೇನೂ ಉಪಾಯವಿಲ್ಲದ್ದರಿಂದ ಸಮ್ಮತಿಸಿದ. "ನೋಡಿ, ಮಾನ್ಯರರೇ, ನನ್ನ ಕೋಣೆಗೆ ಇತರ ಯಾರಿಗೂ ಪ್ರವೇಶವಿಲ್ಲ. ಇದರೊಳಗೆ ಮದರ್ ಕ್ರೂಸಿಫಿಕ್ಸರನ್ನು ತುಂಬಿಸಿರುವ ಸಂಪುಟವೂ ಮತ್ತು ಸರಕಾರದಿಂದ ಬಂದ ಖಾಲಿ ಸಂಪುಟವೂ ಇರುವುವಷ್ಟೆ. ಖಾಲಿ ಸಂಪುಟದೊಳಗೆ ನಿಮ್ಮನ್ನು ಮಲಗಿಸಿ, ಮೇಲೆ ಹಲಗೆ ಮುಚ್ಚಿ ಮೊಳೆ ಹೊಡೆದರಾಯಿತು. ಮದರ್ ಕ್ರೂಸಿಫಿಕ್ಸರ ಸಂಪುಟವನ್ನು ಇಲ್ಲಿಯವರೇ ಗುಟ್ಟಾಗಿ ಸಾಗಿಸಿ ನೆಲಮಾಳಿಗೆಯಲ್ಲಿಟ್ಟ ಬಳಿಕವೇ ಸರಕಾರೀ ಸಂಪುಟವನ್ನು ಸಾಗಿಸಲು ಸರಕಾರದ ಕಡೆಯವರು ಬರುವುದು. ನಾನು ಅವರ ಜೊತೆ ಶ್ಮಶಾನಕ್ಕೆ ಹೋಗುತ್ತೇನೆ. ನನಗೆ ಹಾಗೆ ಹೋಗಲು ಕರ್ತವ್ಯವೂ ಕೆಲಸವೂ ಇವೆ. ಕಾನ್ವೆಂಟ್-ಶ್ಮಶಾನವೆಂದರೆ ಸಾರ್ವಜನಿಕ ಶ್ಮಶಾನದ ಒಂದು ಕರೆ ಸ್ಥಳ. ಅಲ್ಲಿಯ ಫಾದರ್ ಮೆಸ್ಟೀನ್ ನನ್ನ ಪರಮ ಸ್ನೇಹಿತ. ಅವನಿಗೆ ಹೆಂಡ ಕುಡಿಸಿ ಕೆಲಸ ಪೂರೈಸುವೆನು."

೫. ಕುಡುಕನೇನೂ ಅಮರನಲ್ಲ!

ಪ್ಯಾರಿಸ್ ನಗರದ ಸಾರ್ವಜನಿಕ ಶ್ಮಶಾನದ ಒಂದು ಬದಿಯಲ್ಲಿ ಪಿಕ್‌ಪಸ್ ಕಾನ್ವೆಂಟಿಗೆ ಸಂಬಂಧಿಸಿದ ಒಂದಂಶವನ್ನು ಬಲಿಷ್ಠ ಆವರಣ ಕಟ್ಟಿ ಪ್ರತ್ಯೇಕಿಸಿಡಲಾಗಿತ್ತು. ಸೂರ್ಯಾ ಸ್ತಮಾನಾನಂತರ ಈ ಭಾಗದ ಶ್ಮಶಾನಕ್ಕೆ ಯಾರೂ ಹೋಗದಂತೆ ಬಲವಾದ ಗೇಟೂ ಗೇಟಿನ ಬದಿಯಲ್ಲೇ ಪಹರೆಯೂ ಇದ್ದುವು. ಸೂರ್ಯಾಸ್ತಮಾನಾನಂತರ ಯಾರಿಗಾದರೂ ಅಗತ್ಯ ಕೆಲಸ ಗಳ ನಿಮಿತ್ತ ಗೇಟನ್ನು ದಾಟಬೇಕಾಗಿ ಬಂದರೆ ಸರಕಾರ ಅಂಥ ಸಂದರ್ಭಕ್ಕೆ ತಕ್ಕ ಒಂದು ರಹದಾರಿ ಕೊಡುತ್ತಿತ್ತು. ಇದನ್ನು ತೋರಿಸಿದ ಹೊರತು ಪಹರೆಯವರು ಯಾರನ್ನೂ ಗೇಟು ದಾಟಲು ಯಾವ ಕಡೆಯಿಂದಲೂ ಬಿಡುತ್ತಿರಲಿಲ್ಲ. ಒಬ್ಬನಲ್ಲಿ ಒಮ್ಮೆ ಇದ್ದ ರಹದಾರಿ ಏನಾದರೂ ಕಾರಣ ಗಳಿಂದ ಕಳೆದು ಹೋದದ್ದಾದರೆ, ಅಂಥ ರಹದಾರಿಯ ಬಾಬ್ತು ಹದಿನೈದು ಫ್ರ್ಯಾಂಕ್ ಜುಲ್ಮಾನೆ ವಸೂಲ್ಮಾಡಿ ಗೇಟಿನ ಪಹರೆಯವರೇ ತಾತ್ಕಾಲಿಕ ಹೊಸ ರಹದಾರಿಯನ್ನು ನಿಯಮಗಳ ಪ್ರಕಾರ ಕೊಡುತ್ತಿದ್ದರು.

ಫಾಶೆಲೆವೆಂಟನೂ ಜೀನ್‌ವಾಲ್‌ಜೀನನೂ ಅವರೊಳಗಿನ ಏರ್ಪಾಡುಗಳನ್ನು ಮಾಡಿಕೊಂಡ ಮರುದಿನ ಸಂಜೆಗೆ ಸರಕಾರದ ಆಳುಗಳು ಕಾನ್ವೆಂಟಿನಿಂದ ಒಂದು ಶವಸಂಪುಟವನ್ನು ಬಂಡಿ ಯಲ್ಲಿ ಒಯ್ದು ಶ್ಮಶಾನಕ್ಕೆ ತಂದರು. ನೇಸರು ಕಂತಲು ಇನ್ನೂ ವೇಳೆ ಇದ್ದುದರಿಂದ ಶ್ಮಶಾನದ ಗೇಟು ತೆರೆದೇ ಇತ್ತು. ಈ ಜನರ ಜೊತೆಯಲ್ಲಿ ಫಾಶೆಲೆವೆಂಟನೂ ಬಂದಿದ್ದ. ಸಂಪುಟ ತಂದವರ ಜೊತೆ ಒಂದು ಹಾರೆಯನ್ನು ಹಿಡಿದುಕೊಂಡು ಫಾದರ್ ಮೇಸ್ಟೀನನ ಬದಲು ಹೊಸಬನೊಬ್ಬ

ಬಂದು ನಿಂತಿದ್ದ.

ಈ ಹೊಸಬನನ್ನು ಕಂಡು ಫಾಶೆಲೆವೆಂಟನಿಗೆ ಒಮ್ಮೆ ಸ್ಮೃತಿ ತಪ್ಪಿಹೋದ ಹಾಗೆಯೇ ಆಯಿತು. ಆದರೂ, ಅವನು ವಾಚಾಳಿಯಾಗಿದ್ದುದರಿಂದ ಹೊಸಬನ ಪರಿಚಯ ಮಾಡಿಕೊಂಡು, ಆ ಹೊಸಬ ಫಾದರ್ ಮೆಸ್ಟೀನ್ ಸತ್ತನಂತರ ಆ ಸ್ಥಾನಕ್ಕೆ ಬಂದಿದ್ದ ಗ್ರೈಬರನೆಂದು ತಿಳಿದುಕೊಂಡ.

ಗ್ರೈಬರ್ ಓದುಬರಹ ಬಲ್ಲವನಾಗಿದ್ದ. ಸಂಸಾರವಂದಿಗನೂ ಹೌದು. ಆ ಕಾರಣದಿಂದಲೇ, ಸಂಸಾರ ಭಾರವನ್ನರಿತಿದ್ದುದರಿಂದಲೇ, ಅವನು ಹೆಂಡ ಕುಡಿಯುತ್ತಿರಲಿಲ್ಲ. ಫಾಶೆಲೆವೆಂಟ್ ಅವನೊಂದಿಗೆ ವಿನಯವಾಗಿ, ಚಮತ್ಕಾರವಾಗಿ ಯಾವ ಯಾವ ವಿಧಗಳಿಂದ ಪ್ರಯತ್ನಿಸಿದರೂ ಅವನು ಹೆಂಡ ಕುಡಿಯಲು ನಿರಾಕರಿಸಿಬಿಟ್ಟ. ಆದರೂ ಫಾಶೆಲೆವೆಂಟನ ಅತಿಯಾದ ಒತ್ತಾಯಕ್ಕಾಗಿ ಕೆಲಸ ಪೂರೈಸಿದನಂತರ, ಬೇಕಾದರೆ ಸ್ವಲ್ಪ ಕುಡಿಯಲು ಒಪ್ಪಿದ.

ಜೀನ್‌ವಾಲ್‌ಜೀನನಿಗೆ ಈ ಮಾತು ಯಾವುದೂ ಕೇಳಿಸುತ್ತಿರಲಿಲ್ಲ. ಆದರೂ ಬಂಡಿ ಅಲ್ಲಿ ನಿಂತದ್ದು, ಕೆಲಸದವರು ಸಂಪುಟವನ್ನು ನೆಲದಲ್ಲಿಟ್ಟದ್ದು ಮಾತ್ರ ಗೊತ್ತಾಗಿತ್ತು.

೬. ಸಂಪುಟವೋ ? ಕೊನೆ ಪುಟವೋ ?

ಕೊಂಚ ಹೊತ್ತಿನಲ್ಲಿ ಪೆಟ್ಟಿಗೆಗೆ ಹಗ್ಗ ಸುತ್ತಿ ಗುಳಿಗೆ ಇಳಿಸಿದರು. ಜೀನ್‌ವಾಲ್‌ಜೀನನಿಗೆ ಸ್ವಲ್ಪ ತಲೆತಿರುಗಿದ ಹಾಗಾಯ್ತು. ಪೆಟ್ಟಿಗೆಯ ತಲೆಭಾಗವನ್ನು ಮೊದಲು ಇಳಿಸಿದ್ದರಿಂದ ಹೀಗಾಗಿರ ಬೇಕೆಂದು ಗ್ರಹಿಸಿದ. ಅಷ್ಟರಲ್ಲೇ ಪೆಟ್ಟಿಗೆಯ ಮೇಲೆ, ಅಲ್ಲಿಗೆ ಅದಕ್ಕಾಗಿ ಬಂದಿದ್ದ ಒಬ್ಬ ಪಾದ್ರಿ ಮಂತ್ರೋಚ್ಚಾರಣೆ ಮಾಡುತ್ತ ತೀರ್ಥ ಪ್ರೋಕ್ಷಣೆ ಮಾಡಿದ. ಅದೂ ಜೀನ್‌ವಾಲ್‌ಜೀನನಿಗೆ ಗೊತ್ತಾಯಿತು. ಸರಕಾರದ ಕಡೆಯವರೂ ಪಾದ್ರಿಯೂ ಬಂಡಿಯ ಸಮೇತ ಅಲ್ಲಿಂದ ಹೊರಟು ಹೋದರು. ಅದೆಲ್ಲ ಜೀನ್‌ವಾಲ್‌ಜೀನನಿಗೆ ಗೊತ್ತಾಗುತ್ತ ಇನ್ನು ಫಾಶೆಲೆವೆಂಟ್ ಪೆಟ್ಟಿಗೆಯ ಮುಚ್ಚಳ ತೆಗೆಯುವನೆಂದು ನಿರೀಕ್ಷಿಸತೊಡಗಿದ.

ಹೀಗಿರುವಾಗಲೇ ಗ್ರೈಬರ್ ತನ್ನ ಹಾರೆಯಿಂದ ಗುಂಡಿಗೆ ಒಂದು ಹಾರೆ ಮಣ್ಣು ಹಾಕಿದ. ತನ್ನ ಪೆಟ್ಟಿಗೆಯ ಮೇಲೆ ಹೀಗೊಂದು ಭಾರವಾದ ವಸ್ತು ಬೀಳುತ್ತಿರುವುದು ಏನೆಂದು ಜೀನ್ ವಾಲ್‌ಜೀನ್ ಹೆದರತೊಡಗಿದ. ಗ್ರೈಬರ್ ಮತ್ತೂ ಒಂದೆರಡು ಹಾರೆ ಮಣ್ಣು ಹಾಕಿ ಕೆರೆಯ ಮಣ್ಣನ್ನೆಲ್ಲ ಒಟ್ಟುಮಾಡತೊಡಗಿದ. ಸೂರ್ಯ ಅಸ್ತಮಿಸತೊಡಗಿದ್ದ. ಫಾಶೆಲೆವೆಂಟನಿಗೆ ಹುಚ್ಚೇ ಹಿಡಿಯುವಂತೆ ತೋರಿತು.

೭. ಫಾಶೆಲೆವೆಂಟ್ ಕಂಡ ಉಪಾಯ

ಫಾಶೆಲೆವೆಂಟ್ ಗ್ರೈಬರನ ಹತ್ತಿರ ನಿಂತು ಮಾತಾಡತೊಡಗಿದ, "ನೋಡು ಗ್ರೈಬರ್, ಸ್ವಲ್ಪ ಕುಡಿದ ಮೇಲೆ ಕೆಲಸ ಮಾಡಿದರೆ ಕೆಲಸವೂ ಸರಿಯಾಗುತ್ತದೆ. ಈಗಲೇ ಚಳಿ ಪ್ರಾರಂಭವಾಗಿದೆ."

"ಹೌದಯ್ಯ, ನಮ್ಮಂತೆ ಇಲ್ಲಿ ಮಲಗಿದವಳಿಗೂ ಚಳಿಯಾಗುವುದಿಲ್ಲವೇ? ಅವಳಿಗೆ ಸ್ವಲ್ಪ ಕಂಬಳಿ ಹೊದೆಸಿಬಿಡುತ್ತೇನೆ," ಎಂದು ಹೇಳುತ್ತ ಬಗ್ಗಿಕೊಂಡು ಮಣ್ಣನ್ನು ರಾಶಿಮಾಡತೊಡಗಿದ.

ಆಗ ಫಾಶೆಲೆವೆಂಟನಿಗೆ ಗ್ರೈಬರನ ಚಡ್ಡಿ ಜೇಬಿನಲ್ಲಿ ಒಂದು ಕಾರ್ಡು ಕಂಡಂತಾಯಿತು. ಅದನ್ನೇ ಸ್ವಲ್ಪ ನೋಡಿದ ಕೂಡಲೇ ಅದು ಗ್ರೈಬರನ ಗೇಟ್ ಪಾಸ್ ಎಂದು ಗೊತ್ತಾಯಿತು. ಆ

ಕ್ಷಣವೇ ಅವನ ಆಲೋಚನೆಗಳು ವಿದ್ಯುದ್ವೇಗದಿಂದ ಹರಿದು, ಕಾರ್ಯಶೀಲವಾದುವು : ಗ್ರೈಬರನಿಗೆ ಗೊತ್ತಾಗದಂತೆ ಆ ಕಾರ್ಡನ್ನು ಅವನ ಚಡ್ಡಿ ಜೇಬಿನಿಂದ ಫಾಶೆಲೆವೆಂಟ್ ತೆಗೆದು ತನ್ನ ಕಿಸೆಯಲ್ಲಿ ಭದ್ರಪಡಿಸಿಕೊಂಡ. ಅನಂತರ, ಆತನ ಗಮನ ಸೆಳೆಯಲೋಸ್ಕರ, "ನೋಡಪ್ಪಾ! ನೀನು ಇಲ್ಲಿಗೆ ಹೊಸಬನಷ್ಟೆ. ಈಗ ಸೂರ್ಯಾಸ್ತಮಾನಕ್ಕೆ ಸಮೀಪವಾಗಿದೆಯಲ್ಲ?" ಎಂದು ಕೇಳಿದ.

"ಗೊತ್ತಿದೆ ಅದಕ್ಕೇನು ?" ಎಂದು ಉತ್ತರ ಹೇಳುತ್ತ ಗ್ರೈಬರ್ ಹಾರೆಯಿಂದ ಸಂಪುಟದ ಮೇಲೆ ಮಣ್ಣು ಹಾಕತೊಡಗಿದ. ಜೀನ್‌ವಾಲ್‌ಜೀನನಿಗೆ ಉಸಿರಾಡುವುದು ಕಷ್ಟವಾಗತೊಡಗಿತು; ಕೊನೆಗೆ ಸ್ಮೃತಿತಪ್ಪತೊಡಗಿತು. ಫಾಶೆಲೆವೆಂಟ್, "ಸೂರ್ಯಾಸ್ತಮಾನಕ್ಕೆ ಗೇಟನ್ನು ಮುಚ್ಚುವರಷ್ಟೆ?"

"ಮುಚ್ಚಿದರೇನು, ಪಾಸಿದೆಯಲ್ಲ," ಎಂದು ಹೇಳಿ ತನ್ನ ಪಾಸನ್ನು ತೆಗೆಯಲು ಚಡ್ಡಿಜೇಬಿಗೆ ಕೈ ಹಾಕಿದ. ಪಾಸನ್ನು ಅಲ್ಲಿ ಕಾಣದೆ ಗ್ರೈಬರ್ ಗಾಬರಿಗೊಂಡ. ಕೆಲಸ ನಿಲ್ಲಿಸಿ ತನ್ನ ಶರ್ಟಿನ ಕಿಸೆಯನ್ನೂ ನೆಲವನ್ನೂ ಹುಡುಕಿದ.

"ತಡವಾದರೇನು? ನಿನ್ನ ಗುರುತಿದೆಯಲ್ಲ ಪಹರೆಯವರಿಗೆ ! ಹದಿನೈದು ಫ್ರ್ಯಾಂಕ್ ಜುಲ್ಮಾನೆ ಕೊಟ್ಟರಾಯಿತು," ಅಂದ ಫಾಶೆಲೆವೆಂಟ್.

"ಜುಲ್ಮಾನೆಗಾಗಿ ಹದಿನೈದು ಫ್ರ್ಯಾಂಕ್ ಹಣ ಕಳೆದುಕೊಂಡರೆ ನನ್ನ ಸಂಸಾರದ ಗತಿ?" ಎನ್ನುತ್ತ ಗ್ರೈಬರ್ ಅತ್ತಿತ್ತ ನೋಡಿದ.

ಫಾಶೆಲೆವೆಂಟ್ ಹಿರಿತನದ ಅಧಿಕಾರದಿಂದ, ಗ್ರೈಬರನ ಹೆಗಲು ತಟ್ಟಿ, "ಗ್ರೈಬರ್, ಗಾಬರಿ ಪಡಬೇಡ. ಪಾಸು ನಿನ್ನ ಮನೆಯಲ್ಲಿರಬೇಕಷ್ಟೆ. ಸೂರ್ಯ ಪೂರ್ತಿ ಅಸ್ತಮಿಸುವ ಮೊದಲೇ ನೀನು ಮನೆಗೆ ತಲಪಬಹುದು. ನಾನು ಇಲ್ಲೇ ಕಾದಿರುವೆನು. ಸತ್ತವರ ಚಳಿ ಹಾಗಿರಲಿ, ನಿನಗೆ ಹಣ ಉಳಿಯಲಿ. ತಡವಾದರೆ ಪಾಸಿದೆಯಲ್ಲ, ಹದಿನೈದು ಫ್ರ್ಯಾಂಕ್ ಅಂದರೆ ಒಂದು ನೂರು ಸೌ," ಎಂದ.

ಗ್ರೈಬರ್ ಹಾರೆ ಬಿಟ್ಟು ಮನೆ ಕಡೆಗೆ ಓಡಿದ. ಫಾಶೆಲೆವೆಂಟ್ ಗ್ರೈಬರ್ ಸಾಕಷ್ಟು ದೂರ ಹೋದನಂತರ ಗುಳಿಗಿಳಿದು, ಸಂಪುಟದ ಮುಚ್ಚಳ ತೆಗೆದು, ಜೀನ್‌ವಾಲ್‌ಜೀನನನ್ನು ಕರೆದ. ಉತ್ತರ ಬರಲಿಲ್ಲ. ಅಲ್ಲಾಡಿಸಿದ. ಯಾವ ಅಲುಗಾಟವೂ ಸ್ವಾಭಾವಿಕವಾಗಿ ಬರಲಿಲ್ಲ. ಫಾಶೆಲೆವೆಂಟ್ ಅಳತೊಡಗಿದ. ಸಂಜೆಯ ತಂಪು ಗಾಳಿ ಬೀಸಿದ ಹಾಗೆ ಜೀನ್‌ವಾಲ್‌ಜೀನನಿಗೆ ಸ್ಮೃತಿ ಬಂತು. ಅವನು ಎದ್ದು ಕುಳಿತ. ಅನಂತರ ಮೈ ಅಲ್ಲಾಡಿಸಿ, ಗುಳಿಯಿಂದೆದ್ದು ಮೇಲೆ ಬಂದ. ಫಾಶೆಲೆವೆಂಟ್ ಅಲ್ಲಿ ನಡೆದಿದ್ದ ಸಂಗತಿಗಳನ್ನೆಲ್ಲ ಹೇಳಿದ. ಈ ಮಾತುಗಳ ಮಧ್ಯವೇ ಜೀನ್‌ವಾಲ್‌ಜೀನ್ ಗುಳಿಯನ್ನು ಮಣ್ಣಿನಿಂದ ಮುಚ್ಚಿ ಕೆಲಸ ಪೂರೈಸಿದ.

ಫಾಶೆಲೆವೆಂಟ್ ಮುಂಜಾಗ್ರತೆಯಿಂದ ಒಂದು ಬಾಟ್ಲಿ ವೈನ್ ತಂದಿದ್ದ. ಅದನ್ನು ಇಬ್ಬರೂ ಕುಡಿದರು. ಅನಂತರ ಗ್ರೈಬರನ ಪಾಸು ಜೀನ್‌ವಾಲ್‌ಜೀನ್ ಉಪಯೋಗಿಸಿ ಗೇಟನ್ನು ದಾಟಿ ಶ್ಮಶಾನದ ಹೊರಗೆ ಬಂದರು.

ಮುಂದೆ, ಜೀನ್‌ವಾಲ್‌ಜೀನನನ್ನು ಒಂದು ಕಡೆ ಗೋಪ್ಯವಾಗಿ ಕುಳ್ಳಿರಿಸಿ ಗ್ರೈಬರನ ಮನೆಗೆ ಹೋಗಿ ಫಾಶೆಲೆವೆಂಟ್ ಹೇಳಿದ, "ತಮ್ಮಾ ಗ್ರೈಬರ್! ನಿನ್ನ ಪಾಸ್ ಅಲ್ಲೇ ಬಿದ್ದಿತ್ತು. ಅದನ್ನು ಹೆಕ್ಕಿ, ಅಲ್ಲಿಯ ಕೆಲಸ ಪೂರೈಸಿ ಬಂದಿದ್ದೇನೆ. ನೀನು ಹೊಸಬನಲ್ಲವೇ. ಪಾಸನ್ನು ನೀನು ಬೆಳಗ್ಗೆ ಕೇಳಿದರೆ ಕೊಡುವಂತೆ ಹೇಳಿ ಪಹರೆಯವರ ಹತ್ತಿರ ಬಿಟ್ಟಿದ್ದೇನೆ," ಎಂದಂದು ಗ್ರೈಬರನ ವಂದನೆಗಳನ್ನು ಸ್ವೀಕರಿಸಿ ಹೊರಟುಬಂದ.

೮. ಪರೀಕ್ಷೆಯಲ್ಲಿ ತೇರ್ಗಡೆ

ಫಾಶಲೆವೆಂಟ್ ಕೋಸೆಟ್ಟಿಯನ್ನೂ ಜೀನ್‌ವಾಲ್‌ಜೀನನನ್ನೂ ಕರೆದುಕೊಂಡು ಕಾನ್ವೆಂಟಿಗೆ ಹೋದ. ಅಲ್ಲಿಯ ಕ್ರಮಗಳೆಲ್ಲ ಫಾಶಲೆವೆಂಟನಿಗೆ ತಿಳಿದಿದ್ದುದರಿಂದಲೂ ಮುಖ್ಯಾಧಿಕಾರಿಣಿಯ ಅಪ್ಪಣೆ ಪ್ರಕಾರವೇ ಅವನು ಹೊಸಬರಿಬ್ಬರನ್ನು ಕರೆದುಕೊಂಡು ಹೋಗುತ್ತಿದ್ದುದರಿಂದಲೂ ಅವರಿಗೆ ಆಕೆಯ ಎದುರಿಗೆ ಹೋಗಲು ಕಷ್ಟವಾಗಲಿಲ್ಲ. ಮುಖ್ಯಾಧಿಕಾರಿಣಿ ಜೊತೆಗೆ ಒಬ್ಬಳು ಸನ್ಯಾಸಿನಿಯನ್ನು ನಿಲ್ಲಿಸಿಕೊಂಡು, ಅವಳ ಅಧಿಕಾರಕ್ಕೆ ಸಂಬಂಧಿಸಿದ್ದ ಕುರ್ಚಿಯಲ್ಲಿ ಕುಳಿತಿದ್ದಳು. ಹೋದವರೆಲ್ಲರೂ ಅವಳಿಗೆ ಬಲು ಭಕ್ತಿಯಿಂದ ನಮಸ್ಕರಿಸಿದರು. ಇನ್ನೊಸೆಂಟ್ ಜೀನ್‌ವಾಲ್‌ಜೀನನನ್ನು ನೋಡುತ್ತ, "ಫಾಶಲೆವೆಂಟನ ತಮ್ಮನೇನು ನೀನು ?" ಎಂದು ಕೇಳಿದಳು.

"ಹೌದು ತಾಯಿ."

"ಹೆಸರು ?"

"ಅಲ್ಟೈಮ್ ಫಾಶಲೆವೆಂಟ್ ತಾಯಿ."

"ವೃತ್ತಿ?"

"ತೋಟಗಾರಿಕೆ."

"ಕ್ರೈಸ್ತ ಧರ್ಮದಲ್ಲಿ ನಂಬಿಕೆಯಿದೆಯೋ?"

"ನಮ್ಮ ಕುಟುಂಬವೆಲ್ಲ ಒಳ್ಳೇ ಕ್ರಿಶ್ಚಿಯನರು, ತಾಯೀ."

"ಹುಡುಗಿಗೆ ನೀನೇನಾಗಬೇಕು?"

"ಅಜ್ಜ."

"ಅವಳ ಹೆಸರು?"

"ಕೋಸೆಟ್ಟಿ."

"ಕಾನ್ವೆಂಟಿಗೆ ಸೇರಿ ನಮ್ಮ ಶಾಲೆಯಲ್ಲಿ ಅವಳು ತರಬೇತಾಗಲು ಅಪೇಕ್ಷಿಸುವೆಯೇನು?"

"ಹಾಗೆ ತಮ್ಮ ಅನುಗ್ರಹವಾಗಬೇಕೆಂದು ನನ್ನ ಪ್ರಾರ್ಥನೆ, ತಾಯಿ."

ಮುಖ್ಯಾಧಿಕಾರಿಣಿಗೆ ಕೋಸೆಟ್ಟಿಯ ಕುರೂಪ ಬಹಳ ಆಕರ್ಷಣೀಯವಾಗಿ ಕಂಡಿತು. ಅವಳು ತೃಪ್ತಿಯಿಂದ ಹೇಳಿದಳು, "ನಾಳೆಯಿಂದ ಕೋಸೆಟ್ಟಿ ನಮ್ಮ ಕಾನ್ವೆಂಟಿನವಳು. ಅಲ್ಟೈಮನಿಗೆ ಒಂದು ಗಂಟೆ ಒದಗಿಸಲಾಗುವುದು, ಅದನ್ನವನು ತನ್ನ ಕಾಲಿಗೆ ಕಟ್ಟಿಕೊಂಡು ಫಾಶಲೆವೆಂಟನ ಕೆಲಸಗಳಿಗೆ ಸಹಾಯಮಾಡಬೇಕು. ಇನ್ನು ನೀವು ಫಾಶಲೆವೆಂಟನ ಬಿಡಾರಕ್ಕೆ ಹೋಗಿರಿ."

ಫಾಶಲೆವೆಂಟ್ ಜೀನ್‌ವಾಲ್‌ಜೀನನನ್ನೂ ಕೋಸೆಟ್ಟಿಯನ್ನೂ ತನ್ನ ಬಿಡಾರದತ್ತ ಕರೆದು ಕೊಂಡು ಹೋದ.

೯. ಕಾನ್ವೆಂಟಿನಲ್ಲಿ ಜೀವನ

ಕೋಸೆಟ್ಟಿ ಕಾನ್ವೆಂಟಿಗೆ ಸೇರಿದಳು. ಅವಳು ಯಾರ ಹತ್ತಿರವೂ ಮಾತಾಡಲು ಅಂಜುತ್ತಿದ್ದಳು. ಕಾನ್ವೆಂಟ್ ಜೀವನಕ್ಕೆ ಅವಶ್ಯವಾಗಿದ್ದ ಮೌನ ಅವಳ ಸ್ವಭಾವದಲ್ಲೇ ಇತ್ತು. ದಿನಕ್ಕೆ ಒಂದು ಗಂಟೆಕಾಲ ಅವಳು ಜೀನ್‌ವಾಲ್‌ಜೀನನ ಜೊತೆಯಲ್ಲಿರಲು ಅನುಮತಿಯಿತ್ತು. ಅವಳ ಹಳೆ ದುಸ್ತನ್ನೆಲ್ಲ ಬಿಟ್ಟು ಕಾನ್ವೆಂಟಿನ ಸಮವಸ್ತ್ರವನ್ನು ಮಾತ್ರ ಧರಿಸತೊಡಗಿದಳು. ಹೀಗೆ ಅವಳಿಗೆ

ಅಲ್ಲಿಯ ಜೀವನ ಸುಖಕರವಾಗಿಯೇ ಇತ್ತು.

ತೆನಾರ್ಡಿಯರರ ಹೊಟೇಲಿನಿಂದ ಬರುವಾಗ ಕೋಸೆಟ್ಟಿ ಧರಿಸಿದ್ದ ಅವಳ ಲಂಗ ರವಕೆಗಳನ್ನು ಒಗೆದು, ಕರ್ಪೂರ ಪುಡಿ ಬೆರೆಸಿ, ಅತಿ ಅಮೂಲ್ಯ ವಸ್ತುಗಳಂತೆ ಜೀನ್‌ವಾಲ್‌ಜೀನ್ ತನ್ನ ಕೈ ಪೆಟ್ಟಿಗೆಯಲ್ಲಿ ಕಾದಿಟ್ಟುಕೊಂಡ. ಆ ಪೆಟ್ಟಿಗೆ ಯಾವಾಗಲೂ ಅವನ ಹಾಸಿಗೆಯ ತಲೆಬದಿಯಲ್ಲೇ ಇರುತ್ತಿತ್ತು.

ಕಾನ್ವೆಂಟ್ ಆವರಣದ ಒಳಗಿನ ಕೆಲಸವನ್ನೆಲ್ಲ ಜೀನ್‌ವಾಲ್‌ಜೀನ್ ಮಾಡುತ್ತಿದ್ದ. ಹೊರಗಿನಿಂದ ಸಾಮಾನು ತರುವ ಕೆಲಸ ಮಾತ್ರ ಫಾಶೆಲೆವೆಂಟನದು. ಕೆಲಸಗಳ ಈ ಕ್ರಮದಿಂದ ಫಾಶೆಲೆವೆಂಟನಿಗೆ ತುಂಬ ವಿಶ್ರಾಂತಿ ದೊರಕಿತು. ಜೀನ್‌ವಾಲ್‌ಜೀನನಿಗಾದರೂ ಅವನ ಚೇತನಗಳಿಗೆ ತಕ್ಕ ವೃತ್ತಿಯೂ ವ್ಯಾಯಾಮವೂ ಸಿಕ್ಕಿ ಅವನು ಬಲು ಸಂತೋಷದಿಂದ ಇದ್ದ.

ಕಾನ್ವೆಂಟಿನ ಚಿಕ್ಕತೋಟ, ಅಲ್ಲಿಂದ ಮೇಲೆ ನೋಡಿದರೆ ಕಾಣುವಷ್ಟು ಆಕಾಶ, ಕೋಸೆಟ್ಟಿಯೊಡನೆ ದಿನಕ್ಕೊಂದು ಗಂಟೆ ಕಾಲದ ಮಾತುಕಥೆ, ವೃದ್ಧ ಫಾಶೆಲೆವೆಂಟನ ಸಹವಾಸ ಇವಿಷ್ಟೇ ಜೀನ್‌ವಾಲ್‌ಜೀನನ ಪ್ರಪಂಚವಾಗಿಬಿಟ್ಟಿತು.

ಆಸ್ತಿಕ ಜೀನ್‌ವಾಲ್‌ಜೀನನ ಆನಂದಕ್ಕೆ ಅಲ್ಲಿ ಏನೂ ಕೊರತೆಯಿರಲಿಲ್ಲ. ಕಾನ್ವೆಂಟಿನ ಶಾಂತ ವಾತಾವರಣ, ಹೂದೋಟ, ಹೂಗಳ ಸೌರಭ, ಬಾಲಿಕೆಯರ ಆಟದ ವೇಳೆಯ ಹರ್ಷ ಪುಳಕಿತ ಕಲಕಲ ನಿನಾದ, ದೈವಿಕ ಮನೋಭಾವದ ಸನ್ಯಾಸಿನಿಯರುಗಳ ದಿನದಿನದ ಧರ್ಮಕರ್ಮಗಳಿಂದ ಉತ್ಪನ್ನವಾಗುವ ಸ್ವರ್ಗೀಯ ವಾತಾವರಣ—ಇವೆಲ್ಲವೂ ಜೀನ್‌ವಾಲ್‌ಜೀನನ ನೊಂದ ಹೃದಯಕ್ಕೆ ಮುದ ಎರೆಯುತ್ತಿದ್ದುವು.

ಇಷ್ಟೂ ಅಲ್ಲದೆ ಅವನು ತನ್ನ ಜೀವನದಲ್ಲಿ ಕಂಡ ದೈವಲೀಲೆಯನ್ನು ನೆನೆನೆನೆದು ಆನಂದ ಪಡುತ್ತಿದ್ದ. ಅವನು ಕ್ರೂರಿಯೆಂದು ಹಿಂದೊಮ್ಮೆ ಸಮಾಜವೇ ಹಳಿದು ತಿರಸ್ಕರಿಸಿದಾಗ ಧರ್ಮಪೀಠದ ಬಿಷಪರು ಅವನಿಗೆ ಆಶ್ರಯಕೊಟ್ಟು, ದೇಹಬುದ್ಧಿಗಳನ್ನೇ ರಕ್ಷಿಸಿದ್ದಂತೆ, ಈ ಸರ್ತಿ ಸಹ ಕ್ರೂರ, ಪಾಶವೀ, ಯಾಂತ್ರಿಕ ಕಾಯಿದೆ ಕಾನೂನುಗಳು ಅವನನ್ನು ಶಾಶ್ವತವಾಗಿ ಮಣ್ಣುಗೂಡಿಸಬೇಕೆಂದು ಪ್ರಯತ್ನಿಸುತ್ತಿದ್ದಾಗ, ಮತ್ತೊಂದು ಧರ್ಮಸಂಸ್ಥೆ ಅವನನ್ನು ರಕ್ಷಿಸಿ ಶಾಂತಿ ಸಮಾಧಾನ ಒದಗಿಸಿದ್ದ ಸಂಗತಿಗಳು ದೇವರ ಕುರಿತಾದ ಭಕ್ತಿಯುತವಾದ ಆಶ್ಚರ್ಯದಲ್ಲಿ ಮಗ್ನನನ್ನಾಗಿಸಿದುವು. ತಾನು ಧರ್ಮಪರಾಯಣನಾಗಿದ್ದಾಗಲೇ ಸಮಾಜದ ಮೌಢ್ಯ, ಅಂಧತೆ ಮೊದಲಾದವು ತನ್ನನ್ನು ನಾಶಗೊಳಿಸಲು ಪ್ರಯತ್ನಿಸಿದ್ದನ್ನು ಕಂಡಾಗ ಒಮ್ಮೆ ಅವನಿಗೆ ಧರ್ಮದಲ್ಲಿ ಅಪನಂಬಿಕೆ ಕಿಂಚಿತ್ ಹೊಳೆದಿತ್ತು. ಆದರೆ, ಅಂಥ ವೇಳೆಯಲ್ಲೇ ದೈವಸಾಕ್ಷಾತ್ಕಾರವಾದಂತೆ, ಈ ಕಾನ್ವೆಂಟಿನ ಆಶ್ರಯ ದೊರಕಿದ್ದನ್ನು ನೋಡಿ ಈಗ ಸಂಪೂರ್ಣ ತೃಪ್ತನಾಗಿ ಸಂತೋಷದಿಂದಿದ್ದ.

ಈ ರೀತಿ ಕೋಸೆಟ್ಟಿಯೂ ಜೀನ್‌ವಾಲ್‌ಜೀನನೂ ಅಲ್ಲಿ ಕೆಲವು ವರ್ಷ ಕಳೆದರು. ದಿನಗಳು ದಾಟಿದಂತೆ ಕೋಸೆಟ್ಟಿ ಬೆಳೆಯುತ್ತ ಬಂದು, ತಾರುಣ್ಯದಲ್ಲಿ ಕಾಲಿಡತೊಡಗಿದಳು.

ತೃತೀಯ ವಿಭಾಗ : ಮೇರಿಯಸ್

ಒಂದನೆಯ ಸಂಪುಟ

೧. ತಿರುಕುಳಿಗಳು

ಕಾಡಿಗೆ ಗುಬ್ಬಚ್ಚಿಗಳು ಇರುವ ಹಾಗೆ ಊರಿಗೆ ತಿರುಕಬಾಲಕರು. ಇವರು ಇದ್ದಾರೆ ಎಂದು ಗಣಿಸಿದರೆ ಮಾತ್ರ ಇವರನ್ನು ತಿಳಿಯಬಹುದು. ಇಲ್ಲವೆಂದರೂ ವಿಶೇಷ ತಪ್ಪಾಗಲಾರದು. ಏಕೆಂದರೆ, ಇವರು ಅಷ್ಟೊಂದು ಅಗಣನೀಯರು. ಪ್ಯಾರಿಸ್‌ನಗರದಲ್ಲಿ ಇಂಥವರು ಬಲು ಮಂದಿ. ಇವರ ಪ್ರಾಯ ಸುಮಾರು ಏಳರಿಂದ ಹದಿನೈದರ ವರೆಗೆ. ಇವರನ್ನು ಪೋಲಿಗಳು ಎನ್ನಬಹುದು; ಪರದೇಶಿಗಳು ಎನ್ನಬಹುದು. ಏನೇ ಆಗಲಿ ಇವರು ತಿರುಕುಳಿಗಳು ಮಾತ್ರ ನಿಜ. ಮೈಗೆ ಅಂಗಿ ಇಲ್ಲದವರು, ಮಲಗಲು ಮನೆ ಇಲ್ಲದವರು. ಅಂಗಿ ಇದ್ದಾಗ ಅಜ್ಜನಕಾಲದ ಇಜಾರವನ್ನೂ ಹಿಮ್ಮಡಿ ಇಲ್ಲದ ಬೂಟ್ಸನ್ನೂ ಧರಿಸುತ್ತಾರೆ. ಊಟ ಇಲ್ಲದಿದ್ದಾಗ ಗಾಳಿಯಿಂದ ಬದುಕುತ್ತಾರೆ, ಓಡುತ್ತಿರುತ್ತಾರೆ, ಮಾತಾಡುತ್ತಿರುತ್ತಾರೆ, ಹಾರುತ್ತಿರುತ್ತಾರೆ, ನಗುತ್ತಿರುತ್ತಾರೆ, ಕದೀತಾರೆ, ಜಗಳವಾಡುತ್ತಾರೆ. ಅವರು ಏನೂ ಮಾಡಿಬಿಡಬಹುದೆಂಬಂತೆ ತೋರುತ್ತಾರೆ, ಏನೂ ಮಾಡಲಾರದವರಷ್ಟು ದೀನರೆಂದೂ ಕಾಣುತ್ತಾರೆ. ಹೆಂಡದಂಗಡಿ ಸುತ್ತ ಇವರಿದ್ದಾರೆ. ಇವರಿಗೆ ಸೂಳೆಯರೆಲ್ಲರ ಪರಿಚಯವಿದೆ. ಪೋಲೀಸರದೂ ಇದೆ. ಇವರಿಗೆ ಗೊತ್ತಿಲ್ಲದ ಬೀದಿಯಿಲ್ಲ, ಮನೆಯಿಲ್ಲ, ರಸ್ತೆಯಿಲ್ಲ, ಸಾರ್ವಜನಿಕ ಅಥವಾ ಸರಕಾರದ ಡಂಗುರ ಸಾರುವಾಗ ಇವರದೇ ಪ್ರಚಾರ ಬಲವಾದುದು. ಹೊಸಬರಿಗೆ ಹಾದಿ ತೋರಿಸುತ್ತಾರೆ. ನಾಲ್ಕು ಜನ ನಿಂತು ಮಾತಾಡುವಲ್ಲಿ ಇವರಿದ್ದಾರೆ. ಬೈದರೆ ನಕ್ಕುಬಿಡುತ್ತಾರೆ ಹೊಡೆಯಲು ಹೋದರೆ ಕೈಗೆ ಸಿಕ್ಕರು. ಎಲ್ಲರನ್ನೂ ನಿರ್ದಾಕ್ಷಿಣ್ಯವಾಗಿ ತಮಾಷೆ ಮಾಡುತ್ತಾರೆ. ಶ್ರೀಮಂತರನ್ನು ಕಂಡರೆ ತಾತ್ಸಾರ. ಮಕ್ಕಳನ್ನು ನೋಡಿ ಸಂತೋಷಿಸುತ್ತಾರೆ. ತಂದೆ ಇದ್ದಾರೋಂತ ಕೇಳಿದರೆ ಗೊತ್ತಿಲ್ಲ ಎಂದನ್ನುತ್ತಾರೆ; ತಾಯಿ ಇದ್ದಾರೋಂತ ಕೇಳಿದರೂ ಅದೇ ಉತ್ತರ. ದಿನಕ್ಕೆ ಕೆಲವು ಸೌ ಸಂಪಾದಿಸುತ್ತಾರೆ. ನಾಟಕ ನೋಡುತ್ತಾರೆ. ನಾಟಕಶಾಲೆ ಅವರ ಸ್ವರ್ಗ. ರಸ್ತೆಯೇ ಮನೆ, ಪ್ಯಾರಿಸೇ ಪ್ರಪಂಚ.

ಏನೇ ಆದರೂ ಈ ತಿರುಕಬಾಲಕರಲ್ಲಿ ಒಂದು ಅಮೂಲ್ಯ ಮುತ್ತು ಇದೆ—ಆ ಮುತ್ತೇ ಅವರ ನಿಷ್ಕಳಂಕ ಮನಸ್ಸು, ನಿಷ್ಕಪಟ ಸ್ವಭಾವ. ಮುತ್ತಿಗೆ ಕೆಸರು ಅಂಟದಷ್ಟೆ. ಹಾಗೆಯೇ ಇವರು ಮಾಲಿನ್ಯವಂತರೆಂದು ತೋರಿದರೂ ಮಲಿನರಲ್ಲ.

೨. ಬಾಲಕ ಗಾವ್ರೋಚ್

ಹಿಂದಿನ ಅಧ್ಯಾಯಗಳಲ್ಲಿ ಕೋಸೆಟ್ಟಿ ಕುರಿತಾಗಿ ಹೇಳಿದೆವಷ್ಟೆ. ಅವಳು ಕಾನ್ವೆಂಟನ್ನು ಸೇರಿದ ಎಂಟೊಂಬತ್ತು ವರ್ಷಗಳಲ್ಲಿ ಪ್ಯಾರಿಸ್ ನಗರದ ಟೆಂಪಲ್ ಬೂಲ್ವಾದಲ್ಲಿ ಸಾಧಾರಣ ಹನ್ನೊಂದು ಹನ್ನೆರಡು ವರ್ಷ ಪ್ರಾಯದ ಬಾಲಕನೊಬ್ಬ ತಿರುಕುಳಿಯಾಗಿ ತಿರುಗುತ್ತಿದ್ದ. ಹೆಸರು ಗಾವ್ರೋಚ್.

ಈತ ಹೆಂಗುಸರ ರವಕೆ ತೊಟ್ಟು, ದೊಗಲೆ ಇಜಾರು ಧರಿಸುತ್ತಿದ್ದ. ರವಕೆ ಅವನ ತಾಯಿಯದಲ್ಲ, ಇಜಾರು ತಂದೆಯದಲ್ಲ—ಬತ್ತಲೆ ಇದ್ದ ಬಾಲಕನನ್ನು ನೋಡಲಾರದೆ ಯಾರೋ ದಾನ

ವಾಗಿ ಕೊಟ್ಟಿದ್ದ ದುಸ್ತು ಅದು. ಆದರೆ ಅವನಿಗೆ ತಾಯಿಯೂ ಇದ್ದಳು, ತಂದೆಯೂ ಇದ್ದ. ಅಪ ರೂಪಕ್ಕೆ ಈ ಬಾಲಕ ತನ್ನ ತಾಯಿತಂದೆಯರಲ್ಲಿಗೆ ಸಾಂಪ್ರದಾಯಿಕವಾಗಿ ಹೋಗಿಬರುತ್ತಿದ್ದ. ಹೆತ್ತವರಿದ್ದರೂ ಅವನೊಬ್ಬ ಅನಾಥ. ರಸ್ತೆಯಲ್ಲಿಯ ಸುಖ ಅವನಿಗೆ ಮನೆಯಲ್ಲಿರಲಿಲ್ಲ. ತನ್ನ ಚಿಕ್ಕ ಜೀವಕ್ಕೆ ತಕ್ಕಷ್ಟು ಸೌವನ್ನು ಸಂಪಾದಿಸುತ್ತಿದ್ದ. ಆದರೆ ಅದರಲ್ಲಿ ಊಟಕ್ಕಿಂತ ಹೆಚ್ಚು ನಾಟಕಕ್ಕೆ ಖರ್ಚಾಗುತ್ತಿತ್ತು. ಹೇಗಿದ್ದರೂ ಅವನು ಸುಖವಾಗಿ, ಸಂತೋಷವಾಗಿ ದಿನ ಕಳೆಯುತ್ತಿದ್ದ.

ಗಾವ್ರೋಚನ ಹೆತ್ತವರು ಈ ಮೊದಲು ಪ್ರಸ್ತಾವಿಸಿರುವ ಸಂಖ್ಯೆ ೫೦-೫೨ರ ಗಾರ್ಬೊ ಕಟ್ಟಡದ ಕೋಣೆಯೊಂದರಲ್ಲಿ ವಾಸಿಸುತ್ತಿದ್ದರು. ಅದು ರಸ್ತೆಯಿಂದ ದೂರ ತುದಿಯ ಕೋಣೆ ಯಾಗಿತ್ತು.

ಈ ದಂಪತಿಗಳು ಇಟಲಿ, ಸ್ಪೇನ್, ಅಥವಾ ಪೋಲೆಂಡ್ ದೇಶದವರೆಂದು ಅಲ್ಲಿಯ ನೆರೆಕರೆಯವರು ಗಣಿಸುತ್ತಿದ್ದರು. ಗಂಡನ ಹೆಸರು ಮಾನ್ಸ್ಯರ್ ಜೋಂಡ್ರೆಟ್ಟೆ. ಜೋಂಡ್ರೆಟ್ಟೆ ದಂಪತಿಯರ ಪಕ್ಕದ ಕೋಣೆಯಲ್ಲಿ ಮಾನ್ಸ್ಯರ್ ಮೇರಿಯಸ್ ಎಂಬ ಯುವಕನೊಬ್ಬ ನೆಲಸಿದ್ದ.

ಎರಡನೆಯ ಸಂಪುಟ

೧. ತೊಂಬತ್ತರಲ್ಲೂ ಮೂವತ್ತೆರಡು !

೧೮೩೧ರಲ್ಲಿ ಪ್ಯಾರಿಸ್ ನಗರದ ಟೆಂಪಲ್ ಬೂಲ್ವಾದ ಮರೆಯಸ್ ವಿಭಾಗದ ಸಂಖ್ಯೆ ៦ನೆಯ ಮನೆಯಲ್ಲಿ ಒಬ್ಬ ಮುದುಕನಿದ್ದ. ಅವನ ವೈಶಿಷ್ಟ್ಯಗಳಲ್ಲಿ ಒಂದನೆಯದು ಅವನ ಪ್ರಾಯ, ಎರಡನೆಯದು ಅವನಂತೆ ಇನ್ನು ಯಾರೂ ಇಲ್ಲದಿರುವುದು. ಪ್ರಾಯ ಈಗ ತೊಂಬತ್ತು ವರ್ಷ. ಓದಲು ಹೊರತು ಮತ್ತೆ ಯಾವ ಕೆಲಸಕ್ಕೂ ಅವನಿಗೆ ಕನ್ನಡಕ ಬೇಕಾಗಿರಲಿಲ್ಲ. ಅವನು ಚೆನ್ನಾಗಿ ಊಟಮಾಡುತ್ತಿದ್ದ, ವೈನ್ ಕುಡಿಯುತ್ತಿದ್ದ, ಮಲಗಿ ಗೊರಕೆ ಹೊಡೆಯುತ್ತಿದ್ದ. ಈಗ್ಗೆ ಹತ್ತು ವರ್ಷಗಳವರೆಗೂ ಅವನು ವ್ಯಭಿಚಾರ ಮಾಡಿಕೊಂಡಿದ್ದ. ಈಚೀಚೆಗೆ ತಾನು ಸ್ತ್ರೀ ಸಂಪರ್ಕ ಬಿಟ್ಟದ್ದು ಬಡತನದಿಂದ ಮಾತ್ರವಾಗಿತ್ತೇ ಹೊರತು ಪ್ರಾಯ ಹೋದದ್ದರಿಂದ ಅಲ್ಲವೆಂದು ಸಹ ಹೇಳಿಕೊಂಡು, ಹೆಮ್ಮೆಯ ಅರೆ ನಗುತ್ತಿದ್ದ. ಈ ಪ್ರಾಯದಲ್ಲೂ ಅವನಿಗೆ ಮೂವತ್ತೆರಡು ಹಲ್ಲು ಗಳು ಪೂರ್ತಿ ಸರಿಯಾಗಿದ್ದುವು.

ಇಬ್ಬರು ಹೆಂಡಂದಿರಿದ್ದರೂ ಅವರು ಮಡಿದು ಕೆಲವು ವರ್ಷಗಳು ಸಂದಿದ್ದುವು. ಹೆಣ್ಣು ಮಕ್ಕಳಿಬ್ಬರು. ಆ ಪೈಕಿ ಕಿರಿಯವಳು ಮೃತಪಟ್ಟಿದ್ದು, ಐವತ್ತು ವರ್ಷಪ್ರಾಯದ ಹಿರೇ ಮಗಳು ಮಾತ್ರ ಅವನ ಜೊತೆಯಲ್ಲಿ ಇದ್ದಳು. ಇವಳು ಆಜನ್ಮ ಕನ್ನಿಕೆ.

ಈ ಮುದುಕನ ಜೀವನ ಕ್ರಮವೆಲ್ಲ ದೊಡ್ಡಸ್ತಿಕೆಯದೇ ಆಗಿತ್ತು. ಇವನಿಗೆ ದಿನಂಪ್ರತಿ ಕ್ಷೌರ ವಾಗಬೇಕಿತ್ತು. ಆಳುಗಳನ್ನು ಗದರಿಸಲು ಮರೆಯುತ್ತಿರಲಿಲ್ಲ. ತನ್ನ ಮಗಳನ್ನು ಕೆಲವೊಮ್ಮೆ ಈ ಪ್ರಾಯದಲ್ಲೂ ಬೆತ್ತದಿಂದಲೇ ಶಿಕ್ಷಿಸುತ್ತಿದ್ದ. ಮುದುಕನ ಹೆಸರು ಮಾನ್ಸ್ಯರ್ ಗಿಲೆನಾರ್ಮಂಡ್.

೨. ಶತಾಯುವಾಗುವ ಹಂಬಲ

ಗಿಲೆನಾರ್ಮಂಡ್ ಸದಾ ಪರಮ ರಾಜಭಕ್ತ. ಬರ್ಬೂನ್ ಮನೆತನ, ಶ್ರೀಮಂತರು, ಲೂಯಿ ಚಕ್ರವರ್ತಿಯ ಅನುಯಾಯಿಗಳು, ಎಲ್ಲರೂ ಅವನ ಆದರ್ಶ ಪುರುಷರು. ನೆಪೋಲಿಯನ್ನನ ಪಕ್ಷ,

ಪ್ರಜಾಸತ್ತೆ, ಸಾಮಾನ್ಯಜನರ ಪಕ್ಷ, ಕ್ರಾಂತಿಕಾರರ ಪಕ್ಷ ಇವನ್ನೆಲ್ಲ ಅವನು ವಿರೋಧಿಸಿ ದ್ವೇಷಿಸುತ್ತಿದ್ದ. ಹೀಗೆ ತಾನು ರಾಜ ಮತ್ತು ಶ್ರೀಮಂತ ಪಕ್ಷದವನಾಗಿದ್ದುದರಿಂದ ಅದಕ್ಕೆ ಅನುಗುಣವಾಗಿ ತನ್ನ ಜೀವನ ನಡೆಸುತ್ತಿದ್ದ. ಪ್ರತಿಷ್ಠಾವಂತ, ಶ್ರೀಮಂತ, ಕುಲೀನ ಎಂದೆಂದುಕೊಂಡು ಮೆರೆಯುವುದು, ಸಾಮಾನ್ಯರನ್ನು ತುಚ್ಛೀಕರಿಸುವುದು, ಪ್ರಜಾಪಕ್ಷದವರನ್ನು ಲೇವಡಿಸುವುದು, ತನ್ನ ಪೌರುಷ ಪ್ರಚಾರಕ್ಕಾಗಿ ಸೂಳೆಯರನ್ನು ಇಟ್ಟುಕೊಂಡು, ಕುಡಿದು ಮೆರೆದು ವ್ಯಭಿಚಾರವೇ ದೊಡ್ಡಸ್ತಿಕೆಯ ಕುರುಹು ಎಂದು ಪ್ರತಿಪಾದಿಸುವುದು—ಇವೆಲ್ಲ ಅವನ ಜೀವನಕ್ರಮಗಳಾಗಿದ್ದುವು. ಅವನು ತನ್ನ ಯೌವನಕಾಲವನ್ನು ಈ ರೀತಿ ಕಳೆದು ಈಗಲೂ ದೃಢಕಾಯನಾಗಿದ್ದ. ತಾನು ಶತಾಯುವಾಗಿ ಬಾಳಬೇಕೆಂಬ ಹಂಬಲ ಮಾತ್ರ ಅವನಿಗಿದ್ದುದಲ್ಲದೆ, ಶತಾಯುವಾಗಿ ಬಾಳುವೆನೆಂಬ ನಂಬಿಕೆಯೂ ಇತ್ತು.

೩. ಹುಳಿ ಮುದಿಯಲ್ಲ

ಗಿಲೆನಾರ್ಮಂಡನ ಪ್ರಕಾರ ಮದುವೆಯಾದವರೂ ಪರಹೆಣ್ಣುಗಳನ್ನಿಟ್ಟುಕೊಳ್ಳಬೇಕಿತ್ತು. ಮದುವೆಯಾದ 'ಗೃಹಿಣಿ'ಯನ್ನೂ 'ಇಟ್ಟುಕೊಂಡ ಹೆಣ್ಣ'ನ್ನೂ ಆಳಿಕೊಂಡು ಬರುವುದೇ ಘನಸ್ತಿಕೆ—ಪುರುಷತ್ವ—ಎಂದು ಹೇಳುತ್ತಿದ್ದ. ಅವನೆನ್ನುತ್ತಿದ್ದಂತೆ 'ಗೃಹಿಣಿ'ಗೆ ಗೃಹಕೃತ್ಯದ ಹಕ್ಕು ಮಾತ್ರ. ಅವಳು ಆಸ್ತಿ, ಒಕ್ಕಲು, ಗೇಣಿ, ಕೋರ್ಟುವ್ಯವಹಾರ, ಶ್ರೀಮಂತರ ಮತ್ತು ಅಧಿಕಾರ ವರ್ಗದವರ ಸಂಪರ್ಕ ಬೆಳೆಸಿ ಕುಟುಂಬದ ಗೌರವ ಹೆಚ್ಚಿಸುವುದು—ಇಂಥವನ್ನೆಲ್ಲ ಮಾಡಬೇಕು. ಇವಳು ಗಂಡನ 'ಇಟ್ಟುಕೊಂಡ ಹೆಣ್ಣೆ'ನ ಮೇಲೆ ಅಸೂಯೆ ಪಡದಂತೆ ಅವಳ ಮನಸ್ಸನ್ನೂ ಶಕ್ತಿಯನ್ನೂ ಹೊಗಳಿ, ಒಲಿಸಿಕೊಳ್ಳುವುದರಲ್ಲೇ ಗಂಡಸುತನದ ಗೌರವವೆಂದು ಅವನು ತನ್ನ ಸ್ನೇಹಿತರಿಗೆಲ್ಲ ಬೋಧಿಸುತ್ತಿದ್ದ. 'ಹೆಣ್ಣು' ಎಂದೇ ಇಟ್ಟುಕೊಳ್ಳಲ್ಪಟ್ಟವಳು ಅಂದ, ಚಂದ ವಿಲಾಸಗಳಿಗಾಗಿಯೇ ಮೀಸಲಾಗಿರಬೇಕೆಂದು ಅನ್ನುತ್ತಿದ್ದ.

ಗಿಲೆನಾರ್ಮಂಡ್ ಮುದುಕನಾದ ಮೇಲೂ ವ್ಯಭಿಚಾರ ನಡೆಸಿ ಜನಿಸಿದ ಮಕ್ಕಳ ಬಗ್ಗೆ ಬಹಿರಂಗವಾಗಿ, ಮಕ್ಕಳನ್ನು ನೋಡಿಕೊಂಡು, ಮಾಸಾಶನ ಹಣ ಕೊಟ್ಟು, ಬರುತ್ತಿದ್ದ. ಹಾಗೆ ಬಹಿರಂಗವಾಗಿ ತನ್ನ ಪಿತೃತ್ವವನ್ನೊಪ್ಪಿಕೊಂಡು ಹಣಕೊಡುವ ಸಾಹಸದ ಸಮರ್ಥನೆಗೆ ಕೆಲವೊಮ್ಮೆ ಅವನು ಬೈಬಲ್ಲಿನ ಮಹಾಪುರುಷರನ್ನೂ ಚರಿತ್ರೆಯಲ್ಲಿಯ ಕೆಲವು ರಾಜಾಧಿರಾಜರುಗಳನ್ನೂ ಉದಾಹರಿಸುತ್ತಿದ್ದ.

ಗಿಲೆನಾರ್ಮಂಡ್ ಬಡವನಾಗಲು ಅವನು ಮದುವೆಯಾಗಿದ್ದ ಹೆಂಡತಿಯೇ ಕಾರಣ. ಗಂಡ ಹಾಕಿಕೊಟ್ಟಿದ್ದ ಗುರಿಯಂತೆ ಆಸ್ತಿಪಾಸ್ತಿ, ಗೃಹಕೃತ್ಯಗಳನ್ನೆಲ್ಲ ಅವಳೊಬ್ಬಳೇ ನಡೆಸಿ, ಗಂಡನನ್ನು ಪರಹೆಣ್ಣುಗಳ ವಿಲಾಸಮಯ ಜೀವನಕ್ಕೆ ಬಿಟ್ಟುಕೊಟ್ಟು, ಮುದುಕನನ್ನು ಈ ಸ್ಥಿತಿಗೆ ತಂದಿದ್ದಳು.

ಗಿಲೆನಾರ್ಮಂಡ್ ಬಡವನಾಗಿದ್ದರೂ ನಿಕೊಲೆಟ್ ಎಂಬ ಹೆಣ್ಣಾಳನ್ನೂ ಬಾಸ್ಕ್ ಎಂಬ ಗಂಡಾಳನ್ನೂ ಮನೆಕೆಲಸಕ್ಕೆ ಇಟ್ಟುಕೊಂಡಿದ್ದ.

೪. ಜನರಿಬ್ಬರು, ಜೊತೆ ಒಂದಲ್ಲ

ಗಿಲೆನಾರ್ಮಂಡನ ಇಬ್ಬರು ಮಕ್ಕಳಲ್ಲಿ ಕಿರಿಯಳು ಸುಂದರಿ. ಅವಳಿಗೆ ನೃತ್ಯ, ಗೀತ, ಓದುಗಾರಿಕೆ, ಸುಗಂಧ, ಪುಷ್ಪ, ಸಂಗೀತಗಳಲ್ಲಿ ಪ್ರೀತಿ. ಅವಳು ಪ್ರತಿಷ್ಠಾವಂತ, ಸುಂದರ, ಮತ್ತು

ವೀರ ಯೋಧನನ್ನೇ ಮದುವೆಯಾಗಬೇಕೆಂದು ಹಂಬಲಿಸಿ, ಈ ಹಂಬಲದಿಂದಲೇ ದೈವಿಕ ರೆಕ್ಕೆಗಳನ್ನು ಪಡೆದವಳಂತೆ ತನ್ನ ಮನೋಮಯ ಆಕಾಶದಲ್ಲೇ ಹಾರಾಡುತ್ತಿದ್ದು, ಕೊನೆಗೆ ಅಂಥ ಆದರ್ಶ ಪುರುಷನನ್ನೇ ಕಂಡು, ಅವನನ್ನು ಮದುವೆಯಾಗಿ, ಗಂಡುಮಗು ಹೆತ್ತು ಸತ್ತಳು. ಹಿರಿಯ ಳಿಗೂ ಮದುವೆಯಾಗಲು ಇಷ್ಟವಿತ್ತು. ಅವಳ ಆದರ್ಶಪತಿ ಇನ್ನೊಂದು ವಿಧದವನಾಗಿದ್ದ. ಅಂಥ ಆದರ್ಶಪತಿಯಲ್ಲಿ ಬುದ್ಧಿಗಿಂತಲೂ ಶ್ರೀಮಂತಿಕೆಗೆ ಹೆಚ್ಚು ಪ್ರಾಧಾನ್ಯವಿತ್ತು. ಅವನು ಸ್ಥೂಲ ಕಾಯನೂ ಸ್ವಲ್ಪ ಆಲಸ್ಯಸ್ವಭಾವದವನೂ ಆಗಿದ್ದು, ತೋರಿಕೆಗಾದರೂ ಬಲು ಗಂಭೀರಮುಖ ಮುದ್ರೆಯುಳ್ಳವನಾಗಿರಬೇಕಿತ್ತು. ಅವಳು ಇಂಥ ಆದರ್ಶಪತಿಗಾಗಿ ಹಂಬಲಿಸಿ, ಬಾತಿನ ರೆಕ್ಕೆ ಗಳಿಂದ ತನ್ನ ಮನೋಮಯ ಆಕಾಶದಲ್ಲಿ ಹಾರಾಡಿ, ಪತಿ ಸಿಗದೆ ವೃದ್ಧ ಕನ್ಯೆಯಾಗಿ ಮನೆಯಲ್ಲೇ ಉಳಿದಳು.

ಅವಳು ಇಂದು ವೃದ್ಧಪಿತನ ಆಧಾರಸ್ತಂಭವಾಗಿದ್ದಾಳೆ. ಅವಳ ಮುಖ ಬತ್ತಿಹೋಗಿದೆ. ಮಿದುಳು ಬತ್ತತೊಡಗಿದೆ. ಅವಳು ಕನ್ಯಾಪಾವಿತ್ರ್ಯ ಪಡೆದುದರ ಜೊತೆಗೆ (ಪರಲೋಕದ ಗಡಿಗೆ ಸಮೀಪಸ್ಥರಾಗುವವರು ಕೆಲವೊಮ್ಮೆ ಆಗಿಹೋಗುವ) ಪಾರಲೌಕಿಕ ಜ್ಞಾನಿಯೂ ದೈವಭಕ್ತಳೂ ಆಗಿದ್ದಾಳೆ. ಈ ವೃದ್ಧರೀರ್ವರು ತಮ್ಮ ಅಶಕ್ತಿಯನ್ನು ಒಟ್ಟುಮಾಡಿದುದರಿಂದಲೇ ಹೊಸಶಕ್ತಿ ಪಡೆದು ಒಬ್ಬ ಚಿಕ್ಕ ಬಾಲಕನನ್ನು ಸಾಕುತ್ತಿದ್ದಾರೆ. ಗಿಲೆನಾರ್ಮಂಡ್ ಈ ಬಾಲಕನನ್ನು 'ಪೋಲಿ,' 'ಪಿಶಾಚಿ' ಎಂದು ಹೊರತಾಗಿ ಬೇರೆ ಯಾವ ಹೆಸರಿನಿಂದಲೂ ಸಂಬೋಧಿಸುತ್ತಿರಲಿಲ್ಲ. ಈ ಬಾಲಕನೇ ಗಿಲೆನಾರ್ಮಂಡನ ಕಿರಿಮಗಳ ಮಗ ಮೇರಿಯಸ್.

ಮೂರನೆಯ ಸಂಪುಟ

೧. ಪ್ರಾಚೀನ ದಿವಾನ್‌ಖಾನೆ

ಗಿಲೆನಾರ್ಮಂಡನಿಗೆ ಶ್ರೀಮಂತರ ಮನೆಗಳಿಗೆ ಸದಾ ಆಮಂತ್ರಣವಿರುತ್ತಿತ್ತು. ಅವನು ಕಲಿ ತಿದ್ದ ವಿದ್ಯೆ, ಮತ್ತು ಅವನು ಕಲಿತಿರುವುದಾಗಿ ಜನರು ತಾವಾಗಿಯೇ ಕಲ್ಪಿಸಿ ಪ್ರಚಾರಮಾಡುತ್ತಿದ್ದ ವಿದ್ಯೆ, ಈ ವಿಧದ ವಿದ್ಯಾಸಂಪನ್ನತೆ, ಪ್ರಾಯ, ಅವನು ಹೇಳಿದ್ದನ್ನೆಲ್ಲ ಸ್ವಾನುಭವದಿಂದಲೇ ಹೇಳಿದ್ದಿರಬೇಕೆಂಬ ನಂಬಿಕೆ—ಇವೆಲ್ಲವೂ ಆತನನ್ನು ಶ್ರೀಮಂತರ ಮನೆಗಳಲ್ಲಿ ಅಧಿಕಾರಯುತ, ಗೌರವಾನ್ವಿತ ಅತಿಥಿಯಾಗಿ ಮಾಡಿದ್ದುವು.

ಅವನು ಶ್ರೀಮಂತರ ಸಭೆಗಳಲ್ಲಿ ಪ್ರಜಾಪಕ್ಷದವರನ್ನೂ ನೆಪೋಲಿಯನ್ ಚಕ್ರವರ್ತಿಯನ್ನೂ ಸದಾ ಹಳಿದು ಹೀಯಾಳಿಸಿ ಮಾತಾಡುತ್ತಿದ್ದ. ಇದೇ ಸಮಯದಲ್ಲಿ ರಾಜಪ್ರಮುಖರನ್ನೂ ರಾಜ ಸತ್ತೆಯನ್ನೂ ಬ್ಯಾರನ್, ಲಾರ್ಡ್ ಮತ್ತು ಇತರ ಶ್ರೀಮಂತ ಮನೆತನಗಳನ್ನೂ ಪ್ರಶಂಸಿಸುತ್ತಿದ್ದ. ಈ ಎಲ್ಲ ಸಭೆಗಳಿಗೂ ಗಿಲೆನಾರ್ಮಂಡನ ಮಗಳು ತನ್ನ ತಂಗಿಮಗ ಮೇರಿಯಸನನ್ನು ಕರೆದು ಕೊಂಡು ಹೋಗುತ್ತಿದ್ದಳು. ದಿವಾನ್‌ಖಾನೆಯ ಸಭಿಕರು ಕೆಲವರು ಚಿಕ್ಕ ಮೇರಿಯಸನನ್ನು ಕನಿಕರದಿಂದ ಕಾಣುತ್ತ 'ಚುರುಕು ಹುಡುಗ—ಲಕ್ಷಣವಂತ' ಎಂದು ಅನ್ನುತ್ತಿದ್ದರು. ಅವನ ಅಜ್ಜ ಮಾತ್ರ ಮೇರಿಯಸನನ್ನು 'ಲೋಯರ್ ಪ್ರಾಂತ್ಯದ ದರೋಡೆಕಾರನ ಮಗ—ನಮ್ಮ ಕುಟುಂಬಕ್ಕೆ ಕಳಂಕ ತಂದವನ ಮಗ' ಎಂದು ಹೇಳುತ್ತಿದ್ದ.

೨. ಜನರಲ್ಲಿ ಕ್ರಾಂತಿಭಯ

ವಾಟರ್ಲೂ ಯುದ್ಧ ನಡೆದು ಸಾಧಾರಣ ಎರಡು ವರ್ಷಗಳ ಮೇಲೆ ಯಾರಾದರೂ ವರ್ನನ್ ಪಟ್ಟಣಕ್ಕೆ ಹೋಗಿ ಸೀಯನ್ ನದಿಯ ಮೇಲಿನ ಕಲ್ಲುಸೇತುವೆಯ ಮೇಲೆ ನಿಂತು ಎಡಬದಿಯ ದಡ ನೋಡಿದರೆ ಅನೇಕ ಹೂದೋಟಗಳನ್ನು ಕಾಣಬಹುದಿತ್ತು. ಇವೆಲ್ಲ ವಿವಿಕ್ತ ಆವರಣಗೋಡೆಗಳಿಂದ, ಬೇರೆಬೇರೆಯಾಗಿ ತೋರುತ್ತಿದ್ದುವು. ಹೂದೋಟ ನದಿಯ ಅಂಚಿನಿಂದ ಪ್ರಾರಂಭವಾಗಿ, ದಂಡೆಯ ಮೇಲೆ ಉದ್ದಕ್ಕೆ ಹೋಗಿ, ಅಲ್ಲಿ ಒಂದು ಮನೆಯಲ್ಲಿ ಮುಗಿಯುತ್ತಿದ್ದುವು. ಸೇತುವೆಯಲ್ಲಿ ನಿಂತು ಈ ತೋಟಗಳನ್ನು ನೋಡಿದರೆ, ಅವೆಲ್ಲ ನದಿಯ ದಂಡೆಯಲ್ಲಿ ಹಾಸಿದ್ದ ಹೂ ಹಚ್ಚಡಗಳಂತೆ ಬಗೆ ಬಗೆಯ ಹೂಗಳು ಹಸುರೆಲೆಬಳ್ಳಿ ಮೊದಲಾದವುಗಳಿಂದ ಶೋಭಿಸುತ್ತಿದ್ದುವು.

ತೋಟಗಳ ಪೈಕಿ ಹೊಳೆಯ ಕೆಳಬದಿ, ಸೇತುವೆಯಿಂದಲೇ ಪ್ರಾರಂಭವಾದ ತೋಟದಲ್ಲಿ ಐವತ್ತು ವರ್ಷ ದಾಟಿರಬಹುದಾದ ತಲೆ ನರೆತಿದ್ದ, ಮುಖದಲ್ಲಿ ಸುಕ್ಕು ಬಿದ್ದು ನಿಜವಾಗಿ ಆಗಿದ್ದ ಪ್ರಾಯಕ್ಕಿಂತ ಹೆಚ್ಚು ಪ್ರಾಯವಾದವನಂತೆ ತೋರುತ್ತಿದ್ದ, ತೋಟಗಾರನೊಬ್ಬ ಹಗಲಿನ ಹೆಚ್ಚು ಸಮಯವನ್ನೆಲ್ಲ ಅಲ್ಲಿಯ ಕೆಲಸದಲ್ಲೇ ಕಳೆಯುತ್ತಿದ್ದುದನ್ನು ಕಾಣಬಹುದಿತ್ತು. ಅವನೊಬ್ಬ ನಿವೃತ್ತ ಸೈನಿಕನಾಗಿರಬೇಕೆಂದು ಅವನ ದುಸ್ತಿನಿಂದಲೂ ಮೈಕೈ ಗಾಯಗಳಿಂದಲೂ ಮುಖದ ಮೇಲೆ ಅಡ್ಡವಾಗಿ ಬಿದ್ದಿದ್ದ ಗಾಯದಿಂದಲೂ ತಿಳಿಯಬಹುದಿತ್ತು.

ವರ್ನನ್ ಪಟ್ಟಣ ಹೂಗಳ ವ್ಯಾಪಾರಕ್ಕೆ ಪ್ರಖ್ಯಾತವಾಗಿತ್ತು. ಈ ತೋಟಗಾರ ತನ್ನ ತೋಟದಲ್ಲಿ ಬಲು ವಿಧದ ಹೂಗಳನ್ನು ಸಮೃದ್ಧವಾಗಿ ಬೆಳೆಸಿ, ಆ ಪಟ್ಟಣಿಗರನ್ನು ಹೂ ವ್ಯಾಪಾರಕ್ಕಾಗಿ ಮಾತ್ರವಲ್ಲದೆ, ಆ ತೋಟವನ್ನು ನೋಡಲೋಸ್ಕರವೂ ಅಲ್ಲಿಗೆ ಆಕರ್ಷಿಸುತ್ತಿದ್ದ. ಆದರೆ ಆ ತೋಟಗಾರ ಬಂದವರಲ್ಲಿ ಅಗತ್ಯವಿದ್ದಷ್ಟು ಮಾತ್ರ ಮಾತಾಡುತ್ತಿದ್ದನೇ ಹೊರತು ಯಾರ ಪರಿಚಯವನ್ನೂ ಬೆಳೆಸಿಕೊಳ್ಳುತ್ತಿರಲಿಲ್ಲ. ಅವನು ಬಹಳ ಕರುಣಾಳುವಾಗಿದ್ದ. ಕೇವಲ ಒಬ್ಬ ಚಿಕ್ಕ ಬಾಲಕನೇ ಆಗಲಿ, ಏನನ್ನಾದರೂ ಕೊಡಬೇಕೆಂದು ಅವನನ್ನು ಯಾಚಿಸಿದರೂ ಅವನು ಹಿಂದೆ ಮುಂದೆ ನೋಡದೆ ತನ್ನಲ್ಲಿದ್ದುದನ್ನು ಕೊಟ್ಟುಬಿಡುತ್ತಿದ್ದ. ಅವನು ಸರಾಯಿ ಕುಡಿಯುವ ಬದಲು ಹಾಲನ್ನು ಕುಡಿಯುತ್ತ, ಯುದ್ಧರಂಗದ ಬದಲು ಹೂದೋಟವನ್ನು ಆಶ್ರಯಿಸಿ, ಹುಲಿಯಾಗಿ ಬದುಕುವ ಬದಲು ಹಸುವಾಗಿ ಬಾಳುತ್ತಿದ್ದ.

ಅವನಿಗಿದ್ದುದು ಒಬ್ಬನೇ ಒಬ್ಬ ಸ್ನೇಹಿತ—ವರ್ನನ್ ಪಟ್ಟಣದ ಇಗರ್ಜಿ ಅಧಿಕಾರಿ ಫಾದರ್ ಮೇಬಫ್.

ಈ ತೋಟಗಾರ (ಮತ್ತು ಮಾಜಿ ಸೈನ್ಯಾಧಿಕಾರಿ) ಮುದುಕ ತನ್ನ ಹದಿನಾರನೆಯ ವರ್ಷದಿಂದ ಐವತ್ತರ ತನಕ ಹತ್ತಾರು ಯುದ್ಧಗಳಲ್ಲಿ ಭಾಗಿಯಾಗಿದ್ದ. ವಾಟರ್ಲೂ ಯುದ್ಧದಲ್ಲಿ ನೆಪೋಲಿಯನ್ ಚಕ್ರವರ್ತಿ ಇವನ ಸಾಹಸ, ಪರಾಕ್ರಮಗಳಿಗೆ ಮೆಚ್ಚಿ 'ಬ್ಯಾರನ್' ಬಿರುದು ಕೊಟ್ಟಿದ್ದ. ಒಹೇನ್ ಕಣಿವೆಯಲ್ಲಿ ಕುದುರೆ ಮತ್ತು ಮನುಷ್ಯರ ಮಧ್ಯೆ ಬಿದ್ದು, ತೆನಾರ್ಡಿಯರನಿಂದ ಶೋಧಿಸಲ್ಪಟ್ಟು, ನಮಗೆ ಪರಿಚಿತನಾಗಿರುವ ಪೋಂಟ್‌ಮರ್ಸಿಯೇ ಈತ.

ವಾಟರ್ಲೂ ಯುದ್ಧದ ಅನಂತರ—ನೆಪೋಲಿಯನ್ ಸೆರೆಯಾಳಾಗಿ ಲೂಯಿ ದೊರೆ ಸಿಂಹಾಸನಾರೂಢನಾದ ಮೇಲೆ—ಬ್ಯಾರನ್ ಪೋಂಟ್‌ಮರ್ಸಿ ಪ್ರಜಾಸತ್ತೆಯ ಕ್ರಾಂತಿಕಾರೀ ನೆಪೋಲಿಯನ್ ಪಕ್ಷದವನೆಂದು ಸರಕಾರ ಇವನ ಬಿರುದನ್ನು ಅಲಕ್ಷಿಸಿ, ಇವನಿಗೆ ಮೊದಲಿನ

ಸಂಬಳದ ಅರ್ಧದಷ್ಟನ್ನು ಮಾತ್ರ ಕೊಡುತ್ತಿತ್ತು. ಈ ರೀತಿ ಸೈನ್ಯ, ಸರಕಾರ, ಜನರಿಂದ ಇವನು ದೂರವಾಗಿ, ಒಂಟಿಯಾಗಿ ಇಲ್ಲಿ ಬದುಕು ಸವೆಯುತ್ತಿದ್ದ.

ಈ ವೀರ ಗಿಲೆನಾರ್ಮಂಡನ ಕಿರಿ ಮಗಳನ್ನು ಯುದ್ಧಮಧ್ಯದ ವಿರಾಮಕಾಲದಲ್ಲಿ ಮದುವೆಯಾಗಿದ್ದ. ಪತಿಪತ್ನಿಯರ ಜೀವನ ಬಡತನದ್ದಾಗಿದ್ದರೂ ಪ್ರೇಮಭರಿತವಾದದ್ದಾಗಿತ್ತು. ಇವನ ಪತ್ನಿ ಒಬ್ಬ ಬಾಲಕನನ್ನು ಹೆತ್ತು ಅಕಾಲದಲ್ಲಿ ಮೃತಳಾದಳು. ಇವನು ತನ್ನ ಮಗನನ್ನು ತನ್ನ ವೃದ್ಧಾಪ್ಯದ ಒಂಟಿಗ ಜೀವನದ, ಬೆಳಕಾಗಿ ಸಾಕುತ್ತಿದ್ದ. ಅಜ್ಜ ಗಿಲೆನಾರ್ಮಂಡ್ ಈ ಬಾಲಕನನ್ನು ತನ್ನ ಸಾಕಣೆಗೆ ಒಪ್ಪಿಸಿದರೆ ತನ್ನ ಐಶ್ವರ್ಯವನ್ನೂ, ತನ್ನ ಹಿರೇ ಮಗಳ ವಿಶಿಷ್ಟ ಹಣಕಾಸುಗಳನ್ನೂ ಬಾಲಕನಿಗೆ ಸಿಕ್ಕುವ ವ್ಯವಸ್ಥೆ ಮಾಡುವುದಾಗಿ ಬ್ಯಾರನ್ ಪೋಂಟ್‌ಮರ್ಸಿಗೆ ಈ ಕಾಲದಲ್ಲೇ ಹೇಳಿ ಕಳುಹಿಸಿದ. ಆದರೆ ಅಂಥ ಸಾಕೋಣಕ್ಕೆ ತನ್ನ ಶ್ರೀಮಂತಿಕೆಯ ಕೆಲವು ಶರ್ತಗಳನ್ನೂ ಗಿಲೆನಾರ್ಮಂಡ್ ವಿಧಿಸಿದ್ದ: ಒಂದನೆಯ ಶರ್ತವಾಗಿ, ತನ್ನ ಅಳಿಯ ತನ್ನನ್ನು ಎಂದೂ ಬಂದು ನೋಡಕೂಡದು, ಎರಡನೆಯದಾಗಿ, ಪೋಂಟ್‌ಮರ್ಸಿ ತನ್ನ ಮಗನನ್ನೇ ಆದರೂ ಒಮ್ಮೆ ಕಳುಹಿಸಿ ಕೊಟ್ಟ ಮೇಲೆ ಎಂದೂ ನೋಡಕೂಡದು, ಮತ್ತು ಇಂಥ ಎಲ್ಲ ಹಕ್ಕುಗಳನ್ನು ಕಳೆದುಕೊಂಡರೆ ಮಾತ್ರ ಬಾಲಕ ತನ್ನ ಅತುಳೈಶ್ವರ್ಯಕ್ಕೆ ಉತ್ತರಾಧಿಕಾರಿಯಾಗುವನು. ಹಣಮದದ ಶರ್ತಗಳಿವು.

ಬಡತನದ ಬಾಳನ್ನು ಚೆನ್ನಾಗಿ ಅರಿತಿದ್ದ ಬ್ಯಾರನ್ ಪೋಂಟ್‌ಮರ್ಸಿ ತನ್ನ ಕುಮಾರನ ಪುರೋಭಿವೃದ್ಧಿಗಾಗಿ, ಅವನನ್ನು ಅಜ್ಜನಿಗೊಪ್ಪಿಸಿ, ಮಗನ ಮೇಲಿನ ಪ್ರೇಮವನ್ನು ಹೂಗಳ ಮೇಲಿಟ್ಟು ಜೀವಿಸತೊಡಗಿದ. ತಂದೆಗೆ ಮಗನ ಮೇಲೆ ಎಷ್ಟೇ ಪ್ರೇಮವಿದ್ದಿದ್ದರೂ ಮಗನಿಗೆ ಆ ಸಂಗತಿ ಗೊತ್ತಿರಲಿಲ್ಲ. ತಂದೆ ಒಬ್ಬ ದರೋಡೆಕಾರ, ದಂಗೆಗಾರ, ಹಿಂಸಾಕಾರಿ ಎಂದು ಮಾತ್ರ ಈ ಬಾಲಕ ಅಜ್ಜನ ಮುಖಾಂತರ ತಿಳಿಯುತ್ತ ಬಂದ.

ಗಿಲೆನಾರ್ಮಂಡನ ಮಗಳೂ ಮೇರಿಯಸ್‌ನೂ ಆಗಿಂದಾಗ್ಗೆ ಸಂಪ್ರದಾಯ ಪ್ರಕಾರವಾಗಿ ಇಗರ್ಜಿಗೆ ಹೋಗಿಬರುತ್ತಿದ್ದರು. ಇದನ್ನು ತಿಳಿದು ಬ್ಯಾರನ್ ಪೋಂಟ್‌ಮರ್ಸಿ ವರ್ನನ್ನಿನಿಂದ ಪ್ಯಾರಿಸಿಗೆ ಬಂದು ಈ ಇಗರ್ಜಿಯಲ್ಲಿ ಅಡಗಿನಿಂತು ಮಗನನ್ನು ಮನದಣಿಯುವಷ್ಟು ನೋಡಿ ಮರಳುತ್ತಿದ್ದ. ಈ ಸಂಗತಿಯನ್ನು ಪೋಂಟ್‌ಮರ್ಸಿಯ ಸ್ನೇಹಿತನಾದ ವರ್ನನ್ ಇಗರ್ಜಿಯ ಧರ್ಮಾಧಿಕಾರಿ ಫಾದರ್ ಮೇಬಫನು ಪ್ಯಾರಿಸ್ ಇಗರ್ಜಿಯಲ್ಲೇ ನೌಕರನಾಗಿದ್ದ ತನ್ನ ತಮ್ಮನ ಮುಖಾಂತರ ತಿಳಿಸಿ ಕೆಲವು ಅನುಕೂಲತೆಗಳನ್ನು ಒದಗಿಸಿಕೊಟ್ಟ.

ಹೀಗೆ ತನ್ನ ಮಗನನ್ನು ಇಗರ್ಜಿಯ ಸನ್ನಿವೇಶಗಳಲ್ಲಿ ಅಡಗಿ ನೋಡಿಯಾದರೂ ಸಂತೋಷಪಟ್ಟುಕೊಳ್ಳಲು ರಣಾಂಗಣಗಳ ವೀರನಿಗೆ ಧರ್ಮಸಂಸ್ಥೆಯ ಗುರು ನೆರವಾದ—ಅಂದರೆ ವ್ಯಕ್ತ ಪ್ರಪಂಚದಲ್ಲಿ ಹೋರಾಡುವ ಯೋಧನಿಗೆ ಅವ್ಯಕ್ತ ಪ್ರಪಂಚದ ಹೋರಾಟವನ್ನು ತಿಳಿಸುವ ಧರ್ಮಗುರು ನೆರವಾದುದು ಒಂದು ಆಶ್ಚರ್ಯವಲ್ಲ.

೩. ಬಾಲಕನ ಬೆಳೆವಣಿಗೆ

ಗಿಲೆನಾರ್ಮಂಡನ ಜೊತೆ ಬೆಳೆಯುತ್ತಿದ್ದ ಮೇರಿಯಸನ ಪ್ರಪಂಚ ಶ್ರೀಮಂತರ ದಿವಾನ್ ಖಾನೆ ಮಾತ್ರವಾಗಿತ್ತು. ತಮ್ಮ ಬಳಕೆಯಲ್ಲಿ ಬರುವವರ ಹೊರತಾಗಿ ಇತರರೆಲ್ಲರೂ ಅವಿವೇಕಿಗಳು, ಅಸಂಸ್ಕೃತರು, ಮತ್ತು ತುಚ್ಛರು ಎಂಬ ಭಾವನೆಯನ್ನು ಅಜ್ಜ ಮೇರಿಯಸನಲ್ಲಿ ಉಂಟು ಮಾಡಿದ್ದ. ಹೊರಗಿನವರೆಲ್ಲರೂ ತುಚ್ಛರಾಗಿದ್ದುದರಿಂದ ಅವರ ವಿಚಾರವೇ ಅನಗತ್ಯವೆಂದು

ಗಿಲೆನಾರ್ಮಂಡನ ಅಭಿಪ್ರಾಯ. ಇದನ್ನೇ ಮೊಮ್ಮಗನಿಗೂ ಬೋಧಿಸುತ್ತಿದ್ದ. ಶಿಷ್ಟಸಂಪ್ರದಾಯಿಯಾಗಿದ್ದ ದೊಡ್ಡ ತಾಯಿ ಮೇರಿಯಸನಿಗೆ ಬಾಲ್ಯದಲ್ಲಿ ವಿದ್ಯೆ ಕಲಿಸಿದಳು. ಅವನು ದೊಡ್ಡವನಾದ ಮೇಲೆ ಅವನಿಗೆ ವಿದ್ಯೆ ಕಲಿಸಿದಾತ ಗಿಲೆನಾರ್ಮಂಡನ ತತ್ತ್ವಾನುಯಾಯಿಯಾಗಿದ್ದ ಅಂದರೆ, ಶ್ರೀಮಂತರನ್ನು ಮಾತ್ರ ಪರಿಚಯಮಾಡಿಕೊಂಡಿದ್ದ ಒಬ್ಬ ಪುಸ್ತಕಪಂಡಿತ. ಪ್ರಾಯ ಬಂದ ಅನಂತರ ಮೇರಿಯಸನನ್ನು ಕಾನೂನು ವ್ಯಾಸಂಗಕ್ಕೆ ಹಾಕಿದರು.

ಹುಡುಗನಲ್ಲಿ ಚುರುಕುತನ, ವಿಚಾರಶಕ್ತಿ, ವಿದ್ಯಾಸಕ್ತಿ, ಉದಾತ್ತಭಾವನೆ ಮೊದಲಾದ ಗುಣಗಳಿದ್ದುವು. ಒಬ್ಬ ಯೋಗ್ಯ ಯುವಕನಾಗಲು ತಕ್ಕಂಥ ಗುಣಗಳು ಅವನಲ್ಲಿ ಬಲುಮಟ್ಟಿಗೆ ಕೂಡಿದ್ದುವು. ಆದರೆ, ಅವನಿಗೆ ದೊರೆತಿದ್ದ ವಿದ್ಯೆಯ ಕಾರಣವಾಗಿ ಅವನು ರಾಜಸತ್ತೆಯ, ಮತ್ತು ಶ್ರೀಮಂತವರ್ಗದ, ಮತ್ತು ಅಧಿಕಾರಿಗಳ ಪರಮಭಕ್ತನಾಗಿ ಬೆಳೆಯುತ್ತಿದ್ದ. ಹಾಸ್ಯವಿನೋದಗಳು ಕೆಳಜನರ ಗುಣಗಳೆಂದು ಅವನ್ನು ಬಿಟ್ಟು ಸದಾ ಗಂಭೀರನಾಗಿರುತ್ತಿದ್ದ. ಸಾಮಾನ್ಯರೆಲ್ಲರೂ ಕೀಳುತರಗತಿಯವರೆಂದು ತಿಳಿಯುತ್ತ, ಸಮಾಜದಲ್ಲಿ ಹೆಚ್ಚಿನ ಜನರೆಲ್ಲ ಸಾಮಾನ್ಯರೇ ಆಗಿದ್ದುದರಿಂದ, ಅವನು ಜನಸಂಪರ್ಕವನ್ನೇ ವರ್ಜಿಸಿದ್ದ. ಸಮಾಜವನ್ನು ದೂರದಿಂದ, ಸಂಶಯದಿಂದ, ಮತ್ತು ಅಲಕ್ಷ್ಯದಿಂದ ನೋಡುತ್ತಿದ್ದ.

೪. 'ದರೋಡೆಕಾರ'ನ ಕೊನೆ

ಮೇರಿಯಸನಿಗೆ ೧೭ ವರ್ಷ ಪ್ರಾಯ ಬಂದಿತ್ತು. ಒಂದು ದಿನ ಗಿಲೆನಾರ್ಮಂಡ್ ಮೇರಿಯಸನನ್ನು ಕರೆದು, ತನ್ನ ಕೈಯಲ್ಲಿದ್ದ ಒಂದು ಪತ್ರವನ್ನೋದುತ್ತ, "ನಾಳೆ ಬೆಳಗ್ಗೆ ನೀನು ವರ್ನನ್ನಿಗೆ ಹೋಗಬೇಕು," ಎಂದ. ಮೇರಿಯಸ್ ಏಕೆಂದು ವಿಚಾರಿಸಿದುದಕ್ಕೆ ಸ್ವಲ್ಪ ಅಲಕ್ಷ್ಯದಿಂದ, "ನಿನ್ನ ತಂದೆಗೆ ಸಕತ್ತು ಖಾಯಿಲೆಯಂತೆ. ನಿನ್ನನ್ನು ನೋಡಬೇಕೆಂದು ಪತ್ರ ಬರೆದಿದ್ದಾನೆ," ಎಂದು ಹೇಳಿ ಮೇರಿಯಸ್ ಹೋಗಬೇಕಾದ ವಿಳಾಸ ತಿಳಿಸಿದ.

ತಂದೆ ಕಠಿಣ ಸ್ಥಿತಿಯಲ್ಲಿರುವನೆಂದು ತಿಳಿದಕೂಡಲೇ ವರ್ನನ್ನಿಗೆ ಹೋಗುವ ಮನಸ್ಸು ಮಾಡಬಹುದಿತ್ತಾದರೂ ಅವನು 'ದರೋಡೆಕಾರ,' 'ಪ್ರಜಾಪಕ್ಷದವನು' ಎಂಬ ಕಾರಣಗಳಿಂದಲೂ ಆವರೆಗೆ ಅವನನ್ನು ತರಬೇತುಮಾಡಿದ್ದ ಕ್ರಮಗಳ ಕಾರಣದಿಂದಲೂ ತಂದೆಯನ್ನು ನೋಡಲು ಹೋಗುವುದೇ ಅಪಮಾನಕರವಿರಬೇಕೆಂಬ ಸಂಶಯದಿಂದ ಆ ದಿನವೇ ಹೋಗಲಿಲ್ಲ. ಮೇರಿಯಸನ ಮಟ್ಟಿಗೆ ತಂದೆ ಕೇವಲ ಒಬ್ಬ ಅಪರಿಚಿತನಷ್ಟೇ ಪ್ರಿಯನೂ ಹಿರಿಯನೂ ಆಗಿದ್ದ.

ಆದರೂ ಅಜ್ಜನ ಅಪ್ಪಣೆಯಂತೆ ಮರುದಿನ ವರ್ನನ್ನಿಗೆ ಹೋದ. ಅವನು ತಂದೆಯ ಮನೆಗೆ ತಲಪುವಾಗ ರಾತ್ರಿಯಾಗಿತ್ತು. ಮೇರಿಯಸ್ ಆ ಮನೆಯಲ್ಲಿ ಎದುರು ಸಿಕ್ಕಿದ ಕೆಲಸದ ಹೆಂಗುಸೊಬ್ಬಳ ಹತ್ತಿರ, ಸ್ವಲ್ಪ ಹಗುರವಾಗಿಯೇ, "ಇದು ಪೋಂಟ್‌ಮರ್ಸಿಯ ಮನೆಯೇ ?" ಎಂದು ಕೇಳಿದ.

"ಹೌದು," ಅಂದಳು ಕೆಲಸದವಳು.

"ಅವನನ್ನು ನೋಡಬಹುದೇ?"

"ಅವರು ಯಾರನ್ನೂ ನೋಡುವ ಹಾಗಿಲ್ಲ."

"ನಾನವರ ಮಗ, ಅವರನ್ನು ನೋಡಲು ಬಂದಿದ್ದೇನೆ."

"ಅವರು ಈಗ ತಾನೇ ಮೃತಪಟ್ಟಿದ್ದಾರೆ," ಎಂದು ಹೇಳುತ್ತ ಕೆಲಸದಾಕೆ ಅತ್ತಳು. ಅನಂತರ

ಮೇರಿಯಸನನ್ನು ಒಳಗೆ ಕರೆದುಕೊಂಡು ಹೋಗಿ ಮೃತನನ್ನು ತೋರಿಸಿದಳು. ಅಲ್ಲಿ ಒಬ್ಬ ವೈದ್ಯನೂ ಒಬ್ಬ ಧರ್ಮಗುರುವೂ ಇದ್ದರು. ಮಯಣದ ಬತ್ತಿಯ ಬೆಳಕಿನೊಂದಿಗೆ ಮರಣ ದುಃಖದ ಭಾವನಾಮಯ ಅಂಧಕಾರವೂ ಬೆರೆತಿದ್ದಂತೆ ತೋರುತ್ತಿತ್ತು. ಪೋಂಟ್‌ಮರ್ಸಿ ತನ್ನ ಮಗನನ್ನು ನೋಡಬೇಕೆಂದು ಬಲುವಾಗಿ ಹಂಬಲಿಸುತ್ತ ಮತಿಗೆಟ್ಟು, ಕೊನೆಗೆ ಮಗನನ್ನು ನೋಡಲು ತಾನೇ ಹೋಗುವುದಾಗಿ ಹಾಸಿಗೆಯಿಂದೆದ್ದು, ಎರಡು ಹೆಜ್ಜೆಯಿಡುವಾಗಲೇ ಮೃತ ಪಟ್ಟುಬಿದ್ದನೆಂದು ವೈದ್ಯ ತಿಳಿಸಿದ.

ಮೇರಿಯಸನಿಗೆ ಬುದ್ಧಿ ಬಂದಮೇಲೆ ತನ್ನ ತಂದೆಯನ್ನು ಮೊದಲನೆಯದಾಗಿಯೂ ಕೊನೆಯ ದಾಗಿಯೂ ನೋಡಿದ್ದು ಆಗಲೇ. ತಂದೆಯ ವೀರಗಂಭೀರ ಮುಖಮುದ್ರೆ, ನರೆತ ಕೂದಲು, ಖಡ್ಗ ಗುಂಡುಗಳಿಂದ ಗಾಯಗೊಂಡಿದ್ದ ದೇಹ, ಸಮರಾಂಗಣದ ವೀರನಾಯಕನೆಂದು ಮುಖಕ್ಕೆ ಅಡ್ಡವಾಗಿ ಖಡ್ಗಧಾರೆಯಿಂದ ಒತ್ತಿದ್ದ ಬಲವಾದ ಮುದ್ರೆ, ಇವೆಲ್ಲದರ ಜೊತೆಗೆ ಪರಲೋಕದ ಶಾಶ್ವತ ಶಾಂತಿಯುತ ಮುಖವರ್ಚಸ್ಸು ಇವನ್ನೆಲ್ಲ ನೋಡಿದ. ತಂದೆಯ ಕಣ್ಣುಗಳಲ್ಲಿ ತೇಜಸ್ಸಿರ ದಿದ್ದರೂ ಅವೇ ಕಣ್ಣುಗಳಿಂದ ಮಗನನ್ನು ನೋಡಲೋಸ್ಕರ ಹೊರಟಿದ್ದ ಎರಡು ಬಿಂದು ಅಶ್ರುಗಳು ಮೇರಿಯಸನನ್ನು ಸ್ವಯಂಪ್ರಕಾಶದಿಂದ ನೋಡಿದುವು.

ಮೇರಿಯಸನ ತಂದೆ ಬರೆದಿಟ್ಟಿದ್ದ ಒಂದು ಪತ್ರವನ್ನು ಕೆಲಸದಾಕೆ ಅವನಿಗಿತ್ತಳು. ಆ ಪತ್ರ ದಲ್ಲಿ ವಿಶೇಷ ಒಕ್ಕಣೆಗಳು ಇರಲಿಲ್ಲ—ಬಲು ಅವಸರದಿಂದ ಬರೆಯಲಾಗಿದ್ದಂತೆ ತೋರುತ್ತಿತ್ತು. ಪತ್ರ ಹೀಗಿತ್ತು :

"ನನ್ನ ಮಗನಿಗೆ—ಚಕ್ರವರ್ತಿ ವಾಟರ್ಲೂ ರಣರಂಗದಲ್ಲಿ ನನಗೆ ಬ್ಯಾರನ್ ಪದವಿ ಅನು ಗ್ರಹಿಸಿದ. ನನ್ನ ರಕ್ತಧಾರೆಯನ್ನರ್ಪಿಸಿ ಪಡೆದ ಈ ಬಿರುದನ್ನು ಈಗಿನ ರಾಜಪ್ರಭುತ್ವ ಅಂಗೀ ಕರಿಸದಿದ್ದರೂ ನೀನು ಅದನ್ನು ಧರಿಸಿ ಅನುಭವಿಸಿ ಶ್ರೇಯೋವಂತನಾಗಿ ಬಾಳು. ಅಲ್ಲದೆ, ಮತ್ತೊಂದು ವಿಷಯ ಮರೆಯದಿರು : ಮೊಂಟ್‌ಫರ್ಮಿಯಲ್ಲಿನಲ್ಲಿ ಚಿಕ್ಕ ಹೊಟೇಲ್ ಇಟ್ಟು ಕೊಂಡಿರುವ ತೆನಾರ್ಡಿಯರನೆಂಬ ಒಬ್ಬ ಸಾರ್ಜೆಂಟ್ ಅಂದು ರಾತ್ರಿ ಯುದ್ಧರಂಗದಲ್ಲಿ ನನ್ನನ್ನು ಬದುಕಿಸಿದ. ಅವನಿಗೆ ಯಥಾಶಕ್ತಿ ಸಹಾಯ ಕೊಡಬೇಕು."

ಮೇರಿಯಸ್ ತಂದೆಯ ಸ್ಥಿರಚರ ವಸ್ತುಗಳನ್ನೆಲ್ಲ ಮಾರಿದ. ಅದರಿಂದ ತಂದೆಯ ಅಂತಿಮ ಕ್ರಿಯೆಗಳಿಗೆ ಸಾಕಷ್ಟು ಹಣ ಸಿಕ್ಕಿತು. ಉತ್ತರಕ್ರಿಯೆಗಳನ್ನೆಲ್ಲ ಪೂರೈಸಿಯೇ ಪ್ಯಾರಿಸಿಗೆ ಮರಳಿದ. ಮೂರೇ ದಿನಗಳಲ್ಲಿ ಪೋಂಟ್‌ಮರ್ಸಿಯನ್ನು ಎಲ್ಲರೂ ಮರೆತರು. ಮೇರಿಯಸನು ತನ್ನ ಜೊತೆ ಪ್ಯಾರಿಸಿಗೆ ತಂದಿದ್ದ ಅವನ ತಂದೆಯ ದುಸ್ತುಗಳ್ನೂ ಖಡ್ಗವನ್ನೂ ಅವು ಬಲು ಅಸಹನೀಯ ಎಂದು ಸಿಕ್ಕಿದ ಹಣಕ್ಕೆ ಗಿಲೆನಾರ್ಮಂಡ್ ಮಾರಿಸಿದ.

ಮೃತನ ಸ್ಮಾರಕಕ್ಕಾಗಿ ಒಂದು ತುಂಡು ಕರೀ ಪಟ್ಟಿ ಮೇರಿಯಸನ ಹ್ಯಾಟಿನಲ್ಲಿ ಹಾರಾಡು ತ್ತಿತ್ತು.

೫. ಇಗರ್ಜಿ ಧರ್ಮಾಧಿಕಾರಿಯೊಡನೆ ಮೇರಿಯಸನ ಸಂಭಾಷಣೆ

ಮೇರಿಯಸ್ ಒಮ್ಮೆ ಇಗರ್ಜಿಯಲ್ಲಿ ತನ್ನ ಯಾವತ್ತಿನ ಸ್ಥಳ ಬಿಟ್ಟು ಇನ್ನು ಯಾರದೋ ಸ್ಥಳ ದಲ್ಲಿ ಆಲೋಚನಾಪರನಾಗಿ ನಿಂತಿದ್ದ. ಪ್ರಾರ್ಥನೆ ಪ್ರಾರಂಭವಾಗಿರಲಿಲ್ಲ. ಅಷ್ಟರಲ್ಲೇ ಆ ಸ್ಥಳಕ್ಕೆ ಒಬ್ಬ ವೃದ್ಧ ಬಂದು, "ಸರ್, ಈ ಸ್ಥಳ ನನ್ನದಷ್ಟೆ," ಎಂದು ವಿನಯದಿಂದ ಹೇಳಿದ.

ಮೇರಿಯಸ್ ಸ್ಥಳ ಬಿಟ್ಟುಕೊಟ್ಟ. ಹಾಗೆ ಅಲ್ಲಿಂದ ಸರಿಯುವಾಗ ಅಲ್ಲಿಯ ಕುರ್ಚಿಯ ಹಿಂಬದಿ "ಧರ್ಮಾಧಿಕಾರಿ ಫಾದರ್ ಮೇಬಫ್" ಎಂದು ಬರೆದಿದ್ದುದನ್ನು ಕಂಡ. ಪ್ರಾರ್ಥನೆ ಮುಗಿದ ಬಳಿಕ ಫಾದರ್ ಮೇಬಫ್ ಬಂದು ಮೇರಿಯಸನ ಹತ್ತಿರ ಹೇಳಿದರು, "ಸರ್, ಕ್ಷಮಿಸಬೇಕು. ಆಗ ಪ್ರಾರ್ಥನೆ ವೇಳೆ ಆಗಿದ್ದುದರಿಂದ ಮಾತಾಡಲಾಗಲಿಲ್ಲ. ನಿಮ್ಮನ್ನು ಅತ್ತ ಸರಿಯೆಂದು ನಾನು ಹೇಳಬಾರದಿತ್ತು. ಆದರೆ ನಿರ್ವಾಹವಿಲ್ಲದೇ ಹಾಗೆ ಹೇಳಿಬಿಟ್ಟೆ: ಆ ಸ್ಥಳದಲ್ಲಿ ನಿಂತು ಪ್ರಾರ್ಥನೆ ಗೈಯುವುದರಲ್ಲಿ ಬಹಳ ಮಹತ್ತ್ವವಿದೆಯೆಂದು ನಾನು ತಿಳಿದುಕೊಂಡಿರುವುದರಿಂದ ಹಾಗೆನ್ನಬೇಕಾಯಿತು."

"ಅದಕ್ಕೇನಂತೆ! ನನ್ನ ಸ್ಥಳ ಬಿಟ್ಟು ಬೇರೆಡೆ ನಿಂತದ್ದು ನನ್ನ ತಪ್ಪು," ಎಂದು ಮೇರಿಯಸ್ ನಸುನಗೆಯಿಂದ ಹೇಳಿದ. ಮೇರಿಯಸನ ಹಸನ್ಮುಖದಿಂದ ಫಾದರ್ ಮೇಬಫ್ ಪ್ರೋತ್ಸಾಹಿತನಾದ. ಸಂತೋಷದಿಂದಲೇ ತನ್ನ ಮಾತನ್ನು ಮುಂದುವರಿಸಿದ, "ಈ ತೆರನಾದ ಭಾವನೆ ನಮ್ಮಂಥ ವೃದ್ಧರಿಗೆ ಸ್ವಾಭಾವಿಕ. ಆದರೆ, ಪ್ರಪಂಚದಲ್ಲಿ ಏನೇನು ನಡೆಯುತ್ತದೆಂಬುದನ್ನು ನೀವೂ ಸ್ವಲ್ಪ ಕೇಳಿರಿ : ನಾನು ಹೇಳುವ ವಿಷಯದಲ್ಲೊಂದು ಭವ್ಯತೆಯಿದೆ. ಈ ಸ್ಥಳದಲ್ಲೇ ನನ್ನ ಜೊತೆ, ಈಗ್ಗೆ ಹತ್ತು ವರ್ಷಗಳಿಗೆ ಮೇಲ್ಪಟ್ಟು, ಒಬ್ಬ ವೃದ್ಧ ತಂದೆ ಆಗಿಂದಾಗ್ಗೆ ಬಂದು ತನ್ನ ಪ್ರೀತಿಯ ಮಗನನ್ನು ಅಡಗಿ ನಿಂತು ನೋಡುತ್ತ ಪ್ರಾರ್ಥನೆಗೈಯುತ್ತಿದ್ದ. ತಮ್ಮ ಕುಟುಂಬದ ಏರ್ಪಾಡುಗಳ ಕಾರಣವಾಗಿ ಆ ತಂದೆ ತನ್ನ ಮಗನನ್ನೂ ತ್ಯಜಿಸಿದ್ದ; ಆದರೆ ಹೃದಯದ ಹಂಬಲಕ್ಕಾಗಿ ಮಾತ್ರ ಹಾಗೆ ಅಡಗಿ ನೋಡುತ್ತಿದ್ದ. ಆ ವೃದ್ಧಪಿತನ ಲೌಕಿಕಪ್ರೇಮದ ಅಶ್ರುಬಿಂದುಗಳ ಜೊತೆಗೆ ದೈವಿಕ ಭಕ್ತಿಯ ಅಶ್ರುಬಿಂದುಗಳೂ ಕೂಡಿ ಈ ಸ್ಥಳ ಪವಿತ್ರವಾಗಿದೆ. ಅವನು ವರ್ನನ್ ಪಟ್ಟಣವಾಸಿ; ಅವನೊಬ್ಬ ನಿವೃತ್ತ ವೀರ ಸೈನ್ಯಾಧಿಕಾರಿ. ವರ್ನನ್ನಿನಲ್ಲಿರುವ ನನ್ನ ಅಣ್ಣ ಮೇಬಫರು ನನಗವನ ಪರಿಚಯ ಮಾಡಿಕೊಟ್ಟದ್ದು. ಅವನ ಮುಖದ ಸ್ವಾಭಾವಿಕವಾದ ವೀರ ತೇಜಸ್ಸಿನ ಜೊತೆಗೆ ಖಡ್ಗದ ಮುದ್ರೆಯೊಂದು ಮತ್ತಷ್ಟು ಕಳೆಕೊಟ್ಟಿತ್ತು. ತನ್ನ ಮಾವನ ಮತ್ತು ಅತ್ತಿಗೆಯರ ಆಸ್ತಿ ತನ್ನ ಮಗನಿಗೆ ಸಿಕ್ಕುವುದೆಂಬ ಮಗನ ಮೇಲಿನ ಹಿತಕ್ಕಾಗಿ ಮಗನನ್ನು ಅಜ್ಜನ ವಶಕ್ಕೆ ಸಂಪೂರ್ಣವಾಗಿ ಒಪ್ಪಿಸಿದ್ದ. ಇದೆಲ್ಲ ಬಂದದ್ದು ಇವರಿಬ್ಬರ ರಾಜಕೀಯ ಧೋರಣೆಗಳ ವ್ಯತ್ಯಾಸದಿಂದ. ಇವನ ಮಾವ ರಾಜಪಕ್ಷದವ. ಇವನು ಬೊನೊಪಾರ್ಟ್ ಪಕ್ಷದವ. ಆ ಬಾಲಕ ತಂದೆಯ ಸಮೀಪದಲ್ಲೇ ಇಲ್ಲಿ ಇರುತ್ತಿದ್ದಾಗ್ಯೂ ಬಾಲಕನಿಗೆ ತಂದೆಯ ವಿಚಾರ ಗೊತ್ತಿರಲಿಲ್ಲ. ಅಜ್ಜ ಮೊಮ್ಮಗನನ್ನು ಸಾಕುವುದರಲ್ಲಿ ಕಠೋರ ಕಾಠಿಣ್ಯವಿತ್ತು. ಅಳಿಯ ನೆಪೋಲಿಯನ್ನನ ದಳವಾಯಿ ಆದ ಪಕ್ಷಕ್ಕೆ ರಾಕ್ಷಸನಾಗಿರಬೇಕೆಂದಿಲ್ಲವಷ್ಟೆ! ಸೈನ್ಯಾಧಿಕಾರಿಯ ಹೆಸರು ಮಾಂಟ್‌ಮರ್ಸಿಯಂತಲೋ ಪಾಂಟ್ ಮೇರಿಸ್ ಎಂತಲೋ ಎಂಬುದು ಜ್ಞಾಪಕವಿಲ್ಲ," ಎಂದು ಆ ಧರ್ಮಾಧಿಕಾರಿ ಹೇಳಿದ.

"ಅವರ ಮಗನೇ ನಾನು. ತಂದೆ ಹೆಸರು ಪೋಂಟ್‌ಮರ್ಸಿ," ಅಂದ ಮೇರಿಯಸ್.

"ಸರಿ, ನಿಮ್ಮನ್ನು ನೋಡಿದರೆ ಪೋಂಟ್‌ಮರ್ಸಿಯವರು ತನ್ನ ಮಗನ ಪ್ರಾಯ ಹೇಳುತ್ತಿದ್ದುದು ಸರಿಯೆಂದು ತೋರುತ್ತದೆ. ನಿಮ್ಮನ್ನು ನೋಡಿ ಬಹಳ ಸಂತೋಷವಾಯಿತು," ಅಂದ ಅಧಿಕಾರಿ.

ಮೇರಿಯಸ್ ಮನೆಗೆ ಬಂದೊಡನೆ ತಾನು ಸ್ನೇಹಿತರೊಂದಿಗೆ ಬೇಟೆಗೆ ಹೋಗಿ ಬರಲು ತನಗೆ ಅನುಮತಿ ಬೇಕೆಂದು ಅಜ್ಜನನ್ನು ಕೇಳಿದ. ಮೊಮ್ಮಗ ಯಾವಳೋ ತರುಣಿಯ ವ್ಯಾಮೋಹದಿಂದ ಮನೆಯಿಂದ ಹೊರಗೆಹೋಗಲು ಬಯಸುತ್ತಿದ್ದಾನೆಂದು ಅಜ್ಜ ತಿಳಿದುಕೊಂಡು, ಸಂತೋಷದಿಂದ ಅನುಮತಿಯಿತ್ತ.

ಮೇರಿಯಸ್ ಮೂರುದಿನಗಳ ಕಾಲ ಊರಲ್ಲಿರಲಿಲ್ಲ. ಮನೆಗೆ ಬಂದ ಕೂಡಲೆ ಲಾ ಕಾಲೇಜಿನ ವಾಚನಾಲಯಕ್ಕೆ ಹೋಗಿ 'ಮಾನಿಟರ್' ಗಝೆಟನ್ನು ಓದ ತೊಡಗಿದ. ಅಲ್ಲದೆ ಸರಕಾರದ ಅನೇಕ ವರದಿಗಳನ್ನು ಓದಿದ. ಹೀಗೆ ಓದಿ ನೋಡುವಾಗ ತನ್ನ ತಂದೆ ಮಹಾ ದೇಶಪ್ರೇಮಿ, ಕೀರ್ತಿವಂತ, ಚಕ್ರವರ್ತಿಯ ಅಚ್ಚುಮೆಚ್ಚಿನ ವೀರ, 'ಬ್ಯಾರನ್' ಬಿರುದಾಂಕಿತ, ಪುತ್ರಹಿತಕ್ಕಾಗಿ ಸ್ವಂತ ಸುಖ ವನ್ನು ತ್ಯಜಿಸಿದ ತ್ಯಾಗಿ ಎಂದು ತಿಳಿದ. ಅಲ್ಲದೆ, ದೇಶದ್ರೋಹಿ, ದಂಗೆಗಾರ, ಯೂರೋಪಿನ ನರಭಕ್ಷಕನೆಂದು ತಾನು ತಿಳಿದುಕೊಂಡಿದ್ದ ನೆಪೋಲಿಯನ್, ಸೀಸರನಿಗೆ ಸಮಾನನೆಂದೂ ತಿಳಿದ. ಬರ್ಬೂನ್, ಜಾಕೊಬೈಟ್, ಲೂಯಿ ಮೊದಲಾದ ರಾಜಮನೆತನಗಳ ಪ್ರಭೆ ಮಸುಕಾಯಿತು. ಫ್ರಾನ್ಸಿನ ಉದ್ಧಾರ, ಕ್ರಾಂತಿ, ಪ್ರಜಾರಾಜ್ಯ, ನೆಪೋಲಿಯನ್‌ಪಕ್ಷ—ಇವೆಲ್ಲವೂ ಜಾಜ್ವಲ್ಯಮಾನ ವಾಗಿ ತೋರಿದುವು. ತಂದೆಯ ಮೇಲಿನ ಪ್ರೇಮವೂ ಭಕ್ತಿಯೂ ಹೆಚ್ಚಿದಂತೆ ಅಜ್ಜನ ಕುರಿತ ದ್ವೇಷವೂ ತಾತ್ಸಾರವೂ ಬೆಳೆದುವು. ಮೇರಿಯಸ್ ಅಜ್ಜನ ಮನೆಯಲ್ಲೇ ಒಂದು ದಿನ ಮೈಮರೆತು, ಆಲೋಚನಾಪರವಶತೆಯಲ್ಲಿ, "ಚಕ್ರವರ್ತಿಗೆ ಜಯವಾಗಲಿ," ಎಂದು ಘೋಷಿಸಿದ.

ತನ್ನಲ್ಲಿ ಉಂಟಾಗಿದ್ದ ಪರಿವರ್ತನೆಯನ್ನು ಯಾರಿಗೂ ತಿಳಿಸದೆ ಮೇರಿಯಸ್ ಎಂದಿನಂತೆಯೇ ಇರುತ್ತಿದ್ದ. ಕೆತ್ತನೆ ಬರೆಹಗಾರನೊಬ್ಬನ ಹತ್ತಿರ ಹೋಗಿ ದಪ್ಪಕಾರ್ಡುಗಳಲ್ಲಿ "ಬ್ಯಾರನ್ ಮೇರಿ ಯಸ್ ಪೋಂಟ್‌ಮರ್ಸಿ" ಎಂದು ಹೆಸರನ್ನು ಕೆತ್ತಿಸಿ ನೂರು ಪ್ರತಿಗಳನ್ನು ತಯಾರಿಸಿಟ್ಟುಕೊಂಡ.

ಮುಂದೆ ಮೇರಿಯಸ್ ತೆನಾರ್ಡಿಯರನನ್ನು ಮೊಂಟ್‌ಫರ್ಮಿಯಲ್ಲಿನಲ್ಲಿ ಹುಡುಕಿದ. ಸಿಗದೆ ಹತಾಶನಾದ. ಮೇರಿಯಸ್ ಮನೆಬಿಟ್ಟು ಹೋಗುತ್ತಿದ್ದಾಗಲೆಲ್ಲ ಅವನು ಯಾವಳೋ ತರುಣಿ ಯಲ್ಲಿ ಅನುರಕ್ತನಾಗಿರುವನೆಂದು ಗಿಲೆನಾರ್ಮಂಡ್ ಊಹಿಸಿ ಸಮಾಧಾನಪಟ್ಟುಕೊಳ್ಳುತ್ತಿದ್ದ. ಮೇರಿಯಸನ ಕುತ್ತಿಗೆಯಲ್ಲಿ ಕಪ್ಪುಲಾಡಿಯಿಂದ ನೇಲುತ್ತಿದ್ದ ಚಿಕ್ಕ ಒಂದು ಕರಡಿಗೆ ಕಂಡು ಅದು, "ಇನಿಯಳ ಫೋಟೊ ಇರಬೇಕು," ಎಂದಂದುಕೊಂಡ. ತನ್ನ ಊಹನೆಗೆ ಹೊಸ ಹೊಸ ಸಮರ್ಥನೆ ದೊರಕುತ್ತಿದ್ದುದೇ ಆ ಅಜ್ಜನ ಸಂತೋಷವಾಗಿತ್ತು.

ಮೇರಿಯಸ್ ಮಾತ್ರ ತಂದೆಯ ಚರಿತ್ರೆ, ಮತ್ತು ರಾಜಕೀಯ ವಿಷಯಗಳ ಕುರಿತಾಗಿ ಭಾವನಾ ಪರವಶನಾಗಿಯೇ ಇರುತ್ತಿದ್ದ.

೬. ಚಂದದ ರವಕೆಯ ಕುಂದದ ಬಯಕೆ

ಗಿಲೆನಾರ್ಮಂಡನ ಸಹೋದರನ ಮೊಮ್ಮಗ ಲೆಫ್ಟಿನೆಂಟ್ ತಿಯೊಡ್ಯೂಲ್ ಗಿಲೆನಾರ್ಮಂಡ್ ಎಂಬ ಯುವಕ. ಇವನು ಸುಲಕ್ಷಣನೂ ಸಪುರಸೊಂಟವುಳ್ಳವನೂ ಮೇಲ್ಗಡೆಗೆ ತಿರುಗಿಸಿದ ಉದ್ದ ಮೀಸೆ ಉಳ್ಳವನೂ ತನ್ನ ಕತ್ತಿ ಝಳುಪಿಸಿ ಸೈನಿಕರ ಠೀವಿಯಲ್ಲಿ ಮಾತಾಡಿದರೆ ಎಂಥವರನ್ನೂ ಬೆರಗುಗೊಳಿಸಬಲ್ಲವನೂ ಆಗಿದ್ದ. ಸೈನ್ಯದಲ್ಲೇ ಇವನು ಹೆಚ್ಚಾಗಿ ಇರಬೇಕಾಗಿದ್ದುದರಿಂದ ಅಜ್ಜನ ಮನೆಗೆ ತೀರ ವಿರಳವಾಗಿ ಬರುತ್ತಿದ್ದ. ಅಪರೂಪಕ್ಕೆ ಬರುವವರಿಗೆ ಎಂಥೆಂಥ ಗುಣಗಳಿವೆ ಎಂದು ಕಲ್ಪಿಸಿಕೊಂಡರೂ ಅವರು ಪರೀಕ್ಷೆಗೆ ಸಿಕ್ಕದೆ ಕಲ್ಪನೆ ಸತ್ಯವೆಂದೇ ತೋರುವ ಅನುಕೂಲ ಇರುವುದರಿಂದ ಹಿರಿಯ ಗಿಲೆನಾರ್ಮಂಡನ ಹಿರೇ ಮಗಳು ಈ ಸೈನಿಕ ಅಳಿಯ ಬಲುಗುಣವಂತ ನೆಂದು ಯಾವಾಗಲೂ ಮಾತಾಡುತ್ತಿದ್ದಳು. ಲೆಫ್ಟಿನೆಂಟ್ ತಿಯೊಡ್ಯೂಲನೂ ಮೇರಿಯಸ್‌ನೂ ಸಮಾನ ವಯಸ್ಕರು. ಇವರಿಬ್ಬರಿಗೆ ಪರೋಕ್ಷವಾಗಿ ಪರಿಚಯವಿತ್ತೇ ವಿನಾ ಒಬ್ಬರನ್ನೊಬ್ಬರು ಪ್ರತ್ಯಕ್ಷ ನೋಡಿರಲಿಲ್ಲ.

ಒಂದು ದಿನ ಬೆಳಗ್ಗೆ ಮೇರಿಯಸ್ ತಾನು ದೂರದ ಒಂದೂರಿಗೆ ಹೋಗಿಬರುವುದಾಗಿ ಹೇಳಿ, ಅಜ್ಜನ ಅನುಮತಿ ಪಡೆದು, ಮನೆಯಿಂದ ತೆರಳಿ ಸ್ವಲ್ಪ ಹೊತ್ತಾಗುವುದರ ಒಳಗೆ ಲೆಫ್ಟೆನೆಂಟ್ ತಿಯೊಡ್ಯೂಲ್ ಕುಮಾರಿ ಗಿಲೆನಾರ್ಮಂಡಳ ಭೇಟಿ ತೆಗೆದುಕೊಳ್ಳಲು ಬಂದ. ಈ ದಿನ ಕೂಡ ಮೇರಿಯಸ್ ಹೋಗಿದ್ದುದು ಯಾವಳೋ ಒಬ್ಬ ಸೂಳೆಯನ್ನು ಹುಡುಕಿಕೊಂಡೆಂದು ಕುಮಾರಿ ಗಿಲೆನಾರ್ಮಂಡ್ ಊಹಿಸಿ ತುಂಬ ಸಿಟ್ಟುಗೊಂಡಿದ್ದಳು. ಅತ್ತೆ ಮತ್ತು ಈ ಸೈನಿಕ ಅಳಿಯ ತಮ್ಮೊಳಗೆ ಮಾತುಕಥೆ ನಡೆಸುತ್ತ, ಮೇರಿಯಸ್ ಆ ದಿನ ಬೆಳಗ್ಗೆ ಹೋಗಿದ್ದ ವಿಷಯವನ್ನೂ ಪ್ರಸ್ತಾವಿಸಿದರು. ಗಿಲೆನಾರ್ಮಂಡಳು ಮೇರಿಯಸನ ಕುರಿತಾದ ತನ್ನ ಸಿಟ್ಟಿಗೆ ಆಧಾರ ಪಡೆಯ ಲೋಸ್ಕರ ತಿಯೊಡ್ಯೂಲನಿಗೆ ಹತ್ತು ಲೂಯಿ ಬಹುಮಾನ ಕೊಟ್ಟು, ಮೇರಿಯಸ್ ಎಲ್ಲಿಗೆ ಹೋಗಿರುವನೆಂದು ಪರೀಕ್ಷಿಸಬೇಕೆಂದು ಹೇಳಿದಳು. ತಿಯೊಡ್ಯೂಲ್ ಹತ್ತು ಲೂಯಿಗಳಿಂದ ಪ್ರೋತ್ಸಾಹಿತನಾಗಿ, "ಯಾವುದೋ ಒಂದು ಚಂದದ ರವಕೆಯ ಬಯಕೆ ಬಾಧಿಸುತ್ತಿರಬೇಕು, ನಾನು ಪರೀಕ್ಷಿಸುತ್ತೇನೆ," ಎಂದು ಭರವಸೆಕೊಟ್ಟ.

ಆ ದಿನ ಸಂದರ್ಭವಶಾತ್ ಮೇರಿಯಸನೂ ಲೆಫ್ಟೆನೆಂಟನೂ ಒಂದೇ ಸಾರ್ವಜನಿಕ ಬಂಡಿ ಯಲ್ಲಿ ಪ್ರಯಾಣಬೆಳೆಸಿದರು. ಬಂಡಿ ವರ್ನನ್ನಿಗೆ ತಲಪಿ ನಿಲ್ದಾಣದಲ್ಲಿ ಸ್ವಲ್ಪ ಹೊತ್ತು ನಿಂತಿತು. ತಿಯೊಡ್ಯೂಲ್ ವರ್ನನ್ನಿನ ವರೆಗೆ ಮಾತ್ರ ಟಿಕೆಟ್ ಕೊಂಡಿದ್ದ. ಅವನು ಅಲ್ಲಿ ಇಳಿದು ಸ್ವಲ್ಪದೂರ ಮುಂದೆ ನಡೆದುಹೋಗಬೇಕಿತ್ತು. ಬಂಡಿ ನಿಲ್ದಾಣದಲ್ಲಿ ಹೂಮಾರಾಟದವರು ನಾನಾವಿಧದ ಹೂ ಗಳನ್ನೂ ಹೂವಿನಸರಗಳನ್ನೂ ಗುಚ್ಛಗಳನ್ನೂ ಮಾರಾಟಮಾಡಲು ಜನರ ಮಧ್ಯೆ ತಿರುಗುತ್ತಿದ್ದರು. ಮೇರಿಯಸ್ ಚಂದದ ಒಂದು ಹೂಗೊಂಚಲನ್ನು ಖರೀದಿಸಿದ. ತಿಯೊಡ್ಯೂಲ್ ಇದನ್ನು ಅಡಗಿ ನಿಂತು ನೋಡುತ್ತಿದ್ದ. ಮೇರಿಯಸನನ್ನು ಹಿಂಬಾಲಿಸಬೇಕೆಂದು ನಿಶ್ಚೈಸಿಕೊಂಡ. ಅವನು ವರ್ನನ್ ಬಂಡಿಮಾಳದಿಂದ ಆ ಊರಿನ ಇಗರ್ಜಿ ಕಡೆಗೆ ಹೋದ. ಲೆಫ್ಟೆನೆಂಟನು ಅವನನ್ನು ಹಿಂಬಾಲಿಸುತ್ತ, ಮನಸ್ಸಿನಲ್ಲೇ, "ದೇವರ ಸನ್ನಿಧಿಯಲ್ಲಿ ಪ್ರೇಯಸಿಯ ದೃಷ್ಟಿ ಪವಿತ್ರತರವಾಗುವು ದಷ್ಟೆ," ಎಂದಂದುಕೊಂಡ. ಮೇರಿಯಸ್ ಇಗರ್ಜಿಯ ಒಳಗೆ ಹೋಗಲಿಲ್ಲ. ಇಗರ್ಜಿ ದಾಟಿ, ಶ್ಮಶಾನಕ್ಕೆ ತಲಪಿ, ಗೋರಿಗಳ ಮಧ್ಯದಲ್ಲೇ ನಡೆದ. ತಿಯೊಡ್ಯೂಲ್, "ಮೌನವಾಗಿರುವ ಗೋರಿ ಗಳ ಮರೆಯಲ್ಲಿ ಪ್ರಣಯವ್ಯವಹಾರ ಸುಲಭವಷ್ಟೆ," ಎಂದು ಗ್ರಹಿಸಿಕೊಂಡ. ತಿಯೊಡ್ಯೂಲ್ ಕಂಬಗಳ ಮರೆಯಲ್ಲಿ ಅಡಗಿನಿಂತು ನೋಡತೊಡಗಿದ.

ಮೇರಿಯಸ್ ಅತ್ತಿತ್ತ ನೋಡದೆ, ಸ್ಥಿರಪದಗತಿಯಿಂದ ಹೋಗಿ ಒಂದು ಗೋರಿಯ ಎದುರು ನಿಂತ. ಅನಂತರ ತನ್ನ ಕೈಯಲ್ಲಿದ್ದ ಹೂಗಳನ್ನೆಲ್ಲ ಎದುರಿಗಿದ್ದ ಗೋರಿಯ ಮೇಲೆ ಇಟ್ಟು ಮೊಣ ಕಾಲೂರಿ ಅದಕ್ಕೆ ನಮಸ್ಕರಿಸಿದ. ಆ ಗೋರಿ ಬಡವರ ಗೋರಿಯಂತಿತ್ತು. ಅದರ ತಲೆ ಭಾಗದಲ್ಲಿ ಒಂದು ಕಂಬದ ಅಡ್ಡವಾಗಿ ಕಪ್ಪು ಹಲಗೆಯ ಮೇಲೆ, ಬಿಳಿ ಅಕ್ಷರಗಳಲ್ಲಿ "ಕರ್ನಲ್ ಬ್ಯಾರನ್ ಪೋಂಟ್‌ಮರ್ಸಿ" ಎಂದು ಬರೆದಿತ್ತು. ಆ ಗೋರಿಯೇ ಮೇರಿಯಸನ ಪ್ರೇಯಸಿ !

೭. ಇದ್ದಲಿಗೂ ವಜ್ರಕ್ಕೂ ಘರ್ಷಣೆ

ಮೇರಿಯಯಸನನ್ನು ಅಡಗಿ ನೋಡುತ್ತಿದ್ದ ಲೆಫ್ಟೆನೆಂಟ್ ಗಿಲೆನಾರ್ಮಂಡನಿಗೆ ಆಶ್ಚರ್ಯ ವಾಯಿತು, ಮಾತ್ರವಲ್ಲ, ಗಾಬರಿಯೂ ಆಯಿತು. ಹಿರಿಯ ಸೈನ್ಯಾಧಿಕಾರಿಯೊಬ್ಬ ತನ್ನ ಸೈನಿಕನ ದುಸ್ತಿನಲ್ಲೇ ತನ್ನೆದುರಿಗೆ ಬರುತ್ತಿದ್ದಂತೆ ಅವನು ಭ್ರಮೆಪಡತೊಡಗಿದ. ಆ ಸೈನಿಕನ ಸಮಾಧಿಗೆ

ತಕ್ಕಂಥ ಭಕ್ತಿಯಿಂದಲೂ ಅವನ ಅಧಿಕಾರಕ್ಕೆ ತಕ್ಕಂಥ ಗೌರವದಿಂದಲೂ ತಿಯೊಡ್ಯೂಲ್ ಆ ಕಾಲ್ಪನಿಕ ಸೈನಿಕನಿಗೆ ಮನಸಾ ನಮಸ್ಕರಿಸಿದ. ಚತುರನಾದ ದಳಪತಿ ಯುದ್ಧಪರಿಸ್ಥಿತಿಯನ್ನರಿತು ಹಿಂದೆ ಸರಿಯುವ ಕ್ರಮದಲ್ಲಿ ಅವನು ಹಿಂದೆ ಬಂದು, ಇಗರ್ಜಿಯಿಂದ ಪಾರಾಗಿ, ತನ್ನ ಕೆಲಸದ ಮೇಲೆ ಹೋದ. ಅಜ್ಜ ಮತ್ತು ಅತ್ತೆಯರಿಗೆ ಅವನು ಯಾವ ವರದಿಯನ್ನೂ ಸಲ್ಲಿಸಲಿಲ್ಲ.

ಮೇರಿಯಸ್ ಮನೆಗೆ ಬರುವಾಗ ಮೂರು ದಿನಗಳಾಗಿದ್ದುವು. ನಿದ್ರೆಕೆಟ್ಟ ಅವನು ಪ್ರಯಾಣದ ಶ್ರಮಪರಿಹಾರಕ್ಕಾಗಿ ಅಜ್ಜನ ಮನೆಗೆ ಬಂದ ಕೂಡಲೆ ತನ್ನ ಉಪ್ಪರಿಗೆ ಕೋಣೆಗೆ ಹೋಗಿ, ಮಂಚದ ಮೇಲೆ ವಸ್ತ್ರಗಳನ್ನು ಕಳಚಿ ಇಟ್ಟು, ಸ್ನಾನಕ್ಕೆ ಹೋದ. ಅಜ್ಜನಿಗೆ ಮೇರಿಯಸ್ ಮಹಡಿಗೆ ಹೋದದ್ದು ಗೊತ್ತಿತ್ತೇ ಹೊರತು ಸ್ನಾನಕ್ಕೆ ಹೋದದ್ದು ಗೊತ್ತಾಗಿರಲಿಲ್ಲ. ಅವನನ್ನು ಗದರಿಸುವುದಕ್ಕಾಗಿ ಮಹಡಿಗೆ ಹೋದಾಗ ಅವನ ದುಸ್ತನ್ನೂ ಕುತ್ತಿಗೆಯಲ್ಲಿರುತ್ತಿದ್ದ ಕರಿಲಾಡಿಯಿಂದ ಕಟ್ಟಿದ್ದ ಚಿಕ್ಕ ಕರಡಿಗೆಯನ್ನೂ ಕಂಡ. ಮುದುಕ ಮೇರಿಯಸನ ಅಂಗಿಜೇಬನ್ನು ಪರೀಕ್ಷಿಸಿ ನೋಡಿ ಅಲ್ಲಿ ಸಿಕ್ಕಿದ ಒಂದು ಚಿಕ್ಕ ಕಾಗದದ ಕಟ್ಟನ್ನು ಹೊರಗೆ ತೆಗೆದ. ಕರಡಿಗೆಯನ್ನೂ ಈ ಕಾಗದದ ಕಟ್ಟನ್ನೂ ತೆಗೆದುಕೊಂಡು ಮಹಡಿಯಿಂದಿಳಿದು ಬಂದು ತನ್ನ ಮಗಳೆದುರು ಆ ಕಟ್ಟನ್ನು ಬಿಚ್ಚಿನೋಡಿದ. ಕರಡಿಗೆಯೊಳಗೆ ಮೇರಿಯಸನ ಪ್ರೇಯಸಿಯ ಚಿತ್ರವಿರಬೇಕೆಂಬ ನಂಬಿಕೆಯಿಂದ ಬಿಚ್ಚಿದಾಗ ಅದರಲ್ಲಿ ಒಂದು ಚಿಕ್ಕ ಪತ್ರ ಸಿಕ್ಕಿತು. ಪತ್ರವಾದರೂ ಮೇರಿಯಸನ ಪ್ರೇಯಸಿಯದಿರಬೇಕೆಂದು ಅದನ್ನು ಓದಿದಾಗ ಅದು ತನ್ನ ಅಳಿಯ ಪೋಂಟ್‌ಮರ್ಸಿಯದೆಂದು ತಿಳಿಯಿತು. ಅನಂತರ ಆ ಕಾಗದದ ಕಟ್ಟನ್ನು ಬಿಚ್ಚಿ ನೋಡಿದಾಗ ಅದರಲ್ಲಿ "ಬ್ಯಾರನ್ ಮೇರಿಯಸ್ ಪೋಂಟ್‌ಮರ್ಸಿ" ಎಂದು ಹೆಸರು ಕೆತ್ತಿದ ಕಾರ್ಡುಗಳಿದ್ದುವು.

ಇವನ್ನು ಕಂಡು ಪ್ರಣಯ ಸಂಬಂಧದ ಕುರುಹುಗಳು ಸಿಕ್ಕಲಿಲ್ಲವೆಂದು ತಂದೆ ಮಗಳಿಗೆ ಆಶಾ ಭಂಗವಾಯಿತು. ಆ ಮರುಕ್ಷಣವೇ ಬಲು ಉದ್ವಿಗ್ನರಾಗಿ ಬೆಂಕಿ ಕುಂಟೆಗಳಂತೆ ಉರಿಯತೊಡಗಿದರು. ಮೇರಿಯಸ್ ಸ್ನಾನಮಾಡಿ ಬಂದಾಗ ಇವರಿಬ್ಬರನ್ನೂ ಈ ಸ್ಥಿತಿಯಲ್ಲೇ ಕಂಡ, ಮತ್ತು ತನ್ನ ಕೆಲವು ಗುಟ್ಟುಗಳನ್ನು ಶೋಧಿಸಿರುವರೆಂದೂ ತಿಳಿದುಕೊಂಡ. ಅವನು ಗಿಲೆನಾರ್ಮಂಡನ ಎದುರು ಆಗಲೇ ಬಂದದ್ದು ಬೆಂಕಿಗೆ ಗಾಳಿ ಸಿಕ್ಕಿದಂತಾಯಿತು. ಗಿಲೆನಾರ್ಮಂಡ್ ಕಿಡಿಕಿಡಿಯಾದ. ತನ್ನ ಕೈಯಲ್ಲಿ ಕಾರ್ಡುಗಳನ್ನು ಹಿಡಿದುಕೊಂಡು, ಅವನ್ನು ತೋರಿಸುತ್ತ, "ಬ್ಯಾರನ್ ಮೇರಿಯಸರವರಿಗೆ ನಮಸ್ಕಾರಗಳು. ಇವೆಲ್ಲ ಏನು ?" ಎಂದು ಕೇಳಿದ.

"ನನ್ನ ತಂದೆಯ ಮಗ ನಾನೆಂದರ್ಥ," ಅಂದ ಮೇರಿಯಸ್.

"ನಿನ್ನ ತಂದೆ ನಾನು," ಅಂದ ಗಿಲೆನಾರ್ಮಂಡ್.

"ನನ್ನ ತಂದೆ ಪ್ರಪಂಚದ ಚರಿತ್ರೆಯಲ್ಲಿ ಸರಿಸಾಟಿಯಿಲ್ಲದ ಮಹಾಯುದ್ಧದಲ್ಲಿಯ ಒಬ್ಬ ಮಹಾವೀರ, ಹತ್ತಾರು ಯುದ್ಧಗಳಲ್ಲಿ ಕೋವಿಕತ್ತಿಗಳ ಗಾಯಗೊಂಡಿದ್ದ ದೇಹಧಾರಿ. ಅವನು ಶತ್ರುಗಳ ಎರಡು ಧ್ವಜಗಳನ್ನು ಕಿತ್ತುತೆಗೆದು ಇಪ್ಪತ್ತು ಗುಂಡಿನೇಟು ತಿಂದು ಬದುಕಿ, ವಿನಯ ಸಂಪನ್ನನಾಗಿ, ಜನರ ದೃಷ್ಟಿಗೆ ಬೀಳದೆ, ಅನಾಮಧೇಯನಾಗಿ ಮಣ್ಣಾಗಿರುವನು. ಅವನ ಅಪರಾಧ ಎರಡೇ : ಒಂದು ದೇಶಭಕ್ತಿ ; ಇನ್ನೊಂದು ಪುತ್ರ ಪ್ರೇಮ."

ಈ ಉತ್ತರವನ್ನು ಗಿಲೆನಾರ್ಮಂಡ್ ನಿರೀಕ್ಷಿಸಿರಲಿಲ್ಲ. ಇದನ್ನು ಕೇಳಿ ಕೆಂಪಾಗಿ, ಕೊನೆಗೆ ತನ್ನ ಕೂದಲಿನಷ್ಟೇ ಬಿಳುಪಾದ. ಅನಂತರ ಒಂದು ವಿಧದ ಆರ್ಭಟೆ ಎಂದೆನ್ನಬಹುದಾದಂತೆ ಹೇಳತೊಡಗಿದ, "ವಿಶ್ವಾಸಘಾತಕಾ! ನಿನ್ನಂಥವನ ತಂದೆ ಯಾರೆಂದು ನಾನರಿಯೆನು. ನಾನು ಅವನ ಮುಖ ಸಹ ನೋಡಿರುವುದಿಲ್ಲ. ಅವನ ಆರಾಧ್ಯದೇವತೆಗಳಾದ ದೇಶದ್ರೋಹ, ದರೋಡೆ,

ನರಹತ್ಯಾದಿ ಮಹಾಪಾತಕಗಳನ್ನು ಮಾಡಿರುವ ರಾಬಸ್ಪೀಯರ್, ಬೊನೊಪಾರ್ಟ್ ಮೊದಲಾದ ಅಪಖ್ಯಾತರನ್ನು ಮಾತ್ರ ಬಲ್ಲೆ. ಅಲ್ಲದೆ ನೀನೇ ಹೇಳಿಕೊಳ್ಳುವ ವಾಟರ್ಲೂ ಯುದ್ಧದಲ್ಲಿ ನಿನ್ನ ತಂದೆಪಕ್ಷದವರು ಜೀವದಾಸೆಗಾಗಿ ಇಂಗ್ಲಿಷ್ ಮತ್ತು ಪ್ರಷ್ಯನರಿಂದ ತಪ್ಪಿಸಿಕೊಂಡು ಓಡಿದ ಸಂಗತಿಯನ್ನೂ ಬಲ್ಲೆ. ಆ ವಿಷಯಗಳೆಲ್ಲ ಏನಿದ್ದರೂ ತಮ್ಮಂಥ ಬ್ಯಾರನ್ ಮಹಾಶಯರು ತಮ್ಮ ಸೇವಕನಾದ ನನ್ನನ್ನು ವಂಚಿಸಬಹುದೇ?"

ಈಗ ಮೇರಿಯಸ್ ಧರ್ಮಸಂಕಟಕ್ಕೆ ಒಳಗಾದ. ತನ್ನ ತಂದೆಯನ್ನು ಹಳಿದು ಹೀಯಾಳಿಸಿದವನಿಗೆ ತಕ್ಕ ಉತ್ತರವನ್ನೀಯೋಣವೆಂದರೆ ಎದುರು ಸಿಕ್ಕುವುದು ಖಾಸಾ ಅಜ್ಜ. ಹೀಗಾಗಿ ದಿಕ್ಕು ತೋಚದೆ, ತನ್ನ ಆರಾಧ್ಯ ದೇವತೆಯ ಮೂರ್ತಿಯನ್ನು ಅಪಮಾನಪಡಿಸಿದ, ಭ್ರಷ್ಟಗೈದ ಪರಿಸ್ಥಿತಿಯನ್ನು ಸಹಿಸಿ ಸುಮ್ಮನಿರಬೇಕಾದ ಪ್ರಸಂಗವನ್ನು ಅರೆಕ್ಷಣ ಗ್ರಹಿಸಿ, ಕೊನೆಗೆ ಒಂದು ಮಧ್ಯದಾರಿ ಹಿಡಿದು, "ಬರ್ಬೂನ್ ಕುಲವೇ ನಾಶವಾಗಲಿ, ಹದಿನೆಂಟನೆಯ ಲೂಯಿ ಹಂದಿ ಹತವಾಗಲಿ," ಎಂದು ಉದ್ಗಾರವೆತ್ತಿದ. ಲೂಯಿಸ್ ದೊರೆ ಮಾತ್ರ ಸತ್ತು ನಾಲ್ಕು ವರ್ಷ ಕಳೆದಿತ್ತು. ಗಿಲೆ ನಾರ್ಮಂಡನಿಗೆ ಈ ಘೋಷಣೆ ಬಲು ಅಸಹನೀಯವಾಯಿತು. ಅವನು ಮುಖದಲ್ಲಿ ಕಿಡಿಕಾರುತ್ತ, "ಮೇರಿಯಸನಂಥ ಬ್ಯಾರನ್ ಮಹಾಶಯರೂ ನನ್ನಂಥ ನರಕುರಿಯೂ ಒಂದೇ ಮಾಡಿನಡಿಯಲ್ಲಿ ಇರಲಾಗದು. ತಾವು ಈ ಕ್ಷಣ ಇಲ್ಲಿಂದ ತೊಲಗತಕ್ಕದ್ದು," ಎಂದು ಒಂದು ವಿಧದ ಉನ್ಮತ್ತತೆಯಿಂದ ಅರಚಿದ.

ಮೇರಿಯಸ್ ಮರುಮಾತಾಡಲಿಲ್ಲ. ತನ್ನ ಕೈಚೀಲ, ಕೆಲವು ದುಸ್ತು, ಗಡಿಯಾರ, ಮತ್ತು ಮೂವತ್ತು ಫ್ರ್ಯಾಂಕ್ ಹಣ ಮಾತ್ರ ಹಿಡಿದುಕೊಂಡು, ಕೂಡಲೇ ಆ ಮನೆಬಿಟ್ಟು, ಗಂಟೆಗೆ ಇಂತಿಷ್ಟೆಂಬ ದರದಲ್ಲಿ ಬಾಡಿಗೆ ನಿಶ್ಚೈಸಿಕೊಂಡು, ಒಂದು ಬಂಡಿ ಏರಿ, ಪ್ಯಾರಿಸಿನ ದಕ್ಷಿಣ ದಿಕ್ಕಿಗೆ ಹೋಗಲು ಬಂಡಿಯವನಿಗೆ ಆಜ್ಞೆಯಿತ್ತು, ಅಲ್ಲಿಂದ ಹೊರಟೇ ಹೋದ.

ನಾಲ್ಕನೆಯ ಸಂಪುಟ

೧. ಚರಿತ್ರಾರ್ಹ ಕಾರ್ಯವೆಸಗಿದ ಚಿಕ್ಕ ಪಂಗಡ

ಆ ದಿನಗಳಂದು ಜನರಲ್ಲಿ ಶಾಂತಿ, ಸಮಾಧಾನವಿರಲಿಲ್ಲ. ಸ್ಥಿರ ಗುರಿಯಿರಲಿಲ್ಲ. ಏನಾದರೊಂದು ವಿಧದ ದಂಗೆ ಎಂದೂ, ಎಲ್ಲೂ ಏಳಬಹುದೆಂದು ಜನ ಹೆದರುತ್ತಿದ್ದರು. '೮೯ ಮತ್ತು '೯೨ರ ಕ್ರಾಂತಿಗಳ ಗರ್ಭದಿಂದ ಹೊರಟಿದ್ದ ಗುಡುಗುಮಿಂಚು ಒಂದು ವಿಧದ ಕಂಪನವಾಗಿ ಜನರ ಕಾರ್ಯಗಳಲ್ಲಿ ತೋರಿ ಬರುತ್ತಿದ್ದುವು. ಇಂಥ ವೇಳೆ ತಮ್ಮ ಜೀವನದ ಹೆಬ್ಬಾಗಿಲಲ್ಲಿ ನಿಂತು ಮುಂದೆ ನೋಡತಕ್ಕ ಯುವಕರು ಯಾವುದಾದರೊಂದು ಎರಕದಲ್ಲಿ ರೂಪುಗೊಳ್ಳುವ ಮೃದುಸ್ಥಿತಿಯಲ್ಲಿದ್ದರು. ಅಲ್ಲಲ್ಲಿ ಸಂಘ, ಸಂಸ್ಥೆಗಳು ಬಹಿರಂಗ ಮತ್ತು ಅಂತರಂಗದ ಉದ್ದೇಶಗಳನ್ನಿಟ್ಟುಕೊಂಡು ಸಂಘಟಿತವಾಗತೊಡಗಿದ್ದುವು.

ಈ ಕ್ರಮದಿಂದ, ಅಂತರಂಗ ಮತ್ತು ಬಹಿರಂಗದ ಬೇರೆಬೇರೆ ಉದ್ದೇಶಗಳಿದ್ದ ಎಬಿಸಿ ಎಂಬುದೊಂದು ಯುವಕರ ಸಂಘ ಪ್ಯಾರಿಸಿನಲ್ಲಿ ಸಂಘಟಿತವಾಗಿತ್ತು. ಎಬಿಸಿ ಅಂದರೆ ಅಕ್ಷರಾಭ್ಯಾಸದ ಪ್ರಾರಂಭವೆಂದು ಎಲ್ಲರಿಗೂ ಗೊತ್ತಿರುವಂತೆ, ಇದರ ಬಹಿರಂಗ ಉದ್ದೇಶ ಮಕ್ಕಳ ವಿದ್ಯಾಪ್ರಸಾರ ಮಾತ್ರವಾಗಿತ್ತು. ಆದರೆ, ಎಬಿಸಿಯನ್ನು 'ಎಬೆಸಿ' (abaisses) ಎಂದು ಉಚ್ಚರಿಸಿದಾಗ ಆ ಶಬ್ದದ ಅರ್ಥ 'ದಲಿತ' ಎಂದಾಗುತ್ತಿತ್ತು. ಈ ಸಂಘದ ಅಂತರಂಗದ(ಅಂದರೆ ಮುಖ್ಯ)

ಉದ್ದೇಶ ದಲಿತವರ್ಗದ ಉತ್ಥಾನ ಮಾತ್ರವಾಗಿದ್ದು, ಇಂದೊಂದು ರಾಜಕೀಯ, ಚರಿತ್ರಾರ್ಹ ಸಂಘವೇ ಆಗಿತ್ತು.

ಈ ಸಂಘ 'ಕೆಫೆ ಮುಸೈನ್' ಹೊಟೇಲಿನ ಹಿಂಭಾಗದ ಒಂದು ವಿಶಾಲ ಕೊಠಡಿಯಲ್ಲಿ, ಹೆಚ್ಚಾಗಿ ಸಂಜೆ ವೇಳೆ ಸಭೆ ಸೇರುತ್ತಿತ್ತು. ಸಂಘದ ನಾಲ್ಕಾರು ಮುಖ್ಯ ಸದಸ್ಯರ ಪರಿಚಯವನ್ನಿಲ್ಲಿ ಮಾಡಿಕೊಟ್ಟರೆ ಇದರ ಸದಸ್ಯತ್ವ ಎಂಥೆಂಥವರಲ್ಲಿ ಹಂಚಿಹೋಗಿತ್ತೆಂದು ಗೊತ್ತಾಗುವುದು. ಮುಖ್ಯವಾಗಿ ಕಾರ್ಮಿಕರು, ಬಡವರು—ಕೆಲವೊಮ್ಮೆ ಮಾತ್ರ ಶ್ರೀಮಂತರೂ—ಇದರ ಸದಸ್ಯರಾಗಿದ್ದರು.

ಎಂಜೊಲ್ರಾಸ್ ಎಂಬವನೊಬ್ಬ ಶ್ರೀಮಂತ ಪಿತನ ಏಕ ಮಾತ್ರ ಪುತ್ರ. ಬಲು ಸುಂದರ. ಆದರೆ ಆ ಸೌಂದರ್ಯದ ಗರ್ಭದಲ್ಲಿ ಕಠೋರತೆ ಅಡಗಿರುತ್ತಿತ್ತು. ಶೃಂಗಾರ, ಸಂಗೀತ, ನೃತ್ಯಗಳೆಲ್ಲ ಅವನಿಗೆ ಅಪ್ರಿಯ. ಒಂದು ವೇಳೆ ಅವು ಬೇಕೆಂದು ಆದಾಗಲೂ ತನ್ನ ಧರ್ಮ ಸಮರ್ಥನೆಗೆ ಸಹಾಯಕವಾಗುವಷ್ಟು ಮಾತ್ರ ಉಪಯೋಗಿಸಲು ತಯಾರಿದ್ದ. ನ್ಯಾಯ ಮತ್ತು ಸ್ವಾತಂತ್ರ್ಯಗಳನ್ನು ಮಾತ್ರ ಆರಾಧಿಸುತ್ತಿದ್ದ. ಅವುಗಳ ಸುಂದರ ಪ್ರತಿಮೆಯೇ ಅವನಾಗಿದ್ದ. ಹೂಗಳೆಡೆಯಲ್ಲಿ ಧರ್ಮದ ಖಡ್ಗ ಅಡಗಿರಬಹುದಾದಂತೆ ಅವನ ಸೌಂದರ್ಯದ ಮರೆಯಲ್ಲಿ ಶಿಲಾಸದೃಶ ಧರ್ಮನಿಷ್ಠೆ ಅಡಗಿತ್ತು. ಅವನು ಮುಖ್ಯ ಸದಸ್ಯ. ಕೋಂಬೆಫೆರ್ ಮತ್ತೊಬ್ಬ ಸದಸ್ಯ, ಇವನು ಎಂಜೊಲ್ರಾಸನ ತತ್ತ್ವನಿರ್ದೇಶಕ. ಎಂಜೊಲ್ರಾಸ್ ತತ್ತ್ವನಿಪುಣನಾದರೆ ಆ ತತ್ತ್ವದ ಸಮಸ್ತ ಸಾರವನ್ನು ಸಂಘಕ್ಕೆ ಬೇಕಾದಂತೆ, ಪ್ರಯೋಜನ ಬೀಳುವಂತೆ, ತಿಳಿಸಬಲ್ಲವ ಕೋಂಬೆಫೆರ್. ಅವನು 'ಕ್ರಾಂತಿ' ಎಂಬ ಶಬ್ದ ಹೇಳಿದರೆ, ಇವನು ಅದನ್ನೇ 'ಸಂಸಾರ' ಎಂದು ಹೇಳುತ್ತ, ಅದಕ್ಕೆ ತಕ್ಕಂಥ ಕ್ರಿಯಾಮಾರ್ಗ ನಿರ್ಮಿಸಿಕೊಡಬಲ್ಲವ. ಎಂಜೊಲ್ರಾಸನ ಕ್ರಿಯೆಗಳ ಅಂತ್ಯ ಯುದ್ಧವಾದರೆ ಕೋಂಬೆಫೆರನದು ಶಾಂತಿ. ಜೀನ್ ಪ್ರೊವಾಯರ್ ಒಬ್ಬ ವಿನಯಸಂಪನ್ನ ಸೌಮ್ಯ ಮೂರ್ತಿ. ಪ್ರೇಮಮಯ ವ್ಯಕ್ತಿ. ಕವಿತೆ, ಕೊಳಲು, ಹೂಗಳನ್ನು ಪ್ರೀತಿಸುವಾತ. ಸ್ತ್ರೀ, ಬಾಲಕ, ಅನಾಥರ ಕುರಿತು ಮೃದು ಹೃದಯಿ. ಫ್ಯೂಯಿಲಿ ಒಬ್ಬ ಕಾರ್ಮಿಕಸದಸ್ಯ. ಸ್ವಪ್ರಯತ್ನದಿಂದ ಓದು ಬರಹ ಕಲಿತವ. ತನ್ನ ಶಕ್ತಿಯ ಇತಿಮಿತಿಯನ್ನರಿಯದೆ ಪ್ರಪಂಚದ ಬಡವರನ್ನೆಲ್ಲ ಉದ್ಧರಿಸಬೇಕೆಂದು ಹೃತ್ಪೂರ್ವಕ ತವಕ ಪಡುವಾತ. ಕೋರ್‌ಫರೇಕ್ ಎಂಬವನೊಬ್ಬ ಶ್ರೀಮಂತ ಸದಸ್ಯ. ಶ್ರೀಮಂತರ ದಿವಾನ್‌ಖಾನೆಯ ಅಲಂಕಾರಕ್ಕೆ ಇದ್ದ ಬೆಕ್ಕು ಈ ಸಂಘಕ್ಕೆ ಸೇರಿ ಹೆಬ್ಬುಲಿಯಾದವ. ಬಾಹ್ರೆಲ್ ದುಂದುಗಾರ, ಉದಾರಿ, ವಾಚಾಳಿ, ಪ್ರಾಮಾಣಿಕ, ಧೈರ್ಯಸ್ಥ, ಜಗಳಗಂಟ—ಅರ್ಥಾತ್, ಸಜ್ಜನರ ಕೈಯಲ್ಲಿದ್ದರೆ ಸತ್ಕಾರ್ಯವನ್ನು ಮಹತ್ತಾದ ಪರಿಮಾಣದಿಂದ ಮಾಡಬಲ್ಲವ, ಜೊತೆಯಲ್ಲಿಯೇ, ದುರ್ಜನರ ಸಹವಾಸದಲ್ಲಿದ್ದರೆ ಮಾರಣಕಾರಿ, ರಾಕ್ಷಸ. ಬೋಳು ತಲೆಯವನಾದರೂ ಯುವಕನಾಗಿರುವ ಲೆಗ್ಲೆ ಅತಿ ಸೂಕ್ಷ್ಮಬುದ್ಧಿಯವ. ಯಾರಿಗೂ ಕಾಣದುದನ್ನು ಕಾಣಬಲ್ಲವ. ಆಪತ್ಕಾಲದಲ್ಲಿ ಸ್ಥೈರ್ಯವಿರುವಂಥವ. ಜೋಲಿ ವೈದ್ಯಶಾಸ್ತ್ರಾಭ್ಯಾಸಿಯಾದ ವಿದ್ಯಾರ್ಥಿ, ರೋಗಿಯೂ ವೈದ್ಯನೂ ತಾನೇ ಆಗಿ ವೈದ್ಯಶಾಸ್ತ್ರ ಪರಿಶೋಧನೆ ಗೈಯುತ್ತಿದ್ದ ಸಾಹಸಿ. ಇಪ್ಪತ್ತಮೂರನೇ ವರ್ಷದಲ್ಲೇ ಎಪ್ಪತ್ತಮೂರರವರ ಸಹನಾಶಕ್ತಿ ಇವನಿಗಿತ್ತು. ಇನ್ನು ಪರಿಚಯ ಮಾಡಿಕೊಡಬೇಕಾದುದು ಗ್ರೇಂಟ್ಟೆಯರ್ ಒಬ್ಬನನ್ನು ಮಾತ್ರ. ಇವನು ಪರಮ ನಿರಾಶಾವಾದಿ. ದೊಡ್ಡದು ಸಣ್ಣದನ್ನು ಆಕರ್ಷಿಸುವ ನ್ಯಾಯದಿಂದಲೂ ತನ್ನಲ್ಲಿ ಲೋಪವಾಗಿರುವುದರ ಭರ್ತಿಗಾಗಿ ಇದ್ದವರಲ್ಲಿ ಸೇರುವ ವಾಡಿಕೆಯಿಂದಲೂ ಇವನು ಆ ಆಶಾವಾದಿ ಯುವಕರನ್ನು ತನ್ನ ಸ್ನೇಹಿತರೆಂದು ಪರಿಗಣಿಸಿ ಈ ಸಂಘಕ್ಕೆ ಸೇರಿದ್ದ. ಎಂಜೊಲ್ರಾಸನಲ್ಲಿ ಈತ ತನ್ನಲ್ಲಿಲ್ಲದಿದ್ದ ಎಲ್ಲ

ಗುಣಗಳನ್ನೂ ಕಂಡು ಅವನ ಅಂಧಾನುಯಾಯಿಯಾಗಿದ್ದ.

ಸುಪ್ತವಾಗಿದ್ದ ಕ್ರಾಂತಿಯನ್ನು ಚೇತನಗೊಳಿಸುವ ನಾನಾಶಕ್ತಿಗಳಾಗಿ ಈ ಜನರು ತಮ್ಮ ಸಂಘವನ್ನು ನಿರ್ಮಿಸಿಕೊಂಡಿದ್ದರು.

೨. ಮರಣಸಂತಾಪ

ಒಂದು ಸಂಜೆ ಲೆಗ್ಲೆ, ಕೆಫೆ ಮುಸ್ಸೆನ್ ಹೊಟೇಲಿನ ಜಗಲಿ ಕಂಬಕ್ಕೊರಗಿ ನಿಂತುಕೊಂಡು, ಮಾರ್ಗ ನೋಡುತ್ತ ಲಾ ಕಾಲೇಜಿನಲ್ಲಿ ತನಗೆ ಒದಗಿದ್ದ ಅಪಮಾನ ಪ್ರಸಂಗದ ಕುರಿತು ಆಲೋಚಿಸುತ್ತಿದ್ದಾಗಲೇ, ಅಜ್ಜನ ಮನೆಯಿಂದ ಹೊರಟಿದ್ದ ಮೇರಿಯಸ್ ಬಂಡಿಯಲ್ಲಿ ಕುಳಿತು ಅವನ ಎದುರಾಗಿಯೇ ಬರುತ್ತಿದ್ದ. ಇವರಿಬ್ಬರಿಗೂ ಪರಿಚಯವಿತ್ತಿಲ್ಲವಾದರೂ ಮೇರಿಯಸನ ಕೈ ಚೀಲದ ಮೇಲೆ ದಪ್ಪ ಅಕ್ಷರಗಳಿಂದ ಬರೆದಿದ್ದ 'ಮೇರಿಯಸ್ ಪೋಂಟ್‌ಮರ್ಸಿ' ಎಂಬ ಹೆಸರನ್ನು ಕಂಡು ಚಕಿತನಾದ. ಈ ಎಬಿಸಿ ಯುವಕರು ಸದಾ ಚುರುಕಾಗಿದ್ದು, ತಮ್ಮ ಸಮಪ್ರಾಯದವರನ್ನು ಬಲು ಬೇಗ ಪರಿಚಯಮಾಡಿಕೊಳ್ಳುವವರಿದ್ದುದರಿಂದ, ಅಲ್ಲದೆ, ಮತ್ತೂ ಒಂದು ಕಾರಣದಿಂದ, ಮೇರಿಯಸನನ್ನು ನೋಡಿ, ಲೆಗ್ಲೆ ಹೇಳಿದ, "ಹಲೋ, ನೀವು ಮೇರಿಯಸ್ ಪೋಂಟ್‌ಮರ್ಸಿಯಲ್ಲವೆ ?"

"ನನ್ನ ಪರಿಚಯ ನಿಮಗೆಲ್ಲಿ ಆದದ್ದು," ಎಂದು ಮೇರಿಯಸ್ ಕೇಳಿದ.

"ಮೊನ್ನೆ ನಿಮ್ಮ ಹಾಜರಿ ಕರೆಯುವಾಗ ನೀವಿರಲಿಲ್ಲ, ಅಲ್ಲವೇ?"

"ನೀವು ಲಾ ಕಾಲೇಜು ವಿದ್ಯಾರ್ಥಿಯೇನು?"

"ಅಲ್ಲದಿದ್ದರೆ ನಿಮ್ಮ ಗೈರುಹಾಜರಿ ಕುರಿತು ಮಾತಾಡುತ್ತಿದ್ದೆನೇನು?"

"ಹಾಗಾದರೆ ಮತ್ತೇನಾಯ್ತು, ನಾನು ಹಾಜರಿ ಇರಲಿಲ್ಲ, ನಿಜ?"

"ಮೂರು ಸರ್ತಿ ಹೆಸರು ಕರೆದಾಗಲೂ ಉತ್ತರ ಬರದಿದ್ದವನ ಹೆಸರೂ, ಅರುವತ್ತು ಫ್ರ್ಯಾಂಕೂ ಹೋಗುತ್ತವೆ, ಗೊತ್ತಿದೆಯೇ ?"

"ಗೊತ್ತಿದೆ, ಹಾಗಾದರೆ ನನ್ನ ಹೆಸರನ್ನು ಪಟ್ಟಿಯಿಂದ ತೆಗೆದರೇನು?"

"ತೆಗೆಯೋದಕ್ಕೆ ನಾನು ಬಿಡುವವನೋ? ನಿಮ್ಮ ಗುರುತು ಇಲ್ಲದಿದ್ದರೂ ನೀವೊಬ್ಬ ಗಟ್ಟಿಕುಳ ಇರಬೇಕು, ಸೂಳೇ ಹತ್ರ ಹೋಗಿರಬಹುದೂಂತ ಗ್ರಹಿಸಿ, ನಿಮ್ಮ ಬಚಾವಿಗಾಗಿ, ನಿಮ್ಮ ಹೆಸರನ್ನು ಮೂರನೆ ಸರ್ತಿ ಕರೆಯುವಾಗ, 'ಹಾಜರು' ಅಂದೆ."

"ಪುಣ್ಯಾತ್ಮ! ನೀವು ನನ್ನನ್ನು ಉಳಿಸಿದಿರಲ್ಲವೇ?"

"ನಿಮ್ಮನ್ನು ಉಳಿಸಿ ನನ್ನ ಹೆಸರು ಕಳೆದುಕೊಂಡೆ. ಹಾಜರಿ ಕರೆಯುವ ಬ್ಲೊಂಡೆ ಬಡ್ಡೀಮಗನ ಎದುರೇ ನಾನು ಈ ಮೋಸಮಾಡಿದ್ದು ನೋಡಿ, ನನ್ನ ಹೆಸರನ್ನು ತೆಗೆಸಿಬಿಟ್ಟ, ಬ್ಲೊಂಡೆ."

"ನನ್ನ ದೆಸೆಯಿಂದ ನಿಮಗೆ ಅನ್ಯಾಯವಾಯಿತಲ್ಲವೆ?" ಎಂದು ಮೇರಿಯಸ್ ತನ್ನ ಬೇಸರ ಸೂಚಿಸಿದ.

"ಅದಕ್ಕೇನೂ ಬೇಜಾರಿಲ್ಲ. ನನ್ನನ್ನೇನು ತೆಗೀತಾರೆ! ನನ್ನನ್ನು ತೆಗೆಯುವುದಿಲ್ಲ. ಆ ಬ್ಲೊಂಡೆ ಸತ್ತ, ಅಷ್ಟೆ. ನನ್ನ ಪಾಲಿಗೆ ಅವನು ಸತ್ತಿದ್ದಾನೆ. ಇನ್ನು ಮರಣಸಂತಾಪಸೂಚನೆ ಮಾತ್ರ ಬಾಕಿಯಿದೆ. ಆ ವಿಷಯ ಹಾಗಿರಲಿ, ನಿಮ್ಮ ಮನೆ ಎಲ್ಲಿ?"

"ಈಗ ಈ ಬಂಡಿ."

"ಆಗಿರಬಹುದು—ಅದು ಮತ್ತೆ ಕರೆದುಕೊಂಡುಹೋಗಿ ಎರಡಂತಸ್ತಿನ ಮಹಡಿ ಮನೆಗೆ ಬಿಡುವುದು ತಾನೆ?"

"ಇಲ್ಲ. ಈ ಬಂಡಿ ಬಿಟ್ಟರೆ ಇಳಿದಲ್ಲೇ ಮನೆ !"

ಈ ಮಾತುಗಳನ್ನೆಲ್ಲ ಕೂಲಂಕಷವಾಗಿ ಹೊಟೇಲ್ ಒಳಗೆ ನಿಂತಿದ್ದ ಕೋರ್‌ಫರೇಕ್ ಕೇಳುತ್ತಿದ್ದ. ಅವನು ಹೊರಗೆ ಬಂದು ತಮಾಷೆ ಮಾತಾಡುತ್ತ, ಮೇರಿಯಸನನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಮೇರಿಯಸನಿಗೆ ಕೋಣೆ ಬೇಕಾಗಿದೆಯೆಂದು ತಿಳಿದ ಮೇಲೆ, ಅವನ ಮನೆಯ ಸಮೀಪದಲ್ಲೇ ಒಂದು ಬಾಡಿಗೆ ಕೋಣೆ ತೆಗೆಸಿಕೊಟ್ಟ.

೩. ಮೇರಿಯಸ್ ಚಕಿತನಾದ

ಕೋರ್‌ಫರೇಕ್ ಮೇರಿಯಸನ ಸ್ಥಿತಿಗತಿಗಳನ್ನೇನೂ ವಿಚಾರಿಸಲಿಲ್ಲ. ಆದರೂ ಅವರಿಬ್ಬರೂ ಸ್ನೇಹಿತರಾಗಿಬಿಟ್ಟರು. ಯೌವನ ಕಾಲದಲ್ಲಿ ಹೃದಯಗಳು ಮಿಳಿತವಾಗುವುದು ಬಲು ಸುಲಭವಷ್ಟೆ! ಆಗ ಮುಖವೇ ಮಾತಾಡುತ್ತದೆ. ಕಂಡ ವಿಷಯವೇ ಕೇಳಿದ್ದೂ ಆಗುತ್ತದೆ. ಒಂದು ದಿನ ಕೋರ್‌ಫರೇಕ್ ಇವನನ್ನು ಕೇಳಿದ, "ನಿನ್ನ ರಾಜಕೀಯಾಭಿಪ್ರಾಯವೇನಾದರೂ ಇದೆಯೇ?"

"ಇರದೆ ಇರುವುದೇ?" ಮೇರಿಯಸ್ ನುಡಿದ.

"ನೀನು ಯಾವ ಪಕ್ಷ?"

"ಬೊನೋಪಾರ್ಟ್-ಪ್ರಜಾಪಕ್ಷದವ."

ಮರುದಿನ ಸಂಜೆ ಕೋರ್‌ಫರೇಕ್ ಮೇರಿಯಸನನ್ನು ಎಬಿಸಿ ಸಂಘಕ್ಕೆ ಕರೆದುಕೊಂಡು ಹೋದ. ಅಲ್ಲಿ ಸಂಘದ ಸದಸ್ಯರನ್ನೆಲ್ಲ ಪರಿಚಯಿಸಿಕೊಟ್ಟ. ಆ ಸಭೆಯಲ್ಲಿ ಹೆಂಗುಸರಾಗಲೀ ಸದಸ್ಯರಲ್ಲದವರಾಗಲೀ ಯಾರೂ ಇರಲಿಲ್ಲ. ಸದಸ್ಯರು ರಾಜಕೀಯ ವಿಷಯಗಳನ್ನು ಯಾವ ನಿರ್ಬಂಧವೂ ಇಲ್ಲದೆ, ಹೆದರದೆ, ನಿರ್ದಾಕ್ಷಿಣ್ಯವಾಗಿ, ಮರೆಮಾಚದೆ ಮಾತಾಡುತ್ತಿದ್ದರು. ವ್ಯಕ್ತಿ ವಿಷಯಗಳನ್ನು ಹೊಗಳಲು, ತೆಗಳಲು ಅಥವಾ ಟೀಕಿಸಲು ಅವರು ಅಂಜುತ್ತಿರಲಿಲ್ಲ. ಮೇರಿಯಸನ ಪಕ್ಷವನ್ನೂ ಒರಟಾಗಿ ಟೀಕಿಸುತ್ತಿದ್ದರು. ಒಂದು ಕಾಲದಲ್ಲಿ ಕ್ರಾಂತಿ ಎಂದು ಹೆಸರುಗೊಂಡಿದ್ದುದು, ಈಗ ಹಳತಾಗಿ ತೋರಿ, ಅಪೂರ್ಣಕ್ರಾಂತಿ ಅಥವಾ ಕೇವಲ ಗತ ಚರಿತ್ರೆ ಮಾತ್ರ ಆಗಿದೆ ಎಂಬವರೆಗೂ ಮಾತಾಡುತ್ತಿದ್ದರು. ಚಕ್ರವರ್ತಿ ಬೊನೊಪಾರ್ಟನ ಹೆಸರನ್ನು ಕೂಡ ಇವರು ಸಾಕಷ್ಟು ಗೌರವದಿಂದ ಪ್ರಸ್ತಾವಿಸುತ್ತಿರಲಿಲ್ಲ.

ಉಪ್ಪರಿಗೆಯ ಕೋಣೆಯೊಂದರಲ್ಲಿ ಕಪಾಟು, ಕುರ್ಚಿ, ಮೇಜುಗಳನ್ನು ಒರಟಾಗಿ ಎಳೆದು ಹೊಸ ವ್ಯವಸ್ಥೆ ತರುವಾಗ ಕೆಳಗಿದ್ದವರಿಗೆ ಆಗುವಂತೆ ಮೇರಿಯಸನ ತಲೆಯೊಳಗಣ ಹಳೆ ಅಭಿಪ್ರಾಯಗಳೆಲ್ಲ ಒರಟಾಗಿ ಅಲುಗಾಡಿಸಲ್ಪಟ್ಟವು. ಈ ಸಂಘದ ಅಭಿಪ್ರಾಯಗಳನ್ನು ತಿಳಿದು ಇವನಿಗೆ ಬಹಳ ಆಶ್ಚರ್ಯವಾಯಿತು.

೪. ಕೆಫೆ ಮುಸ್ಯೆನಿನ ಹಿಂಬದಿ ಕೊಠಡಿಯಲ್ಲಿ

ಪುನಃ ಒಂದು ದಿನ ಮೇರಿಯಸ್ ಕೆಫೆ ಮುಸ್ಯೆನ್ ಹೊಟೇಲಿನಲ್ಲಿ ಜರಗುತ್ತಿದ್ದ ಎಬಿಸಿ ಸಭೆಗೆ ಹೋದ. ಸದಸ್ಯರುಗಳೆಲ್ಲ ಪಂಗಡಗಳಾಗಿ ಅಲ್ಲಲ್ಲಿ ಕುಳಿತು ಮನಸ್ಸಿಗೆ ಮಾತಾಡುತ್ತಿದ್ದರು. ಗ್ರ್ಯಾಂಟೈಯರ್ ಹೆಂಡ ಕುಡಿದು ಮತ್ತನಾಗಿ ಮಾನವಜನ್ಮವೇ ವಂಚನೆಯೆಂದು ತರ್ಕದಿಂದ

ಸಾಧಿಸಲು ಪ್ರಯತ್ನಿಸುತ್ತಿದ್ದ. ಬತ್ತಲೆ ಹುಟ್ಟಿದವನಿಗೆ ದುಸ್ತು ಹಾಕುವುದರಲ್ಲೇ ವಂಚನೆ ಪ್ರಾರಂಭವಾಗಿ, ಜೀವಮಾನದಲ್ಲೆಲ್ಲ ವಸ್ತುಸ್ಥಿತಿಯನ್ನು ಇಲ್ಲದಿದ್ದಂತೆ ತೋರಿಸುವ ಹೇಳುವ ನಟಿಸುವ ಪ್ರಯತ್ನ ನಡೆಯುತ್ತದೆಂದು ಅವನು ವಿವರಿಸುತ್ತಿದ್ದ. ಕೆಲವರು ಹೆಂಗಳೆಯರ ಬಗ್ಗೆ ಅಶ್ಲೀಲ ಮಾತಾಡುತ್ತಿದ್ದರು.

ತೀರ್ವೆಯ ಕ್ರಮದಲ್ಲಿ ಲೆಗ್ಲೆ ತಪ್ಪು ತೋರಿಸಿ ಕೊಡುತ್ತಿದ್ದ. ಮತ್ತಿಬ್ಬರು ಮತ ತತ್ತ್ವಗಳ ಬಗ್ಗೆ ಚರ್ಚಿಸುತ್ತಿದ್ದರು. ಫ್ರಾನ್ಸಿನ ರಾಜರು ಯಾರು ಯಾರು ಎಷ್ಟೆಷ್ಟು ರಾಷ್ಟ್ರೀಯ ಸಾಲಗಳ ನ್ನೆತ್ತಿ ಸ್ವಂತಕ್ಕೆ ಉಪಯೋಗಿಸಿದರೆಂದು ಕೋಂಬೆಫೆರ್ ವಿವರಿಸುತ್ತಿದ್ದ, ಮತ್ತು ಈ ಕಾರಣದಿಂದ ರಾಜರೇ ಅನಗತ್ಯವೆಂದು ಪ್ರತಿಪಾದಿಸುತ್ತಿದ್ದ. ಕೊನೆಗೆ ಅವನ ಉತ್ಸಾಹ ಏರುತ್ತ, ಫ್ರಾನ್ಸಿನ ರಾಜರಿಂದ ದೊರಕಿದ್ದ ರಾಜಕೀಯ ಸುಧಾರಣೆಗಳ ಕೈಬರಹದ ಪ್ರತಿಯೊಂದನ್ನು ಅವೆಲ್ಲ ವಂಚನೆಗಳೆಂದು ಬೆಂಕಿಗೆ ಎಸೆದ. ಹಾಗೆ ಬೆಂಕಿಗೆ ಹಾಕಿ ಅದು ಉರಿಯುತ್ತಿದ್ದುದನ್ನು ತೋರಿಸುತ್ತ, "ಸುಧಾರಣೆಗಳೇ ಜನಜಾಗೃತಿಯ ಬೆಳಕಾಗಿ ಪರಿಣಮಿಸುವ ಕ್ರಮವೇ ಅದು," ಎಂದು ಹೇಳಿದ. ಅದು ನಿಜವೆಂದು ಅಲ್ಲಿದ್ದವರೆಲ್ಲರೂ ಘೋಷಿಸಿದರು. ಆ ಕೊಠಡಿಯಲ್ಲಿ ಹಾಸ್ಯ, ಚರ್ಚೆ, ಉದ್ಗಾರಗಳ ಗಲಭೆ ತುಂಬಿಹೋಗಿತ್ತು.

೫. ದೃಷ್ಟಿಕೋನವಿಸ್ತರಣ

ಯುವಕರ ಚೈತನ್ಯ ಯಾವ ಹೊತ್ತಿಗೆ, ಯಾವ ದಿಕ್ಕಿಗೆ, ಹೇಗೆ, ಹೊರಹೊಮ್ಮುತ್ತದೆಂದು ಊಹಿಸುವುದು ಕಷ್ಟ. ಒಂದು ಕ್ಷಣ ಅದು ಸಂತೋಷ ಶಿಖರದಲ್ಲಿ ಹಾರಾಡುತ್ತಿರಬಹುದು, ಮರುಗಳಿಗೆ ಗಹನ ಕಾರ್ಯಗಳಲ್ಲಿ ಗಂಭೀರ ಕ್ರಮದಿಂದ ಆಸಕ್ತವಾಗಿರಲೂಬಹುದು. ಒಮ್ಮೆ ಇಂಥ ಪ್ರಸಂಗ ನಡೆಯಿತು. ಲೆಗ್ಲೆಯೂ ಕೋರ್‌ಫರೇಕನೂ ಜೂನ್ ೧೮, ೧೮೧೫ ದಿನಾಂಕದ ಬಗ್ಗೆ ಹರಟುತ್ತಿದ್ದರು. ವಾಟರ್ಲೂ ಯುದ್ಧದಲ್ಲಿ ಫ್ರೆಂಚರಿಗಾದ ಅಪಜಯದ ಕುರಿತು ದುಃಖಿಸುತ್ತ ಅಪಮಾನದಿಂದ ರೋಷಗೊಂಡರು. ಈ ದುಃಖ ರೋಷಗಳ ಭರದಲ್ಲಿ ಇವೆಲ್ಲದಕ್ಕೂ ನೆಪೋಲಿಯನ್ನನೇ ಸ್ವಲ್ಪ ಕಾರಣನೆಂದೂ ಹೇಳಿದರು. ಕೊನೆಗೆ ನೆಪೋಲಿಯನ್ನನನ್ನು ತಿದ್ದುವ ಕ್ರಮದಿಂದಲೂ ಕೆಲವು ಮಾತಾಡುತ್ತ ಆಗಿಹೋಗಿರುವ ಅಪಮಾನವನ್ನು ನವಸ್ಫೂರ್ತಿಯ ಪ್ರೇರಕವಾಗಿ ಪರಿವರ್ತಿಸುವ ಮುಂದಾಳುತನ ತಮಗಿದೆಯೆಂದು ಮಾತಾಡಿದರು.

ಚಕ್ರವರ್ತಿ ನೆಪೋಲಿಯನ್ನನ ಕುರಿತು ಹಗುರ ಮಾತು ಆಡಿದ್ದು ಮೇರಿಯಸ್‌ನಿಗೆ ಬಹಳ ಅಸಹನೀಯವಾಯಿತು. ಅವನು ಅಲ್ಲೇ ಗೋಡೆಯಲ್ಲಿ ತೂಗಾಡಿಸಲಾಗಿದ್ದ ಫ್ರಾನ್ಸಿನ ಭೂಪಟದ ಕರೆಯಲ್ಲಿ ಪ್ರತ್ಯೇಕ ಚಿತ್ರಿಸಿದ್ದ ಕೋರ್ಸಿಕ ದ್ವೀಪದ ಮೇಲೆ ತನ್ನ ಬೆರಳನ್ನಿಟ್ಟು ತೋರಿಸುತ್ತ ಉಕ್ಕಿಬರುತ್ತಿದ್ದ ಉದ್ವೇಗವನ್ನು ಅಡಗಿಸಿಕೊಂಡು, "ಈ ಪುಟ್ಟ ದ್ವೀಪ ಫ್ರಾನ್ಸಿನ ಕೀರ್ತಿಯನ್ನು ಮಹತ್ತ್ವದ್ದಾಗಿ ಮಾಡಿದೆಯೆಂದು ಗೊತ್ತಿದೆಯೇ?" ಎಂದು ಕೇಳಿದ.

"ಫ್ರಾನ್ಸ್ ಕೋರ್ಸಿಕದಿಂದ ಮಹತ್ತ್ವ ಪಡೆಯಬೇಕಾದದ್ದಿಲ್ಲ, ಸ್ವತಃ ಮಹತ್ತ್ವದ್ದೇ ಆಗಿದೆ," ಅಂದ ಎಂಜೊಲ್ರಾಸ್.

ಮೇರಿಯಸನಿಗೆ ಆವೇಶ ಹೆಚ್ಚಿತು, ಉದ್ವೇಗ ಸ್ಫೋಟಿಸಿತು. ಅವನು ಹೇಳಿದ, "ನಾನು ಸಹ ನಿಮ್ಮಷ್ಟೇ ಫ್ರಾನ್ಸಿನ ಆರಾಧಕನೆಂದು ದೇವರಿಗೆ ಗೊತ್ತಿದೆ. ನಾವು ಎಂಥ ದೇಶಪ್ರೇಮಿಗಳೇ ಆಗಿರಬಹುದಾದರೂ ಮತ್ತೊಬ್ಬ ಮಹಾ ದೇಶಪ್ರೇಮಿಯನ್ನು ಮರೆಯಬಾರದು. ನೆಪೋಲಿ

ಯನ್ ಚಕ್ರವರ್ತಿಯ ಕೀರ್ತಿ ಫ್ರಾನ್ಸಿನ ಕೀರ್ತಿಸ್ತಂಭಕ್ಕೊಂದು ಕಲಶವಾಗಬಾರದೇಕೆ? ಇದು ನನ್ನ ಪ್ರಶ್ನೆ. ಸ್ತಂಭ ಮತ್ತು ಕಲಶ ಪರಸ್ಪರ ಸಂಬಂಧವಿರತಕ್ಕವು. ಕಲಶಕ್ಕೆ ಸ್ತಂಭ ಆಧಾರ, ಸ್ತಂಭಕ್ಕೆ ಕಲಶ ಭೂಷಣ. ಫ್ರೆಂಚ್ ಪ್ರಸ್ಥಭೂಮಿಯಲ್ಲಿ ಒಂದು ಪರ್ವತವಿದ್ದರೆ ಪ್ರಸ್ಥಭೂಮಿಗೆ ಅಪಮಾನವಾಗಲಾರದಷ್ಟೆ? ನಮ್ಮ ಜನಾಂಗದ ಶಕ್ತಿಯಿಂದಲೇ ಈ ದೇಶದಲ್ಲೇ ಉತ್ಪನ್ನವಾದ ಆ ಮಹಾ ಶಕ್ತಿವಂತ ಮುಂದಾಳನ್ನು ನೀವು ವಿಸ್ಥಾಪಿಸಿದರೆ ಅಲ್ಲಿ ಯಾವ ಮುಂದಾಳನ್ನು ಸ್ಥಾಪಿಸಬಲ್ಲಿರಿ? ಚಕ್ರವರ್ತಿ ಪರಿಪೂರ್ಣ ಮಾನವ. ಅವನು ಜಸ್ಟಿನಿಯನ್ನನಂತೆ ಧರ್ಮಗಳನ್ನು ನಿರ್ಮಿಸಿ, ಸೀಸರನಂತೆ ಅವನ್ನು ಅನುಷ್ಠಾನಕ್ಕೆ ತಂದ. ವಿದ್ಯುತ್ತಿನಂತೆ ವಿಚಾರಮಾಡಿ, ಸಿಡಿಲಿನಂತೆ ಮಾತುಗಳಲ್ಲಿ ಸ್ಪಷ್ಟಪಡಿಸಬಲ್ಲ ಮಾತುಭಾರಿ. ಆ ಮಹಾತ್ಮ ಚರಿತ್ರಾರ್ಹ ಕಾರ್ಯಗಳನ್ನೆಸಗಿ, ಇತಿಹಾಸವನ್ನು ತಾನೇ ಬರೆದು, ಆ ಬರವಣಿಗೆಯನ್ನೇ ನಮಗೆ ಇಲಿಯಡಿನಂಥ ಸಾಹಿತ್ಯವಾಗಿ ಅನುಗ್ರಹಿಸಿರುವನಲ್ಲವೇ? ಅವನು ನ್ಯೂಟನ್ನನಂಥ ಆದಿಭೌತಿಕವಾದಿಯೂ ಮಹಮ್ಮದನಂಥ ಆಧ್ಯಾತ್ಮಿಕವಾದಿಯೂ ಆಗಿದ್ದು ತತ್ತ್ವಗಳ ಸಮನ್ವಯವನ್ನು ತೋರಿಸಿಕೊಟ್ಟಿಲ್ಲವೇ? ಅವನ ಜ್ಞಾನಮಯ ವಾಕ್ಯಗಳು ಪಿರಮಿಡ್ಡುಗಳಂತೆ ಪ್ರಪಂಚದಲ್ಲೆಲ್ಲ ಹೆಸರಾದವಲ್ಲವೇ? ಅವನಿಗೆ ಶಬ್ದಜಾಲಗಳ ಸೂಕ್ಷ್ಮಪರಿಚಯವಿದ್ದು, ಅವನೊಬ್ಬ ಮಹಾ ತಾರ್ಕಿಕನೂ ಆಗಿದ್ದ. ಅವನು ಗಣಿತಶಾಸ್ತ್ರ ಪಂಡಿತನೂ ನಿಪುಣ ಖಗೋಳವಿಜ್ಞಾನಿ ಹೌದು. ಲೋಕಾನುಭವವೇನಾದರೂ ಕಡಿಮೆಯಿತ್ತೇ? ಸಂಸಾರಾನುಭವವುಳ್ಳವನೂ ಧರ್ಮಪರಾಯಣನೂ ಆಗಿದ್ದ. ಸಂಸಾರಿಯಾಗಿದ್ದವನೇ ಮರುಕ್ಷಣದಲ್ಲಿ ವಿರಕ್ತನಾಗಿ, ವೀರಯೋಧನಾಗಿ, ಸೈನ್ಯಗಳನ್ನು ಪ್ರವಹಿಸಿ, ರಸ್ತೆಗಳನ್ನೂ ಸೇತುವೆಗಳನ್ನೂ ನಿರ್ಮಿಸಿ, ಪರರಾಜ್ಯದ ಗಡಿಗಳನ್ನು ಪ್ರತಿ ನಿಮಿಷವೂ ಬದಲಿಸಿ, ಫ್ರೆಂಚ್ ಚಕ್ರಾಧಿಪತ್ಯವನ್ನು ವಿಸ್ತರಿಸಿದವನಲ್ಲವೆ? ಫ್ರೆಂಚ್ ಜನರು ಜಾಗೃತರಾಗಿ, ಸಂಘಟಿತರಾಗಿ, ತಮ್ಮ ಅಮೋಘ ಶಕ್ತಿಗಳನ್ನು ಅವನಿಗೊಪ್ಪಿಸಿದ್ದರಷ್ಟೆ? ಆ ಜನಪ್ರಿಯ ವ್ಯಕ್ತಿ ರಾಷ್ಟ್ರದಲ್ಲಿ ಉನ್ನತನಾಗಿ ಮೆರೆದಾಗ ಫ್ರೆಂಚ್ ಜನರು ಹೆಮ್ಮೆಪಡಬೇಕೇ ಹೊರತು ಅಸೂಯೆಪಡಬಹುದೇ ? ಅಪಹಾಸ್ಯಮಾಡಬಹುದೇ? ಅವನೆಂಥ ಚಕ್ರವರ್ತಿ! ಹನಿಬಾಲ್, ಶಾರ್ಲ್‌ಮೆನ್, ಸೀಸರ್—ಈ ರತ್ನತ್ರಯರನ್ನು ಒಬ್ಬನಾಗಿ ಎರಕಹೊಯ್ದು, ದೈವಿಕಶಕ್ತಿಯ ಜೊತೆಯಲ್ಲೇ ಅಭಯವನ್ನೂ ಅವನ ಕಠಾರಿಯಲ್ಲಿ ಬೆರೆಸಿ ಧರೆಗೆ ಇಳಿಸಲ್ಪಟ್ಟ ಮಹಾಪ್ರಭುವೇ ಅವನು. ರಾಜರುಗಳು ಅವನನ್ನು ಕಂಡೊಡನೆ ಶರಣುಬರುತ್ತಿದ್ದರಲ್ಲವೆ? ಅವನು ರಾಜ್ಯಗಳನ್ನು ದ್ವಿಮುಖದಿಂದ ಗೆಲ್ಲುತ್ತಿದ್ದ ಮರ್ಮ ನಿಮಗೆ ಗೊತ್ತಿಲ್ಲವೇ? ಯುದ್ಧದಲ್ಲಿ ಗೆದ್ದ ರಾಜ್ಯದಲ್ಲಿ ಸುಖಶಾಂತಿಯನ್ನು ನೆಲೆಗೊಳಿಸಿ ಆ ರಾಜ್ಯವನ್ನೇ ಮತ್ತೊಮ್ಮೆ ಪ್ರೇಮದಿಂದ ಗೆದ್ದುಬರುತ್ತಿದ್ದನಷ್ಟೆ! ಇದಕ್ಕಿಂತೆಲ್ಲ ಹೆಚ್ಚಿನದು ಇನ್ನೇನು ಬೇಕು?"

ಈ ಭಾಷಣಕ್ಕೆ ಒಂದೇ ಒಂದು ಚಿಕ್ಕ ಉತ್ತರವಾಗಿ ಕೋಂಬೆಫೆರ್ ನುಡಿದ, "ಸ್ವಾತಂತ್ರ್ಯ ಬೇಕು—ಸ್ವಾತಂತ್ರ್ಯ ವ್ಯಕ್ತಿಗೂ ಮಿಗಿಲಾದುದು."

ಮೇರಿಯಸನ ಸ್ಫೂರ್ತಿ ಈ ಉತ್ತರದಿಂದ ಸ್ವಲ್ಪ ಕುಗ್ಗಿತು. ಅವನು ಚೇತರಿಸಿಕೊಂಡು ಮರುತ್ತರವೀಯಬೇಕನ್ನುವಷ್ಟರಲ್ಲಿ ಕೋಂಬೆಫೆರ್ ತನಗೆ ತಾನೇ ಸಂತೋಷ ಮತ್ತು ದುಃಖ ಮಿಶ್ರಿತವಾಗಿ ಒಂದು ಗೀತವನ್ನು ಮೃದುವಾಗಿ ಹಾಡಿದ :

ಜಗದೊಡೆಯ ಮೈದೋರಿ, "ಬಾ ಮಗುವೆ ಬಳಿಸಾರು !
ತೊರೆ ನಿನ್ನ ಜನನಿಯನು, ಮರೆ ಮಾತೃವಾತ್ಸಲ್ಯ—
ರಾಜ್ಯಗಳನೀಯುವೆನು, ಮಕುಟ ಪ್ರದಾನಿಸುವೆ-"
ನೆಂದೆಲ್ಲ ಪೇಳಿದೊಡೆ, ನಾನೊರೆವೆ, "ಭಗವಂತ !

ಬೇಡೆನಗೆ ರಾಜ್ಯ ವೈಭವಕೀರ್ತಿ ಹಂಗಿನರ-
ಮನೆ ವಾಸ! ಸಾಕೆನಗೆ ತಾಯಿ ಕಂದನಿಗೆರೆವ
ಪರಿಶುದ್ಧ ನಿರ್ಮಲ ಪ್ರೇಮವಿಶ್ವಾಸ !"

ಆಗಲೇ ಎಂಜೊಲ್ರಾಸ್ ಮೇರಿಯಸನ ಹೆಗಲ ಮೇಲೆ ಕೈಯಿಟ್ಟು, ಫ್ರಾನ್ಸಿನ ಭವಿಷ್ಯವನ್ನೇ ನೋಡುತ್ತಿರುವಂತೆ ಗಂಭೀರವಾಗಿ ನುಡಿದ, "ತಮ್ಮಾ ಮೇರಿಯಸ್! ನನ್ನ ಮಾತೆ ಯಾರೆಂದು ಗೊತ್ತಿದೆಯೇ? ಅದು ಪ್ರಜಾಪ್ರಭುತ್ವ."

೬. ಸ್ವಾತಂತ್ರ್ಯವೇ ಸರ್ವಸ್ವ

ಹಿಂದಿನ ಅಧ್ಯಾಯದಲ್ಲಿ ಹೇಳಿದ ಅನುಭವಗಳು ಮೇರಿಯಸನ ಮನಸ್ಸಿನಲ್ಲಿ ಅನೇಕ ವಿಧದ ಚರ್ಚೆಗಳನ್ನೆಬ್ಬಿಸಿದುವು. ಅಜ್ಜನ ರಾಜಕೀಯ ಅಭಿಪ್ರಾಯಗಳು ಸರಿಯಲ್ಲವೆಂದು ತಿಳಿದು, ತಂದೆಯ ಅಭಿಪ್ರಾಯಗಳಿಗೆ ಮನಸೋತು ಒಪ್ಪಿ, ಇಂದು ಅವುಗಳಿಂದಲೂ ದೂರ ಸರಿಯ ಬೇಕಾದ ಪ್ರಸಂಗ ತೋರಿತು. ಇದು ಬರೇ ದೂರ ಸರಿಯುವುದೇ, ಅಥವಾ, ಮುಂದುವರಿ ಯುವುದೇ ಎಂದು ಅವನು ನಿಶ್ಚೈಸಿಕೊಳ್ಳಲಾರದೆ ಕಷ್ಟಪಡುತ್ತಿದ್ದ. ಈ ಮಾನಸಿಕ ವಿಪ್ಲವದ ಕಾರಣವಾಗಿ ಅವನು ಕೆಫೆ ಮುಸ್ಸೆನಿಗೆ ಹೋಗುವುದನ್ನೇ ನಿಲ್ಲಿಸಿದ.

ಈ ಸಮಯದಲ್ಲಿ, ಬದುಕಲು ಕೇವಲ ಆಲೋಚನೆಯೊಂದಿದ್ದರೆ ಸಾಲದು—ಅನ್ನ, ವಸ್ತ್ರ, ಮನೆ, ಜನ ಎಲ್ಲವೂ ಬೇಕೆಂಬ ಅರಿವು ಅವನಿಗಾಗತೊಡಗಿತು. ತನ್ನಲ್ಲಿದ್ದ ಹಣವೆಲ್ಲ ಖರ್ಚಾಗಿ ಮುಗಿದು ತನ್ನ ಕೋಣೆಯ ಬಾಡಿಗೆ ಕೊಡಲು ತನ್ನ ನಿಲುವಂಗಿಯನ್ನೂ ಚಿನ್ನದ ಗಡಿಯಾರವನ್ನೂ ಮಾರಿದ. ಇವನ ಕಷ್ಟಗಳನ್ನು ಕಂಡು ಸ್ನೇಹಿತರು ಸಾಲ ಕೊಡಲು ಮುಂದೆ ಬಂದಾಗ ಅವರ ಸಾಲಗಳನ್ನು ಮೇರಿಯಸ್ ಸ್ವೀಕರಿಸಲಿಲ್ಲ. ಒಮ್ಮೆ ಕಷ್ಟ ಪ್ರಸಂಗದಲ್ಲಿದ್ದಾಗ ಅತ್ತೆ ಗಿಲೆ ನಾರ್ಮಂಡ್ ಆರುನೂರು ಫ್ರ್ಯಾಂಕ್ ಹಣವನ್ನು ಇವನ ಸಹಾಯಾರ್ಥವಾಗಿ ಕಳುಹಿಸಿಕೊಟ್ಟಿ ದ್ದಳು. ಆ ಹಣದಲ್ಲಿ ೩೦೦ ಫ್ರ್ಯಾಂಕನ್ನು ಅರೆಮನಸ್ಸಿನಿಂದ ಸ್ವೀಕರಿಸಿ, ಬಾಕಿ ೩೦೦ನ್ನು ಅವಳಿಗೇ ಹಿಂತಿರುಗಿಸಿದ.

ಕೊನೆಗೆ ತನ್ನ ಇಂಥ ಬಡತನದ ಸ್ಥಿತಿಯಲ್ಲಿ ಆ ಸ್ನೇಹಿತರ ಮಧ್ಯ ಮುಖತೋರಿಸಲೂ ನಾಚಿದ. ಇನ್ನೂ ಕಡಿಮೆ ಖರ್ಚಿನಿಂದ ಜೀವಿಸಲು ಪ್ರಯತ್ನಿಸುವುದಕ್ಕಾಗಿ ಆ ಸ್ಥಳವನ್ನೇ ಬಿಟ್ಟು ಬೇರೆ ಕಡೆಗೆ ಹೋದ.

ಐದನೆಯ ಸಂಪುಟ

೧. ಮೇರಿಯಸನ ಬಡತನ

ಮೇರಿಯಸ್ ತನ್ನ ಹೆಚ್ಚಿನ ಬಟ್ಟೆಬರೆಗಳನ್ನೂ ಗಡಿಯಾರವನ್ನೂ 'ತಿಂದು' ಜೀವಿಸತೊಡಗಿದ. ಊಟವಿಲ್ಲದ, ಬೆಳಕಿಲ್ಲದ, ಬೆಂಕಿಯಿಲ್ಲದ ದಿನಗಳನ್ನು ಆಗಿಂದಾಗ್ಗೆ ಕಳೆಯುತ್ತಿದ್ದ. ಅವನಿಗೆ ಕೇಳುವಂತೆಯೇ ಜನರು ಪಿಸು ಮಾತಿನಿಂದ, ಅವನ ಕಡೆ ಕೈತೋರಿಸುತ್ತ, ಹಗುರವಾಗಿ ಮಾತಾಡ ತೊಡಗಿದ್ದರು. ಪ್ರಾಯ, ರಕ್ತ, ಸಂಪತ್ತುಗಳಿಂದ ಉಬ್ಬಿ, ಕೊಬ್ಬಿ ಮೆರೆಯಬಹುದಾಗಿದ್ದ ಮೇರಿಯಸ್ ಈಗ ಸಂಪತ್ತಿಲ್ಲದೆ, ರಕ್ತ ಬತ್ತಿಸಿಕೊಂಡು, ಮುಖಮರೆಸಿಕೊಂಡು ದಿನಗಳನ್ನು

ಕಳೆಯುತ್ತಿದ್ದ. ಜೀವನದ ಸಮಸ್ಯೆಗಳನ್ನು ತಲೆಯೆತ್ತಿ ನೋಡಿ ಎದುರಿಸುವ ಬದಲು, ಸೋತು, ತಲೆತಗ್ಗಿಸಿ, ತನ್ನ ಬೂಟ್ಸುಗಳ ಹರಿದ ಹಿಮ್ಮಡಿಗಳನ್ನು ನೋಡತೊಡಗಿದ್ದ. ಮುಂದೆ ತಾನೊಬ್ಬ ಸಮಾಜದ ಯೋಗ್ಯವ್ಯಕ್ತಿಯಾಗಬೇಕೊ ಅಥವಾ ಸಮಾಜದ್ರೋಹಿ ಹೀನವ್ಯಕ್ತಿಯಾಗಬೇಕೋ ಎಂದು ಚಿಂತಿಸುವ ಕಾಲ ಅವನಿಗೆ ಬಂದಿತ್ತು. ಅವನಿಗೆ ಇದೊಂದು ಆತ್ಮಬಲದ ಪರೀಕ್ಷಾಕಾಲ ವಾಗಿತ್ತು. ಇದರಲ್ಲಿಉತ್ತೀರ್ಣನಾದರೆ ಸಮಾಜದ ಆದರ್ಶದೇವತೆಯಾಗುವ ಶಕ್ತಿ ಅವನಿಗೆ ಬರುತ್ತಿತ್ತೆಂದೂ ಸೋತರೆ ರಾಕ್ಷಸನೇ ಆಗಬೇಕೆಂದೂ ಗೊತ್ತಿತ್ತು. ಬಡತನದ ಇಂಥ ಸ್ಥಿತಿ ಮನುಷ್ಯತ್ವವನ್ನು ಪುಟಕ್ಕಿಡುವ ಕುಲುಮೆಯಾಗುವುದು. ಆದರೆ, ಅನೇಕ ವೇಳೆ ಕುಲುಮೆಯಿಂದ ದೇವತೆ ಉದ್ಭವವಾಗುವ ಬದಲು ರಾಕ್ಷಸನೇ ಏಳುವುದನ್ನು ಕಾಣಬಹುದು. ಮೇರಿಯಸನ ಬಡತನ ಇಂಥ ದಾರುಣಸ್ಥಿತಿಗೆ ಮುಟ್ಟಿತ್ತು.

ಅವನ ಮಾನಸಿಕ ಸ್ಥೈರ್ಯ ಬಲು ದೃಢವಾಗಿತ್ತು. ಇಂಥ ಕಷ್ಟದ ಪರಿಸ್ಥಿತಿಯಲ್ಲೂ ತನ್ನ ಓದುವಿಕೆಯನ್ನು ನಿಲ್ಲಿಸಲಿಲ್ಲ. ಸ್ನೇಹಿತರ ಮನೆಯ ಬೆಳಕಿನಲ್ಲೇ ಓದಿ ಲಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ. ಅವನು ವಕೀಲನಾದ ಸಂಗತಿಯನ್ನು ಸಂಪ್ರದಾಯ ಪ್ರಕಾರ, ಪತ್ರ ಮುಖಾಂತರ ಅಜ್ಜನಿಗೆ ತಿಳಿಸಿದ. ಮೊಮ್ಮಗನ ಬಡತನದ ಬಾಳನ್ನು ಕೇಳಿ ತಿಳಿದಿದ್ದ ಗಿಲೆ ನಾರ್ಮಂಡ್ ಮೇರಿಯಸನ ಬಡತನಕ್ಕಾಗಿ ಅಂತರಂಗದಲ್ಲಿ ದುಃಖಿಸುತ್ತ ತನ್ನ ಹಠವನ್ನು ಬಿಡಲಾರದೆ, ಅಧಿಕಾರ ಮತ್ತು ಹಿರಿತನದ ಗೌರವದಿಂದ, ಬಹಿರಂಗವಾಗಿ ಮನೆಯವರೆದುರಿಗೆ, "ಒಬ್ಬನೇ ಏಕಕಾಲದಲ್ಲಿ ಬ್ಯಾರನ್ನನೂ ವಕೀಲನೂ ಆಗಲಾರನೆಂದು ಆ ಕತ್ತೆ ತಿಳಿಯದೆ ಕಷ್ಟಪಡುತ್ತಿದೆ," ಎಂದಂದುಕೊಂಡ.

೨. ಬಡತನದ ಬಾಳು

ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳನ್ನು ಕಲಿತರೆ ಪ್ರಯೋಜನವಿದೆಯೆಂದು ಮೇರಿಯಸ್ ಅವನ್ನು ಕಲಿಯತೊಡಗಿದ. ಭಾಷಾಭ್ಯಾಸ ಕಾಲದಲ್ಲಿ ಅವನು ಕೇವಲ ಕಾರ್ಮಿಕನಂತೆ ಸಂಬಳಕ್ಕಾಗಿ ದುಡಿಮೆಗಳನ್ನೂ ಮಾಡುತ್ತಿದ್ದ. ಸ್ವಲ್ಪ ಸಮಯದಲ್ಲೆ ಅವನ್ನು ಕಲಿತ. ಆ ಭಾಷಾಜ್ಞಾನ ಹೆಚ್ಚುತ್ತ ಬಂದ ಹಾಗೆ ಅವನು ಕೆಲವು ಪ್ರಕಟನಾಲಯಗಳಲ್ಲಿ ಭಾಷಾಂತರಕಾರನ ಕೆಲಸ ವಹಿಸಿಕೊಂಡ. ಈ ವೃತ್ತಿಯಿಂದ ಅವನ ಉತ್ಪತ್ತಿ ಸ್ವಲ್ಪ ಏರತೊಡಗಿತು. ಈ ವೇಳೆ ಅವನು ಗಾರ್ಬೂ ಕಟ್ಟಡದ ನಂಬರ್ ೫೦-೫೨ರ ಕೋಣೆಯನ್ನು ಬಾಡಿಗೆಗೆ ವಹಿಸಿಕೊಂಡಿದ್ದ.

ಅವನು ಹೊಟೇಲಿನಲ್ಲಿ ಊಟಮಾಡುತ್ತಿದ್ದ. ಅವನಿಗೆ ಬರಹದ ಕೆಲಸಕ್ಕೆ ಬೇಕಾದಷ್ಟು ಮಾತ್ರ ದೀಪ ಉರಿಸುತ್ತಿದ್ದ. ತನ್ನ ಕೋಣೆಯನ್ನು ಗುಡಿಸಿ ಚೊಕ್ಕಟವಾಗಿಡುವ ಕೆಲಸದ ಬಗ್ಗೆ ಮಾತ್ರ ಒಬ್ಬಳು ಕೆಲಸದ ಹೆಂಗುಸನ್ನು ಇಟ್ಟುಕೊಂಡಿದ್ದ. ಅವಳಿಗೆ ಗಂಟೆ ಲೆಕ್ಕದಲ್ಲಿ ಮಾತ್ರ ಸಂಬಳ ಕೊಡಬೇಕಾಗಿತ್ತು. ಚಳಿಗಾಲದಲ್ಲೂ ಅವನು ಕೋಣೆಯಲ್ಲಿ ಬೆಂಕಿ ಉರಿಸುತ್ತಿರಲಿಲ್ಲ. ಈ ರೀತಿ ಅವನು ತನ್ನ ವೃತ್ತಿಯಲ್ಲಿ ನಿರತನಾಗಿರುತ್ತ ಬಡತನದ ಬಾಳು ಸಾಗಿಸುತ್ತ, ವರ್ಷಕ್ಕೆ ಏಳುನೂರು ಫ್ರ್ಯಾಂಕಿನಷ್ಟು ಹಣ ಸಂಪಾದಿಸುತ್ತಿದ್ದ. ಅಲ್ಲದೆ, ಅವನ ಉತ್ಪತ್ತಿ ಕ್ರಮವಾಗಿ ಏರುವ ಸಂಭವವೂ ಇತ್ತು.

ಹೀಗೆ ಮೇರಿಯಸನ ಸಂಪಾದನೆ ಸ್ವಲ್ಪ ಏರುತ್ತ ಬಂದಾಗ ಅವನು ತನ್ನ ತಂದೆಯ ಜೀವ ರಕ್ಷಕನನ್ನು ಹುಡುಕಿ ಹಿಡಿಯಬೇಕೆಂದು ಸಮಯವಿದ್ದಾಗಲೆಲ್ಲ ಮೊಂಟ್‌ಫರ್ಮಿಯಲ್ಲಿಗೂ

ಮತ್ತಿತರ ಸ್ಥಳಗಳಿಗೂ ಹೋಗಿ ವಿಚಾರಿಸಿ ಬರುತ್ತಿದ್ದ. ತಂದೆಯ ಜೀವರಕ್ಷಕ ತೆನಾರ್ಡಿಯರನಿಗೆ ತಂದೆಯ ತರುವಾಯದ ಸ್ಥಾನಗೌರವವನ್ನು ಪರಿಪೂರ್ಣವಾಗಿ ಮನಸಾ ಸಲ್ಲಿಸುತ್ತ ಅವನ ಪತ್ತೆಗಾಗಿ, ಅಗತ್ಯ ಬಿದ್ದರೆ, ತನ್ನ ಒಂದು ತೋಳನ್ನಾದರೂ ಕೊಡುವಷ್ಟು ಶ್ರದ್ಧೆಯಿಂದ ತೆನಾರ್ಡಿಯರನನ್ನು ಹುಡುಕುತ್ತಿದ್ದ.

೩. ಅರಿಯದ ಮನದ ಅಳವು

ಮೇರಿಯಸನಿಗೆ ಪ್ರಾಯ ಇಪ್ಪತ್ತು ವರ್ಷವಾಯಿತು. ಅಜ್ಜನ ಮನೆಬಿಟ್ಟು ಈಗ ಮೂರು ವರ್ಷ ಕಳೆದಿದ್ದುವು. ಅಜ್ಜನನ್ನು ನೋಡಲು ಹೋದರೆ ತಮ್ಮ ಸಂಬಂಧ ಮತ್ತಷ್ಟು ಕೆಡಬಹುದೆಂದು ಮೇರಿಯಸ್ ತಿಳಿದುಕೊಂಡಿದ್ದ. ತನ್ನ ಬಡತನದ ಜೀವನ ತಂದೆಯ ತತ್ತ್ವಪಾಲನೆಗಾಗಿ, ಅವನ ಗೌರವಕ್ಕಾಗಿ, ತಾನು ಮಾಡುತ್ತಿದ್ದ ತಪಸ್ಸು ಎಂದು ತಿಳಿಯುತ್ತಿದ್ದ.

ವೃದ್ಧ ಗಿಲೆನಾರ್ಮಂಡನ ಅಂತರಂಗ ಮಾತ್ರ ಮೇರಿಯಸ್ ಗ್ರಹಿಸಿಕೊಂಡಿದ್ದಂತೆ ಇರಲಿಲ್ಲ. ಅವನು ಮೊಮ್ಮಗನನ್ನು ಅಂತರಂಗದಲ್ಲಿ ದಿನಹೋದಂತೆ ಹೆಚ್ಚುಹೆಚ್ಚಾಗಿ ಪ್ರೀತಿಸತೊಡಗಿದ. ಅಭ್ಯಾಸಬಲದಿಂದ ಮಾತ್ರ ಅಂದು ಅವನು ಮೇರಿಯಸನನ್ನು ಗದರಿಸಿದ್ದ. ಮೊಮ್ಮಗ ಎಂದಾದರೂ ತನ್ನ ಬಳಿಗೆ ಬಂದೇಬರುವನೆಂದು ಊಹಿಸಿದ್ದ. ಅನಂತರ ನಿರೀಕ್ಷಿಸಿದ, ಕೊನೆಗೆ ಮೇರಿಯಸ್ ತನ್ನ ಬಳಿಗೆ ಬರಬೇಕೆಂದು ಹಂಬಲಿಸತೊಡಗಿದ.

ಮೇರಿಯಸನಿಗೆ ಇದ್ದುದು ಇಬ್ಬರೇ ಸ್ನೇಹಿತರು : ಪ್ರಾಯದಲ್ಲಿ ತನ್ನಷ್ಟೇ ಆಗಿದ್ದ ಕೋರ್‌ಫರೇಕ್ ತೀರ ಒಲವಿನವನು, ಮತ್ತೆ ಅವನ ಒಲವಿನ ಸ್ನೇಹಿತ ಮಾನ್ಸರ್ ಮೇಬಫ್. ಮಾನ್ಸರ್ ಮೇಬಫರು ತನ್ನ ತಂದೆಯ ಚರಿತ್ರೆಯ ಅಮೂಲ್ಯಭಾಗವನ್ನು ತನಗೆ ತಿಳಿಸಿದವರೆಂದು ಅವರನ್ನು ಬಹುವಾಗಿ ಗೌರವಿಸುತ್ತಿದ್ದ.

೪. ಮೇರಿಯಸನ ಔದಾರ್ಯ

ಮಾನ್ಸರ್ ಮೇಬಫ್ ತಮ್ಮ ಇಗರ್ಜಿ ಕೆಲಸವನ್ನು ಈ ಕಾಲದಲ್ಲಿ ಬಿಟ್ಟಿದ್ದರು. ವೃದ್ಧಾಪ್ಯದ ಜೀವನಕ್ಕಾಗಿ (ಪ್ಯಾರಿಸಿನ) ಆಸ್ಟರ್ಲಿಟ್ಸ್ ಗ್ರಾಮದಲ್ಲಿ ಚಿಕ್ಕದೊಂದು ಮನೆ ಮತ್ತು ತೋಟ ಖರೀದಿಸಿ ಅಲ್ಲಿ ಜೀವಿಸುತ್ತಿದ್ದರು.

ಮೇಬಫರಿಗೆ ಜೀವನದಲ್ಲಿ ಒಂದು ಗುರಿಯಿತ್ತು. ಅವರು ಒಂದು ಪಕ್ಷವನ್ನು ವಹಿಸಿ, ಆ ಪಕ್ಷಕ್ಕಾಗಿ ತಮ್ಮ ಸರ್ವಸ್ವವನ್ನೂ ಕೊಡಲು ತಯಾರಿದ್ದರು. ಆದರೆ ಅವರ ಜೀವನದ ಗುರಿಯನ್ನು ಅಥವಾ ಪಕ್ಷದ ಉದ್ದೇಶಗಳನ್ನು ಸಾಧಿಸುವಾಗ ಯಾರಲ್ಲೂ ಯಾವ ವಿಧದ ಘರ್ಷಣೆಯೂ ಆಗುತ್ತಿರಲಿಲ್ಲ. ಅವರ ಗುರಿ ವನಸ್ಪತಿಶಾಸ್ತ್ರಾಭ್ಯಾಸ, ಅವರ ಪಕ್ಷ ವನಸ್ಪತಿಗಳ ಕಡೆಯದಾಗಿತ್ತು. ಅವರು ವನಸ್ಪತಿಶಾಸ್ತ್ರದಲ್ಲಿ ಒಂದು ಪುಸ್ತಕ ಬರೆದಿದ್ದರು. ಅದರ ಮಾರಾಟದಿಂದ ದೊರಕಿದ ಹಣ ಅವರ ದಿನನಿತ್ಯದ ಖರ್ಚಿಗೆ ಸಾಕಾಗುತ್ತಿತ್ತು. ಮಾನ್ಸರ್ ಮೇಬಫ್ ವನಸ್ಪತಿಶಾಸ್ತ್ರದಲ್ಲಿ ಮಗ್ನರಾಗಿದ್ದಾಗಲೇ ಅವರು ಮದುವೆಯಾಗತಕ್ಕ ಪ್ರಾಯ ಅವರಿಗೆ ತಿಳಿಯದೇ ದಾಟಿಹೋಗಿತ್ತು. ಹಾಗಾಗಿ ಅವರ ಮನೆಯಲ್ಲಿ ಸಂಬಳಕ್ಕೆ ಇದ್ದ ಒಬ್ಬ ಹೆಂಗುಸು ದಿನದಿನದ ಕೆಲಸಗಳನ್ನು ಮಾಡಿಕೊಡುತ್ತಿದ್ದಳು.

ಮೇರಿಯಸ್ ಅಪರೂಪಕ್ಕೊಮ್ಮೆ ಮೇಬಫರ ಮನೆಗೆ ಹೋಗಿ ಅಲ್ಲಿ ಒಂದು ದಿನವಿದ್ದು

ಬರುತ್ತಿದ್ದ. ಈ ಯುವಕನ ಸಂಪರ್ಕ ಸಹವಾಸಗಳಿಂದ ವೃದ್ಧ ಮೇಬಫ್ ಚಳಿಗಾಲದಲ್ಲಿ ಬಿಸಿಲಿಗೆ ಮೈಯೊಡ್ಡಿ ಸುಖಿಸುವಂತೆ ತಮ್ಮ ಮುಪ್ಪಾಗುತ್ತಿದ್ದ ಮನಸ್ಸಿಗೆ ಹರ್ಷಹುರುಪನ್ನು ತಂದುಕೊಳ್ಳು ತ್ತಿದ್ದರು. ಒಮ್ಮೊಮ್ಮೆ ಮೇರಿಯಸ್ ತನ್ನ ತಂದೆಯ ಕೆಲವು ಶ್ರೀಮಂತ ಸ್ನೇಹಿತರ ಮನೆಗಳಿಗೂ ಹೋಗಿಬರುವುದಿತ್ತು. ದಿವಾನ್‌ಖಾನೆಗಳಲ್ಲಿ ಸಭೆ ಸೇರುವವರ ಅಂತರಂಗದಲ್ಲಿ ಎಷ್ಟೇ ಕಶ್ಮಲ ವಿದ್ದರೂ ಪಾದರಕ್ಷೆಗಳಲ್ಲಿ ಎಳ್ಳಷ್ಟೂ ಕಶ್ಮಲವಿರಕೂಡದೆಂಬ ಶಿಸ್ತನ್ನು ಮೇರಿಯಸ್ ಅರಿ ತಿದ್ದುದರಿಂದ, ಅಂಥ ಸಭೆಗಳಿಗೆ ಹೋಗುವಾಗ ಅವನು ಚೆನ್ನಾಗಿ ದುಸ್ತು ಮಾಡಿಕೊಂಡಿರುತ್ತಿದ್ದ.

ತನ್ನದೆಂದು ಗೊತ್ತುಮಾಡಿಕೊಂಡಿದ್ದ ಯಾವ ಪಕ್ಷವೂ ಪಂಥವೂ ಮೇರಿಯಸನಿಗಿರಲಿಲ್ಲ. ಆದರೆ ಪ್ರಚಲಿತವಾಗಿದ್ದ ಎಲ್ಲ ಪಕ್ಷ ಪಂಥಗಳ ತತ್ತ್ವ ಕುರಿತು ಅವನು ತುಂಬ ವಿವೇಚಿಸುತ್ತಿದ್ದ. ಅವನು ಫ್ರಾನ್ಸ್ ತನ್ನ ದೇಶವೆಂದೂ ಅದರ ಸೇವೆ ತನ್ನ ಕರ್ತವ್ಯವೆಂದೂ ತಿಳಿದಿದ್ದ. ಈ ಗುರಿಯಿಂದಲೇ ತನ್ನ ದೇಶದಲ್ಲಿ ಸಿಕ್ಕುವ ದೀನ, ದರಿದ್ರ, ಸ್ತ್ರೀ, ಬಾಲಕರ ಕುರಿತು ಅವನು ಬಲು ಕನಿಕರವುಳ್ಳವನಾಗಿದ್ದ. ಮತ್ತು ಅವನ ಕಾರ್ಯಗಳು ಈ ಗುರಿಯಿಂದಲೇ ಜರಗುತ್ತಿದ್ದುವು.

೧೮೩೧ರ ಇಸವಿಯ ಮಧ್ಯಭಾಗದಲ್ಲೊಂದು ಸಂಜೆ ಅವನ ಕೆಲಸದಾಕೆ ಬೇರೆ ಕೆಲವು ವಿಷಯಗಳನ್ನು ಅವನೊಡನೆ ಮಾತಾಡುತ್ತ, "ನಾಳೆ ನಿಮ್ಮ ಕೋಣೆಯ ಪಕ್ಕದ ಕೋಣೆಯಲ್ಲಿರುವ ಜೋಂಡ್ರೈಟೆಯವರನ್ನು ಮನೆಯಿಂದ ಹೊರಗೆ ಹಾಕುವರು," ಅಂದಳು.

"ಏತಕ್ಕಾಗಿ?" ಎಂದು ವಿಚಾರಿಸಿದ ಮೇರಿಯಸ್.

"ಬಾಡಿಗೆ ಕೊಡದಿರುವುದರಿಂದ."

"ಎಷ್ಟಾಗಬೇಕು?"

"೨೦ ಫ್ರ್ಯಾಂಕ್."

ಮೇರಿಯಸನ ಹತ್ತಿರ ಆ ದಿನ ೨೫ ಫ್ರ್ಯಾಂಕ್ ಹಣವಿತ್ತು. ನೆರೆಯವರ ಬಡತನಕ್ಕಾಗಿ ಕನಿಕರ ಪಟ್ಟು, ಆ ೨೫ ಫ್ರ್ಯಾಂಕನ್ನು ಕೆಲಸದವಳ ಹತ್ತಿರ ಕೊಡುತ್ತ, ಹೇಳಿದ, "ಬಾಡಿಗೆ ಕೊಟ್ಟು ಉಳಿಯುವ ೫ ಫ್ರ್ಯಾಂಕನ್ನು ಅವರು ಮನೆಖರ್ಚಿಗೆ ಉಪಯೋಗಿಸಿಕೊಳ್ಳಲಿ. ಈ ಹಣ ವನ್ನು ಮಾನ್ಸೆರ್ ಜೋಂಡ್ರೈಟೆಯವರಿಗೆ ಕೊಡುವಾಗ ಯಾರು ಕೊಟ್ಟರೆಂದು ತಿಳಿಸಬೇಡ."

೫. ಗಿಲೆನಾರ್ಮಂಡನ ಕೋಪಾಟೋಪ

ಕುಮಾರಿ ಗಿಲೆನಾರ್ಮಂಡಳಿಗೆ ಮೇರಿಯಸನನ್ನು ಕಂಡರಾಗುತ್ತಿರಲಿಲ್ಲ. ಅದಕ್ಕೆ ಮುಖ್ಯ ಕಾರಣ ಮೇರಿಯಸ್ ಅವಳ ಜೊತೆ ಇದ್ದುದೇ ಆಗಿತ್ತು. ಆದರೆ ತನ್ನ ಜೊತೆಯಲ್ಲಿರದೇ ದೂರ ದಲ್ಲಿದ್ದ ತಿಯೊಡ್ಯೂಲ್ ಗಿಲೆನಾರ್ಮಂಡನನ್ನು ಪ್ರೀತಿಸುತ್ತಿದ್ದಳು. ತನ್ನ ವೃದ್ಧ ತಂದೆಯ ಎದುರು ಮೇರಿಯಸನನ್ನು ನಿಲ್ಲಿಸುವುದಕ್ಕಿಂತ ತನ್ನ ಪ್ರೀತಿಗೂ ಮೆಚ್ಚುಗೆಗೂ ಪಾತ್ರನಾಗಿದ್ದ ತಿಯೊಡ್ಯೂಲ ನನ್ನು ನಿಲ್ಲಿಸುವುದರಲ್ಲಿ, ತಂದೆಗೆ ಸಂತೋಷವಾಗುವುದರ ಜೊತೆಯಲ್ಲೇ ತಿಯೊಡ್ಯೂಲನಿಗೆ ಲಾಭವೂ ಆಗುವುದೆಂದು ಊಹಿಸಿಕೊಂಡಿದ್ದಳು. ಅಂದರೆ, ಗಿಲೆನಾರ್ಮಂಡನ ಐಶ್ವರ್ಯದಲ್ಲಿ ತಿಯೊಡ್ಯೂಲನೂ ಕ್ರಮೇಣ ಸ್ವಲ್ಪಾಂಶ ಪಡೆಯಬಹುದೆಂದು ಗ್ರಹಿಸಿದ್ದಳು.

ಒಂದು ದಿನ ಗಿಲೆನಾರ್ಮಂಡ್ ಅಂದಿನ ಪತ್ರಿಕೆಯನ್ನೋದಿ ರಾಜಕೀಯ ವಿಷಯವಾಗಿ ಬಲು ಕೋಪಗೊಂಡು ಕುಳಿತಿದ್ದಾಗ ಅವನ ಮನೆಗೆ ಲೆಫ್ಟೆನೆಂಟ್ ತಿಯೊಡ್ಯೂಲ್ ಗಿಲೆನಾರ್ಮಂಡ್ ಬಂದ. ತಂದೆಯ ಮನಸ್ಸಿನ ಶಾಂತಿಗೆ ತಿಯೊಡ್ಯೂಲನನ್ನು ಎದುರು ನಿಲ್ಲಿಸುವುದು ಉತ್ತಮ

ಎಂದು ಕುಮಾರಿ ಗಿಲೆನಾರ್ಮಂಡ್ ಗ್ರಹಿಸಿ ಅಜ್ಜ ಏನೇ ಮಾತಾಡಿದರೂ ವಿನಯದಿಂದ ಒಪ್ಪಿಬಿಡಬೇಕೆಂದು ಬೋಧನೆ ಕೊಟ್ಟು, ತಿಯೊಡ್ಯೂಲನನ್ನು ವೃದ್ಧ ಗಿಲೆನಾರ್ಮಂಡನ ಎದುರು ಕರೆದುಕೊಂಡುಹೋಗಿ ನಿಲ್ಲಿಸಿದಳು. ತಿಯೊಡ್ಯೂಲ್ ಬಲು ನಮ್ರತೆಯಿಂದ ಅಜ್ಜನಿಗೆ ನಮಸ್ಕರಿಸಿದ. ಅಜ್ಜ ಒಂದು ಕುರ್ಚಿಯನ್ನು ತಿಯೊಡ್ಯೂಲನಿಗೆ ತೋರಿಸಿ ಕೂರ ಹೇಳಿದ. ಇವನು ಕುಳಿತೊಡನೆ ಅಜ್ಜ ಎದ್ದು ನಿಂತ. ಅಜ್ಜನ ಕೈಯಲ್ಲಿ ಆ ದಿನದ ಒಂದು ಪತ್ರಿಕೆಯಿತ್ತು. ಅದರಲ್ಲಿ ಪ್ರಕಟಿಸಿದ್ದ, "ಈ ದಿನ ಲಾ ಕಾಲೇಜಿನ ಮತ್ತು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಸೈನ್ಯ ರಚನೆಯ ಮತ್ತು ಇತರ ರಾಜಕೀಯ ವಿಷಯಗಳ ಕುರಿತು ಫ್ಯಾಂಥಿಯನ್ ಚೌಕದಲ್ಲಿ ಭಾಷಣ ಮಾಡಲಿರುವರು," ಎಂಬುದನ್ನು ಗಿಲೆನಾರ್ಮಂಡ್ ದೊಡ್ಡದಾಗಿ ಓದಿಹೇಳಿದ. ಅನಂತರ ಲೆಫ್ಟಿನೆಂಟನ ಮುಖವನ್ನು ಹತ್ತಿರ ನಿಂತು ದೃಷ್ಟಿಸಿನೋಡಿದ. ಪತ್ರಿಕೆಯ ಪ್ರಕಟಣೆಯನ್ನು ಓದಿ ತಿಯೊಡ್ಯೂಲನ ಮುಖ ನೋಡಿದುದರಲ್ಲಿ ಅವನಂಥ ಯುವಕರು ಎಂಥೆಂಥ ಬುದ್ಧಿಹೀನ ಕೆಲಸ ಗೈಯುತ್ತಿದ್ದಾರೆಂಬುದನ್ನು ಅವನಿಗೆ ತಿಳಿಸಿ ಹೀಯಾಳಿಸಿದಂತೆ ಕಾಣುತ್ತಿತ್ತು. ಬಳಿಕ ಗಿಲೆನಾರ್ಮಂಡ್ ಬಲು ಉದ್ವೇಗದಿಂದ ಹೇಳತೊಡಗಿದ, "ಮೂಗೊತ್ತಿದರೆ ಹಾಲುಸುರಿಯುವಷ್ಟು ಎಳೆಪ್ರಾಯದ ಬುದ್ಧಿಶೂನ್ಯರು ರಾಜಕೀಯದ ವಿಷಯ ಭಾಷಣಗೈಯುವುದಂತೆ! ವಿಷಯವೋ? ಸೈನ್ಯ ರಚನೆ ಕುರಿತಂತೆ! ಈ ಸಭೆಯಲ್ಲಿ ಕೂಡುವವರು ಯಾರೆಲ್ಲ ? ಸದ್ಯ ಜೈಲಿನಿಂದ ಬಂದವರು, ದರೋಡೆಕಾರರು, ದಂಗೆಗಾರರು, ತಮ್ಮ ಜೀವನವನ್ನೇ ನಡೆಸಲರಿಯದ ಬುದ್ಧಿಶೂನ್ಯರು !"

"ಅದು ನಿಜ," ಅಂದ ತಿಯೊಡ್ಯೂಲ್.

ಗಿಲೆನಾರ್ಮಂಡ್ ಪುನಃ ಹೇಳತೊಡಗಿದ, "ಹೆಂಗುಸರಿಗೆ ಹೆದರುವವರು, ಫಿರಂಗಿ ಶಬ್ದ ಕೇಳಿದರೇ ನಡುಗುವವರು, ದುಸ್ತುಮಾಡಲೂ ಅರಿಯದ ವಿದ್ಯಾರ್ಥಿಗಳು. ಪುಸ್ತಕದಲ್ಲಿ ಹೊರತಾಗಿ ಸರಕಾರ ಏನೆಂದು ಗೊತ್ತಿಲ್ಲದವರು, ಮೀಸೆ ಸಹ ಬರದಿರುವ ಮತ್ತು ಸಾಕಿದವರನ್ನೇ ಮರೆತು ತಾವು ಬದುಕುವ ದಾರಿಯನ್ನೇ ಅರಿಯದೆ ಓಡುವ ವಂಚಕರು—ಇಂಥವರೆಲ್ಲ ಈ ಸಭೆಯನ್ನು ಅಲಂಕರಿಸುವರು, ಸಭೆಯಲ್ಲಿ ಭಾಷಣಮಾಡುವರು!"

"ಅವರಿಂದೇನಾದೀತು—ಈ ಕಾಲೇಜು ಹೆಗ್ಗಣಗಳಿಂದ," ಅಂದ ತಿಯೊಡ್ಯೂಲ್. ಗಿಲೆನಾರ್ಮಂಡ್ ಪುನಃ ಮಾತಾಡತೊಡಗಿದ, "ನಿನ್ನೆ ವರೆಗೆ ಯಾರಯಾರ ತಲೆಬೋಳಿಸುತ್ತ ಕುಳಿತಿದ್ದ ಹಜಾಮ ನಾಳೆ ಮಂತ್ರಿಯಾಗಬಹುದಂತೆ, ಹತ್ತು ಮನೆ ಹಾಳು ಮಾಡಿ, ಕೊನೆಗೆ ಹೊಟೇಲ್ ನಡೆಸಿ, ಸೂಳೆಗಾರಿಕೆಮಾಡಿ, ತನ್ನಂಥ ನೂರುಜನರ ಗುಂಪೊಂದನ್ನು ಕಟ್ಟಿಕೊಂಡು ಎದುರು ಬಂದವನು ಉಚ್ಚಮಟ್ಟದ ನ್ಯಾಯಶಾಲಿ! ಶ್ರೀಮಂತರನ್ನೂ ರಾಜರನ್ನೂ ನಾಶಪಡಿಸುವ ಹಿಂಸಾವಾದಿಗಳು ರಾಜಕೀಯದಲ್ಲಿ ಆಲೋಚನೆ ಮಾಡುವುದು!"

"ಅವರೆಲ್ಲ ಏನನ್ನು ತಾನೇ ಆಲೋಚನೆಮಾಡಬಲ್ಲರು ಅಜ್ಜ?" ಅಂದ ತಿಯೊಡ್ಯೂಲ್, ಅಜ್ಜನನ್ನು ಬಲು ಭಕ್ತಿಯಿಂದ ನೋಡುತ್ತ. ಇವನಂಥ ಯುವಕರ ಕುರಿತೇ ಗಿಲೆನಾರ್ಮಂಡನ ಕೋಪವಿದ್ದುದರಿಂದ, ತಿಯೊಡ್ಯೂಲನನ್ನು ನೋಡಿದಷ್ಟೂ, ಯುವಕರ ನೆನಪು ಬರುತ್ತ, ಮುದುಕ ಮತ್ತಷ್ಟು ಕೋಪಗೊಂಡ. ಅವನು ರೇಗಿ ಹೇಳತೊಡಗಿದ, "ಈ ಜನರಿಗೆಲ್ಲ ರಾಜ ಬೇಡವಂತೆ, ಮುದುಕರು ಬೇಡವಂತೆ, ಮರ್ಯಾದೆ, ಶಿಸ್ತು, ದೊಡ್ಡಸ್ತಿಕೆ, ಕುಲ, ಗೌರವ, ಏನೂ ಬೇಡವಂತೆ! ಮೇರಿಯಸನಂಥ ಪೋಲಿ ಎರಡು ಮಾತು ಸರಿಯಾಗಿ ಆಡಲರಿಯದವ ಮುಟ್ಠಾಳರ ಮುಂದಾಳಾಗಿ ಭಾಷಣ ಗೈಯುವುದಂತೆ! ಇವರಿಂದೇನಾದೀತು ಇವರು ಮಾಡುವುದು ಅಷ್ಟು ಅನಾಹುತ ಮಾತ್ರ!"

"ಅನಾಹುತವನ್ನಲ್ಲದೆ ಮತ್ತೇನನ್ನು ತಾನೇ ಮಾಡಬಲ್ಲರು, ಅಜ್ಜ !" ದನಿಗೂಡಿಸಿದ ಮೊಮ್ಮಗ.

ವೃದ್ಧ ತನ್ನ ಮಾತುಗಳಿಂದಲೇ ತಾನು ಸೋತಿದ್ದ. ಅವನ ಮನಸ್ಸಿನ ಗೊಂದಲ ಮಾತ್ರ ನಿಂತಿರಲಿಲ್ಲ. ಯುವಕರ ಮೇಲಿನ ಕೋಪದ ಆವೇಶದಿಂದ ತನ್ನೆದುರಿಗಿದ್ದವನೇ ಯಾರೆಂಬುದು ಅವನಿಗೆ ಮರೆತುಹೋಗಿರಬೇಕು. ತಿಯೊಡ್ಯೂಲನ ಸಮೀಪ ಬಂದು ನಿಂತು, ಅವನ ಮುಖವನ್ನು ದೃಷ್ಟಿಸಿ ನೋಡಿ, ಅವನ ಪ್ರಾಯವನ್ನು ಗ್ರಹಿಸುತ್ತ, "ಮಂಗಾ, ಬುದ್ಧಿ ಎಳ್ಳಷ್ಟಿಲ್ಲ, ನಿನಗೆ," ಅಂದುಬಿಟ್ಟ.

ಆರನೆಯ ಸಂಪುಟ

೧. ಸೌಂದರ್ಯದರ್ಶನ

ಮೇರಿಯಸ್ ಈಗ ಬಡತನದಿಂದ ಪಾರಾಗಿದ್ದ. ತನ್ನ ಸ್ಥಿತಿಗೆ ತಕ್ಕಂಥ ಆಹಾರಸೇವಿಸುತ್ತಿದ್ದ. ಒಳ್ಳೆಯ ಪೋಷಾಕು ಧರಿಸುತ್ತಿದ್ದ. ಆಹಾರ, ವಿಹಾರ, ನಡೆನುಡಿ ಎಲ್ಲವೂ ಉತ್ತಮತರದವಾಗಿದ್ದು, ಅವನ ಮನಸ್ಸಿನ ಪರಿಸ್ಥಿತಿಯೂ ಉತ್ತಮಗೊಂಡಿತ್ತು. ಈಗ ಅವನೊಬ್ಬ ಗಣನೀಯ, ಸುಲಕ್ಷಣ ಯುವಕನಾಗಿದ್ದ. ಎತ್ತರ ಮಧ್ಯಮತರದ್ದು, ಅಗಲ ಹಣೆ, ಮನಸ್ಸು ಮಾಡಿದಾಗ ಮಿಂಚಿನಂತೆ ಪ್ರಭಾವ ಬೀರಬಲ್ಲ ತೇಜಃಪುಂಜವಾದ, ಆಳವಾದ ಕಣ್ಣುಗಳು, ತುಂಬಿದ ಮೈಕಟ್ಟು, ಇವೆಲ್ಲ ಇದ್ದು, ಮೇರಿಯಸ್ ಒಬ್ಬ ಸುಂದರ ಮತ್ತು ಗಂಭೀರ ಪುರುಷನಾಗತೊಡಗಿದ್ದ. ಅವನು ಕೇವಲ ಭಾವನಾಮಯ ಜೀವಿಯಂತಿದ್ದು ವಿಲಾಸಗಳನ್ನು ವರ್ಜಿಸಿದ್ದುದರಿಂದ, ಅವನನ್ನು ಸ್ನೇಹಿತರು 'ಇಗರ್ಜಿ ಫಾದರ್' ಎಂದು ಹಾಸ್ಯ ಮಾಡುತ್ತಿದ್ದರು.

ಈತ ಮಹಿಳೆಯನ್ನು 'ಸ್ತ್ರೀ' ಎಂದು ಗುರುತಿಸಿ ನೋಡುತ್ತಿರಲಿಲ್ಲ. 'ಸ್ತ್ರೀ' ಎಂಬುದಾಗಿ ಅವನು ಯಾರನ್ನಾದರೂ ಅಪರೂಪಕ್ಕಾದರೂ ಗ್ರಹಿಸಿದುದಿದ್ದರೆ ಅದು ಅವನ ಮನೆ ಕೆಲಸದ ಹೆಂಗುಸೊಬ್ಬಳು, ಮತ್ತು ಲಕ್ಸಂಬರ್ಗಿನ ಉದ್ಯಾನವನದಲ್ಲಿ ತನ್ನ ತಂದೆಯ ಜೊತೆ ಬರುತ್ತಿದ್ದ ಒಬ್ಬಳು ಕುರೂಪಿ ಹುಡುಗಿ ಮಾತ್ರ. ಮನೆ ಕೆಲಸದ ಹೆಂಗುಸಿನ ಮುಖದಲ್ಲಿ ಕೂದಲು ಬೆಳೆದಿತ್ತಾದುದರಿಂದ, ಮೇರಿಯಸನ ಸ್ನೇಹಿತರು ಈತನನ್ನು ನೋಡಿ, ಇವನ ಮೀಸೆಗಳನ್ನು ಅವಳು ಧರಿಸಿದ್ದಳೆಂದು ತಮಾಷೆ ಮಾಡುತ್ತಿದ್ದರು.

ಲಕ್ಸಂಬರ್ಗಿನಲ್ಲಿ ಕಾಣುತ್ತಿದ್ದ ಹುಡುಗಿಗೆ ಹದಿಮೂರು ಹದಿನಾಲ್ಕು ವರ್ಷ ಪ್ರಾಯವಾಗಿರಬಹುದಾದಂತೆ ತೋರುತ್ತಿದ್ದಳು. ಅವಳಿಗೆ ಪ್ರಪಂಚದ ಅನುಭವ ಏನೂ ಇರಲಿಲ್ಲವೆಂಬಂತೆ ಅವಳು ತನ್ನ ಜೊತೆಯಲ್ಲಿದ್ದ ವೃದ್ಧನ ಸಂಗಡ ಸದಾ ಮಾತಾಡುತ್ತಿರುತ್ತಿದ್ದಳು. ವೃದ್ಧನಿಗೆ ಸಾಧಾರಣ ಅರುವತ್ತು ವರ್ಷ ಪ್ರಾಯವಾಗಿರಬಹುದಾದಂತೆ ತೋರುತ್ತಿದ್ದ. ಅವನು ಬಲು ಚೊಕ್ಕಟವಾದ ದುಸ್ತು ಧರಿಸುತ್ತಿದ್ದ. ಬಟ್ಟೆಯೂ ಒಳ್ಳೆಯ ತರಹದ್ದೇ ಆಗಿತ್ತು. ಅವನೊಬ್ಬ ನಿವೃತ್ತ ಸೈನಿಕನೆಂದು ತಿಳಿಯಬಹುದಿತ್ತು. ಆತ ಯಾರನ್ನೂ ನೋಡುತ್ತಿರಲಿಲ್ಲ, ಯಾರ ಸಂಗಡವೂ ಮಾತಾಡುತ್ತಿರಲಿಲ್ಲ. ಅವರಿಬ್ಬರೂ ಲಕ್ಸಂಬರ್ಗಿನ ಒಂದು ಕಡೆ, ಜನ ಹೆಚ್ಚಾಗಿ ಹೋಗದಿರುವ ಸ್ಥಳದಲ್ಲೇ ಕುಳಿತಿರುತ್ತಿದ್ದರು. ಮೇರಿಯಸನಿಗೂ ಏಕಾಂತತೆಯೇ ಬೇಕಾಗಿದ್ದುದರಿಂದ ಅವನೂ ಆ ಕಡೆಗೇ ಹೋಗಿ ತಿರುಗಾಡಿ ಬರುತ್ತಿದ್ದ. ಭಾವನಾ ಪ್ರಪಂಚದಲ್ಲೇ ಸದಾ ಇರುತ್ತಿದ್ದ ಮೇರಿಯಸನಿಗೆ ಲಕ್ಸಂಬರ್ಗಿನ ಪ್ರಕೃತಿ ಸೌಂದರ್ಯಗಳು ಅನಾಕರ್ಷಣೀಯವೇ ಆಗಿದ್ದುವು. ಅವನ ಹೃದಯದಲ್ಲೇ ಹಕ್ಕಿಗಳ ಚಿಲಿಪಿಲಿ, ನೀಲ ಬಣ್ಣದ ವಿಶಾಲಾಕಾಶ, ವಸಂತ

ಋತುವಿನ ಮರಗಿಡಗಳ ಸೌಂದರ್ಯ, ಹೂಗಳ ಕಂಪು ಎಲ್ಲವೂ ತುಂಬಿಕೊಂಡಿದ್ದುವು. ಹೀಗಾಗಿ ಮೇರಿಯಸ್ ಈ ವೃದ್ಧ ಮತ್ತು ಈ ಬಾಲಕಿಯ ಕುರಿತು ಯಾವ ಗಮನವನ್ನೂ ಕೊಡುತ್ತಿರಲಿಲ್ಲ. ಹೀಗೆ ಅವನು ಲಕ್ಸಂಬರ್ಗಿಗೆ ಹೋಗಿಬರುತ್ತಿದ್ದಾತ ಒಮ್ಮೆ ಯಾವುದೋ ಒಂದು ಕೆಲಸದ ಬಾಬ್ತು ಬೇರೆ ಕಡೆಗೆ ಹೋದ. ಹಾಗೆ ಹೋದವನು ಕೆಲವು ತಿಂಗಳುಗಳ ಕಾಲ ಈ ಕಡೆ ಬರಲೇ ಇಲ್ಲ.

ಕೆಲವು ತಿಂಗಳುಗಳನಂತರ ಮೇರಿಯಸ್ ಪುನಃ ಲಕ್ಸಂಬರ್ಗಿಗೆ ಹೋಗತೊಡಗಿದ. ಈ ಸರ್ತಿ ಅವನು ಅಲ್ಲಿಗೆ ಹೋದಾಗ ಮೊದಲಿನ ವೃದ್ಧನೂ ಹೊಸ ಒಬ್ಬಳು ಸುಂದರ ತರುಣಿಯೂ ಮರದಡಿಯ ಬೆಂಚಿನ ಮೇಲೆ ಕುಳಿತಿದ್ದುದನ್ನು ಕಂಡ. ಆ ಕಾರಣವಾಗಿಯೇ ಮೇರಿಯಸ್ ಅವರಿಬ್ಬರನ್ನೂ ಮತ್ತೂ ಒಂದೆರಡು ಸರ್ತಿ ನೋಡಿದ. ಆಗ ಆ ಹೊಸಬಳು ಮೊದಲಿನ ಹುಡುಗಿಯೇ ಈಗ ತರುಣಿಯಾಗಿರುವಳೆಂದು ತಿಳಿದುಕೊಂಡ.

ತರುಣಿ ಸೊಗಸಾದ ಬಟ್ಟೆಗಳಿಂದ ಕುಲೀನ ಸ್ತ್ರೀಯಂತೆ ಉಡುಪು ಧರಿಸಿದ್ದಳು. ಆ ದುಸ್ತು ಅನಾಡಂಬರದ್ದಾಗಿದ್ದು ಅವಳಿಗೆ ತುಂಬ ಒಪ್ಪುತ್ತಿತ್ತು. ಅವಳು ಎತ್ತರವಾಗಿದ್ದಳು, ಗಂಭೀರ ವಾಗಿದ್ದಳು, ನಿಷ್ಕಪಟ ಮನಸ್ಸನ್ನೂ ಎಳೆತನವನ್ನೂ ಸೂಚಿಸುವ ಕಣ್ಣುಳ್ಳವಳಾಗಿದ್ದಳು. ಅವಳ ಮುಖದಲ್ಲಿ ನವತಾರುಣ್ಯದ ತೇಜಸ್ಸು ಹೊರಹೊಮ್ಮಿ, ಅದು ನೋಡಿದವರನ್ನು ಭ್ರಮೆಗೊಳಿಸು ತ್ತಿತ್ತು. ಅವಳ ಕೆನ್ನೆಗಳು ಗುಲಾಬಿ ಚಿಗುರಿನ ಬಣ್ಣದವಾಗಿದ್ದುವು. ಹಣೆ ಶುಭ್ರವಾಗಿದ್ದು, ನಯವಾಗಿದ್ದು ಶ್ವೇತಶಿಲೆಯಿಂದ ಸುಂದರವಾಗಿ ಕೆತ್ತಿ ನಿರ್ಮಿಸಿದಂತಿತ್ತು. ಸೌಂದರ್ಯದ ಸಮು ದಾಯವೇ ಕೂಡಿಕೊಂಡಿದ್ದಂತೆ ಇದ್ದ ಅವಳ ಬಾಯಿ, ತುಟಿ ಗಲ್ಲಗಳನ್ನು ತುಂಬಿದ ಬಿಳಿ ಕತ್ತು ಎತ್ತಿ ತೋರಿಸುತ್ತಿತ್ತು. ಸೌಂದರ್ಯದ ಶೋಭೆಯನ್ನು ಅಲೆಅಲೆಯಾಗಿ ಹೊಳೆದು ತೋರಿಸುತ್ತಿದ್ದ ಹೇರಳ ತಲೆಕೂದಲೂ ಅವಳಿಗಿತ್ತು. ಅವಳ ಮೂಗನ್ನು ವರ್ಣಿಸುವುದು ಅಸಾಧ್ಯ. ಆದರೆ ಅವಳ ಸೌಂದರ್ಯದ ವೈಶಿಷ್ಟ್ಯವೇ ಆ ಮೂಗಿನಲ್ಲಿತ್ತು. ಚಿತ್ರಕಾರರು ಚಿತ್ರಿಸಲೂ ಕವಿಗಳು ವರ್ಣಿಸಲೂ ಪ್ರಯತ್ನಿಸಿ ಸೋತಂಥ ಮೂಗು ಅವಳಿಗಿತ್ತು. ಆ ಮೂಗು ಕೋಮಲ ಹಾಸ್ಯದ, ಥಳುಕಿನ ಪ್ಯಾರಿಸಿನ ಸುಂದರ ಮೂಗಾಗಿತ್ತೆಂದು ಮಾತ್ರ ಹೇಳಬಲ್ಲೆವು. ಅವಳ ಸಮೀಪ ತಿರುಗಾಡಿದಾಗ ಆ ಉದ್ಯಾನದ ಪುಷ್ಪಸೌರಭ ಮೃದುವಾಗಿ, ಬೇಕಾದಷ್ಟು ಮಾತ್ರ, ಅವಳ ಮುಖಾಂತರ ನಮಗೆ ಬೀಸಿಬರುತ್ತಿತ್ತು.

ಇಂಥ ರೂಪರಾಶಿಯನ್ನು ಮೇರಿಯಸ್ ನೋಡಿದಾಗಲೂ ಅವನಲ್ಲಿ ವಿಶೇಷ ಯಾವ ಪ್ರಭಾವ ವನ್ನೂ ಆ ಸೌಂದರ್ಯ ಮಾಡಲಿಲ್ಲ. ಆ ಉದ್ಯಾನವನದ ಹೂಗಳನ್ನೂ ಸುಂದರ ಶಿಲಾಪ್ರತಿಮೆ ಗಳನ್ನೂ ಅವನು ನೋಡಿದ್ದಂತೆಯೇ ಈ ತರುಣಿಯನ್ನೂ ನೋಡಿ, ಎಂದಿನಂತೆಯೇ ಲಕ್ಸಂಬರ್ಗಿ ನಲ್ಲಿ ತಿರುಗಾಡುತ್ತಿದ್ದ.

೨. ವಸಂತ ಬಂದ ಋತುಗಳ ರಾಜ ತಾ ಬಂದ !

ಈ ಹೊತ್ತು ವಸಂತಋತುವಿನ ಒಂದು ಪ್ರಾತಃಕಾಲ ಬೆಳಗಾಗುವ ಮೊದಲೇ ದೇವತೆಗಳು ಆಕಾಶವನ್ನೆಲ್ಲ ತೊಳೆದು ಶುಭ್ರಪಡಿಸಿರುತ್ತಾರೆ. ಈ ವಿಷಯವನ್ನು ಅರಿತೇ ಪಕ್ಷಿಗಳು ತಮ್ಮ ಚಿಲಿ ಪಿಲಿ ಶಬ್ದದೊಂದಿಗೆ ಮರದಿಂದ ಮರಕ್ಕೆ ಎಡೆಬಿಡದೆ ಹಾರಾಡುತ್ತಿವೆ. ಸೂರ್ಯ ನವ ಚೈತನ್ಯ ದಿಂದ ಉದಯಿಸಿ, ಲಕ್ಸಂಬರ್ಗಿನ ಸೌಂದರ್ಯವನ್ನು ತನ್ನ ಪ್ರಭೆಯಿಂದಲೂ ಹೆಚ್ಚಿಸ ತೊಡಗಿ ದ್ದಾನೆ. ಈ ಆನಂದಮಯ ಮುಹೂರ್ತದಲ್ಲೇ ಮೇರಿಯಸ್ ಎಂದಿನಂತೆ ಲಕ್ಸಂಬರ್ಗಿನ ತನ್ನ

ಏಕಾಂತ ವಿಭಾಗದ ಕಡೆಗೆ ಹೋಗುತ್ತಿದ್ದಾನೆ. ವೃದ್ಧನ ಜೊತೆ ಬರುತ್ತಿದ್ದ ತರುಣಿ ಯಾವತ್ತೂ ಕುಳಿತಿದ್ದ ಸ್ಥಳದಲ್ಲೇ ಕುಳಿತಿದ್ದಾಳೆ. ಮೇರಿಯಸ್ ಬರುತ್ತಿರುವುದನ್ನು ತರುಣಿ ಕಂಡು ಅವನನ್ನು ನೋಡಿದಳು. ಪ್ರತಿಯಾಗಿ ಇವನು ಅವಳನ್ನು ನೋಡಿದ. ಅವರಿಬ್ಬರ ದೃಷ್ಟಿ ಸೇರಿದುವು. ನಡೆದದ್ದು ಇಷ್ಟೇ. ಆದರೆ, ತರುಣಿಯ ದೃಷ್ಟಿಯಲ್ಲಿ—ಅವಳು ಅವನನ್ನು ನೋಡಿದುದರಲ್ಲಿ—ಮೇರಿಯಸ್ ಗಮನಿಸಬೇಕಾದುದು ಏನಾದರೂ ಇತ್ತೇ? ಈ ಪ್ರಶ್ನೆ ಮೇರಿಯಸನ ಮನಸ್ಸಿನಲ್ಲಿ ಮೂಡಿತು. ಆ ಕುರಿತು ತುಂಬ ಯೋಚಿಸಿದ. ನಿಶ್ಚಯವಾದ ಯಾವ ಅಭಿಪ್ರಾಯಕ್ಕೂ ಅವನು ತಲಪಲಿಲ್ಲ. ಆದರೆ, ಯೋಚಿಸುತ್ತ ಹೋದ ಹಾಗೆ ಆ ದೃಷ್ಟಿಯಲ್ಲಿ ಏನೋ ಇತ್ತೆಂದು ಗ್ರಹಿಸಿದ—ಅದರಲ್ಲಿ ವಿಶಿಷ್ಟವಾದದ್ದೆಲ್ಲ ಇತ್ತೆಂದು ಭಾವಿಸಿದ. ಆದರೂ ಆ ತರುಣಿಯ, ಎಳೆ ಮಗುವಿನಂಥ ಸರಳ ಮುಖದಲ್ಲಿ ಏನು ತಾನೇ ಇರಬಲ್ಲದು? ಎಂದೂ ಯೋಚಿಸಿದ. ಆದರೆ, ಪುನಃ ತೋರಿದ್ದೂ ಮೊದಲಿನಂತೆಯೇ! ಆ ದೃಷ್ಟಿಯಲ್ಲಿ ವಿಶಿಷ್ಟವಾದ್ದೆಲ್ಲ ಇತ್ತು. ಬಾಗಿಲನ್ನು ಮಗು ಅರಿಯದೇ ತೆರೆದಿದ್ದುದು ಹೌದಾದರೂ ಬಾಗಿಲಿನಿಂದಾಚೆಗೆ ಒಂದು ಮಹಾಸ್ಥಳವನ್ನು ಮೇರಿಯಸ್ ಕಂಡ. ಒಮ್ಮೆ ಮಾತ್ರ ಅವನಿಗೆ ಆ ಮಹಾಸ್ಥಳ ಗೋಚರಿಸಿ ಮರುಕ್ಷಣ ಮಾಯವಾಯಿತು. ಅಂಥ ದೃಷ್ಟಿಸಮಾಗಮ ಯಾವ ಮನುಷ್ಯನಿಗೆ ಎಂದು ಆಗುತ್ತದೋ ಆ ಮನುಷ್ಯನ ಆಗಿನ ಸ್ಥಿತಿಯನ್ನು ವರ್ಣಿಸುವುದು ಅಸಾಧ್ಯ.

ಮೇರಿಯಸ್ ತನ್ನ ಮನೆಗೆ ಬಂದಾಗ ತನ್ನ ಉಡುಪು ಹಳತು ಎಂದು ಅವನ ಬುದ್ಧಿಗೆ ತೋರಿತು. ಮರುದಿನ ಹೊಸ ಇಜಾರು, ಹೊಸ ಕೋಟ್, ಹೊಸ ಹ್ಯಾಟ್, ಬೂಟುಗಳನ್ನು ಧರಿಸಿ ಲಕ್ಸಂಬರ್ಗಿಗೆ ಹೋದ.

ಈ ದಿನ ಮೇರಿಯಸ್ ಲಕ್ಸಂಬರ್ಗಿನಲ್ಲಿ ನಡೆಯುತ್ತಿದ್ದಾಗ 'ತನ್ನ' ಸ್ಥಳದ ಅಭಿಮುಖವಾಗಿ ತಾನು ಹೋಗುತ್ತಿರುವೆನೆಂಬುದು ಅವನ ಅರಿವಿನಲ್ಲಿತ್ತು. ಅಲ್ಲಿ 'ಅವರು' ಅವರ ಸ್ಥಳದಲ್ಲಿ ಕುಳಿತಿದ್ದರು. ಮೇರಿಯಸ್ 'ಅವರನ್ನು' ಕಂಡನಂತರ ತನ್ನ ಮುಂದಿನ ಹೆಜ್ಜೆಯನ್ನಿಡುವ ಮೊದಲು ತನ್ನ ಉಡುಪನ್ನೆಲ್ಲ—ಅದು ಮೊದಲೇ ಸರಿಯಾಗಿದ್ದರೂ—ಪುನಃ ಸರಿಮಾಡಿಕೊಂಡ. ಗುರಿಯ ಕಡೆಗೆ ಕ್ರಮವಾಗಿ ನಡೆದು ತನ್ನ ಸ್ಥಳದತ್ತ ಕ್ರಮಿಸತೊಡಗಿದ. ಹ್ಯಾನಿಬಾಲ್ ರೋಮ್ ನಗರವನ್ನು ವಶಪಡಿಸಿಕೊಳ್ಳಲು ಮುಂದುವರಿದಾಗ ಈ ತೆರನಾಗಿ ನಡೆದಿದ್ದನಂತೆ. ಮೇರಿಯಸ್ ಸಹ ಇಂದು ಜಯಸಂಪಾದನೆಗಾಗಿ ತನ್ನ ಹೆಜ್ಜೆಗಳನ್ನು ಬಲು ಜಾಗರೂಕತೆಯಿಂದ ಇಡುತ್ತ ಸ್ಥಳವನ್ನು ಆಕ್ರಮಿಸುತ್ತಿದ್ದ.

ಯುದ್ಧರಂಗದಲ್ಲಿ ಮುಂದುವರಿಯುವಾಗ ಹಿಂದೆ ಮುಂದೆ ನೋಡಿಕೊಳ್ಳಬೇಕಾದಂತೆ ಮೇರಿಯಸ್ ಸ್ಥಳದ ಮತ್ತು ಸನ್ನಿವೇಶಗಳ ಪರಿಸ್ಥಿತಿಯನ್ನು ಒಮ್ಮೆ ಪರಿಶೀಲಿಸಿ ನೋಡಿದ. ಆಗಲೇ ಆ ತರುಣಿ ತನ್ನನ್ನೇ ನೋಡುತ್ತಿರುವಳಾಗಿ ಇವನಿಗೆ ಅರಿವಾಯಿತು. ಇವನ ಹೆಜ್ಜೆಗಳು ಮುಂದೆ ಹೋಗಲು ನಿರಾಕರಿಸಿದುವು. ಮೈ ನಡುಗಿತು, ಎದೆಯ ಬಡಿತ ಕಿವಿಗೆ ಕೇಳತೊಡಗಿತು. ಮೇರಿಯಸ್ ತನ್ನ ಪರಿಸ್ಥಿತಿಯನ್ನು ಪುನಃ ಪರಿಶೀಲಿಸಿದ. ತಾನೊಬ್ಬ ಪುರುಷನಲ್ಲವೇ, ಈಗ ಸೋತರೆ ತನಗೆ ಅಪಮಾನವಲ್ಲವೇ ಎಂದು ಗ್ರಹಿಸಿ, ಧೈರ್ಯ ತಂದುಕೊಂಡು, ತನ್ನ ಶಿಸ್ತಿನ ನಡಿಗೆಯ ಕುರಿತು ಏಕಾಗ್ರತೆಯಿಟ್ಟುಕೊಂಡು, ಅತ್ತಿತ್ತ ನೋಡದೆ, ತನ್ನ ಕತ್ತು ಕಿವಿಗಳು ಕೆಂಪಾಗಿರಬೇಕೆಂಬ ಸಂಶಯದಿಂದ ಮುಖವನ್ನೂ ಕೆಂಪು ಮಾಡಿಕೊಂಡು, ಜೇಬಿನೊಳಗೆ ಕೈ ಇಟ್ಟುಕೊಂಡು, ಒಬ್ಬ ಮಹಾರಾಜಕಾರಣಿ ತನ್ನ ರಾಜ್ಯದ ಭವಿಷ್ಯ ಚಿಂತಿಸುತ್ತಿರುವ ಗಾಂಭೀರ್ಯದಿಂದ, ತನ್ನ ಪಥದಲ್ಲೇ ಮುಂದೆ ಸಾಗಿದ. ಕೊನೆಗೆ 'ಅವಳು' ಕುಳಿತಿದ್ದ ಆಸನನ್ನೂ ದಾಟಿ ಮುಂದೆ

ಸಾಗಿದ. ತಾನು ಕತ್ತು ತಿರುಗಿಸಿ ಅವಳನ್ನು ನೋಡಿಲ್ಲವೆಂಬ ಜ್ಞಾನ ಸ್ಪಷ್ಟವಾಗಿದ್ದರೂ ಆ ತರುಣಿಯ ಉಡುಪು ಹಿಂದಿನ ದಿನ ಇದ್ದಂತೆಯೇ ಇತ್ತೆಂದು ಮೇರಿಯಸನಿಗೆ ಸ್ಪಷ್ಟವಾಗಿತ್ತು. ಇಷ್ಟೂ ಅಲ್ಲದೆ ಆ ತರುಣಿ ಮಾನ್ಸಿಯರ್ ಲೆಬ್ಲೇಂಕರೊಡನೆ ಮಾತಾಡುತ್ತಿದ್ದುದನ್ನೂ ಮೇರಿಯಸ್ ಕೇಳಿದ್ದ. ಆ ಸ್ವರ ಒಂದೇ ಸಾಕಲ್ಲ! ಅದರ ಜ್ಞಾಪಕ ಮಾತ್ರದಿಂದ ಅವಳನ್ನು ತಾನು ನೋಡಲಿಲ್ಲ ವಲ್ಲ ಎಂಬ ದುಃಖವೇ ಮೇರಿಯಸನಿಗೆ ಆಗಲಿಲ್ಲ. ಅಲ್ಲದೆ ಯಾವ ವಿಧದ ದೃಷ್ಟಿಯಿಂದ ಮೇರಿಯಸ್ ಅರಿತನೆಂಬುದನ್ನು ಹೇಳುವುದು ಕಷ್ಟವಾದರೂ ಆ ತರುಣಿ ಆತನ ಹೊಸ ದುಸ್ತನ್ನು, ಮುಖ್ಯವಾಗಿ, ಹೊಳಪಿನ ಬೂಟ್ಸುಗಳನ್ನು ಚೆನ್ನಾಗಿ ನೋಡಿದ್ದಳೆಂದು ಮೇರಿಯಸ್ ತಿಳಿದಿದ್ದ. ಈತ ಬರೆದು ಗುಪ್ತನಾಮದಿಂದ ಪ್ರಕಟಿಸಿದ್ದ "ಮಾರ್ಕೋಸ್ ಓಬ್ರೆಗಾನ್" ಎಂಬ ಪುಸ್ತಕದ ಕರ್ತೃ ಮೇರಿಯಸನೇ ಎಂಬುದು ಆ ತರುಣಿಗೆ ಗೊತ್ತಾಗಿದ್ದಿದ್ದರೆ, ಅವಳ ದೃಷ್ಟಿಯಲ್ಲಿ ಇವನ ಗೌರವ ಮತ್ತಷ್ಟು ಹೆಚ್ಚುತ್ತಿತ್ತೆಂಬುದರಲ್ಲಿ ಇವನಿಗೆ ಸಂಶಯ ತೋರಲಿಲ್ಲ. ಈ ಎಲ್ಲ ಆಲೋಚನೆಗಳನ್ನೂ ಮಾಡುತ್ತ ಕೆಲಕಾಲ ಒಂದೆಡೆ ಕುಳಿತು, ಪುನಃ ಆ ಆಸನದ ಎದುರಾಗಿಯೇ ಹಿಂದೆ ಬರುವ ಸಾಹಸವನ್ನೂ ಮಾಡಿದ. ಈ ಸರ್ತಿಯೂ ಅವಳನ್ನು ನೋಡಲು ಅವನಿಗೆ ಧೈರ್ಯ ಬರಲಿಲ್ಲ. ಆದರೆ, ತರುಣಿ ತನ್ನನ್ನೇ ನೋಡಿರುವಳೆಂದು ತೃಪ್ತಿಪಟ್ಟುಕೊಂಡ. ತರುಣಿಯೂ ಆಕೆಯ ಜೊತೆಯಲ್ಲಿದ್ದ ವೃದ್ಧನೂ ಬಲು ಗೌರವಸ್ಥರೆಂದು ಸಂತೋಷಪಟ್ಟುಕೊಳ್ಳುತ್ತ, ಅಂಥ ಗೌರವಾನ್ವಿತ ವೃದ್ಧರ ಹೆಸರನ್ನು ಕಾಲ್ಪನಿಕ "ಮಾನ್ಸಿಯರ್ ಲೆಬ್ಲೇಂಕ್" ಎಂದು ಇಟ್ಟದ್ದಕ್ಕೆ ಮೇರಿ ಯಸ್ ಪಶ್ಚಾತ್ತಾಪ ಪಟ್ಟುಕೊಂಡ.

ಆ ದಿನ ಅವನು ಊಟಮಾಡಲಿಲ್ಲ. ದೀಪವನ್ನೂ ಉರಿಸಲಿಲ್ಲ. ಅವನ ಕೆಲಸದಾಕೆ ದೀಪ ಹೊತ್ತಿಸಿದಾಗ ಮಾತ್ರ ತನ್ನ ಭಾವನಾಪ್ರಪಂಚದಿಂದ ಹೊರಬಂದ. ತನ್ನ ಅಂದಿನ ಜಯ ಸಂಪಾದನೆಗೆ ಸಹಾಯಕವಾಗಿದ್ದ ಕೋಟು ಇಜಾರುಗಳನ್ನು ಎಚ್ಚರದಿಂದ ಬಿಚ್ಚಿ, ಒರೆಸಿ, ಕ್ರಮ ವಾಗಿ ಮಡಿಸಿ, ಪೆಟ್ಟಿಗೆಯೊಳಗಿಟ್ಟ.

೩. ಪ್ರಥಮ ಸಮಾಗಮ

ಮರುದಿನವೂ ಮೇರಿಯಸ್ ತನ್ನ ಉತ್ತಮ ಪೋಷಾಕು ಧರಿಸಿ ಲಕ್ಸಂಬರ್ಗಿಗೆ ಹೋದ. ಈ ದಿನ ತಿರುಗಾಡುವುದನ್ನು ಬಿಟ್ಟ. ಆದರೆ, ತಾನು ವೃದ್ಧನಿಗೆ ಕಾಣಿಸಿಕೊಳ್ಳದೆ, ತರುಣಿಗೆ ಮಾತ್ರ ಕಾಣುವಂತೆ, ಒಂದು ಸ್ಥಳ ನೋಡಿ, ಅಲ್ಲಿಂದ ತರುಣಿಯನ್ನು ನೋಡುತ್ತ ಆನಂದಭರಿತನಾಗಿ ಕುಳಿತ. ಅವಳ ಮುಖ ಸ್ಪಷ್ಟವಾಗಿ ತೋರುತ್ತಿತ್ತು. ಅವಳದೇ ಆಗಿದ್ದ ಕರಿಲಂಗ, ಮತ್ತು ಬಿಳಿ ಹ್ಯಾಟು ಸ್ಪಷ್ಟವಾಗಿ ಕಾಣುತ್ತಿದ್ದುವು. ಅವನ್ನಾದರೂ ಕಂಡದ್ದು ಪರಮಭಾಗ್ಯವೆಂದರಿಯುತ್ತ ಮೇರಿಯಸ್ ಆಲೋಚನೆಗಳಲ್ಲಿ ಮುಳುಗಿದ. ಅವಳಿದ್ದ ಕಡೆ ಮಹಾ ಪ್ರಭೆಯಿತ್ತೆಂಬ ಭಾವನೆ ಅವನಿಗೆ ಸದಾ ಇತ್ತು. ಈ ಪ್ರಭೆಯೊಂದು ಇದ್ದಷ್ಟುಕಾಲ ಅವನು ತನ್ನ ಮನಸ್ಸಿನ ಆಕಾಶದಲ್ಲಿ ಹಾರಾಡುತ್ತ ಇದ್ದ. ಅವನ ಈ ಭಾವನಾಮಯ ಗಗನದ ದಿವ್ಯಜ್ಯೋತಿಯೂ ಹಾರಾಟದ ಸ್ಫೂರ್ತಿಯೂ ಆ ತರುಣಿಯಾಗಿದ್ದಳು. ಈ ರೀತಿ ಅವನು ನೋಡುತ್ತಲೂ ಆನಂದಿಸುತ್ತಲೂ ಲಕ್ಸಂಬರ್ಗಿನ ಹೆಬ್ಬಾಗಿಲನ್ನು ಮುಚ್ಚುವ ತನಕವೂ ಅಲ್ಲಿ ಕುಳಿತಿದ್ದ. ಇದೇ ರೀತಿ ಅನಂತರವೂ ಎರಡು ಮೂರು ದಿನಗಳಲ್ಲಿ ಅವನು ಪಹರೆಯ ಸಿಪಾಯಿಯಂತೆ ಕ್ಲುಪ್ತಕಾಲದಲ್ಲಿ ಲಕ್ಸಂಬರ್ಗಿಗೆ ತಲಪಿ, ಅದೇ ಸ್ಥಳದಲ್ಲಿ ಕುಳಿತು, ಆ ತರುಣಿಯನ್ನು ನೋಡಿ ಆನಂದಿಸುತ್ತಿದ್ದ.

ಮೇರಿಯಸನ ಈ ಶಿಸ್ತಿನ ಕ್ಲುಪ್ತತೆಯ ಪಯಣಗಳನ್ನು ನೋಡಿ ಕೆಲಸದ ಹೆಂಗುಸಿಗೆ ಬಹಳ ಆಶ್ಚರ್ಯವಾಯಿತು. ಪ್ರತಿದಿನವೂ ಉತ್ತಮ ತರದ ದುಸ್ತನ್ನು ಮಾಡಿ ಹೋಗುತ್ತಿದ್ದುದನ್ನು ಕಂಡು ಒಂದು ದಿನ ಆ ಕೆಲಸದಾಕೆ ಅಡಗಿಕೊಂಡೇ ಅವನನ್ನು ಹಿಂಬಾಲಿಸಿದಳು. ಆದರೆ ಅವನ ನಡಿಗೆ ಅವಳದಕ್ಕಿಂತ ರಭಸವಿದ್ದುದರಿಂದ ಅವಳು ಸ್ವಲ್ಪದೂರ ಮಾತ್ರ ಹೋಗಿ, ಸೋತು ಹಿಂತಿರುಗಿದಳು.

ದಿನಗಳು ದಾಟಿದ ಹಾಗೆಯೇ ಆ ತರುಣಿ ಅನುಪಮ ಸುಂದರಿಯೆಂದು ಮೇರಿಯಸನಿಗೆ ಗೊತ್ತಾಯಿತು. ಅವರಿಬ್ಬರ ದೃಷ್ಟಿ ಒಮ್ಮೊಮ್ಮೆ ಸಮಾಗಮ ಹೊಂದುತ್ತಿದ್ದುವು. ಅಂಥ ಪ್ರಸಂಗವೇ ತರುಣಿಯ ಮಹಾ ವರಪ್ರಸಾದವೆಂದು ಇವನು ತಿಳಿಯುತ್ತ, ಅದರಿಂದಲೇ ಪರಮಾನಂದಭರಿತನಾಗಿ ಅಲ್ಲೇ ಕುಳಿತಿರುತ್ತಿದ್ದ. ಆ ತರುಣಿಯ ಸೌಂದರ್ಯದಲ್ಲಿ ಒಂದು ವೈಶಿಷ್ಟ್ಯವಿತ್ತು. ಅವಳ ಅಂತರಂಗದ ಯಾವುದೋ ದುಃಖ ಆ ಸೌಂದರ್ಯದಲ್ಲಿ ಬೆರೆತಿತ್ತು, ಮತ್ತು ಅದಕ್ಕೆ ಒಂದು ಮೃದುತ್ವವನ್ನು ಕೊಡುತ್ತ, ವೈಶಿಷ್ಟ್ಯವನ್ನೂ ತಂದಿತ್ತು. ಆದರೆ, ಅವಳು ಮುಗುಳ್ನಗೆ ಬೀರಿದಾಗ ಆ ದುಃಖಭಾವವೆಲ್ಲ ಪೂರ್ಣಮಾಯವಾಗಿ, ಅವಳ ಹೃದಯದಲ್ಲಿ ತುಂಬಿದ್ದ ಆನಂದ, ಉತ್ಸಾಹ, ಚೈತನ್ಯಗಳು ಮಾತ್ರ ಉಕ್ಕಿ ಚಿಮ್ಮುತ್ತಿದ್ದುವು.

ಒಂದು ದಿನ ಮಾನ್ಸ್ಯರ್ ಲೆಬ್ಲೇಂಕರೂ ಆ ತರುಣಿಯೂ ತಮ್ಮ ಸ್ಥಳದಿಂದೆದ್ದು ಮೇರಿಯಸ್ ಇದ್ದೆಡೆಗೇ ಬರತೊಡಗಿದರು. ಹೀಗೂ ಒಂದು ಆಗುವ ಸಂಭವವಿದೆಯೇ, ಅವರು ತನ್ನೊಡನೆ ಮಾತಾಡಬಯಸುವರೇ, ಏನನ್ನು ಇರಬಹುದು ಎಂದು ಮೊದಲಾಗಿ ಮೇರಿಯಸ್ ಮಿಂಚಿನ ವೇಗದಿಂದ ಊಹಿಸತೊಡಗಿದ. ಅವನು ಈ ಪ್ರಸಂಗಗಳನ್ನು ಭಾವಪರವಶತೆಯಿಂದ ನಿರೀಕ್ಷಿಸುತ್ತಿದ್ದುದರಿಂದ ಈ ನಿರೀಕ್ಷಾವಧಿ ಒಂದು ಬಗೆಯ ಹಿಂಸಾಪೂರಿತ ಆನಂದವೇ ಆಗಿತ್ತು. ಈ ಆನಂದದಲ್ಲಿ ಅವನಿಗೆ ಸ್ಮೃತಿ ತಪ್ಪುವಂತೆಯೂ ಭಾಸವಾಗತೊಡಗಿತು. ತನ್ನ ಹೃದಯದ ಆವೇಗವನ್ನು ತಡೆಹಿಡಿಯಲು ಪ್ರಯತ್ನಿಸುತ್ತ, ಉಸಿರನ್ನೇ ಬಿಗಿ ಕಟ್ಟಿ, ತನ್ನೆದುರಿಗೆ ಬರುತ್ತಿದ್ದವರನ್ನು ನೋಡತೊಡಗಿದ. ಆ ತರುಣಿ ದೇವಕನ್ನೆಯಂತೆ—ಸೌಂದರ್ಯದ ಅಧಿದೇವತೆಯೇ ತನ್ನೆದುರಿಗೆ ದೇವಲೋಕದಿಂದಿಳಿದು ಬರುತ್ತಿರುವವಳಂತೆ—ತೋರಿದಳು. ಅವಳ ಪ್ರಭೆ ಇವನ ಅಂತರ್ಬಹಿಶ್ಚಕ್ಷುಸ್ಸುಗಳನ್ನು ಕುಕ್ಕಿ ಇವನನ್ನು ಪ್ರಜ್ಞಾಹೀನನನ್ನಾಗಿ ಮಾಡಿತು. ಈ ರೀತಿ ಇವನು ಆ ತೇಜೋರಾಶಿಯನ್ನು ನೋಡಿ ದಿಕ್ಕು ತೋಚದವನಾಗಿರುವಾಗಲೇ, ಮಾನ್ಸ್ಯರ್ ಲೆಬ್ಲೇಂಕರ್ ಮೇರಿಯಸನನ್ನು ದೃಷ್ಟಿಸಿ ನೋಡುತ್ತ, ಅವನನ್ನು ಒಂದು ವಿಧದಿಂದ ಪರೀಕ್ಷಿಸುತ್ತ ತರುಣಿಯನ್ನು ಕರೆದುಕೊಂಡು ಅವನ ಎದುರೇ ದಾಟಿ, ಅವರ ಮಾರ್ಗದಲ್ಲಿ ಮುನ್ನಡೆದರು.

ಮೇರಿಯಸ್ ಆ ದಿನವಿಡೀ ಆನಂದಪರವಶತೆಯಲ್ಲೇ ತೇಲುತ್ತಿದ್ದ. ಯಾವುದೋ ನೆಪವಿತ್ತು ಅಂದೇ ಸ್ನೇಹಿತರಿಗೊಂದು ಔತಣ ಕೊಟ್ಟ. ಕೆಲಸದವರಿಗೆ ಉದಾರತರದ ಭಕ್ಷಿಸುಗಳನ್ನು ನೀಡಿದ. ಅವನ ಮಾತುಕತೆಗಳೇ ಕಡಿಮೆಯಾಗಿದ್ದುವು. ಸ್ತ್ರೀಯರ ಕುರಿತಾಗಿ ಯಾವ ಮಾತಾಡಲೂ ಅಂಜುತ್ತಿದ್ದ. ಒಂದೆರಡು ಮಾತಾಡಿದಾಗಲೂ ಅದು ಅವರ ಕುರಿತು ಪರಮ ಗೌರವಯುತವಾಗಿ ಮಾತ್ರ.

೪. ಚಂದ್ರಗ್ರಹಣ?

ಪ್ರೇಮ ತನ್ನದೇ ಆದ ಒಂದು ಪ್ರಪಂಚವನ್ನು ಕಲ್ಪಿಸಬಲ್ಲದು. ಅದು ಪರಿಶುದ್ಧವಾಗಿದ್ದಾಗಲಂತೂ ಅಂಥ ಕಲ್ಪನಾಪ್ರಪಂಚದಲ್ಲಿ ಸ್ಫೂರ್ತಿ, ಕರುಣೆ, ಸಹನೆ, ತ್ಯಾಗ, ಸಾಹಸ ಮೊದಲಾದ

ಉತ್ತಮ ಗುಣಗಳು ತುಂಬಿರುತ್ತವೆ. ಮೇರಿಯಸನ ಪ್ರೇಮ ಪರಿಶುದ್ಧವಾದುದೂ ಪರಿಪಕ್ವವಾದುದೂ ಆಗಿತ್ತು. ಅಂಥ ಮಾನಸಿಕ, ದೈಹಿಕ ಯೋಗ್ಯತೆಗಳು ಅವನಲ್ಲಿ ಕೂಡಿದ್ದುವು. ತಾರುಣ್ಯ, ಆರೋಗ್ಯ, ವಿದ್ಯೆ, ಏಕಾಂತ ಜೀವನ, ಸಾಮಾನ್ಯಜನರಿಂದ ದೂರವಿರುವಂಥ ಮನೋವೃತ್ತಿ ಮತ್ತು ಸಂಸ್ಕೃತಿ, ದೇಹಶ್ರಮ ಅನಗತ್ಯವಾದಂಥ ಜೀವನವೃತ್ತಿ, ಪ್ರಾಮಾಣಿಕ ಮತ್ತು ಧಾರ್ಮಿಕ ಜೀವನವನ್ನು ನಡೆಸಬೇಕೆಂಬ ಸ್ಥಿರಸಂಕಲ್ಪ, ಸೃಷ್ಟಿಯಲ್ಲಿ ಅನಂತ ಸುಖ ಸೌಂದರ್ಯಗಳನ್ನು ಕಾಣಬಲ್ಲ ಸ್ವಭಾವ—ಇವೆಲ್ಲ ಅವನಲ್ಲಿದ್ದುವು. ಇಂಥ ಮನೋಮಯ ಆಕಾಶ ಎಷ್ಟು ರಮ್ಯವಾಗಿ ಇರಬಲ್ಲದೆಂದು ಓದುಗರು ಗ್ರಹಿಸಿಕೊಳ್ಳುವಿರಷ್ಟೆ. ಮೇರಿಯಸನ ಮನೋಮಯ ಆಕಾಶದಲ್ಲಿ ಆ ತರುಣಿ ಪೂರ್ಣಿಮಾ ಚಂದ್ರನಂತೆ ಶೋಭಿಸಿ ಮೆರೆಯುತ್ತಿದ್ದಳು. ಅವಳನ್ನು ಪ್ರತ್ಯಕ್ಷ ಕಂಡಾಗಲೂ ಕಾಣದಿದ್ದಾಗಲೂ ಅವನು ಮಾತ್ರ ಆ ಚಂದ್ರಪ್ರಭೆಯಲ್ಲೇ ತೇಲಾಡುತ್ತಿದ್ದ. ಲಕ್ಸಂಬರ್ಗಿಗೆ ಅವನು ಪ್ರತಿದಿನವೂ ಹೋಗಿಬರುತ್ತಿದ್ದ.

ಮೇರಿಯಸನ ಈ ವಿಧವಾದ ತಪಸ್ಸು ವೃದ್ಧ ಮಾನ್ಸಿರ್ ಲೆಬ್ಲೇಂಕರನ್ನು ಜಾಗೃತಗೊಳಿಸಿತು. ಅವನ ಪ್ರತಿದಿನದ ಪಹರೆ ತಮ್ಮ ಕುರಿತೋ ಅಥವಾ ಇನ್ನು ಯಾರ ಕುರಿತೋ ಎಂದು ಅವರು ಪರೀಕ್ಷಿಸತೊಡಗಿದರು. ಅವರು ಸಮಯ ಬದಲಾಯಿಸಿ ಲಕ್ಸಂಬರ್ಗಿಗೆ ಬಂದು ನೋಡಿದರು. ಸ್ಥಳ ಬದಲಾಯಿಸಿ ನೋಡಿದರು, ಎಲ್ಲ ಪರೀಕ್ಷೆಯಲ್ಲೂ (ಮೇರಿಯಸನ ಪ್ರೇಮಮತ್ತತೆಯಿಂದ) ಅವನು ಮಾನ್ಸಿರ್ ಲೆಬ್ಲೇಂಕರನ್ನೇ ಹಿಂಬಾಲಿಸುತ್ತಿರುವುದೆಂದು ತಿಳಿದರು. ಒಮ್ಮೆ ಅವರು ತಮ್ಮ ಕರವಸ್ತ್ರವನ್ನು ಬೇಕೆಂದೇ ತಾವು ಕುಳಿತಿದ್ದಲ್ಲಿ ಬಿಟ್ಟು, ಅಡಗಿ ನೋಡಿ ಪರೀಕ್ಷಿಸಿದರು. ಮೇರಿಯಸ್ ಆ ಕರವಸ್ತ್ರ ತರುಣಿಯದೆಂದು ಭಾವಿಸಿ ತೆಗೆದುಕೊಂಡು ತನ್ನ ಹೃದಯಕ್ಕೆ ಸಮೀಪವಾಗಿ ಇಟ್ಟುಕೊಂಡು, ವೃದ್ಧರ ಅಭಿಪ್ರಾಯವನ್ನು ಸ್ಥಿರಗೊಳಿಸಿದ. ಇಷ್ಟೂ ಅಲ್ಲದೆ ಆತ ಆ ವೃದ್ಧನ ಹಿಂದೆ ಅಡಗಿಕೊಂಡೇ ಹೋಗಿ, ಅವನಿದ್ದ ಮನೆಯ ಗುರುತು ಹಿಡಿದು, ಮನೆಯ ಹೊರಗಡೆ, ರಾತ್ರಿ ಬಹಳ ಹೊತ್ತಿನವರೆಗೂ ನಿಂತಿರುತ್ತಿದ್ದ. ಈ ಎಲ್ಲ ಸಾಹಸಗಳನ್ನೂ ಮಾನ್ಸಿರ್ ಲೆಬ್ಲೇಂಕ್ ತಿಳಿದು ಅವರು ಇದ್ದ ಮನೆಯನ್ನೇ ಬಿಟ್ಟುಹೋದರು.

ಒಂದು ದಿನ ಮೇರಿಯಸ್ ಮಾನ್ಸಿರ್ ಲೆಬ್ಲೇಂಕರ ಮನೆ ಹೊರಗೆ ಬಹಳ ಹೊತ್ತು ನಿಂತು ನೋಡಿದರೂ ಆ ಮನೆಯಿಂದ ಯಾವ ಬೆಳಕಾಗಲೀ ಶಬ್ದವಾಗಲೀ ಬರುತ್ತಿರಲಿಲ್ಲ. ಆ ವಠಾರವನ್ನೆಲ್ಲ ಪಹರೆಕಾಯುತ್ತಿದ್ದ ಆಳನ್ನು ಕಂಡು ಮೇರಿಯಸ್, "ಈ ಮನೆಯ ಗೃಹಸ್ಥರು ಒಳಗಿಲ್ಲವೇ?" ಎಂದು ಕೇಳಿದ.

"ಇಲ್ಲ."

"ಎಲ್ಲಿಗೆ ಹೋಗಿದ್ದಾರೆ?"

"ಗೊತ್ತಿಲ್ಲ."

"ಯಾವಾಗ್ಗೆ ಹೋದುದು?"

"ನಿನ್ನೆ."

"ಅವರ ವಿಳಾಸ ನಿಮ್ಮಲ್ಲಿ ಬಿಡಲಿಲ್ಲವೇ ?"

"ನೀವೇನು ಗೂಢಚಾರರೇನು? ಹೇಗೂ, ಅವರ ವಿಳಾಸ ಗೊತ್ತಿಲ್ಲ."

ಏಳನೆಯ ಸಂಪುಟ

೧. ಬ್ಯಾಬೆಟ್, ಗುಲ್ಮರ್, ಕ್ಲೆಕೋಸಸ್ ಮತ್ತು ಮೊಂಟ್‌ಪಾರ್ನಸ್

೧೮೩೦ರಿಂದ ೧೮೩೫ರ ತನಕ ಪ್ಯಾರಿಸಿನ ಮಹಾಜನ ಸಮುದಾಯದ ಕೆಳ ಅಂತಸ್ತಿನ ತಮೋಮಯ ವಿಭಾಗವನ್ನು ತಾವೇತಾವಾಗಿ ಆಳಿಕೊಂಡು ಬರುತ್ತಿದ್ದ ಬ್ಯಾಬೆಟ್, ಗುಲ್ಮರ್, ಕ್ಲೆಕೋಸಸ್, ಮತ್ತು ಮೊಂಟ್‌ಪಾರ್ನಸ್ ಎಂಬ ದರೋಡೆಕಾರರು ನಾಲ್ವರ ಸೂಕ್ಷ್ಮ ಪರಿಚಯವನ್ನು ಈಗ ಮಾಡಿಕೊಡುವೆವು.

ಆರಡಿ ಎತ್ತರದ ಗುಲ್ಮರ್ ಬಲು ಬಲಾಢ್ಯ. ಅಂದರೆ, ಆ ಕಾಲದ ಜೀವಂತ ಹರ್ಕ್ಯುಲಸ್. ಶಿಲಾಸದೃಶ ಎದೆ, ಉಕ್ಕಿನ ತ್ರಾಣ, ಗುಹೆಯೊಳಗೆ ಬಿರುಗಾಳಿ ನುಗ್ಗಿ ಹೊರಟಂಥ ಉಚ್ಛ್ವಾಸ ನಿಶ್ವಾಸ, ಮತ್ತು ಹಕ್ಕಿಯ ತಲೆಯಷ್ಟು ಗಾತ್ರದ ತಲೆ. ಇವನ ಸ್ನಾಯುಗಳು ಕೆಲಸ ಮಾಡಲು ತವಕಿಸುತ್ತಿದ್ದರೂ ಮನಸ್ಸು ಜಡತ್ವ ಹೊಂದಿ ಕೆಲಸವನ್ನು ನಿರಾಕರಿಸುತ್ತಿತ್ತು. ಇವನೊಬ್ಬ ಅಂಜದೆ, ಅಳುಕದೆ, ಎದುರೆದುರೇ ಖೂನಿಮಾಡಬಲ್ಲ ರಾಕ್ಷಸ.

ಬ್ಯಾಬೆಟ್ ಬಲು ಒಣಕಲ. ಆದರೂ, ಮಹಾತ್ರಾಣಿ. ಪುಸ್ತಕ, ಪತ್ರಿಕೆಗಳನ್ನು ಓದಿ ವಿದ್ಯಾವಂತನೆಂದು ತೋರಿಸಬಲ್ಲ ಚಮತ್ಕಾರಿ. ಪಂಡಿತ, ಮಂತ್ರವಾದಿ, ಕಲಾವಿದ. ಸರಕಾರದ ಪ್ರಮುಖರ ಪ್ರತಿಮೆಗಳನ್ನು ಮಾರುವ ದೇಶಪ್ರೇಮಿ ದಂತವೈದ್ಯ. ಇವನಿಗೆ ಪತ್ನಿ, ಪುತ್ರ ಪುತ್ರಿಯರಿದ್ದರು. ಈಗ ಅವರೆಲ್ಲರೂ ಅವರಾಗಿಯೇ ಸತ್ತೋ ಊರು ಬಿಟ್ಟೋ ಮಾಯವಾಗಿರುವರು. ಅವರೆಲ್ಲ ಇದ್ದೂ ಈಗ ಇಲ್ಲದಿದ್ದೂ ಇವನಲ್ಲಿ ಯಾವ ಬದಲಾವಣೆಯೂ ಬಂದಿರುವುದಿಲ್ಲ. ಇವನ ಕೃಶಶರೀರದ ಮುಖಾಂತರ ಬೆಳಕು ದಾಟಬಹುದಾಗಿದ್ದರೂ, ಮುಖ ಕಣ್ಣುಗಳ ಮುಖಾಂತರ ಇವನ ಮನಸ್ಸಿನ ಯಾವ ಬೆಳಕೂ ಹೊರಗೆ ಬರುತ್ತಿರಲಿಲ್ಲ.

ಕ್ಲೆಕೋಸಸನೆಂಥವನು? ಅವನು ಇಂಥವನೇ ಎಂದು ಧೈರ್ಯವಾಗಿ ಹೇಳಬಲ್ಲವರು ಯಾರಾದರೂ ಇದ್ದಾರೆಯೇ? 'ಕ್ಲೆಕೋಸಸ್' ಎಂಬ ಹೆಸರೇ ಅವನ ಅಡ್ಡ ಹೆಸರಂತೆ! ಹಾಗೆಂದ ಮೇಲೆ ಕ್ಲೆಕೋಸಸ್ ಎಂದರೆ 'ಕರ್ಗತ್ತಲೆ' ಎಂದರೆ ಸರಿಯಾಗಬಹುದು. ಅವನ ದರ್ಶನ ರಾತ್ರಿಯಾದ ಮೇಲೆ. ಅವನ ಅದೃಶ್ಯ ಬೆಳಗಾಗುವ ಮೊದಲು. ಅವನು ಎಲ್ಲಿಂದ ಬರುತ್ತಿದ್ದ, ಎಲ್ಲಿಗೆ ಹೋಗುತ್ತಿದ್ದನೆಂದು ಯಾರಿಗೂ ಗೊತ್ತಿರಲಿಲ್ಲ. ಅವನು ಹಠಾತ್ತನೆ ನೆಲದಿಂದ ಎದ್ದು ಬರುತ್ತಿದ್ದುದರಿಂದ, ನೆಲದಡಿಗೂ ಅಷ್ಟೇ ಹಠಾತ್ತನೆ ಹೋಗುತ್ತಿದ್ದನೆಂದು ಊಹಿಸಬಹುದಷ್ಟೆ. ಅವನಿಗೆ ಎಂಥ ಮುಖವಿತ್ತೆಂದು ಯಾರೂ ಅರಿಯರು. ಬೆಳಕು ಮುಖದಮೇಲೆ ಬೀಳುವ ಮೊದಲೇ ಮೊಗವಾಡ ವಿಟ್ಟುಕೊಳ್ಳುತ್ತಿದ್ದ. ಅವನು ಸ್ವರವನ್ನು ಅನುಕರಣ ಮಾಡಬಲ್ಲವನಾಗಿದ್ದ. ಈ ಕಾರಣದಿಂದ ಅವನನ್ನು ಸ್ವರದಿಂದ ಗುರುತಿಸುವುದೂ ಅಸಾಧ್ಯವಾಗಿತ್ತು.

ಇನ್ನು ಮೊಂಟ್‌ಪಾರ್ನಸನ ಮಾದರಿಯೇ ಬೇರೆ ವಿಧದ್ದಾಗಿತ್ತು. ಅವನು ಇಪ್ಪತ್ತು ವರ್ಷ ಪೂರ್ತಿ ಆಗಿರದಿದ್ದ ಒಬ್ಬ ಸುಂದರ ಯುವಕ. ಅವನ ತೇಜೋಮಯ ಕಣ್ಣುಗಳನ್ನೂ ಸೌಂದರ್ಯವನ್ನೂ ಮೆಚ್ಚಿ ಮರುಳಾಗಿದ್ದ ಹೆಂಗುಸರು ಅನೇಕರಿದ್ದರು. ಈ ವಿಷಯವನ್ನರಿತೇ ಅವನು ತನ್ನ ದೇಹಸೌಂದರ್ಯವನ್ನು ಕಾಪಾಡಿಕೊಳ್ಳಲು ಸದಾ ಪ್ರಯತ್ನಿಸುತ್ತಿದ್ದ. ಸೌಂದರ್ಯರಕ್ಷಣೆಗೆ ಮೈದುಡಿಯದಿರುವುದೇ ಮುಖ್ಯಸಾಧನವೆಂದು ಅವನ ಅಭಿಪ್ರಾಯವಾಗಿತ್ತು. ಈ ತೆರನಾದ ಸೋಮಾರಿತನ ಬಡವರಲ್ಲಾದರೆ ಹೆಚ್ಚು ಸಂದರ್ಭಗಳಲ್ಲಿ ಕಳ್ಳತನಕ್ಕೆ ಪ್ರೇರಕವಾಗುವುದು. ಅವನು ಕಿಸೆಗಳ್ಳತನದಿಂದ ಮುಂದುವರಿದು ಇಂದು ದರೋಡೆಕಾರನಾಗಿದ್ದ. ಅವನಿಗೆ ಇಲ್ಲದಿದ್ದ

ದುರ್ವ್ಯಸನವಿರಲಿಲ್ಲ. ಅವನು ಮಾಡದಿದ್ದ ಹೀನಕಾರ್ಯವಿರಲಿಲ್ಲ. ಕೇವಲ ಹದಿನೆಂಟರ ಹರೆಯ ದಲ್ಲೇ ಅವನ ಲೆಕ್ಕದಲ್ಲಿ ಹತ್ತಾರು ಹೆಣಗಳು ಬಿದ್ದಿದ್ದುವು. ರಾಜಮಾರ್ಗದ ಮಧ್ಯಾಹ್ನ ದರೋಡೆಕಾರನಿವ. ಪ್ರಾಯ ಮುಂದುವರಿದ ಹಾಗೆಯೇ ಅನೇಕಾನೇಕ ಒಂಟಿ ಪ್ರಯಾಣಿಕರು ಇವನ ಕೈಯಿಂದ ಖೂನಾಗಿ, ರಕ್ತಕಾರಿ ರಸ್ತೆಯಲ್ಲಿ ಬಿದ್ದು ಸತ್ತಿರುವರು. ಆದರೂ ಇವನನ್ನು ನೋಡಿದರೆ ಇವನು ಅಂಥವನು ಎಂದು ಯಾರೂ ಹೇಳಲಾರದಂತೆ ಇದ್ದ.

ತಲೆ ಬಾಚಿಕೊಂಡು ಸುಗಂಧ ಲೇಪಿಸಿಕೊಂಡು ತನ್ನ ಸಪುರ ಸೊಂಟಕ್ಕೆ ಕೈಕೊಟ್ಟು, ದೊಡ್ಡ ಅಧಿಕಾರಿಗಳ ಗಾಂಭೀರ್ಯದ ನಿಲವಿನಿಂದ, ಅಂಗಿಯ ಒಳಜೇಬಿನಲ್ಲಿ ಕಾಣದಂತೆ ಪಿಸ್ತೂಲನ್ನೂ, ಹೊರಜೇಬಿನಲ್ಲಿ ಕಾಣುವಂತೆ ಹೂಗಳನ್ನೂ ಇಟ್ಟುಕೊಂಡು, ಜಾರಸ್ತ್ರೀಯರ ಕಣ್ಣಿನ ರಮಣನಾಗಿ ಈ ಶ್ಮಶಾನವೀರ ಸಂಜೆಯ ಸಮಯದಲ್ಲಿ ಪ್ಯಾರಿಸಿನ ರಸ್ತೆಬದಿಯಲ್ಲಿ ನಿಂತಿರುತ್ತಿದ್ದ. ಇಂಥ ಜನ ಪ್ಯಾರಿಸಿನಲ್ಲಿ ಈ ಸಮಯದಲ್ಲಿ ಅನೇಕರಿದ್ದರು.

೨. ಬಿಸಿಲ್ಗುದುರೆ ಬೆಂಬತ್ತಿ

ಮಾನ್ಸರ್ ಲೆಬ್ಲೇಂಕರೂ ಅವರ ಜತೆಯ ತರುಣಿಯೂ ಲಕ್ಸಂಬರ್ಗಿಗೆ ಬರದೆ ಋತುಗಳೇ ದಾಟಿದುವು. ಆ ಸುಂದರ ತರುಣಿಯ ಕುರಿತು ಮೇರಿಯಸ್ ಸದಾ ಚಿಂತಿಸುತ್ತಿದ್ದ. ಅವಳ ಕುರಿತಾದ ಆಲೋಚನೆ ಒಂದರ ಹೊರತು ಅವನ ಮನಸ್ಸಿಗೆ ಬೇರೆ ಏನೂ ತೋರುತ್ತಿರಲಿಲ್ಲ. ಈ ಮೊದಲು ತನ್ನ ದೇಶದ ರಾಜಕೀಯ ಮತ್ತು ಸಾಮಾಜಿಕ ವಿಷಯಗಳ ಕುರಿತಾಗಿ ಆಲೋಚಿಸಿ, ಚರ್ಚಿಸಿ, ನಿರ್ಧರಿಸಿ, ಅಂಜದೆ, ಉತ್ಸಾಹದಿಂದ ಕಾರ್ಯವೆಸಗಲು ಹಂಬಲಿಸುತ್ತಿದ್ದ ಈತ ಇಂದು ಯಜಮಾನನನ್ನು ಅಗಲಿದ ನಾಯಿಯಂತೆ ಆಗಿದ್ದ. ಕೆಲಸದಲ್ಲಿ ಪ್ರೀತಿ ಇರಲಿಲ್ಲ. ನಡೆದರೆ ದಣಿವಾಗುತ್ತಿತ್ತು. ಜನಸಮೂಹದಿಂದ ಜುಗುಪ್ಸೆಗೊಳ್ಳುತ್ತಿದ್ದ. ಏಕಾಂತದಲ್ಲಿ ಸುಖ ಕಾಣುತ್ತಿರಲಿಲ್ಲ. ಪ್ರೇಮಮಯ ಸುಂದರಮೂರ್ತಿ ಕಾಣಸಿಗದ ಒಂದೇ ಒಂದು ದುಃಖ ಸದಾ ಬಾಧಿಸುತ್ತಿತ್ತು.

ಆ ತರುಣಿಗೋಸ್ಕರ ಅವನು ಬೀದಿಬೀದಿಗಳಲ್ಲಿ, ಉದ್ಯಾನಗಳಲ್ಲಿ ಅಲೆದು ನೋಡಿದ. ಮಾನ್ಸರ್ ಲೆಬ್ಲೇಂಕರಾಗಲೀ ತರುಣಿಯಾಗಲೀ ಕಾಣಲು ಸಿಕ್ಕಲಿಲ್ಲ. ಒಮ್ಮೆ ರಸ್ತೆಯಲ್ಲಿ ಹೋಗುತ್ತಿದ್ದ ಕೂಲಿಯವನ ತಲೆಕೂದಲನ್ನು ಹಿಂದಿನಿಂದ ನೋಡಿ, ಮಾನ್ಸರ್ ಲೆಬ್ಲೇಂಕರ ಹೋಲಿಕೆ ಕಂಡು, ಅವನನ್ನು ಪರೀಕ್ಷಿಸಿ ನೋಡಲು ಪ್ರಯತ್ನಿಸಿದ. ಕೂಲಿಯವ ಚೊಕ್ಕಟವಾದ ಉಡುಪು ಉಟ್ಟು, ಚಿಂತಾಮಗ್ನನಾಗಿ ಹೋಗುತ್ತಿದ್ದ. ಅವನ ಎತ್ತರ, ಗಾತ್ರ, ತಲೆಕೂದಲು ಮಾನ್ಸರ್ ಲೆಬ್ಲೇಂಕರ ಎತ್ತರ, ಗಾತ್ರ ತಲೆಕೂದಲಂತೆಯೇ ಇದ್ದರೂ, ಮುಖದಲ್ಲಿ ತುಂಬ ದುಃಖ ಕಾಣುತ್ತಿತ್ತು. ಆದರೂ ಕೂಲಿಯವನನ್ನು ಹಿಂಬಾಲಿಸಿ ಹೋಗಿ ಪರೀಕ್ಷಿಸಬೇಕೆಂದು ಮೇರಿಯಸ್ ನಿಶ್ಚೈಸಿ ನಾಲ್ಕು ಹೆಜ್ಜೆಹಾಕುವುದರೊಳಗೆ ಕೂಲಿಯವ ಜನಗಳ ಮಧ್ಯೆ ಬೆರೆತು ಮಾಯವಾಗಿದ್ದ. ಆಗ ತನ್ನ ಊಹನೆಯೇ ತಪ್ಪಾಗಿರಬಹುದೆಂದು ಮೇರಿಯಸ್ ಗ್ರಹಿಸಿ, ಸ್ವಂತ ಚಿಂತೆಗಳಲ್ಲೇ ಮಗ್ನನಾಗಿ ಮುಂದೆ ಸಾಗಿದ.

೩. ಎಡಹಿದ ಒಗಟು

ಸಂಖ್ಯೆ ೫೦-೫೨ರ ಗಾರ್ಬೂ ಕಟ್ಟಡದಲ್ಲಿ ಈಗ ಮೇರಿಯಸ್ ಮತ್ತು ಜೋಂಡ್ರೆಟೆ ಸಂಸಾರ ಮಾತ್ರ ಇದ್ದರು. ಇತರರೆಲ್ಲರೂ ಸತ್ತೋ ಬಾಡಿಗೆ ಬಾಕಿ ಮಾಡಿಕೊಂಡು ಹೊರಹಾಕಲ್ಪಟ್ಟೋ

ಅಲ್ಲಿಂದ ಹೋಗಿದ್ದರು.

ಒಂದು ಸಂಜೆ ಹೊತ್ತಿನಲ್ಲಿ, ಹಗಲಿಗಿಂತ ಇರುಳೇ ಹೆಚ್ಚಾಗಿ ಮುಂದುವರಿದಿದ್ದ ಮಸಕು ಮಸಕು ಬೆಳಕು ಇದ್ದ ಕಾಲದಲ್ಲಿ ಮೇರಿಯಸ್ ತನ್ನ ರಾತ್ರಿಯ ಊಟಕ್ಕಾಗಿ ಹೋಟೇಲ್ ಕಡೆ ಹೋಗುತ್ತಿದ್ದಾಗ ಇಬ್ಬರು ಹುಡುಗಿಯರು ಅವನನ್ನು ಸಾಧಾರಣ ನೂಕಿಕೊಂಡೇ ಹೋದಂತೆ ಓಡಿದರು. "ಸ್ಲೋಪ್ಸ್ ಬಂದರು—ನನ್ನನ್ನು ಹಿಡಿದುಬಿಡುವುದರಲ್ಲಿದ್ದರು," ಎಂದು ಅವರವ ರೊಳಗೆ ಮಾತಾಡುತ್ತ ಬಲು ಗಾಬರಿಯಿಂದ ಓಡಿದ್ದರು.

ಈ ಪ್ರಸಂಗ ನಡೆದ ನಾಲ್ಕು ಮಿನಿಟುಗಳ ಒಳಗೆ ಮೇರಿಯಸ್ ಹತ್ತು ಹೆಜ್ಜೆ ಮುಂದುವರಿಸಿ ಹೋದಾಗ ಮಾರ್ಗದಲ್ಲೊಂದು ಕಾಗದದ ಕಟ್ಟು ಬಿದ್ದಿದ್ದುದನ್ನು ಕಂಡ. ಅದು ಆಗ ತಾನೇ ಓಡಿ ಹೋಗಿದ್ದ ಹುಡುಗಿಯರ ಕೈಯಿಂದ ಬಿದ್ದಿರಬಹುದೆಂದು ಊಹಿಸಿ, ಅವರನ್ನು ಸ್ವಲ್ಪ ಹುಡುಕಿ ನೋಡಿದ. ಅವರು ಸಿಕ್ಕಲಿಲ್ಲ. ಕಟ್ಟನ್ನು ಪರೀಕ್ಷಿಸಿ ನೋಡಿ, ಅದರಿಂದ ಅದರ ಮಾಲೀಕರ ಪತ್ತೆ ಹಚ್ಚಬಹುದೆಂದು ಊಹಿಸಿ, ಅದನ್ನು ಜೇಬಿನಲ್ಲಿ ಹಾಕಿಕೊಂಡು ಹೋದ.

ರಾತ್ರಿ ಅವನು ಮಲಗುವ ಮೊದಲು ಅದನ್ನು ಪರೀಕ್ಷಿಸಿದ. ಆ ಕಟ್ಟಿನಲ್ಲಿ ಒಂದೇ ವಿಧದ ನಾಲ್ಕು ಲಕೋಟೆಗಳಿದ್ದುವು. ಯಾವುದನ್ನೂ ಅಂಟಿಸಿರಲಿಲ್ಲ. ಆ ಪತ್ರಗಳನ್ನೋದಿದರೆ ಏನಾದರೂ ಪ್ರಯೋಜನ ಸಿಕ್ಕಬಹುದೆಂದು ಅವನ್ನು ಒಂದೊಂದಾಗಿ ಓದಿ ನೋಡಿದ. ಅವೆಲ್ಲ ಒಂದೇ ವಿಧದ ಕಾಗದದಲ್ಲಿ ಬರೆಯಲಾಗಿದ್ದವು. ಎಲ್ಲವೂ ಹೊಗೆಸೊಪ್ಪಿನ ವಾಸನೆಯಿಂದ ತುಂಬಿದ್ದುವು. ಪತ್ರಗಳ ಬರಹವೂ ಒಂದೇ ವಿಧದ ಅಕ್ಷರದಲ್ಲಿತ್ತು. ಪತ್ರಗಳ ಸಾರಾಂಶವನ್ನು ಮಾತ್ರ ಇಲ್ಲಿ ಕೊಡುವೆವು :

ಒಂದನೆಯ ಪತ್ರ. ಗ್ರೌಚಿ ಪ್ರದೇಶದ ಮೇಡಮ್ ಮಾರ್ಕ್ವಿಸ್ ಅವರುಗಳಿಗೆ

ಸಮಾಜ ಒಂದು ಘಟಕವಾಗಿ ಉಳಿಯಬೇಕಾದರೆ ಕ್ಷಮೆ, ಮತ್ತು ಕರುಣೆ ಅಗತ್ಯವಷ್ಟೆ. ತಮ್ಮಂಥವರಲ್ಲಿ ಈ ವಿಷಯವನ್ನು ಹೆಚ್ಚಾಗಿ ವಿವರಿಸಲು ನಾನು ಅಸಮರ್ಥ. ನಮ್ಮ ದೇಶಕ್ಕಾಗಿ, ರಾಜಮನೆತನದ ಹಕ್ಕಿಗಾಗಿ, ಕ್ರಾಂತಿಕಾರರ ಎದುರಾಗಿ ಯುದ್ಧಮಾಡಿ, ಮೈಯೆಲ್ಲ ಗಾಯ ಮಾಡಿ ಕೊಂಡು, ಸದ್ಯ ನಿರಾಶ್ರಿತನಾಗಿ ತಮ್ಮ ರಾಜ್ಯದಲ್ಲಿ ತಂಗಿರುವ ಸೈನಿಕರ ಪೈಕಿ ನಾನೊಬ್ಬ ನಾಗಿದ್ದೇನೆ. ನನ್ನ ಸ್ವದೇಶವಾದ ಸ್ಪೇನಿಗೆ ಹೋಗಲು ದಾರಿ ಖರ್ಚಿಗೆ ಸಹ ನನ್ನಲ್ಲಿ ಹಣವಿಲ್ಲ. ತಮ್ಮ ಉದಾರ ಸಹಾಯವನ್ನು ನೀಡಬೇಕೆಂದು ಪ್ರಾರ್ಥಿಸಿ ಇದನ್ನು ಬರೆದುಕೊಂಡಿರುತ್ತೇನೆ. ವಿದ್ಯೆ, ಜವಾಬ್ದಾರಿ, ಪದವಿ ಇರುವವರು ಈ ರೀತಿ ಯಾಚನೆ ಮಾಡುವ ಪ್ರಸಂಗದ ಕಷ್ಟ ಕರುಣೆ ಯುಳ್ಳವರ ಊಹನೆಗೆ ಸಂಪೂರ್ಣ ಎಟುಕುವಂಥಾದ್ದು.

ಇಂತೀ ಡೋನ್ ಆಲ್ವರಿಸ್
ಪ್ಯಾರಿಸಿನಲ್ಲಿ ತಂಗಿರುವ ಸ್ಪೇನ್ ಸೈನ್ಯದ ಕ್ಯಾಪ್ಟನ್

ಎರಡನೆಯ ಪತ್ರ. ಮೇಡಮ್ ಕೌಂಟೆಸ್ ಮೊಂಟ್‌ವರ್ನೆಟ್ ಅವರುಗಳಿಗೆ

ಬಹುಮಾನಪಟ್ಟ ಪುಣ್ಯವಂತ ಭಗಿನಿಯರೇ !

ಆರು ಮಕ್ಕಳ ಮಾತೆಯಾಗಿರುತ್ತ ಈಗ ಹಾಸಿಗೆ ಹಿಡಿದಿರುವ ಹೆಂಗುಸು ನಾನು. ನನ್ನ ಕಡೇ ಮಗುವಿನ ಪ್ರಾಯ ಕೇವಲ ಎಂಟು ತಿಂಗಳು. ಗಂಡ ನಮ್ಮನ್ನೆಲ್ಲ ತೊರೆದು ಪರಾರಿಯಾಗಿರು ತ್ತಾನೆ, ಶ್ರೀಮಂತ ಕೌಂಟೆಸರವರು ಈ ಹತಭಾಗಿನಿಗೆ ಸಹಾಯನೀಡಬೇಕೆಂದು ಪ್ರಾರ್ಥಿಸುತ್ತೇನೆ.

ಇಂತೀ ಎಂಟೋನೆಟ್ ಬೈಲ್ ಸಾರ್ಡೆ

ಮೂರನೆಯ ಪತ್ರ. ಮಾನ್ಯರ್ ಫೆಬರ್ಜಿಯಾಟ್ ಅವರುಗಳಿಗೆ

ನಾನೊಬ್ಬ ಕವಿ. ಚಾರಿತ್ರಿಕ ಕಥಾವಸ್ತುವಿನಿಂದ ಒಂದು ನಾಟಕ ಬರೆದಿರುತ್ತೇನೆ. ತಮ್ಮ ಅಪ್ಪಣೆಯಾದರೆ ಹಸ್ತಪ್ರತಿಯನ್ನು ತಮಗೆ ಮೊದಲು ಕಳುಹಿಸಿಕೊಡುತ್ತೇನೆ. ತಾವು ಒಪ್ಪಿಗೆ ದಯಪಾಲಿಸಿದ್ದಾದರೆ ನಾಟಕವನ್ನು ತಮಗೆ ಅರ್ಪಣೆ ಮಾಡಬೇಕೆಂದಿದ್ದೇನೆ.

ಇಂತೀ ಗ್ಲೆನ್‌ಫ್ಲೊಟ್, ಸಾಹಿತಿ

ಅನಂತರ ಕೂಡಿಸಿ ಬರೆದದ್ದು

ನಾನೇ ಬಂದು ತಮ್ಮಲ್ಲಿ ಮಾತಾಡುತ್ತಿದ್ದೆ. ಆದರೆ ತಮ್ಮೆದುರು ಬಂದು ನಿಲ್ಲಲೂ ಬೇಕಾದಷ್ಟು ಯೋಗ್ಯವಾದ ಹಳೆ ದುಸ್ತು ಕೂಡ ನನ್ನಲ್ಲಿ ಇಲ್ಲವಾದ್ದರಿಂದ ಈ ಪತ್ರವನ್ನು ನನ್ನ ಮಗಳ ಮುಖಾಂತರ ಕಳುಹಿಸಿರುತ್ತೇನೆ. ಒಂದು ದುಸ್ತಿಗೆ ಅಗತ್ಯವಿರುವ ನಲವತ್ತು ಸೌಗಳೂ ಇಲ್ಲದ ಬಡವ ನಾನಾಗಿರುವುದರಿಂದ ನಾನೇ ತಮ್ಮಲ್ಲಿಗೆ ಬರಲಿಲ್ಲ.

ನಾಲ್ಕನೆಯ ಪತ್ರ. ಸೇಂಟ್ ಜೇಕ್ಯುಅಸ್ ಇಗರ್ಜಿ ವಠಾರದಲ್ಲಿರುವ ಧರ್ಮಪರಾಯಣ ಮಹಾತ್ಮರಿಗೆ

ನಮ್ಮ ಬಡಸ್ಥಿತಿ, ಮತ್ತು ದುಃಸ್ಥಿತಿಗಳ ಅರಿವು ತಾವು ಬಂದು ಪರೀಕ್ಷಿಸಿದರೆ ಮಾತ್ರ ಗೊತ್ತಾಗ ಬಹುದು. ಮರ್ಯಾದವಂತ ಸಂಸಾರಿಗರು ತಮಗೆ ಎಷ್ಟೇ ಕಷ್ಟ ಬಂದರೂ ಅದನ್ನು ಬಹಿರಂಗ ಪಡಿಸದೆ, ಅಡಗಿದ್ದುಕೊಂಡೇ ಜೀವನವನ್ನು ಸಹನೆಯಿಂದ ಸಹಿಸುವರಷ್ಟೆ. ನಾನು ಅಂಥವರಲ್ಲೊಬ್ಬ. ತಾವು ಕರುಣೆಯಿಂದ ಒಮ್ಮೆ ನಮ್ಮಲ್ಲಿಗೆ ಬಂದದ್ದಾದರೆ ಈಗ ಕೇವಲ ನಾಚಿಕೆಯಿಂದ ಪೂರ್ಣವಿವರಿಸದೆ ಇರುವ ನಮ್ಮ ಬಡತನದ ಅರಿವು ತಮಗೆ ಆಗುವುದರಲ್ಲಿ ಅನುಮಾನವಿಲ್ಲ. ತಮ್ಮ ಅಮೋಘ ಸಂದರ್ಶನವನ್ನು ಅನುಗ್ರಹಿಸಬೇಕೆಂದು ಪ್ರಾರ್ಥಿಸುವ ತಮ್ಮ ನಿರಂತರ ಸೇವಕ,

ಪಿ. ಫೆಬಂಟೌ, ನಾಟಕ ಕಲಾವಿದ

ಈ ಪತ್ರಗಳ ಬರಹ ಒಂದೇ ವಿಧವಾಗಿದ್ದುದಲ್ಲದೆ, ಪದ ಬಳಕೆಯಲ್ಲಿಯ ತಪ್ಪುಗಳು ಸಹ ಎಲ್ಲ ಪತ್ರಗಳಲ್ಲೂ ಒಂದೇ ವಿಧದವಾಗಿದ್ದುವು. ಯಾವುದರಲ್ಲೂ ಪತ್ರ ಬರೆದವನ ವಿಳಾಸವಿರಲಿಲ್ಲ. ಹೀಗಾಗಿ ಮೇರಿಯಸನಿಗೆ ಬಿಡಿಸಲಾಗದ ಒಂದು ಒಗಟಾಗಿ ಉಳಿದುವು. ಇವನ್ನೆಲ್ಲ ಅವನು ಜೋಪಾನವಾಗಿರಿಸಿದ.

ಮೇರಿಯಸ್ ವಶದಲ್ಲಿ ಕದ್ದುಹೋಗಬಹುದಾಗಿದ್ದಂಥ ವಸ್ತುಗಳೇ ಇಲ್ಲದಿದ್ದುದರಿಂದ ಅವನು ತನ್ನ ಕೋಣೆಗೆ ಅಗಣಿಯನ್ನಾಗಲೀ ಹೊರಗಿನಿಂದ ಬೀಗವನ್ನಾಗಲೀ ಹಾಕುತ್ತಿರಲಿಲ್ಲ. ಈ ಪತ್ರ ಸಿಕ್ಕಿದ ದಿನದ ಮರುದಿನ ಬೆಳಗ್ಗೆ ಅವನು ಏನನ್ನೋ ಬರೆಯುತ್ತ ಕುಳಿತಿದ್ದಾಗ ಬಾಗಿಲನ್ನು ಹೊರಗಿನಿಂದ ಯಾರೋ ತಟ್ಟಿದರು. ಮೇರಿಯಸ್, "ಒಳಗೆ ಬರಬಹುದು," ಎಂದಂದಾಗ, "ತಮಗೆ ತೊಂದರೆ ಕೊಡುವುದಕ್ಕಾಗಿ ಕ್ಷಮಿಸಬೇಕು," ಎಂದು ಗಂಡು ಸ್ವರದಿಂದ ಹೇಳುತ್ತ ಒಂದು ವ್ಯಕ್ತಿ ಒಳಗೆ ಬಂದಿತು. ಬಂದದ್ದು ಯಾರೆಂದು ಇವನು ತಲೆಯೆತ್ತಿ ನೋಡಿದಾಗ ಒಬ್ಬಳು ಹುಡುಗಿ ಅವನೆದುರು ನಿಂತಿದ್ದಳು!

ಎಂಟನೆಯ ಸಂಪುಟ

೧. ಬಾಡಿದ ಹೂ

ಮೇರಿಯಸನ ಎದುರು ನಿಂತಿದ್ದ ಹುಡುಗಿ ಒಂದು ಕಾಲದಲ್ಲಿ ಸುರೂಪಿಯಾಗಿದ್ದು, ಈಗ ಬಡತನದಿಂದಲೂ ರೋಗಗಳಿಂದಲೂ ಸೊರಗಿ ಕುರೂಪಿಯಾಗಿದ್ದವಳಂತೆ ತೋರುತ್ತಿದ್ದಳು. ಪರ ಪುರುಷನ ಎದುರು ನಿಂತಿದ್ದಾಗ ಸ್ತ್ರೀಗೆ ಸ್ವಾಭಾವಿಕವಾಗಿ ಇರಬೇಕಾಗಿದ್ದ ನಾಚಿಕೆ ಅವಳಿಗೆ ಇರಲಿಲ್ಲ. ಅವಳನ್ನು ತಾನು ಹಿಂದೆ ಎಂದೋ ಎಲ್ಲಿಯೋ ನೋಡಿರಬೇಕೆಂದು ಮೇರಿಯಸನಿಗೆ ಮೊದಲ ನೋಟಕ್ಕೇ ಅನ್ನಿಸಿತು.

"ನಿನಗೆ ಇಲ್ಲೇನಾಗಬೇಕು ಹುಡುಗೀ?"

"ನಿಮಗೊಂದು ಪತ್ರ ತಂದಿರುವೆನು," ಎಂದು ಹೇಳುತ್ತ ಅವಳು ಅದನ್ನು ಅವನಿಗೆ ಕೊಟ್ಟಳು. ಅದರ ಒಕ್ಕಣೆ :

ಮಾನ್ಯ ನೆರೆಕೊಠಡಿಯ ಗೃಹಸ್ಥರೇ

ಈ ಹಿಂದೆ ನಮ್ಮ ಬಾಬ್ತಿನ ಮನೆ ಬಾಡಿಗೆಯನ್ನು ನೀವು ಕೊಟ್ಟು ನಮ್ಮನ್ನು ಕಾಪಾಡಿದ್ದಕ್ಕಾಗಿ ನನ್ನ ಕುಟುಂಬವೆಲ್ಲವೂ ನಿಮಗೆ ಋಣಿಯಾಗಿದೆ. ಆದರೆ, ಪ್ರಕೃತ ನಮಗೆ ಬಂದಿರುವ ಒಂದು ದುಃಖದ ಸಂಗತಿಯನ್ನು ನಿಮಗೆ ತಿಳಿಸದೆ ನಿರ್ವಾಹವಿಲ್ಲ; ಅಂದರೆ ಈಗ ಎರಡು ದಿನಗಳಿಂದ ನಮಗೆ ಊಟವಿಲ್ಲ. ಇತರ ವಿಷಯವನ್ನು ನನ್ನ ಮಗಳು ಹೇಳುವಳು. ತಮ್ಮ ಕರುಣಾಪೂರಿತ ಸಹಾಯವನ್ನು ಬೇಡುವೆವು.

ತಮ್ಮವನಾದ ಜೋಂಡ್ರೆಟೆ

ಈ ಪತ್ರದ ಬರಹವೂ ಮೇರಿಯಸನಿಗೆ ಹೆಕ್ಕಲು ಸಿಕ್ಕಿದ ಪತ್ರಗಳ ಬರಹವೂ ಒಬ್ಬನವೇ ಎಂಬಂತಿದ್ದುವು. ಕಾಗದ, ಇದರ ಹೊಗೆಸೊಪ್ಪಿನ ವಾಸನೆ, ಎಲ್ಲವೂ ಮೊದಲಿನ ಪತ್ರಗಳಲ್ಲಿ ಕಂಡಂತೆಯೇ ಇದ್ದುವು. ಜೋಂಡ್ರೆಟೆ ಸುಳ್ಳು ಪರಿಸ್ಥಿತಿಗಳನ್ನು ಸಹೃದಯರ ಎದುರಿಟ್ಟು ಅನ್ಯಾಯವಾದ ಸಂಪಾದನೆ ಮಾಡುತ್ತಿರುವನೆಂದು ಮೇರಿಯಸ್ ನಿಶ್ಚೈಸಿದ.

ಈ ರೀತಿ ಇವನು ಯೋಚಿಸುತ್ತಿದ್ದಾಗಲೇ ಆ ಹುಡುಗಿ ತಂದೆಯ ಕಾಗದದಲ್ಲಿ ಹೇಳಿದ್ದಂತೆ ಇತರ ವಿಷಯಗಳನ್ನು ಹೇಳುವ ಬದಲು, ಈ ನೂತನ ಪರಿಚಿತನಲ್ಲೇ ತುಂಬ ಸಲಿಗೆಯಿಂದ ವರ್ತಿಸಲು ಪ್ರಾರಂಭಿಸಿದಳು. ಅವನು ಮಾತಾಡಿಸದಿದ್ದರೂ ಅವಳು ಮಾತಾಡುತ್ತಿದ್ದಳು. ಅವನ ಕೋಣೆಯನ್ನೆಲ್ಲ ಒಂದು ವಿಧದ ಗುರಿಯಿಲ್ಲದ ತಿರುಗಾಟದಿಂದ, ಶೋಧನೆ ಮಾಡಿದಳು. ಅವಳ ಅರೆನಗ್ನ ದೇಹವನ್ನು ಅಡಗಿಸಿ ನಾಚುವ ಬದಲು ಮೇರಿಯಸನ ಎದುರೆದುರೇ ನಿಲ್ಲುತ್ತ, ಅವನ ಕನ್ನಡಿಯನ್ನು ನೋಡಿ ತನ್ನ ತಲೆಕೂದಲನ್ನು ಸರಿಪಡಿಸಿಕೊಂಡು, ಚಿರಪರಿಚಿತಳಂತೆ ವರ್ತಿಸ ತೊಡಗಿದಳು. ಇವನ ಸಮೀಪಕ್ಕೆ ಬಂದು ನಿಂತು ತನಗೆ ಓದಲು ಬರುತ್ತದೆಂದು ಹೇಳುತ್ತ, ಮೇಜಿನ ಮೇಲಿದ್ದ ಒಂದು ಪುಸ್ತಕವನ್ನು ಗಟ್ಟಿಯಾಗಿ ಓದತೊಡಗಿದಳು. ಅವಳು ಓದಿದ್ದು ವಾಟರ್ಲೂ ಯುದ್ಧದ ಕುರಿತು ಆಗಿದ್ದುದರಿಂದ ಪುಸ್ತಕವನ್ನು ಕೆಳಗಿಟ್ಟು, ತನ್ನ ತಂದೆ ವಾಟರ್ಲೂ ಯುದ್ಧದಲ್ಲಿ ಭಾಗವಹಿಸಿದ್ದ ಒಬ್ಬ ಸಾರ್ಜೆಂಟನೆಂದೂ ಮತ್ತೂ ಏನೇನೋ ಹೇಳತೊಡಗಿದಳು. ಹುಡುಗಿಯ ಮಾತಿನಿಂದ ಈ ಮೊದಲು ಜುಗುಪ್ಸಿತನಾಗಿದ್ದ ಮೇರಿಯಸ್ ವಾಟರ್ಲೂ ಯುದ್ಧ ಮತ್ತು ಸಾರ್ಜೆಂಟನ ಕಥೆ ಕೇಳಿ, ಕುತೂಹಲದಿಂದಲೂ ತಾಳ್ಮೆಯಿಂದಲೂ ಹುಡುಗಿಯ ಮಾತು

ಗಳಿಗೆ ಗಮನಕೊಡತೊಡಗಿದ. ಮೇರಿಯಸನ ಈ ಹೊಸ ಮೃದುತ್ವ ಮತ್ತು ಸೌಮ್ಯ ಕಂಡ ಹುಡುಗಿ ಬಲು ಸಂತೋಷಪಟ್ಟುಕೊಂಡು ತನ್ನ ಆತ್ಮಪ್ರಶಂಸೆ ಮಾಡಿಕೊಳ್ಳುತ್ತ ಅವನನ್ನು ಮೆಚ್ಚಿಸುವಂತೆ ಮಾತಾಡಲು ತೊಡಗಿದಳು. ಅವಳು, ಮುಗುಳ್ನಗುತ್ತ, "ನನಗೆ ಬರೆಯಲೂ ಬರುತ್ತದೆ," ಎಂದು ಹೇಳಿ, ಅಲ್ಲೇ ಮೇಜಿನ ಮೇಲಿದ್ದ ಒಂದು ಕಾಗದದಲ್ಲಿ, "ಸ್ಲೋಪ್ಸ್ ಬಂದರು" ಎಂದು ಬರೆದಳು.

ಅನಂತರ ತನ್ನ ಮುಖವನ್ನು ಮೇರಿಯಸನ ಕನ್ನಡಿಯಲ್ಲಿ ನೋಡಿಕೊಂಡು, ಅವನ ಹತ್ತಿರ ಬಂದು ನಿಂತು, "ಮಾನ್ಯರರೇ ನೀವು ಬಲು ಸುಂದರ ಪುರುಷರೆಂದು ನಿಮಗೆ ಗೊತ್ತಿಲ್ಲವೇ?" ಎಂದು ಕೇಳಿದಳು. ಅವನಿಗೆ ಈ ಹುಡುಗಿಯ ನಡತೆ ಖುಷಿ ಕೊಡಲಿಲ್ಲ. ಅದರಲ್ಲೂ 'ಸ್ಲೋಪ್ಸ್' ಎಂಬ ಪದ ಕಳ್ಳಕಾಕರ ಬಾಯಿಯ 'ಪೊಲೀಸ್' ಎಂಬ ಶಬ್ದದ ಬದಲಿನ ಗುಪ್ತಶಬ್ದವೆಂದು ಅರಿತಿದ್ದ ಅವನಿಗೆ, ಅವಳು ತನ್ನ ಬರಹ ತೋರಿಸಲು ಬರೆದ ಪದಗಳನ್ನು ಕಂಡು, ಅವಳ ಸಂಸ್ಕೃತಿ ಏನಿರಬಹುದೆಂದೂ ಊಹೆಯೆದ್ದು, ಮತ್ತಷ್ಟು ಜುಗುಪ್ಸಿತನಾದ. ಹುಡುಗಿಯ ಮನಸ್ಸನ್ನು ನೋಯಿಸದೆ ಅವಳನ್ನು ಹೊರಗೆ ಕಳುಹಿಸಬೇಕೆಂದು ಅವನು ಕೊನೆಗೆ ತನ್ನಲ್ಲಿ ಒಟ್ಟಾಗಿ ಇದ್ದ ೫ ಫ್ರ್ಯಾಂಕ್ ಹದಿನಾರು ಸೌಗಳಲ್ಲಿ ೫ ಫ್ರ್ಯಾಂಕನ್ನು ಕೊಟ್ಟ. ಆ ಹಣ ಸಿಕ್ಕಿದ ಕೂಡಲೇ ಹುಡುಗಿ ಮೇರಿಯಸನನ್ನು ತುಂಬ ವಂದಿಸಿ ತಮ್ಮ ಸಂಸಾರದ ಕಷ್ಟಗಳನ್ನೆಲ್ಲ ಹೇಳಿಕೊಂಡಳು. ಆಗಲೇ ಅವನಿಗೆ ತನ್ನಲ್ಲಿದ್ದ ಪತ್ರಗಳ ನೆನಪು ಬಂದು, ಅವನ್ನು ಹುಡುಗಿಗೆ ತೋರಿಸಿ, ವಿಚಾರಿಸಲೋಸ್ಕರ ಸ್ವಲ್ಪ ಅವಳೊಡನೆ ಮಾತಾಡಿದ. ಹುಡುಗಿ ಪತ್ರಗಳನ್ನು ಕಂಡು ಸಂತೋಷಪಟ್ಟು, ಅವು ತನ್ನವೇ ಎಂದೂ ತಾನು ಹಿಂದಿನ ದಿನ ಸಂಜೆ ಹೆದರಿ ಓಡಿದಾಗ ಒಬ್ಬ ಗೃಹಸ್ಥನನ್ನು ಹಾದುಹೋಗಿ ಆಗಲೇ ದಾರಿಯಲ್ಲಿ ಪತ್ರದ ಕಟ್ಟನ್ನು ಕಳಕೊಂಡದ್ದೆಂದೂ ತಂದೆಯ ಪೆಟ್ಟಿಗೆ ಹೆದರಿ, ಪತ್ರಗಳನ್ನೆಲ್ಲ ಬಟವಾಡೆ ಮಾಡಿದ್ದಾಗಿ ಸುಳ್ಳು ಹೇಳಿದ್ದೆಂದೂ ಮೇರಿಯಸನಿಗೆ ಕನಿಕರವುಂಟಾಗುವಂತೆ ಹೇಳಿದಳು. ಈ ಮಾತುಗಳನ್ನೆಲ್ಲ ಸಮಾಧಾನದಿಂದ ಅವನು ಕೇಳಿದ ಸಂತೋಷಕ್ಕಾಗಿ, ತುಂಬ ಸಲಿಗೆಯಿಂದ ಆ ಕಾಗದದ ಪೈಕಿ ಒಂದನ್ನು ಮೇರಿಯಸನಿಗೆ ತೋರಿಸಿ, "ನೋಡಿ, ಇದು ಸೇಂಟ್ ಜೇಕ್ಸ್ ಇಗರ್ಜಿಗೆ ಬರುವ ಒಬ್ಬ ಧರ್ಮಿಷ್ಠನಿಗೆ ಇರುವ ಪತ್ರ. ಈ ಸಮಯದಲ್ಲೇ ಅವನು ಇಗರ್ಜಿಗೆ ಬರುವುದು. ನಾನು ಈಗಲೇ ಹೋಗಿ ಪತ್ರವನ್ನು ಬಟವಾಡೆ ಮಾಡುವೆನು," ಎಂದು ಹೇಳಿ ಮೇರಿಯಸನ ಕೋಣೆಯಿಂದ ಹೊರಟು ಹೋದಳು.

ಆ ಹುಡುಗಿಯ ಕುರಿತು ಮೇರಿಯಸ್ ಬಲು ವ್ಯಥೆಪಟ್ಟ. ಹದಿನೈದು ವರ್ಷ ಪೂರ್ಣಪ್ರಾಯವಾಗದವಳು ಐವತ್ತೈದು ವರ್ಷದವಳಷ್ಟು ಮುಖದಲ್ಲಿ ಸುಕ್ಕುಹಿಡಿದು ನಿಸ್ತೇಜವಾದದ್ದನ್ನು ಕಂಡು ಆಶ್ಚರ್ಯವನ್ನೂ ದುಃಖವನ್ನೂ ಪಟ್ಟುಕೊಂಡ. ಅವಳು ಕೃಶಳಾಗಿದ್ದಳು. ಅವಳ ಕಣ್ಣುಗಳಲ್ಲಿ ಹೊಳಪಿರಲಿಲ್ಲ. ಮುಖದಲ್ಲಿ ಕಳೆಯಿರಲಿಲ್ಲ. ಬಾಯಿತುಟಿಗಳಲ್ಲಿ ವ್ಯಭಿಚಾರದ ಕುರುಹು ಕಂಡು ಬರುತ್ತಿತ್ತು. ಹೂವಾಗಿ ಹುಟ್ಟಿದ್ದ ಕೂಸು ಸುಖವಾಗಿ ಬೆಳೆದು ಬಾಳಬೇಕಾಗಿದ್ದ ಹುಡುಗಿ ಇಂದು ಬೀದಿಯಲ್ಲಿ ಬಿದ್ದು ಕೆಸರುಕೊಚ್ಚೆಗಳಲ್ಲಿ ಸಿಕ್ಕಿ, ಚಕ್ರಗಳ ಅಡಿಯಲ್ಲಿ ನಾಶವಾಗುವಳಲ್ಲವೇ ಎಂದು ಚಿಂತಿಸುತ್ತ ಕುಳಿತಿದ್ದ.

೨. ಕಿಂಡಿಯಲ್ಲಿ ಕಂಡ ಗೂಡು

ಬಡತನ ಯಾರಿಗೆ ಬಂದರೂ ಅದು ದುಃಖದ ಸಂಗತಿ. ಗಂಡುಸಿಗೆ ಬಡಿದರೆ ಅವನು ಬೀದಿ ಭಿಕ್ಷುಕನಾಗುವುದರಲ್ಲಿ ಅಂತ್ಯಹೊಂದುತ್ತಾನೆ. ಅದೇ ಹೆಂಗುಸಿಗೆ ಹೊಡೆದರೆ ಅದು ಮತ್ತಷ್ಟು

ದುಃಖಕರವಾದದ್ದು. ಆ ಬಡತನದಲ್ಲಿ ಅವಳು ತನ್ನ ಮಾನ ಮರ್ಯಾದೆಗಳನ್ನೇ ಮಾರಿಕೊಳ್ಳುವಳು. ಆದರೆ, ಈ ಎರಡು ದುಃಖಗಳಿಗೂ ಮಿಗಿಲಾದುದು ಎಳೆಯಮಕ್ಕಳ ಮೇಲೆ ಬಡತನದಿಂದ ಉಂಟಾಗುವ ಪರಿಣಾಮ. ಇದನ್ನು ಎರಡು ವಿಧವಾಗಿ ನೋಡಬಹುದು: ಮೊದಲನೆಯದಾಗಿ, ತಮ್ಮ ಕಷ್ಟದ ಅರಿವು ಮಾತ್ರ ಮಕ್ಕಳಿಗಾಗುತ್ತ, ತಮಗೇಕೆ ಹಾಗಾಗಿದೆಯೆಂದು ಅವು ತಿಳಿಯಲಾರದ ಪರಿಸ್ಥಿತಿ; ಎರಡನೆಯದಾಗಿ, ತಮ್ಮ ಬಡತನದ ಸ್ಥಿತಿಯ ಅರಿವು ಅವುಗಳಿಗೆ ಪೂರ್ಣ ಆಗಿರದಿದ್ದರೂ ಇತರರ ಸುಖ, ಸಂಪತ್ತು, ವಿಲಾಸ, ವಿನೋದಗಳನ್ನು ನೋಡಿ ತಮಗೂ ಅವೆಲ್ಲ ಬೇಕೆಂಬ ಹಂಬಲ ಉಂಟಾಗಿ, ಅವನ್ನು ಈಡೇರಿಸಿಕೊಳ್ಳಲಾರದ ಪರಿಸ್ಥಿತಿ. ಇಂಥ ಪರಿಸ್ಥಿತಿಯಲ್ಲಿ ಇರುವ ಮಕ್ಕಳೇ ತಮ್ಮ ಹಿರಿಯರಿಂದ ಪ್ರೇರೇಪಿಸಲ್ಪಟ್ಟು ಪ್ರೋತ್ಸಾಹಿಸಲ್ಪಟ್ಟು ಕ್ರಮೇಣವಾಗಿ ಪಶುಗಳಾಗಿಯೇ ಬದುಕುವರು. ಈ ಅವಸ್ಥೆಯೇ ಅತಿ ದಾರುಣವಾದುದು. ಮೇರಿಯಸ್ ತನ್ನ ನೆರೆಕೋಣೆಯ ಜೋಂಡ್ರೆಟೆ ಸಂಸಾರದ ಕುರಿತು ಈ ತೆರನಾಗಿ ಯೋಚಿಸುತ್ತಿದ್ದ. ಆ ಸಂಸಾರದ ದಾರಿದ್ರ್ಯ, ದುಷ್ಟಬುದ್ಧಿ, ದುಃಖಗಳನ್ನು ಅವನು ಚಿಂತಿಸುತ್ತ ಹೋದಹಾಗೆ, ಕೇವಲ ಅನುಕಂಪದ ಕಾರಣವಾಗಿ ಅವರ ದುಃಖ ಇನ್ನೆಷ್ಟಿರಬಹುದೆಂದು ತಿಳಿಯುವ ಕುತೂಹಲ ಅವನಲ್ಲುಂಟಾಯಿತು. ಆ ಸಂಸಾರದ ಪರಿಚಯವನ್ನು ತಾನು ಮಾಡಿಕೊಳ್ಳಲು ಪ್ರತ್ಯಕ್ಷವಾಗಿ ಪ್ರಯತ್ನಿಸಿದರೆ ಅವರು ತನ್ನಲ್ಲಿದ್ದದ್ದನ್ನೆಲ್ಲ ಸುಲಿದುಬಿಡಬಹುದೆಂದು ಹೆದರುತ್ತ, ಅವರನ್ನು ಅಡಗಿಯೇ ಪರೀಕ್ಷಿಸಬೇಕೆಂದು ನಿಶ್ಚೈಸಿಕೊಂಡ.

ಇದಕ್ಕಾಗಿ ತನ್ನ ಕೋಣೆಗೂ ನೆರೆಕೋಣೆಗೂ ನಡುವೆ ಇದ್ದ ಗೋಡೆಯಲ್ಲಿ ಏನಾದರೂ ಬಿರುಕೋ ಕಿಂಡಿಯೋ ಇದೆಯೋ ಎಂದು ಪರೀಕ್ಷಿಸಿದ. ನಡುವಿನ ಗೋಡೆ ಮರದ ತೆಳು ಸಲಾಕೆಗಳಿಗೆ ಗಾರೆಯ ಸಾರಣೆ ಮಾಡಿ ನಿಲ್ಲಿಸಿದ್ದಾಗಿದ್ದುದರಿಂದ, ಅದರ ಮೇಲಿನ ತುದಿಯಲ್ಲಿ ಸಲಾಕೆಗಳು ತ್ರಿಕೋಣವಾಗಿ ಸೇರಿದ್ದ ಒಂದು ಕಡೆ ಗಾರೆ ಎದ್ದು ಹೋಗಿದ್ದು, ಕಿಂಡಿ ಆಗಿದ್ದುದನ್ನು ಕಂಡ. ಮೇರಿಯಸ್ ಆ ಕಿಂಡಿಗೆ ಸಮೀಪ ತನ್ನ ಮೇಜನ್ನು ಎಳೆದಿಟ್ಟು, ಇದರ ಮೇಲೆ ನಿಂತು ನೆರೆಕೋಣೆಯ ಕಡೆ ಇಣುಕಿದ. ನೆರೆಕೋಣೆ ಚೆನ್ನಾಗಿ ಕಾಣುವಷ್ಟರ ಕಿಂಡಿ ಅದಾಗಿತ್ತು. ಪರಗೃಹಸ್ಥರ ಮನೆಯನ್ನು ಅಡಗಿ ನೋಡುವುದು ಅಕ್ರಮವೆಂದು ಅವನಿಗೆ ಒಮ್ಮೆ ತೋರಿದರೂ ಆ ಪರಗೃಹಸ್ಥನ ಮೇಲಿನ ಅನುಕಂಪ ಸಹಾನುಭೂತಿಗಳಿಂದ ತಾನು ನೋಡುವುದು ತಪ್ಪಲ್ಲವೆಂದು ಸಮಾಧಾನ ತಳೆದ. ಗೂಡಿನೊಳಗೆ ಏನು ಅಡಗಿತ್ತು?

೩. ಕ್ರೂರ ಮೃಗಗಳ ಕಾಡು

ಆ ಕಿಂಡಿಯಲ್ಲಿ ಮೇರಿಯಸನಿಗೆ ಜೋಂಡ್ರೆಟೆ ಗೂಡು ಚೆನ್ನಾಗಿ ಕಾಣುತ್ತಿತ್ತು. ಕೋಣೆಯೊಳಗೆ ಬೆಳಕು ವಿಶೇಷ ಇರಲಿಲ್ಲ. ಹೀಗಾಗಿ ಅದರ ಮೂಲೆಗಳು ಅವನಿಗೆ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಸುಮಾರು ಅರುವತ್ತು ವರ್ಷ ಪ್ರಾಯದವನಾಗಿದ್ದ ಜೋಂಡ್ರೆಟೆ ಮೇಜಿನ ಬಳಿ ಕುಳಿತು ಏನನ್ನೋ ಬರೆಯುತ್ತಿದ್ದ. ಅವನ ದುರ್ವ್ಯಸನಗಳ ಮತ್ತು ಹೀನವೃತ್ತಿಯ ಭಾವಗಳು ಮುಖದಲ್ಲಿ ಎದ್ದು ತೋರುತ್ತಿದ್ದುವು. ಅವನು ಹೆಂಗುಸರ ರವಕೆ ತೊಟ್ಟಿದ್ದ. ಮನೆಯೊಳಗೆ ಬ್ರೆಡ್ಡಿನ ಚೂರು ಸಹ ಇಲ್ಲದಿದ್ದಾಗ್ಯೂ ಅವನ ಬಾಯಿಯಲ್ಲಿ ಹೊಗೆಸೊಪ್ಪಿನ ಚುಟ್ಟ ಹೊಗೆ ಕಾರುತ್ತಿತ್ತು. ಅವನ ಮೈತುಂಬ ನರೆತ ಕೂದಲು ಇತ್ತೆಂದು ಬಟ್ಟೆ ಇಲ್ಲದೆಡೆ ತೋರುತ್ತಿತ್ತು. ಅವನು ಬರೆಯುತ್ತಿದ್ದ ಹಾಗೆಲ್ಲ, ಬಹುಶಃ ಬರೆಯುವುದನ್ನು ಸಂಬಂಧಿಸಿಯೇ ಶ್ರೀಮಂತರನ್ನೂ ಧರ್ಮಗುರುಗಳನ್ನೂ

ಸರಕಾರವನ್ನೂ ತುಂಬ ಬೈಯುತ್ತಲೂ ಟೀಕಿಸುತ್ತಲೂ ಇದ್ದ. ಒಮ್ಮೊಮ್ಮೆ ತಾನು ಬರೆದಿದ್ದು ದನ್ನು ಓದಿ ಹೇಳಿ ಹೆಂಡತಿಗೆ ಒಪ್ಪಿಸುತ್ತಿದ್ದ.

ಜೋಂಡ್ರೆಟೆಯ ಪತ್ನಿ ಅವನಿಗಿಂತಲೂ ಕ್ರೂರಿಯಾಗಿ ಕಾಣುತ್ತಿದ್ದಳು. ಅಲ್ಲದೆ, ಅವಳು ಗಂಡನಿಗಿಂತಲೂ ಎತ್ತರ ಸ್ಥೂಲಕಾಯೆ. ಅವಳು ಒಲೆಯ ಬುಡದಲ್ಲಿ ನಿಂತಿದ್ದಳು. ಮೇರಿಯಸ ನಿಗೆ ಪರಿಚಯವಾಗಿರದಿದ್ದ ಜೋಂಡ್ರೆಟೆಯ ಮತ್ತೊಬ್ಬ ಮಗಳು ಬಹ್ವಂಶ ನಗ್ನದೇಹಿಯಾಗಿ ಮೂಲೆಯಲ್ಲಿ ಕುಳಿತಿದ್ದಳು. ಕೋಣೆಯ ಒಳಗೆಲ್ಲ ಕಸಕಡ್ಡಿ, ಹರಕುಬಟ್ಟೆ, ಬೂಟ್ಸು, ಧೂಳು ಹರಡಿದ್ದುವು. ಮೂಲೆಗಳಲ್ಲಿ ಜೇಡರ ಬಲೆಗಳು ಧೂಳಿನ ಭಾರ ಹೊತ್ತು ನೇತಾಡುತ್ತಿದ್ದುವು. ಒಂದು ಮೂಲೆಯಲ್ಲಿ ಎಲ್ಲಿಯೂ ಕಾಣಲು ಸಿಕ್ಕದಂಥ ವಿಚಿತ್ರ ಆಕಾರದ ಕೆಲವು ಕಬ್ಬಿಣದ ಸಾಮಾನುಗಳೂ ಹಗ್ಗಗಳೂ ಬಿದ್ದಿದ್ದುವು.

ಈ ಕೋಣೆ ಜೋಂಡ್ರೆಟೆ ಮೃಗಗಳ ಕಾಡಾಗಿತ್ತೇ ಹೊರತು ಮನುಷ್ಯರ ಬೀಡಾಗಿರಲಿಲ್ಲ. ಇಲ್ಲಿ ಬಡತನ, ಕ್ರೌರ್ಯ ಹೀನತ್ವದ ಎಲ್ಲ ಸ್ವರೂಪಗಳೂ ಕೂಡಿದ್ದುವು. ಜೋಂಡ್ರೆಟೆ ದಂಪತಿಗಳ ಅಥವಾ ಆ ಸಂಸಾರದ ಪ್ರೇಮಮಯ ಜೀವನ ಒಂದೊಂದೇ ಮುಗಿದಿತ್ತು. ಇಂದು ಒಂದೇ ಬೋನಿನೊಳಗಿರುವ ಮೃಗಗಳಂತೆ ಮಾತ್ರ ಅವರು ವರ್ತಿಸುತ್ತಿದ್ದರು. ಆದರೂ ಸಮಾಜವನ್ನು ವಂಚಿಸಿ ಜೀವನ ನಡೆಸುತ್ತಿದ್ದ ಈ ದಂಪತಿಗಳು, ಕೇವಲ ಸಂಪ್ರದಾಯ ಬಲದಿಂದ "ಪ್ರಿಯ," "ಮುದ್ದು" ಎಂಬ ಶಬ್ದಗಳನ್ನು ತಮ್ಮೊಳಗೆ ಬಳಸುತ್ತಿದ್ದರು.

೪. ವ್ಯೂಹರಚನೆ ಮತ್ತು ನಿರ್ವಹಣತಂತ್ರ

ಮೇರಿಯಸ್ ತಾನು ನಿಂತುನೋಡುತ್ತಿದ್ದ ಸ್ಥಾನದಿಂದ ಇಳಿಯುವುದರಲ್ಲಿದ್ದ. ಅಷ್ಟರಲ್ಲೇ ಜೋಂಡ್ರೆಟೆಯ ಹಿರಿಯ ಮಗಳು ಮನೆಯೊಳಗೆ ಓಡುತ್ತ ಬಂದು, "ಅವನು ಬರುತ್ತಿದ್ದಾನೆ," ಎಂದು ಏದುತ್ತ ಹೇಳಿದಳು.

"ಆ ಧರ್ಮಿಷ್ಠ—ಸೇಂಟ್ ಜೇಕ್ಸ್ ಇಗರ್ಜಿ ಮುದುಕ."

"ಸುಳ್ಳೋ, ನಿಜವೋ?"

"ನಿಜವಪ್ಪಾ, ನಿಜ. ಸ್ವಲ್ಪ ಸಾಮಾನು ತೆಗೆದುಕೊಂಡು ಮಗಳ ಜೊತೆ ಬರುತ್ತಿದ್ದಾನೆ. ಬಂಡಿ ಗೊತ್ತುಮಾಡುತ್ತಿದ್ದ ಇದೀಗ ಬಂದು ಬಿಡುತ್ತಾನೆ."

ಜೋಂಡ್ರೆಟೆ ಹೆಂಡತಿಯನ್ನು ನೋಡಿ, "ನಮಗೆ ಬೇಕಾದದ್ದು ಹಣವಾದರೆ ಅವರು ಕೊಡೋದು ದುಸ್ತು, ಸಾಮಾನು, ಮತ್ತೊಂದು. ಈ ಬುದ್ಧಿವಂತರ ಕ್ರಮವೆಲ್ಲ ಹೀಗೆ. ಅಂದರೆ, ಯಾವುದು ಬೇಡವೋ ಅದನ್ನು ಕೊಡುತ್ತಾರೆ. ಹಣಕೊಟ್ಟರೆ ನಾವು ಕುಡಿದು ಹಾಳು ಮಾಡ್ತೇವಂತೆ! ನಾವು ಸೋಮಾರಿಗಳಂತೆ ! ನಮಗೆ ಬುದ್ಧಿಹೇಳುವ ಅವನಿಗೆ ಈಗ ಬಂಡಿ ಬೇಕಾಗಿತ್ತೋ! ಅವರೆಲ್ಲ ಪಾಪಿಗಳನ್ನು ನೋಡೋದಕ್ಕೆ ಬರೋದು ತಮ್ಮ ಆಡಂಬರದಲ್ಲಿ! ಶ್ಮಶಾನದಲ್ಲೇ ಆದರೂ ಈ ಸೂಳೇ ಮಕ್ಕಳಿಗೆ ಮಲಗಲು ಸ್ಥಳವೇ ಬೇರೆ! ಅವರು ಮಲಗುವಲ್ಲಿ ಸಾಲುಮರ, ಹೂದೋಟ, ಕಲ್ಲುಹಾಸಿದ ರಸ್ತೆ! ನಾವು ಮಲಗುವಲ್ಲಿ? ಕೆಸರು, ಕೊಳಕು. ಅವರೆಲ್ಲ ಲಕ್ಷಣವಾಗಿ ತೋರುವ ರಾಕ್ಷಸರು." ಹೀಗೆಲ್ಲ ಅನ್ನುತ್ತ ಅಲ್ಲಿದ್ದ ಒಂದೇ ಒಂದು ಕುರ್ಚಿಯನ್ನು ಒದ್ದು ಅದರ ಅಡಿಹಲಗೆಯನ್ನು ಹಾರಿಸಿಬಿಟ್ಟ. ಒಲೆಗೆ ನೀರೆರೆದು ಬೂದಿ ಹಾರಿಸಿ ನಾಲ್ಕುದಿನಗಳಿಂದ ಬೆಂಕಿ ಉರಿಸಿರದಂತೆ ಕಾಣಿಸಿಬಿಟ್ಟ. ತನ್ನ ಸಣ್ಣ ಮಗಳನ್ನು ಹೆದರಿಸಿ, ಕಿಟಕಿಯ ಕನ್ನಡಿಯನ್ನು ಅವಳ

ಕೈಯ್ಯಿಂದಲೇ ಗುದ್ದಿಸಿ ಒಡೆಸಿ, ಅವಳ ಕೈಗೆ ತನ್ನ ಶರ್ಟಿನ ಕರೆಯನ್ನು ಹರಿದು ಬ್ಯಾಂಡೇಜ್ ಸುತ್ತಿ, ಕೂಗಿಸಿ, ಮೂಲೆಯಲ್ಲಿ ಕುಳ್ಳಿರಿಸಿದ. ತನ್ನ ಮಗಳ ಕೈಗೆ ಬೇಕೆಂತಲೇ ಗಾಯಮಾಡಿಸಿ, ರಕ್ತ ಸುರಿಸಿದ್ದಕ್ಕೆ ಬೈಯುತ್ತ ನಿಂತಿದ್ದ ಹೆಣ್ಣು ಜೋಂಡ್ರೈಟೆಗೆ ಒದೆಯಲು ಹೋಗಿ, ಅವಳನ್ನು ಮಂಚದಲ್ಲಿ ಅಪ್ಪಳಿಸಿ ಮಲಗಿಸಿ, ಹರಕುಬಟ್ಟೆ ಹೊದೆಸಿ, ಖಾಯಿಲಸ್ಥೆ ಮಲಗಿರುವಂತೆ ಮಾಡಿಬಿಟ್ಟ. ಕೊನೆಗೆ ಹೆಂಡತಿಯ ಸಮಾಧಾನಕ್ಕಾಗಿ ಅಂದ, "ನೋಡೆ, ಎಷ್ಟು ಕಲಿಸಿದರೂ ನಿನಗೆ ಇದೆಲ್ಲ ಅರ್ಥವಾಗೋದಿಲ್ಲ. ಅವನು ಬರುವಾಗ ನಾವು ಆ ಸಂದರ್ಭಕ್ಕೆ ತಕ್ಕವಾಗಿ ಇರ ಬೇಡವೇ?" ಅನಂತರ ಹಿರೇ ಮಗಳ ಹತ್ತಿರ ವಿಚಾರಿಸಿದ, "ಆ ಬುದ್ಧಿವಂತನಿಗೆ ಬರೆದ ಪತ್ರದಲ್ಲಿ ನನ್ನ ಹೆಸರು ಏನೂಂತ ಹೇಳಿದ್ದೇನೆ?"

" 'ಫೆಬಂಟೌ, ನಾಟಕ ಕಲಾವಿದ' ಎಂದು."

ಅಷ್ಟರಲ್ಲೇ ಕೋಣೆಯ ಹೊರಗಡೆ ಯಾರೋ ಬರುವ ಸದ್ದು ಕೇಳಿಸಿತು. ಜೋಂಡ್ರೈಟೆ ಅವನ ಕೆಲಸಗಳನ್ನೆಲ್ಲ ಬಲು ಚುರುಕಿನಿಂದ ಮಾಡಿದ್ದ. ಹುಡುಗಿ "ಅವನು ಬಂದ" ಎಂದು ತಂದೆಗೆ ತಿಳಿಸಿದಳು. ಮೇರಿಯಸ್ ತನ್ನ ಸ್ಥಾನದಲ್ಲೇ ನಿಂತು ಬಲು ಕುತೂಹಲದಿಂದ ಜೋಂಡ್ರೈಟೆ ಕೋಣೆಯೊಳಗೆ ನೋಡತೊಡಗಿದ.

೫. ಯಶಸ್ವೀ ನಟನೆ

ಜೋಂಡ್ರೈಟೆ ತನ್ನ ಕೋಣೆಯ ಕದ ತೆರೆದು, ಹೊರಗೆ ಹೋಗಿ, ಒಬ್ಬ ವೃದ್ಧ ಗೃಹಸ್ಥನನ್ನೂ ಮತ್ತೊಬ್ಬ ತರುಣಿಯನ್ನೂ ಬಗ್ಗಿ ನಮಸ್ಕರಿಸುತ್ತ, ಅತಿವಿನಯದಿಂದ ನಾಟಕದಲ್ಲಿ ಪಾತ್ರವರ್ಗ ರಂಗಭೂಮಿಯನ್ನು ಪ್ರವೇಶಿಸುವ ಕ್ರಮದಲ್ಲಿ ಮುಖ್ಯನಟ ತಾನೇ ಆಗಿ, ಒಳಗೆ ಕರೆದುಕೊಂಡು ಬಂದ.

ಈ ಹೊಸಬರು ಬರುವ ಮೊದಲು ರಂಗಭೂಮಿಯ ಪೂರ್ವಸಿದ್ಧತೆಯ ಓಡಾಟದಲ್ಲಿ ಎದ್ದಿದ್ದ ಧೂಳೆಲ್ಲ ತಂಗಿತ್ತು. ಆಗ ತಾನೇ ಗುದ್ದಿ ಒಡೆದಿದ್ದ ಕನ್ನಡಿಯ ತೂತಿನಿಂದ ಹಿಮ ತೂರಿಕೊಂಡು ಒಳಗೆ ಬರುತ್ತಿತ್ತು. ಇಂಥ ಕಲ್ಮಷಯುತವಾದ, ಆ ಕೋಣೆಗೆ ನುಗ್ಗಿ ಬಂದ ಇಬ್ಬರ ಪೈಕಿ ಮೇರಿಯಸ್ ಮಿಂಚಿನವೇಗದಿಂದ ಮೊದಲು ಕಂಡದ್ದು ಆ ತರುಣಿಯನ್ನು! 'ತರುಣಿ' ಈ ಒಂದು ಶಬ್ದಸ್ಮರಣೆ ಮಾತ್ರದಿಂದ ಎಂಥೆಲ್ಲ, ಮತ್ತು ಎಷ್ಟೆಲ್ಲ ಆನಂದಮಯ ಭಾವನೆಗಳು ಮಿಂಚಿನಂತೆ ಮೂಡುವುವು! ಆ ವಿದ್ಯುತ್ ಪ್ರವಾಹದಿಂದ ಮನುಷ್ಯ ಏನಾಗಿಬಿಡುತ್ತಾನೆ ಎಂಬುದನ್ನು ಇಂಥ ಆನಂದಮಯ ಸನ್ನಿವೇಶಗಳಲ್ಲಿ ಸ್ವತಃ ಭಾಗವಹಿಸಿದವರಿಗೆ ಮಾತ್ರ ಗೊತ್ತಾಗಬಹುದು. ಬಂದವಳು 'ಅವಳೇ' ಎಂಬ ಒಂದು ವಿದ್ಯುತ್ ಕಿರಣವೇ ಮೇರಿಯಸನ ಹೃದಯವನ್ನು ಪ್ರವೇಶಿಸಿತು. ಆ ಸುಂದರ ತೇಜೋಮಯ ಕಣ್ಣುಗಳೂ ಹಣೆ, ಕೆನ್ನೆ, ಬಾಯಿ ಎಲ್ಲವೂ ಅವಳವೇ! ಆ ಮೈಕಟ್ಟು, ನಿಲವು, ರೇಷ್ಮೆಯ ಪಾದರಕ್ಷೆಯ ಒಳಗಿನಿಂದ ಮುದ್ದಾಗಿ ಎದ್ದುಬಂದಿದ್ದ ಬಿಳಿದಾದ ಪಾದಗಳ ಅಂಶವೂ ಅವಳವಲ್ಲದೆ ಮತ್ತಾರವು ಅಷ್ಟೊಂದು ಚೆಲುವಾಗಿರಬಲ್ಲವು? ಲಕ್ಸಂಬರ್ಗಿನಲ್ಲಿ ಯಾವಾಕೆ ಅದೃಶ್ಯಳಾಗಿದ್ದುದರಿಂದ ಮೇರಿಯಸ್ ಅಂಧಕಾರದಲ್ಲಿ ಬಿದ್ದಿದ್ದನೋ ಆ ತೇಜೋರಾಶಿಯೇ ಈಗ ಅವನ ಎದುರು ನಿಂತಿದ್ದಿತು. ಮೇರಿಯಸನ ಮನೋಮಯ ಆಕಾಶದಲ್ಲಿ ಪ್ರಜ್ವಲಿಸುತ್ತಿದ್ದ ತಾರೆ ಆರು ತಿಂಗಳ ಹಿಂದೆ ಗ್ರಹಣದಿಂದ ಮರೆಯಾಗಿದ್ದು, ಇಂದು ಪುನಃ ಉದಯಿಸಿ ಅವನ ಮನೋರಾಜ್ಯಕ್ಕೆ ಪ್ರಕಾಶ ತಂದುಕೊಟ್ಟಿತು. ಆ

ಸುರಸುಂದರಿಯನ್ನು ಅಂಗ ಅಂಗಗಳಿಂದ ನೋಡಿ ಭ್ರಮಿಸಿ ಆನಂದಿಸುವ ಅವಸ್ಥೆಯನ್ನು ಮೇರಿಯಸ್ ಹಠಾತ್ತನೆ ಎಂದೋ ದಾಟಿ, ಈಗ ಅವಳ ಕಡೆಯಿಂದ ಇವನ ಕಡೆಗೆ ಪ್ರವಾಹವಾಗಿ ಬರುತ್ತಿದ್ದ ತೇಜೋರಾಶಿಯಲ್ಲಿ ಮುಳುಗಿ, ತೇಲಿ, ತಲ್ಲೀನನಾಗಿದ್ದ.

ಕೋಣೆಯೊಳಗೆ ಪ್ರವೇಶಿಸಿದ್ದ ವೃದ್ಧ ಮಾನ್ಯರ್ ಲೆಬ್ಲೇಂಕರೆಂದು ಮೇರಿಯಸನಿಗೆ ತನ್ನ ಮನೋಮಯ ರಾಜ್ಯದಿಂದಿಳಿದ ಕೂಡಲೇ ಗೊತ್ತಾಯಿತು. ಮಾನ್ಯರ್ ಲೆಬ್ಲೇಂಕರೂ ಆ ತರುಣಿಯೂ ತಾವು ತಂದಿದ್ದ ಕಟ್ಟುಗಳನ್ನು ಬಿಚ್ಚಿ, ಅವುಗಳೊಳಗಿನಿಂದ ಕೆಲವು ದುಸ್ತುಗಳನ್ನೂ ಕಂಬಳಿಗಳನ್ನೂ ಹೊರಗೆ ತೆಗೆದರು. ಮಾನ್ಯರ್ ಲೆಬ್ಲೇಂಕ್ ಜೋಂಡ್ರೆಟೆಯನ್ನು ನೋಡಿ "ನಿಮ್ಮ ಹೆಸರೇನು?" ಎಂದು ಕೇಳಿದರು.

"ಫೆಬಂಟೌ, ನಾಟಕ ಕಲಾವಿದ."

"ಮಾನ್ಯರ್ ಫೆಬಂಟೌರೇ, ನೋಡಿ, ಈ ದುಸ್ತು ಮತ್ತು ಕಂಬಳಿಗಳನ್ನು ನಿಮಗಾಗಿ ತಂದಿರುತ್ತೇವೆ," ಎಂದನ್ನುತ್ತ ಮಾನ್ಯರ್ ಲೆಬ್ಲೇಂಕ್ ಅವನ್ನು ಜೋಂಡ್ರೆಟೆಗೆ ಕೊಟ್ಟರು.

"ತಮ್ಮ ಉಪಕಾರಕ್ಕೆ ತಮ್ಮನ್ನು ಹೇಗೆ ವಂದಿಸುವುದೆಂಬುದೇ ನಮ್ಮ ಸಂಸಾರಕ್ಕೆ ತೋರುವ ಕಷ್ಟವಾಗಿದೆ. ವಿದ್ಯೆ, ಸ್ಥಾನ, ಖ್ಯಾತಿ ಮೊದಲಾದವನ್ನು ಪಡೆದು ಮೆರೆಯುತ್ತಿದ್ದವರಿಗೆ ದಾನವನ್ನು ಬಯಸುವುದೂ ಯಾಚಿಸುವುದೂ ಸ್ವೀಕರಿಸುವುದೂ ಎಷ್ಟೊಂದು ಕಷ್ಟದ ಸಂಗತಿಯೆಂದು ತಮ್ಮಂಥ ದಯಾಳು ಮಹಾನುಭಾವರಿಗೆ ಗೊತ್ತಿರಬಹುದು. ತಾವೇನೋ ಧರ್ಮಬುದ್ಧಿಯಿಂದ ತಮ್ಮ ಕರ್ತವ್ಯವೆಂಬಂತೆ ಈ ಉಪಕಾರವನ್ನು ಮಾಡುತ್ತಿರುವಿರಿ. ಬಟ್ಟೆಗೂ ಗತಿಯಿಲ್ಲದ ಬಡತನ, ಹೆಂಡತಿಯ ಖಾಯಿಲೆ, ಊಟಪಾನೀಯಗಳಿಲ್ಲದೆ ನಾಲ್ಕು ದಿನ—ಇಂಥ ಪರಿಸ್ಥಿತಿ ನನ್ನನ್ನು ಬಾಧಿಸದೆ ಇರುತ್ತಿದ್ದರೆ ನಾನು ನಿಮಗೆ ಈ ದಿನ ಇಂಥ ಉಪದ್ರವವನ್ನು ಕೊಡುತ್ತಿದ್ದಿರಲಿಲ್ಲ. ಮಹಾನುಭಾವ, ನಮ್ಮ ಈ ಕಷ್ಟನಿವಾರಣೆಗೆ ದೇವರೇ ತಮ್ಮನ್ನು ಕಳುಹಿಸಿಕೊಟ್ಟಿರುವನೆಂದು ಭಕ್ತಿಯಿಂದ ತಿಳಿಯುತ್ತ, ತಮ್ಮ ಈ ಅಮೋಘ ಸಹಾಯವನ್ನು ನಮ್ಮ ಹೃದಯಕ್ಕಿಟ್ಟು ಅಪ್ಪಿಕೊಂಡು ತಮ್ಮನ್ನು ವಂದಿಸುವೆವು," ಎಂದು ಜೋಂಡ್ರೆಟೆ ಹೇಳುತ್ತ ನಾಟಕೀಯವಾಗಿ ಅಂಗವಿನ್ಯಾಸಗಳನ್ನು ಮಾಡುತ್ತ ಕಣ್ಣೀರು ಸುರಿಸಿಕೊಂಡು ಹೆಂಡತಿಯ ಬಳಿಗೆ ಹೋದ. ಮಾನ್ಯರ್ ಲೆಬ್ಲೇಂಕರು ಕೊಟ್ಟಿದ್ದ ಸಾಮಾನುಗಳನ್ನು ಹೆಂಡತಿಗೆ ತೋರಿಸುವ ಮರೆಯಲ್ಲಿ, ಕೈ ಗಾಯಗೊಂಡಿದ್ದ ಮಗಳ ಕೈಯನ್ನು ಸ್ವಲ್ಪ ಒತ್ತಿ ನೋಯಿಸಿಬಂದ. ಆ ಮಗಳು ಅಳುವುದನ್ನು ಕಂಡು ಮಾನ್ಯರ್ ಲೆಬ್ಲೇಂಕರ ಜೊತೆಯಲ್ಲಿ ಬಂದಿದ್ದ ತರುಣಿ ಅವಳ ಬಳಿಗೆ ಹೋಗಿ, ಅವಳ ಕೈಯನ್ನು ನೋಡಿ, ಅವಳಿಗೆ ಏನಾಗಿದೆಯೆಂದು ವಿಚಾರಿಸಿದಳು. ಈ ವಿಚಾರಣೆಗೆ ಉತ್ತರವಾಗಿ ಜೋಂಡ್ರೆಟೆ, "ಆ ಕಥೆಯನ್ನೆಲ್ಲ ಏನೆಂದು ಹೇಳಲಿ, ಮಹಾನುಭಾವರೇ! ಪ್ರಖ್ಯಾತ ನಟಸಾಮ್ರಾಟ ತಲ್ಮನ ಆಪ್ತಶಿಷ್ಯ ನಾನು. ಈಗ ಶ್ರೀಮಂತಳಾಗಿ, ಮನೆ ಮಾಡಿ ನೆಲಸಿರುವ ಮೆಡೆಮೋಯ್ಸಲ್ ಮಾರ್ಸ್ ನನ್ನ ಜೊತೆ ಪಾರ್ಟು ವಹಿಸುತ್ತಿದ್ದಳು. ಇಂದು ನಾಟಕ ಕಲೆ ಹಿಂದೆ ಬೀಳದಿರುತ್ತಿದ್ದರೆ ನಾನು ಸಹ ಎಲ್ಲರಂತೆಯೇ ಇರುತ್ತಿದ್ದೆ. ಆದರೆ ಈಗ ದುರ್ದೈವದಿಂದ ಊಟಕ್ಕೆ ಹಣವಿಲ್ಲ, ಹೆಂಡತಿಗೆ ಖಾಯಿಲೆ, ಕಾರ್ಖಾನೆಯಲ್ಲಿ ಕೆಲಸ ಮಾಡಿ ನಾಲ್ಕು ಸೌ ಸಂಪಾದಿಸುತ್ತಿದ್ದ—ಈಗ ಅಲ್ಲಿ ಅಳುತ್ತಿರುವ—ಮಗಳ ಕೈಬೆರಳುಗಳು ಕಠಿಣವಾಗಿ ಜಖಂಗೊಂಡಿವೆ. ಈ ವಾರದಲ್ಲಾದರೂ ಬೆರಳುಗಳು ಗುಣವಾಗದಿದ್ದರೆ ಅವಳ ಹಸ್ತವನ್ನೇ ತುಂಡರಿಸಬೇಕಾಗುತ್ತದಂತೆ. ಈ ಚಳಿಯಲ್ಲಿ ಬೆಂಕಿಯನ್ನಾದರೂ ಉರಿಸೋಣವೆಂದರೆ ಅದಕ್ಕೂ ಗತಿಯಿಲ್ಲ. ನಮ್ಮ ಅವಸ್ಥೆಯನ್ನು ಹೇಳಿ ಪೂರೈಸದು. ನಾನು ಬರೆಯುವ ಕುರ್ಚಿಯ ಅಡಿ ನೋಡಿದರೇ ನಮ್ಮ ಅಧೋಗತಿಯ ಅರಿವು ಆಗ

ಬಹುದು, ಪ್ರಭೂ!" ಎಂದು ನಿಟ್ಟುಸಿರುಬಿಡುತ್ತ ಜೋಂಡ್ರೆಟೆ ಹೇಳಿದ.

"ಅಯ್ಯೋ ಪಾಪ! ನನ್ನಲ್ಲಿ ಸದ್ಯ ಹಣವಿಲ್ಲವಲ್ಲ," ಎಂದಂದುಕೊಂಡು ಮಾನ್ಸಿರ್ ಲೆಬ್ಲೇಂಕರು ತಮ್ಮ ಕಿಸೆಯನ್ನೆಲ್ಲ ಹುಡುಕಿ, ಸಿಕ್ಕಿದ ಐದು ಫ್ರ್ಯಾಂಕನ್ನು ಜೋಂಡ್ರೆಟೆಗೆ ಕೊಟ್ಟರು.

"ತಮಗೆ ನನ್ನ ಹೃತ್ಪೂರ್ವಕ ವಂದನೆಗಳು. ತಮ್ಮಂಥವರ ದರ್ಶನಭಾಗ್ಯವನ್ನಾದರೂ ದೇವರೇ ಒದಗಿಸಬೇಕಷ್ಟೆ. ಆದರೆ, ಮಹಾನುಭಾವರೇ! ಪುನಃ ತಮ್ಮನ್ನು ನಾನು ನೋಡುವ ಭಾಗ್ಯ ನನಗೆ ಇರಲಾರದೆಂದು ಊಹಿಸುವ ಪರಿಸ್ಥಿತಿಯಿದೆ. ಅದಕ್ಕಿಂತ ಹೆಚ್ಚನ್ನು ನಾನು ತಮ್ಮಲ್ಲಿ ಹೇಳಲಾರೆ," ಅಂದ ಜೋಂಡ್ರೆಟೆ ಕಣ್ಣೀರು ಸುರಿಸಿಕೊಂಡು.

"ಅಂಥ ಪರಿಸ್ಥಿತಿ ಇನ್ನೇನಿದೆ, ದಯಮಾಡಿ ಹೇಳಿ," ಅಂದರು ಮಾನ್ಸಿರ್ ಲೆಬ್ಲೇಂಕ್.

"ಮನೆಯ ಬಾಡಿಗೆ ಬಾಕಿಯಾಗಿದೆ. ಇಂದೇ ರಾತ್ರಿಯ ಒಳಗೆ ನಾನು ೬೦ ಫ್ರ್ಯಾಂಕನ್ನು ಕೊಡದಿದ್ದರೆ ಮನೆಯೊಡೆಯ ನಮ್ಮನ್ನು ಹೊರಗೆ ನೂಕುವನು. ಮಾರ್ಗದಲ್ಲಿ ಹೋಗಲು ತಕ್ಕಂಥ ಒಂದು ಇಡೀ ಕೋಟು ನನ್ನಲ್ಲಿದ್ದಿದ್ದರೆ ನಾನು ಮೆಡೆಮೋಯ್ಸಲ್ ಮಾರ್ಸಳ ಬಳಿಗೆ ಹೋಗಿ ಸಹಾಯ ಪಡೆಯುತ್ತಿದ್ದೆ."

"ನೀವು ಬೇಸರಪಡಬೇಡಿ; ನಾನು ಇಂದೇ ಸಂಜೆಗೆ ಬಂದು ನಿಮಗೆ ೬೦ ಫ್ರ್ಯಾಂಕ್ ಹಣ ಕೊಡುವೆ. ಬಾಡಿಗೆ ಕೊಟ್ಟು ನೀವು ಇಲ್ಲಿ ಉಳಿಯುವಂತೆ ಮಾಡಿಕೊಳ್ಳಿ," ಎಂದು ಹೇಳಿ, ಮಾನ್ಸಿರ್ ಲೆಬ್ಲೇಂಕ್ ಅಲ್ಲಿಂದ ಹೊರಡಲುದ್ಯುಕ್ತರಾದರು. ಮಾನ್ಸಿರ್ ಲೆಬ್ಲೇಂಕ್ ಆ ತರುಣಿಯ ಹತ್ತಿರ ಏನೋ ಮಾತಾಡುತ್ತಿದ್ದಾಗ ಜೋಂಡ್ರೆಟೆ ತನ್ನ ಪತ್ನಿಯ ಕಿವಿಯಲ್ಲಿ, "ಆ ಮನುಷ್ಯನನ್ನು ಚೆನ್ನಾಗಿ ನೋಡಿ ಗುರುತುಹಿಡಿಯಲು ಪ್ರಯತ್ನಿಸು," ಎಂದು ಮಾತ್ರ ಪಿಸುಮಾತಿನಿಂದ ಹೇಳಿ, ಮಾನ್ಸಿರ್ ಲೆಬ್ಲೇಂಕರನ್ನು ಕಳುಹಿಸಿಕೊಡಲು ಕೋಣೆಯಿಂದ ಹೊರಗೆ ಹೊರಟ. ಮಾನ್ಸಿರ್ ಲೆಬ್ಲೇಂಕ್ ಬಲು ಕನಿಕರದಿಂದ ತಮ್ಮ ನಿಲುವಂಗಿಯನ್ನು ಜೋಂಡ್ರೆಟೆಗೆ ಕೊಟ್ಟು, ಅದನ್ನು ಧರಿಸಿ ಚಳಿಯಲ್ಲಿ ಬೇಕಾದರೆ ತಿರುಗಾಡಬಹುದೆಂದು ಹೇಳುತ್ತ ಅಲ್ಲಿಂದ ಹೊರಟರು.

೬. ಬಂಡಿಗೆ ಬಾಡಿಗೆ ಕೊಡಲಾಗದೆ ಸೋತದ್ದು

ಮೇರಿಯಸನ ಹೃದಯವೇ ಅವನನ್ನು ಬಿಟ್ಟು ಆ ತರುಣಿಯ ಜೊತೆ ಹೋದಂತೆ ಭಾಸವಾಗ ತೊಡಗಿತು. ಅವಳನ್ನು ಹಿಂಬಾಲಿಸಿ ಹೋಗಿ ಅವಳಿರುವ ಮನೆ ಪತ್ತೆಹಚ್ಚಬೇಕೆಂದು ತನ್ನ ಕೋಣೆಯಿಂದ ರಸ್ತೆಗೆ ಓಡಿದ. ಆಗಲೇ ಮಾನ್ಸಿರ್ ಲೆಬ್ಲೇಂಕರೂ ತರುಣಿಯೂ ಬಂಡಿ ಏರಿದುದನ್ನು ದೂರದಿಂದ ಕಂಡ. ತಾನು ನಡೆದಾಗಲೀ ಓಡಿಕೊಂಡೇ ಆಗಲೀ ಆ ಬಂಡಿಯನ್ನು ಹಿಂಬಾಲಿಸಿದರೆ ಬಂಡಿಯೊಳಗಿದ್ದವರಿಗೆ ತನ್ನ ಗುರುತು ಸಿಕ್ಕಿ, ಹಿಂದೆ ಲಕ್ಸಂಬರ್ಗಿನಲ್ಲಿ ಆದಂತೆಯೇ ತರುಣಿ ಮಾಯವಾಗಬಹುದೆಂದು ಹೆದರಿ, ಅವನು ಒಂದು ಬಾಡಿಗೆ ಬಂಡಿಯನ್ನು ಕರೆದು ತನ್ನನ್ನು ಗಂಟೆ ಲೆಕ್ಕದಲ್ಲಿ ಬಾಡಿಗೆಗೆ ಕರೆದುಕೊಂಡು ಹೋಗಬೇಕೆಂದು ತಿಳಿಸಿದ.

ಬಂಡಿಗ ಮಾತ್ರ ಮೇರಿಯಸನ ಆಗಿನ ದುಸ್ತನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿ, ಬಾಡಿಗೆ ಹಣ ಮುಂದಾಗಿಯೇ ಕೊಡಬೇಕೆಂದ. ಆಗಲೇ ಮೇರಿಯಸನಿಗೆ ತನ್ನಲ್ಲಿದ್ದ ಹಣದಲ್ಲಿ ಹೆಚ್ಚಿನಂಶವನ್ನು ಜೋಂಡ್ರೆಟೆ ಮಗಳಿಗೆ ಕೊಟ್ಟಿದ್ದು ತನ್ನ ಜೇಬಿನಲ್ಲಿ ಬರೇ ೧೬ ಸೌ ಮಾತ್ರವಿರುವುದೆಂದು ನೆನಪಿಗೆ ಬಂತು. ಹಾಗಾಗಿ ಇವನು ಬಂಡಿಗನ ಕೈಯಲ್ಲಿ ಸೋತು ಉತ್ಸಾಹ ಭಂಗದಿಂದ ಹಿಂತಿರುಗಿದ. ಬಂಡಿಗ ತನ್ನ ತೀಕ್ಷ್ಣಬುದ್ಧಿಗೆ ತಾನೇ ಮೆಚ್ಚಿಕೊಂಡು, ಅಲಕ್ಷ್ಯದಿಂದ ಸಿಳ್ಳುಹಾಕುತ್ತ,

ತನ್ನ ದಾರಿ ಹಿಡಿದು ಖಾಲಿಬಂಡಿ ಓಡಿಸಿದ.

ಮೇರಿಯಸ್ ದುಃಖದಿಂದ ತನ್ನ ಕೋಣೆ ಕಡೆಗೆ ಬರುವಾಗ ದಾರಿಕರೆಯಲ್ಲಿ ಒಂದು ಮರದಡಿಯಲ್ಲಿ ಜೋಂಡ್ರೆಟೆ ಯಾವನೋ ಒಬ್ಬ ಕ್ರೂರ ಮುಖದ ಗಂಡಸಿನೊಂದಿಗೆ ಮಾತಾಡು ತ್ತಿದ್ದುದನ್ನು ಕಂಡ. ಆ ಹೊಸಬನ ದುಸ್ತು, ಮುಖ, ನಿಲುವು ಯಾವುದನ್ನು ನೋಡಿದರೂ ಅವನೊಬ್ಬ ರಾತ್ರಿ ಕೆಲಸಗಾರನೆಂಬಂತೆ ತೋರುತ್ತಿದ್ದ. ಆ ಹೊಸಬ ಮೇರಿಯಸನ ಎಬಿಸಿ ಕ್ಲಬ್ಬಿನ ಸ್ನೇಹಿತರು ಕೆಲವೊಮ್ಮೆ ಪ್ರಸ್ತಾವಿಸುತ್ತಿದ್ದ ದರೋಡೆಕಾರರಲ್ಲೊಬ್ಬನಾಗಿದ್ದ.

೭. ಡೊಂಕು ಮನದ ಕೊಂಕು ಚಿಂತನೆ

ಬಂಡಿ ಮಾಲೀಕನಿಂದ ಅಪಮಾನಿತನಾಗಿ ಮತ್ತು ತನ್ನ ಉದ್ದೇಶಭಂಗದಿಂದ ಹತಾಶನಾಗಿ ಮೇರಿಯಸ್ ತನ್ನ ಕೋಣೆಗೆ ಬರುತ್ತಿದ್ದಾಗ ಕೋಣೆಯ ಬಾಗಿಲಲ್ಲೇ ಜೋಂಡ್ರೆಟೆಯ ಹಿರೇ ಮಗಳು ಸಿಕ್ಕಿದಳು. ಅವಳು ತನ್ನ ಹಿಂದಿನ ಕ್ರಮದಿಂದ, ಅವನೊಡನೆ ಸರಸಸಲ್ಲಾಪ ನಡೆಸಲು ಬಂದಿದ್ದವಳಂತೆ ತೋರುತ್ತಿದ್ದಳು. ಅವಳು ಇವನೊಂದಿಗೆ ಮಾತು ಪ್ರಾರಂಭಿಸುವಾಗಲೇ ಇವನು ಎಗರಿ ಮಾತಾಡಿ ಅವಳನ್ನು ಕಳುಹಿಸುವ ಪ್ರಯತ್ನ ಮಾಡಿದ. ಆದರೆ ಅವಳು ಹಠ ಹಿಡಿದಿರುವವಳಂತೆ ಮಾತಾಡುತ್ತ, "ನಿಮ್ಮ ಹತ್ತಿರ ನನಗೆ ಆಗಬೇಕಾದ ಕೆಲಸವೇನೂ ಇಲ್ಲ. ಆದರೆ, ನಿಮಗೆ ಬೇಕಾದ ಕೆಲಸಗಳನ್ನೇಕೆ ನನ್ನಿಂದ ಮಾಡಿಸಿಕೊಳ್ಳಬಾರದು," ಎಂದು ಕೇಳಿದಳು.

"ನನಗೆ ನಿನ್ನಿಂದ ಏನಾಗುವುದೂ ಬೇಡ, ಇಲ್ಲಿಂದ ನಡಿ," ಎಂದ ಮೇರಿಯಸ್.

"ಸಿಟ್ಟುಮಾಡಬೇಡಿ, ನೀವು ನನ್ನ ಮೇಲೆ ಸಿಟ್ಟುಕೊಂಡರೂ ನಾನು ಸಿಟ್ಟುಗೊಳ್ಳಲಾರೆ. ಈ ದಿನ ಬೆಳಗ್ಗೆ ನನ್ನ ಮೇಲೆ ಅಷ್ಟೊಂದು ದಯೆತೋರಿಸಿ ಹಣ ಕೊಟ್ಟವರು ಈಗ ಹೀಗೆ ಕೋಪಿಸಿ ಕೊಳ್ಳಬಾರದು. ನಾವು ಬಡವರಾದರೂ ನಮ್ಮಿಂದಲೂ ಕೆಲವರಿಗೆ ಸಹಾಯ ಸಿಗುವುದು. ಅಂಥ ಸಹಾಯವನ್ನೆಸಗಲು ನಾವು ಸದಾ ಸಿದ್ಧರು. ನಮ್ಮ ವೃತ್ತಿಯೇ ಅದು. ಯಾರನ್ನಾದರೂ ಪತ್ತೆಹಚ್ಚ ಬೇಕಾದರೆ, ಯಾರಿಗಾದರೂ ಪತ್ರ ತಲಪಿಸಬೇಕಾದರೆ, ನಾನು ಮಾಡಿಕೊಡುವೆನು. ನಿಮಗೆ ತುಂಬ ದುಃಖವಿರುವಂತೆ ತೋರುತ್ತದೆ. ಏನಾದರೂ ಕೆಲಸವಿದ್ದರೆ ತಿಳಿಸಿ," ಅಂದಳು ಆ ಹುಡುಗಿ.

ಆಗಲೇ ಮೇರಿಯಸನಿಗೆ ಬೆಳಗ್ಗೆ ತಾನು ಕಂಡಿದ್ದ ತರುಣಿಯನ್ನು ಪತ್ತೆಹಚ್ಚುವ ಪ್ರಯತ್ನ ವನ್ನೇಕೆ ಮಾಡಬಾರದೆಂದು ತೋರಿ, "ಈ ದಿನ ಬೆಳಗ್ಗೆ ಇಲ್ಲೇ ದಾಟಿಹೋದ ಆ ವೃದ್ಧರ ಮತ್ತು ಅವರ ಮಗಳ ಪರಿಚಯ ನಿನಗೆ ಇದೆಯೇ?" ಎಂದು ಕೇಳಿದ.

"ವಿಶೇಷ ಪರಿಚಯವಿಲ್ಲ. ಇಗರ್ಜಿಯಲ್ಲಿ ಮಾತ್ರ ಅವರನ್ನು ನೋಡಿ ಗೊತ್ತು."

"ಅವರ ವಿಳಾಸ ಗೊತ್ತಿದೆಯೇ?"

"'ಅವರ' ಅಂದರೆ 'ಅವಳ' ಅಲ್ಲವೆ?"

"ಆ ಪ್ರಶ್ನೆಯೆಲ್ಲ ನಿನಗೇಕೆ? ನೀನು ಪತ್ತೆ ಹಚ್ಚಿಕೊಡುವಿಯೇನು?"

"ನನಗೇನು ಪ್ರತಿಫಲ ಕೊಡುವಿರಿ?"

"ನೀನು ಕೇಳಿದ್ದು."

"ಓಹೋ! ಅಷ್ಟೊಂದು ನಿಮ್ಮ ದಯವಿದ್ದರೆ ಖಂಡಿತವಾಗಿಯೂ ನಾನವಳ ಪತ್ತೆ ಹಚ್ಚಿ ಕೊಡುವೆ," ಹೀಗೆನ್ನುತ್ತ ಆ ಹುಡುಗಿ ಸಂತೋಷದಿಂದ ಹೊರಟುಹೋದಳು.

ಇದೇ ವೇಳೆ ಜೋಂಡ್ರೆಟೆ ತನ್ನ ಕೋಣೆಗೆ ನುಗ್ಗಿ, ಬಲು ಗಟ್ಟಿ ಸ್ವರದಿಂದ, ತುಂಬ ಉದ್ವಿಗ್ನ

ನಾಗಿದ್ದವನಂತೆ ಅವನ ಪತ್ನಿಯೊಡನೆ ಮಾತಾಡತೊಡಗಿದ. ಈ ವಿಧದ ಸ್ವರ ಕೇಳಿ ಮೇರಿಯಸ್ ತನ್ನ ಕಡೆಯ ಕಿಂಡಿಯಿಂದ ಜೋಂಡ್ರೆಟೆ ಮಾತು ಕೇಳತೊಡಗಿದ.

"ಅವನ್ಯಾರು? ಮತ್ತೆ, ಆ ಹುಡುಗಿ ಯಾರು? ಎಂಬುದು ಗೊತ್ತಾಯಿತೆ?" ಎಂದು ಜೋಂಡ್ರೆಟೆ ಪತ್ನಿಯನ್ನು ಕೇಳಿದ.

"ಇಲ್ಲ," ಅಂದಳು ಪತ್ನಿ.

"ಇಲ್ಲ! ಅವನು ಎಂಟು ವರ್ಷಗಳ ಹಿಂದೆ ಮೊಂಟ್‌ಫರ್ಮಿಯಲ್ಲಿಗೆ ಬಂದು 'ಗುಬ್ಬಿ'ಯನ್ನು ಕರೆದುಕೊಂಡು ಹೋದವನು. ಈ ಹುಡುಗಿ ಯಾರೆಂದು ಇನ್ನು ಬೇರೆ ಹೇಳಬೇಡವಲ್ಲ," ಎಂದು ಹೇಳಿ ಜೋಂಡ್ರೆಟೆ ಹೆಂಡತಿಯ ಕಿವಿಯಲ್ಲಿ ಏನೋ ಗುಟ್ಟಾಗಿ ಹೇಳಿದ.

ಹೆಂಡತಿ ಹಠಾತ್ತನೆ ರೋಷಾವೇಶಕ್ಕೆ ಏರಿದಳು. ಅವಳ ಮೂಗಿನ ಸೊಳ್ಳೆಗಳು ಉಬ್ಬಿದುವು. ಮುಖ ಕಿಡಿಕಾರತೊಡಗಿತು. ಮೈಕೈ ಅಲ್ಲಾಡಿಸುತ್ತ, "ಆ ಪಾಪಿ ಇಂದು ನಮ್ಮ ಮನೆಗೆ ದೊಡ್ಡ ದೊರೆಸಾನಿಯಂತೆ ಬಂದಿರುವಳು! ನಮ್ಮ ಮಕ್ಕಳು ಭಿಕ್ಷಾವೃತ್ತಿಯಲ್ಲಿರುವಾಗಲೇ ಅವಳು ರೇಷ್ಮೆ, ಮಖಮಲ್ಲು ದುಸ್ತು ಧರಿಸಿಕೊಂಡು ನಮ್ಮ ಕಷ್ಟ ನೋಡೋದಕ್ಕೆ ಬಂದಿದ್ದಾಳೆ!" ಎಂದು ಆರ್ಭಟಿಸಿದಳು.

ಜೋಂಡ್ರೆಟೆ ಆ ಮಾತುಗಳಿಗೆ ಲಕ್ಷ್ಯಕೊಡಲಿಲ್ಲ. ದಳಪತಿ ಯುದ್ಧಾರಂಭದ ಮೊದಲು ಮರುಪ್ರಶ್ನೆಯಿಲ್ಲದೆ ಪಾಲಿಸಲ್ಪಡಬೇಕಾದ ಆಜ್ಞೆಗಳನ್ನು ಕೊಡುವಂತೆ ತನ್ನಿಬ್ಬರು ಹೆಣ್ಣುಮಕ್ಕಳನ್ನೂ ಉದ್ದೇಶಿಸಿ, "ನೋಡಿ, ನಮ್ಮ ನೆರೆಕೋಣೆಯವನು ೪ ಗಂಟೆಗೆ* ರಾತ್ರಿ ಊಟಕ್ಕೆ ಹೊಟೇಲಿಗೆ ಹೋಗುವನಷ್ಟೆ, ಮತ್ತು ಕೆಲಸದ ಹೆಂಗುಸು ಅವಳ ಕೆಲಸದ ಮೇಲೆ ಆಗಲೇ ನಗರಕ್ಕೆ ಹೋಗುವಳಷ್ಟೆ ?" ಎಂದು ಕೇಳಿದ.

"ಹೌದು, ಇಬ್ಬರೂ ೪ ಗಂಟೆಗೆ ನಗರಕ್ಕೆ ಹೋಗುವರು; ಬರುವಾಗ ರಾತ್ರಿಯಾಗಿರುತ್ತದೆ."

"ಸರಿ, ಅದು ಗೊತ್ತಿದೆ; ಹಾಗಾಗಿಯೇ ಕೆಲಸವನ್ನು ೬ ಗಂಟೆಗೆ ನೆರವೇರಿಸುವುದೆಂದು ನಿಶ್ಚೈಸಿರುತ್ತೇನೆ. ನೀವಿಬ್ಬರೂ ೫-೩ಂಕ್ಕೆ ಇಲ್ಲಿ ತಯಾರಿದ್ದು, ಮುಂದಿನ ಸೂಚನೆಗಳನ್ನು ಕೇಳಿಕೊಂಡು ಹೋಗಬೇಕು. ಈಗ ಇಲ್ಲಿಂದ ತೊಲಗಿರಿ," ಎಂದು ಮೃದುವಾಗಿ ಅಪ್ಪಣೆಯಿತ್ತ. ಮಕ್ಕಳು ಹೊರಗೆ ಹೋದನಂತರ ಹೆಂಡತಿಯೊಡನೆ, "ನೀನು ಮೊದಲು ಬಾಗಿಲ ಬಿಜಾಗರಿಗಳಿಗೆಲ್ಲ ಎಣ್ಣೆ ಸವರಿ ಯಾವ ಬಾಗಿಲೂ ಸದ್ದು ಮಾಡದಂತೆ ಮಾಡಿಡಬೇಕು. ೫, ೫-೩೦ ಗಂಟೆ ಆಗುವಾಗ, ಒಬ್ಬ ಕುಲೀನ ಸ್ತ್ರೀಯಂತೆ ದುಸ್ತುಮಾಡಿಕೊಂಡು ಮುಂದೆ ನಾನು ತಿಳಿಸಿದ ಕೂಡಲೇ ಒಂದು ಕಡೆಗೆ ಹೋಗಿಬರಲು ಸಿದ್ಧಳಾಗಿರಬೇಕು. ಮತ್ತೆ, ಒಂದು ಬುಷೆಲ್ ಇದ್ದಲು ತಂದು, ಸಂಜೆಗೆ ಸಿಗುವಂತೆ ಉರಿಯುವ ಕೆಂಡವನ್ನು ಒಂದು ಮೂಲೆಯಲ್ಲಿ ತಯಾರಿಸಿಡಬೇಕು," ಅಂದ.

ಇಷ್ಟು ಅಪ್ಪಣೆಯಿತ್ತು ಜೋಂಡ್ರೆಟೆ ಹೊರಗೆ ಹೊರಡಲುದ್ಯುಕ್ತನಾದ. ಆಗ ಹೆಂಡತಿ ಅಡ್ಡ ನಿಂತು, "ಬೆಳಗ್ಗೆ ಅಷ್ಟೊಂದು ಹಣ ಸಂಪಾದಿಸಿದಿರಲ್ಲ, ನನಗೆ ಅದರಲ್ಲಿ ಏನೂ ಹಕ್ಕಿಲ್ಲವೋ? ನಾನೂ ಕುಡಿಯಬೇಡವೋ? ಊಟಮಾಡಬೇಡವೋ? ಇದ್ದಲನ್ನಾದರೂ ತರುವುದಕ್ಕೆ ಹಣವೆಲ್ಲಿ?" ಎಂದು ಗಂಡನನ್ನು ಕೇಳಿದಳು.

ಗಂಡ ೫ ಫ್ರ್ಯಾಂಕ್ ಹಣವನ್ನು ಹೆಂಡತಿಗೆ ಕೊಟ್ಟು, "ಬೆಳಗ್ಗೆ ಆ ದೊಡ್ಡ ಮನುಷ್ಯ ಕೊಟ್ಟ

---

* ಫ್ರಾನ್ಸ್ ದೇಶದಲ್ಲಿ ಸೂರ್ಯೋದಯಾಸ್ತ ದಿನಮಾನ ಎಲ್ಲವೂ ಕರ್ನಾಟಕದ ಉದಯಾಸ್ತ ದಿನಮಾನಗಳಂತಲ್ಲವೆಂಬುದನ್ನು ಗ್ರಹಿಸಬೇಕು—ಅನುವಾದಕ

ಹಣ ಅವನ ಬಗ್ಗೆ ಖರ್ಚಿಗೇ ಬೇಕು. ಸದ್ಯ ಇದ್ದಲನ್ನು ತಂದು ನಾನು ಹೇಳಿದ ಕೆಲಸ ಮಾಡು. ಸಂಜೆಗೆ ನೋಡು—ಆ ತಮಾಷೇನ ! ಅವನು ಮಾತ್ರ ಲಕ್ಷಾಧಿಪತಿಯಂತೆ ಸುಖಪಟ್ಟರೆ ಸಾಲದು. ನಾವೂ ಸುಖಪಡುವ ದಾರಿ ತೋರಿಸ್ತೇನೆ," ಎಂದು ಹೇಳಿ ಹೊರಗೆ ಹೋದ.

೮. ಸಂಚು, ಎದುರು ಸಂಚು

ಜೋಂಡ್ರೈಟೆ ದಂಪತಿಗಳ ಅಂದಿನ ಸಂಜೆಯ ಏರ್ಪಾಡು ತನ್ನ ಪ್ರಿಯತಮೆ ತರುಣಿಯ ಪಿತನ ಕುರಿತಾಗಿ ಎಂದು ಮೇರಿಯಸನಿಗೆ ಈ ಮೊದಲೇ ಗೊತ್ತಾಗಿತ್ತು. ಅಷ್ಟೂ ಅಲ್ಲದೆ, ಅಂದೇ ಸಂಜೆಗೆ, ಆ ಏರ್ಪಾಡುಗಳ ಪ್ರಕಾರ ಅಲ್ಲಿ ಏನೋ ಒಂದು ಭಯಂಕರ ಕಾರ್ಯ ನಡೆಯುವುದೆಂದೂ ಊಹಿಸಿದ. ಮೇರಿಯಸ್ ಭಾವನಾ ಪ್ರಪಂಚದಲ್ಲಿರಬಲ್ಲಂತೆ, ಆವೇಶಗೊಂಡಾಗ ಪ್ರತ್ಯಕ್ಷಪ್ರಪಂಚದಲ್ಲೂ ಕಾರ್ಯ ನಿರ್ವಹಿಸಬಲ್ಲವನಾಗಿದ್ದ. ಅವನು ದೇಶಪ್ರೇಮ, ವಿದ್ಯೆ ಮತ್ತು ಉಚ್ಚ ಸಂಸ್ಕೃತಿಗಳಿಂದ ಕೂಡಿದವನಾಗಿದ್ದುದರಿಂದ, ಅವನಲ್ಲಿ ಧರ್ಮಿಷ್ಠನ ದಯಾಪರತೆ ಇದ್ದುದರ ಜೊತೆ, ನ್ಯಾಯಾಧೀಶನ ಕರ್ತವ್ಯನಿಷ್ಠೆಯೂ ಇತ್ತು. ಅವನು ಕಾರ್ಯಕ್ಕಿಳಿದನೆಂದರೆ, ಅವನ್ನು ಬಲು ಚುರುಕಿನಿಂದ ಮಾಡತಕ್ಕವ. ಹಾಗಾಗಿ ಇಂದಿನ ಪ್ರಸಂಗಗಳನ್ನು ಗ್ರಹಿಸಿ, ತನ್ನ ಮುಂದಿನ ಕಾರ್ಯಗಳ ಬಗ್ಗೆ ಸ್ಥಿರಸಂಕಲ್ಪದಿಂದ ಪೊಲೀಸ್ ಠಾಣ್ಯಕ್ಕೆ ಹೋದ.

ಅಲ್ಲಿ ಪೊಲೀಸ್ ಕಮಿಶನರ್ ರಜೆಯಲ್ಲಿ ಹೋಗಿದ್ದುದರಿಂದ, ಒಬ್ಬ ಇನ್‌ಸ್ಪೆಕ್ಟರ್ ಮೇರಿಯಸನಿಗೆ ಕಾಣಸಿಕ್ಕಿದ. ಮೇರಿಯಸ್ ತಾನು ತಿಳಿದ ಜೋಂಡ್ರೈಟೆ ಕುರಿತಾದ ವರ್ತಮಾನವನ್ನೆಲ್ಲ ಇನ್‌ಸ್ಪೆಕ್ಟರನಿಗೆ ತಿಳಿಸಿದ. ಇನ್‌ಸ್ಪೆಕ್ಟರ್ ಮೊದಮೊದಲು ಮೇರಿಯಸನ ಹತ್ತಿರ ಸ್ವಲ್ಪ ಒರಟಾಗಿ ಮಾತಾಡಿದ. ಅಲ್ಲದೆ, ಅವನ ಕ್ರಮಗಳೂ ಸ್ವಭಾವವೂ ಸ್ವಲ್ಪ ಕ್ರೂರವಾಗಿ ತೋರಿದುವು. ಕೆಲವೊಮ್ಮೆ ಮನುಷ್ಯ ಸಾಕಿದ ನಾಯಿಯೂ ಕಾಡಿನ ತೋಳಕ್ಕಿಂತ ಕ್ರೂರವಾಗಿರುವುದುಂಟಷ್ಟೆ. ಈ ಇನ್‌ಸ್ಪೆಕ್ಟರ್ ಒಮ್ಮೆ ಮೇರಿಯಸನಿಗೆ ಆ ರೀತಿ ತೋರಿದ. ಆದರೆ ಇನ್‌ಸ್ಪೆಕ್ಟರನ ಎತ್ತರ, ನಿಲುವು ಮುಖದ ಸ್ಥಿರಮುದ್ರೆ, ಮಾತುಗಳ ಸ್ಪಷ್ಟತೆ, ಮಿತಭಾಷಿತ್ವ ಇವನ್ನೆಲ್ಲ ನೋಡಿದ ಹಾಗೆ, ಆ ಇನ್‌ಸ್ಪೆಕ್ಟರ್ ಪಾಪಿಗಳಿಗೆ ಭಯಂಕರನಾಗಿರಬಹುದಾದರೂ ಆರ್ತರಿಗೆ ಅಭಯ ನೀಡಬಲ್ಲ ಸಮರ್ಥನೆಂದೂ ಮೇರಿಯಸ್ ತಿಳಿದ. ಆತ ಮೇರಿಯಸನಿಗೆ ಮದ್ದು ತುಂಬಿದ ಎರಡು ಪಿಸ್ತೂಲುಗಳನ್ನು ಕೊಟ್ಟು, ಹೇಳಿದ, "ನೋಡಿ, ನೀವು ನಿಮ್ಮ ಕಿಂಡಿಯಿಂದ ನೋಡುತ್ತಲೂ ಕೇಳುತ್ತಲೂ ಇದ್ದು, ಅವರ ಕಾರ್ಯಗಳು ಸಾಕಷ್ಟು ಪಕ್ವವಾದ ಕೂಡಲೇ—ಆ ಮೊದಲೇ ಅಲ್ಲ, ಎಚ್ಚರ—ಪಿಸ್ತೂಲೊಂದನ್ನು ಆಕಾಶದ ಕಡೆಗೆ ಹಾರಿಸಿಬಿಡಿ. ಮುಂದಿನ ಕಾರ್ಯಗಳನ್ನು ನಾನೆಸಗುವೆನು. ಅಲ್ಲಿಯ ಕೆಲಸದಾಕೆ ೪ ಗಂಟೆ ಸಮಯಕ್ಕೆ ನಗರಕ್ಕೆ ಹೋಗುವಳೆಂದು ಹೇಳಿದಿರಷ್ಟೆ, ನೀವೂ ನಿಮ್ಮ ಪ್ರತಿನಿತ್ಯದ ಕ್ರಮದಂತೆ ಅದೇ ಹೊತ್ತಿಗೆ ಹೋಗಿರುವುದಾಗಿ ಅವರು ನಂಬುವಂತೆ ಮಾಡಲು ಮರೆಯದಿರಿ. ಇನ್ನು, ಈ ನಡುವೆ ನನ್ನ ಸಂಗಡ ಕೆಲಸವೇನಾದರೂ ಇದ್ದರೆ, ಇಲ್ಲಿಗೆ ಬಂದು, 'ಇನ್‌ಸ್ಪೆಕ್ಟರ್ ಜೇವರ್ಟರನ್ನು ಕಾಣಬೇಕು' ಎಂದರೆ ನನ್ನಲ್ಲಿಗೆ ಕರೆತರುವರು."

೯. ಜೋಂಡ್ರೈಟೆ ಮಾಲು ಖರೀದಿಸಿದ

ಪೊಲೀಸ್ ಠಾಣ್ಯದಿಂದ ಮೇರಿಯಸ್ ಹೊರಟು ರಸ್ತೆಯಲ್ಲಿ ಬರುತ್ತ ಸ್ವಲ್ಪ ಸಮಯದಲ್ಲೇ ಅವನು ಬಲು ರಭಸದಿಂದ ನಡೆಯತೊಡಗಿದ. ಅದೇ ವೇಳೆಯಲ್ಲಿ ಅವನು ಹೋಗುತ್ತಿದ್ದ

ರಸ್ತೆಯ ಇನ್ನೊಂದು ಬದಿಯಲ್ಲಿ ಅವನ ಎಬಿಸಿ ಕ್ಲಬ್ಬಿನ ಸ್ನೇಹಿತರಿಬ್ಬರೂ ನಡೆದು ಹೋಗುತ್ತಿದ್ದರು. ಮೇರಿಯಸನ ಏಕಾಗ್ರತೆಯ ಕಾರಣವಾಗಿ ಅವನಿಗೆ ಅವರು ಗಮನಕ್ಕೆ ಬರಲಿಲ್ಲ. ಆಗ ಆ ಸ್ನೇಹಿತರಲ್ಲಿ ಒಬ್ಬ ಮತ್ತೊಬ್ಬನಿಗೆ ಹೇಳಿದ, "ಅಲ್ಲಿ ನೋಡು, ಮೇರಿಯಸ್ ಯಾವಳೋ ಒಬ್ಬ ತರುಣಿಯನ್ನು ಹಿಂಬಾಲಿಸಿಕೊಂಡು ಓಡುತ್ತಿದ್ದಾನೆ; ಅವನಿಗೆ ನಮ್ಮ ಗೋಷ್ಠಿಯೇ ಆಗಲಿಲ್ಲ!"

"ಮೇರಿಯಸ್ ಹೋಗುತ್ತಿರುವುದೇನೋ ಹಾಗೆಯೇ ಸರಿ. ಆದರೆ, ಅವನು ಹಿಂಬಾಲಿಸುತ್ತಿರುವುದು ಒಬ್ಬ ಗಂಡುಸನ್ನೆಂದು ತೋರುತ್ತದಲ್ಲ! ಮುಂದೆ ಹೋಗುತ್ತಿರುವವನಿಗೆ ಗಡ್ಡವಿದೆ—ತನ್ನ ಅಳತೆಗೆ ಮೀರಿದ ನಿಲುವಂಗಿ ತೊಟ್ಟಿದ್ದಾನೆ! ಅವನು ಹೆಂಗುಸಲ್ಲವಷ್ಟೆ?" ಅಂದ ಆ ಮತ್ತೊಬ್ಬ.

"ಹಾಗಾದರೆ, ಮುಂದೆ ಹೋಗುವವನು ಪ್ರಪಂಚಾತೀತನಾದ ಕವಿಯಾಗಿರಬೇಕು. ಅವನು ಹೋಗುತ್ತಿರುವುದರಲ್ಲಿ ಕಾಣುವ ಏಕಾಗ್ರತೆ ಗ್ರಹಿಸಿದರೆ ನಮ್ಮ ಪ್ರಪಂಚದಲ್ಲಿಲ್ಲದಿರುವವನಂತೆ ತೋರುತ್ತಾನೆ!" ಅಂದ ಮೊದಲಿನವ.

ಮೇರಿಯಸ್ ಅಡಗಿ ಹಿಂಬಾಲಿಸುತ್ತಿದ್ದುದು ಜೋಂಡ್ರೆಟೆಯನ್ನು. ಇವನು ಕೆಲವು ಅಂಗಡಿಗಳಿಗೆ ಹೋಗಿ ಕೆಲಕೆಲವು ಸಾಮಾನುಗಳನ್ನು ಕ್ರಯಕ್ಕೆ ತೆಗೆದುಕೊಂಡ. ಕೊನೆಗೆ ಒಬ್ಬ ಕಬ್ಬಿಣದ ಅಂಗಡಿಯವನಿಂದ ಮರದ ಹಿಡಿಯಿದ್ದ ಉದ್ದದ ಒಂದು ಉಳಿಯನ್ನು ಖರೀದಿಸಿದ. ಜೋಂಡ್ರೆಟೆಯ ವ್ಯಾಪಾರ ಮುಗಿದು ಅವನ ಕೋಣೆಗೆ ನುಗ್ಗಿದಾಗಲೇ ಮೇರಿಯಸ್ ತನ್ನ ಕೋಣೆ ಹೊಕ್ಕು ಕಿಂಡಿಯ ಬದಿಯಲ್ಲಿ ನಿಂತು ಜೋಂಡ್ರೆಟೆ ಕೋಣೆಯನ್ನು ನೋಡತೊಡಗಿದ. ಆಗ ಗಂಟೆ ೫-೬ರ ಸಮೀಪವಾಗಿತ್ತು.

ಜೋಂಡ್ರೆಟೆ ಉಳಿಯನ್ನು ಇದ್ದಲಿನ ಕೆಂಡದಲ್ಲಿಟ್ಟ. ತನ್ನ ಹಿರೇಮಗಳನ್ನು ಕರೆದು ನೆರೆಕೋಣೆಯಾತ ಊಟಕ್ಕೆ ಹೋಗಿರುವನೋ ಎಂದೂ ಕಿರಿಯವಳನ್ನು ಕರೆದು ಕೆಲಸದ ಹೆಂಗುಸು ನಗರಕ್ಕೆ ಹೋಗಿರುವಳೋ ಎಂದೂ ನೋಡಿ ಬರುವಂತೆ ಆಜ್ಞಾಪಿಸಿದ.

ಜೋಂಡ್ರೆಟೆಯ ಮಗಳು ತನ್ನ ಕೋಣೆಗೆ ಬರುವಳೆಂದು ಗೊತ್ತಾದ ಕೂಡಲೆ ಮೇರಿಯಸ್ ತನ್ನ ಮಂಚದಡಿಗೆ ನುಗ್ಗಿ ಕುಳಿತ. ಇವನು ತನ್ನ ಕೋಣೆಗೆ ಬೀಗವನ್ನಾಗಲೀ ಅಗಣಿಯನ್ನಾಗಲೀ ಹಾಕುತ್ತಿರಲಿಲ್ಲವಾದ್ದರಿಂದ, ಜೋಂಡ್ರೆಟೆ ಮಗಳು ಇವನ ಕೋಣೆಗೆ ಸೀದಾ ಬಂದಳು. ಬರುತ್ತ ಕೋಣೆಯನ್ನೆಲ್ಲ ನೋಡಿ ಅಲ್ಲಿ ಯಾರೂ ಇಲ್ಲವೆಂದು ತಿಳಿದು, ತನ್ನೆದುರಿಗೆ ಗೋಡೆಯಲ್ಲಿ ತೂಗಾಡುತ್ತಿದ್ದ ಕನ್ನಡಿಯಲ್ಲಿ ಮುಖ ನೋಡಿಕೊಂಡು, ತಲೆಕೂದಲನ್ನು ಸವರಿ ಸರಿಪಡಿಸುತ್ತ ನಿಂತಳು. ಅವಳಿಗೆ ಕನ್ನಡಿ, ಹಣಿಗೆ ಮೊದಲಾದವು ಸಿಕ್ಕುವುದೇ ಕಷ್ಟವಾಗಿದ್ದುದರಿಂದ, ಅವು ಸಿಕ್ಕಿದ್ದ ಈ ಸಂದರ್ಭದಲ್ಲಿ ಕನ್ನಡಿಯ ಎದುರು ನಿಂತು ತನ್ನನ್ನೇ ನೋಡಿಕೊಳ್ಳತೊಡಗಿದಳು. ಅಷ್ಟರಲ್ಲೇ ತಂದೆ ದೊಡ್ಡ ಸ್ವರದಿಂದ ಅವಳು ಬೇಗನೇ ಬರಬೇಕೆಂದೂ ಮೇಜು ಮಂಚ ಬೆಂಚು ಮೊದಲಾದವುಗಳ ಅಡಿ ಸಹ ನೋಡಿಬರಬೇಕೆಂದೂ ಗದರಿಸಿದ. ಹುಡುಗಿ ಮೇಜದ ಬಳಿಗೆ ಹೋಗುವ ಮೊದಲೇ ಅದರ ಮೇಲೊಂದು ಸೊಗಸಾದ ಬಾಚಣಿಗೆ ಕಂಡಳು. ಕನ್ನಡಿ, ಬಾಚಣಿಗೆ ಒಟ್ಟಾಗಿ ಸಿಕ್ಕಿದ ಸಂತೋಷದಲ್ಲಿ ಬಾಚಣಿಗೆಯಿಂದ ತನ್ನ ತಲೆ ಬಾಚಿಕೊಳ್ಳುತ್ತ ಕನ್ನಡಿ ಎದುರು ನಿಂತಳು. ತಂದೆ ಮತ್ತೊಮ್ಮೆ ಗದರಿಸಿ ಮುಗಿಸುವ ಮೊದಲೇ ತಲೆಬಾಚಿ ಮುಗಿಸಿಕೊಂಡು ತಮ್ಮ ಕೋಣೆ ತಲಪಿದಳು, ಮತ್ತು ನೆರೆಕೋಣೆಯಲ್ಲಿ ಯಾರೂ ಇಲ್ಲವಾಗಿ ವರದಿ ಒಪ್ಪಿಸಿದಳು. ಇದೇ ಸಮಯದಲ್ಲಿ, ಕೆಲಸದ ಹೆಂಗುಸು ನಗರಕ್ಕೆ ಹೋಗಿರುವುದಾಗಿ ಎರಡನೆ ಮಗಳು ಹೇಳಿದಳು. ಅನಂತರ ಜೋಂಡ್ರೆಟೆ ತನ್ನ ಮಗಳಿಗೆ ಕೆಲವು ಸೂಚನೆಗಳನ್ನು ಗುಟ್ಟಾಗಿ ಕೊಟ್ಟು, ಅವರು ಆ

ಮನೆಯ ಎರಡು ಕೊನೆಗಳಲ್ಲೂ ಅಡಗಿ ಕಾವಲು ಇರಬೇಕೆಂದೂ ತಮ್ಮ ಕಡೆಯವರಲ್ಲದೆ ಇತರರು ಬಂದರೂ ತಿಳಿಸಬೇಕೆಂದು ಹೇಳಿ ಅವರಿಬ್ಬರನ್ನೂ ಹೊರಗೆ ಕಳಿಸಿದ.

೧೦. ಕುರ್ಚಿಗಳೆರಡು

ಮೇರಿಯಸ್ ಪುನಃ ಕಿಂಡಿಯ ಬದಿ ನಿಂತು ನೋಡತೊಡಗಿದ. ಜೋಂಡ್ರೆಟೆ ತನ್ನ ಹೆಂಡತಿಯನ್ನು ಕರೆದು ದೀಪ ತೆಗೆದುಕೊಂಡು ಹೋಗಿ ಮೇರಿಯಸನ ಕೋಣೆಯಿಂದ ಎರಡು ಕುರ್ಚಿಗಳನ್ನು ತರಲು ಹೇಳಿದ. ಮೇರಿಯಸ್ ಗಾಬರಿಗೊಂಡು ಹೇಗೆ, ಮತ್ತು ಎಲ್ಲಿ ಅಡಗಿ ಹೆಂಗುಸಿನಿಂದ ತಪ್ಪಿಸಿಕೊಳ್ಳುವುದೆಂದು ಹೆದರುತ್ತಿದ್ದ. ಹಾಗೆಯೇ, ದೀಪ ಕೈಯಲ್ಲಿ ಹಿಡಿದುಕೊಂಡು ಕುರ್ಚಿಗಳನ್ನು ತರಲು ಸಾಧ್ಯವಿಲ್ಲವೆಂದು ಗೊಣಗುಟ್ಟಿಕೊಂಡು, ಜೋಂಡ್ರೆಟೆಯ ಹೆಂಡತಿ ರಭಸದಿಂದ ಬಂದು, ಕತ್ತಲಲ್ಲೇ, ಪರಡಿ, ಎರಡು ಕುರ್ಚಿಗಳನ್ನು ಹೊತ್ತುಕೊಂಡು ಹೋದಳು.

ಅತ್ತ ಜೋಂಡ್ರೆಟೆ ಉಳಿಯನ್ನೋ ಅಥವಾ ಇನ್ನಾವುದೋ ಕಬ್ಬಿಣದ ಹತ್ಯಾರನ್ನೋ ಕಾಸಲು ಬೆಂಕಿಯನ್ನು ದೊಡ್ಡದು ಮಾಡಿದ. ಆ ಉರಿಯಲ್ಲಿ ಕೋಣೆಯಲ್ಲೆಲ್ಲ ಒಂದು ವಿಧದ ಕೆಂಪು ಬೆಳಕು ಪಸರಿಸಿತು. ತನ್ನ ಮೇಜನ್ನು ಬೆಂಕಿಯ ಸಮೀಪ ಎಳೆದಿಟ್ಟು, ಅದರ ಎರಡೂ ತುದಿಗಳಲ್ಲಿ ಒಂದೊಂದು ಕುರ್ಚಿ ಇಟ್ಟ. ಬೆಂಕಿಗೂ ಮೇಜಿಗೂ ಅಡ್ಡವಾಗಿ ಪರದೆಯನ್ನು ಹಗ್ಗದಿಂದ ತೂಗಾಡಿಸಿದ. ಮತ್ತೆ ಕುರ್ಚಿಯಲ್ಲಿ ಕುಳಿತು ಯೋಚನಾಮಗ್ನನಾದ. ಹೆಣ್ಣು ಜೋಂಡ್ರೆಟೆ ಆದಷ್ಟು ಒಳ್ಳೆಯ ಲಂಗ ಕುಪ್ಪುಸಗಳನ್ನು ಧರಿಸಿ, ಕುಲೀನ ಸ್ತ್ರೀಯರು ಹೊದೆಯುವಂತೆ ಶಾಲು ಹೊದೆದು, ಸಂಭಾವಿತ ಮಹಿಳೆಯಂತೆ ತೋರಿಸಿಕೊಂಡು ನಿಂತಳು. ಈ ಸಮಯದಲ್ಲೇ ಸೇಂಟ್ ಮೆಡಾರ್ಡ್ ಇಗರ್ಜಿಯಿಂದ ೬ ಗಂಟೆ ಬಾರಿಸಿದ ಸದ್ದೂ ಕೇಳಿಸಿತು. ಆಗಲೇ ಜೋಂಡ್ರೆಟೆಯ ಕೋಣೆಯ ಕದವನ್ನು ಹೊರಗಿನಿಂದ ಯಾರೋ ತಟ್ಟಿದರು.

ಜೋಂಡ್ರೆಟೆ ಎದ್ದುಹೋಗಿ, ಬಾಗಿಲನ್ನು ತೆರೆದುನೋಡಿ, ಹೊರಗೆ ಬಂದಿದ್ದವರ ಗೌರವಾರ್ಥವಾಗಿ ಬಗ್ಗಿಕೊಂಡು, "ಮಹಾನುಭಾವರೇ! ಒಳಗೆ ದಯಮಾಡಿಸಿ," ಎಂದನ್ನುತ್ತ, ತನ್ನ ಎರಡೂ ಕೈಗಳಿಂದ ತನ್ನ ಕೋಣೆಯನ್ನು ತೋರಿಸುತ್ತ, ಮಾನ್ಸಿರ್ ಲೆಬ್ಲೇಂಕರನ್ನು ಒಳಗೆ ಕರೆದುಕೊಂಡು ಬಂದ.

ಮಾನ್ಸಿರ್ ಲೆಬ್ಲೇಂಕರು ಯಾವ ಬದಲಾವಣೆ, ಅಥವಾ, ಭಾವನೆಯನ್ನೂ ತೋರಿಸದೆ, ಒಳಗೆ ಬಂದ ಹಾಗೆ, ನಾಲ್ಕು 'ಲೂಯಿ' ಚಿನ್ನದ ನಾಣ್ಯಗಳನ್ನು ಮೇಜಿನ ಮೇಲಿಟ್ಟು, "ಇದರಲ್ಲಿ ನಿಮ್ಮ ಮನೆಬಾಡಿಗೆಯ ಅಂಶ ಖರ್ಚಾಗಿ ಉಳಿಯುವುದನ್ನು ನಿಮ್ಮ ಇತರ ಖರ್ಚುಗಳಿಗೆ ಉಪಯೋಗಿಸಿಕೊಳ್ಳಿ," ಅಂದರು. ಜೋಂಡ್ರೆಟೆ ಇದಕ್ಕೆ ಉತ್ತರವಾಗಿ, ಪೂರ್ವದಂತೆ ಬಲುವಿನಯದಿಂದ, "ಸ್ವಾಮೀ! ತಮ್ಮ ಉಪಕಾರವನ್ನು ನಾವು ಎಂದೂ ಮರೆಯೆವು ನನ್ನ ಪತ್ನಿ ಮತ್ತು ಪುತ್ರಿಯರೆಲ್ಲರೂ ತಮಗೆ ಕೃತಜ್ಞರು," ಎಂದು ಹೇಳುತ್ತ ಹೆಂಡತಿಯ ಮುಖವನ್ನು ನೋಡಿದ. ಜೋಂಡ್ರೆಟೆ ಮಾನ್ಸಿರ್ ಲೆಬ್ಲೇಂಕರನ್ನು ಕುರ್ಚಿಯಲ್ಲಿ ಕುಳಿತುಕೊಳ್ಳುವಂತೆ ಪ್ರಾರ್ಥಿಸುತ್ತಿದ್ದಾಗಲೇ, ಗಂಡನ ದೃಷ್ಟಿಯಿಂದಲೇ ತನ್ನ ಭಾಗದ ಕಾರ್ಯವೇನೆಂದು ಅರಿತುಕೊಂಡು, ಹೆಂಡತಿ ಸದ್ದು ಮಾಡದೆ ಕೋಣೆಯಿಂದ ಹೊರಗೆ ಹೋಗಿ, ಮಾನ್ಸಿರ್ ಲೆಬ್ಲೇಂಕರು ಬಂದಿದ್ದ ಬಂಡಿಯವನಿಗೆ ಬಾಡಿಗೆ ಕೊಟ್ಟು ಕಳುಹಿಸಿಬಿಟ್ಟಳು. ರಸ್ತೆಯಲ್ಲೆಲ್ಲ ಹಿಮ ದಪ್ಪವಾಗಿ ಬಿದ್ದಿದ್ದುದರಿಂದ ಆ ಕಡೆಯಿಂದ ಯಾವ ವಾಹನಚಲಾವಣೆಯ ಸದ್ದೂ ಈ ಕೋಣೆಗೆ ಕೇಳಿಸುತ್ತಿರಲಿಲ್ಲ.

ವಿಶಾಲವಾದ ಪ್ಯಾರಿಸಿನ ಅತ್ಯಂತ ಹೊರವಲಯದ ಹಾಳುಬಿದ್ದ ಹೀನಕಾರ್ಯಗಳ ಆಶ್ರಯ ವಾಗಿ ಉಳಿದಿದ್ದ, ಜನರಿಲ್ಲದ ಈ ವಠಾರದ, ಒಂಟಿಮನೆಯಲ್ಲಿ, ಈ ರಾತ್ರಿ, ಪಾಶವೀಸ್ವಭಾವದ ಕ್ರೂರ ಜೋಂಡ್ರೆಟೆ ದಂಪತಿಗಳು, ಎಂಥೆಂಥ ಭಯಂಕರ ಕಾರ್ಯಗಳನ್ನು ಎಸಗಬಹುದೆಂದು, ದೇವತೆಗಳು ಬಂದು ನೋಡಲು ಬೆಳಕು ಬಂದಂತೆ, ಈ ಸಮಯಕ್ಕೆ ಸರಿಯಾಗಿ ಆಕಾಶ-ಕನ್ನಡಿಯಿಂದ ಚಂದ್ರಪ್ರಭೆ ಜೋಂಡ್ರೆಟೆ ಕೋಣೆಗೆ ಬರತೊಡಗಿತು.

೧೧. ಇಲಿಯು ಹುಲಿಯಾಯಿತು

ಮಾನ್ಸರ್ ಲೆಬ್ಲೇಂಕ್ ಗಂಭೀರವಾಗಿ ಕುಳಿತು ಆ ಕೋಣೆಯನ್ನೆಲ್ಲ ನೋಡಿದರು. ಜೋಂಡ್ರೆಟೆ ತನ್ನ ಸಂಸಾರದ ಕೆಲವು ಚಿಕ್ಕ ವಿಷಯಗಳನ್ನು ಬಿನ್ನೈಸಿಕೊಳ್ಳುತ್ತ, ತನ್ನ ಕಿರೀ ಮಗಳ ಕೈ ಗುಣ ವಾಗುತ್ತ ಬಂದಿರುವುದಾಗಿಯೂ ಅವಳನ್ನು ವೈದ್ಯರಲ್ಲಿಗೆ ಹಿರೀ ಮಗಳು ಕರೆದುಕೊಂಡು ಹೋಗಿರುವುದಾಗಿಯೂ ತಿಳಿಸಿದ. ಮಾನ್ಸರ್ ಲೆಬ್ಲೇಂಕ್ ಈ ವರ್ತಮಾನ ಕೇಳಿ ತಮ್ಮ ಸಂತೋಷ ಸೂಚಿಸಿದರು. ಆಗ ದುಸ್ತುಮಾಡಿಕೊಂಡು ಹಸನ್ಮುಖಿಯಾಗಲು ಪ್ರಯತ್ನಿಸುತ್ತ ತನ್ನೆದುರಿಗೆ ಕುಳಿತಿದ್ದ ಹೆಂಡತಿಯನ್ನು ನೋಡುತ್ತ, ಅವಳು ಈಗ ಸ್ವಲ್ಪ ಹುಷಾರಾಗಿರುವಳೆಂದೂ ಅವಳ ಖಾಯಿಲೆ ಒಂದು ವಿಧದ ಮನೋರೋಗವೆಂದೂ ತಿಳಿಸುತ್ತ, "ಬೆಳಗ್ಗೆ ತಾವು ನಮಗೆ ಒದಗಿಸಿದ ಅಮೋಘ ಸಹಾಯಗಳಿಂದ ಈಗ ಅವಳು ನವಚೈತನ್ಯ ಪಡೆದು, ತಮ್ಮ ಗೌರವ ಸೂಚನೆಗಾಗಿ ದುಸ್ತು ಮಾಡಿ ನಿಂತಿರುವಳು," ಎಂದ.

"ಜೋಂಡ್ರೆಟೆಯವರು ನನ್ನನ್ನು ಹೊಗಳಿಯೇ ನನ್ನ ಖಾಯಿಲೆ ಗುಣಪಡಿಸುವರು," ಎಂದು ಪತ್ನಿ ಗಂಡನನ್ನು ಪ್ರಶಂಸಿಸಿದಳು. ಹೆಂಡತಿ ತನ್ನನ್ನು 'ಜೋಂಡ್ರೆಟೆ' ಎಂದಾಗ ಗಂಡ ಚಕಿತನಾದ; ಅಷ್ಟರಲ್ಲೇ ಸ್ವಲ್ಪ ಆಶ್ಚರ್ಯದಿಂದ ಮಾನ್ಸರ್ ಲೆಬ್ಲೇಂಕ್ "ನಿಮ್ಮ ಹೆಸರು 'ಫೆಬಂಟೌ' ಎಂದಲ್ಲವೆ ?" ಎಂದು ಕೇಳಿದರು.

"ಜೋಂಡ್ರೆಟೆ, ಯಾನೆ, ಫೆಬಂಟೌ ಎಂದು ನನ್ನ ಹೆಸರು. ಕಲಾವಿದನಾಗಿ ದಸ್ಕತು ಹಾಕುವಾಗ ಮಾತ್ರ 'ಫೆಬಂಟೌ' ಎಂದು ಬರೆಯುತ್ತೇನೆ," ಎಂದು ಜೋಂಡ್ರೆಟೆ ಉತ್ತರವಿತ್ತ.

ಜೋಂಡ್ರೆಟೆ ಇಷ್ಟು ಹೇಳಿ ಬಾಗಿಲ ಕಡೆಗೆ ನೋಡಿದ. ಮಾನ್ಸರ್ ಲೆಬ್ಲೇಂಕರೂ ಸ್ವಾಭಾವಿಕ ವಾಗಿ ಆ ಕಡೆ ನೋಡಿದರು. ಆಗ ಬಾಗಿಲ ಬಳಿಯಲ್ಲೇ ಒಂದು ಬೆಂಚಿನ ಮೇಲೆ ಇಬ್ಬರು ಹೊಂತ ಕಾರಿಗಳು ಕುಳಿತಿದ್ದುದನ್ನು ಕಂಡರು. ಅವರಿಬ್ಬರ ಮುಖಗಳಿಗೂ ತುಂಬ ಮಸಿ ಬಳಿಯಲಾಗಿತ್ತು. ಇಬ್ಬರೂ ಚಡ್ಡಿ ಮಾತ್ರ ಧರಿಸಿದ್ದರು. ಕಾಲುಗಳಿಗೆ ಪಾದರಕ್ಷೆಗಳಿರಲಿಲ್ಲ. ಅವರು ತಮ್ಮ ಬೋಳು ಕೈಗಳನ್ನು ನೀಳವಾಗಿ ಬಿಟ್ಟುಕೊಂಡು, ಪ್ರತಿಮೆಗಳಂತೆ ತೋರುತ್ತಿದ್ದರು. ಅವರು ಒಳಗೆ ಬಂದದ್ದು ಯಾರಿಗೂ ಗೊತ್ತಾಗಿರಲಿಲ್ಲ. ಅವರ ಮುಖ ಮತ್ತು ದುಸ್ತು ಅಸ್ವಾಭಾವಿಕವಾಗಿದ್ದುದ ರಿಂದ, ಅವರು ಯಾರೆಂದು ಮಾನ್ಸರ್ ಲೆಬ್ಲೇಂಕರು ಜೋಂಡ್ರೆಟೆಯನ್ನು ಕೇಳಿದರು. ಇದಕ್ಕೆ, "ಇಲ್ಲೇ ಇರುವ ನಮ್ಮ ನೆರೆಯವರು, ಇದ್ದಲಿನ ಕಾರ್ಖಾನೆಯ ಕೆಲಸದವರು," ಎಂದು ಜೋಂಡ್ರೆಟೆ ಉತ್ತರಕೊಡುತ್ತ, ಆ ಕೋಣೆಯ ಗೋಡೆ ಬಳಿ, ಗೋಡೆಗೆ ಮುಖವಾಗಿಟ್ಟಿದ್ದ ಒಂದು ದೊಡ್ಡ ಹಲಗೆಯನ್ನು ಹಿಡಿದುಕೊಂಡು, ಅದರ ಕುರಿತು ಮಾತಾಡುವವನಂತೆ, ಪುನಃ ಮಾತಾಡತೊಡಗಿದ.

"ದಯಾಳುವೇ! ನಾನೊಬ್ಬ ಕಲಾವಿದನೆಂದು ಈ ಮೊದಲೇ ತಮಗೆ ತಿಳಿಸಿರುವೆನಷ್ಟೆ. ನನ್ನಲ್ಲಿ

ಒಂದು ಚಿತ್ರವಿದೆ. ನನ್ನ ಬಡತನದ ದೆಸೆಯಿಂದ ಅದನ್ನೀಗ ಮಾರಬೇಕಾದ ಕಾಲಬಂದಿದೆ. ಬಡತನದಿಂದಲೇ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪ್ರಸಂಗ ಈ ಮೊದಲು ನನಗೆ ಎರಡಾವೃತ್ತಿ ಬಂದಿತ್ತು. ಏನೋ ಕೆಲವು ಪರಿಸ್ಥಿತಿಗಳಿಂದ ಈಗ ಬದುಕಿ ಉಳಿದಿರುತ್ತೇನೆ. ಈಗ ಅಷ್ಟು ಅಮೂಲ್ಯವಾದ ಚಿತ್ರವನ್ನು ಮಾರಬೇಕೆಂದಿರುವೆನು," ಎಂದು ಹೇಳುತ್ತ, ಆ ಹಲಗೆಯ ಎದುರು ಭಾಗವನ್ನು ಮಾನ್ಸರ್ ಲೆಬ್ಲೇಂಕರಿಗೆ ತೋರಿಸಿದ. ಅವರು ಈ ಚಿತ್ರವನ್ನು ಚೆನ್ನಾಗಿ ನೋಡುವ ಮೊದಲೇ ಜೋಂಡ್ರೆಟೆ ಎದುರು ಬಂದು ನಿಂತು, ಅವರನ್ನು ತೀಕ್ಷ್ಣವಾಗಿ ನೋಡುತ್ತ, ಗದರಿಸುವ ಸ್ವರದಿಂದ, ಏಕಾಏಕಿ, "ನನ್ನ ಗುರುತು ಸಿಕ್ಕಿತೇ?" ಎಂದು ಗರ್ಜಿಸಿದ.

೧೨. ಬೋನಿನಲ್ಲಿ ಸೆರೆ

ಜೋಂಡ್ರೆಟೆ ಈ ಪ್ರಶ್ನೆ ಕೇಳುತ್ತಿದ್ದಾಗಲೇ ಇನ್ನೂ ಮೂರು ಜನ ಮೊಗವಾಡ ಧರಿಸಿಕೊಂಡು ಒಳಗೆ ಬಂದರು. ಅವರ ಪೈಕಿ ಒಬ್ಬನ ಕೈಯಲ್ಲಿ ಹೊಳೆಯುತ್ತಿದ್ದ ಕೊಡಲಿಯಿತ್ತು. ಜೋಂಡ್ರೆಟೆ ಇವರನ್ನೆಲ್ಲ ಬರಲು ಹೇಳಿದ್ದು ಇವರ ಆಗಮನವನ್ನು ನಿರೀಕ್ಷಿಸುತ್ತಿದ್ದನೆಂದು ತೋರುತ್ತದೆ. ಏಕೆಂದರೆ, ಅವನು ಹೊಸಬರನ್ನು ನೋಡಿ, "ಮೊಂಟ್‌ಪಾರ್ನಿಸ್ ಬರಲಿಲ್ಲವೇ?" ಎಂದು ಕೇಳಿದ.

"ಬರುತ್ತಿದ್ದಾನೆ. ದಾರಿಯಲ್ಲಿ ನಿನ್ನ ಹಿರೀ ಮಗಳ ಹತ್ತಿರ ಸಡಗರ ಕೊಚ್ಚುತ್ತಿದ್ದಾನೆ," ಎಂದು ಬಂದವರಲ್ಲೊಬ್ಬ ಹೇಳಿದ.

"ಬಂಡಿ ತಯಾರಿದೆಯಲ್ಲ ?" ಎಂದು ಜೋಂಡ್ರೆಟೆ ಕೇಳಿದ.

"ತಯಾರಿದೆ."

"ಸರಿ, ಹಾಗಾದರೆ, ಮುಂದಿನ ಕೆಲಸ ಮಾಡೋಣ," ಎಂದು ಸ್ವಗತವಾಗಿ ಹೇಳಿಕೊಂಡು ಜೋಂಡ್ರೆಟೆ ಮಾನ್ಸರ್ ಲೆಬ್ಲೇಂಕರ ಎದುರು ಬಂದು ನಿಂತುಕೊಂಡು, "ನನ್ನ ಗುರುತು ಈಗಲೂ ಸಿಕ್ಕಲಿಲ್ಲವೇನು? ನಾನು ತೆನಾರ್ಡಿಯರ್. ನನ್ನ ಇತರ ಹೆಸರುಗಳೆಲ್ಲ ನಿನ್ನಂಥವರನ್ನು ಸರಿದಾರಿಗೆ ತರಲೋಸ್ಕರ ಇಟ್ಟುಕೊಂಡವು. ಮೊಂಟ್‌ಫರ್ಮಿಯಲಿನಲ್ಲಿದ್ದ ನನ್ನ ಹೊಟೇಲಿಗೆ ನೀನು ರಾತ್ರಿ ಬಂದು ಹುಡುಗಿಯನ್ನು ಕದ್ದುಕೊಂಡು ಹೋದೆಯಲ್ಲ, ಜ್ಞಾಪಕವಿಲ್ಲವೇನು? ಬಡವನಂತೆ ಕಾಣಿಸಿಕೊಂಡು, ಮಕ್ಕಳಿಗೆ ಗೊಂಬೆ ತೋರಿಸಿ, ಮರುಳು ಮಾಡಿ, ನನ್ನನ್ನು ಸೋಲಿಸಿ ಓಡಿದೆಯಲ್ಲ, ಅಲ್ಲಿದ್ದ ತೆನಾರ್ಡಿಯರ್ ನಾನು," ಎಂದು ಉದ್ವೇಗದಿಂದ ಹೇಳಿದ.

ಈ ಮಾತು ಕೇಳಿ ಮೇರಿಯಸ್ ಸ್ತಂಭಿತನಾದ. ತನ್ನ ತಂದೆಯ ಜೀವರಕ್ಷಣೆ ಮಾಡಿದ್ದ, ತಂದೆ ಬರೆದಿಟ್ಟ ಉಯಿಲಿನಲ್ಲಿ ಕಾಣಿಸಲ್ಪಟ್ಟ, ತನ್ನ ಭಕ್ತಿ ಗೌರವಗಳನ್ನು ತಂದೆ ಅರ್ಪಿಸಿದ ಅನಂತರ ಎರಡನೆಯದಾಗಿ ತನ್ನ ಹೃದಯದಲ್ಲೇ ಸದಾ ಅರ್ಪಿಸಿ ಪೂಜಿಸಲ್ಪಡುತ್ತಿದ್ದ ತೆನಾರ್ಡಿಯರ್ ಇಂದು ಇಂಥ ದರೋಡೆಕಾರನಾದದ್ದನ್ನು ಕಂಡು ಗಾಬರಿಗೊಂಡ, ಮತ್ತು ದುಃಖಗೊಂಡ.

ಮಾನ್ಸರ್ ಲೆಬ್ಲೇಂಕ್ ನಿರುದ್ವಿಗ್ನರಾಗಿ ಗಂಭೀರತೆಯಿಂದ ನಿಂತಿದ್ದರು. ಅವರ ಈ ಸ್ಥಿತಿ ತೆನಾರ್ಡಿಯರನನ್ನು ಮತ್ತಷ್ಟು ರೇಗಿಸಿತು. ಅವನು ಪುನಃ ಹೇಳತೊಡಗಿದ. "ನಮ್ಮ ಜೀವನದ ಆಧಾರವಾಗಿದ್ದ ಫ್ಯಾಂಟೈನಳ ಮಗಳನ್ನು ನಿನ್ನ ಸುಲಭದ ೧೫೦೦ ಫ್ರ್ಯಾಂಕ್ ಹಣಕೊಟ್ಟು, ಸ್ವಂತ ಲಾಭಕ್ಕಾಗಿ ಅಪಹರಿಸಿದ ವಂಚಕ ನೀನಲ್ಲವೇ? ಯಾರ ಯಾರ ಮನೆಗೆ ಧರ್ಮಿಷ್ಠನೆಂದು ನಟಿಸುತ್ತ, ಲಂಗ ರವಕೆಗಳನ್ನು ಹಿಡಿದುಕೊಂಡು ನುಗ್ಗಿ, ಸಿಕ್ಕಿದವರನ್ನು ಅಪಹರಿಸುವ ಕಳ್ಳ ನೀನಲ್ಲವೇ? ಆ ದಿನ ನನ್ನ ಬಂದೂಕು ಬಿಟ್ಟುಬಂದ ಒಂದೇ ಕಾರಣದಿಂದ ನಿನ್ನ ಕೈಯ್ಯಲ್ಲಿ ನಾನು

ಸೋಲಬೇಕಾಯಿತು. ಈ ಹೊತ್ತು ಅಗತ್ಯವಿರುವ ಎಲ್ಲ ಶಕ್ತಿ ನನ್ನಲ್ಲಿದೆ. ಈ ನಿರ್ಜನ ಪ್ರದೇಶದಲ್ಲಿ, ನನ್ನವರ ಮಧ್ಯದಲ್ಲಿ ಒಡ್ಡಿರುವ ಬಲೆಯ ಬಲ ನನಗೆ ಗೊತ್ತಿದೆ," ಎಂದು ಗಟ್ಟಿ ಸ್ವರದಿಂದ, ಅತ್ತಿತ್ತ ತಿರುಗಾಡುತ್ತ ಕಿರುಚಿದ.

ಮಾನ್ಶರ್ ಲೆಬ್ಲೇಂಕರ ಮತ್ತು ತಾನು ಆರಾಧಿಸುತ್ತಿದ್ದ ತರುಣಿಯ ಜೀವನ ಚರಿತ್ರೆಯ ಕೆಲವಂಶವಾದರೂ ತೆನಾರ್ಡಿಯರನ ಮಾತಿನಲ್ಲಿರಬಹುದಲ್ಲವೇ ಎಂದು ಮೇರಿಯಸ್ ಶಂಕಿಸ ತೊಡಗಿದ.

ತೆನಾರ್ಡಿಯರನ ಈ ವಿಧದ ಆರೋಪಣೆಗಳಿಗೆ ಉತ್ತರವಾಗಿ ಮಾನ್ಶರ್ ಲೆಬ್ಲೇಂಕ್, "ಮಾನ್ಶರ್ ಜೋಂಡ್ರೆಟೆಯವರೇ! ನೀವನ್ನುವುದು ನನಗೆ ಅರ್ಥವಾಗುವುದಿಲ್ಲ. ನೀವು ಗ್ರಹಿಸಿಕೊಂಡಿರುವ ವ್ಯಕ್ತಿ ನಾನಲ್ಲ," ಅಂದರು.

"ಇಂಥ ಠಕ್ಕೆಲ್ಲ ನನ್ನಲ್ಲಿ ಸಾಗದು! ಖಂಡಿತವಾಗಿ ಹೇಳು, ನನ್ನ ಗುರುತು ಈಗಲಾದರೂ ಸಿಕ್ಕಲಿಲ್ಲವೇ?" ಎಂದು ಜೋಂಡ್ರೆಟೆ ಎದುರು ಬಂದುನಿಂತು ಕೇಳಿದ.

"ನೀವೊಬ್ಬ ದರೋಡೆಕಾರರೆಂಬ ಗುರುತು ಮಾತ್ರ ಸಿಕ್ಕಿದೆ—ಅಷ್ಟೆ." ಅಂದರು, ಮಾನ್ಶರ್ ಲೇಬ್ಲೇಂಕ್.

"'ದರೋಡೆಕಾರ'! ಹಣಸೊಕ್ಕಿದ ನಿಮ್ಮಂಥವರು ನಮ್ಮಂಥವರನ್ನು ಕರೆಯುವುದೇ ಹಾಗೆಂದು ನನಗೆ ಗೊತ್ತಿದೆ. ನಿಜ ನಾನು ದರೋಡೆಕಾರನೇ ಹೌದು. ನಿಮ್ಮ ಸೊಕ್ಕಿನ ಜೀವನ ನಮ್ಮದಲ್ಲ. ನಮ್ಮದು ದುಡಿತದ ಜೀವನ, ಕಷ್ಟದ ಜೀವನ! ಹವಾಗುಣ ತಿಳಿಯಬೇಕಾದರೆ ನಿಮಗೆಲ್ಲ ಪತ್ರಿಕೆಗಳನ್ನೋದಬೇಕಷ್ಟೆ! ದಪ್ಪದಪ್ಪದ ಕೋಟು ಧರಿಸಿ ಚಳಿ, ಹಸಿವೆ, ಕಷ್ಟ ಅರಿಯದ ಸೋಮಾರಿಗಳು ನೀವು. ನಮ್ಮರಕ್ತನಾಳ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವಾಗ ನಮಗೆ ಹವೆ ತಾನಾಗಿಯೇ ತಿಳಿಯುತ್ತದೆ. ರಸ್ತೆಯಲ್ಲಿ ನಡೆಯಲೂ ಬೂಟ್ಸಿಗೆ ಗತಿಯಿಲ್ಲದ ನಾವು ಇಗರ್ಜಿಗೆ ಹೋಗಬೇಕಾದರೆ ಬೂಟ್ಸು ಧರಿಸಿಯೇ ಒಳಗೆ ನುಗ್ಗಬೇಕೆಂದು ನಿಮ್ಮ ಕಾನೂನು. ಬರೇ ಕಾಲಿನಿಂದ ಜನಿಸಿದ ನಾವು ನಿಮ್ಮ ದೇವರನ್ನು ನೋಡಬೇಕಾದರೆ ಬೂಟ್ಸು ಇರಲೇಬೇಕು! ಆದರೆ, ಸದ್ಯ ನಿನ್ನಂಥವರು, ನೀನು ನನ್ನನ್ನು 'ದರೋಡೆಕಾರ' ಎಂದು ಕರೆಯುವುದನ್ನು ನಿಲ್ಲಿಸುವೆ. ನನಗೂ ಮರ್ಯಾದೆಯಿದೆ. ವಾಟರ್ಲೂ ಯುದ್ಧದಲ್ಲಿ ಕರ್ನಲ್ ಪೋಂಟ್‌ಮರ್ಶಿಯವರನ್ನು ಗುಂಡಿನ ಮಳೆಯಲ್ಲಿ ಹೊತ್ತುಸಾಗಿಸಿದ ದೇಶಭಕ್ತನಾದ ವೀರ ಸಾರ್ಜೆಂಟ್ ನಾನು. ನಿನಗೆ ಆಗ ತೋರಿಸಿದ ಚಿತ್ರದಲ್ಲಿ ಈ ವಿಷಯದ ಯಥಾಸ್ಥಿತಿ ಕಾಣಿಸಲಾಗಿದೆ. ಈಗ ನಾನು ಹೇಳಿದಷ್ಟು ಹಣವನ್ನು ನೀನು ಕೊಡಬೇಕು. ನಾನು ವಸೂಲ್ಮಾಡಲೂ ಶಕ್ತನಿದ್ದೇನೆ," ಅಂದ ತೆನಾರ್ಡಿಯರ್.

"ಅವನ ತಲೆ ಕಡಿದುಬಿಡಬೇಕಾದರೆ ತಿಳಿಸು, ನಾನು ತಯಾರು," ಎಂದು ಈ ಮಾತುಗಳನ್ನು ಕೇಳುತ್ತ ಕುಳಿತಿದ್ದ ಒಬ್ಬ ಕೋಣೆಯ ಮೂಲೆಯಿಂದ ಅಂದ. ತೆನಾರ್ಡಿಯರ್ ಈ ಮಾತಾಡಿದವನನ್ನು ನೋಡಿ, "ನಿನ್ನ ಮೊಗವಾಡ ಕಳಚಿ ನಿಂತದ್ದೇಕೆ, ನಿನಗೆ ಬುದ್ಧಿಯಿಲ್ಲವೇ?" ಎಂದು ಗದರಿಸಿದ.

"ನನಗೆ ಹಾಗೆ ಮಾತು ಬಂದುಹೋಯ್ತು, ಆ ದೊಡ್ಡ ಮನುಷ್ಯನ ಸ್ವರೂಪ ನೋಡಿ," ಅಂದನವನು.

ಹೀಗೆ ತೆನಾರ್ಡಿಯರ್ ಮಾನ್ಶರ್ ಲೆಬ್ಲೇಂಕರಿಗೆ ಬೆನ್ನು ಹಾಕಿ ಮಾತಾಡುತ್ತಿದ್ದಾಗಲೇ ಇವರು ಹಠಾತ್ತನೆ ಅಲ್ಲಿದ್ದ ಮೇಜುಗಳನ್ನು ಮಗುಚಿಹಾಕಿ, ತನಗೂ ಅಲ್ಲಿದ್ದವರಿಗೂ ನಡುವೆ ಒಂದು ವಿಧದ ತಡೆಗೋಡೆ ನಿರ್ಮಿಸಿಕೊಂಡು, ಓಡಿಹೋಗಿ ತೆರೆದಿದ್ದ ಕಿಟಕಿಗಾಗಿ ಹಾರುವುದರಲ್ಲಿದ್ದರು.

ಆದರೆ, ಅಷ್ಟರಲ್ಲೇ ಅಲ್ಲಿದ್ದವರೆಲ್ಲ ಒಟ್ಟಾಗಿ ಮಾನ್ಸರ್ ಲೆಬ್ಲೇಂಕರನ್ನು ಹಿಡಿದೆಳೆದು ತಂದರು. ತೆನಾರ್ಡಿಯರನ ಹೆಂಡತಿಯಂತೂ ಅವರ ತಲೆಕೂದಲನ್ನು ಹಿಡಿದಿದ್ದವಳು ಗಂಡ ಬಿಡಲು ಹೇಳುವವರೆಗೂ ಬಿಡಲಿಲ್ಲ! ಕೊನೆಗೆ ಎಲ್ಲರೂ ಸೇರಿ ಬೆಂಕಿಗೆ ಸಮೀಪವಾಗಿದ್ದ ಒಂದು ಮಂಚದ ಕಾಲಿಗೆ ಅವರನ್ನು ಹಗ್ಗಗಳಿಂದ ಬಿಗಿದರು.

ಇವನ್ನೆಲ್ಲ ಕಂಡು ಮೇರಿಯಸನಿಗೆ ಏನು ಮಾಡಲೂ ದಾರಿತೋಚಲಿಲ್ಲ. ಅಲ್ಲಿಯ ಕಾರ್ಯಗಳು ಸಾಕಷ್ಟು ಪಕ್ವವಾಗಿದ್ದಿದ್ದರೂ, ವಾಟರ್ಲೂ ಸಂಬಂಧವಾಗಿ ತೆನಾರ್ಡಿಯರ್ ಹೇಳಿದ ಮಾತುಗಳನ್ನು ಕೇಳಿ, ತೆನಾರ್ಡಿಯರ್ ತನ್ನ ತಂದೆಯ ಜೀವರಕ್ಷಕನೆಂದು ನಂಬಲೇಬೇಕಾಯಿತು. ಹಾಗಾಗಿ, ಧರ್ಮವನ್ನೂ ಕರ್ತವ್ಯವನ್ನೂ ಪಾಲಿಸುತ್ತ ತೆನಾಡಿರ್ಯರನನ್ನು ಪೊಲೀಸರ ವಶಕ್ಕೆ ಒಪ್ಪಿಸದಂತೆ ನಡೆಯುವುದು ಹೇಗೆಂದು ಮೇರಿಯಸ್ ತೀವ್ರವಾಗಿ ಯೋಚಿಸತೊಡಗಿದ. ಇದೇ ಸಮಯದಲ್ಲಿ ಮಾನ್ಸರ್ ಲೆಬ್ಲೇಂಕರನ್ನು ತಾವು ಹಿಂಸಿಸತೊಡಗುವೆವೆಂದು ಇಬ್ಬರು ಮುಂದುವರಿದಾಗ ತೆನಾರ್ಡಿಯರ್ ಅವರನ್ನು ತಡೆಹಿಡಿದು, ತನ್ನ ಪ್ರಯತ್ನ ಪೂರ್ಣಮುಗಿಯಲಿಲ್ಲವೆಂದು ಹೇಳಿದ. ಈ ಸಂದರ್ಭವನ್ನು ಕಂಡು ಮುಂದೆ ಏನೆಲ್ಲ ಆಗುವುದೆಂದು ತಾನು ನೋಡಿಕೊಂಡು, ಅಗತ್ಯಬಿದ್ದರೆ ತನ್ನ ಕಾರ್ಯವನ್ನು ಮಾಡುವುದಾಗಿ ಮೇರಿಯಸ್ ನಿಶ್ಚೈಸಿದ.

ಮಾನ್ಸರ್ ಲೆಬ್ಲೇಂಕರನ್ನು ಬಂಧಿಸಿದನಂತರ ತೆನಾರ್ಡಿಯರ್ ಬಲು ಸೌಮ್ಯಸ್ಥಿತಿಗೆ ಬಂದಿದ್ದ. ಅವನ ಮಾತು ಬಲು ನಯವಾಗಿತ್ತು. ಅವನು ತೋಳನಾಗಲು ಅರಿತಿದ್ದಂತೆಯೇ ನರಿಯಾಗಲೂ ಕಲಿತಿದ್ದ. ಅವನು ಮಾನ್ಸರ್ ಲೆಬ್ಲೇಂಕರನ್ನು ನೋಡಿ ಹೇಳಿದ, "ಅಯ್ಯಾ, ನೀನಿಲ್ಲಿಂದ ತಪ್ಪಿಸಿ ಓಡುವುದು ಅಸಾಧ್ಯ. ಇಲ್ಲಿ ನಾವು ಸಾಕಷ್ಟು ಜನರಿದ್ದೇವೆ. ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯಗಳಲ್ಲಿ ನುರಿತವರೇ. ನೀನು ಓಡಲು ಪ್ರಯತ್ನಿಸಿದುದಕ್ಕೆ ನಾನು ನಿನ್ನಲ್ಲಿ ದೋಷಾರೋಪಣೆ ಮಾಡುವುದಿಲ್ಲ. ಆ ಕಿಟಕಿಯಿಂದ ನೀನು ಹಾರಿದ್ದರೆ ಮುರಿಯುತ್ತಿದ್ದುದು ನಿನ್ನ ಕಾಲುಗಳೇ— ನೀನೂ ಅಲ್ಲೇ ಬಿದ್ದಿರುತ್ತಿದ್ದೆ, ಆದರೆ ನೋಡು, ನಿನ್ನ ಚಮತ್ಕಾರಗಳಿಂದ ನಾನು ಕೆಲವು ಸಂಗತಿಗಳನ್ನು ತಿಳಿದುಕೊಂಡಿರುವೆನು. ನೀನು ಸಹ ಜನರಿಂದ ತಲೆಮರೆಸಿ ತಿರುಗುವವನಾಗಿರುವೆ! ಇಲ್ಲದಿದ್ದರೆ ನಾವೆಲ್ಲ ನಿನ್ನನ್ನು ಹಿಡಿದು ಕಟ್ಟುವಾಗ, ಮನುಷ್ಯ ಸ್ವಭಾವಕ್ಕೆ ಒಪ್ಪುವ ಕ್ರಮದಿಂದ, ನೀನು 'ಖೂನ್, ಖೂನಿ!' ಎಂದಾದರೂ, ಅಥವಾ, ಇನ್ನು ಯಾವುದಾದರೊಂದು ಕ್ರಮದಿಂದ ಹೊರಗಿನವರ ಸಹಾಯಕ್ಕಾಗಿ ಕೂಗಬೇಕಾಗಿತ್ತು. ನಿನ್ನ ಮೌನವೇ ನಿನ್ನ ಗುಟ್ಟನ್ನು ಬಹಿರಂಗಪಡಿಸಿತು. ನೀನು ಬಹಳ ಖದೀಮನಿರಬೇಕು. ಆದರೆ ನಿನಗಿಂತಲೂ ಹುಷಾರಿನವರು ಇಲ್ಲಿ ಬೇಕಾದಷ್ಟು ಇದ್ದಾರೆ. ನಿನ್ನನ್ನು ಹಿಂಸಿಸುವ ಮನಸ್ಸು ನನಗಿಲ್ಲ. ನಿನ್ನನ್ನು ದಿವಾಳಿ ತೆಗೆಯುವುದೂ ಇಲ್ಲ. ನಿನಗೂ ಸಂಸಾರ, ಸ್ನೇಹಿತರು, ಅವರು ಇವರು ಇರಬಹುದು. ನಿನ್ನಲ್ಲಿರುವ ಲಕ್ಷಾಂತರ ಹಣದಲ್ಲಿ ಕೇವಲ ೨ ಲಕ್ಷ ಫ್ರ್ಯಾಂಕ್ ಮಾತ್ರ ನನಗೆ ಕೊಟ್ಟರೆ ನಿನ್ನನ್ನು ಮರ್ಯಾದೆಯಿಂದ ಹೋಗಲು ಬಿಡುತ್ತೇನೆ." ಹೀಗೆ ಹೇಳಿ ಅವನ ಕಡೆಯವರನ್ನು ಕರೆದು ಮಾನ್ಸರ್ ಲೆಬ್ಲೇಂಕರ ಜೇಬನ್ನೆಲ್ಲ ಶೋಧನೆಮಾಡಬೇಕೆಂದು ತೆನಾರ್ಡಿಯರ್ ಅಪ್ಪಣೆಯಿತ್ತ. ಅವರು ಶೋಧನೆಮಾಡಿ ೫ ಫ್ರ್ಯಾಂಕ್ ಹಣವನ್ನೂ ಒಂದು ಕರವಸ್ತ್ರವನ್ನೂ ತೆನಾರ್ಡಿಯರನಿಗೆ ಒಪ್ಪಿಸಿದರು. ಕರವಸ್ತ್ರದ ಒಂದು ಮೂಲೆಯಲ್ಲಿ 'ಅ. ಫಾ.' ಎಂದು ಎರಡಕ್ಷರ ಬರೆದಿತ್ತು. ತೆನಾರ್ಡಿಯರ್ ಆ ಅಕ್ಷರಗಳನ್ನು ನೋಡಿ "ಗೃಹಸ್ಥಾ! ನಿನ್ನ ಹೆಸರೇನು?" ಎಂದು ಕೇಳಿದ.

"ಅರ್ಬನ್ ಫಾಬರ್," ಅಂದರು ಮಾನ್ಸರ್ ಲೆಬ್ಲೇಂಕ್.

"ಸರಿ—ಅ. ಫಾ. ಎಂಬೆರಡು ಅಕ್ಷರಕ್ಕೆ ಹೆಸರು ಸರಿಹೋಗುತ್ತದೆ. ಅಥವಾ, ಅದು ಏನೇ

ಇರಲಿ, ಅರ್ಬನ್ ಫಾಬರರೇ! ೨ ಲಕ್ಷ ಫ್ರ್ಯಾಂಕನ್ನು ನನಗೆ ಪಾವತಿಮಾಡುವ ವಿಲೆವಾರಿಯನ್ನು ಕೂಡಲೇ ಮಾಡಬೇಕು. ಆದರೆ, ನೀವು ಅನ್ನಬಹುದು 'ಈಗ ಕೈಯಲ್ಲಿಲ್ಲದ ಹಣವನ್ನು ಕೊಡುವುದು ಹೇಗೆ ?' ಎಂದು. ಅದಕ್ಕೆ ಏರ್ಪಾಡು ಮೊದಲೇ ತಯಾರಾಗಿದೆ. ನೋಡಿ, ನಿಮ್ಮ ಮಗಳಿಗೆ ನಾನು ಹೇಳುವಂತೆ ಒಂದು ಪತ್ರ ಬರೆದುಕೊಡಿ. ಮುಂದೆ ನಾನು ಎಲ್ಲವನ್ನೂ ಮಾಡುವೆನು," ಎಂದು ಹೇಳಿ, ಮಾನ್ಸ್ಯರ್ ಲೆಬ್ಲೇಂಕರ ಬಲಗೈಯನ್ನು ಮಾತ್ರ ಬಿಚ್ಚುವಂತೆ ತನ್ನ ಜತೆಗಾರರಿಗೆ ಹೇಳಿ, ತೆನಾರ್ಡಿಯರ್ ಕಾಗದವನ್ನೂ ಪೆನ್ನನ್ನೂ ಅವರ ಎದುರಿಟ್ಟ. ಆದರೂ ಅವರು ಸುಮ್ಮನಿದ್ದರು.

ಹೀಗೆ ಸುಮ್ಮನಿದ್ದುದನ್ನು ಕಂಡು, "ನಾನಂದಂತೆ ಬರೆಯದಿದ್ದರೆ ನಮ್ಮ ಮುಂದಿನ ಕ್ರಿಯೆಗಳನ್ನು ನಾವು ಮಾಡುವವರಿದ್ದೇವೆ, ಎಚ್ಚರ! ನಮ್ಮಲ್ಲಿ 'ಪೇಟರ್ನ್ ಮಿನ್ನೆಟೆ' ತಯಾರಿದೆ, ಗೊತ್ತಿದೆಯೇ?" ಎಂದ ತೆನಾಡಿರ್ಯರ್.

ಈ ಮಾತಿನನಂತರ ಮಾನ್ಸ್ಯರ್ ಲೆಬ್ಲೇಂಕ್ ಪತ್ರ ಬರೆಯಲು ಒಪ್ಪಿದರು. ತೆನಾರ್ಡಿಯರ್ ಪತ್ರದ ಒಕ್ಕಣೆಯನ್ನು ಹೇಳತೊಡಗಿದ, "ಪ್ರಿಯ ಮಗಳೇ! ಈ ಪತ್ರ ತರುವ ಗೃಹಿಣಿಯ ಜೊತೆ ಕೂಡಲೇ ಹೊರಟು ಬಾ. ನಿನ್ನನ್ನು ಸುರಕ್ಷಿತವಾಗಿ ಕರೆದು ತರಲು ಈ ಗೃಹಿಣಿಯನ್ನೂ ಬಂಡಿಯನ್ನೂ ಕಳುಹಿಸಿರುವೆನು." ಇಷ್ಟು ಬರೆದಾದನಂತರ ಅವರು ಅರ್ಬನ್ ಫಾಬರ್ ಎಂದು ರುಜು ಮಾಡಿದರು. ಅಲ್ಲದೆ ತನ್ನ ಮನೆಯ ವಿಳಾಸವನ್ನೂ ಬರೆದುಕೊಟ್ಟರು.

ಮಾನ್ಸ್ಯರ್ ಲೆಬ್ಲೇಂಕರ ಮಗಳನ್ನು ಕರೆತರಲು ಮೊದಲೇ ತಯಾರಾಗಿದ್ದ ತೆನಾರ್ಡಿಯರಿಣಿ ಬಂಡಿ ಏರಿ ಹೋದಳು.

ಮೇರಿಯಸ್ ಈಗ, ತೆನಾರ್ಡಿಯರನ ವಾಟರ್ಲೂಯುದ್ಧದ ಸಂಬಂಧವಾದ ಚರಿತ್ರೆಯನ್ನು ತಿಳಿದ ಮೇಲಂತೂ, ಬಹು ಕಠಿಣವಾದ ಧರ್ಮಸಂಕಟದಲ್ಲಿ ಸಿಕ್ಕಿಬಿದ್ದ. ಒಂದೆಡೆ ತಂದೆ, ಮತ್ತೊಂದೆಡೆ ನಿರಪರಾಧಿ, ಮತ್ತು, ತನ್ನ ಪ್ರಿಯತಮೆಯ ತಂದೆ. ಪಿಸ್ತೂಲನ್ನು ಹಾರಿಸಿದರೆ ಪೊಲೀಸರು ಬರುವರು, ಮತ್ತೆ ತೆನಾರ್ಡಿಯರನಿಗೆ ಪಾಶಿ! ಪಿಸ್ತೂಲನ್ನು ಹಾರಿಸದಿದ್ದರೆ ಈ ಪಾಪಿಗಳ ಮಧ್ಯಕ್ಕೆ ಈ ನರಕಕ್ಕೇ ತನ್ನ ಪ್ರಿಯೆ ಸದ್ಯ ಬಂದು ಸೇರುವಳು. ಅನಂತರ? ಅನಂತರ ಅವಳಿಗೆ ಹಿಂಸೆ, ಅಪಮಾನ ಎಲ್ಲವೂ ಆಗುವುದು. ತಂದೆಗೆ ಪ್ರಾಣದಾನ ಮಾಡಿದವನ ಪ್ರಾಣವನ್ನು ಮಗನೇ ತೆಗೆಯಬಹುದೇ? ಇದರಿಂದ ಪಾರಾಗಲು ಬೇರೆ ಯೋಗ್ಯ ದಾರಿಯಿಲ್ಲವೇ? ಎಷ್ಟು ಯೋಚಿಸಿದರೂ ಅವನಿಗೆ ಬೇರೆ ದಾರಿ ಹೊಳೆಯಲಿಲ್ಲ. ಹೀಗಾಗಿ ಪಿಸ್ತೂಲನ್ನು ಹಾರಿಸಲು ಕೈ ಎತ್ತಿದ. ಆಗಲೇ ಗುಂಡಿನ ಮಳೆಯಲ್ಲಿ ರಕ್ತಸ್ರಾವವಾಗುತ್ತಿದ್ದ ತನ್ನ ತಂದೆಯನ್ನು ತೆನಾರ್ಡಿಯರ್ ಸಾಗಿಸಿದ ಚಿತ್ರ ಅವನೆದುರು ನಿಂತಿತು. ಪಿಸ್ತೂಲನ್ನು ಕೆಳಗಿಳಿಸಿದ. ಕೊನೆಗೆ ಒಂದು ನಿರ್ಧಾರಕ್ಕೆ ಬಂದ. ಆ ತರುಣಿ ಅಲ್ಲಿಗೆ ಬಂದನಂತರ ಅಗತ್ಯಬಿದ್ದಂತೆ ವರ್ತಿಸಿ, ಬೇಕಾದರೆ ತನ್ನ ಜೀವವನ್ನಾದರೂ ಬಲಿಕೊಟ್ಟು ಕರ್ತವ್ಯ ಜರಗಿಸುವುದಾಗಿ ನಿಶ್ಚೈಸಿದ. ಈ ಸಮಯದಲ್ಲಿ ಪುನಃ ತೆನಾರ್ಡಿಯರ್ ಮಾತಾಡತೊಡಗಿದ, "ಅರ್ಬನ್ ಫಾಬರ್, ನೋಡು ! ನಮ್ಮ ಏರ್ಪಾಡುಗಳೆಲ್ಲ ಹೇಗಿವೆ ಎಂದು. ನನ್ನ ಹೆಂಡತಿ ಸರಿಯಾಗಿ ದುಸ್ತುಮಾಡಿಕೊಂಡು ಹೋಗಿ ನಿನ್ನ ಪತ್ರವನ್ನು ಕೊಟ್ಟು, ನಿನ್ನ ಮಗಳನ್ನು ಹೊರಡಿಸಿಕೊಂಡು ಬರುವಳು, ಆದರೆ ಅವಳನ್ನು ಇಲ್ಲಿಗೆ ಕರೆತರುವುದಿಲ್ಲ."

ಈ ಮಾತುಗಳನ್ನು ಕೇಳುವಾಗ ಮೇರಿಯಸನೂ ಮಾನ್ಸ್ಯರ್ ಲೆಬ್ಲೇಂಕರೂ ಗಾಬರಿಗೊಂಡರು. ಇದನ್ನು ಕಂಡು ತೆನಾರ್ಡಿಯರ್ ಸಂತೋಷಪಟ್ಟು ಮತ್ತು ಮುಂದುವರಿಸಿದ. "ಅವಳನ್ನು ನಮ್ಮ ಕಡೆಯ ಒಂದು ಗುಪ್ತ ಸ್ಥಳದಲ್ಲಿ ಸುರಕ್ಷಿತವಾಗಿಡುವರು. ನೀನು ನಮ್ಮ ೨ ಲಕ್ಷ ಫ್ರ್ಯಾಂಕ್

ಹಣವನ್ನು ಕೊಟ್ಟ ಕೂಡಲೇ ಅವಳನ್ನು ಬಿಟ್ಟುಕೊಡುವೆವು. ಈ ಮಧ್ಯೆ ಅವಳು ನಮ್ಮ ಕೈಯಲ್ಲಿರುವುದರಿಂದ ನೀನು ಹಣತರಲು ನಿನ್ನ ಮನೆಗೆ ಹೋಗಿ ಬರಲು ನಿನ್ನನ್ನು ಸ್ವತಂತ್ರವಾಗಿ ಬಿಡುವೆವು. ಆದರೆ, ನೀನು ಹಣಕೊಡದೆ ಪೊಲೀಸರಿಗೆ ದೂರು ಕೊಟ್ಟರೆ, ನಾವು ಜೈಲಿಗೆ ಹೋದರೂ ನಿನ್ನ ಮಗಳು ನಮ್ಮ ಗುಪ್ತ ಸ್ಥಳದಲ್ಲೇ ನಾಶವಾಗುವಳು."

ಈ ಮಾತುಗಳನ್ನಾಡುತ್ತ ತೆನಾರ್ಡಿಯರ್ ಅತ್ತಿತ್ತ ಜರ್ಬಿನಿಂದ ತಿರುಗಿದಾಗ ಹೆಂಡದ ಅಮಲಿನಿಂದ ನೆಟ್ಟಗೆ ಕುಳಿತಿರಲು ತ್ರಾಣವಿಲ್ಲದೆ ಒಬ್ಬನು ಬಿದ್ದಿದ್ದುದನ್ನು ಕಂಡು, ಕೋಪ ಗೊಂಡು, ಬ್ಯಾಬೆಟ್ಟನನ್ನು ನೋಡಿ, "ಇಂಥವರನ್ನೆಲ್ಲ ಇಲ್ಲಿಗೆ ಏಕೆ ಕರೆದುಕೊಂಡು ಬಂದೆ, ಬ್ಯಾಬೆಟ್?" ಎಂದು ಗದರಿಸುತ್ತ ಕೇಳಿದ.

"ಈಗ ಕೆಲಸ ಕಡಿಮೆ; ಚಳಿಗಾಲ. ಆದ್ದರಿಂದ, ವರ್ತಮಾನ ಕೇಳಿಯೇ ಅವರೆಲ್ಲ ಬಂದಿರು ವರು. ಅವರನ್ನು ಬಿಡುವುದಕ್ಕೆ ಹೇಗೂ ಆಗುವುದಿಲ್ಲವಷ್ಟೆ?" ಆದರೂ, ತಮಗೆ ಬೇಕಾಗಿದ್ದ ಸ್ಥಳದ ಅನುಕೂಲಕ್ಕಾಗಿ ಅಲ್ಲಿದ್ದವರೆಲ್ಲರೂ ಸೇರಿ ಬಿದ್ದಿದ್ದವನನ್ನು ಎತ್ತಿ, ತೆರೆದಿಟ್ಟಿದ್ದ ಕಿಟಿಕಿಯ ಸಮೀಪಕ್ಕೆ ಸಾಗಿಸಿ ಮಲಗಿಸಿದರು. ಇಷ್ಟಾಗುವಾಗ ಸ್ವಲ್ಪ ವೇಳೆಯೂ ಕಳೆಯಿತು. ಅಷ್ಟರಲ್ಲೇ, ತೆನಾರ್ಡಿಯರಿಗೆ ಸಿಟ್ಟಿನಿಂದ ಬುಸುಗುಟ್ಟುತ್ತ ಆ ಕೋಣೆಗೆ ಸಾಧಾರಣ ಓಡುತ್ತಲೇ ಬಂದು ನುಗ್ಗಿದಳು.

"ಆ ರಾಕ್ಷಸ ಮೋಸಮಾಡಿದ್ದಾನೆ; ಅವನು ಕೊಟ್ಟ ಹೆಸರಿನವರು ಆ ಬೀದಿಯಲ್ಲೆಲ್ಲೂ ಇಲ್ಲ," ಎಂದು ಅವಳು ಕಿರುಚಿಕೊಂಡಳು.

ತೆನಾರ್ಡಿಯರ್ ಕೋಪಗೊಂಡ. ಅವನು ಮಾನ್ಸಿಯರ್ ಲೆಬ್ಲೇಂಕರನ್ನು ನೋಡಿ, "ವಂಚಕಾ, ಇದರಿಂದ ನಿನಗೇನು ಲಾಭ ?" ಎಂದು ಮುಖಕ್ಕೆ ಉಗಿದಂತೆ ಕೇಳಿದ.

"ನನಗೆ ಸಮಯದ ಅವಕಾಶ ಬೇಕಿತ್ತು, ಅಷ್ಟೇ, ಅದನ್ನು ದೊರಕಿಸಿಕೊಂಡಿದ್ದೇನೆ," ಎಂದು ಅವರು ಉತ್ತರ ಕೊಡುತ್ತ, ಪಕ್ಕನೆ ಎದ್ದುನಿಂತರು. ಅವರು ಸಮೀಪದಲ್ಲಿ ಕೆಂಪಗೆ ಕಾದಿದ್ದ ಉಕ್ಕಿನ ಉಳಿಯನ್ನೆತ್ತಿ ಬೀಸುತ್ತ ತನ್ನ ಒಂದು ಕಾಲಿಗೆ ಕಟ್ಟಲಾಗಿದ್ದ ಹಗ್ಗ ಇನ್ನೂ ಬಾಕಿ ಇದ್ದು ದನ್ನು ಎಳೆಯುತ್ತ, "ಪಾಪಿಗಳೇ, ನಾನು ನಿಮ್ಮ ಯಾವ ಹಿಂಸೆಗೂ ಹೆದರುವವನಲ್ಲ. ನೀವು ನನ್ನ ಜೀವಕ್ಕೆ ಕಟ್ಟಿರುವಷ್ಟು ಬೆಲೆ ನಾನದಕ್ಕೆ ಕಟ್ಟಿರುವುದಿಲ್ಲ," ಎಂದು ಹೇಳುತ್ತ ಆ ಕಾದು ಕೆಂಪಾಗಿದ್ದ ಉಳಿಯನ್ನು ತನ್ನ ತೋಳಿಗೆ ಒತ್ತುತ್ತ ಬರೆಯಿಟ್ಟುಕೊಂಡರು. ಉಳಿ ಮಾಂಸವನ್ನು ಸುಡುತ್ತ ಸ್ವಲ್ಪ ಹೊಗೆಯನ್ನು ಎಬ್ಬಿಸಿ, ಅವರ ಕೈಯಲ್ಲಿ ಬಲವಾದ ಗಾಯ ಮಾಡಿತು. ಅನಂತರ ಅವರು ಆ ಉಳಿಯನ್ನು ಕಿಟಕಿಗಾಗಿ ಹೊರಗೆ ಎಸೆದುಬಿಟ್ಟರು.

ಮೇರಿಯಸನಿಗೆ ಆಗ ಮಾನ್ಸಿಯರ್ ಲೆಬ್ಲೇಂಕರು ಮನುಷ್ಯರಂತೆ ತೋರಲಿಲ್ಲ, ಅವರೊಬ್ಬ ದಿವ್ಯ ಪುರುಷರಂತೆ ಸಾತ್ತ್ವಿಕ ತೇಜಸ್ಸಿನಿಂದ ಪ್ರಭಾನ್ವಿತರಾಗಿ ತೋರಿದರು. ಈ ಪಾಪಿಗಳೆದುರು ಹೆದರದೆ, ಗಾಬರಿಗೊಳ್ಳದೆ, ಶಾಂತರಾಗಿ, ಗಾಂಭೀರ್ಯದಿಂದ, ಇತರರಿಗೆ ಅದೇ ಆಯುಧದಿಂದ ಯಾವ ಹಿಂಸೆಯನ್ನೂ ಕೊಡಲಿಚ್ಛಿಸದೆ, ತನ್ನ ಜೀವವನ್ನೇ ತ್ಯಜಿಸಲು ತಯಾರಿದ್ದ ಒಬ್ಬ ವೀರ ವಿರಕ್ತನಾಗಿಯೂ ತೋರಿದರು.

(ಇಲ್ಲೇ ಒಂದು ಸಣ್ಣ ಸಂಗತಿ ಹೇಳಬೇಕಾಗಿದೆ : ಈ ಘಟನೆಗಳೆಲ್ಲ ನಡೆದ ಸ್ಥಳವನ್ನು ಅನಂತರ ಪೊಲೀಸರು ತನಿಖೆಶೋಧನೆ ಮಾಡಿದಾಗ ಅಲ್ಲಿ ಕರಡಿಗೆಯಂತೆ ಗೋಳೆಯಾಗಿದ್ದ ಒಂದು ಸೌ ನಾಣ್ಯವೂ ಗಡಿಯಾರದ ಸ್ಪ್ರಿಂಗಿನಿಂದ ಮಾಡಿದ್ದ ಒಂದು ಚಿಕ್ಕ ಗರಗಸವೂ ಸಿಕ್ಕಿದುವಂತೆ. ಆ ಕಾಲದಲ್ಲಿ ಜೈಲುವಾಸಿಗಳಲ್ಲಿ ಇಂಥ ಗುಪ್ತ ಆಯುಧಗಳಿರುತ್ತಿದ್ದುವು.

ಮಾನ್ಯರ್ ಲೆಬ್ಲೇಂಕ್ ತಮ್ಮನ್ನು ಕಟ್ಟಿದ್ದ ಹಗ್ಗವನ್ನು ಗರಗಸದಿಂದ ಪೂರಾ ಕತ್ತರಿಸುವ ಮೊದಲೇ ತೆನಾರ್ಡಿಯರಿಣಿಯ ಪ್ರವೇಶವಾಗಿರಬೇಕೆಂದು ತೋರುತ್ತದೆ.)

ಈ ಪರಿಸ್ಥಿತಿಯಿಂದ ತೆನಾರ್ಡಿಯರ್ ಗಾಬರಿಗೊಳ್ಳಲಿಲ್ಲ. ಅವನೊಬ್ಬ ಸ್ಥಿತಪ್ರಜ್ಞನೇ ಆಗಿ ತನ್ನ ಕಡೆಯವರಿಗೆ ಸ್ಪಷ್ಟವಾದ ಅಪ್ಪಣೆಕೊಡತೊಡಗಿದ, "ಅವನ ಒಂದು ಕಾಲಿನಲ್ಲಿ ಹಗ್ಗ ಹಾಗೆಯೇ ಇದೆ; ಅವನನ್ನು ಹಿಡಿದು ಸರಿಪಡಿಸಿ. ಮೊಂಟ್‌ಪಾರ್ನಿಸ್ ಬರಲಿ. ಇನ್ನು ಅವನ ಕಡೆಯ ಕೆಲಸವಾಗಬೇಕಷ್ಟೆ," ಎಂದು ಹೇಳಿ ತನ್ನ ಮೇಜಿನ ಒಳಗಿನಿಂದ ಉದ್ದದ, ಹರಿತವಾದ, ಒಂದು ಚೂರಿ ತೆಗೆದು ಒಬ್ಬನ ಕೈಯಲ್ಲಿ ಕೊಟ್ಟ. ಇತರರೆಲ್ಲರೂ ಮಾನ್ಯರ್ ಲೆಬ್ಲೇಂಕರನ್ನು ಹಿಡಿದು ಸರಿಪಡಿಸಲು ತೊಡಗಿದರು. ಆದರೆ, ಅವರು ಹತ್ತಿರ ಬಂದವನೊಬ್ಬನನ್ನು ಒದೆದುದರಲ್ಲಿ ಆ ಬಂದಾತ ದೂರ ಹೋಗಿ ಬೆನ್ನು ಅಪ್ಪಳಿಸಿಕೊಂಡು ಬಿದ್ದುಹೋದ. ಅವನು ಏಳಲೇ ಇಲ್ಲ. ಮತ್ತೊಬ್ಬನನ್ನು ಗುದ್ದಿ ನೂಕಿದುದರಲ್ಲಿ ಅವನು ಮುಗ್ಗರಿಸಿಕೊಂಡು ಉರುಳಿ ಬಿದ್ದು, ಬಿದ್ದಲ್ಲಿಂದ ಏಳಲಿಲ್ಲ. ಆದರೂ, ಅಲ್ಲಿ ತುಂಬ ಜನರಿದ್ದುದರಿಂದ ಒಬ್ಬೊಬ್ಬ ಒಂದೊಂದು ಕೈಯಂತೆ ಮಾನ್ಯರ್ ಲೆಬ್ಲೇಂಕರ ಕೈಹಿಡಿದು ಜಗ್ಗಿಸತೊಡಗಿದರು, ಮತ್ತಿಬ್ಬರು ಅವರ ಬೆನ್ನಿಗೆ ಬಡಿಯುತ್ತ ಬೆನ್ನನ್ನು ಬಗ್ಗಿಸತೊಡಗಿದರು. ಮತ್ತೊಬ್ಬ ಕುತ್ತಿಗೆಯಲ್ಲಿ ಕುಳಿತು, ಕುತ್ತಿಗೆಯನ್ನು ಕಡಿಯಲು ಸರಿಪಡಿಸುವ ಪ್ರಯತ್ನ ಮಾಡತೊಡಗಿದ. ಅವರೆಲ್ಲರ ಉರುಡಾಟ ಜೋರಾಗಿ ನಡೆಯುತ್ತಿದ್ದುದರಿಂದ ಆ ಸೆರೆಯಲ್ಲಿ ಮೊಂಟ್‌ಪಾರ್ನಿಸನಿಗೇ ಆದರೂ ಇತರರಿಗೆ ಅಪಾಯವಾಗದಂತೆ ಕೆಲಸ ಕೈಕೊಳ್ಳಲು ಅನುಕೂಲವಾಗಲಿಲ್ಲ.

ಪಿಸ್ತೂಲನ್ನು ಹಾರಿಸದೆ ನಿರ್ವಾಹವಿಲ್ಲವೆಂದು ಈಗ ಮೇರಿಯಸನಿಗೆ ತೋರಿತು. ಆದರೆ ತಂದೆಯ ಸ್ಮರಣೆಯಿಂದ ವಿಭ್ರಾಂತನಾಗಿ ಕೆಳಗೊಮ್ಮೆ ಮುಖಹಾಕಿ ನೋಡಿದ. ಚಂದ್ರಕಿರಣಗಳು ಕೆಳಗಿದ್ದ ಮೇಜಿನ ಮೇಲೆ ಬಿದ್ದು ಅಲ್ಲಿದ್ದ ಒಂದು ಕಾಗದದ ತುಂಡು ಹಠಾತ್ತಾಗಿ ಅವನ ದೃಷ್ಟಿಗೆ ಬಿತ್ತು. ಆ ಕಾಗದದಲ್ಲಿ ತೆನಾರ್ಡಿಯರನ ಮಗಳು, "ಸ್ಲೋಪ್ಸ್ ಬಂದರು" ಎಂದು ಬರೆದಿದ್ದುದನ್ನು ಸ್ಪಷ್ಟವಾಗಿ ಕಂಡ. ಈಗ ಮೇರಿಯಸನಿಗೆ ಒಂದು ಉಪಾಯ ಹೊಳೆಯಿತು. ಆ ಕೂಡಲೇ ಆ ಪತ್ರದಲ್ಲಿ ಒಂದು ಚಿಕ್ಕ ಕಲ್ಲನ್ನು ಕಟ್ಟಿ, ತನ್ನ ಕಿಂಡಿಯ ಮುಖಾಂತರ ನೆರೆಕೋಣೆಯ ಯುದ್ಧರಂಗಕ್ಕೆ ಎಸೆದ.

ಬಿದ್ದ ಪತ್ರವನ್ನು ತೆನಾರ್ಡಿಯರಿಣಿ ಹೆಕ್ಕಿದಳು. ಅದನ್ನು ಓದಿದಾಗ ಅದು ತನ್ನ ಮಗಳದೆಂದು ಗೊತ್ತಾಗಿ ಕೂಡಲೇ ಗಂಡನ ಕೈಗೆ ಕೊಟ್ಟಳು. "ಸ್ಲೋಪ್ಸ್ ಬಂದರು" ಎಂಬುದನ್ನು ತೆನಾರ್ಡಿಯರನೂ ಓದಿ, ಆ ಪತ್ರ ಯಾವ ಕಡೆಯಿಂದ ಕೋಣೆಯೊಳಗೆ ಬಂತೆಂದು ಅಲ್ಲಿದ್ದವರನ್ನು ಕೇಳಿದ. ಹೆಂಡದ ಅಮಲಿನಿಂದ ಹಿಂದೆ ಮಲಗಿದ್ದವ ಈಗ ಮಂಕಾಗಿಯೇ ಎದ್ದು ಕುಳಿತಿದ್ದ. ಅವನು ತೆನಾರ್ಡಿಯರನ ಪ್ರಶ್ನೆಗೆ ಉತ್ತರವಾಗಿ, ತೆರೆದಿದ್ದ ಕಿಟಕಿಯ ಕಡೆಗೆ ಕೈ ತೋರಿಸಿದ.

"ಸರಿ ಹಾಗಾದರೆ, ಮಗಳು ಆ ಕಡೆಯಿಂದ ಪತ್ರ ಬಿಸಾಕಿದ್ದಾಳೆ. ಅವಳಿರುವ ಕಡೆ ನಿರಪಾಯ. ನೂಲೇಣಿಯನ್ನು ಕೆಳಗಿಳಿಸಿ. ಹೆಂಗುಸರು ಮೊದಲಿಳಿಯಲಿ," ಅಂದ ತೆನಾರ್ಡಿಯರ್. ನೂಲೇಣಿಯನ್ನು ಕೆಳಗಿಳಿಸಿದರು. ಆದರೆ, ಹೆಂಗುಸರೇ, ಮೊದಲಿಳಿಯಬೇಕೆಂಬ ಹಕ್ಕು ಅವರಿಗೆ ಹೇಗೆ, ಬಂತು ಎಂದು ಚರ್ಚೆ ಪ್ರಾರಂಭವಾಯಿತು. "ನಿನಗಾಗಿ ನಾವು ಬಂದದ್ದು; ನಾವು ಮೊದಲು," ಎಂಬ ಗಲಭೆ ಎದ್ದಿತು. ಮುಖ್ಯವಾಗಿ, ತೆನಾರ್ಡಿಯರನ ಸಂಸಾರಕ್ಕಿಂತ ಮೊದಲು ತಾವು ಪಾರಾಗಲು ಹಕ್ಕುದಾರರೆಂಬುದೇ ಅವರ ಚರ್ಚೆಯಾಗಿತ್ತು. ಚೂರಿ ಹಿಡಿದಿದ್ದಾತ ತನ್ನ ಕೆಲಸಬಿಟ್ಟು, "ಹಾಗಾದರೆ, ಸೋಡ್ತಿ ತೆಗೆದು ಆ ಪ್ರಕಾರ ಇಳಿಯೋಣ," ಎಂದು ಹೇಳುತ್ತ ಚೂರಿಯನ್ನು

ಬಿಸಾಡಿ, ಸೋಡ್ತಿ ಕೆಲಸ ಪ್ರಾರಂಭಿಸಿದ.

ಆಗಲೇ ಬಾಗಿಲ ಬಳಿಯಿಂದ, "ಸೋಡ್ತಿ ತೆಗೆಯಲು ಹ್ಯಾಟು ತಯಾರಿದೆ," ಎಂದು ಅಲ್ಲೇ ಸ್ಥಿರವಾಗಿ, ಧೈರ್ಯವಾಗಿ, ಗಂಭೀರವಾಗಿ, ನಿಷ್ಠೆಯ ಕಾಠಿಣ್ಯ ತೋರಿಸುತ್ತ ನಿಂತಿದ್ದ ಜೇವರ್ಟ್ ಹೇಳಿ, ತನ್ನ ಹ್ಯಾಟನ್ನು ಹಿಡಿದ.

೧೩. ಜೇವರ್ಟ್ ಮತ್ತೊಮ್ಮೆ ಬೇಸ್ತುಬಿದ್ದದ್ದು

ಜೇವರ್ಟ್ ತನ್ನ ಕಡೆಯ ಸಶಸ್ತ್ರ ಪೊಲೀಸರನ್ನು ಈ ಕಟ್ಟಡದ ಹೊರವಲಯದಲ್ಲಿ ನಿಲ್ಲಿಸಿ, ಸಂಜ್ಞೆಯಾಗಿ ಹಾರಿಸಬೇಕೆಂದು ಮೇರಿಯಸನಿಗೆ ಹೇಳಿ ಗೊತ್ತುಮಾಡಿಕೊಂಡಿದ್ದ ಪಿಸ್ತೂಲಿನ ಶಬ್ದವನ್ನು ಬಹಳ ಹೊತ್ತು ನಿರೀಕ್ಷಿಸುತ್ತಿದ್ದ. ಅವನು ಹಾಗೆ ಪಹರೆ ಕಾಯುತ್ತಿದ್ದಾಗಲೇ ಒಂದು ಬಂಡಿ ಬಂದದ್ದೂ ಅದು ಹೋದದ್ದೂ ಪುನಃ ಒಂದು ಬಂದದ್ದೂ ಕಂಡ. ಅಲ್ಲದೆ ಜೇವರ್ಟನಿಗೆ ಗೊತ್ತಿದ್ದ ಕೆಲವು ದರೋಡೆಕಾರರು ಆ ಕಟ್ಟಡಕ್ಕೆ ಪ್ರವೇಶಿಸಿದುದನ್ನೂ ನೋಡಿದ. ಇಷ್ಟೆಲ್ಲ ನಡೆದರೂ ಪಿಸ್ತೂಲ್ ಶಬ್ದ ಕೇಳಿಸದಿದ್ದುದಕ್ಕಾಗಿ ಜೇವರ್ಟ್ ಆಶ್ಚರ್ಯಪಡತೊಡಗಿದ. ಕೊನೆಗೆ, ನಿರ್ವಾಹವಿಲ್ಲದೆ ಸ್ವಲ್ಪ ಮುಂದೊತ್ತಿ ಧೈರ್ಯದಿಂದ ಸಾಹಸಗೈಯುವುದರಲ್ಲೇ ಯಶಸ್ಸಿದೆ ಎಂದು ಜೇವರ್ಟ್ ಆ ರೀತಿಯಾಗಿ ಅಲ್ಲಿಗೆ ನುಗ್ಗಿದ.

ಒಳಗಿದ್ದವರೆಲ್ಲ ತಮಗೆ ಸಿಕ್ಕಿದವನ್ನೆಲ್ಲ ಆಯುಧಗಳಾಗಿ ಹಿಡಿದು ನಿಂತರು. ಕೊಡಲಿ, ಚೂರಿ, ಕಬ್ಬಿಣ ಸರಳು, ಬಲವಾದ ದೊಡ್ಡ ಬೀಗದಕೈ, ಗುಂಡುಕಲ್ಲು ಎಲ್ಲವೂ ಆಯುಧಗಳೇ ಆದುವು. ಜೇವರ್ಟ್ ಯಾವ ಆಯುಧಕ್ಕೂ, ಯಾರಿಗೂ ಹೆದರದೆ ಒಳಗೆ ಬಂದು, "ನೀವು ಏಳು ಜನರಿದ್ದರೆ ನಾವು ಹದಿನೈದು ಮಂದಿ ಇದ್ದೇವೆ. ಪೋಲಿಗಳಂತೆ ಅತ್ತಿತ್ತ ಓಡುವ ಪ್ರಯತ್ನ ಬೇಡ. ಅದು ಉಭಯರಿಗೂ ವೇದನೆಕೊಡುವಂಥಾದ್ದು. ಮುಂದುವರಿಸಿ ಹೋದ ಮೇಲೆ ಬೇರೆ ಪ್ರಯತ್ನ ಬೇಡ. ಅದರಿಂದೇನೂ ಪ್ರಯೋಜನವಾಗದು. ಈಗ ಸಭ್ಯರಾಗಿ," ಎಂದು ವ್ಯಂಗ್ಯವಾಗಿ ನುಡಿದ.

ಈ ಮಧ್ಯೆ ಇಬ್ಬರು ಗುಟ್ಟಾಗಿ, ಎಲ್ಲಿಂದಲೋ ತಂದಿದ್ದ ಪಿಸ್ತೂಲನ್ನು ಕೈದಾಟಿಸಿ, ತೆನಾರ್ಡಿಯರನಿಗೆ ಕೊಟ್ಟು, ಅವನು ಜೇವರ್ಟನಿಗೆ ಹೊಡೆಯುವಂತೆ ಪಿಸುಮಾತಿನಿಂದ ಹೇಳಿದರು. ಜೇವರ್ಟನ ಕಿವಿಗೆ ಕೇಳದ ಸದ್ದು ಕಣ್ಣಿಗೆ ಕಾಣದ ಸಂಗತಿ ಇಲ್ಲವಾಗಿದ್ದುದರಿಂದ, ತೆನಾರ್ಡಿಯರ್ ಪಿಸ್ತೂಲು ಹಾರಿಸುವ ಮೊದಲೇ ಜೇವರ್ಟನೆಂದ, "ಅದರಲ್ಲಿ ಚಿಲ್ಲಿಲ್ಲ." ತೆನಾರ್ಡಿಯರನಂತೂ ಪಿಸ್ತೂಲನ್ನು ಜೇವರ್ಟನ ಕಡೆಗೆ ಹಾರಿಸಿದ. ಅದು ಸ್ವಲ್ಪ ಬೆಂಕಿಕಾರಿತೇ ಹೊರತು ಮತ್ತೇನೂ ಮಾಡಲಿಲ್ಲ. ಇದನ್ನು ಕಂಡು ಮೂವರೂ ಶರಣಾಗತರಾದರು. ಆಗ ತೆನಾರ್ಡಿಯರ್ ಹೆಂಡತಿಯ ಶಾಲನ್ನು ತೆಗೆದುಕೊಂಡು ಅವಳ ಹಿಂಬದಿಯೇ ಅಡಗಿದ. ತೆನಾರ್ಡಿಯರಿಣಿ ಒಂದು ಗುಂಡು ಕಲ್ಲನ್ನು ಜೇವರ್ಟನಿಗೆ ಗುರಿಯಿಟ್ಟು ಎಸೆದಳು. ಅವಳನ್ನು ಮೊದಲೇ ನೋಡಿದ್ದ ಜೇವರ್ಟ್ ಕಲ್ಲಿನಿಂದ ತಪ್ಪಿಸಿಕೊಂಡು ಗಂಡ ಹೆಂಡರಿಬ್ಬರಿಗೂ ಕೋಳ ಹಾಕಿದ.

"ಅಯ್ಯೋ, ನನ್ನ ಮಕ್ಕಳ ಗತಿಯೇನಪ್ಪಾ," ಎಂದು ತೆನಾರ್ಡಿಯರಿಣಿ ಕೂಗಿಕೊಂಡಳು.

"ಹೆದರಬೇಡ. ಒಬ್ಬಳು ನನ್ನ ಸ್ವಾಧೀನದಲ್ಲಿದ್ದಾಳೆ, ಮತ್ತೊಬ್ಬಳು ಸಿಕ್ಕಲಿಲ್ಲ," ಅಂದ ಜೇವರ್ಟ್.

ಅನಂತರ ಅವನು ಮೇಜನ್ನು ಸರಿಪಡಿಸಿಕೊಂಡು ತನ್ನ ಮೇಲಧಿಕಾರಿಗೆ ಒಪ್ಪಿಸಬೇಕಾದ ವರದಿ ಬರೆಯಲು ಕುಳಿತು, ತನ್ನ ಪೇದೆಗಳನ್ನು ಉದ್ದೇಶಿಸಿ, "ಒಬ್ಬ ಆ ಗೃಹಸ್ಥನನ್ನು ಹಗ್ಗದಿಂದ ಬಿಚ್ಚಿ

ಬಿಡಿಸಲಿ; ಉಳಿದವರು ಕೈದಿಗಳನ್ನೆಲ್ಲ ಸಾಲಾಗಿ ನಿಲ್ಲಿಸಲಿ," ಎಂದು ಹೇಳಿದ.

ಅನಂತರ ಜೇವರ್ಟ್ ಬರೆಯತೊಡಗಿದ. ಕೈದಿಗಳ ಹೆಸರೆಲ್ಲ ಬರೆದಾದ ಬಳಿಕ ಹೇಳಿದ, "ಆ ಗೃಹಸ್ಥನನ್ನು ಕರೆದುಕೊಂಡು ಬನ್ನಿ."

ಆ ಕೋಣೆಯಲ್ಲಿ ಮೇಜಿನ ಮೇಲಿದ್ದ ಒಂದು ಮೇಣದಬತ್ತಿ ಬೆಳಕು ಮಾತ್ರ ಇದ್ದದ್ದರಿಂದ, ಎಲ್ಲ ಜನರೂ ವಸ್ತುಗಳೂ ಸಾಕಷ್ಟು ಕಾಣಿಸುತ್ತಿರಲಿಲ್ಲ. ಅಲ್ಲಿ ಬೆಳಕಿಗಿಂತಲೂ ನೆರಳೂ ಕತ್ತಲೆಯೂ ಹೆಚ್ಚಾಗಿದ್ದುವು. ಈ ಸಂದರ್ಭದಲ್ಲೇ ಮಾನ್ಸರ್ ಲೆಬ್ಲೇಂಕ್ ಕಿಟಿಕಿಯ ನೂಲೇಣಿಗಾಗಿ ಇಳಿದು ಹೋಗಿದ್ದರು. ಪೊಲೀಸರು ಹುಡುಕಿದಾಗ ಅವರು ಅಲ್ಲೆಲ್ಲೂ ಇರಲಿಲ್ಲ. ಕಿಟಕಿಯ ಕಡೆ ಬೆಳಕನ್ನು ಹಿಡಿದು ನೋಡಿದಾಗ ನೂಲೇಣಿ ಇನ್ನೂ ಅಲುಗಾಡುತ್ತಿತ್ತು.

"ಅಬ್ಬಾ, ಅವನೇ ಇವರೆಲ್ಲರಿಗಿಂತಲೂ ಹೆಚ್ಚಿನ ಭಯಂಕರ ವ್ಯಕ್ತಿಯಾಗಿರಬೇಕು," ಎಂದು ಜೇವರ್ಟನಂದುಕೊಂಡ.

೧೪. ಹಿರಿಯರನ್ನು ನೋಡಲು ಹೋದ ತಿರುಕುಳಿ

ಹಿಂದಿನ ಅಧ್ಯಾಯದಲ್ಲಿ ಹೇಳಿದ ಸಂಗತಿಗಳು ನಡೆದ ಮರು ರಾತ್ರಿ ಒಬ್ಬ ಬಾಲಕ ಮನಸ್ವೀಯಾಗಿ ಪದಹೇಳಿಕೊಂಡು ಗಾರ್ಬೂ ಕಟ್ಟಡಕ್ಕೆ ಬಂದ. ಅಲ್ಲಿ ಆತ ತೆನಾರ್ಡಿಯರನ ಕೋಣೆಯ ಬಾಗಿಲಿಗೆ ಒದೆಯತೊಡಗಿದ. ಎಷ್ಟು ಒದ್ದರೂ ಯಾರೂ ಬಾಗಿಲು ತೆರೆಯದಿದ್ದಾಗ ಅವನು ಕೋಪಗೊಂಡು, ಪುನಃ ಬಾಗಿಲೇ ಬೀಳುವಂತೆ ಒದೆಯಲು ಪ್ರಾರಂಭಿಸಿದ. ಆಗ ಆ ಕಟ್ಟಡದ ಪಹರೆಯ ಹೆಂಗುಸು ಓಡಿ ಬಂದು ಬಾಲಕನನ್ನು ನೋಡಿ, "ಯಾರಪ್ಪಾ ಅದು? ಕಂಡವರ ಮನೆ ಬಾಗಿಲನ್ನು ತೆರೆಯಿಸುವುದು! ನಿಮ್ಮ ಕಾಲದಲ್ಲಿ ಹೀಗೆಯೇ ಏನು?" ಎಂದು ಕೇಳಿದಳು.

ಬಾಲಕ ಒಬ್ಬ ತಿರುಕುಳಿ. ಹರಕು ಚಡ್ಡಿ, ಶರಟು ಧರಿಸಿದ್ದ; ಅವನ ಬೂಟ್ಸು ಅವನಷ್ಟೇ ಭಾರವಿತ್ತೆಂದು ಹೇಳಿದರೆ ತಪ್ಪಾಗಲಾರದು. ಅವನಿಗೆ ಪಹರೆಯ ಮುದುಕಿಯನ್ನು ಕಂಡು ನಗು ಬಂತು, "ಓಹೋ! ನೀನೋ, ಬೌಗನ್! ನಾನು ನನ್ನ ವಂಶದವರನ್ನು ನೋಡಲು ಬಂದೆ," ಎಂದು ಅವಳ ಬಗ್ಗಿದ ಬೆನ್ನನ್ನು ನೋಡುತ್ತ, ನಗೆಯಾಡುತ್ತ ಹೇಳಿದ.

"ಅವರೆಲ್ಲ ಇಲ್ಲಿಲ್ಲ." ಅಂದಳು ಮುದುಕಿ.

"ಮತ್ತೆಲ್ಲಿದ್ದಾರೆ?"

"ಅವರು ಇರಬೇಕಾದಲ್ಲೇ ಇದ್ದಾರೆ!"

"ತಂದೆ ಸಹ?"

"ಅವನು ಗಂಡುಸರ ಜೈಲಿನಲ್ಲಿದ್ದಾನೆ."

"ತಾಯಿ?"

"ಹೆಂಗುಸರ ಜೈಲಲ್ಲಿ,"

"ಅಕ್ಕಂದಿರು?"

"ವೃತ್ತಿಶಿಕ್ಷಣ ಜೈಲಿನಲ್ಲಿ," ಎಂದು ಉತ್ತರವಿತ್ತಳು ಮುದುಕಿ.

ಬಾಲಕ ಸ್ವಲ್ಪ ಬೇಸರಗೊಂಡು, ತಲೆತುರಿಸಿಕೊಂಡು, ಅಲ್ಲಿಂದ ಹೊರಟುಹೋದ. ಇಲ್ಲಿಯ ಅವನ ದುಃಖ ಏನೇ ಇದ್ದಿದ್ದರೂ, ಸ್ವಲ್ಪ ಹೊತ್ತಿನಲ್ಲೇ, ಅವನ ಎಳೆಕಂಠದ ನವಸ್ಫೂರ್ತಿಯ, ಇಂಪಾದ ಹಾಡು ರಸ್ತೆಯಿಂದ ಕೇಳುತ್ತಿತ್ತು.

ಚತುರ್ಥ ವಿಭಾಗ : ಗಾವ್ರೋಚ್

ಒಂದನೆಯ ಸಂಪುಟ

೧. ಗುಬ್ಬಿಯ ಹೊಲ

ಜೇವರ್ಟ್ ಕೈದಿಗಳನ್ನು ಬಂಡಿಯಲ್ಲಿ ಸಾಗಿಸಿದ. ಆ ದಿನ ಮೇರಿಯಸ್ ತನ್ನ ಕೋಣೆಯ ಬದಲು ಕೋರ್‌ಫರೇಕನ ಕೋಣೆಯಲ್ಲಿ ಮಲಗಿದ. ಮರುದಿನ ಬೆಳಗ್ಗೆ ತನ್ನ ಕೋಣೆ ಬಾಡಿಗೆ ಪಾವತಿಸಿ ಯಾರಿಗೂ ತಿಳಿಸದೆ ಅಲ್ಲಿಂದ ಹೊರಟುಬಂದು ಕೋರ್‌ಫರೇಕನ ಕೋಣೆ ಸೇರಿದ.

ಗಾರ್ಬೊ ಕಟ್ಟಡದಲ್ಲಿ ನಡೆದಿದ್ದ ಭಯಂಕರ ಕಾರ್ಯಗಳಲ್ಲಿ ಮೇರಿಯಸನಿಗೆ ಅಪ್ರತ್ಯಕ್ಷವಾದ ಭಾಗ ಇದ್ದಿರಲೇಬೇಕೆಂದು ಆ ಮನೆ ಕೆಲಸದವಳು ಊಹಿಸಿದಳು. ಇಂಥ ಪ್ರಸಂಗಗಳ ಅನುಭವ ಮೇರಿಯಸನಿಗೆ ಇಲ್ಲದಿದ್ದುದರಿಂದ ಅವನು ಅಲ್ಲಿಂದ ಓಡಿಹೋಗಿರಬೇಕೆಂದು ಜೇವರ್ಟ್ ತರ್ಕಿಸಿದ.

ಮೇರಿಯಸನ ಮಟ್ಟಿಗೆ ಆ ಮನೆಯನ್ನು ಬಿಡಲು ಮುಖ್ಯವಾಗಿ ಎರಡು ಕಾರಣಗಳಿದ್ದುವು. ಒಂದನೆಯದಾಗಿ ಅವನು ಅಲ್ಲೇ ಇದ್ದು, ಜೇವರ್ಟನಿಗೆ ಕಾಣಸಿಕ್ಕಿ, ತೆನಾರ್ಡಿಯರನಿಗೆ ವಿರೋಧ ವಾಗಿ ಕೋರ್ಟಿನಲ್ಲಿ ಸಾಕ್ಷಿ ಹೇಳಲು ಅವನ ಮನಸ್ಸು ಒಪ್ಪಲಿಲ್ಲ. ಎರಡನೆಯದಾಗಿ, ಅಂಥ ಭಯಂಕರ ಕೃತ್ಯಗಳು ನಡೆದ ಸ್ಥಳದಲ್ಲಿದ್ದುಕೊಂಡು ಸದಾ ಅಲ್ಲಿಯ ಪ್ರಸಂಗಗಳನ್ನೆಲ್ಲ ಸ್ಮರಣೆಗೆ ತಂದುಕೊಳ್ಳಲೂ ಅವನು ತಯಾರಿರಲಿಲ್ಲ.

ಮೇರಿಯಸನ ಹೃದಯದಲ್ಲಿ ಒಂದು ಚಿಂತೆ ಸದಾ ಬಾಧಿಸುತ್ತಿತ್ತು: ತನ್ನ ಪ್ರೇಯಸಿಯನ್ನು ಸಂಧಿಸುವ ವಿಷಯದಲ್ಲಿ ಅವನು ಸಂಪೂರ್ಣ ಹತಾಶನಾಗಿದ್ದ. ಲಕ್ಸಂಬರ್ಗಿನಲ್ಲಿ ಅದೃಶ್ಯಳಾದ ತಾರೆ ಒಮ್ಮೆ ಉದಯಿಸಿ ಪುನಃ ಅಸ್ತಂಗತಳಾಗಿದ್ದುದರಿಂದ ಅವನ ಮನಸ್ಸು ಸದಾ ಕತ್ತಲಲ್ಲೇ ಇತ್ತು. ಅವಳ ಹೆಸರೂ ಈಗ ಬದಲಾಗಿದ್ದುದನ್ನು ಕೇಳಿ ಆಶ್ಚರ್ಯಪಟ್ಟ. ಅದು 'ಅರ್ಸೆಲ್' ಎಂದು ತಿಳಿದುಕೊಂಡಿದ್ದ ಮೇರಿಯಸ್ ಇಂದು ತೆನಾರ್ಡಿಯರನ ಮುಖಾಂತರ ಅವಳ ಅಡ್ಡ ಹೆಸರು 'ಗುಬ್ಬಿ' ಎಂದು ಭಾವಿಸಬೇಕಾಯಿತು. ಇನ್ನೂ ಅನೇಕ ಆಶ್ಚರ್ಯಕರ ಸಂಗತಿಗಳನ್ನು ಅವನು ಎದುರಿಸಬೇಕಾಯಿತು. ಸದ್ಯ ನಡೆದಿದ್ದ ಪ್ರಸಂಗದಲ್ಲಿ ಕಂಡಿದ್ದ ಧನವಂತ ಧರ್ಮಿಷ್ಠ ನನ್ನೇ ಅವನು ಹಿಂದೊಮ್ಮೆ ಬಡಕಾರ್ಮಿಕನನ್ನಾಗಿಯೂ ಕಂಡಿದ್ದನಷ್ಟೆ! ತನ್ನ ತಲೆ ಕಡಿದು ಕೊಲ್ಲಲು ಬಂದವರು ತಾವಾಗಿಯೇ ಸಿಕ್ಕಿಬಿದ್ದಾಗ, ಪೊಲೀಸರಿಗೆ ದೂರುಕೊಟ್ಟು ನ್ಯಾಯಪಾಲನೆ ಯಲ್ಲಿ ಸಹಕರಿಸುವುದರ ಬದಲು, ಆ ಧರ್ಮಿಷ್ಠ ತಾನೇ ಪಾತಕಿಯಂತೆ ತಲೆ ತಪ್ಪಿಸಿಕೊಂಡನಷ್ಟೆ! ಇದೊಂದು ಬಲು ಕೌತುಕದ ವಿಷಯ. ಸದ್ಯ ನಡೆದಿದ್ದ ಭಯಂಕರ ಕಾರ್ಯಗಳ ಪರಿಣಾಮವಾಗಿ ಮುಂದೆ ಆ ತರುಣಿಯನ್ನು ತಾನೆಂದೂ ನೋಡಲಾರೆನೆಂದೇ ಮೇರಿಯಸ್ ಚಿಂತಾಕ್ರಾಂತನಾದ.

ಇಂಥ ಮಾನಸಿಕ ವಿಪ್ಲವ ಅಥವಾ ದುಃಖದಲ್ಲಿ ಒಂದು ದಿನ ಮೇರಿಯಸ್ ತಿರುಗಾಡುತ್ತ ಹೋಗಿ ಸೇಂಟ್ ಜೇಕ್ವೆಸ್ ದಾಟಿದನಂತರ ಸಿಕ್ಕುವ ಚಿಕ್ಕ ಹೊಳೆಯ ಬದಿಯ ಹಸುರು ಮೈದಾನ ದಲ್ಲಿ ತಿರುಗಾಡತೊಡಗಿದ. ಆ ಪ್ರದೇಶದ ಸೌಂದರ್ಯವನ್ನೂ ಏಕಾಂತತೆಯನ್ನೂ ಕಂಡು ಬೆರಗಾದ. ನದಿಯ ಇಬ್ಬದಿಗಳಲ್ಲೂ ಹಸುರುಹುಲ್ಲಿನ ಮೈದಾನಗಳಿದ್ದುವು. ಇವುಗಳ ಅಂಚು ಗಳಲ್ಲಿ ಪೊದರುಗಳಿರದಿದ್ದ ಸೊಗಸಾದ ದೊಡ್ಡಮರಗಳ ಕಾಡೂ ಇತ್ತು. ಮರಗಳ ಅಡಿಭಾಗ ಶೀತಳವಾಗಿದ್ದು, ಮೈದಾನದ ಹಸುರು ಕಣ್ಣಿಗೆ ತಂಪನ್ನು ಕೊಡುತ್ತ, ಆ ಪ್ರದೇಶವೇ ಬಲುರಮ್ಯ

ವಾಗಿದ್ದು ಮೇರಿಯಸನ ಮನಸ್ಸನ್ನು ಸೆಳೆಯಿತು. ಹೀಗಾಗಿ ಅದರ ಹೆಸರು ತಿಳಿಯಬೇಕೆಂಬ ಕುತೂಹಲ ತೋರಿ, ಎದುರಿಗೆ ಬರುತ್ತಿದ್ದ ಒಬ್ಬ ದಾರಿಗನನ್ನು ಆ ಸ್ಥಳದ ಹೆಸರೇನೆಂದು ವಿಚಾರಿಸಿದ. ದಾರಿಗ ಹೇಳಿದ, "ಗುಬ್ಬಿಯ ಹೊಲ."

ಕೆಲವೊಮ್ಮೆ, ಒಂದು ವಿಷಯದಲ್ಲಿ ವಿಶೇಷವಾಗಿ ಆಸಕ್ತರಾಗಿರುವವರಿಗೆ ತಮಗೆ ಪ್ರಿಯವಾದ ಒಂದು ಶಬ್ದವೇ ಮಹತ್ತಾದ ಆನಂದವನ್ನಿತ್ತು, ಮುಂದೆ ಅವರ ಸಂಶೋಧನೆಗೋ ಕಾರ್ಯಕ್ಕೋ ಬೆಳಕಾಗಿ ಮಾರ್ಗದರ್ಶನ ಕೊಡುವುದಿದೆ. ಈ "ಗುಬ್ಬಿ ಹೊಲ"ದಲ್ಲಿ ಮೇರಿಯಸನಿಗೆ ಹಾಗೆಯೇ ಆಯಿತು. "ಗುಬ್ಬಿಯ ಹೊಲ" ಅವನಲ್ಲಿ "ಆ ತರುಣಿಯ ಹೊಲ" ಎಂದು ಚಿತ್ರಿತವಾಯಿತು. ಅವನ ಭಾವನೆಗಳ ರಮಣೀಯತೆಯ ಜೊತೆಗೆ ಸ್ಥಳವೂ ರಮಣೀಯವಾಗಿದ್ದುದರಿಂದ, ಮೇರಿಯಸ್ ಅಂದಿನಿಂದ ಪ್ರತಿ ದಿನವೂ ಆ ಸ್ಥಳಕ್ಕೆ ಹೋಗಿ ಅಲ್ಲಿ ಒಂದೆರಡು ಗಂಟೆ ಕಾಲ ಕುಳಿತು ಬರುತ್ತಿದ್ದ.

೨. ಗರ್ಭಸ್ಥ ಪಾತಕ

ಜೇವರ್ಟ್ ಗಾರ್ಬ್ಯೂ ಕಟ್ಟಡದಲ್ಲಿ ಕೈಗೊಂಡಿದ್ದ ಕಾರ್ಯಗಳು ಅವನ ಮನಸ್ಸಿಗೆ ತೃಪ್ತಿಯನ್ನಿತ್ತಿರಬೇಕೆಂದು ಮೇಲಿಂದ ಮೇಲೆ ತೋರಿದರೂ ಪರಿಸ್ಥಿತಿ ಹಾಗಿರಲಿಲ್ಲ. ಆತ ತಾನಾಗಿಯೇ ಯಾವ ನಿರಪರಾಧಿಯ ಸಹಾಯಕ್ಕೆ ಹೋಗಿದ್ದನೋ ಅಂಥ ನಿರಪರಾಧಿಯೇ ತಲೆಮರೆಸಿ ಓಡಿದ ಪ್ರಸಂಗ ಆತನಿಗೆ ಒಂದು ಸಮಸ್ಯೆಯಾಗಿ ಉಳಿಯಿತು. ಕೊನೆಗೆ, ಆ ನಿರಪರಾಧಿಯೂ ಒಬ್ಬ ಮಹಾ ಅಪರಾಧಿಯಾಗಿರಬೇಕೆಂದು ಸಿದ್ಧಾಂತ ಮಾಡಿದ. ಈ ಸಿದ್ಧಾಂತ ಅವನ ದುಃಖಕ್ಕೆ ಕಾರಣವಾಗಿತ್ತು. ಮೊಂಟ್‌ಪಾರ್ನಿಸ್ ಹತ್ತಾರು ಖೂನಿಗಳನ್ನು ಈ ಮೊದಲೇ ಮಾಡಿದ್ದರೂ ಅವನನ್ನು ಸೆರೆಹಿಡಿಯಲು ಆ ದಿನ ಆಗಿರಲಿಲ್ಲ. ಕ್ಲೆಕೋಸಸನನ್ನು ಪೊಲೀಸ್ ಬಂದೋಬಸ್ತಿನಲ್ಲೇ, ಮುಚ್ಚಿದ್ದ ಬಂಡಿಯಲ್ಲಿ ಸಾಗಿಸುತ್ತಿದ್ದಾಗ, ಅಡಿಭಾಗದ ಬಿರುಕಿನಿಂದ ಅವನು ಜಾರಿ ತಪ್ಪಿಸಿಕೊಂಡಿದ್ದ. ತೆನಾರ್ಡಿಯರನ ಹೆಣ್ಣುಮಕ್ಕಳಿಬ್ಬರನ್ನು ಸಾಕಷ್ಟು ಋಜುವಾತಿಲ್ಲವೆಂದು ನ್ಯಾಯಾಧೀಶರು ಬಿಟ್ಟಿದ್ದರು. ಈ ತೆರನಾದ ಉತ್ಸಾಹಭಂಗದ ಜೊತೆಯಲ್ಲೇ ತನ್ನ ಇಲಾಖೆಯಲ್ಲಿ ಕೂಡ ದರೋಡೆಕಾರರ ಪ್ರತಿನಿಧಿಗಳೂ ಪಾಲುದಾರರೂ ಇರುವರೆಂಬುದಕ್ಕೆ ಸಾಕಷ್ಟು ಆಧಾರಗಳೂ ಸಿಕ್ಕಿದ್ದುವು. ಹೀಗಾಗಿ ಅವನು ತೇಜೋಹೀನನಾಗಿಯೇ ತನ್ನ ಆಫೀಸಿನಲ್ಲಿ ಕುಳಿತಿದ್ದ.

ಇನ್ನು ಈ ದರೋಡೆಕಾರರ ಕಾರ್ಯಭಾರಗಳೇ ಬೇರೆ ವಿಧದವಾಗಿದ್ದುವು. ಅವರು ಜೈಲಿನ ಒಳಗಿದ್ದರೂ ಹೊರಗಿದ್ದರೂ ತಮ್ಮ ಆಲೋಚನೆಗಳನ್ನು ಮಾಡುತ್ತಲೇ ಇದ್ದು, ಸಂದರ್ಭ ಸಿಕ್ಕಿದಾಗ ಕಾರ್ಯಗಳನ್ನೆಸಗುತ್ತಿದ್ದರು. ಅವರ ಕೂಟ ದೊಡ್ಡದಿದ್ದು ಅದರಲ್ಲಿ ಹೆಂಗುಸರೂ ಮಕ್ಕಳೂ ಇದ್ದರು. ಹೊಸಹೊಸ ದರೋಡೆಗಳ ಕಾರ್ಯಕ್ರಮಗಳನ್ನು ಅವರು ಜೈಲಿನಲ್ಲಿ ಇದ್ದಾಗಲೇ ಮಾಡಿ, ಅನುಕೂಲವಿದ್ದವರು ಕಾರ್ಯಗಳಲ್ಲಿ ಪ್ರವರ್ತಿಸುವಂತೆ ಪ್ರೇರೇಪಿಸುತ್ತಿದ್ದರು. ಈ ಬಂದಿಗಳು ಜೈಲಿನಿಂದ ತಪ್ಪಿಸಿಕೊಳ್ಳಲು ಸತತವೂ ಪ್ರಯತ್ನಿಸುತ್ತಿದ್ದಂತೆಯೇ, ಅವರ ಕೂಟದವರು ಜೈಲು ಹೊರಗಡೆಯಿಂದ ಒಳಗಿದ್ದವರಿಗೆ ಸಂದರ್ಭಾನುಸಾರವಾಗಿ ಸಹಾಯವೆಸಗುತ್ತಲೂ ಇದ್ದರು.

ಬ್ಯಾಬೆಟ್ ಮತ್ತು ಬ್ರೂಬೌನ್ ಎಂಬಿಬ್ಬರು ಅತಿ ದುಷ್ಟ ದರೋಡೆಕಾರರು. ಎಂದೇ ಇವರನ್ನು ಪ್ರತ್ಯಪ್ರತ್ಯೇಕವಾಗಿ ಒಂಟಿ ಕೋಣೆಗಳಲ್ಲಿ ಬೇರೆ ಬೇರೆ ಪಾಗಾರಗಳ ಒಳಗೆ ಇಟ್ಟಿದ್ದರು. ಅವರು

ಆಯಾ ಪಾಗಾರಗಳ ನಡುವಿನ ಗೋಡೆಯ ಬದಿಗಳಲ್ಲಿ ಪ್ರತಿದಿನವೂ ೪ ಗಂಟೆ ಕೆಲಸ ಮಾಡ ಬೇಕಾಗಿತ್ತು. ಒಮ್ಮೊಮ್ಮೆ ಎರಡು ಜೈಲಿನವರನ್ನೂ ಒಂದೇ ಕಡೆ ಕವಾಯತು ಮಾಡಿಸುವುದೂ ಇತ್ತು.

ಬ್ರೂಬೌನ್ ತುಂಡು ಬ್ರೆಡ್ಡನ್ನು ತನ್ನ ನೆರೆ ಪಾಗಾರಕ್ಕೆ ಎಸೆದ. ಅನಂತರ ಪುನಃ ಒಂದೆರಡು ದಿನಗಳಲ್ಲೂ ತನ್ನ ಪಾಲಿಗೆ ಸಿಕ್ಕಿದ್ದ ಬ್ರೆಡ್ಡಿನ ತುಂಡನ್ನು ತಮಾಷೆಗಾಗಿ ಎಸೆದ. ನೆರೆ ಪಾಗಾರದಲ್ಲಿ ಬಿದ್ದಿದ್ದ ಬ್ರೆಡ್‌ತುಂಡು ಇತರರೆಲ್ಲರಿಗೂ ಒಂದು ಕಸದ ತುಂಡಾಗಿದ್ದರೂ ಅಲ್ಲೇ ಕೆಲಸ ಮಾಡು ತ್ತಿದ್ದ ಅನುಭವಸ್ಥ ಬ್ಯಾಬೆಟ್ಟನಿಗೆ ಒಂದು ಪತ್ರವೇ ಆಗಿತ್ತು. ಬ್ಯಾಬೆಟ್ಟನ ಪಾಗಾರದ ಹೊರಗಡೆ ರಾಜ ರಸ್ತೆಯಿತ್ತು. ಅದರಲ್ಲಿ ಜನ ತಿರುಗಾಡುತ್ತಿದ್ದರು. ಬ್ರೂಬೌನ್ ರವಾನಿಸಿದ್ದ ಬ್ರೆಡ್ಡಿನೊಳಗೆ ಒಂದು ಚಿಕ್ಕ ಪತ್ರವಿತ್ತು. ಅದನ್ನು ಬ್ಯಾಬೆಟ್ ಓದಿದ. ಇವನೂ ಇವನ ಅಂಶದ ಬ್ರೆಡ್ಡನ್ನು ಬಿಸಾಡಬಾರದೆಂದಿಲ್ಲವಷ್ಟೆ? ಹಾಗೆ ಇವನು ತನ್ನ ಪಾಗಾರದ ಹೊರಗಡೆಯ ರಸ್ತೆಗೆ ಬ್ರೆಡ್ಡಿನ ಒಂದೆರಡು ತುಂಡುಗಳನ್ನು ಬಿಸಾಡತೊಡಗಿದ. ಇಂಥ ತುಣುಕುಗಳಿಗಾಗಿಯೇ ಹೊಂಚುತ್ತಿದ್ದ ಇವರ ಕೂಟದ ಒಬ್ಬ ಹೆಂಗುಸು, ಅವಳಿಗೆ ಸಿಕ್ಕಿದ ಬ್ರೆಡ್ಡಿನೊಳಗಿದ್ದ ಪತ್ರವನ್ನು ತೆನಾರ್ಡಿಯರನ ಹಿರೇಮಗಳು ಎಪೊನಿನ್ನಳಿಗೆ ತಲಪಿಸಿದಳು. ಆ ಕಳ್ಳರ ಕೂಟದ ಅತ್ಯಂತ ಹೊರವಲಯದಲ್ಲಿ ಕೆಲಸ ಮಾಡತಕ್ಕ ಎಪೊನಿನ್ ಕಾಗದವನ್ನೋದಿ ತನ್ನ ಕಡೆಯ ಕೆಲಸವನ್ನು ಪೂರೈಸಿದಳು.

ಆ ಪತ್ರದ ಪ್ರಕಾರ ಎಪೊನಿನ್ ರೂ'ಪ್ಲಮೆಟಿನ ಒಂದು ದೊಡ್ಡ ಮನೆಯನ್ನು ತಪಾಸಣೆ ಮಾಡಿದಳು. ಮನೆಯ ಸುತ್ತ ವಿಶಾಲವಾದ ಹೂವಿನ ತೋಟವಿತ್ತು. ಈ ತೋಟವನ್ನೂ ಮನೆ ಯನ್ನೂ—ಮುಖ್ಯವಾಗಿ ಆ ವಲಯವನ್ನೆಲ್ಲ—ಆವರಿಸಿ ಕಾಪಾಡುತ್ತಿದ್ದ ಬಲಿಷ್ಠ ಕಬ್ಬಿಣ ಸರಳು ಗಳು ಒಂದು ಪಾಗಾರಬೇಲಿಯೂ ಅಲ್ಲಿತ್ತು. ಎಪೊನಿನ್ ಇವನ್ನೆಲ್ಲ ನೋಡಿ, ತನಗೆ ಪತ್ರ ಬಂದ ಕ್ರಮದಿಂದಲೇ ಉತ್ತರವನ್ನೂ ಕಳುಹಿಸಿದಳು. ಉತ್ತರದಲ್ಲಿ 'ಬಿಸ್ಕೆಟ್' ಎಂದು ಮಾತ್ರ ಬರೆಯ ಲಾಗಿದ್ದರೂ ಜೈಲಿನ ಒಳಗಿದ್ದ ಬ್ಯಾಬೆಟ್, ಬ್ರೂಬೌನ್ ಮೊದಲಾದವರು ಆ ಶಬ್ದದಿಂದ "ಸದ್ಯ ಪ್ರಯೋಜನವಿಲ್ಲ" ಎಂದು ಅರ್ಥಮಾಡಿಕೊಂಡರು.

ಹೀಗೆ ಒಂದು ಕಡೆ ಸರಕಾರವು ನ್ಯಾಯವನ್ನು ಕಾಪಾಡುತ್ತಿದ್ದಾಗಲೇ ಇನ್ನೊಂದು ಕಡೆ ಇಂಥವ ರಿಂದ ನ್ಯಾಯವನ್ನು ಉಲ್ಲಂಘಿಸುವ ಸಾಹಸಗಳೂ ಜರಗುತ್ತಿದ್ದುವು. ರೂ'ಪ್ಲಮೆಟಿನ ಮನೆಯ ದರೋಡೆ "ಸದ್ಯ ಪ್ರಯೋಜನವಿಲ್ಲ"ದೆ ಹೋಗಿ, ಗರ್ಭಸ್ಥವಾಗಿದ್ದ ಪಾತಕ ಈ ಸರ್ತಿ ಗರ್ಭಪಾತ ದಿಂದ ಅಂತ್ಯವಾಯಿತು. ಆದರೆ, ಎಪೊನಿನ್ನಳ ತಪಾಸಣೆ ನಮ್ಮ ಮುಂದಿನ ಘಟನೆಗಳಿಗೆ ಕಾರಣೀ ಭೂತವೂ ಆಯಿತು. ಒಂದು ಹಗ್ಗವನ್ನು ಗೊತ್ತಾದ ಮತ್ತೊಂದರ ತುದಿಗೆ ಪೋಣಿಸುವ ಪ್ರಯತ್ನ ದಲ್ಲಿ ಇನ್ನಾವುದೋ ಒಂದು ಹಗ್ಗ ಪೋಣಿಸಿಹೋಗುವ ಸಂದರ್ಭದಂತೆ ನಡೆದುಹೋಯಿತು !

೩. ಫಾದರ್ ಮೇಬಫ್ ಕಂಡ ಸೂಕ್ಷ್ಮಶರೀರ

ಮೇರಿಯಸ್ ಬೇರೆ ಯಾರ ಮನೆಗೂ ಹೋಗುತ್ತಿರಲಿಲ್ಲವಾದರೂ ಫಾದರ್ ಮೇಬಫರ ಮನೆಗೆ ಆಗಿಂದಾಗ್ಗೆ ಹೋಗಿಬರುತ್ತಿದ್ದ. ಇವರಿಬ್ಬರೂ ಒಂದೊಂದು ವಿಧದಲ್ಲಿ ದುಃಖದಲ್ಲಿ ನವೆಯುತ್ತಿದ್ದರು. ನೆಲದಡಿಗೆ ಇಳಿದುಹೋಗುತ್ತಿರುವವರಿಗೆ ಮೇಲಿನ ಸದ್ದೂ ಬೆಳಕೂ ದೂರ ವಾಗುತ್ತ ಭೀತಿಯೂ ಕತ್ತಲೂ ಹೆಚ್ಚುವಂತೆ ಇವರಿಬ್ಬರಿಗೂ ದಿನಗಳು ದಾಟಿದ ಹಾಗೆ ದುಃಖವೂ ಮಾನಸಿಕ ಅಂಧಕಾರವೂ ವೃದ್ಧಿಸತೊಡಗಿದುವು.

ಮೇರಿಯಸನಿಗೆ ತನ್ನ ಪ್ರೇಯುಸಿ ವಿಷಯದಲ್ಲಿ ದುಃಖವೂ ಅಂಧಕಾರವೂ ಹೆಚ್ಚುತ್ತಿದ್ದುವು, ಇತ್ತ ಫಾದರ್ ಮೇಬಫರಿಗೆ ಊಟಕ್ಕೆ ಹಣವಿಲ್ಲದೆ, ಅವರ ಪ್ರೀತಿಯ ವನಸ್ಪತಿಗಳಿಗೆ ನೀರಿಲ್ಲದೆ ಜೀವನವೇ ದುಃಖಮಯವೂ ಅಂಧಕಾರಮಯವೂ ಆಗಿತ್ತು.

ಒಂದು ದಿನ ಫಾದರ್ ಮೇಬಫ್ ಭೂತಪ್ರೇತಗಳ ಇರೋಣದರ ಕುರಿತಾದ ಒಂದು ಪುಸ್ತಕ ಓದುತ್ತ ತಮ್ಮ ವನಸ್ಪತಿಗಳ ಮಧ್ಯೆ ಕುಳಿತಿದ್ದರು. ಓದಿ ಬೇಸತ್ತು, ತಮ್ಮ ವನಸ್ಪತಿಗಳನ್ನು ನೋಡಿ ದುಃಖದಿಂದ, "ಮಳೆ ಬರಲಿಲ್ಲವಲ್ಲ, ಬಾವಿಯಿಂದ ನೀರೆಳೆದು ಹೊಯ್ಯೋಣವೆಂದರೆ ಕೈಯಲ್ಲಿ ತ್ರಾಣವೇ ಇಲ್ಲವಲ್ಲ," ಎಂದು ಹೇಳಿಕೊಂಡರು. ಈ ಕುರಿತು ಯೋಚಿಸಿದ ಹಾಗೆ ಮನಸ್ಸು ಕರಗಿ, ಕುಳಿತಲ್ಲಿಂದ ಎದ್ದು, ಬಾವಿಗೆ ಬಿಂದಿಗೆ ಇಳಿಸಲು ಪ್ರಯತ್ನಿಸಿದರು. ಆದರೆ ಆ ಪ್ರಯತ್ನವೂ ತನ್ನ ಶಕ್ತಿಗೆ ಮೀರಿದುದೆಂದು ಗೊತ್ತಾಗಿ, ಹತಾಶರಾಗಿ ನಿಟ್ಟುಸಿರುಬಿಡುತ್ತ ಬಾವಿಯ ಬಳಿಯಲ್ಲೇ ಕುಳಿತುಬಿಟ್ಟರು. ಮತ್ತೆ, ಅಲ್ಲಿಂದೊಮ್ಮೆ ಆಕಾಶ ನೋಡಿ, "ಆಕಾಶದಲ್ಲೆಲ್ಲೂ ಒಂದು ತುಣುಕು ಮೋಡ ಸಹ ಕಾಣುವುದಿಲ್ಲವಲ್ಲ!" ಎಂದಂದುಕೊಂಡರು.

ಆ ಮಾತು ಮುಗಿಯುವಷ್ಟರಲ್ಲೇ ಅವರೆದುರು ಒಂದು ಸ್ತ್ರೀವ್ಯಕ್ತಿ ಬಂದು ನಿಂತಿತು. ಅದು ಬಲುವಿನಯದಿಂದ, "ಫಾದರ್ ಮೇಬಫರೇ, ನಾನು ಗಿಡಗಳಿಗೆ ನೀರೆರೆಯುತ್ತೇನೆ," ಎಂದು ಹೇಳಿ ಬಿಂದಿಗೆಯನ್ನು ಬಾವಿಗೆ ಇಳಿಸಿತು. ಈ ವ್ಯಕ್ತಿ ಸ್ತ್ರೀಯೇ, ಸೂಕ್ಷ್ಮಶರೀರಿಯಾದ ಒಬ್ಬ ದೇವತೆಯೇ, ಅಥವಾ, ಇನ್ನು ಯಾರಿರಬಹುದೆಂದು ವೃದ್ಧ ಮೇಬಫ್ ಆಲೋಚಿಸಿ ನಿಶ್ಚೈಸಿಕೊಳ್ಳುತ್ತಿದ್ದ ಹಾಗೆಯೇ ಆ ಸ್ತ್ರೀ ಬಾವಿಯಿಂದ ನೀರೆತ್ತಿ ಗಿಡಗಳಿಗೆ ಹೊಯ್ಯಲಾರಂಭಿಸಿದಳು. ತನ್ನ ಗಿಡಗಳು ತಂಪಾಗುತ್ತಿದ್ದುದನ್ನು ನೋಡುತ್ತಿದ್ದ ಹಾಗೆ ಫಾದರ್ ಮೇಬಫರ ಕಣ್ಣುಗಳಲ್ಲಿ ನೀರು ತುಂಬಿತು. ಆ ಸ್ತ್ರೀ ಅವರ ಗಿಡಗಳಿಗೆ ಬೇಕಾದಷ್ಟು ನೀರೆರೆದು ಬಂದು ಅವರ ಸಮೀಪ ನಿಂತಾಗ ಅವರಿಗೆ ಅವಳು ದೇವಲೋಕದ ಒಬ್ಬ ಧರ್ಮದೇವತೆಯೆಂದೇ ತೋರಿದಳು. ಹೀಗಾಗಿ ಫಾದರ್ ಮೇಬಫ್ ತಮ್ಮ ಆಲೋಚನೆಯನ್ನು ಮುಂದುವರಿಸಿಕೊಂಡು, "ಅಮ್ಮಾ, ನೀನು ಯಾರೇ ಇರಬಹುದಾದರೂ ಮೃದುಹೃದಯದ ದೇವತೆಯಾಗಿರಬೇಕೆಂಬುದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ, ನೀನು ಈ ಹೂಗಿಡಗಳ ಕುರಿತು ಇಷ್ಟೊಂದು ಪರಿಶ್ರಮ ತೆಗೆದುಕೊಳ್ಳುತ್ತಿರಲಿಲ್ಲ. ನಿನ್ನ ಉಪಕಾರಕ್ಕೆ ಪ್ರತಿಯಾಗಿ ಉಪಕಾರಮಾಡಲು ನನ್ನಲ್ಲಿ ಏನೂ ಇಲ್ಲವಲ್ಲ. ನಾನು ಎಲ್ಲ ವಿಧದಲ್ಲೂ ಅಶಕ್ತನಾಗಿದ್ದೇನೆ," ಎಂದು ಹೇಳಿ ತಲೆಗೆ ಕೈಯಿಟ್ಟುಕೊಂಡು ದುಃಖಿಸಿದರು.

"ಚಿಂತೆಯಿಲ್ಲ. ನಿಮಗೆ ಸಾಧ್ಯವಿರುವ ಒಂದು ಉಪಕಾರ ಮಾಡುವಿರಾ?" ಎಂದು ಕೇಳಿದಳು.

"ಏನದು ಹೇಳಮ್ಮಾ."

"ಬ್ಯಾರನ್ ಮೇರಿಯಸ್ ಪೋಂಟ್‌ಮರ್ಸಿಯವರು ಎಲ್ಲಿದ್ದಾರೆಂದು ತಿಳಿಸಬಲ್ಲಿರಾ?"

ಫಾದರ್ ಮೇಬಫ್ ಸ್ವಲ್ಪ ಆಲೋಚಿಸಿದರು. ಪ್ರಾಯದ ಕಾರಣವಾಗಿಯೂ, ದೈಹಿಕ ಅಶಕ್ತತೆಯಿಂದಲೂ ಅವರ ಜ್ಞಾಪಕಶಕ್ತಿ ಕುಂದಿತ್ತು. ಕೊನೆಗೆ ಆಲೋಚಿಸಿ ಅವರು ಅಂದರು, "ಗುಬ್ಬಿಯ ಹೊಲವಿದೆಯಲ್ಲ ಆ ಕಡೆಗೆ ಮೇರಿಯಸ್ ನಮ್ಮ ಮನೆ ಮಾರ್ಗವಾಗಿ ಹೋಗುವುದನ್ನು ಅನೇಕ ವೇಳೆ ಕಂಡಿದ್ದೇನೆ."

ಈ ಮಾತನ್ನು ಕೇಳಿ ಸ್ತ್ರೀ ಅದೃಶ್ಯಳಾದಳು. ಫಾದರ್ ಮೇಬಫ್ ತಾವು ಆ ಮೊದಲು ಓದುತ್ತಿದ್ದ ಅಶರೀರ ವ್ಯಕ್ತಿಗಳ ಕುರಿತಾದ ಪುಸ್ತಕದ ತರ್ಕಕ್ಕೆ ಇದೊಂದು ಆಧಾರವಾಗಬಹುದೇ ಎಂದು ಭ್ರಮೆಗೊಂಡು ಕುಳಿತರು.

೪. ಮೇರಿಯಸ್ ಕಂಡ ಸೂಕ್ಷ್ಮಶರೀರ

ತೆನಾರ್ಡಿಯರ್ ಜೈಲಿಗೆ ಹೋದ ಮೇಲೆ ಮೇರಿಯಸ್ ಅವನಿಗೆ ವಾರಂಪ್ರತಿ ೫ ಫ್ರ್ಯಾಂಕ್ ಹಣವನ್ನು ಅಡಗಿ ಕೊಡುತ್ತಿದ್ದ. ಒಂದು ದಿನ ಮೇರಿಯಸ್ ಈ ಹಣವನ್ನು ಜೇಬಿನಲ್ಲಿ ಇಟ್ಟುಕೊಂಡು ಗುಬ್ಬಿಯ ಹೊಲಕ್ಕಾಗಿ ಜೈಲುಕಡೆಗೆ ಹೋಗೋಣವೆಂದು ಹೊರಟ. ಅವನು ಅಲ್ಲಿಗೆ ತಲಪಿದ ಮೇಲೆ, ಎಂದಿನಂತೆ ಮರದಡಿಯಲ್ಲಿ ಕುಳಿತೇ ಹೋಗಬೇಕೆಂದು ತೋರಿ, ಅಲ್ಲೇ ಯಾವತ್ತೂ ಕುಳಿತಿರುವ ಸ್ಥಳದಲ್ಲೇ ವಿಶ್ರಮಿಸಿದ.

ಅವನ ಸಮೀಪವೇ ನದಿ, ಸ್ವಲ್ಪ ಕೆಳಮಟ್ಟದಲ್ಲಿ, ಪಳಪಳ ಸದ್ದುಮಾಡುತ್ತ ಶಾಂತವಾಗಿ ಹರಿದುಹೋಗುತ್ತಿತ್ತು. ಹೆಂಗುಸರು ನದಿಯ ಅಂಚಿನಲ್ಲಿ ಸಾಲಾಗಿ ನಿಂತು ತಮ್ಮ ಬಟ್ಟೆಗಳನ್ನು ಬಡಿದು ಒಗೆಯುತ್ತಿದ್ದರು. ಅವರು ಆಡಿಕೊಳ್ಳುತ್ತಿದ್ದ ಮಾತು ಮೇರಿಯಸನಿಗೆ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲವಾದಾಗ್ಯೂ ಅವರೆಲ್ಲರೂ ಮಾತು-ಹಾಸ್ಯ-ನಗುಗಳ ಮಿಶ್ರಣದಿಂದ ತಮ್ಮ ಕೆಲಸ ವನ್ನು ಸಾಗಿಸುತ್ತಿದ್ದರೆಂದು ಗೊತ್ತಾಗುತ್ತಿತ್ತು. ಹಕ್ಕಿಗಳು ಮರದಿಂದ ಮರಕ್ಕೆ ಹಾಡುತ್ತ ಹಾರಾ ಡುತ್ತ ತಮ್ಮ ಬದುಕಿನ ಆನಂದವನ್ನು ಸವಿಯುತ್ತಿದ್ದುವು. ಮೇರಿಯಸನ ಎದುರು, ಈ ತೆರನಾಗಿ ಕೆಳಗೆ ದುಡಿಮೆಯ ಪರಿಶ್ರಮವೂ ಮೇಲೆ ವಿಹಾರದ ಆನಂದವೂ ತೋರಿದಾಗ, ಅವನ ದುಃಖವೂ ಸ್ವಲ್ಪ ಹಗುರಾಯಿತು. ಆದರೂ ತನ್ನ ಬಾಹ್ಯಪ್ರಪಂಚವನ್ನು ಬಿಟ್ಟು ಮನಸ್ಸಿನ ಒಳಗೆ ನೋಡಿ ದಾಗ, ಅವನು ಹೊರಗೆ ನೋಡುತ್ತಿದ್ದ ಎರಡು ವಿಧದ ಪರಿಸ್ಥಿತಿಗಳಿಗಿಂತಲೂ ಬೇರಾದ ಇನ್ನೊಂದು ಪರಿಸ್ಥಿತಿಗೆ ತಾನು ತಲಪುತ್ತಿರುವುದಾಗಿ ತಿಳಿದ. ಹೀಗೆ ಮೇರಿಯಸ್ ಚಿಂತಾಮಗ್ನನಾಗಿ ಕುಳಿತಿದ್ದಾಗ, ಅವನ ಹಿಂದಿನಿಂದ ಒಬ್ಬಳು, “ಓಹೋ, ಇಲ್ಲಿದ್ದಾನೆ,” ಎಂದು ಅವನಿಗೆ ಪರಿಚಿತ ವಾಗಿದ್ದ ಸ್ವರದಲ್ಲಿ ಹೇಳಿದ್ದು ಕೇಳಿತು. ಆ ಸ್ವರ ಯಾರದೆಂದು ಮೇರಿಯಸ್ ತಿರುಗಿ ನೋಡು ವಷ್ಟರಲ್ಲಿ ಅಶರೀರ ಹಠಾತ್ತಾಗಿ ಶರೀರ ಧರಿಸಿಬಂದಂತೆ, ಎಪೊನಿನ್, ತುಂಬ ಹರ್ಷಚಿತ್ತಳಾಗಿ, ತನ್ನ ಅಂತರಂಗದ ಆನಂದವನ್ನು ಮುಖದಲ್ಲಿ ಸೂಸುತ್ತ, ಮೇರಿಯಸನ ಎದುರುಬಂದು ನಿಂತಳು. ಎಪೊನಿನ್ ಈಗ ಮೊದಲಿಗಿಂತ ಹೆಚ್ಚು ಸುಂದರಿಯಾಗಿ ತೋರುತ್ತಿದ್ದಳು. ಅವಳ ಹೃದಯದಲ್ಲಿಯ ಸಂತೃಪ್ತಿ ಅವಳ ನಡೆ, ನುಡಿ, ನಿಲವುಗಳಲ್ಲಿ ಕಂಡು ಬರುತ್ತಿತ್ತು.

“ಹೋ! ನಿನ್ನನ್ನು ಎಷ್ಟೊಂದು ಹುಡುಕಿದ್ದೇನೆ, ಗೊತ್ತಿದೆಯೇ?” ಎಂದು ಕೇಳುತ್ತ ಮೇರಿ ಯಸನನ್ನು ಆನಂದಬಾಷ್ಪಯುತಳಾಗಿ ನೋಡಿದಳು. ಮೇರಿಯಸನಿಗೆ ಸ್ವಲ್ಪ ಕೋಪ ಬರತೊಡ ಗಿತು. ಅವಳನ್ನು ಹೇಗಾದರೂ ಮಾಡಿ ಅಲ್ಲಿಂದ ತೊಲಗಿಸಬೇಕೆಂದು, ಸ್ವಲ್ಪ ನಿಷ್ಠುರವಾಗಿಯೇ, “ಸರಿ, ನಾನು ಸಿಕ್ಕಿ ನಿನಗಾಗಬೇಕಾದದ್ದೇನು?” ಎಂದು ಕೇಳಿದ.

ಎಪೊನಿನ್ ಕೋಪಗೊಳ್ಳಲಿಲ್ಲ. ಅವನು ಏನೇ ಅಂದರೂ ತಾನು ಸಂತೋಷದಿಂದ ಸ್ವೀಕರಿ ಸಲು ತಯಾರಾಗಿ ಬಂದಿದ್ದವಳಂತೆ ತೋರುತ್ತ ಹೇಳಿದಳು, “ಮೇರಿಯಸ್! ನಾನು ಫಾದರ್ ಮೇಬಫರನ್ನು ವಿಚಾರಿಸಿ ನಿನ್ನ ಪತ್ತೆ ಹಚ್ಚಿರುವೆನು. ಆದರೆ, ನೀನು ನನ್ನ ಶ್ರಮಕ್ಕೆ ತಕ್ಕದಾದ ಎರಡು ಒಳ್ಳೆ ಮಾತುಗಳನ್ನಾಡಲೂ ನಿರಾಕರಿಸುತ್ತಿರುವೆ. ಅದಕ್ಕೂ ಕಾರಣ ನನಗೆ ಗೊತ್ತಿದೆ. ನೀನು ದುಃಖಾಕ್ರಾಂತನಾಗಿರುವೆ. ನಿನಗೆ ದುಃಖವಾದರೆ ನನಗೂ ದುಃಖವಾಗುತ್ತದೆ. ನಿನ್ನ ನಗುವನ್ನು ನೋಡಿ ಸಂತೋಷಿಸಬೇಕೆಂದೇ ಬಂದಿದ್ದೇನೆ.”

ಮೇರಿಯಸನಿಗೆ ಕರುಣೆ ತೋರಿತು. ಆದರೂ ಕೋಪಬಂದವನಂತೆ ನಟಿಸುತ್ತ ಮೌನವಾಗಿ ಕುಳಿತ. ಎಪೊನಿನ್ ಪುನಃ ಅಂದಳು, “ಆ ಹೊತ್ತೊಂದು ದಿನ ನೀನು ನನಗೆ ಏನು ಕೇಳಿದರೂ

ಕೊಡುವುದಾಗಿ ವಾಗ್ದಾನ ಮಾಡಿರುವೆಯಷ್ಟೆ? ಆ ವಾಗ್ದಾನಕ್ಕೆ ಸಂಬಂಧಪಟ್ಟ ವಿಷಯ ಇಂದು ನನ್ನಲ್ಲಿದೆ. ಒಮ್ಮೆ ನಿನ್ನ ನಗುಮುಖವನ್ನು ಕಂಡಮಾತ್ರಕ್ಕೆ ಅದನ್ನು ನಿನಗೆ ಅರ್ಪಿಸುವೆನು."

"ಏನದು ಹೇಳು," ಅಂದನು ಮೇರಿಯಸ್.

"ಆ ವಿಳಾಸ ನನಗೆ ಗೊತ್ತಿದೆ."

ಮೇರಿಯಸನ ಮುಖ ಬಿಳುಪಾಯಿತು. ಹೃದಯದ ಬಡಿತ ಕೇಳತೊಡಗಿತು. ಅವಳು ಹೇಳಿದ್ದ ಮಾತೆಲ್ಲ ಅರ್ಥವಾಗಿದ್ದರೂ ಅರ್ಥವಾಗದಿದ್ದವನಂತೆ ನಟಿಸುತ್ತ, "ಯಾವ ವಿಳಾಸ?" ಅಂದ.

"ಆ ತರುಣಿಯ ವಿಳಾಸ!"

ಮೇರಿಯಸ್ ಎದ್ದು ಎಪೊನಿನಳ ಎರಡೂ ಕೈಗಳನ್ನು ಹಿಡಿದುಕೊಂಡ. ಅವಳನ್ನು ಯಾಚಿಸುವವನಂತೆ ನೋಡುತ್ತ ಹೇಳಿದ, "ಒಂದು ವಿಷಯದಲ್ಲಿ ಮಾತ್ರ ನೀನು ನನಗೆ ವಚನಕೊಡಬೇಕು. ಹಾಗೆ ವಚನ ಕೊಟ್ಟನಂತರ ಮಾತ್ರ ನೀನು ನನಗೆ ಆ ವಿಳಾಸವನ್ನು ತಿಳಿಸು. ಈ ಕ್ರಮಗಳಂತೆ ನೀನು ನಡೆದೆಯಾದರೆ ನಾನೂ ನಿನಗೆ ಏನನ್ನು ಬೇಕಾದರೂ ಕೊಡುವೆನು."

"ಆ ಒಂದು ವಿಷಯ ಏನು ಹೇಳು," ಅಂದಳು ಎಪೊನಿನ್.

"ನೀನು ನನಗೆ ತಿಳಿಸುವ ವಿಳಾಸವನ್ನು ನಿನ್ನ ತಂದೆಗೂ ತಿಳಿಸುವುದಿಲ್ಲವೆಂದು ವಾಗ್ದಾನ ಮಾಡು. ಅನಂತರ ಆ ವಿಳಾಸವನ್ನು ನನಗೆ ಕೊಡು."

ಆಗ ಎಪೊನಿನ್ ಮೇರಿಯಸನ ಕೈಹಿಡಿದು, "ಇಗೋ ಆ ವಿಳಾಸವನ್ನು ನಾನು ಯಾರಿಗೂ ತಿಳಿಸುವುದಿಲ್ಲವೆಂದು ವಚನಕೊಡುವೆನು," ಎಂದು ಹೇಳಿದಳು.

ಅನಂತರ ಮೇರಿಯಸನನ್ನು ಆ ವಿಳಾಸದ ಮನೆಯ ಕಡೆಗೆ ಕರೆದುಕೊಂಡು ಹೋದಳು. ದಾರಿಯುದ್ದಕ್ಕೂ ಎಪೊನಿನ್ ಮೇರಿಯಸನನ್ನು ಆಗಿಂದಾಗ ನೋಡಿ ನೋಡಿಯೇ ಆನಂದಪಡುತ್ತಿದ್ದಳು. ಒಮ್ಮೆ ದಾರಿಯಲ್ಲಿ ಹಠಾತ್ತನೆ ಹಿಂತಿರುಗಿ ಅವನನ್ನು ನೋಡುತ್ತ, "ನನಗೆ ಕೊಡುವುದಾಗಿ ಹೇಳಿದ ಬಹುಮಾನವೆಲ್ಲಿದೆ?" ಎಂದು ಕೇಳಿದಳು.

ಮೇರಿಯಸ್ ತನ್ನ ಜೇಬಿನಲ್ಲಿದ್ದ ೫ ಫ್ರ್ಯಾಂಕನ್ನು ಕೊಡಲು ಹೋದ. ಅದನ್ನು ಅವಳು ನಿರಾಕರಿಸಿ, "ನನಗೆ ಹಣಬೇಡ," ಎಂದು ಮುಗುಳ್ನಕ್ಕಳು.

ಎರಡನೆಯ ಸಂಪುಟ

೧. ರಹಸ್ಯಗರ್ಭಿತ ಗೃಹ

ಕಳೆದ ಶತಮಾನದ ಮಧ್ಯದಲ್ಲಿ ಪ್ಯಾರಿಸ್ ಪಾರ್ಲಿಮೆಂಟಿನ ಅಧ್ಯಕ್ಷನೊಬ್ಬ ತನ್ನ ಸೂಳೆಗಾಗಿ ರೂ'ಪ್ಲಮೆಟಿನಲ್ಲಿ ವಿಶೇಷತರದ ಒಂದು ಮನೆ ಕಟ್ಟಿಸಿದ್ದ. ಆ ಕಾಲದಲ್ಲಿ ಶ್ರೀಮಂತರು ಬಹಿರಂಗವಾಗಿಯೂ ಇತರರು ಗುಟ್ಟಾಗಿಯೂ ಸೂಳೆಯರನ್ನಿಟ್ಟುಕೊಂಡಿರುತ್ತಿದ್ದರು. ಆ ಮನೆ ವಿಶಾಲವಾದ ಒಂದು ಪಾಗಾರದ ಒಳಗಿತ್ತು. ಮನೆಯ ಮುಂಭಾಗದಲ್ಲಿ ಅಂದವಾದ ಉದ್ಯಾನ. ಪಾಗಾರದ ಉದ್ದಕ್ಕೂ ಕಬ್ಬಿಣ ಸರಳಿನ ಎತ್ತರ ಬೇಲಿ. ಅದರೊಳಗೆ ಪ್ರವೇಶಿಸಲಿದ್ದ ಭವ್ಯ ದ್ವಾರ ಸದಾ ಮುಚ್ಚಿ, ಬೀಗಹಾಕಿಕೊಂಡೇ ಇರುತ್ತಿತ್ತು. ಮನೆಯೊಳಗೆ ಅನುಕೂಲವಾದ ನಾಲ್ಕೈದು ಕೋಣೆಗಳಿದ್ದುವು. ಅಲ್ಲದೆ, ಮುಖ್ಯ ಗೃಹಕ್ಕೆ ಸೇರಿದಂತೆ ಕಟ್ಟಲಾಗಿದ್ದ ಒಂದು ಉಪಗೃಹದಲ್ಲೂ ಎರಡು ಒಳ್ಳೆಯ ಕೋಣೆಗಳಿದ್ದುವು. ಈ ಎರಡು ಕೋಣೆಗಳ ಪೈಕಿ ಒಂದರಲ್ಲಿ ಗುಪ್ತವಾದ ಒಂದು ಬಾಗಿಲು ಇದ್ದು, ಇದರ ಮೂಲಕ ಹೊರಗೆಹೋಗಲು, ಎರಡು ಗೋಡೆಗಳ ನಡುವೆ,

ಸಾಧಾರಣ ಎರಡು ಫರ್ಲಾಂಗುಗಳಷ್ಟು ಉದ್ದದ, ಗುಪ್ತಮಾರ್ಗವಿತ್ತು. ನೋಡುವವರಿಗೆ ಈ ಗೋಡೆ, ಇಡೀ ಸ್ಥಳದ ಪಾಗಾರವೆಂದು ತೋರಿದರೂ, ಅದು ಗುಪ್ತಮಾರ್ಗವನ್ನೊಳಗೊಂಡು ರೂ'ಬೇಬಿಲೋನ್ ಎಂಬ ಸ್ಥಳಕ್ಕೆ ತಲಪಿಸುತ್ತಿತ್ತು. ಈ ಗೋಡೆಯನ್ನು ಕಟ್ಟಿಸಿದ ಅಧ್ಯಕ್ಷ, ಜನರಿಗೆ ಮರೆಯಾಗಿ ರೂ'ಬೇಬಿಲೋನಿನ ತನ್ನ ಮನೆಯ ಒಂದು ಕೋಣೆಯ ಗುಪ್ತದ್ವಾರದಿಂದ ಹೊರಟು, ರೂ'ಪ್ಲಮೆಟಿನ ಈ ಮನೆಗೆ ಬರುತ್ತಿದ್ದ.

೧೮೨೯ರ ಅಕ್ಟೋಬರ್ ತಿಂಗಳಲ್ಲಿ ಜೀನ್‌ವಾಲ್‌ಜೀನ್ ಬಂದು ಆ ಮನೆಯನ್ನು ಅದರಲ್ಲಿದ್ದ ಮೇಜು, ಕುರ್ಚಿ, ಕಪಾಟು, ಇನ್ನಿತರ ಸಾಮಾನುಗಳ ಸಮೇತ ಬಾಡಿಗೆಗೆ ತೆಗೆದುಕೊಂಡ. ಜೀನ್ ವಾಲ್‌ಜೀನನ ಜೊತೆಯಲ್ಲಿ ಕೋಸೆಟ್ಟೆಯೂ ಉಗ್ಗುಮಾತಿನ ಒಬ್ಬ ಕೆಲಸದ ಹೆಂಗುಸೂ ಬಂದಿದ್ದರು. ಈಕೆ ಹಳ್ಳಿಯವಳು. ಹೆಸರು ಮೇಡಮ್ ಟೌಸೆಂಟ್. ಇವಳು ಉಗ್ಗು ಮಾತಾಡುವುದರ ಜೊತೆಗೆ ಮುದುಕಿಯೂ ಆಗಿದ್ದಳು. ಈ ಎರಡು ಗುಣಗಳನ್ನು ಗ್ರಹಿಸಿಯೇ ಜೀನ್‌ವಾಲ್‌ಜೀನ್ ಇವಳನ್ನು ಕೆಲಸಕ್ಕಿಟ್ಟುಕೊಂಡಿದ್ದ. ಈತ ತನ್ನ ಪ್ರೀತಿಯ ಕೈಚೀಲವನ್ನೂ ತಂದಿದ್ದ. ಸ್ವಂತವಾದ ಇತರ ವಿಶೇಷ ವಸ್ತುವೇನೂ ಅವನಲ್ಲಿರಲಿಲ್ಲ. ಆ ಕೈಚೀಲಕ್ಕೆ ಮಾತ್ರ ಬೀಗಹಾಕಿಕೊಂಡೇ ಇರುತ್ತಿದ್ದ.

ಫಾಶೆಲೆವೆಂಟ್ ಕಾನ್ವೆಂಟಿನಲ್ಲೇ ಸತ್ತ. ಅವನ ಮರಣಾನಂತರ ಜೀನ್‌ವಾಲ್‌ಜೀನ್ ಕಾನ್ವೆಂಟನ್ನು ಬಿಟ್ಟ. ಆ ಮೊದಲೇ ಕೋಸೆಟ್ಟೆಯ ವಿದ್ಯಾಭ್ಯಾಸ ಮುಗಿದಿತ್ತು. ಜೀನ್‌ವಾಲ್‌ಜೀನ್ ಇಷ್ಟಪಟ್ಟಿದ್ದರೆ ಅವಳು ಸಂನ್ಯಾಸಿನಿ ಆಗಬಹುದಿತ್ತು. ಆದರೆ, ಏನೂ ಅರಿಯದ ಬಾಲಕಿಯನ್ನು ಸಂನ್ಯಾಸಿನಿ ಆಗಗೊಟ್ಟು, ಕಾನ್ವೆಂಟಿನ ಪಂಜರದಲ್ಲಿ ಜನ್ಮವಿಡೀ ಇಟ್ಟು, ತಾನು ಹೊರಗೆ ಒಂಟಿಯಾಗಿ ಬಾಳಬೇಕೇ, ಅಥವಾ, ವಿಶಾಲ ಪ್ರಪಂಚದಲ್ಲಿ ಅವಳನ್ನು ಬದುಕಲು ಎಡೆಗೊಟ್ಟು, ಅವಳ ಬುದ್ಧಿ ಮನಸ್ಸುಗಳ ವಿಕಾಸಕ್ಕೆ ಅವಕಾಶ ಕಲ್ಪಿಸಿ, ಅವಳಿಗೆ ಪ್ರಾಯ ತುಂಬಿದಾಗ ಅವಳಿಗೇ ಯುಕ್ತ ಕಂಡ ಮಾರ್ಗ ಅನುಸರಿಸಲು ಬಿಡಬೇಕೇ ಎಂದು ಜೀನ್‌ವಾಲ್‌ಜೀನ್ ತುಂಬ ಆಲೋಚಿಸಿದ್ದ. ಕೊನೆಗೆ, ತಾನು ಒಂಟಿಯಾಗಿ ಬದುಕಬೇಕಾಗುವ ಸಂಭವವನ್ನೂ ಗ್ರಹಿಸಿ, ಕಾನ್ವೆಂಟಿನವರ ಸಂಪೂರ್ಣ ಸಂತೋಷದ ಸಮ್ಮತಿಯಿಂದಲೇ ಅವನು ಕೋಸೆಟ್ಟೆ ಸಮೇತ ಅಲ್ಲಿಂದ ಹೊರಗೆ ಬಂದಿದ್ದ.

ಕೋಸೆಟ್ಟೆಯ ವಿದ್ಯಾಭ್ಯಾಸ ಮತ್ತು ತಮ್ಮಿಬ್ಬರ ಆರೇಳು ವರ್ಷಗಳ ರಕ್ಷಣೆ ಪೋಷಣೆಗಳನ್ನು ಗ್ರಹಿಸಿಕೊಂಡು ಜೀನ್‌ವಾಲ್‌ಜೀನ್ ಆ ಕಾನ್ವೆಂಟಿಗೆ ೫೦೦೦ ಫ್ರ್ಯಾಂಕನ್ನು ದಾನಮಾಡಿದ್ದ.

ಜೀನ್‌ವಾಲ್‌ಜೀನ್ ರೂ'ಪ್ಲಮೆಟಿನ ಈ ಮನೆಯನ್ನಲ್ಲದೆ, ಪ್ಯಾರಿಸಿನ ಇನ್ನಿತರ ಎರಡು ಕಡೆಗಳಲ್ಲಿಯೂ ಮನೆಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದ. ಅವನು ಟೌಸೆಂಟಳನ್ನು ರೂ'ಪ್ಲಮೆಟಿನ ಮನೆಯಲ್ಲೇ ಬಿಟ್ಟು, ಅಪರೂಪಕ್ಕೆ ಕೆಲವು ದಿನಗಳಂತೆ, ಕೋಸೆಟ್ಟೆ ಸಮೇತನಾಗಿ ಆ ಎರಡು ಮನೆಗಳಲ್ಲಿ ವಾಸಮಾಡುತ್ತಿದ್ದ. ಇಂಥ ಪ್ರಸಂಗಗಳಲ್ಲಿ ಅವನ ನೆರೆಯವರು ಯಾರು ವಿಚಾರಿಸಿದಾಗಲೂ ತಾನು ಹಳ್ಳಿ ಕಡೆಗೆ ಹೋಗಿ ಬಂದದ್ದಾಗಿ ತಿಳಿಸುತ್ತ ಗುಪ್ತನಾಗಿಯೇ ಜೀವಿಸುತ್ತಿದ್ದ.

೨. ರಾಷ್ಟ್ರೀಯ ಸೇವಕದಳದಲ್ಲಿ ಜೀನ್‌ವಾಲ್‌ಜೀನ್

ಜೀನ್‌ವಾಲ್‌ಜೀನ್ ಹೀಗೆ ಹೊಸತಾಗಿ ಬಂದುಸೇರಿದ್ದ ಮನೆಯಲ್ಲಿ ಒಳ್ಳೆಯ ಕೋಣೆಗಳನ್ನು ಕೋಸೆಟ್ಟೆಯ ಉಪಯೋಗಕ್ಕೆ ಬಿಟ್ಟುಕೊಟ್ಟು, ತಾನು ಉಪಕಟ್ಟಡದ ಎರಡುಕೋಣೆಗಳನ್ನು ಸ್ವಂತ ಉಪಯೋಗಕ್ಕೆ ಇಟ್ಟುಕೊಂಡ. ಕೋಸೆಟ್ಟೆಯ ಕೋಣೆಯನ್ನು ಚಿಕ್ಕ ಹುಡುಗಿಯರಿಗೆ ಸಂತೋಷ

ವಾಗುವ ಕ್ರಮದಲ್ಲಿ ಅಲಂಕರಿಸಿದ್ದ. ಕಿಟಕಿಗಳಿಗೆ ಚಂದದ ಪರದೆಗಳಿದ್ದುವು. ಅವಳ ಹೊಳಪಿನ ಮಂಚಕ್ಕೆ ಜರತಾರಿ ಕಸೂತಿಯಿಂದ ಚಿತ್ರ ಬಿಡಿಸಿದ್ದ ಮೇಲ್ಗಟ್ಟಿತ್ತು. ಕೋಣೆಯಲ್ಲಿ ಸೋಫಾ ಕುರ್ಚಿ, ಕಪಾಟು, ಮೇಜು, ಕನ್ನಡಿ, ಬರೆಯುವ ಸಾಹಿತ್ಯ, ಚಂದದ ಬ್ಲಾಟಿಂಗ್ ಪ್ಯಾಡ್ ಮೊದ ಲಾದ ವಸ್ತುಗಳಿದ್ದುವು. ತನ್ನ ಕೋಣೆಯಲ್ಲಾದರೋ ಒರಟು ಕುರ್ಚಿ, ಬರೇ ಹಲಗೆ ಮಂಚ, ಮತ್ತು ಕೆಲವು ಪುಸ್ತಕಗಳನ್ನು ಮಾತ್ರ ಇಟ್ಟುಕೊಂಡಿದ್ದ. ಕೋಸೆಟ್ಟಿಯ ಕೋಣೆಯಲ್ಲಿ ಬೆಂಕಿ ಉರಿಸುತ್ತಿದ್ದ. ಅವಳಿಗೆ ಬಲುಚಂದದ ದೀಪ ಕೊಟ್ಟಿದ್ದ. ಅವಳು ತಿನ್ನುವ ಬ್ರೆಡ್ ಬಲು ಉತ್ತಮ ತರದ್ದಾಗಿರುತ್ತಿತ್ತು. ತನ್ನ ಕೋಣೆಯಲ್ಲಾದರೋ ಬೆಂಕಿ ಉರಿಸುತ್ತಿದ್ದಿಲ್ಲ. ಆಹಾರದ ಬ್ರೆಡ್ ಒರಟುತರದ್ದಾಗಿರುತ್ತಿತ್ತು.

ಕೋಸೆಟ್ಟಿಯೂ ಜೀನ್‌ವಾಲ್‌ಜೀನನೂ ಲಕ್ಸಂಬರ್ಗಿಗೆ ತಿರುಗಾಡಲು ಹೋಗುವುದಿತ್ತು. ಆಗ ಅವಳು ಒಳ್ಳೆಯ ಉಡುಪು ಧರಿಸುತ್ತಿದ್ದಳು. ಇವನಾದರೋ ಒಬ್ಬ ಘನಸ್ಥ ನಿವೃತ್ತ ಅಧಿಕಾರಿ ಯಂತೆ ಉಡುಪು ಧರಿಸುತ್ತಿದ್ದ. ಒಬ್ಬನೇ ಹೋಗುತ್ತಿದ್ದಾಗ ದೇಹಶ್ರಮದ ದಿನಕೂಲಿಯವನಂತೆ ದುಸ್ತುಮಾಡುತ್ತಿದ್ದ. ಇವರು ತಮ್ಮ ಪಾಗಾರದಿಂದ ಹೊರಗೆ ಹೋಗಲೂ ಆದರ ಒಳಗಿನಿಂದ ಬರಲೂ ಆ ಎರಡು ಗೋಡೆಗಳ ನಡುವಿನ ಗುಪ್ತ ಮಾರ್ಗವನ್ನು ಮಾತ್ರ ಉಪಯೋಗಿಸುತ್ತಿದ್ದರು. ಇವರು ಪಾಗಾರದ ಬಾಗಿಲನ್ನು ಎಂದೂ ತೆರೆಯುತ್ತಿರಲಿಲ್ಲ. ಯಾರೊಡನೆಯೂ ಪರಿಚಯ ಬೆಳೆ ಸುತ್ತಿರಲಿಲ್ಲ. ಜೀನ್‌ವಾಲ್‌ಜೀನ್ ಕೋಸೆಟ್ಟಿಯ ತಂದೆಯೆಂದು ಟೌಸೆಂಟ್ ತಿಳಿದುಕೊಂಡಿದ್ದಳು.

ಜೀನ್‌ವಾಲ್‌ಜೀನ್ ಕಾನ್ವೆಂಟಿನಲ್ಲಿದ್ದಾಗಲೇ ೧೮೩೧ರ ಖಾನೇಶುಮಾರಿ ನಡೆದಿತ್ತು. ಅವ ನನ್ನು ಸರಕಾರದ ದಾಖಲೆಯಲ್ಲಿ ಆಗ್ಗೆ "ರಾಷ್ಟ್ರೀಯ ದಳದ ಮಾನ್ಸರ್ ಅಲ್ಟೈನ್ ಫಾಶಲೆವೆಂಟ್" ಎಂದು ಖಾನೇಶುಮಾರಿಯವರು ಬರೆದುಕೊಂಡಿದ್ದರು. ಸರಕಾರ ಈ ದಳದವರಿಗೆ ಕೊಡುತ್ತಿದ್ದ ಸಮವಸ್ತ್ರ ಧರಿಸಿ ಜೀನ್‌ವಾಲ್‌ಜೀನ್ ವರ್ಷಕ್ಕೆ ಮೂರು ನಾಲ್ಕು ಸಲ ಕವಾಯತು ಮಾಡಬೇಕಾ ಗಿತ್ತು. ಈ ಎಲ್ಲ ಸಂದರ್ಭಗಳೂ ಅವನ ಗುಪ್ತಜೀವನಕ್ಕೆ ಸಹಾಯಕಗಳಾಗಿದ್ದುವು.

ಜೀನ್‌ವಾಲ್‌ಜೀನನೂ ಕೋಸೆಟ್ಟಿಯೂ ಸೇಂಟ್ ಜ್ಯಾಕ್ಸ್ ಇಗರ್ಜಿಗೆ ಪ್ರತಿ ಆದಿತ್ಯವಾರವೂ ಪ್ರಾರ್ಥನೆಗೆ ಹೋಗಿಬರುತ್ತಿದ್ದರು. ಎಪೊನಿನ್ ಇವರ ಪರಿಚಯ ಮಾಡಿಕೊಂಡದ್ದೂ ಅಲ್ಲೇ. ಕೋಸೆಟ್ಟಿ ಸಮೇತ ಜೀನ್‌ವಾಲ್‌ಜೀನ್ ರೋಗಿಗಳ ಮತ್ತು ಬಡಬಗ್ಗರ ಮನೆಗಳಿಗೆ ಹೋಗಿ, ಅವರಿಗೆ ಹಣವನ್ನೋ ವಸ್ತುಗಳನ್ನೋ ಸಹಾಯವಾಗಿ ಕೊಟ್ಟುಬರುತ್ತಿದ್ದರು. ಇವರು ರೂ' ಪ್ಲುಮೆಟಿನ ಮನೆಗೆ ಬಂದನಂತರವೇ ತೆನಾರ್ಡಿಯರನ ಬಲೆಗೆ ಸಿಕ್ಕಿಬಿದ್ದುದು.

೩. ಕೋಸೆಟ್ಟಿಯ ಉದ್ಯಾನ

ಒಂದು ಕಾಲದಲ್ಲಿ ಸೈನಿಕರ, ಶ್ರೀಮಂತರ ಮತ್ತು ಅಧಿಕಾರಿಗಳ ವಿಷಯಲೋಲುಪತೆಗಳಿಗೆ ಅನುಕೂಲವಾಗಿರುವಂತೆ ರಚಿತವಾಗಿದ್ದ ಹೂದೋಟ ಈಗ ಕೆಲವು ವರ್ಷಗಳಿಂದ ಹಾಳು ಬಿದ್ದಿತ್ತು. ತೋಟಕ್ಕೂ ಪಶ್ಚಾತ್ತಾಪಬುದ್ಧಿ ಬಂದಿದ್ದಂತೆ ಇಂದು ಅದು ಅದರ ಆಡಂಬರದ ಬೆಡಗುಗಳನ್ನೆಲ್ಲ ತೊರೆದು, ಸ್ವಾಭಾವಿಕವಾಗಿ ಬೆಳೆದು, ಗಿಡಬಳ್ಳಿಗಳು ಸ್ವಾಭಾವಿಕವಾದ ಚಂದ ವನ್ನು ಮಾತ್ರ ಬೀರುವಂತಿದ್ದುವು. ಹಿಂದಿನ ವಿಷಯಲಂಪಟರ ಉದ್ಯಾನ ಇಂದು ನೋಡು ವವರಿಗೆ ಶಾಂತಿ ಮತ್ತು ಆನಂದವಿತ್ತು, ದೈವಿಕಚೇತನವಾದ ಸ್ತ್ರೀಪುರುಷರ ಪ್ರೇಮಮಂದಿರ ವಾಯಿತು. ನಿಜವಾದ ಪ್ರೇಮಮಂದಿರ ದೇವಮಂದಿರದಷ್ಟೆ ಪವಿತ್ರವಷ್ಟೆ! ಅಂಥ ದೇವ

ಮಂದಿರಕ್ಕೆ ಇರಬೇಕಾದ ತಿಳಿನೀರಿನ ಸುಂದರ ಕೊಳ, ಹಸುರುಹಚ್ಚೆ, ತಂಗಾಳಿಯಿಂದ ಅಲ್ಲಾಡುವ ಮರದೆಲೆಕೊಂಬೆಗಳು, ತಂಪಾದ ನೆರಳು, ನವಚೈತನ್ಯ ಕೊಡಬಲ್ಲ ಸೂರ್ಯಪ್ರಕಾಶ ಬೇಕಾದಲ್ಲಿ ಸಿಗುವಂಥ ಸ್ಥಳಗಳು, ಸುಂದರವಾದ ಮತ್ತು ಸುಗಂಧಬೀರುವ ಹೂವಿನ ಗಿಡಗಳು ಈ ಎಲ್ಲ ಸೌಂದರ್ಯದಲ್ಲಿ ನಲಿದು, ಹಾಡಿ, ಹಾರಾಡುವ ಬಣ್ಣಬಣ್ಣದ ಚಿಕ್ಕ ಹಕ್ಕಿಗಳ ಗುಂಪು —ಇಷ್ಟೆಲ್ಲ ಈ ಉದ್ಯಾನದಲ್ಲಿದ್ದುವು.

ಇಂಥ ದೇವಮಂದಿರದಲ್ಲಿ, ಮಂದಿರದ ಮೂರ್ತಿಯಾಗಿ, ತನ್ನ ಜೀವನದಲ್ಲಿ ಸ್ಫೂರ್ತಿ, ಆಸಕ್ತಿ, ಕಿಂಚಿತ್‌ಭ್ರಮೆ, ಸದಾ ಶುಭನಿರೀಕ್ಷಣೆ ಇದ್ದ ನಿಷ್ಕಪಟ ಮತ್ತು ಸರಳ ಮನಸ್ಸಿನ ಕೋಸೆಟ್ಟಿ ಪ್ರತಿಷ್ಠಿತಳಾಗಿದ್ದಳು.

ಕೋಸೆಟ್ಟಿಯ ವಿದ್ಯಾಭ್ಯಾಸದಿಂದ ಓದುಬರಹ, ಧರ್ಮ, ಸಂಗೀತ, ಚಿತ್ರಕಲೆ ಇಷ್ಟೆಲ್ಲ ಸ್ವಲ್ಪಮಟ್ಟಿಗೆ ಅವಳಿಗೆ ಬರುತ್ತಿತ್ತು. ಆದರೆ ಲೌಕಿಕ ವಿಷಯವಾಗಿ ಅವಳು ಇತರ ಏನನ್ನೂ ತಿಳಿದಿರಲಿಲ್ಲ. ಕಾನ್ವೆಂಟಿನ ತರಬೇತಿ ಆ ಕ್ರಮದ್ದಾಗಿತ್ತು. ಪ್ರಪಂಚವನ್ನು ಹೊಸದಾಗಿ ಪ್ರವೇಶಿಸುವ ಸರಳ ಬಾಲಿಕೆಯರಿಗೆ ಇಂಥ ಅನನುಭವಾವಸ್ಥೆ ಭೂಷಣವೆಂದೇ ಸಮಾಜ ಗ್ರಹಿಸುವುದಿದೆ. ಆದರೆ, ಈ ಅನನುಭವದಿಂದ ಅಪಾಯವೂ ಬೇಕಷ್ಟಿದೆಯೆಂಬುದನ್ನು ಮರೆಯಬಾರದು. ಸರಳ ಮತ್ತು ಎಳೆ ಮನಸ್ಸಿಗೆ ಒಮ್ಮೆಲೇ ಪ್ರಪಂಚದ ಹೊಸ, ಅದರಲ್ಲೂ ದುಷ್ಟ, ಅನುಭವ ಬಂದದ್ದಾದರೆ ಅಪಾಯ ಆಗದಿರದು. ಕೆಮರದ ಪರದೆಗೆ (ಫೋಟೊ ಹಿಡಿಯುವ ಉಪಕರಣದ ಪರದೆಗೆ) ಅತಿಶಯ ಬೆಳಕು ಬಿದ್ದರೆ ಪರದೆಯೇ ಹಾಳಾಗುವಂತೆ ಲೌಕಿಕಾನುಭವಗಳು ಏನೂ ಇರದಿದ್ದ ಬಾಲಿಕೆಯರಿಗೆ ಜೀವನದ ಸಮಸ್ಯೆಗಳು ಹಠಾತ್ತನೆ ಬಡಿದರೆ, ಅವರ ಭವಿಷ್ಯವೇ ಕೆಡುವುದಿದೆ. ಎಳೆಮನಸ್ಸಿಗೆ ಜೀವನದ ಬೆಳಕನ್ನು ತೋರಿಸುವಾಗ, ಪ್ರಥಮದಲ್ಲಿ ಸೌಮ್ಯ, ಶೀತಳ, ಒಂದು ವಿಧದ ಪ್ರತಿಫಲಿತ ಬೆಳಕನ್ನು ಮಾತ್ರ ಬೀರಬೇಕು. ಜೀವನಪಥದಲ್ಲಿ ಮೃದುಹೆಜ್ಜೆ ಇಡುವವರಿಗೆ ಅವರು ಗಾಬರಿಗೊಳ್ಳದಂತೆ ಬೆಳಕುಕಾಣಿಸಿ ನಡೆಸಿಕೊಂಡು ಹೋಗಬೇಕು. ಕಾನ್ವೆಂಟಿನ ನೂರು ಮಾತೆಯರು ಒಟ್ಟಾಗಿ ಹೇಳಿಕೊಡಬಲ್ಲ ಬುದ್ಧಿವಂತಿಕೆಗಿಂತ ಹೆಚ್ಚು ಬುದ್ಧಿಯನ್ನು ಜೀರ್ಣವಾಗುವಂತೆ ಉಣಿಸಲು ಸಾಮರ್ಥ್ಯವಿರುವ ಮಾತೆ ಮಾತ್ರ ಕೋಸೆಟ್ಟಿಗೆ ಇದ್ದಿದ್ದರೆ, ಅವಳ ಈಗಿನ ಪ್ರಾಯದಲ್ಲಿ ಬಹಳ ಉಪಕಾರವಾಗುತ್ತಿತ್ತು. ಜೀನ್‌ವಾಲ್‌ಜೀನ್ ತನ್ನಿಂದ ಸಾಧ್ಯವಾದಷ್ಟೂ ಲೌಕಿಕಾನುಭವಗಳನ್ನು ಕೋಸೆಟ್ಟಿಗೆ ಹೇಳಿಕೊಡುತ್ತಿದ್ದ. ಅವಳು ತುಂಬ ಪುಸ್ತಕಗಳನ್ನೋದುವಂತೆ ಮಾಡಿದ್ದ, ಮತ್ತು ಅವನೂ ಅವಳೂ ತಿರುಗಾಡಲು ಹೋಗುತ್ತಿದ್ದಾಗಲೆಲ್ಲ ಸಮಾಜದ ದೇಶದ ಮತ್ತಿತರ ಅನೇಕ ಸಂಗತಿಗಳನ್ನು ಅವಳಿಗೆ ತಿಳಿಯುವಂತೆ ಮಾಡುತ್ತಿದ್ದ.

ಮನುಷ್ಯನ ಕಾಮನೆಗಳು ಕಾನ್ವೆಂಟಿನಲ್ಲಿ ಉದ್ವೇಗಗೊಳ್ಳುವಂತೆ ಇನ್ನೆಲ್ಲಿಯೂ ಉದ್ವೇಗಗೊಳ್ಳಲಾರವು. ಅಲ್ಲಿ ಮನಸ್ಸಿನ ಪ್ರವೃತ್ತಿಗಳು ಶಿಸ್ತಿನಿಂದ ತಡೆಹಿಡಿಯಲ್ಪಟ್ಟು, ಒಂದು ಗುರಿ ಉದ್ದೇಶಿಸಿ, ಅದರ ಸರ್ವಶಕ್ತಿಗಳೂ ವಿನಿಯೋಗವಾಗುವುವು. ಈ ಪ್ರಯತ್ನದಿಂದ ಮನಸ್ಸು ಪ್ರಶಾಂತವಾಗುವ ಬದಲು ಸ್ಫೋಟಕ ಸ್ಥಿತಿಗೆ ತಲಪುತ್ತದೆ. ಶಿಸ್ತಿನಿಂದ ಪಾರಾಗಲು ಪ್ರಯತ್ನಿಸುತ್ತದೆ. ಮನಸ್ಸಿನ ಇಂಥ ಪರಿಸ್ಥಿತಿಯಲ್ಲಿ ಅದರ ಶಾಂತಿಗಾಗಿ ಊಹನೆ, ಕಲ್ಪನೆ, ಸ್ವಪ್ನ, ಯೋಚನಾಪರತೆ ಮೊದಲಾದವು ಉದ್ಭವಿಸುತ್ತವೆ. ಈ ಕಾಲ್ಪನಿಕ ಪ್ರಪಂಚಕ್ಕೂ ಪ್ರತ್ಯಕ್ಷ ಪ್ರಪಂಚಕ್ಕೂ ವಿಶೇಷ ಸಂಬಂಧವಿಲ್ಲವೆಂದು ಅವರು ಅರಿಯದೆ, ಒಮ್ಮೊಮ್ಮೆ ತಮ್ಮ ಕಲ್ಪನೆಯೇ ಸತ್ಯವೆಂದು ಅದನ್ನು ಹಿಂಬಾಲಿಸಿ ಜೀವನವನ್ನು ಹಾಳುಮಾಡಿಕೊಳ್ಳುವುದೂ ಇದೆ. ಕಾನ್ವೆಂಟಿನಲ್ಲೇ ಇದ್ದು ಸಾಯುವವರಿಗೆ ಅಲ್ಲಿಯ ಶಿಸ್ತು ಮತ್ತು ಜೀವನಕ್ರಮ ಸರಿಯಾಗಬಹುದಾದರೂ ಅದರಿಂದ

ಹೊರಗೆ ಸಮಾಜದಲ್ಲಿ ಜೀವಿಸಬೇಕಾದರೆ ಅಲ್ಲಿಯ ಜೀವನ ಕ್ರಮ ಅಪೂರ್ಣವೂ ಅಪಾಯ ಕರವೂ ಆಗುವುದು.

ಈ ವಿಷಯಗಳನ್ನೆಲ್ಲ ಅರಿತಿದ್ದ ಜೀನ್‌ವಾಲ್‌ಜೀನ್ ಅವಳ ಮನಸ್ಸಿನ ಯೋಗ್ಯ ವಿಕಾಸಕ್ಕೆ ತುಂಬ ಪ್ರಯತ್ನ ಪಡುತ್ತಿದ್ದ. ಅವನಿಗೆ ಕೋಸೆಟ್ಟಿಯ ಮೇಲೆ ತಂದೆಯದಕ್ಕಿಂತಲೂ ಹೆಚ್ಚಾಗಿ ತಾಯಿಯ ಪ್ರೇಮವಿತ್ತು. ತಾನು ಜನಿಸಲು ಒಬ್ಬ ಮಾತೆ ಇದ್ದಿರಲೇಬೇಕೆಂಬ ಜ್ಞಾನ ಸಹ ಕೋಸೆಟ್ಟಿಗೆ ಇರಲಿಲ್ಲ. ಒಮ್ಮೊಮ್ಮೆ ಅವಳು ಜೀನ್‌ವಾಲ್‌ಜೀನನನ್ನು 'ಅಮ್ಮಾ' ಎಂದೂ ಪ್ರೀತಿ ಯಿಂದ ಕರೆಯುತ್ತಿದ್ದಳು. ಇವನು ಕೋಸೆಟ್ಟಿಯನ್ನು ಕಂಡಷ್ಟೇ ಪ್ರೀತಿಯಿಂದ ತನ್ನ ಕೈಚೀಲ ವನ್ನೂ ಕಾಣುತ್ತಿದ್ದ. ತಂದೆಯ ಪ್ರೇಮ ಪೂರ್ಣವಾಗಿ ತನ್ನ ಮೇಲೆ ಬೀಳದಂತೆ ಪ್ರಯತ್ನಿಸಿ ಅಪಹರಿಸುವ ತನ್ನ ಪ್ರತಿಸ್ಪರ್ಧಿ ಆ ಕೈಚೀಲವೆಂದು ಕೋಸೆಟ್ಟಿ ಒಂದೊಂದು ಸಲ ಹೇಳುವುದಿತ್ತು.

ಕೋಸೆಟ್ಟಿಗೆ ಪ್ರಾಯ ಬರುತ್ತಿದ್ದರೂ ಅವಳ ನಡುವಳಿಕೆ ಎಳ್ಳಷ್ಟೂ ಬದಲಾಗಿರಲಿಲ್ಲ. ಅವಳು ಜೀನ್‌ವಾಲ್‌ಜೀನನ ಹೆಗಲ ಮೇಲೆ ತನ್ನ ತಲೆ ಇಟ್ಟುಕೊಂಡು ಬಲು ಸಲಿಗೆಯಿಂದ ತನಗೆ ಮನಬಂದಂತೆ ಪ್ರಶ್ನೆ ಹಾಕಿ ಅನೇಕ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದಳು. ಒಮ್ಮೆ ತುಂಬ ಪುಸ್ತಕಗಳನ್ನೋದಿಯೋ ಏನೋ ಕೋಸೆಟ್ಟಿ ತನಗೆ ಒಬ್ಬ ತಾಯಿ ಇದ್ದಳೋ ಎಂದು ಕೇಳಿದಳು. ಆಗ ಜೀನ್‌ವಾಲ್‌ಜೀನ್ "ಇದ್ದಳು" ಎಂದು ಮಾತ್ರ ಉತ್ತರವಿತ್ತು ಮೌನವಾಗಿ ಕುಳಿತ. ಆಗಲೇ ಅವನ ಕಣ್ಣುಗಳಿಂದ ಎರಡು ಬೊಟ್ಟು ಕಣ್ಣೀರು ಕೋಸೆಟ್ಟಿಯ ಮೇಲೆ ಬಿದ್ದು ಅವಳೂ ಮೌನ ವಾಗಿ ಕುಳಿತುಬಿಟ್ಟಳು. ಕೋಸೆಟ್ಟಿಗೆ ಅವಳ ಬಾಲ್ಯದ ನೆನಪು ಹೆಚ್ಚಾಗಿ ಯಾವುದೂ ಉಳಿದಿರಲಿಲ್ಲ. ಆದರೆ ತಾನು ರಾತ್ರಿ ಹೊತ್ತು ನಡುಕಾಡಿನಲ್ಲಿ ಬಾಲ್ದಿಯ ನೀರನ್ನೆತ್ತಲು ಕಷ್ಟಪಟ್ಟಾಗ ಜೀನ್‌ವಾಲ್ ಜೀನ್ ಸಹಾಯಕ್ಕೆ ಬಂದದ್ದು ಮಾತ್ರ ಚೆನ್ನಾಗಿ ಜ್ಞಾಪಕದಲ್ಲಿ ಉಳಿದಿತ್ತು.

ಜೀನ್‌ವಾಲ್‌ಜೀನ್ ಕೋಸೆಟ್ಟಿಗೆ ಫ್ಯಾಂಟೈನಳ ಚರಿತ್ರೆಯನ್ನು ಸ್ವಲ್ಪವೂ ತಿಳಿಸಿರಲಿಲ್ಲ. ಕಾನ್ವೆಂಟಿನ ನಿಯಮ ನಿಷ್ಠೆಗಳಲ್ಲಿ ಬೆಳೆದು ಲೌಕಿಕಾನುಭವವಿಲ್ಲದಿದ್ದ ಕೋಸೆಟ್ಟಿಗೆ ಆ ಚರಿತ್ರೆ ತಿಳಿ ದರೆ, ಅವಳ ತಾಯಿಯ ಮೇಲೆ ಇರಬೇಕಾದಷ್ಟು ಪ್ರೀತಿ, ಗೌರವ ಇರದಾಗಬಹುದೆಂದು ಹೆದರಿ ಅವನು ಆ ವಿಷಯವನ್ನು ಗುಟ್ಟಾಗಿಟ್ಟಿದ್ದ, ಮತ್ತು ಈ ವಿಧದ ಗೋಪ್ಯಕ್ಕೆ ಇನ್ನೊಂದು ಕಾರಣವೂ ಇರಬೇಕೆಂದು ನಾವು ಊಹಿಸಿದರೆ ತಪ್ಪಾಗಲಾರದು. ಜೀನ್‌ವಾಲ್‌ಜೀನನ ಈ ವೃದ್ಧಾಪ್ಯದಲ್ಲಿ ಅವನು ಕೋಸೆಟ್ಟಿಯ ಪರಿಪೂರ್ಣ ಪ್ರೇಮ ತನ್ನ ಮೇಲೆ ಮಾತ್ರ ಇರಬೇಕೆಂದೂ ಫ್ಯಾಂಟೈನಳ ವಿಷಯ ಕೋಸೆಟ್ಟಿಗೆ ತಿಳಿದರೆ, ಇದು ಕಿಂಚಿದಂಶವಾದರೂ ಕಡಿಮೆಯಾದೀತೆಂದೂ ಗ್ರಹಿಸಿದ್ದ.

ಜೀನ್‌ವಾಲ್‌ಜೀನ್ ಮನೆಬಿಟ್ಟು ಹೋದಾಗಲೆಲ್ಲ ಕೋಸೆಟ್ಟಿ ತನ್ನ ಉದ್ಯಾನದಲ್ಲೇ ಇರು ತ್ತಿದ್ದಳು. ಅಲ್ಲಿ ಅವಳು ಹುಳಹುಪ್ಪಟೆ, ಹಾತೆ, ಹಕ್ಕಿಗಳನ್ನು ನೋಡುವುದರಲ್ಲಿ ಕಾಲ ಕಳೆಯು ತ್ತಿದ್ದಳು. ಒಮ್ಮೊಮ್ಮೆ ಮರಗಳ ಸೆರೆಯಲ್ಲಿ ನಕ್ಷತ್ರಗಳು ಕಂಡು ಬರುವವರೆಗೂ ಉದ್ಯಾನದಲ್ಲೇ ಇರುತ್ತಿದ್ದಳು.

೪. ಕೋಸೆಟ್ಟಿ ಕಂಡ ಒಂದು ಸಂಗತಿ

ಇಲ್ಲಿ ಹೇಳುವ ವಿಷಯ ಜೀನ್‌ವಾಲ್‌ಜೀನ್ ರೂ'ಪ್ಲಮೆಟಿನ ಮನೆಗೆ ಬರುವ ಮೊದಲು ನಡೆದದ್ದಾಗಿದೆ.

ಒಂದು ದಿನ ಕೋಸೆಟ್ಟಿ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿ "ಓ ದೇವರೆ !" ಎಂದು

ಹೇಳಿಬಿಟ್ಟಳು. ಅವಳು ಹಾಗೆಂದುಕೊಳ್ಳಲು ಕಾರಣವೇನು? ತಾನು ಕುರೂಪಿಯೆಂದು ನಂಬಿ ಕೊಂಡಿದ್ದವಳು ಆಕಸ್ಮಾತ್ತಾಗಿ ಆ ದಿನ ಕಂಡ ತನ್ನ ಸೌಂದರ್ಯಕ್ಕಾಗಿ ಹಾಗೆ ಉದ್ಗರಿಸಿದ್ದು. ಕಾನ್ವೆಂಟಿನಲ್ಲಿ ಎಲ್ಲರೂ ಅವಳನ್ನು ಕುರೂಪಿಯೆಂದು ಹೇಳುತ್ತಿದ್ದರು. ಅದೇ ಕಾನ್ವೆಂಟಿನಲ್ಲಿ ಸುಂದರಿಯಾಗಿದ್ದವರನ್ನು ಕಂಡು ಎಲ್ಲರೂ ಭ್ರಮೆಗೊಳ್ಳುತ್ತಿದ್ದುದನ್ನು ಕೋಸೆಟ್ಟೆಯೂ ಕಂಡಿ ದ್ದಳು. ಇಂದು ಕಂಡ ತನ್ನ ರೂಪ ಕೇವಲ ಅನಿರೀಕ್ಷಿತದ್ದಾಗಿತ್ತು.

ತನ್ನ ರೂಪವನ್ನು ಹೀಗೆ ತಿಳಿದುಕೊಂಡ ಬಳಿಕ ಒಂದು ದಿನ ಕೋಸೆಟ್ಟೆ ರಸ್ತೆಯಲ್ಲಿ ಹೋಗು ತ್ತಿದ್ದಾಗ ಒಬ್ಬ ಯುವಕ ಇವಳನ್ನು ನೋಡಿ, ಇವಳಿಗೆ ಕೇಳಿಸುವಂತೆಯೇ, ಮತ್ತೊಬ್ಬನೊಡನೆ ಹೇಳಿದ, "ನೋಡೋ, ಆ ತರುಣಿ ಎಷ್ಟೊಂದು ಚೆಲುವೆಯಾಗಿದ್ದಾಳೆ. ಆದರೆ, ಅವಳ ದುಸ್ತು ಏನೂ ಚೆನ್ನಾಗಿಲ್ಲ." ಅದೇ ದಿನ ಟೌಸೆಂಟ್ ಇವಳಿಗೆ ಕೇಳುತ್ತಿದ್ದ ಹಾಗೆಯೇ ಜೀನ್‌ವಾಲ್‌ಜೀನ ನೊಂದಿಗೆ ಹೇಳಿದಳು, "ಯಜಮಾನರೆ, ನಮ್ಮ ಚಿಕ್ಕ ಯಜಮಾನಿ ಬಲುಸುಂದರಿಯಾಗತೊಡಗಿ ದ್ದಾರೆ." ಈ ಮಾತಿಗೆ ಜೀನ್‌ವಾಲ್‌ಜೀನ್ 'ಹೌದು' ಎಂದು ಉತ್ತರವಿತ್ತ. ಆ ದಿನ ಕೋಸೆಟ್ಟೆ ಪುನಃ ತನ್ನ ಮುಖವನ್ನು ಕನ್ನಡಿಯಲ್ಲಿ ನೋಡಿ ತಂದೆಯೂ ಟೌಸೆಂಟಳೂ ಕನ್ನಡಿಯೂ ಒಂದೇ ಅಭಿಪ್ರಾಯ ತಿಳಿಸಿದ್ದಾರೆ ಎಂದು ನಿಶ್ಚೈಸಿಕೊಂಡಳು.

ಅಂದು ಇವಳ ಮನಃಸ್ಥಿತಿಯೇ ವಿಚಿತ್ರತರವಾಗಿತ್ತು. ಹೂ ಅರಳಿ ಬೆಳಗುವಾಗ ಅದರ ಚಂದ ಅದಕ್ಕೇನುಗೊತ್ತು? ಆದರೂ, ಅದರ ರೂಪವನ್ನು ಅದು ಪ್ರದರ್ಶಿಸದಿರಲು ಸಾಧ್ಯವಿದೆಯೇ ? ಇಂದು ಕೋಸೆಟ್ಟೆಯ ಸ್ಥಿತಿಯೂ ಬಲುಮಟ್ಟಿಗೆ ಹಾಗೆಯೇ ಇತ್ತು. ಅವಳ ಸೌಂದರ್ಯ ಅವಳಿಗರಿಯದೆ ವಿಕಾಸಿಸಿತ್ತು. ಈಗ ತನ್ನ ಸೌಂದರ್ಯದ ಅರಿವೇ ಅವಳಲ್ಲಿ ಆಶ್ಚರ್ಯವನ್ನೂ ಚಾಂಚಲ್ಯವನ್ನೂ ಉಂಟುಮಾಡಿತು. ಮನಸ್ಸಿನ ಈ ತೆರನಾದ ಭಾವದಿಂದ ಮುಜಗರಗೊಂಡು ಅವಳು ಉದ್ಯಾನಕ್ಕೆ ಹೋದಳು. ಅಲ್ಲಿ ಹೂಗಳು ಬಿಸಿಲಲ್ಲಿ ಅರಳಿ ಬಲು ಅಂದವಾಗಿ ತೋರು ತ್ತಿದ್ದುವು. ಹಾರಾಡುತ್ತಿದ್ದ ಹಕ್ಕಿಗಳ ಗಾನದಲ್ಲಿ ನವ ಮಾಧುರ್ಯ ಕೇಳಿಸಿತು. ತೋಟದಲ್ಲಿ ಬೀಸಿಬರುತ್ತಿದ್ದ ತಂಗಾಳಿಯಲ್ಲಿ ಪುಷ್ಪಸೌರಭ ಎಂದಿಗಿಂತಲೂ ಸೊಗಸಾಗಿ, ಮೃದುವಾಗಿ, ಸರ್ವತ್ರ ಪಸರಿಸುತ್ತ ಬರುತ್ತಿತ್ತು. ಇವುಗಳೆಲ್ಲವುಗಳ ಸೌಂದರ್ಯದ ನಡುವೆ ಕೋಸೆಟ್ಟೆ ಬಲು ಗಂಭೀರವಾಗಿ ಕುಳಿತು ಮೆರೆಯುವಾಗ, ಪ್ರಕೃತಿಯೇ ತನ್ನನ್ನು ಸೌಂದರ್ಯದ ರಾಣಿಯನ್ನಾಗಿ ಅಲ್ಲಿ ಕುಳ್ಳಿರಿಸಿ ಆರಾಧಿಸುತ್ತಿದ್ದಾಳೆಂದೂ ಆಶ್ಚರ್ಯಗೊಳುತ್ತಿದ್ದಳು.

ತಾವು ಸುಂದರಿಯರೆಂದು ತಿಳಿದಿರದೆ ತಮ್ಮ ಸೌಂದರ್ಯವನ್ನು ಬೀರುವ ತರಳೆಯರ ಸೌಂದರ್ಯ, ತಿಳಿದು ಪ್ರದರ್ಶಿಸುವವರದಕ್ಕಿಂತ ಮಿಗಿಲಾದುದೆಂದು ಎಲ್ಲರ ಅಭಿಪ್ರಾಯ. ಆದರೂ ಮಾತೆಯ ಶಿಕ್ಷಣವಿಲ್ಲದೆ, ಸಂಸಾರದ ಪರಿಚಯವಿಲ್ಲದೆ, ಗಿಡಗಳಲ್ಲಿ ಹೂ ಅರಳಿದಂತೆ ತನಗೆ ತಾನೇ ಸುಂದರಿಯಾಗಿ ಬೆಳೆದು, ಇನ್ನು ಯಾರ ಸೌಂದರ್ಯಕ್ಕೂ ಪ್ರತಿಸ್ಪರ್ಧಿಯಾಗಿರದೆ, ತನ್ನ ಮನೋರಾಜ್ಯದ ಸಂತೋಷಕ್ಕಾಗಿ ಮಾತ್ರ ತನ್ನ ಸೌಂದರ್ಯವನ್ನರಿತೇ ಅದರಲ್ಲಿ ಪರವಶ ಳಾಗಿ ಮೆರೆಯುತ್ತಿದ್ದ ಕೋಸೆಟ್ಟೆಯ ಸೌಂದರ್ಯದ ಮಟ್ಟಿಗೆ ಆ ಅಭಿಪ್ರಾಯ ಸರಿಯಾಗಲಾರದು. ಅವಳು ಯಾರನ್ನೂ ಅಪಮಾನಿಸಲೋಸ್ಕರವಾಗಿ ಇತರ ಎಲ್ಲರಿಗಿಂತ ಸುಂದರಿಯಾಗಿ ಬೆಳೆದಿರ ಲಿಲ್ಲ. ಸಮಾಜದ ಅಭಿಪ್ರಾಯವೆಂಬುದೊಂದಿದೆಯೆಂದು ಗೊತ್ತೇ ಇರದಿದ್ದ ಕೋಸೆಟ್ಟೆ ಅವಳನ್ನು ನೋಡಿದವರಿಂದ ಗೌರವವನ್ನೂ ಪ್ರಶಂಸೆಯನ್ನೂ ತನ್ನ ಸೌಂದರ್ಯದಿಂದಲೇ ಸೆಳೆಯುತ್ತಿದ್ದಳು. ಇಂಥ ಸ್ಥಿತಿಯಲ್ಲಿ ಕೋಸೆಟ್ಟೆ ಇದ್ದಾಗಲೇ ಮೇರಿಯಸ್ ಅವಳನ್ನು ಲಕ್ಸಂಬರ್ಗಿನಲ್ಲಿ, ಕೆಲವು ತಿಂಗಳುಗಳ ಹಿಂದೆ, ಕಂಡಿದ್ದುದು.

೫. ಹೃದಯ ಸಂಗ್ರಾಮ

ಜೀವರಾಶಿಗಳಿಗೆ ಚೇತನ ಕೊಡಬಲ್ಲ ಜಲವನ್ನು ವರ್ಷಿಸುವ ಮೊದಲು ಎರಡು ಮೋಡಗಳು ಮಿಂಚಿ, ಗರ್ಜಿಸಿ, ತಮ್ಮ ಶಕ್ತಿಗಳನ್ನು ವರ್ಧಿಸಿಕೊಂಡು ಆಸ್ಫೋಟನಗೈಯುವಂತೆ, ಪ್ರೇಮ ಮಯ ಜೀವನವನ್ನು ಪ್ರಾರಂಭಿಸುವ ಪೂರ್ವಭಾವಿಯಾಗಿ, ಮೇರಿಯಸ್ ಮತ್ತು ಕೋಸೆಟ್ಟಿ ತಮ್ಮ ಪ್ರಾಯ, ರೂಪ, ಲಾವಣ್ಯಗಳನ್ನು ವರ್ಧಿಸಿಕೊಂಡು ಹೃದಯಗಳ ದ್ವಂದ್ವಯುದ್ಧವನ್ನು ಲಕ್ಸಂಬರ್ಗಿನಲ್ಲಿ ಪ್ರಾರಂಭಿಸಿದರು. ಮೋಡಗಳಲ್ಲಿ ಮಿಂಚು ಕಾರ್ಯವೆಸಗುವಂತೆ ಇವರಿಬ್ಬರು ತಮ್ಮ ಯುದ್ಧದಲ್ಲಿ ದೃಷ್ಟಿಯನ್ನು ಉಪಯೋಗಿಸಿದರು. ಕೊನೆಗೆ ದೃಷ್ಟಿಗಳ ಸಂಧಿಯೇ ಮಹಾ ಸಂಗ್ರಾಮವಾಗಿ, ಅಂಥ ಸಂಗ್ರಾಮದ ಫಲ ಹೃದಯಗಳ ಶಾಶ್ವತ ಶಾಂತಿಯೇ ಆಗಲು ಮಾತ್ರ ಬಾಕಿಯಿತ್ತು. ಪ್ರೇಮಮಯ ಯುದ್ಧದಲ್ಲಿ ದೃಷ್ಟಿಯೇ ಪ್ರಧಾನ. ಮೇರಿಯಸ್ ಕೋಸೆಟ್ಟಿಯನ್ನು ಪ್ರೇಮಪೂರಿತ ದೃಷ್ಟಿಯಿಂದ ನೋಡಿದ. ಆತ ತನ್ನನ್ನು ನೋಡುವುದನ್ನು ನೋಡುವ ಉದ್ದೇಶ ದಿಂದ ಮಾತ್ರ ಕೋಸೆಟ್ಟೆ ಆತನ ದೃಷ್ಟಿಯನ್ನು ಸಂಧಿಸಿದಳು. ಆದರೆ, ಹಾಗೆ ಸಂಧಿಸಿದ ಫಲಿತಾಂಶ ಕೋಸೆಟ್ಟಿಗೆ ಸಂಪೂರ್ಣ ಅನಿರೀಕ್ಷಿತವಾದದ್ದಾಗಿತ್ತು. ಆ ಸಂಧಿಯೇ ಅವಳ ದೇಹದಲ್ಲಿ ಒಂದು ವಿದ್ಯುತ್ ಚಲನೆಗೈಸಿತು. ಮತ್ತೆ ಅದೇ ಮುಂದಿನ ಪ್ರೇಮಜೀವನದ ತಳಹದಿಯಾಯಿತು. ಮೇರಿಯಸ್ ತನ್ನ ಅನುಭವದ ಆನಂದದಿಂದ ವಿಭ್ರಾಂತನಾದ. ಕೋಸೆಟ್ಟಿಯ ಅಂತರಂಗದಲ್ಲಿ ಸ್ಫುರಣವುಂಟಾಗಿ, ಮೊದಲು ಮಂಜಾಗಿ, ಮಸಕಾಗಿ, ಕಾಣುತ್ತಿದ್ದ ಭಾವನೆಗಳು ಈ ಸ್ಫುರಣದಿಂದ ಉಂಟಾಗಿದ್ದ ಪ್ರಭೆಯಲ್ಲಿ ಸ್ಪಷ್ಟವಾಗಿ ಸ್ವಚ್ಛವಾಗಿ ಕಾಣತೊಡಗಿದುವು. ಕಾನ್ವೆಂಟಿನಲ್ಲಿ ಕೋಸೆಟ್ಟಿ ಇದ್ದಾಗ 'ಪ್ರೇಮ' ಎಂಬ ಶಬ್ದವನ್ನೇ ಕೇಳಿರಲಿಲ್ಲ. ಅಲ್ಲಿ ಅವರು ಹಾಡುತ್ತಿದ್ದ ಸಂಗೀತ ದಲ್ಲಾಗಲೀ ಹೇಳುತ್ತಿದ್ದ ಸ್ತೋತ್ರಗಳಲ್ಲಾಗಲೀ 'ಪ್ರೇಮ' ಎಂಬ ಶಬ್ದ ಬರಬೇಕಾಗಿದ್ದಲ್ಲೆಲ್ಲ ಅರ್ಥಕ್ಕೆ ಸ್ವಲ್ಪ ದೋಷಕೊಟ್ಟರೂ, 'ಕ್ಷೇಮ,' 'ಹೇಮ' ಮೊದಲಾದ ಶಬ್ದಗಳನ್ನು ಉಪಯೋಗಿ ಸುವ ಏರ್ಪಾಡನ್ನು ಮಾಡಿದ್ದರು. ಪ್ರೇಮ ಹಿತಕಾರಿಯೇ ಅಹಿತಕಾರಿಯೇ ಅಪಾಯಕಾರಿಯೇ ತಾತ್ಕಾಲಿಕವೇ ಶಾಶ್ವತವೇ ಜನ ಒಪ್ಪುವಂಥಾದ್ದೇ ಜನ ನಿಂದಿಸುವಂಥಾದ್ದೇ ತನ್ನಲ್ಲಿ ಮಾತ್ರ ಉಂಟಾಗಿದ್ದ ಅನುಭವವೇ ಅಥವಾ ಇತರರಿಗೂ ಬರಬಹುದೇ ಎಂದು ಕೋಸೆಟ್ಟಿಗೆ ಗೊತ್ತಿರ ಲಿಲ್ಲ. ಹೂ ತಾನು ಅರಳುವುದು ಏಕೆಂದರಿಯದೆ ಅರಳುವಂತೆ ಕೋಸೆಟ್ಟಿ ಪ್ರೇಮಭರಿತಳಾಗಿ ದ್ದಳು. ಇದರ ಎಡೆಬಿಡದ ಚಿಂತನೆಯಲ್ಲಿ ಅವಳು ಆನಂದಪರವಶತೆ ಹೊಂದುತ್ತಿದ್ದಳು.

ಹೆಣ್ಣು ಗಂಡುಗಳು ಸ್ವತಃ ಅಪೂರ್ಣರಾಗಿದ್ದು, ಒಬ್ಬರಲ್ಲಿಲ್ಲವಾದುದು ಮತ್ತೊಬ್ಬರಲ್ಲಿರು ವುದು ಪ್ರಕೃತಿನಿಯಮ. ಈ ಕಾರಣದಿಂದಲೇ ಪ್ರೇಮ ಪ್ರಸಂಗಗಳಲ್ಲಿ ಗಂಡಸು ಅಶಕ್ತನಂತೆ ನಾಚುವುದೂ ಹೆಂಗುಸು ಶಕ್ತಿಯುತಳಂತೆ ಧಾವಿಸುವುದೂ ಸ್ವಾಭಾವಿಕ. ಆದ್ದರಿಂದಲೇ ಕೋಸೆಟ್ಟಿ ಲಕ್ಸಂಬರ್ಗಿನಲ್ಲಿ ಒಮ್ಮೆ ತನ್ನ ಎದೆಗಾರಿಕೆಯಿಂದಲೇ ಬೆಂಚಿನಿಂದೆದ್ದು ಮೇರಿಯಸನಿಗೆ ಎದು ರಾಗಿ ಬಂದುದು. ಕೋಸೆಟ್ಟಿಯ ದೃಷ್ಟಿಯಲ್ಲಿ ಮೇರಿಯಸ್ ಒಬ್ಬ ದೇಹಧಾರಿಯಾಗಿರಲಿಲ್ಲ, ಆನಂದಮಯ ಪ್ರಭೆಮಾತ್ರವಾಗಿದ್ದ. ಅವನು ಅವಳ ಸುಖಸಂತೋಷದ ಜೀವನಕ್ಕೆ ಬೇಕಾಗಿದ್ದ ಸರ್ವಚೇತನನಾಗಿ ಶೋಭಿಸುತ್ತಿದ್ದ. ಈ ರೀತಿ ಕೋಸೆಟ್ಟಿ ನವತರುಣಿಯಾಗಿ ಬೆಳೆಯುತ್ತ ಸುಂದರ ಸ್ತ್ರೀಯಾಗಿ ಶೋಭಿಸತೊಡಗಿದಳು.

೬. ಶೋಕಗ್ರಸ್ತ ಜೀನ್‌ವಾಲ್‌ಜೀನ್

ಕೋಸೆಟ್ಟಿಯ ಪ್ರೇಮವನ್ನು ಸೆಳೆದುಕೊಳ್ಳಲು ಮೇರಿಯಸ್ ತನ್ನ ಎದುರಾಳಿಯಾಗಿರುವನೆಂದು ಜೀನ್‌ವಾಲ್‌ಜೀನ್ ಕೇವಲ ವಾಸನೆಯಿಂದಲೇ ಅರಿತಿದ್ದ. ಅಂದರೆ, ತರ್ಕಕ್ಕೆ ಸಿಕ್ಕದ, ಆಂತರಿಕ ಭಾವನೆಗಳ ಮೂಲಕ, ಊಹನೆಯಲ್ಲದೆ, ಆದರೂ ವಸ್ತುಸ್ಥಿತಿ ನಿಜವೆಂದು ಗೊತ್ತಾಗುವ ಒಂದು ವಿಧದ ಅಂತರ್ಬೋಧೆಯಿಂದ ಹೀಗೆ ತಿಳಿದಿದ್ದ. ಜೀನ್‌ವಾಲ್‌ಜೀನ್ ತನ್ನ ಎದುರಾಳಿಯೆಂದು ಮೇರಿಯಸನೂ ಭಾವಿಸಿದ್ದ. ಈ ಇಬ್ಬರೂ ಕೋಸೆಟ್ಟಿಯನ್ನು ಪ್ರೀತಿಸುವುದರಲ್ಲಿ ಸಮತೂಕರೇ ಆಗಿದ್ದರು. ಇಬ್ಬರ ಪ್ರೇಮದ ಪರಿಶುದ್ಧತೆಯಲ್ಲೂ ಭೇದವಿರಲಿಲ್ಲ. ಪಿತನಸ್ಥಾನದಿಂದ, ಅಥವಾ ಭಾವೀಪತಿಯ ಸ್ಥಾನದಿಂದ ಎಂಬ ಬಣ್ಣಗಳ ವ್ಯತ್ಯಾಸ ಇಬ್ಬರಿಗೂ ತಿಳಿದಿರಲಿಲ್ಲ. ಇಬ್ಬರೂ ಆ ಪ್ರೇಮವನ್ನು ತಮ್ಮ ಕಡೆಗೆ ಸೆಳೆದು ಭವ್ಯಮಂದಿರವನ್ನು ರಚಿಸುವ ಯೋಚನಾಪ್ರಪಂಚದಲ್ಲೇ ಇದ್ದರು. ಆದರೆ, ತನ್ನ ಕಡೆಯ ಪ್ರೇಮಮಂದಿರ ಕುಸಿಯುತ್ತಲೂ ಮೇರಿಯಸನ ಕಡೆಯದು ಏರುತ್ತಲೂ ಇದೆಯೆಂದು ಜೀನ್‌ವಾಲ್‌ಜೀನ್ ತಿಳಿಯತೊಡಗಿದ. ಈ ನಂಬಿಕೆಗೆ ಸರಿಯಾದ, ಸಾಕಾದ ಆಧಾರಗಳನ್ನು ಮೇರಿಯಸ್ ಮೈಮರೆತೇ ಕೊಡುತ್ತ ಬಂದಿದ್ದ. ಕೋಸೆಟ್ಟಿ ಮಾತ್ರ ಅಂಥ ಆಧಾರಗಳನ್ನು ಕೊಟ್ಟಿರಲಿಲ್ಲ. ಆದರೂ ಇವರಿಬ್ಬರೂ ಏಕಕಾಲದಲ್ಲಿ ಅಲಂಕಾರ ಪ್ರಿಯರಾದುದು ಹೇಗೆಂಬ ಸಂಶಯ ಜೀನ್‌ವಾಲ್‌ಜೀನನನ್ನು ಬಾಧಿಸುತ್ತಿತ್ತು.

ಮೇರಿಯಸನನ್ನು ಪರೀಕ್ಷಿಸುವುದಕ್ಕಾಗಿ ಲಕ್ಸಂಬರ್ಗಿಗೆ ವೇಳೆತಪ್ಪಿಸಿ ಹೋಗಿ ನೋಡಿದ. ಕರವಸ್ತ್ರವನ್ನು ಬೇಕೆಂದೇ ಬಿಟ್ಟುಹೋಗಿ ಪರಿಣಾಮವನ್ನು ಅಡಗಿ ನೋಡಿದ್ದಾಯಿತು. ವಾಸಸ್ಥಳಗಳನ್ನು ಬದಲಿಸಿ ನೋಡಿದ್ದಾಯಿತು. ಈ ಎಲ್ಲ ಪರೀಕ್ಷಾಬಲೆಗಳಲ್ಲೂ ಮೇರಿಯಸ್ ಕಣ್ಣು ಮುಚ್ಚಿ ಬೀಳುತ್ತಲೇ ಬಂದು ತನ್ನ ಎದುರಾಳಿತನವನ್ನು ಬಹಿರಂಗಪಡಿಸಿಕೊಂಡ.

ಕೋಸೆಟ್ಟಿಯಾದರೂ ಒಂದು ದಿನ ಮಾತ್ರ ತನ್ನ ಅಂತರಂಗವನ್ನು ಸ್ವಲ್ಪ ತೋರಿಸಿಬಿಟ್ಟಿದ್ದಳು. ಲಕ್ಸಂಬರ್ಗಿನಿಂದ ಸ್ವಲ್ಪ ಬೇಗ ಹಿಂತಿರುಗೋಣವೆಂದು ಜೀನ್‌ವಾಲ್‌ಜೀನ್ ಹೊರಟಾಗ, "ಇಷ್ಟೊಂದು ಬೇಗ ಏಕೆ?" ಎಂದು ಕೋಸೆಟ್ಟಿ ಕೇಳಿದ್ದಳು. ಈ ಪ್ರಶ್ನೆಯನ್ನು ಪರೀಕ್ಷಿಸುವುದಕ್ಕಾಗಿಯೇ ಜೀನ್‌ವಾಲ್‌ಜೀನ್, ಕೋಸೆಟ್ಟಿಯನ್ನು ಅಲ್ಲೇ ಇರಗೊಟ್ಟು, ತಾನು ಅಡಗಿ ನಿಂತು ನೋಡಿದ್ದ. ಆಗ ಮೇರಿಯಸ್, ಕೋಸೆಟ್ಟಿಯರು ಸಮೀಪವಿರದಿದ್ದರೂ ಎರಡು ನಕ್ಷತ್ರಗಳು ಮಿನುಗುತ್ತ ಬಾನಿನಲ್ಲಿ ಪರಸ್ಪರ ಮಾತಾಡಿಕೊಳ್ಳುವಂತೆ, ಇಬ್ಬರೂ ದೃಷ್ಟಿಯಿಂದಲೇ ಮಾತಾಡುತ್ತಿದ್ದುದನ್ನು ಕಂಡ.

ಅನಂತರವೂ ಜೀನ್‌ವಾಲ್‌ಜೀನ್ ಲಕ್ಸಂಬರ್ಗಿಗೆ ಕೋಸೆಟ್ಟಿಸಮೇತನಾಗಿ ಹೋಗಿದ್ದಾಗ, ಮೇರಿಯಸ್ ಅಡಗಿಕೊಂಡೇ ಕೋಸೆಟ್ಟಿಯೊಡನೆ ದೃಷ್ಟಿಸಂಭಾಷಣೆ ನಡೆಸುತ್ತಿದ್ದುದನ್ನು ಜೀನ್‌ವಾಲ್‌ಜೀನ್ ಕಂಡ. ಆಗ ಅವನಿಗೆ ಮಹತ್ತಾದ ಕೋಪವೂ ದುಃಖವೂ ಬಂದುವು.

"ಏನು, ಆ ಅಪರಿಚಿತ ಯುವಕ ಕೋಸೆಟ್ಟಿಯ ಪಿತನಾದ ನನ್ನೆದುರು ಪರಿಸ್ಥಿತಿ ಹೇಗಿದೆಯೆಂದು ಪರೀಕ್ಷಿಸುತ್ತಿರುವನೇನು? ಪ್ರೀತಿಸುವ ಹಕ್ಕು ಯುವಕನದು ಎಂಬ ಅಭಿಪ್ರಾಯದಿಂದ, ಅಹಂಭಾವದಿಂದ, ಈ ಪೋರ ನನ್ನ ಜೀವನದಲ್ಲಿ ಅಕ್ರಮವಾಗಿ ಪ್ರವೇಶಿಸಿ, ನನ್ನನ್ನು ಹೊರದಬ್ಬುವನೇನು? ಅವನಿಗೆ ಬೇಕಾದುದೇನು? ಹುಡುಗಿಯೇ ಅಥವಾ ಹುಡುಗಿಯ ಪ್ರೇಮವೇ? ಅವನು ಇವಳನ್ನು ಪಡೆಯುವುದಾದರೆ ನನ್ನ ಗತಿ? ಅರುವತ್ತು ವರ್ಷಗಳ ಕಾಲ ಮನುಷ್ಯ ಅನುಭವಿಸಬಹುದಾದ ಎಲ್ಲ ಕಷ್ಟ, ದುಃಖಗಳನ್ನು ನಾನೊಬ್ಬನೇ ಅನುಭವಿಸಿ ಪಡೆದಿರುವ ನನ್ನ ಹೃದಯ

ಮಂದಿರದ ದೇವತೆಯನ್ನು ಅಪಹರಿಸಲು ಈ ಯುವಕ ಹೊಂಚುಹಾಕುತ್ತಿರುವನೇ? ಪತ್ನಿ, ಸಂಸಾರಗಳನ್ನು ಪಡೆಯದೆ, ರಸ್ತೆ, ಮರ, ಬಂಡೆ, ಜೈಲುಗಳಲ್ಲಿ ರಕ್ತ ಸುರಿಸಿ, ಜೀವನಪಥದಲ್ಲಿ ನನಗೆದುರಾಗಿ ಬಂದಿರುವ ಪ್ರತಿ ಮುಳ್ಳಿನಲ್ಲಿ ನನ್ನ ಮಾಂಸದ ತುಂಡುಗಳನ್ನು ಹರಿದಿಟ್ಟೂ ಬದುಕಿ, ನಾನು ಮಾಡಿದ ಪಾಪಕೃತ್ಯಗಳಿಗಾಗಿ ಪಶ್ಚಾತ್ತಾಪಪಡುತ್ತ, ಇತರರು ನನಗೆ ಮಾಡಿದ ಅಪರಾಧಸಹಸ್ರಗಳಿಗೆ ಅವರನ್ನು ಕ್ಷಮಿಸುತ್ತ ಬಂದು ಈಗಲಾದರೂ ನೆಮ್ಮದಿಯಿಂದ ಬದುಕೋಣವೆಂದಿರುವಾಗ, ನನ್ನ ಮುದ್ದುಹಸುಳೆ ಕೋಸೆಟ್ಟೆಯನ್ನು ಯೌವನಮದದಲ್ಲಿ ಈ ಹೇಸರಕತ್ತೆ ಹೊತ್ತು ಸಾಗಿಸುವುದೇನು? ಈ ಉದ್ದ ಕಾಲಿನ ಕತ್ತೆ ಯಾರಿರಬಹುದು?" ಎಂದು ಜೀನ್‌ವಾಲ್‌ಜೀನ್ ತನ್ನೊಳಗೆ ತಾನು ಗ್ರಹಿಸಿಕೊಂಡು, ವಿಚಾರಿಸಿಕೊಂಡು, ದ್ವೇಷ, ಕ್ರೋಧ ಗಳನ್ನು ತಾಳಿದ. ಆಗ, ಸಂಯಮನದಿಂದ ದಮನಮಾಡಿದ್ದ ಅವನ ಹಿಂದಿನ ಪಾಶವೀಸ್ವಭಾವ ಹೃದಯದ ಕತ್ತಲೆಯ ಕಂದರಗಳಿಂದ ಹೊಗೆಯಾಗಿ, ಜ್ವಾಲೆಯಾಗಿ ಎದ್ದು, ತಾನೇಕೆ ಒಬ್ಬ ನರ ಭಕ್ಷಕನೇ ಆಗಿಬಿಡಬಾರದೆಂದೂ ಅವನಿಗೆ ತೋರುತ್ತಿತ್ತು.

ಆದರೆ, ಅವನು ಕೋಸೆಟ್ಟೆಯನ್ನು ನೆನೆದೊಡನೆ, ಅವನ ಹೃದಯದಲ್ಲಿ ಪ್ರತಿಷ್ಠಿತವಾಗಿದ್ದ ಅವಳ ಶಾಂತಮೂರ್ತಿ ಆ ದ್ವೇಷಾಗ್ನಿಯನ್ನು ನಂದಿಸಿ, ಶಾಂತಿಯಿತ್ತು, ಜೀನ್‌ವಾಲ್‌ಜೀನನನ್ನು ಒಬ್ಬ ಸಾಕ್ಷಾತ್ ಸಾತ್ತ್ವಿಕ ಮಹರ್ಷಿಯಂತೆಯೇ ಮಾಡಿಬಿಡುತ್ತಿತ್ತು.

ಆದರೂ, ಅವನನ್ನು ಒಂದು ಬಗೆಯ ದುಃಖ ಸದಾ ಬಾಧಿಸುತ್ತಿತ್ತು. ಕೆಲವೊಮ್ಮೆ ಜೀನ್ ವಾಲ್‌ಜೀನ್ ತನ್ನ ಮಂಚದಲ್ಲೇ ತಲೆಯನ್ನು ಕೈಯಲ್ಲಿ ಹಿಡಿದು ಕುಳಿತು, ಚಿಂತಾಕ್ರಾಂತನಾಗಿ, ರಾತ್ರಿಯನ್ನೆಲ್ಲ ಹಾಗೆಯೇ ಕಳೆಯುವುದೂ ಇತ್ತು. ತಾವಿಬ್ಬರೂ ಕಾನ್ವೆಂಟನ್ನು ಬಿಡದೆ, ಅಲ್ಲೇ ಇದ್ದಿದ್ದರೆ, ಇಂದಿನ ಈ ದುಃಖದ ಪರಿಸ್ಥಿತಿ ತಪ್ಪುತ್ತಿತ್ತೆಂದು ಗ್ರಹಿಸುತ್ತ ನಡೆದು ಹೋಗಿದ್ದ ಕಾರ್ಯಗಳಿಗಾಗಿ ಕೆಲವೊಮ್ಮೆ ಅವನು ಮರುಗುವುದೂ ಇತ್ತು.

ಇತ್ತ, ಕೋಸೆಟ್ಟೆಯೂ ತನ್ನ ಕಡೆಯ ದುಃಖವನ್ನು ಮೌನವಾಗಿ ಸಹಿಸುತ್ತಿದ್ದಳು. ರೂ' ಪ್ಲುಮೆಟಿನ ಹೊಸಮನೆಗೆ ಬಂದು ಮೇರಿಯಸ್ ಕಾಣದಂತೆ ಆದುದಕ್ಕಾಗಿ ಅವಳು ಸದಾ ತಪಿಸು ತ್ತಿದ್ದಳು. ಆದರೂ, ಇವರಿಬ್ಬರೂ ತಂತಮ್ಮ ದುಃಖಗಳನ್ನು ಒಬ್ಬರಲ್ಲೊಬ್ಬರು ಹೇಳಿಕೊಳ್ಳದೆ, ಅವರವರೇ ಸಹಿಸುತ್ತ, ಒಬ್ಬರನ್ನೊಬ್ಬರು ನೋಡಿದಾಗ ದುಃಖಮಿಶ್ರಿತ ನಗುವನ್ನಾಡಿಕೊಳ್ಳು ತ್ತಿದ್ದರು.

೭. ನೊಂದ ಹೃದಯದ ಮೇಲೆ ಕೈದಿಗಳ ದಾಳಿ

ಇವರಿಬ್ಬರ ಪೈಕಿ ಜೀನ್‌ವಾಲ್‌ಜೀನನಷ್ಟು ಕೋಸೆಟ್ಟೆ ದುಃಖಿತೆಯಾಗಿರಲಿಲ್ಲ. ಏಕೆಂದರೆ ಯೌವನಕ್ಕೆ ವಾರ್ಧಕ್ಯಕ್ಕಿಂತ ದುಃಖನಿವಾರಕ ಶಕ್ತಿ ಹೆಚ್ಚು ಇರುತ್ತದೆ. ಕೋಸೆಟ್ಟೆ ತನ್ನ ಕೈಯಿಂದ ಜಾರುವಳೆಂಬ ಶಂಕೆ ಜೀನ್‌ವಾಲ್‌ಜೀನನನ್ನು ಸದಾ ಬಾಧಿಸುತ್ತಿತ್ತು. ಇದರಿಂದ ಅವನು ಕೊರಗು ತ್ತಲೇ ಇದ್ದ. ಈ ದುಃಖ ಒಮ್ಮೊಮ್ಮೆ ಅತಿಯಾಗಿ ತೋರಿ ಅವನು ಕೇವಲ ಚಿಕ್ಕ ಬಾಲಕನಂತೆಯೇ ವರ್ತಿಸಿಬಿಡುತ್ತಿದ್ದ. ಸಹಿಸಲಸಾಧ್ಯವಾದ ವಿಪರೀತ ದುಃಖವನ್ನು ಮೂರ್ಛೆತಳೆದು ಮರೆಸಿ ಕೊಳ್ಳುವ ಪ್ರಕೃತಿನಿಯಮದಂತೆ, ಜೀನ್‌ವಾಲ್‌ಜೀನ್ ತನ್ನ ದಾರುಣತೆಯನ್ನು ದುಃಖರಹಿತ ಪರಿಸ್ಥಿತಿಯ ಹಸುಳೆಗಳಂತೆ ವರ್ತಿಸಿ ಹಗುರಗೊಳಿಸಿಕೊಳ್ಳುತ್ತಿದ್ದುದು ಸ್ವಾಭಾವಿಕವೇ ಆಗಿದೆ.

ಕೊನೆಗೆ, ಯೋಚಿಸಿ, ಯೋಚಿಸಿ, ಕೋಸೆಟ್ಟೆಯ ಮನಸ್ಸನ್ನು ಪ್ರಕೃತಿ ಸೌಂದರ್ಯದ ಕಡೆಗೆ

ತಿರುಗಿಸಿದರೆ ಅವಳು ಮೇರಿಯುಸನನ್ನು ಮರೆಯಬಹುದೆಂದು ಅವಳನ್ನು ಕರೆದುಕೊಂಡು ಹೋಗಿ ಜನರಿಲ್ಲದ ಕಡೆಗಳಲ್ಲಿ ತಿರುಗಾಡಿಸುತ್ತ, ಅಲ್ಲಿ ಹೂದೋಟ, ಹೊಲ, ಮೈದಾನ, ಸೂರ್ಯೋದಯ, ಸೂರ್ಯಾಸ್ತಮಾನಗಳನ್ನು—ಮುಖ್ಯವಾಗಿ ರಮಣೀಯ ದೃಶ್ಯಗಳನ್ನು—ತೋರಿಸತೊಡಗಿದ. ಒಮ್ಮೆ ಸೂರ್ಯೋದಯ ನೋಡಲೋಸ್ಕರವೇ ಅವರಿಬ್ಬರೂ ಅರುಣೋದಯಕ್ಕೂ ಮುಂಚೆ ಎದ್ದು, ಒಂದು ಸುಂದರ ಪ್ರದೇಶದಲ್ಲಿ ಹೋಗಿ ಕುಳಿತರು.

ಆಗ ಸೂರ್ಯೋದಯಕ್ಕೆ ಇನ್ನೂ ಸ್ವಲ್ಪ ಸಮಯವಿತ್ತು. ಪೂರ್ವದಿಗಂತದಲ್ಲಿ ಸ್ವರ್ಣಪ್ರಭೆ ಎದ್ದು, ಕ್ರಮೇಣ ರಕ್ತವರ್ಣ ತಳೆಯುತ್ತ ಆಕಾಶದಲ್ಲಿ ಪಶ್ಚಿಮಕ್ಕೆ ಪಸರಿಸತೊಡಗಿತ್ತು. ಆದರೆ ಪಶ್ಚಿಮ ದಿಕ್ಕಿನಲ್ಲಿ ಆಕಾಶ ನೀಲವಾಗಿದ್ದು, ಅಲ್ಲೇ ಕೆಲವು ನಕ್ಷತ್ರಗಳು ಮಿನುಗುತ್ತ ಪೂರ್ವವನ್ನೇ ನೋಡುತ್ತಿದ್ದುವು. ಭೂಮಿಯ ಮೇಲೆ ಮಾತ್ರ ಸರ್ವತ್ರ ಕತ್ತಲು ಪಸರಿಸಿತ್ತು. ಉಷಾಪಕ್ಷಿಯೊಂದು ಬಲು ಎತ್ತರದಲ್ಲಿ ಹಾರಾಡುತ್ತ ತನ್ನ ಪುಟ್ಟ ಉಷಃಪ್ರಾರ್ಥನೆಯನ್ನು ಬೃಹದಾಕಾಶಕ್ಕೆ ಸಲ್ಲಿಸುತ್ತ, ಅಲ್ಲಿಯ ಪ್ರಶಾಂತತೆಯನ್ನು ಎತ್ತಿ ತೋರಿಸುತ್ತಿತ್ತು. ಗಗನವನ್ನು ಭೇದಿಸಿಕೊಂಡು ಎದ್ದಿದ್ದ ಗೋಪುರ ಬಾನಿನ ಹಿನ್ನೆಲೆಯಲ್ಲಿ ಚಿತ್ರಿತವಾಗಿ ಕರಾಳವಾಗಿ ಕಾಣುತ್ತಿತ್ತು. ತನ್ನ ಪಾರ್ಥಿವ ಶರೀರದ ಸೆರೆಯಲ್ಲಿ ಸಿಕ್ಕಿದ್ದ ಭವ್ಯ ಆತ್ಮವೊಂದು ಆಗ ತಾನೆ ಬಿಡುಗಡೆಹೊಂದಿ ದೇವಲೋಕಾಭಿಮುಖವಾಗಿ ಹೊರಟಿದ್ದಂತೆ, ಈ ಕರಾಳ ಗೋಪುರದ ತುದಿಯಲ್ಲೇ ಶುಕ್ರ ಥಳಥಳಿಸುತ್ತಿತ್ತು. ಬಲುದೂರದಲ್ಲೊಬ್ಬ ಕಾರ್ಮಿಕ ಪಾದಚಾರಿಯಾಗಿ ತನ್ನ ಕಾರ್ಖಾನೆ ಕಡೆಗೆ ಸಾಗುತ್ತಿದ್ದ. ಇಂಥ ಸುಂದರ ಸನ್ನಿವೇಶದಲ್ಲೂ ಜೀನ್‌ವಾಲ್‌ಜೀನ್ ಮಾತ್ರ ಕೋಸೆಟ್ಟಿಯ ಕುರಿತು ಚಿಂತಿಸುತ್ತ, ಮೈಮರೆತು ಕುಳಿತಿದ್ದ. ಕೋಸೆಟ್ಟಿ ಅಲ್ಲಿಯ ಸಮಯ, ಸನ್ನಿವೇಶಗಳ ಪ್ರಭಾವದಿಂದ ಆನಂದ ಭರಿತಳಾಗಿಯೇ ಇದ್ದಳು.

ಆಗ ಸ್ವಲ್ಪ ದೂರದಿಂದ ಗುಡುಗೋ ಕಾರ್ಖಾನೆಗಳ ಗಲಭೆಯೋ ಅಥವಾ, ಮಹಾ ವಿಪ್ಲವಗಳ ಮಹಾರವವೋ ಎಂಬಂತೆ ಸ್ವಲ್ಪವೇ ಮಾತ್ರ ಗಾಳಿಯಲ್ಲಿ ತೇಲಿ ಬರುತ್ತಿದ್ದ ಸದ್ದೊಂದು ಕೇಳತೊಡಗಿತು. ಅದು ಕ್ರಮೇಣ ಸ್ಪಷ್ಟವಾಗುತ್ತ ಬಂದು, ಅದರ ಹಿಂದೆ ಒಂದು ಮಹಾಜಂತು ತನ್ನ ಸಹಸ್ರ ಪಾದಗಳಿಂದ ಹರಿದುಕೊಂಡು ಬಂತು. ಈ ದೃಶ್ಯ ಕಂಡು ಕೋಸೆಟ್ಟಿ ಗಾಬರಿಗೊಂಡು ಜೀನ್‌ವಾಲ್‌ಜೀನನನ್ನು ಕರೆದು, “ಅಪ್ಪಾ! ಅತ್ತ ನೋಡು, ಅದೇನು?” ಎಂದು ಕೇಳಿದಳು. ಆದರೆ, ಈ ಪ್ರಶ್ನೆ ಕೇಳುವಾಗ ಕೋಸೆಟ್ಟಿಗೂ ಜೀನ್‌ವಾಲ್‌ಜೀನನಿಗೂ ಮಧ್ಯೆ ಮೇರಿಯುಸನಂಥ ಒಂದು ಅಡ್ಡ ಗೋಡೆಯಿದ್ದುದರಿಂದ, ಜೀನ್‌ವಾಲ್‌ಜೀನನಿಗೆ ಈ ಪ್ರಶ್ನೆಯೇ ಕೇಳಿಸಲಿಲ್ಲ !

ಅಷ್ಟರಲ್ಲೇ ಆ ಮಹಾಜಂತು ಮುಂದುವರಿಯುತ್ತ ಬಂದು ಸೂರ್ಯೋದಯದ ಪ್ರಥಮ ಕಿರಣಗಳಿಗೆ ಎದುರಾಯಿತು. ಅದು ರಸ್ತೆಯಲ್ಲೇ ನಿಂತದ್ದು ಕಂಡಿತು. ನಿಜವಾದ ಒಂದು ಜಂತು ಅದಲ್ಲವೆಂದೂ ಆರೇಳು ಬಂಡಿಗಳು ಒಂದರ ಹಿಂದೆ ಮತ್ತೊಂದರಂತೆ, ಸರಪಳಿಯ ಭಾಗಗಳಂತೆ, ಸಾಲಾಗಿ ಬಂದದ್ದೆಂದೂ ಗೊತ್ತಾಯಿತು. ಕೋಸೆಟ್ಟಿ ಇದನ್ನೆಲ್ಲ ಕಂಡಳು. ಬಂಡಿಗಳ ಉದ್ದಕ್ಕೂ ಇಡಲಾಗಿದ್ದ ಉದ್ದುದ್ದದ ಹಲಗೆಯ ಮೇಲೆ ಒಬ್ಬರ ಬೆನ್ನಿಗೆ ಮತ್ತೊಬ್ಬರು ಒರಗಿ ಒತ್ತುಕೊಟ್ಟುಕೊಂಡು, ರಸ್ತೆಗೆ ಮುಖ ಹಾಕಿಕೊಂಡು, ತಮ್ಮ ಬರೇ ಕಾಲುಗಳನ್ನು ಜೋಲು ಬಿಟ್ಟುಕೊಂಡು, ಸರಪಳಿಗಳಿಂದ ಬಂಧಿತರಾಗಿದ್ದ ಕೈದಿಗಳು ನೂರಾರು ಜನ ಕುಳಿತಿದ್ದರು. ಈ ಸಾವಿರಕಾಲಿನ ಜಂತು ರಸ್ತೆಯಲ್ಲಿ ನಿಂತಕೂಡಲೇ, ಈ ಮೆರವಣಿಗೆಯನ್ನು ವ್ಯವಸ್ಥೆಯಿಂದ ಸಾಗಿಸುತ್ತಿದ್ದ ಸಶಸ್ತ್ರ ಸೈನಿಕರು ತಮ್ಮ ಕುದುರೆಗಳಿಂದ ಇಳಿದು ಬೆತ್ತಗಳಿಂದ ಕೈದಿಗಳ ಅಂಗಾಲುಗಳಿಗೆ ಹೊಡೆಯತೊಡಗಿದರು. ಬೆತ್ತದ ಬಡಿತಕ್ಕೆ ಕೈದಿಗಳು ಚಳಕಿ, ನಡುಗಿ, ರೋದಿಸಿ,

ಮೂರ್ಛಿತರಾಗಿ, ಆ ಏಳು ಬಂಡಿಗಳಷ್ಟು ಉದ್ದಕ್ಕೂ ಪೆಟ್ಟಾಗಿದ್ದ ಒಂದು ಮಹಾಸರ್ಪವು ಎಳೆದಾಡುವಂತೆ ಚಲನೆಯುಂಟಾಯಿತು. ಈ ದೃಶ್ಯವನ್ನು ನೋಡಲು ಆಸುಪಾಸಿನ ಕೆಲವು ಪೋಲಿಗಳೂ ಚಿಕ್ಕ ಬಾಲಕರೊಡನೆ ಕೆಲವು ಮುದುಕಿಯರೂ ಬಂದು ನೆರೆದಿದ್ದರು.

ಕೋಸೆಟ್ಟಿ ಇದನ್ನೆಲ್ಲ ನೋಡಿ ಸಹಿಸಲಾರದೆ ಹೋದಳು. ಜೀನ್‌ವಾಲ್‌ಜೀನ್ ಈ ಶಬ್ದದಿಂದ ಎಚ್ಚೆತ್ತು, ದೃಶ್ಯ ನೋಡಿ, ತನ್ನ ಹಿಂದಿನ ಅನುಭವಗಳನ್ನು ನೆನೆದುಕೊಂಡು, ಸಹಿಸಲಾರದೆ, ಕ್ರೋಧಾವಿಷ್ಟನಾಗಿ ಕಣ್ಣುಗಳನ್ನು ಹೊರಳಿಸುತ್ತಿದ್ದ. ಅಲ್ಲಿಂದ ಕೂಡಲೇ ಎದ್ದು ಹೋಗಬೇಕೆಂದು ಅವನು ಇಚ್ಛಿಸುತ್ತಿದ್ದರೂ ಅವನ ಕಾಲುಗಳು ಚಲಿಸಲಿಲ್ಲ. ಕೋಸೆಟ್ಟಿ ಜೀನ್‌ವಾಲ್‌ಜೀನನ ಮುಖ ಕಂಡು, ಮತ್ತಷ್ಟು ಗಾಬರಿಗೊಂಡು, ಅವನ ಮನಸ್ಸನ್ನು ತನ್ನ ಕಡೆಗೆ ತಿರುಗಿಸಿಕೊಳ್ಳಲು ಮತ್ತು ತಾನು ತಿಳಿದುಕೊಳ್ಳಲು ಆ ಬಂಡಿಗಳ ಕಡೆಗೆ ಕೈತೋರಿಸಿ, "ಅಪ್ಪಾ! ಅವರೆಲ್ಲ ಯಾರು?" ಎಂದು ಕೇಳಿದಳು.

"ಕೈದಿಗಳು."

"ಅವರೆಲ್ಲಿಗೆ ಹೋಗುತ್ತಿದ್ದಾರೆ?"

"ಗ್ಯಾಲಿ ಜೈಲಿಗೆ."

"ಈ ಹಿಂಸೆಯಿಂದ ಅವರು ಮನುಷ್ಯರಾಗಿ ಉಳಿಯುವರೇ?"

"ತೀರ ಅಪರೂಪ," ಎಂದು ಜೀನ್‌ವಾಲ್‌ಜೀನ್ ಗದ್ಗದ ಕಂಠದಿಂದ ಹೇಳಿದ.

"ಅಯ್ಯೋ, ಅವರ ಪೈಕಿ ಯಾರಾದರೊಬ್ಬ ನನಗೆಲ್ಲಾದರೂ ಎದುರು ಸಿಕ್ಕಿದರೆ ನಾನು ಹೆದರಿಯೇ ಸತ್ತೇನು," ಎಂದಂದುಕೊಂಡಳು ಕೋಸೆಟ್ಟಿ. ಜೀನ್‌ವಾಲ್‌ಜೀನನಿಗೆ ಈ ಮಾತು ಕೇಳಿಸಿತು. ಆದರೂ ಅವನು ಉತ್ತರ ಕೊಡಲಿಲ್ಲ. ಅವನು ಕೋಸೆಟ್ಟಿಯನ್ನು ಕರೆದುಕೊಂಡು ಮನೆಗೆ ಹೋದ.

ಕೈದಿಗಳನ್ನು ಕೋಸೆಟ್ಟಿ ನೋಡಿದ್ದು ಪ್ರಥಮಬಾರಿಯಾಗಿ ಅಂದೇ ಆಗಿತ್ತು. ಈ ಪ್ರಸಂಗ ಕಳೆದ ನಾಲ್ಕೈದು ದಿನಗಳಲ್ಲಿ ಒಂದು ದಿನ ಬೆಳಗ್ಗೆ ಜೀನ್‌ವಾಲ್‌ಜೀನ್ ಎದ್ದು ಹೂದೋಟಕ್ಕೆ ಹೋದಾಗ ಅಲ್ಲಿ ಕೋಸೆಟ್ಟಿ ಸ್ವಲ್ಪ ದೂರದಲ್ಲಿ ನಿಂತಿದ್ದಳು.

ಅವಳು ಹಾಸಿಗೆಯಿಂದೆದ್ದವಳೇ ಅಲ್ಲಿಗೆ ಬಂದಿರಬೇಕೆಂದು ತೋರುತ್ತದೆ. ಆ ದಿನದ ಹೊಸ ಉಡುಪು ಧರಿಸಿರಲಿಲ್ಲ. ಮೈ ಪೂರ ಮುಚ್ಚದ ತೆಳು ಲಂಗ ಮಾತ್ರ ತೊಟ್ಟು, ಸೂರ್ಯಕಾಂತಿ ಹೂವೊಂದನ್ನು ಗಿಡದಲ್ಲಿದ್ದಂತೆಯೇ ಹಿಡಿದುಕೊಂಡು, ಕುಸುಮಗಳನ್ನು, ತಾನು ಮಾಡುತ್ತಿದ್ದ ಕೆಲಸದ ಜ್ಞಾನವಿಲ್ಲದ ಒಂದು ವಿಧದ ಯಾಂತ್ರಿಕ ರೀತಿಯಲ್ಲಿ ಒಂದೊಂದನ್ನೇ ಕಿತ್ತು ಹಾಕುತ್ತ ಇದ್ದಳು.

ಸುಖನಿದ್ರೆಯಿಂದೆದ್ದಿದ್ದ ಅವಳ ಕಣ್ಣುಗಳು ತೇಜೋಮಯವಾಗಿದ್ದುವು. ಸುಪುಷ್ಟವಾಗಿ ಬೆಳೆದಿದ್ದ ಅವಳ ಮೈ ಬಟ್ಟೆಮುಚ್ಚದಿದ್ದಲ್ಲಿ, ಹಾಲುಕಲ್ಲಿನಲ್ಲಿ ನುಣುಪಾಗಿ ಕೆತ್ತಿಟ್ಟಂತೆ ತೋರುತ್ತಿತ್ತು. ಮಹಾಶಿಲ್ಪಿಯೊಬ್ಬ ಕೆತ್ತಿಟ್ಟಿದ್ದ ಸುಂದರ ಪ್ರತಿಮೆಯಂತೆ ತೋರುತ್ತಿದ್ದ ಕೋಸೆಟ್ಟಿಯ ಸೌಂದರ್ಯ ಅಪ್ರತಿಮವಾಗಿತ್ತು. ಹೂದೋಟ, ಹಕ್ಕಿಗಳು, ಪ್ರಭಾತದ ಗಾಳಿ ಬೆಳಕು, ಇವೆಲ್ಲವುಗಳ ಸೌಂದರ್ಯವನ್ನು ಸಹಸ್ರಪಾಲು ಮೀರುವಂತೆ ಕೋಸೆಟ್ಟಿ ಜೀನ್‌ವಾಲ್‌ಜೀನನಿಗೆ ತೋರಿದಳು. ಅವಳ ಜೀವನಚರಿತ್ರೆಯೆಲ್ಲ ಒಮ್ಮೆಗೇ ಆತನ ಮನೋಮುಕುರದಲ್ಲಿ ಬಿಂಬಿತವಾಗಿ ನಿಂತಿತು. ಆ ಪರದೆಯ ಮೇಲಿನ ಮಮತೆಯ ಚಿತ್ರಗಳಲ್ಲಿ ಲೋಪವಾಗಿದ್ದಿರಬಹುದಾದ ಅಂಶವನ್ನೆಲ್ಲ ಪೂರ್ಣಗೊಳಿಸಿ, ಇಂದು ಕೋಸೆಟ್ಟಿ ಆತನ ಎದುರು ನಿಂತಿದ್ದಳು. ಈ ಸೌಂದರ್ಯದ

ಪೂರ್ಣತೆ ಕಾಣುತ್ತ ಜೀನ್‌ವಾಲ್‌ಜೀನ್ ಆನಂದಪರವಶನಾದ. ಹೂವಿಗಿಂತ ಮೃದುವಾಗಿ, ಬಿಳುಪಾಗಿ ಕೋಮಲವಾಗಿದ್ದ ಕೋಸೆಟ್ಟಿಯ ಬೆರಳುಗಳು ಹೂವಿನ ಎಸಳುಗಳನ್ನು ಕಿತ್ತು ಬಿಸಾಡುತ್ತಿದ್ದುವು. ಕೋಸೆಟ್ಟಿ ಮನೋಮಯ ರಾಜ್ಯದಲ್ಲಿದ್ದುದರಿಂದ ಈ ಕ್ರೂರ ಕೃತ್ಯದ ಅರಿವು ಅವಳಿಗೆ ಇರಲಿಲ್ಲ.

ಜೀನ್‌ವಾಲ್‌ಜೀನ್ ಈ ಸುಂದರ ಮೂರ್ತಿಯನ್ನು ನೋಡಿ ತನ್ನ ಎಲ್ಲ ವಿಧದ ಶೋಕ, ಭಯ, ಭ್ರಾಂತಿ ಮರೆತು, ಮಗುವಾಗಿ ತಂದು, ಪ್ರೀತಿಯಿಂದ ಸಾಕಿದ ಮತ್ತು ನಿಷ್ಕಪಟ ಬುದ್ಧಿಯ ಈ ಮಗಳೊಡನೆ ಎರಡು ಮಾತಾಡಬೇಕೆಂದು ಮುಂದುವರಿದ. ಅವನ ನಡಿಗೆಯ ಸದ್ದು ಕೇಳಿ ಕೋಸೆಟ್ಟಿ ಯಾವ ಒಂದು ಹಂಸಕ್ಕೂ ಅಸಾಧ್ಯವಾದ ಚೆಲುವಿನ ತಿರುಗಿನಿಂದ ತನ್ನ ಸುಂದರ ಕತ್ತನ್ನು ಅವನತ್ತ ತಿರುಗಿಸಿ, ಜೀನ್‌ವಾಲ್‌ಜೀನನನ್ನು ನೋಡಿದಳು. ಈ ನೋಟದಿಂದ ಅವನು ಆನಂದಪರವಶನಾದ. ಕೋಸೆಟ್ಟಿ ಎಳೆಮಗುವಿನ ಸರಳತೆಯಿಂದ, ತನ್ನ ಮನಸ್ಸಿನ ಸಂಶಯ ನಿವೃತ್ತಿಗಾಗಿ, ಪ್ರೇಮಪುರಸ್ಸರವಾಗಿ ತಂದೆಯನ್ನು ಕೇಳಿದಳು, “ಅಪ್ಪಾ, ಗ್ಯಾಲಿ ಜೈಲ್ ಅಂದರೇನು?”

ಮೂರನೆಯ ಸಂಪುಟ

೧. ಹೊರಗಾಯ ಮತ್ತು ಒಳಮದ್ದು

ಜೀನ್‌ವಾಲ್‌ಜೀನ್ ಮತ್ತು ಕೋಸೆಟ್ಟಿ ಬಡವರನ್ನೂ ದುಃಖಿತರನ್ನೂ ಆಗಿಂದಾಗ್ಗೆ ನೋಡಿ ಬರುತ್ತ ಅವರಿಗೆ ಸಹಾಯ ನೀಡುತ್ತಿದ್ದರು. ಈ ವಿಧದ ಪರಿಶ್ರಮದಿಂದ ಅವರಿಬ್ಬರೂ ತಂತಮ್ಮ ದುಃಖಗಳನ್ನು ಮರೆಯಲು ಪ್ರಯತ್ನಿಸುತ್ತಿದ್ದರು. ಇಂಥ ಒಂದು ಸಂದರ್ಭದಲ್ಲೆ ಜೀನ್‌ವಾಲ್‌ಜೀನ್ ತೆನಾರ್ಡಿಯರನ ಬಲೆಗೆ ಬಿದ್ದುದು. ಆ ಬಲೆಯಿಂದ ಅವನು ತಪ್ಪಿಸಿ ಬರುವಾಗ ಅವನ ತೋಳಲ್ಲಿ ಆಳವಾದದೊಂದು ಸುಟ್ಟಗಾಯವನ್ನು ತಂದಿದ್ದ. ಈ ವಿಷಯವೆಲ್ಲ ಓದುಗರಿಗೆ ಗೊತ್ತಿದೆಯಷ್ಟೆ. ಈ ಗಾಯ ಹೇಗಾಯಿತು ಎಂಬುದನ್ನು ಮಾತ್ರ ಕೋಸೆಟ್ಟಿಗೆ ಬಲು ವಿಚಿತ್ರವಾಗಿ ವಿವರಿಸಿ, ನಿಜಸ್ಥಿತಿಯನ್ನು ಅಡಗಿಸಿ ತಿಳಿಸಿದ್ದ.

ಗಾಯ ಗುಣವಾಗಲು ಕೆಲವು ತಿಂಗಳು ಬೇಕಾಯಿತು. ಕೋಸೆಟ್ಟಿ ತಂದೆಯ ಕೈಗೆ ಮದ್ದು ಹಚ್ಚಿ ಬ್ಯಾಂಡೇಜ್ ಸುತ್ತಿ, ಅವನ ಬಳಿಯಲ್ಲೇ ಅವನ ಶುಶ್ರೂಷೆಯಲ್ಲಿ ನಿರತಳಾಗಿರುತ್ತಿದ್ದಳು. ಒಮ್ಮೆ ಅವಳು ಜೀನ್‌ವಾಲ್‌ಜೀನನಿಗಾಗಿ ಕೆಲವು ಪುಸ್ತಕಗಳನ್ನು ಗಟ್ಟಿಯಾಗಿ ಓದುತ್ತಿದ್ದಳು. ಒಂದೊಂದು ಸರ್ತಿ ಅವಳು ಕಾನ್ವೆಂಟಿನಲ್ಲಿ ಕಲಿತಿದ್ದ ಪದಗಳನ್ನೂ ಅವನ ಸಂತೋಷಕ್ಕಾಗಿ ಹಾಡುತ್ತಿದ್ದಳು. ಈ ರೀತಿ ಅವರಿಬ್ಬರೂ ಒಟ್ಟಾಗಿ ಬೆರೆತು, ಸುಖವಾಗಿ ಕೆಲವು ತಿಂಗಳ ಕಾಲ ಕಳೆದರು. ಈ ಸಂತೋಷಕಾಲದ ಕುರಿತಾಗಿ ಜೀನ್‌ವಾಲ್‌ಜೀನ್ ತನ್ನ ಮನಸ್ಸಿನಲ್ಲೇ “ಉಪಕಾರಕ್ಕೆ ಒದಗಿದ ಅಪಘಾತ” ಎಂದು ತನ್ನ ಗಾಯದ ಕುರಿತಾಗಿ ಗ್ರಹಿಸಿಕೊಂಡು, ತೆನಾರ್ಡಿಯರನನ್ನು ಮನಸ್ಸಿನಲ್ಲೇ ವಂದಿಸುತ್ತಿದ್ದ.

ಕ್ರಮೇಣ ಗಾಯ ಗುಣವಾಯಿತು. ಜೀನ್‌ವಾಲ್‌ಜೀನ್ ಮೊದಲಿನಂತೆ ಒಂಟಿಯಾಗಿ ತಿರುಗಾಡಲು ಹೋಗತೊಡಗಿದ. ಅವನು ಜನಸಮೂಹದಿಂದ ದೂರ ಇರಲು ಇಷ್ಟಪಡುತ್ತಿದ್ದುದರಿಂದ ಹೆಚ್ಚಾಗಿ ಪ್ಯಾರಿಸಿನ ಹೊರವಲಯಗಳಲ್ಲೇ ತಿರುಗಾಡಿ ಬರುತ್ತಿದ್ದ.

೨. ಒಂದು ಅಲೌಕಿಕ ಘಟನೆ

ತೆನಾರ್ಡಿಯರನ ಮಗ ಗಾವ್ರೋಚನಿಗೆ ಊಟಕ್ಕಿಲ್ಲದೆ ಎರಡು ದಿನಗಳು ಕಳೆದಿದ್ದುವು. ಎಲ್ಲೆಲ್ಲೋ ಅಲೆದು, ಎಲ್ಲಿಯೂ ಏನೂ ಸಿಕ್ಕದೆ, ಇನ್ನು ಪ್ಯಾರಿಸಿನ ಹೊರಪ್ರದೇಶದ ಸೇಬುಹಣ್ಣಿನ ತೋಟಗಳನ್ನಾದರೂ ನುಗ್ಗಿ ಹಸಿವೆ ನಿವಾರಿಸಿಕೊಳ್ಳುವುದೆಂದು ನಿಶ್ಚಯಿಸಿ ಆಸ್ಟರ್ಲಿಟ್ಸ್ ಗ್ರಾಮಕ್ಕೆ ಹೋದ. ಆದಿ ಪುರುಷ ಆ್ಯಡಮನನ್ನು ಕೆಡಿಸಿದ್ದ ಸೇಬುಹಣ್ಣು ತನ್ನನ್ನು ಉಳಿಸುವುದೆಂದೇ ಅವನ ಯೋಚನೆ.

ಹಣ್ಣು ಕದಿಯಲು ಸುಲಭವಾದ ತೋಟಗಳನ್ನು ಹುಡುಕುತ್ತಿದ್ದಾಗ ಎರಡು ತೋಟಗಳ ನಡುವೆ ಹೋಗುತ್ತಿದ್ದ ಒಂದು ಓಣಿದಾರಿ ಕಂಡ. ಅಲ್ಲಿ ಓಣಿಯ ಎರಡು ಬದಿಗಳಲ್ಲಿ ಸೇಬು ಹಣ್ಣಿನ ತೋಟಗಳಿದ್ದುವು. ಆ ತೋಟಗಳಿಗೆ ದಟ್ಟವಾಗಿ ಬೆಳೆದಿದ್ದ ಪೊದರಿನ ಬೇಲಿಗಳಿದ್ದುವು. ಆದರೆ ಪೊದರಿನ ಅಡಿಭಾಗದಲ್ಲಿ ಚಿಕ್ಕ ದೇಹಗಳು ಸುಲಭವಾಗಿ ನುಗ್ಗಬಹುದಾದಂಥ ಕಂಡಿಗಳೂ ಇದ್ದುವು. ಗಾವ್ರೋಚ್ ಅಂಥ ಒಂದು ಕಂಡಿಯಿಂದ ತೋಟದ ಒಳಗೆ ನುಗ್ಗತೊಡಗಿದ. ಆದರೆ ಅವನು ಪೂರಾ ನುಗ್ಗುವುದರ ಒಳಗೆ, ಅಲ್ಲೇ, ಅವನಿಗೆ ಹತ್ತಿರವಾಗಿ ಒಬ್ಬಳು ಕೆಲಸದ ಮುದುಕಿ ತನ್ನ ಯಜಮಾನ ಮುದುಕನೊಡನೆ ಮಾತಾಡುತ್ತಿದ್ದುದನ್ನು ಕೇಳಿ, ಅವನು ಅಲ್ಲೇ ಕುಳಿತು ಮಾತುಗಳನ್ನು ಮರೆಯಾಗಿ ಆಲಿಸತೊಡಗಿದ. ಕೆಲಸದವಳು ಅಂದಳು, "ಮಾನ್ಸೆರ್ ಮೇಬಫರೆ!"

"ಏನಮ್ಮಾ, ಪ್ಲೂಟಾರ್ಕ್?"

"ಬಾಡಿಗೆ ವಸೂಲಿಗೆ ಬಂದಿದ್ದಾರೆ."

"ಹಣವಿಲ್ಲವೆಂದು ತಿಳಿಸಮ್ಮಾ."

"ಬ್ರೆಡ್ಡಿಗಾದರೂ ದುಡ್ಡಿದೆಯೇ?"

"ಸೇಬು ಹಣ್ಣಿದೆಯಲ್ಲಾ!"

"ಚಳಿಗೆ ಸೌದೆ?"

"ಬಿಸಿಲು ಕಾಸಿದರೆ ಸರಿ!"

"ಹೀಗೆಷ್ಟು ದಿನ ಪೂರೈಸೀತು, ಮಾನ್ಸೆರರೇ?"

"ಸಾಯುವ ತನಕ!"

ಈ ಮಾತುಗಳು ಗಾವ್ರೋಚನ ಮನವನ್ನು ಕರಗಿಸಿದುವು. ಅವನು ಅಲ್ಲೇ ಅಡಗಿ ಮಲಗಿದ. ಸೇಬುಹಣ್ಣು ಕದಿಯುವ ಮನಸ್ಸು ಆಗ ಅವನಿಗೆ ಬರಲಿಲ್ಲ.

ಗಾವ್ರೋಚ್ ಹೀಗೆ ಮಲಗಿ ಒಂದೆರಡು ನಿಮಿಷ ಕಳೆಯುವುದರ ಒಳಗೆ ಅವನಿಗಿಂತ ಕೊಂಚ ಮುಂದೆ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಕಾದಾಡುತ್ತಿದ್ದುದನ್ನು ಕಂಡ. ಅವರಿಬ್ಬರೊಳಗೆ ಮುಷ್ಟಾ ಮುಷ್ಟಿಯಾಗಿ, ಕೆಳಗೆ ಬಿದ್ದಿದ್ದಾತ ಮೇಲಾಗಿ ಕೆಳಗಿದ್ದಾತನನ್ನು ಚೆನ್ನಾಗಿ ಗುದ್ದಿ ಎದ್ದು ನಿಂತ. ಹೀಗೆ ಎದ್ದು ನಿಂತವನು ವೃದ್ಧನಾಗಿದ್ದರೂ ಬಹುಬಲಾಢ್ಯನಾಗಿದ್ದ. ಕೆಳಗೆ ಬಿದ್ದವನು ಮೆಲ್ಲಗೆ ಎದ್ದು ನಿಂತ ಕೂಡಲೇ ಈ ವೃದ್ಧ ಆತನ ಎರಡೂ ಕೈಗಳನ್ನು ಉಕ್ಕಿನ ಇಕ್ಕುಳದಲ್ಲಿ ಹಿಡಿದಂತೆ ಹಿಡಿದುಕೊಂಡು, ಅವನಿಗೆ ಬುದ್ಧಿವಾದ ಹೇಳತೊಡಗಿದ. ಹೀಗೆ ಬಂಧಿತನಾಗಿ ಬೋಧನೆಗೆ ಒಳಗಾದವ ಮೊಂಟ್‌ಪಾರ್ನಸನೆಂದು ಗಾವ್ರೋಚನಿಗೆ ಗೊತ್ತಾಯಿತು.

ಗಾವ್ರೋಚ್ ಕುತೂಹಲದಿಂದ ವೃದ್ಧನ ಮಾತು ಕೇಳತೊಡಗಿದ. ವೃದ್ಧ ಹೇಳುತ್ತಿದ್ದ, "ನೋಡು ಯುವಕಾ! ನಿನಗೆ ಇಪ್ಪತ್ತು ವರ್ಷ ಪ್ರಾಯ ಪೂರಾ ಆಗದು. ನಿನ್ನ ಪ್ರಾಯ ಮತ್ತು

ದೇಹ ಋಜುಮಾರ್ಗದಲ್ಲಿ ಬದುಕುವುದಕ್ಕೆ ತಕ್ಕವಾಗಿವೆ. ಸೋಮಾರಿತನದ ಮತ್ತು ಸುಲಭದ ಸಂಪಾದನೆಗಳನ್ನು ಕಲಿಯಬೇಡ. ದುಡಿದು ಬದುಕುವುದು ಪ್ರಕೃತಿ ನಿಯಮ. ದುಡಿತವನ್ನು ನೀನಾಗಿಯೇ ಅಂಗೀಕರಿಸದಿದ್ದರೆ, ಅದಾಗಿಯೇ ನಿನ್ನನ್ನು ಜೈಲಲ್ಲಿ ಅಪ್ಪಿಕೊಳ್ಳುವುದು. ಕಾರ್ಮಿಕ ನಾಗಿ, ಹಾಗೆ ಸಾಧ್ಯವಾಗದಿದ್ದರೆ ದಿನಕೂಲಿಯವನಾಗಿ, ಸ್ವತಂತ್ರಜೀವನ ನಡೆಸದಿದ್ದರೆ ಗುಲಾಮ ನಾಗಿ ಪರತಂತ್ರಿಯಾಗುವೆ. ಇತರರು ಹಾಡುತ್ತಿರುವಾಗ ನೀನು ಅಳುತ್ತಿರಬೇಕಾಗುವುದು. ತಿದಿ ಯಲ್ಲಿ, ಚಮ್ಮಟೆಯಲ್ಲಿ, ಉಳಿಯಲ್ಲಿ, ನೇಗಿಲಿನಲ್ಲಿ, ಶ್ರಮವಿದೆಯೆಂದು ನಿನಗೆ ತೋರಿದರೆ ನೀನು ಜೈಲನ್ನು ಸೇರಿದಾಗ ಅವೆಲ್ಲ ವಿನೋದ, ವಿಶ್ರಾಂತಿ, ಸುಖವೆಂದೇ ನಿನಗೆ ತೋರದಿರವು. ನೀನು ಈಗಲೇ ದುಡಿತ ಅಭ್ಯಸಿಸು. ಇಂದು ನೀನು ಸ್ವಲ್ಪ ಹಣಕ್ಕಾಗಿ ನನ್ನ ಜೀವ ತೆಗೆಯಲು ಹವಣಿಸಿದೆ ಯಷ್ಟೆ! ಇಗೋ ನನ್ನ ಹಣದ ಚೀಲ—ನಾನಾಗಿಯೇ ಕೊಡುವೆನು. ನೀನಿದನ್ನು ತೆಗೆದುಕೊಂಡು ಉತ್ತಮನಾಗಲು ಪ್ರಯತ್ನಿಸು.'' ಈ ರೀತಿ ಹೇಳಿ ವೃದ್ಧ ತನ್ನ ಹಣದ ಚೀಲವನ್ನು ಮೊಂಟ್ ಪಾರ್ನಿಸನಿಗೆ ಕೊಟ್ಟ. ಇವನು ಹಣದ ಚೀಲವನ್ನು ತನ್ನ ಅಂಗಿಯ ಹಿಂಬದಿಯ ಜೇಬಿನಲ್ಲಿಟ್ಟು ಕೊಂಡು, ವೃದ್ಧನಿಂದ ನಾಲ್ಕು ಹೆಜ್ಜೆ ಈಚೆಗೆ ಬರುವಾಗಲೇ, ''ಕಳ್ಳ, ಠಕ್ಕ, ಇವನ ಬುದ್ಧಿವಾದ ಇವನಲ್ಲೇ ಇರಲಿ,'' ಎಂದು ಗೊಣಗುಟ್ಟಿಕೊಂಡು ಹೊರಟು ಹೋದ. ಆ ವೃದ್ಧ ನಮ್ಮ ಪರಿಚಿತ ಜೀನ್‌ವಾಲ್‌ಜೀನನೆಂದು ವಾಚಕರು ಊಹಿಸಿದ್ದರೆ, ಊಹನೆ ಸರಿಯೇ ಆಗಿದೆ.

ಬೆಕ್ಕು ಇಲಿಯನ್ನು ಹೊಂಚು ಹಾಕಿ ನೋಡುವಂತೆ ಗಾವ್ರೋಚ್ ಮೊಂಟ್‌ಪಾರ್ನಿಸನನ್ನು ಅಡಗಿ ನೋಡುತ್ತಲೇ ಇದ್ದ. ಅವನು ಗಾವ್ರೋಚನ ಹತ್ತಿರವೇ ದಾಟಿದಾಗ, ಇವನು ನಿಶ್ಶಬ್ದವಾಗಿ ಎದ್ದು, ಮೊಂಟ್‌ಪಾರ್ನಿಸನನ್ನು ನಾಲ್ಕು ಹೆಜ್ಜೆ ಹಿಂಬಾಲಿಸಿ, ಅವನ ಜೇಬಿನಿಂದ ಹಣದ ಚೀಲ ಕದ್ದ. ಮೊಂಟ್‌ಪಾರ್ನಿಸ್ ಕಾಣದಷ್ಟು ದೂರ ಹೋದ ಮೇಲೆ ಆ ಚೀಲವನ್ನು ಫಾದರ್ ಮೇಬಫರ ಕಾಲುಬುಡಕ್ಕೆ ಎಸೆದು ಓಡಿಹೋದ.

ಚೀಲವೊಂದು ಎದುರು ಬಿದ್ದುದನ್ನು ಕಂಡು ಫಾದರ್ ಮೇಬಫ್ ಒಮ್ಮೆ ಗಾಬರಿಗೊಂಡರು. ಅನಂತರ ಅದನ್ನು ಹೆಕ್ಕಿ ಕೆಲಸದವಳೆದುರು ಬಿಚ್ಚಿ ನೋಡಿದರು. ಅದರಲ್ಲಿ ಸ್ವಲ್ಪ ಚಿಲ್ಲರೆ ಹಣವೂ, ನಾಲ್ಕು ಚಿನ್ನದ ನೆಪೋಲಿಯನ್ ನಾಣ್ಯಗಳೂ ಇದ್ದುವು. ಇವನ್ನೆಲ್ಲ ನೋಡಿ ಕೆಲಸದ ಹೆಂಗುಸು, ''ಇದೊಂದು ಅಲೌಕಿಕ ಘಟನೆ, ಸ್ವರ್ಗದಿಂದಲೇ ಈ ಹಣ ಬಂದಿರಬೇಕು,'' ಎಂದು ಹೇಳಿದಳು.

ನಾಲ್ಕನೆಯ ಸಂಪುಟ

೧. ಕೋಸೆಟ್ಟಿಗಾದ ಭಯ

ಕೋಸೆಟ್ಟೆಯ ದುಃಖ ತಾನಾಗಿಯೇ ಶಮನವಾಗತೊಡಗಿತ್ತು. ಮೇರಿಯಸನನ್ನು ಕಾಣದೆ ನಾಲ್ಕೈದು ತಿಂಗಳುಗಳು ಕಳೆದಿದ್ದುದರಿಂದ, ಮತ್ತು, ಅವಳ ಎಳೆ ಪ್ರಾಯ, ತಂದೆಯ ಮೇಲಿನ ಪ್ರೇಮ, ಋತು ವ್ಯತ್ಯಾಸ, ಹೂದೋಟದ ಸೊಬಗು—ಈ ಎಲ್ಲವೂ ಕೂಡಿ ದುಃಖವನ್ನು ಶಮನ ಮಾಡುತ್ತಿದ್ದುವು. ಶೋಕಾಗ್ನಿ ಪೂರ್ಣ ತಣಿದಿತ್ತೇ, ಅಥವಾ, ಬೂದಿ ಮುಚ್ಚಿದ ಕೆಂಡದಂತಿತ್ತೇ ಎಂದು ಹೇಳುವುದು ಕಷ್ಟ.

ಈ ಸಮಯದಲ್ಲಿ ತನ್ನ ಸೈನ್ಯದ ಕೆಲಸದ ಸಂಬಂಧವಾಗಿ ಲೆಫ್ಟಿನೆಂಟ್ ತಿಯೊಡ್ಯೂಲ್ ಗಿಲೆನಾರ್ಮಂಡ್ ಕೋಸೆಟ್ಟೆಯ ಮನೆ ಎದುರಿಗಾಗಿ ಪ್ರತಿ ದಿನವೂ ದಾಟುತ್ತಿದ್ದ. ಒಮ್ಮೆ ಅವನ ಸುಂದರ ರೂಪವನ್ನು ಕಂಡು ಕೋಸೆಟ್ಟೆಗೆ ಮೇರಿಯಸನ ನೆನಪಾಯಿತು. ಅವಳ ಹೃದಯದ

ಅಂತರಾಳದಲ್ಲಿ ಅಡಗಿದ್ದ ಮೇರಿಯಸನನ್ನು ಎಬ್ಬಿಸುವ ಒಂದು ಚಿಕ್ಕ ಅಲೆಯಂತೆ ತಿಯೊಡ್ಯೂಲನನ್ನು ಕಂಡುದರ ಪರಿಣಾಮವಾಗಿತ್ತು.

ಇದೇ ಸಮಯದಲ್ಲಿ ಮತ್ತೊಂದು ಸಂಗತಿ ನಡೆಯಿತು.

ಜೀನ್‌ವಾಲ್‌ಜೀನನ ಕೈಯಲ್ಲಿದ್ದ ಹಣ ಮುಗಿದಾಗಲೆಲ್ಲ ಅವನು ಪ್ಯಾರಿಸ್ ಬಿಟ್ಟು ಎಲ್ಲಿಗೋ ಹೋಗಿ ಬರುವುದಿತ್ತು. ಹೀಗೆ ಅವನು ಹೋಗಿದ್ದ ಒಂದು ರಾತ್ರಿ, ಕೋಸೆಟ್ಟಿಗೆ ತನ್ನ ಶಯನ ಕೊಠಡಿಯ ಹೊರಗೆ ಯಾರೋ ನಡೆದುಬಂದಂತೆ ಸಪ್ಪುಳ ಕೇಳಿಸಿತು. ಇವಳು ಕಿಟಕಿ ಕದಗಳನ್ನು ತೆರೆದು ಹೊರಗೆ ನೋಡಿದಾಗ ಅಲ್ಲೆಲ್ಲೂ, ಯಾರನ್ನೂ ಕಾಣಲಿಲ್ಲ. ಈ ರೀತಿ ಇವಳು ಎರಡು ರಾತ್ರಿಗಳಲ್ಲೂ ಸದ್ದು ಕೇಳಿ, ಪರೀಕ್ಷಿಸಿ ನೋಡಿ, ಯಾರನ್ನೂ ಕಾಣಲಿಲ್ಲ. ಮೂರನೇ ದಿನ ರಾತ್ರಿ ಪರೀಕ್ಷಿಸಬೇಕೆಂದು ಹೂದೋಟದಲ್ಲಿ ತಿರುಗಾಡತೊಡಗಿದಳು. ಅವಳಲ್ಲಿದ್ದ ಜಿಪ್ಸಿ ಸ್ವಭಾವ ದಿಂದಲೂ (ಊರಿಂದೂರಿಗೆ ತಿರುಗಾಡಿ, ವಿಧವಿಧದ ಕಾರ್ಯ, ಆಟ ವಿದ್ಯಮಾನಗಳಿಂದ ಜೀವಿಸುವ ಒಂದು ಜಾತಿ ಜನರ ಸಾಹಸವನ್ನು 'ಜಿಪ್ಸಿ ಸ್ವಭಾವ' ಎಂದು ಕವಿ ಕರೆದಿದ್ದಾನೆ) ಆಗ ರಾತ್ರಿ ಎಂಟು ಗಂಟೆ ಪೂರಾ ಆಗಿರಲಿಲ್ಲವಾದುದರಿಂದಲೂ ಈ ರೀತಿ ಧೈರ್ಯವಾಗಿ ಪರೀಕ್ಷಿಸ ತೊಡಗಿದಳು. ಈ ಪರೀಕ್ಷೆಯ ಕಾಲದಲ್ಲಿ ಒಂದಾವೃತ್ತಿ ಅವಳ ಪಕ್ಕದಲ್ಲೇ ಹ್ಯಾಟ್ ಧರಿಸಿದ್ದ ಒಬ್ಬ ಮನುಷ್ಯನ ನೆರಳನ್ನು ಕಂಡಳು. ಆ ನೆರಳನ್ನು ಕಂಡು ಅವಳು ಗಾಬರಿಗೊಂಡು ಹಿಂತಿರುಗಿ ನೋಡಿದಾಗ ಅಲ್ಲಿ ಯಾರೂ ಇರಲಿಲ್ಲ. ನೆರಳೂ ಮಾಯ. ಇದನ್ನು ಕಂಡು ಮನೆ ಸೇರಿ ಬಾಗಿಲು ಬಂದೋಬಸ್ತು ಮಾಡಿಕೊಂಡಳು.

ಜೀನ್‌ವಾಲ್‌ಜೀನ್ ಹಿಂತಿರುಗಿ ಬಂದ ದಿನವೇ ಈ ನೆರಳಿನ ಕುರಿತು ನಡೆದ ಸಂಗತಿಗಳನ್ನು ಅವನಿಗೆ ತಿಳಿಸಿದಳು. ಅವನು ತಮಾಷೆ ಮಾಡಿ ಈ ವಿಷಯವನ್ನು ಮುಗಿಸಿಬಿಡಬಹುದೆಂದು ಊಹಿಸಿಕೊಂಡಿದ್ದ ಕೋಸೆಟ್ಟಿಗೆ, ಅವನ ಮುಖದಲ್ಲಿ ತೋರಿದ್ದ ಒಂದು ವಿಧದ ಚಿಂತೆ ಮತ್ತು ಆಶ್ಚರ್ಯ ಕಂಡು ಮತ್ತಷ್ಟು ಭಯವಾಯಿತು. ಜೀನ್‌ವಾಲ್‌ಜೀನ್ ಹೆಚ್ಚು ಮಾತಾಡದೆ ಎಡೆ ಬಿಡದೆ ಮೂರು ದಿನಗಳಲ್ಲಿ ಈ ಕುರಿತು ಸಂಶೋಧನೆ ನಡೆಸಿದ.

ಮೂರನೆಯ ದಿನ ರಾತ್ರಿ ಜೀನ್‌ವಾಲ್‌ಜೀನ್ ತನ್ನ ಸಂಶೋಧನೆಯಲ್ಲಿ ಜಯ ಹೊಂದಿ, ಗಹಗಹಿಸಿ ನಗುತ್ತ, ಕೋಸೆಟ್ಟಿಯನ್ನು ಉದ್ಯಾನಕ್ಕೆ ಬರಹೇಳಿದ. ಕೋಸೆಟ್ಟಿ ಹೋಗಿ ತಂದೆಯ ಬಳಿ ನಿಂತಕೂಡಲೇ ಆ ದಿನದ ಸೊಗಸಾದ ಚಂದ್ರಪ್ರಭೆಯಲ್ಲಿ ಹ್ಯಾಟ್‌ಧರಿಸಿ ನಿಂತಿದ್ದಂತೆ ತೋರುತ್ತಿದ್ದ ಒಂದು ನೆರಳನ್ನು ಜೀನ್‌ವಾಲ್‌ಜೀನ್ ನೆಲದಮೇಲೆ ತೋರಿಸಿದ. ಆ ನೆರಳು ಹೊಗೆ ನಳಿಗೆಯ ತುದಿಯ ಉರುಟು ಮುಚ್ಚಳ ಸಮೇತವಾದ ನೆರಳೆಂದು ಇಬ್ಬರೂ ತಿಳಿದು ಗಹಗಹಿಸಿ ನಕ್ಕರು. ಈ ನೆರಳು ಅವರನ್ನು ಸಮಾಧಾನಗೊಳಿಸಿತು. ಆದರೆ ಹೊಗೆನಳಿಗೆಯ ನೆರಳು ಯಾರೇ ಹಿಂತಿರುಗಿ ನೋಡಿದಾಗಲೂ ಅಲುಗಾಡದೆ ನಿಂತಿತ್ತೆಂಬುದನ್ನೂ ಕೊಸೆಟ್ಟಿ ನೆರಳನ್ನು ಕಂಡಿದ್ದ ಸ್ಥಳ ಅದಲ್ಲವೆಂಬುದನ್ನೂ ಸಂಶೋಧನೆಯ ಜಯದ ಸಂತೋಷದಲ್ಲಿ ಇಬ್ಬರೂ ಮರೆತಿದ್ದರು. ಆದರೆ, ಇನ್ನೂ ಕೆಲವು ದಿನಗಳಲ್ಲಿ ಇದರಂತೆಯೇ ಮತ್ತೊಂದು ಘಟನೆ ನಡೆಯಿತು.

೨. ಪಾಷಾಣತಳದಲ್ಲಿ ಹೃದಯಸುಮ

ಕೋಸೆಟ್ಟಿಯ ಹೂದೋಟದ ಅಂಚಿನಲ್ಲಿ ರಸ್ತೆಯ ಕಡೆಗೆ, ಒಂದು ಕಲ್ಲು ಬೆಂಚು ಇತ್ತು. ಅದಕ್ಕೂ ರಸ್ತೆಗೂ ನಡುವೆ ಸರಳಿನ ಬೇಲಿ ಮತ್ತು ಪೊದರು ಇದ್ದುವು. ಬೆಂಚಿನಲ್ಲಿ ಕುಳಿತು

ರಸ್ತೆಯ ಕಡೆ ನೋಡಿದರೆ ಅಲ್ಲಿ ಹೋಗುತ್ತಿದ್ದವರನ್ನು ಸುಲಭವಾಗಿ ನೋಡಬಹುದಿತ್ತಾದರೂ ರಸ್ತೆಯಲ್ಲಿ ಹೋಗುವವರಿಗೆ ಬೆಂಚಿನಲ್ಲಿದ್ದವರು ಕಾಣಿಸುತ್ತಿರಲಿಲ್ಲ. ಆದರೆ ಯಾರಾದರೂ ರಸ್ತೆಯ ಅಂಚನ್ನು ದಾಟಿ ಬೇಲಿಯ ಪಕ್ಕಕ್ಕೆ ಬಂದು ಸರಳಿನ ಸೆರೆಯಿಂದ ಕೈನೀಡಿದರೆ ಆ ಬೆಂಚನ್ನು ಮುಟ್ಟಬಹುದಿತ್ತು.

ಜೀನ್‌ವಾಲ್‌ಜೀನ್ ಮನೆ ಬಿಟ್ಟು ಹೋಗಿದ್ದ ಒಂದು ದಿನ ಕೋಸೆಟ್ಟೆ ಆ ಬೆಂಚಿನ ಮೇಲೆ ಕುಳಿತು ಗುರಿಯಿಲ್ಲದ ಯೋಚನೆಗಳಲ್ಲಿ ಮಗ್ನಳಾಗಿದ್ದಳು. ಯೋಚನೆಗಳು ದುಃಖತರದವಾಗಿದ್ದುವು. ತಾಯಿಯ ಕುರಿತು ಯೋಚಿಸುತ್ತಿದ್ದಳು. ಆ ಯೋಚನೆ ಬಂದದ್ದು ಹೇಗೆ ಅಥವಾ ಮೃತಳಾಗಿದ್ದ ಅವಳ ತಾಯಿಯ ಆತ್ಮವೇ ಬಂದು ಕೋಸೆಟ್ಟೆಯ ಮನಸ್ಸಿನಲ್ಲಿ ಅಂಥ ಯೋಚನೆಗಳನ್ನು ತಂದುಕೊಟ್ಟಿತೋ ಹೇಳುವುದು ಕಷ್ಟ. ಹೀಗೆ ಯೋಚಿಸಿ, ಯೋಚಿಸಿ, ಅಲ್ಲಿ ಕುಳಿತಿರಲಾರದೆ ಅಲ್ಲಿಂದೆದ್ದು ಹೋದಳು.

ಸ್ವಲ್ಪ ಹೊತ್ತಿನ ಮೇಲೆ ಆ ಪಾಗಾರದಲ್ಲಿ ಅತ್ತಿತ್ತ ಅಲೆದಾಡಿ ಮನಸ್ಸು ನೆಮ್ಮದಿ ಹೊಂದಿದಾಗ ಪುನಃ ಅದೇ ಬೆಂಚಿನ ಕಡೆಗೆ ಬಂದಳು. ಅಲ್ಲಿಗೆ ಬರುತ್ತಿದ್ದಾಗಲೇ ದೂರದಿಂದಲೇ ಅದರ ಮೇಲೊಂದು ಕಲ್ಲನ್ನು ಕಂಡಳು. ಸ್ವಲ್ಪ ಹೊತ್ತಿನ ಮೊದಲು ಅಲ್ಲಿಂದೆದ್ದು ಹೋಗುವಾಗ ಇಲ್ಲದಿದ್ದ ಕಲ್ಲು ಈಗ ಅಲ್ಲಿದ್ದುದನ್ನು ಕಂಡು ಅವಳಿಗೆ ಭಯವಾಯಿತು. ಇದೇನು ಮಾಯವೇ ಮಾಟವೇ ಎಂದಂಜುತ್ತ ಓಡಿಹೋದಳು.

ದರೋಡೆಕಾರರು ತಮ್ಮ ಕಾಂಪೌಂಡಿಗೆ ಬಂದಿರಬೇಕೆಂದು ಕೋಸೆಟ್ಟೆ ಊಹಿಸಿಕೊಂಡು ಮನೆಯೊಳಗೆ ಯಾರಾದರೂ ಇರುವರೋ ಎಂದು ಹುಡುಕುವಂತೆ ಟೌಸೆಂಟಳಿಗೆ ಹೇಳಿದಳು. ಇವಳೋ ಮೊದಲೇ ಪುಕ್ಕಲು. ಮನೆಯನ್ನೆಲ್ಲ ಹುಡುಕಿ ನೋಡಿದಳು. ಎಲ್ಲೂ ಯಾರನ್ನೂ ಕಾಣದಿದ್ದರೂ, ಬಾಗಿಲುಗಳನ್ನೆಲ್ಲ ಹಾಕಿ, ಅಗಣಿ ಎಳೆದು ಬಂದೋಬಸ್ತು ಮಾಡಿದಳು.

ಮರುದಿನ ಬೆಳಗ್ಗೆ ಕೋಸೆಟ್ಟೆ ಹಿಂದಿನ ದಿನ ಸಂಜೆ ನಡೆದಿದ್ದ ಸಂಗತಿಗಳನ್ನೆಲ್ಲ ಗ್ರಹಿಸಿ ನಕ್ಕಳು. ಅವಳು ಕಂಡ ಕಲ್ಲು ಹಿಂದೆ ತಾನು ನೋಡಿದ್ದ ನೆರಳಿನಂತೆಯೇ ಭ್ರಮೆಯೇ ಆಗಿರಬೇಕೆಂದು ಭಾವಿಸಿದಳು. ಸುಪ್ರಭಾತದ ನವಚೈತನ್ಯದಲ್ಲಿ ಯಾವಾಗಲೂ ರಾತ್ರಿಯ ಭಯದ ಸ್ಥಾನವನ್ನು ಕುತೂಹಲ ಆಕ್ರಮಿಸುವುದು. ಆ ಬೆಂಚನ್ನು ಆಗಲೇ ನೋಡಿ ಬರಬೇಕೆಂದು ಕೋಸೆಟ್ಟೆಗೆ ತೋರಿ ಅದರತ್ತ ಹೋದಳು. ಹಿಂದಿನ ದಿನ ಕಂಡಿದ್ದ ಕಲ್ಲು ಅಲ್ಲಿ ಹಾಗೆಯೇ ಇತ್ತು. ಆಗ ಹಗಲು ವೇಳೆ ಆಗಿದ್ದುದರಿಂದ ಕೋಸೆಟ್ಟೆ ವಿಶೇಷ ಹೆದರದೆ ಕಲ್ಲನ್ನು ಅಲುಗಾಡಿಸಿ ನೋಡಿದಳು. ಆಗ ಅದರ ಅಡಿಯಲ್ಲಿ ಒಂದು ಬಿಳಿ ಲಕ್ಕೋಟೆ ಕಂಡಳು.

ಲಕ್ಕೋಟೆಯನ್ನು ಆಶ್ಚರ್ಯದಿಂದ ಬಿಚ್ಚಿ ನೋಡಿದಳು. ಒಳಗೆ ಹತ್ತಾರು ಕಾಗದಗಳಲ್ಲಿ ತುಂಬ ಬರಹವಿತ್ತು. ಮುದ್ದಾದ ಅಕ್ಷರದಲ್ಲಿತ್ತು. ಕೋಸೆಟ್ಟೆಗೆ ಕಾರಣ ತಿಳಿಯದೆ ಕೈ ನಡುಗಿತು—ಅದೊಂದು ಪತ್ರವಿರಬಹುದೇ, ಅಥವಾ ಬರಹಮಾತ್ರವೇಯೋ ಎಂದು ಅದರ ಆದಿ ಮತ್ತು ಅಂತ್ಯವನ್ನು ಮೇಲಿಂದ ಮೇಲೆ ನೋಡಿದಳು. ಯಾರಿಂದ ಬಂದಿದ್ದುದು ಯಾರಿಗೆ ಎಂಬ ವಿವರವೇನೂ ಅದರಲ್ಲಿರಲಿಲ್ಲ. ಅಂತೂ ಆ ಪತ್ರ ಸರಳಿನ ಸೆರೆಯಿಂದ ಬಂದಿರಬೇಕೆಂದೂ ಯಾರದೋ ಒಂದು ಕೈ ಬೆಂಚಿನ ಮೇಲೆ ಆ ಪತ್ರವನ್ನಿಟ್ಟಿರಬೇಕೆಂದೂ ನಿಶ್ಚೈಸಿದಳು.

ಅವಳ ಆಶ್ಚರ್ಯ ಇಷ್ಟಕ್ಕೆ ಮುಗಿಯಿತು. ಆದರೆ ಕುತೂಹಲ ಮಾತ್ರ ಕೆರಳಿತು. ಪತ್ರದಲ್ಲಿ ಏನಿರಬಹುದೆಂದು ಒಂದು ಕಡೆ ಭಯ, ಇನ್ನೊಂದು ಕಡೆ ಆಸೆ ಮೂಡಿದುವು. ಮನಸ್ಸು ಮಿಂಚಿತು. ಭಾವನೆ ಸ್ಪಷ್ಟವಾಗತೊಡಗಿತು. ಪತ್ರವನ್ನು ನೋಡಲಾರದೆ ಆಕಾಶವನ್ನು ನೋಡಿ

ದಳು, ನೆಲವನ್ನು ನೋಡಿದಳು. ಅವಳು ನೋಡಿದ್ದು ನೆಲವನ್ನೋ ತನ್ನಂತರಂಗವನ್ನೋ ಯಾರು ಹೇಳಬಲ್ಲರು? ಏನೇ ಇರಲಿ. ಅವಳ ಅಂತರಂಗದಲ್ಲಿ ಅವಳಿಂದ ಎದುರಿಸಲಾಗದಿದ್ದ ಒಂದು ಪ್ರೇರಣೆಯೆದ್ದು, ಅದರಿಂದ ಪತ್ರವನ್ನೋದಲೇಬೇಕೆಂದು ತೋರಿತು. ಓದಿದಳು. ಅದರಲ್ಲಿ ಈ ಮುಂದಿನ ಮಾತುಗಳು ಬೇರೆಬೇರೆಯಾಗಿ ಬರೆಯಲ್ಪಟ್ಟಿದ್ದುವು :

* ಪ್ರೇಮವು ವಿಶ್ವವನ್ನು ವ್ಯಕ್ತಿಯಾಗಿಯೂ ವ್ಯಕ್ತಿಯನ್ನು ವಿಶ್ವವಾಗಿಯೂ ಮಾಡಬಲ್ಲುದು.
* ನಕ್ಷತ್ರಗಳಿಗೆ ದೇವಗಂಧರ್ವರು ಅರ್ಪಿಸುವ ಆರಾಧನೆಯೇ ಪ್ರೇಮ.
* ಕೆಲವು ಚಿಂತನೆಗಳೇ ಪ್ರಾರ್ಥನೆಗಳು. ದೇಹ ಯಾವ ಸ್ಥಿತಿಯಲ್ಲಿದ್ದರೂ ಮನಸ್ಸು ಸಾಷ್ಟಾಂಗ ಪ್ರಣಾಮಗೈಯುತ್ತಿರುವುದೂ ಇದೆ.
* ವಿರಹಿಗಳು ಸಹಸ್ರಾರು ಕಲ್ಪನೆಗಳನ್ನು ಮಾಡಿಕೊಂಡು ಸಂತೋಷಿಸುವರು. ಅವರಿಗೆ ಕಲ್ಪನೆಗಳೂ ವಾಸ್ತವಗಳೇ ಆಗಿ ತೋರುವುವು. ಅವರು ಪರಸ್ಪರ ಕಾಣದಿರಬಹುದು. ಪತ್ರ ಬರೆಯಲಾರದೆ ಇರಬಹುದು. ಆದರೆ ತಮ್ಮ ಸಂಪರ್ಕ ಬೆಳೆಸಿಕೊಳ್ಳಲು ಅವರಿಗೆ ವಿಚಿತ್ರ ಸಾಧನಗಳಿವೆ. ಹಕ್ಕಿಗಳ ಹಾಡು, ಸೂರ್ಯಪ್ರಕಾಶ, ಮರುತನ ನಿಡುಸುಯಿಲು, ನಕ್ಷತ್ರಗಳ ಮಿನುಗು. ಅರ್ಥಾತ್, ವಿಶ್ವದ ನಿರ್ಮಾಣಗಳೆಲ್ಲ ಅವರ ಸಾಧನಗಳು. ಏಕಾಗಬಾರದು? ಪ್ರೇಮದ ಸಹಾಯಕ್ಕಾಗಿ ತಾನೇ ವಸ್ತುಗಳ ನಿರ್ಮಾಣವಾದುದು? ಯಾವ ವಸ್ತು ತಾನೇ ಪ್ರೇಮದ ಅಡಿಯಾಳಾಗಲೊಲ್ಲದು? ಪ್ರೇಮದ ಶಕ್ತಿ ಜಗತ್ತನ್ನೇ ಜಯಿಸುವಷ್ಟಿದೆ.
* ಓ ವಸಂತ! ನೀನೇ ಅವಳಿಗಿರುವ ನನ್ನ ಪತ್ರ.
* ಮನುಷ್ಯನ ಭವಿಷ್ಯವನ್ನು ಪ್ರೇಮ ನಿರ್ಮಿಸಬಲ್ಲಷ್ಟು ಸುಂದರವಾಗಿ ಜ್ಞಾನ ನಿರ್ಮಿಸಲಾರದು. ಅನಂತಕಾಲಕ್ಕೂ ವ್ಯಾಪಿಸಬಲ್ಲಂಥಾದ್ದು ಅಕ್ಷಯವೂ ಆಗಿರಬೇಕಷ್ಟೆ. ಪ್ರೇಮ ಅನಂತವ್ಯಾಪಿಯೂ ಅಕ್ಷಯವೂ ಆಗಿದೆ.
* ದೇವಲೋಕದ ಪೂರ್ಣನು ದೇವರಾಗಿರುವಂತೆ ಮನುಷ್ಯಲೋಕದ ಪೂರ್ಣನು ಮನುಷ್ಯನೇ ಆಗಿರುವನು. ಪ್ರೇಮ ಅಪೂರ್ಣವನ್ನರಿಯದು. ಅದು ಈ ಲೋಕಕ್ಕೆ ಬರುವಾಗ ಪೂರ್ಣವಾಗಿಯೇ ಬರುವುದು. ಆದ್ದರಿಂದಲೇ ಮನುಷ್ಯ ಪಡೆಯುವ ಅನಿರ್ವಚನೀಯ ಆನಂದವನ್ನು ದೇವರೂ ಹೆಚ್ಚಿಸಲಾರ. ಪ್ರೇಮ ಎಂದೂ ಹಳತಾಗದು. ಅದು ಎಂದೂ ಹೊಸತೂ ಆಗದು. ಪ್ರೇಮಭರಿತನಾದವನಿಗೆ ದೇವರು ಮತ್ತೇನನ್ನೂ ಎಷ್ಟನ್ನೂ ಹೊಸತಾಗಿ ಕೊಡಲಾರ. ದೇವರು ಕೊಡುವುದಿದ್ದರೆ, ಪ್ರೇಮಕ್ಕೆ ಅನಂತ ಬಾಳನ್ನು ಮಾತ್ರ ಕೊಡಬಲ್ಲ.
* ನೀನು ನಕ್ಷತ್ರಗಳನ್ನು ಎರಡು ಕಾರಣಗಳಿಂದ ನೋಡಿ ಸಂತೋಷಿಸುವೆ. ಅದು ಪ್ರಕಾಶಿಸುತ್ತಿದೆಯೆಂಬುದು; ಅದನ್ನು ಅರಿಯಲಾರೆಯೆಂಬುದು! ಬಾನಿನಲ್ಲಿರುವ ನಕ್ಷತ್ರ ಏನು ವಿಶೇಷ? ನಿನ್ನ ಬಳಿಯಲ್ಲೇ ಇರುವ ಸ್ತ್ರೀ ಆ ನಕ್ಷತ್ರಕ್ಕಿಂತಲೂ ವಿಶೇಷಳು. ಅವಳು ಜಾಜ್ವಲ್ಯಮಾನಳೂ ಅಗಮ್ಯಳೂ ಹೌದು.
* ಇದನ್ನು ಗ್ರಹಿಸಿರುವಿಯೇನು? ನಿನ್ನೆದುರಾಗಿ ದಾಟಿದ ಸ್ತ್ರೀ ನಿನ್ನ ಹೃದಯಕ್ಕೆ ಬೆಳಕನ್ನು ಬೀರಿದಂದಿನಿಂದ ನೀನು ಪರತಂತ್ರನಾಗಿರುವೆ. ಅಂದರೆ, ನೀನವಳನ್ನು ಅನನ್ಯವಾಗಿ ಪ್ರೀತಿಸತೊಡಗಿರುವೆ! ಇನ್ನು ನೀನು ಮಾಡತಕ್ಕದ್ದು ಮತ್ತೇನೂ ಇಲ್ಲ. ಅವಳ ಕುರಿತು ನಿರಂತರವೂ ಏಕಾಗ್ರತೆಯಿಂದ ಧ್ಯಾನಿಸಿ, ಆ ಧ್ಯಾನದಿಂದಲೇ ಅವಳು ನಿನ್ನನ್ನು ಚಿಂತಿಸುವಂತೆ ಮಾಡಬೇಕು, ಅಷ್ಟೇ!

* ಪ್ರೇಮ ಪ್ರಾರಂಭಿಸಿದುದನ್ನು ದೇವರು ಮಾತ್ರ ಪೂರೈಸಬಲ್ಲ.
* ಪರಿಶುದ್ಧ ಪ್ರೇಮ ದುಃಖಭಾವನೆಯಿಂದ ಕೂಡಿರಬಹುದು. ಅದು ಪ್ರೇಯಸಿಯ ಕರವಸ್ತ್ರವನ್ನು ಕಂಡು ಆನಂದಿಸಬಹುದು. ಉಂಗುರ ಪಡೆದು ನಲಿಯಬಹುದು. ಪ್ರೇಮದ ವೈಚಿತ್ರ್ಯಗಳ ಪೂರೈಕೆಗೆ ಅನಂತಕಾಲವೇ ಬೇಕಾಗಬಹುದು. ಪ್ರೇಮ ಅಣುವಾಗಿ ತೋರಿದಾಗಲೇ ಬೃಹತ್ತಾಗಿಯೂ ಇರಬಲ್ಲದು.
* ಅವಳು ಲಕ್ಸಂಬರ್ಗಿಗೆ ಈಗಲೂ ಹೋಗುತ್ತಿರುವಳೇ? ಇಲ್ಲ, ಸರ್. ಇಗರ್ಜಿಗೆ ಪ್ರಾರ್ಥನೆಗಾಗಿ ಹೋಗುತ್ತಿಲ್ಲವೇ? ಗೊತ್ತಿಲ್ಲ. ಈಗಲೂ ಅವಳು ಈ ಮನೆಯಲ್ಲಿ ಇದ್ದಾಳೆಯೇ? ಬೇರೆ ಕಡೆಗೆ ಹೋಗಿರುತ್ತಾಳೆ, ಸರ್, ಎಲ್ಲಿಗೆ? ವಿಳಾಸ ತಿಳಿಯೆ.
* ದೇವರೇ ನನ್ನ ಜೀವವನ್ನೇ ನಾನು ಹುಡುಕುವ ಪ್ರಸಂಗ ಬಂತೇ! ಎಂಥ ದುಃಖದ ಸಂಗತಿ!
* ಪ್ರೇಮವೂ ಮೋಹವೂ ಪರಸ್ಪರ ಹೋಲಬಹುದಾದರೂ ಪ್ರೇಮಕ್ಕೆ ಹಸುಳೆಯ ಸರಳತೆಯಿದೆ, ಮೋಹಕ್ಕೆ ಹೀನ ಸಂಕುಚಿತ ಭಾವ ಮೊದಲಾದ ದೋಷಗಳಿವೆ. ಮನುಷ್ಯನನ್ನು ಹೀನತ್ವಕ್ಕೆ ಸೆಳೆಯುವ ವಿಷಯಗಳನ್ನು ತಿರಸ್ಕರಿಸುವ ಸರಳ ಹಸುಳೆಯನ್ನಾಗಿಸುವ ಭಾವನೆಗಳನ್ನು ಆದರದಿಂದ ಗೌರವಿಸು.
* ನಾನು ಅಕಸ್ಮಾತ್ತಾಗಿ ಕಗ್ಗತ್ತಲೆಯಲ್ಲಿ ಸಿಕ್ಕಿಬಿದ್ದುದು ಹೇಗೆಂದು ಗೊತ್ತಿದೆಯೇ? ಬೆಳಕನ್ನು ತಂದಿದ್ದ ಸ್ತ್ರೀಯೋರ್ವಳು ಆ ಬೆಳಕಿನೊಂದಿಗೆ ದೇವಲೋಕಕ್ಕೆ ಹಾರಿ ಹೋಗಿರುವಳು.
* ಭಕ್ತರೂ ಜ್ಞಾನಿಗಳೂ ತಮ್ಮ ಜೀವನವನ್ನು ದೇವರು ಕೊಟ್ಟಂತೆ—ಕಷ್ಟವಾದರೆ ಕಷ್ಟವನ್ನೇ—ಅನುಭವಿಸುವರು. ಅಸ್ಪಷ್ಟವಾದ, ಅಗಮ್ಯವಾದ, ಪಾರಲೌಕಿಕ ಜೀವನದ ಪ್ರಥಮ ಹೆಜ್ಜೆಯೇ ಈ ವಿಧದ ತಾಳ್ಮೆ. ಪರಲೋಕದ ಪ್ರಥಮಾನುಭವ ಮರಣಾನಂತರ ಆಗಬೇಕಷ್ಟೆ. ಆಗ ಅಗಮ್ಯವಾದುದು ಗಮ್ಯವಾಗುವುದು, ಅಸ್ಪಷ್ಟವಾದುದು ಸ್ಪಷ್ಟವಾಗುವುದು. 'ಸ್ಪಷ್ಟ,' 'ಗಮ್ಯ' ಈ ಶಬ್ದಗಳನ್ನು ಗ್ರಹಿಸಿನೋಡಿ. ಸ್ಪಷ್ಟವಾಗಲೂ ಗಮ್ಯವಾಗಲೂ ಪರಿಮಿತಿಯಿರಬೇಕಷ್ಟೆ! ಹೀಗೆ ಸತ್ತನಂತರ ದರ್ಶನವಾಗುವುದು ಪರಿಮಿತಿಯುಳ್ಳದ್ದಾದರೆ, ಬದುಕಿರುವಾಗಲೇ ದರ್ಶನವಾಗಬಲ್ಲದ್ದು ಅಪರಿಮಿತಿಯುಳ್ಳದ್ದು! ಅದೇ ಪ್ರೇಮ. ಆದ್ದರಿಂದಲೇ ಪ್ರೀತಿಸಿ, ಪ್ರೀತಿಗಾಗಿ ದುಃಖಿಸಿ, ಅಂತೂ ಪ್ರೇಮಮಯ ಜೀವನವನ್ನು ನಡೆಯಿಸಿ. ಆಕಾರ, ಬಣ್ಣ, ದೇಹ ಇವನ್ನು ಮಾತ್ರ ಪ್ರೀತಿಸುವವನ ಬಾಳು ಬಲು ದುಃಖಕರ. ಅವಕ್ಕೆಲ್ಲ ಮರಣ ಅಂತ್ಯ ಎಸಗುವುದು. ಆತ್ಮವನ್ನು ಪ್ರೀತಿಸಿ. ಪುನಃ ಪುನಃ ಅದರ ದರ್ಶನವಾಗುವುದು.
* ಪ್ರೇಮಭರಿತನಾಗಿದ್ದ ಯುವಕನೊಬ್ಬನನ್ನು ದಾರಿಯಲ್ಲಿ ಕಂಡೆ: ಹಳೆ ಹ್ಯಾಟ್ ಧರಿಸಿದ್ದ. ಹರಿದಿದ್ದ ಕೋಟ್ ತೊಟ್ಟಿದ್ದ. ಸವೆದಿದ್ದ ಮೆಟ್ಟನ್ನು ಮೆಟ್ಟಿದ್ದ. ಅವನ ಸರ್ವಾಂಗದಲ್ಲೂ ಬಡತನದ ಬೂದಿ ಮುಚ್ಚಿದ್ದರೂ ಅವನ ಅಂತರಂಗದ ಪ್ರೇಮಜ್ಯೋತಿ ಮಾತ್ರ ಮುಖದಿಂದ ಸೂಸುತ್ತಿತ್ತು.

೩. ಪತ್ರ ದೊರೆತನಂತರ ಕೋಸೆಟ್ಟೆ

ಪತ್ರವನ್ನೋದಿ ಕೋಸೆಟ್ಟೆ ಸ್ವಲ್ಪ ಹೊತ್ತು ಆನಂದ ಪರವಶಳಾಗಿ ಕುಳಿತಿದ್ದಳು. ಆಗಲೇ ಹಿಂದೆ ಕೆಲವುಬಾರಿ ರಸ್ತೆಯಲ್ಲಿ ದಾಟಿದ್ದ ಸುಂದರ ಪುರುಷ ಸೈನ್ಯಾಧಿಕಾರಿ ಅವಳೆದುರಿಗೆ ದಾಟಿದ. ಅವನು

ಕೋಸೆಟ್ಟಿಗೆ ಬಲು ಕುರೂಪಿಯಾಗಿ ತೋರಿದ. ಪತ್ರಗಳನ್ನು ಪುನಃ ಪುನಃ ಓದಿದಳು. ಅವುಗಳ ಬರಹ ಬಲು ಸೊಗಸಾಗಿದೆಯೆಂದು ತಿಳಿದಳು.

ಅವುಗಳಲ್ಲಿದ್ದ ವಿಷಯವನ್ನು ಅವಳು ಹಿಂದೆಲ್ಲಿಯೂ ಓದಿರಲಿಲ್ಲ. ಕಾನ್ವೆಂಟಿನಲ್ಲಿ ಅವಳಿಗೆ ಉರಿಯುತ್ತಿದ್ದ ಕುಂಟೆಯ ಕಥೆಯನ್ನು ಮಾತ್ರ ಹೇಳಿದ್ದರೇ ಹೊರತಾಗಿ ಅದರ ಪ್ರಕಾಶದ ಕುರಿತು ಏನೂ ಹೇಳಿರಲಿಲ್ಲ. ಈ ಪತ್ರದಲ್ಲಿ ಪ್ರೇಮ, ದುಃಖ, ದೈವಲೀಲೆ, ಅನಂತಮಹಿಮೆ, ಅನಂತಕಾಲ ಮುಂತಾದ ಜೀವನಸೌಂದರ್ಯದ ತಿರುಳನ್ನೇ ಕಂಡಳು. ಪ್ರೇಮಮಂದಿರದ ಗರ್ಭಗುಡಿಯ ಬಾಗಿಲನ್ನು ತೆರೆದು ತೋರಿಸಿತು. ಪತ್ರವನ್ನು ಯಾರು ಯಾರಿಗೆ ಬರೆದಿದ್ದರೆಂಬುದು ಅದರಲ್ಲಿ ಕಂಡು ಬರದಿದ್ದರೂ ಅದು ಮೇರಿಯಸನಿಂದ ತನಗೇ ಬಂದದ್ದೆಂದು ಕೋಸೆಟ್ಟಿ ತಿಳಿದಳು. ಆ ಪತ್ರದಲ್ಲಿ ಏನನ್ನೂ ಯಾಚಿಸಿರಲಿಲ್ಲ. ಶ್ಮಶಾನದಲ್ಲಿ ಕಾಲಿಟ್ಟು ದೇವಲೋಕಕ್ಕೆ ಕೈನೀಡಿದ್ದ ಮಹಾ ವ್ಯಕ್ತಿಯೊಬ್ಬನ ಹೃದಯದ ಸಾರ ಬಿಂದುಬಿಂದುವಾಗಿ ಅದರಲ್ಲಿ ಸಂಗ್ರಹವಾಗಿತ್ತು. ಅದು ಮಾನವನಿಂದ ದೇವರಿಗೆ ಅರ್ಪಿಸಲ್ಪಡಬಹುದಾಗಿದ್ದ ಆಭರಣದಂತಿತ್ತು.

ಕೋಸೆಟ್ಟಿಯ ಪ್ರೇಮಜ್ಯೋತಿಗೆ ಆ ವರೆಗೆ ಮುಸುಕಿದ್ದ ಮಂಜು ಕರಗಿ ಜ್ಯೋತಿ ಪ್ರಜ್ವಲಿಸ ತೊಡಗಿತು. ಪತ್ರವನ್ನು ಅವಳು ತನ್ನ ಹೃದಯಕ್ಕೆ ಸಮೀಪವಾಗಿ ಒಳರವಕೆಯ ಒಳಗಿಟ್ಟು ಕೊಂಡಳು. ತನಗೆ ಒದಗಿದ್ದ ಆನಂದಾತಿಶಯಕ್ಕಾಗಿ ದೇವರನ್ನು ನೆನೆನೆನೆದು, ದೇವರು ಹೀಗೂ ಅನುಗ್ರಹಿಸುವುದಿದೆಯೇ ಎಂದು ಒಮ್ಮೊಮ್ಮೆ ಸಂಶಯಪಟ್ಟುಕೊಳ್ಳುತ್ತಿದ್ದಳು. ಹಾಗೆ ಸಂಶಯ ಬಂದಾಗಲೆಲ್ಲ ಪತ್ರವನ್ನು ಮುಟ್ಟಿ ನೋಡಿಕೊಂಡು, ಸಂಶಯ ನಿವಾರಿಸಿಕೊಳ್ಳುತ್ತಿದ್ದಳು. ಇದರಲ್ಲಿ ದೈವಲೀಲೆಯೇ ಇತ್ತೆಂಬುದರಲ್ಲಿ ನಮಗೆ ಸಂಶಯವಿಲ್ಲ—ಇಲ್ಲದಿದ್ದರೆ, ಜೈಲಿನ ಒಂದು ವಠಾರದಿಂದ ಇನ್ನೊಂದು ವಠಾರಕ್ಕೆ ಬಿಸಾಡಲ್ಪಟ್ಟ ಬ್ರೆಡ್ಡಿನ ತುಂಡೊಂದು ಈ ಘಟನೆಯನ್ನು ತರುವುದು ಸಾಧ್ಯವಿತ್ತೇ?

ಆ ದಿನ ಸಂಜೆಯೂ ಜೀನ್‌ವಾಲ್‌ಜೀನ್ ಎಂದಿನಂತೆ ತಿರುಗಾಡಲು ಹೋಗಿದ್ದ. ಹಿಂತಿರುಗಿ ಬರುವಾಗ ನಡುರಾತ್ರಿಯಾಗುವುದೆಂದು ಕೋಸೆಟ್ಟಿಗೆ ಗೊತ್ತಿತ್ತು. ಕಲ್ಲುಬೆಂಚಿನ ಮೇಲೆ ಹೋಗಿ ಕುಳಿತುಕೊಳ್ಳಬೇಕೆಂದು ಅವಳಿಗೆ ಇದ್ದಕ್ಕಿದ್ದ ಹಾಗೆಯೇ ಆ ದಿನ ತೋರ ತೊಡಗಿತು. ಹಳೆಲಂಗ ಬಿಚ್ಚಿ, ಕತ್ತು ಇಡೀ ಕಾಣುವಂಥ ಹೊಸಲಂಗ ಧರಿಸಿ, ತಲೆ ಬಾಚಿ, ಅಲಂಕರಿಸಿಕೊಂಡು ಹೋಗಿ ಕಲ್ಲುಬೆಂಚಿನ ಮೇಲೆ ಕುಳಿತಳು. ಬೆಂಚಿನ ಮೇಲೆ ಬೆಳಗ್ಗೆ ಇದ್ದ ಕಲ್ಲು ಆಗಲೂ ಇತ್ತು. ಕೋಸೆಟ್ಟಿ ಮೇರಿಯಸನ ಚಿಂತನೆಯಲ್ಲಿ ಮಗ್ನಳಾದಳು. ನಾವು ಹಿಂತಿರುಗಿ ನೋಡದೇ ಇತರರು ಹಿಂದೆ ಇರುವುದನ್ನು ಕೇವಲ ಅಂತರಂಗ ದೃಷ್ಟಿಯಿಂದ ಕೆಲವೊಮ್ಮೆ ತಿಳಿಯುವಂತೆ, ತನ್ನ ಹಿಂದೆ ಯಾರೋ ಇರುವರೆಂದು ಆಗ ಅವಳಿಗೆ ಹಠಾತ್ತನೆ ತಿಳಿಯಿತು. ಆದರೆ, ಆ ಸಂಗತಿ ಅವಳಲ್ಲಿ ಬೆದರಿಕೆ ಉಂಟು ಮಾಡಲಿಲ್ಲ. ಅವಳು ಎದ್ದು, ಹಿಂತಿರುಗಿ ನೋಡಿದಳು—ಅಲ್ಲೇ, ಒಂದೆರಡು ಹೆಜ್ಜೆಯಷ್ಟು ಹಿಂದೆ, ಮೇರಿಯಸ್ ನಿಂತಿದ್ದ. ಅವನ ಮುಖ ಬಾಡಿತ್ತು. ನಿಲವು ಬಾಗಿತ್ತು. ತ್ರಾಣ ಕುಂದಿ, ಅವನು ಇಹಲೋಕ ಬಿಟ್ಟಿದ್ದವನಂತೆಯೂ ಪರಲೋಕಕ್ಕೆ ತಲಪದಿರುವವನಂತೆಯೂ ತೋರುತ್ತಿದ್ದ. ಅವನು ಮನುಷ್ಯನೇ ಅಶರೀರಿಯೇ ಎಂಬಷ್ಟು ಹಗುರವಾಗಿ, ಮೃದುವಾಗಿ, ವಿನಯ ಸೌಜನ್ಯಪೂರ್ಣನಾಗಿ ನಿಂತಿದ್ದ. ಅವನು ಕೋಸೆಟ್ಟಿಯನ್ನು ನೋಡುತ್ತ, "ನಾನಿಲ್ಲಿಗೆ ಬಂದದ್ದಕ್ಕೆ ಕ್ಷಮಿಸಬೇಕು. ಇಲ್ಲಿಗೆ ಬರದಿದ್ದರೆ ನಾನು ಬದುಕಿರಲು ಅಸಾಧ್ಯವೆಂದು ಮಾತ್ರ ಬಂದೆ. ನೀನು ಪತ್ರವನ್ನೋದಿರುವೆಯಾ? ದಯಮಾಡಿ ಗಾಬರಿಗೊಳ್ಳದಿರು. ಲಕ್ಸಂಬರ್ಗಿನಲ್ಲಿ ನೀನು ನನಗೆ ಅನುಗ್ರಹಿಸಿರುವ ಕಟಾಕ್ಷವನ್ನೆಂದಿಗೂ ಮರೆಯೆ. ಅದೇ ನನ್ನ ಹೃದಯವನ್ನು

ಹಿಂಡುತ್ತ ನನ್ನನ್ನು ನಿನ್ನ ಪಾದಸನ್ನಿಧಿಗೆ ತಂದಿದೆ. ನಿನ್ನನ್ನು ನೋಡುವ ಒಂದು ಹಂಬಲಕ್ಕಾಗಿ ಅನೇಕ ಕಡೆ ಹುಡುಕಿರುವೆನು. ಒಂದೆರಡು ಸಾರಿ ನೀನು ಕಾಣಲು ಸಿಕ್ಕಿರುವೆ. ಆದರೆ, ನಿನ್ನ ವಿಳಾಸ ತಿಳಿಯದೆ ಕಷ್ಟಪಟ್ಟೆ. ನೀನು ಮಲಗುವ ಕೋಣೆಯ ಹೊರಗೆ ನಾನು ಕಾದುನಿಂತದ್ದುಂಟು. ನಿನ್ನ ಗಾನವನ್ನು ಅಡಗಿ ಕೇಳಿದ್ದುಂಟು. ನನ್ನ ನೆರಳನ್ನೊಮ್ಮೆ ನೀನು ಕಂಡು ಹೆದರಿರುವೆ. ಅವೆಲ್ಲಕ್ಕೂ ನನ್ನನ್ನು ಕ್ಷಮಿಸಬೇಕು. ನನ್ನ ಅಂತರಂಗವನ್ನು ನಾನು ಮಾತುಗಳಿಂದ ಬಿಚ್ಚಿ ತೋರಿಸಲಾರೆ. ನಿನಗೆ ನನ್ನ ಮೇಲೆ ಕೋಪವಿದೆಯೇ?" ಎಂದು ಮೇರಿಯಸ್ ಆವೇಶದಿಂದ ನುಡಿದ.

ಈ ಮಾತುಗಳನ್ನು ಕೇಳುತ್ತ ನಿಂತಿದ್ದ ಕೋಸೆಟ್ಟಿ ಕುಳಿತಳು, ಕುಳಿತು ಬೀಳುವುದರಲ್ಲಿದ್ದಳು. ಮೇರಿಯಸ್ ಧಾವಿಸಿಬಂದು ಅವಳನ್ನು ಹಿಡಿದುಕೊಂಡು ಬೆಂಚಿನಲ್ಲಿ ಕುಳಿತ. ಅವಳನ್ನು ತನ್ನ ಹೃದಯಕ್ಕೆ ಅಪ್ಪಿಕೊಂಡ. ಕೋಸೆಟ್ಟಿ ಮೌನವಾಗಿರುತ್ತ ಮೇರಿಯಸನ ಕೈಯ್ಯನ್ನು ತನ್ನ ಹೃದಯಕ್ಕೆ ಎಳೆದಿಟ್ಟುಕೊಂಡಳು. ಅವನಿಗೆ ತನ್ನ ತಲೆಯಲ್ಲಿ ಹೊಗೆತುಂಬಿ ಸುತ್ತಾಡುತ್ತಿರುವಂತೆ ತೋರ ತೊಡಗಿತು. ಆಗಲೇ ಅವನ ಕೈಗೆ ಅವಳ ಒಳರವಕೆಯಲ್ಲಿದ್ದ ಪತ್ರ ಮುಟ್ಟಿತು. ಆಗಿನ ಅವನ ಮನಸ್ಸಿನ ಸ್ಥಿತಿಯನ್ನು ವರ್ಣಿಸುವುದು ಅಸಾಧ್ಯ. ಮೇರಿಯಸ್ ಬಲು ಮೆತ್ತಗೆ ಕೋಸೆಟ್ಟಿಯನ್ನು ಕೇಳಿದ, "ನೀನು ನನ್ನನ್ನು ಪ್ರೀತಿಸುತ್ತಿದ್ದೀ, ಅಲ್ಲವೇ?"

"ಅದು ನಿನಗೆ ಗೊತ್ತೇ ಇದೆಯಷ್ಟೆ," ಅಂದಳು ಕೋಸೆಟ್ಟಿ.

ಮೇರಿಯಸನ ಮುಖ ಕೋಸೆಟ್ಟಿಯ ಮುಖಕ್ಕೆ ತಾಗಿತು. ಅವರು ಮುತ್ತಿಟ್ಟುಕೊಂಡರು. ಮುತ್ತಿಕ್ಕುವುದು ಪವಿತ್ರ ಕೆಲಸವೆಂದೂ ಅಪವಿತ್ರ ಕೆಲಸವೆಂದೂ ಮೇರಿಯಸನಿಗೆ ಏಕ ಕಾಲ ದಲ್ಲೇ ತೋರುತ್ತಿತ್ತು. ಮೇರಿಯಸ್ ಸ್ವಲ್ಪ ಹೊತ್ತು ಮೈಮರೆತೇ ಕುಳಿತಿದ್ದ. ಅವರಿಬ್ಬರೂ ಬಲು ಹತ್ತಿರ ಕುಳಿತುಕೊಂಡು ಮೃದು ಮಾತುಗಳಿಂದ ಅನೇಕ ವಿಷಯಗಳನ್ನು ಮಾತಾಡಿದರು. ಕೋಸೆಟ್ಟಿ ಮೇರಿಯಸನ ಎದೆಗೆ ಒರಗಿಕೊಂಡು, ತನ್ನ ಅನುಭವಗಳನ್ನು ತಿಳಿಸಿದಳು. ಆದರೆ, ಅವರು ಮಾತಾಡಿದ್ದೆಲ್ಲ ಅವರ ಪ್ರೇಮದಿಂದ ಉಂಟಾಗಿದ್ದ ಆನಂದ, ದುಃಖ, ನಿರೀಕ್ಷಣೆ, ನಿರಾಶೆ, ಉತ್ಸಾಹ ಈ ಕುರಿತೇ ಆಗಿತ್ತು. ತಂತಮ್ಮ ಹೃದಯಗಳನ್ನೇ ಅವರು ಪರಸ್ಪರ ಬದಲಾ ಯಿಸಿಕೊಂಡರು ಎಂದರೂ ಸರಿಯಾಗಬಹುದಾದಂತೆ ಅವರು ಕನವರಿಸಿದರು. ಕೋಸೆಟ್ಟಿ ಮೇರಿ ಯಸನ ಎದೆಯ ಮೇಲೆಯೇ ತಲೆ ಇಟ್ಟುಕೊಂಡು, ಅವನ ಮುಖವನ್ನೇ ನೋಡುತ್ತ, "ನಿನ್ನ ಹೆಸರು ?" ಎಂದು ಕೇಳಿದಳು.

"ಮೇರಿಯಸ್."

"ನಿನ್ನದು ?"

"ಕೋಸೆಟ್ಟಿ."

ಐದನೆಯ ಸಂಪುಟ

೧. ಗಾಳಿಯಿಂದಾದ ಅನ್ಯಾಯ

ತೆನಾರ್ಡಿಯರ್ ೧೮೨೩ ಮೊಂಟ್‌ಫರ್ಮಿಯಲಿನಲ್ಲಿದ್ದಾಗಲೇ ಅವನಿಗೆ ಇಬ್ಬರು ಹೆಣ್ಣು ಮಕ್ಕಳೂ, ಒಬ್ಬ ಮಗನೂ ಇದ್ದರು. ಈ ಮಕ್ಕಳಲ್ಲಿ ಕಿರಿಯವನಾದ ಗಾವ್ರೋಚ್ ಹೇಗೆ ತಿರುಕುಳಿ ಯಾಗಿ ಪ್ಯಾರಿಸಿನಲ್ಲಿ ತಿರುಗಾಡುತ್ತಿದ್ದನೆಂದು ವಾಚಕರಿಗೆ ಈ ಮೊದಲೇ ತಿಳಿಸಿರುವೆವಷ್ಟೆ. ಗಾವ್ರೋಚ್ ಸಂಸಾರದಿಂದ ಹೊರಗೆ ನಡೆದ ಮೇಲೆ ಮತ್ತೆರಡು ಗಂಡು ಮಕ್ಕಳನ್ನು ತೆನಾರ್ಡಿ

ಯರಿಣಿ ಹೆತ್ತಿದ್ದಳು. ಈ ಇಬ್ಬರು ಗಂಡು ಮಕ್ಕಳನ್ನು ಸಾಕುವ ಭಾರವನ್ನು ಲಾಭಪ್ರದವಾಗಿ ಇನ್ನೊಬ್ಬರ ಮೇಲೆ ಹೊರಿಸುವುದು ಸಾಧ್ಯವೋ ಎಂದು ತೆನಾರ್ಡಿಯರ್ ಗ್ರಹಿಸುತ್ತಿದ್ದಾಗಲೇ ಒಂದು ವಿಶೇಷ ಪ್ರಸಂಗ ಒದಗಿತು.

ಮೆಗ್‌ನನ್ ಎಂಬ ಒಬ್ಬ ಸೂಳೆಯಲ್ಲಿ ಗಿಲೆನಾರ್ಮಂಡನಿಗೆ ಹುಟ್ಟಿದ್ದ ಇಬ್ಬರು ಮಕ್ಕಳು ಇದೇ ಕಾಲದಲ್ಲಿ ತೀರಿಹೋದರು. ಆ ಮಕ್ಕಳು ಗಾವ್ರೋಚನ ತಮ್ಮಂದಿರಷ್ಟೇ ಪ್ರಾಯದವರಾಗಿದ್ದರು. ವೃದ್ಧ ಗಿಲೆನಾರ್ಮಂಡ್ ತನ್ನ ಮಕ್ಕಳಿಗಾಗಿ ಮೆಗ್‌ನನ್ನಳಿಗೆ ಮಾಸಾಶನವಾಗಿ ಕೊಡುತ್ತಿದ್ದ ೮೦ ಫ್ರ್ಯಾಂಕ್ ಹಣದಲ್ಲಿ ಇಪ್ಪತ್ತನ್ನು ಬಾಡಿಗೆಗಾಗಿ ತನಗೆ ಕೊಟ್ಟರೆ ತನ್ನ ಮಕ್ಕಳನ್ನು ಮೆಗ್‌ನನ್ನಳಿಗೆ ಒಪ್ಪಿಸಲು ತೆನಾರ್ಡಿಯರ್ ಸಮ್ಮತಿಯಿತ್ತ. ಮೆಗ್‌ನನ್ ಸೂಳೆಯಾಗಿದ್ದುದು ಮಾತ್ರವಲ್ಲದೆ ಬೇಬೆಟ್, ಗುಲ್ಮರ್ ಮೊದಲಾದ ದರೋಡೆಕಾರರ ಕೂಟದವಳೂ ಆಗಿದ್ದುದರಿಂದ ಈ ಪರಸ್ಪರ ಸಹಾಯವನ್ನು ಸಂತೋಷದಿಂದ ಒಪ್ಪಿಕೊಂಡು ತೆನಾರ್ಡಿಯರನ ಮಕ್ಕಳೇ ತನ್ನ ಮಕ್ಕಳೆಂದು—ಅಂದರೆ, ಗಿಲೆನಾರ್ಮಂಡನ ಮಕ್ಕಳೆಂದು—ಸಾಕುತ್ತ ಮೆಗ್‌ನನ್ನಳು ಮಾಸಾಶನ ಪಡೆದುಬರುತ್ತಿದ್ದಳು.

ಒಂದು ದಿನ ಈ ಮಕ್ಕಳು ಹಿತ್ತಲಲ್ಲಿ ಆಟವಾಡಿ ಬಳಲಿ ಮನೆಗೆ ಬರುವಾಗ ಮನೆಯ ಬಾಗಿಲುಗಳೆಲ್ಲ ಬಂದಾಗಿದ್ದು ಅಲ್ಲೆಲ್ಲೂ ಯಾರೂ ಇರಲಿಲ್ಲ. ಆ ಮಕ್ಕಳು ತಾಯಿಯನ್ನು (ಮೇಗ್‌ನನ್ನಳನ್ನು) ಕರೆದೂ ಕರೆದೂ ಅಳುತ್ತಿದ್ದಾಗ ಆ ಮನೆಯ ಎದುರಂಗಡಿಯವನು ಅವರನ್ನು ಕರೆದು, ಮೆಗ್‌ನನ್ನಳೇ ಅವನ ಕೈಯ್ಯಲ್ಲಿ ಕೊಟ್ಟಿದ್ದ ಒಂದು ಕಾಗದ ಕೊಟ್ಟು, ಅದನ್ನು ತೋರಿಸಿ, ದಾರಿ ವಿಚಾರಿಸಿಕೊಂಡು ಹೋದರೆ ಆ ಬಾಲಕರ ತಂದೆಯ ಮನೆ ಸಿಗುವುದಾಗಿ ಸಮಾಧಾನಪಡಿಸಿ, ಬಾಲಕರಿಗೆ ದಿಕ್ಕನ್ನೂ ಮಾರ್ಗವನ್ನೂ ತೋರಿಸಿಕೊಟ್ಟ.

ಸೂಳೆ ಮೆಗ್‌ನನ್ನಳ ಮನೆ ಗಿಲೆನಾರ್ಮಂಡನ ಮನೆಯಿಂದ ದೂರವಿತ್ತು. ಆ ದಿನ ಮೆಗ್‌ನನ್ ಗ್ರಹಚಾರವಶದಿಂದ ಪೊಲೀಸರ ವಶವಾಗಿದ್ದಳು. ಜೀನ್‌ವಾಲ್‌ಜೀನನಿಂದ ಹಣಸುಲಿಯಲು ಏರ್ಪಡಿಸಿದ ಸಂಬಂಧದ ಕ್ರಿಮಿನಲ್ ವ್ಯವಹರಣೆಯಲ್ಲಿ ಮೆಗ್‌ನನ್ನಳು ಹಠಾತ್ತನೆ ದಸ್ತಗಿರಿ ಮಾಡಲ್ಪಟ್ಟಿದ್ದಳು. ಪೊಲೀಸರು ಅವಳನ್ನು ಎಳೆದುಕೊಂಡು ಹೋಗುವ ಮೊದಲೇ ಆ ಮಕ್ಕಳು ಗಿಲೆನಾರ್ಮಂಡನ ಮನೆ ಸೇರಲೆಂದು ಆಕೆ ಆ ಪತ್ರ ಬರೆದು ಎದುರಂಗಡಿಯವನ ಹತ್ತಿರ ಕೊಟ್ಟಿದ್ದಳು.

ಅದು ಚಳಿಗಾಲದ ಸಮಯ. ಆಗಿಂದಾಗ್ಗೆ ಬಿರುಗಾಳಿ ಬೀಸುವ ಕ್ರಮವಿತ್ತು. ಈ ಬಾಲಕರು ರಸ್ತೆಯಲ್ಲೇ ಹೋಗುತ್ತಿದ್ದಾಗ ಒಂದು ಬಿರುಗಾಳಿಗೆ ಸಿಕ್ಕಿ, ತಮ್ಮ ಅಂಗಿಬಟ್ಟೆಗಳನ್ನೂ, ತಾವು ನೆಟ್ಟಗೆ ನಿಂತಿರುವುದನ್ನೂ, ಸರಿಪಡಿಸಿಕೊಳ್ಳುವ ಪ್ರಯತ್ನದಲ್ಲಿ, ಅವರ ಕೈಯಲ್ಲಿದ್ದ ಕಾಗದ ಹಾರಿ ಹೋಯಿತು. ಈ ಬಾಲಕರಿಗೆ (ಅತ್ತ, ತಮ್ಮ ನಿಜವಾದ ತಂದೆ ತೆನಾರ್ಡಿಯರನನ್ನೇ ಸರಿಯಾಗಿ ಗುರುತಿಸಲಾಗದಿದ್ದಾಗ) ಈ ಹೊಸ ತಂದೆಯ ಗುರುತಾಗಲೀ ಹೆಸರಾಗಲೀ ವಿಳಾಸವಾಗಲೀ ಗೊತ್ತಿರಲಿಲ್ಲ. ಈ ರೀತಿ ಇವರು ಪ್ಯಾರಿಸಿನ ಅನಾಥಬಾಲಕರ ಗುಂಪಿನಲ್ಲಿ ಹೊಸ ಇಬ್ಬರಾಗಿ ರಸ್ತೆಯಲ್ಲಿ ಬಿದ್ದರು.

೨. ಸಹಾಯಕ್ಕೆ ಬಂದ ಗಾವ್ರೋಚ್

ಕಳೆದ ವರ್ಷ ಬಂದುಹೋಗಿದ್ದ ಜನವರಿ ಅದರ ಜೊತೆಯ ಚಳಿಗಾಳಿ ಸಮೇತ ಮತ್ತೆ

ಮರಳಿತು. ಅನುಕೂಲವಿದ್ದವರು ಹಿಂದೆ ಧರಿಸಿ ಪೆಟ್ಟಿಗೆಯಲ್ಲಿಟ್ಟಿದ್ದ ಉಣ್ಣೆಯ ಅಂಗಿ, ಇಜಾರು, ಶಾಲುಗಳನ್ನು ಹೊರತೆಗೆದು ಪುನಃ ಧರಿಸಿಕೊಂಡರು. ಪ್ಯಾರಿಸಿನ ಒಂದು ಅಂಗಡಿಯಲ್ಲಿ ಕ್ಷೌರಿಕ ತನ್ನ ಕಾಯಕದಲ್ಲಿ ನಿರತನಾಗಿದ್ದ. ಅವನ ಹಿಂದುಗಡೆ ಅನೇಕ ಸಾಮಾನುಗಳ ನಡುವಿನಲ್ಲಿದ್ದ ಒಂದು ಚಂದದ ಗೊಂಬೆಯನ್ನು ಗಾವ್ರೋಚ್ ರಸ್ತೆಯಲ್ಲಿ ನಿಂತು ನೋಡುತ್ತಿದ್ದ. ಇವನು ಅದನ್ನು ನೋಡುತ್ತಿದ್ದಂತೆ ತೋರಿದರೂ ಅಂತರಂಗದಲ್ಲಿ ಅದರ ಪಕ್ಕದಲ್ಲೇ ಇದ್ದ ವಿಂಡ್‌ಸರ್ ಸಾಬೂನನ್ನು ಕದಿಯುವುದು ಹೇಗೆಂದು ಯೋಚಿಸುತ್ತಿದ್ದ. ಹಾಗೇನಾದರೂ ಕದ್ದು, ಕದ್ದದ್ದನ್ನು ಸಿಕ್ಕಿದ ಕ್ರಯಕ್ಕೆ ಮಾರಿ ಹಣಮಾಡದಿದ್ದರೆ, ಅವನ ಆ ಹೊತ್ತಿನ ಊಟ ಪೂರ್ತಿಯಾಗದೆಂದು ಯೋಚಿಸುತ್ತಿದ್ದ. ಗಾವ್ರೋಚನ ದೃಷ್ಟಿ, ನಿಲವು, ಮುಖಗಳ ಅರ್ಥ ಕ್ಷೌರಿಕನಿಗೂ ಆಗಿತ್ತು. ತನ್ನ ವೈರಿ ಸದ್ಯ ರಸ್ತೆಯಲ್ಲಿದ್ದರೂ ಹಠಾತ್ತನೆ ಅಂಗಡಿಗೆ ನುಗ್ಗಬಹುದೆಂಬ ಎಚ್ಚರದಲ್ಲಿ ಕ್ಷೌರಿಕನೂ ಇದ್ದ.

ಅಷ್ಟರಲ್ಲೇ, ಬಿರುಗಾಳಿಯಲ್ಲಿ ಸಿಕ್ಕಿ ದಾರಿತೋಚದೆ ಇದ್ದ ಆ ಇಬ್ಬರು ಮಕ್ಕಳು ಕ್ಷೌರಿಕನ ಅಂಗಡಿಗೆ ಬಂದರು. ಆ ಮಕ್ಕಳು ಶ್ರೀಮಂತರ ಮಕ್ಕಳಂತೆ ದುಸ್ತು ಮಾಡಿದ್ದುದರಿಂದ ಅವರು ಅಂಗಡಿಯ ಒಳಗೆ ಪ್ರವೇಶಿಸಿ ತನ್ನ ಹತ್ತಿರ ಬರುವವರೆಗೂ ಕ್ಷೌರಿಕ ಶಾಂತಚಿತ್ತದಲ್ಲೇ ಇದ್ದ. ಅವರು ಕ್ಷೌರಿಕನೊಡನೆ ತಮ್ಮ ಕಷ್ಟಗಳನ್ನು ಹೇಳಿಕೊಂಡು, ಅವನಿಂದ ಸಹಾಯ ಬೇಡಿದರು. ಹೀಗೆ ಬಾಲಕರು ತನ್ನಲ್ಲಿಗೆ ಬೇಡುವುದಕ್ಕಾಗಿ ಬಂದದ್ದೆಂದು ಕ್ಷೌರಿಕ ತಿಳಿದಕೂಡಲೇ ಅವರನ್ನು ಅಂಗಡಿಯಿಂದ ಗದರಿಸಿ ಓಡಿಸಿಬಿಟ್ಟ.

ಇದನ್ನೆಲ್ಲ ನೋಡುತ್ತಲೂ ಕೇಳುತ್ತಲೂ ಇದ್ದ ಗಾವ್ರೋಚ್ ಸಹನೆ ಕಳೆದುಕೊಂಡ. ಅವನಿಗೆ ಕ್ಷೌರಿಕನ ಮೇಲೆ ವಿಪರೀತ ಕೋಪ ಬಂತು—ಬಾಲಕರ ಬಗ್ಗೆ ಅಷ್ಟೇ ಕನಿಕರವೂ ಮೂಡಿತು. ಅಲ್ಲದೆ, ತಾನೊಬ್ಬ ಜವಾಬ್ದಾರಿಯುಳ್ಳ ಹಿರಿಯನೆಂಬ ಭಾವನೆ, ಆ ಬಾಲಕರನ್ನು ನೋಡಿ ಅವನಲ್ಲಿ ಮೂಡಿತು. ಹಾಗಾಗಿ ಅವನು ಕ್ಷೌರಿಕನಿಗೆ ಕೇಳುವಂತೆ ಶ್ರೀಮಂತರನ್ನು ಬೈಯುತ್ತ ಬಾಲಕರನ್ನು ತನ್ನ ಮಾರ್ಗದಲ್ಲೇ ಕರೆದುಕೊಂಡು ಹೋದ.

ಗಾವ್ರೋಚ್ ಪ್ರಾಯದಲ್ಲಿ ಚಿಕ್ಕವನೇ ಆಗಿದ್ದರೂ ಕಷ್ಟಗಳ ಅನುಭವದಲ್ಲಿ ಹಿರಿಯನೇ ಆಗಿದ್ದ. ಆದರೆ, ಅವನ ಎಳೆತನದ ಮತ್ತು ಜೀವನವೃತ್ತಿ ಹಾಗೂ ಕ್ರಮದ ಕಾರಣವಾಗಿ ಅವನು ಚುರುಕು, ಚಟುವಟಿಕೆ, ಹಾಸ್ಯವಿನೋದಗಳಲ್ಲಿ ಅಪ್ರತಿಮನೇ ಆಗಿದ್ದ. ಈ ಮಕ್ಕಳನ್ನು ನಾನಾ ಪ್ರಶ್ನೆಗಳಿಂದ ವಿಚಾರಿಸಿನೋಡಿ, ಅವರಿಗೆ ತಂದೆತಾಯಿಯರು ಇದ್ದಾರೆಂದೂ ಆದರೆ ಅವರ ಹೆಸರನ್ನಾಗಲೀ ವಿಳಾಸವನ್ನಾಗಲೀ ತಿಳಿಸಲಾರದಷ್ಟು ಅವರು ಎಳೆಯರೆಂದೂ ಅರಿತುಕೊಂಡ. ಕೊನೆಗೆ ಅವನು ಒಂದು ಘನ ನಿರ್ಧಾರಕ್ಕೆ ಬಂದು ಧೈರ್ಯವಾಗಿ ಮಕ್ಕಳನ್ನು ಉದ್ದೇಶಿಸಿ ಹೇಳಿದ, "ಮಕ್ಕಳೇ ಹೆದರಬೇಡಿ, ಬೇಸರಿಸಬೇಡಿ. ನಿಮಗಿನ್ನೂ ಗೊತ್ತಿಲ್ಲ—ಎಷ್ಟೋ ವೇಳೆ ಮಾತಾಪಿತೃಗಳು ಯಾರೆಂದು ಗೊತ್ತಿಲ್ಲದಿರುವುದೇ ಲಾಭ. ನಾನು ನಿಮ್ಮನ್ನು ಸಾಕುವೆನು."

ಹೀಗೆ ಮಾತಾಡುತ್ತ ರಸ್ತೆಯಲ್ಲೇ ಹೋಗುತ್ತಿದ್ದಾಗ ಅವರೆದುರಿಗೆ ಬೇಡುವ ಹುಡುಗಿಯೊಬ್ಬಳು ಚಳಿಯಲ್ಲಿ ನಡುಗುತ್ತ ಬರುತ್ತಿದ್ದಳು. ಗಾವ್ರೋಚನಿಗೆ ಅವಳ ಮೇಲೆ ಕನಿಕರವುಂಟಾಗಿ ತಾನು ಕೋಟಿನ ಮೇಲೆ ಹೊದೆದಿದ್ದ ಶಾಲನ್ನು ಅವಳಿಗೆ ದಾನಮಾಡಿದ. ಮತ್ತೊಂದು ಕಡೆ ದೊಡ್ಡ ಮನುಷ್ಯನೊಬ್ಬ ಗಾವ್ರೋಚನ ನಡಿಗೆಯಿಂದ ತನ್ನ ಇಜಾರಿಗೆ ಕೆಸರು ಹಾರಿತೆಂದು ಅವನನ್ನು ದುರದುರನೆ ನೋಡಿದಾಗ, "ಅಯ್ಯಾ, ನನ್ನಲ್ಲಿ ಫಿರ್ಯಾದಿ ಕೊಡುವುದಿದ್ದರೆ ಆಫೀಸಿಗೆ ಬರಬೇಕು—ದಾರಿಯಲ್ಲಿ ಸಾಧ್ಯವಿಲ್ಲ" ಎಂದು ದೊಡ್ಡ ಅಧಿಕಾರಿಗಳ ಮರ್ಜಿಯಿಂದ ಹೇಳಿದ. ಮತ್ತು

ಮುಂದೆ ಹೋಗುವಾಗ ವೇಷಪಲ್ಲಟಮಾಡಿಕೊಂಡು ಎದುರಿಗೆ ಬರುತ್ತಿದ್ದ ಮೊಂಟ್‌ಪಾರ್ನಿಸ ನನ್ನು ಗುರುತಿಸಿ ಅವನೊಂದಿಗೆ ಅವನ ಸರಿಸಮಾನನಂತೆ ಮಾತಾಡಿದ. ಮೊಂಟ್‌ಪಾರ್ನಿಸನಿಗೂ ಗಾವ್ರೋಚನ ಹತ್ತಿರ ಕೆಲಸವಿತ್ತೆಂದು ತೋರುತ್ತದೆ. ಅವನು ಗಾವ್ರೋಚನೊಂದಿಗೆ ಸ್ವಲ್ಪ ಗುಟ್ಟಾಗಿ ಮಾತಾಡಿ, ಅನಂತರ ಮುಂದುವರಿಸುತ್ತ, "ಅಗತ್ಯಬಿದ್ದರೆ ಬೆಳಗ್ಗಿನ ಜಾವದಲ್ಲಿ ಬಂದು ನಿನ್ನನ್ನು ಕರೆಯುವೆನು. ಈಗ ಕಾಲ ಕಷ್ಟ. ಎಷ್ಟು ಎಚ್ಚರವಿದ್ದರೂ ಸಾಲದು. ನನ್ನ ಜೇಬಿನಿಂದಲೇ ಮೊನ್ನೆ ಈಚೆಗೆ ನನ್ನ ಹಣದ ಚೀಲವನ್ನು ಕದ್ದುಬಿಟ್ಟಿದ್ದಾರೆ. ಇರಲಿ, ನೀನು ತಯಾರಿರಬೇಕು," ಎಂದು ಹೇಳಿ ಅವನು ತನ್ನ ಕೆಲಸದಲ್ಲಿ ಹೋದ.

ಹೀಗೆ, ದೊಡ್ಡ ದೊಡ್ಡ ಕಾರ್ಯಗಳಿಗೂ ಬೇಕಾದ ಈ ಚಿಕ್ಕ ಪೋರ ಈ ಇಬ್ಬರು ಮಕ್ಕಳಿಗೆ ಅಣ್ಣನೂ ತಂದೆಯೂ ತಾಯಿಯೂ ಆಗಿ, ತನ್ನಲ್ಲಿದ್ದ ಹಣದಲ್ಲಿ ಸ್ವಲ್ಪ ಬ್ರೆಡ್ ತೆಗೆದು ಅವರಿಗೆ ತಿನ್ನಿಸಿ, ಒಂದು ಚೂರು ತಾನೂ ತಿಂದು, ಕೊನೆಗೆ ತನ್ನ ಮನೆಗೆ ತಲಪಿದ.

ಗಾವ್ರೋಚನ ಮನೆ ಕಂಡ ಆ ಮಕ್ಕಳು ಒಮ್ಮೆ ವಿಸ್ಮಯ ಹೊಂದಿದರು. ಆದರೆ ಮನೆಯೊಳಗೆ ಪ್ರವೇಶಿಸಿ ಬೆಚ್ಚಗೆ ಕುಳಿತಾಗ ಆಶ್ಚರ್ಯದ ಜೊತೆಗೆ ಸಂತೋಷ ಸಹ ಪಟ್ಟರು. ಆ ಮನೆ ಅಂಥ ವಿಚಿತ್ರತರದ್ದಾಗಿತ್ತು. ಅದು ಬೇಸ್ಟೈಲಿನ (ಕೋಟೆ) ಹೊರಬದಿ, ಎತ್ತರದ ದಿಡ್ಡಿನ ಮೇಲೆ—ಅಂಗಡಿ, ಮನೆ, ರಾಜರಸ್ತೆ ಇವೆಲ್ಲವುಗಳಿಂದ ಸಾಧಾರಣ ಐವತ್ತು ಗಜ ದೂರದಲ್ಲಿ—ರಸ್ತೆಗೆ ಮುಖಹಾಕಿ ನಿಂತಿತ್ತು. ಆ ಕಟ್ಟಡ ಗಾವ್ರೋಚನಿಗೆ ಮನೆಯಾಗಿದ್ದರೂ ಸರಕಾರ ಮತ್ತು ಜನರಿಗೆ ನೆಪೋಲಿಯನ್ ಚಕ್ರವರ್ತಿ ಕಟ್ಟಿಸಿದ್ದ ಒಂದು ಆನೆಯ ಪ್ರತಿಮೆಯಾಗಿತ್ತು. ಪ್ರತಿಮೆಯ ಒಳಭಾಗ ಮರದ ಅಡ್ಡ, ಹಲಗೆ, ತಂತಿ ಇತ್ಯಾದಿಗಳಿಂದ ನಿರ್ಮಿತವಾಗಿದ್ದು, ಹೊರಗಡೆ ಸುಣ್ಣ, ಗಾರೆ, ಇಟ್ಟಿಗೆಯಿಂದ ರಚಿಸಲಾಗಿತ್ತು. ಶ್ರೀಮಂತರೂ ರಾಜಭಕ್ತರೂ ಆ ಆನೆ ಸಾರ್ವಜನಿಕ ಹಣದ ದುರುಪಯೋಗದ ಹೆಗ್ಗುರುತು ಎಂದು ಅದನ್ನು ಹಳಿಯುತ್ತಿದ್ದರೂ ನೆಪೋಲಿಯನ್ನನ ದೃಷ್ಟಿ ಯಲ್ಲಿ ಅದು ಫ್ರೆಂಚ್ ಜನರ ಶಕ್ತಿ, ಐಕಮತ್ಯ, ಮಹತ್ತ್ವ, ಸ್ಥಿರತೆಗಳ ಪ್ರತೀಕವಾಗಿತ್ತು.

ಆ ರಾತ್ರಿ ಮೂವರು ಅನಾಥಬಾಲಕರೂ ಆನೆಯ ಹೊಟ್ಟೆಯೊಳಗೆ—ಚಿಕ್ಕ ಒಂದು ಕಂಡಿಗಾಗಿ—ನುಗ್ಗಿ ಮಲಗಿ ನಿದ್ರಿಸಿದರು. ಜನರಿಂದ ತ್ಯಜಿಸಲ್ಪಟ್ಟಿದ್ದ ಆ ಆನೆ ಈ ಅನಾಥರಿಂದ ಗ್ರಾಹ್ಯ ವಾಯಿತು! ಚಕ್ರವರ್ತಿಯ ಕಲ್ಪನೆ ತಿರುಕುಳಿಗಳ ಅರಮನೆಯಾಯಿತು. ಆನೆಯ ಗರ್ಭ ಇಲಿಗಳ ನಿವಾಸವಾಯಿತು. ತಿಂದು ಸೊಕ್ಕಿ, ಉಣ್ಣೆ ರೇಷ್ಮೆಗಳಿಂದ ಮೈಮುಚ್ಚಿಕೊಂಡು ಮೆರೆಯುವ ಶ್ರೀಮಂತರ ನಿಂದೆಗೆ ಗುರಿಯಾಗಿದ್ದ ಆನೆ ಆಹಾರ ಬಟ್ಟೆ, ಮನೆಯಿಲ್ಲದಿದ್ದ ನಿರಾಶ್ರಿತರಿಗೆ ಆಶ್ರಯ, ರಕ್ಷಣೆ, ಶಾಖ, ಮನೆ, ಸಂಸಾರ ಎಲ್ಲವೂ ಆಗಿಬಿಟ್ಟಿತು. ಇತರರೆಲ್ಲರೂ ಹೀನೈಸಿ ರಸ್ತೆಗೆ ನೂಕಿದವರನ್ನು ಈ ಆನೆ ಮಾತಾಡದೆ ತನ್ನ ಉದರದೊಳಗೆ ಕಾಪಾಡಿಕೊಂಡು ತಾನೂ ಪ್ರಪಂಚ ಧರ್ಮವನ್ನು ಕಾಪಾಡುವ ವಸ್ತುವಾಯಿತು. ಮನುಷ್ಯರು ತ್ಯಜಿಸಿಬಿಟ್ಟಿದ್ದ ಆನೆಯನ್ನು ದೇವರು ತನ್ನ ಉದ್ದೇಶಗಳಿಗಾಗಿ ಉಪಯೋಗಿಸಿದ.

ಹೀಗೆ ಆ ಮೂವರು ನಿದ್ರಿಸುತ್ತಿದ್ದಾಗ ಬೆಳಗ್ಗಿನ ಜಾವದಲ್ಲಿ ಮೊಂಟ್‌ಪಾರ್ನಿಸ್ ಬಂದು ಗಾವ್ರೋಚನನ್ನು ಒಂದು ಶಿಳ್ಳಿನ ಮುಖಾಂತರ ಕರೆದ. ಗಾವ್ರೋಚ್ ಆ ಮಕ್ಕಳಿಗೆ ಗೊತ್ತಾಗದಂತೆ ಎದ್ದು ಮೊಂಟ್‌ಪಾರ್ನಿಸನ ಜೊತೆ ಹೋದ.

೩. ಜೈಲಿನಿಂದ ಪಾರಾದುದು

ಬ್ಯಾಬೆಟ್, ಗುಲ್ಮರ್, ಬ್ರುಜಾನ್ ಮತ್ತು ತೆನಾರ್ಡಿಯರ್ ಜೈಲಿನಲ್ಲಿದ್ದರೆಂದು ಈ ಮೊದಲೇ ತಿಳಿಸಿರುವೆವಷ್ಟೆ. ಇವರ ಪೈಕಿ ತೆನಾರ್ಡಿಯರನೊಬ್ಬನ ಹೊರತು ಬಾಕಿ ಮೂವರು—ಸರಾಯಿ, (ಹಾಸಿಗೆಬಟ್ಟೆಯಿಂದ ತಯಾರಿಸಿದ್ದ) ಹಗ್ಗ, ಕಬ್ಬಿಣದ ಮೊಳೆ, ಹೊಗೆನಳಿಗೆ, ನೀರನಳಿಗೆ, ಪಹರೆಯವರಿಗೆ ಸಾಕಷ್ಟು ಲಂಚ ಮೊದಲಾದ ತಂತ್ರಗಳ ಮೂಲಕ ನಡುರಾತ್ರಿಯೇ ತಂತಮ್ಮ ಕೋಣೆಯಿಂದ ತಪ್ಪಿಸಿಕೊಂಡು ಹೋಗಿ ರಾಜರಸ್ತೆ ತಲಪಿದ್ದರು. ಆದರೆ, ತೆನಾರ್ಡಿಯರ್ ಮಾತ್ರ ರಸ್ತೆಬದಿಯ ಪಾಗಾರಗೋಡೆಯ ತುದಿಯವರೆಗೆ ಬಂದು, ಅಲ್ಲಿಂದ ಇಳಿಯಲಾರದೆ, ಕೆಳಗೆ ಬಿದ್ದರೆ ಮರಣ, ಬೀಳದೆ ಉಳಿದು ಬೆಳಗಾದರೆ ಪುನಃ ಜೈಲು ಎಂದು ಹೆದರಿಕೊಂಡು ಕಷ್ಟಪಡುತಿದ್ದುದರಿಂದಲೇ ಮೊಂಟ್‌ಪಾರ್ನಿಸ್ ಗಾವ್ರೋಚನನ್ನು ಸಹಾಯಕ್ಕಾಗಿ ಕರೆದುಕೊಂಡು ಹೋಗಿದ್ದುದಾಗಿತ್ತು.

ಗಾವ್ರೋಚ್ ಹಗುರವಾಗಿದ್ದುದರಿಂದ, ಪಾಗಾರಗೋಡೆಯ ಹೊರಬದಿಯ ಯಾರ ಯಾರ ಮನೆಯ ಮಾಡಿನ ಮೇಲಾಗಿ ಹೋಗಿ, ಹೊಗೆನಳಿಗೆಯನ್ನೇರಿ ಅದರ ಮುಖಾಂತರ, ಅಡ್ಡ ಬಂದಿದ್ದ ಒಂದು ನೀರನಳಿಗೆಗಾಗಿ ಜೈಲಿನ ಪಾಗಾರಗೋಡೆಗೆ ತಲಪಿ, ತನ್ನ ಬಾಯಿಯಲ್ಲಿ ಕಚ್ಚಿಕೊಂಡು ಹೋಗಿದ್ದ ಹಗ್ಗವನ್ನು ತೆನಾರ್ಡಿಯರನಿಗೆ ಕೊಟ್ಟ. ಈ ಹಗ್ಗದ ಒಂದು ತುದಿಯನ್ನು ಪಾಗಾರಗೋಡೆಯ ಕಿಟಕಿಸರಳಿಗೆ ಕಟ್ಟಿ, ಉಳಿದ ಉದ್ದದ ತುಂಡನ್ನು ರಸ್ತೆಯಕಡೆಗೆ ಇಳಿಬಿಟ್ಟು, ತೆನಾರ್ಡಿಯರ್ ಆ ಹಗ್ಗದ ಮೂಲಕ ರಸ್ತೆಗೆ ತಲಪಿದ. ಗಾವ್ರೋಚನೂ ಅದೇ ಹಗ್ಗದ ಮುಖಾಂತರ ಕೆಳಗಿಳಿದಿದ್ದ.

ಇಷ್ಟು ಉಪಕಾರಮಾಡಿದ್ದ ಗಾವ್ರೋಚನಿಗೆ ಒಂದು ಒಳ್ಳೆಯ ಮಾತನ್ನೂ ಹೇಳದೆ ಆ ದರೋಡೆಕಾರರೆಲ್ಲ ಅವರವರ ಕಾರ್ಯಗಳ ಬಗ್ಗಾಗಿ ಅಲ್ಲಿಂದ ಹೊರಟುಹೋದರು.

ಎಪೊನಿನ್ 'ಬಿಸ್ಕೆಟ್ಟು' (ನಿಷ್ಪ್ರಯೋಜಕ) ಎಂದು ಹೇಳಿದ್ದರೂ, ರೂ'ಪ್ಲಮೆಟಿನ ಮನೆಯನ್ನು ದರೋಡೆಮಾಡಬೇಕೆಂಬುದೇ ಆ ಖದೀಮರ ತರ್ಕವಾಗಿತ್ತು. ಗಾವ್ರೋಚ್ ತನ್ನ ಮನೆ, 'ಸಂಸಾರ' ಇವನ್ನು ನೆನೆದುಕೊಂಡು ಅಲ್ಲಿಂದ ಓಡಿಹೋದ.

ಆರನೆಯ ಸಂಪುಟ

೧. ಉಜ್ಜ್ವಲ ದೀಪ್ತಿ

ಮೇರಿಯಸನಿಗೆ ಎಪೊನಿನ್ ಮಾಡಿದ್ದ ಉಪಕಾರ ಅಷ್ಟಿಷ್ಟಲ್ಲವಾಗಿತ್ತು. ಅವಳು ಕೋಸೆಟ್ಟೆ ಇರುವ ಮನೆ ತೋರಿಸಿ ಕೊಟ್ಟದ್ದರಿಂದಲೇ, ನಾವು ಹಿಂದಿನ ಒಂದು ಅಧ್ಯಾಯದಲ್ಲಿ ಹೇಳಿರುವ, ಪತ್ರವನ್ನು ಅವನು ಕೋಸೆಟ್ಟೆಗೆ ತಲಪಿಸುವುದು ಸಾಧ್ಯವಾಯಿತು. ಒಂದಾವೃತ್ತಿ ಪರಿಚಯವಾದನಂತರ ಅವರು ಸಾಧಾರಣ ಪ್ರತಿದಿನವೂ (ಎಂಬಂತೆ) ಭೇಟಿಯಾಗುತ್ತಿದ್ದರು. ಪ್ರೇಮ ಪಥದಲ್ಲಿ ಹೆಜ್ಜೆ ಇಡುವಾಗ ತರುಣಿಯರು ತಮ್ಮ ಸರಳತೆಯಿಂದ ತರುಣರ ವಶಕ್ಕೆ ಒಮ್ಮೆಲೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವರು. ಅವರು ತಮ್ಮ ನಿಷ್ಕಪಟಬುದ್ಧಿಯಿಂದ ದೇಹ, ಮನಸ್ಸು ಸರ್ವಸ್ವವನ್ನೂ ಅರ್ಪಿಸಿ ಬಿಡುವರು. ತರುಣರಾದರೆ ಎಷ್ಟೋ ವೇಳೆ ತಮ್ಮ ಹೆಜ್ಜೆಯನ್ನು ಹಿಂತೆಗೆಯುವುದೂ ಬಲು ಎಚ್ಚರಿಕೆಯಿಂದ ಮುಂದುವರಿಯುವುದೂ ಉಂಟು. ಕೆಲವು ವೇಳೆ ತರುಣರು

ತರುಣಿಯರ ದೇಹ ಮಾತ್ರ ಕಂಡು ಪ್ರೀತಿಸಿ, ಕ್ರಮೇಣ, ತಮ್ಮ ವಶಕ್ಕೆ ಬಂದ ಹೂವನ್ನು ಹರಿದು ಬಿಸುಡುವುದೂ ಉಂಟು. ಮೇರಿಯಸ್ ಮತ್ತು ಕೋಸೆಟ್ಟೆಯವರ ಸಂಬಂಧ ಮಾತ್ರ ಪರಿಪೂರ್ಣವೂ ಪರಿಶುದ್ಧವೂ ಆದ ಪ್ರೇಮಬಂಧನವಾಗಿತ್ತು. ಅವರು ಬೇರೆಬೇರೆ ಇದ್ದ ಸಮಯವೆಲ್ಲ ಇಬ್ಬರಿಗೂ ಪರಿಪೂರ್ಣ ಕತ್ತಲೆಯೇ ಆಗಿರುತ್ತಿತ್ತು.

ಜೀನ್‌ವಾಲ್‌ಜೀನ್ ಇಲ್ಲದ ವೇಳೆಗಳನ್ನು ಅರಿತುಕೊಂಡು ಮೇರಿಯಸ್ ರೂ'ಪ್ಲಮೆಟಿನ ಉದ್ಯಾನವನಕ್ಕೆ ಬಂದು ಕಲ್ಲುಬೆಂಚಿನಮೇಲೆ ಕೋಸೆಟ್ಟೆಯ ಜೊತೆ ಕುಳಿತು, ಇಬ್ಬರೂ ಮನಬಂದಂತೆ ಮಾತಾಡಿಕೊಳ್ಳುತ್ತಿದ್ದರು. ಅವರ ಮಾತುಗಳೆಲ್ಲ ಅನುರಾಗದ ಕುರಿತೇ ಆಗಿರುತ್ತಿದ್ದುವು. ಅವು ಏಕಕಾಲದಲ್ಲಿ ಮಹತ್ತರವೂ ಅಲ್ಪತರವೂ ಹೌದು. ಪ್ರೇಮಕ್ಕೆ ಮಾತು ಸಾಧನವೇ ಹೊರತು ಅದೇ ವಿಷಯವಲ್ಲ. ಮಾತು ಯಾವ ವಿಷಯದ ಕುರಿತಾಗಿದ್ದರೂ ಎಷ್ಟೇ ಚಿಕ್ಕವಿಷಯವಾಗಿದ್ದರೂ ಕೇವಲ ಮಾತಾಡಿದ ಒಂದೇ ಕಾರಣದಿಂದ ಪ್ರೇಮಭರಿತರಾದವರಲ್ಲಿ ಅದರ ಪರಿಣಾಮ ಮಹತ್ತರವಾದ ಆನಂದವೇ ಆಗುವುದು. ಮೇರಿಯಸ್ ಮತ್ತು ಕೋಸೆಟ್ಟೆಯರ ಸಂಭಾಷಣೆಗೆ ಸಹಕಾರಿಗಳಾಗಿ ಅಲ್ಲಿಯ ಹೂದೋಟವೂ ಹಕ್ಕಿಗಳೂ ಕಾಲವೂ ಎಲ್ಲವೂ ತಾವಾಗಿಯೇ ಬಂದೊದಗುತ್ತಿದ್ದುವು. ಕೆಲವೊಮ್ಮೆ ಸೂರ್ಯ ಸ್ವಲ್ಪ ಸಮಯ ಮಾತ್ರ ಸಹಕರಿಸಿ ತನ್ನ ಪಥದಲ್ಲಿ ಮುಂದುವರಿಯುತ್ತಿದ್ದ. ಆದರೆ, ಆ ಕೂಡಲೇ ನಕ್ಷತ್ರಗಳು ಎದ್ದುಬಂದು ತಮ್ಮ ಸಹಕಾರವಿತ್ತು, ಅವರ ಆನಂದಕ್ಕೆ ಕಳೆಯೇರಿಸುತ್ತಿದ್ದುವು.

ನಿಜವಾಗಿ ನೋಡಿದರೆ ಅವರಿಬ್ಬರು ಎಷ್ಟೇ ಕತ್ತಲೆಯಲ್ಲಿದ್ದರೂ ಒಬ್ಬರಿಗೊಬ್ಬರು ಜ್ಯೋತಿಯಾಗಿ ಬೆಳಕಾಗಿ ಅವರಿದ್ದೆಡೆ ಪ್ರಭೆಯಿರುತ್ತಿತ್ತು.

೨. ನೆರಳಿನ ಆರಂಭ

ಆ ದಿನಗಳಂದು ಪ್ಯಾರಿಸಿನಲ್ಲಿ ವಾಂತಿಬೇಧಿ ರೋಗ ಪ್ರಬಲವಾಗಿ ಹಬ್ಬಿತ್ತು. ಆದರೆ ಮೇರಿಯಸ್, ಕೋಸೆಟ್ಟೆಯರಿಗೆ ಊರಿನ ಯಾವ ಅವಾಂತರವೂ ಗಮನಕ್ಕೆ ಬಂದಿರಲಿಲ್ಲ. ಅವರು ತಂತಮ್ಮ ಪ್ರೇಮದಿಂದ ಒಂದು ವಿಧದಲ್ಲಿ ಮತ್ತರಾಗಿಯೇ ಇದ್ದರು. ಮೇರಿಯಸ್ ತಾನು ಬ್ಯಾರನ್ ಪೋಂಟ್‌ಮರ್ಸಿಯ ಮಗನೆಂದೂ ತನ್ನ ಮಾತಾಪಿತೃಗಳು ಮೃತರಾಗಿದ್ದರೆಂದೂ ವಕೀಲಿವೃತ್ತಿಯನ್ನು ಅಭ್ಯಸಿಸಿದ್ದರೂ ತಾನು ಪುಸ್ತಕ, ಪತ್ರಿಕೆಗಳಿಗೆ ಬರಹಗಳನ್ನೊಪ್ಪಿಸಿ ಆ ವ್ಯಾಸಂಗದ ಉತ್ಪತ್ತಿಯಿಂದ ಜೀವಿಸುತ್ತಿದ್ದ ಬಡವನೆಂದೂ ಕೋಸೆಟ್ಟೆಗೆ ತಿಳಿಸಿದ್ದ. ಕೋಸೆಟ್ಟಿ ತಾನು ತಾಯಿಯಿಲ್ಲದವಳೆಂದೂ ತಂದೆಯಾದ ಮಾನ್ಸರ್ ಫಾಶೆಲೆವೆಂಟರಿಂದ ಸಾಕಲ್ಪಡುತ್ತಿರುವುದೆಂದೂ ತನ್ನ ವಿದ್ಯಾಭ್ಯಾಸ ಕಾನ್ವೆಂಟಿನಲ್ಲಿ ಆಗಿದೆಯೆಂದೂ ಮೇರಿಯಸನಿಗೆ ಅರುಹಿದ್ದಳು. ತನ್ನ ತಂದೆಯ ಬಡತನದ ಜೀವನಕ್ರಮವನ್ನೂ ಅವನು ದೀನದರಿದ್ರರಿಗೆ ಸಹಾಯ ಮಾಡುತ್ತಿದ್ದ ವಿಷಯವನ್ನೂ ತಾನು ಎಷ್ಟೇ ಬಡತನದಿಂದ ಜೀವಿಸಿದರೂ ತನ್ನ ಮಟ್ಟಿಗೆ ಶ್ರೀಮಂತಿಕೆಯ ಉಡುಗೆತೊಡಿಗೆ ಊಟ ಉಪಚಾರಗಳನ್ನು ಒತ್ತಾಯದಿಂದಲೂ ಪ್ರೀತಿಯಿಂದಲೂ ಒದಗಿಸುತ್ತಿದ್ದನೆಂದೂ ಕೋಸೆಟ್ಟೆ ಉತ್ಸಾಹದಿಂದ ಮೇರಿಯಸನಿಗೆ ಹೇಳಿದ್ದಳು. ಈ ರೀತಿ ಅವರು ತಮ್ಮ ಜೀವನಚರಿತ್ರೆ, ದಿನಚರಿ ಮೊದಲಾದವನ್ನು ವಿನಿಮಯಿಸಿಕೊಳ್ಳುತ್ತ ಹಾಸ್ಯ ವಿನೋದಗಳನ್ನು ಮಾಡಿಕೊಳ್ಳುತ್ತ, ಗಂಟೆಗಟ್ಟಳೆ ಒಬ್ಬರ ಕೈಯನ್ನು ಮತ್ತೊಬ್ಬರು ಒತ್ತಿಕೊಂಡು, ಮೈಮೈಮುಟ್ಟಿಕೊಂಡು, ಮುಖನೋಡಿಕೊಂಡು ಸಂತೋಷಪಟ್ಟುಕೊಳ್ಳುತ್ತ ಕುಳಿತಿರುತ್ತಿದ್ದರು.

ಕೋಸೆಟ್ಟಿಗೆ ಮೇರಿಯಸನ ಬಡದುಸ್ತಾಗಲೀ ಬಡತನದ ಬಾಳಾಗಲೀ ಗಮನಕ್ಕೆ ಬಂದಿರಲಿಲ್ಲ. ಅವನ ಮುಖ, ದೇಹ, ಮಾತು ವಿಶಿಷ್ಟವೂ ದೇವಲೋಕದ್ದೇ ಎಂದು ತೋರುತ್ತಿದ್ದುವು. ಅವನಿಗೊಂದು ಕಾಲ್ಪನಿಕ ಕಿರೀಟವನ್ನಿಟ್ಟು, ತನ್ನ ಮನೋಮಯ ಮಂಟಪದಲ್ಲಿರಿಸಿಕೊಂಡು, ತನ್ನ ಪರಮದೇವತೆಯೆಂದು ಆರಾಧಿಸುತ್ತಿದ್ದಳು. ಇದೇ ವಿಧದಿಂದ ಇದೇ ಪ್ರಮಾಣದಿಂದ ಸಹ ಮೇರಿಯಸನೂ ಕೋಸೆಟ್ಟೆಯನ್ನು ಪ್ರೀತಿಸುತ್ತಿದ್ದ, ಮತ್ತು ಕೋಸೆಟ್ಟೆಯ ಉಡುಗೆ, ಅದರ ನೆರಿ, ಅವಳ ಸ್ಲಿಪ್ಪರುಗಳು, ಬಾಚಣಿಗೆಗೆ ಸಿಕ್ಕದೆ ಅವಳ ಕುತ್ತಿಗೆಯಲ್ಲಿ ತಾವಾಗಿಯೇ ಎದ್ದು ನಲಿಯುತ್ತಿದ್ದ ನಾಲ್ಕಾರು ಕೂದಲಿನಿಂದ ಪ್ರಾರಂಭವಾಗಿ ಅವಳ ಕಾಲುಗುರು, ಮುಖ, ತಲೆ ಸರ್ವಸ್ವವೂ ಮೇರಿಯಸ್ ತನ್ನ ಸ್ವಂತದ್ದೆಂದು ಗ್ರಹಿಸುತ್ತ ತನ್ನ ಇಂಥ ಶ್ರೀಮಂತಿಕೆಗೂ ಅಧಿಕಾರಸಂಪನ್ನತೆಗೂ ಹೆಮ್ಮೆಪಡುತ್ತಿದ್ದ. ಆದರೆ ಅಧಿಕಾರದ ಹೆಮ್ಮೆಯೊಂದೆಡೆಯಿದ್ದರೆ ಅದರ ಜೊತೆಯಲ್ಲೇ ಅವನು ಅವಳ ದಾಸಾನುದಾಸನಾಗಿ, ಅವಳು ತನಗೆ ದೊರೆತಿದ್ದ ದೇದೀಪ್ಯಮಾನವಾದ ಪ್ರಭಾವಳಿಯಿಂದ ಆವೃತವಾದ ಒಬ್ಬ ದೇವಕನ್ಯೆಯೆಂದು ತಿಳಿಯುತ್ತ ಅವಳನ್ನು ಆರಾಧಿಸುತ್ತಿದ್ದ. ಅವರ ಪ್ರೇಮದಲ್ಲಿ ಕಾಮುಕತೆ ಇರಲಿಲ್ಲ—ದೇಹದ ಕುರಿತಾಗಿ ಮುಖ್ಯ ಗಮನವಿರಲಿಲ್ಲ. ಕೋಸೆಟ್ಟಿ ಒಮ್ಮೆ ನೆಲದಲ್ಲಿ ಬಿದ್ದು ಹೋಗಿದ್ದ ತನ್ನ ವಸ್ತು ಒಂದನ್ನು ಹೆಕ್ಕಿತೆಗೆಯಲು ಬಗ್ಗಿದ್ದಾಗ ಅವಳ ರವಕೆ ಸಡಿಲವಾದುದನ್ನು ಕಂಡು ಮೇರಿಯಸ್ ಬೇರೊಂದು ಕಡೆ ನೋಡಿದ್ದ.

ಮೇರಿಯಸ್ ಮತ್ತು ಕೋಸೆಟ್ಟೆಯರ ಪ್ರೇಮದ ಬೆಳೆವಣಿಗೆ ಕುರಿತು ಜೀನ್‌ವಾಲ್‌ಜೀನನಿಗೆ ಎಳ್ಳಷ್ಟೂ ಗೊತ್ತಾಗಿರಲಿಲ್ಲ. ಕೋಸೆಟ್ಟಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಆನಂದಭರಿತಳಾಗಿ, ಹೊಸ ಹೊಸ ಉಡುಪನ್ನು ಧರಿಸಿ ನಲಿಯುತ್ತಿದ್ದುದನ್ನು ಕಂಡು ಅವನು ಬಹಳ ಸಂತೋಷಪಟ್ಟುಕೊಂಡ. ತನ್ನ ಎಲ್ಲ ಏರ್ಪಾಡುಗಳನ್ನು ಕೋಸೆಟ್ಟಿ ಮೆಚ್ಚಿರುವಳೆಂದೂ ಅವಳು ತೃಪ್ತಿಯಿಂದಲೇ ತನ್ನನ್ನು ಮತ್ತಷ್ಟು ಪ್ರೀತಿಸುತ್ತಿರುವಳೆಂದೂ ಗ್ರಹಿಸಿಕೊಂಡ.

ಮೇರಿಯಸನ ಭಾವನಾಮಯ ಜೀವನವನ್ನೂ ಮನೆಗೆ ಬರುವಾಗ ಸದಾ ರಾತ್ರಿಯಾಗುತ್ತಿದ್ದುದನ್ನೂ ಕೋರ್‌ಫರೇಕ್ ಕಂಡು ಒಂದು ದಿನ ಅವನು ಮೇರಿಯಸನಿಗೆ ಸ್ವಲ್ಪ ಬುದ್ಧಿವಾದ ಹೇಳಿದ. ಮೇರಿಯಸ್ ಯಾರೋ ಒಬ್ಬ ಸರ್ವಸಾಧಾರಣ ತರುಣಿಯಲ್ಲಿ ಅನುರಕ್ತನಾಗಿರಬೇಕೆಂದು ಅವನ ಸ್ನೇಹಿತರೆಲ್ಲ ಗ್ರಹಿಸಿಕೊಂಡಿದ್ದರು. ಯಾರು ಹೇಗೆ ವಿಚಾರಿಸಿದರೂ ಮೇರಿಯಸ್ ಯಾರಲ್ಲೂ ತನ್ನ ಅನುರಾಗದ ವಿಷಯ ತಿಳಿಸಲಿಲ್ಲ.

ಮೇರಿಯಸ್ ಒಂದು ದಿನ ಭಾವನಾತರಂಗಗಳಲ್ಲಿ ತೇಲಾಡುತ್ತ ಕೋಸೆಟ್ಟೆಯನ್ನು ನೋಡಲು ಹೋಗುತ್ತಿದ್ದಾಗ ಎಪೊನಿನ್ ಅವನಿಗೆ ಎದುರಾಗಿ ಬರುತ್ತಿದ್ದಳು. ಅವಳು ಮೇರಿಯಸನನ್ನು ನೋಡಿ, ಬಲು ಸಂತೋಷದಿಂದಲೂ ಹಿಂದಿನ ಸಲಿಗೆಯಿಂದಲೂ, "ಏನು ಮೇರಿಯಸ್, ಸವಾರಿ ಎತ್ತಕಡೆಗೆ?" ಎಂದು ಕೇಳಿದಳು.

ಅವಳನ್ನು ಕಂಡಾಗಲೇ ಮೇರಿಯಸನಿಗೆ ಬೇಸರವಾಗತೊಡಗಿತ್ತು. ಅವಳು ತನಗೆ ಕೋಸೆಟ್ಟೆಯ ಮನೆಯನ್ನು ತೋರಿಸಿಕೊಟ್ಟವಳೆಂದೂ ತನ್ನ ತಂದೆಯ ಜೀವರಕ್ಷಕ ತೆನಾರ್ಡಿಯರನ ಮಗಳೆಂದೂ ತಾನು ಅವಳ ಮನಸ್ಸನ್ನು ನೋಯಿಸಬಾರದೆಂದೂ ಮೇರಿಯಸ್ ಸ್ಪಷ್ಟವಾಗಿ ತಿಳಿಯುತ್ತಿದ್ದರೂ ಇಂಥ ಭಾವನೆಗಳ ಜೊತೆಯಲ್ಲೇ ಕೋಸೆಟ್ಟೆಯ ಮೇಲಿನ ಪ್ರೇಮದ ಎದುರು ಈ ಎಲ್ಲ ಹಂಗುಗಳೂ ಭಾವನೆಗಳೂ ಮಾಯವಾದುವು. ಅವನು ಸ್ವಲ್ಪ ಗಂಭೀರ ಮುಖಮುದ್ರೆಯಿಂದ ದೂರವಿರಿಸತಕ್ಕಂಥ ಸ್ವರಕಾಠಿಣ್ಯದಿಂದ, "ನೀವೋ, ಎಪೊನಿನ್! ನಾನು ತಿರುಗಾಡಲು ಹೊರಟೆ," ಎಂದ.

ಮೇರಿಯಸ್ ತನ್ನನ್ನು 'ನೀವು' ಎಂಬ ಗೌರವಸೂಚಕ ಶಬ್ದದಿಂದ ಸಂಬೋಧಿಸಿದುದನ್ನು ಕಂಡು ಎಪೊನಿನ್ನಳಿಗೆ ಉತ್ಸಾಹಭಂಗವಾಯಿತು, ವ್ಯಥೆಯೂ ಆಯಿತು. ಅವಳೆಂದಳು, "ಏನು ಮೇರಿಯಸ್, ನನ್ನೊಡನೆ ಕೋಪವೇ?"

"ಕೋಪವಿಲ್ಲವಮ್ಮಾ. ನಿಮ್ಮ ಹತ್ತಿರ ಕೋಪವೇಕೆ?" ಎಂದು ಮೇರಿಯಸ್ ಹಿಂದಿನ ಕ್ರಮ ದಿಂದಲೇ ಉತ್ತರವಿತ್ತ. ಎಪೊನಿನ್ನಳಿಗೆ ಬಲುದುಃಖವಾಯಿತು. ಅವಳು ಗದ್ಗದ ಕಂಠದಿಂದ, "ಮಾನ್ಸಿರ್ ಮೇರಿಯಸರೇ, ತಮಗೆ ನಮಸ್ಕಾರ," ಎಂದು ಹೇಳಿ ಹೊರಟು ಹೋದಳು.

೩. ಬೊಗಳುವ ಬಂಡಿ ನೀನೇತಕೆ ಚಂಡಿ ?

ಮಾರನೆಯ ರಾತ್ರಿ (ಜೂನ್ ೩, ೧೮೩೨) ಮೇರಿಯಸ್ ರೂ'ಪ್ಲಮೆಟಿನ ಅದೇ ರಸ್ತೆಯಲ್ಲಿ ಹೋಗುತ್ತಿದ್ದ. ಅವನ ಎದುರಾಗಿಯೇ ಎಪೊನಿನ್ನಳೂ ಬರುತ್ತಿದ್ದಳು. ಎಪೊನಿನ್ನಳನ್ನು ತಪ್ಪಿಸು ವುದಕ್ಕಾಗಿಯೇ ಮೇರಿಯಸ್ ಮೆಲ್ಲಗೆ ಒಂದು ಅಡ್ಡರಸ್ತೆ ಹಿಡಿದು ತನ್ನ ಗುರಿಯ ಕಡೆಗೆ ಹೋಗ ತೊಡಗಿದ. ಅವಳೂ ಇವನಷ್ಟೇ ಚುರುಕು ಬುದ್ಧಿಯವಳಾಗಿದ್ದುದರಿಂದ, ಇವನನ್ನು ಅಡಗಿ ಕೊಂಡೇ ಹಿಂಬಾಲಿಸಿ ಹೋದಳು. ಮೇರಿಯಸ್ ಕೊನೆಗೆ ರೂ'ಪ್ಲಮೆಟಿಗೆ ಹೋಗಿ ಕೋಸೆಟ್ಟಿಯ ಉದ್ಯಾನವನಕ್ಕೆ ನುಸುಳಿದ. ಈತ ಕೋಸೆಟ್ಟಿಯೊಡನೆ ಮಾತಾಡುವುದಕ್ಕಾಗಿಯೇ ಅಲ್ಲಿಗೆ ಹೋಗಿ ರುವುದೆಂದು ಎಪೊನಿನ್ ದೃಢವಾಗಿ ಊಹಿಸಿದ್ದಳು. ಕಬ್ಬಿಣದ ಬೇಲಿ ಕಲ್ಲಗೋಡೆಯೊಳಗೆ ಸೇರಿ ಕೊನೆಯಾಗುವ ಮೂಲೆಯಲ್ಲಿ, ಗೋಡೆಯ ಹೊರಬದಿಯಲ್ಲಿ, ಎಪೊನಿನ್ ಅಡಗಿ ಕುಳಿತು ಮೇರಿ ಯಸ್ ಹಿಂತಿರುಗಿ ಬರುವುದನ್ನು ನಿರೀಕ್ಷಿಸುತ್ತಿದ್ದಳು. ರಸ್ತೆಯಲ್ಲಿ ತಿರುಗಾಡುವವರಿಗೆ ಕಾಣಿಸದೆ ಉದ್ಯಾನವನಕ್ಕೆ ನುಗ್ಗಲು ಅನುಕೂಲವಾದ ಸ್ಥಳ ಇದೇ ಆಗಿದ್ದುದರಿಂದ ಮೇರಿಯಸ್ ಈ ಮೂಲೆ ಯನ್ನು ಹುಡುಕಿಯೇ ಒಳಗೆ ನುಗ್ಗಿದ್ದ. ಎಪೊನಿನ್ ಮೇರಿಯಸನನ್ನು ಕಾದು ಅಲ್ಲಿ ಕುಳಿತದ್ದೂ ಈ ಕಾರಣದಿಂದಲೇ ಆಗಿತ್ತು.

ಹೀಗೆ ಎಪೊನಿನ್ ಕುಳಿತು ಸಾಧಾರಣ ಒಂದು ಗಂಟೆ ಕಾಲಕಳೆಯುವಾಗ ಮೇರಿಯಸ್ ನುಗ್ಗಿದ ಸ್ಥಳಕ್ಕೆ ಮೊಂಟ್‌ಪಾರ್ನಿಸ್, ಗುಲ್ಮರ್, ಬ್ಯಾಬೆಟ್, ಕ್ಲೆಕೊಸಸ್, ಬ್ರುಜಾನ್ ಸಮೇತನಾಗಿ ತೆನಾರ್ಡಿಯರ್ ಬಂದ. ಅವರ ಕೈಯಲ್ಲಿ ಒಂದೊಂದು ವಿಧದ ಯಂತ್ರ ಸಾಧನಗಳೂ ಆಯುಧ ಗಳೂ ಇದ್ದುವು. ಅವರ ಮುಖಂಡ ತೆನಾರ್ಡಿಯರನಾಗಿದ್ದು, "ಇಲ್ಲೇ ಒಳಗೆ ನುಗ್ಗುವುದು ಸುಲಭ. ಸರಳನ್ನು ಕೊಯ್ದರೆ ಸರಿ," ಅಂದ.

"ಗರಗಸ ತಯಾರಿದೆ ಆದರೆ ಬಂಡಿ ಬೊಗಳಿದರೆ ?" ಅಂದ ಗುಲ್ಮರ್.

"ಬಂಡಿ ಎದುರು ಬಂದರೆ ಅದರ ಬಾಯಿ ಮುಚ್ಚಲು ಮದ್ದು ನನ್ನಲ್ಲಿದೆ. ಆದರೆ, ಮನೆಯಲ್ಲಿ ಯಾರುಯಾರು ಇದ್ದಾರೆಂದು ಮೊದಲೇ ತನಿಖೆ ಆಗಿದೆಯೇನು?" ಎಂದು ಬ್ರುಜಾನ್ ಕೇಳಿದ.

"ಮನೆಯೊಳಗೆ ಒಬ್ಬ ಮುದುಕ, ಒಬ್ಬಳು ಮುದುಕಿ, ಮತ್ತೊಬ್ಬ ತರುಣಿ ಮಾತ್ರ ಇರುವರು. ಬಂಡಿ ಇಲ್ಲ," ಎಂದು ತೆನಾರ್ಡಿಯರ್ ಹೇಳುತ್ತ ಎಪೊನಿನ್ ಕುಳಿತಿದ್ದ ಮೂಲೆಗೆ ಬರತೊಡಗಿದ. ಈ ಮಾತುಗಳನ್ನು ಕೇಳುತ್ತಲೂ ಈ ಜನರನ್ನೆಲ್ಲ ಅಡಗಿ ನೋಡುತ್ತಲೂ ಇದ್ದ ಎಪೊನಿನ್ ಆಗ ಹಠಾತ್ತನೆ ಎದುರು ಬಂದಳು. ತಂದೆಯನ್ನು ಕಂಡು ಸಂತೋಷಪಟ್ಟು, ಅವನು ಜೈಲಿನಿಂದ ತಪ್ಪಿಸಿಕೊಂಡು ಬಂದದ್ದು ಯಾವಾಗ ಎಂದೂ ತನ್ನ ತಾಯಿ ಹೇಗಿದ್ದಾಳೆಂದೂ ವಿಚಾರಿಸಿದಳು. ತೆನಾರ್ಡಿಯರ್ ಈ ಪ್ರಶ್ನೆಗಳಿಗೆ ಮೇಲಿಂದ ಮೇಲೆ ಉತ್ತರ ಕೊಡುತ್ತ ಮಗಳೇ ತನ್ನ ಕೆಲಸಕ್ಕೆ

ಅಡ್ಡಬರುತ್ತಿರುವಳೆಂದು ತಿಳಿದು ಕೋಪಿಸಿಕೊಂಡು, "ತಾಯಿಯ ಕಥೆ ನನಗೆ ಗೊತ್ತಿಲ್ಲ. ನಾನು ಬಂದದ್ದು ನಿನ್ನೆ. ಸದ್ಯ ದಾರಿ ಬಿಡು. ಹೆಚ್ಚು ಮಾತಾಡಲು ಪುರಸೊತ್ತಿಲ್ಲ," ಅಂದ. ಆಗ ಕಬ್ಬಿಣದ ಬೇಲಿಗೆ ಒರಗಿಕೊಂಡು ಎಪೊನಿನ್, "ಎಲ್ಲಿಗೆ ದಾರಿ?" ಎಂದು ಕೇಳಿದಳು.

"ಈ ಉದ್ಯಾನಕ್ಕಾಗಿ ಒಳಗಿನ ಮನೆ. ನಿನಗೆ ಗೊತ್ತಿದೆಯಲ್ಲ," ಎಂದ ತೆನಾರ್ಡಿಯರ್.

"ಇಲ್ಲಿ ಪ್ರಯೋಜನವಿಲ್ಲವೆಂದು ನಾನು ಹಿಂದೆಯೇ ತಿಳಿಸಿರುವೆನಲ್ಲ?"

"ಅದು ನಿನ್ನ ಅಭಿಪ್ರಾಯ. ನಮ್ಮ ಅಭಿಪ್ರಾಯವೇ ಬೇರೆ. ನಾವು ತನಿಖೆ ಮಾಡಿ ನೋಡುವೆವು. ಕೆಲಸ ಸಿಕ್ಕಿದಾಗ ಸುಮ್ಮನಿರಲು ಸಾಧ್ಯವೇನು ?"

"ನಿಮ್ಮ ಕೆಲಸ ಯಾವುದೂ ಪ್ರಯೋಜನವಾಗದು. ಅಲ್ಲಿ ಬಲಶಾಲಿ ನಾಯಿಯಿದೆ. ಅದು ಬೊಗಳಿದರೆ ನಿಮ್ಮ ಗತಿಯೇನು ಗೊತ್ತಿದೆಯೇ?" ಎಂದು ಎಪೊನಿನ್ ಕೇಳಿದಳು.

ಅವಳು ದರೋಡೆಕಾರರು ಮಾತಾಡುತ್ತಿದ್ದ ಭಾಷೆಯಿಂದ, "ಅಲ್ಲಿ ಬಲಶಾಲಿ 'ಬಂಡಿ' ಇದೆ . . . ." ಎಂದನ್ನುವ ಬದಲು, ಸುಶಿಕ್ಷಿತರ ಮನೆಯ ಭಾಷೆಯಿಂದಲೇ " . . . . ಬಲಶಾಲಿ 'ನಾಯಿ' ಇದೆ. . ." ಅಂದದ್ದು ತೆನಾರ್ಡಿಯರನ ಗಮನಕ್ಕೆ ಬರಲಿಲ್ಲ. ಅವಳಿಗೆ ಮೇರಿಯಸನ ಪರಿಚಯವಾದನಂತರ ಅವನನ್ನು ಪ್ರೀತಿಸಿ ಗೌರವಿಸುತ್ತಿದ್ದುದರಿಂದ ಅವಳು ಬಂಡು ಮಾತಾಡುವುದನ್ನು ಸಂಪೂರ್ಣವಾಗಿ ಬಿಟ್ಟಿದ್ದಳು. ತಾನು ಉತ್ತಮಳಾಗಬೇಕೆಂಬ ಆಕಾಂಕ್ಷೆ ಅವಳಿಗೆ ತುಂಬ ಇತ್ತು. ತನ್ನ ಪ್ರೀತಿಗೆ ಭಾಜನನಾದ ಮೇರಿಯಸ್ ಇರುವ ಸ್ಥಳಕ್ಕೆ ದರೋಡೆಕಾರರ ಪ್ರವೇಶವಾಗಕೊಡದೆಂಬ ಉದ್ದೇಶದಿಂದ, ಅವಳು ಈ ರೀತಿಯಾಗಿ ವರ್ತಿಸುತ್ತಿದ್ದಳು.

ಎಪೊನಿನ್ ನಾಯಿಯ ಕುರಿತು ತಿಳಿಸಿದಾಗ ತೆನಾರ್ಡಿಯರ್ ಅಂದ, "ನಾಯಿಗೆ ತಕ್ಕ ಮದ್ದು ನಮ್ಮಲ್ಲಿದೆ."

ತೆನಾರ್ಡಿಯರ್ ಕಕ್ಕುಬೀಳುವಂತೆ, ಹಠಾತ್ತನೆ ಗಟ್ಟಿಸ್ವರದಿಂದ, ಧೈರ್ಯದಿಂದ ಎಪೊನಿನ್ ಹೇಳಿದಳು, "ಆ ನಾಯಿಯೇ ನಾನು. ಬೇರೊಂದಿಲ್ಲ. ನಾನು ಬೊಗಳುತ್ತೇನೆ, ದಾರಿ ಬಿಡುವುದಿಲ್ಲ."

ಈ ಮಾತನ್ನು ಕೇಳಿ ಮೊಂಟ್‌ಪಾರ್ನಿಸ್ ತನ್ನ ದೊಡ್ಡ ಚೂರಿಯನ್ನು ಹಿಡಿದುಕೊಂಡು ಎದುರು ಬರತೊಡಗಿದ. ಅವನು ಬರುತ್ತಿದ್ದಾಗಲೇ ಎಪೊನಿನ್ ಸ್ವರ ದೊಡ್ಡದು ಮಾಡುತ್ತ ಮಾತಾಡತೊಡಗಿದಳು. ಅವಳು ಮೆಲ್ಲಗೆ ಹಗುರ ಸ್ವರದಿಂದ ಮಾತಾಡಬೇಕೆಂದು ಅವರೆಲ್ಲರೂ ಪ್ರಾರ್ಥಿಸಿಕೊಂಡರು. ಮೊಂಟ್‌ಪಾರ್ನಿಸ್ ಮುಂದುವರಿಯದೆ ನಿಂತಲ್ಲೇ ನಿಂತ. ಎಪೊನಿನ್ ಪುನಃ ಹೇಳಿದಳು, "ನೋಡಿ, ನೀವಿಂದು ಈ ಮನೆಗೆ ನುಗ್ಗಕೂಡದು. ಅದು ನನ್ನ ಆಜ್ಞೆ, ನಾನು ಯಾರಿಗೂ ಹೆದರುವವಳಲ್ಲ. ನನ್ನ ಅಧಿಕಾರವನ್ನು ನೀವು ಯಾರೂ ಪ್ರಶ್ನಿಸತಕ್ಕದ್ದೂ ಅಲ್ಲ. ನನ್ನ ತಂದೆಯೇ ಒಳನುಗ್ಗುವುದಾದರೂ ನನ್ನನ್ನು ಕೊಂದು ಮಾತ್ರ ನುಗ್ಗಬಹುದು. ನೀವು ನನ್ನನ್ನು ಮುಟ್ಟುವ ಮೊದಲೇ ನಾನು ಕೂಗುವೆನು, ಬೊಬ್ಬೆ ಹೊಡೆಯುವೆನು. ಅನಂತರ ನಾನು ಬಲಿಯಾದರೂ ದುಃಖವಿಲ್ಲ. ಆಗ ನಿಮ್ಮೆಲ್ಲರ ಎದುರು ಪ್ಯಾರಿಸೇ ಎದ್ದುಬರುವುದು. ನೀವು ಆರು ಜನರು ನನ್ನ ಒಬ್ಬಳ ಎದುರು ಇರುವಿರೆಂಬ ಧೈರ್ಯ ನಿಮಗಿದ್ದರೆ, ನನ್ನ ಜೀವದ ಆಸೆ ಬಿಟ್ಟಿರುವ ಧೈರ್ಯ ನನಗಿದೆ."

ತನ್ನ ಮಗಳ ಪರಾಕ್ರಮ ಅರಿತಿದ್ದ ತೆನಾರ್ಡಿಯರ್ ಅವಳ ಮಟ್ಟಿಗೆ ಎಲ್ಲರೂ ಹೆದರಲೇ ಬೇಕೆಂದು ತನ್ನ ಕಡೆಯವರಿಗೆ ತಿಳಿಸಿದ. ಹಾಗಾಗಿ ಯಾರೂ ಮುಂದೆ ಬರದೆ ಗೊಣಗುಟ್ಟಿಕೊಂಡು ಅಲ್ಲಿಂದ ಹೊರಟುಹೋದರು.

ಎಪೊನಿನ್ ಅಡಗಿಕೊಂಡೇ ಅವರನ್ನು ಹಿಂಬಾಲಿಸಿ ಅವರೆಲ್ಲರೂ ಬೇರೆಬೇರೆಯಾಗಿ ಚದರಿ ಹೋದದ್ದನ್ನು ಕಂಡನಂತರ ಸಮಾಧಾನಪಟ್ಟುಕೊಂಡು ತನ್ನ ದಾರಿ ಹಿಡಿದು ಹೋದಳು.

೪. ಮೇರಿಯಸನ ವಿಳಾಸ

ದರೋಡೆಕಾರರೂ ಎಪೊನಿನ್ನಳೂ ಉದ್ಯಾನವನದ ಒಳಗೆ ಪ್ರವೇಶಿಸುವುದರ ಬಗ್ಗೆ ವಾಗ್ವಾದ ನಡೆಸುತ್ತಿದ್ದಾಗಲೇ ಮೇರಿಯಸನೂ ಕೋಸೆಟ್ಟಿಯೂ ಉದ್ಯಾನವನದ ಇನ್ನೊಂದು ಕಡೆ ಸರಸ ಸಲ್ಲಾಪಗಳಲ್ಲಿ ಮಗ್ನರಾಗಿದ್ದರು. ಆದರೂ ಈ ದಿನ ಕೋಸೆಟ್ಟಿ ಎಂದಿನಷ್ಟು ಸಂತೋಷವಾಗಿರ ಲಿಲ್ಲ. ಅವಳು ಮಾತಾಡುವಾಗಲೆಲ್ಲ ಅವಳ ಹಿಂದೆಯೇ ಯಾವುದೋ ಒಂದು ಭಯ ರೂಪತಾಳಿ ನಿಂತಿದ್ದಂತೆಯೇ ಅವಳು ಹೆದರಿ ಮಾತಾಡುತ್ತಿದ್ದಳು. ಈ ಪರಿಸ್ಥಿತಿಯನ್ನು ಮೇರಿಯಸ್ ತಿಳಿದು, ಕೋಸೆಟ್ಟಿಯ ಆಂತರಿಕ ದುಃಖವೇನೆಂದು ಬಲು ಮೃದುವಾಗಿ ವಿಚಾರಿಸಿದ. ತಾನು ತನ್ನ ಅಭಿಪ್ರಾಯವನ್ನು ಮೇರಿಯಸನಿಗೆ ತಿಳಿಸುವುದು ನ್ಯಾಯವೆಂದೇ ನಿಶ್ಚೈಸಿಕೊಂಡು ಅವಳು ಗದ್ಗದ ಕಂಠದಿಂದ ನುಡಿದಳು, "ಸದ್ಯವೇ ತಂದೆಯವರು ಈ ಸ್ಥಳವನ್ನು ಬಿಟ್ಟು ದೂರದ ಊರಿಗೆ ಹೋಗುವರಂತೆ. ಇಂಥಲ್ಲಿಗೆಂದು ತಿಳಿಸಿರುವುದಿಲ್ಲ. ನಾನು ಸಾಮಾನುಗಳನ್ನು ಕಟ್ಟಿಟ್ಟು ತಯಾ ರಾಗಿರಬೇಕೆಂದೂ ತಿಳಿಸಿರುವರು. ಅವರು ಇಂಗ್ಲೆಂಡಿಗೆ ಹೋದರೂ ಹೋಗಬಹುದು."

ಈ ವರ್ತಮಾನದಿಂದ ಮೇರಿಯಸ್ ಗಾಬರಿಯಾದ, ಮತ್ತು ದುಃಖಿತನಾದ. ತನ್ನ ದುಃಖದ ಕಾರಣವಾಗಿ ಪೂರ್ವಾಪರ ವಿಚಾರಿಸಿಕೊಳ್ಳದೆ, "ಹಾಗಾದರೆ ಕೋಸೆಟ್ಟಿ, ನನ್ನನ್ನು ಬಿಟ್ಟು ಹೋಗಲೂ ತಯಾರಿರುವೆಯೇನು?" ಎಂದೇ ಕೇಳಿಬಿಟ್ಟ.

ತನ್ನ ಅಸಹಾಯ ಪರಿಸ್ಥಿತಿಯನ್ನರಿಯದೆ ಮೇರಿಯಸ್ ಕೇಳಿದ ಈ ಪ್ರಶ್ನೆ ಕೋಸೆಟ್ಟಿಯನ್ನು ಮತ್ತಷ್ಟು ದುಃಖಕ್ಕೆ ಈಡುಮಾಡಿತು. ಅಳುಮೊಗದಿಂದಲೇ, "ನಿನ್ನ ಮೇಲಿನ ನನ್ನ ಪ್ರೇಮ ಎಷ್ಟಿದೆಯೆಂಬುದನ್ನು ನೀನು ಇನ್ನೂ ಅರಿತಿಲ್ಲವೇ? ಆದರೆ ಮೇರಿಯಸ್ ತಂದೆಯವರು ಆ ರೀತಿ ಅಪೇಕ್ಷೆಪಟ್ಟರೆ ನಾನು ನಿರಾಕರಿಸುವುದು ತಾನೇ ಹೇಗೆ? ಆದರೆ, ತಂದೆಗಾಗಿ ನಿನ್ನನ್ನು ಬಿಟ್ಟರೆ ನಾನು ಸಾಯದೆ ಉಳಿಯುವವಳೇನು, ಮೇರಿಯಸ್? ಇದೇ ನನ್ನ ದುಃಖ," ಎಂದು ಹೇಳಿದಳು, ಕೊನೆಗೆ ಅಳಲಾರಂಭಿಸಿದಳು.

ಕೋಸೆಟ್ಟಿ ಅಳುವುದನ್ನು ಕಂಡು ಅವನಿಗೆ ಮತ್ತಷ್ಟು ದುಃಖವಾಯಿತು. ಅವಳನ್ನು ಸಮಾಧಾನ ಮಾಡಲು ಪ್ರಯತ್ನಿಸಿದ. ಆಗಲೇ ಅವನಿಗೆ ಒಂದು ಹೊಸ ಯೋಚನೆ ಸ್ಫುರಿಸಿತು. ಕೋಸೆಟ್ಟಿ ಯನ್ನು ನೋಡಿ, "ಕೋಸೆಟ್ಟೀ! ನನಗೆ ಎರಡೇ ದಿನ ಪುರಸೊತ್ತು ಕೊಡು. ಈ ಸಂದರ್ಭಕ್ಕೆ ತಕ್ಕುದಾದ ಸಮಾಧಾನ ಕೊಡುವೆನು. ನಾನೊಂದು ದಾರಿ ಕಂಡುಹಿಡಿದಿರುವೆನು. ನಾಡಿದ್ದು ೯ ಗಂಟೆಗೆ ಇದೇ ಸ್ಥಳಕ್ಕೆ ಬಂದು ಎಲ್ಲವನ್ನೂ ತಿಳಿಸುವೆನು. ಈ ಮಧ್ಯದಲ್ಲೇ ನನಗೆ ಏನನ್ನಾದರೂ ತಿಳಿಸುವ ಅಗತ್ಯ ನಿನಗೆ ಬಿದ್ದರೆ ರ್‍ಯೂ ಡ ಲ ವೆರೆರಿಯ ಸಂಖ್ಯೆ ೧೬ನೇ ಮನೆಯ ಮಾನ್ಸರ್ ಕೋರ್‌ಫರೇಕರ ಮೂಲಕ ನನಗೆ ಪತ್ರ ಕಳುಹಿಸಬಹುದು," ಎಂದು ಹೇಳಿ, ಆ ವಿಳಾಸ ಜ್ಞಾಪಕ ದಲ್ಲಿ ಉಳಿಯಲು, ಅಲ್ಲೇ ಗೋಡೆಯ ಮೇಲೆ, ಕಬ್ಬಿಣದ ಮೊಳೆಯಿಂದ, "ಸಂಖ್ಯೆ ೧೬, ರ್‍ಯೂ'ವೆರೆರಿಯ" ಎಂದು ಕುತ್ತಿ ಬರೆದ.

ಮೇರಿಯಸನ ಮಾತಿನಲ್ಲಿ ಭರವಸೆಪಟ್ಟು ಕೋಸೆಟ್ಟಿ ಶಾಂತಳಾದಳು. ಅವರು ಆಲಿಂಗಿಸಿ ಮುತ್ತುಕೊಟ್ಟುಕೊಂಡರು. ಅನಂತರ ಮೇರಿಯಸ್ ತನ್ನ ಮನೆಯ ಕಡೆಗೆ ಹೊರಟುಹೋದ.

ಇಷ್ಟು ನಡೆಯುವುದರ ಮೊದಲೇ ಎಪೊನಿನ್ ದರೋಡೆಕಾರರ ಹಿಂದೆಯೇ ಹೋಗಿದ್ದಳು.

೫. ವೃದ್ಧಾಪ್ಯದ ವಕ್ರತೆ

ವೃದ್ಧ ಗಿಲೆನಾರ್ಮಂಡನಿಗೆ ತೊಂಬತ್ತೊಂದು ತುಂಬುತ್ತ ಬಂದಿತ್ತು, ಹಲ್ಲುಗಳಲ್ಲಿ ಹೆಚ್ಚಿನವು ಬಿದ್ದಿದ್ದುವು. ದೃಷ್ಟಿ ಮಂದವಾಗಿತ್ತು. ತಾನು ಇನ್ನು ಹೆಚ್ಚು ವರ್ಷ ಬದುಕಲಾರೆನೆಂದು ಸದಾ ಹೆದರಿಕೊಂಡೇ ಇರತೊಡಗಿದ್ದ. ಮೇರಿಯಸ್ ದೂರದೂರವಾದಷ್ಟೂ ಅವನನ್ನಗಲಿ ದಿನ ಕಳೆದಷ್ಟೂ, ಅವನ ಮೇಲಿನ ಪ್ರೇಮ ಹೆಚ್ಚುತ್ತ ಬಂದಿತ್ತು. ಮೇರಿಯಸ್ ಪಶ್ಚಾತ್ತಾಪ ಪಟ್ಟು ಕೊಂಡು, ಶರಣಾರ್ಥಿಯಾಗಿ ಬಂದು ತನ್ನ ಸಂಸಾರಕ್ಕೆ ಸೇರುವನೆಂದು ಗಿಲೆನಾರ್ಮಂಡ್ ಊಹಿಸಿ, ನಿರೀಕ್ಷಿಸಿ, ಸೋತು ದುಃಖಿಸುತ್ತಿದ್ದ. ಆದರೂ, ಎಂದಾದರೂ ಅವನು ಬಂದೇ ಬರುವನೆಂದು ಊಹಿಸಿಕೊಂಡಾದರೂ ಸ್ವಲ್ಪ ಸಮಾಧಾನ ಸಂತೋಷ ಪಡೆದುಕೊಳ್ಳುತ್ತಿದ್ದ.

ಕೋಸೆಟ್ಟಿಗೆ ತನ್ನ ವಿಳಾಸ ತಿಳಿಸಿ ಹೊರಟ ಮರುದಿನ ಮೇರಿಯಸ್ ಅಜ್ಜನನ್ನು ನೋಡಿ ಬರಲು ಅವನಲ್ಲಿಗೆ ಹೋದ. ಮನೆಯ ಆಳು ಮೇರಿಯಸ್ ಬಂದಿದ್ದ ವರ್ತಮಾನವನ್ನು ಗಿಲೆನಾರ್ಮಂಡ ನಿಗೆ ತಿಳಿಸಿ, ಅವನನ್ನು ಒಳಗೆ ಕರೆತರಬೇಕೇ ಎಂದು ಕೇಳಿದ.

ಈ ವರ್ತಮಾನ ಕೇಳಿ ಗಿಲೆನಾರ್ಮಂಡನಿಗೆ ಬಹಳ ಸಂತೋಷವಾಯಿತು. ಆದರೂ ತನ್ನ ಪ್ರಾಯ, ಗೌರವ, ರಾಜಕೀಯ ಪಕ್ಷದ ಗೌರವ, ಹಿರಿತನದ ಗೌರವ ಉಳಿಯುವಂತೆ ಮಾತ್ರ ಮಾತಾಡಿ, ಮೇರಿಯಸನನ್ನು ಬಗ್ಗಿಸಿ ಸರಿದಾರಿಗೆ ತರಬೇಕೆಂದು ನಿಶ್ಚೈಸಿಕೊಂಡು, ಇದಕ್ಕೆ ತಕ್ಕು ದಾದ ಮುಖಮುದ್ರೆ ಮಾಡಿಕೊಂಡು ಕುಳಿತ. ಅಜ್ಜನ ಅಪ್ಪಣೆ ಪ್ರಕಾರ ಮೇರಿಯಸ್ ಎದುರು ಬಂದು ನಿಂತ. ಮೇರಿಯಸನನ್ನು ಕಂಡಾಗಲಂತೂ ಗಿಲೆನಾರ್ಮಂಡನಿಗೆ ಮತ್ತಷ್ಟು ಸಂತೋಷ ವಾಯಿತು. ಆದರೆ ಅವನ ಮುಖದಲ್ಲಿ ಉಗ್ರತೆಯನ್ನು ತೋರಿಸಿಕೊಂಡು, "ನಿನಗೇನಾಗ ಬೇಕಿಲ್ಲಿ?" ಎಂದು ಗದರಿಸಿದ.

ಮೇರಿಯಸ್ ಸ್ವಲ್ಪ ಗಾಬರಿಗೊಂಡ. ಸಮರ್ಪಕ ಉತ್ತರ ಕೊಡಬೇಕೆಂದು ಯೋಚಿಸಿ ಮಾತು ಪ್ರಾರಂಭಿಸುವ ಮೊದಲೇ ಗಿಲೆನಾರ್ಮಂಡ್, "ಹಾಗಾದರೆ, ಇಲ್ಲಿಗೆ ಬಂದದ್ದೇಕೆ? ಹೇಳುವುದೇನಾ ದರೂ ಇದ್ದರೆ ಬರಲಿ!" ಅಂದ.

ಮೇರಿಯಸನನ್ನು ನೋಡುತ್ತ ಹೋದ ಹಾಗೆ ಅವನನ್ನು ಅಪ್ಪಿಕೊಳ್ಳಬೇಕೆಂದು ಗಿಲೆ ನಾರ್ಮಂಡನಿಗೆ ತೋರತೊಡಗಿತು. ಮೇರಿಯಸ್ ಸುಮ್ಮನೆ ದೂರ ನಿಂತಿರುವುದರ ಬದಲು ಅವನಾಗಿಯೇ ಬಂದು ತನ್ನನ್ನೇಕೆ ಅಪ್ಪಿಕೊಳ್ಳುತ್ತಿಲ್ಲ ಎಂದೂ ಗ್ರಹಿಸತೊಡಗಿದ. 'ಹಾಗಾದರೆ' ಎಂದು ಅವನು ಹೇಳುವಾಗ ತಾನು ಮೇರಿಯಸನನ್ನು ಸಂಪೂರ್ಣ ಕ್ಷಮಿಸಲು ತಯಾರಿರುವು ದಾಗಿಯೂ ಇವನ ಕಟ್ಟುಕಟ್ಟಲೆಯ ಕ್ಷಮಾಯಾಚನೆ ಮಾತ್ರ ಇನ್ನು ಬಾಕಿಯಿತ್ತೆಂದೂ ಗಿಲೆ ನಾರ್ಮಂಡನ ಹೃದಯದಲ್ಲಿ ಭಾವನೆ ಉಕ್ಕಿ ಬರುತ್ತಿತ್ತು. ಆದರೆ, ಮೇರಿಯಸ್ ಅಜ್ಜನ ಹೃದಯ ತಿಳಿದಿರಲಿಲ್ಲ. ಇವನು ಸ್ವಲ್ಪ ಹೆದರಿಕೊಂಡು, "ಸರ್. . . " ಎಂದು ಮಾತು ಪ್ರಾರಂಭಿಸಿದ. ಆದರೆ, ಮಾತು ಮುಂದುವರಿಯಲು ಬಿಡದೆ, ಇವನಿಗೆ ಮುಂದಿನ ಮಾತಿನ ಮಾರ್ಗಸೂಚಕವಾಗಿ, "ಏನು, ಕ್ಷಮೆಕೇಳಲು ಬಂದಿರುವೆ ತಾನೆ? ನಿಮ್ಮ ಕ್ರಾಂತಿಕಾರರ ಮತ ತಪ್ಪೆಂದು ಈಗಲಾದರೂ ತಿಳಿಯಿತೆ? ಕ್ಷಮೆ ಬೇಡುವುದಾದರೆ ಹಾಗಾದರೂ ಮಾಡಿಮುಗಿಸು," ಎಂದು ಕಾತರದಿಂದಲೇ ಗಿಲೆನಾರ್ಮಂಡ್ ಹೇಳಿದ.

"ಅಜ್ಜ, ಸ್ವಲ್ಪ ಸಾವಧಾನವಾಗಿ ನನ್ನ ಮಾತು ಕೇಳಬೇಕು. ಕರುಣೆ ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ," ಎಂದ ಮೇರಿಯಸ್.

ಗಿಲೆನಾರ್ಮಂಡನ ಮನಸ್ಸು ಕರಗಿತು. ಅವನ ಕಣ್ಣುಗಳಲ್ಲಿ ನೀರು ಬಂತು. ಆದರೂ, ತನ್ನ ಹಿಂದಿನ ಕಾಲದ ಉಗ್ರ ಹೊರಮೈಯನ್ನು ತೋರಿಸಬೇಕೆಂದು, ಮುಖವನ್ನು ಮತ್ತಷ್ಟು ಕಠಿಣಸ್ಥ ನೆಂದು ಕಾಣುವಂತೆ ಮಾಡಿಕೊಂಡು, "ನಿನ್ನಂಥ ವಕೀಲ—ಪ್ರಾಯದ ಯುವಕ—ನನ್ನಂಥ ಮುದುಕ, ಹಲ್ಲುಬಿದ್ದ, ಕಣ್ಣುಕಾಣದ ಹಣ್ಣುಹಣ್ಣು ಮುದುಕನ ಹತ್ತಿರ ಕರುಣೆ ತೋರಿಸಬೇಕೆಂದು ಕೇಳುವಂತೆ ಈಗಲಾದರೂ ಆಯಿತೇ? 'ಸಾವಧಾನವಾಗಿ,' 'ಕರುಣೆ ತೋರಿಸಬೇಕು' ಇದೆಲ್ಲ ನಿಮ್ಮಂಥ ವಕೀಲರು ಕೋರ್ಟಿನಲ್ಲಿ ಮಾತಾಡುವ ನಟನೆಯ ಭಾಷೆಯೆಂದು ಕಾಣುತ್ತದೆ," ಎಂದು ಗಿಲೆನಾರ್ಮಂಡ್ ಹೇಳತೊಡಗಿದ. ಮೇರಿಯಸ್ ಗಾಬರಿಗೊಳ್ಳತೊಡಗಿ, "ಅಜ್ಜ, ನಾನು ನಿನ್ನೆದುರಿಗಿರುವುದೇ ನಿನಗೆ ಸಮಾಧಾನವಿಲ್ಲವೆಂದು ತೋರುತ್ತದೆ. ನಾನು ಹೋಗುವೆನು," ಎಂದ.

ಇದರಿಂದ ಗಿಲೆನಾರ್ಮಂಡ್ ಗಾಬರಿಗೊಂಡ, ಹೇಗೂ ದೊರೆತಿದ್ದ ಮೇರಿಯಸನನ್ನು ಹೋಗ ಗೊಡಬಾರದೆಂದು, ಮೃದುವಾಗಿ, "ಹುಚ್ಚಾ! ನೀನು ಹೋಗಬೇಕೆಂದು ನಾನು ಹೇಳಲಿಲ್ಲ. ನಿನಗಾಗಬೇಕಾದದ್ದು ಏನು ಹೇಳು," ಎಂದು ಕೇಳಿದ.

ಇನ್ನು ಹೆಚ್ಚು ಮಾತಿಗೆ ಎಡೆಕೊಡದೆ ಅಜ್ಜನನ್ನು ಒಲಿಸಿಕೊಳ್ಳಬೇಕೆಂದು ಮೇರಿಯಸ್ ಹೇಳಿದ, "ನಾನು ಮದುವೆಯಾಗಬೇಕೆಂದಿರುವೆನು. ನೀನು ದಯಮಾಡಿ ಅದಕ್ಕೊಪ್ಪಿಗೆ ಕೊಡಬೇಕು."

ಮದುವೆಯ ಮಾತು ಕೇಳಿ ಗಿಲೆನಾರ್ಮಂಡನಿಗೆ ಪರಮಾನಂದವಾಯಿತು. ಮೇರಿಯಸನ ಪ್ರಾಯದಲ್ಲಿ ಮದುವೆಯ ಆಲೋಚನೆ ಬರುವುದು ಸ್ವಾಭಾವಿಕವೆಂದು ಗಿಲೆನಾರ್ಮಂಡ್ ಸ್ವಾನು ಭವದಿಂದ ಅರಿತಿದ್ದ. ಆದರೆ, ಏಕಾಏಕಿ ಯುವಕನ ಮಾತನ್ನೊಪ್ಪಿದರೆ, ತನ್ನ ಹಿರಿತನಕ್ಕೆ ಕುಂದೆಂದು ಹಿರಿತನವನ್ನು ಮೆರೆಸಲೋಸ್ಕರ ಅಧಿಕಾರದರ್ಪದಿಂದ ಅಜ್ಜ ವಿಚಾರಿಸಿದ : "ನಿನಗೆ ಮದುವೆಯಾಗಬೇಕು ನಿಜ, ಆದರೆ ನಿನ್ನ ಸಂಪಾದನೆ ಹೇಗಿದೆ—ಏನಿದೆ ?"

"ಅತ್ಯಲ್ಪ."

"ಹುಡುಗಿಯ ಕಡೆಯಿಂದ ವರದಕ್ಷಿಣೆಯೆಷ್ಟು?"

"ವರದಕ್ಷಿಣೆಯಿಲ್ಲ, ಅಜ್ಜ."

"ಅವಳ ತಂದೆ ಯಾರು? ಅವರ ಹೆಸರೇನು?"

"ತಂದೆ ಒಬ್ಬ ನಿವೃತ್ತ ಸೈನಿಕ. ಹೆಸರು : ಮಾನ್ಸರ್ ಫಾಶೆಲೆವೆಂಟ್ ಎಂದು ಮಾತ್ರ ಗೊತ್ತು."

"ಹುಡುಗಿಯ ಕಡೆಯವರ ಕುಲಗೋತ್ರ ತಿಳಿಯದೆ ಹಣವಿಲ್ಲದವಳನ್ನು ಅವಳ ರೂಪಕ್ಕೆ ಮರುಳಾಗಿ, ನಿನ್ನ ಕುತ್ತಿಗೆಗೆ ಕಟ್ಟಿಕೊಂಡು, ಗೊತ್ತುಗುರಿಯಿಲ್ಲದ ಗುಂಡಿಗೆ ದುಮುಕುವ ಆಲೋಚನೆ ಮಾಡಿರುವಿಯೇನು?"

"ಹಾಗಲ್ಲ ಅಜ್ಜ, ನಾನವಳನ್ನು ಎಷ್ಟೊಂದು ಪ್ರೀತಿಸುತ್ತಿರುವೆನೆಂದು ನಿನಗೆ ಗೊತ್ತಾಗಿದ್ದಿದ್ದರೆ ನೀನು ನನಗೆ ಅನುಮತಿಯನ್ನು ಕೂಡಲೆ ಕೊಡುತ್ತಿದ್ದೆ. ಅವಳಲ್ಲಿ ಏನೂ ಕೊರತೆಯಿಲ್ಲ. ಅವಳ ತಂದೆ ತುಂಬ ಉದಾರಿ. ಅವರು ತುಂಬ ಶ್ರೀಮಂತರಿರಬೇಕು. ತಮ್ಮ ಮಗಳನ್ನು ಅವರು ಶ್ರೀಮಂತ ಪುತ್ರಿಯಂತೆಯೇ ಸಾಕುತ್ತಿರುವರು. ನಮ್ಮಿಬ್ಬರ ಪ್ರೇಮದ ಪರಿಸ್ಥಿತಿಯಲ್ಲಿ, ಪರಸ್ಪರ ಐಶ್ವರ್ಯ, ವರದಕ್ಷಿಣೆ ಇತ್ಯಾದಿ ಸಂಗತಿಗಳನ್ನು ವಿಚಾರಿಸಲು ಮರೆತೇ ಹೋಗಿದೆ," ಎಂದು ಮೇರಿಯಸ್ ಸಮಾಧಾನವಾಗಿ ಉತ್ತರವಿತ್ತ.

"ಹೌದು, ನಿನಗೆ ಪ್ರಾಯ ಇಪ್ಪತ್ತೈದು ದಾಟಿದ್ದರೆ ನನ್ನನ್ನು ವಿಚಾರಿಸದೆಯೇ ಮದುವೆಯಾಗು ತ್ತಿದ್ದೆ—ಅದು ನನಗೆ ಗೊತ್ತಿದೆ. ಈಗ ನಿನಗೆ ಅಡ್ಡವಾಗಿರುವುದು ಕಾನೂನು ಮಾತ್ರ. ಬೀದಿ ಹುಡುಗಿಯೊಬ್ಬಳನ್ನು ನೀನು ಮದುವೆಯಾಗಲು ಬಯಸಿದರೆ ನಾನು ವಿಚಾರಿಸದೇ ಒಪ್ಪಿಗೆ ಕೊಟ್ಟು ಬಿಡುವೆನೆಂದು ಗ್ರಹಿಸಿರುವೆಯೇನು?"

"ಹಾಗಲ್ಲ ಅಜ್ಜ, ಅವಳು ಬೀದಿ ಹುಡುಗಿಯಲ್ಲ—ರೂ'ಪ್ಲಮೆಟಿನ ಭವ್ಯಬಂಗಲೆಯಲ್ಲಿ ಶ್ರೀಮಂತ ಜೀವನ ನಡೆಸುತ್ತಿದ್ದಾಳೆ. ಅವಳು ವಿದ್ಯಾವಂತೆ. ನಾನು ನಿನ್ನಪ್ಪಣೆ ಪಡೆದು ಅವಳನ್ನು ಮದುವೆಯಾಗಿ, ನನ್ನ ಜೀವನವನ್ನು ಸ್ವಂತ ಕಷ್ಟದಿಂದ ನಡೆಸಿಬರುವೆನು. ನಿನ್ನ ಅನುಮತಿಯನ್ನು ಮಾತ್ರ ನಾನು ಬೇಡುವುದು, ಅಜ್ಜ," ಅಂದ ಮೇರಿಯಸ್.

ಅಜ್ಜನಿಗೆ ಮುಗುಳ್ನಗೆ ಬಂದಿತು. ಅಂತೂ ಸುಲಭವಾಗಿ ಬಗ್ಗಿದನೆಂದು ತೋರಬಾರದೆಂದು, ಸ್ವಲ್ಪ ಉದ್ದುದ್ದವಾಗಿ ಮಾತಾಡತೊಡಗಿದ, "ನೋಡು ಮೇರಿಯಸ್! ನಿನ್ನ ದುಸ್ತು ನೋಡಿದರೆ ನೀನು ಬೇಡುವವನಂತೆ ತೋರುತ್ತಿ. ನಿನಗೆ ಬುದ್ಧಿಯಿಲ್ಲ. ರೂ'ಪ್ಲಮೆಟಿನ ಬಂಗಲೆ ನನಗೆ ಗೊತ್ತಿದೆ. ಅಲ್ಲಿಯ ಸರಳಿನ ಬೇಲಿಯ ಒಳಗಿನ ಹುಡುಗಿಯ ವರ್ತಮಾನ ಸಹ ಕೇಳಿದ್ದೇನೆ. ನನ್ನ ಮೊಮ್ಮಗ ತಿಯೊಡ್ಯೂಲ್ ಅದೇ ರಸ್ತೆಯಲ್ಲಿ ಹೋಗಿ ಬರುವಾಗ ಅನೇಕ ಸಾರಿ ನೋಡಿದ್ದಾನೆ. ಅವನನ್ನು ತನ್ನ ಬಗಲಲ್ಲಿ ಹಾಕಿಕೊಳ್ಳಲಾರದೆ ಸೋತ ಹುಡುಗಿ! ಸ್ವಲ್ಪ ಆಲೋಚಿಸಿ ನೋಡು. ನೀನು ಹುಡುಗಿಯಲ್ಲಿ ಅನುರಕ್ತನಾಗಿರಬೇಕಾದದ್ದು ಸರಿಯೇ. ಬೇಕಾದ ಉಡುಪು ತೊಡು, ಮೆರಗಿನಿಂದ ತಿರುಗಾಡು. ಅದಕ್ಕೆಲ್ಲ ಹಣ ಕೊಡುತ್ತೇನೆ. ಸ್ವಲ್ಪ ತಾಳತಂತ್ರ ಹೂಡಬೇಕು, ಇದರಲ್ಲಿ ತಪ್ಪೇನೂ ಇಲ್ಲ. ಇಂಥ ಸಂಗತಿಗಳಲ್ಲಿ ನಡೆಯಬೇಕಾದದ್ದೂ ಹಾಗೆಯೇ. ಅವಳನ್ನು 'ಇಟ್ಟುಕೋ' ಮದುವೆ, ಮಾತ್ರ ಆಗದಿರು. ಮತ್ತೆಲ್ಲ ಸರಿಹೋಗುತ್ತದೆ," ಎಂದು ಗಿಲೆನಾರ್ಮಂಡ್ ಮಾರ್ಮಿಕ ಬೋಧನೆಯಿತ್ತ.

ತನ್ನ ಮಾತುಗಳನ್ನು ಮೇರಿಯಸ್ ಕೇಳಬಹುದೆಂದು ಗಿಲೆನಾರ್ಮಂಡ್ ಊಹಿಸಿಕೊಂಡು, ಊಹನೆಗೆ ತಕ್ಕಂಥ ಉತ್ತರವನ್ನು ಕಾತರತೆಯಿಂದ ನಿರೀಕ್ಷಿಸುತ್ತ ಕುಳಿತ. ಅಜ್ಜನ ಮಾತಿನಿಂದ ಮೇರಿಯಸನ ಮುಖ ಕೆಂಪಾಯಿತು. ತನ್ನ ಪ್ರಿಯ ಕೋಸೆಟ್ಟೆಯನ್ನು ಅಷ್ಟೊಂದು ಹಗುರವಾಗಿ ಪ್ರಸ್ತಾವಿಸಿದುದಕ್ಕಾಗಿ ಅಜ್ಜನ ಮೇಲೆ ಅವನಿಗೆ ತುಂಬ ಕೋಪ ಬಂದಿತ್ತು. ಅವಳನ್ನು ವಂಚಿಸುವ ಸೂಚನೆಯನ್ನು ಕೇಳಿಯಂತೂ ಬಲು ಅಪಮಾನಿತನಾಗಿ, ವ್ಯಥೆಪಟ್ಟುಕೊಂಡ. ಅನಂತರ ಅಜ್ಜನನ್ನು ಗಂಭೀರವಾಗಿ ನೋಡುತ್ತ, "ಐದು ವರ್ಷಗಳ ಹಿಂದೆ ನೀನು ನನ್ನ ತಂದೆಯನ್ನು ಹೀನೈಸಿ ಮಾತಾಡಿರುವೆ. ಇಂದು ನನ್ನ ಪತ್ನಿಯಾಗುವವಳನ್ನು ಹೀನೈಸಿ ಮಾತಾಡಿರುವೆ. ಇನ್ನು ನಿನಗೂ ನನಗೂ ಯಾವ ಸಂಬಂಧವೂ ಇರಕೂಡದು," ಎಂದು ಹೇಳಿ ಮೇರಿಯಸ್ ಅಲ್ಲಿಂದ ರಭಸದಿಂದಲೇ ಹೊರಟುಹೋದ.

ಗಿಲೆನಾರ್ಮಂಡ್ ಗಾಬರಿಗೊಂಡ. ಕೂಡಲೇ ಎದ್ದು ಕಿಟಕಿಯಲ್ಲಿ ತಲೆ ಹಾಕಿ, ಗದ್ಗದ ಕಂಠದಿಂದ, "ಮೇರಿಯಸ್, ಮೇರಿಯಸ್, ಮೇರಿಯಸ್, ಮೇರಿಯಸ್" ಎಂದು ತ್ರಾಣವಿದ್ದಷ್ಟೂ ಗಟ್ಟಿಯಾಗಿ ಕರೆದ. ಮೇರಿಯಸ್ ಆಗಲೇ ಬಲುದೂರ ಹೋಗಿದ್ದ. ಕೆಲಸದವನು ಮಾರ್ಗಕ್ಕೆ ಓಡಿ ಹೋಗಿ ನೋಡಿದರೂ ಮೇರಿಯಸ್ ಸಿಗಲಿಲ್ಲ. ಗಿಲೆನಾರ್ಮಂಡನ ಗಂಟಲಿನಿಂದ ಗರಗರ ಸದ್ದು ಕೇಳಿಸಿತು. ಅವನ ಹೃದಯದ ಬಡಿತವೇ ನಿಂತಿದ್ದಂತೆ ತೋರುತ್ತಿತ್ತು. ಅವನ ಮುಖ ವಿವರ್ಣವಾಗಿತ್ತು. ಗಿಲೆನಾರ್ಮಂಡ್ ಇದ್ದಕ್ಕಿದ್ದ ಹಾಗೆಯೇ ಹೆಣದಂತೆ ನೆಲದ ಮೇಲೆ ಬಿದ್ದು ಬಿಟ್ಟ.

ಏಳನೆಯ ಸಂಪುಟ

೧. ಮುಂಬರುವ ಅಪಾಯದ ಕುರಿತಾಗಿ ಎಚ್ಚರಿಕೆಗಳು

ಮೇರಿಯಸ್ ಅಜ್ಜನ ಮನೆಯಿಂದ ಸಿಟ್ಟುಗೊಂಡು ಬಂದ ದಿನ ಬೆಳಗ್ಗೆ ಜೀನ್‌ವಾಲ್‌ಜೀನ್ ತನ್ನ ಉದ್ಯಾನವನದಲ್ಲಿ ತಿರುಗಾಡುತ್ತಿದ್ದಾಗ ಅಲ್ಲಿಯ ಹಳೆಗೋಡೆ ಮೇಲೆ "ಸಂಖ್ಯೆ ೧೬, ರ್‍ಯೂ'ವೆರೆರಿಯ" ಎಂದು ಬರೆದಿದ್ದುದನ್ನು ಕಂಡ. ಹಾವಸೆ ಹಿಡಿದು ಕಪ್ಪಾಗಿದ್ದ ಗೋಡೆಯ ಮೇಲಿನ ಬರಹ ಹೊಸತಾಗಿಯೇ ಕಾಣುತ್ತಿತ್ತು. ಅಲ್ಲದೇ ಅದೇ ಗೋಡೆಯ ಕೆಳಗೆ, ನೆಲದ ಮೇಲೆ ಆ ಬರಹದಿಂದ ಬಿದ್ದಿದ್ದ ಗಾರೆ ಪುಡಿಯೂ ಇತ್ತು. ಈ ಬರಹ ಸದ್ಯ ಒಂದೆರಡು ದಿನಗಳ ಹಿಂದಿನ ದಂತೆ ತೋರುತ್ತಿತ್ತು. ಅದೊಂದು ವಿಳಾಸವಾಗಿರಬೇಕೆಂಬುದರಲ್ಲಿ ಸಂಶಯವಿರಲಿಲ್ಲ. ಆದರೆ ಅದು ಯಾರ ವಿಳಾಸ, ಯಾರು ಯಾರಿಗೆ ಬರೆದದ್ದು ಇತ್ಯಾದಿ ವಿಷಯಗಳನ್ನು ಆತ ಊಹಿಸ ಲಾರದವನಾಗಿದ್ದ. ಅಂತೂ, ಯಾರೂ ತನ್ನ ಮನೆಯ ಸಮೀಪ ಬರಬಾರದೆಂದು ಅವನು ಪ್ರಯತ್ನ ಪಡುತ್ತಿದ್ದಾಗಲೇ ಯಾರೋ ಆ ಪಾಗಾರದೊಳಕ್ಕೆ ಬಂದಿರುತ್ತಾರೆಂಬುದು ಅವನಿಗೆ ಖಚಿತ ವಾಗಿತ್ತು.

ಅದೇ ಸಂಜೆ, ಸಾಧಾರಣ ೪ ಗಂಟೆಗೆ ಜೀನ್‌ವಾಲ್‌ಜೀನ್ ತಿರುಗಾಡುತ್ತ ಹೋಗಿ ಮೈದಾನ ದಲ್ಲಿ ಕುಳಿತಿದ್ದಾಗ ಹಿಂದಿನಿಂದ ಒಬ್ಬ ಬಾಲಕ ಅಡಗಿಕೊಂಡು ಬಂದು ಒಂದು ಪತ್ರ ಅವನ ಎದುರು ಬೀಳುವಂತೆ ಎಸೆದು ಓಡಿದ್ದ. ಅದರಲ್ಲಿ, "ನಿಮ್ಮ ಮನೆ ಬಿಟ್ಟು ಹೊರಡಿ," ಎಂದು ಮಾತ್ರ ಬರೆಯಲಾಗಿತ್ತು. ಬಾಲಕ ಯಾರೆಂದು ಹಿಂತಿರುಗಿ ನೋಡುವುದರ ಒಳಗೆ ಅವನು ಓಡಿ ಹೋಗಿದ್ದ. ಅಷ್ಟೂ ಅಲ್ಲದೆ ಅವನ ಮನೆಯ ವಠಾರದಲ್ಲೇ ತೆನಾರ್ಡಿಯರ್ ಅತ್ತಿತ್ತ ಹೋಗು ತ್ತಿದ್ದುದನ್ನೂ ಕಂಡಿದ್ದ. ತೆನಾರ್ಡಿಯರನಿದ್ದಲ್ಲಿ ಯಾರಿಗೂ ಸುಖವಿರಲಾರದೆಂದು ಗೊತ್ತಿದ್ದುದ ರಿಂದ ಜೀನ್‌ವಾಲ್‌ಜೀನ್ ಇಂಗ್ಲೆಂಡಿಗಾದರೂ ಹೋಗುವುದು ಒಳ್ಳೆಯದೆಂದು ಆಲೋಚಿಸು ತ್ತಿದ್ದ. ಈ ಸಮಯದಲ್ಲೇ ಅಲ್ಲಲ್ಲಿ ಪೊಲೀಸರಿಗೂ ಜನರಿಗೂ ಘರ್ಷಣೆಗಳಾಗುತ್ತಿದ್ದುವು ಎಂಬ ವರ್ತಮಾನವೂ ಕೇಳಿಬರುತ್ತಿತ್ತು. ಊರಲ್ಲಿ ಒಂದು ಕ್ರಾಂತಿಯೇ ಏಳುವ ಸಂಭವವಿತ್ತು. ಇದೇ ಕಾರಣದಿಂದ ಇಂಗ್ಲೆಂಡಿಗೆ ಹೋಗಲು ರಹದಾರಿ ಸಿಕ್ಕುವುದು ಕಷ್ಟವಾಗಬಹುದೆಂದೂ ಹೆದರು ತ್ತಿದ್ದ. ಆ ಸಂಜೆ ಅವನು ಕತ್ತಲಾಗುವ ಮೊದಲೇ ಮನೆ ಸೇರಿದ.

ಮೇರಿಯಸ್ ಸಂಪೂರ್ಣ ಹತಾಶನಾಗಿ ಅಜ್ಜನ ಮನೆಯಿಂದ ಬಂದಿದ್ದ. ಅವನ ಸ್ನೇಹಿತರೆಲ್ಲ ಏನೋ ಒಂದು ಮಹತ್ಕಾರ್ಯದಲ್ಲಿದ್ದಂತೆ ಅವಸರದಿಂದ ಅತ್ತಿತ್ತ ಓಡಾಡುತ್ತಿದ್ದರು. ಮೇರಿ ಯಸ್ ಮಾತ್ರ ಮೌನವಾಗಿಯೇ ಅರ್ಧನಿದ್ರಾವಸ್ಥೆಯಲ್ಲಿದ್ದಂತೆ, ಒಂದು ಮೂಲೆಯಲ್ಲಿ ವ್ಯಸನಾ ಕ್ರಾಂತನಾಗಿ ಮಲಗಿದ್ದ. ರಾತ್ರಿಯಾಗುವುದೂ ೯ ಗಂಟೆಗೆ ಕೋಸೆಟ್ಟೆಯನ್ನು ಕಾಣುವುದೂ ಈ ಎರಡು ವಿಷಯಗಳು ಮಾತ್ರ ಅವನ ತಲೆಯಲ್ಲಿ ಸುತ್ತುತ್ತಿದ್ದುವು. ಅವನ ಸ್ನೇಹಿತರೆಲ್ಲರೂ ಅಲ್ಲಿಂದ ಹೋದಕೂಡಲೇ ಮೇರಿಯಸ್ ಎದ್ದು ಜೇವರ್ಟ್ ಕೊಟ್ಟಿದ್ದ ಎರಡು (ಮದ್ದು ತುಂಬಿದ್ದ) ಪಿಸ್ತೂಲುಗಳನ್ನು ಎತ್ತಿಕೊಂಡು ಹೊರಟ. ಕೋಸೆಟ್ಟೆಯನ್ನು ನೋಡಲು ಹೋಗು ವಾಗ ಪಿಸ್ತೂಲುಗಳ ಆವಶ್ಯಕತೆ ಏನೆಂಬುದರ ವಿಷಯ ಅವನು ಸ್ಪಷ್ಟವಾಗಿ ತಿಳಿದಿರಲಿಲ್ಲ. ಆದರೂ ತನಗೆ ಅಜ್ಜನ ಮನೆಯಲ್ಲಾಗಿದ್ದ ಆಶಾಭಂಗಕ್ಕೂ ಕೋಸೆಟ್ಟೆಯ ಮೇಲಿನ ತನ್ನ ಅಗಾಧ ಪ್ರೇಮಕ್ಕೂ ಸಂಬಂಧಿಸಿ, ತನ್ನ ಕೈಗೆ ಆ ಪಿಸ್ತೂಲುಗಳು ಬಂದಿವೆಯೆಂದು ಅವನನ್ನೇ ವಿಚಾರಿಸಿ ಕೊಂಡಾಗ ಅವನಿಗೆ ಭಾಸವಾಗುತ್ತಿತ್ತು. ಮೇರಿಯಸ್ ಆ ದಿನವೆಲ್ಲ ಊಟ ಮಾಡದೆ ಕಳೆದ.

ಅವನ ಜೇಬಿನಲ್ಲಿ ಒಂದು ತುಂಡು ಬ್ರೆಡ್ ಇದ್ದುದೇ ಅವನಿಗೆ ಮರೆತುಹೋಗಿತ್ತು. ಆ ದಿನ ಅವನು ನದಿಯಲ್ಲಿ ಸ್ನಾನಮಾಡಿದ್ದುದೂ ಅವನಿಗೆ ಮರೆತುಹೋಗಿದ್ದು, ತನ್ನ ಸ್ನಾನ ಬಾಕಿಯಿದೆ ಯೆಂದೇ ಭಾವಿಸಿಕೊಂಡಿದ್ದ.

ಸಾಧಾರಣ ೯ ಗಂಟೆ ರಾತ್ರಿಯಾಗುವಾಗ ಅವನು ರೂ'ಪ್ಲಮೆಟಿನ ಮಾರ್ಗದಲ್ಲಿ ಹೋದ. ೯ಕ್ಕೆ ಸರಿಯಾಗಿ ಕೋಸೆಟ್ಟೆ ಕುಳಿತಿರುತಿದ್ದ ಕಲ್ಲುಬೆಂಚಿಗೆ ತಲಪಿದ. ಅಲ್ಲಿ ಕೋಸೆಟ್ಟೆ ಇರಲಿಲ್ಲ. ಅವಳಿರುತ್ತಿದ್ದ ಅದೇ ಹೂದೋಟದ ಇತರೆಡೆಗಳಲ್ಲಿ ಹುಡುಕಿನೋಡಿದ. ಕಾಣಲಿಲ್ಲ.

ಕೊನೆಗೆ ಕೋಸೆಟ್ಟೆಯ ಮನೆಗೇ ಹೋಗಿ ಕದ ತಟ್ಟಿದ. ಆ ಮನೆಯ ಕಿಟಕಿ, ಬಾಗಿಲುಗಳೆಲ್ಲ ಮುಚ್ಚಿದ್ದುವು. ಕೋಸೆಟ್ಟೆಯ ತಂದೆಯೇ ಎದುರು ಬಂದು ಗದರಿಸಿದರೂ ಹೆದರುವುದಿಲ್ಲವೆಂದು ನಿರ್ಧರಿಸಿಕೊಂಡು ಕದ ತಟ್ಟುತ್ತ "ಕೋಸೆಟ್ಟೇ," "ಕೋಸೆಟ್ಟೇ" ಎಂದು ಗಟ್ಟಿಯಾಗಿ ಕರೆದ. ಮೇರಿಯಸ್ ಈ ರೀತಿ ಕರೆಯುತ್ತಿದ್ದಾಗ ರಸ್ತೆಯಲ್ಲೊಬ್ಬ ಬಾಲಕ ನಿಂತುಕೊಂಡು, ಗಟ್ಟಿಯಾದ ಸ್ವರದಿಂದ, "ಮಾನ್ಸರ್ ಮೇರಿಯಸರೇ! ನಿಮ್ಮ ಸ್ನೇಹಿತರು ನಿಮ್ಮನ್ನು ನಿರೀಕ್ಷಿಸುತ್ತ ಕುಳಿತಿರುವರು," ಎಂದು ಕರೆದು ಹೇಳಿದ. ಆ ಸ್ವರ ಎಪೊನಿನ್ನಳ ಸ್ವರದಂತೆಯೇ ಕೇಳಿ ಬಂದದ್ದರಿಂದ ಮೇರಿಯಸ್ ರಸ್ತೆಯ ಕಡೆಗೆ ತಿರುಗಿ, "ಯಾರದು?" ಎಂದು ಕೇಳಿದ.

"ರ್ಯೂ ಡ ಲ ಶನ್‌ವ್ರೇರಿಯಲ್ಲಿ ನಿಮ್ಮ ಸ್ನೇಹಿತರು ನಿಮ್ಮನ್ನು ನಿರೀಕ್ಷಿಸುತ್ತ ಕಾದು ಕುಳಿತಿರುವರು," ಎಂದು ಆ ಬಾಲಕ ಹೇಳಿ ಅಲ್ಲಿಂದ ಓಡಿಹೋದ.

೨. ಮಾನ್ಸರ್ ಮೇಬಫ್

ಗಾವ್ರೋಚ್ ಮೊಂಟ್‌ಪಾರ್ನಿಸನಿಂದ ಕದ್ದು ಮಾನ್ಸರ್ ಮೇಬಫರಿಗೆ ತಲಪಿಸಿದ್ದ ಜೀನ್ ವಾಲ್‌ಜೀನನ ಹಣವನ್ನೂ ಹಣದ ಚೀಲವನ್ನೂ ಮಾನ್ಸರ್ ಮೇಬಫ್ ಸ್ವೀಕರಿಸಲಿಲ್ಲ. ಅವರು ಅವೆರಡನ್ನೂ ಅವುಗಳ ಮಾಲೀಕರಿಗೆ ತಲಪಿಸುವ ಬಗ್ಗೆ ಪೊಲೀಸರಿಗೆ ಒಪ್ಪಿಸಿದ್ದರು.

ಅವರ ಬಡತನವಂತೂ ಅವರನ್ನು ದಿನ ಕಳೆದ ಹಾಗೆ ಹೆಚ್ಚುಹೆಚ್ಚು ಉಗ್ರವಾಗಿ ಬಾಧಿಸ ತೊಡಗಿತ್ತು. ಅವರ ಮರಮಟ್ಟು, ವಸ್ತ್ರ ಮೊದಲಾದವನ್ನೆಲ್ಲ ದಿನಕ್ಕೆ ಒಂದೆರಡರಂತೆ ಮಾರಿ ಮುಗಿಸಿದರು. ಕೊನೆಗೆ ಅವರ ಪುಸ್ತಕಗಳನ್ನೇ ದಿನಕ್ಕೆ ಒಂದರಂತೆ ಮಾರಿ ಸಿಕ್ಕಿದ ಹಣದಲ್ಲಿ ದಿನ ನೂಕತೊಡಗಿದರು. ಆಗಲೇ ಅವರಿಗೆ ಎಂಬತ್ತು ವರ್ಷ ಪ್ರಾಯ ಕಳೆದಿದ್ದುದರಿಂದ ಪುಸ್ತಕಗಳೆಲ್ಲ ಮಾರಾಟವಾಗಿ ಮುಗಿದ ಮರುದಿನ ದೇಹವನ್ನೇ ಬಿಡುವುದಾಗಿಯೂ ಆಲೋಚಿಸಿಕೊಂಡಿದ್ದರು. ಕೊನೆಗೆ ಆ ದಿನ ಬಂತೇ ಬಂತು. ಪುಸ್ತಕಗಳೆಲ್ಲ ಮಾರಿ ಮುಗಿದಿದ್ದುವು. ಅಂದು ಅವರು ಬಹಳ ಕುಗ್ಗಿಹೋದರು. ಹೀಗೆ ಕುಗ್ಗಿ ಚಿಂತೆಯಿಂದ ಕುಳಿತಿದ್ದಾಗಲೇ ಪ್ಯಾರಿಸಿನ ಒಂದು ಪಾರ್ಶ್ವದಿಂದ ಬಂದೂಕುಗಳ ಹೊಡೆತದ ಸದ್ದು ತುಂಬ ಕೇಳಿಸುತ್ತಿತ್ತು. ಆಗಲೇ ಒಬ್ಬ ಕೂಲಿಯವ ಅವರೆದುರಾಗಿ ರಸ್ತೆಯಲ್ಲಿ ಬರುತ್ತಿದ್ದ. ಕೂಲಿಯವನನ್ನು ಇವರು ಕರೆದು ಕೇಳಿದರು, "ಅದೇನಪ್ಪ, ಬಂದೂಕಿನ ಸದ್ದು?"

"ಕ್ರಾಂತಿಕಾರರ ಉಪಟಳ, ಸ್ವಾಮಿ."

"ಎಂಥ ಕ್ರಾಂತಿ?"

"ನಾನರಿಯೆ."

"ಯಾವ ಕಡೆಯೆಂದು ಗೊತ್ತಿದೆಯೇ?"

"ಸೈನ್ಯದ ಗೋದಾಮುಗಳ ಕಡೆ."

ಮಾನ್ಸ್ಯರ್ ಮೇಬಫ್ ಕೂಡಲೇ ಎದ್ದರು. ಅಭ್ಯಾಸಬಲದಿಂದ ಪುಸ್ತಕಕ್ಕಾಗಿ ಕಪಾಟಿಗೆ ಕೈ ಹಾಕಿ ಪರಡಿದರು. ಪುಸ್ತಕಗಳೆಲ್ಲ ಮಾರಿ ಮುಗಿದಿದ್ದುದು ಜ್ಞಾಪಕಕ್ಕೆ ಬಂತು. ಆ ಜ್ಞಾಪಕವೇ ಅವರಿಗೆ ಬಂದೂಕಿನ ಪೆಟ್ಟಿನಂತಾಗಿ ತಲೆ ಕೆಳಗೆ ಹಾಕಿಬಿಟ್ಟರು. ಅನಂತರ, ಸ್ವಲ್ಪ ಉನ್ಮತ್ತರಂತೆಯೇ, ಸೈನ್ಯದ ಶಸ್ತ್ರ ಕೋಠಿಯತ್ತ ಆದಷ್ಟು ತೀವ್ರಗತಿಯಿಂದ ನಡೆದುಹೋದರು.

ಎಂಟನೆಯ ಸಂಪುಟ

೧. ಒಂದರ ಸಮಾಧಿಯಿಂದ ಮತ್ತೊಂದರ ಪುನರುತ್ಥಾನ

ಜೂನ್ ೫, ೧೮೩೨ರ ಬೆಳಗ್ಗೆ ಮಳೆಯೂ ಬಿಸಿಲೂ ಬರುತ್ತಿದ್ದಾಗ ಜನರಲ್ ಲಮಾರ್ಕನ ಕಳೇಬರವನ್ನು ಸೈನಿಕರು ಸಂಸ್ಕಾರಕ್ಕಾಗಿ ಮೆರವಣಿಗೆಯಲ್ಲಿ ಸಾಗಿಸುತ್ತಿದ್ದರು. ಮೆರವಣಿಗೆಯ ಗೌರವಕ್ಕೆ ಬೇಕಾಗಿದ್ದುದಕ್ಕಿಂತಲೂ ಹೆಚ್ಚು ಸೈನ್ಯ ಈ ದಿನ ಪ್ಯಾರಿಸಿನ ಒಳಗೂ ಹೊರಗೂ ತಯಾರಾಗಿತ್ತು. ಶವದ ಸುತ್ತಲೂ ಸೈನಿಕರಿದ್ದುದಲ್ಲದೆ, ಹಿಂದೆಯೂ ಮುಂದೆಯೂ ದೂರದ ವರೆಗೆ ಸೈನಿಕರು ಸಾಲಾಗಿ ಹೋಗುತ್ತಿದ್ದರು.

ಜನರಲ್ ಲಮಾರ್ಕನನ್ನು ಗೌರವಿಸಲು ಸೈನಿಕರ ಜೊತೆಗೆ ಇತರ ಜನರೂ ಶವದ ಹಿಂದೆ ಮುಂದೆ ಸೇರಿಕೊಂಡು ಮೆರವಣಿಗೆಯಲ್ಲಿ ಸಾಗುತ್ತಿದ್ದರು. ಇವರಲ್ಲಿ ನಾನಾ ಪ್ರಾಯದವರೂ ನಾನಾ ವೃತ್ತಿಯವರೂ ಪಂಥದವರೂ ಇದ್ದರು. ಶವಸಂಸ್ಕಾರ ಪ್ರಸಂಗವನ್ನು ಕ್ರಾಂತಿಕಾರರು ತಮ್ಮ ಕ್ರಾಂತಿಯ ಪುನರುತ್ಥಾನಕ್ಕೆ ಪ್ರಥಮ ಸೋಪಾನವಾಗಿ ಆಯ್ದುಕೊಂಡಿದ್ದರು.

ಅಂಥ ಮೆರವಣಿಗೆಗಳಲ್ಲಿ ಕೆಲವು ಅವಗಡಗಳೂ ಘಟಿಸುವುದುಂಟು. ಇಲ್ಲೂ ಒಂದೆರಡು ಸಂಗತಿಗಳು ಹಾಗೆಯೇ ಆಯಿತು. ರಸ್ತೆಯ ಬದಿಯಲ್ಲಿ ನಿಂತಿದ್ದವನೊಬ್ಬ ಸೈನಿಕನೊಬ್ಬನನ್ನು ಕತ್ತಿಯಿಂದ ಇರಿದ. ರಾಷ್ಟ್ರಧ್ವಜವನ್ನೊಬ್ಬ ನೆಲಕ್ಕೆ ಹಾಕಿ ತುಳಿದು ಅಪಮಾನಿಸಿದ. ತನ್ನ ಮನೆಯ ಕಿಟಕಿ ಬಾಗಿಲುಗಳನ್ನು ಮುಚ್ಚುತ್ತಿದ್ದ ಮುದುಕಿಯೊಬ್ಬಳು ಸೈನಿಕರ ಗುಂಡು ಹೇಗೋ ತಾಗಿ ಸತ್ತಳು. ಆದರೆ ಈ ವಿಧದ ಚಿಕ್ಕ ಘಟನೆಗಳು ಹರಿಯುವ ಹೊಳೆಗೆ ಒಂದು ಬಂಡೆ ಕುಸಿದುಬಿದ್ದರೆ ಕೆಲವು ತರಂಗಗಳು ಮಾತ್ರ ಎದ್ದು, ಆ ತರಂಗಗಳು ಮಾಯವಾಗುವಂತೆ, ಮೆರವಣಿಗೆಯ ಮೇಲೆ ವಿಶೇಷ ಪರಿಣಾಮ ಬೀರದೆ, ಅದು ಸಾಗಿದಂತೆ ಮಾಯವಾದುವು. ಆದರೂ ಮಳೆಯ ಪೂರ್ವ ಭಾವಿಯಾಗಿ ಮೋಡಗಳು ಭೂಮಿಯ ಸಮೀಪಕ್ಕೆ ಬಂದು, ಭೂಮಿ ಮಬ್ಬಿನಿಂದ ಮುಸುಕಿ ಹೋಗುವಂತೆ, ಕ್ರಾಂತಿಯ ಸ್ಫೋಟಕ ವಾತಾವರಣ ಪ್ಯಾರಿಸಿನಲ್ಲೆಲ್ಲ ಪಸರಿಸಿ, ನಗರವನ್ನು ಭಯಂಕರ ಮೌನ ಆವರಿಸಿಕೊಂಡಿತ್ತು.

ಕ್ರಮೇಣ ಮೆರವಣಿಗೆ ಆಸ್ಟರ್ಲಿಟ್ಸ್ ಸೇತುವೆಗೆ ತಲಪಿತು. ಅಲ್ಲಿ ಕುದುರೆ ಏರಿದ್ದ ರಾವುತ ಕೆಂಪು ಬಾವುಟವನ್ನು ಎತ್ತಿಹಿಡಿದ. ಇನ್ನೊಬ್ಬ, "ಲಮಾರ್ಕನನ್ನು ಪ್ಯಾಂತಿಯನ್ನಿಗೆ ಸಾಗಿಸಿರಿ, ಲೆಫೆಟ್ಟೆ ವಿಲ್ಲೀಗೆ ಹೋಗಲಿ," ಎಂದು ಕೂಗಿ ಹೇಳಿದ. ಲೆಫೆಟ್ಟೆ ಜನರಿಂದ ಹೊಗಳಿಸಿಕೊಂಡು, ಒಬ್ಬ ಜರ್ಮನನ ಜೊತೆ ಬಂಡಿ ಏರಿ ಬೂಲ್ವಾ ರಸ್ತೆಯಲ್ಲೇ ಹೋದ. ಲಮಾರ್ಕನ ಕಳೇಬರ ಪ್ಯಾಂತಿಯನ್ ಕಡೆಗೆ ಸಾಗಲು ಪ್ರಾರಂಭವಾಯಿತು.

ಆಗ ಸರಕಾರದ ಅನುಜ್ಞೆ ಪ್ರಕಾರ ಸೈನಿಕರು ರಸ್ತೆಗೆ ಅಡ್ಡವಾಗಿ ನಿಂತರು. ಜನರು ಉದ್ವಿಗ್ನ ರಾಗುತ್ತ ರೌದ್ರತಾಳಿದರು. ಅವರು ಸಿಕ್ಕಿದುದನ್ನೆಲ್ಲ ಆಯುಧವಾಗಿ ಮಾಡಿಕೊಂಡು ದೊಂಬಿ

ಮಾಡತೊಡಗಿದರು. ಹೀಗೆ ಜನರಿಗೂ ಸೈನ್ಯಕ್ಕೂ ಹೊಡೆದಾಟ ಪ್ರಾರಂಭವಾಯಿತು.

೨. ಯುದ್ಧಾತುರ ಗಾವ್ರೋಚ್

ತಾನು ಅಣ್ಣನೆಂದು ಗೊತ್ತಿರದೆ, ತನ್ನ ತಮ್ಮಂದಿರಿಗೆ ರಾತ್ರಿ ಸಹೋದರನೂ ಹಗಲು ತಂದೆಯೂ ಆಗಿ ವರ್ತಿಸುತ್ತಿದ್ದ ಗಾವ್ರೋಚ್ ಆನೆಯೊಳಗಿದ್ದ ಮಕ್ಕಳಿಗೆ ತನ್ನ ಬಡಸ್ತಿಕೆಗೆ ಮೀರು ವಷ್ಟು ಆಹಾರ ಕೊಟ್ಟು, ಬೆಳಗಾದ ಕೂಡಲೇ ಅವರನ್ನು ರಾಜರಸ್ತೆಯಲ್ಲಿ ಬಿಟ್ಟು, ಅವರು ರಾತ್ರಿಗೆ ವಾಪಾಸು ಆ ಆನೆಮನೆಗೇ ಬರುವಂತೆ ಎಚ್ಚರ ಹೇಳಿದ. ಅನಂತರ ಅವನು, "ಮಕ್ಕಳೇ! ನನ್ನ ತಾಯಿ ಪ್ಯಾರಿಸಿನ ಬೀದಿಗಳು. ನಿಮಗೂ ಆ ಬೀದಿಗಳೇ ತಾಯಿಯಾಗಿ, ನಿಮ್ಮನ್ನು ಕಾಪಾಡಲಿ!" ಎಂದು ಹೇಳಿ ಹರಸಿ ಅವಸರದಿಂದ ಓಡಿ ಹೋದ.

ಗಾವ್ರೋಚ್ ಓಡುತ್ತಿದ್ದುದು ಲಮಾರ್ಕನ ಕಳೇಬರದ ಮೆರವಣಿಗೆಯ ಕಡೆಗಾಗಿತ್ತು. ಮಹ ತ್ಕಾರ್ಯವೊಂದು ತನ್ನ ಸಹಾಯವನ್ನು ಬಹುವಾಗಿ ಬಲು ಹೊತ್ತಿನಿಂದ, ನಿರೀಕ್ಷಿಸುತ್ತಿದ್ದಂತೆ ತಿಳಿ ಯುತ್ತ ಶ್ರೀಮದ್ಗಂಭೀರವಾಗಿ ಮುಂದೆ ಸಾಗುತ್ತಿದ್ದ. ಅವನು ಮುಂದೆ ನಡೆದಂತೆ ಆವೇಶಗೊಳ್ಳ ತೊಡಗಿದ. ರಸ್ತೆಯ ಕರೆಯಲ್ಲಿಯ ಒಂದಂಗಡಿಯಲ್ಲಿ ತೂಗಾಡಿಸಿಕೊಂಡಿದ್ದ ಪಿಸ್ತೂಲನ್ನು ಹಠಾತ್ತನೆ ಕಿತ್ತು ತೆಗೆದುಕೊಂಡು ಅಂಗಡಿಯವನೊಂದಿಗೆ, "ಸದ್ಯ ಸಾಲ. ನಾಳೆ ವಾಪಾಸು ತಂದು ಕೊಡುತ್ತೇನೆ," ಎಂದು ಹೇಳುತ್ತ ಅಂಗಡಿಗ ಹಿಡಿಯಲಾರದಷ್ಟು ರಭಸದಿಂದ ಓಡಿ ಪರಾರಿ ಯಾದ. ಅವನು ಕೆಲವೊಮ್ಮೆ ಅರ್ಥವಿಲ್ಲದ ಕೆಲವು ಸರ್ತಿ ಅನರ್ಥಕಾರಿ ಅರ್ಥವುಳ್ಳಂಥ ಕ್ರಾಂತಿಕಾರಕ, ಕ್ರಾಂತಿ ಉದ್ದೀಪಕ, ಪದಗಳನ್ನು ದಾರಿಯುದ್ದಕ್ಕೂ ಹಾಡುತ್ತ ಓಡುತ್ತಿದ್ದ. ಅವನ ಹಾದಿಯಲ್ಲಿ ಕುದುರೆ ಮುಗ್ಗರಿಸಿ ಬಿದ್ದ ಒಬ್ಬ ರಾವುತ ಪುನಃ ಕುದುರೆ ಏರಲು ನೆರವಿತ್ತು ತನ್ನ ಮಾರ್ಗದಲ್ಲಿ ಮುಂದುವರಿದ. ಮುಂದಿನ ಯುದ್ಧ ತನ್ನ ನಾಯಕತ್ವದಲ್ಲೇ ನಡೆಯತಕ್ಕದ್ದೆಂಬಷ್ಟು ಉತ್ಸಾಹ, ಆವೇಶಭರಿತನಾಗಿ ದಾರಿಸಾಗಿದ. ಈ ಚಿಕ್ಕ ಪೋರ ಚಿಕ್ಕಬಾಲಕನಂತೆಯೂ ಹಿರಿವೃದ್ಧ ನಂತೆಯೂ ವರ್ತಿಸಬಲ್ಲವನಾಗಿದ್ದ. ಹಾಸ್ಯಮಯಿ, ಆನಂದಮಯಿ, ಕಾರ್ಯತತ್ಪರ, ಕಾರ್ಯ ಚತುರ, ಸಾಹಸಿ, ಮತ್ತು ವಿವೇಕಿ. ಇಷ್ಟೊಂದು ಗಲಭೆಯ ಮಧ್ಯರಸ್ತೆಯಲ್ಲೇ ನಿಂತು ಮಾತಾಡು ತ್ತಿದ್ದ ನಾಲ್ವರು ಮುದುಕಿಯರಿಗೆ ಅವರು ಮನೆ ಸೇರಿ ಮಾತಾಡುವುದೊಳ್ಳೆಯದೆಂದು ಬೋಧನೆ ಯಿತ್ತು ಅವರಿಂದ ಬೈಸಿಕೊಂಡ. ಅವರ ತೀಕ್ಷ್ಣವಾದ ಬೈಗಳನ್ನು ಇವನ ಹಗುರ ನಗುವಿನಿಂದ ಹಾರಿಸಿಕೊಂಡು ಮುಂದೆ ಸಾಗಿದ. ಮತ್ತೂ ಮುಂದೆ ಹೋಗುವಾಗ ಇವನ ತಮ್ಮಂದಿರನ್ನು ತಾತ್ಸಾರದಿಂದ ಹೊರಗಟ್ಟಿದ್ದ ಕ್ಷೌರದವನಂಗಡಿ ಕಂಡ. ಆ ಕೂಡಲೇ ಆ ಅಂಗಡಿಗೊಂದು ಕಲ್ಲೆಸೆದು ಕುಪ್ಪಿಕನ್ನಡಿಗಳನ್ನೊಡೆದು ಓಡಿದ. ಕಂಡಕಂಡವರಿಗೆಲ್ಲ ಕ್ರಾಂತಿಸೈನ್ಯಕ್ಕೆ ಸೇರುವಂತೆ ಆವೇಶಪೂರ್ವಕವಾಗಿ ಬೋಧನೆ ಕೊಡುತ್ತ ಕೆಲವೊಮ್ಮೆ ರಸ್ತೆಯಲ್ಲಿ ನಿಂತು, ಎಲ್ಲರೂ ಕೇಳು ವಂತೆ, "ಈ ನಿರಂಕುಶ ಪ್ರಭುತ್ವವನ್ನು ಸಹಿಸಲಾರೆ. ದಂಗೆಗೆ, ಕ್ರಾಂತಿಗೆ, ಯುದ್ಧಕ್ಕೆ ಹೊರಡಿ. ನೀವೂ ಮನುಷ್ಯರಲ್ಲವೇ?" ಎಂದು ಘೋಷಿಸುತ್ತಿದ್ದ.

೩. ಮುದುಕನ ಹುರುಪು

ಎಬಿಸಿ ಕ್ಲಬ್ಬಿನ ಕೋರ್‌ಫರೇಕ್, ಎಂಜೊಲ್ರಾಸ್ ಮೊದಲಾದವರು ಪಿಸ್ತೂಲು ಕತ್ತಿದೊಣ್ಣೆ ಹಿಡಿದುಕೊಂಡು, ಮುಖದಲ್ಲಿ ಗಾಂಭೀರ್ಯ, ಮಾತಿನಲ್ಲಿ ಉತ್ಸಾಹ, ದೇಹದಲ್ಲಿ ಚಟುವಟಿಕೆ

ತೋರಿಸುತ್ತ ರಸ್ತೆಯಲ್ಲಿ ಹೋಗುತ್ತಿದ್ದರು. ಎಂಜೊಲ್ರಾಸ್ ಈ ಗುಂಪಿನ ಮುಖಂಡನಾಗಿದ್ದ. ದಾರಿಯಲ್ಲಿ ಜನರ ಧಾರ್ಮಿಕ ಬೋಧನೆಗಾಗಿ ಅಂಟಿಸಿದ್ದ ಒಂದು ದೊಡ್ಡ ಪ್ರಕಟನಾ ಪತ್ರವನ್ನು ಬೊಹ್ರೆಲ್ ಹರಿಯುತ್ತ, "ಕೋಳಿ ಮೊಟ್ಟೆ ತಿನ್ನಲು ಪೋಪನ ಅನುಮತಿ ಬೇಕೆಂದಾದರೆ ನಾನು ಬದುಕಿ ಫಲವೇನು," ಎಂದಂದುಕೊಂಡ. ಬೊಹ್ರೆಲನ ಈ ಕಾರ್ಯವನ್ನು ಎಂಜೊಲ್ರಾಸ್ ಮೆಚ್ಚದೆ, "ನಿನ್ನ ಶಕ್ತಿಯನ್ನು ದುರುಪಯೋಗಪಡಿಸಬೇಡ," ಎಂದ. ಅದಕ್ಕೆ ಬೊಹ್ರೆಲ್, "ಅದು ಶಕ್ತಿಯ ದುರುಪಯೋಗವಲ್ಲ, ಶಕ್ತಿವರ್ಧನ ಕಾರ್ಯ. ಉಗಿ ಎಂಜಿನ್ನಿಗೆ ಬೆಂಕಿಯಿದ್ದಂತೆ ನಮಗೆ ಹುರುಪು ಕೊಡುವಂಥ ಕ್ರಿಯೆ," ಎಂದುತ್ತರವಿತ್ತ. ಬೊಹ್ರೆಲನ ಉತ್ತರ ಕೇಳುತ್ತಿದ್ದ ಗಾವ್ರೋಚ್, ಆ ಉತ್ತರಕ್ಕೆ ಮೆಚ್ಚಿ, "ಮಹಾರಾಯ, ನೀನು ಯಾರೇ ಇರಲಿ, ನಿನ್ನಂಥವನೇ ನನ್ನ ಗುರು," ಎಂದು ಹಿರಿಯ ಪ್ರಾಯಸ್ಥನಂತೆ ಪ್ರಶಂಸಿಸಿದ.

ಈ ಗುಂಪಿನ ಜೊತೆ ಸಾಧಾರಣ ೮೦ ವರ್ಷ ಪ್ರಾಯದ ಒಬ್ಬ ಮುದುಕ ಬರುತ್ತಿದ್ದುದನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು. ಮುದುಕನ ಕೈಯಲ್ಲಿ ಆಯುಧವಿರಲಿಲ್ಲ. ತಲೆಯಲ್ಲಿ ಹ್ಯಾಟ್ ಇರಲಿಲ್ಲ. ಅವನಿಗೆ ತಾನು ಎಲ್ಲಿದ್ದದ್ದು ಎಂದು ತಿಳಿದೇ ಇರಲಿಲ್ಲವೆಂಬಂತೆ ಅವನು ತೋರುತ್ತಿದ್ದ. ಆದರೂ ಅವನು ಈ ಗುಂಪಿನ ಯಜಮಾನಂತೆಯೇ ನಡೆಯುತ್ತಿದ್ದ. ಕೋರ್ ಫರೇಕನಿಗೆ ಈ ಮುದುಕನ ಗುರುತು ಇದ್ದದ್ದರಿಂದ ಅವನು ಕೇಳಿದ, "ಫಾದರ್ ಮೇಬಫರೇ, ನೀವೇಕೆ ಇಲ್ಲಿಗೆ ಬಂದಿರಿ?"

"ಬರಬಾರದೇನು?"

"ಇಲ್ಲಿ ಗಲಭೆ ಗುಂಡುಗಳಿವೆಯಲ್ಲ?"

"ನನಗೆ ಬೇಕಾದುದೂ ಅವೇ ತಾನೇ!"

"ನೀವು ವೃದ್ಧರಲ್ಲವೇ?"

"ಚಿಕ್ಕವರೇ ಹೋಗುತ್ತಿರುವಾಗ ನಮ್ಮಂಥವರಿಗೇನು? ನೀವಾದರೂ ಎಲ್ಲಿಗೆ?"

"ಸರಕಾರವನ್ನು ಉರುಳಿಸಲು ಹೋಗುತ್ತಿರುವೆವು."

"ಸಂಕಷ್ಟಕಾಲದಲ್ಲಿ ಪ್ರಾಯದ ಗಮನವಿರಬಾರದು. ನಾನೂ ಬರುತ್ತೇನೆ," ಎಂದು ಫಾದರ್ ಮೇಬಫ್ ಧೈರ್ಯವಾಗಿ ಉತ್ತರಕೊಟ್ಟರು. ಗಾವ್ರೋಚನಿಗೆ ಈ ವೃದ್ಧನ ಧೈರ್ಯ, ಉತ್ಸಾಹ ಕಂಡು ಪರಮಾನಂದವಾಯಿತು. ತನ್ನ ಆನಂದಪರವಶತೆಯಲ್ಲೇ ಅವನೊಂದು ಪದವನ್ನು ಹಾಡಿದ:

ಸ್ವಾತಂತ್ರ್ಯವಿಲ್ಲದಿಹ ಭೋಜನಕೆ ರುಚಿಯಿಲ್ಲ
ಹೋರಾಟವಿಲ್ಲದಿಹ ನೆಮ್ಮದಿಗೆ ನೆಲೆಯಿಲ್ಲ
ಹೋರಾಡು! ಕಸಿದುಕೋ ಸ್ವಾತಂತ್ರ್ಯ—ಗಂಜಿಯಲಿ
ಸವಿಯುವೆಯೊ ಮೃಷ್ಟಾನ್ನ! ಜೈಕ್ರಾಂತಿ ಜೈಕ್ರಾಂತಿ!

ಪದ ಭಾವನಾಮಯವೂ ದುಃಖಮಯವೂ ಆಗಿತ್ತು. ಗಾವ್ರೋಚ್ ಆ ಪದವನ್ನು ತಾರ ಶ್ರುತಿಯಲ್ಲಿ ಹಾಡಿದ್ದರಿಂದ, ಅದು ಅಲ್ಲಿದ್ದ ಬಾಲವೃದ್ಧರ ಮನಸ್ಸನ್ನೆಲ್ಲ ಕರಗುವಂತೆ ಮಾಡಿತು. ಅವರೆಲ್ಲರೂ ಗಾವ್ರೋಚನನ್ನು ಕಂಡು ಕೇಳಿ ಮೆಚ್ಚಿದರು.

ಈ ಗಲಭೆಯ ಮಧ್ಯೆ ಒಬ್ಬ ಹೊಸ ವ್ಯಕ್ತಿ ಅವರಿದ್ದಲ್ಲಿಗೆ ಬಂದ. ಅವನು ಕಾರ್ಮಿಕನಂತೆ ತೋರುತ್ತಿದ್ದ. ಸ್ತ್ರೀಯಂತೆ ರವಕೆ ತೊಟ್ಟಿದ್ದು ಗಂಡುಸಿನಂತೆ ಇಜಾರ ಧರಿಸಿದ್ದ. ಅವನು ಕೋರ್ ಫರೇಕನನ್ನು ಕರೆದು, "ಮೇರಿಯಸ್ ಎಲ್ಲಿದ್ದಾರೆಂದು ಗೊತ್ತಿದೆಯೇ?" ಎಂದು ಕೇಳಿದ.

"ನಾನರಿಯೆ," ಅಂದ ಕೋರ್‌ಫರೇಕ್.

"ಯಾವಾಗ ಬರಬಹುದೆಂದಾದರೂ ಗೊತ್ತಿದೆಯೇ ?"

"ಗೊತ್ತಿಲ್ಲ."

"ನೀವೆತ್ತ ಹೋಗುತ್ತಿರುವಿರಿ ?"

"ಆ ಗಲಭೆ ನಡೆಯುತ್ತಿರುವಲ್ಲಿಗೆ."

"ನಾನೂ ನಿಮ್ಮ ಜೊತೆ ಬರುವೆನು," ಎಂದು ಹೇಳಿ ಆ ಹೊಸಬನೂ ಈ ಗುಂಪಿನ ಜೊತೆಯಲ್ಲೇ ನಡೆಯತೊಡಗಿದ.

ಒಂಬತ್ತನೆಯ ಸಂಪುಟ

೧. ಮೋಡ ಕವಿವ ಮೊದಲ ಮೋಜು

ಸದ್ಯ ತಾವು ಭಾಗವಹಿಸಲಿದ್ದ ಕ್ರಾಂತಿಯುದ್ಧದ ಪೂರ್ವಭಾವಿಯಾಗಿ ಸ್ವಲ್ಪ ಮೋಜು ಮಾಡಬೇಕೆಂದು ಎಬಿಸಿ ಕ್ಲಬ್ಬಿನ ಗ್ರೇಂಟೆಯರ್, ಜ್ಯೋಲಿ ಮತ್ತು ಬೊಸೆಟ್ ಎಂಬವರು 'ಕೋರಿಂತ್' ಎಂಬ ಹೆಸರಿನ ಹೊಟೇಲಿನಲ್ಲಿ ಜೊತೆಸೇರಿದರು. ಅದರ ಯಜಮಾನ ತೀರಿಹೋಗಿದ್ದು, ಈಗ ಅದನ್ನು ಅವನ ಹೆಂಡತಿ ಹುಚಲಪ್ ಎಂಬಾಕೆ ನಡೆಸುತ್ತಿದ್ದಳು. ಇವಳ ಸಹಾಯಕ್ಕೆ ಇಬ್ಬರು ಯುವತಿ ಕೆಲಸಗಾರರೂ ಇದ್ದರು. ಇಂದು ತಾರೀಕು ಜೂನ್ ೫, ೧೮೩೨. ಪ್ಯಾರಿಸಿನ ಅನೇಕ ಕಡೆಗಳಲ್ಲಿ ಜನರಿಗೂ ಪೊಲೀಸರಿಗೂ ಜನರಿಗೂ ಸೈನಿಕರಿಗೂ ಹೊಡೆದಾಟ ನಡೆಯುತ್ತಿತ್ತು. ಜನರಲ್ ಲಮಾರ್ಕನ ಸಮಾಧಿಯೇ (ಹಿಂದೆ, ೧೮೩೦ರಲ್ಲಿ ಉದ್ಭವಿಸಿ ಅಲ್ಲಿಗೆ ಶಾಂತವಾಗಿದ್ದ) ಕ್ರಾಂತಿಯ ಪುನರುತ್ಥಾನ ಸಂದರ್ಭವಾಗಿರತಕ್ಕದ್ದೆಂದು ಎಬಿಸಿ ಕ್ಲಬ್ಬಿನವರು ನಿಶ್ಚೈಸಿದರು. ಇವರು ತಮ್ಮ ಭದ್ರ ಕೋಟೆ ಕಟ್ಟಿಕೊಂಡು ಅದರೊಳಗಿನಿಂದ ಸೈನ್ಯವನ್ನು ಎದುರಿಸಬೇಕೆಂದು ತಕ್ಕುದಾದ ಸ್ಥಳವನ್ನು ರಾಜಮಾರ್ಗದಲ್ಲಿ ಹುಡುಕುತ್ತಿದ್ದರು. ಈ ಕೆಲಸವೂ ಆದಷ್ಟು ಬೇಗ ಆಗಬೇಕಾಗಿತ್ತು. ಮಹಾಜನರ ಒಗ್ಗಟ್ಟು, ಶಕ್ತಿ ಪರಾಕ್ರಮಗಳನ್ನು ತೋರಿಸಲೋಸ್ಕರವೇ ಪ್ಯಾರಿಸಿನ ನಾನಾ ಕಡೆಗಳಲ್ಲಿ ಇದೇ ಕ್ರಮದ ಪ್ರತಿಭಟನಾಕಾರ್ಯ ಸರಕಾರದ ವಿರುದ್ಧವಾಗಿ ಈ ದಿನ ನಡೆಯತೊಡಗಿತ್ತು. ಸದ್ಯವೇ ಕೈಗೊಳ್ಳಲಿದ್ದ ಗುರುತರ ಕಾರ್ಯದ ಮೊದಲು ತಿಂಡಿಪಾನೀಯಗಳನ್ನು ಸೇವಿಸಿ, ಮನಸ್ವೀಯಾಗಿ ಸ್ವಲ್ಪಕಾಲ ಕಳೆಯಬೇಕೆಂದು ಈ ಎಬಿಸಿ ಜನ ಬೇಕುಬೇಕಾದ ತಿಂಡಿ ತಿನ್ನುತ್ತಲೂ ವೈನ್ ಹೇರಳವಾಗಿ ಕುಡಿಯುತ್ತಲೂ ಮೇರೆಯಿಲ್ಲದೆ ಮಾತು ಆಡುತ್ತಲೂ ಹೊಟೇಲಿನಲ್ಲಿ ಕುಳಿತಿದ್ದರು. ಈ ಮೂವರ ಪೈಕಿ ಗ್ರೇಂಟೆಯರ್ ಅತ್ಯಂತ ಹೆಚ್ಚು ವೈನ್ ಕುಡಿದು ಬೇಗನೇ ಮತ್ತನಾಗಿ ಮುಂದಿನ ಆಲೋಚನೆಗಳನ್ನೆಲ್ಲ ಮರೆಯತೊಡಗಿದ. ಆದರೆ ಕುಡಿದಷ್ಟೂ ಬುದ್ಧಿ ಚುರುಕುಗೊಳ್ಳುತ್ತಿದ್ದ ಬೊಸೆಟ್ ಮಾತ್ರ ತನ್ನ ಬುದ್ಧಿತೀಕ್ಷ್ಣತೆ ಹೊಂದಿ ಅಲ್ಲಿ ಆಗಬೇಕಾಗಿದ್ದ ಮುಂದಿನ ಕರ್ತವ್ಯಗಳನ್ನು ಯೋಚಿಸತೊಡಗಿದ.

ಅಷ್ಟರಲ್ಲೇ ಹೊಟೇಲಿನ ಎದುರು ತುತ್ತೂರಿ ಸದ್ದು ಕೇಳಿಸಿತು. ಕೋರ್‌ಫರೇಕ್, ಬೊಹ್ರೆಲ್, ಎಂಜೊಲ್ರಾಸ್, ಮತ್ತು ಕೊಂಬೆಫರ್ ಮೊದಲಾದವರು ರಸ್ತೆಯ ಎರಡೂ ಬದಿಗಳನ್ನು ಪರೀಕ್ಷಿಸುತ್ತ ಬರುತ್ತಿದ್ದರು. ಬೊಸೆಟ್ ತಮ್ಮ ಮುಂದಿನ ಕಾರ್ಯ ಏನೆಂದು ಅವರನ್ನು ವಿಚಾರಿಸಿದ. ಸೈನ್ಯಕ್ಕೆ ಅಡ್ಡವಾಗಿ ತಡೆಗೋಡೆ ಕಟ್ಟಲು ಸ್ಥಳ ಹುಡುಕುತ್ತಿರುವುದಾಗಿ ಅವರು ತಿಳಿಸಿ ಎಲ್ಲರೂ ಸ್ವಲ್ಪಸ್ವಲ್ಪ ಚರ್ಚೆನಡೆಸಿ, ಆ ಹೊಟೇಲಿನ ಎದುರುಗಡೆಯೇ, ಹೊಟೇಲನ್ನು ತಮ್ಮ ಒಳಗಡೆ

ಮಾಡಿಕೊಂಡು, ತಡೆಗೋಡೆ ಕಟ್ಟುವುದಾಗಿ ನಿಶ್ಚೈಸಿದರು. ಸೈನ್ಯ ಬರುತ್ತಿದ್ದ ದಿಕ್ಕು ಗೊತ್ತಿದ್ದುದರಿಂದಲೂ ಅಗತ್ಯವಿರುವ ಪರೀಕ್ಷೆಯೆಲ್ಲ ನಡೆದಿದ್ದುದರಿಂದಲೂ ಅಲ್ಲಿ ತಡೆಗೋಡೆ ಕಟ್ಟುವ ವಿಷಯದಲ್ಲಿ ಯಾರದೂ ಆಕ್ಷೇಪವಿರಲಿಲ್ಲ.

ಹೀಗೆ ನಿಶ್ಚೈಸಿದ ಕೂಡಲೆ ಕೆಲಸಕ್ಕೂ ಆರಂಭಿಸಿದರು. ಆ ಹೊಟೇಲಿನ ಎದುರು ಕಡೆ ಜಗುಲಿಗೆ ಇದ್ದ ಕಬ್ಬಿಣದ ಆವರಣ ಬೇಲಿಯನ್ನು ಮುರಿದು ತೆಗೆದರು. ಒಳಗಿನಿಂದ ಹಳೇ ಪೀಪಾಯಿಗಳನ್ನು ಉರುಳಿಸಿ ತಂದರು. ಅಲ್ಲಿದ್ದ ಮೇಜು, ಕುರ್ಚಿ ಬೆಂಚುಗಳನ್ನು ತಂದರು. ಕೆಲವು ಜನ ಈ ವಸ್ತುಗಳನ್ನಿಟ್ಟು ರಸ್ತೆಗೆ ಅಡ್ಡವಾಗಿ ಗೋಡೆ ಕಟ್ಟತೊಡಗಿದರು. ಇನ್ನು ಕೆಲವರು ಹಾರೆಪಿಕ್ಕಾಸುಗಳನ್ನು ಹಿಡಿದುಕೊಂಡು ರಸ್ತೆಗೆ ಅಡ್ಡವಾಗಿ ಕಂದಕವನ್ನು ತೋಡತೊಡಗಿದರು. ನೆರೆಕರೆಯವರು ಈ ಕಾರ್ಯಗಳನ್ನು ಕಂಡೂ ಇವರ ಗಲಭೆಯನ್ನು ಕೇಳಿಯೂ ತಂತಮ್ಮ ಮನೆಬಾಗಿಲುಗಳನ್ನು ಬಲವಾಗಿ ಹಾಕಿ ಭದ್ರಪಡಿಸಿಕೊಂಡರು. ಕಿಟಕಿಗಳನ್ನು ಮುಚ್ಚಿಕೊಂಡರು ಕೂಡ.

೨. ಕಾರ್ಯ ಸಿದ್ಧತೆ

ಆ ಹೊಟೇಲೇ ಎಬಿಸಿಯವರ ಕಾರ್ಖಾನೆಯೂ ಆಯಿತು. ಅಲ್ಲಿಯ ದೊಡ್ಡ ಒಲೆಯಲ್ಲಿ ಅದೇ ಹೊಟೇಲಿನ ತಟ್ಟೆ, ಚಮಚ ಪಾತ್ರೆಗಳನ್ನೂ ಇವರು ಇತರ ಕಡೆಗಳಿಂದ ತಂದಿದ್ದ ಸೀಸ, ಟಿನ್ ಮೊದಲಾದ ಲೋಹದ ತುಂಡುಗಳನ್ನೂ ಕಾಸಿ, ದ್ರವೀಕರಿಸಿದರು. ತೋಟೆಗಳಿಗೆ ಅಗತ್ಯವಿರುವ ಚಿಲ್ಲು ಮತ್ತು ಗುಂಡುಗಳನ್ನು ತಯಾರಿಸತೊಡಗಿದರು. ಮೇಡಮ್ ಹುಚಲಪ್ ಅಲ್ಲಿಯ ಜನರನ್ನೂ ಅವಳ ಹೊಟೇಲಿಗೆ ಒದಗಿದ್ದ ಅವಸ್ಥೆಯನ್ನೂ ಕಂಡು ಹೆದರಿ, ಆಶ್ಚರ್ಯ, ದುಃಖ, ಬೆದರಿಕೆಯಿಂದ ಮೂರ್ಛೆ ತಪ್ಪಿ ಬಿದ್ದಿದ್ದಳು. ಆ ಮೊದಲು ಚಾ, ಕಾಫಿ, ತಿಂಡಿಗಳನ್ನು ತಂದುಕೊಡುತ್ತಿದ್ದ ಕೆಲಸದ ಹೆಂಗುಸರು ಈಗ ಯುದ್ಧಸಲಕರಣೆಗಳನ್ನು ಸಾಗಿಸಿ ಕೊಡುತ್ತಿದ್ದರು. ಸಮೀಪದಲ್ಲಿ ಒಂದು ಕಮ್ಮಾರ ಸಾಲೆಯ ಹತ್ಯಾರುಗಳನ್ನೂ ಅಲ್ಲಿದ್ದ ಕೋವಿ, ಕತ್ತಿಗಳನ್ನೂ ಇವರು ತಮ್ಮದಾಗಿ ತಂದಿಟ್ಟುಕೊಂಡು ಉಪಯೋಗಿಸತೊಡಗಿದರು. ಕಲ್ಲುಕೆಲಸದವರು, ಕಮ್ಮಾರರು, ಗಾರೆಯವರು, ಮರ ಕೆಲಸದವರು, ಅಗಸರು, ದಿನಕೂಲಿಯವರು, ಅರ್ಥಾತ್ ದುಡಿಮೆಯವರೆಲ್ಲರೂ, ಈ ಯುವಕರ ಸೂಚನೆಯಂತೆ ಕೆಲಸ ಮಾಡತೊಡಗಿದರು. ಎಬಿಸಿ ಕ್ಲಬ್ಬಿನವರು ತುತ್ತೂರಿ ಊದಿಕೊಂಡು ಬರುವಾಗ ದಾರಿಯುದ್ದಕ್ಕೂ ನಾನಾಬಗೆಯ ಜನ ಇವರ ಗುಂಪಿಗೆ ಸೇರಿಕೊಂಡರು. ಹೀಗೆ ಸೇರಿಕೊಂಡವರಲ್ಲಿ ಎತ್ತರವಾಗಿಯೂ ತೆಳ್ಳಗಾಗಿಯೂ ಇದ್ದವನೊಬ್ಬ, ತನ್ನ ಬಂದೂಕು ಸಮೇತ ಇವರ ಜತೆ ಕೂಡಿಕೊಂಡ. ಸ್ಥೂಲಕಾಯನೂ ಕುಳ್ಳನೂ ಆಗಿದ್ದು ಬಲವಾದ ಮೀಸೆಯಿದ್ದವನೊಬ್ಬನೂ ಇವರ ಜೊತೆಗೆ ಸೇರಿದ್ದ. ಇಂಥವರಲ್ಲಿ ನಾನಾ ವೃತ್ತಿಯವರೂ ಸ್ವಭಾವದವರೂ ಇದ್ದುದರಿಂದ ಕೆಲವರು ಕೆಲಸದಲ್ಲಿ ನಿರತರಾಗಿಯೂ ಇನ್ನು ಕೆಲವರು ಅಲಸಿಗರಾಗಿಯೂ ಮತ್ತೆ ಕೆಲವರು ಅಪ್ಪಣೆ ದೊರಕಿದೊಡನೆ ಕೆಲಸಕ್ಕೆ ದುಮುಕುವ ತವಕವುಳ್ಳವರಾಗಿಯೂ ಇದ್ದರು. ಕೆಲವರು ಕುಳಿತು, ಇದೇ ಸಮಯವೆಂದು, ಸಿಕ್ಕಿದಷ್ಟು ಹೆಂಡ ಕುಡಿಯುತ್ತಿದ್ದರು. ಹಿರಿಮೀಸೆಯ ಸ್ಥೂಲಕಾಯದ ಕುಳ್ಳ ನೆರೆಕರೆ ಮನೆಗಳ ಮಹಡಿಗಳ ಕಿಟಕಿ ಬಾಗಿಲುಗಳನ್ನು ಪರೀಕ್ಷಿಸುವಂತೆ ನೋಡುತ್ತಿದ್ದ. ಕೋವಿಸಮೇತ ಬಂದಿದ್ದವ ಮುಂದಿನ ಸಂದರ್ಭಕ್ಕೆ ತಕ್ಕಂತೆ ಕಾರ್ಯವೆಸಗಲಿರುವ ಸಿದ್ಧತಾಮೂರ್ತಿಯಂತೆ ಎಲ್ಲರನ್ನೂ ಎಲ್ಲ ಕೆಲಸಗಳನ್ನೂ ಗಮನವಿಟ್ಟು ನೋಡುತ್ತಿದ್ದ. ಕೆಲಸದ ಹೆಂಗುಸರು ಒಂದು ವಿಧದ ಕೆಲಸ ಮುಗಿದನಂತರ ಮತ್ತೊಂ

ದನ್ನು ಮಾಡುತ್ತ ತಮಗೆ ಸಿಕ್ಕಿದ ಮತ್ತು ತಮ್ಮಲ್ಲೇ ಇದ್ದ ಬಟ್ಟೆಗಳನ್ನು ಹರಿದು ಬ್ಯಾಂಡೇಜು ಗಳನ್ನು ತಯಾರಿಸಿಡುತ್ತಿದ್ದರು.

ಆದರೆ, ಈ ಎಲ್ಲರಿಗಿಂತಲೂ ಹುರುಪಿನಿಂದ ಕೆಲಸ ಮಾಡುತ್ತಿದ್ದವ ಗಾವ್ರೋಚ್. ಇಂದಿನ ಇಲ್ಲಿಯ ಕೆಲಸವೆಲ್ಲ ತನಗಾಗಿಯೂ ತನ್ನ ಮುಂದಾಳುತನದಲ್ಲಿ ನಡೆಯುತ್ತಿದ್ದಂತೆಯೂ ಅವನು ಅತ್ತಿತ್ತ ಓಡಾಡುತ್ತಿದ್ದ. ಅವನಿಗೆ ಹಾರಲು ರೆಕ್ಕೆಗಳಿದ್ದುವು. ಪ್ರಾಯ ಉತ್ಸಾಹಗಳೇ ಈ ರೆಕ್ಕೆಗಳು! ಅಂದಿನ ಅವನ ಸ್ಫೂರ್ತಿಗೆ ಸಾಕಷ್ಟು ಮೂಲಪ್ರೇರಕವಾಗಿ ಅವನ ಬಡತನವೂ ಆ ವರೆಗಿನ ಕಷ್ಟಮಯ ಜೀವನಾನುಭವವೂ ಸೇರಿದ್ದುವು. ಅವನು ರಸ್ತೆಯ ತಡೆಗೋಡೆಯ ಮೇಲೇರಿ ಕೊಂಡು ಕೆಲಸ ಮಾಡುತ್ತಲೂ ಇದ್ದು, ಅಗತ್ಯಬಿದ್ದಾಗ ಹಠಾತ್ತನೆ ಕೆಳಗಿಳಿದೂ ಕೆಲಸ ಮಾಡು ತ್ತಿದ್ದು, ಪುನಃ ಅಳಿಲಂತೆ ಚಲಿಸಿ, ಗೋಡೆ ಏರಿ, ಚಲಿಸಿ ಕೆಲಸ ಗೈಯುತ್ತಿದ್ದ. ಅವನ ಚೈತನ್ಯವೆಲ್ಲ ಚಲನೆಯಾಗಿ ಹೊರಹೊಮ್ಮುತ್ತಿತ್ತು. ನಿದ್ರೆಯಲ್ಲಿದ್ದವರನ್ನು ಎಚ್ಚರಿಸುತ್ತಿದ್ದ. ಅಲಸಿಗರನ್ನು ಕೆಲಸದಲ್ಲಿ ಪ್ರವರ್ತಿಸುತ್ತಿದ್ದ. ಶ್ರಮದಿಂದ ಬಳಲಿದ್ದವರನ್ನು ತನ್ನ ವಿನೋದಗಳಿಂದ ಚೇತನ ಗೊಳಿಸುತ್ತಿದ್ದ. ಎಲ್ಲರೂ ಎಲ್ಲೆಡೆಯಲ್ಲೂ ಕಾರ್ಯಪ್ರವೃತ್ತರಾಗುವಂತೆ, ಎಲ್ಲ ಕಡೆಗಳಲ್ಲೂ ತೋರುತ್ತಲೂ ಮಾಯವಾಗುತ್ತಲೂ ವಿದ್ಯುತ್ತಿನಂತೆ ಸರ್ವಚೈತನ್ಯರೂಪನಾಗಿ ಚಲಿಸುತ್ತಿದ್ದ. ತನಗೊಂದು ಸ್ವಂತ ಉಪಯೋಗಕ್ಕೆ ಕೋವಿ ಕೊಡಿಸಬೇಕೆಂದು ಈ ಗುಂಪಿನ ಮುಖಂಡನಾಗಿದ್ದ ಎಂಜೊಲ್ರಾಸನನ್ನು ಕೇಳಿಕೊಂಡ. ಎಂಜೊಲ್ರಾಸ್ ಗಾವ್ರೋಚನ ಎತ್ತರ ದಪ್ಪ ಪ್ರಾಯ ಗಮನಿಸಿ ಅವನ ಕೇಳಿಕೆಗೆ ಗಮನಕೊಡದೆ, "ದೊಡ್ಡವರಿಗೆಲ್ಲ ಕೊಟ್ಟಾದನಂತರ ನಿನಗೆ ಕೊಡೋಣ," ಅಂದ.

"ಆಗಬಹುದು, ನೀನು ಸತ್ತನಂತರ, ನಿನ್ನ ಕೋವಿ ನನಗಿರಲಿ," ಅಂದ ಗಾವ್ರೋಚ್.

"ಕಳ್ಳ," ಎಂದು ಎಂಜೊಲ್ರಾಸ್ ಅರೆಸಿಟ್ಟಿನಿಂದ ಗದರಿಸಿದ.

"ನಾಯಿ," ಅಂದ ಗಾವ್ರೋಚ್.

ಈ ಮಾತು ಮುಂದುವರಿಯುವುದರಲ್ಲಿತ್ತು. ಆದರೆ, ಅಷ್ಟರಲ್ಲೇ ರಸ್ತೆಯಲ್ಲಿ ಯಾರೋ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕುದುರೆ ಬಂಡಿಯನ್ನು ಈ ಗುಂಪಿನವರು ಎಳೆದು ತಂದರು. ಬಂಡಿಯಲ್ಲಿದ್ದ ಜನರೆಲ್ಲ ಓಡಿಹೋದರು. ಖಾಲಿ ಬಂಡಿಯನ್ನು ಎಳೆದುತಂದು ತಡೆ ಗೋಡೆಯ ಹಿಂದಿನ ಆಧಾರವಾಗಿ ಎಳೆದು ಕಟ್ಟಿದರು.

೩. ಗಾವ್ರೋಚನಿಗೆ ಒದಗಿದ ಕೋವಿ

ಆ ಗುಂಪಿನವರೆಲ್ಲ ಅವರವರ ಕೆಲಸದಲ್ಲೇ ನಿರತರಾಗಿದ್ದಾಗ, ಈ ಮೊದಲು ಪ್ರಸ್ತಾವಿಸಿದ ಆ ಎತ್ತರದ ವ್ಯಕ್ತಿ ಒಂದೆಡೆ ಕುಳಿತು ಅಲ್ಲಿ ನಡೆಯುತ್ತಿದ್ದ ವಿದ್ಯಮಾನಗಳನ್ನೆಲ್ಲ ನೋಡುತ್ತಿದ್ದ. ಗಾವ್ರೋಚನ ಓಡಾಟದ ಭರದಲ್ಲಿ ಒಮ್ಮೆ ಅವನು ಆ ವ್ಯಕ್ತಿಯ ಸಮೀಪ ದಾಟಿದ. ಹುಡುಗನ ಮೃಗೀಯ ಅಂತರ್ಬೋಧೆ ಆಗಲೇ ಎಚ್ಚತ್ತಿತು. ಗಾವ್ರೋಚ್ ಆ ಮನುಷ್ಯನನ್ನು ಓರೆ ಕಣ್ಣಿನಿಂದ ಪರೀಕ್ಷಿಸಿದ. ಅನಂತರ ಅವನ ಹಿಂಬದಿಗೆ ಹೋಗಿ ತುದಿಕಾಲಲ್ಲಿ ನಿಂತು ತನ್ನ ಮುಖವನ್ನು ಉದ್ದ, ಗಿಡ್ಡ ಮಾಡಿ, ಮೂಗಿನ ಸೊಳ್ಳೆಗಳನ್ನು ಕಣ್ಣುಗಳನ್ನು ಅರಳಿಸಿಕೊಂಡು, ಉಸಿರು ಸಹ ತಡೆಹಿಡಿದುಕೊಂಡು ಪರೀಕ್ಷಿಸಿದ. ಈ ಪರೀಕ್ಷೆಯನಂತರ ಗಾವ್ರೋಚ್ ಎಂಜೊಲ್ರಾಸನ ಕಿವಿ ಯಲ್ಲಿ ಏನೋ ಗುಟ್ಟಾಗಿ ಉಸಿರಿದ. ಎಂಜೊಲ್ರಾಸ್ ತನ್ನ ಕಡೆಯ ನಾಲ್ಕು ಜನರ ಕಿವಿಯಲ್ಲಿ ಏನನ್ನೋ ಗುಟ್ಟಾಗಿ ಹೇಳಿ, ತಾನೊಬ್ಬನೇ ಆ ಅಪರಿಚಿತನ ಎದುರು ಬಂದು, "ನೀನ್ಯಾರಯ್ಯ?"

ಎಂದು ಕೇಳಿದ.

ಆ ಮನುಷ್ಯ ಉತ್ತರಕೊಡುವ ಮೊದಲು ಎಂಜೊಲ್ರಾಸನನ್ನೂ ಇತರ ಎಲ್ಲರನ್ನೂ ತುಚ್ಛೀಕರಿಸಿ ನೋಡುತ್ತ, ಧೈರ್ಯದಿಂದ ಉತ್ತರವಿತ್ತ, "ನನ್ನ ವಿಚಾರಣೆ ಮತ್ತಾಗಬಹುದು. ನಿಮ್ಮ ಈ ಕೆಲಸವೆಲ್ಲ ಏನು?" ಎಂದು ಕೇಳಿದ.

"ನೀನು ಗೂಢಚಾರನಲ್ಲವೇ ?" ಎಂದು ಕೇಳಿದ ಎಂಜೊಲ್ರಾಸ್.

"ಹೌದು."

"ನಿನ್ನ ಹೆಸರು ?"

"ಇನ್‌ಸ್ಪೆಕ್ಟರ್ ಜೇವರ್ಟ್."

ಎಂಜೊಲ್ರಾಸನ ಸಂಜ್ಞೆ ಕಾಯುತ್ತಿದ್ದ ನಾಲ್ಕು ಜನ ಯುವಕರು, ಈ ಉತ್ತರ ಸಿಕ್ಕಿದಕೂಡಲೆ ಜೇವರ್ಟನನ್ನು ಹಠಾತ್ತನೆ ಹಿಡಿದು ಹಗ್ಗಗಳಿಂದ ಬಂಧಿಸಿದರು. ಅನಂತರ ಎಂಜೊಲ್ರಾಸ್ ನ್ಯಾಯಾಧೀಶ ತೀರ್ಪುನೀಡುವಂತೆ, "ನಾವು ಸರಕಾರದ ಕಡೆಯವರಿಗೆ ಸೋಲುವ ಸಂಭವ ಬಂದರೆ, ಹಾಗೆ ಸೋಲುವ ಎರಡು ನಿಮಿಷ ಮೊದಲು ನಿನಗೆ ಗುಂಡಿಡಲಾಗುವುದು," ಅಂದ.

ಅದಕ್ಕೆ ಜೇವರ್ಟ್ ತಿರಸ್ಕಾರದಿಂದ, "ಈಗಲೇ ಹಾಗೆ ಮಾಡಬಹುದಲ್ಲಾ!"

"ನಿನಗಾಗಿ ಒಂದು ತೋಟೆಯನ್ನೂ ಈಗ ಖರ್ಚುಮಾಡಲು ತಯಾರಿಲ್ಲ."

"ಚೂರಿಯನ್ನು ಉಪಯೋಗಿಸಿದರೆ ನಿಮ್ಮ ಕೆಲಸವಾಗಬಹುದಷ್ಟೆ!"

"ನಾವು ನ್ಯಾಯಪರಿಪಾಲಕರು—ಖೂನಿಕಾರರಲ್ಲ; ಯೋಚಿಸಿ ದಂಡನೆ ವಿಧಿಸುವವರು ಮಾತ್ರ," ಎಂದು ಎಂಜೊಲ್ರಾಸ್ ಸ್ವಲ್ಪ ಗದರಿಸಿ ನುಡಿದ. ಅನಂತರ ಅವನು ಗಾವ್ರೋಚನನ್ನು ಕರೆದು, ಗೋಡೆಯ ಕಂಡಿಯಲ್ಲಿ ನುಸುಳಿ ಹೊರಗೆ ಹೋಗಿ ಶತ್ರುಗಳ ಕಾರ್ಯ ತಿಳಿದುಬರುವಂತೆ ಆಜ್ಞೆಯಿತ್ತ. ಗಾವ್ರೋಚ್ ಜೇವರ್ಟನ ಕೋವಿ ಹಿಡಿದುಕೊಂಡು ಹೋದ.

೪. ಅವನ ಹೆಸರು ಲಾ ಕಾಬಕ್ ?

ಹಿಂದೆ ಪ್ರಸ್ತಾವಿಸಿರುವ ಸ್ಥೂಲಕಾಯನಾದ ಕುಳ್ಳ ನೆರೆಮನೆಗಳ ಮಹಡಿಯನ್ನೆಲ್ಲ ನೋಡಿ, ತನಗೆ ಎದುರಿದ್ದ ಒಂದು ಮಹಡಿಯಲ್ಲಿ ನಿಂತು, ರಸ್ತೆಯಲ್ಲೇ ಬರುವ ಶತ್ರುಗಳಿಗೆ ಅಲ್ಲಿಂದ ಗುಂಡು ಹೊಡೆಯುವುದು ಸುಲಭವೆಂದು ಹೇಳತೊಡಗಿದ. ಅವನ ಅಭಿಪ್ರಾಯ ಸರಿಯೆಂದು ಕೆಲವರು ಒಪ್ಪಿಕೊಂಡರು. ಅವನು ಪ್ರಖ್ಯಾತನಾಗಿದ್ದ ಕಾಬಕ್ಕನೇ ಆಗಿರಬೇಕೆಂದು ಕೆಲವರು ಗುಟ್ಟಾಗಿ ಮಾತಾಡಿಕೊಂಡರು. ಆ ಕಾಬಕ್ಕನ ಅಭಿಪ್ರಾಯದಂತೆ ಮಹಡಿಗೆ ಹೋಗಲೋಸ್ಕರ ಕೆಲವರು ಮನೆಯ ಹೆಬ್ಬಾಗಿಲು ತಟ್ಟಿದರು. ಯಾರೂ ಬಾಗಿಲನ್ನು ತೆರೆಯಲಿಲ್ಲ. ಎಲ್ಲರೂ ಎಷ್ಟೇ ಪ್ರಯತ್ನಿಸಿದರೂ ಅವರಿಂದ ಬಾಗಿಲು ತೆರೆಯಲಾಗಲಿಲ್ಲ. ಬಾಗಿಲೂ ಬಲವಾಗಿತ್ತು, ಒಳಗಿನ ಅಗಣಿಗಳೂ ಬಲವಾಗಿದ್ದಿರಬೇಕು. ಕೊನೆಗೆ ಬಾಗಿಲನ್ನು ಎಲ್ಲರೂ ಸೇರಿ ಒದೆದು ಬೀಳಿಸಿ ಒಳ ನುಗ್ಗುವ ಸಾಹಸಕ್ಕಾಗಿ ಎಲ್ಲರೂ ಒದೆಯತೊಡಗಿದರು. ಆಗ ಆ ಮನೆಯೊಳಗಿದ್ದ ಒಬ್ಬ ಮುದುಕ ಕಿಟಿಕಿಯಿಂದ ತಲೆ ಹೊರಗೆ ಹಾಕಿ ನುಡಿದ, "ಗೃಹಸ್ಥರೇ, ಮನೆಯನ್ನು ದಯಮಾಡಿ ಉಳಿಸಿ."

"ಬಾಗಿಲು ತೆರೆ," ಅಂದ ಕಾಬಕ್ಕ.

"ಸಾಧ್ಯವಿಲ್ಲ, ಕ್ಷಮಿಸಿ," ಅಂದ ಮುದುಕ.

"ಖಂಡಿತವಾಗಿಯೂ ತೆರೆಯುವುದಿಲ್ಲವೇ?"

"ಇಲ್ಲ."

"ಹಾಗಾದರೆ ನಾವೇ ಬಾಗಿಲು ತೆಗೆದು ಹಾಕುವೆವು."

"ಅದಕ್ಕೇ ನಾನೇನು ಮಾ. . ." ಎಂದು ಮುದುಕ ಮಾತನ್ನು ಪೂರೈಸುವ ಮೊದಲೇ ಕಾಬಕ್ ಮುದುಕನಿಗೆ ಗುಂಡು ಹೊಡೆದ. ತಲೆ ಭಾಗ ಕಿಟಿಕಿಯಿಂದ ಹೊರಚಾಚಿಕೊಂಡು ಮುದುಕ ಸತ್ತ.

ಇದನ್ನೆಲ್ಲ ಪ್ರಾರಂಭದಿಂದಲೇ ನೋಡುತ್ತಿದ್ದ ಎಂಜೊಲ್ರಾಸ್ ಕಾಬಕ್ಕನ ಈ ದುಡುಕುತನವನ್ನು ಮಾತ್ರ ಊಹಿಸಿರಲಿಲ್ಲ. ಆ ವೃದ್ಧ ಮೃತಿಹೊಂದಿದ್ದನ್ನು ಕಂಡು ಎಂಜೊಲ್ರಾಸ್ ಬಲು ಕೋಪಗೊಂಡ. ಅವನ ಸಿಟ್ಟೇ ಅವನಿಗೆ ಅತಿಮಾನುಷ ಶಕ್ತಿ ತಂದುಕೊಟ್ಟಿತು. ಆ ಕೂಡಲೇ ಅವನು ಕಾಬಕ್ಕನನ್ನು ಎಳೆದು ತಂದು ನೆಲಕ್ಕೆ ಬಗ್ಗಿಸಿದ. ಆಗಿನ ಎಂಜೊಲ್ರಾಸನ ಮುಖವನ್ನೂ ಶಕ್ತಿಯನ್ನೂ ಕಂಡು ಕಾಬಕ್ ಬಗ್ಗಿದ, ಅಲ್ಲಿದ್ದ ಇತರರೆಲ್ಲರೂ ಮೌನವಾಗಿ ಹೆದರಿ ನಿಂತರು. ಎಂಜೊಲ್ರಾಸ್ ಕಾಬಕ್ಕನ ಕತ್ತು ಹಿಡಿದು ಅಲ್ಲಾಡಿಸಿ, "ಇಗೋ, ನಿನಗೆ ಎರಡು ಮಿನಿಟ್ ಪುರಸತ್ತು ಕೊಟ್ಟಿರುತ್ತೇನೆ, ಮನಸ್ಸಿದ್ದರೆ ದೇವರನ್ನು ನೆನೆಯಬಹುದು," ಅಂದ.

ಅನಂತರ ತನ್ನ ಗಡಿಯಾರ ನೋಡತೊಡಗಿದ. ಕಾಬಕ್ ತನ್ನ ಗಾಬರಿಯಿಂದ ಎಚ್ಚತ್ತೇಳುವಾಗಲೇ ಆ ಎರಡು ಮಿನಿಟುಗಳ ಕಾಲ ಸಂದಿತು. ತನ್ನ ಗಡಿಯಾರ ನೋಡಿ, ಎಂಜೊಲ್ರಾಸ್ ಕಾಬಕ್ಕನ ಕಿವಿಗಾಗಿ ಗುಂಡುಹೊಡೆದ. ಕಾಬಕ್ ಮೃತನಾದ. ಹೆಣವನ್ನು ಕೆಲವರು ಪರೀಕ್ಷಿಸಿ ಅವನು ಕಾಬಕ್ಕನಲ್ಲವೆಂದೂ ಕ್ಲೆಕೋಸಸನೆಂದೂ ಹೇಳಿಕೊಂಡರು.

ಈ ಕೃತ್ಯ ನಡೆದನಂತರ ಎಂಜೊಲ್ರಾಸ್ ನೆರೆದಿದ್ದ ಜನರನ್ನು ನೋಡಿ, "ನಾಗರಿಕರೇ! ನಾವಿಂದು ಪವಿತ್ರವಾದ ಪ್ರಜಾರಾಜ್ಯ ಸ್ಥಾಪನೆಯ ಕಾರ್ಯದಲ್ಲಿರುವೆವು. ಈ ಪವಿತ್ರ ಕಾರ್ಯಕ್ಕೆ ಭ್ರಷ್ಟತೆ ತರುವಂಥ ಯಾವ ಕೃತ್ಯವನ್ನೂ ನಾವು ಎಸಗಕೂಡದು. ಖೂನಿಯೆಂಬುದು ಯಾವ ಸಂದರ್ಭದಲ್ಲಿ ನಡೆದರೂ ಖೂನಿಯೇ ಆಗಿ ಉಳಿಯುವುದು. ಅದರ ಅನ್ಯಾಯ ಎಂದೂ ಪರಿಹಾರವಾಗದು. ಕಾಬಕ್ ಆ ವೃದ್ಧನನ್ನು ಕೊಂದದ್ದು ಕೇವಲ ಖೂನಿ. ನಮ್ಮ ಪಂಗಡದ ಮುಖಂಡತ್ವವನ್ನು ನೀವೆಲ್ಲ ನನಗೆ ಒಪ್ಪಿಸಿರುವುದರಿಂದ, ನನ್ನ ಜವಾಬ್ದಾರಿಯ ನಿರ್ವಹಣೆಗಾಗಿ ನಾನು ಅವನ ತನಿಖೆ ನಡೆಸಿ ಶಿಕ್ಷಿಸಿರುವೆನು. ನಾನು ಮಾಡಿರುವುದು ನ್ಯಾಯ, ಮತ್ತು ಧರ್ಮ ಸಮ್ಮತವಾದ ಕಾರ್ಯವೇ ಆದರೂ ಅದೂ ಒಂದು ಕ್ರೂರಕೃತ್ಯ. ಆದರೆ, ನಮ್ಮಲ್ಲಿ ಶಿಸ್ತಿಲ್ಲದಿದ್ದರೆ ನಮಗೆ ಜಯ ದೊರೆಯದು. ಅವನಿಗೆ ಅಂಥ ಕಠಿಣ ಶಿಕ್ಷೆ ವಿಧಿಸಿದುದನ್ನು ಸಮರ್ಥಿಸಲೂ ನಾವೂ ಶಿಸ್ತನ್ನು ಉಲ್ಲಂಘಿಸಿದಾಗ ಅಷ್ಟೇ ಕಠಿಣ ಶಿಕ್ಷೆ ಪಡೆಯಲೂ ಸಿದ್ಧರಾಗಬೇಕು. ಅದಕ್ಕೆ ತಯಾರಿದ್ದರೆ ಮಾತ್ರ ನಮ್ಮ ಪ್ರಜಾರಾಜ್ಯ ಸ್ಥಾಪನೆಯಾಗಬಲ್ಲದು. ನನ್ನ ಮಟ್ಟಿಗೆ, ನಾನು ತಪ್ಪು ಮಾಡಿದ್ದಾದರೆ, ಯಾವ ಕಠೋರ ಶಿಕ್ಷೆಯನ್ನು ಅನುಭವಿಸಲೂ ತಯಾರಿರುವೆನೆಂದು ನಿಮಗೆ ಇಂದೇ ತೋರಿಸಬಹುದು," ಎಂದು ಬಲು ಗಂಭೀರವಾಗಿ ಹೇಳಿದ.

"ನಿನ್ನ ತತ್ತ್ವ ನಮಗೆ ಸಂಪೂರ್ಣ ಸಮ್ಮತವಾದದ್ದೇ. ನಿನ್ನ ಎಲ್ಲ ಕಷ್ಟಗಳಲ್ಲೂ ನಮಗೆ ಭಾಗವಿರಲಿ!" ಎಂದು ಕೋಂಬೆಫರ್ ಘೋಷಿಸಿದ.

ಎಂಜೊಲ್ರಾಸ್ ಸಂತೋಷ ಸೂಚಿಸುತ್ತ ಪುನಃ ಹೇಳತೊಡಗಿದ, "ನಿಮ್ಮೆಲ್ಲರ ಸಹಕಾರ, ಸಮ್ಮತಿಗಳಿವೆಯೆಂದು ಬಲ್ಲೆ. ನಮ್ಮ ಪ್ರಗತಿಯ ಫಲವಾಗಿ ರಾಕ್ಷಸರೆಲ್ಲರೂ ನಾಶವಾಗಿ ದೇವತೆಗಳು ಮುಂದೆ ಬರಬೇಕು. ದೇಶಪ್ರೇಮ, ನ್ಯಾಯ, ಧರ್ಮಗಳು ವೃದ್ಧಿಗೊಂಡು ಸ್ಥಿರವಾಗಬೇಕು. ಎಲ್ಲಿ ಅನ್ಯಾಯವಿಲ್ಲವೋ, ಎಲ್ಲಿ ದುಃಖವಿಲ್ಲವೋ ಎಲ್ಲಿ ಸ್ವಾತಂತ್ರ್ಯವಿದೆಯೋ ಅಂಥ ರಾಷ್ಟ್ರ ಮುಂದೆ ಬಂದೇ ಬರುವುದು. ನಮ್ಮ ಕಾರ್ಯಗಳಲ್ಲಿ ನಾವಿಂದು ಮಡಿಯಬಹುದು, ಅಥವಾ

ಉಳಿಯಬಹುದು. ಆ ವಿಷಯ ಹೇಗೇ ಇರಬಹುದಾದರೂ, ಮುಂದಿನ ಫಲ—ರಾಷ್ಟ್ರದ ಭವಿಷ್ಯ—ಉತ್ತಮತರದ್ದಾಗುವುದೆಂಬುದರಲ್ಲಿ ಸಂಶಯವಿಲ್ಲ." ಇಷ್ಟು ಮಾತುಗಳನ್ನು ಹೇಳಿ ಎಂಜೊಲ್ರಾಸ್ ತನ್ನ ಮುಂದಿನ ಕಾರ್ಯಗಳಲ್ಲಿ ಉದ್ಯುಕ್ತನಾದ.

ಇವರೆಲ್ಲರ ಜೊತೆಯಲ್ಲಿ ಅದೇ ದಿನ ಬಂದು ಈ ಕೂಟಕ್ಕೆ ಸೇರಿದ್ದ ಹೆಂಗುಸಿನಂತೆ ತೋರುತ್ತಿದ್ದ ಪುರುಷವೇಷಧಾರಿಯೂ, ಯುದ್ಧ ಸಂಬಂಧವಾದ ಕೆಲಸಗಳಲ್ಲಿ ಸೇರಿ, ಕೆಲಸ ಮಾಡುತ್ತಿದ್ದ. ಅವನು ಮೇರಿಯಸನನ್ನು ಹುಡುಕುತ್ತ ಬಂದಿದ್ದವನೆಂದು ಜ್ಞಾಪಕವಿಟ್ಟುಕೊಳ್ಳಬಹುದು.

ಹತ್ತನೆಯ ಸಂಪುಟ

೧. ರೂ'ಪ್ಲಮೆಟಿನಿಂದ ರೂ'ಸೇಂಟ್ ಡೆನಿಸಿಗೆ

ಕೋಸೆಟ್ಟಿಯನ್ನು ಕರೆದು ಕರೆದು ಉತ್ತರ ಬಾರದೆ ನಿರಾಶನಾದ ಮೇರಿಯಸನಿಗೆ ತನ್ನ ಜೀವನದಲ್ಲೇ ಜುಗುಪ್ಸೆ ಉಂಟಾಯಿತು. ಇದೇ ಸಮಯದಲ್ಲಿ ರಸ್ತೆಯಿಂದ ಬಂದಿದ್ದ ಎಬಿಸಿ ಕ್ಲಬ್ಬಿನ ಕರೆ ದೈವಿಕ ಆಹ್ವಾನವೆಂದೇ ಅವನಿಗೆ ತೋರಿತು. ಜೀವದಾಸೆ ಇಲ್ಲದಿದ್ದು, ಸಮಾಧಿಯ ಮಾರ್ಗ ಹುಡುಕುತ್ತಿದ್ದವನಿಗೆ ಈ ಕರೆಯ ಮೂಲಕ ಮಾರಕ ಶಕ್ತಿಯೊಂದು ಸಮಾಧಿಯ ಕದ ತೆರೆದು ಕೊಟ್ಟಿತು. ಜೇವರ್ಟ್ ತನಗೆ ಕೊಟ್ಟ ಎರಡು ಪಿಸ್ತೂಲುಗಳೂ ಸಮಾಧಿ ಮಾರ್ಗವನ್ನೇ ತೋರಿಸುತ್ತಿದ್ದುವು. ರಸ್ತೆಗೆ ಇಳಿದದ್ದೇ ತಡ, ಮೇರಿಯಸ್ ಬಲು ಅವಸರವಾಗಿ ಕಾಲು ಹಾಕಿದ.

ಮೊದಮೊದಲು ರಸ್ತೆಯಲ್ಲಿ ಜನರೂ ವಾಹನಗಳೂ ತೆರೆದಿಟ್ಟಿದ್ದ ಅಂಗಡಿಗಳ ಬೆಳಕೂ ಸಾಕಷ್ಟು ಕಂಡುಬರುತ್ತಿದ್ದುವು. ಆದರೆ, ರೂ'ಪ್ಲಮೆಟಿನಿಂದ ದೂರದೂರ ಹೋಗುತ್ತ ಬಂದಂತೆ ಬೀದಿಯ ಇಬ್ಬದಿಗಳ ಅಂಗಡಿಗಳೆಲ್ಲ ಮುಚ್ಚಿದ್ದು, ಬೆಳಕು ಸಾಕಷ್ಟಿಲ್ಲದೆ, ಜನಸಮೂಹ ಮಾತ್ರ, ಮೌನವಾಗಿ, ಪ್ರವಾಹದಂತೆ, ತಡೆಯಿಲ್ಲದೆ, ಎಡೆಯಿಲ್ಲದೆ ಒಂದು ಕಡೆಗೆ ನಡೆದು ಹೋಗುತ್ತಿದ್ದುದನ್ನು ಗಮನಿಸಿದ. ಈ ಜನರಲ್ಲಿ ದೀನದರಿದ್ರರು, ಕೂಲಿಯವರು ಕಾರ್ಖಾನೆಗಳ ಕಾರ್ಮಿಕರು ಮತ್ತು ಇತರ ನಾನಾ ವಿಧದ ಕೆಲಸಗಾರರು ಮಾತ್ರ ಇದ್ದರು. ಆದರೆ ಸೇಂಟ್ ಡೆನಿಸಿಗೆ ತಲಪುವ ಸ್ವಲ್ಪ ಮೊದಲೇ ಭೂರಿಜನರೆಲ್ಲ ಕಡಿಮೆಯಾಗಿದ್ದು, ಸೈನಿಕರು ಮಾತ್ರ ರಸ್ತೆಯಲ್ಲಿದ್ದರು. ಮುನಿಸಿಪಲ್ ದೀಪಗಳ ಮಸಕಾದ ಬೆಳಕು ಸೈನ್ಯದ ಭೈರವತೆಯನ್ನೂ ಸನೀನುಗಳ ಭೀಕರತೆಯನ್ನೂ ಇದ್ದುದಕ್ಕಿಂತ ಹೆಚ್ಚಿಸಿಯೇ ತೋರಿಸುತ್ತಿತ್ತು.

ತಾನು ಸೈನ್ಯದ ಹತ್ತಿರ ಹೋಗಬಾರದೆಂದು, ಅದನ್ನು ಬಲಕ್ಕೆ ಬಿಟ್ಟು, ಎಡಬದಿಯ ಒಂದು ಓಣಿಗಾಗಿ ಹೋಗಿ ಮೇರಿಯಸ್, ಮತ್ತೊಂದು ರಾಜರಸ್ತೆ ತಲಪಿದ. ಅದರಲ್ಲೇ ಸ್ವಲ್ಪ ಮುಂದುವರಿದಾಗ, ರಸ್ತೆಯ ಬಲಬದಿಯ ಒಂದು ಹೊಟೇಲಿನಲ್ಲಿ ತುಂಬ ಜನ ಸೇರಿದ್ದನ್ನು ನೋಡಿದ. ಮಾರ್ಗದಲ್ಲೇ ನಿಂತು ಹೊಟೇಲ್ ಒಳಗೆ ಇಣುಕಿದ. ಅಲ್ಲಿದ್ದ ಜನರೆಲ್ಲ ತುಂಬ ಕೆಲಸದಲ್ಲಿ ನಿರತರಾಗಿದ್ದುದು ಕಂಡಿತು. ಅವರ ಕೈಯಲ್ಲಿ ಕೋವಿಗಳಿದ್ದುವು. ಅಲ್ಲದೆ, ಆ ಹೊಟೇಲಿನ ಸಮೀಪವೇ ರಸ್ತೆಯಲ್ಲಿ ಒಂದು ತಡೆಗೋಡೆ ಇದ್ದುದನ್ನೂ ಗುರುತಿಸಿದ. ಇವನ್ನೆಲ್ಲ ಗಮನಿಸಿ ಮೇರಿಯಸ್ ತನ್ನ ಸ್ನೇಹಿತರಾದ ಪ್ರಜಾಪಕ್ಷದವರೇ ಅಲ್ಲಿರಬೇಕೆಂದು ನಿಶ್ಚೈಸಿಕೊಂಡ.

ಮೇರಿಯಸ್ ಎಬಿಸಿಯವರ ಜೊತೆ ಸೇರಿ ಕಾದಾಡಬೇಕೆಂದು ನಿರ್ಧರಿಸಿದ್ದನಾದರೂ, ಈ ಹೊಟೇಲಿಗೆ ನುಗ್ಗಿ, ಪ್ರಜಾಪಕ್ಷದವರ ಕಾರ್ಯಗಳಲ್ಲಿ ಪ್ರತ್ಯಕ್ಷ ಭಾಗವಹಿಸುವ ಮೊದಲು ಸ್ವಲ್ಪ ಆಲೋಚಿಸತೊಡಗಿದ. ಪ್ರಥಮವಾಗಿ ಅವನ ಆಲೋಚನೆ ಹರಿದದ್ದು ಅವನ ತಂದೆ ಬ್ಯಾರನ್

ಪೋಂಟ್‌ಮರ್ಸಿಯ ಕಡೆಗಾಗಿತ್ತು. ಇಂದು ತಾನು ಕೈಕೊಳ್ಳಲಿದ್ದ ಕಾರ್ಯ ತನ್ನ ಪೂರ್ವಜರಿಂದಲೇ ತನಗೆ ಬಂದದ್ದೆಂದು ಗ್ರಹಿಸತೊಡಗಿದ. ಫ್ರಾನ್ಸ್ ದೇಶಕ್ಕಾಗಿ ಯೂರೋಪಿನ ನಾಲ್ಕಾರು ದೇಶಗಳಲ್ಲಿ ಯುದ್ಧಮಾಡಿ, ಪ್ರತಿ ಯುದ್ಧದಲ್ಲೂ ರಕ್ತಸುರಿಸಿ, ಶಸ್ತ್ರಾಘಾತದ ಹತ್ತಾರು ಕಲೆಗಳನ್ನು ಮುಖದಲ್ಲೇ ಹೊತ್ತು, ಪ್ರಾಯದಿಂದ ವೃದ್ಧನಾಗುವ ಬದಲು ಶ್ರಮದಿಂದಲೇ ವೃದ್ಧನಾಗಿ ತೋರುತ್ತ, ಅಪಾರ ಕೀರ್ತಿವಂತನಾದರೂ ಅಸಹನೀಯ ಬಡತನ ಅನುಭವಿಸಿ, ಕರ್ತವ್ಯಗಳಲ್ಲಿ ಮಹಾವೀರನಾದರೂ ಹೃದಯದ ಭಾವನೆಗಳಲ್ಲಿ ಹಸುಳೆಗಿಂತ ಸರಳನೂ ನಿಷ್ಕಪಟಿಯೂ ಆಗಿ, ಸರಕಾರದೆದುರು ಅನಾಮಧೇಯನಾದರೂ ಜನರಿಂದ ಬಹುಗಣ್ಯನಾಗಿ, ದುಃಖದ ಭಾರದಿಂದಲೇ ಮೃತನಾಗಿದ್ದ ತಂದೆಯ ರಕ್ತ ತನ್ನಲ್ಲಿರುವಾಗ, ತಾನು ಪ್ರಜಾಪಕ್ಷ ಸೇರಲೇಬೇಕೆಂದು ಅವನಿಗೆ ತೋರಿತು. ಆದರೆ ಇದೇ ವಿಷಯ ಯೋಚಿಸಿದಂತೆ ಅದು ಮತ್ತೊಂದು ವಿಧವಾಗಿಯೂ ತೋರತೊಡಗಿತು. ಕಾಲ ಬಂದಂತೆ ಪ್ರಸಂಗಗಳೂ ಸನ್ನಿವೇಶಗಳೂ ತತ್ತ್ವಗಳೂ ಬದಲಾಗುವುದು ಚರಿತ್ರಸಿದ್ಧವಾಗಿದೆ. ಇಂದಿನ ತಮ್ಮ ಪಕ್ಷದ ಯುದ್ಧರಂಗ ಯೂರೋಪಿನ ಇತರ ರಾಷ್ಟ್ರಗಳ ಕ್ಷೇತ್ರಗಳಲ್ಲ, ಅದು ಕೇವಲ ಪ್ಯಾರಿಸಿನ ಬೀದಿಮಾತ್ರವಾಗಿದೆ. ಶತ್ರುಗಳು ಪರಕೀಯರಲ್ಲ, ತಮ್ಮ ದೇಶಬಾಂಧವರೇ! ಭೂಭಾಗಗಳ ಆಕ್ರಮಣಕ್ಕಾಗಿ ಹಿಂದಿನ ಯುದ್ಧಗಳು ನಡೆದಿದ್ದುವಾದರೆ, ಇಂದಿನ ಯುದ್ಧ ಕೇವಲ ತತ್ತ್ವಪ್ರತಿಪಾದನೆಗೂ ಪ್ರಜಾರಾಜ್ಯದ ಸ್ಥಾಪನೆಗೂ ಆಗಿತ್ತು. ದೇಶದೊಳಗೇ, ದೇಶಬಾಂಧವರೊಳಗೇ ಯುದ್ಧಗೈಯಬೇಕೇ, ಮತ್ತು ಇತರ ವಿಧದಿಂದ ಇದೇ ತತ್ತ್ವಪ್ರತಿಪಾದನೆ ಸಾಧ್ಯವಿದೆಯೇ ಎಂದೂ ಯೋಚಿಸಿ ನೋಡಿದ. ಆಗಲೇ ಅದಕ್ಕೆ ಉತ್ತರವೂ ಹೊಳೆಯಿತು. ತಮ್ಮ ತತ್ತ್ವ ಪ್ರಪಂಚಕ್ಕೆಲ್ಲ ಸಮ್ಮತವಾದ, ಸಮರ್ಪಕವಾದ ಸ್ವಾತಂತ್ರ್ಯ ತತ್ತ್ವ. ಆದ್ದರಿಂದ ಫ್ರಾನ್ಸಿನ ಕ್ಷೋಭೆ ಶಾಂತವಾದರೆ ಪ್ರಪಂಚವೂ ಶಾಂತವಾಗುವುದು. ಫ್ರಾನ್ಸಿಗೆ ಒಮ್ಮೆ ಸ್ವಲ್ಪ ಗಾಯವುಂಟಾದರೂ ಆ ಜೊತೆಯಲ್ಲೇ ಸ್ವಾತಂತ್ರ್ಯವೂ ಆನಂದಿಸಿ ನಗುವುದು; ಅಂಥ ಆನಂದಮಯ ಸ್ವಾತಂತ್ರ್ಯಪ್ರಚೋದಿತ ನಗುವೇ, ಗಾಯಗಳಿಗೆ ಬೇಕಾದ ಅಮೃತತುಲ್ಯ ಔಷಧವೂ ಆಗಿದೆಯೆಂದು ಅವನಿಗೆ ತೋರಿತು. ಈ ವಿಧದ ಮಾನಸಿಕ ತುಯ್ತದಿಂದ ನೊಂದು, ತಾನು ಪ್ರವೇಶಿಸಲಿದ್ದ ಯುದ್ಧರಂಗವನ್ನು ಒಮ್ಮೆ ನೋಡಿದ. ಆಗ ಅವನ ಎದುರೇ ಮಹಡಿಯ ಕಿಟಕಿಯಲ್ಲಿ ಎದೆ ಹೊರಹಾಕಿ, ಬಾಯಿಬಿಟ್ಟು ಕೊಂಡು, ಶಿಲಾಪ್ರತಿಮೆಯಂತೆ, ಕೆಳಗಿನ ಜನ, ಸ್ಥಳ, ಸಂದರ್ಭಗಳನ್ನು ಭಯಗ್ರಸ್ತನಾಗಿ ನೋಡುತ್ತ ಒಬ್ಬ ಮುದುಕನಿದ್ದ. ಆ ಮುದುಕ ಜೀವದಿಂದಿರುವನೇ ಅಥವಾ ಮೃತಿಹೊಂದಿ ಕೆಳಗಿರುವವರೆಲ್ಲ ತನ್ನಂತೆಯೇ ಆಗುವರೆಂದು ನಿರೀಕ್ಷಿಸುತ್ತಿರುವನೇ ಎಂಬಂತೆ ತೋರುತ್ತಿದ್ದ. ಅವನನ್ನು ನೋಡುತ್ತಿದ್ದ ಹಾಗೆಯೇ ಅವನ ಬಾಯಿಯಿಂದ ಹೊರಟಿದ್ದ ರಕ್ತ ಧಾರೆಯಾಗಿ ಕಿಟಕಿ ಮತ್ತು ಅದರ ಹೊರಗಡೆಯ ಗೋಡೆಗಾಗಿ ಕೆಳಗಿಳಿದು ಬಂದದ್ದನ್ನು ಮೇರಿಯಸ್ ಕಂಡ.

ಹನ್ನೊಂದನೆಯ ಸಂಪುಟ

೧. ಮತ್ತೆ ಹಾರಿತು ಬಾವುಟ

ಸಮೀಪದ ಇಗರ್ಜಿಯಲ್ಲಿ ರಾತ್ರಿಯ ೧೦ ಗಂಟೆ ಬಾರಿಸಿದ ಸದ್ದು ಕೇಳಿತು. ಸರಕಾರದ ಕಡೆಯವರು ಬರುವುದನ್ನು ಎದುರುನೋಡುತ್ತ ಎಬಿಸಿ ಕ್ಲಬ್ಬಿನವರು ಕುಳಿತಿದ್ದರು. ಆಗಲೇ ಗಾವ್ರೋಚ್ ಹಾಡುತ್ತ ಬರುತ್ತಿದ್ದುದು ಕೇಳಿಸಿತು. ಆ ಪದ ಹೇಳಿದ ಮರುಕ್ಷಣದಲ್ಲಿ ಎಂಬಂತೆ

ಗಾವ್ರೋಚ್ ತಡೆಗೋಡೆ ಏರಿ ಒಳಗೆ ಬಂದ. "ಇಲ್ಲೇ ಬಂದರು ಸೈನಿಕರು, ಕೋವಿ ತೆಗೆದು ಕೊಳ್ಳಿ," ಎಂದನ್ನುತ್ತ ಅವನು ತನ್ನ ಕೋವಿ ಹಿಡಿದುಕೊಂಡು ಯುದ್ಧಕ್ಕೆ ಸಿದ್ಧನಾದ. ಪ್ರಜಾಪಕ್ಷದವರ ಧ್ವಜ ಇವರ ತಡೆಗೋಡೆಯ ಮೇಲೆ ಒಂದು ನೀಳ ಗಳೆಯ ತುದಿಯಲ್ಲಿ ಹಾರಾಡುತ್ತಿತ್ತು. ಗೋಡೆಯ ಎರಡು ತುದಿಗಳಲ್ಲಿಯ ಲಾಂದ್ರಗಳು ಮಸಕು ಬೆಳಕು ಸೂಸುತ್ತ, ರಾತ್ರಿಯ ಭಯಂಕರ ಸ್ಥಿತಿಯನ್ನು ಮತ್ತಷ್ಟು ಹೆಚ್ಚಿಸಿ ತೋರಿಸುತ್ತಿದ್ದುವು. ಕ್ರಾಂತಿಕಾರರೆಲ್ಲರೂ ಎಂಜೊಲ್ರಾಸನ ಮುಖಂಡತ್ವದಲ್ಲಿ ತಂತಮ್ಮ ಸ್ಥಾನದಲ್ಲಿ ಕೋವಿ ಹಿಡಿದು ನಿಂತಿದ್ದರು.

ಸ್ವಲ್ಪ ಹೊತ್ತಿನಲ್ಲೇ ನೂರಾರು ಜನ ಕ್ರಮಬದ್ಧವಾಗಿ ಹೆಜ್ಜೆಯಿಡುತ್ತ ಬರುತ್ತಿರುವ ಸದ್ದು ಸ್ವಲ್ಪ ದೂರದಿಂದ ಕೇಳಿಸತೊಡಗಿತು. ಅದು ಕ್ರಮೇಣ ಸ್ಪಷ್ಟವಾಗುತ್ತ ಬಂದು, ತಡೆಗೋಡೆಯಿಂದ ಸ್ವಲ್ಪ ದೂರದಲ್ಲಿ ನಿಶ್ಶಬ್ದವಾಯಿತು. ತಡೆಗಟ್ಟಿನ ಈ ಕಡೆಯವರಿಗೆ ಸದ್ದು ಕೇಳಿಸದಿದ್ದು, ಸೈನಿಕರ ಸನೀನುಗಳು ಮಾತ್ರ ಥಳಥಳಿಸುತ್ತಿದ್ದುದು ಕಾಣುತ್ತಿತ್ತು. ಸೈನಿಕರು ಅಲುಗಾಡದೆ ನಿಂತಿದ್ದುದರಿಂದ, ಕಾಲಸಪ್ಪುಳ ಕೇಳಿಸದಿದ್ದರೂ ಸಾಮುದಾಯಿಕ ಘೋಷದಂತೆ ಅವರು ಉಸಿರಾಡುವ ಸದ್ದು ಕೇಳಿಬರುತ್ತಿತ್ತು. ಆ ಸೈನಿಕರ ಮುಖಂಡನೊಬ್ಬ ಸ್ವಲ್ಪ ಮುಂದೆ ನಿಂತು, "ಯಾರಲ್ಲಿ?" ಎಂದು ದೊಡ್ಡ ಸ್ವರದಲ್ಲಿ ಕಠೋರವಾಗಿ ಕೇಳಿದ.

"ಫ್ರೆಂಚ್ ಜನರ ರಾಜಕೀಯ ಕ್ರಾಂತಿ," ಎಂದು ಎಂಜೊಲ್ರಾಸ್ ಘಂಟಾಘೋಷವಾಗಿ ಸಾರಿದ.

"ಗುಂಡು ಹಾರಿಸಿ," ಎಂದು ಮೊದಲಿನವ ತನ್ನ ಸೈನಿಕರಿಗೆ ಆಜ್ಞೆಯಿತ್ತ.

ಆ ಕೂಡಲೇ ಸೈನಿಕರೆಲ್ಲರೂ ಒಂದೇ ಸರ್ತಿಗೆ ತಡೆಗೋಡೆಗೆ ಗುಂಡು ಹೊಡೆದರು. ಅಷ್ಟೊಂದು ಜನ ಏಕಕಾಲದಲ್ಲಿ ಗುಂಡುಹೊಡೆದ ಸದ್ದು ಸಿಡಿಲಿನಂತೆ ಬಡಿಯಿತು ಕಿವಿಗಳಿಗೆ.

ಎಂಜೊಲ್ರಾಸನ ಅಪ್ಪಣೆ ಪ್ರಕಾರ ಕ್ರಾಂತಿಪಕ್ಷವೂ ಒಮ್ಮೆ ತಮ್ಮ ಕಡೆಯ ಗುಂಡನ್ನು ಹೊಡೆಯಿತು. ಆದರೆ, ಅನಾವಶ್ಯಕವಾಗಿ ಕೋವಿಮದ್ದನ್ನು ಖರ್ಚು ಮಾಡಬಾರದೆಂದು, ಅಷ್ಟು ಮಾತ್ರ ಮಾಡಿ, ಗುಂಡೆಸೆಯುವುದನ್ನು ನಿಲ್ಲಿಸಿದರು. ಆದರೆ, ಸೈನಿಕರ ಗುಂಡಿನಿಂದ ಮುರಿದು ಬಿದ್ದಿದ್ದ ಬಾವುಟವನ್ನು ಎತ್ತಿ ನಿಲ್ಲಿಸಬೇಕೆಂದು ಎಂಜೊಲ್ರಾಸ್ ಹೇಳುತ್ತ, ಈ ಕೆಲಸಕ್ಕೆ ಮುಂದಾಗುವವರಿದ್ದರೆ ಎದುರು ಬರಬೇಕೆಂದು ಕರೆದುಹೇಳಿದ. ಈ ವಿಷಯವನ್ನು ಮೂರಾವೃತ್ತಿ ಘೋಷಿಸಿದರೂ ಯಾರೂ ಎದುರುಬರಲಿಲ್ಲ. ಎಲ್ಲರಿಗೂ ಶತ್ರುಗಳ ಗುಂಡಿನ ಭಯವಿದ್ದಂತೆ ತೋರಿತು.

ಈ ಎಲ್ಲ ಗಲಭೆ ನಡೆಯುತ್ತಿದ್ದಾಗ ಫಾದರ್ ಮೇಬಫ್ ಒಂದು ಬದಿಯಲ್ಲಿ ತಲೆ ಕೆಳ ಹಾಕಿ ಕುಳಿತಿದ್ದರು. ಈಗ ಎಂಜೊಲ್ರಾಸನ ಕರೆ ಅವರನ್ನು ಎಬ್ಬಿಸಿತು, ಎಚ್ಚರಿಸಿತು. ಅವರು ದಿಢೀರನೆ ಎದ್ದುನಿಂತು ಧ್ವಜಸ್ತಂಭವನ್ನು ಕೈಯಲ್ಲಿ ಹಿಡಿದುಕೊಂಡು ತಡೆಗೋಡೆಯನ್ನು ಹತ್ತತೊಡಗಿದರು. ಗಳೆಯ ತುದಿ ಮೇಲಕ್ಕೆ ಎದ್ದು ತೋರುತ್ತ, ತೋರುತ್ತ, ಕೊನೆಗೆ ಫಾದರ್ ಮೇಬಫರೂ ತಡೆಗೋಡೆಯ ಮೇಲೆ ಧ್ವಜವನ್ನು ಹಿಡಿದುಕೊಂಡು ನಿಂತರು. ಅನಂತರ, ಆ ಗೋಡೆಯ ಮೇಲಿನಿಂದ, "ಕ್ರಾಂತಿಗೆ ಜಯವಾಗಲಿ, ಪ್ರಜಾರಾಜ್ಯ ಸ್ಥಿರವಾಗಲಿ, ಜನರ ಭ್ರಾತೃಭಾವ ವರ್ಧಿಸಲಿ!" ಎಂದು ಘೋಷಿಸಿದರು.

ಇದನ್ನು ಸೈನಿಕರು ನೋಡುತ್ತಿದ್ದರು. ಸೈನ್ಯದ ದಳಪತಿ ಬಾವುಟವನ್ನು ಹಿಡಿದಿದ್ದವನಿಗೆ ಗುಂಡು ಹೊಡೆಯುವಂತೆ ಆಜ್ಞೆಯಿತ್ತ. ಸೈನಿಕರು ಗುಂಡು ಹೊಡೆದರು. ಒಂದೇ ಗುಂಡು ಬಿದ್ದಂತೆ ತೋರುವ ಕ್ರಮದಿಂದ ಫಾದರ್ ಮೇಬಫರಿಗೆ ಹತ್ತಾರು ಗುಂಡುಗಳು ಬಿದ್ದುವು. ಅವರು ಧ್ವಜ

ಸಮೇತ ತಮ್ಮ ಕಡೆಯವರಿಗೆ ದೀರ್ಘದಂಡ ನಮಸ್ಕಾರ ಮಾಡಿದಂತೆ ತಡೆಗೋಡೆಯ ಒಳಬದಿಗೆ ಸತ್ತುಬಿದ್ದರು. ಅವರನ್ನೆತ್ತಿಕೊಂಡು ಹೋಗಿ, ಪಕ್ಕದಲ್ಲಿ ಮಲಗಿಸಿದರು. ಎಂಜೊಲ್ರಾಸ್ ಫಾದರ್ ಮೇಬಫರ ರಕ್ತಸಿಕ್ತ ನಿಲುವಂಗಿಯನ್ನು ಬಿಚ್ಚಿತೆಗೆದು, ತಮ್ಮ ಕಡೆಯವರಿಗೆ ಎತ್ತಿ ತೋರಿಸಿ, "ಇನ್ನು ಮುಂದಿನ ನಮ್ಮ ಧ್ವಜವೇ ಇದು," ಎಂದ.

ಕ್ರಾಂತಿಕಾರರು ಈ ತೆರನಾಗಿ ಆಸಕ್ತರಾಗಿದ್ದಾಗಲೇ ಸೈನಿಕರು ತಡೆಗೋಡೆಯ ಹತ್ತಿರಕ್ಕೆ ಬಂದು ತಲಪಿದರು. ಅವರಲ್ಲಿ ಕೆಲವರು ತಡೆಗೋಡೆಯನ್ನೂ ಏರಿದ್ದರು. ಈ ಪರಿಸ್ಥಿತಿಗಳನ್ನೆಲ್ಲ ಸೂಕ್ಷ್ಮವಾಗಿ ನೋಡುತ್ತಿದ್ದ ಗಾವ್ರೋಚ್ ತನ್ನ ಕಡೆಯವರನ್ನು ಕರೆದು ಈ ವಿಷಯ ತಿಳಿಸಿದ. ಎಲ್ಲರೂ ಧಾವಿಸಿಬಂದರು. ಸೈನಿಕರಿಗೂ ಕ್ರಾಂತಿಕಾರರಿಗೂ ಹೊಯ್‌ಕೈ ಆಗತೊಡಗಿತು. ಒಂದು ಗುಂಡಿನಿಂದ ಬೊಹ್ರೆಲ್ ಸತ್ತ. ಗಾವ್ರೋಚ್ ಆ ಸೈನಿಕನಿಗೆ ತನ್ನ ಕೋವಿಯಿಂದ ಗುರಿಯಿಟ್ಟು ಹೊಡೆಯಲು ಪ್ರಯತ್ನಿಸಿದ. ಆದರೆ, ಜೇವರ್ಟನ ಏರ್ಪಾಡಿನ ಕಾರಣವಾಗಿ ಅದರಲ್ಲಿ ತೋಟೆ ಇದ್ದಿರದೆ ಗಾವ್ರೋಚ್ ಸೋತು ಗಾಬರಿಗೊಂಡ. ಇಂಥ ಕಠಿಣ ಪರಿಸ್ಥಿತಿಯಲ್ಲಿದ್ದಾಗಲೇ ಗಾವ್ರೋಚನನ್ನು ತಿವಿಯಲು ಬಂದಿದ್ದವನ ಎದೆಗೆ ಗುಂಡುಬಿತ್ತು. ಆಗಲೇ ಆ ಸೈನಿಕ ಸತ್ತ. ಇದೇ ಸಮಯದಲ್ಲಿ ಕೋರ್‌ಫರೇಕನ ಕಡೆಗೆ ಧಾವಿಸಿ ಬರುತ್ತಿದ್ದ ಇನ್ನೊಬ್ಬ ಸೈನಿಕನಿಗೂ ಗುಂಡುಬಿತ್ತು. ಹೀಗೆ ಎರಡು ಜನ ಸೈನಿಕರು ಮೃತರಾದುದನ್ನು ಕಂಡು ಸೈನಿಕರು ಸ್ವಲ್ಪ ಹಿಂದೆ ಸರಿದರು. ಒಳಗಿನ ಬಲ ಎಷ್ಟಿರಬಹುದೆಂಬ ಅಂದಾಜು ಅವರಿಗೆ ಸಿಕ್ಕಲಿಲ್ಲ.

ಗಾವ್ರೋಚನನ್ನೂ ಕೋರ್‌ಫರೇಕನನ್ನೂ ರಕ್ಷಿಸಿದ ಗುಂಡಿನೇಟುಗಳನ್ನು ಹೊಡೆದದ್ದು ಮೇರಿಯಸ್.

೨. ಸಿಡಿಮದ್ದಿನ ಪೀಪಾಯಿ

ಮನೋರಾಜ್ಯದಲ್ಲಿದ್ದ ಮೇರಿಯಸನಿಗೆ ಬೊಹ್ರೆಲ್ ಸತ್ತದ್ದು ತಿಳಿಯಿತು. ಆಗಲೇ ಗಾವ್ರೋಚನೂ ಕೋರ್‌ಫರೇಕನೂ ಅಪಾಯಸ್ಥಿತಿಯಲ್ಲಿದ್ದುದನ್ನೂ ಕಂಡ. ಇವೆಲ್ಲ ಅವನನ್ನು ಹಠಾತ್ತನೆ ವಾಸ್ತವಿಕ ರಾಜ್ಯಕ್ಕೆ ತಂದುವು. ಆದ್ದರಿಂದಲೇ ಅವನು ಜೇವರ್ಟನಿಂದ ಪಡೆದಿದ್ದ ಪಿಸ್ತೂಲುಗಳನ್ನು ಉಪಯೋಗಿಸಿದ್ದ. ಹೀಗೆ ರಂಗಸ್ಥಳಕ್ಕಿಳಿದನಂತರ ಮೇರಿಯಸ್ ಮನಃಪೂರ್ತಿಯಾಗಿ ಅದರಲ್ಲೇ ಮಗ್ನನಾದ. ಅವನಿಗೆ ಈಗ ಬೇಕಾಗಿದ್ದುದು ಕೋವಿ. ಅದಕ್ಕಾಗಿ ಅವನು ಒಳಗೆ ನುಗ್ಗುವುದರಲ್ಲಿದ್ದ. ಈ ಸ್ಥಿತಿಯಲ್ಲಿದ್ದಾಗಲೇ ಸೈನಿಕನೊಬ್ಬ ಮೇರಿಯಸನಿಗೆ ತನ್ನ ಕೋವಿಯನ್ನು ಗುರಿಯಿಟ್ಟುದನ್ನೂ ಕೋವಿಹೊಟ್ಟುವುದರೊಳಗೆ ಯಾರೋ ಒಬ್ಬರು ನಳಿಗೆಯ ತುದಿಯನ್ನು ಅಂಗೈಯಿಂದ ಮುಚ್ಚಿ ಮುಂದೆ ನೂಕಿದ್ದುದನ್ನೂ ಕಂಡ. ಇಷ್ಟೆಲ್ಲ ಅರೆಕ್ಷಣದಲ್ಲಿ ನಡೆದು ಹೋಗಿತ್ತು. ಆ ಗುಂಡು ಕೋವಿನಳಿಗೆಗಾಗಿ ಹಾರಿ, ಹಿಡಿದಿದ್ದವನನ್ನು ಗಾಯಗೊಳಿಸಿದ್ದೂ ಅವನಿಗೆ ತಿಳಿಯಿತು. ಆ ಕಡೆ ಅವನು ಹೋಗಬೇಕೇ ಬೇಡವೇ ಎನ್ನುವುದರೊಳಗೆ ತನ್ನ ಕಡೆಯವರು ಅಲ್ಲಿಗೆ ಸಹಾಯಕ್ಕಾಗಿ ಹೋದುದನ್ನು ಕಂಡು, ಮೇರಿಯಸ್ ತನ್ನ ಮುಂದಿನ ಕೆಲಸಕ್ಕಾಗಿ ಹೊಟೇಲ್ ಒಳಗೆ ನುಗ್ಗಿದ.

ಆದರೆ, ಅತ್ತ ಸೈನಿಕರು ಜಾಗೃತರಾದರು. ಮುಂದುವರಿದಲ್ಲಿಂದ ತಾವು ಹಿಂದೆ ಸರಿಯಬಾರದೆಂದು ಅವರು ತಡೆಗೋಡೆಯ ಕಡೆಗೆ ಒತ್ತಿ ಬರತೊಡಗಿದರು. ಈ ಸಮಯದಲ್ಲಿ ಪ್ರಜಾಪಕ್ಷದವರು ಒಂದೇ ಸವನೆ ಸೈನ್ಯದ ಕಡೆಗೆ ಗುಂಡುಹಾರಿಸತೊಡಗಿದರು. ಇದರ ಪರಿಣಾಮವಾಗಿ ಉಭಯಪಕ್ಷಗಳಲ್ಲೂ ಕೆಲವರು ಸತ್ತರು. ಆ ವಠಾರವೆಲ್ಲ ಹೊಗೆತುಂಬಿಕೊಂಡಿತು. ಹೊಗೆಯ

ಮಬ್ಬು ಒಬ್ಬರನ್ನೊಬ್ಬರು ಕಾಣದಷ್ಟು ತುಂಬಿದ್ದುದರಿಂದ, ಉಭಯತ್ರರಿಗೂ ಸ್ವಲ್ಪ ಸಮಯದ ಅವಕಾಶ ಸಿಕ್ಕಿತು. ಆಗಲೇ ಅವರು ತಮ್ಮತಮ್ಮ ಕೋವಿಗಳಿಗೆ ಮದ್ದು ತುಂಬಲು ತೊಡಗಿದರು.

ಈ ಸಮಯದಲ್ಲಿ ಮೇರಿಯಸ್ ತುಂಬ ಕೆಲಸಮಾಡಿದ. ಅವನು ಸಿಡಿಮದ್ದಿನ ಒಂದು ಪೀಪಾಯಿಯನ್ನು ತಂದು ತಡೆಗೋಡೆಯ ಬುಡದಲ್ಲಿ ಇಟ್ಟು, ಸ್ಫೋಟಶಕ್ತಿ ಹೆಚ್ಚಿಸುವುದಕ್ಕಾಗಿ ಅದರ ಮೇಲೂ ಸುತ್ತಲೂ ಇಟ್ಟಿಗೆ, ಕಲ್ಲು ಮೊದಲಾದ ವಸ್ತುಗಳನ್ನು ರಾಶಿಹಾಕಿದ. ಅನಂತರ ಕೈಯಲ್ಲೊಂದು ದೊಂದಿ ಎತ್ತಿ ಹಿಡಿದುಕೊಂಡು, ಸೈನಿಕರು ಸಮೀಪಬರುವಾಗಲೇ, "ಇಲ್ಲಿಂದ ಕೂಡಲೇ ತೊಲಗಿರಿ. ಇಲ್ಲದಿದ್ದರೆ ಈ ಸಿಡಿಮದ್ದಿನ ಪೀಪಾಯಿಯಿಂದ ಈ ತಡೆಗೋಡೆಯ ಸಮೇತವಾಗಿ ನಿಮ್ಮೆಲ್ಲರನ್ನೂ ಪುಡಿಮಾಡಿಬಿಡುವೆನು. ನಾನು ಇದರಲ್ಲಿ ಸತ್ತರೂ ನಿಮ್ಮನ್ನು ಕೊಲ್ಲುತ್ತ ಸಾಯುವೆನು," ಎಂದು ಸೈನಿಕರನ್ನು ನೋಡಿ, ಗರ್ಜಿಸಿ ನುಡಿದ.

ತಮಗೆ ಒದಗಬಹುದಾದ ಅಪಾಯ ಗ್ರಹಿಸಿ ಸೈನಿಕರು ಹಿಮ್ಮೆಟ್ಟಿದರು. ಈ ಸಂದರ್ಭದಲ್ಲಿ ಮೇರಿಯಸ್ ಹಿಂತಿರುಗಿ ನೋಡುತ್ತ ತಮ್ಮ ಕಡೆಯವರನ್ನೆಲ್ಲ ಸ್ಪಷ್ಟವಾಗಿ ಕಂಡ. ಇಂಥ ಆಪತ್ಕಾಲದಲ್ಲಿ ಬಂದು ತಮ್ಮನ್ನುಳಿಸಿದ ಕಾರಣವಾಗಿ ಮೇರಿಯಸನೇ ತಮ್ಮ ಆ ಮುಂದಿನ ಮುಖಂಡನಾಗಬೇಕೆಂದು ಎಂಜೊಲ್ರಾಸ್, ಕೋರ್‌ಫರೇಕ್ ಮೊದಲಾದವರು ಅವನನ್ನು ಕೇಳಿ ಕೊಂಡರು. ಮೇರಿಯಸ್ ಮುಖಂಡತ್ವವನ್ನೊಪ್ಪಿಕೊಂಡು ತಮ್ಮ ಕಡೆ ಸತ್ತವರ ಗಾಯ ಗೊಂಡವರ ಸರಿಯಾಗಿ ಉಳಿದಿರುವವರ ಸಂಖ್ಯೆ ಎಷ್ಟೆಂದು ಎಣಿಸಲು ತೊಡಗಿದ. ಕೆಲವರು ಗಾಯಗೊಂಡವರಿಗೆ ಚಿಕಿತ್ಸೆ ಮಾಡತೊಡಗಿದರು. ಈ ಲೆಕ್ಕ ಮಾಡುವಾಗಲೇ ಜೀನ್‌ಪ್ರೊವೆಯರ್ ಕಾಣೆಯಾಗಿದ್ದುದನ್ನು ತಿಳಿದರು. ಜೀನ್‌ಪ್ರೊವೆಯರ್ ಶತ್ರುಗಳಿಂದ ಸೆರೆಹಿಡಿಯಲ್ಪಟ್ಟಿರಬಹು ದೆಂದು ಎಲ್ಲರೂ ಊಹಿಸಿ ದುಃಖಿಸಿದರು. ಆಗ ಕೋರ್‌ಫರೇಕ್ ಮುಂದೆ ಬಂದು ಜೇವರ್ಟನನ್ನು ಸರಕಾರದ ಸೈನ್ಯಕೊಪ್ಪಿಸಿ, ಜೀನ್‌ಪ್ರೊವೆಯರನನ್ನು ತಾವೇಕೆ ವಾಪಾಸು ಪಡೆಯಬಾರದು, ಈ ಬಗ್ಗೆ ಬಿಳಿ ಪತಾಕೆ ಹಿಡಿದು ಸಂಧಾನವನ್ನೇಕೆ ಮಾಡಬಾರದು ಎಂದು ಕೇಳಿದ.

ಈ ಮಾತು ನಡೆಯುತ್ತಿದ್ದಾಗಲೇ ಜೀನ್‌ಪ್ರೊವೆಯರ್ ಏರು ಸ್ವರದಿಂದ, "ಫ್ರಾನ್ಸ್ ಶಾಶ್ವತ ವಾಗಿ ಬಾಳಲಿ!" ಎಂದು ಘೋಷಿಸಿದ್ದೂ ಬಂದೂಕು ಸ್ಫೋಟವೂ ಕೇಳಿಸಿದುವು. ಜೀನ್ ಪ್ರೊವೆಯರ್ ಸತ್ತನೆಂದು ಪ್ರಜಾಪಕ್ಷದವರು ಖಂಡಿತಮಾಡಿಕೊಂಡರು. ಎಂಜೊಲ್ರಾಸನಿಗೆ ಬಲು ದುಃಖವಾದದ್ದೂ ಅಲ್ಲದೆ ಕೋಪವೂ ಬಂತು. ಅವನು, ಅಲ್ಲೇ ಬಂಧಿತನಾಗಿದ್ದ ಜೇವರ್ಟ ನನ್ನು ನೋಡಿ, "ಜೀನ್‌ಪ್ರೊವೆಯರನನ್ನು ನಿನ್ನ ಕಡೆಯವರು ಕೊಂದುದರಲ್ಲಿ ನಿನ್ನನ್ನೂ ಅವರು ಕೊಂದಿರುವರು, ತಿಳಿದಿರಲಿ," ಎಂದು ಗರ್ಜಿಸಿದ.

೩. ಅನುರಾಗದ ಎರಡು ಮುಖಗಳು: ಬದುಕು, ಸಾವು

ಯುದ್ಧ ತಾತ್ಕಾಲಿಕವಾಗಿ ಮಾತ್ರ ನಿಂತಿದ್ದುದೆಂದು ಕ್ರಾಂತಿಕಾರರಿಗೆ ಗೊತ್ತಿತ್ತು. ಈ ವಿಧದ ಸ್ತಬ್ಧತೆ ಬೆಳಗಾಗುವ ತನಕ ಮುಂದುವರಿಯಬಹುದೆಂದು ಊಹಿಸಿದ್ದರು. ಹಾಗಾಗಿ ಸಮಯ ಸಿಕ್ಕಿದಾಗ ತಮ್ಮ ಪರಿಸ್ಥಿತಿಯನ್ನು ಪರೀಕ್ಷಿಸಿ ನೋಡಬೇಕೆಂದು ಇವರ ಈಗಿನ ಮುಖಂಡನಾದ ಮೇರಿಯಸ್ ತಡೆಗೋಡೆಯನ್ನು ಪರೀಕ್ಷಿಸಿ ನೋಡಿದ. ಹಾಗೆ ಅಲ್ಲೆಲ್ಲ ನೋಡಿ ಹಿಂತಿರುಗು ತ್ತಿದ್ದಾಗ ಯಾರೋ ಒಬ್ಬರು ಕರೆಯುವುದನ್ನು ಕೇಳಿದ. ಅದು ಯಾರಿರಬಹುದೆಂದು ಹಿಂತಿರುಗಿ ನೋಡುವಷ್ಟರಲ್ಲೇ ಆ ಸ್ವರ ಪುನಃ "ಮಾನ್ಸ್ಯರ್ ಮೇರಿಯಸರೇ!" ಎಂದು ಕರೆಯಿತು.

ಮೇರಿಯಸ್ ಸ್ವರಬಂದ ಕಡೆಗೆ ಹೋಗಿ ನೋಡುವಾಗ ಅಲ್ಲಿ ಗಂಡುಸಿನ ಇಜಾರ ಧರಿಸಿ, ರವಕೆ ತೊಟ್ಟಿದ್ದ ಹೆಂಗುಸೊಬ್ಬಳು ನೆಲದಮೇಲೆ ಬಿದ್ದಿದ್ದುದನ್ನು ಕಂಡ. ಅವನು ಆಶ್ಚರ್ಯದಿಂದ, "ತಾಯಿ! ನೀನು ಯಾರು? ಇಲ್ಲೇಕೆ ಮಲಗಿರುವೆ?" ಎಂದು ಕೇಳಿದ.

"ನಾನು ಸಾಯುತ್ತಿರುವೆನು. ನನ್ನ ಗುರುತು ಸಿಕ್ಕಲಿಲ್ಲವೇ?"

"ಇಲ್ಲವಲ್ಲ!"

"ನಾನು ಎಪೊನಿನ್, ಗಾಯಗೊಂಡಿದ್ದೇನೆ," ಅಂದಳು ಗಂಡುಸು ದುಸ್ತಿನ ಎಪೊನಿನ್.

ಆ ಮಾತನ್ನು ಕೇಳಿ ಮೇರಿಯಸ್ ಚಕಿತನಾದ. ಆಗ ಆ ದಿನ, ಸ್ವಲ್ಪ ಸಮಯದ ಹಿಂದೆ, ತನಗೆ ಗುಂಡು ಬೀಳಬಹುದಾಗಿದ್ದಾಗ, ಯಾರೋ ಮುಂದೆ ಹಾರಿ ನಳಿಗೆಯನ್ನು ನೂಕಿದ ಚಿತ್ರ ಮೇರಿಯಸನಿಗೆ ಜ್ಞಾಪಕವಾಯಿತು. ಮೇರಿಯಸ್ ಗಾಬರಿ, ಕನಿಕರ, ದುಃಖಗಳಿಂದ, "ತಿಳಿಯಿತು, ತಿಳಿಯಿತು, ನೀನು ಎಪೊನಿನ್. ನಿನಗೆ ಆಗಲೇ ಜಖಂ ಆಗಿರಬೇಕು," ಎಂದನ್ನುತ್ತ ಅವಳನ್ನು ಎತ್ತಿ ಸಾಗಿಸಲು ಪ್ರಯತ್ನಿಸಿದ. ಆಗ ಅವಳೆಂದಳು, "ನನ್ನನ್ನು ಎತ್ತಬೇಡಿ. ಚಿಲ್ಲು ನನ್ನ ಅಂಗೈಗಾಗಿ, ಕೊರಳನ್ನು ಭೇದಿಸಿಕೊಂಡು ಹೋಗಿದೆ. ನಾನು ಇನ್ನು ಹೆಚ್ಚುಹೊತ್ತು ಬದುಕಿರಲಾರೆ." ಹೀಗೆ ಹೇಳುತ್ತ ಅಲ್ಲಿಂದ ಬೇರೆ ಕಡೆಗೆ ಹೋಗುವುದು ಅನಗತ್ಯವೆಂದು ಸೂಚಿಸಿ, ಶ್ರಮಪರಿಹಾರಕ್ಕಾಗಿ ಸ್ವಲ್ಪ ಹೊತ್ತು ಮೌನವಾಗಿದ್ದಳು.

ಮೇರಿಯಸ್ ಅಲ್ಲೇ ಕುಳಿತು ಎಪೊನಿನ್ನಳ ತಲೆಯನ್ನು ತನ್ನ ತೊಡೆಯಮೇಲಿಟ್ಟುಕೊಂಡ. ಅವಳು ಪುನಃ ಮಾತಾಡತೊಡಗಿದಳು, "ಮೇರಿಯಸ್, ನಿನ್ನ ಸ್ಪರ್ಶವೇ ನನ್ನ ನೋವನ್ನು ಕಡಿಮೆ ಮಾಡಿದೆ. ನಿನಗೊಬ್ಬ ಸೈನಿಕ ಬಂದೂಕನ್ನು ಗುರಿಯಿಟ್ಟಿದ್ದ. ಜ್ಞಾಪಿಸಿಕೊಂಡು ನೋಡು. ನಾನು ಅದನ್ನು ಕಂಡು ಸಹಿಸಲಾರದೆ ಆ ಗುಂಡಿಗೆ ಅಡ್ಡಬಂದು ಈ ಅವಸ್ಥೆಯಲ್ಲಿದ್ದೇನೆ. ಈ ಅವಸ್ಥೆಗಾಗಿ ನಾನು ದುಃಖಿಸುತ್ತಿಲ್ಲ. ನನ್ನ ಮನಸ್ಸಿನ ಹಂಬಲಗಳನ್ನೂ ಕೆಲವು ಉದ್ದೇಶಗಳನ್ನೂ ನಾನು ಈ ವರೆಗೆ ಮಾಡಿರುವ ಕಾರ್ಯಗಳನ್ನೂ ನಿನಗೆ ತಿಳಿಸಿ ಸಾಯುವೆನು. ನಿನ್ನ ಮುಖ ನೋಡಿ, ನಿನ್ನ ಸ್ಪರ್ಶದಿಂದ, ನನಗೆ ಹೊಸ ಚೈತನ್ಯ ಬಂದಿದೆ! ನೀನು ಆ ಶ್ರೀಮಂತನ ಮಗಳನ್ನು ಪ್ರೀತಿಸುತ್ತಿರುವುದನ್ನೂ ನನ್ನನ್ನು ದೂರವಿಡುತ್ತಿರುವುದನ್ನೂ ಸಹಿಸಲಾರದೆ ನಾನು ಕೊರಗುತ್ತಿದ್ದೆ. ಅವಳು ರೂ'ಪ್ಲಮೆಟಿನಲ್ಲಿರುವ ವಿಷಯ ನಿನಗೆ ತಿಳಿಸಿದ್ದು ನಾನೇ ತಾನೆ? ಆ ಮನೆಯನ್ನು ದರೋಡೆ ಮಾಡಲು ನನ್ನ ತಂದೆ ಮತ್ತು ಅವನ ಕಡೆಯವರು ಬಂದಾಗ ಅವರನ್ನು ಒಳಗೆ ಪ್ರವೇಶಗೊಳ್ಳಲು ಬಿಡದೆ ಓಡಿಸಿದ್ದೂ ನಾನೇ! ನಿನ್ನ ಮೇಲಿನ ಅನುರಾಗದಿಂದ ಹಾಗೆ ವರ್ತಿಸಿ ತಂದೆಗೆ ವಿರೋಧಿಯಾದೆ. ಅಷ್ಟಕ್ಕೆ ಬಿಡಲಿಲ್ಲ. ಆ ತರುಣಿಯ ಜೀವಕ್ಕೆ ಅಪಾಯ ಬರದಂತೆಯೂ ನೀನೂ ಅವಳೂ ಜೊತೆ ಸೇರದಂತೆಯೂ ಮಾಡಲೋಸ್ಕರ ಅವಳ ತಂದೆಗೆ ಗಾಬರಿ ಉಂಟುಮಾಡುವಂಥ ಒಂದು ಪತ್ರ ಎಸೆದು ಗಾಬರಿಗೊಳಿಸಿ ಅವನನ್ನು ರೂ'ಪ್ಲಮೆಟಿನಿಂದ ಹೊರಹೊರಡಿಸಿದೆ. ನಿನ್ನನ್ನು ಕಂಡು ನಾಲ್ಕು ಪ್ರೀತಿಯ ಮಾತುಗಳನ್ನಾಡಬೇಕೆಂದು ನಾನು ರೂ'ಪ್ಲಮೆಟಿನ ಸಮೀಪ ನಿನಗಾಗಿ ಹೊಂಚುಹಾಕುತ್ತಿದ್ದಾಗ, ನಾನೊಬ್ಬ ತಿರುಕುಳಿಯೆಂದು, ನನಗೆ ಸಂಬಳಕೊಟ್ಟು, ನಿನಗೆ ಬಟವಾಡೆ ಮಾಡಬೇಕೆಂದು ಒಂದು ಪತ್ರವನ್ನು ಆ ತರುಣಿ ನನಗೆ ಕೊಟ್ಟಳು. ನಾನು ಆ ಪತ್ರವನ್ನು ನಿನಗೆ ತಲಪಿಸದೇ ನನ್ನಲ್ಲೇ ಇಟ್ಟುಕೊಂಡಿರುವೆನು. ನಿನ್ನನ್ನು ಇಲ್ಲಿಗೆ ಬರಮಾಡಿ, ಇಲ್ಲಿ ನಾವಿಬ್ಬರೂ ಸಾಯಬೇಕೆಂಬ ಇಚ್ಛೆಯಿಂದ, ನಿನ್ನ ಸ್ನೇಹಿತರು ನಿನ್ನನ್ನು ಕರೆಯುತ್ತಿರುವುದಾಗಿ ರೂ'ಪ್ಲಮೆಟಿನಲ್ಲಿ ನಿನಗೆ ತಿಳಿಸಿದೆ," ಎಂದು ಹೇಳಿ ಶ್ರಮದಿಂದ ಸ್ವಲ್ಪ ಮೌನಳಾದಳು. ಆ ಸಮಯದಲ್ಲಿ ಗಾವ್ರೋಚ್ ಆವೇಶಭರದಿಂದ ತಾರಶ್ರುತಿಯಲ್ಲಿ, ಕ್ರಾಂತಿಕಾರಕ ಹಾಡು ಹೇಳುತ್ತಿದ್ದುದು ಕೇಳಿಸಿತು :

ಮಸೆಯಲಿ ಮಸೆಯಲಿ ಕ್ರಾಂತಿಕುಠಾರಂ
ನೆಲಸಮವಾಗಲಿ ವೈರಿ ವಠಾರಂ
ಪರಾವಂಬನೆ ಭ್ರಾಂತಿ, ಚಿರಾಯುವಾಗಲಿ ಕ್ರಾಂತಿ
ಪ್ರಜಾಪ್ರಭುತ್ವಕೆ ಪ್ರಣಾಮ ಪ್ರಣಾಮ!

ಆ ಸ್ವರ ಕೇಳಿ ಎಪೊನಿನ್ ಜಾಗೃತಳಾಗಿ ಪುನಃ ಹೇಳಿದಳು, "ಆ ಪದ ಹಾಡುವ ಹುಡುಗ ನನ್ನ ತಮ್ಮ. ನಾನು ಇಲ್ಲಿರುವೆನೆಂದು ಅವನಿಗೆ ತಿಳಿಸಬೇಡ. ನಾನು ಸತ್ತು ಹೆಚ್ಚು ಸಮಯ ದಾಟುವ ಮೊದಲೇ ಇಂದಿನ ಯುದ್ಧದಲ್ಲಿ ನೀನೂ ಸಾಯುವೆ. ಆದ್ದರಿಂದ, ನನ್ನ ಒಳ ಜೇಬಿನಲ್ಲಿರುವ ತರುಣಿಯ ಪತ್ರವನ್ನು ಕೊಡುವೆನು." ಹಾಗೆ ಹೇಳಿ ಮೇರಿಯಸನ ಕೈಯನ್ನು ತನ್ನ ಹೃದಯದ ಹತ್ತಿರ ಎಳೆದಿಟ್ಟುಕೊಂಡಳು. ಮೇರಿಯಸ್ ಪತ್ರವನ್ನು ತೆಗೆದುಕೊಂಡ. ಎಪೊನಿನ್ ಪುನಃ ಚೇತರಿಸಿಕೊಂಡು, ಅತ್ಯಂತ ಕರುಣಾಜನಕವಾಗಿ, "ನಿನಗೆ ನಾನು ಈ ಕಾಗದ ತಲಪಿಸಿದುದಕ್ಕೆ ನನಗೊಂದು ಪ್ರತಿಫಲ ಕೊಡಬೇಕು. ಗುಬ್ಬಿಯ ಹೊಲದಲ್ಲಿ ನಾನು ನಿನ್ನನ್ನು ಕಂಡಾಗ, ನಿನ್ನ ಕೋಣೆಯಲ್ಲಿ ನಾನು ತಲೆ ಬಾಚಿ ಕನ್ನಡಿ ನೋಡಿ ನಿಂತಾಗ, ನನಗಾಗಿದ್ದ ಆನಂದ ಅಷ್ಟಿಷ್ಟಲ್ಲ. ಈಗ ನಾನು ಯಾಚಿಸುವ ಪ್ರತಿಫಲವನ್ನು ಕೊಟ್ಟೇಕೊಡುವುದಾಗಿ ವಾಗ್ದಾನ ಮಾಡಿದರೆ ಮಾತ್ರ, ನಾನು ಅಪೇಕ್ಷಿಸುವುದೇನೆಂದು ತಿಳಿಸುವೆ," ಎಂದಂದಳು.

ಮೇರಿಯಸ್ ಗದ್ಗದ ಕಂಠದಿಂದ ವಾಗ್ದಾನವಿತ್ತ. ಎಪೊನಿನ್ ಹೇಳಿದಳು, "ನಾನು ಸತ್ತ ನಂತರ ನನ್ನ ಹಣೆಗೆ ನೀನೊಮ್ಮೆ ಮುತ್ತಿಡಬೇಕು. ನಿನ್ನ ಮೇಲಿನ ಪ್ರೀತಿ ನನಗಷ್ಟಿದೆ. ನಾನು ಸತ್ತ ಬಳಿಕವೂ ಆ ಆನಂದವನ್ನು ಅನುಭವಿಸಬಲ್ಲೆ," ಅಂದಳು.

"ಖಂಡಿತವಾಗಿಯೂ ಹಾಗೆ ಮಾಡುವೆನು," ಎಂದು ಮೇರಿಯಸ್ ಭರವಸೆಯಿತ್ತ.

"ಪ್ರೇಮದ ಫಲವಾಗಿ ನನ್ನ ಪಾಲಿಗೆ ಅಷ್ಟಾದರೂ ದೊರಕಲಿ," ಎಂದು ಹೇಳುತ್ತಿದ್ದ ಹಾಗೆಯೇ ಎಪೊನಿನ್ ಮೃತಳಾದಳು.

೪. ಪತ್ರದೂತ ಗಾವ್ರೋಚ್

ಮೇರಿಯಸ್ ತನ್ನ ವಾಗ್ದಾನದ ಪ್ರಕಾರ ಎಪೊನಿನ್ನಳ ಹಣೆಗೆ ಮುತ್ತಿಟ್ಟ. ಆಗಲೇ ಕೋಸೆಟ್ಟೆಯ ಪತ್ರದ ನೆನಪು ಬಂದು ಅದನ್ನು ದೀಪದ ಸಮೀಪ ತೆಗೆದುಕೊಂಡು ಹೋಗಿ ಓದಿದ. ಪತ್ರ ಹೀಗಿತ್ತು :

"ಪರಮಪ್ರಿಯನೇ! ನನ್ನ ತಂದೆ ಈ ಹೊತ್ತೇ ಈ ಮನೆ ಬಿಟ್ಟು ಹೋಗುವನು. ಇಂದು ಸಂಜೆಗೆ ನಾವು ಹೋಮ್ ಆರ್ಮಿನ್ನಿನ ಸಂಖ್ಯೆ ೭ನೇ ಮನೆಯಲ್ಲಿ ಉಳಿದುಕೊಳ್ಳುವೆವು. ಒಂದು ವಾರದ ನಂತರ ಲಂಡನ್ನಿಗೆ ಹೋಗುವೆವು. —ಕೋಸೆಟ್ಟೆ/ಜೂನ್ ೪"

ಕೋಸೆಟ್ಟೆಯ ಪತ್ರ ಓದಿ ಮೇರಿಯಸನಿಗೆ ಅವಳನ್ನು ಕಂಡಷ್ಟೇ ಸಂತೋಷವಾಯಿತು. ಅವಳ ಪ್ರೇಮದ ಸ್ಥಿರತೆಯನ್ನು ಇದು ತೋರಿಸಿಕೊಟ್ಟಿತು. ಕೋಸೆಟ್ಟೆಯನ್ನು ತಾನು ಬದುಕಿರುವಾಗಲೇ ನೋಡಲಾರೆನೆಂಬುದು ಅಂದಿನ ಅಲ್ಲಿಯ ಪ್ರಸಂಗದಿಂದ ಮೇರಿಯಸ್ ತಿಳಿದಿದ್ದ. ಹಾಗಾಗಿ ತಾನು ಸಾಯುವ ಮೊದಲೇ ಅವಳಿಗೆ ಒಂದು ಪತ್ರವನ್ನಾದರೂ ಬರೆದು ಕಳಿಹಿಸಬೇಕೆಂದು ನಿಶ್ಚೈಸಿ, ತನ್ನ ಡೈರಿಯಿಂದ ಹಾಳೆ ಹರಿದು, ಅದರಲ್ಲಿ ಈ ಮುಂದಿನಂತೆ ಬರೆದ, "ನಾನು ನಿನ್ನನ್ನು ಮದುವೆಯಾಗಲು ಅಜ್ಜನ ಅನುಮತಿ ಸಿಕ್ಕಲಿಲ್ಲ. ನಿನ್ನನ್ನು ಪ್ರೀತಿಸಿ, ಸ್ಮರಿಸುತ್ತ ಇಂದು ಇಲ್ಲಿ ಸಾಯುವೆನು. ಈ ಪತ್ರ ನೀನು ಓದುತ್ತಿರುವಾಗಲೇ ನಾನು ನಿನ್ನ ಬಳಿಯಲ್ಲಿ ಅಶರೀರಿಯಾಗಿ

ನಿಂತು ನಿನ್ನನ್ನು ಪ್ರೇಮದಿಂದ ನೋಡುತ್ತಿರುವೆನು.''

ಕಾಗದ ಬರೆದಾದನಂತರ ತನ್ನ ಡೈರಿಯಲ್ಲಿ ಒಂದೆರಡು ಸಂಗತಿಗಳನ್ನು ದಾಖಲಿಸಿ, ''ನನ್ನ ಹೆಸರು ಮೇರಿಯಸ್ ಪೋಂಟ್‌ಮರ್ಸಿ. ನನ್ನಜ್ಜ ಮಾನ್ಸ್ಯರ್ ಗಿಲೆನಾರ್ಮಂಡ್ ಮರೆಯಸ್ಸಿನ ರ್‍ಯೂ'ಫಿಲಿಸ್ ಕಾಲ್‌ವರೆಯ ಸಂಖ್ಯೆ ೬ನೇ ಮನೆಯಲ್ಲಿರುವರು. ನನ್ನ ಶವವನ್ನು ಅಲ್ಲಿಗೆ ಸಾಗಿಸಿ.''

ಇಷ್ಟು ಬರೆದು, ಮೇರಿಯಸ್, ಗಾವ್ರೋಚನನ್ನು ಕರೆದು, ''ನೀನು ನನಗೊಂದು ಉಪಕಾರ ಮಾಡುವಿಯೇನು?'' ಎಂದು ಕೇಳಿದ.

''ಆಗಬಹುದು. ಆಗ ನನ್ನ ಜೀವ ಉಳಿಸಿದ್ದು ನೀವು ತಾನೆ!'' ಅಂದ ಗಾವ್ರೋಚ್.

''ಹಾಗಾದರೆ, ಈ ಕಾಗದ ತೆಗೆದುಕೊಂಡು ಹೋಗಿ ಅದರ ವಿಳಾಸದಾರರಿಗೆ ಕೊಟ್ಟುಬಾ,'' ಅಂದ ಮೇರಿಯಸ್.

''ಇಲ್ಲಿ ಯುದ್ಧದಲ್ಲಿ ನಾನು ತಪ್ಪಿಹೋಗಬಾರದೆಂಬುದಷ್ಟೇ, ನನ್ನ ಹೆದರಿಕೆ, ಸರ್.''

''ಬೆಳಗಾಗುವ ಮೊದಲು ಯುದ್ಧ ಪ್ರಾರಂಭವಾಗದು.''

''ಹಾಗಾದರೆ ರಾತ್ರಿಯೇ ಬಟುವಾಡೆಮಾಡಿ ಬರುತ್ತೇನೆ.''

ಹನ್ನೆರಡನೆಯ ಸಂಪುಟ

೧. ಬ್ಲಾಟಿಂಗ್ ಪೇಪರ್ ಬಗೆದ 'ದ್ರೋಹ'

ಕೋಸೆಟ್ಟೆ ಮತ್ತು ಟೌಸೆಂಟ್ ಸಮೇತ ಜೀನ್‌ವಾಲ್‌ಜೀನ್ ಅಂದೇ ಸಂಜೆ ಹೊಸ ಬಿಡಾರಕ್ಕೆ ಹೋದ. ಅಲ್ಲಿ ಹೊಸ ಬಿಡಾರಕ್ಕೆ ಬೇಕಾದ ಎಲ್ಲ ಸಾಮಾನುಗಳೂ ಬಾಡಿಗೆಗೇ ಒಳಪಟ್ಟು ತಯಾರಿದ್ದುದರಿಂದ, ಅವನು ಅಲ್ಲಿಗೆ ತೆರಳುವಾಗ ವಿಶೇಷ ಸಾಮಾನು ಏನನ್ನೂ ಒಯ್ಯಲಿಲ್ಲ. ಆದರೆ, ಅವನ 'ಅತಿ ಪ್ರೀತಿಯ ವಸ್ತು' ಎಂದು ಕೋಸೆಟ್ಟೆ ಹೆಸರಿಟ್ಟಿದ್ದ ಪೆಟ್ಟಿಗೆಯನ್ನು ಈ ಮನೆಗೆ ತೆಗೆದುಕೊಂಡು ಹೋಗಿದ್ದ. ಮತ್ತು ಅವರಿವರಿಗೆ ಖುಷಿಬಂದಂಥ ಸಾಮಾನುಗಳನ್ನು ಸಾಧ್ಯವಾಗುವಷ್ಟು ಹಿಡಿದುಕೊಂಡು ಬಂದಿದ್ದರು.

ಈ ಸರ್ತಿ ಹೀಗೆ ಹಠಾತ್ತನೆ ಮನೆ ಬಿಟ್ಟುಬಂದ ವಿಷಯದಲ್ಲಿ ಕೋಸೆಟ್ಟೆಗೆ ಸಿಟ್ಟಾಗಿತ್ತಾದರೂ ಅವಳು ತನ್ನ ಸಿಟ್ಟನ್ನು ತೋರಿಸಿಕೊಳ್ಳಲಿಲ್ಲ. ಆದರೆ ಜೀನ್‌ವಾಲ್‌ಜೀನ್ ಜನಸಂಪರ್ಕದಿಂದ ದೂರವಿರುವ ವಿಷಯದಲ್ಲಿ ಯಾವ ಮುನ್ಸೂಚನೆಯನ್ನೂ ಕೋಸೆಟ್ಟೆಗೆ ಕೊಡದೆ ತನ್ನ ಇಚ್ಛೆಯಂತೆ ಮಾತ್ರ ನಡೆಯುತ್ತಿದ್ದುದು ಅವಳಿಗೆ ಗೊತ್ತಿದ್ದುದರಿಂದ, ಅವಳು ಏನೊಂದು ಮಾತಾಡಲೂ ಧೈರ್ಯ ತಳೆಯಲಿಲ್ಲ.

ಕೋಸೆಟ್ಟೆ ಒಂದು ವಿಧದ ಬಲಾತ್ಕಾರದಿಂದಲೇ ಎಂದನ್ನಬಹುದಾದಂತೆ ಹೊಸಮನೆಗೆ ಬಂದಿದ್ದುದರಿಂದ, ಅವಳು ಸಂಜೆಯ ಸಮಯಕ್ಕೆ ತನ್ನ ಕೋಣೆಗೆ ಹೋಗಿ ಮಂಚದಲ್ಲಿ ಮಲಗಿ ಚಿಂತಾಮಗ್ನಳಾಗಿದ್ದಳು. ಟೌಸೆಂಟಳಿಗೂ ಈ ದಿನ ಹೆಚ್ಚಿನ ಯಾವ ಕೆಲಸವೂ ಇಲ್ಲದಿದ್ದುದರಿಂದ, ಅವಳು ಅಡುಗೆಕೋಣೆಯ ಬಾಗಿಲ ಬಳಿಯಲ್ಲಿ ಕುಳಿತುಕೊಂಡು ಏನೇನೋ ಗೊಣಗುಟ್ಟಿಕೊಳ್ಳುತ್ತಿದ್ದಳು.

ಜೀನ್‌ವಾಲ್‌ಜೀನನಿಗೆ ಈ ಹೊಸಮನೆ ಬಲುಭದ್ರವಾಗಿ ತೋರಿತ್ತು. ಕೋಸೆಟ್ಟೆಯೂ ತಾನೂ ಈ ಮನೆಯಲ್ಲಿ ಯಾವ ತೊಂದರೆಯೂ ಇಲ್ಲದೆ ಒಟ್ಟಾಗಿ ಜೀವಿಸುವ ಸುಖವನ್ನು ಗ್ರಹಿಸಿ ಸಂತೋಷಿಸುತ್ತ ಬೈಠಕಖಾನೆಯಲ್ಲಿ ಅತ್ತಿತ್ತ ತಿರುಗಾಡುತ್ತಿದ್ದ. ಟೌಸೆಂಟಳಿಗೆ ಮಾತ್ರ ಮನಸ್ಸಿನಲ್ಲಿ ಏನೋ ಒಂದು ಭ್ರಮೆ ಎದ್ದಿದ್ದಂತೆ ತೋರುತ್ತಿದ್ದಳು. ಜೀನ್‌ವಾಲ್‌ಜೀನ್ ಅತ್ತಿತ್ತ ತಿರು

ಗಾಡುತ್ತ ಅವಳ ಸಮೀಪವಾಗಿ ದಾಟುವಾಗ, ಅವನಿಗೆ ಕೇಳಿಸುವಂತೆ, "ಮಾನ್ಯರರೇ! ಪ್ಯಾರಿಸಿನಲ್ಲಿ ಜನರಿಗೂ ಸರಕಾರಕ್ಕೂ ಹೊಡೆದಾಟವಾಗುತ್ತ ಇದೆಯಂತೆ," ಎಂದು ಹೇಳುತ್ತಿದ್ದಳು. ಈ ಮಾತುಗಳನ್ನು ಜೀನ್‌ವಾಲ್‌ಜೀನ್ ಕೇಳಿದ್ದರೂ ಅಷ್ಟೊಂದು ಲಕ್ಷ್ಯ ಹರಿಸಿರಲಿಲ್ಲ. ಏನೇ ಇದ್ದರೂ ತನ್ನ ಮನೆ ರಾಜರಸ್ತೆಗೆ ಸ್ವಲ್ಪ ದೂರವಿತ್ತಾದ್ದರಿಂದ, ಅಂಥ ಯಾವ ಹೆದರಿಕೆಗೂ ಕಾರಣವಿಲ್ಲವೆಂದು ಅವನು ತೃಪ್ತನಾಗಿಯೇ ತಿರುಗಾಡುತ್ತಿದ್ದ. ಇದೇ ವೇಳೆ ಅಲ್ಲಿ ಒಂದು ಅನಿರೀಕ್ಷಿತ ಘಟನೆ ಸಂಭವಿಸಿತು.

ರೂ'ಪ್ಲಮೆಟಿನಿಂದ ಬರುವಾಗ ಕೋಸೆಟ್ಟಿ ತನ್ನ ಕನ್ನಡಿ, ಹಣಿಗೆ, ಬರವಣಿಗೆ ಸಾಹಿತ್ಯ ಮೊದಲಾದವನ್ನು ತಂದಿದ್ದು, ಅವನ್ನೆಲ್ಲ ಬೈಠಕಖಾನೆಯ ಕಪಾಟಿನಲ್ಲಿಟ್ಟಿದ್ದಳು. ಜೀನ್‌ವಾಲ್‌ಜೀನ್ ಅತ್ತಿತ್ತ ತಿರುಗಾಡುತ್ತ ಕಪಾಟಿನ ಹತ್ತಿರ ಬಂದಾಗ ಒಮ್ಮೆ ಕನ್ನಡಿಯಲ್ಲಿ ಒಂದು ಬರಹ ಕಂಡು ಆಶ್ಚರ್ಯಗೊಂಡ. ಅದು ಕೋಸೆಟ್ಟಿಯದೆಂದು ಗುರುತಿಸಿ, ವಿನೋದಕ್ಕಾಗಿ ಪೂರ್ತಿ ಓದಿ ವಿಸ್ಮಯಗೊಂಡ. ಕನ್ನಡಿಯೊಳಗೆ ಬರಹ ಈ ರೀತಿ ಕಾಣುತ್ತಿತ್ತು:

"ಪರಮಪ್ರಿಯನೇ! ನನ್ನ ತಂದೆ ಈ ಹೊತ್ತೇ ಈ ಮನೆ ಬಿಟ್ಟು ಹೋಗುವನು. ಇಂದು ಸಂಜೆಗೆ ನಾವು ಹೋಮ್ ಆರ್ಮಿನ್ನಿನ ಸಂಖ್ಯೆ ೭ನೇ ಮನೆಯಲ್ಲಿ ಉಳಿದುಕೊಳ್ಳುವೆವು. ಒಂದು ವಾರದ ನಂತರ ಲಂಡನ್ನಿಗೆ ಹೋಗುವೆವು. —ಕೋಸೆಟ್ಟಿ/ಜೂನ್ ೪"

ಈ ಬರಹವನ್ನು ಜೀನ್‌ವಾಲ್‌ಜೀನ್ ಪುನಃ ಪುನಃ ಓದಿ ನೋಡಿದ. ಅವನ ಮುಖ ವಿವರ್ಣವಾಯಿತು. ಸಾಧಾರಣ ಹೆಣದ ಮುಖದಂತೆ ನಿಸ್ತೇಜವಾಯಿತು. ಈ ಬರಹ ಕನ್ನಡಿಯಲ್ಲಿ ಪ್ರತಿಫಲಿತವಾದದ್ದೆಂದು ತಿಳಿದು, ಪ್ರತಿಫಲನದ ಮೂಲ ನೋಡಿದ. ಅದೊಂದು ಬ್ಲಾಟಿಂಗ್ ಪೇಪರ್ ಆಗಿತ್ತು. ಕೋಸೆಟ್ಟಿ ಶಾಯಿಯಲ್ಲಿ ಬರೆದುದನ್ನು ಈ ಪೇಪರಿನಿಂದ ಒತ್ತಿ ಒಣಗಿಸಿದಾಗ ಹೀರಿಕೊಂಡ ಬರಹ ಇದೆಂದು ಅವನಿಗೆ ಸ್ಪಷ್ಟವಾಯಿತು. ಪೇಪರನ್ನು ಕೈಯಲ್ಲಿ ಹಿಡಿದು ನೋಡಿ ಓದಲು ಪ್ರಯತ್ನಿಸಿದ. ಅದನ್ನು ತನಗೆ ಓದಲಾಗದಿದ್ದಾಗ ದುಃಖವಾದರೂ ಶಮನವಾಯಿತೇ ಎಂದು ಗ್ರಹಿಸುವಾಗಲೇ, ಆ ಬರಹದ ಅರ್ಥ ಹೃದಯಕ್ಕೆ ನಾಟಿ ಹೋಗಿದ್ದ ಅರಿವು ಸ್ಪಷ್ಟವಾಗತೊಡಗಿತು. ಆಗ ಅವನ ಕೈಯ್ಯಲ್ಲಿ ಹಿಡಿದಿದ್ದ ಆ ಬ್ಲಾಟಿಂಗ್ ಪೇಪರೇ, ಅವನಿಗೆ ತಿಳಿಯದೆ, ಬಿದ್ದುಹೋಯಿತು.

ಇಲ್ಲಿ ವಿಧಿಯೂ ಮಹಾ ವೈಚಿತ್ರ್ಯವನ್ನೇ ಗೈದಿತ್ತು. ಅಂದರೆ, ಯಾರಿಗಾಗಿ ಈ ಪತ್ರ ಬರೆಯಲಾಗಿತ್ತೋ ಆ ಮೇರಿಯಸನಿಗೆ ಅದು ತಲಪುವ ಮೊದಲೇ, ಯಾರು ಓದಬಾರದಿತ್ತೋ ಅವರ ದೃಷ್ಟಿಗೆ ಅದು ಸ್ಪಷ್ಟವಾಗಿ ಬಿದ್ದಿತ್ತು.

ಜೀನ್‌ವಾಲ್‌ಜೀನ್ ಈ ತನಕ ತನಗಾಗಿಯೂ ಕೋಸೆಟ್ಟಿಗಾಗಿಯೂ ಅನುಭವಿಸದಿದ್ದ ಕಷ್ಟವಿರಲಿಲ್ಲ, ಸಹಿಸದಿದ್ದ ದುಃಖವಿರಲಿಲ್ಲ. ಆದರೆ, ಇಂದಿನ ದುಃಖ ಅಂಥ ಹಿಂದಿನ ಎಲ್ಲವುಗಳಿಗಿಂತಲೂ ಹೆಚ್ಚಿನದಾಗಿ ತೋರಿತು. ತನ್ನ ಜೀವನದ ಸರ್ವಸ್ವವಾಗಿ ಕಾಪಾಡಿ ಸಾಕಿಕೊಂಡು ಬಂದಿದ್ದ ಮುದ್ದು ಮಗಳು ಕೋಸೆಟ್ಟಿ ಅವಳಿಗಾಗಿ ಯಾವ ಕಷ್ಟನಿಷ್ಠುರಗಳನ್ನೂ ಅನುಭವಿಸದಿದ್ದ ಇನ್ನೊಬ್ಬನ ಪ್ರೇಮದ ವಸ್ತುವಾಗುವ ಸಂಭವ ಜೀನ್‌ವಾಲ್‌ಜೀನನಿಗೆ ಅತಿ ವೇದನೆ ಕೊಟ್ಟಿತು. ಹಿಂದೆಂದೂ ಇದಕ್ಕಿಂತ ಕಠಿಣತರ ಬದುಕುಸಾವು ಸಮಸ್ಯೆಗಳಲ್ಲಿ ಮತಿಗೆಡದ, ಧೈರ್ಯವಳಿಯದ, ಜೀನ್‌ವಾಲ್‌ಜೀನ್ ಇಂದು ಎಲ್ಲ ವಿಧದಲ್ಲೂ ಕುಸಿಯತೊಡಗಿದ. ಅವನ ಭವಿಷ್ಯವೆಲ್ಲ ಬರೇ ಅಂಧಕಾರಮಯವಾಗಿ ತೋರಿತು. ತಾನು ಬದುಕಿ ಪ್ರಯೋಜನವಿಲ್ಲವೆಂದು ಗ್ರಹಿಸತೊಡಗಿದ. ಎತ್ತಲಾದರೂ ಓಡಿ ಹೋಗುವುದು ನ್ಯಾಯವೆಂದು ತೋರಿತು. ಅವನಲ್ಲಿ ದಮನವಾಗಿ ಹೋಗಿದ್ದ

ಹಿಂದಿನ ಪಾಶವೀ ಕ್ರೌರ್ಯ ಪುನಃ ಎದ್ದು ಬಂದು ಅವನನ್ನು ಆವರಿಸಿಬಿಡುವುದೋ ಎಂಬ ಭಯವೂ ಅವನಿಗುಂಟಾಯಿತು. ಇದರಿಂದ ಪಾರಾಗಿ ಜೀವವನ್ನೇ ಕಳೆದುಕೊಳ್ಳುವುದು ಉತ್ತಮ ವೆಂದು ಗ್ರಹಿಸುತ್ತಿದ್ದಾಗಲೇ, ಟೌಸೆಂಟ್ ಆ ಮೊದಲೇ ಅವನ ಕಿವಿಗೆ ಬೀಳುವಂತೆ ಮಾಡಿದ್ದ ಮಾತುಗಳು ಅವನ ನೆನಪಿಗೆ ಬಂದುವು. ಅವಳನ್ನು ಕೇಳಿದ, "ಎಲ್ಲೋ ಬಡಿದಾಟವಾಗುತ್ತಿದೆ ಎಂದು ಹೇಳಿದೆಯಲ್ಲ, ಟೌಸೆಂಟ್, ಅದೆಲ್ಲಿ ?"

"ಸೇಂಟ್ ಮೇರಿ ಇಗರ್ಜಿ ವಠಾರದಲ್ಲಿ ಎಂದು ಕೇಳಿದ್ದೇನೆ."

ಈ ವರ್ತಮಾನ ಸಿಕ್ಕಿದ್ದೇ ತಡ, ಜೀನ್‌ವಾಲ್‌ಜೀನ್ ಅಲ್ಲಿಂದೆದ್ದು ಹೊರಟು ಹೋದ. ಆಗ ಅವನ ತಲೆಯಲ್ಲಿ ಹ್ಯಾಟಿರಲಿಲ್ಲ. ರಾತ್ರಿಯಾಗಿತ್ತು. ಆದರೆ, ಸ್ವಲ್ಪ ಸಮಯಕಳೆದು ನೋಡಿದಾಗ ಅವನು ರಾಜರಸ್ತೆಯ ಕರೆಯಲ್ಲಿದ್ದ ಒಂದು ಬೆಂಚಿನಲ್ಲಿ ಕುಳಿತು, ತಲೆ ಕೆಳ ಹಾಕಿಕೊಂಡು, ಚಿಂತಾಮಗ್ನನಾಗಿದ್ದ.

೨. ಪತ್ರ ಪ್ರಮಾದ

ಜೀನ್‌ವಾಲ್‌ಜೀನ್ ಹೀಗೆ ಯೋಚನಾಮಗ್ನನಾಗಿ ಬಹಳ ಹೊತ್ತು ಕುಳಿತಿದ್ದ. ಕುಳಿತಲ್ಲೇ ದುಃಖಾಗ್ನಿಯಲ್ಲಿ ದಹನವಾಗುತ್ತಿದ್ದ. ಜನಸಂಪರ್ಕದಲ್ಲಿ ಅವನಿಗಿದ್ದ ಹೆದರಿಕೆಯೆಲ್ಲ ಈಗ ಮಾಯವಾಗಿ ಹೋಗಿತ್ತು. ಹೇಗೂ ಜೀವದ ಮೇಲೆ ಆಸೆಯಿಲ್ಲದಿದ್ದವನಿಗೆ ಯಾರ ಹೆದರಿಕೆ ಏನೆಂಬಂತೆ ಅವನಿಗೆ ಅನ್ನಿಸುತ್ತಿತ್ತು. ಆಗ, ಅವನೆದುರಿನಲ್ಲೇ, ಮುನಿಸಿಪಲ್ ದೀಪಗಳ ಬೆಳಕಿನಲ್ಲಿ ಮನೆಗಳ ಸಂಖ್ಯೆಗಳನ್ನು ಪರೀಕ್ಷಿಸುತ್ತ ಒಬ್ಬ ಬಾಲಕ ಬರುತ್ತಿದ್ದ. ಬಾಲಕ ಮನೆಗಳನ್ನು ನೋಡಿ ನೋಡಿ ಬೇಸತ್ತು, ಮನಸ್ಸಿಯಾಗಿ ಯಾರಯಾರನ್ನೆಲ್ಲ ಬೈಯುತ್ತ, ಇವನಿದ್ದ ಕಡೆಗೆ ಬರುತ್ತ, ಸಿಟ್ಟು ವಿಪರೀತವಾಗಿ, "ಬಡವರೆಲ್ಲ ಕತ್ತಲಲ್ಲಿ ಪ್ರಜಾಪಕ್ಷಕ್ಕಾಗಿ ಹೋರಾಡುತ್ತಿರುವಾಗ ಈ ಬೀದಿಯ ಶ್ರೀಮಂತರು ದೀಪವನ್ನು ಉರಿಸಿಕೊಂಡು ಮಲಗಿ ನಿದ್ರಿಸುವುದನ್ನು ನಿಲ್ಲಿಸಬೇಕು," ಎಂದು ಹೇಳುತ್ತ ಕಲ್ಲು ಬಿಸಾಡಿ, ಒಂದು ದೀಪವನ್ನು ಪುಡಿಮಾಡಿದ.

ಈ ಶಬ್ದ ಕೇಳಿ ಜೀನ್‌ವಾಲ್‌ಜೀನನಿಗೆ ಎಚ್ಚರವಾಯಿತು. ಅವನು ಬಾಲಕನನ್ನು ಉದ್ದೇಶಿಸಿ "ಯಾರಪ್ಪಾ ಅದು—ಪೋಕ್ರಿ! ದೀಪವನ್ನೇಕೆ ಒಡೆಯುತ್ತೀಯಾ?" ಎಂದು ಕೇಳಿದ.

"ಪೋಕ್ರಿ ಗೀಕ್ರಿ ಎಂದನ್ನುವ ಅಗತ್ಯವಿಲ್ಲ. ನಿನ್ನಂಥ ಶ್ರೀಮಂತ ಮಹಾನುಭಾವರ ನಾಶಕ್ಕೆ ಹೊರಟಿರುವ ದೇಶಪ್ರೇಮಿ ನಾನು ಕರ್ತವ್ಯದೃಷ್ಟಿಯಿಂದ ಮಾತ್ರ ದೀಪ ಒಡೆದಿದ್ದೇನೆ—ಜಾಗ್ರತೆ!" ಅಂದ ಬಾಲಕ.

"ನಿನ್ನ ಹೆಸರೇನಪ್ಪಾ? ಯಾವ ಕರ್ತವ್ಯ ನಿನ್ನದಿರಬಹುದಾದರೂ ದೀಪ ಒಡೆದಿದ್ದರಿಂದ ಏನು ಸಾಧಿಸಿದ ಹಾಗಾಯ್ತು, ಬಾಲಕಾ!"

"ನನ್ನ ಹೆಸರು ಗಾವ್ರೋಚ್. ಹೊಟ್ಟೆಹಸಿವಿನಿಂದ ಒದ್ದಾಡುವವರ ಪೈಕಿ ನಾನೊಬ್ಬ. ಪ್ರಜಾ ರಾಜ್ಯದ ಸ್ಥಾಪನೆಗಾಗಿ ನಮ್ಮಂಥವರು ಪ್ರಾಣವನ್ನು ಕೊಡುತ್ತಿರುವಾಗಲೇ ಈ ಬೀದಿಯವರು ಬೆಚ್ಚಗೆ, ಚಂದದ ಸ್ವಪ್ನ ನೋಡುತ್ತ ಮಲಗಿರಬಾರದು. ಜನಹಿತದ ಕುರಿತು ಅವರಿಗಿರುವ ಅಲಕ್ಷ್ಯವನ್ನು ಹೋಗಲಾಡಿಸಬೇಕು."

"ಆ ವಿಷಯ ಹಾಗಿರಲಿ, ಬಾಲಕ ನಿನಗೆ ತಾಯಿಯಿಲ್ಲವೆ?" ಎಂದು ಜೀನ್‌ವಾಲ್‌ಜೀನ್ ತುಂಬ ಅನುಕಂಪಯುತ ಸ್ವರದಿಂದ ಕೇಳಿದ.

"ನಿನಗೆ ತಾಯಿಯಿರಬಹುದಾದಷ್ಟೇ ನನಗೂ ಇರಬಹುದು," ಎಂದು ಗಾವ್ರೋಚ್ ವ್ಯಂಗ್ಯ

ವಾಗಿ ಉತ್ತರವಿತ್ತ.

ಜೀನ್‌ವಾಲ್‌ಜೀನ್ ೫ ಫ್ರ್ಯಾಂಕ್ ದುಡ್ಡನ್ನು ಹಿಡಿದು ತೋರಿಸುತ್ತ, "ನೀನು ಕಷ್ಟಪಡುತ್ತಿರುವುದನ್ನು ನೋಡುವುದಕ್ಕಾಗುವುದಿಲ್ಲ. ಗಾವ್ರೋಚ್! ಈ ದುಡ್ಡನ್ನು ತೆಗೆದುಕೋ," ಎಂದ.

"ಶ್ರೀಮಂತರ ಲಂಚ ತಿಂದು ನನ್ನ ಕಾರ್ಯ ನಿಲ್ಲಿಸಲು ಸಾಧ್ಯವಿಲ್ಲ. ಇನ್ನೂ ಅನೇಕ ದೀಪ ಒಡೆಯಲು ಬಾಕಿ ಇವೆ."

"ಚಿಂತೆಯಿಲ್ಲ, ಬಾಲಕ ನೀನು ಎಷ್ಟು ದೀಪ ಬೇಕಾದರೂ ಒಡೆದು ಹಾಕು. ನನ್ನ ಅಡ್ಡಿಯಿಲ್ಲ, ನಾನು ಶ್ರೀಮಂತನೂ ಅಲ್ಲ, ಶ್ರೀಮಂತ ಪಕ್ಷದವನೂ ಅಲ್ಲ. ಈ ಹಣ ತೆಗೆದುಕೊಂಡು ಚೆನ್ನಾಗಿ ಬೇಕಾದ್ದು ತಿಂದು ಮತ್ತೆ ನಿನ್ನ ಕೆಲಸ ಮಾಡಪ್ಪಾ."

ಗಾವ್ರೋಚ್ ಜೀನ್‌ವಾಲ್‌ಜೀನನ ಸಮೀಪ ಬಂದು ನಿಂತು ಅವನನ್ನು ಪರೀಕ್ಷಿಸಿದ. ಅವನ ದುಸ್ತು, ಆ ಬೋಳುತಲೆ ಎಲ್ಲವನ್ನೂ ನೋಡಿ, ಅವನು ಒಬ್ಬ ಬಡವನೇ ಆಗಿರಬೇಕೆಂದು ನಿಶ್ಚೈಸಿಕೊಂಡು, ಅನಂತರ ಅವನ ಕೈಯಿಂದ ಆ ೫ ಫ್ರ್ಯಾಂಕ್ ಹಣ ತೆಗೆದುಕೊಂಡ. ಜೀನ್‌ವಾಲ್‌ಜೀನನಿಗೆ ಇದರಿಂದ ಸ್ವಲ್ಪ ಸಮಾಧಾನವಾಯಿತು. ಅವನಿಗೆ ಬಾಲಕನ ಮೇಲೆ ಸ್ವಲ್ಪ ಪ್ರೀತಿಯೂ ತೋರಿತು. ಅವನು ಪುನಃ ವಿಚಾರಿಸಿದ, "ನೀನು ಈ ಕಡೆ ಬಂದ ಕಾರ್ಯವೇನು? ನೀನು ಇರುವುದೆಲ್ಲಿ?"

ಗಾವ್ರೋಚನಿಗೆ ಇವನನ್ನು ನಂಬಬಹುದೇ ಬಾರದೇ ಎಂದು ಒಮ್ಮೆ ತೋರಿತು. ಆದರೆ ಇವನ ಮುಖ ನೋಡಿ ನಂಬಿಕೆಯುಂಟಾಯಿತು. ಹಾಗಾಗಿ ಗಾವ್ರೋಚ್, "ನಾನು ಒಂದು ಮನೆ ಹುಡುಕುತ್ತಿದ್ದೇನೆ," ಎಂದು ಹೇಳಿದ.

"ಯಾವ ಮನೆ? ಸಂಖ್ಯೆ ಎಷ್ಟು?"

"ಸಂಖ್ಯೆ ೭ನೇ ಮನೆ."

"ಅಲ್ಲಿ ನಿನಗೇನು ಕೆಲಸ?"

"ಒಬ್ಬರನ್ನು ಕಾಣಬೇಕಾಗಿದೆ."

ಆಗ ಜೀನ್‌ವಾಲ್‌ಜೀನನಿಗೆ ಕನ್ನಡಿಯಲ್ಲಿ ಕಂಡ ಪತ್ರ ಜ್ಞಾಪಕಕ್ಕೆ ಬಂದಿತು. ಕೋಸೆಟ್ಟಿಯ ಪತ್ರಕ್ಕೆ ಈ ಬಾಲಕ ಉತ್ತರವನ್ನೇನಾದರೂ ತಂದಿರಬಹುದೆ ಎಂದು ಊಹಿಸಿದ. ಹಾಗಾಗಿ ಅವನು ಕೇಳಿದ, "ನಮ್ಮ ಮನೆಯ ಪತ್ರ ಕಳುಹಿಸಿದ್ದೆವಷ್ಟೆ, ಅದಕ್ಕೆ ಉತ್ತರ ತಂದಿದ್ದೀಯೋ, ಏನು?"

"ನೀವು 'ನಮ್ಮ' ಎಂದಂದಿರಲ್ಲ, ಅದು ಯಾರು?" ಎಂದು ಗಾವ್ರೋಚ್ ವಿಚಾರಿಸಿದ.

"ನಮ್ಮ ಮನೆ ಯಜಮಾನಿ—ಮೆಡೊಮಾಸೈಲ್ ಕೋಸೆಟ್ಟಿ," ಎಂದ ಜೀನ್‌ವಾಲ್‌ಜೀನ್.

ಗಾವ್ರೋಚನ ಕೈಯಲ್ಲಿದ್ದ ಪತ್ರದ ಮೇಲೂ ಆ ಹೆಸರೇ ಇತ್ತು. ಹಾಗಾಗಿ ಗಾವ್ರೋಚ್ ಅದನ್ನು ಜೀನ್‌ವಾಲ್‌ಜೀನನ ಕೈಯಲ್ಲಿ ಕೊಟ್ಟು, ಮರೆಯದೆ ಯಜಮಾನಿಗೆ ತಲಪಿಸಬೇಕೆಂದು ಕೋರಿದ. ಅನಂತರ ಸಂತೋಷದಿಂದ ಹಾಡುತ್ತ, ದೀಪಗಳನ್ನು ಒಡೆಯುತ್ತ ರಸ್ತೆಯಲ್ಲೇ ಓಡಿದ.

ಜೀನ್‌ವಾಲ್‌ಜೀನ್ ಅತಿ ಅವಸರದಿಂದ ತನ್ನ ಕೋಣೆಗೆ ಧಾವಿಸಿ, ದೀಪ ಉರಿಸಿ, ಕುತೂಹಲದಿಂದಲೂ ಹೆದರಿಕೆಯಿಂದಲೂ ಕಾಗದ ಓದತೊಡಗಿದ. ಹಾಗೆ ಓದುತ್ತಿದ್ದಾಗ ಅದು ತನ್ನ ಶತ್ರುವೆಂದು ಭಾವಿಸುತ್ತಲೇ ಇದ್ದ. ಆದರೆ, ಅದನ್ನು ಪೂರಾ ಓದಿದ ಹಾಗೆ ಸ್ವಲ್ಪ ಸಮಾಧಾನ ಪಡೆದ. ಅದರಲ್ಲಿ ". . . ಇಂದು ಇಲ್ಲಿ ಸಾಯುವೆನು; ಈ ಪತ್ರವನ್ನು ನೀನು ಓದುತ್ತಿರುವಾಗಲೇ . . . . ನಾನು ಅಶರೀರಿಯಾಗಿ . . . ." ಎಂಬ ವಚನಗಳು ಅವನ ಶತ್ರುವಿನ ನಾಶವನ್ನು ತಿಳಿಸಿದ್ದುವು. ಹೀಗಾಗಿ ಅವನಿಗೆ ಒಂದು ವಿಧದ ಶಾಂತಿಯೇ ದೊರಕಿತು.

ಆದರೂ, ಆ ದಿನದ ಎಲ್ಲ ಸಂಗತಿಗಳನ್ನೂ ಗ್ರಹಿಸುತ್ತ ಹೋದಹಾಗೆ ಜೀನ್‌ವಾಲ್‌ಜೀನನಿಗೆ ದುಃಖ ಏರುತ್ತ ಹೋಯಿತು. ಈ ಅಶಾಂತಿಯಿಂದ ಅವನು ಎದ್ದು ಸೈನಿಕರ ದುಸ್ತು ಧರಿಸಿ, ಮೇರಿಯಸನ ಪತ್ರವನ್ನು ಒಳಜೇಬಿನಲ್ಲಿಟ್ಟುಕೊಂಡು, ತನ್ನ ಕೋವಿಯನ್ನೂ ತೋಟೆಗಳನ್ನೂ ತೆಗೆದುಕೊಂಡು, ಸೇಂಟ್ ಮೇರೀ ಇಗರ್ಜಿ ವಠಾರದ ಕಡೆಗೆ ಹೋದ. ಆಗಲೂ ದೂರದಿಂದ ಬಂದೂಕುಗಳ ಸದ್ದು ಕೇಳಿಬರುತ್ತಿತ್ತು.

೩. ಗಾವ್ರೋಚನ ಅತಿಶಯ ಉತ್ಸಾಹ

ಗಾವ್ರೋಚ್ ಮುನಿಸಿಪಲ್ ದೀಪಗಳನ್ನು ಕ್ರಮವಾಗಿ ಒಡೆಯುತ್ತ ಮುಂದುವರಿಯುವಾಗ ದಾರಿಕರೆಯಲ್ಲೊಬ್ಬ ಕೈಗಾಡಿ ಮೇಲೆ ಮಲಗಿ ನಿದ್ರಿಸುತ್ತಿದ್ದುದನ್ನು ಕಂಡ. ಅವನ ಸಮೀಪಕ್ಕೆ ಹೋಗಿ ನೋಡಿದಾಗ ಆತ ಪಕ್ಕದ ಶ್ರೀಮಂತನೊಬ್ಬನ ಮನೆಯ ಪಹರೆಯವನೆಂದು ತಿಳಿದ. ಗಾವ್ರೋಚನಿಗೆ ಅವನನ್ನು ಕಂಡು ಕೋಪಬಂದಿತು. ಪಹರೆಯವನನ್ನು ಕುರಿತು, "ಎಲ್ಲರೂ ಪ್ರಜಾರಾಜ್ಯಕ್ಕಾಗಿ ಕಾದಾಡಬೇಕಾದಾಗ ನೀನೊಬ್ಬ ಮಲಗಿ ಗೊರಕೆ ಹೊಡೆಯುವುದು ಬೇಡ. ಗಾಡಿ ಪ್ರಜಾಪಕ್ಷಕ್ಕೂ ನೀನು ರಾಜಪಕ್ಷಕ್ಕೂ ಆಗುವಂತೆ ಪಾಲುಮಾಡಿಕೊಳ್ಳೋಣ," ಎಂದು ಹೇಳಿ, ಗಾಡಿಯನ್ನು ಎದುರಿನಿಂದ ಮೇಲಕ್ಕೆ ಎತ್ತಿ ಮೆಲ್ಲಮೆಲ್ಲಗೆ ಎಳೆಯುತ್ತ, ಹಿಂಬದಿಗೆ ಕಾಲು ಜೋಲುಬಿಟ್ಟು ಮಲಗಿದ್ದವನನ್ನು ನೀಳವಾಗಿ ನೆಲದಲ್ಲಿ ಜಾರಿಸಿ ಮಲಗಿಸಿ, ಗಾಡಿ ಎಳೆದುಕೊಂಡು ಓಡಿದ. ಆ ಕೈಗಾಡಿ ತಮ್ಮ ತಡೆಗೋಡೆಗೆ ಸಹಾಯಕವಾಗಬಹುದೆಂದು ಊಹಿಸಿ ಗಾವ್ರೋಚ್ ಅದನ್ನು ತೆಗೆದುಕೊಂಡಿದ್ದ. ಆದರೆ, ತಾನು ಅನ್ಯಾಯವಾಗಿ ಅದನ್ನು ಅಪಹರಿಸಿದ್ದೆಂದು ಗಾಡಿಗ ತಿಳಿಯಬಾರದೆಂಬಂತೆ, ತಾನೊಬ್ಬ ನ್ಯಾಯಸಮ್ಮತವಾಗಿ ವರ್ತಿಸುವ ಗೃಹಸ್ಥನಂತೆ ಒಂದು ತುಂಡು ಕಾಗದದಲ್ಲಿ, "ಪ್ರಜಾರಾಜ್ಯಕ್ಕಾಗಿ ನನ್ನ ಸ್ವಾಧೀನಕ್ಕೆ ಈ ಗಾಡಿ ಬಂದಿದೆ— ಗಾವ್ರೋಚ್," ಎಂದು ಬರೆದು ಪಹರೆಯವನ ಜೇಬಿನಲ್ಲಿ ಅದನ್ನಿಟ್ಟಿದ್ದ.

ಹೀಗೆ ಈತ ಪದ ಹೇಳುತ್ತ ಗಾಡಿ ನೂಕುತ್ತ ರಸ್ತೆ ಬದಿಯ ದೀಪಗಳನ್ನೊಡೆಯುತ್ತ ಹೋಗುವಾಗ ಇಬ್ಬರು ಪೊಲೀಸರು ಇವನಿಗೆ ಎದುರು ಸಿಕ್ಕಿದರು. ದೀಪಗಳ ಕುಪ್ಪಿ ಮತ್ತು ಕನ್ನಡಿ ಒಡೆಯುವ ಸದ್ದು, ಇವನ ಪದ, ಗಾಡಿಯ ಗರಗರ ಗಡಗಡ ಶಬ್ದಗಳನ್ನೆಲ್ಲ ಕೇಳಿ ಎಲ್ಲ ಕಡೆ ಕತ್ತಲೆಯೇ ಇದ್ದುದರಿಂದ, ಗಾವ್ರೋಚನ ಗುಂಪಿನಲ್ಲಿ ಎಷ್ಟು ಜನರಿದ್ದಾರೆಂದು ತಿಳಿಯದೆ, ಪೊಲೀಸರು ಸ್ವಲ್ಪ ಹೆದರಿಕೊಂಡೇ ಅವನನ್ನು ಎದುರಿಸಿದರು. ಇವನು ಹೆದರದೆ, ಅವರು ತಮ್ಮ ಪೊಲೀಸ್ ಕೆಲಸ ಬಿಟ್ಟು ಪ್ರಜಾಪಕ್ಷಕ್ಕೆ ಸೇರಬೇಕೆಂದು ಕತ್ತಲೆಯಲ್ಲೇ ಬೋಧಿಸಿದ. ಪೊಲೀಸರಿಗೆ ಸಿಟ್ಟುಬಂದು ಗಾವ್ರೋಚನನ್ನು ಹಿಡಿಯಲು ಪ್ರಯತ್ನಿಸಿದರು. ಆಗ ಇವನು ಗಾಡಿಯನ್ನು ಪೊಲೀಸರ ಮೇಲೆ ನೂಕಿ, ಒಬ್ಬನನ್ನು ಮಗುಚಿ ಹಾಕಿ, ಅಲ್ಲಿಂದ ಓಡಿಹೋದ.

ಪೊಲೀಸರು ಸದಾ ಜಯಶಾಲಿಗಳಾಗುವುದು ಅವರ ಹಕ್ಕು ಎಂಬಂತೆ—ನಿಜಸ್ಥಿತಿ ಏನಿದ್ದರೂ, ಅವರ ವರದಿಗಳ ಪ್ರಕಾರ—ಈ ಪ್ರಸಂಗವೂ ಅವರ ಕೀರ್ತಿಯನ್ನು ಹೆಚ್ಚಿಸಿತು. ಆ ಗಾಡಿ ಮುಖಾಂತರ ಪೊಲೀಸರು ಪಹರೆಯವನನ್ನು ಪತ್ತೆಹಚ್ಚಿ, ಗಾವ್ರೋಚನ ರಶೀದಿಯ ಆಧಾರದ ಮೇಲೆ ಪಹರೆಯವ ಪ್ರಜಾಪಕ್ಷದ ಮದ್ದತ್ತುಗಾರನೆಂದು ಸಿದ್ಧಾಂತಮಾಡಿ, ಅವನಿಗೆ ಶಿಕ್ಷೆ ಮಾಡಿಸಿದರು. ಅಲ್ಲದೆ, ಪಹರೆಯವನು ತೆರಬೇಕಾಗಿದ್ದ ಜುಲ್ಮಾನೆ ಹಣದ ಬಗ್ಗೆ ಆ ಗಾಡಿಯನ್ನು ಸರಕಾರ ತನ್ನ ವಶಮಾಡಿಕೊಂಡಿತು.

ಪಂಚಮ ವಿಭಾಗ : ಜೀನ್‌ವಾಲ್‌ಜೀನ್

ಒಂದನೆಯ ಸಂಪುಟ

೧. ನೆರಳಿನಲ್ಲಿ ಬೆಳಕು

ಕ್ರಾಂತಿ ಪಕ್ಷದವರು ತಾವು ಪ್ಯಾರಿಸಿನ ನಾನಾ ಭಾಗಗಳಲ್ಲಿ ಒಮ್ಮೆಯೇ ದಂಗೆ ಏಳಬೇಕೆಂದು ಮೊದಲೇ ಏರ್ಪಡಿಸಿಕೊಂಡಿದ್ದರು. ಇದಕ್ಕೆ ಒಳಪಟ್ಟು ಜನರಿಗೆ ಚೇತನ ಮತ್ತು ಪ್ರೋತ್ಸಾಹ ಕೊಡಲು ಅಲ್ಲಲ್ಲಿ ಕೇಂದ್ರಗಳನ್ನೂ ಇವುಗಳ ರಕ್ಷಣೆಗಾಗಿ ತಡೆಗೋಡೆಗಳನ್ನೂ ನಿರ್ಮಿಸಿಕೊಂಡಿದ್ದರು. ಇಷ್ಟೂ ಅಲ್ಲದೆ, ಇಂಥ ಕೇಂದ್ರಗಳೊಳಗೆ ಸಾಧ್ಯವಾದಷ್ಟು ಸಂಪರ್ಕವಿಟ್ಟುಕೊಳ್ಳುವ ಸೌಕರ್ಯವನ್ನೂ ಅನುಕೂಲವಾದಾಗ ಅಗತ್ಯಬಿದ್ದ ಕೇಂದ್ರಗಳಿಗೆ ಇನ್ನೊಂದರಿಂದ ಜನ ಸಹಾಯ ಕೊಡುವ ಏರ್ಪಾಡನ್ನೂ ಮಾಡಿಕೊಂಡಿದ್ದರು.

ಎಂಜೊಲ್ರಾಸನ ಕೇಂದ್ರದಲ್ಲಿ ಈಗ ಕ್ರಾಂತಿಯುದ್ಧ ಹೇಗೂ ಪ್ರಾರಂಭವಾಗಿದ್ದು, ತತ್ಕಾಲ ಮಾತ್ರ ಉಭಯಪಕ್ಷದವರೂ ಒಂದು ವಿಧದ ಸ್ತಬ್ಧತೆ ವಹಿಸಿದ್ದರು. ಎಲ್ಲರೂ ಎರಡು ಗಂಟೆ ಕಾಲವಾದರೂ ನಿದ್ರೆ ಮಾಡಬೇಕೆಂದು ಎಂಜೊಲ್ರಾಸ್ ತನ್ನ ಕಡೆಯವರಿಗೆ ಅಪ್ಪಣೆಯಿತ್ತ. ಇವರಿಗೆ ಆಹಾರವಿಲ್ಲದೆ ಈಗಾಗಲೇ ಹದಿನಾರು ಗಂಟೆ ಸಮಯ ಕಳೆದಿತ್ತು. ಹಾಗಾಗಿ ಇದ್ದ ಆಹಾರವನ್ನು ಎಲ್ಲರೂ ಹಂಚಿ ತಿಂದರು. ಆಹಾರ ಕಡಿಮೆಯಿದ್ದಾಗ ಮಾದಕಪಾನೀಯ ಹಿತಕರವಲ್ಲವೆಂದು, ಅವರಲ್ಲಿದ್ದ ಮಾದಕ ವಸ್ತುಗಳನ್ನೆಲ್ಲ ಒಂದೇ ಕಡೆಯಿಟ್ಟು, ಅವನ್ನು ಪಹರೆಯಿಂದ ಕಾಪಾಡತೊಡಗಿದರು. ತಾವು ನಿದ್ರೆ ಮಾಡಬಹುದೆಂದು ಅಪ್ಪಣೆ ಪಡೆದಿದ್ದರೂ ಯಾರಿಗೂ ನಿದ್ರೆ ಬರಲಿಲ್ಲ. ಗಾಯಗೊಂಡಿದ್ದವರಿಗೆಲ್ಲ ಚಿಕಿತ್ಸೆ ಮಾಡಿ ಹೋಟೇಲಿನ ಒಳಗೆ ಮಲಗಿಸಿದರು. ಆ ಪೈಕಿ ಸರಕಾರದ ಕಡೆಯ ಸೈನಿಕರೂ ನಾಲ್ಕು ಜನರಿದ್ದರು. ಅವರಿಗೆ ಪಹರೆ ಇಟ್ಟಿದ್ದರು. ಮತ್ತೆ, ಶವಗಳನ್ನೆಲ್ಲ ಒಂದೇ ಕಡೆ ಇಟ್ಟರು.

ಇದೇ ಸಮಯದಲ್ಲಿ ಎಂಜೊಲ್ರಾಸ್ ರಸ್ತೆ ಕಡೆ ಹೋಗಿ ಪರೀಕ್ಷಿಸಿ, ತನ್ನ ಗಡಿಯಾರ ನೋಡುತ್ತ, ತಮ್ಮ ಪರಿಸ್ಥಿತಿಯ ಭೀಕರತೆಯನ್ನು ಸಹಚರರಿಗೆ ವಿವರಿಸಿದ. ಅವನು ನಿರೀಕ್ಷಿಸುತ್ತಿದ್ದ ಜನಸಹಾಯ ದೊರಕುವ ಸಂಭವ ತೋರಲಿಲ್ಲ. ಆ ಕೋಟೆಯ ಸುತ್ತಲೂ ಸೈನ್ಯ ಮುತ್ತಿಗೆ ಹಾಕಿರುವುದಾಗಿಯೂ ಅವನು ತಿಳಿದಿದ್ದ. ಈ ಎಲ್ಲ ಸಂಗತಿಗಳನ್ನು ಎಂಜೊಲ್ರಾಸ್ ತನ್ನ ಕಡೆಯವರಿಗೆ ಹೇಳಿ ಮುಗಿಸಿದ ಕೂಡಲೇ, ಅವರ ಕೋಟೆಯೊಳಗೇ ಒಂದು ಕರೆಯಲ್ಲಿ ನಿಂತಿದ್ದ ಒಬ್ಬ ಅಪರಿಚಿತ, ಆವೇಶಪೂರಿತನಾಗಿ, "ಚಿಂತೆಯಿಲ್ಲ, ನಾವು ನಮ್ಮ ಕರ್ತವ್ಯವನ್ನು ಮಾಡೋಣ. ಪ್ರಜಾರಾಜ್ಯಕ್ಕಾಗಿ ನಮ್ಮ ಜೀವವನ್ನು, ಅರ್ಪಿಸಿ, ತಂತಮ್ಮ ಹಕ್ಕುಗಳ ಕುರಿತಾಗಿ ನಿದ್ರಿಸುತ್ತಿರುವ ಮಹಾಜನರಿಗೆ ಜಾಗೃತಿಯನ್ನುಂಟುಮಾಡೋಣ," ಎಂದು ಘೋಷಿಸಿದ.

೨. ಐದು ಕಡಿಮೆ ಮತ್ತು ಒಂದು ಹೆಚ್ಚು!

ತಮ್ಮ ಪರಿಸ್ಥಿತಿ ಬಲು ಘೋರತರದ್ದೆಂದು ಎಲ್ಲರೂ ತಿಳಿದರು. ಯುದ್ಧ ಮಾಡಲು ತಮ್ಮ ಕೋಟೆಯೊಳಗೆ ಎಷ್ಟು ಜನರಿದ್ದಾರೆಂದೂ ಇಲ್ಲಿಗೆ ಎಷ್ಟು ಜನರು ಸಾಕೆಂದೂ, ಲೆಕ್ಕ ತೆಗೆದು ನೋಡಿದರು. ಕೋಟೆಯೊಳಗೆ ಒಟ್ಟಾಗಿ ಇದ್ದ ಮೂವತ್ತೈದು ಜನರಲ್ಲಿ ಐದು ಜನರು ಅಲ್ಲಿಗೆ

ಅನಾವಶ್ಯಕವೆಂದು ನಿಶ್ಚೈಸಿದರು. ಈ ಕೋಟೆಯೊಳಗಿದ್ದವರು ಹೇಗೂ ಮಡಿಯಲೇಬೇಕಾಗಿದ್ದುದರಿಂದ ಈ ಅನಾವಶ್ಯಕವಾದ ಐದು ಜನರಾದರೂ ಕೋಟೆಯಿಂದ ಹೊರಗೆ ಹೋಗಬೇಕೆಂದು ತೀರ್ಮಾನಿಸಿದರು. ಎಂಜೊಲ್ರಾಸ್ ಅಲ್ಲಿ ನೆರೆದಿದ್ದವರನ್ನೆಲ್ಲ ಕರೆದು, ಅವರವರೊಳಗೆ ಮಾತಾಡಿಕೊಂಡು ನಿಶ್ಚೈಸಿ, ಐದು ಮಂದಿ ಹೊರಗೆ ಹೋಗಬೇಕೆಂದು ಹೇಳಿದ. ಆದರೆ, ಆ ಐವರು ಯಾರು ಯಾರೆಂದು (ಎಲ್ಲರಿಗೂ ಅಲ್ಲೇ ಉಳಿಯಬೇಕೆಂದು ಆಸೆ ಇದ್ದುದರಿಂದ) ಅವರು ಇತ್ಯರ್ಥಿಸಿಕೊಳ್ಳಲಾರದೆ, ಯಾರೂ ಹೋಗಲು ತಯಾರಾಗಲಿಲ್ಲ. ಆಗ ಕೋಂಬೆಫರ್ ಅವರಿಗೆಲ್ಲ ಈ ರೀತಿ ಬೋಧನೆಕೊಟ್ಟ, "ಸ್ನೇಹಿತರೇ, ನನ್ನ ಮಾತನ್ನು ಸ್ವಲ್ಪ ಗಮನಿಸಿ. ನಿಮ್ಮ ದೇಶಪ್ರೇಮ, ಧೈರ್ಯ, ಉತ್ಸಾಹ ಎಷ್ಟಿವೆಯೆಂದು ನನಗೆ ಗೊತ್ತಿದೆ. ಅವನ್ನೆಲ್ಲ ನಾವು ಅಳೆಯಲಾರೆವು. ನೀವೆಲ್ಲ ವೀರಾಗ್ರಣಿಗಳೂ ದೇಶಪ್ರೇಮಿಗಳೂ ಆದಾಗ್ಯೂ ನಿಮ್ಮಲ್ಲಿ ಕೆಲವರು ನಿಷ್ಕರುಣಿಗಳೂ ಆಗಿರುವಿರೆಂಬುದನ್ನು ನಿಮ್ಮ ಆತ್ಮವಿಮರ್ಶೆಯಿಂದ ತಿಳಿಯಬೇಕು. ನಮ್ಮ ದೇಶವೆಂದರೆ ಭೂಭಾಗಕ್ಕಿಂತಲೂ ನಮ್ಮ ಜನವೆಂಬ ಮುಖ್ಯ ಸಂಗತಿಯನ್ನು ನೀವು ಬಲ್ಲಿರಷ್ಟೆ? ಈ ಜನಗಳಲ್ಲಿ ಕೆಲವು ಜನ ಯುವಕರೂ ಕೆಲವು ಜನ ಯೋಧರೂ ಮಾತ್ರ ಪ್ರಧಾನವಾದವರೆಂದು ನೀವು ತಿಳಿಯುತ್ತಿಲ್ಲವಷ್ಟೆ! ನಿಮ್ಮ ಪೈಕಿ ಕೆಲವರಿಗಾದರೂ ತಾಯಿ, ತಂಗಿ, ಪತ್ನಿ, ಪುತ್ರಿ, ಪುತ್ರರಿರಬಹುದಷ್ಟೆ. ಅಣ್ಣತಮ್ಮಂದಿರೂ ವೃದ್ಧರಾದ ತಂದೆ ಅಜ್ಜಂದಿರೂ ಇರಬಹುದು. ಇವರೆಲ್ಲರೂ ನಮ್ಮ ಜನಾಂಗ. ಈ ಜನರಿರುವ ಮನೆ, ಪ್ರದೇಶ ಎಲ್ಲವೂ ಸೇರಿಯೇ ನಮ್ಮ ದೇಶವಾಗುತ್ತದೆ. ಒಂದು ಸಂಸಾರದ ಏಕ ಮಾತ್ರ ಆಧಾರವಾಗಿರುವವರೂ ನಿಮ್ಮ ಪೈಕಿ ಕೆಲವರಿರಬಹುದು. ನಿಮ್ಮನ್ನೇ ನಂಬಿಕೊಂಡಿರುವ ಸಂಸಾರವನ್ನು ಬಿಟ್ಟು ನೀವು ಯುದ್ಧಭಾಗಿಗಳಾಗಿ ಮಡಿದರೆ, ನೀವು ಆತ್ಮಹತ್ಯೆ ಮಾಡಿಕೊಂಡಂತೆಯೇ ಸರಿ. ಹೆಂಗುಸರನ್ನೂ ಹುಡುಗಿಯರನ್ನೂ ಅನಾಥರಾಗಿ ಬಿಡುವುದು ಸರಿಯಲ್ಲ. ಗಂಡುಸಾದರೆ ಊಟಕ್ಕಿಲ್ಲದಿದ್ದಾಗ ಪ್ರಾಣಬಿಟ್ಟಾರು ಮಾತ್ರ. ಅದೇ ಪರಿಸ್ಥಿತಿಗೆ ಹೆಂಗುಸರು ಬಂದರೆ ತಮ್ಮನ್ನೇ ಮಾರಿಕೊಳ್ಳಲೂ ಬಹುದು. ಸೇಂದಿ ಅಂಗಡಿಗಳ ಬಾಗಿಲಲ್ಲಿ, ಸಾರ್ವಜನಿಕ ವಿನೋದಕೂಟಗಳಲ್ಲಿ ಮತ್ತು ಇಂಥ ಇನ್ನಿತರ ಸ್ಥಳಗಳಲ್ಲಿ (ಹೂವಾಗಿ ಶೋಭಿಸಿ ಬದುಕಬೇಕಾದ) ಹಸುಳೆ ಹುಡುಗಿಯರು ತಮ್ಮ ಲಜ್ಜೆಯನ್ನೇ ಮಾರಿಕೊಂಡು ಮೃಗಗಳಂತೆ ಬದುಕುತ್ತಿರುವುದು ಇಂಥ ಪ್ರಸಂಗಳಿಂದ ಎಂದು ನೀವು ಗ್ರಹಿಸಲಾರಿರೇನು? ನಿಮ್ಮನ್ನು ಆಶ್ರಯಿಸಿರುವವರ ಮೃದುಹಸ್ತಗಳನ್ನು ಹಿಡಿದು ಸಂಸಾರ ಕೂಟಗಳಲ್ಲಿ ನೀವು ನಡೆಸಿಕೊಂಡು ಹೋಗದೆ, ಇಲ್ಲಿ ಯುದ್ಧದಲ್ಲಿ ಸತ್ತರೆ, ಮುಂದೆ ಅವರೆಲ್ಲ ಮಣ್ಣನ್ನೇ ಮುಕ್ಕಬೇಕೆಂದು ಗೊತ್ತಿದೆಯೆ? ನಿಮ್ಮ ಪೈಕಿ ಪತ್ನಿ, ಪುತ್ರಿ, ಮಾತೆ, ಸಹೋದರಿ ಇರುವವರು ದಯಮಾಡಿ ಮುಂದೆ ಬಂದು ಇಲ್ಲಿಂದ ಹೊರಗೆ ಹೋಗಬೇಕು. ವೀರಸಾಹಸದಿಂದ ಮಡಿಯಲು ಬೇಕಾದುದಕ್ಕಿಂತಲೂ ಹೆಚ್ಚಿನ ಮನಸ್ಸಿನ ತ್ರಾಣ ಇಲ್ಲಿಂದ ಹೋಗಲು ನಿಮಗೆ ಬೇಕಾಗಬಹುದೆಂಬುದನ್ನು ನಾನು ಬಲ್ಲೆ. ಆದರೆ, ಇಲ್ಲಿ ಮಡಿಯುವುದಕ್ಕಿಂತ ಹೆಚ್ಚಿನ ತ್ಯಾಗ ನೀವು ಇಲ್ಲಿಂದ ಹೊರಗೆ ಹೋಗಿ ನಮ್ಮ ತತ್ತ್ವಗಳನ್ನು ಪ್ರಚಾರಮಾಡಿ, ನಮ್ಮ ಜನರನ್ನು ಸಂಘಟಿಸಿ, ಪ್ರಜಾಸತ್ತೆ ಸ್ಥಾಪಿಸುವುದರಲ್ಲಿದೆ ಎಂಬುದನ್ನು ದಯಮಾಡಿ ಗಮನಿಸಿ ಒಡನೆ ಹೊರಡಿ."

ಈ ಮಾತುಗಳನ್ನು ಕೇಳಿ ಜನರು ತಂತಮ್ಮೊಳಗೆ ಚರ್ಚಿಸಿಕೊಂಡು ಕೊನೆಗೆ ಹೊರಗೆ ಹೋಗಲು ಐದು ಜನ ತಯಾರಾಗಿ ನಿಂತರು. ಆದರೆ, ಅವರ ಪೈಕಿ ಒಬ್ಬ ಕೇಳಿದ, "ಸುತ್ತಲೂ ಸೈನಿಕರಿರುವಾಗ ನಾವು ಹೋಗುವುದು ತಾನೆ ಹೇಗೆ?"

ಆಗ ಎಂಜೊಲ್ರಾಸನೂ ಕೋಂಬೆಫರನೂ ಗುಟ್ಟಾಗಿ ಮಾತಾಡಿ, ಹೊಟೇಲ್ ಒಳಗೆ ಹೋಗಿ,

ಸ್ವಲ್ಪ ಹೊತ್ತಿನಲ್ಲೇ ನಾಲ್ವರು ಸೈನಿಕರ ಸಮವಸ್ತ್ರಗಳನ್ನು ತಂದುಕೊಟ್ಟು, ಅವನ್ನು ಧರಿಸಿ ಅವರು ಹೋಗಬೇಕೆಂದು ಹೇಳಿದರು.

ಈಗ, ಈ ಐದು ಜನರೇ ತಾವು ಹೋಗಲು ಮನಸ್ಸಿಲ್ಲದಿದ್ದಾಗ, ತಮಗೆ ದೊರಕಿದ ನಾಲ್ಕು ಸೈನಿಕ ಸಮವಸ್ತ್ರಗಳನ್ನು ನೋಡಿ, ಉಳಿಯುವ ಐದನೆಯವ ತಾನೇ ಆಗಬೇಕೆಂದು ಪ್ರತಿಯೊಬ್ಬನೂ ಚರ್ಚಿಸತೊಡಗಿದ.

ಈ ಗಲಭೆ ನಡೆಯುತ್ತಿದ್ದಾಗ ಅಪರಿಚಿತ ವೃದ್ಧನೊಬ್ಬ ಒಂದು ಸೈನಿಕ ಸಮವಸ್ತ್ರವನ್ನು ಈ ಐವರ ಮಧ್ಯಕ್ಕೆ ಎಸೆದ. ಈ ಐದನೆಯದು ಅಲ್ಲಿಗೆ ಹೇಗೆ ಬಂತೆಂದು ಮೇರಿಯಸ್ ಆ ಕಡೆ ನೋಡಿದಾಗ, ಆ ವೃದ್ಧ ಮಾನ್ಸ್ಯರ್ ಫಾಶೆಲೆವೆಂಟರೆಂದು ಅವನು ಗುರುತಿಸಿದ. ಇದನ್ನು ಒದಗಿಸಿದವನ ಪರಿಚಯ ತನಗಿದೆಯೆಂದು ಮೇರಿಯಸ್ ಹೇಳಿದ್ದರಿಂದ, ಜೀನ್‌ವಾಲ್‌ಜೀನನನ್ನು ಯಾರೂ ಮಾತಾಡಿಸದೆಯೇ, ಅವನನ್ನು ತುಂಬ ಭಕ್ತಿ ಗೌರವದಿಂದ ನೋಡತೊಡಗಿದರು. ಆಗ ಎಂಜೊಲ್ರಾಸ್ ಎದುರು ಬಂದು, "ನಾವು ನಿಮಗೆ ಸ್ವಾಗತವನ್ನೀಯುವೆವು. ನೀವೊಬ್ಬರು ನಮ್ಮ ಹಿರಿಯ ಸಹೋದರರಂತೆ. ನಮ್ಮ ಸ್ವಾಗತವೆಂದರೆ, ಇಲ್ಲಿ ನಮ್ಮ ಜೊತೆಯಲ್ಲಿ ಸಾಯುವುದು ಮಾತ್ರ," ಎಂದು, ಒಂದು ವಿಧದ ಪ್ರಶಂಸೆಯನ್ನು ಜೀನ್‌ವಾಲ್‌ಜೀನನ ತ್ಯಾಗಕ್ಕಾಗಿ ಮಾಡಿದ.

ಈತ ಯಾವ ಉತ್ತರವನ್ನೂ ಕೊಡಲಿಲ್ಲ. ತನ್ನ ಸೈನಿಕ ಸಮವಸ್ತ್ರವನ್ನು ಐದವನೆಯವನಿಗೆ ತೊಡಿಸುವುದರಲ್ಲೇ ಮಗ್ನನಾಗಿದ್ದ.

೩. ವಿರುದ್ಧ ಧ್ರುವಗಳ ಹಠಾತ್ ಸಂಧಿ

ಈ ಐವರೂ ತಮ್ಮ ಜೀವ ಉಳಿಯುತ್ತದೆಂಬ ಸಂತೋಷದಿಂದ ನಿರ್ಗಮಿಸಲಿಲ್ಲ. ಅತ್ತುಕೊಂಡೇ ಹೋದರು—ತಮ್ಮ ಸ್ನೇಹಿತರನ್ನು ಬಿಟ್ಟುಹೋಗುವ ದುಃಖವೇ ಅವರಿಗೆ ಹೆಚ್ಚಿನದಾಗಿತ್ತು. ತರುವಾಯ ಎಂಜೊಲ್ರಾಸ್ ಜೇವರ್ಟನ ಹತ್ತಿರ ಹೋಗಿ, "ನೀನೊಬ್ಬ ಕೈದಿಯಾಗಿದ್ದರೂ ನಿನ್ನ ಕನಿಷ್ಠ ಅಗತ್ಯಗಳನ್ನು ಒದಗಿಸಬೇಕಾದುದು ನಮ್ಮ ಕರ್ತವ್ಯ. ಏನಾದರೂ ಬೇಕಾಗಿದ್ದರೆ ಹೇಳು," ಎಂದು ಹೇಳಿದ.

"ನನ್ನನ್ನು ಈಗಲೇ ಕೊಲ್ಲಬಾರದೇಕೆ ?" ಎಂದು ಜೇವರ್ಟ್ ಕೇಳಿದ.

"ನಿನಗಾಗಿ ಒಂದು ತೋಟೆಯನ್ನು ಹಾಳುಮಾಡಲಾರೆವು. ಅಗತ್ಯ ಬಿದ್ದಾಗ ನಿನ್ನನ್ನು ವಿಚಾರಿಸದೆಯೇ ಆ ಕೆಲಸ ಮಾಡಬಹುದು. ನಿನಗೇನಾದರೂ ಬೇಕಿದ್ದರೆ ಹೇಳು. ನೀನೂ ಒಬ್ಬ ಮನುಷ್ಯನಷ್ಟೆ."

"ನನಗೆ ಸ್ವಲ್ಪ ನೀರು ಬೇಕು. ಮತ್ತು ನನ್ನನ್ನು ಹೀಗೊಂದು ನಿಲ್ಲಿಸಿ ಏಕೆ ಹಿಂಸಿಸುತ್ತೀರಿ. ಆ ಹೆಣಗಳ ಜೊತೆಯಲ್ಲಾದರೂ ಮಲಗಿಸಿ," ಅಂದ ಜೇವರ್ಟ್.

ಈ ತರ್ಕವನ್ನು ಎಂಜೊಲ್ರಾಸ್ ಒಪ್ಪಿದ್ದರಿಂದ, ಜೇವರ್ಟನಿಗೆ ಸ್ವಲ್ಪ ನೀರು ಕೊಟ್ಟು, ಅನಂತರ ಅವನನ್ನು ಫಾದರ್ ಮೇಬಫರ ಕಳೇಬರದ ಹತ್ತಿರ ಮಂಚದ ಮೇಲೆ ಮಲಗಿಸಿದರು. ಈಗಾಗಲೇ ಜೀನ್‌ವಾಲ್‌ಜೀನ್ ಜೇವರ್ಟನ ಗುರುತನ್ನೂ ಹಿಡಿದಿದ್ದ. ಹಾಗೆಯೇ ಜೇವರ್ಟ್ ಜೀನ್‌ವಾಲ್‌ಜೀನನ ನೆರಳನ್ನು ಕಂಡು ಚಕಿತನಾಗಿ, ಹಿಂತಿರುಗಿ ನೋಡಿ, ಅವನನ್ನು ಗುರುತಿಸಿದ್ದ. ಆದರೆ ಆಶ್ಚರ್ಯಪಡಲಿಲ್ಲ. ಅವನು ಅಂದುಕೊಂಡ, "ಅಂಥವನು ಇಂಥ ಕೂಟಕ್ಕಲ್ಲದೆ ಮತ್ತೆಲ್ಲಿಗೆ ತಾನೆ ಹೋಗಬಲ್ಲ!"

೪. ಫಿರಂಗಿ ತಾಡನೆ

ಸೂರ್ಯೋದಯದ ವೇಳೆ ಸೈನ್ಯ, ಕ್ರಾಂತಿಕಾರರ ಈ ಕೋಟೆಯ ಕಡೆಗೆ ಬರತೊಡಗಿತು. ಭೂಗರ್ಭದ ಬೆಂಕಿ ಜ್ವಾಲೆಯಾಗಿ ಹೊರಹೊರಡುವ ಮೊದಲು ಭೂಮಿಯನ್ನು ಅಲುಗಿಸಿ ಸದ್ದು ಗುದ್ದುವಂತೆ, ಪ್ಯಾರಿಸಿನ ಮಹಾಶರೀರದ ಒಳಗಿನ ಕರುಳಿನಂತೆ ಪಸರಿಸಿದ್ದ ರಸ್ತೆಗಳ ಮೇಲೆ ಏಕಕಾಲದಲ್ಲಿ ಚಲಿಸಲಾರಂಭಿಸಿದ ಸೈನ್ಯ ನಗರವನ್ನೇ ಕಂಪಿಸಿತು. ಗುಡುಗಿನಂತೆ ನೇರ ಮೊಳಗಿತು. ಫ್ರೆಂಚ್ ಜನರ ಕಲೆ ಮತ್ತು ಸಂಸ್ಕೃತಿಗಳ ಭವ್ಯನಿದರ್ಶನಗಳಾಗಿ ಮೆರೆಯುತ್ತಿದ್ದ ಕಟ್ಟಡಗಳು, ರಾಜರಸ್ತೆಯ ಇಕ್ಕಡೆಗಳಲ್ಲಿ ನಿಂತು, ಸರ್ವನಾಶವನ್ನು ತರಲಿದ್ದ ಫಿರಂಗಿ ಬಂದೂಕುಗಳು ತಮ್ಮ ನಡುವೆಯೇ ಮುಂದುವರಿಯುತ್ತಿದ್ದಾಗ ಹೆದರಿ ನಡುಗಿದುವು.

ಸೈನ್ಯದ ಮುಂದುಗಡೆ ಫಿರಂಗಿಗಳು ಬಂದುವು. ಅವುಗಳ ಹಿಂದೆ ರಸ್ತೆ ನೀಳವಾಗಿ ಬಿದ್ದಿದ್ದಂತೆ ಸೈನ್ಯವೂ ನೀಳವಾಗಿ ಫರ್ಲಾಂಗುಗಟ್ಟಲೆ ಬರುತ್ತಿತ್ತು. ಫಿರಂಗಿಗಳು ಬಂದು, ಈ ತಡೆಗೋಡೆಗಿಂತ ಸ್ವಲ್ಪ ದೂರ ನಿಂತು, ತಮ್ಮ ನಳಿಗೆಗಳನ್ನು ಇದರತ್ತ ಗುರಿಯಿಟ್ಟು ನಿಂತುವು. ಅದೇ ವೇಳೆ ಎಂಜೊಲ್ರಾಸನ ಅಪ್ಪಣೆ ಪ್ರಕಾರ ಎಲ್ಲರೂ ಏಕಕಾಲದಲ್ಲಿ ಫಿರಂಗಿಗಳ ಕಡೆಗೆ ಗುಂಡು ಹೊಡೆದರು. ಅತ್ತಕಡೆಯವರು ತಮ್ಮ ಫಿರಂಗಿಗಳಿಂದ ಕಿಡಿಕಾರಿದರು. ಆ ಪ್ರದೇಶವೆಲ್ಲ ನಡುಗಿತು. ನಾಲ್ಕು ಮಿನಿಟ್ ಅಲ್ಲೆಲ್ಲ ಹೊಗೆ ಹಗೆ ಧಗೆ ಬೇಗೆ! ಫಿರಂಗಿಗಳ ಚಿಲ್ಲುಗಳು ಪುಟಗೈದೂ ಹಾನಿಯೆಸಗಿದುವು. ಕೋಟೆಯೊಳಗಿನವರು ಮೂರು ಜನ ಸತ್ತರು.

ಹೊಗೆ ನಿಲ್ಲುವ ಸಮಯದಲ್ಲೇ ಫಿರಂಗಿಗಳಿಗೆ ಪುನಃ ಮದ್ದು ಚಿಲ್ಲುಗಳನ್ನು ತುಂಬುತ್ತಿದ್ದರು. ಫಿರಂಗಿ ಸೈನ್ಯದ ಅಧಿಕಾರಿಯಾಗಿ ಒಬ್ಬ ಸುಂದರ ಯುವಕ ಆದೇಶ ಕೊಡುತ್ತಿದ್ದ. ಅವನನ್ನು ಕೊಲ್ಲದೆ ನಿರ್ವಾಹವಿಲ್ಲವೆಂದು ಕೋಂಬೆಫರನೂ ಎಂಜೊಲ್ರಾಸನೂ ಮಾತಾಡಿಕೊಂಡರು. "ಅವನು ನಮ್ಮ ಸಹೋದರ ಹೌದಾದರೂ ರಾಜಮಕುಟ ಉರುಳಿ, ಮುಂದೆ ಯುದ್ಧವೇ ಇಲ್ಲದಂತಾಗಲು ಈಗ ಕರುಣೆಯನ್ನು ಬದಿಗೊತ್ತಿ ಮುಂದುವರಿಯಬೇಕಷ್ಟೆ," ಎಂದಂದುಕೊಂಡು ಕೋಂಬೆಫರ್ ಅವನಿಗೆ ಗುಂಡುಹೊಡೆದ. ಯುವ ಸೈನ್ಯಾಧಿಕಾರಿ ಸತ್ತುಬಿದ್ದ.

ಈ ತಾಡನೆಯ ಕಾರಣವಾಗಿ ಕೋಟೆಯೊಳಗಿನವರಿಗೆ ಸ್ವಲ್ಪ ಪುರಸೊತ್ತು ಸಿಕ್ಕಿತು. ಹೊರಗೆ ಹೋಗಿದ್ದ ಗಾವ್ರೋಚ್ ಒಳಗೆ ಬಂದು ಕೋಟೆಯ ಮೂರು ದಿಕ್ಕುಗಳಲ್ಲೂ ಸೈನ್ಯ ಮುತ್ತಿಗೆ ಹಾಕಿರುವುದಾಗಿ ತಿಳಿಸಿದ. ಕೋಟೆ ಬಲು ಭದ್ರವಾಗಿದೆಯೆಂದು ಕೆಲವರು ಅಂದುಕೊಂಡು ಸಮಾಧಾನ ಪಟ್ಟರು. ಆದರೆ ಕೋಂಬೆಫರ್ ನಗುತ್ತ, "ಬೋನಿನೊಳಗೆ ಬಿದ್ದಿರುವ ಹೆಗ್ಗಣ ಬೋನುಗಟ್ಟಿಯಾಗಿದೆಯೆಂದು ಸಂತೋಷಪಡುವ ಪರಿಸ್ಥಿತಿ ನಮ್ಮದು," ಎಂದನ್ನುತ್ತ ಬ್ರಾಂಡಿ ತರಿಸಿ ಎಲ್ಲರಿಗೂ ಸ್ವಲ್ಪಸ್ವಲ್ಪ ಹಂಚಿಕೊಟ್ಟ.

ಈ ಮಧ್ಯದಲ್ಲೇ ಮೇರಿಯಸ್ ಗಾವ್ರೋಚನನ್ನು ಕರೆದು ತನ್ನ ಪತ್ರದ ಬಟವಾಡೆ ಹೇಗೆ ನಡೆಯಿತೆಂದು ವಿಚಾರಿಸಿದ. ಕೋಸೆಟ್ಟ್ ನಿದ್ರೆಮಾಡಿದ್ದುದರಿಂದ, ಅವಳ ಮನೆಯ ಪಹರೆಯವನ ಹತ್ತಿರ ಚೆನ್ನಾಗಿ ವಿಚಾರಿಸಿ ಪತ್ರ ಕೊಟ್ಟಿರುವುದಾಗಿ ಗಾವ್ರೋಚ್ ತಿಳಿಸಿದ. ಆ ಪಹರೆಯವ ಮಾನ್ಸಿರ್ ಫಾಶೆಲೆವೆಂಟರೇ ಆಗಿ ಹೋಗಿಬಿಟ್ಟರೋ ಎಂಬ ಸಂಶಯ ನಿವಾರಣೆಗಾಗಿ ಅವರನ್ನು ಗಾವ್ರೋಚನಿಗೆ ತೋರಿಸಿ ಅವರ ಪರಿಚಯ ಅವನಿಗಿದೆಯೋ ಎಂದು ವಿಚಾರಿಸಿದ. ಅವರ ಪರಿಚಯ ಇಲ್ಲವಾಗಿ ಅವನು ಹೇಳಿದ್ದರಿಂದ, ಮೇರಿಯಸ್ ಪತ್ರ ಬಟವಾಡೆ ಕುರಿತು ಸಮಾಧಾನ ತಳೆದ.

೫. ಅರುಣೋದಯ

ಅರುಣೋದಯದಲ್ಲೇ ಕೋಸೆಟ್ಟಿ ಎದ್ದಳು. ಕೆಲವೇ ಗಂಟೆ ಕಾಲ ಅವಳು ನಿದ್ರಿಸಿದ್ದರೂ ಆ ನಿದ್ರೆ ಪರಿಪೂರ್ಣತರದ್ದಾಗಿತ್ತು, ಅವಳ ದೇಹಮನಸ್ಸುಗಳಿಗೆ ಸಂಪೂರ್ಣ ವಿಶ್ರಾಂತಿಯನ್ನಿತ್ತಿತ್ತು. ಮಂಜು ಮೋಡಗಳಿಲ್ಲದ ಸುಪ್ರಭಾತದ ಸೂರ್ಯೋದಯದಂತೆ, ಬೆಳಗ್ಗೆ ಕೋಸೆಟ್ಟಿಯೂ ಚೈತನ್ಯ, ತೇಜಸ್ಸು, ಆಹ್ಲಾದಪೂರಿತಳಾಗಿ "ಉದಯಿಸಿದ್ದಳು." ಇಂಥ ಆನಂದಮಯ ಸಮಯ ದಲ್ಲಿ ಅವಳು ಮೇರಿಯಸನನ್ನು ನೆನಪುಮಾಡಿಕೊಂಡದ್ದೇನೂ ಆಶ್ಚರ್ಯವಲ್ಲ. ಸದಾ ಅವನ ಚಿಂತನೆಯಲ್ಲೇ ಇರುತ್ತಿದ್ದ ಕೋಸೆಟ್ಟಿಗೆ ತನ್ನ ಮನಸ್ಸು ಆನಂದಭರಿತವಾಗಿರುವಾಗಲಂತೂ ಮೇರಿಯಸ್ ಎಂದಿಗಿಂತಲೂ ಪ್ರಿಯಕರನಾಗಿ ತೋರುತ್ತಿದ್ದ. ಅವನ ದರ್ಶನವನ್ನೂ ಕೊನೆಯ ಪಕ್ಷ, ಅವನ ಪತ್ರವನ್ನಾದರೂ ಅವಳು ಕಾತರತೆಯಿಂದ ನಿರೀಕ್ಷಿಸುತ್ತಿದ್ದಳು. ಅವಳ ಕೋಮಲ ಹೃದಯದಲ್ಲಿ ದುಃಖದ ಯಾವ ಚಿಕ್ಕ ರೇಖೆಯೂ ಇರಲಿಲ್ಲ. ಮೇರಿಯಸನನ್ನು ನೆನೆನೆನೆದು ಅವನ ಕುರಿತಾದ ಅವಳ ನಿರೀಕ್ಷಣೆಯ ತೀಕ್ಷ್ಣತೆಯನ್ನು ಮಾತ್ರ ಹೆಚ್ಚಿಸಿಕೊಂಡಿದ್ದಳು. ಹಕ್ಕಿಗಳು ಆಕಾಶ ದಲ್ಲಿ ಹಾರಾಡಿ ಸೂರ್ಯೋದಯ ನಿರೀಕ್ಷಿಸುವಂತೆ ಈ ದಿನ ಅರುಣೋದಯದಲ್ಲಿ ಕೋಸೆಟ್ಟಿಯ ಮನಸ್ಸು ಮನೋಮಯ ಆಕಾಶದಲ್ಲಿ ಹಾರಾಡುತ್ತ ಮೇರಿಯಸನ ಉದಯವನ್ನು ಆನಂದದಿಂದ ನಿರೀಕ್ಷಿಸುತ್ತಿತ್ತು.

ಕಾನ್ವೆಂಟಿನಲ್ಲಿ ಶಿಕ್ಷಣ ಪಡೆದಿದ್ದ ಕೋಸೆಟ್ಟಿ ಸದಾ, ಎದ್ದಕೂಡಲೇ ದೇಹ ಮನಸ್ಸುಗಳೆರಡಕ್ಕೂ ಮಾರ್ಜನಮಾಡುವ ಕ್ರಮವನ್ನಿಟ್ಟುಕೊಂಡಿದ್ದಳು. ಆ ಪ್ರಕಾರ ಮುಖತೊಳೆದು, ದೇವರ ಪ್ರಾರ್ಥನೆಮಾಡಿ, ಹೊಸ ಉಡುಪು ತೊಡಲು ತನ್ನ ಚಿಕ್ಕ ಅಂದದ ಕೋಣೆ ಪ್ರವೇಶಿಸಿದಳು.

ನಾವು ಒಮ್ಮೊಮ್ಮೆ ವಾಚಕರನ್ನು ಸ್ತ್ರೀಯರ ರತಿಕ್ರೀಡಾಂಗಣಕ್ಕೆ ಕರೆದುಕೊಂಡು ಹೋಗುವ ಪದ್ಧತಿ ಇದೆಯಷ್ಟೆ. ಆದರೆ, ಹಾಗೆ ಕರೆದುಕೊಂಡು ಹೋಗುವುದೂ ನಿರ್ವಾಹವಿಲ್ಲದಿದ್ದಾಗ ಮಾತ್ರವೆಂದು ವಾಚಕರು ತಿಳಿದಿರಬಹುದು. ಆದರೆ, ತಾರುಣ್ಯಕ್ಕೆ ಸದ್ಯ ಪ್ರವೇಶಿಸಲಿರುವ ಸ್ತ್ರೀತ್ವವನ್ನರಿಯದ ಪವಿತ್ರ ಕನ್ನಿಕೆಯರ ಅಂತಃಪುರವನ್ನು ಇಣುಕಿನೋಡಲು ಸಹ ನಾವು ಹಿಂಜರಿ ಯುವೆವು. ನವತರುಣಿಯರ ಗುಪ್ತ ಶೃಂಗಾರಗೃಹ ನಮಗೆ ಪವಿತ್ರವೂ ಭಕ್ತಿಪ್ರೇರಕವೂ ಆಗಿದೆ. ತರುಣಿಯರು ಹೂಗಳ ಮೊಗ್ಗುಗಳಂತೆ ತುಂಬ ಲಜ್ಜಾನ್ವಿತರು. ಅದು ಸ್ವಾಭಾವಿಕ. ಹೂವಿನ ಮೊಗ್ಗಿಗೆ ಇರುವ ನಾಚಿಕೆ ಹೂವಿಗೆ ಇಲ್ಲವಷ್ಟೆ. ಶುಭ್ರಧವಳ ವರ್ಣದಲ್ಲಿ ದೇವರು ನಿರ್ಮಿಸಿದ್ದ ಹೂವನ್ನು ಒಮ್ಮೆ ಮನುಷ್ಯ ನೋಡಿ, ಆ ಹೂ ನಾಚಿಕೊಂಡು ಕೆಂಪಾದದ್ದರಿಂದಲೇ ಇಂದು ಅದರ ನಡು ನಸುಗೆಂಪು ಎಂಬ ಕಥೆಯುಂಟು. ಮೊಗ್ಗನ್ನು ನೋಡಿ ಅರಳಿಸುವ ಹಕ್ಕು ಸೂರ್ಯ ನಿಗೆ ಮಾತ್ರ ಇರುವಂಥಾದ್ದು. ಮೊಗ್ಗಿನ ಮುಖವನ್ನು ಮನುಷ್ಯ ಅದು ಅರಳಿದ ಮೇಲೆ ಮಾತ್ರ ನೋಡಬಲ್ಲ. ಮೊಗ್ಗು ಹೂಗಳಂತೆ ತಾರುಣ್ಯಕ್ಕಿರುವ ನಾಚಿಕೆ ಪ್ರೌಢ ವಯಸ್ಸಿಗೆ ಇಲ್ಲ. ಈ ಕಾರಣ ಗಳಿಂದಲೇ ನಾವು ಕೋಸೆಟ್ಟಿಯ ಅಂತಃಪುರವನ್ನು ಪ್ರವೇಶಿಸಲು ಅಂಜುವೆವು. ಲಂಗ ಧರಿಸು ತ್ತಿರುವಾಗ ಬಾಗಿಲ ಬಿಜಾಗ್ರ ಸದ್ದುಮಾಡಿದರೆ ನಾಚಿ ಕೆಂಪಾಗುವ ಕೋಸೆಟ್ಟಿಯನ್ನು ನಾವು ನೋಡುವುದು ತಾನೇ ಹೇಗೆ? ಮುಖವನ್ನು ಒರೆಸಿ, ಕನ್ನಡಿ ನೋಡುತ್ತ, ರವಕೆತೊಡುವಾಗ, ಕನ್ನಡಿಯೇ ಮತ್ತೊಬ್ಬನೆಂದು ಚಕಿತಳಾಗುವ ಚೆಲುವೆಯನ್ನು ನಾವು ಹೊರನಿಂತೇ ಪೂಜಿಸ ಬೇಕಷ್ಟೆ. ನುಣ್ಣಗಿದ್ದು ತುಂಬಿ ದುಂಡಾಗಿರುವ ಅಂಗಗಳೂ, ಬಿಳುಪೂ ಅಲ್ಲ, ಕೆಂಪೂ ಅಲ್ಲ, ಗುಲಾಬಿಯೂ ಅಲ್ಲ, ಆದರೂ ಇವೆಲ್ಲವೂ ಹೌದೆಂಬ ಚಮತ್ಕಾರದ ವರ್ಣವಿನ್ಯಾಸದಿಂದ

ತೋರುವ ಮೈಬಣ್ಣ ಇದ್ದು, ಸೂರ್ಯನ ಸೌಂದರ್ಯವನ್ನು ಮರೆಮಾಡಿ, ವೃದ್ಧಿಸಿ, ತೋರಿಸಬಲ್ಲ ಕಿರುಮೋಡ ಗಳಂತಿರುವ ಬಿಳಿದಾದ ತೆಳು ಬಟ್ಟೆಗಳನ್ನು ಧರಿಸಿಕೊಂಡು, ದೇವಕನ್ಯೆಯೇ ಎದುರು ಬರುತ್ತಿರುವಂತೆ ತೋರುವ ಕೋಸೆಟ್ಟೆಯನ್ನು ಅವಳ ಮಹಡಿ ಕೋಣೆಯ ಬಾಗಿಲ ಹೊರಗೆ ಮಾತ್ರ ನಿಂತು ನೋಡೋಣ. ಹೀಗೆ ನೋಡುತ್ತಿರುವಾಗಲೇ ಹಿಮಕ್ಕಿಂತ ಮೃದುವಾಗಿಯೂ ಬಿಳಿದಾಗಿಯೂ ಇದ್ದ ತನ್ನ ಕೋಮಲ ಪಾದಗಳನ್ನು ಪಾದರಕ್ಷೆಗಳೊಳಗೆ ಅಡಗಿಸಿಟ್ಟುಕೊಂಡು ಕೋಸೆಟ್ಟೆ ಕೋಣೆಯ ಹೊರಗೆ ಬಂದು ರಸ್ತೆ ಕಡೆ ನೋಡಿದಳು.

ಹೀಗೆ ನೋಡುತ್ತ ನಿಂತಿರುವಾಗ ಕೋಸೆಟ್ಟೆಯ ಆನಂದಭಾವ ದುಃಖಮಿಶ್ರಿತವಾಗ ತೊಡಗಿತು. ಆಲೋಚನಾತರಂಗಗಳು ಕಣ್ಣಿಗೆ ಕಾಣಿಸದಿದ್ದರೂ ಹೃದಯಕ್ಕೆ ಕಾಣಿಸಿಕೊಂಡು ದಡಕ್ಕೆ ತಲಪುವಂತೆ ಅವಳ ಹೃದಯಕ್ಕೆ ಬಂದು ಬಡಿಯುತ್ತಿದ್ದುವು. ಯಾವುದೋ ತಿಳಿಯಲಸಾಧ್ಯ ವಾದ ಕಾರಣಗಳಿಂದ ಕೋಸೆಟ್ಟೆಗೆ ಮೇರಿಯಸನ ಕುರಿತಾಗಿ ಭಯವುಂಟಾಯಿತು. ಮೇರಿಯಸ್ ನೆಲದ ಮೇಲಾಗಿ ತನ್ನೆದುರು ಬರುವ ಬದಲು ಆಕಾಶಮಾರ್ಗವಾಗಿ ಅಶರೀರಿಯಾಗಿ ಬರುವನೆಂಬ ಭಾವನೆ ಮನಸ್ಸಿನಲ್ಲಿ ಮೂಡಿತು. ಆ ಮೃದುಹೃದಯಕ್ಕೆ ಇಷ್ಟೇ ಸಾಕಿತ್ತು. ಅವಳು ಕಂಬನಿ ಮಿಡಿದಳು. ಮತ್ತೆ ಹಗುರವಾಗಿ ನಕ್ಕಳು. ತನ್ನ ತಂದೆಯೇ ತನ್ನನ್ನು ಹಿಂಸಿಸುತ್ತಿರುವನೆಂದು ಗ್ರಹಿ ಸುತ್ತ ದುಃಖಿಸಿದಳು. ಆದರೆ, ಈ ಎಲ್ಲ ಚಿಂತೆಗಳ ನಡುವೆ, ದೇದೀಪ್ಯಮಾನವಾಗಿ, ಸಕಲ ದುಃಖ ಪರಿಹಾರ ಶಕ್ತಿಯುತ ಮೇರಿಯಸ್ ಮನಸ್ಸಿನ ಎದುರು ಸದಾ ನಿಂತಿರುತ್ತಿದ್ದುದನ್ನೇ ಕಂಡು ಧೈರ್ಯತಂದುಕೊಳ್ಳುತ್ತಿದ್ದಳು.

ಈ ಮಾನಸಿಕ ತಳಮಳದ ನಡುವೆ ದೂರದಿಂದ ಫಿರಂಗಿ ಬಂದೂಕುಗಳ ಶಬ್ದವೂ ಕೇಳಿಬರು ತ್ತಿತ್ತು. ಭೂಮಿಯಲ್ಲಿ ನಿಂತು, ದುಃಖದಿಂದ ನೊಂದು ಬಳಲಿದ್ದ ಕೋಸೆಟ್ಟೆ ಆಕಾಶದ ವೈಶಾಲ್ಯ ವನ್ನಾದರೂ ನೋಡಿ ಸಮಾಧಾನಪಡೆಯಬೇಕೆಂದು ಕಿಟಕಿಯ ಹೊರಗೆ ತಲೆಹಾಕಿ ಆಕಾಶವನ್ನು ನೋಡಿದಳು. ಆಗ ಮಾಡಿನ ಸೆರೆಯಲ್ಲಿ ಒಂದು ಹಕ್ಕಿಯ ಗೂಡನ್ನೂ, ತನ್ನಂತೆಯೇ ನಿಶ್ಶಕ್ತವಾಗಿ ಅಡಗಿದ್ದ ಹಕ್ಕಿಮರಿಗಳನ್ನೂ ಕಂಡಳು. ಆಗ ಗಂಡುಹಕ್ಕಿ ಗಗನದಲ್ಲಿ ಹಾಡುತ್ತ ಹಾರಾಡಿ, ತನ್ನ ಚಿಕ್ಕ ಮರಿಗಳಿಗೆ ಆಹಾರವನ್ನೂ ಮಮತೆಯ ಮುತ್ತನ್ನೂ ತಂದುಕೊಡುತ್ತಿತ್ತು.

೬. ಕ್ಷಣಿಕ ಮಿಂಚುಗಳು

ಸೈನ್ಯಕ್ಕೆ ಜನಬಲ, ಶಸ್ತ್ರಬಲ ಬೇಕಾದಷ್ಟು ಇದ್ದುದರಿಂದ ಸೈನಿಕರು ಫಿರಂಗಿಗಳನ್ನೂ ಬಂದೂಕು ಗಳನ್ನೂ ಹಾರಿಸುತ್ತಲೇ ಇದ್ದರು. ಆದರೆ ಕ್ರಾಂತಿಕಾರರಿಗೆ ಇವೆರಡೂ ಕಡಿಮೆಯಾಗಿ ಅವರು ಅದೇ ವಿಧದ ಯಾವ ಮರುತ್ತರವನ್ನೂ ಕೊಡಲಾಗದೆ, ತಾವು ಬಳಸುವ ಗುಂಡುಗಳು ಪ್ರಯೋ ಜನ ಬೀಳುವ ಪರಿಸ್ಥಿತಿಯನ್ನು ಎದುರು ನೋಡುತ್ತಿದ್ದರು. ಈ ಪಕ್ಷದವರು ಪ್ಯಾರಿಸಿನ ಅನೇಕ ಕಡೆ ಏಕಕಾಲದಲ್ಲಿ ದಂಗೆ ಎದ್ದುದರಿಂದ ತಮ್ಮ ಸಮಗ್ರಬಲವನ್ನು ಗ್ರಹಿಸಿಕೊಂಡು, ಇಂದು ಶುಭನಿರೀಕ್ಷಣೆಯಲ್ಲೇ ಇದ್ದರು.

ತಾವು ಎಷ್ಟೇ ಗುಂಡು ಹೊಡೆದರೂ ಕೋಟೆಯೊಳಗಿನಿಂದ ಯಾವ ವಿಧದ ಪ್ರತಿಕ್ರಿಯೆಯೂ ಬರದಿದ್ದುದನ್ನು ಕಂಡು ಸೈನಿಕರು ಆಶ್ಚರ್ಯಪಡುತ್ತಿದ್ದರು. ಪ್ರೇಮದಲ್ಲೂ ಯುದ್ಧದಲ್ಲೂ ಯಾವ ಗೂಢತಂತ್ರಗಳೂ ನಡೆದು ಹೋಗಬಹುದೆಂಬ ವಾಡಿಕೆಯ ಅಭಿಪ್ರಾಯದಂತೆ ತಡೆ ಗೋಡೆಯೊಳಗಿನವರು ಇನ್ನೊಂದು ಕ್ಷಣದಲ್ಲಿ ಏನು ಮಾಡಬಹುದೆಂಬ ಸಂಶಯವೇ ಸೈನಿಕರನ್ನು

ಬಾಧಿಸುತ್ತಿತ್ತು. ಇದಕ್ಕಾಗಿ ಸೈನಿಕರಿಬ್ಬರು ಪಕ್ಕದ ಒಂದು ಮಹಡಿಗೆ ಹತ್ತಿಹೋಗಿ ಅಲ್ಲಿಂದ ತಡೆಗೋಡೆಯೊಳಗಿನ ಸ್ಥಳವನ್ನು ಇಣುಕಿ ನೋಡಿದರು. ಈ ಸೈನಿಕರನ್ನು ಕಂಡೊಡನೆಯೇ ಜೀನ್‌ವಾಲ್‌ಜೀನ್ ಅವರ ತಲೆಯ ಮೇಲಿದ್ದ ಲೋಹದ ಟೊಪ್ಪಿಗಳಿಗೆ ಮಾತ್ರ ಗುಂಡು ಹೊಡೆದು ಅವನ್ನು ಹಾರಿಸಿಬಿಟ್ಟ. ಇದರಿಂದ ಅವರು ಹೆದರಿ ಹಿಂತಿರುಗಿದರು.

ಆದರೆ ಈ ತೆರನಾದ ವಿಳಂಬವನ್ನು ಸಹಿಸದ ಸೈನ್ಯದ ದಳಪತಿ ಮೂವತ್ತು ಜನರ ಒಂದು ಗುಂಪು ತಡೆಗೋಡೆಯನ್ನೇರಿ ಹೋಗಿ ಒಳನುಗ್ಗಲು ಆಜ್ಞೆಯಿತ್ತ. ಆಗಲೇ ಎಂಜೊಲ್ರಾಸನ ಅಪ್ಪಣೆ ಪ್ರಕಾರ ಒಳಗಿನವರು ಅವರಿಗೆ ಗುಂಡುಹೊಡೆದರು, ತಾನು ಮಹಾಸಾಹಸ ನಡೆಸಿ ಹೆಸರು ಪಡೆಯಬೇಕೆಂದಿದ್ದ ದಳಪತಿಯ ಕಣ್ಣೆದುರಲ್ಲೇ ಹದಿನೈದು ಜನ ಸೈನಿಕರು ಮಡಿದುಬಿದ್ದರು. ಇದೇ ಹೊತ್ತಿಗೆ ಸೈನ್ಯ ತಡೆಗೋಡೆಗೆ ಫಿರಂಗಿ ಹೊಡೆಯಲಾರಂಭಿಸಿತು. ಈ ಒಂದು ಆಕಸ್ಮಿಕ ತಪ್ಪಿನಿಂದ, ಆ ಮೂವತ್ತು ಜನರ ಪೈಕಿ ಉಳಿದಿದ್ದ ಹದಿನೈದರಲ್ಲೂ ಕೆಲವರು ಸತ್ತರು. ಈ ರೀತಿ ತಾತ್ಕಾಲಿಕವಾಗಿ ಪ್ರಜಾಪಕ್ಷದವರು ಸೈನಿಕರನ್ನು ತಡೆದು ನಿಲ್ಲಿಸಿದರು.

೭. ವೀರಬಾಲಕನ ಧೀರ ಮರಣ

ಸೈನಿಕರು ತಡೆಗೋಡೆಗೆ ಎಡೆಬಿಡದೆ ಫಿರಂಗಿ ಹೊಡೆಯುತ್ತಿದ್ದ ಈ ವ್ಯರ್ಥಖರ್ಚನ್ನೂ ಅಬ್ಬರವನ್ನೂ ಕಂಡು ಕೋಟೆಯೊಳಗಿನವರು ನಗುತ್ತಿದ್ದರು. ಪ್ರಜಾಪಕ್ಷದವರಿಗೆ ಊಟವಿಲ್ಲದೆ ಬಹಳ ಕಾಲವಾಗಿತ್ತು. ಆಹಾರವಿಲ್ಲದೆ ಹಸಿವೆಯನ್ನು ಹಾಸ್ಯವಿನೋದಗಳಿಂದ ತಣಿಸಿ ಸರಿಪಡಿಸಿಕೊಳ್ಳುತ್ತಿದ್ದರು. ವೈನೂ ಇಲ್ಲದೆ, ಅಮಲನ್ನು ಬಯಸಿದಾಗ, ಬುದ್ಧಿವಂತಿಕೆಯ ನಗುವನ್ನೇ ಅಮಲಾಗಿ ಸೇವಿಸಿ ತೃಪ್ತಿಪಟ್ಟುಕೊಳ್ಳುತ್ತಿದ್ದರು. ಹೀಗೆ ಒಬ್ಬರನ್ನೊಬ್ಬರು ತಮಾಷೆ ಮಾಡಿಕೊಂಡು ವಾಚಾಳಿಯಾದ ಬೋಸೆಟ್ ಎಂಜೊಲ್ರಾಸನನ್ನು ಲಘುಗೇಲಿ ಮಾಡುತ್ತಿದ್ದ. ಬೋಸೆಟ್ ಕೋಂಬೆಫರನೊಂದಿಗೆ, "ಎಂಜೊಲ್ರಾಸ್ ಮೌನವಾಗಿರುವನು ಮಾತ್ರವಲ್ಲ, ಆವೇಶರಹಿತನಾಗಿ, ಸ್ಥಿತಪ್ರಜ್ಞನಂತೆ ಇರುವನಷ್ಟೆ, ನಾವೇಕೆ ಹಾಗಿರಲಾರೆವು?" ಎಂದು ಕೇಳಿದ. ಅದಕ್ಕೆ ಕೋಂಬೆಫರ್, "ಎಂಜೊಲ್ರಾಸನೊಬ್ಬ ವಿಚಿತ್ರ ಪುರುಷ. ಅವನು ಮಂಜಾಗಿದ್ದಾಗಲೇ ಬೆಂಕಿಯಾಗಿಯೂ ಇರಬಲ್ಲ. ಅದೊಂದು ವಿಧದ ಆಸಕ್ತರಹಿತ ಕಾರ್ಯತತ್ಪರತಾಗುಣ. ಅದಕ್ಕೆ ಮನಸ್ಸಿನ ಸ್ಥಿರತೆ ಆವಶ್ಯಕ. ನಮ್ಮ ಮನಸ್ಸು ಬಲು ಚಂಚಲ. ನಾವು ಮದ್ದುತುಂಬಿದ ಕೋವಿಗಳಂತಿರುವೆವು. ನಮ್ಮ ಆಸ್ಫೋಟನಕ್ಕೆ ತಕ್ಕದಾದ ಮದ್ದು ನಮ್ಮ ಸೂಳೆಯರು ಮತ್ತು ಪ್ರೇಯಸಿಯರು, ನಮ್ಮ ಮರಣದಿಂದ ವಿಧವೆಯರಾಗಬಹುದೆಂಬ ಭಯವೇ ನಮಗಿರುವ ಆರಂಭದ ಸ್ಫೋಟಕ ಕಿಡಿ. ಅರ್ಥಾತ್ ನಮ್ಮ ಸರ್ವಶಕ್ತಿಗಳ ಭಂಡಾರ ನಮ್ಮ ಸೂಳೆಯರು," ಎಂದಂದುಕೊಂಡು ನಕ್ಕ.

ಈ ವಿಧದ ಅಶ್ಲೀಲ ನುಡಿಗಳನ್ನು ಎಂಜೊಲ್ರಾಸ್ ಮೆಚ್ಚುತ್ತಿರಲಿಲ್ಲ. ಅವನು ಆತ್ಮಗತವಾಗಿ ಅಂದುಕೊಂಡ, "ನನ್ನ ಸ್ಫೂರ್ತಿಗೆ ಆಧಾರವಸ್ತು ನನ್ನ ದೇಶ."

ಇಷ್ಟುಹೊತ್ತಿಗೆ ಸೈನ್ಯ ಯುದ್ಧವನ್ನು ಆರಂಭಿಸಿತು. ಈ ಸರ್ತಿ ಅದು ಹೊಸತೊಂದು ಫಿರಂಗಿ ತಂದಿತ್ತು. ಈಗ ಎರಡೂ ಫಿರಂಗಿಗಳು ಗುಂಡು ಹಾರಿಸಲಾರಂಭಿಸಿದುವು. ಕೋಟೆಯೊಳಗಿನವರು ಒಮ್ಮೆ ತಮ್ಮ ಬಂದೂಕುಗಳಿಂದ ಉತ್ತರಕೊಟ್ಟರು. ತಮ್ಮಲ್ಲಿ ತೋಟೆ ಮುಗಿಯುತ್ತ ಬಂದಿದ್ದುದರಿಂದ ಪ್ರಜಾಪಕ್ಷದವರು ಸಮಯ, ಸಂದರ್ಭಗಳನ್ನು ನೋಡಿ ಗುಂಡುಹಾರಿಸುತ್ತಿದ್ದರು.

ಹೀಗೆ ತೋಟೆ ಮುಗಿಯುತ್ತ ಬಂದಿದ್ದ ಸಂಗತಿ ಗಾವ್ರೋಚನಿಗೆ ತಿಳಿದದ್ದೇ ತಡ, ಅವನು

ತಡೆಗೋಡೆಯನ್ನು ತಟಕ್ಕನೆ ಏರಿದ. ಇಂಥ ಅಪಾಯಕರ ಸಾಹಸ ಮಾಡಬಾರದೆಂದು ಅವರೆಲ್ಲರೂ ಹೇಳುತ್ತಿದ್ದ ಹಾಗೆಯೇ, ತನ್ನ ಕೈಯಲ್ಲೊಂದು ಚೀಲ ಹಿಡಿದುಕೊಂಡು, ತಡೆಗೋಡೆಯಿಂದ ಕೆಳಗಿಳಿದು ಶತ್ರುಸೈನ್ಯದ ಶವಗಳ ಮಧ್ಯಕ್ಕೆ ತಲಪಿದ. ಇಷ್ಟೊಂದು ಚಿಕ್ಕ ಬಾಲಕ ಅಲ್ಲಿ ಬಂದದ್ದನ್ನು ಕಂಡು ಸೈನಿಕರು ಮೊದಲು ಅವನ ಕುರಿತು ವಿಶೇಷ ಗಮನಕೊಡಲಿಲ್ಲ. ಅಲ್ಲದೆ, ಅಲ್ಲಿ ಮೊದಲೇ ತುಂಬಿದ್ದ ಹೊಗೆಯೂ ಪೂರ್ಣ ಹೋಗಿರಲಿಲ್ಲ. ಗಾವ್ರೋಚ್ ಬಲು ಚುರುಕಿನಿಂದ ಶವಗಳು ಧರಿಸಿಕೊಂಡಿದ್ದ ಅಂಗಿಜೇಬುಗಳಿಂದ ತೋಟೆಗಳನ್ನು ತೆಗೆದು ತನ್ನ ಚೀಲದಲ್ಲಿ ಸಂಗ್ರಹಿಸತೊಡಗಿದ. ಹೀಗೆ ಇವನು ಕಾರ್ಯತತ್ಪರನಾಗಿದ್ದುದನ್ನು ಸ್ವಲ್ಪ ಸಮಯದಲ್ಲಿ ಸೈನಿಕರು ಕಂಡರು, ತಿಳಿದರು. ಆಗಲೇ ಗಾವ್ರೋಚ್ ಶೋಧಿಸುತ್ತಿದ್ದ ಶವಕ್ಕೆ ಒಂದು ಗುಂಡುಬಿತ್ತು. "ಸತ್ತವನನ್ನು ಮತ್ತೂ ಸಾಯಿಸಲು ಪ್ರಯತ್ನಿಸುವವರೆಂಥ ಬುದ್ಧಿಶೂನ್ಯರು," ಎಂದೆಂದುಕೊಂಡು ಅವನು ತನ್ನ ಕೆಲಸಮಾಡುತ್ತ ಹೋದ. ಆಗ ಮತ್ತೊಂದು ಗುಂಡುಬಿದ್ದು ಇವನ ಕೈಯಲ್ಲಿದ್ದ ಚೀಲವನ್ನು ಉರುಳಿಸಿತು. ಗಾವ್ರೋಚ್ ನಕ್ಕ. ಶತ್ರು ಗುಂಡುಗಳು ಪುನಃ ಪುನಃ ಬರತೊಡಗಿದರೂ ಇವನಿಗೇ ತಾಗದೆ, ಇವನನ್ನು ಹೆದರಿಸುತ್ತಿರುವಂತೆ ತೋರಿದುವು. ಆದರೆ, ಮೆಲ್ಲಮೆಲ್ಲಗೆ ಪರಿಸ್ಥಿತಿಯ ಭೀಷಣತೆಯನ್ನು ಅವನು ತಿಳಿದ. ಆದರೆ, ಅವನು ಓಡಲಿಲ್ಲ, ಅವನು ಒಂದು ವಿಧದ ಉನ್ಮತ್ತತೆಯಿಂದ ಉದ್ರೇಕಗೊಂಡ. ಉನ್ಮತ್ತನಾಗಿಯೇ ಒಂದು ಪದವನ್ನು ಹಾಡುತ್ತ ತನ್ನ ಕಾರ್ಯ ಮಾಡಲುದ್ಯುಕ್ತನಾದ. ಆಗ ಒಂದು ಗುಂಡು ಅವನ ತಲೆಯನ್ನು ಒರೆಸಿ ಗಾಯಮಾಡಿಕೊಂಡು ಹಾರಿಹೋಯಿತು. ಗಾವ್ರೋಚ್ ರಕ್ತಸುರಿಸಿಕೊಂಡು ನೆಲಕ್ಕೆ ಉರುಳಿದ. ಗಾವ್ರೋಚ್ ಸತ್ತನೆಂದು ಕೋಟೆಯೊಳಗಿದ್ದವರೆಲ್ಲ ಗೊಳ್ಳೆಂದು ಕೂಗಿದರು. ಆತ ಸತ್ತಿರಲಿಲ್ಲ. ವೀರ ಗಾವ್ರೋಚನ ತೊಡೆಗೆ ಪೆಟ್ಟಾಗಿದ್ದುದರಿಂದ ಅವನಿಂದ ಎದ್ದು ನಿಲ್ಲಲು ಆಗಲಿಲ್ಲ. ಆದರೂ, ತನ್ನ ಜೀವಮಾನವೆಲ್ಲ, ಹಾಸ್ಯ, ವಿನೋದ, ಸಾಹಸಗಳಿಂದ ಮೆರೆದು ಬಂದ ಗಾವ್ರೋಚ್ ಆ ಎಲ್ಲ ಶಕ್ತಿಗಳನ್ನು ಒಮ್ಮೆಗೇ ಒಟ್ಟುಗೂಡಿಸಿಕೊಂಡವನಂತೆ ಸೊಂಟದಿಂದ ಮೇಲ್ಭಾಗ ಮಾತ್ರ ನೆಟ್ಟಗಿರಿಸಿಕೊಂಡು, ವೀರ ಉತ್ಸಾಹ ಉನ್ಮತ್ತತೆಯಿಂದ, ಒಂದು ಪದ ಹಾಡಿದ. ತನ್ನ ವೀರ ಮುಖಭಂಗಿಯನ್ನು ಶತ್ರುಗಳಿಗೆ ತೋರಿಸಿ ಹಾಡಿದ ಹಾಗೆಯೇ ಇನ್ನೊಂದು ಗುಂಡು ಬಂದು ಅವನನ್ನು ನೆಲಕ್ಕೆ ಉರುಳಿಸಿತು. ಕಲ್ಲು ಮಣ್ಣುಗಳಿಗೆ ಬಾಯಿಮುಖವನ್ನಿಟ್ಟು ಬಿದ್ದ ಗಾವ್ರೋಚ್ ಮತ್ತೆ ಏಳಲಿಲ್ಲ. ಈ ರೀತಿ ಅಣುವಾಗಿ ತೋರುತ್ತ ಮಹತ್ತನ್ನೇ ಗೈದ ಗಾವ್ರೋಚ್ ಪ್ರಜಾಪಕ್ಷಕ್ಕೆ ತನ್ನ ಜೀವವನ್ನು ವೀರಸಾಹಸದಿಂದ ಅರ್ಪಿಸಿದ.

೮. ತಂದೆಯ ಸ್ಥಾನಕ್ಕೆ ಅಣ್ಣ

ಜೂನ್ ೬, ೧೮೩೨ರ ಬೆಳಗ್ಗೆ ಗಾವ್ರೋಚನ ತಮ್ಮಂದಿರು ಲಕ್ಸಂಬರ್ಗಿನ ಉದ್ಯಾನವನದಲ್ಲಿ ಅಲೆಯುತ್ತಿದ್ದರು. ಆನೆಯ ಒಳಗಿನಿಂದ ಹೊರಬಂದಿದ್ದ ಬಾಲಕರು ಕ್ರಾಂತಿಯ ಗಲಭೆ, ಗಾಬರಿಗಳಲ್ಲಿ ಸಿಕ್ಕಿ, ಭಯದಿಂದ ಓಡಿ, ಹೇಗೋ ಈ ಉದ್ಯಾನವನಕ್ಕೆ ತಲಪಿ ಅಡಗಿಕೊಂಡು ಇದ್ದರು. ಕಿರಿಯಬಾಲಕ ಹಿರಿಯನ ಮುಖ ನೋಡಿ, "ಅಣ್ಣಾ ಹಸಿವೆಯಾಗುತ್ತದೆ," ಎಂದು ಆಗಿಂದಾಗ ಮುಲುಗುತ್ತಿದ್ದ. ದುಃಖ ಮತ್ತು ವಿಪತ್ ಕಾಲಗಳಲ್ಲಿ ಇನ್ನೊಬ್ಬರು ನಮ್ಮನ್ನು ಒಂದು ಆಧಾರವಾಗಿ ಪರಿಗಣಿಸಿ ನೋಡುವುದರಿಂದಲೇ ನಮಗೊಂದು ವಿಧದ ಧೈರ್ಯವೂ ಶಕ್ತಿಯೂ ಅಧಿಕಾರವೂ ಬರುವುದು ಸ್ವಾಭಾವಿಕ. ಈಗ, ತಮ್ಮನ ಮಾತುಗಳಿಂದ ಅಣ್ಣ ಧೈರ್ಯ

ಗೊಂಡು, ತಮ್ಮನ ತಂದೆಯ ಸ್ಥಾನ ತಳೆದವನಂತೆ, ಆ ಕಿರಿಯನನ್ನು ಹೇಗೋ ಮಾತುಗಳಿಂದ ಸಮಾಧಾನಪಡಿಸುತ್ತಿದ್ದ. ಹಿಂದಿನ ರಾತ್ರಿ ಪೂರ್ತಿ ಮಳೆಯಲ್ಲೂ ಅವರು ಈ ಉದ್ಯಾನದಲ್ಲೇ ಉಳಿದಿದ್ದರೆಂದು ತೋರುತ್ತದೆ. ಏಕೆಂದರೆ, ಅವರು ಈ ಬೆಳಗ್ಗೆ ಬಿಸಿಲು ಆಶ್ರಯಿಸಿ, ಸರೋವರದ ಅಂಚಿನಲ್ಲಿ, ಬಿಸಿಲಲ್ಲೇ ನಿಂತಿದ್ದರು.

ಹಿಂದಿನ ರಾತ್ರಿಯ ಮಳೆಯಿಂದ ಹೂ, ಬಳ್ಳಿ, ಗಿಡ, ಮರ, ಹುಲ್ಲು ಎಲ್ಲ ತೊಯ್ದು, ಈ ಬೆಳಗ್ಗೆ ಒಂದು ವಿಶೇಷದ ಮಿರುಗಿನಿಂದ ಶೋಭಿಸುತ್ತಿದ್ದುವು. ಹೂಗಳಂತೂ ಆನಂದಬಾಷ್ಪ ದಿಂದ ಸೂರ್ಯನನ್ನೇ ನೋಡುತ್ತಿದ್ದುವು. ಹಕ್ಕಿಗಳ ಹಾಡು ಎಂದಿಗಿಂತಲೂ ಸವಿಯಾಗಿ ಕೇಳಿ ಬರುತ್ತಿತ್ತು. ಹೀಗೆ ಪಕ್ಷಿ, ಕ್ರಿಮಿ, ಕೀಟ, ವನಸ್ಪತಿಗಳು ಮಳೆಯಿಂದಲೂ, ಸೂರ್ಯರಶ್ಮಿ ಯಿಂದಲೂ ಸಂತೃಪ್ತವಾಗಿ ಆನಂದದಿಂದ ಇದ್ದ ಪ್ರಾತಃಕಾಲದಲ್ಲೇ ಈ ಇಬ್ಬರು ಬಾಲಕರು ಆಹಾರ ಆಶ್ರಯಗಳಿಲ್ಲದೆ ತಾವು ಉದ್ಯಾನವನದಲ್ಲಿ ಇರುವುದೇ ಅಪರಾಧವಾಗಿರಲೂ ಬಹು ದೆಂದು ಅಂಜುತ್ತ ಸರೋವರದಲ್ಲಿ ಈಜಾಡುತ್ತಿದ್ದ ಹಂಸಗಳನ್ನು ನೋಡುತ್ತ ನಿಂತಿದ್ದರು.

ಆಗ ಅದೇ ಉದ್ಯಾನವನದಲ್ಲಿ ತನ್ನ ಚಿಕ್ಕ ಮಗನ ಕೈಹಿಡಿದು ನಡೆಸಿಕೊಂಡು ಬರುತ್ತಿದ್ದ ಒಬ್ಬ ತಂದೆ ಪ್ರಕೃತಿಯ ಈ ಸೊಬಗಿನ ಸನ್ನಿವೇಶದಲ್ಲೇ ತನ್ನ ಮಗನಿಗೆ ನಾಲ್ಕು ಬುದ್ಧಿವಾದದ ಮಾತುಗಳನ್ನು ಹೇಳುವುದು ಯುಕ್ತವೆಂದು, "ಮಗುವೇ, ನಾವು ಜೀವನದಲ್ಲಿ ಮಿತವ್ಯಯಿಗಳಾ ಗಿರಬೇಕು. ನೀನು ಧರಿಸಿರುವ ಜರಿಟೊಪ್ಪಿ, ರೇಷ್ಮೆದುಸ್ತು ಇವೆಲ್ಲ ಖರ್ಚಿನ ಬಾಬುಗಳು. ಆಡಂಬರಗಳು. ನನ್ನ ದುಸ್ತು ನೋಡು," ಎಂದು ಮೊದಲಾಗಿ ತನಗೆ ಸ್ವಾರಸ್ಯವಾಗಿ ತೋರು ವಂತೆ ಹೇಳುತ್ತಿದ್ದ.

ಆ ಬಾಲಕನಿಗೆ ಐದು ವರ್ಷ ಪ್ರಾಯ ಪೂರ ಆಗಿರಲಿಲ್ಲ. ದೊಡ್ಡ ರೊಟ್ಟಿಯನ್ನು ಹಿಡಿದು ಕೊಂಡಿದ್ದ. ತಂದೆಯ ಬುದ್ಧಿವಾದ ಮಗನಿಗೆ ಅರ್ಥವಾಗಲಿಲ್ಲ. ಮಾತುಗಳು ಅರ್ಥವಾಗ ದಿದ್ದಂತೆಯೇ, ತನ್ನ ಕೈಗೆ ಆ ರೊಟ್ಟಿಯನ್ನು ತಂದೆ ಕೊಟ್ಟಿದ್ದುದು ಏಕೆಂದೂ ಅವನಿಗೆ ಅರ್ಥ ವಾಗಿರಲಿಲ್ಲ, "ಅಪ್ಪಾ, ಈ ರೊಟ್ಟಿ ರುಚಿಸುವುದಿಲ್ಲ. ನನಗೆ ಹಸಿವೆಯೂ ಇಲ್ಲ. ಇದನ್ನು ಆ ಬಾತುಗಳಿಗೆ ಕೊಡಲೇ?" ಎಂದು ಹಂಸಗಳನ್ನು ತೋರಿಸುತ್ತ ಹೇಳಿದ.

ತಂದೆಗೆ ಮಗನ ಮಾತು ಕೇಳಿ ಬೇಸರವಾಯಿತು. ಅವನು, "ನೋಡಪ್ಪಾ! ಅಷ್ಟು ಒಳ್ಳೆ ರೊಟ್ಟಿ ತಿನ್ನಲು ಹಸಿವೆ ಅಗತ್ಯವಿಲ್ಲ. ಅಂತೂ, ನಿನಗೆ ಬೇಡದಿದ್ದರೆ ಹಂಸಗಳಿಗೆ ಕೊಡೋಣ. ಆದರೆ, ಇದರಲ್ಲಿ ತಿಳಿಯತಕ್ಕ ಬುದ್ಧಿಯಿದೆ, ನೋಡು: ಮನುಷ್ಯನಿಗೆ ಪ್ರಾಣಿದಯೆ ಇರಬೇಕು," ಎಂದು ಹೇಳಿ ರೊಟ್ಟಿಯನ್ನು ಹಂಸಗಳಿದ್ದಲ್ಲಿ ಬಿಸಾಡಿದ. ಅವು ಮಾತ್ರ ದೊಡ್ಡ ವಸ್ತುವೊಂದು ತಮ್ಮ ಎದುರು ಬಿದ್ದದ್ದನ್ನು ಕಂಡು, ಸ್ವಲ್ಪ ದೂರ ಸರಿದುವು.

ಈ ಸಮಯದಲ್ಲಿ ಪ್ಯಾರಿಸಿನ ನಾನಾ ಭಾಗಗಳಿಂದ ಫಿರಂಗಿ ಸದ್ದು ಕೇಳಿಬರುತ್ತಿತ್ತು. ಆಗಲೇ ಆ ತಂದೆ ಗಾವ್ರೋಚನ ಈ ಇಬ್ಬರು ತಮ್ಮಂದಿರನ್ನು ಕಂಡ. ಆ ಕೂಡಲೇ ಮಗನನ್ನು ನೋಡಿ, "ನಾವು ಇಲ್ಲಿರುವುದು ಸರಿಯಲ್ಲ. ಊರಲ್ಲೆಲ್ಲ ದೊಂಬಿಯೆದ್ದಿದೆ. ಜನರ ದೊಂಬಿಯಿಂದಲೇ, ಈ ಲಕ್ಸಂಬರ್ಗಿನವರೆಗೂ ಬರಬಾರದವರೂ ಬಂದಿದ್ದಾರೆ," ಎಂದಂದುಕೊಂಡು, ಅವನನ್ನು ಎಳೆದುಕೊಂಡು ಅಲ್ಲಿಂದ ಹೋದ.

ಗಾವ್ರೋಚನ ತಮ್ಮಂದಿರು ಹಂಸಗಳಿಗೋಸ್ಕರ ಎಸೆಯಲಾಗಿದ್ದ ರೊಟ್ಟಿಯನ್ನು ಕಂಡಿದ್ದರು. ಆ ತಂದೆ ಮತ್ತು ಮಗ ಅಲ್ಲಿಂದ ದೂರ ಸರಿದ ಹಾಗೆ, ಹಿರೇ ಹುಡುಗ ನೀರಿಗಿಳಿದು ರೊಟ್ಟಿ ಎತ್ತಲು ಪ್ರಯತ್ನಿಸಿದ. ಹಂಸವೊಂದು ಅದೇ ರೊಟ್ಟಿಗಾಗಿ ಈಜಿ ಮುಂದೆ ಬಂದಾಗ ಎದ್ದ

ಅಲೆಯಿಂದ ಬಾಲಕನಿಗೆ ರೊಟ್ಟಿ ದೊರೆಯಿತು. ಹೀಗೆ ಅನಿರೀಕ್ಷಿತವಾಗಿ ದೈವದತ್ತವಾಗಿ ಬಂದು ತಮಗೊದಗಿದ ರೊಟ್ಟಿಯನ್ನು ಬಾಲಕರಿಬ್ಬರು ಹಂಚಿಕೊಂಡು ತಿಂದರು.

೯. ಜೀನ್‌ವಾಲ್‌ಜೀನ್ ಸೇಡು ತೀರಿಸಿದ್ದು?

ಗಾವ್ರೋಚ್ ಬಿದ್ದಲ್ಲಿಗೆ ಮೇರಿಯಸನೂ ಕೋಂಬೆಫರನೂ ಓಡಿದರು. ಮೇರಿಯಸ್ ಗಾವ್ರೋಚನನ್ನು ಎತ್ತಿತಂದ. ತನ್ನ ತಂದೆಯನ್ನು ಯುದ್ಧರಂಗದಲ್ಲಿ ಜೀವಂತನಾಗಿ ಎತ್ತಿ ನಿಲ್ಲಿಸಿದವನ ಮಗನನ್ನು ತಾನು ಇಂದು ಮೃತನನ್ನಾಗಿ ಎತ್ತಿತಂದ ಪರಿಸ್ಥಿತಿ ಗ್ರಹಿಸಿ ದುಃಖಿಸಿದ. ಗಾವ್ರೋಚ್ ಸಂಗ್ರಹಿಸಿಟ್ಟಿದ್ದ ತೋಟೆಗಳನ್ನು ಕೋಂಬೆಫರ್ ತಂದ. ಈ ಕಾರ್ಯದಲ್ಲಿ ಗಾವ್ರೋಚನ ರಕ್ತ ಮೇರಿಯಸನ ಮೈಮೇಲೆ ಸುರಿಯುತ್ತಿತ್ತು. ಹೆಣವನ್ನು ಫಾದರ್ ಮೇಬಫರ ಹೆಣದ ಜೊತೆ ಮಲಗಿಸಿ ಮೇರಿಯಸ್ ನೆಟ್ಟಗೆ ನಿಲ್ಲುವಾಗ, ಸುರಿದಿದ್ದ ರಕ್ತ ಗಾವ್ರೋಚನದಲ್ಲ, ತನ್ನ ತಲೆಯ ಒಂದು ಅಂಚಿನಲ್ಲಿ ಸೀಳಿಕೊಂಡು ಹೋಗಿದ್ದ ಚಿಲ್ಲಿನಿಂದಾಗಿದ್ದ ಗಾಯದಿಂದ ರಕ್ತ ಸುರಿಯುತ್ತಿದ್ದುದು ಎಂದು ಅವನಿಗೆ ಗೊತ್ತಾಯಿತು. ಕೋಂಬೆಫರ್ ಮೇರಿಯಸನ ಗಾಯಕ್ಕೆ ಬ್ಯಾಂಡೇಜು ಸುತ್ತಿದ.

ಈ ಸಮಯದಲ್ಲಿ ಶತ್ರು ಸೈನ್ಯ ಮುಂದೊತ್ತಿ ಬರುತ್ತಿತ್ತು. ತಮ್ಮ ಉಳಿಗಾಲ ಇನ್ನು ಹೆಚ್ಚುಕಾಲ ಇರಲಾರದೆಂದು ಎಲ್ಲರೂ ತಿಳಿಯತೊಡಗಿದರು. ಕೆಲವರು ಸೈನಿಕರಿಗೆ ಗುಂಡೆಸೆಯುತ್ತ ಅವರ ಗತಿ ತಡೆಯಲು ಪ್ರಯತ್ನಿಸಿದರು. ಕೆಲವರು ನೆಲದಲ್ಲಿ ಹಾಸಿದ್ದ ಕಲ್ಲನ್ನೂ ಇಟ್ಟಿಗೆಯನ್ನೂ ಎಬ್ಬಿಸಿ, ಅವುಗಳಿಂದ ಹೊಟೇಲಿನ ಹೆಬ್ಬಾಗಿಲೊಂದನ್ನು ಹೊರತಾಗಿ, ಒಳಗೆ ಬರುವ ಎಲ್ಲ ಕಂಡಿಗಳನ್ನೂ ಮುಚ್ಚತೊಡಗಿದರು. ಅನಂತರ ತಮ್ಮಲ್ಲಿದ್ದ ತೋಟೆಗಳನ್ನೆಲ್ಲ ಆಖೈರು ಹೋರಾಟಕ್ಕಾಗಿ, ಹಂಚಿಕೊಂಡರು. ಸರಾಯಿ, ವೈನ್ ಕುಪ್ಪಿ ಇತ್ಯಾದಿಗಳನ್ನು ಹೊಟೇಲಿನ ಮಹಡಿಯ ಮೇಲಕ್ಕೆ ಸಾಗಿಸಿ ಇಟ್ಟರು. ಕೊನೆಗೆ ತಮ್ಮ ಅಂದಿನ ಹೋರಾಟದ ಆಖೈರು ಆಜ್ಞೆಗಳನ್ನು ಎಂಜೊಲ್ರಾಸ್ ಅವರಿಗೆಲ್ಲ ನೀಡಿದ. ಶತ್ರುಗಳು ತಡೆಗೋಡೆಯನ್ನು ದಾಟಿಬರುವ ಸಮಯಕ್ಕೆ ಸರಿಯಾಗಿ ತಾವು ಹೊಟೇಲಿನ ಹೆಬ್ಬಾಗಿಲಿನಿಂದ ಒಳನುಗ್ಗಿ ಬಾಗಿಲು ಬಂದುಮಾಡಿ, ಮಹಡಿ ಏರಿ, ಏಣಿಗಳನ್ನು ಕಡಿದು ಉರುಳಿಸಿ, ಅನಂತರ ವೈಯಕ್ತಿಕವಾಗಿ, ಸಂದರ್ಭಾನುಸಾರ ಯುದ್ಧಮಾಡಬೇಕೆಂದು ವಿವರಗಳನ್ನೆಲ್ಲ ಹೇಳಿದ. ಬಳಿಕ ಜೇವರ್ಟನ ಕಡೆಗೆ ತಿರುಗಿ, "ನಿನ್ನನ್ನು ನಾನು ಮರೆತಿರುವುದಿಲ್ಲ. ಈ ಮೇಜದ ಮೇಲಿರುವ ಪಿಸ್ತೂಲಿನಿಂದ ಆಖೈರಿಗೆ ನಿನ್ನನ್ನು ಕೊಲ್ಲಲಾಗುವುದು," ಅಂದ. ಅದಕ್ಕೆ ಉತ್ತರವಾಗಿ ಜೇವರ್ಟ್, "ಸ್ವಲ್ಪ ಹಿಂದೆಮುಂದಾದರೂ ನಾವೆಲ್ಲ ಪುನಃ ಅಲ್ಲಿ ಜೊತೆಸೇರಲಿರುವೆವಷ್ಟೆ!" ಎಂದು ತುಚ್ಛೀಕರಿಸಿ ಹೇಳಿದ.

ಈ ಯುದ್ಧದಲ್ಲಿ ಜೀನ್‌ವಾಲ್‌ಜೀನ್ ಗಾಯಗೊಂಡವರ ಚಿಕಿತ್ಸೆಯಲ್ಲೂ ದೇಹಶ್ರಮದ ಇತರ ಕೆಲಸಗಳಲ್ಲೂ ಎಡೆಬಿಡದೆ ಆಸಕ್ತನಾಗಿದ್ದ. ಅವನು ಈವರೆಗೆ ಯಾರ ಪ್ರಾಣವನ್ನೂ ತೆಗೆದಿರಲಿಲ್ಲ. ಅವನ ಪರಿಶ್ರಮಗಳನ್ನೂ ಕರುಣಾಮಯಕಾರ್ಯಗಳನ್ನೂ ತನ್ನ ಜೀವದಾಸೆಯಿಲ್ಲದೆ ಗಾಯಗೊಂಡಿದ್ದವರನ್ನು ಎತ್ತಿತರುತ್ತಿದ್ದ ಸಾಹಸವನ್ನೂ ಕಂಡು ಎಲ್ಲರೂ ಅವನನ್ನು ಬಲುವಾಗಿ ಗೌರವಿಸುತ್ತಿದ್ದರು. ಯುದ್ಧದ ಅನೇಕ ಮುಖಗಳಲ್ಲಿ ಜೀನ್‌ವಾಲ್‌ಜೀನನದೂ ಒಂದು ಮುಖ ಎಂದು ಎಂಜೊಲ್ರಾಸ್ ಸಮಾಧಾನಪಟ್ಟುಕೊಂಡಿದ್ದ. ಎಂಜೊಲ್ರಾಸ್ ಜೇವರ್ಟನೊಂದಿಗೆ ಮಾತಾಡಿದ್ದನ್ನು ಕೇಳಿ ಜೀನ್‌ವಾಲ್‌ಜೀನ್ ಎದುರುಬಂದು, "ಮಾನ್ಯರರೇ! ನನಗೊಂದು ಉಪ

ಕಾರ ಮಾಡಬಹುದೇ?" ಎಂದು ಕೇಳಿದ.

"ನಿಮಗೆ ಉಪಕಾರಮಾಡಲು ನಮ್ಮ ಪಾರ್ಟಿ ಸದಾ ಸಿದ್ಧವಿದೆ. ಏನಾಗಬೇಕು?" ಎಂದು ಎಂಜೊಲ್ರಾಸ್ ಪ್ರಶ್ನಿಸಿದ.

"ಈ ಇನ್‌ಸ್ಪೆಕ್ಟರನನ್ನು ಗುಂಡಿಕ್ಕಿ ಕೊಲ್ಲುವ ಕೆಲಸವನ್ನು ನಾನು ಮಾಡಬಹುದೇ?"

ಈ ಪ್ರಶ್ನೆಗೆ ಎಂಜೊಲ್ರಾಸ್ ಉತ್ತರಕೊಡುವ ಮೊದಲೇ ಕೋಂಬೆಫರ್, "ಯಾರು ಬೇಕಾದರೂ ಅವನನ್ನು ಕೊಲ್ಲಬಹುದು. ಆದರೆ, ಅವನ ಹೆಣ ನಮ್ಮ ಹೆಣಗಳ ಮಧ್ಯೆ ಬೀಳಕೊಡದು. ಅವನನ್ನು ದೂರ ಕರೆದುಕೊಂಡು ಹೋಗಿ ಕೊಲ್ಲಬೇಕು," ಅಂದ.

ಈ ಅಭಿಪ್ರಾಯವನ್ನು ಎಂಜೊಲ್ರಾಸ್ ಸಮರ್ಥಿಸಿ, ಜೀನ್‌ವಾಲ್‌ಜೀನನ ವಶಕ್ಕೆ ಜೇವರ್ಟನನ್ನು ಒಪ್ಪಿಸಿದ. ಈ ಕೂಡಲೇ ಜೀನ್‌ವಾಲ್‌ಜೀನ್, ಜೇವರ್ಟನನ್ನು ಮಂಚಕ್ಕೆ ಬಂಧಿಸಿದ್ದ ಹಗ್ಗ ಮಾತ್ರ ಬಿಚ್ಚಿ ಹೊರಗೆ ಕರೆದುಕೊಂಡು ಹೋದ. ಹಾಗೆ ಜೇವರ್ಟನೂ ಜೀನ್‌ವಾಲ್‌ಜೀನನೂ ಹೊಟೇಲಿನಿಂದ ಹೊರಗೆ ಹೋಗುತ್ತಿದ್ದುದನ್ನು ಮೇರಿಯಸ್ ನೋಡುತ್ತ, ತನ್ನ ಹಿಂದಿನ ಒಂದು ನೆನಪನ್ನು ಜಾಗೃತಗೊಳಿಸಿಕೊಳ್ಳಲು ಪ್ರಯತ್ನಿಸಿದ.

ಇತ್ತ ಅವರಿಬ್ಬರೂ ಯಾರೂ ಕಾಣದ ಸ್ಥಳಕ್ಕೆ ತಲಪಿದರು. ಅಲ್ಲಿ ಜೇವರ್ಟ್ ಜೀನ್‌ವಾಲ್‌ಜೀನನ್ನು ಉದ್ದೇಶಿಸಿ, ಕಟು ಸ್ವರದಿಂದ, "ನಿನ್ನ ಯೋಗ್ಯತೆಗೆ ತಕ್ಕಂಥ ಕೆಲಸ ನಿನಗೆ ದೊರೆತಿದೆ. ಬೇಗ ಪೂರೈಸಿಬಿಡು," ಅಂದ.

ಜೀನ್‌ವಾಲ್‌ಜೀನ್ ಪಿಸ್ತೂಲನ್ನು ಕೆಳಗಿಟ್ಟು ಚೂರಿಯನ್ನು ಬಿಚ್ಚಿದ. ಆಗ ಜೇವರ್ಟ್, "ನಿನಗೊಪ್ಪುವ ಆಯುಧ ಅದೇ ಸರಿ," ಅಂದ.

ಜೀನ್‌ವಾಲ್‌ಜೀನ್ ಯಾವ ಉತ್ತರವನ್ನೂ ಕೊಡದೆ, ಜೇವರ್ಟನ ಕೈಗಳನ್ನು ಬಂಧಿಸಿದ್ದ ಹಗ್ಗಗಳನ್ನೆಲ್ಲ ತುಂಡರಿಸಿ, ಅನಂತರ ನುಡಿದ, "ನೀನು ಸ್ವತಂತ್ರ. ಇಲ್ಲಿಂದ ಹೋಗಬಹುದು."

ಜೇವರ್ಟ್ ಎಂದೂ ಆಶ್ಚರ್ಯಪಟ್ಟದ್ದಿಲ್ಲ. ಅಥವಾ, ಹಾಗೆ ಆಶ್ಚರ್ಯಪಟ್ಟಿದ್ದರೂ ಮುಖದಲ್ಲಿ ಅದನ್ನು ತೋರಿಸಿರಲಿಲ್ಲ. ಇಂದು ಮಾತ್ರ ಅವನ ಮುಖದಲ್ಲಿ ಮಹದಾಶ್ಚರ್ಯವೇ ಎದ್ದು ತೋರಿತು. ಆದರೆ ಮರುಕ್ಷಣ ಗಾಂಭೀರ್ಯ ತಾಳಿಕೊಂಡು, ಸ್ವಲ್ಪ ಹೀನೈಸುವ ಸ್ವರದಿಂದ, "ಈ ವಿಧದ ಕಾರ್ಯಗಳಿಂದ ನಿನ್ನ ಹಿತಸಾಧನೆಯಾಗದು. ನಾನು ಶಾಂತನಾಗಲಾರೆ, ಎಚ್ಚರಿಕೆ," ಎಂದು ಗದರಿಸಿದ.

"ನಾನು ಸದ್ಯ ಇಲ್ಲಿಂದ ಹೊರಡಲಾರೆ; ಬದುಕಿ ಉಳಿದರೆ ರ್‍ಯೂ'ಹೋಮ್ ಆರ್ಮಿನ್ನಿನ ಸಂಖ್ಯೆ ೭ನೇ ಮನೆಗೆ ನೀನು ಬಂದರೆ ನಾನು ಸಿಕ್ಕುವೆನು. ಸದ್ಯ ಇಲ್ಲಿಂದ ಹೋಗು," ಎಂದು ಜೀನ್‌ವಾಲ್‌ಜೀನ್ ಗಂಭೀರವಾಗಿ ಉತ್ತರವಿತ್ತ.

"ಸಂಖ್ಯೆ ೭ನೇ ಮನೆ" ಎಂದು ಉರುಹಾಕುತ್ತ ಜೇವರ್ಟ್ ಜೀನ್‌ವಾಲ್‌ಜೀನನನ್ನು ಉರಿ ಉರಿಗೊಳ್ಳುತ್ತ ನೋಡಿದ. ಆಗ ಜೀನ್‌ವಾಲ್‌ಜೀನ್ ಪಿಸ್ತೂಲಿನಿಂದ ಆಕಾಶಕ್ಕೆ ಗುಂಡು ಹಾರಿಸಿ, "ನಡೆ ಇಲ್ಲಿಂದ, ನನ್ನೆದುರು ನಿಲ್ಲದಿರು," ಎಂದು ಗದರಿಸಿ, ಕೋಟೆಯೊಳಕ್ಕೆ ಪ್ರವೇಶಿಸಿದ. ಅಲ್ಲಿ ಎಂಜೊಲ್ರಾಸನನ್ನೂ ಮೇರಿಯಸನನ್ನೂ ಕಂಡು, "ನನ್ನ ಕೆಲಸ ಪೂರೈಸಿಬಂದೆ," ಅಂದ.

ಆಗಲೇ ಮೇರಿಯಸನಿಗೆ ಹಿಂದಿನ ನೆನಪು ಎದ್ದುತೋರಿತು. ತನಗೆ ಎರಡು ಪಿಸ್ತೂಲುಗಳನ್ನು ಕೊಟ್ಟಿದ್ದವನೂ ಅದೇ ಇನ್‌ಸ್ಪೆಕ್ಟರ್ ಎಂದು ಜ್ಞಾಪಿಸಿಕೊಂಡ. ಮತ್ತು, ಕೋಸೆಟ್ಟೆಯ ತಂದೆ ತನಗೆ ಹಿಂದೆ ಉಪಕಾರಮಾಡಿದ್ದ ಇನ್‌ಸ್ಪೆಕ್ಟರನನ್ನು ಕೊಂದನಲ್ಲ ಎಂದೂ ಅಂತರಂಗದಲ್ಲಿ ವ್ಯಥೆಪಟ್ಟುಕೊಂಡ.

೧೦. ಮರಣವೋ? ಕಿರಣವೋ?

ತಾವು ಸದ್ಯವೇ ಸಾಯುವೆವೆಂದು ಅವರೆಲ್ಲರೂ ತಿಳಿದಿದ್ದರು. ಪ್ಯಾರಿಸಿನಲ್ಲಿ ಅಲ್ಲಲ್ಲಿ ನಡೆಯುತ್ತಿದ್ದ ಯುದ್ಧಗಳ ಶಬ್ದವೂ ಈ ಭಯಂಕರ ದಿನದ ನೆನಪಿಗಾಗಿ ಇಗರ್ಜಿಗಳಲ್ಲಿ ಎಡೆಬಿಡದೆ ನಿನದಿಸುತ್ತಿದ್ದ ಗಂಟೆಗಳ ಶಬ್ದವೂ ಈ ತಡೆಗೋಡೆಯೊಳಗಿದ್ದವರಿಗೆ ಕೇಳಿಸುತ್ತಿದ್ದುವು. ಹಗಲಿನ ಬೆಳಕನ್ನೂ ಪ್ರಪಂಚದ ಸದ್ದನ್ನೂ ತಾವು ಆಗಲೇ ಆಖೈರಿಯಾಗಿ ನೋಡಿಯೂ ಕೇಳಿಯೂ ಪೂರೈಸುವುದಾಗಿ ಅವರೆಲ್ಲರೂ ಭಯಪ್ರದಗಂಭೀರತೆಯಿಂದ ತಿಳಿದಿದ್ದರು.

ಪ್ರಗತಿಯೆಂಬುದು ಶಾಶ್ವತ ಚಲನೆ. ಅದು ಕೆಲವೊಮ್ಮೆ ಸ್ತಬ್ಧವಾಗಿದ್ದಂತೆ ತೋರಿಬಂದರೂ ಸ್ವಲ್ಪ ಕಾಲಾನಂತರ ಅದನ್ನು ಪರೀಕ್ಷಿಸಿದರೆ, ಅದು ಬೆಳೆದು ಮುಂದುವರಿದದ್ದನ್ನೇ ಕಾಣಬಹುದು. ಪ್ರಗತಿ ಒಂದು ನದಿ, ಪರಿಪೂರ್ಣತೆಯ ಅಭಿಮುಖವಾಗಿ ಹರಿಯುವ ನದಿ ಎಂದು ಹೇಳಬಹುದು. ಶಾಂತವಾಗಿ ಹರಿಯುತ್ತಿರುವ ನದಿಗೆ ಎಡರನ್ನೊಡ್ಡಿದಾಗ ಮಾತ್ರ ಅಲ್ಲಿ ನೊರೆಯೇಳುವುದು, ಸುಳಿಯುಂಟಾಗುವುದು. ಆಗಲೇ ನದಿ ಪ್ರವಹಿಸುತ್ತಿದೆ ಎಂಬ ಅರಿವು ನಮಗೆ ಸ್ಪಷ್ಟವಾಗುವುದು. ಹೀಗೆಯೇ ಸಮಾಜದ ಜನಾಂಗಗಳ ವಿಶ್ವದ ಪ್ರಗತಿಯಲ್ಲಿ ಇಂಥ ಯುದ್ಧಗಳೂ ಒಂದು ತಡೆ. ಈ ತಡೆಯಿಂದಲೇ ನಮ್ಮ ಪ್ರಗತಿಯ ಅರಿವು ನಮಗಾಗುವುದು. ಇಂದು ಈ ಯುವಕರು ಭೂತ ಮತ್ತು ವರ್ತಮಾನ ಕಾಲದ ತಮ್ಮ ಅನುಭವಗಳನ್ನು ಸಂಗ್ರಹಿಸಿ, ಅವುಗಳಿಂದ ಹೊಸತೊಂದು ತತ್ತ್ವ ಕಂಡುಕೊಂಡು, ಆ ತತ್ತ್ವದ ಸುಂದರ ಭವಿಷ್ಯಕ್ಕಾಗಿ ತಮ್ಮ ಜೀವವನ್ನು ಬಲಿದಾನಮಾಡಲು ಹೊರಟಿರುವರು. ಮುಂದೆ ಪ್ರಜಾರಾಜ್ಯ ಬರಬೇಕೆಂದು ಈ ಯುವಕರು ಇಂದು ಮಡಿಯುವುದಾದರೆ, ಅವರನ್ನು ಈ ದಿನ ನಾಶಗೈಯುವವರ ಉದ್ದೇಶವೂ ಅವರ ಮಟ್ಟಿಗೆ ಪರಿಪೂರ್ಣ ನ್ಯಾಯವೇ ಆಗಿದೆ. ಅವರ ಅಭಿಪ್ರಾಯದಲ್ಲಿ, "ಈಗ ನಾವು ಸಂಪೂರ್ಣ ಸಂಸ್ಕೃತರಾಗಿದ್ದು, ನಮ್ಮ ರಾಜ್ಯದಲ್ಲಿ ನ್ಯಾಯ, ಧರ್ಮ, ಶಾಂತಿ, ಸುಖ ನೆಲಸಿವೆ; ನಾವು ಬದುಕಬೇಕು, ಬಾಳಬೇಕು, ಹೀಗೆಯೇ ನಾವೆಲ್ಲ ಉಳಿಯಬೇಕು," ಎಂದೇ ಇದೆ. ಅದು ಅವರ ಹೃತ್ಪೂರ್ವಕದ ಅಭಿಪ್ರಾಯ. ಅವರ ಕಾರ್ಯ ನಿರ್ವಂಚನೆಯಿಂದ ನಡೆಯತಕ್ಕದ್ದಿದೆ. ಈ ಅಭಿಮತಾನುಸಾರ ಅವರು ಕ್ರಾಂತಿಕಾರರನ್ನು ದಮನಿಸಲು ಹೊರಟಿರುವರು. ಈ ವಿಧದ ಘರ್ಷಣೆ ಪ್ರಕೃತಿಯ ಸ್ವಭಾವ. ಈ ವಿಶ್ವ ನಿಯಮಾನುಸಾರವಾಗಿ, ಸ್ವಭಾವಾನುಸಾರವಾಗಿ, ಅನಂತಕಾಲಕ್ಕೂ ಸತ್ಯವಾಗಿ ಉಳಿಯುವ ಅಭಿಪ್ರಾಯಭೇದಗಳ ಘರ್ಷಣೆಯ ಕ್ರಮಾನುಸಾರವಾಗಿ ಈ ಯುವಕರು ಈಗ ತಮ್ಮ ಸಂಪೂರ್ಣನಾಶವನ್ನು ತಂದುಕೊಳ್ಳಲು ತಡೆಗೋಡೆಯೊಳಗೆ ದೃಢಸಂಕಲ್ಪರಾಗಿ ನಿಂತಿರುವರು. ಮರಣವೋ? ಕಿರಣವೋ?

೧೧. ವೀರಾಗ್ರಣಿಗಳು

ಡೋಲು, ತುತ್ತೂರಿ ಸದ್ದುಮಾಡುತ್ತ ಸೈನ್ಯ ಮುಂದುವರಿಯಿತು. ಫಿರಂಗಿಗಳು ಗರ್ಜಿಸುತ್ತ ಗುಂಡುಬೆಂಕಿಗಳ ಹೊಗೆ ಕಾರತೊಡಗಿದುವು. ಸೈನಿಕರು ತಂತಮ್ಮ ಕೋವಿಗಳನ್ನು ಹಾರಿಸತೊಡಗಿದರು. ಸ್ವಲ್ಪ ಹೊತ್ತಿನಲ್ಲೇ ತಡೆಗೋಡೆ ಕುಸಿದುಬಿತ್ತು. ಸೈನ್ಯ ಮುಂದೊತ್ತಿ ಬಂದಿತು. ಆಗ ಹೊಟೇಲಿನ ಒಳಗಿದ್ದವರೆಲ್ಲ ಏಕಕಾಲದಲ್ಲಿ ಸೈನಿಕರಿಗೆ ಗುಂಡೆಸೆದರು. ತಡೆಗೋಡೆಯ ಮರಮಟ್ಟುಗಳಿಗೆ ಬೆಂಕಿ ತಾಗಿ ಅವು ಉರಿಯತೊಡಗಿದುವು. ತಡೆಗೋಡೆ ರಸ್ತೆಗೆ ಅಡ್ಡವಾಗಿದ್ದು,

ಅದರ ಎರಡು ತುದಿಗಳಲ್ಲಿ ಒಬ್ಬೊಬ್ಬ ಯುವಕ ಅಧಿಕಾರವಹಿಸಿ ನಿಂತು ಸೈನಿಕರ ನಾಶಗೈಯುತ್ತಿದ್ದರು. ಹೊಟೇಲ್ ಕಡೆಯ ತುದಿಯಲ್ಲಿ ಎಂಜೊಲ್ರಾಸ್ ಅಧಿಕಾರವಹಿಸಿದ್ದ. ಇನ್ನೊಂದು ತುದಿಯಲ್ಲಿ ಮೇರಿಯಸ್ ಕಾರ್ಯವೆಸಗುತ್ತಿದ್ದ. ಇವರ ಏರ್ಪಾಡು ಪ್ರಯತ್ನಗಳಿಂದ ಅನೇಕ ಸೈನಿಕರು ಸತ್ತರು. ಸೈನ್ಯ ಎಷ್ಟೇ ದೀರ್ಘವಿದ್ದಿರಬಹುದಾದರೂ ಇಲ್ಲಿ ರಸ್ತೆಯಷ್ಟಗಲದಲ್ಲೇ ಹೋರಾಟ ನಡೆಯುತ್ತಿದ್ದುದರಿಂದ, ಯುವಕರು ಇಷ್ಟೊಂದು ಕಾಲ ಶಕ್ತರಾಗಿ ಉಳಿದಿದ್ದರು. ಮೇರಿಯಸನಿಗೆ ಕೆಲವು ಗಾಯಗಳೂ ಆಗಿದ್ದುವು. ಎಂಜೊಲ್ರಾಸನಿಗೆ ಯಾವ ವಿಧದ ಗಾಯವೂ ಆಗಲಿಲ್ಲ. ಹೀಗೆ ಈ ವೀರಾಗ್ರಣಿಗಳು ಕಾದುತ್ತಿದ್ದರು.

೧೨. ಹೆಜ್ಜೆಹೆಜ್ಜೆಕಾಳೆಗ

ಸೈನ್ಯಕ್ಕೆ ಜಯವಾಗುವುದರಲ್ಲಿ ಯಾರಿಗೂ, ಎಳ್ಳಷ್ಟೂ, ಸಂಶಯವಿರಲಿಲ್ಲ. ತಾವು ಸೋಲುತ್ತ, ಸೈನಿಕರು ಸಮೀಪರಾಗುತ್ತ ಬಂದ ಹಾಗೆ ಎಂಜೊಲ್ರಾಸನ ಅಪ್ಪಣೆ ಪ್ರಕಾರ ಕೋಟೆಯೊಳಗಿನವರು ಹೊಟೇಲ್ ಒಳಗೆ ನುಗ್ಗಿದರು. ಒಳನುಗ್ಗುವುದನ್ನು ತಡೆಯಲು ಬರುತ್ತಿದ್ದ ಸೈನಿಕರನ್ನು ಎಂಜೊಲ್ರಾಸ್ ಕೊಲ್ಲುತ್ತ ಬಂದು ಕೊನೆಗೆ ತಾನೊಬ್ಬನೇ ಉಳಿದಾಗ, ಹಾರಿ, ಅವನೂ ಒಳನುಗ್ಗಿ ಬಾಗಿಲನ್ನು ಬಡಿದು ಮುಚ್ಚಿಕೊಂಡ. ಬಾಗಿಲನ್ನು ತನ್ನ ಕೈಗಳಿಂದ ಹಿಡಿದು ನೂಕುತ್ತಿದ್ದ ಒಬ್ಬ ಸೈನಿಕನ ನಾಲ್ಕು ಬೆರಳುಗಳು ತುಂಡಾಗಿ ಉದುರಿ ಬಾಗಿಲು ಬಂದೋಬಸ್ತಾಗಿ ನಿಂತಿತು. ಈ ಗಲಿಬಿಲಿಯಲ್ಲಿ ಮೇರಿಯಸ್ ರಸ್ತೆಯ ಇನ್ನೊಂದು ಅಂಚಿನಲ್ಲಿ ಉಳಿದೇ ಹೋದ. ಆಗಲೇ ಮೇರಿಯಸನಿಗೆ ಒಂದು ಗುಂಡು ಬಿತ್ತು. ಆ ಗುಂಡಿನಿಂದ ಅವನ ಕತ್ತಿನ ಸಮೀಪದ ಒಂದು ಮೂಳೆ ಮುರಿಯಿತು. ಅವನಿಗೆ ಅವನ ಅಂತ್ಯಕಾಲ ಸಮೀಪವಾಯಿತೆಂದು ತೋರಿತು. ಆಗ ಅವನಿಗೆ ಕೋಸೆಟ್ಟಿಯ ನೆನಪಾಯಿತು. ಅಷ್ಟರಲ್ಲೇ ಯಾರದೋ ಬಲವಾದ ಕೈಯ್ಯೊಂದು ಅವನನ್ನು ಹಿಡಿದುಕೊಂಡಿತು. ತನ್ನನ್ನು ಕೈದುಮಾಡುತ್ತಿರುವರೆಂದು ತಿಳಿಯುತ್ತ, ಆತ್ಮಗತವಾಗಿ ಹೇಳಿಕೊಳ್ಳುತ್ತ ಇದ್ದಹಾಗೆ, ಅವನಿಗೆ ಮೂರ್ಛೆ ತಪ್ಪಿತು.

೧೩. ಗಲ್ಲುಗಂಬ ಬಲ್ಲುದೇ ಗುಣಾವಗುಣ ?

ಸೈನಿಕರು ಹೊಟೇಲಿನ ಹೆಬ್ಬಾಗಿಲು ಒಡೆದು ಒಳನುಗ್ಗಿದರು. ಒಳಗಡೆ ಮಹಡಿಗೆ ಹತ್ತುವ ಏಣಿಗಳೆಲ್ಲ ಮುರಿದು ಬಿದ್ದಿದ್ದುವು. ಯುವಕರು ಮಹಡಿಯಲ್ಲಿ ನಿಂತು ಕೆಳಗಿದ್ದ ಸೈನಿಕರ ಮೇಲೆ ಕಲ್ಲು, ಕುಪ್ಪಿ, ಮರಮಟ್ಟನ್ನು ಎಸೆದರು. ಸೈನಿಕರು ಮಹಡಿಯತ್ತ ಎಡೆಬಿಡದೆ ಗುಂಡೆಸೆದರು. ಕಟ್ಟಡವೇ ಕುಸಿಯುವಂತೆ ತೋರುತ್ತಿತ್ತು. ಹೊಟೇಲಿನ ಕೆಳಗೆಲ್ಲ ಬೆಂಕಿಹಿಡಿದು ಅದೊಂದು ಅಗ್ನಿಕುಂಡವೇ ಆಗಿತ್ತು. ಇದ್ದ ಮೇಜುಕುರ್ಚಿಗಳನ್ನಿಡುತ್ತ ಗುಂಡೆಸೆಯುತ್ತ ಸೈನಿಕರು ಮಹಡಿ ಹತ್ತಿದರು.

ಮಹಡಿಯಲ್ಲಿ ಎಂಜೊಲ್ರಾಸನೊಬ್ಬನೇ ನಿಶ್ಶಸ್ತ್ರನಾಗಿ ನಿಂತಿದ್ದ. ಅವನಿಗೂ ಸೈನಿಕರಿಗೂ ಮಧ್ಯೆ ಒಂದು ದೊಡ್ಡ ಮೇಜು ಅಡ್ಡವಾಗಿತ್ತು. ಗೋಡೆಗೆ ಒರಗಿ ನಿಂತಿದ್ದ ಎಂಜೊಲ್ರಾಸನಿಗೆ ಗುಂಡು ಹೊಡೆಯುಬೇಕೆಂದು ಒಬ್ಬ ಸೈನಿಕ ಕೋವಿ ಎತ್ತುವಾಗಲೇ, ಸರಾಯಿ ಕುಡಿದು ಮತ್ತನಾಗಿ ಬಿದ್ದಿದ್ದ ಗ್ರೇಂಟೈರ್, "ಕ್ರಾಂತಿಗೆ ಜಯವಾಗಲಿ," ಎಂದು ಘೋಷಿಸುತ್ತ ಎಂಜೊಲ್ರಾಸನ ಪಕ್ಕದಲ್ಲಿ

ಹೋಗಿ ನಿಂತ. ಅಲ್ಲಿಂದ ಗ್ರೇಂಟೈರ್, "ನಮ್ಮಿಬ್ಬರನ್ನೂ ಏಕಕಾಲದಲ್ಲಿ ಕೊಂದುಬಿಡಿ, ಬಾಂಧವರೇ," ಅಂದ.

ಸೈನಿಕರಿಗೆ ಈ ಪರಿಸ್ಥಿತಿ ಎದ್ದು ತೋರಿತು. ಅವರಲ್ಲೊಬ್ಬ, "ಆ ಹೂವನ್ನೇ ಹುಡಿಮಾಡಬೇಕಲ್ಲ," ಎಂದು ಎಂಜೊಲ್ರಾಸನ ಸುಂದರ ಮೂರ್ತಿ ಕಂಡು ಹೇಳಿಕೊಂಡ.

ಆಗ ಮತ್ತೊಬ್ಬ ಸೈನಿಕ, "ನಿಮ್ಮ ಕಣ್ಣುಗಳನ್ನಾದರೂ ಬಟ್ಟೆಯಿಂದ ಕಟ್ಟಿದರಾಗಬಹುದೇ?"

"ಬೇಡ," ಅಂದರು ಇಬ್ಬರೂ.

ಆಗಲೇ ಎಂಟು ಜನ ಸೈನಿಕರು ಎಂಜೊಲ್ರಾಸನೊಬ್ಬನಿಗೆ, ಗುಂಡು ಹೊಡೆದರು. ಇನ್ನೊಬ್ಬ ಗ್ರೇಂಟೈರನಿಗೆ ಗುಂಡು ಹೊಡೆದ. ಎಂಜೊಲ್ರಾಸ್ ಸತ್ತು, ಗೋಡೆಗೆ ಅಂಟಿಹೋದ. ಗ್ರೇಂಟೈರ್ ಎಂಜೋಲ್ರಾಸನ ಪಾದಗಳ ಮೇಲೆ ಹೆಣವಾಗಿ ಬಿದ್ದ.

ಅನಂತರ ಉಳಿದವರೆಲ್ಲ ಯುದ್ಧಮಾಡಿ, ಮಹಡಿಯಿಂದ ಹಾರಿ, ನಾನಾ ವಿಧದಲ್ಲಿ ಸತ್ತರು. ಕೋಟೆ ಸೈನಿಕರ ವಶವಾಯಿತು.

೧೪. ಕೈದಿ!

ಮೂರ್ಛೆಹೋಗಿದ್ದ ಮೇರಿಯಸ್ ಕೈದಿಯಾಗಿದ್ದುದು ನಿಜ. ಆದರೆ, ಅದು ಜೀನ್‌ವಾಲ್‌ಜೀನನ ಕೈಯಲ್ಲಾಗಿತ್ತು. ಈ ಮೊದಲೇ ಹೇಳಿರುವಂತೆ ಸೈನಿಕರು ಮಹಡಿಯ ಕಡೆಗೆ ಗಮನಕೊಡುತ್ತಿದ್ದಂತೆಯೇ ಜೀನ್‌ವಾಲ್‌ಜೀನ್ ಮೇರಿಯಸನನ್ನು ಹೊತ್ತು ರಸ್ತೆಯ ಮತ್ತೊಂದು ದಿಕ್ಕಿನಲ್ಲಿ ಓಡಿದ. ಇವನಿಗೆ ತನ್ನ ಜೀವದಾಸೆ ಹೇಗೂ ಇಲ್ಲದಿದ್ದುದರಿಂದ ಈ ಸಾಹಸವನ್ನು ಸಂಪೂರ್ಣ ಶಕ್ತಿ, ಚಮತ್ಕಾರಗಳಿಂದ ಮಾಡಿದ. ಆದರೆ, ಅತ್ತಕಡೆಯೂ ಇವರದೇ ಒಂದು ತಡೆಗೋಡೆ ಇತ್ತು. ಅದನ್ನು ಹತ್ತಿ ಇಳಿಯಲು ಪ್ರಯತ್ನಿಸಿದ್ದಾದರೆ ಸೈನಿಕರಿಗೆ ತಾನು ಕಂಡುಹೋಗಬಹುದೆಂದೂ ಹೆದರುತ್ತಿದ್ದ. ಹೀಗೆ ಏನುಮಾಡುವುದೆಂದು ಯೋಚಿಸುತ್ತಿದ್ದಾಗಲೇ ರಸ್ತೆ ಬದಿಯ ಚರಂಡಿಯಲ್ಲೊಂದು ಕಬ್ಬಿಣದ ಉಂಗುರ ಕಂಡ. ಜೀನ್‌ವಾಲ್‌ಜೀನನ ಅಂತರಂಗದ ವ್ಯಕ್ತಿ, ಇಂಥ ಸಂದರ್ಭಗಳಲ್ಲಿ, ಅವನ ಬಹಿರಂಗವ್ಯಕ್ತಿಗಿಂತ ಹೆಚ್ಚು ಚುರುಕಾಗುತ್ತಿದ್ದಿತು. ಈ ಉಂಗುರದ ಅರ್ಥ ಮತ್ತು ಪ್ರಯೋಜನ ಅವನಿಗೆ ಹಠಾತ್ತನೆ ಹೊಳೆದುವು. ಆ ಉಂಗುರವೇ ಅವನಿಗೆ ಮುಂದಿನ ಮಾರ್ಗ ತೋರಿಸಿಕೊಟ್ಟಿತು.

ಅದು ನೆಲದಡಿಗೆ ಇಳಿಯುವ ಒಂದು ಕಂಡಿಯ ಬಾಗಿಲಿನ ಕೊಣಿಕೆ. ಉಂಗುರವನ್ನೆಳೆದೊಡನೆ ಕೆಳಗೆ ಕೆಲವು ಮೆಟ್ಟಲುಗಳು ಕಾಣಿಸಿದುವು. ಸಾಧಾರಣ ಹತ್ತಡಿಯಷ್ಟು ಆಳದಲ್ಲಿ ನೆಲವೂ ಅಸ್ಪಷ್ಟವಾಗಿ ತೋರಿತು. ಕಂಡಿ ಸಾಕಷ್ಟು ವಿಸ್ತಾರವಾಗಿದ್ದುದರಿಂದ ಜೀನ್‌ವಾಲ್‌ಜೀನ್ ಮೇರಿಯಸನನ್ನು ಎತ್ತಿಕೊಂಡು ಕೆಳಗಿಳಿದ. ತನ್ನ ಹಿಂದೆಯೇ ಬಾಗಿಲನ್ನು ಮುಚ್ಚಿಕೊಂಡು, ಅವನು ಮುಂದೆ ಹೋಗುತ್ತಿದ್ದಾಗಲೂ ಯುದ್ಧದ ಸದ್ದೂ ಕೇಳಿಬರುತ್ತಿತ್ತು.

ಎರಡನೆಯ ಸಂಪುಟ

೧. ಸುರಂಗ ಕೂಪಗಳಲ್ಲಿ ಪ್ರಕಾಶದ ಅನ್ವೇಷಣೆ

ಪ್ಯಾರಿಸ್ ನಗರ ಸಮುದ್ರದಷ್ಟು ವಿಶಾಲವಾದುದು. ಸಮುದ್ರದಲ್ಲಿ ಒಬ್ಬ ಮುಳುಗಬಹುದಾದ ಹಾಗೆ ಈ ನಗರದಲ್ಲಿಯೂ ಮುಳುಗಬಹುದು. ಆಗ ಜೀನ್‌ವಾಲ್‌ಜೀನ್ ನೆಲದಡಿಗೆ ಹೋದು

ದೆಂದರೆ ಈ ರೀತಿ ಮುಳುಗಿದ್ದೇ! ಪ್ಯಾರಿಸ್ ನಗರದಲ್ಲಿ ಸಾಧಾರಣ ಇನ್ನೂರು ಮೈಲಷ್ಟು ಉದ್ದದ ರಸ್ತೆಗಳಿವೆಯಂತೆ. ಈ ನೆಲದಡಿಯ ಸುರಂಗಗಳ ಉದ್ದವೂ ಸಾಧಾರಣ ಒಟ್ಟಾಗಿ ಅಷ್ಟೇ ಆಗಬಹುದು. ನಗರದ ಮೇಲ್ಭಾಗದಲ್ಲಿ ಎಲ್ಲರಂತೆ ಬಾಳಲಾರದವರೆಲ್ಲ ನೆಲದಡಿಯಲ್ಲಿ ಅಡಗಿ ಜೀವಿಸುತ್ತಿದ್ದ ಕ್ಷೇತ್ರವೇ ಈ ಸುರಂಗ! ಇದು ನಗರದ ಕಸಕಡ್ಡಿ, ನೀರು, ಕಲ್ಮಷಗಳನ್ನು ತೋಡಿನಂತೆ, ಹೊಳೆಯಂತೆ, ನದಿಯಂತೆಯೇ ಸಾಗಿಸಿ ಸಮುದ್ರಕ್ಕೆ ತಲಪಿಸುತ್ತದೆ.

ಜೀನ್‌ವಾಲ್‌ಜೀನ್ ಬಾಗಿಲನ್ನು ಮುಚ್ಚಿದಾಗ ಅಲ್ಲಿ ಕಂಡದ್ದು ಕತ್ತಲೆ ಮಾತ್ರ. ಅವನು ಸದ್ಯ ನೋಡಿ ಬಂದಿದ್ದ ನಡುಹಗಲಿನ ಕಡುಬೆಳಕಿಗೂ ಈಗ ಕಾಣುತ್ತಿದ್ದ ಅಮಾವಾಸ್ಯೆಯ ನಟ್ಟಿರುಳ ಕತ್ತಲಿಗೂ ಯುದ್ಧರಂಗದ ರೌದ್ರಘೋಷಕ್ಕೂ ಸಮಾಧಿಯಲ್ಲಿಯ ನಿರ್ಜೀವ ನಿಶ್ಶಬ್ದತೆಗೂ ಪ್ರತಿಕ್ಷಣ ಒದಗಬಹುದಾಗಿದ್ದ ಪ್ರಾಣಾಪಾಯಕ್ಕೂ ಅಪಾಯರಹಿತವಾದ ಭದ್ರ ಏಕಾಂತತೆಗೂ ನಡುವೆ ಬಂದದ್ದು ಆ ಕಬ್ಬಿಣದ ಬಾಗಿಲಾಗಿತ್ತು. ತಾನು ಪ್ಯಾರಿಸಿನ ಮಲಮೂತ್ರ, ನೀರನ್ನು ಸಾಗಿಸುವ ಸುರಂಗದಲ್ಲಿದ್ದುದ್ದಾಗಿ ಜೀನ್‌ವಾಲ್‌ಜೀನನಿಗೆ ಗೊತ್ತಿತ್ತು. ಅಲ್ಲದೆ ತಾನು ಕಂಡಿದ್ದ ಬಾಗಿಲನ್ನು ಸೈನಿಕರೂ ಕಂಡು ಅವರು ತನ್ನನ್ನು ಹಿಂಬಾಲಿಸಬಹುದೆಂದೂ ಊಹಿಸಿದ್ದ. ಹೀಗಾಗಿ ಅವನು ಅಲ್ಲೇ ನಿಲ್ಲದೆ, ಎಡಗೈಯಿಂದ ಬೆನ್ನ ಮೇಲಿದ್ದ ಮೇರಿಯಸನನ್ನು ಹಿಡಿದುಕೊಂಡು, ಬಲಗೈಯಿಂದ ಇಕ್ಕಡೆಯ ಗೋಡೆಗಳನ್ನು ಮುಟ್ಟಿನೋಡಿಕೊಂಡು, ತಡವರಿಸುತ್ತ ಮುಂದೆ ಸಾಗತೊಡಗಿದ. ಮೊದಮೊದಲು ಕತ್ತಲಲ್ಲಿ ಏನೂ ಕಾಣಲಿಲ್ಲ. ಆದರೆ ಮುಂದುವರಿದ ಹಾಗೆ, ಅವನ ಕಣ್ಣು ಪರಿಸ್ಥಿತಿಗೆ ತಕ್ಕಂತೆ ಮಾರ್ಪಡುತ್ತ, ಅಸ್ಪಷ್ಟವಾಗಿಯಾದರೂ ಹಾದಿಯನ್ನು ಕಾಣತೊಡಗಿದ. ಅವನ ಈ ವರೆಗಿನ ಬದುಕಿನ ಅನುಭವ, ಹುಟ್ಟುಬುದ್ಧಿ, ದೇಹದಾರ್ಢ್ಯ, ಚಮತ್ಕಾರ—ಈ ಎಲ್ಲ ಗುಣವೂ—ಅವನಿಗೆ ಈಗ ಅಗತ್ಯಬಿದ್ದುವು. ಯಾರೂ ಇಲ್ಲದಿದ್ದ ಸ್ಥಳದಲ್ಲೇ, ಎಲ್ಲರಿಗೂ ಬೇಕಾಗುವ ಈ ಗುಣಗಳೆಲ್ಲ ಅವನಿಗೆ ಅವಶ್ಯಬಿದ್ದುದೂ ಆ ಗುಣಗಳೆಲ್ಲ ಅವನಿಗೆ ಇದ್ದುದೂ ವಿಧಿವೈಚಿತ್ರ್ಯವೆನ್ನಬಹುದು. ಅವನು ಕೆಲಕಾಲ ಕೈದಿಯಾಗಿದ್ದ ಅನುಭವದಿಂದಲೂ ಕೆಲಕಾಲ ಮುನಿಸಿಪಲ್ ಮೇಯರನಾಗಿದ್ದ ಅನುಭವದಿಂದಲೂ ನೆಲದಡಿಯ ಸುರಂಗಗಳ ರಚನೆಯನ್ನೂ ಅವುಗಳ ಉದ್ದೇಶವನ್ನೂ ಅರಿತಿದ್ದ. ಈ ಅನುಭವದಿಂದಲೇ, ಈ ಸುರಂಗಗಳೆಲ್ಲ ಒಟ್ಟಾಗುತ್ತ, ಅಗಲವಾಗುತ್ತ ಕೊನೆಗೆ ಸೀಯನ್ ನದಿಗೆ ಸೇರಲೇಬೇಕೆಂದು ನಿಶ್ಚೈಸಿಕೊಂಡ. ಅವನ ಕಾಲ ಕೆಳಗೇ ಇದ್ದ ಈ ಕಲುಷಿತ ನದಿ ಯಾವ ದಿಕ್ಕಿಗೆ ಹರಿಯುತ್ತಿತ್ತೆಂದು ಅವನು ನೋಡಿ ತಿಳಿಯಲಾರದವನಾಗಿದ್ದರೂ ನೀರು ಹರಿಯುವ ದಿಕ್ಕನ್ನು ಕಾಲಿನಿಂದ ಮುಟ್ಟಿ ಅರಿತುಕೊಂಡ. ಹೀಗೆ ದಿಕ್ಕನ್ನು ತಿಳಿದೇ ಅವನು ನದಿ ಹರಿಯುತ್ತಿದ್ದ ಕಡೆಗೆ, ತನ್ನ ಹೊರೆಯನ್ನೂ ಹೊತ್ತುಕೊಂಡು ಮುಂದೆ ಸಾಗಿದ. ಅವನ ಮಾರ್ಗದರ್ಶಕನು ದೇವರೇ ಆಗಿದ್ದನೆಂದು ನಂಬುವುದೇ ನ್ಯಾಯವೆಂದು ತೋರುತ್ತದೆ. ಏಕೆಂದರೆ, ನೆಲದಡಿಯ ನೂರಾರು ಸಂದುಗೊಂದುಗಳ ಸುರಂಗಗಳಲ್ಲಿ ನದಿಗೆ ತಲಪಲಿರುವವನ್ನೇ ಹುಡುಕಿ ಹಿಡಿಯಲು ಸಾಧಾರಣ ಜನರಿಂದ ಎಂದೂ ಸಾಧ್ಯವಿಲ್ಲ. ಕಗ್ಗತ್ತಲೆಯಲ್ಲಿ ಸಿಕ್ಕಿಬಿದ್ದಾಗ ದೈಹಿಕ ಚಕ್ಷುಸ್ಸುಗಳು ಬೆಳಕನ್ನು ಅರಸಿ ಪಡೆಯುವಂತೆ, ಆಂತರಿಕ ಅಥವಾ, ಮಾನಸಿಕ ಅಂಧಕಾರದಲ್ಲಿ ಅಂತಃಚಕ್ಷುಸ್ಸು ದೇವರನ್ನೇ ಅರಸಿಪಡೆಯುವುದು. ಹೀಗೆ ಜೀನ್‌ವಾಲ್‌ಜೀನ್ ದೈವಲೀಲೆಗೆ ಶರಣುಹೋಗಿ, ಆ ದೈವಿಕ ಒಲುಮೆಯಿಂದಲೇ ಸುರಂಗಗಳಲ್ಲಾದರೂ, ವಿಶೇಷ ದಾರಿತಪ್ಪದೆ, ನದಿಯ ಅಭಿಮುಖವಾಗಿ ಹೋಗುತ್ತಿದ್ದ.

ಈ ಸಮಯದಲ್ಲಿ ಮೇರಿಯಸ್ ಸತ್ತಿದ್ದನೇ, ಅಥವಾ ಜೀವಂತವಾಗಿ ಉಳಿದಿದ್ದನೇ ಎಂಬ ಅರಿವು ಅವನಿಗಿರಲಿಲ್ಲ. ಆದರೆ ಬಲುದೂರ ಹೋಗುವಾಗ ಮೇರಿಯಸನ ಬಿಸಿ ಉಸಿರು ಜೀನ್

ವಾಲ್‌ಜೀನನ ಕುತ್ತಿಗೆಗೆ ಬೀಳತೊಡಗಿತು. ಮೇರಿಯಸನಿಗೆ ಜೀವವಿದೆಯೆಂದು ಅದರಿಂದ ತಿಳಿದು ಕೊಂಡನು. ಒಮ್ಮೆ ಈ ಸುರಂಗಮಾರ್ಗವನ್ನು ಶೋಧಿಸುತ್ತಿದ್ದ ಒಂದು ಪೊಲೀಸ್ ಪಂಗಡದ ದೃಷ್ಟಿಗೆ ಇವನು ಬೀಳುವುದರಲ್ಲಿದ್ದ. ಅದೃಷ್ಟವಶದಿಂದ, ಅವರು ಲಾಂದ್ರ ಹಿಡಿದುಕೊಂಡು ಬರುತ್ತಿದ್ದುದರಿಂದ, ಇವನು ಅವರನ್ನು ಬಲು ದೂರದಿಂದಲೇ ಕಂಡು, ಅಡ್ಡ ಸುರಂಗಗಳಲ್ಲಿ ಹೋಗಿ ತಪ್ಪಿಸಿಕೊಂಡನು.

೨. ಕೊಳ್ಳೆಯ ಬೆನ್ನ ಹಿಂದೆ

ಪ್ಯಾರಿಸಿನ ಪೊಲೀಸರು ಪ್ರಾಮಾಣಿಕರೂ ದಕ್ಷರೂ ಆಗಿದ್ದರೆಂಬುದರಲ್ಲಿ ಸಂಶಯವಿರಲಿಲ್ಲ. ಜನರು ದಂಗೆಯೆದ್ದು ಸರಕಾರವೇ ಉರುಳುವ ಪರಿಸ್ಥಿತಿ ತೋರಿದಾಗಲೂ ಅವರು ಮಾತ್ರ ತಂತಮ್ಮ ಕರ್ತವ್ಯಗಳಲ್ಲಿ ಅಲಸಿಗರಾಗಿರಲಿಲ್ಲ. ಇಂಥ ಒಂದು ಪ್ರಸಂಗವನ್ನೇ ಇಲ್ಲಿ ಹೇಳಿಲಿರುವೆವು.

ಜೂನ್ ೬ರ ವೇಳೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿ ಯಾವನೋ ಒಬ್ಬನನ್ನು ಸೀಯನ್ ನದಿಯ ದಂಡೆಯಲ್ಲೇ ಹಿಂಬಾಲಿಸಿ ಹೋಗುತ್ತಿದ್ದ. ಪೊಲೀಸ್ ಅಧಿಕಾರಿ ಜೇವರ್ಟನಂತೆಯೇ ತೋರುತ್ತಿದ್ದ. ಕೊಳ್ಳೆ ಒಬ್ಬ ಕೃಶಾಂಗಿ ಬನಿಯನ್ ಮಾತ್ರ ತೊಟ್ಟು ಇಜಾರು ಧರಿಸಿದ್ದ ಒಬ್ಬ ಗಂಡುಸು. ತನ್ನ ಹಿಂದೆ ಪೊಲೀಸ್ ಅಧಿಕಾರಿ ಬರುತ್ತಿದ್ದಾನೆಂಬ ಸಂಶಯ ಅವನಿಗಿದ್ದಂತೆ ತೋರುತ್ತಿತ್ತು. ಪೊಲೀಸ್ ಅಧಿಕಾರಿಗೆ ಅವನನ್ನು ಕೂಡಲೇ ಹಿಡಿಯುವಷ್ಟು ತ್ರಾಣವಿದ್ದಂತೆಯೂ ಕಾಣುತ್ತಿತ್ತು. ಆದರೂ, ತನ್ನ ಕೊಳ್ಳೆ ಮುಂದೆ ಎಲ್ಲಿಗೆ ಹೋಗುವುದು, ಇನ್ನೂ ಏನನ್ನೆಲ್ಲ ಮುಂದೆ ತಿಳಿಯಬಹುದು ಎಂಬ ಸಂಶೋಧನೆಗೋಸ್ಕರ ಆ ಅಧಿಕಾರಿ ಆ ವ್ಯಕ್ತಿಯನ್ನು ಎಚ್ಚರದಿಂದ ಹಿಂಬಾಲಿಸುತ್ತಿದ್ದ. ತನ್ನ ಮುಂದಿನ ಅನುಕೂಲಕ್ಕಾಗಿ ಪೊಲೀಸ್ ಅಧಿಕಾರಿ ಬಾಡಿಗೆ ಬಂಡಿಯನ್ನೂ ಗೊತ್ತುಮಾಡಿಕೊಂಡಿದ್ದ. ಬಂಡಿಗ ನದಿ ಅಂಚಿನ ಮಾರ್ಗದಲ್ಲೇ ಬಂಡಿಯನ್ನು ಮೆಲ್ಲಗೆ ಸರಿಸಿಕೊಂಡು ಹೋಗುತ್ತ, ಪೊಲೀಸ್ ಅಧಿಕಾರಿ ಕೈಸನ್ನೆ ಮಾಡಿದರೆ ಕಾಣುವಂತೆಯೇ ಮುಂದುವರಿದು ಬರುತ್ತಿದ್ದ.

ಹೀಗೆ ಪೊಲೀಸ್ ಅಧಿಕಾರಿ ಆ ಅಪರಿಚಿತನನ್ನು ಹಿಂಬಾಲಿಸುತ್ತಿದ್ದ ಹಾಗೆಯೇ ಅಪರಿಚಿತ ನದಿಯ ಎತ್ತರದ ದಂಡೆಯಿಂದ ಹಠಾತ್ತಾಗಿ ಕೆಳಗಿಳಿದು ಮಾಯವಾದ. ಹೀಗೆ ತನ್ನ ಕೊಳ್ಳೆ ಮಾಯವಾದುದನ್ನು ಕಂಡು ಅಧಿಕಾರಿ ಮುಂದೆ ಓಡಿದ. ಕೊನೆಗೆ, ಕೊಳ್ಳೆ ಇಳಿದಲ್ಲೇ ಅಧಿಕಾರಿಯೂ ಇಳಿದಾಗ ಅಲ್ಲೇ ಒಂದು ಕಿರಿದಾದ ಕಾಲುದಾರಿ ಕಂಡ. ಅದರಲ್ಲೇ ನಾಲ್ಕು ಮಾರು ಮುಂದೆ ಹೋಗುವಾಗ, ನದಿಗೆ ಅಭಿಮುಖವಾಗಿದ್ದ ಕಗ್ಗಲ್ಲಿನ ದೊಡ್ಡ ಕಮಾನನ್ನೂ ಕಮಾನಿನ ಒಳಗೆ ಭದ್ರವಾಗಿ ಇಡಲ್ಪಟ್ಟಿದ್ದ ಕಬ್ಬಿಣದ ದೊಡ್ಡ ಬಾಗಿಲನ್ನೂ ನೋಡಿದ. ಬಾಗಿಲು ಕಬ್ಬಿಣದ ಸರಳುಗಳಿಂದ ಮಾಡಿದ್ದಾಗಿತ್ತು. ಕಮಾನಿನ ಒಳಭಾಗಕ್ಕೆ ತುಂಬ ಗಾಳಿ, ಬೆಳಕು ಹೋಗುವಂತೆ ಆ ಬಾಗಿಲು ಇತ್ತು. ಸರಳುಗಳು ಹತ್ತಿರ ಹತ್ತಿರವಾಗಿದ್ದು ಮನುಷ್ಯರು ನುಗ್ಗದಂತೆ ಇದುವು. ಬಾಗಿಲಿಗೆ ಬಲವಾದ ಬೀಗವೂ ಹಾಕಿಕೊಂಡಿತ್ತು. ಈ ಬಾಗಿಲಿನ ಅಡಿಯಲ್ಲೇ ಪ್ಯಾರಿಸಿನ ಸುರಂಗ ಮಾರ್ಗದ ಚರಂಡಿಗಳ ವಿಶಿಷ್ಟ ಕಶ್ಮಲಗಳ ನದಿಗಳು ಒಂದಾಗಿ ಹರಿದುಬಂದು ಸೀಯನ್ ನದಿಯನ್ನು ಸೇರುತ್ತಿದ್ದುವು. ಪೊಲೀಸ್ ಅಧಿಕಾರಿ ಆಗ ಆ ಬಾಗಿಲನ್ನೂ ಅದರ ಬೀಗವನ್ನೂ ನೋಡಿ, "ಇರಲಿ, ಆ ಕಳ್ಳ ಇದರೊಳಗೆ ನುಗ್ಗಿರಬೇಕು. ಅವನ ಕೈಯಲ್ಲಿ ಕಳ್ಳ ಬೀಗದಕೈ ಇರಬೇಕು,"

ಎಂದಂದುಕೊಂಡ. ಅಧಿಕಾರಿ ತಾನು ಸ್ವಲ್ಪ ಹೊತ್ತು ಅಡಗಿಕುಳಿತು ಪರೀಕ್ಷಿಸಬೇಕೆಂದು ಸಮೀಪದಲ್ಲಿದ್ದ ಒಂದು ಕಲ್ಲುಕಸಗಳ ರಾಶಿಯ ಹಿಂಬದಿಯಲ್ಲಿ ಕುಳಿತು ಕಬ್ಬಿಣದ ಬಾಗಿಲ ಕಡೆ ನೋಡುತ್ತಿದ್ದ.

೩. ಶಿಲುಬೆ ಹೊತ್ತವ

ಜೀನ್‌ವಾಲ್‌ಜೀನನಿಗೆ ತುಂಬ ಹಸಿವೆಯಾಗತೊಡಗಿತ್ತು. ಅವನು ಹೊತ್ತು ತರುತ್ತಿದ್ದ ಭಾರದ ದೆಸೆಯಿಂದಲೂ ಸುರಂಗಮಾರ್ಗದ ಕೆಸರಲ್ಲಿ ನಡೆದುಬಂದಿದ್ದುದರ ದೆಸೆಯಿಂದಲೂ ಬಹಳ ಆಯಾಸ ಆಗಿತ್ತು. ಆದರೂ ಜೀವವಿರುವ ತಕನವೂ ಈ ಹೊರೆಯನ್ನು ರಕ್ಷಿಸಿ ಕಾಪಾಡುವ ಕೆಲಸದಲ್ಲಿ ಕಂಕಣಬದ್ಧನೇ ಆಗಿದ್ದ. ಹೀಗೆ ಮುಂದುವರಿಯುತ್ತಿದ್ದ ಹಾಗೆಯೇ ಕ್ರಮೇಣ ತಂಪಾದ ಶುದ್ಧಗಾಳಿ ಒಳಗೆ ಬರುತ್ತಿತ್ತೆಂದು ತಿಳಿದ. ಇದರಿಂದಲೇ, ತಾನು ನದಿಗೋ ಬಯಲು ಪ್ರದೇಶಕ್ಕೆ ಬಂದಿರಬೇಕೆಂದು ಊಹಿಸಿದ. ಆ ಊಹನೆಯನ್ನು ಪುಷ್ಟೀಕರಿಸುವಂತೆ ಸ್ವಲ್ಪ ದೂರ ಮುಂದೆ ಹೋಗುವಾಗ ದೂರದಿಂದ ಹಗಲುಬೆಳಕನ್ನೂ ಕಂಡ. ಮತ್ತೂ ಸ್ವಲ್ಪ ಮುಂದಕ್ಕೆ ನಡೆಯುವಾಗ ನಾಲ್ಕು ಸುರಂಗಗಳು ಒಟ್ಟಾಗಿ ಸೇರಿದ್ದ ಒಂದು ಅಗಲ ಖಾಲಿಸ್ಥಳವೂ ಅದರಲ್ಲೇ ಎತ್ತರವಾಗಿದ್ದ ಒಂದು ದಿಡ್ಡೂ ಕಂಡು ಬಂದುವು. ಆ ದಿಡ್ಡಿನ ಮೇಲೆ ಮೇರಿಯಸನನ್ನು ಮಲಗಿಸಿ ಸ್ವಲ್ಪ ವಿಶ್ರಮಿಸಿಕೊಂಡ.

ಅಲ್ಲೇ ಅವನು ಮೇರಿಯಸನನ್ನು ಸ್ಪಷ್ಟವಾಗಿ ನೋಡಿದ್ದು. ಅವನ ಮೈ ಕೈ ಎಲ್ಲ ಮುಟ್ಟಿ ನೋಡಿ ಅವನಿಗೆ ಜೀವ ಇತ್ತೆಂಬುದನ್ನು ಸ್ಪಷ್ಟಪಡಿಸಿಕೊಂಡ. ಮೇರಿಯಸನ ಜೇಬಿನಲ್ಲಿ ಒಂದು ತುಂಡು ಬ್ರೆಡ್ಡು ಇದ್ದುದನ್ನು ಕಂಡು ಅದನ್ನು ತಿಂದ. ಇನ್ನೇನಾದರೂ ಜೇಬಿನಲ್ಲಿದೆಯೋ ಎಂದು ಹುಡುಕಿ ಡೈರಿಯನ್ನು ಕಂಡ. ಅದನ್ನು ಪರೀಕ್ಷಿಸಿದಾಗ, "ನನ್ನ ಹೆಸರು ಮೇರಿಯಸ್ ಪೋಂಟ್‌ಮರ್ಸಿ, ನನ್ನಜ್ಜ ಮಾನ್ಸ್ಯರ್ ಗಿಲೆನಾರ್ಮಂಡ್ ಮರೆಯಸ್ಸಿನ ರ್‍ಯೂ'ಫಿಲಿಸ್ ಕಾಲ್ವರೆಯ ಸಂಖ್ಯೆ ೬ನೇ ಮನೆಯಲ್ಲಿರುವವರು. ನನ್ನ ಶವವನ್ನು ಅಲ್ಲಿಗೆ ಸಾಗಿಸಿ," ಎಂದು ಬರೆದಿದ್ದುದನ್ನು ಓದಿದ. ಇಷ್ಟೆಲ್ಲ ವಿಷಯ ತಿಳಿಯುತ್ತ ಹೋದ ಹಾಗೆ ಮೇರಿಯಸ್ ಕೋಸೆಟ್ಟೆಯ ಪ್ರೇಮದ ಸಂಬಂಧವಾಗಿ ತನ್ನ ಶತ್ರುವೆಂದು ಗ್ರಹಿಸತೊಡಗಿದ. ಆಗ ಅವನನ್ನು ಅಲ್ಲೇ ಬಿಟ್ಟು ತನ್ನ ಜೀವದ ರಕ್ಷಣೋಪಾಯವನ್ನು ಹುಡುಕಬೇಕೋ ಅಥವಾ ರಕ್ಷಿಸಬೇಕೋ ಎಂದು ಆಲೋಚಿಸತೊಡಗಿದ. ಕೊನೆಗೆ ಅವನ ಧರ್ಮಬುದ್ಧಿಯೇ ಜಯಪ್ರದವಾಗಿ ಮೇರಿಯಸನನ್ನು ಹೇಗಾದರೂ ರಕ್ಷಿಸಬೇಕೆಂದು ನಿರ್ಧರಿಸಿದ.

ಕೊನೆಗೆ, ಜನಗಳ ಪಾಪದ ಪ್ರಾಯಶ್ಚಿತ್ತವಾಗಿ ತನ್ನ ದೇಹವನ್ನೇ ಬಲಿಕೊಟ್ಟ ಮಹಾತ್ಮ, ತನ್ನನ್ನೇ ಏರಿಸಲಿದ್ದ ಶಿಲುಬೆಯನ್ನು ಹೊತ್ತು ಸಾಗಿಸಿಕೊಟ್ಟಂತೆ, ಜೀನ್‌ವಾಲ್‌ಜೀನ್ ತನ್ನ ಜೀವನದ ಸರ್ವಸ್ವವನ್ನು ನಾಶಮಾಡಲಿದ್ದ ಮೇರಿಯಸನನ್ನು ಹೊತ್ತುಕೊಂಡು ಮುಂದೆ ಸಾಗಿದ.

೪. ಕಂಪ

ಜೀನ್‌ವಾಲ್‌ಜೀನ್ ಬೆಳಕನ್ನು ನೋಡುತ್ತ ಮುಂದುವರಿದಾಗ, ಒಂದು ಕಡೆ ತಿಳಿಯದೆ ಒಂದು ಮಹಾ ಕಂಪಕ್ಕೆ ಕಾಲಿಟ್ಟ. ಇಂಥ ಕಂಪಗಳು ಪ್ಯಾರಿಸಿನಲ್ಲಿ ಅಲ್ಲಲ್ಲಿವೆಯೆಂಬುದು ನಗರದ ಚರಿತ್ರೆ ಬಲ್ಲವರಿಗೆಲ್ಲ ಗೊತ್ತಿರಬಹುದು. ಜೀನ್‌ವಾಲ್‌ಜೀನ್ ಕಂಪದಲ್ಲಿ ಮುಂದುವರಿದ ಹಾಗೆಲ್ಲ

ತಳಕ್ಕೆ ಇಳಿದುಹೋಗತೊಡಗಿದ. ಕೊನೆಗೆ ತನ್ನ ಎರಡು ಕೈಗಳಿಂದ ಮೇರಿಯಸನನ್ನು ಮೇಲಕ್ಕೆ ಎತ್ತಿ ಹಿಡಿದು ಎದೆಯವರೆಗೂ ಕೆಸರಲ್ಲೇ ದಾಟ ತೊಡಗಿದ. ಜೀನ್‌ವಾಲ್‌ಜೀನನ ಅದ್ಭುತ ದೇಹಬಲವೆಲ್ಲ ಈಗ ಉಪಯೋಗಕ್ಕೆ ಬಂತು. ವಿಧಿ ಇವನ ಬಗ್ಗೆ ತನ್ನ ಗುರಿಯನ್ನು ಬೇರೊಂದು ವಿಧವಾಗಿ ನಿಯಮಿಸಿದ್ದುದರಿಂದ ಮಾತ್ರ ಇವನು ಇಂಥ ಪರಿಸ್ಥಿತಿಯಲ್ಲೂ ಧೈರ್ಯಗುಂದದೆ ಮುಂದುವರಿದ. ಅಂತೂ, ಕೊನೆಗೆ ಅವನ ಕಾಲಿಗೆ ಗಟ್ಟಿ ಮೆಟ್ಟಲು ಸಿಕ್ಕಿತು. ಅದರ ಮೂಲಕ ಬೇರೆ ಮೆಟ್ಟಲನ್ನು ಏರುತ್ತ ಕೊನೆಗೆ ಕಂಪದಿಂದ ಮೇಲೆ ಬಂದು ಪಾರಾದ.

ಸುರಂಗಗಳ ಕಾಮಗಾರಿ ವೇಳೆ ಈ ಕಂಪವನ್ನು ಕಂಡೇ ಅದಕ್ಕೆ ಬಾವಿಗೆ ಕಟ್ಟುವ ಗೋಡೆ ಯಂತೆ ಉರುಟು ಗೋಡೆಯನ್ನೂ ಕೆಲಸದ ಬಗ್ಗೆ ಕೆಳಗಿಳಿಯಲು ಮೆಟ್ಟಲನ್ನೂ ಸರಕಾರ ಕಟ್ಟಿ ಸಿತ್ತು. ಈ ಮೆಟ್ಟಲುಗಳು ಇಂದು ಜೀನ್‌ವಾಲ್‌ಜೀನನ ಸಹಾಯಕ್ಕೆ ಒದಗಿದುವು.

೫. ಅಂಗಿಯ ತುಂಡು

ಕಂಪದಿಂದ ಪಾರಾದ ಜೀನ್‌ವಾಲ್‌ಜೀನ್ ಬೆಳಕಿನತ್ತ ಸಾಗಿದ. ಕೊನೆಗೆ ಕಬ್ಬಿಣದ ಬಾಗಿಲನ್ನೂ ಬಾಗಿಲಿನಿಂದ ಆಚೆಗೆ ಹರಿಯುತ್ತಿದ್ದ ನದಿಯನ್ನೂ ಸಂಜೆಯ ಬೆಳಕಿನಲ್ಲಿ ಚೆನ್ನಾಗಿ ಗುರುತಿಸಿದ. ಬಾಗಿಲಿನ ಸರಳಿನ ಸೆರೆಯಲ್ಲಿ ಬೆಳಕು ಬರುತ್ತಿತ್ತು. ಆದರೆ ಬಾಗಿಲಿಗೆ ಬೀಗ ಜಡಿಯಲಾಗಿತ್ತು.

ಹೀಗೆ ಒಂದು ಕಡೆ ನದಿ, ವಿಶಾಲ ಪ್ರದೇಶ, ಗಾಳಿ ಬೆಳಕು ಕಾಣುತ್ತಿದ್ದಾಗಲೇ ತಾನು ಸುರಂಗದ ಒಳಗಡೆ ಬಂಧಿತನಾಗಿ ಕ್ರಮೇಣ ಕುಂದಿ ಸಾಯುವ ಪ್ರಸಂಗ ಒದಗಿತೆಂದು ದುಃಖಿಸತೊಡಗಿದ. ಹತಾಶೆಯಿಂದ ನದಿಯ ಕಡೆಗೆ ನೋಡುತ್ತಿದ್ದಾಗ, ಯಾರೋ ಒಬ್ಬ ಹಿಂದಿನಿಂದ ಬಂದು ಜೀನ್ ವಾಲ್‌ಜೀನನ ಹೆಗಲ ಮೇಲೆ ಸಲಿಗೆಯಿಂದ ಕೈಯಿಟ್ಟ. ಸುರಂಗದ ಒಳಗೆ ಸಂಪೂರ್ಣ ಕತ್ತಲಾಗಿ ಇದ್ದುದರಿಂದ, ಜೀನ್‌ವಾಲ್‌ಜೀನನಿಗೆ ಆ ವ್ಯಕ್ತಿ ಮೊದಲೇ ಅಲ್ಲಿದ್ದುದು ತಿಳಿಯಲಿಲ್ಲ. ಈಗ ಅಪರಿಚಿತನ ಮುಖಕ್ಕೆ ಹೊರಗಡೆಯಿಂದ ಬಂದ ಬೆಳಕು ಬಿದ್ದು, ಆತ ತೆನಾರ್ಡಿಯರನೆಂದು ಜೀನ್‌ವಾಲ್‌ಜೀನನಿಗೆ ಗೊತ್ತಾಯಿತು. ಜೀನ್‌ವಾಲ್‌ಜೀನ್ ಆಗ ನದಿಗೆ ಬೆನ್ನು ಹಾಕಿ ಒಳಗಡೆ ನೋಡುತ್ತಿದ್ದುದರಿಂದ, ತೆನಾರ್ಡಿಯರನಿಗೆ ಅವನ ಗುರುತು ಸಿಕ್ಕಲಿಲ್ಲ. ಆದರೆ, ಯಾರನ್ನೋ ಹಣಕ್ಕಾಗಿ ಖೂನಿ ಮಾಡಿ ಹೆಣವನ್ನು ಹೊತ್ತು ತಂದಿದ್ದಾತ ತನ್ನೆದುರು ಇರುವುದಾಗಿ, ಇವನನ್ನು ನೋಡಿ ತೆನಾರ್ಡಿಯರ್ ನಿಶ್ಚೈಸಿಕೊಂಡು, ಭಲು ಸಲಿಗೆಯಿಂದ, "ಗಾಬರಿಗೊಳ್ಳಬೇಡ. ಇದೊಂದು ವಿಶೇಷವಲ್ಲ. ಅರ್ಧಾಂಶಕ್ಕೆ ನಾನು ತಯಾರು," ಅಂದ.

ಜೀನ್‌ವಾಲ್‌ಜೀನನಿಗೆ ಈ ಮಾತು ಅರ್ಥವಾಗಲಿಲ್ಲ. ಆ ಕಾರಣದಿಂದಲೂ, ತಾನು ಮಾತಾಡಿ ಯಾರ ಪರಿಚಯಕ್ಕೆ ಬೀಳಬಾರದೆಂಬ ಕಾರಣದಿಂದಲೂ ಅವನು ಮೌನವಾಗಿಯೇ ನಿಂತ. ತೆನಾರ್ಡಿಯರ್ ಪುನಃ ಅಂದ, "ನೀನು ಮಾತಾಡದಿರುವುದೇ ನ್ಯಾಯ. ನಿನಗೆ ಸಿಕ್ಕಿದುದರಲ್ಲಿ ಅರ್ಧಾಂಶವನ್ನು ನನಗೆ ಕೊಟ್ಟರೆ ಈ ಬಾಗಿಲನ್ನು ತೆರೆದುಕೊಡುವೆನು," ಅಂದ. ಮತ್ತೆ, ಮೇರಿಯಸನನ್ನು ತೋರಿಸುತ್ತ, ಮುಂದುವರಿಸಿ, "ಆ ಹೆಣಕ್ಕೆ ತಕ್ಕ ಹಗ್ಗವನ್ನೂ ಕಲ್ಲನ್ನೂ ತೋರಿಸಿ ಕೊಡುವೆನು. ಕಲ್ಲು ಕಟ್ಟಿ ನದಿಗೆ ಹಾಕಿದರೆ, ನದಿ ಎಂದೂ ಸಾಕ್ಷಿ ನುಡಿಯದು," ಅಂದ.

ಜೀನ್‌ವಾಲ್‌ಜೀನ್ ಏನೂ ಮಾತಾಡದೆ ತನ್ನ ಅಂಗಿ ಜೇಬೊಳಗೂ ಮೇರಿಯಸನ ಅಂಗಿ ಜೇಬೊಳಗೂ ಇದ್ದ ಹಣವನ್ನೆಲ್ಲ ತೆನಾರ್ಡಿಯರನಿಗೆ ತೆಗೆದುಕೊಟ್ಟ. ಆದರೆ, ತೆನಾರ್ಡಿಯರ್ ಒಮ್ಮೆ ಇವರಿಬ್ಬರ ಜೇಬನ್ನೆಲ್ಲ ಪರೀಕ್ಷಿಸಿ ನೋಡಿದ. ಕೊನೆಗೆ, ಅರ್ಧಾಂಶ ಮಾಡುವಷ್ಟು ಹಣ

ಸಿಕ್ಕಲಿಲ್ಲವೆಂದು ಗೊಣಗುಟ್ಟಿಕೊಳ್ಳುತ್ತ, ಜೀನ್‌ವಾಲ್‌ಜೀನನಿಗೆ ಹಗ್ಗ ಕೊಟ್ಟು, ಕಲ್ಲು ನದಿಯ ದಡದಲ್ಲಿದೆಯೆಂದು ಹೇಳಿ, ಕಬ್ಬಿಣದಬಾಗಿಲನ್ನು ತೆರೆದುಕೊಟ್ಟ.

ತೆನಾರ್ಡಿಯರ್ ಮೇರಿಯಸನ ಅಂಗಿಯನ್ನು ಪರೀಕ್ಷಿಸುತ್ತಿದ್ದಾಗ, ಜೀನ್‌ವಾಲ್‌ಜೀನನಿಗೆ ತಿಳಿಯದಂತೆ, ಅಂಗಿಯಿಂದ ಒಂದು ತುಂಡು ಬಟ್ಟೆಯನ್ನು ಕತ್ತರಿಸಿ ತೆಗೆದುಕೊಂಡ. ಬಾಗಿಲಿನಿಂದಾಚೆಗೆ ತನ್ನನ್ನು ಯಾರೋ ಕಾಯುತ್ತಿರಬೇಕೆಂದು ಊಹಿಸಿಕೊಂಡಿದ್ದವನಂತೆ, ಮಾತುಗಳನ್ನೆಲ್ಲ ಪಿಸುಮಾತಿನಿಂದಲೇ ಮುಗಿಸಿ ಜೀನ್‌ವಾಲ್‌ಜೀನನನ್ನು ಹೊರಗೆ ಕಳುಹಿಸಿ, ತಾನು ಬಾಗಿಲು ಬಂದೋಬಸ್ತು ಮಾಡಿಕೊಂಡ.

೬. ಸ್ವಾತಂತ್ರ್ಯ ? ಬಂಧನ ?

ಜೀನ್‌ವಾಲ್‌ಜೀನ್ ಸುರಂಗದಿಂದ ಹೊರಗೆ ಬಂದೊಡನೆ ಮೇರಿಯಸನನ್ನು ನೆಲದಲ್ಲಿ ಮಲಗಿಸಿ ತಾನು ಕುಳಿತು ಸ್ವಲ್ಪ ವಿಶ್ರಮಿಸಿಕೊಳ್ಳತೊಡಗಿದ. ಅವನು ಆ ವರೆಗೆ ಅನುಭವಿಸುತ್ತಿದ್ದ ಕತ್ತಲು, ತೇವ, ಪ್ರಾಣಾಪಾಯ ಭಯ ಎಲ್ಲವೂ ಒಮ್ಮೆಗೇ ನಿಶ್ಶೇಷವಾಗಿ ತೊಲಗಿದುವು. ಅಲ್ಲಿ ಆರೋಗ್ಯಕರವಾದ, ಸುಖಕರವಾದ, ಸಂತೋಷಪ್ರದವಾದ ತಂಗಾಳಿ ಬೀಸುತ್ತಿತ್ತು. ಸೂರ್ಯ ಅಸ್ತಮಿಸತೊಡಗಿದ್ದ. ನದಿಯ ಕಿರು ಅಲೆಗಳು ದಡ ಚುಂಬಿಸಿ, ಅಲ್ಲಿಯ ನಿಶ್ಶಬ್ದತೆಗೆ ಮೃದು ಭಂಗ ತರುತ್ತಿದ್ದುವು. ಹಕ್ಕಿಗಳು ತಮ್ಮ ಸಂಜೆಯ ವಿಶ್ರಾಂತಿ ಮೊದಲಿನ ಪರಸ್ಪರ ವಿನಿಮಯಗಳನ್ನು ಮಾಡಿಕೊಂಡು ಗೂಡು ಸೇರತೊಡಗಿದುವು. ಆಕಾಶದ ಪೂರ್ವಭಾಗದಲ್ಲಿ ನಾಲ್ಕಾರು ನಕ್ಷತ್ರಗಳು ಮುಂದೆ ಬಂದು ತಾವು ಇನ್ನೂ ಮುಂದೆ ಬರಬಹುದೇ ಎಂದು ಅಸ್ತಂಗತನಾಗುತ್ತಿದ್ದ ರವಿಯನ್ನು ವಿಚಾರಿಸುತ್ತಿದ್ದುವು. ಆಗಿನ ಆನಂದವನ್ನು ಅನಂತಮಹಿಮನೇ ತನಗೆ ಇತ್ತಿರುವನೆಂದು ಜೀನ್‌ವಾಲ್‌ಜೀನ್ ಗ್ರಹಿಸುತ್ತ ದೇವರಿಗೆ ಮನದಲ್ಲೇ ವಂದಿಸಿದ. ಸ್ವಲ್ಪ ಕಾಲಾನಂತರ ನದಿಗೆ ಹೋಗಿ ಅಂಗೈಯಲ್ಲಿ ನೀರು ತಂದು ಮೇರಿಯಸನ ಮುಖಕ್ಕೆ ಚಿಮುಕಿಸಿದ. ಆದರೂ ಮೇರಿಯಸ್ ಏಳಲಿಲ್ಲ.

ಜೀನ್‌ವಾಲ್‌ಜೀನ್ ಈ ರೀತಿ ಮೇರಿಯಸನನ್ನು ನೋಡುತ್ತಿದ್ದಾಗಲೇ ಜೇವರ್ಟ್ ಜೀನ್‌ವಾಲ್‌ಜೀನನನ್ನು ನೋಡಿ, ಅಲ್ಲಿಗೆ ಬಂದ. ಜೀನ್‌ವಾಲ್‌ಜೀನನಿಗೆ ಜೇವರ್ಟನ ಗುರುತು ಸಿಕ್ಕಿತಾದರೂ ಜೇವರ್ಟನಿಗೆ ಇವನ ಗುರುತು ಸಿಕ್ಕಲಿಲ್ಲ. ಅಂಗಿ, ಇಜಾರು, ಮೈಮುಖವೆಲ್ಲ ಮಣ್ಣಾಗಿ, ಕೊಳಕಾಗಿದ್ದ ಜೀನ್‌ವಾಲ್‌ಜೀನನನ್ನು ಜೇವರ್ಟ್ ಗುರುತಿಸದಿದ್ದುದು ಆಶ್ಚರ್ಯವಲ್ಲ.

ಕಚ್ಚುವುದಕ್ಕೆ ಅಟ್ಟಿಬರುವ ನಾಯಿಗೆ ಒಂದು ತುಂಡು ಮೂಳೆಯನ್ನೆಸೆದು ತಪ್ಪಿಸಿಕೊಳ್ಳುವಂತೆ, ತನ್ನನ್ನು ಜೇವರ್ಟ್ ಹಿಂಬಾಲಿಸುತ್ತಿದ್ದುದನ್ನು ಅರಿತೇ ತೆನಾರ್ಡಿಯರ್ ಅಷ್ಟು ಬೇಗ ತನ್ನ ಲಾಭವಷ್ಟನ್ನು ಹೇಗೂ ಪಡೆದು ಜೀನ್‌ವಾಲ್‌ಜೀನನನ್ನು ಸುರಂಗದ ಹೊರಗೆ ಕಳುಹಿಸಿದುದು! ಈ ಸಂದರ್ಭ ಜೇವರ್ಟನಿಗೆ ಮಹತ್ತ್ವದ್ದೇ ಆಗಿತ್ತು. ಏಕೆಂದರೆ, ಕಳ್ಳರನ್ನು ಪತ್ತೆಹಚ್ಚುವುದಕ್ಕಾಗಿ ಹೊರಟಿದ್ದ ಜೇವರ್ಟನಿಗೆ ಖೂನಿಯಾದ ಒಂದು ಹೆಣದ ಸಮೇತ ಕಳ್ಳ ಸಿಕ್ಕಿದ್ದು ಮಹತ್ತ್ವದ ಪ್ರಸಂಗವೇ ಆಗಬೇಕಷ್ಟೆ. ಇದು ನಾಯಿಗೆ ಮೂಳೆ ಸಿಕ್ಕಿದ ಪ್ರಸಂಗವಾಗುವ ಬದಲು ಬಿಸಿಮಾಂಸ ಸಿಕ್ಕಿದಂತೆಯೇ ಆಯಿತು.

"ಯಾರಯ್ಯಾ, ನೀನು?" ಎಂದು ಕೇಳಿದ.

"ಜೀನ್‌ವಾಲ್‌ಜೀನ್," ಎಂದು ಉತ್ತರ ಬಂದಿತು.

ಈ ಉತ್ತರ ಒಮ್ಮೆ ಜೇವರ್ಟನನ್ನು ಆಶ್ಚರ್ಯಗೊಳಿಸಿತು. ಅವನು ಸಮೀಪಕ್ಕೆ ಬಂದು ಜೀನ್‌ವಾಲ್‌ಜೀನನ ಎರಡು ಭುಜಗಳ ಮೇಲೆ ತನ್ನ ಹಸ್ತಗಳನ್ನಿಟ್ಟು, "ಅವನು ಯಾರು?" ಎಂದು ಕೇಳಿದ.

"ತಡೆಗೋಡೆಯಲ್ಲಿ ಯುದ್ಧಮಾಡುತ್ತಿದ್ದ ಮೇರಿಯಸ್."

"ಅವನು ಸತ್ತಿರುವನಲ್ಲವೆ?"

"ಇಲ್ಲ, ಬದುಕಿರುವನು. ಅವನನ್ನು ಅವನ ಅಜ್ಜನ ಮನೆಗೆ ಸಾಗಿಸಬೇಕಾಗಿದೆ," ಎಂದು ಹೇಳುತ್ತ, ಮೇರಿಯಸನ ಡೈರಿಯಲ್ಲಿದ್ದ ಗಿಲೆನಾರ್ಮಂಡನ ವಿಳಾಸ ತೋರಿಸಿದ. ಜೇವರ್ಟ್ ಒಂದು ಬಟ್ಟೆಯನ್ನು ಒದ್ದೆಮಾಡಿ ಮೇರಿಯಸ್‌ನ ಮುಖವನ್ನೊರಸಿ, ಮೇರಿಯಸನ ಗುರುತು ಹಿಡಿದ. ಆಗ ಜೀನ್‌ವಾಲ್‌ಜೀನ್, ಬಲುವಿನಯದಿಂದ, "ಇನ್‌ಸ್ಪೆಕ್ಟರ್ ಜೇವರ್ಟರೇ, ನಿಮ್ಮನ್ನು ನಾನು ಆ ತಡೆಗೋಡೆಯೊಳಗಿನ ಕೋಟೆಯಲ್ಲಿ ಕಂಡಾಗಲೇ ನಿಮ್ಮ ಕೈದಿ ನಾನೆಂದು ಗ್ರಹಿಸಿಕೊಂಡೆ. ಈ ಯುವಕನನ್ನು ಅವನ ಅಜ್ಜನ ಮನೆಗೆ ಸಾಗಿಸುವಷ್ಟು ಪುರಸೊತ್ತು ನನಗೆ ದಯಮಾಡಿ ಕೊಡಿ. ನಾನೇನೂ ನಿಮ್ಮನ್ನು ವಂಚಿಸುತ್ತಿಲ್ಲ," ಎಂದ.

ಜೀನ್‌ವಾಲ್‌ಜೀನ್ ಮಾತಾಡುತ್ತಿದ್ದ ಹಾಗೆಯೇ ಜೇವರ್ಟ್ ಸಂದರ್ಭಗಳನ್ನೆಲ್ಲ ಬಲು ಯೋಚಿಸುತ್ತಿದ್ದ. ಅವನು ಈ ಮಾತುಗಳಿಗೆ ಉತ್ತರ ಕೊಡುವುದರ ಬದಲು, ಬಂಡಿಗನಿಗೆ ಕೈಸನ್ನೆ ಮಾಡಿ, ಬಂಡಿಯನ್ನು ಬರಮಾಡಿಕೊಂಡ. ಬಂಡಿಗನ ಜೊತೆ ಇಬ್ಬರೂ ಸೇರಿ ಮೇರಿಯಸನನ್ನು ಬಂಡಿಯಲ್ಲಿ ಮಲಗಿಸಿ ಬಂಡಿ ಏರಿ ಹೋದರು.

ಜೇವರ್ಟ್ ಒಬ್ಬ ಅಸದೃಶ ಪತ್ತೇದಾರಿ ಎಂಬುದನ್ನು ವಾಚಕರು ಬಲ್ಲರಷ್ಟೆ. ಕ್ರಾಂತಿಕಾರರಿಂದ ಬಂಧಿತನಾಗಿದ್ದ ಜೇವರ್ಟ್ ಅಲ್ಲಿ ನೆರದಿದ್ದವರನ್ನೆಲ್ಲ ಗುರುತಿಸಿದ್ದುದೂ ಅಲ್ಲದೆ, ಅವರವರು ಅಲ್ಲಿ ವಹಿಸಿದ್ದ ಪಾತ್ರಗಳನ್ನೂ, ಮಾಡಿದ್ದ ಕ್ರಿಯೆಗಳನ್ನೂ ತಿಳಿದಿದ್ದ. ಈಗ ಬಂಡಿಯೊಳಗೆ ಮೌನವಾಗಿ ಕುಳಿತಿರುವಾಗ ಕೋಟೆಯೊಳಗೆ ನಡೆದಿದ್ದ ಸಂಗತಿಗಳನ್ನೂ, ಜೀನ್‌ವಾಲ್‌ಜೀನ್ ಮೇರಿಯಸನ ರಕ್ಷಣೆಗಾಗಿ ಸುರಂಗ ಮಾರ್ಗದಲ್ಲಿ ನಡೆಸಿರಬೇಕಾದ ಅತ್ಯದ್ಭುತ ಸಾಹಸವನ್ನೂ ಗ್ರಹಿಸಿಕೊಂಡು ತುಂಬ ಯೋಚನೆಯಲ್ಲಿ ಬಿದ್ದಿದ್ದ. ಹಿಂದೆಂದೂ ಅವನು ಯೋಚಿಸದಿದ್ದಷ್ಟು ಇಂದು ಯೋಚಿಸುತ್ತ ಬಂಡಿಯಲ್ಲಿ ಮಂಡಿಸಿದ್ದ.

ಈ ರೀತಿ ಶವದಂತೆ ಮಲಗಿದ್ದ ಮೇರಿಯಸನೂ ಪ್ರಪಂಚದಲ್ಲಿ ಪರಿಪೂರ್ಣ ನಶ್ವರತೆಯನ್ನು ಕಂಡು ಪ್ರೇತದಂತಿದ್ದ ಜೀನ್‌ವಾಲ್‌ಜೀನನೂ ತನ್ನ ನಿಷ್ಠೆಯಲ್ಲಿ ಶಿಲಾಸದೃಶನಾಗಿದ್ದು, ಈಗ ಶಿಲಾಪ್ರತಿಮೆಯಂತೆ ಕುಳಿತಿದ್ದ ಜೇವರ್ಟನೂ ಕದಲದೆ, ಮಾತಾಡದೆ ಮುಂದೆ ಸಾಗಿದರು.

೨. ಕೈದಿಯಿಂದ ಮರೆಯಾದ ಆರಕ್ಷಕ

ಬಂಡಿ ಗಿಲೆನಾರ್ಮಂಡನ ಮನೆ ತಲಪಿತು. ಮನೆಯವರೆಲ್ಲರೂ ನಿದ್ರಿಸಿದ್ದರು. ಜೇವರ್ಟ್ ಬಂಡಿಯಿಂದಿಳಿದು, ಕದ ತಟ್ಟಿದ. ಕೆಲಸದ ಹೆಂಗುಸು ವೃದ್ಧ ಗಿಲೆನಾರ್ಮಂಡನನ್ನು ಎಚ್ಚರಿಸಬಾರದೆಂದು, ಅವನ ಮಗಳಿಗೆ ಈ ವರ್ತಮಾನ ತಿಳಿಸಿದಳು. ಮಗಳು ಬಂದ ಕೂಡಲೇ ಎಲ್ಲರೂ ಹಿಡಿದು ಮೇರಿಯಸನನ್ನು ಎತ್ತಿ ತಂದು ಸೋಫಾದ ಮೇಲೆ ಮಲಗಿಸಿದರು. ಅವನಿಗೆ ಏನಾಗಿತ್ತು, ಇನ್ನು ಎಂಥ ಚಿಕಿತ್ಸೆ ಆಗಬೇಕು ಎಂಬಿತ್ಯಾದಿ ಸೂಚನೆಗಳನ್ನು ಜೇವರ್ಟನೇ ಮನೆಯವರಿಗೆ ತಿಳಿಸಿದ.

ಅನಂತರ ಜೇವರ್ಟನೂ ಜೀನ್‌ವಾಲ್‌ಜೀನನೂ ರಸ್ತೆಗೆ ಬಂದರು. ಅಲ್ಲಿ ಜೀನ್‌ವಾಲ್‌ಜೀನ್ ಜೇವರ್ಟನೊಡನೆ ಇನ್ನೊಂದು ಚಿಕ್ಕ ಉಪಕಾರ ಮಾಡಬೇಕಾಗಿ ಕೇಳಿಕೊಂಡ: ಒಮ್ಮೆ ತನ್ನ ಮನೆಗೆ ಹೋಗಿಬರಲು ಅವಕಾಶ ಕೊಡಬೇಕು. ಅದಕ್ಕೆ ಜೇವರ್ಟ್ ಒಪ್ಪಿ, ಇಬ್ಬರೂ ಬಂಡಿಯಲ್ಲಿ ಕುಳಿತು, ಜೀನ್‌ವಾಲ್‌ಜೀನನ ಮನೆಯತ್ತ ಹೋದರು.

ಮನೆ ತಲಪಿದ ಕೂಡಲೇ ಇಬ್ಬರೂ ಬಂಡಿಯಿಂದಿಳಿದರು. ಜೇವರ್ಟ್ ಬಂಡಿಗನಿಗೆ ಬಾಡಿಗೆ ಕೊಟ್ಟು ಕಳುಹಿಸಿ, ಜೀನ್‌ವಾಲ್‌ಜೀನ್ ತನ್ನ ಮನೆಗೆ ಹೋಗಿ ಬರಬಹುದೆಂದು ಅಪ್ಪಣೆಯಿತ್ತ. ತಾನು ಮನೆಯಿಂದ ಮರಳಿದ ಕೂಡಲೇ ಹತ್ತಿರದ ಪೊಲೀಸ್ ಠಾಣ್ಯದಲ್ಲಿ ಜೇವರ್ಟ್ ತನ್ನನ್ನು ಕೈದುಮಾಡಿ ಕೋಣೆಯೊಳಗಿರಿಸುವನೆಂದು ಜೀನ್‌ವಾಲ್‌ಜೀನ್ ಊಹಿಸಿಕೊಂಡಿದ್ದ. ಆ ಬಂಡಿಯನ್ನು ಕಳುಹಿಸಿದ್ದೂ ಪೊಲೀಸ್‌ಠಾಣ್ಯ ಹತ್ತಿರದಲ್ಲೇ ಇರುವುದರಿಂದಾಗಿರಬೇಕು ಎಂದು ಯೋಚಿಸಿದ್ದ.

ಜೀನ್‌ವಾಲ್‌ಜೀನ್ ತನ್ನ ಭವಿಷ್ಯವನ್ನೆಲ್ಲ ಜೈಲಲ್ಲೇ ಕಳೆಯಬೇಕಾಗುವ ಪರಿಸ್ಥಿತಿ ಊಹಿಸಿ ದುಃಖಿಸುತ್ತ ಮನೆ ತಲಪಿದ. ತೆನಾರ್ಡಿಯರ್ ತನಗೆ ಸುರಂಗದಲ್ಲಿ ಕೊಟ್ಟಿದ್ದ ಹಗ್ಗದಿಂದ ನೇಣು ಹಾಕಿಕೊಂಡು ಆತ್ಮಹತ್ಯೆಮಾಡಿಕೊಂಡರೂ ಆಗಬಹುದೆಂದು ಒಮ್ಮೆ ಅವನಿಗೆ ತೋರಿತು. ಆದರೆ ಆತ್ಮಹತ್ಯೆಯಲ್ಲಿ ದೇಹಹತ್ಯೆಯ ಪಾಪದ ಜೊತೆಗೆ ಆತ್ಮದಹತ್ಯೆಯ ಪಾಪವೂ ಕೂಡಿದೆಯೆಂಬುದನ್ನು ತಿಳಿಯುತ್ತ ಬಿಷಪರನ್ನು ನೆನೆದು, ಮನಸಾ ಅವರಿಗೆ ನಮ ಸ್ಕರಿಸಿ, ಧೈರ್ಯ ತಾಳಿ, ಹೊರಗೆ ಬಂದು ಜೇವರ್ಟನನ್ನು ನೋಡಬೇಕೆಂದು ರಸ್ತೆ ಕಡೆಗೆ ದೃಷ್ಟಿ ಹಾಯಿಸಿದ. ಅಲ್ಲಿ ಜೇವರ್ಟ್ ಇರಲಿಲ್ಲ!

೮. ಅಜ್ಜ ಕಂಡ ಮೊಮ್ಮಗ

ಮೇರಿಯಸನನ್ನು ವೈದ್ಯರು ಪರೀಕ್ಷಿಸಿದರು. ಅವನಿಗೆ ಎದೆಯಿಂದ ಕೆಳಗೆ ಯಾವ ಗಾಯವೂ ಇರಲಿಲ್ಲ—ಆ ಭಾಗವನ್ನು ತಡೆಗೋಡೆ ರಕ್ಷಿಸಿರಬೇಕು. ಆದರೆ, ಓರೆಯಾಗಿ ಬಂದಿದ್ದ ಚಿಲ್ಲು, ಒಳಜೇಬಿನಲ್ಲಿದ್ದ ಡೈರಿಗೆ ತಗಲಿ, ಅಲ್ಲಿಂದ ಮುಂದುವರಿಸಿ ಹೋಗಿ ಚರ್ಮ ಹರಿದಿತ್ತು, ಮತ್ತು ಕತ್ತಿನ ಸಮೀಪದ ಒಂದು ಎಲುಬನ್ನು ಮುರಿದಿತ್ತು. ತಲೆಯ ಮೇಲ್ಭಾಗದಲ್ಲಿ ಕೆಲವು ಚಿಕ್ಕ ಗಾಯಗಳಿದ್ದುವು. ಮುಖದ ಮೇಲೆ ಯಾವ ಗಾಯವೂ ಇರಲಿಲ್ಲ. ಈಗಿದ್ದ ಸ್ಥಿತಿಯಲ್ಲಿ ಇನ್ನೂ ೨ ಗಂಟೆಕಾಲ ಸ್ಮೃತಿ ಬರದಿದ್ದರೆ ಮೇರಿಯಸ್ ಬದುಕಲಾರನೆಂದು ವೈದ್ಯರು ಹೇಳುತ್ತ, ಅವನ ಗಾಯಗಳನ್ನೆಲ್ಲ ತೊಳೆದು ಮದ್ದು ಹಚ್ಚಿದರು. ಕಟ್ಟಬೇಕಾದಲ್ಲಿ ಕಟ್ಟಿದರು.

ಕ್ರಾಂತಿ, ದಂಗೆ, ಯುದ್ಧ—ಈ ಎಲ್ಲ ವರ್ತಮಾನಗಳನ್ನು ಕೇಳಿ ಕೇಳಿ ವೃದ್ಧ ಗಿಲೆನಾರ್ಮಂಡನಿಗೆ ಇತ್ತೀಚೆಗೆ ನಿದ್ರೆಯೇ ಬರುತ್ತಿರಲಿಲ್ಲ. ಈ ರಾತ್ರಿ ಸ್ವಲ್ಪ ನಿದ್ರೆ ಬಂದಿದ್ದರೂ ವೈದ್ಯರು ಮತ್ತಿತರರ ಮಾತಿನ ಸದ್ದು, ಬೆಳಕು, ಇತ್ಯಾದಿ ಆ ವೃದ್ಧನನ್ನು ಎಬ್ಬಿಸಿದುವು. ಇಹಲೋಕ ಬಿಟ್ಟು ಹೋಗಿದ್ದವನ ಪ್ರೇತ ತನ್ನ ಪೂರ್ವನಿವಾಸಕ್ಕೆ ಬರಬಹುದಾದಂತೆ ಗಿಲೆನಾರ್ಮಂಡ್ ತನ್ನ ಹಾಸಿಗೆಯಿಂದೆದ್ದು, ಬತ್ತಿದ್ದ ಅಂಗಾಂಗಗಳನ್ನು ನಡುಕಿನಿಂದ ನಡೆಯಿಸಿಕೊಂಡು, ನಿಸ್ತೇಜವಾದ ಕಣ್ಣುಗಳನ್ನು ಹೊರಳಿಸಿಕೊಂಡು, ಬಗ್ಗಿಕೊಂಡು, ತಡವರಿಸಿಕೊಂಡು ಮೇರಿಯಸನಿದ್ದಲ್ಲಿಗೆ ಬಂದು ತನ್ನ ಶೂನ್ಯದೃಷ್ಟಿಯಿಂದ ಅವನನ್ನು ನೋಡಿದ. ಆಗ ಅಲ್ಲಿದ್ದ ಒಬ್ಬ ಆಳು ಅಂದ, “ಇವರನ್ನು ಈಗತಾನೇ ತಂದಿದ್ದಾರೆ, ಕ್ರಾಂತಿ ಯುದ್ಧರಂಗದಿಂದ.”

ಗಿಲೆನಾರ್ಮಂಡ್ ತನ್ನ ನಿಸ್ತೇಜ ಕಣ್ಣುಗಳಿಂದ ಅಲ್ಲಿದ್ದವರನ್ನೆಲ್ಲ ಒಮ್ಮೆ ನೋಡಿದ. ಅನಂತರ, "ಗೊತ್ತಿದೆ, ಅವನು ಸತ್ತಿದ್ದಾನೆ. ಈ ವೈದ್ಯರು ಹೇಳುವುದೂ ಅಷ್ಟೇ ತಾನೆ !" ಎಂದು ವೈದ್ಯರನ್ನು ನೋಡುತ್ತ ಹೇಳಿ, ಕಿಟಕಿಯಿಂದ ಹೊರಗೆ ತಲೆ ಹಾಕಿ, "ದಂಗೆಕೋರ, ದಗಾಕೋರ, ಪೋಲಿ, ಸಾಕಿದವರಿಗೆ ಎದುರು ನಿಂತ ದ್ರೋಹಿ, ಈಗ ಸತ್ತಿದ್ದಾನೆ, ಸಾಯಿಸಿಕೊಂಡಿದ್ದಾನೆ, ನಾಯಿ, ಕತ್ತೆ ಸತ್ತಂತೆ! ಮೈ ಕೆತ್ತಿಸಿಕೊಂಡು, ಮೂಳೆ ಮುರಿಸಿಕೊಂಡು, ರಸ್ತೆ ಚರಂಡಿಗಳಲ್ಲಿ ನಾಯಿ ಹೆಣ ಎಳೆಯುವಂತೆ ಎಳೆಸಿಕೊಂಡು, ಈ ಮಹಾಪಾಪಿ ಈಗ ಅಜ್ಜನ ಮನೆ ದಾರಿ ಕಂಡು ಬಂದಿದ್ದಾನೆ. ನಾಯಿ, ನರಿ ಮೂಸದ ಹೆಣವನ್ನು ಮಹಾ ದೇಶಭಕ್ತನ ಹೆಣದಂತೆ ನಾವು ಪೂಜಿಸಲೆಂದು ಇಲ್ಲಿಗೆ ತರಿಸಿ ಹಾಕಿಸಿದ್ದಾನೆ—ನಮ್ಮಿಂದ ಪೂಜೆ ಪಡೆಯಲು!" ಎಂದು ಮೊದಲಾಗಿ ಹುಚ್ಚುಹುಚ್ಚಾಗಿ ಒದರಿದ.

ಆಗ ವೈದ್ಯ ಮುಂದೆ ಬಂದು ಅವರನ್ನು ಮೆಲ್ಲಗೆ ಮುಟ್ಟುತ್ತ, ಮರ್ಯಾದೆಯಿಂದ, "ಸರ್" ಎಂದು ಸಂಬೋಧಿಸಿ ಮಾತಾಡಿ ಸಮಾಧಾನಪಡಿಸಲು ತೊಡಗಿದ ಕೂಡಲೆ, ಪುನಃ, "ನೀವು ನನಗೆ ಸಮಾಧಾನ ಹೇಳಬೇಕಾದ್ದಿಲ್ಲ. ನೀವೇನೂ ಮಹಾ ಹಳಬರಲ್ಲ. ನೀವೂ ಇವನಂತೆಯೇ ಈಗಿನ ವರು. ಈಗಿನವರ ಕ್ರಮವೆಲ್ಲ ಇಂಥಾದ್ದೇ! ಇದು ಕಾಲ ಮಹಿಮೆ! ಪತ್ರಿಕೆ, ಪುಸ್ತಕ, ಪ್ರಕಟಣೆ, ಭಾಷಣ, ನಾಟಕ, ಆಟ, ಶಾಲೆಯಲ್ಲಿ ಪಾಠ—ಎಲ್ಲವೂ ಕ್ರಾಂತಿಕಾರಿಗಳು. ಅವೆಲ್ಲವುಗಳ ಪರಿಣಾಮ? ಈ ಹೆಣ! ನಮ್ಮಂಥವರಿಗೆ ನಿಮ್ಮಂಥವರ ಶಾಂತಿಬೋಧೆ ಅನಗತ್ಯ. ದುಃಖಕ್ಕೆ ಹೆದರುವ ಹೇಡಿ ನಾನಲ್ಲ. ಹದಿನಾರನೇ ಲೂಯಿ ದೊರೆಯ ಮರಣವನ್ನು ನಾನು ಈ ಕಣ್ಣು ಗಳಿಂದಲೇ ನೋಡಿದ್ದೇನೆ. ನಾನೂ ಸಾಯುತ್ತೇನೆ, ನಿಜ. ಆದರೆ, ನಾನು ಸಾಯುವಂತೆ ಈ ನಾಯಿ ಸಾಯಲಿಲ್ಲ. ನನ್ನ ದುಃಖ ಅಷ್ಟೆ. ನಾನು ಬದುಕಿ, ಬಾಳಿ, ಮೆರೆದು ಸಾಯುತ್ತೇನೆ. ಇವನಾದರೆ ಮದುವೆಯಾದರೂ ಆಗಿದ್ದಾನೇನು? ಪ್ಯಾರಿಸಿನ ಯಾವ ಸುಂದರ ತರುಣಿಯನ್ನಾದರೂ ಪಡೆಯ ಬಲ್ಲ, ಯಾವ ಹೆಣ್ಣಾದರೂ ಇವನನ್ನು ನೋಡಿ ಮರುಳಾಗುವಂಥ, ಸುಂದರ ಯುವಕ ಹುಡುಗಿ ಯರನ್ನು ಬಿಟ್ಟು, ರಾಜದ್ರೋಹಿ ಯುವಕರ ಜೊತೆಸೇರಿ, ಹಂದಿಯ ಹಾಗೆ ತಿವಿಸಿಕೊಂಡು ಸತ್ತು ಬಂದಿದ್ದಾನೆ. ಚಂದಚಂದದ ಮಕ್ಕಳನ್ನು ಹೆಂಗುಸರು ಹೆರುವುದೆಲ್ಲ ಹೀಗೆ ಸಾಯುವುದಕ್ಕೇನು ? ನಾಳೆ ಬೆಳಗ್ಗೆ ಬೇಕಾದರೆ ನೋಡಿ, ನೂರು ವರ್ಷ ಬದುಕಿದ ನಾನೂ ಇನ್ನೂ ಮೂವತ್ತಾಗದ ಮೇರಿಯಸನೂ ಎರಡು ಪೆಟ್ಟಿಗೆಗಳಲ್ಲಿ ಶ್ಮಶಾನಯಾತ್ರೆ ಮಾಡುತ್ತೇವೆ. ಲಮಾರ್ಕನ ಹೆಣವನ್ನು ಹಿಂಬಾಲಿಸಿದುದಕ್ಕೆ ಇವನಿಗೆ ಸಿಕ್ಕಿದ್ದು ಹೆಣದ ಪೆಟ್ಟಿಗೆ! ತಾನು ಸತ್ತೂ ಸಾಯದಂತೆ ಕಾರ್ಯವೆಸಗಿ ಇಂಥ ಯುವಕರನ್ನು ಸಾಯಿಸಿದ ಲಮಾರ್ಕ ದೇಶಭಕ್ತನಂತೆ! ಅವನು ಪ್ರಜಾರಾಜ್ಯದ ಪುನರು ತ್ಥಾಪಕನಂತೆ! ಎಲ್ಲಿ, ಯಾವಾಗ, ಹೇಗೆ ಪುನರುತ್ಥಾನ ಮಾಡುತ್ತಾನೋ, ಆ ಮಣ್ಣಾದ ಲಮಾರ್ಕ, ನಾನರಿಯೆ! ಈ ಹೆಣದ ಮೂಗಿಗೆ ಏನೇನೋ ಹಿಡಿದು ತೋರಿಸಿ, ಮನುಷ್ಯ ಮಾಡುತ್ತೇನೆಂದು ನೀವು ಹೇಳಿದರೆ, ವೈದ್ಯರೇ! ಆ ಠಕ್ಕನ್ನೆಲ್ಲ ನಂಬುವ ಮುದುಕ ನಾನಲ್ಲ!" ಎಂದು ಹೇಳುತ್ತ ಗಿಲೆನಾರ್ಮಂಡ್ ಉಕ್ಕಿಬರುತ್ತಿದ್ದ ಕಂಬನಿಗಳನ್ನೊರಸಿಕೊಂಡು ಪುನಃ ಮೇರಿಯಸನನ್ನು ನೋಡ ತೊಡಗಿದ.

ಆ ಸಮಯದಲ್ಲೇ ಮೇರಿಯಸ್ ಕಣ್ಣು ತೆರೆದ. ಮೊದಲು ಶೂನ್ಯ ದೃಷ್ಟಿಯಿಂದ ನೋಡಿದ. ಅನಂತರ ಅಜ್ಜ ಗಿಲೆನಾರ್ಮಂಡನನ್ನೇ ನೋಡಿದ. ಅಜ್ಜನೂ ಮೊಮ್ಮಗನನ್ನು ನೋಡಿದ. ನೋಡುತ್ತ, "ಅಪ್ಪಾ, ಮೇರಿಯಸ್, ಮುದ್ದು ಕಂದಾ!" ಎಂದನ್ನುತ್ತ ಮೂರ್ಛೆಹೋದ.

ಮೂರನೆಯ ಸಂಪುಟ

೧. ಜೇವರ್ಟನ ಅಂತ್ಯ

ಜೇವರ್ಟ್ ಜೀನ್‌ವಾಲ್‌ಜೀನನನ್ನು ಅವನ ಮನೆಯಲ್ಲೇ ಬಿಟ್ಟು ಆಲೋಚನಾಮಗ್ನನಾಗಿ ನಡೆಯತೊಡಗಿದ. ಅವನು ತಲೆ ಕೆಳಗೆ ಹಾಕಿ ನಡೆದುದು ಇಂದು ಮಾತ್ರ. ನೆಪೋಲಿಯನ್ ದೃಢಸಂಕಲ್ಪವನ್ನು ವ್ಯಕ್ತಪಡಿಸುವ ಭಂಗಿಯಲ್ಲಿ ನಿಲ್ಲುತ್ತಿದ್ದಂತೆ ತನ್ನ ಎರಡು ಕೈಗಳನ್ನು ಎದೆಗೆ ಅಡ್ಡವಾಗಿಟ್ಟುಕೊಂಡು ನಿಲ್ಲುತ್ತಿದ್ದ ಜೇವರ್ಟ್ ಇಂದು ಅವೇ ಎರಡು ಕೈಗಳನ್ನು ಬೆನ್ನಹಿಂದೆ ಕಟ್ಟಿಕೊಂಡು, ಸ್ವಲ್ಪ ಮುಂದಕ್ಕೆ ಬಾಗಿ ನಡೆಯುತ್ತಿದ್ದ. ಅವನ ಶರೀರ, ಮನದಲ್ಲೆಲ್ಲ ಬದಲಾವಣೆ ಬಂದಿತ್ತು. ಗೂಢಯೋಚನೆಗಳೂ ಚಂಚಲ ತರ್ಕಗಳೂ ತನ್ನ ಮನಸ್ಸಿನ ಶಾಂತಿಗಾಗಿ ಪ್ರಯತ್ನಿಸು ತ್ತಿದ್ದ ಪ್ರಯತ್ನಗಳೂ ಅವನನ್ನು ಹಿಂಸಿಸುತ್ತಿದ್ದುವು. ಆಳುವ ಅಧಿಕಾರವೇ ಮೂರ್ತಿವತ್ತಾಗಿ ಪ್ಯಾರಿಸಿನ ಬೀದಿಗಳಲ್ಲಿ ನಡೆಯುತ್ತಿದ್ದಂತೆ ನಡೆದ ಜೇವರ್ಟ್ ಇಂದು ಕೇವಲ ಒಬ್ಬ ದೀನವ್ಯಕ್ತಿ ಯಂತೆ ಅದೇ ಬೀದಿಗಳಲ್ಲಿ ನಡೆದುಹೋಗುತ್ತಿದ್ದ. ಕೊನೆಗೆ ಅವನು ಸೀಯನ್ ನದಿಯ ಸೇತುವೆಗೆ ತಲಪಿದ. ಅಲ್ಲಿ ನದಿಯ ಆವರಣ ಗೋಡೆಯ ಮೇಲೆ ಮೊಣಕೈಗಳನ್ನೂರಿ, ಅಂಗೈ ಮೇಲೆ ಗಲ್ಲವಿಟ್ಟು, ಆಲೋಚಿಸತೊಡಗಿದ.

ಅವನು ಅಂತರಂಗದ ಪರಿಸ್ಥಿತಿಯನ್ನು ಪುನಃ ಪುನಃ ವಿಮರ್ಶಿಸತೊಡಗಿದ. ಅಲೆ ಅಲೆಯಾಗಿ ಉಕ್ಕಿಬರುತ್ತಿದ್ದ ಯೋಚನೆಗಳ ಸಾರಾಂಶವೇನೆಂದು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಶುದ್ಧಸ್ಫಟಿಕದಂತೆ ನಿರ್ಮಲವಾಗಿದ್ದ ಆ ಮನಸ್ಸು ಇಂದು ಅವನಿಗೇ ಕಲ್ಮಷಪೂರಿತವಾಗಿ ತೋರು ತ್ತಿತ್ತು. ಯಾವ ಆಲೋಚನೆಯೂ ಅವನಿಗೆ ಸ್ಪಷ್ಟವಾಗಿ ಆಗಲಿ ಸರಳವಾಗಿ ಆಗಲಿ ಬರುತ್ತಿರಲಿಲ್ಲ —ಒಂದು ಅಲೆಯನ್ನು ಗುರುತಿಸಿ ನಿಶ್ಚೈಸುವ ಮೊದಲು ಅಲ್ಲೇ ಮತ್ತೊಂದು ಎದ್ದು ದೃಷ್ಟಿ ಭ್ರಮಣ ತರುವಂತೆ, ಇಂದು ಅವನ ಆಲೋಚನೆಗಳೆಲ್ಲ ಅಲೆಗಳಂತೆ ಎದ್ದು ತೋರಿ, ಆಗಲೇ ಮಾಯವೂ ಆಗಿ, ಅವನ ಅಂತರಂಗ ದೃಷ್ಟಿಯೇ ಭ್ರಮಣಹೊಂದಿತ್ತು. ಆದರೂ ತನ್ನ ಆ ವರೆಗಿನ ಜೀವನದಲ್ಲಿ ಪಡೆದಿದ್ದ ಸಂಸ್ಕಾರಬಲದಿಂದ ತನ್ನ ಮುಖ್ಯ ಗುರಿ ಏನೆಂದು ನಿರ್ಧರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ.

ಇಂಥ ಕಷ್ಟತರ ಪ್ರಯತ್ನಗಳ ಫಲವಾಗಿ ಅವನಿಗೆ ದೊರೆತುದು ಸ್ಪಷ್ಟವಾದ, ಮತ್ತು ಸರಳವಾದ ಎರಡು ಅಭಿಪ್ರಾಯಗಳಾಗಿದ್ದುವು. ಇವು ಅವನು ಮುಂದೆ ಅನುಸರಿಸಿ ಹೋಗಬೇಕಾ ಗಿದ್ದ ಎರಡು ಋಜುಮಾರ್ಗಗಳಾಗಿದ್ದುವು. ಆದರೆ ಹೀಗೆ ಏಕಕಾಲದಲ್ಲಿ ಎರಡು ಋಜುಮಾರ್ಗ ಗಳನ್ನು ಕಂಡು ಯಾವುದೊಂದನ್ನು ಅವಲಂಬಿಸಿದರೂ ಇನ್ನೊಂದನ್ನು ತ್ಯಜಿಸಿದ ಅಪರಾಧಕ್ಕೆ ತಾನು ಭಾಗಿಯಾಗುವುದಾಗಿಯೂ ಭಯಪಡುತ್ತಿದ್ದ. ಈ ಭಯ ಅವನನ್ನು ಪೂರ್ವ ಪರಿಸ್ಥಿತಿಗೇ ತಂದು ನಿಲ್ಲಿಸುತ್ತಿತ್ತು.

ಜೀನ್‌ವಾಲ್‌ಜೀನನನ್ನು ಕೈದುಮಾಡಿ ಸರಕಾರಕ್ಕೆ ಒಪ್ಪಿಸುವುದು ತನ್ನ ಏಕೈಕ ಕರ್ತವ್ಯವೆಂದು ತಿಳಿಯುತ್ತಿದ್ದುದರ ಜೊತೆಯಲ್ಲೇ ಅವನನ್ನು ಮುಟ್ಟದೆ ಅವನಷ್ಟಕ್ಕೇ ಇರಲು ಬಿಟ್ಟುಕೊಡು ವುದೂ ತನ್ನ ಕರ್ತವ್ಯವೆಂದೂ ತಿಳಿಯುತ್ತಿದ್ದ. ಸುಲಭವಾಗಿ ತನ್ನನ್ನು ಕೊಲ್ಲಲು ಕ್ರಾಂತಿಕಾರರಿಂದ ಸಿಕ್ಕಿದ್ದ ಸಂದರ್ಭವನ್ನು ತ್ಯಜಿಸಿ, ತನ್ನ ಜೀವದಾನ ಮಾಡಲಿದ್ದ ಸಂದರ್ಭವಾಗಿ ಮಾಡಿಕೊಂಡಿದ್ದ ಜೀನ್‌ವಾಲ್‌ಜೀನನ ಧರ್ಮಬುದ್ಧಿ ಈಗ ಜೇವರ್ಟನನ್ನು ಈ ದ್ವಿಮಾರ್ಗಗಳ ಮೂಲದಲ್ಲಿ ಇರಿ ಸಿತ್ತು. ಆ ಸಂಜೆಗೆ ಸೀಯನ್ ನದಿಯ ದಂಡೆಯಲ್ಲಿ ಜೀನ್‌ವಾಲ್‌ಜೀನ್ ಸಿಕ್ಕಿದಾಗ ಜೇವರ್ಟನಿಗೆ

ಒಂದು ಕಡೆ ನಾಯಿಗೆ ಅದರ ಕೊಳ್ಳೆ ದೊರೆತಂಥ ಸಂತೋಷವೂ ಇನ್ನೊಂದು ಕಡೆ ಅದೇ ನಾಯಿಗೆ ಅದರ ಯಜಮಾನ ದೊರೆತಾಗ ಉಂಟಾಗುವಂಥ ಭಕ್ತಿಯೂ ಇದ್ದುವು. ಇನ್‌ಸ್ಪೆಕ್ಟರ ನಾಗಿ ಕರ್ತವ್ಯಭ್ರಷ್ಟನಾಗುವುದೇ ಅಥವಾ ಮನುಷ್ಯನಾಗಿ ಕೃತಘ್ನನಾಗುವುದೇ ಎಂಬುದು ಅವನ ಎದುರಿಗಿದ್ದ ಏರಿ ಹೋಗಲಾಗದಿದ್ದ ಪರ್ವತಗಳಾಗಿದ್ದುವು. ತನ್ನ ಮಾರ್ಗವೇ ತನಗೆ ಪರ್ವತಾ ರೋಹಣ ಪರಿಸ್ಥಿತಿಯನ್ನು ತಂದೊಡ್ಡಿತ್ತು. ಸಮಾಜದ್ರೋಹಿಗೆ ತಾನು ಋಣಿಯಾದ ಬಳಿಕ ತಾನೂ ಅವನಂತೆಯೇ ಆಗುವುದಿಲ್ಲವೇ? ವೈಯಕ್ತಿಕ ಋಣಸಂದಾಯಕ್ಕಾಗಿ ಸಮಾಜದ ಹಿತ ವನ್ನು ಮರೆಮಾಚುವುದೇ? ಪರಿಶುದ್ಧಚರಿತ್ರನಾಗಿದ್ದ ಜೇವರ್ಟನಿಂದಲೇ ಹೀಗೆ ಆಗಬಹುದೇ? ಸಾಂಪ್ರದಾಯಿಕ, ಅಥವಾ, ಸಾಮಾಜಿಕ ಕಾನೂನು ಕಟ್ಟಳೆಗಳು ಮೇಲೋ ಅಥವಾ ತನ್ನ ಅಂತ ರಂಗದ ಪ್ರೇರಣೆ ಮೇಲೋ? ಇವೆರಡರಲ್ಲಿ ಯಾವುದು ಪರಿಶುದ್ಧವಾದುದು? ಜೀನ್‌ವಾಲ್ ಜೀನನಂಥ ಪಾತಕಿ ಜೇವರ್ಟನ ಜೀವವನ್ನು ಉಳಿಸಿದ್ದು ಆಶ್ಚರ್ಯದ ಸಂಗತಿಯಾಗಿ ಕಂಡಿದ್ದ ಜೇವರ್ಟ್ ತನ್ನಂಥ ಮಹಾ ಕರ್ತವ್ಯನಿಷ್ಠ ಜೀನ್‌ವಾಲ್‌ಜೀನನಿಗೆ ಋಣಿಯಾಗಿ ಸೋಲುವುದು ಅದಕ್ಕಿಂತಲೂ ಆಶ್ಚರ್ಯದ ಸಂಗತಿಯಾಗಿ ಕಾಣತೊಡಗಿದ.

ಜೀನ್‌ವಾಲ್‌ಜೀನನನ್ನು ಇಂದು ಕೈದುಮಾಡದೆ ಬಿಟ್ಟರೆ ಕೈದಿ ಸರಕಾರಕ್ಕಿಂತಲೂ ಶ್ರೇಷ್ಠ ನೆಂದು ಒಪ್ಪಿಕೊಂಡಂತಾಗುವುದಿಲ್ಲವೇ? ನ್ಯಾಯದ ತಲೆಯ ಮೇಲೆ ಅನ್ಯಾಯದ ಪಾದವನ್ನು ಇಡಲು ತಾನು ಸಹಾಯ ಮಾಡಬೇಕೇ? ಈ ತೆರನಾದ ಆಲೋಚನೆಗಳು ಜೇವರ್ಟನನ್ನು ಬಾಧಿಸು ತ್ತಿದ್ದುವು. ಕೊನೆಗಂತೂ ತಾನೊಂದು ಪರ್ವತ ಶಿಖರದಲ್ಲಿದ್ದು ಅಲ್ಲಿಂದ ಕಣ್ಣು ಮುಚ್ಚಿ ದುಮು ಕುವ ಒಂದೇ ಗುರಿ ಕಾಣತೊಡಗಿದ. ಆ ದುಮುಕೋಣವೇ ಜೀನ್‌ವಾಲ್‌ಜೀನನನ್ನು ಕೈದು ಮಾಡುವುದಾಗಿತ್ತು. ಶಿಖರದಲ್ಲಿ ನಿಂತು ಹಿಂಸೆಗೆ ಒಳಪಡುವುದಕ್ಕಿಂತ ಪ್ರಪಾತಕ್ಕೆ ದುಮುಕು ವುದು ಉತ್ತಮವೆಂದು ತೋರುವಾಗಲೇ ತನ್ನ ಅಂತರಂಗವನ್ನು ತನ್ನದೇ ಒಂದು ಕೈ ಹಿಡಿದು, ಹಿಂಡಿ ತನ್ನ ದೃಷ್ಟಿಯನ್ನು ಪರ್ವತ ಶಿಖರಕ್ಕಿಂತಲೂ ಮೇಲ್ಮೊಗವಾಗಿ ತಿರುಗಿಸಿಡುತ್ತಿತ್ತು. ಸರಕಾರ, ಸಮಾಜ, ಸಮಾಜನಿರ್ಮಿತ ನ್ಯಾಯವನ್ನು ಮಾತ್ರ ಅರಿತು ಅವನ್ನೇ ಆರಾಧಿಸುತ್ತಿದ್ದ ಜೇವರ್ಟನಿಗೆ ತನ್ನ ಅಂತರಂಗದ ಪ್ರೇರಣೆ ದೈವಪ್ರೇರಣೆಯೇ ಆಗಿರಬೇಕೆಂದೂ ತೋರುತ್ತಿತ್ತು. ಹಾಗಾದರೆ, ಸರಕಾರ ಮತ್ತು ಸಮಾಜಕ್ಕೆ ಮೇಲ್ಪಟ್ಟ ಅಧಿಕಾರಸ್ಥಾನವಿದೆಯೇ, ಇರಲು ಸಾಧ್ಯವೇ, ಸರಕಾರಕ್ಕೂ ಅಂತರಂಗ ಇದೆಯೇ, ಸರಕಾರದ ಇತರ ಅಧಿಕಾರಿಗಳಿಗೂ ಇಂಥ ಪ್ರಸಂಗ ಬಂದಿರ ಬಹುದೇ, ಅವರಿಗೂ ಒಂದು ಪಾರಲೌಕಿಕ ಮಾರ್ಗ ಕಂಡುಬಂದಿರಬಹುದೇ ಎಂದೂ ನಾನಾ ಬಗೆಯಾಗಿ ಯೋಚಿಸತೊಡಗಿದ.

ಆದರೆ ಪಾಪಿಗಳಲ್ಲಿ ಪುನೀತರಿರಲು ಸಾಧ್ಯವೇ? ಸಮಾಜ ರಕ್ಷಕನೂ ಸಮಾಜ ಘಾತಕನೂ ಏಕಕಾಲದಲ್ಲಿ, ಏಕಸ್ಥಳದಲ್ಲಿ, ಬದುಕಿರಲು ಸಾಧ್ಯವೇ? ಕ್ರಾಂತಿಕಾರರು ಜೇವರ್ಟನನ್ನು ಕೊಲ್ಲು ವುದು ಕೇವಲ ಸ್ವಾಭಾವಿಕವೆಂದು ನಂಬುತ್ತಿದ್ದ ಜೇವರ್ಟ್ ಜೀನ್‌ವಾಲ್‌ಜೀನ್ ತನ್ನನ್ನು ಕೊಲ್ಲದೆ ರಕ್ಷಿಸಿದ್ದು ಕೇವಲ ಅಸ್ವಾಭಾವಿಕವೆಂದೂ ಭಾವಿಸಿದ್ದ. ಜೀನ್‌ವಾಲ್‌ಜೀನನಂಥ ಪಾತಕಿಯ ಅಸ್ವಾಭಾವಿಕ ವರ್ತನೆಯಂತೆ ಕರ್ತವ್ಯನಿಷ್ಠನಾದ ತಾನು ಏಕೆ ತಾನೆ ತನ್ನತನಕ್ಕೊಂದು ಅಸ್ವಾಭಾವಿಕ ಕಾರ್ಯವೆಸಗಿ, ಕರ್ತವ್ಯಭ್ರಷ್ಟನಾಗಬೇಕೆಂದು ಬಹುವಾಗಿ ಚಿಂತಿಸುತ್ತಿದ್ದ. ನರಧಾಮನು ನರ ಶ್ರೇಷ್ಠನಾಗಿ, ಕರುಣಾಮಯ ಕ್ರೂರತೆಯಿಂದ ಜೀನ್‌ವಾಲ್‌ಜೀನ್ ತನ್ನ ಜೀವ ಉಳಿಸಿದ್ದಕ್ಕಾಗಿ ಜೇವರ್ಟ್ ಜೀನ್‌ವಾಲ್‌ಜೀನನ ಕುರಿತಾಗಿ ಕ್ರೋಧಾವಿಷ್ಟನಾದ.

ಈ ವಿಧದ ತರ್ಕಗಳು ಅವನ ಆ ದಿನದ ಚರ್ಯೆಯನ್ನೆಲ್ಲ ಪುನಃ ಪುನಃ ವಿಮರ್ಶನಕ್ಕೆ ತಂದೊ

ಡ್ಡಿದುವು. ಅಂದೇ ಅವನು ಜೀನ್‌ವಾಲ್‌ಜೀನನನ್ನು ಎರಡು ಸಲ ಬಂಧಿಸಿಯೂ ಬಿಟ್ಟಿದ್ದ. ಹಿಡಿದಿದ್ದವನನ್ನು ಹೋಗಬಿಟ್ಟದ್ದು, ತಪ್ಪಾಗಿರುವಂತೆಯೇ ಬಿಟ್ಟವನನ್ನು ಪುನಃ ಹಿಡಿಯುವುದೂ ತಪ್ಪೆಂದು ಅವನಿಗೆ ತೋರುತ್ತಿತ್ತು. ಅಪರಾಧವೇ ಜನ್ಮಸಿದ್ಧವಾಗಿರುವವನ ಅಪರಾಧ ಒಂದು ವೇಳೆ ಕ್ಷಮ್ಯವಾಗಿರಬಹುದಾದರೂ ಅಪರಾಧವನ್ನು ತಡೆಗಟ್ಟುವ ಧರ್ಮಾಧಿಕಾರಿಯ ಅಪರಾಧ ಅಕ್ಷಮ್ಯವೆಂದೂ ಅವನು ಸಿದ್ಧಾಂತ ಮಾಡಿಕೊಂಡ. ಈ ರೀತಿ ಒಂದು ನಿರ್ಧಾರದಿಂದ ಜೇವರ್ಟ್ ಸೇತುವೆಯ ಒಂದು ತುದಿಯಲ್ಲಿದ್ದ ಪೊಲೀಸ್ ಠಾಣ್ಯಕ್ಕೆ ಹೋದ.

ಅಲ್ಲಿ ತನ್ನ ಪರಿಚಯದ ಕಾರ್ಡನ್ನು ತೋರಿಸಿ, ಆಫೀಸ್ ಮೇಜದ ಬಳಿ ಕುಳಿತು ಪೊಲೀಸ್ ಸೂಪರಿಂಟೆಂಡೆಂಟರಿಗೆ ಒಂದು ಪತ್ರ ಬರೆದ. ಪತ್ರ ಹೀಗಿತ್ತು:

"ಪೊಲೀಸ್ ಇಲಾಖೆಯವರ ಬಗ್ಗೆ ಕೆಲವು ಸೂಚನೆಗಳು :

"ಕೈದಿಗಳ ಪಾದರಕ್ಷೆ ತೆಗೆಸಿ ಬರೇ ಕಲ್ಲಿನ ಮೇಲೆ ನಿಲ್ಲಿಸುವುದು ಸರಿಯಲ್ಲ—ಇದರಿಂದ ಅವರ ಆರೋಗ್ಯ ಕೆಡುತ್ತದೆ.

"ಕಳ್ಳರನ್ನು ಹಿಂಬಾಲಿಸಿ ಹೋಗುವಾಗ ಒಂದೇ ಪ್ರಸಂಗಕ್ಕೆ ಎರಡೆರಡು ಪೊಲೀಸ್ ದಳವನ್ನು ಕಳುಹಿಸುವುದು ಉತ್ತಮ. ಆಗ ಒಂದು ದಳ ಕರ್ತವ್ಯಭ್ರಷ್ಟವಾದರೂ ಇನ್ನೊಂದು ಕರ್ತವ್ಯಪಾಲಕವಾಗಬಹುದು.

"ಕೈದಿಗಳು ತಮ್ಮ ದುಡ್ಡಿನಿಂದಲೇ ಕುರ್ಚಿಗಳನ್ನು ಇಟ್ಟುಕೊಳ್ಳಕೂಡದೆಂಬ ನಿಯಮ ನ್ಯಾಯವಲ್ಲ.

"ಕೈದಿಗಳನ್ನು ನೋಡ ಬರುವವರ ಭೇಟಿಗೆ ಹೋಗುವ ಪ್ರತಿ ಕೈದಿಯಿಂದ, ಪ್ರತಿ ಸರ್ತಿಗೆ, ಎರಡು ಸೌನಂತೆ ಶುಲ್ಕ ವಸೂಲ್ಮಾಡುವುದು ದರೋಡೆಗೆ ಸಮ.

"ಕೈದಿಗಳು ಮಗ್ಗ ನೇಯುವಾಗ ಒಂದೇ ಒಂದು ನೂಲು ತುಂಡಾದರೂ ಹತ್ತು ಸೌ ನಷ್ಟ ತೆರಬೇಕೆಂಬುದು ನ್ಯಾಯವಲ್ಲ. ಏಕೆಂದರೆ, ಆ ಒಂದು ನೂಲು ಹಾಳಾದ್ದರಿಂದ ಬಟ್ಟೆಯ ಯೋಗ್ಯತೆ ಏನೂ ಕಡಿಮೆಯಾಗುವುದಿಲ್ಲ.

"ಮೇಡಮ್ ಹೆನ್ರಿಯ ಜೈಲ್ ಹೊಟೇಲ್ ಶುಚಿಯಾಗಿದೆ. ಈ ಕುರಿತಾಗಿ ಅವಳು ಶ್ಲಾಘನೀಯಳಾದರೂ ಕೈದಿಗಳ ಏಕಾಂತ ಪ್ರಾರ್ಥನಾಮಂದಿರದ ಬೀಗದ ಕೈಗಳನ್ನು ಅವಳ ವಶಕ್ಕೆ ಕೊಟ್ಟಿರುವುದು ಅನುಚಿತ."

"ಜೇವರ್ಟ್—ಇನ್‌ಸ್ಪೆಕ್ಟರ್ ; ಜೂನ್ ೭, ೧೮೩೨."

ಈ ಪತ್ರವನ್ನು ಸೂಪರಿಂಟೆಂಡೆಂಟರ ವಿಳಾಸಕ್ಕೆ ಬರೆದು ಮೇಜದ ಮೇಲಿಟ್ಟು, ಜೇವರ್ಟ್ ಮೊದಲು ನಿಂತಿದ್ದ ಹೊಳೆಯ ಅಂಚಿನ ಆವರಣ ಭಿತ್ತಿಯತ್ತ ಹೋದ.

ನದಿಯ ದಂಡೆಯಲ್ಲಿ, ಗೋಡೆಯ ಬದಿ, ಮೊದಲಿನಂತೆಯೇ ಸ್ವಲ್ಪಕಾಲ ನಿಂತ. ಹತ್ತಿರದಲ್ಲೆಲ್ಲೂ ದೀಪ ಉರಿಯುತ್ತಿರಲಿಲ್ಲ. ನದಿ ಕೆಳಗಡೆ ಕರಾಳವಾಗಿ, ಕೆಲವೊಮ್ಮೆ ಸುಳಿಗಳಿಂದ ಸದ್ದುಮಾಡಿಕೊಂಡು ಹರಿಯುತ್ತಿತ್ತು. ಆಗ ನಟ್ಟಿರುಳು ಕಳೆದಿತ್ತು. ರಾತ್ರಿಗೂ ನಿದ್ರೆ ಬಂದಿದ್ದಂತೆ ಸರ್ವತ್ರ ಕತ್ತಲೂ ನಿಶ್ಶಬ್ದವೂ ಪಸರಿಸಿದ್ದುವು. ಎಂಥ ಈಜುಬಲ್ಲವನಿಗೂ ಈಜಲು ಅಸಾಧ್ಯವಾದಂಥ ಸುಳಿಗಳಿಂದ ಕೂಡಿದ್ದ, ಆಳವಾಗಿದ್ದ, ನದಿ ತನ್ನ ಶಕ್ತಿಯಿಂದಲೂ ಕ್ರೌರ್ಯದಿಂದಲೂ ಒಮ್ಮೊಮ್ಮೆ ತೆರೆಯಾಗಿ ನೊರೆಯಾಗಿ, ಎದ್ದೆದ್ದು ಅಪ್ಪಳಿಸಿಕೊಂಡು ಕತ್ತಲಲ್ಲಿ ಕತ್ತಿ ಝಳಪಿಸಿದಂತೆ ತೋರ್ಪಡಿಸಿಕೊಂಡು ಭಯಂಕರ ಭಾವನೆಗಳ ಪ್ರಚೋದಕವಾಗಿ ಹರಿದು ಹೋಗುತ್ತಿತ್ತು.

ಇಂಥ ಸನ್ನಿವೇಶದಲ್ಲಿ, ಆ ಆವರಣ ಭಿತ್ತಿಯ ಮೇಲೆ ಯಾರೋ ಹಠಾತ್ತನೆ ಹತ್ತಿ ನಿಂತದ್ದು

ತೋರಿತು. ಮರುಕ್ಷಣವೇ ಆ ವ್ಯಕ್ತಿ ನದಿಯ ಅಭಿಮುಖವಾಗಿ ಉದ್ದದ ಒಂದು ತೊಲೆ ಬಿದ್ದಂತೆ ಬಿದ್ದುದೂ ಕಂಡಿತು. ಅಲ್ಲದೆ, ಆ ವ್ಯಕ್ತಿ ನದಿಗೆ ಅಪ್ಪಳಿಸಿದ ಸದ್ದೂ ಕೇಳಿಸಿತು.

ಅಲ್ಲಿ ಏನೆಲ್ಲ ನಡೆಯಿತೆಂಬುದು ಆ ನಟ್ಟಿರುಳು ಕಗ್ಗತ್ತಲೆಗೆ ಮಾತ್ರ ಗೊತ್ತಿತ್ತು. ಕಟ್ಟುಗಳುಂಟೇ ಕಟ್ಟಲೆಯುಂಟೇ ಸೀಯನ್ ಹೊನಲಿನ ಹರಿವಿನಲಿ?

ನಾಲ್ಕನೆಯ ಸಂಪುಟ

೧. ಮತ್ತೆ ಕಾಡಿನೊಳಗೆ

ಮೊಂಟ್‌ಫರ್ಮಿಯಲಿಯ ನೆನಪು, ಬೌಲಟ್ರೂಲನ ಗುರುತು ಎಲ್ಲ ಓದುಗರಿಗೆ ಈಗಲೂ ಇರಬಹುದೆಂದು ನಂಬುತ್ತೇವೆ. ಬೌಲಟ್ರೂಲ್ ಮೊದಲಿನಂತೆಯೇ ರಸ್ತೆಕೆಲಸ ಮಾಡುತ್ತಿದ್ದರೂ ರಸ್ತೆಯಲ್ಲಿ ಒಂಟಿಗರಾಗಿ ನಡೆದುಹೋಗುತ್ತಿದ್ದವರಿಂದ ಈಗ ಮಾತ್ರ ಸುಲಿಗೆ ಮಾಡುತ್ತಿರಲಿಲ್ಲ. ತೆನಾರ್ಡಿಯರನ ಮೇಲೆ ನಡೆದಿದ್ದ ಕ್ರಿಮಿನಲ್ ಮೊಕದ್ದಮೆಯ ಕಾರಣವಾಗಿ ಪೊಲೀಸರು ಆಗಾಗ ಮೊಂಟ್‌ಫರ್ಮಿಯಲಿಗೆ ಬರುತ್ತಿದ್ದುದರಿಂದ, ಬೌಲಟ್ರೂಲ್ ಹೆಡ್ಡನಾಗಿಯೇ ಉಳಿದ. ಅವನ ಸಂಪಾದನೆ ಹೀಗಾಗಿ ಕಡಿಮೆಯಾಗಿತ್ತು. ಆದ್ದರಿಂದ ತಾನು ನಿಕ್ಷಿಪ್ತನಿಧಿಯಿಂದಲೇ ಮುಂದೆ ಉದ್ಧಾರನಾಗಿ ಬೇಕಷ್ಟು ಕುಡಿಯಬಹುದೆಂದು ನಂಬಿಕೊಂಡಿದ್ದ.

ಇದೇ ಸಮಯದಲ್ಲಿ ತನಗೆ ಪರಿಚಯವಿದ್ದವನಂತೆ ತೋರುತ್ತಿದ್ದ ಒಬ್ಬ ವೃದ್ಧ ಒಂದು ದಿನ ಸಂಜೆ ಕಾಡೊಳಗೆ ನುಗ್ಗಿದುದನ್ನು ಕಂಡ. ತನ್ನ ಹಿಂದಿನ ಅನುಭವಗಳಿಂದ ಆ ವೃದ್ಧನಿಗೂ ನಿಕ್ಷಿಪ್ತನಿಧಿಗೂ ಸಂಬಂಧವಿರಬೇಕೆಂದು ಬೌಲಟ್ರೂಲ್ ವೃದ್ಧನನ್ನು ಅಡಗಿ ಹಿಂಬಾಲಿಸಿದ. ಇಷ್ಟರಲ್ಲೇ ಇನ್ನೊಂದು ಕಡೆಯಿಂದ ಬೇಟೆಗಾರರು ಕಾಡೊಳಗೆ ಬರುತ್ತಿದ್ದ ಸದ್ದೂ ಕೇಳಿಸಿತು. ಆಗ ಬೌಲಟ್ರೂಲ್ ಹೆದರಿ ಮರ ಹತ್ತಿ ಅಡಗಿ ಕುಳಿತ.

ಬೇಟೆಗಾರರು ದೂರ ಸರಿದನಂತರ ಕಾಡೊಳಗೆ ಮುಂದುವರಿಸಿ ಹುಡುಕಿ ನೋಡುವಾಗ ಒಂದು ಮರಕ್ಕೆ ತಗಡು ಅಂಟಿಸಿದ್ದುದನ್ನೂ ಅದರ ಬುಡದಲ್ಲಿ ನೆಲದಿಂದ ಏನನ್ನೊ ಸದ್ಯ ಅಗೆದು ತೆಗೆದಿದ್ದ ಕುರುಹನ್ನೂ ಹಾರೆಯನ್ನೂ ಕಂಡ. ಆಗಲೇ ಅವನಿಗೆ ಎಲ್ಲ ಸಂಗತಿಗಳೂ ಊಹನೆಯಲ್ಲಿ ಸ್ಪಷ್ಟವಾದುವು: ತನ್ನದಾಗಿದ್ದುದೆಂದು ನಂಬಿದ್ದ ನಿಕ್ಷೇಪವನ್ನು ಆ ವೃದ್ಧ ತೆಗೆದುಕೊಂಡು ಹೋಗಿರುವುದಾಗಿ ನಿಶ್ಚೈಸಿಕೊಂಡ.

ಹತಾಶನಾದ ಬೌಲಟ್ರೂಲ್ ಆ ವೃದ್ಧ ಹೋಗಿರಬಹುದಾದ ಕಡೆಗೆ ತನ್ನ ಮುಷ್ಟಿಯನ್ನು ತೋರಿಸುತ್ತ, "ಕಳ್ಳ, ನನ್ನ ಹಣವನ್ನು ಅಪಹರಿಸಿದೆಯಲ್ಲವೇ?" ಎಂದು ಅರಚಿದ.

೨. ಜಗಳಕ್ಕೆ ನಾಂದಿ

ಮೇರಿಯಸನ ಗಾಯಗಳು ಮಾಯುತ್ತ ಬಂದುವು. ಅವುಗಳೆಲ್ಲ ಮಿದುಳಿನ ಸಮೀಪವಾಗಿದ್ದುದರಿಂದ ಅವನು ಹೆಚ್ಚು ಮಾತಾಡಕೂಡದೆಂದೂ ಅದರಲ್ಲೂ ಪೂರ್ತಿ ಗುಣವಾಗುವವರೆಗೆ ಉದ್ವೇಗದಿಂದ ಮಾತಾಡಕೂಡದೆಂದೂ ವೈದ್ಯರು ವಿಧಿಸಿದ್ದರು. ಹೀಗಾಗಿ ಮೇರಿಯಸ್ ತಿಂಗಳುಗಟ್ಟಳೆ ಏಕಾಂತವಾಗಿಯೂ ಮೌನವಾಗಿಯೂ ಕಾಲ ಕಳೆದಿದ್ದ. ಅವನ ಖಾಯಿಲೆ ಕಠಿಣತರದ್ದಾಗಿದ್ದುದರಿಂದ, ಅವನಿಗೆ ಪೂರ್ಣ ಗುಣವಾಗದೆ, ಅವನ ಮೇಲೆ ಕ್ರಿಮಿನಲ್ ಖಟ್ಲೆ ನಡೆಸಲು

ಸರಕಾರಕ್ಕೂ ಅನುಕೂಲವಿರಲಿಲ್ಲ. ಆದರೆ ಕ್ರಾಂತಿಯಲ್ಲಿ ಸೇರಿ ಮಾಡಿದ್ದ ಯಾವ ಕ್ರಿಮಿನಲ್ ಅಪರಾಧವನ್ನೂ ಅಪರಾಧ ನಡೆದ ಆರು ತಿಂಗಳ ಅನಂತರ ವಿಚಾರಣೆ ಮಾಡಕೂಡದೆಂದು ಕಾನೂನೇ ಇದ್ದುದರಿಂದ—ಮೇರಿಯಸ್ ಖಾಯಿಲೆಯಿಂದ ಗುಣವಾಗಿ ಏಳುವಾಗಲೇ ಆರೇಳು ತಿಂಗಳು ಕಾಲ ಪೂರ ಕಳೆದಿದ್ದುದರಿಂದ—ಅವನ ಮೇಲಿನ ಖಟ್ಲೆ, ಅವಧಿಬಾಧಕದಿಂದ ತಾನಾಗಿಯೇ ರದ್ದಾಗಿತ್ತು.

ಗಿಲೆನಾರ್ಮಂಡ್ ಹೆಚ್ಚಾಗಿ ಮೇರಿಯಸನ ಎದುರೇ ಕುಳಿತಿರುತ್ತಿದ್ದ. ಮೇರಿಯಸನ ಖಾಯಿಲೆಯ ಈ ಆರೇಳು ತಿಂಗಳ ಕಾಲ ತಲೆ ನರೆತಿದ್ದ ಒಬ್ಬ ವೃದ್ಧ ಗಿಲೆನಾರ್ಮಂಡನ ಮನೆಯ ಹೊರ ಬಾಗಿಲವರೆಗೆ, ಸಾಧಾರಣ ದಿನಂಪ್ರತಿಯೂ, ಬಂದು ಮೇರಿಯಸನ ಆರೋಗ್ಯ ಕುರಿತು ವಿಚಾರಿಸಿ ಹೋಗುತ್ತಿದ್ದ. ಆತ ಹಾಗೆ ಬರುವಾಗಲೆಲ್ಲ ಭಕ್ತಿಯ, ಅಥವಾ ಪ್ರೀತಿಯ, ಕಾಣಿಕೆಯಂತೆ ಮೇರಿಯಸನಿಗೆ ಉಪಯೋಗ ಬೀಳುವಂಥ ಏನಾದರೊಂದು ಒಳ್ಳೆ ವಸ್ತುವನ್ನು ತಂದು ಅರ್ಪಿಸುತ್ತಿದ್ದ.

ಮೇರಿಯಸನಿಗೆ ಖಾಯಿಲೆ ಗುಣವಾಗತೊಡಗಿದಾಗ ಪ್ರಥಮವಾಗಿ ನೆನಪಾದದ್ದು ಕೋಸೆಟ್ಟಿಯದು. ಆರೋಗ್ಯ ಪರಿಪೂರ್ಣವಾದಾಗ ಅವನಿಗೆ ಇದ್ದುದು ಕೋಸೆಟ್ಟಿಯನ್ನು ನೋಡುವ ಹಂಬಲ, ಮತ್ತು ತನ್ನಜ್ಜ ಕೋಸೆಟ್ಟಿಯ ವಿರೋಧಿಯೆಂಬ ಹಿಂದಿನ ಜ್ಞಾಪಕ ಮಾತ್ರ. ರಾಜಕೀಯ ಅಥವಾ ಕ್ರಾಂತಿ ವಿಷಯವೊಂದು ಅವನಿಗೆ ಆಗ ರುಚಿಸುತ್ತಿರಲಿಲ್ಲ. ಹಿಂದೆ ತನ್ನಜ್ಜ ಕೋಸೆಟ್ಟಿಯ ಕುರಿತಾಗಿ ಆಡಿದ್ದ ಮಾತುಗಳನ್ನು ನೆನೆದುಕೊಂಡು ಅಜ್ಜನ ಇಂದಿನ ಪ್ರೀತಿ, ಶುಶ್ರೂಷೆ ಎಲ್ಲವೂ ಠಕ್ಕು ನಾಟಕೀಯ ಎಂದು ತಿಳಿಯುತ್ತಿದ್ದ. ತಾನು ಕೋಸೆಟ್ಟಿಯನ್ನು ಮದುವೆಯಾಗಲು ಪುನಃ ಪ್ರಯತ್ನಿಸುವಾಗ ಅಜ್ಜ ವಿರೋಧ ಬಂದರೆ, ಆಗ್ಗೆ ತನ್ನ ಗಾಯಗಳನ್ನೆಲ್ಲ ಕೆದರಿಸಿಕೊಂಡು, ಅಜ್ಜನೊಂದಿಗೆ ಜಗಳವಾಡಿ ಸತ್ತೇ ಬಿಡುವುದಾಗಿ ನಿರ್ಧರಿಸಿದ್ದ.

೩. ನಿರೀಕ್ಷಿಸಿದ್ದು ಕದನ, ದೊರೆತದ್ದು ಸುದತಿ!

ಆ ಬೆಳಗ್ಗೆ ಮೇರಿಯಸ್ ದಿನಂಪ್ರತಿಯಂತೆ ಹಾಲು ಬ್ರೆಡ್ ತಿನ್ನುತ್ತಿದ್ದಾಗ ಸಮೀಪದಲ್ಲೇ ಕುಳಿತಿದ್ದ ಗಿಲೆನಾರ್ಮಂಡ್, "ಅಪ್ಪಾ ಮೇರಿಯಸ್, ವೈದ್ಯರು ವಿಧಿಸಿರುವ ಈ ಆಹಾರ ಸಾಕಷ್ಟು ತ್ರಾಣ ಕೊಡಲಾರದು. ನೀನು ಮಾಂಸ ತೆಗೆದುಕೊಂಡರೆ ಮಾತ್ರ ಮೊದಲಿನಂತೆ ಆಗುವೆ," ಎಂದು ಪ್ರೀತಿಯಿಂದ ಹೇಳಿದ.

ಜಗಳಕ್ಕೆ ತಕ್ಕ ನೆಪ ಹುಡುಕುತ್ತಿದ್ದ ಮೇರಿಯಸನಿಗೆ ಈ ಮಾತಿನಲ್ಲಿ ಎಡೆ ಸಿಕ್ಕಿತು. ತಾನು ಮೊದಲಿಗಿಂತ ಏನೂ ವ್ಯತ್ಯಾಸ ಹೊಂದಿಲ್ಲವೆಂಬಂತೆಯೂ ತನ್ನ ಮನವನ್ನು ನೋಯಿಸಿದರೆ ತಾನು ಮೊದಲಿನಂತೆಯೇ ವರ್ತಿಸಿಬಿಡುವೆನೆಂಬಂತೆಯೂ ಮುಖದಲ್ಲಿ ತೋರಿಸುತ್ತ ಅಜ್ಜನಿಗೆ ಒದರಿದ, "ನಿನ್ನ ಮಾತು ಕೇಳುವಾಗ ನನ್ನ ಕಡೆಯ ಕೆಲವು ಮಾತುಗಳನ್ನು ಹೇಳಿಬಿಡೋಣ ಎಂದು ತೋರುತ್ತದೆ."

"ಏನದು, ಹೇಳು," ಅಂದ ಅಜ್ಜ.

"ನನಗೆ ಮದುವೆಯಾಗಬೇಕು."

"ಆ ವಿಷಯ ನಿಶ್ಚೈಸಿಯಾಗಿದೆ."

"ಏನೂಂತ?"

"ನಿನ್ನ ಹುಡುಗಿಯನ್ನು ಮದುವೆ ಮಾಡೋದು, ಅಂತ."

"ಯಾವ ಹುಡುಗಿ?"

"ಕೋಸೆಟ್ಟೆಯನ್ನು—ನೀನು ನಿಶ್ಚೈಸಿಕೊಂಡಿರುವವಳನ್ನೇ!"

ಮೇರಿಯಸನ ಮೈ ಕಂಪಿಸಿತು. ತನ್ನ ನಿರೀಕ್ಷಣೆಗೆ ವಿರುದ್ಧವಾಗಿ ಅಜ್ಜ ಮಾತಾಡಿದ್ದನ್ನು ಕೇಳಿ ಬಹಳ ಆಶ್ಚರ್ಯಪಟ್ಟ. ಆದರೂ, ಅವನು ಇನ್ನೂ ಸಂಶಯಪಟ್ಟುಕೊಂಡೇ ಇದ್ದ. ಇದನ್ನು ಮುಖ ನೋಡಿಯೇ ತಿಳಿದುಕೊಂಡಿದ್ದ ಕುಶಾಗ್ರಬುದ್ಧಿಯ ಅಜ್ಜ, "ನೀನು ಏನೂ ಆಶ್ಚರ್ಯ ಪಡಬೇಕಾದ್ದಿಲ್ಲ. ನಾನು ಎಲ್ಲವನ್ನೂ ಯೋಚಿಸಿದ್ದೇನೆ. ಆ ಹುಡುಗಿ ಕೋಸೆಟ್ಟೆಯನ್ನೇ ನಿನಗೆ ಮದುವೆ ಮಾಡುವುದು. ಅವಳು ಗುಣವಂತೆ, ವಿದ್ಯಾವಂತೆ, ಬಲು ಸುಂದರಿ. ಅವಳಲ್ಲಿ ಏನೂ ಕೊರತೆಯಿಲ್ಲ. ಅವಳ ಕಡೆಯ ಸಂಬಂಧವೂ ಬಲು ಯೋಗ್ಯವಾದುದು. ಅವಳ ತಂದೆ ಬಲು ಶಾಂತಚಿತ್ತ. ಪ್ರತಿ ದಿನವೂ ಇಲ್ಲಿಗೆ ಬಂದು ನಿನ್ನ ಯೋಗಕ್ಷೇಮ ವಿಚಾರಿಸಿಕೊಂಡು ಹೋಗುತ್ತಾನೆ. ಅವನ ಪೂರ್ವ ಚರಿತ್ರೆಯನ್ನೆಲ್ಲ ನಾ ಬಲ್ಲೆ. ಅವನ ಹೆಸರು ಮಾನ್ಸರ್ ಫಾಶೆಲೆವೆಂಟ್ ಎಂದು. ಅವನು ಧನವಂತ, ಧರ್ಮಿಷ್ಠ," ಎಂದು ಮೊದಲಾಗಿ ಉತ್ಸಾಹದಿಂದ ಹೇಳಿದ.

ತನ್ನನ್ನು "ಅಜ್ಜಾ!" ಎಂದು ಮೇರಿಯಸ್ ಸಂಬೋಧಿಸುವನೋ ಎಂದು ಬಲು ಕಾತರತೆಯಿಂದ ಎದುರು ನೋಡುತ್ತಿದ್ದ ಗಿಲೆನಾರ್ಮಂಡ್ ಈ ಮೊದಲಿನ ಮಾತುಗಳನ್ನಾಡಿದ್ದನ್ನು ಕೇಳಿ ಮೇರಿಯಸ್ "ಅಜ್ಜಾ," ಎಂದು ಸಂಬೋಧಿಸಿ ಮಾತಾಡಲೂ ಪ್ರಾರಂಭಿಸಿದ.

ಮೇರಿಯಸ್ ಒಂದೆರಡು ಸಲ "ಅಜ್ಜಾ" ಎಂದು ಸಂಬೋಧಿಸಿ ಮಾತಾಡಿದ್ದೇ ತಡ, ಗಿಲೆನಾರ್ಮಂಡ್ ಅತಿಶಯ ಆನಂದ ತಳೆದ. "ಅಜ್ಜ" ಎಂಬ ಪ್ರತಿಫಲದಿಂದ ಮತ್ತಷ್ಟು ಉತ್ಸಾಹ ಭರಿತನಾಗಿ, "ಯುವಕರ ಮನಸ್ಸನ್ನು ನಾನು ಚೆನ್ನಾಗಿ ತಿಳಿಯಬಲ್ಲೆ. ನಾನು ವೃದ್ಧ ಮಂದಬುದ್ಧಿಯವನು ಎಂದು ನೀನು ಗ್ರಹಿಸಿರಬಹುದು. ನನ್ನ ಉಪಾಯಗಳನ್ನು ನೀನು ಊಹಿಸಿ ಸಹ ತಿಳಿಯಲಾರೆ! ನನ್ನ ಈ ಮುಪ್ಪಿನ ಕಾಲದಲ್ಲಿ ದೊರಕಿರುವ ಮುದ್ದು ಮೊಮ್ಮಗನನ್ನು ಪುನಃ ಬಿಟ್ಟುಕೊಡಲು ತಯಾರಿಲ್ಲ. ಕೋಸೆಟ್ಟೆ ಇರದಿರುವಲ್ಲಿ ನೀನೂ ಇರುವುದಿಲ್ಲವೆಂದು ತಿಳಿದಿದ್ದೇನೆ. ಕೋಸೆಟ್ಟೆಯನ್ನು ನೀನು ಶ್ರಮಪಟ್ಟು ಪಡೆಯುವ ಬದಲು ನಾನೇ ನಿನಗೆ ಉತ್ಸಾಹದಿಂದ ಎತ್ತಿಕೊಟ್ಟರೆ, ನಿನಗೆ ಕೋಸೆಟ್ಟೆಯ ಲಾಭವಾಗುವಾಗಲೇ ನನಗೆ ನೀನು ದೊರಕುವ ಲಾಭವೂ ಆಗುವುದೆಂದು ಕಂಡುಕೊಂಡಿದ್ದೇನೆ. ಕೋಸೆಟ್ಟೆ ಸಾಧಾರಣ ಚೆಲುವೆಯಲ್ಲ. ಅಂಥವಳು ಈ ಪ್ಯಾರಿಸಿನಲ್ಲೇ ಸಿಕ್ಕಲಾರಳು. ಮತ್ತೆ ನಿಮ್ಮಂಥ ಕೂಟ ಸ್ವರ್ಗದಲ್ಲೂ ದೊರೆಯದು," ಎಂದು ಹೇಳಿದ.

ಮೇರಿಯಸನ ಆನಂದವೂ ದಂಡೆಮೀರಿತ್ತು. ಅವನು ಕೋಸೆಟ್ಟೆಯನ್ನು ತನಗೆ ತೋರಿಸಬೇಕೆಂದು ಒತ್ತಾಯಿಸಿದ. ಗಿಲೆನಾರ್ಮಂಡ್ ಅದಕ್ಕೊಪ್ಪಿದ. ಆದರೆ, ಈ ಮಧ್ಯೆ ಮೈಮರೆತು ತನ್ನ ಆನಂದಾತಿಶಯದಲ್ಲಿ ಕ್ರಾಂತಿಕಾರರನ್ನು ಒಮ್ಮೆ ಬೈದು, ಜೊತೆಯಲ್ಲೇ ಹೆದರಿ ಅಲ್ಲಿಂದೆದ್ದು ಓಡಿಯೇ ಹೋದ!

೪. ವಧುವಾಗಲಿರುವ ಕೋಸೆಟ್ಟೆ

ಕೋಸೆಟ್ಟೆ ತನ್ನ ಮನೆಗೆ ಬರುವಂತೆ ಗಿಲೆನಾರ್ಮಂಡ್ ಏರ್ಪಡಿಸಿದ. ಅವಳು ಈ ಮನೆಗೆ ಬರುವಾಗ ಎಲ್ಲರೂ ಮೇರಿಯಸನ ಕೋಣೆಯಲ್ಲೇ ಇದ್ದರು. ಅವಳು ತನ್ನ ಕೋಣೆ ಪ್ರವೇಶಿಸಿದಾಗ ಎಂಥ ದುಸ್ತು ಧರಿಸಿದ್ದಳು, ಹೇಗಿದ್ದಳು ಎಂಬುದೇನೂ ಮೇರಿಯಸನ ಅರಿವಿಗೆ ಬರಲಿಲ್ಲ. ಪರಮಾನಂದಮಯ ಚೇತನಯುತ ಪ್ರಭೆಯೊಂದು ತನ್ನೆಡೆಗೆ ಬಂದಿತೆಂದು ಮಾತ್ರ ತಿಳಿದ.

ಕೋಸೆಟ್ಟೆಗೂ ಇದೇ ತೆರನಾದ ಭಾವನೆಯಿತ್ತು. ತಾನು ಸ್ವರ್ಗವನ್ನೇ ಪ್ರವೇಶಿಸಿದ್ದಾಗಿ ತಿಳಿದಳು. ಅಷ್ಟು ಜನರೆದುರು ಆಲಿಂಗಿಸಿಕೊಳ್ಳಲು ಅವರಿಗೆ ಧೈರ್ಯ ಬರಲಿಲ್ಲ. ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ತಮ್ಮ ದೃಷ್ಟಿಯಿಂದಲೇ ಪರಸ್ಪರ ಸಂಭಾಷಿಸಿಕೊಂಡರು.

ಜೀನ್‌ವಾಲ್‌ಜೀನ್ ಒಳಗೆ ಪ್ರವೇಶಿಸದೆ ಪುಸ್ತಕದಂತೆ ತೋರುತ್ತಿದ್ದ ಒಂದು ಕಟ್ಟನ್ನು ಕೈಯಲ್ಲಿ ಹಿಡಿದುಕೊಂಡು ಬಾಗಿಲಲ್ಲಿ ನಿಂತಿದ್ದ. ಕುಮಾರಿ ಗಿಲೆನಾರ್ಮಂಡಳಿಗೆ ಪುಸ್ತಕ ಓದುವವರನ್ನು ಕಂಡರಾಗುತ್ತಿರಲಿಲ್ಲ. ಜೀನ್‌ವಾಲ್‌ಜೀನನ ಕೈಯಲ್ಲಿ ಪುಸ್ತಕ ಕಂಡು, ಅವನ ಕುರಿತು ಸ್ವಲ್ಪ ಅಪಹಾಸ್ಯವನ್ನೂ ಮಾಡಿದಳು. ತನ್ನ ಮಗಳು ಹೀಗೆ ಮಾತಾಡಬಾರದಿತ್ತೆಂದು ಗಿಲೆನಾರ್ಮಂಡ್ ತಿಳಿದು, ಮಾನ್ಸಿರ್ ಫಾಶೆಲೆವೆಂಟರನ್ನು ಸಮಾಧಾನಪಡಿಸುವ ನಾಲ್ಕು ಮಾತುಗಳನ್ನಾಡಬೇಕೆಂದು ಹೊರಟ. ಆದರೆ, ತನ್ನ ಶ್ರೀಮಂತಿಕೆಯಿಂದ ಕೆಳಗಿಳಿದು ಬಡ ಮಾನ್ಸಿರ್ ಫಾಶೆಲೆವೆಂಟರ ಸರಿಸಮಾನನಾಗಬಾರದೆಂಬ ಭಾವನೆ ಮುಖದಲ್ಲಿ ತೋರಿಸುತ್ತ, ಅವನೊಡನೆ ಸೀದಾ ಮಾತಾಡತೊಡಗಬಾರದೆಂದು, ಮಗಳನ್ನು ನೋಡುತ್ತ, "ಮಗಳೇ ಮಾನ್ಯ ಟ್ರೇನ್ಸೆಲೆವೆಂಟರು ತುಂಬ ಓದುವವರು. ಮನುಷ್ಯನಿಗೆ ಹಣ ಭೂಷಣವಾಗಿರುವಂತೆಯೇ, ವಿದ್ಯೆಯೂ ಹೌದು," ಎಂದು ಹೇಳಿದ. ಅನಂತರ ಕೋಸೆಟ್ಟೆಯ ಗೌರವಕ್ಕಾಗಿ ತಾನು ಅಷ್ಟು ಸುಲಭನಾಗುವುದೆಂಬುವಂತೆ, "ಮಾನ್ಯ ಟ್ರೇನ್ಸೆಲೆವೆಂಟರೇ! ನಿಮ್ಮ ಮಗಳನ್ನು ನಮ್ಮ ಮೊಮ್ಮಗನಾದ ಬ್ಯಾರನ್ ಮೇರಿಯಸ್ ಪೋಂಟ್‌ಮರ್ಸಿಗೆ ಲಗ್ನಮಾಡಿಕೊಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ," ಎಂದ.

ಬಡವರ ಹೆಸರನ್ನು ಪೂರ್ಣ ತಿಳಿಯುವುದು ಶ್ರೀಮಂತಿಕೆಯ ಲಕ್ಷಣವಲ್ಲವೆಂದು ಅಭ್ಯಾಸಪಡೆದಿದ್ದುದರಿಂದಲೇ ಗಿಲೆನಾರ್ಮಂಡ್ ಜೀನ್‌ವಾಲ್‌ಜೀನನನ್ನು 'ಟ್ರೇನ್ಸೆಲೆವೆಂಟ್' ಎಂದು ಕರೆದಿದ್ದ. ಜೀನ್‌ವಾಲ್‌ಜೀನ್ ಯಾವ ತಿದ್ದುಪಡಿಯನ್ನೂ ಮಾಡದೆ, ಸ್ಥಿರತೆ, ಪ್ರಶಾಂತತೆಯನ್ನು ಮುಖದಲ್ಲಿ ತೋರಿಸುತ್ತ, "ಅದಕ್ಕೆ ನನ್ನ ಸಮ್ಮತಿಯಿದೆ. ಬಲು ಸಂತೋಷದ ಸಮ್ಮತಿ," ಎಂದು ಉತ್ತರವಿತ್ತ.

ಗಿಲೆನಾರ್ಮಂಡ್ ಪುನಃ, "ಅಮ್ಮಾ ಕೋಸೆಟ್ಟೆ! ನಿನ್ನ ರೂಪವನ್ನು ನಾನು ಮೆಚ್ಚಿರುತ್ತೇನೆ. ಕನ್ನೆಯಾಗಿರುವುದು ಕೆಲವು ವರ್ಷಗಳ ಮಟ್ಟಿಗೆ ನ್ಯಾಯವೂ ಭೂಷಣವೂ ಆಗಿರುವುದಾದರೂ ಮತ್ತೆ ಪತ್ನಿಯರಾಗಿ ಮಕ್ಕಳನ್ನು ಹೆರುವುದೇ ಸ್ತ್ರೀಯರ ಮುಖ್ಯ ಕರ್ತವ್ಯ. ತನ್ನ ರಾಜ್ಯವನ್ನು ಶತ್ರುಗಳಿಂದ ರಕ್ಷಿಸಲು ಜೋನ್ ಆಫ್ ಆರ್ಕ್ ಕನ್ನೆಯಾಗಿಯೇ ಯುದ್ಧಮಾಡಿದರೂ ರಾಜ್ಯವನ್ನಾಳಿದ ರಾಣಿಯರೆಲ್ಲರೂ ಮಾತೆಯರೇ ಆಗಿದ್ದರು. ನನ್ನ ಪ್ರಾಯ ಈಗ ನನಗಾಗಿರುವುದಕ್ಕಿಂತ ಇಪ್ಪತ್ತೇ ವರ್ಷ ಕಡಿಮೆ ಆಗಿ ಇದ್ದಿದ್ದರೆ ನಾನೇ ಈ ಮೇರಿಯಸನ ಎದುರಾಗಿ ಕತ್ತಿಕಾಳಗ ಮಾಡಿ ನಿನ್ನನ್ನು ಯಾರು ಮದುವೆಯಾಗುವುದೆಂಬುದನ್ನು ತೋರಿಸುತ್ತಿದ್ದೆ! ಈಗ ನನ್ನಲ್ಲಿ ಪ್ರಾಯವೂ ಇಲ್ಲ ಹಣವೂ ಇಲ್ಲ. ನೀವು ಮದುವೆಯಾಗಿ ಬಾಳಿ. ನಾನು ನಿಮಗೆ ಉಡುಗೊರೆಯಾಗಿ ಕೊಡುವುದು ನನ್ನ ಬಡತನವನ್ನು ಮಾತ್ರ," ಎಂದು ಅಸಂಬದ್ಧವಾಗಿ ಒರಟುತನದಿಂದ ಹೇಳಿದ.

ಈ ಮಾತುಗಳನ್ನು ಕೇಳುತ್ತಿದ್ದ ಜೀನ್‌ವಾಲ್‌ಜೀನ್ ಮುಗುಳ್ನಗುತ್ತ ಎದುರು ಬಂದು, "ಸರಿ. ಮಕ್ಕಳು ಮದುವೆಯಾಗಿ ಸುಖವಾಗಿರಲಿ. ಕೋಸೆಟ್ಟೆಯ ಬಳುವಳಿಯಾಗಿ ನಾನು ೬ ಲಕ್ಷ ಫ್ರ್ಯಾಂಕಿಗೆ ಸ್ವಲ್ಪ ಕಡಿಮೆಯಾಗುವಷ್ಟು ಹಣ ಕೊಡುವೆನು," ಎಂದು ಹೇಳಿ ತನ್ನ ಕೈಯಲ್ಲಿ ಪುಸ್ತಕದಂತೆ ಇದ್ದ ಕಟ್ಟನ್ನು ಗಿಲೆನಾರ್ಮಂಡನ ಮಗಳ ಕೈಯಲ್ಲಿ ಕೊಟ್ಟ. ಅವರೆಲ್ಲರೂ ಸೇರಿ ಹಣವನ್ನು

ಲೆಕ್ಕ ಮಾಡಿ ಐದು ಲಕ್ಷದ ಎಂಬತ್ತನಾಲ್ಕು ಸಾವಿರ ಫ್ರ್ಯಾಂಕ್ ಬ್ಯಾಂಕ್ ನೋಟುಗಳಿವೆ ಎಂದರು. ಈ ಹಣ ನೋಡಿ ಸಂತೃಪ್ತಳಾದ ಅತ್ತೆ ಮೇರಿಯಸ್ ಕೋಸೆಟ್ಟೆಯರ ವಿವಾಹಕ್ಕೆ ಸಮ್ಮತಿಯಿತ್ತಳು.

'ಮಾನಿಟರ್' ಪತ್ರಿಕೆಯಲ್ಲಿ ಜೇವರ್ಟ್ ಸತ್ತಿದ್ದ ವರದಿ ಬಲು ವಿವರವಾಗಿ ಪ್ರಕಟವಾಗಿತ್ತು. ಕೆಲವರಿಗೆ ಅಕಸ್ಮಾತ್ ಹುಚ್ಚು ಹಿಡಿಯುವ ಕ್ರಮದಲ್ಲಿ ಜೇವರ್ಟನಿಗೆ ಹುಚ್ಚುಹಿಡಿದು ಆತ್ಮಹತ್ಯೆ ಮಾಡಿಕೊಂಡನೆಂದು ಆ ಪತ್ರಿಕೆಯಲ್ಲೂ ಇನ್ನೂ ಕೆಲವು ಪತ್ರಿಕೆಗಳಲ್ಲೂ ವರದಿಗಳಿದ್ದುವು.

ಜೇವರ್ಟ್ ಮೃತನಾದ ಸಂಗತಿ ಖಚಿತವಾದ ಕೂಡಲೇ ಜೀನ್‌ವಾಲ್‌ಜೀನ್ ಮೊಂಟ್ ಫರ್ಮಿಯಲ್ಲಿಯ ಕಾಡಿನಿಂದ, ತಾನು ಹೂತಿಟ್ಟಿದ್ದ ಹಣವನ್ನೆಲ್ಲ ತಂದ. ಈ ಕಾರಣದಿಂದಲೇ ಬೌಲಟ್ರೂವಿಗೆ ಹಾರೆಯೂ, ಕೋಸೆಟ್ಟಿಗೆ ಹಣವೂ ಸಿಕ್ಕಿದ್ದು !

೫. ಮದುವೆಗೆ ಮುನ್ನ

ಕೋಸೆಟ್ಟಿ ಮತ್ತು ಮೇರಿಯಸರ ಮದುವೆಯ ಏರ್ಪಾಡುಗಳು ನಡೆಯತೊಡಗಿದುವು. ಮದುವೆ ಕಾಲಕ್ಕೆ ತಂದೆತಾಯಿಗಳ ವಿವರಗಳು ಬೇಕಾಗಿದ್ದುದರಿಂದ, ಅಂಥ ವಿವರಗಳನ್ನು ಜೀನ್‌ವಾಲ್‌ಜೀನ್ ಕೋಸೆಟ್ಟೆಯ ಕುರಿತಾಗಿ ಕೊಟ್ಟ. ಈ ಬಗ್ಗೆ ಕಾನ್ವೆಂಟಿನಿಂದ ತಾನು ಪಡೆದಿದ್ದ ಸರ್ಟಿಫಿಕೇಟನ್ನು ಹಾಜರುಪಡಿಸಿದ. ಕಾನ್ವೆಂಟಿನ ಕೈಕೆಳಗೆ ಕೆಲಸಕ್ಕಿದ್ದ ಇಬ್ಬರು ಫಾಶೆಲೆವೆಂಟರ ಪೈಕಿ ಒಬ್ಬನ ಮಗಳು ಕೋಸೆಟ್ಟೆಯೆಂದೂ ಕೋಸೆಟ್ಟೆಯ ವಿದ್ಯಾಭ್ಯಾಸಕ್ಕಾಗಿ ಫಾಶೆಲೆವೆಂಟ್ ೫೦೦೦ ಫ್ರ್ಯಾಂಕ್ ಹಣವನ್ನು ಕಾನ್ವೆಂಟಿಗೆ ದಾನಮಾಡಿರುವರೆಂದೂ ಸರ್ಟಿಫಿಕೇಟಿನಲ್ಲಿತ್ತು.

ಜೀನ್‌ವಾಲ್‌ಜೀನ್ ಕೋಸೆಟ್ಟಿಗೆ ಬಳುವಳಿಯಾಗಿ ಕೊಟ್ಟ ಹಣ ಅದು ತನ್ನ ಸ್ವಂತದ್ದಲ್ಲವೆಂದೂ ಕೋಸೆಟ್ಟೆಯ ಬಂಧುವೊಬ್ಬ ಗುಪ್ತವಾಗಿ ಅವಳ ಮದುವೆ ಕಾಲದಲ್ಲಿ ಕೊಡಲು ತನ್ನಲ್ಲಿ ಅಮಾನತ್ತಿಟ್ಟದ್ದೆಂದೂ ಒಂದು ನೋಂದಾಯಿತ ದಾಖಲೆಯನ್ನೂ ಅವನು ಹಾಜರುಪಡಿಸಿದ.

ತನಗೇ ಮದುವೆಯಾಗುವುದಿದ್ದರೆ ಎಷ್ಟೊಂದು ಉತ್ಸಾಹದಿಂದ ತಾನು ಕೆಲಸ ಮಾಡುತ್ತಿದ್ದನೋ ಅಷ್ಟೇ ಉತ್ಸಾಹದಿಂದ ಗಿಲೆನಾರ್ಮಂಡ್ ಕೋಸೆಟ್ಟಿಗೆ ತಕ್ಕವಾದ ಉಡುಗೆತೊಡುಗೆ, ಉಂಗುರ, ಆಭರಣಗಳನ್ನು ಮಾಡಿಸಿದ. ತನ್ನ ಎಲ್ಲ ಹೆಂಡಂದಿರ ಅಮೂಲ್ಯ ಒಡವೆ ವಸ್ತುಗಳನ್ನೂ ಈ ಮದುವೆಗಾಗಿ ಎದುರು ತೆಗೆದಿಟ್ಟ.

ಹೀಗೆ ವಧೂವರರ ಕಡೆಯ ವೃದ್ಧರಿಬ್ಬರೂ ವೃದ್ಧೆ ಕುಮಾರಿ ಗಿಲೆನಾರ್ಮಂಡಳೂ ಕೋಸೆಟ್ಟೆಯ ಬಗ್ಗೆ ಉತ್ಸಾಹ ಸಂಭ್ರಮ ತಳೆದರು.

೬. ಇರಬೇಕು ಇರದಿರಬೇಕು !

ತನ್ನ ಮದುವೆಯ ದಿನ ಸಮೀಪಿಸುತ್ತಿದ್ದ ಸಂತೋಷದ ಎಡೆಯಲ್ಲೇ ಮೇರಿಯಸನನ್ನು ಎರಡು ವಿಷಾದ ಛಾಯೆಗಳು ಬಾಧಿಸುತ್ತಿದ್ದುವು. ಮೇರಿಯಸ್ ಭಾವುಕ ಯುವಕ. ಅವನಲ್ಲಿ ಒಂದು ಆಲೋಚನೆ ತಲೆದೋರಿದರೆ, ಆ ಪ್ರಕಾರ ಕೆಲಸ ಪೂರೈಸುವ ವರೆಗೆ ಶಾಂತಿಯೇ ಇರುತ್ತಿರಲಿಲ್ಲ. ಈಗಲೂ ಹೀಗೆಯೇ ಆಯಿತು.

ಒಂದನೆಯದಾಗಿ, ತೆನಾರ್ಡಿಯರನ ಕುರಿತಾದ ಆಲೋಚನೆಗಳು ಅವನನ್ನು ಹಿಂಸಿಸುತ್ತಿದ್ದುವು. ತನ್ನ ತಂದೆಯ ವಾಗ್ದಾನದಂತೆ ತಂದೆಗಾಗಿ ತಾನು ನಡೆದು ತೆನಾರ್ಡಿಯರನಿಗೆ ಯಥಾ

ಶಕ್ತಿ ಸಹಾಯವಿತ್ತು, ತಂದೆಯನ್ನು ಋಣಮುಕ್ತನನ್ನಾಗಿ ಮಾಡಬೇಕೆಂದೂ ತಂದೆ ತನಗೆ ವಹಿಸಿದ್ದ ಕರ್ತವ್ಯವನ್ನು ಪಾಲಿಸಿ ತಂದೆಯ (ತನ್ನ) ಋಣವನ್ನು ಆ ಮಟ್ಟಿಗೆ ಮುಗಿಸಬೇಕೆಂದೂ ಸದಾ ಹಂಬಲಿಸುತ್ತಿದ್ದ. ಇದಕ್ಕಾಗಿ ಅವನು ತೆನಾರ್ಡಿಯರನನ್ನು ಬಹಳವಾಗಿ ಹುಡುಕಿಸಿನೋಡಿದ. ತೆನಾರ್ಡಿಯರಿಣಿ ಜೈಲಿನಲ್ಲಿ ಸತ್ತಿರುವಳಾಗಿ ತಿಳಿದ. ಮತ್ತೆ ಎಪೋನಿನ್ನಳೂ ಗಾವ್ರೋಚನೂ ತನ್ನೆದುರೇ ಯುದ್ಧರಂಗದಲ್ಲಿ ಸತ್ತದ್ದನ್ನು ಕಂಡಿದ್ದನಷ್ಟೆ. ಹಾಗಾಗಿ, ತೆನಾರ್ಡಿಯರನನ್ನೂ ಅವನ ಕಿರಿಮಗಳು ಅಸೆಲ್ಮಳನ್ನೂ ಮಾತ್ರ ಹುಡುಕುತ್ತಿದ್ದ.

ಅವನನ್ನು ಕಾಡುತ್ತಿದ್ದ ಎರಡನೆಯ ಸಂಗತಿ: ತಡೆಗೋಡೆಯ ಒಳಗೆ ಕ್ರಾಂತಿಯುದ್ಧರಂಗ ದಲ್ಲಿ, ತಾನು ಗುಂಡಿನೇಟಿನಿಂದ ಸ್ಮೃತಿ ತಪ್ಪುತ್ತಿದ್ದಾಗಲೇ ತನ್ನನ್ನು ಎತ್ತಿ ಆಧರಿಸಿದ ಬಲವಾದ, ದೃಢವಾದ ಕೈ ಯಾರದು? ಆ ಬಲವಾದ ಕರ ಸ್ಪರ್ಶಾನಂತರ ಸ್ಮೃತಿ ಬಂದಾಗ ಅವನು ಕಂಡದ್ದು ಅಜ್ಜ, ಮತ್ತು ಅಜ್ಜನ ಮನೆಯವರು! ತನ್ನನ್ನು ಬಂಡಿಯಿಂದ ಸಾಗಿಸಿ ತಂದರೆಂಬುದನ್ನು ತಿಳಿದು, ಆ ಬಂಡಿಗನನ್ನು ಹುಡುಕಿ ಹಿಡಿದು ವಿಚಾರಿಸಿದ, ಅವನಿಂದ ತಿಳಿದುಬಂದ ವಿಷಯ ಬಲು ಸ್ವಲ್ಪ ಮಾತ್ರವಾಗಿತ್ತು. ಯಾವನೋ ಒಬ್ಬ ವೃದ್ಧ ಪ್ಯಾರಿಸಿನ ಸುರಂಗಗಳ ಒಳಗಿನಿಂದಲೇ ಸಾಗಿಸಿ ತಂದು ತನ್ನನ್ನು ತನ್ನ ಅಜ್ಜನ ವಶಕ್ಕೆ ಬಿಟ್ಟು, ಜೇವರ್ಟನ ವಶದಲ್ಲೋ ಜೊತೆಯಲ್ಲೋ ಹೋಗಿದ್ದನೆಂದು ಮಾತ್ರ ಬಂಡಿಗ ತಿಳಿಸಿದ್ದ.

ಈ ವಿಷಯಗಳನ್ನೆಲ್ಲ ಮೇರಿಯಸ್ ಜೀನ್‌ವಾಲ್‌ಜೀನನ ಎದುರೇ ಮಾತಾಡಿದರೂ ಇವನು ಯಾವ ಉತ್ತರವನ್ನೂ ಕೊಡಲಿಲ್ಲ, ಸಹಾನುಭೂತಿಯನ್ನೂ ತೋರಿಸಲಿಲ್ಲ, ಮೇರಿಯಸನಿಗೆ ಬೇಸರವಾಯಿತು. ಸದ್ಯ ಕೆಲವು ದಿನಗಳಲ್ಲಿ ತನ್ನ ಸಂಬಂಧಿಕನಾಗಲಿದ್ದ ಈ ವೃದ್ಧನಿಗೆ ಯಾವುದೇ ಬಗೆಯ ಹಾರ್ದಿಕ ಮೃದುಭಾವನೆಗಳೇ ಇಲ್ಲವೆಂದು ಊಹಿಸಿದ. ಇದರಿಂದ ಇವನಿಗೆ ಸ್ವಲ್ಪ ಕೋಪವೂ ಬಂತು. ಇವನು ಸ್ವಲ್ಪ ಕೋಪದಿಂದಲೇ, "ಮಾನ್ಯರ್ ಫಾಶೆಲೆವೆಂಟರೇ! ಯುದ್ಧ ರಂಗದಲ್ಲಿ ತನ್ನ ಜೀವಾಪಾಯವನ್ನೂ ಕಡೆಗಣಿಸಿ ನನ್ನನ್ನು ಎತ್ತಿತಂದ ಒಂದು ಪ್ರಸಂಗಕ್ಕಾಗಿಯೇ ಆ ವೃದ್ಧನಿಗೆ ನಾನು ಎಷ್ಟು ಋಣಿಯಾಗಿದ್ದರೂ ಸಾಲದು. ಅನಂತರ ಆ ಮಹಾತ್ಮ ಯುದ್ಧರಂಗ ದಿಂದ ಸಾಧಾರಣ ಮೂರು ಮೈಲಿಗೂ ಮಿಗಬಹುದಾದಷ್ಟು ದೂರಕ್ಕೂ ನೆಲದಡಿಯ ಸುರಂಗ ದಲ್ಲೇ ನನ್ನನ್ನು ಹೊತ್ತುಸಾಗಿಸಿದ ಕಷ್ಟವನ್ನು ನೀವು ನಾವು ಊಹಿಸಲೂ ಅಸಾಧ್ಯ. ಕತ್ತಲೆ, ಕಂಪ, ತೇವ, ನಾರು ಕೆಸರುಕೊಳಕು, ಒಬ್ಬ ಮುಳುಗಬಹುದಾದಂಥ ಗುಂಡಿಗಳು ಇವುಗಳ ಕಷ್ಟವನ್ನೆಲ್ಲ ಸಹಿಸಿ ನಾನು ಬದುಕಿರುವೆನೋ ಸತ್ತಿರುವೆನೋ ಎಂಬ ಸಂಶಯ ಪರಿಸ್ಥಿತಿಯಲ್ಲೂ ತನ್ನ ಸರ್ವಶಕ್ತಿ, ಜೀವ, ಅನುಭವಗಳನ್ನು ನನ್ನ ಚಿಕ್ಕ ಜೀವದ ಒಂದು ಕಿಡಿಯಾದರೂ ಉಳಿದು ನಾನು ಬದುಕಲೆಂದು ವಿನಿಯೋಗಿಸಿ ಎದೆಕೊಟ್ಟ ಆ ತ್ಯಾಗಿಗೆ ನನ್ನ ಒಂದು ಕೈಯನ್ನೇ ಬೇಕಾದರೂ ಕಡಿದುಕೊಡಲು ತಯಾರಿದ್ದೇನೆ. ನನ್ನಲ್ಲಿ ಲಕ್ಷಗಟ್ಟಳೆ ಹಣವಿದ್ದು ಎಲ್ಲವನ್ನೂ ಅವನಿಗೆ ಅರ್ಪಿಸ ಬೇಕಾದರೂ, ಬಲು ಸಂತೋಷದಿಂದಲೇ ಅರ್ಪಿಸಿ, ಅವನ ಪಾದಗಳಿಗೆ ಎರಗಿ, ಕೃತಜ್ಞತೆ ವ್ಯಕ್ತಪಡಿಸುತ್ತಿದ್ದೆ," ಎಂದು ಆವೇಶದಿಂದ ಹೇಳಿದ.

"ದಾನಮಾಡಲು ನಿನಗೆ ಹಣಕ್ಕೇನು ಕಡಿಮೆಯೇ?" ಎಂದು ನಸುನಗುತ್ತ ಜೀನ್‌ವಾಲ್‌ಜೀನ್ ನುಡಿದ.

ಸ್ವಲ್ಪ ಕೋಪದಿಂದಲೇ, "ಹಣವಿದ್ದರೇನು? ಆ ಮನುಷ್ಯ ಸಿಕ್ಕಲಿಲ್ಲವಲ್ಲ!" ಎಂದು ಮೇರಿ ಯಸ್ ನಿಟ್ಟುಸಿರುಬಿಡುತ್ತ, ಅಂದುಕೊಂಡ.

ಐದನೆಯ ಸಂಪುಟ

೧. ಫೆಬ್ರುವರಿ ೧೬, ೧೮೩೩

೧೮೩೩ ಫೆಬ್ರುವರಿ ೧೬, ಮಂಗಳವಾರ ಕೋಸೆಟ್ಟೆ-ಮೇರಿಯಸ್ ಮದುವೆ ಮಾಡುವುದೆಂದು ನಿಶ್ಚೈಸಿದರು. ಆಗಿನ ಕಾಲದಲ್ಲಿ ಮದುವೆಗಳು ಈಗಿನ ಕಾಲದಲ್ಲಿ ಆಗುವಷ್ಟು ಸುಲಭವಾಗಿ ಆಗುತ್ತಿರಲಿಲ್ಲ. ಆ ಮದುವೆಗಳೂ ಅವರವರ ಮನೆಯಲ್ಲೇ, ನೆಂಟರಿಷ್ಟರನ್ನೆಲ್ಲ ಸೇರಿಸಿಕೊಂಡು, ಊಟ ಉಪಚಾರಗಳ ಸಮೇತ, ನಡೆಯುತ್ತಿದ್ದುವು. ಗಿಲೆನಾರ್ಮಂಡನಿಗೂ ಇದೇ ತರದ ವಿಜೃಂಭಣೆಯ ಮದುವೆ ತನ್ನ ಮನೆಯಲ್ಲಿ ನಡೆಸಬೇಕೆಂಬ ಇಷ್ಟವಿತ್ತು.

ಮದುವೆಯಾದನಂತರ ಕೋಸೆಟ್ಟೆ ಮೇರಿಯಸನ ಜೊತೆಯಲ್ಲಿ ಇರಬೇಕಾಗಿದ್ದುದರಿಂದ ಜೀನ್‌ವಾಲ್‌ಜೀನ್ ತನ್ನ ಮನೆಕೆಲಸದ ಟೌಸೆಂಟಳನ್ನು ಗಿಲೆನಾರ್ಮಂಡನ ಮನೆಗೆ ಅಭ್ಯಾಸಕ್ಕಾಗಿ ಮೊದಲೇ ಕಳುಹಿಸಿಕೊಟ್ಟ. ಕೋಸೆಟ್ಟೆಗೆ ಈ ಮೊದಲೇ 'ಬಳುವಳಿ'ಯೆಂದು ಹೆಸರು ಹಾಕಿ ಕೊಟ್ಟಿದ್ದ ಹಣವನ್ನು ಪುನಃ ಒಮ್ಮೆ ಅವಳಿಗೆ ವಿಧಿ ಸಂಪ್ರದಾಯ ಮೊದಲಾದವುಗಳ ಪೂರ್ವಕವಾಗಿ ಸಲ್ಲಿಸಿದ. ಮದುವೆ ಮುಗಿಯುವಾಗ ಜೀನ್‌ವಾಲ್‌ಜೀನ್ ಒಬ್ಬನೇ ತನ್ನ ಮನೆಯಲ್ಲಿ ಇರಬೇಕಾಗುವ ಪ್ರಸಂಗ ಸನ್ನಿಹಿತವಾಯಿತು. ಆದರೆ, ಸಂದರ್ಭಗಳನ್ನು ಗ್ರಹಿಸಿ, ಜೀನ್‌ವಾಲ್‌ಜೀನ್ ತನ್ನ ಮನೆಯಲ್ಲೇ ಇರಲನುಕೂಲವಾಗುವಂತೆ, ಗಿಲೆನಾರ್ಮಂಡ್ ಅವನ ಮನೆಯೊಳಗೇ ಉತ್ತಮ ಸ್ಥಳವನ್ನು ಜೀನ್‌ವಾಲ್‌ಜೀನನಿಗಾಗಿ ಏರ್ಪಡಿಸಿಟ್ಟ. ಈ ಏರ್ಪಾಡಿಗೆ ಜೀನ್‌ವಾಲ್‌ಜೀನನ ಮನಸ್ಸು ಒಪ್ಪುತ್ತಿರಲಿಲ್ಲವಾದರೂ ಕೋಸೆಟ್ಟೆಯ ಪ್ರೀತಿಯ ಒತ್ತಾಯಕ್ಕಾಗಿ ಹಾಗೆ ಇರಲು ಒಪ್ಪಿದ.

ಮದುವೆಯ ದಿನ ಸಮೀಪಿಸುತ್ತ ಬಂದ ಹಾಗೆ ಜೀನ್‌ವಾಲ್‌ಜೀನ್ ಒಬ್ಬನ ಹೊರತು ಇತರರೆಲ್ಲರೂ ತುಂಬ ಆನಂದದಲ್ಲಿದ್ದರು. ಇವನು ಮಾತ್ರ ಸಂತೋಷದ ಜೊತೆಯಲ್ಲಿ ವಿರಕ್ತಿಯನ್ನೂ ತೋರುತ್ತಿದ್ದ. ಬಲಗೈ ಹೆಬ್ಬೆರಳು ಸ್ವಲ್ಪ ಜಖಂಗೊಂಡಿದ್ದುದರಿಂದ ಆ ಕೈಗೆ ಬ್ಯಾಂಡೇಜು ಸುತ್ತಿ, ವಸ್ತ್ರದಿಂದ ಆ ಕೈಯನ್ನು ಕುತ್ತಿಗೆಗೆ ನೇತು ಹಾಕಿಕೊಂಡೇ ಇರುತ್ತಿದ್ದ. ಅವನ ವಿರಕ್ತಿಗೆ ಕೈಯ ನೋವು ಕಾರಣವಿರಬೇಕೆಂದು ಗಿಲೆನಾರ್ಮಂಡನ ಕಡೆಯವರೆಲ್ಲರೂ ಗ್ರಹಿಸಿದ್ದರು.

ಮದುವೆಯ ದಿನ ನಿಶ್ಚೈಸುವಾಗ ಫೆಬ್ರುವರಿ ೧೬ರ ದಿನ ಶ್ರೋವ್ ಹಬ್ಬದ ಮಂಗಳವಾರ ಆಗುವುದೆಂಬುದನ್ನು ಮರೆತಿದ್ದರು. ಈ ಮಂಗಳವಾರ ಮದುವೆ ಮಾಡುವುದು ಶುಭವಲ್ಲವೆಂದು ಕುಮಾರೀ ಗಿಲೆನಾರ್ಮಂಡ್ ಮದುವೆಯ ದಿನ ಹಠಾತ್ತನೆ ಅಭಿಪ್ರಾಯಪಟ್ಟಳು. ಆದರೆ ಒಂದು ಆಧಾರ ಶ್ಲೋಕ ಹೇಳಿ, ಅದೇ ೧೬ನೇ ಮಂಗಳವಾರ ಮದುವೆಯಾದದ್ದಾದರೆ ಎಂಥ ವಿಷಮ ದಾಂಪತ್ಯವೂ ಸಾರ್ಥಕವಾಗಿ, ಪಿತೃಭಕ್ತಿಯುಳ್ಳ ಮಕ್ಕಳೇ ಜನಿಸುವರೆಂದು ಗಿಲೆನಾರ್ಮಂಡ್ ಎಲ್ಲರನ್ನೂ ಸಮಾಧಾನಪಡಿಸಿದ. ಅವನ ಧರ್ಮಶಾಸ್ತ್ರದ ಶ್ಲೋಕ ಕುಮಾರಿ ಗಿಲೆನಾರ್ಮಂಡಳ ಭಯವನ್ನು (ಅಸೂಯೆಯಿದ್ದರೂ ಇರಬಹುದು!) ನಿವಾರಿಸಿತು.

ಮದುವೆಯ ಮುಖ್ಯ ಕೆಲಸಗಳು ಗಿಲೆನಾರ್ಮಂಡನ ಮನೆಯಲ್ಲೇ ಜರಗುವುದಿದ್ದರೂ ಮುನಿಸಿಪಲ್ ಆಫೀಸಿಗೂ ಇಗರ್ಜಿಗೂ ಅವರು ಮದುವೆ ಸಂಬಂಧವಾಗಿಯೇ ಆ ದಿನ ಹೋಗಬೇಕಾಗಿತ್ತು. ಹಾಗಾಗಿ ಎರಡು ಬಾಡಿಗೆ ಬಂಡಿಗಳನ್ನೇರ್ಪಡಿಸಿಕೊಂಡರು. ಈ ಸವಾರಿ ಒಂದು ವಿಧದ ಮೆರವಣಿಗೆಯೂ ಆಗಿದ್ದುದರಿಂದ, ಎಲ್ಲರೂ ಆದಷ್ಟು ಅಲಂಕರಿಸಿಕೊಂಡು, ಮಾಡು ಇರದಿದ್ದ ಬಂಡಿಗಳಲ್ಲಿ ಸವಾರಿ ಮಾಡಿದರು. ಮುಂದೆಹೋಗುವ ಬಂಡಿಯಲ್ಲಿ ಎದುರುಗಡೆ

ರಸ್ತೆಗೆ ಮುಖಹಾಕಿ ಕುಮಾರಿ ಗಿಲೆನಾರ್ಮಂಡಳೂ ಕೋಸೆಟ್ಟಿಯೂ ರಸ್ತೆಯನ್ನು ನೋಡುತ್ತ, ಹಿಂಬದಿಯಲ್ಲಿ ಜೀನ್‌ವಾಲ್‌ಜೀನನೂ ಗಿಲೆನಾರ್ಮಂಡನೂ ಕುಳಿತಿದ್ದರು. ಹಿಂದಿನ ಬಂಡಿಯಲ್ಲಿ ಮೇರಿಯಸ್ ಒಬ್ಬನೇ ಕುಳಿತಿದ್ದ.

ಶ್ರೋವ್ ಹಬ್ಬದ ದಿನ ಯಾರು ಬೇಕಾದರೂ ಮೊಗವಾಡವಿಟ್ಟುಕೊಂಡು, ಅಥವಾ ವೇಷ ಪಲ್ಲಟಮಾಡಿಕೊಂಡು, ಅಥವಾ, ಯಾವುದೇ ರೀತಿಯಲ್ಲಿ ಬಹಿರಂಗವಾಗಿ ರಸ್ತೆಯಲ್ಲಿ ತಿರುಗುವ ಪದ್ಧತಿಯಿದೆಯಷ್ಟೆ. ಈ ದಿನ ಸರಕಾರವಾಗಲೀ ಪೊಲೀಸರಾಗಲೀ ಯಾರೊಬ್ಬರನ್ನೂ ಹುಡುಕುವುದಾಗಲೀ ದಸ್ತಗಿರಿಸುವುದಾಗಲೀ ಮಾಡುವುದಿಲ್ಲ. ಅಡಗಿ ಜೀವಿಸುವವರು, ಕಳ್ಳರು, ದರೋಡೆಕಾರರು, ರಾಜದ್ರೋಹಿಗಳು ಇಂಥವರೆಲ್ಲರೂ ತಮಗೆ ಮನಬಂದಂತೆ ಮೊಗವಾಡವಿಟ್ಟುಕೊಂಡು ಎಲ್ಲರೊಂದಿಗೆ ಕಲೆತು, ಹಬ್ಬದಲ್ಲಿ ಭಾಗವಹಿಸುವರು. ಈ ದಿನ ಇವರ ಮೆರವಣಿಗೆಗೆ ಸಂಬಂಧಿಸಿ ಒಂದು ವಿಶೇಷ ಮಾತುಕಥೆ ನಡೆಯಿತು.

ಮೆರವಣಿಗೆ ಸಾಗುತ್ತಿದ್ದ ಹಾಗೆಯೇ ರಸ್ತೆಯ ಬದಿಯಲ್ಲಿ ಮೊಗವಾಡ ತೊಟ್ಟು ನಿಂತಿದ್ದ ಒಬ್ಬ ಗಂಡಸು, ಮೊಗವಾಡವಿಲ್ಲದೆ ಅವನ ಜೊತೆ ನಿಂತಿದ್ದ ತನ್ನ ಮಗಳನ್ನು ಕರೆದು, "ನೋಡು ಮಗಳೇ! ಆ ಮೆರವಣಿಗೆಯಲ್ಲಿ ಕೈಗೆ ಬ್ಯಾಂಡೇಜ್ ಕಟ್ಟಿಕೊಂಡು ಕುಳಿತಿರುವವನನ್ನು ಈ ಮೊದಲು ನೋಡಿರುವೆನು. ಅವನ ಪರಿಚಯವೂ ನನಗಿದೆ. ನೀನು ಅವರನ್ನೆಲ್ಲ ಒಮ್ಮೆ ನೋಡು," ಅಂದ.

"ಅವರ ಪರಿಚಯದಿಂದ ನಮಗೇನು ಲಾಭ, ಅಪ್ಪಾ?" ಎಂದು ಮಗಳು ಕೇಳಿದಳು.

"ಅದನ್ನೆಲ್ಲ ಮತ್ತೆ ಹೇಳುತ್ತೇನೆ. ನೀನು ಮದುವಣಿಗನನ್ನೂ ಮದುವಣಿಗಿತ್ತಿಯನ್ನೂ ನೋಡಿ, ಅವರನ್ನು ಹಿಂಬಾಲಿಸಿ ಹೋಗಿ, ಅವರು ಇರುವ ಸ್ಥಳ ಪತ್ತೆಹಚ್ಚಬೇಕು. ಅದರಲ್ಲಿ ನಮಗೆ ಲಾಭವಿದೆ," ಅಂದ ತಂದೆ.

"ಆ ಕೆಲಸವನ್ನು ನೀನೇ ಮಾಡಬಹುದಲ್ಲ, ಅಪ್ಪಾ?"

"ಅಯ್ಯೋ ಹುಚ್ಚೀ, ಈ ಹೊತ್ತು ಒಂದು ದಿನ ತಾನೇ ನಾನು ಆ ಕೆಲಸ ಮಾಡಬಹುದು, ನಾಳೆಯಿಂದ ನೀನೇ ಎಲ್ಲವನ್ನೂ ಮಾಡಬೇಕಷ್ಟೆ. ನಾಳೆಯಿಂದ ನಾನು ಮೊಗವಾಡವಿಟ್ಟುಕೊಂಡು ಸಹ ತಿರುಗಲು ಅನುಕೂಲವಿಲ್ಲವೆಂಬುದನ್ನು ಮರೆತೆಯೇನು, ಅಸೆಲ್ಮ ?" ಅಂದ ತಂದೆ.

'ಅಸೆಲ್ಮ' ಅಂದರೆ ತೆನಾರ್ಡಿಯರನ ಕಿರಿಮಗಳೆಂಬುದು ಓದುಗರಿಗೆ ಜ್ಞಾಪಕವಿರಬಹುದಷ್ಟೆ?

೨. ಹರ್ಷದಲ್ಲಿ ವಿಷಾದದ ದನಿ

ನಮ್ಮ ಆಸೆಗಳೂ ಕನಸುಗಳೂ ಅನೇಕಾನೇಕವಿರುತ್ತ, ಆ ಪೈಕಿ ಕೆಲವನ್ನಾದರೂ ಪ್ರತ್ಯಕ್ಷ ಪಡೆದು ಅನುಭವಿಸುವ ಯೋಗ ಎಷ್ಟು ಜನರಿಗೆ ತಾನೇ ಇದೆ! ಅಂಥ ಯೋಗ್ಯತೆಯ ಸಿದ್ಧಿಗೆ ದೇವಲೋಕದ ವರವಿರಬೇಕಷ್ಟೆ. ಇಲ್ಲದಿದ್ದರೆ ಅದು ಅಸಾಧ್ಯ. ಆದರೆ ಇಂದಿನ ದಿನದ ಈ ಸಮಾರಂಭಕ್ಕೆ ದೇವತೆಗಳು ತಮ್ಮ ಸಮಗ್ರ ಅಭಿಮತವನ್ನು ಕೋಸೆಟ್ಟಿ ಮೇರಿಯಸರಿಗೆ ಕೊಟ್ಟು, ಅವರು ಅವರ ಆ ವರೆಗಿನ ಕನಸುನೆನಸುಗಳ ಸಮಸ್ತ ಆನಂದವನ್ನೂ ಅನುಭವಿಸುವಂತೆ ಮಾಡಿದ್ದರು.

ಕೋಸೆಟ್ಟಿಯ ಪೋಷಾಕು ಶುದ್ಧ ಬಿಳಿ. ಮೇರಿಯಸನದು ಶುದ್ಧ ಕರಿ. ಮೇರಿಯಸ್ ತಲೆಯನ್ನು 'ಕ್ರಾಪ್' ಮಾಡಿ, ಬಾಚಿಕೊಂಡಿದ್ದ. ಮದುವೆಗೋಸ್ಕರ ಹೊಲಿಸಿದ್ದ ಗೌರವಯುತ ಪೋಷಾಕು ಅವನದು. ಕೋಸೆಟ್ಟಿಯ ಬಿಳಿರವಕೆಯಲ್ಲಿ ಜರತಾರಿಯ ಹೂಗಳೂ ಇನ್ನಿತರ ಕಸೂತಿಯ

ಅಲಂಕಾರ ಚಿತ್ರಗಳೂ ಇದ್ದುವು. ಅವಳು ಕುತ್ತಿಗೆಗಾಗಿ ಇಳಿದು ಎದೆಯ ಮೇಲೆ ಮೆರೆಯುತ್ತಿದ್ದ ಮುತ್ತಿನ ಸರವನ್ನು ಧರಿಸಿದ್ದಳು. ಅವಳ ದೃಷ್ಟಿಯಲ್ಲಿ ಮೇರಿಯಸ್ ಒಬ್ಬ ಪ್ರಭಾಯುತ ಗಂಧರ್ವನಾಗಿದ್ದ. ಅವನ ದೃಷ್ಟಿಯಲ್ಲಿ ಕೋಸೆಟ್ಟೆ ದೇವಮಂದಿರಗಳಲ್ಲಿ ಆರಾಧಿಸಲ್ಪಡುವ ದೇವಕನ್ನೆಯೇ ಸ್ವರ್ಗದಿಂದ ಆಗ ತಾನೆ ಪ್ರತ್ಯಕ್ಷ ಬಂದು ನಿಂತವಳಾಗಿದ್ದಳು.

ಗಿಲೆನಾರ್ಮಂಡನ ಮನೆಯಲ್ಲಿ ವಿಜೃಂಭಣೆಯ ರಾತ್ರಿ-ಭೋಜನಕ್ಕೆ ಏರ್ಪಾಡು ಮಾಡಿದ್ದರು. ಭೋಜನಖಾನೆಯನ್ನು ರೇಷ್ಮೆಯ ಬಣ್ಣಬಣ್ಣದ ಮೇಲ್ಗಟ್ಟುಗಳಿಂದಲೂ ಹೂವಿನ ಸರಗಳಿಂದಲೂ ಸುಂದರವಾದ ತರತರ ರೂಪದ, ಪ್ರಭಾಯುತ ದೀಪಗಳಿಂದಲೂ ಅಲಂಕರಿಸಿ ಬೆಳಗಿಸಿದ್ದರು. ನೆಲಕ್ಕೆ ರತ್ನಗಂಬಳಿ ಹಾಸಿದ್ದರು. ಹೊಳೆಯುವ ಮೇಜುಗಳ ಮೇಲೆ ಥಳಥಳಿಸುವ ದೀಪಸ್ತಂಭಗಳನ್ನು ವ್ಯವಸ್ಥೆಯಿಂದ ಹೊತ್ತಿಸಿಟ್ಟಿದ್ದರು. ಭೋಜನ ಸಮಾರಂಭ ನಡೆಯುತ್ತಿದ್ದಷ್ಟೂ ವೇಳೆ ಹಿಂಬದಿಯ ಕೊಠಡಿಯಿಂದ ಮೃದುಮೃದುವಾಗಿ, ಸೌಮ್ಯ ಭಾವನೆಗಳನ್ನು ಪ್ರೇರಿಸುವ ವಾದ್ಯಘೋಷ ತೇಲಿಬರುತ್ತಿತ್ತು. ಸಂದಿಗೊಂದಿಗಳ ಕತ್ತಲನ್ನೆಲ್ಲ ಹುಡುಕಿ ಜೊತೆ ಮಾಡಿ ಹೊರಗೆ ನೂಕಿದ್ದಂತೆ—ಭೋಜನಶಾಲೆ ಬೆಳಕಿನಿಂದ ಶೋಭಿಸಿ ಮೆರೆಯುತ್ತಿದ್ದಾಗಲೇ—ಆ ಮನೆಯ ಹೊರಪ್ರದೇಶವೆಲ್ಲ ಸಮಸ್ತ ಕತ್ತಲಿನ ಆಗರದಂತಿದ್ದು, ಇದ್ದೂ ಇರದಂತೆ ಮಾಯವಾಗಿ ಹೋಗಿತ್ತು.

"ಒಬ್ಬೊಬ್ಬರಿಗೆ ವರ್ಷಂಪ್ರತಿ ೨೦ ಸಾವಿರ ಫ್ರ್ಯಾಂಕ್ ಬಡ್ಡಿಯೇ ಬರುವ ಯುವಕ-ಯುವತಿಯರ ಮದುವೆ ಇದು," ಎಂದು ಬಂದವರು ಗುಟ್ಟುಗುಟ್ಟಾಗಿ ಮಾತಾಡಿಕೊಳ್ಳುತ್ತಿದ್ದರು.

ಮೇಜಿನ ಮುಖ್ಯತುದಿಯಲ್ಲಿ ದೇದೀಪ್ಯಮಾನಳಾಗಿ ಕೋಸೆಟ್ಟೆ ಕುಳಿತಿದ್ದಳು. ಅವಳ ಎಡಗಡೆ ಗಿಲೆನಾರ್ಮಂಡ್ ಕುಳಿತಿದ್ದ. ಬಲಗಡೆ ಮಾನ್ಸರ್ ಫಾಶಲೆವೆಂಟರಿಗಾಗಿ ಒಂದು ಕುರ್ಚಿಯನ್ನಿಟ್ಟಿದ್ದರು. ಆ ಆಸನಕ್ಕೆ ಅವರನ್ನು ಕರೆತಂದು ಕೂರಿಸಬೇಕೆಂದು ಗಿಲೆನಾರ್ಮಂಡ್ ಒಬ್ಬ ಜಮೆದಾರನಿಗೆ ಅಪ್ಪಣೆಯಿತ್ತ. ಜಮೆದಾರ ಮನೆ ಎಲ್ಲ ಹುಡುಕಿ, ಕೊನೆಗೆ ಮಾನ್ಸರ್ ಫಾಶಲೆವೆಂಟರ ಕೈಯ ನೋವಿನಿಂದ ಸಭೆಗೆ ಬರಲು ಅವರಿಗೆ ಅನುಕೂಲವಿಲ್ಲವೆಂದೂ ಅವರು ತಮ್ಮ ಕೋಣೆಯಲ್ಲಿ ಮಲಗಿರುವುದಾಗಿಯೂ ತಾವು ಬರದಿರುವ ವಿಷಯದಲ್ಲಿ ಅವರು ಕ್ಷಮಾಪಣೆ ಬಯಸುತ್ತಿದ್ದಾರೆಂದೂ ತಿಳಿಸಿದ. ಗಿಲೆನಾರ್ಮಂಡ್ ಒಮ್ಮೆ ಆಶ್ಚರ್ಯಪಟ್ಟ. ಆದರೆ, ಅವನ ಉತ್ಸಾಹ ಇಂಥ ಹದಿನೆಂಟು ಮದುವೆಗಳಿಗೆ ಸಾಕಾಗುವಷ್ಟು ಇದ್ದುದರಿಂದ, ಈ ಸಂದರ್ಭದಲ್ಲೂ ಸಭಾಸದರನ್ನು ಸಮಾಧಾನಪಡಿಸಿದ.

ಜೀನ್‌ವಾಲ್‌ಜೀನನಿಗೆಂದು ಇಟ್ಟಿದ್ದ ಕುರ್ಚಿಯಲ್ಲಿ ಮೇರಿಯಸ್ ಕುಳಿತುಕೊಳ್ಳುವಂತೆ ಗಿಲೆನಾರ್ಮಂಡ್ ಹೇಳಿದ. ಭೋಜನ ಪ್ರಾರಂಭವಾಯಿತು. ತಂದೆಯ ಸ್ಥಾನದಲ್ಲಿ ಮೇರಿಯಸ್ ಕುಳಿತಿದ್ದುದರಿಂದ ಕೋಸೆಟ್ಟೆಗೆ ತಂದೆ ಇಲ್ಲದಿದ್ದ ದುಃಖವೇ ತೋರಲಿಲ್ಲ. ಪರಮಾನಂದದ ಸನ್ನಿವೇಶಗಳಲ್ಲಿ ಒಮ್ಮೊಮ್ಮೆ ಎದ್ದುಬರುವ ಇಂಥ ಸ್ವಾರ್ಥ ಕ್ಷಮಾರ್ಹವೆಂದು ಓದುಗರು ಒಪ್ಪಬಹುದಷ್ಟೆ. ಮೇರಿಯಸನೂ ಕೋಸೆಟ್ಟೆಯೂ ತುಂಬ ಮಾತಾಡಿದರು. ಏನೇನೆಲ್ಲ ಮಾತಾಡಿದರೆಂದೆನ್ನಲು ಸಾಧ್ಯವಿಲ್ಲ. ಅವರು ಪರಸ್ಪರ ಕಿವಿಯಲ್ಲೇ ಸಂಭಾಷಿಸುತ್ತಿದ್ದರು. ಈ ಸಮಯದಲ್ಲೇ ಮೇಜದ ಅಡಿಯಲ್ಲಿ, ಕೋಸೆಟ್ಟೆಯ ಸುಂದರ ಪಾದಗಳನ್ನು ಮುಚ್ಚಿಕೊಂಡಿದ್ದ ರೇಷ್ಮೆಯ ಪಾದರಕ್ಷೆಗಳು ಮೇರಿಯಸನ ಪಾದಗಳನ್ನು ಪ್ರೀತಿಯಿಂದ ಒತ್ತಿಒತ್ತಿ ಆಡುತ್ತಿದ್ದುವು.

ಸಂದರ್ಭೋಚಿತವಾಗಿ ಗಿಲೆನಾರ್ಮಂಡ್ ಎದ್ದು ನಿಂತು ಚಿಕ್ಕ ಭಾಷಣವನ್ನು ಮಾಡಿದ, "ಮಾನ್ಯ ಮಹಿಳೆಯರೇ, ಮತ್ತು, ಮಹನೀಯರೇ! ಇಂದಿನ ಸಭೆಯಲ್ಲಿ ಬ್ಯಾರನ್ ಮತ್ತು

ಬ್ಯಾರನೆಸ್ ಮೇರಿಯಸ್ ಪೋಂಟ್‌ಮರ್ಸಿಯವರು ದಂಪತಿಗಳಾಗಿ ಅಲಂಕರಿಸಿರುವರಷ್ಟೆ ?"

ಹೀಗೆ ಗಿಲೆನಾರ್ಮಂಡ್ ಹೇಳಿದಾಗ, ಕೋಸೆಟ್ಟೆ ಮೇರಿಯಸನ ಕಿವಿಯಲ್ಲಿ, "ಹಾಗಾದರೆ ನಾನೂ ಬ್ಯಾರನ್ ಆಗಿ ನಿನ್ನದೇ ಹೆಣ್ಣು ಪ್ರತಿಯಾಗಿ ಬಿಟ್ಟಿದ್ದೇನೆ! ಇನ್ನು ನನ್ನ ವ್ಯಕ್ತಿತ್ವವೇ ನೀನಷ್ಟೆ," ಎಂದು ಹರ್ಷದಿಂದ ಉಸುರಿದಳು. ಗಿಲೆನಾರ್ಮಂಡ್ ಮುಂದುವರಿಸಿ ಮಾತಾಡಿದ.

"ಈ ನವದಂಪತಿಗಳಿಗೆ ನಾಲ್ಕು ಆಶೀರ್ವಚನಗಳನ್ನು ಹೇಳಬೇಕೆಂದಿರುವೆನು. ಆಲಂಕಾರಿಕ ವಾಗಿ ಮಾತಾಡಲರಿಯದ ನನ್ನ ಒರಟು ಮಾತುಗಳಿಗೆ ನನ್ನನ್ನು ಕ್ಷಮಿಸಬೇಕು.

"ಮದುವೆಯೆಂಬುದು ಸ್ತ್ರೀಪುರುಷರ ಬಂಧನ. ಆದರೆ ಬಂಧನದ ಸಾಧನ ಮಾತ್ರ ಪ್ರೇಮ ! ಆನಂದದಾಯಕವಾದ ಬಂಧನವೇ ಮದುವೆಗಳು ಆಗಿರಬೇಕೆಂಬುದು ಎಲ್ಲರ ಬಯಕೆ. ನವ ದಂಪತಿಗಳು ಎಡರುತೊಡರಿಲ್ಲದೆ ಆನಂದಾನುಭವದಿಂದ ಬಾಳಿ ಬದುಕಲಿ. ಕೆಲವು ಜನರು ಮುಖ್ಯವಾಗಿ ಧರ್ಮ ಅಥವಾ ತತ್ತ್ವಪರಾಯಣರು ಪ್ರೇಮಕ್ಕೂ ಮಿತಿಯಿರಬೇಕು ಎಂದನ್ನುವು ದನ್ನು ಕೇಳಿದ್ದೇನೆ. ಇದು ಸರಿಯೆಂದು ತೋರುವುದಿಲ್ಲ. ಪ್ರೇಮಕ್ಕೆ ಶೃಂಖಲೆಗಳು ಇರಲೇ ಬಾರದು. ಒಂದು ವೇಳೆ ಅಲಂಕಾರಕ್ಕಾಗಿ ಸುವರ್ಣ, ರತ್ನ, ಮುತ್ತುಗಳ ಸರಗಳಂತೆ ಸರಪಣಿಗಳು ಇದ್ದರೂ ಅವನ್ನು ಪ್ರೇಮದ ವಶಕ್ಕೇ ಸಂಪೂರ್ಣವಾಗಿ ಒಪ್ಪಿಸಿಬಿಡಬೇಕು. ಪ್ರೇಮದ ಇತಿಮಿತಿ ಗಳ ಬಗ್ಗೆ ಸ್ವಲ್ಪ ಗ್ರಹಿಸಿನೋಡಿ: ಪರಿಮಳಗಳ ವೈವಿಧ್ಯ ಎಷ್ಟೇ ಇದ್ದರೂ ಅದು ಹೆಚ್ಚಾಯಿತೆಂದಾ ಗಲೀ ಅರಳಿ ಸುವಾಸನೆ ಬೀರುವ ಗುಲಾಬಿಯ ಮೊಗ್ಗುಗಳು ಎಷ್ಟೇ ಇದ್ದರೂ ಅವು ಹೆಚ್ಚಾದು ವೆಂದಾಗಲೀ ಕೋಗಿಲೆಗಳು ತಮ್ಮ ಆನಂದವನ್ನು ಹಾಡಾಗಿ ಮೊಗೆದು ನಮ್ಮನ್ನು ಎಂದಾದರೂ ಬೇಸರಿಸಿದುವೆಂದಾಗಲೀ ಅರುಣೋದಯದ ಸೊಬಗನ್ನು ನಾವು ನೋಡಿ ಬೇಸರಿಸಿದೆವೆಂದಾ ಗಲೀ ಪ್ರೀತಿಸಿ ಕೆಟ್ಟೆವೆಂದಾಗಲೀ ಪ್ರೇಮದ ಪ್ರಮಾಣ ಹೆಚ್ಚಾಯಿತು ಎಂದಾಗಲೀ ಎಂದಾದರೂ ಗ್ರಹಿಸಿದ್ದಿದೆಯೇ? ಪ್ರೇಮವು ಸದ್ಗುಣಗಳಂತೆಯೇ ಎಂದೂ ಅಧಿಕವಾಗದು. ಪ್ರೇಮಕ್ಕೆ ಮಿತಿ ಬಯಸುವವರು ನಾಶವಾಗಲಿ! ಪ್ರೇಮವೇ ಹೆಂಗುಸಾಗಿ ಹುಟ್ಟಿದ್ದೆಂಬ ಮರ್ಮವನ್ನು ತಾವು ಬಲ್ಲಿರೇನು? ಹೆಂಗುಸರಿದ್ದರೆ ಮಾತ್ರ ಪ್ರಪಂಚವಿರುತ್ತದೆಂಬ ವಿಷಯ ಗೊತ್ತಿದೆಯೇನು? ಪ್ರೇಮಕ್ಕೆ ವಾರ್ಧಕ್ಯವಿಲ್ಲ, ಸ್ಥಳ, ಕಾಲಗಳ ಗಣನೆಯಿಲ್ಲ. ಇಂದೇ ನನ್ನನ್ನು ಮದುವೆಯಾಗಲು ಯಾರಾದರೂ ತಯಾರಿದ್ದರೆ ನಾನು ಮದುವೆಯಾಗಲು ಈಗಲೇ ತಯಾರಾಗಿದ್ದೇನೆ. 'ಪ್ರೇಮ' ವೊಂದನ್ನು ಬಿಟ್ಟು ದೇವರು ಇನ್ನೇನನ್ನೂ, ಎಷ್ಟು ವಿಪುಲವಾಗಿಯಾದರೂ ಸೃಷ್ಟಿಸಿದ್ದಿದ್ದರೆ, ದೇವರಿಗಾದರೂ ಸ್ಪಷ್ಟವಾಗಿ, 'ನಿನ್ನ ಸೃಷ್ಟಿಯೇ ಅಪೂರ್ಣ ಅನಾವಶ್ಯಕ,' ಎಂದು ಖಂಡಿತ ವಾಗಿಯೂ ಹೇಳಲು ತಯಾರಿದ್ದೇನೆ. ಇಂಥ ಪರಮ ಪವಿತ್ರ ಪ್ರೇಮದಿಂದ ಬಂಧಿತರಾದ ಈ ನವದಂಪತಿಗಳು ಪ್ರೀತಿಸಿ, ಆನಂದಿಸಿ, ನಲಿದು ಬಾಳಲಿ!"

ಭೋಜನ ನಡೆದನಂತರ ನೃತ್ಯಗೀತಗಳು ಜರಗಿದುವು. ಈ ಶೃಂಗಾರ, ವಿನೋದ, ಸಂತೋಷ ಗಳ ಎಡೆಯಲ್ಲೇ ಮೇರಿಯಸನೂ ಕೋಸೆಟ್ಟೆಯೂ ಅದೃಶ್ಯರಾದರು.

ಕ್ರಮೇಣ ರಾತ್ರಿ ಮುಂದುವರಿಯಿತು. ಮಧ್ಯರಾತ್ರಿ ಬರುವಾಗ ಮನೆಯವರೆಲ್ಲ ಮಲಗಿದರು. ವಾದ್ಯ, ಗೀತ, ನೃತ್ಯ, ಹರ್ಷೋದ್ಗಾರಗಳಿಂದ ಘೋಷಿಸಿ, ಬೆಳಕಿನಿಂದ ಮೆರೆದ ಮನೆ ದೇವ ಮಂದಿರದಂತೆ ಪಾರಮಾರ್ಥಿಕ ಮೌನ ತಾಳಿತು. ನಾವು ಇನ್ನೇನನ್ನೂ ಹೇಳದೆ ಮೌನವನ್ನೇ ತಾಳುವೆವು. ಏಕೆಂದರೆ, ನವದಂಪತಿಗಳ ಪ್ರಥಮ ಸಮಾಗಮದ ರಾತ್ರಿಯ ಹೆಬ್ಬಾಗಿಲಲ್ಲಿ, ತನ್ನ ಬಾಯಿಯ ಮೇಲೆ ಬೆರಳನ್ನಿಟ್ಟು, ನಸುನಗುತ್ತ, ಸರ್ವರೂ ಗೌರವಯುತ ಮೌನವನ್ನಾಚರಿಸ ಬೇಕೆಂದು ಸೂಚಿಸುತ್ತ ದೇವದೂತನೊಬ್ಬ ಕಾವಲು ನಿಂತಿದ್ದಾನೆ!

೩. ಅಮರನಾದ ಏಸುಕ್ರಿಸ್ತ

ಇತ್ತ ಜೀನ್‌ವಾಲ್‌ಜೀನ್ ಈ ಮನೆಯಿಂದ ತನ್ನ ಮನೆಗೇ ಹೋಗುವುದು ಯುಕ್ತವೆಂದು ಬಗೆದು ಮನೆಬಿಟ್ಟು ಹೊರಟ. ಮಾರ್ಗಕ್ಕೆ ಇಳಿದ ಹಾಗೆ ಅವನ ಕಾಲುಗಳು ಮುಂದೆ ಹೋಗಲು ನಿರಾಕರಿಸತೊಡಗಿದುವು. ಅವನು ಮನೆ ಬಿಟ್ಟಾಗ ಭೋಜನ ಪ್ರಾರಂಭವಾಗಿತ್ತು. ಲೋಟ, ಚಮಚ, ಕತ್ತಿ, ಕತ್ತರಿಗಳ ಸದ್ದು ಕೇಳುತ್ತ, ಕೋಸೆಟ್ಟೆಯ ಸ್ವರವಾದರೂ ಕೇಳಿಸುವುದೇ ಎಂದು ಅಲ್ಲೇ ನಿಂತು ಕಿಟಕಿಗಳ ಕಡೆ ನೋಡುತ್ತ ಆಲಿಸಿದ. ಭೋಜನಖಾನೆಯ ಸೌಮ್ಯ ವಾದ್ಯಘೋಷದ ಮಧ್ಯೆ ಮಧ್ಯೆ ಕೋಸೆಟ್ಟೆಯ ಸ್ವರವೂ ನಗುವೂ ಕೇಳಿಸಿದುವು. ಆ ಸ್ವರ ಕೇಳಿದ ಹಾಗೆಯೇ ಅವನ ಹೃದಯ ತಾನಾಗಿಯೇ ಹಿಂಡಿಕೊಂಡಂತೆ ಅನ್ನಿಸಿತು. ತಾನೇ ಪ್ರೀತಿಯಿಂದ ರಚಿಸಿ, ತನ್ನ ಮುದ್ರೆ ಅಲ್ಲಲ್ಲಿ ಒತ್ತಿಟ್ಟು, ಅತಿ ಅಮೂಲ್ಯದ ಪ್ರೀತಿಯ, ತನ್ನ ಸರ್ವಸ್ವವಾದ, ವಸ್ತುವೆಂದು ಇಟ್ಟಿದ್ದ ಪರಮಸಾತ್ತ್ವಿಕ ಗುಣದ ವಸ್ತುವೊಂದನ್ನು ಎಳೆದು ತೆಗೆಯುವಾಗ ಅದು ಚೂರಿಯಾಗಿ ತನ್ನ ಹೃದಯಮಧ್ಯದಿಂದಲೇ ಸೀಳಿಕೊಂಡು ಹೊರಬಂದಂತೆ, ಕೋಸೆಟ್ಟೆಯ ಸ್ವರ ಭೋಜನ ಶಾಲೆಯಿಂದ ಸೂಸುತ್ತಿತ್ತು. ಆ ನೋವನ್ನು ಸಹಿಸಲಾರದೆ ಅವನು ತನ್ನ ಮನೆಗೆ ಹೊರಟುಹೋದ.

ಮನೆಯಲ್ಲಿ ದೀಪಹಿಡಿದು, ಕೈಪೆಟ್ಟಿಗೆ ತೆರೆದು, ಕೋಸೆಟ್ಟೆಯ ಹಳೆರವಕೆ, ಲಂಗ, ಜುಬ್ಬ, ಶಾಲು ಕಾಲುಚೀಲಗಳನ್ನು ಒಂದು ಕ್ರಮದಿಂದ ಮಂಚದ ಮೇಲಿಟ್ಟ. ಇಟ್ಟ ಕ್ರಮದಿಂದಲೇ ಅವನ್ನೆಲ್ಲ ಧರಿಸಿದ್ದ ಹತ್ತು ವರ್ಷಗಳ ಹಿಂದಿನ ಕೋಸೆಟ್ಟೆ ಆ ಮಂಚದ ಮೇಲೆ ಮಲಗಿದ್ದಂತೆ ತೋರಿತು. ಈ ಕಾಲ್ಪನಿಕ ಕೋಸೆಟ್ಟೆಯನ್ನು ಬಲುಪ್ರೀತಿಯಿಂದ ತುಸು ಹೊತ್ತು ನೋಡಿದ. ನೋಡುತ್ತಿದ್ದ ಹಾಗೆಯೇ ಅವನ ಕಣ್ಣುಗಳಲ್ಲಿ ನೀರು ತುಂಬಿ ಹೊರಸೂಸಿತು. ಮನಸ್ಸು ಒಮ್ಮೆ ಆ ತೆರನಾಗಿ ವರ್ತಿಸತೊಡಗಿದರೆ, ಆಗ ನಮ್ಮ ಭಾವನೆ ಹಿಂದಿನ ಕಾಲ, ಸ್ಥಳ, ಹವಾಮಾನ, ಸನ್ನಿವೇಶಗಳನ್ನೆಲ್ಲ ನಮ್ಮೆದುರಿಗೆ ತಂದಿಡುವುದು. ಇಂದು ಕೋಸೆಟ್ಟೆಯನ್ನು ಕಳೆದುಕೊಂಡಿದ್ದ ದುಃಖಾತಿಶಯ ಅವನನ್ನು ಭಾವನಾಮಯ ರಾಜ್ಯಕ್ಕೆ ಈ ರೀತಿ ತಂದಿರಿಸಿತು.

ಜೀನ್‌ವಾಲ್‌ಜೀನ್, ಈ ಮನೋಮಯ ರಾಜ್ಯದಲ್ಲಿ ಹಿಂದಿನ ಅನೇಕ ಪ್ರಸಂಗಗಳನ್ನು ಮೂರ್ತಿವತ್ತಾಗಿ ಕಾಣತೊಡಗಿದ. ಹತ್ತು ವರ್ಷಗಳ ಹಿಂದಿನ ಡಿಸೆಂಬರ್ ತಿಂಗಳಿನ ಚಳಿ, ಕಗ್ಗತ್ತಲೆಯ ರಾತ್ರಿ, ಕೊಡುತ್ತಿದ್ದ ನೀರು ತುಂಬಿದ ಬಾಲ್ದಿ, ಕತ್ತಲಲ್ಲಿ ಅಂಜಿಕೊಂಡು ನಡೆಯುತ್ತಿದ್ದ ಚಿಕ್ಕ ಬಾಲಕಿ, ಈ ಬಾಲಕಿಯ ಪ್ರಥಮ ದರ್ಶನ ಇವನ್ನೆಲ್ಲ ಪ್ರತ್ಯಕ್ಷ ಕಂಡ. ಅಂದು, ಮರದ ಬೂಟ್ಸಿನಲ್ಲಿ ಅಡಗಿ ಗಾಯಗೊಂಡಿದ್ದು, ತಾನು ಕೊಟ್ಟ ಉಣ್ಣೆ ಕಾಲುಚೀಲಗಳಲ್ಲಿ ತೂರಿ ಬೆಚ್ಚಗಾಗಿದ್ದ ಕೋಸೆಟ್ಟೆಯ ಮುದ್ದುಪಾದಗಳನ್ನೇ ಆ ಮಂಚದ ಮೇಲೆ ನೋಡಿದ. ತನ್ನ ಗೊಂಬೆಗೆ ಚಳಿಯಾಗಬಾರದೆಂದು ಬಟ್ಟೆ ಹೊದಿಸಿಕೊಂಡು ತಾನು ಚಳಿಯಲ್ಲಿ ನಡುಗುತ್ತಿದ್ದ ಕೋಸೆಟ್ಟೆಯ ಮೃದುಹಸ್ತವನ್ನು ತನ್ನ ಹೃದಯಕ್ಕೆ ಎಳೆದಿಟ್ಟು, ಅವಳಿಗೆ ಧೈರ್ಯಹೇಳಿ, ನಡೆಸಿ ತಂದ ಕೋಸೆಟ್ಟೆಯನ್ನು ದರ್ಶಿಸಿದ. ಅಂದಿನ ಅರುಣೋದಯದಲ್ಲಿ ಮೊಂಟ್‌ಫರ್ಮಿಯಲಿಯ 'ಉಷಃಪಕ್ಷಿ'ಯೂ ತಾನೂ ರಸ್ತೆಯಲ್ಲೇ ನಡೆದುಬರುತ್ತಿದ್ದಾಗ ತಮ್ಮನ್ನೇ ಮೌನವಾಗಿ ನಿಂತು ನೋಡುತ್ತಿದ್ದ ಸಾಲುಮರಗಳನ್ನೂ ಈಗ ಕಾಣತೊಡಗಿದ. ಆ ಮರಗಳೇ ಇಂದು ಸಮಾಜ ತನ್ನನ್ನು ದೂರವಿಟ್ಟ ಸಂಗತಿಯನ್ನು ತಿಳಿದಿರುವಂತೆಯೂ ತನ್ನೆದುರಿಗೆ ಬಂದು ತನ್ನನ್ನು ಸಂತೈಸುತ್ತಿರುವಂತೆಯೂ ಭಾವಿಸಿದ.

ಮಂಚದ ಮೇಲಿನ ದುಸ್ತುಗಳ ಒಳಗೆ ಅಂಗಾಂಗಗಳು ತುಂಬಿಕೊಂಡು, ಕೋಸೆಟ್ಟೆ ನೋಡಿ

ನಗುತ್ತಿದ್ದರೆ, ಈಗ್ಗೆ ಹತ್ತು ವರ್ಷಗಳ ಹಿಂದಿನ ನಿಷ್ಕಪಟ, ನಿಷ್ಕಳಂಕ, ಸರಳ ಬಾಲಿಕೆಯನ್ನೇ ತಾನು ಹೇಗೆ ಕಾಣಬಹುದಿತ್ತೋ ಹಾಗೆಯೇ, ಈಗಲೂ ಕಾಣಬಹುದೆಂದು ಊಹಿಸಿ, ನೆನೆನೆನೆದು, ಆನಂದಿಸಿ, ಮರುಕ್ಷಣ ದುಃಖಿಸಿ, ಬೇಯುತ್ತ, ದುಃಖದ ಭಾರದಿಂದ ಮಂಚದ ಮೇಲೆ ಮುಖವನ್ನು ಕೆಳಗೆ ಹಾಕಿ, ಎರಡುಕೈಗಳನ್ನು ಶಿಲುಬೆಯ ಕೈಗಳಂತೆ ಚಾಚಿಕೊಂಡು, ಕೋಸೆಟ್ಟಿಯ ದುಸ್ತಿನ ಮೇಲೆ ಮುಖವನ್ನಿಟ್ಟುಕೊಂಡು, ಅಳುತ್ತ ಮಲಗಿದ.

ವಿಧಿ ಅವನನ್ನು ಅಷ್ಟಕ್ಕೇ ಬಿಡಲಿಲ್ಲ! ಅವನು ಮನಸ್ಸನ್ನು ಎಷ್ಟೆಷ್ಟೇ ತಡೆ ಹಿಡಿದರೂ ಅದು ಕೋಸೆಟ್ಟಿಯನ್ನೇ ಹಿಂಬಾಲಿಸುತ್ತ, ಅವನ ಹೃದಯವನ್ನು ಹಿಂಡುತ್ತ ಅವನನ್ನು ಒಂದು ವಿಧದ ಉಭಯಸಂಕಟಕ್ಕೆ ತಂದಿಳಿಸಿತು.

ತಾನು ತನ್ನ ಜೀವನಚರಿತ್ರೆಯನ್ನು ಮೇರಿಯಸ್ ಕೋಸೆಟ್ಟಿಯರಿಗೆ ತಿಳಿಸಿ, ಅಂಥ ತಿಳಿವಳಿಕೆಯಿಂದ ಅವರಲ್ಲುಂಟಾಗಬಹುದಾದ ಪ್ರತಿಕ್ರಿಯೆಗಳಿಗೆ ಸಿದ್ಧನಾಗಿದ್ದು, ಅವರ ಸಂಸಾರದಲ್ಲಿ ಬೆರೆತು ಇರಬೇಕೇ, ಅಥವಾ ತನ್ನ ಚರಿತ್ರೆಯನ್ನು ಶಾಶ್ವತವಾಗಿ ಅಡಗಿಸಿಟ್ಟು, ಅವರ ಸರಳ ಹೃದಯವನ್ನು ವಂಚಿಸಿ, ಕೋಸೆಟ್ಟಿಯ ಗೌರವಾನ್ವಿತ ತಂದೆಯಾಗಿ ಅವರ ಜೊತೆಯಲ್ಲಿರಬೇಕೇ ಎಂದು ಚಿಂತಿಸತೊಡಗಿದ. ಮೊದಲಿನ ಮಾರ್ಗ ಅನುಸರಿಸಿದರೆ ತಾನು ಕೋಸೆಟ್ಟಿಯಿಂದ ದೂರ ನಿಲ್ಲಬೇಕಾಗಬಹುದೆಂದೂ ಭೀತನಾದ. ಆದರೆ ಎರಡನೆಯ ಮಾರ್ಗ ಅನುಸರಿಸಿದ್ದಾದರೆ, ತಾನು ಗ್ಯಾಲಿ ಕೈದಿಯಾಗಿದ್ದು, ಅವನ ಪವಿತ್ರ, ಪರಿಶುದ್ಧ ಕುಟುಂಬಕ್ಕೆ ವಂಚನೆಯಿಂದ ಕಳಂಕವನ್ನು ತಂದೊಡ್ಡಿದ ಹಾಗಾಗುವುದೆಂದೂ ಭಯ ಪಡುತ್ತಿದ್ದ.

ಸಮುದ್ರಕ್ಕೆ ಬಿದ್ದು ಬದುಕಿ, ರಕ್ತತರ್ಪಣ ಕೊಟ್ಟೂ ಸಾಯದೆ, ಕತ್ತಿ ಬರ್ಚಿಗಳ ನಡುವೆ ನುಗ್ಗಿ ಗಾಸಿಗೊಳ್ಳದೆ, ಗುಂಡಿನಿಂದ ಪಾರಾಗಿ, ನೆಲದಡಿಯ ಸುರಂಗದಲ್ಲಿ ಹೂತುಹೋಗದೇ ಬಂದು ಸದಾ ಸತ್ಯವನ್ನೇ ನುಡಿದು, ನುಡಿದಂತೆ ಆಚರಿಸಿ, ಬಿಷಪರ ಆಶೀರ್ವಚನಗಳನ್ನು ಪರಿಪೂರ್ಣ ಪಾಲಿಸಿ, ಆತ್ಮಶುದ್ಧೀಕರಣವನ್ನು ಮಾಡಿಕೊಂಡು, ಜೀವನದ ಗುರಿಯನ್ನೂ ಮಾರ್ಗವನ್ನೂ ಧರ್ಮಪರವಾಗಿ ಮುಂದಿಟ್ಟುಕೊಂಡು ನಡೆದು, ಇಷ್ಟೆಲ್ಲ ಕಷ್ಟ ನ್ಯಾಯ, ಧರ್ಮಗಳನ್ನು ತಿಳಿದೂ ಅನುಭವಿಸಿಯೂ ತಾನು ಇಂದು ಪುನಃ ಇಂಥ ದುಃಖಶಿಖಿಯಲ್ಲಿ ದಹಿಸಲ್ಪಡಬೇಕೇ ಎಂದು ವ್ಯಥೆಪಟ್ಟ. ಎಂಥೆಂಥ ಪ್ರಸಂಗಗಳಲ್ಲಿ ಜಯಶಾಲಿಯಾಗಿ ಬಂದಿದ್ದ ತನ್ನ ಅಂತಃಕರಣ ಇಂದು ವಿಧಿಯ ಅಡಿಯಾಳಾಗಿ ಪುನರಪಿ ನೊಂದು ಬೆಂಡಾಗಿ ಉಳಿಯಬೇಕೇ ಎಂದು ಪುನಃ ಪುನಃ ಗ್ರಹಿಸಿ ಕಳವಳಿಸಿದ.

ಆ ರಾತ್ರಿಯೆಲ್ಲ ಈ ದುಃಖದಿಂದಲೇ ಕಳೆಯಿತು. ತನ್ನ ಕೈಗಳನ್ನು ಚಾಚಿ ಮಲಗಿದ್ದ ಜೀನ್ ವಾಲ್‌ಜೀನ್ ಶಿಲುಬೆಯಲ್ಲಿಡಲಾಗಿದ್ದ ಹೆಣದಂತೆಯೇ ತೋರುತ್ತಿದ್ದ. ಕೊನೆಗೆ, ಕೋಸೆಟ್ಟಿಯ ದುಸ್ತಿಗೆ ಮುತ್ತಿಟ್ಟು ಎದ್ದುನಿಂತಾಗ ಮಾತ್ರ ಅವನು ಹೆಣವಲ್ಲ, ಮನುಷ್ಯ ಎಂದು ತೋರಿದ.

ಆರನೆಯ ಸಂಪುಟ

೧. ಅಂತರಂಗದ ಕದವ ತೆರೆಯಬೇಕು

ಮದುವೆಯ ಮರುದಿನ ಮನೆಯೇ ವಿಶ್ರಾಂತಿ ಹೊಂದುತ್ತಿರುವಂತೆ ನಿಶ್ಶಬ್ದವಾಗಿರುವುದು ಎಲ್ಲ ಮದುವೆ ಮನೆಗಳ ಸ್ವಭಾವ. ಎಂದೇ ಆ ಮನೆಗೆ ಎಂದಿನಂತೆ ಹೋಗುವ ಕ್ರಮವನ್ನು ಮರುದಿನ ನಿಲ್ಲಿಸುವುದು ವಾಡಿಕೆ. ಮನೆಯವರಿಗೆ ವಿಶ್ರಾಂತಿ ಬೇಕೆಂಬುದೇ ಇದರ ಆಶಯ.

ಆದರೆ, ಮೇರಿಯಸನ ಮದುವೆಯ ಮರುದಿನ, ಸಾಧಾರಣ ಮಧ್ಯಾಹ್ನ ಸಮಯದಲ್ಲೇ ಜೀನ್‌ವಾಲ್‌ಜೀನ್ ಗಿಲೆನಾರ್ಮಂಡನ ಮನೆಗೆ ಬಂದ—ಫೆಬ್ರುವರಿ ೧೭ರಂದು.

ಮನೆಯ ಆಳು ಬಾಸ್ಕ ಅವನನ್ನು ಒಳಗೆ ಕರೆದುಕೊಂಡು ಹೋಗಿ ಒಂದುಕಡೆ ಕುಳ್ಳಿರಿಸಿದ. ಊಟ ನಡೆದಿದ್ದ ಕೊಠಡಿಯಲ್ಲಿ ಯಾವ ಒಂದು ಕುರ್ಚಿಯಾಗಲೀ ಮೇಜಾಗಲೀ, ಇರಬೇಕಾಗಿದ್ದಂತೆ ಇರಲಿಲ್ಲ. ಎಲ್ಲವೂ ಅಸ್ತವ್ಯಸ್ತವಾಗಿದ್ದುವು. ಹೂವಿನ ಮಾಲೆಗಳೆಲ್ಲ ಬಾಡಿ ಒಂದೊಂದೇ ಉದುರತೊಡಗಿದ್ದುವು. ದೀಪಗಳು ತಾವಾಗಿಯೇ ಆರಿಕೊಂಡು ಮಸಕಾಗಿದ್ದುವು. ಆ ಮನೆಯ ಎಲ್ಲ ಸ್ಥಳಗಳೂ ಆನಂದೋತ್ಸವದ ಯುದ್ಧರಂಗದಂತೆ ತೋರುತ್ತಿದ್ದುವು. ಆಳುಗಳು ಒಂದು ಕಡೆಯಿಂದ ಪ್ರಾರಂಭಿಸಿ ಮನೆಯನ್ನು ಶುಚಿಪಡಿಸುತ್ತಿದ್ದರು. ಜೀನ್‌ವಾಲ್‌ಜೀನ್ ಇವನ್ನೆಲ್ಲ ನೋಡುತ್ತಿದ್ದರೂ ಯಾವುದೂ ಅವನ ಮನಸ್ಸಿಗೆ ಹೋಗುತ್ತಿರಲಿಲ್ಲ. ಅವನು ತನ್ನ ಯಾವುದೋ ಒಂದು ಗೂಢ ಆಲೋಚನೆಯಲ್ಲಿ ಮಗ್ನನಾಗಿದ್ದ. ಆಳುಗಳ ಗಲಭೆಯಿಂದ ಎಚ್ಚೆತ್ತವನಾಗಿ ಅವನು ಬಾಸ್ಕನ ಕರೆದು, "ಯಜಮಾನರಿದ್ದಾರೆಯೇ?" ಎಂದು ಕೇಳಿದ.

"ಇಬ್ಬರಲ್ಲಿ ಯಾರು?"

"ಮಾನ್ಸಿರ್ ಮೇರಿಯಸ್."

"ಬ್ಯಾರನ್ ಮೇರಿಯಸರೇನು?" ಎಂದು, ತನ್ನ ಯಜಮಾನನ ಗೌರವವನ್ನು ಕಾಪಾಡುವ ಮುಖಭಂಗಿಯಿಂದ ಬಾಸ್ಕ ಕೇಳಿದ. ಯಜಮಾನರ ಸ್ಥಾನಮಾನಗಳ ಪ್ರಭೆ ಆಳುಗಳಲ್ಲಿ ಪ್ರತಿಬಿಂಬಿತವಾಗುವುದು ಇಂಥ ಸಂದರ್ಭಗಳಲ್ಲೇ. ಜೀನ್‌ವಾಲ್‌ಜೀನ್, "ಹೌದು, ಹೌದು. ಅವರನ್ನೇ ವಿಚಾರಿಸಿದ್ದು. 'ಯಾರೋ ಒಬ್ಬ ನೋಡಬಯಸುತ್ತಾನೆ,' ಎಂದು ದಯಮಾಡಿ ತಿಳಿಸು," ಎಂದು ವಿನಯದಿಂದ ಹೇಳಿದ.

ಬಾಸ್ಕ ಒಳಗೆ ಹೋದ ತುಸು ಹೊತ್ತಿನಲ್ಲೇ ಮೇರಿಯಸ್ ಬಂದ. ಜೀನ್‌ವಾಲ್‌ಜೀನನನ್ನು ಕಂಡು ಸಂತೋಷಪಟ್ಟ. ಇವನನ್ನು ಕಂಡಾಗಲೆಲ್ಲ ಹೆದರುತ್ತಿದ್ದ ಮೇರಿಯಸ್ ಮದುವೆಯ ಕಾರಣವಾಗಿ ತುಂಬ ಪರಿಚಯ ಬೆಳೆದಿದ್ದುದರಿಂದ ಇಂದು ಹೃತ್ಪೂರ್ವಕವಾಗಿ, ಆನಂದದಿಂದ, ಮಾತಾಡುತ್ತಿದ್ದ. ಅವನು ಬಲು ನಮ್ರವಾಗಿ, "ಪ್ರಿಯ ಮಾವನವರೇ! ನಿನ್ನೆ ನಮಗಾದ ದುಃಖ ಅಷ್ಟಿಷ್ಟಲ್ಲ. ಕೋಸೆಟ್ಟಿಗೆ ಎಷ್ಟು ದುಃಖವಾಗಿರಬಹುದೆಂಬುದನ್ನು ನೀವೇ ಊಹಿಸಿಕೊಳ್ಳಬಹುದು. ನೀವು ಸಭೆಯಲ್ಲಿ ಇಲ್ಲದಿದ್ದುದಕ್ಕಾಗಿ ಸಭೆಯವರೆಲ್ಲ ಅಸಮಾಧಾನಪಟ್ಟುಕೊಂಡರು. ಕೋಸೆಟ್ಟಿಯಂತೂ ನಿಮ್ಮೊಡನೆ ಯುದ್ಧವನ್ನೇ ಹೂಡುವಳು," ಎಂದ.

ಮೇರಿಯಸ್ ಇಷ್ಟು ಸಲಿಗೆಯಿಂದ ಮಾತಾಡಿದುದು ಇದೇ ಮೊದಲ ಬಾರಿ. "ಪ್ರಿಯ ಮಾವನವರೇ" ಎಂಬ ಸಂಬೋಧನೆಯಿಂದ ಜೀನ್‌ವಾಲ್‌ಜೀನ್ ಸಂತೋಷಪಟ್ಟ. ಇದನ್ನು ಅವನ ಮುಖ ನೋಡಿಯೇ ತಿಳಿದು ಮೇರಿಯಸ್, "ನಮ್ಮ ಮನೆಯಲ್ಲಿ ನಿಮಗಾಗಿ ಒಂದು ಕೋಣೆ ಸಜ್ಜುಗೊಳಿಸಿಟ್ಟಿದ್ದೇವೆಂಬುದನ್ನು ನೀವು ಮರೆತಿರುವಂತೆ ತೋರುತ್ತದೆ. ನಿಮ್ಮ ರ್‍ಯೂ ಆರ್ಮಿನ ಮನೆಗಿಂತ ಇದು ಎಷ್ಟೆಷ್ಟೋ ಅನುಕೂಲವಾಗಿದೆ. ನೀವು ದಯಮಾಡಿ ಬಂದು ನಮ್ಮ ಮನೆಯಲ್ಲೇ ವಾಸಿಸಬೇಕು. ನಿಮ್ಮದಾಗಿರುವ ಕೋಣೆಯನ್ನೊಮ್ಮೆ ನೀವು ಬಂದು ನೋಡಬೇಕು. ಅದರ ಹೊರಬದಿಯಲ್ಲಿ ಹೂದೋಟವಿದೆ, ಮರಗಳಿವೆ, ಮರಗಳಲ್ಲಿ ಗೂಡುಸಮೇತವಾಗಿ ಹಕ್ಕಿಗಳಿವೆ. ಇವೆಲ್ಲ ನಿಮಗೆ ಪ್ರಿಯವಾದವೆಂದು ನನಗೆ ಗೊತ್ತಿದೆ. ಮನೆಯ ಒಳಗೂ ನಿಮ್ಮ ಸಂತೋಷಕ್ಕಾಗಿ, ನಿಮ್ಮ ಮಗಳು ಕೋಸೆಟ್ಟೆಯ ಕೋಣೆ ನಿಮ್ಮಕೋಣೆಯ ಪಕ್ಕದಲ್ಲಿದೆ. ನಿಮಗೆ ಪ್ರಿಯರಾದವರೂ ಪ್ರಿಯವಾದವೂ ಏಕಾಂತತೆಯೂ ಇಲ್ಲಿವೆ. ನಿಮ್ಮ ಮಗಳೇ ಇಲ್ಲಿಯ

ಅಧಿಕಾರಿಣಿ. ಅವಳ ಅನುಜ್ಞೆಯ ಪ್ರಕಾರ ಅವಳಿಗೂ ನಿಮಗೂ ಒಂದೊಂದರಂತೆ ನಿಮ್ಮ ಕೋಣೆಯಲ್ಲಿ ಆರಾಮ ಕುರ್ಚಿಗಳನ್ನು ಇಡಲಾಗಿದೆ. ನನ್ನ ಅಜ್ಜ ಮತ್ತು ನೀವು, ಕೋಸೆಟ್ಟೆ ಮತ್ತು ನಾನು ಒಂದೇ ಮೇಜಿನ ಬಳಿ ಕುಳಿತು ಉಂಡುತಿಂದು, ಹರಟೆಹೊಡೆದು, ಇಸ್ಪೀಟು ಆಡಿ, ಸುಖಪಡುವ ಯೋಗ ಈಗ ನಮ್ಮೆಲ್ಲರದ್ದಾಗಿದೆ. ಇಂಥ ಸುಯೋಗ ಯಾರಿಗೂ ದೊರೆಯದು. ನಿಮ್ಮ ಮಗಳಿಗೆ ಸಂಬಂಧಿಕರೂ ಪ್ರೇಮದ ಹಿರಿಯರೂ ನೀವು ಮಾತ್ರ ಇರುವುದಷ್ಟೆ. ನಾನು ಕೋರ್ಟ್ ಕೆಲಸದಲ್ಲಿದ್ದಾಗ ನೀವು ಹಿಂದೆ ಲಕ್ಸಂಬರ್ಗಿನಲ್ಲಿ ತಿರುಗಾಡುತ್ತಿದ್ದಂತೆ ಈಗಲೂ ಕೋಸೆಟ್ಟೆಯ ಜೊತೆ ತಿರುಗಾಡಿ ಬರಬೇಕು. ಈ ಎಲ್ಲ ಸುಖಸಂತೋಷಗಳು ನಿಮ್ಮ ಹಕ್ಕಿನವೂ ಆಗಿವೆಯಷ್ಟೆ?'' ಎಂದು ಮುಂದುವರಿಸಿ ಮಾತಾಡಿದ.

ಆಗ ಜೀನ್‌ವಾಲ್‌ಜೀನ್ ಬಲು ಸಣ್ಣ ಸ್ವರದಿಂದ ಸ್ವಲ್ಪ ದುಃಖಮಿಶ್ರಿತವಾಗಿ, ''ಸರ್, ನಿಮ್ಮ ಮಾತುಗಳನ್ನೆಲ್ಲ ಕೇಳಿದೆ. ಆದರೆ, ನನ್ನ ಮಾತುಗಳನ್ನು ನೀವು ಕೇಳಿದನಂತರ ನೀವು ಮಾತಾಡುವುದು ಒಳ್ಳೆಯದಿತ್ತು. ನೋಡಿ, ನಿಮಗೆ ಕೆಲವು ಗಹನ, ಗೂಢ, ಗಂಭೀರ ವಿಷಯಗಳನ್ನು ತಿಳಿಸಬೇಕಾಗಿದೆ. ಮೊದಲನೆಯದಾಗಿ ನಾನೊಬ್ಬ ಕ್ರಿಮಿನಲ್ ಅಪರಾಧಿ ಬಂದಿವಾನನಾಗಿದ್ದೆ. ನನ್ನ ಕೈಗೆ ಗಾಯವಾಗಿ ಬ್ಯಾಂಡೇಜ್ ಸುತ್ತಿದ್ದೆನೆಂದು ನೀವು ಗ್ರಹಿಸಿಕೊಂಡಿದ್ದಿರಷ್ಟೆ ಅದು ಹಾಗಲ್ಲ. ಕೈದಿಯಾಗಿದ್ದಾತ ನಿಮ್ಮ ಮದುವೆಯ ಪವಿತ್ರ ದಾಖಲೆಗಳಿಗೆ ಅಪವಿತ್ರಹಸ್ತದಿಂದ ರುಜುಹಾಕುವುದನ್ನು ತಪ್ಪಿಸುವುದಕ್ಕಾಗಿ ನಾನು ಮಾಡಿದ ಉಪಾಯವದು. ನಿಮ್ಮ ಅಶುಭಮೂರ್ತಿಯಾಗಿ ನಾನು ಭಾಗವಹಿಸಬಾರದೆಂದೇ ನಾನು ನಿನ್ನೆ ನಿಮ್ಮಿಂದ ದೂರ ಸರಿದಿರುವೆನು. ಈ ಪ್ರಸಂಗಗಳನ್ನೆಲ್ಲ ನೀವು ಗ್ರಹಿಸಬೇಕು,'' ಎಂದ.

ಮೇರಿಯಸ್ ಸ್ತಂಭಿತನಾದ. ತಾನು ಕಿವಿಯಾರೆ ಕೇಳಿರುವ ಮಾತುಗಳನ್ನು ಅರ್ಥಮಾಡುವುದೇ ಅಪಾಯವೆಂದು ಗ್ರಹಿಸಿ, ಅವನ್ನು ಮರೆಯಲು ಪ್ರಯತ್ನಪಡುತ್ತ ಗಾಬರಿಯಿಂದ, ''ಎಂಥೆಂಥ ಪ್ರಸ್ತಾಪಗಳನ್ನೆಲ್ಲ ಎತ್ತುತ್ತಿದ್ದೀರಿ. ನಿಮಗೆ ಏನಾಗಿದೆ?'' ಎಂದು ಜೀನ್‌ವಾಲ್‌ಜೀನನನ್ನು ಕೇಳಿದ. ಇವನೆಂದ, ''ಆಗಿರುವುದಿಷ್ಟೇ! ನಾನು ಗ್ಯಾಲಿಗುಲಾಮನಾಗಿ ಹತ್ತೊಂಬತ್ತು ವರ್ಷ ಕಾರಾಗೃಹವಾಸಮಾಡಿದ್ದೇನೆ. ಅನಂತರ ಕಾನೂನು ಪ್ರಕಾರ ಕ್ರಿಮಿನಲ್ ಅಪರಾಧಕ್ಕಾಗಿ ಶಿಕ್ಷೆಗೆ ಗುರಿಯಾಗಿದ್ದೇನೆ. ಆದರೆ, ನಾನು ಪೊಲೀಸರಿಗೆ ಸಿಕ್ಕದೆ, ಅವರಿಂದ ಸದಾ ಹುಡುಕಲ್ಪಡುತ್ತಿದ್ದೇನೆ!''

''ನಿಮ್ಮ ಮಾತು ಕೇಳಿ ನನಗೆ ಹುಚ್ಚು ಹಿಡಿದಂತಾಗಿದೆ. ಇನ್ನು ನೀವು ಏನನ್ನೆಲ್ಲ ಎಂಥೆಂಥ ದುಃಖಕರವಾದ ವರ್ತಮಾನಗಳನ್ನು ಹೇಳುವುದಕ್ಕಿದೆಯೋ ಎಂದು ನಾನು ಗಾಬರಿಯಾಗಿದ್ದೇನೆ. ಅದರಲ್ಲೂ ನೀವೇ ಕೋಸೆಟ್ಟೆಯ ತಂದೆಯೆಂದು ಹೇಳುವುದೂ ಬಾಕಿಯಿದೆಯೆಂದು ಊಹಿಸುತ್ತೇನೆ.''

ಕೋಸೆಟ್ಟೆಯ ಕುರಿತಾದ ಸಂಶಯದ, ಕಳಂಕಪ್ರಾಯವಾದ ಮಾತು ಜೀನ್‌ವಾಲ್‌ಜೀನನನ್ನು ನೋಯಿಸಿದುವು. ಆಗ ಅವನು ಬಲು ಗಂಭೀರವಾಗಿ, ಆದರೂ ಚಿಕ್ಕ ಸ್ವರದಿಂದಲೇ ಹೇಳಿದ, ''ನಾನು ಕೋಸೆಟ್ಟೆಯ ತಂದೆಯೆಂಬುದು ಶುದ್ಧ ತಪ್ಪು ಅಭಿಪ್ರಾಯ. ಅವಳ ತಂದೆ ನಾನಲ್ಲವೆಂಬುದು ನಿಸ್ಸಂಶಯವಾದ ವಿಷಯ. ನನ್ನ ಹೆಸರು 'ಫಾಶೆಲೆವೆಂಟ್' ಎಂದಲ್ಲ. ನಾನು ಫೇವರೋಲ್ಸಿನಲ್ಲಿಯ ಒಬ್ಬ ದಿನಕೂಲಿ. ನನ್ನ ಹೆಸರು ಜೀನ್‌ವಾಲ್‌ಜೀನ್. ನನಗೂ ಕೋಸೆಟ್ಟೆಗೂ ಯಾವ ರಕ್ತಸಂಬಂಧವೂ ಇಲ್ಲ. ಅನಾಥ ಬಾಲಕಿಯನ್ನು ಮಗಳಂತೆ ಸಾಕಿರುವ ಸಂಬಂಧ ನನಗೂ ಅವಳಿಗೂ ಇರುವಂಥಾದ್ದು. ನನ್ನಂಥವರ ಮಾತನ್ನು ಜನ ನಂಬುವುದು ಕಷ್ಟ. ಆದರೆ, ಯಾರ ಒತ್ತಾಯವೂ ಇಲ್ಲದೆ, ಈ ವಿಷಯವನ್ನೆಲ್ಲ ನಾನಾಗಿಯೇ ನಿಮಗೆ ತಿಳಿಸುವಾಗ ನಾನು

ಮರೆಮಾಚುವ ಅಥವಾ ವಂಚಿಸುವ ಅಗತ್ಯವಿಲ್ಲವೆಂಬುದನ್ನು ಗ್ರಹಿಸಿ."

"ನಿಮ್ಮ ಮಾತನ್ನು ಸಂಪೂರ್ಣ ನಂಬುತ್ತೇನೆ."

ಜೀನ್‌ವಾಲ್‌ಜೀನ್ ಮುಂದುವರಿಸಿ ಮಾತಾಡತೊಡಗಿದ, "ಈಗ್ಗೆ ಸಾಧಾರಣ ಹತ್ತು ವರ್ಷಗಳ ಹಿಂದೆ ತಂದೆತಾಯಿಗಳಿಲ್ಲದಿದ್ದ ಚಿಕ್ಕ ಬಾಲಕಿ ಕೋಸೆಟ್ಟೆಯನ್ನು ನಾನು ಕರೆತಂದು ಸಾಕಿ ಸಲಹಿದೆ. ಆಗ ನಾವು ಒಬ್ಬರಿಗೆ ಮತ್ತೊಬ್ಬರು ಅಗತ್ಯಬಿದ್ದೆವು. ಎಳೆ ಮಗುವಿನ ಬೆಳವಣಿಗೆ, ವಿದ್ಯಾಭ್ಯಾಸ ಮೊದಲಾದವಕ್ಕೆ ಹಿರಿಯನೊಬ್ಬನ ಆಶ್ರಯ ಅಗತ್ಯಬಿದ್ದಂತೆಯೇ, ನನ್ನ ಮನಸ್ಸಿನ ಶಾಂತಿಗೆ, ಬದುಕಿನಲ್ಲಿ ಉತ್ಸಾಹ ತೋರಲು ನನಗೆ ಎಳೆಮಗುವಿನ ಸಹವಾಸ ಅಗತ್ಯವಾಯಿತು. ಬಾಲ್ಯದ ಬೆಳಕು ವೃದ್ಧಾಪ್ಯದ ಅಂಧಕಾರವನ್ನು ದೂರ ಮಾಡುತ್ತಿತ್ತು. ಈ ರೀತಿ ನಾವು ಒಬ್ಬರನ್ನೊಬ್ಬರು ಪ್ರೀತಿಸಿ, ಆದರಿಸಿ, ಆನಂದಿಸಿ ಈ ವರೆಗೆ ಕಾಲಕಳೆದೆವು. ಈಗ ಕೋಸೆಟ್ಟೆಯ ಜೀವನಕ್ಕೆ ಆಧಾರವಾಗಿ ಪ್ರೇಮಕ್ಕೆ ಪಾತ್ರರಾಗಿ ನೀವು ಇರುವಿರಿ. ಇನ್ನು ನನ್ನ ಅಗತ್ಯ ಅವಳಿಗಿಲ್ಲ. 'ಅವಳು' ಎಂದನ್ನುವುದೇ ಈಗ ಅಕ್ರಮ. 'ಬ್ಯಾರನೆಸ್ ಕೋಸೆಟ್ಟೆಯವರು' ಎಂದು ನಾನನ್ನಬೇಕಿತ್ತು. ಈಗ ತಪ್ಪಾಡಿದ್ದಕ್ಕೆ ನನ್ನನ್ನು ದಯಮಾಡಿ ಕ್ಷಮಿಸಿ. ಇನ್ನು ನಿಮ್ಮ ಮತ್ತೊಂದು ಸಂಶಯವನ್ನು ನಾನು ಊಹಿಸಬಲ್ಲೆ. ಅದು ನಿಮಗೆ ನಾನು ಕೊಟ್ಟಿರುವ ಹಣ ಯಾರದು : ಅದು ನ್ಯಾಯವಾದ ಸಂಪಾದನೆಯ ಹಣವೇ ಎಂಬುದು. ಆ ಸಂಶಯವನ್ನು ನಾನು ಸಂಪೂರ್ಣ ನಿವಾರಿಸಬಲ್ಲೆ. ಆ ಹಣವೆಲ್ಲ ಪರಿಪೂರ್ಣ ನ್ಯಾಯವಾದ ಸಂಪಾದನೆಯದು. ಅದರ ಪ್ರತಿಯೊಂದು ಫ್ರ್ಯಾಂಕೂ ಸಂಪೂರ್ಣ ನ್ಯಾಯಾರ್ಜಿತವಾದುದೆಂದೂ ನಾನು ಪ್ರಮಾಣ ಪುರಸ್ಸರವಾಗಿ ದೃಢಪಡಿಸುತ್ತೇನೆ. ಆ ಹಣ ಜೀನ್‌ವಾಲ್‌ಜೀನನದಲ್ಲವೆಂದ ಮೇಲೆ ಇದು ಇನ್ನೊಬ್ಬರದ್ದಾದ್ದರಿಂದ ಆ ಇನ್ನೊಬ್ಬರ ಹೆಸರನ್ನು ಹೇಳುವ ಹಕ್ಕೂ ನನಗಿಲ್ಲ. ಈ ಸಂಗತಿ ಕೇವಲ ನನ್ನದು, ಎಷ್ಟಕ್ಕೂ ಕೋಸೆಟ್ಟೆಗೆ ಸಂಬಂಧಿಸಿದ್ದಲ್ಲ. ಹೀಗೆ ನಿಮಗೆ ನನ್ನ ಸಂಪೂರ್ಣ ಪರಿಚಯವಾದನಂತರ ಸಾವಕಾಶವಾಗಿ ಗ್ರಹಿಸಿ, ನನ್ನನ್ನು ನಿಮ್ಮ ಸಂಪರ್ಕದಲ್ಲಿ ಇಟ್ಟುಕೊಳ್ಳಲೂಬಹುದು, ಅಥವಾ ತ್ಯಜಿಸಲೂಬಹುದು."

ಮೇರಿಯಸ್ ದುಃಖಾಕ್ರಾಂತನಾದ. ಗಾಬರಿಗೊಂಡ, ಉದ್ವಿಗ್ನನಾದ. ಮನಸ್ಸಿನ ತಿಕ್ಕಾಟ ಜೋರಾಗಿ, ಸ್ವಲ್ಪ ನಿಷ್ಠುರ ಮುಖಭಾವದಿಂದ ಹೇಳಿದ, "ಈ ವಿಷಯವನ್ನೆಲ್ಲ ನನ್ನಲ್ಲಿ ಹೇಳಿದ ಉದ್ದೇಶವೇನು? ಹೇಳಿ ಯಾರಿಗೆ ಯಾವ ಪ್ರಯೋಜನವಿದೆ? ಹೇಳಬೇಕೆಂದು ಒತ್ತಾಯಿಸಿದವರು ಯಾರು?"

ಜೀನ್‌ವಾಲ್‌ಜೀನ್ ಕೋಪಗೊಳ್ಳಲಿಲ್ಲ. ಸಮಾಧಾನವಾಗಿ ನುಡಿದ, "ಪ್ರಾಮಾಣಿಕನಾಗಿ, ಆತ್ಮ ವಂಚನೆಯಿಲ್ಲದೆ ಕರ್ತವ್ಯನಿಷ್ಠನಾಗಿರುವುದೇ ಇದನ್ನೆಲ್ಲ ಹೇಳಿದುದರ ನನ್ನ ಉದ್ದೇಶ. ನನ್ನ ಮನಸ್ಸಿನ ಶಾಂತಿಯೇ ನನಗೆ ಇರುವ ಪ್ರಯೋಜನ. ಮರೆಮಾಚದೆ ಸತ್ಯವನ್ನು ನಿಮಗೆ ತಿಳಿಸಲೇ ಬೇಕೆಂದು ನನ್ನ ಸ್ವಭಾವವೇ ನನ್ನನ್ನು ಒತ್ತಾಯಿಸಿದೆ. ಇದೇ ವಿಷಯವನ್ನು ರಾತ್ರಿಯೆಲ್ಲ ಚಿಂತಿಸಿದ್ದೇನೆ. ಯಾವುದನ್ನೂ ಹೇಳದೆ ಊರನ್ನೇ ಬಿಟ್ಟು ಓಡಿಹೋಗೋಣವೆಂದೂ ಒಮ್ಮೆ ಭಾವಿಸಿದ್ದೆ. ಆದರೆ, ಹತ್ತು ವರ್ಷಗಳಿಂದ ನನ್ನ ಹೃದಯದ ತಂತುವಾಗಿ ಬೆಳೆದುಬಂದಿರುವ ಕೋಸೆಟ್ಟೆಯನ್ನು ಅಗಲಲು ಮನಸ್ಸು ಒಡಂಬಡಲಿಲ್ಲ. ತಂತನ್ನು ಎಳೆದು ಬಿಡಿಸಲು ಪ್ರಯತ್ನಿಸಿದರೆ ಹೃದಯವೇ ಹೊರಬರುವುದೆಂದು ಹೆದರಿ ಅಲ್ಲೇ ಉಳಿದೆ. ಆದರೆ, ನಿಮ್ಮ ಸಹಪಂಕ್ತಿ, ಸಹಭೋಜನ, ಗೌರವ, ಆದರ, ಪ್ರೇಮ ಇವೆಲ್ಲವೂ ನನ್ನ ಮೊಗವಾಡವಾಗಿರುವ ಮಾನ್ಸಿಯರ್ ಫಾಶಲೆವೆಂಟರಿಗೆ ಸಲ್ಲುತ್ತಿರುವಾಗ, ಜೀನ್‌ವಾಲ್‌ಜೀನನಾದ ನಾನು ಅನುಭವಿಸಿದರೆ ಅದು ದರೋಡೆಯೇ ಆಗುವು

ದೆಂದು ಹೆದರುತ್ತೇನೆ. ಅವನ್ನೆಲ್ಲ ಸ್ವೀಕರಿಸುವುದಾರೆ ನಾನು ಗ್ಯಾಲೀಗುಲಾಮನಾಗಿ ನರಾಧಮನಾಗಿ ಮಾತ್ರ ಸ್ವೀಕರಿಸಬೇಕಷ್ಟೆ! ಅಂಥ ವಂಚಕ ಪರಿಸ್ಥಿತಿ ನನ್ನ ಮನಸ್ಸಿಗೆ ಒಪ್ಪುವಂಥಾದ್ದಲ್ಲ. ಹಾಗಾಗಿಯೇ ಇಷ್ಟೆಲ್ಲ ನಿಮಗೆ ತಿಳಿಸಿರುವೆ." ಹೀಗೆ ಹೇಳಿ ತನ್ನ ಭಾರ ಇಳಿಸಿದವನಂತೆ ನಿಟ್ಟುಸಿರು ಬಿಟ್ಟ.

ಮೇರಿಯಸ್ ಯಾವ ಉತ್ತರವನ್ನೂ ಕೊಡಲಾರದೆ ನಿಂತ. ಈ ಸಂಭಾಷಣೆಯ ಕೊನೆಯನ್ನು ಮಾತ್ರ ಕೇಳಿದ್ದ ಕೋಸೆಟ್ಟೆ ನಗುತ್ತ ತಾನು ಸಿಟ್ಟುಗೊಂಡಿರುವವಳಂತೆ ತುಟಿಯನ್ನು ತಿರುಟಿಸಿ ಕೊಂಡು, ಜೀನ್‌ವಾಲ್‌ಜೀನನ ಎದುರು ಬಂದು ನಿಂತು, "ಅಪ್ಪಾ! ನೀನು ನಿನ್ನೆ ಹಾಗೆ ಮಾಡ ಬಾರದಿತ್ತು. ನಿನ್ನನ್ನು ಕಂಡಕೂಡಲೇ ಬುದ್ಧಿಕಲಿಸುತ್ತೇನೆಂದು ಮೊದಲೇ ನಿಶ್ಚೈಸಿದ್ದೆ. ಯಾವು ದಕ್ಕೂ ನಮ್ಮ ಊಟ ಮುಗಿಯಲಿ. ಮತ್ತೆ, ನಿನಗೆ ತಕ್ಕ ಶಿಕ್ಷೆ! ನೀನು ಈ ಹೊತ್ತು ಮಧ್ಯಾಹ್ನ ಇಲ್ಲೇ ಊಟ ಮಾಡತಕ್ಕದ್ದು," ಎಂದು ಹೇಳಿದಳು.

ಕೋಸೆಟ್ಟೆ ಅಲ್ಲಿ ಪ್ರವೇಶಿಸಿದ್ದು ಮೇರಿಯಸನಿಗೆ ಸಮಾಧಾನವಾಗಲಿಲ್ಲ. ಅವನು, "ನಾವು ಲೆಕ್ಕಾಚಾರದ ಕುರಿತು ಮಾತಾಡುತ್ತಿದ್ದೇವೆ. ಅದು ಹೆಂಗುಸರಿಗೆ ರುಚಿಸುವಂಥಾದ್ದಲ್ಲ. ಸದ್ಯ ಇಲ್ಲಿಂದ ಹೋಗು," ಎಂದು ಕೋಸೆಟ್ಟೆಗೆ ಹೇಳಿದ.

ಕೋಸೆಟ್ಟೆಗೆ ಅದು ಸಮ್ಮತವಾಗಲಿಲ್ಲ. ಅವಳು ಇಬ್ಬರನ್ನೂ ನೋಡಿ, "ಗಂಡುಸರು ಹೆಂಗುಸ ರನ್ನು 'ಇಲ್ಲಿಂದ ಹೋಗು' ಎಂದು ತಾವೇ ಕಾರ್ಯಭಾರದಲ್ಲಿ ನುರಿತಿರುವವರಂತೆ ಹೇಳುವ ಅಧಿಕಾರವಿದ್ದ ಹಾಗೆಯೇ ಕೆಲವೊಂದು ವಿಷಯಗಳಲ್ಲಿ ಹೆಂಗುಸರಿಗೂ ಗಂಡುಸರ ಮೇಲೆ ಅಪ್ಪಣೆ ಕೊಡುವ ಅಧಿಕಾರವಿದೆ. ಪ್ರೇಮಕ್ಕೆ ಧಕ್ಕೆ ಬಂದಾಗ ಅನುಜ್ಞೆ ಕೊಡುವ ಹಕ್ಕು ಹೆಂಗುಸಿನದು. ನಮ್ಮ ಸಂತೋಷಕಾಲದಲ್ಲಿ ನಿನ್ನೆ ನಮಗೆ ಹಿಂಸೆಕೊಟ್ಟಿರುವ ಅಪ್ಪನಿಗೆ ತಕ್ಕ ಪ್ರಾಯಶ್ಚಿತ್ತ ವೇನೆಂದು ವಿಧಿಸಬೇಕಾಗಿದೆ, ಅನಂತರ ಹೋಗುತ್ತೇನೆ. ಪ್ರಾಯಶ್ಚಿತ್ತ ಈ ತೆರನಾಗಿದೆ: ಈ ದಿನ ಇಲ್ಲೇ ಊಟಮಾಡಬೇಕು, ನಾಳೆಯಿಂದ ಈ ಮನೆಯಲ್ಲೇ ಇರಬೇಕು, ಆ ಹಾಳು ಮನೆಯನ್ನು ಬಿಡಬೇಕು, ನನ್ನ ಕೈಹಿಡಿದುಕೊಂಡು ಮೊದಲಿನಂತೆ ಲಕ್ಸಂಬರ್ಗಿಗೆ ಕರೆದುಕೊಂಡು ಹೋಗಬೇಕು, ಮತ್ತು, ಈಗಲೇ ನನಗೊಂದು ಮುತ್ತುಕೊಡಬೇಕು," ಎಂದು ಹೇಳುತ್ತ, ಅವಳು ಜೀನ್‌ವಾಲ್ ಜೀನನ ಹತ್ತಿರ ಬಂದು ಬಲು ಸಲಿಗೆಯಿಂದ ನಿಂತಳು. ಸ್ವಲ್ಪ ಅಂಜುತ್ತ, ಜೀನ್‌ವಾಲ್‌ಜೀನ್ ಕೋಸೆಟ್ಟೆಯ ಹಣೆಗೆ ಮುತ್ತಿಟ್ಟು ಕಳುಹಿಸಿಕೊಟ್ಟ. ಕೋಸೆಟ್ಟೆ ಸ್ವಲ್ಪ ಸಿಟ್ಟಿನಿಂದಲೇ ಅಲ್ಲಿಂದ ಹೋದಳು. ಅನಂತರ, ಜೀನ್‌ವಾಲ್‌ಜೀನ್ ಪುನಃ ಹೇಳತೊಡಗಿದ, "ನನಗೆ ಸಂಸಾರವಿಲ್ಲ. ನನ್ನ ಈ ಹೀನ ವ್ಯಕ್ತಿಯನ್ನು ನಿಮ್ಮಂಥ ಉತ್ತಮರ ಸಂಸಾರದೊಂದಿಗೆ ವಂಚನೆಯಿಂದ ಬೆರೆಸಿಕೊಂಡು ನಾನಿರಲಾರೆ. ನನಗೆ ಯಾರಿಂದಲೂ ಗೌರವ ಸಲ್ಲತಕ್ಕದ್ದಿಲ್ಲ. ನನಗೆ ಮರ್ಯಾದೆಯಿಲ್ಲ. ನನ್ನನ್ನು ಪ್ರೀತಿಸಿ ದುಃಖಿಸುವವರಿಲ್ಲ, 'ಬಾ' ಎಂದು ಕರೆಯುವವರಿಲ್ಲ. ನನ್ನ ಚರಿತ್ರೆಯನ್ನು ಕೇಳಿದವರೆಲ್ಲ ನನ್ನ ಬೆನ್ನಟ್ಟಿ ಬರುವರು. ಆದರೆ ಈ ಎಲ್ಲ ಕಷ್ಟಗಳನ್ನೂ ದುಃಖಗಳನ್ನೂ ಪರಿಸ್ಥಿತಿಗಳನ್ನೂ ಎದುರಿಸಿ ಇಷ್ಟುಕಾಲ ಬಂದಿದ್ದೇನೆ. ನಾನು ಹೀನನೆಂದು ಸಮಾಜ ಹೇಳಿದಾಗ ಉತ್ತಮನಾಗುತ್ತ ಬಂದಿದ್ದೇನೆ. ಜನ ನನ್ನನ್ನು ಹಿಂಸಿಸಿದಾಗಲೆಲ್ಲ ಶಾಂತನಾಗುತ್ತ ಬಂದಿದ್ದೇನೆ, ಕ್ಷಮಾಗುಣ ಪಡೆಯುತ್ತ ಬಂದಿದ್ದೇನೆ. ನನ್ನನ್ನು ಜನ ಬೇಕೆಂದೇ ಕತ್ತಲೆಯಲ್ಲಿಟ್ಟಾಗ ದೇವರು ತಪ್ಪದೆ ಬೆಳಕನ್ನು ತೋರಿಸಿಕೊಟ್ಟಿರುವನು. ಸೈತಾನನೇ ನಾನೆಂದು ಜನ ಹಳಿದು, ತುಳಿದು, ನನ್ನನ್ನು ಪಾತಾಳಕ್ಕೆ ಮೆಟ್ಟಿದ್ದರೂ ನಾನು ಚೈತನ್ಯ ಪಡೆದು, ಮೇಲೆದ್ದು ಬಂದು, ಗಗನಕ್ಕೂ ಏರಿ, ಕಷ್ಟದುಃಖಗಳಿಂದ ಪಾರಾಗಿ, ದೈವದ ಒಲುಮೆಯನ್ನು ಸಾಕ್ಷಾತ್ತಾಗಿ ಕಾಣುತ್ತ ಬಂದಿದ್ದೇನೆ. ನಾನು ಕಷ್ಟದಲ್ಲೂ

ದುಃಖದಲ್ಲೂ ಇದ್ದಾಗ ನನ್ನ ಗುರುದೇವರು ನನ್ನ ಕಿವಿಯಲ್ಲಿ ಧೈರ್ಯವನ್ನು ಉಸುರಿ ಮಾತಾಡಿದ್ದಾರೆ. ಈ ಅನುಭವಗಳೆಲ್ಲ ನನ್ನ ಅಂತರಂಗದ ಮಥನದಿಂದ ಪಡೆದ ಅನರ್ಘ್ಯರತ್ನಗಳು. ನನ್ನ ಚರಿತ್ರೆಯನ್ನು ಅಡಗಿಸಿಟ್ಟು ನಿಮ್ಮಲ್ಲಿ ಬೆರೆತು ಆನಂದಿಸಿದರೆ, ಅದು ಸಾಧ್ಯವಾದರೆ, ಆಗ ಅಂಥ ಆನಂದದ ಮೂಲವೇ ಕಲುಷಿತವೆಂದು ನನಗೆ ತೋರದಿರದು. ಇವೆಲ್ಲ ನಿರ್ವಂಚನೆಯ ಸಂಗತಿಗಳು. ಇಲ್ಲಿ ಒಂದು ಎಚ್ಚರಿಕೆ ಹೇಳಬೇಕಾಗಿದೆ. ಗಂಡುಸರು ಸಹಿಸಬಹುದಾದುದನ್ನು ಹೆಂಗುಸರು ಸಹಿಸಲಾರರು. ಅದರಲ್ಲೂ, ಮೃದುಹೃದಯದ ಕೋಸೆಟ್ಟೆ ಈ ವರ್ತಮಾನವನ್ನೆಲ್ಲ ತಿಳಿದರೆ ಗಾಬರಿಗೊಳ್ಳದಿರಲಾರಳು, ದುಃಖಿತೆಯಾಗದಿರಲಾರಳು. ಅವಳಿಗೆ ಈ ಯಾವ ವಿಷಯವನ್ನೂ ತಿಳಿಸಬಾರದು—ತಿಳಿಸುವುದಿಲ್ಲವಾಗಿ ನನಗೆ ದಯಮಾಡಿ ವಾಗ್ದಾನಮಾಡಬೇಕು."

ಮೇರಿಯಸ್ ಜೀನ್‌ವಾಲ್‌ಜೀನನ ಅಪೇಕ್ಷೆಯಂತೆ ವಾಗ್ದಾನ ಮಾಡಿದ. ಇನ್ನೂ ಒಂದು ಪ್ರಾರ್ಥನೆಯನ್ನು ಜೀನ್‌ವಾಲ್‌ಜೀನ್ ಮೇರಿಯಸನ ಮುಂದಿಟ್ಟ, "ಮಾನ್ಸಿಯರ್ ಮೇರಿಯಸರೇ! ಇನ್ನೊಂದು ವಿಷಯವನ್ನು ನಿಮ್ಮಲ್ಲಿ ಹೇಳಬೇಕೆಂದಿರುವೆ. ನಾನು ಕೋಸೆಟ್ಟೆಯನ್ನು ನೋಡದಿರುವುದೇ ನ್ಯಾಯವೆಂದು ತೋರುತ್ತದೆ. ಆದರೂ, ಅಪರೂಪಕ್ಕಾದರೂ ನಾನು ನಿಮ್ಮಲ್ಲಿಗೆ ಬಂದು ಅವಳನ್ನು ನೋಡಿ ಹೋಗಲು ಅನುಮತಿ ಕೊಡುವಿರೇನು?"

"ಆಗಬಹುದು—ನೀವು ದಿನಂಪ್ರತಿಯೂ ಬಂದು ಹೋಗಬಹುದು," ಎಂದು ಮೇರಿಯಸ್ ಅನುಮತಿಯಿತ್ತ.

ಅನಂತರ ಸಂತೋಷವನ್ನೂ ದುಃಖವನ್ನೂ ಏಕಕಾಲದಲ್ಲಿ ಬೀಳ್ಕೊಡುವಂತೆ ಮೇರಿಯಸ್ ಜೀನ್‌ವಾಲ್‌ಜೀನನನ್ನು ಕಳುಹಿಸಿಕೊಟ್ಟ.

೨. ಅಪೂರ್ಣ ಸಂಗತಿ, ವಿಚಿತ್ರ ರೂಪಣ

ಜೀನ್‌ವಾಲ್‌ಜೀನನಿಂದ ತಿಳಿದ ವಿಷಯಗಳು ಮೇರಿಯಸನನ್ನು ಸಂಪೂರ್ಣ ಭ್ರಮೆಗೊಳಿಸಿದುವು. ಮೊದಲಿನಿಂದಲೂ ಮೇರಿಯಸ್ ಅವನನ್ನು ಸ್ವಲ್ಪ ತಿರಸ್ಕಾರಭಾವದಿಂದಲೇ ಕಾಣುತ್ತಿದ್ದ. ಇಂದು ಅವನ ಈ ಅಂತರಂಗದ ಭಾವನೆಗೆ ಪುಷ್ಟಿಕೊಡತಕ್ಕ ಆಧಾರಗಳೇ ಅವನಿಗೆ ದೊರಕಿದುವು. ಕೋಸೆಟ್ಟೆಯನ್ನು ತಾನು ಮದುವೆಯಾದುದರಲ್ಲಿ ಗ್ಯಾಲೀ ಗುಲಾಮಗಿರಿಯನ್ನೇ ಮದುವೆಯಾಗಿಬಿಟ್ಟೆನೇ ಎಂಬ ಭಯವೂ ತೋರಿತು. ಆದರೆ, ಜೊತೆಯಲ್ಲೇ ಜೀನ್‌ವಾಲ್‌ಜೀನನ ಬಗ್ಗೆ ಕನಿಕರವೂ ಉಂಟಾಯಿತು. ಇಂದಿನ ಸಂಭಾಷಣೆಯ ಫಲಿತಾಂಶವಾಗಿ ಜೀನ್‌ವಾಲ್‌ಜೀನ್ ಸಂಪೂರ್ಣ ಪ್ರಾಮಾಣಿಕನೂ ಧರ್ಮ, ಕರ್ತವ್ಯ, ತಮ್ಮ ಹಿತಚಿಂತನೆ ಮುಂತಾದವುಗಳಲ್ಲಿ ನಿಷ್ಠನೂ ದಕ್ಷನೂ ಎಂದೂ ನಿಶ್ಚೈಸಿಕೊಂಡ. ತನ್ನ ಜೀವನ ಚರಿತ್ರೆಯನ್ನು ತಾನಾಗಿಯೇ ಹೇಳಿದ್ದ ಸಂದರ್ಭಕ್ಕೆ ಬಲುವಾಗಿ ಆಶ್ಚರ್ಯಪಟ್ಟ.

ಆದರೆ ಜೀನ್‌ವಾಲ್‌ಜೀನ್ ಗ್ಯಾಲಿ ಗುಲಾಮನಾಗಿದ್ದುದರ ಹೀನತ್ವ ಮೇರಿಯಸನಿಗೆ ತೋರಿ, ಅವನು ಸ್ವಲ್ಪ ಅಸಹ್ಯನಾಗಿಯೂ ಕಾಣತೊಡಗಿದ. ಕ್ರಾಂತಿಕಾರರ ಕೋಟೆಯೊಳಗೆ ಯಾವ ವಿಧದ ಹಿಂಸಾಕೃತ್ಯವನ್ನೂ ಮಾಡದೆ, ಗಾಯಗೊಂಡಿದ್ದವರ ಶುಶ್ರೂಷೆ ಮಾಡುತ್ತಿದ್ದ ಅವನ ಸದ್ಗುಣವನ್ನು ಗ್ರಹಿಸಿದಾಗಲೆಲ್ಲ, ಅದೇ ಜೀನ್‌ವಾಲ್‌ಜೀನ್ ಜೇವರ್ಟನನ್ನು, ತಾನೇ ಕೊಲ್ಲಬೇಕೆಂಬ ಉದ್ದೇಶವಿದ್ದಂತೆ ಮಾತಾಡಿ, ಹೊರಗೆ ಕರೆದುಕೊಂಡು ಹೋಗಿದ್ದ ದೃಶ್ಯವೂ ಅನಂತರ ಗುಂಡು ಹಾರಿಸಿದ ಪಿಸ್ತೂಲ್ ಸದ್ದಿನ ನೆನಪೂ ಮೇರಿಯಸನೆದುರು ಬಂದು ನಿಲ್ಲುತ್ತಿದ್ದುವು. ಈ ಕಾರಣ

ದಿಂದ ಮೂಢನಾದ ಗ್ಯಾಲಿ ಗುಲಾಮನಲ್ಲಿ ಸದ್ಗುಣಗಳಿದ್ದಂತೆಯೇ ಹಿಂಸಾಬುದ್ಧಿ, ಕ್ರೌರ್ಯ ಎಲ್ಲವೂ ಬೆರತಿರಬೇಕೆಂದೇ ಮೇರಿಯಸ್ ಊಹಿಸಿದ. ಸಮಾಜವೇ ಬಹಿಷ್ಕರಿಸುವ ತನಗೂ ಅಸಹ್ಯ ತೋರುವ ಇಂಥ ಕೀಳುವ್ಯಕ್ತಿಯ ವಶಕ್ಕೆ ಕೋಸೆಟ್ಟೆಯಂಥ ಪವಿತ್ರವೂ ಪರಿಶುದ್ಧವೂ ಆದ ವಸ್ತುವಿನ ಲಾಲನೆಪಾಲನೆ ವಿದ್ಯಾಭ್ಯಾಸಗಳ ಜವಾಬ್ದಾರಿಯನ್ನು ದೇವರು ವಹಿಸಿಕೊಟ್ಟಿದ್ದ ಸಂಗತಿ ಗ್ರಹಿಸಿ ಆಶ್ಚರ್ಯಪಟ್ಟ. ಪುಷ್ಪಗಳ ಪುಷ್ಟಿಗೆ ಗೊಬ್ಬರ ಆಧಾರವಾಗಿರಬಹುದಾದರೂ ಪುಷ್ಪಗಳಿಂದ ಗೊಬ್ಬರ ಪರಿಶುದ್ಧವಾಗದು ಎಂಬ ತರ್ಕದಂತೆ, ಕೊನೆಗೆ ಮೇರಿಯಸ್ ಕೋಸೆಟ್ಟೆಯ ಪೋಷಕನಾಗಿದ್ದ ಜೀನ್‌ವಾಲ್‌ಜೀನನನ್ನು ಹೀನ ಮತ್ತು ಹೇಯ ವ್ಯಕ್ತಿಯೆಂದು ತಿಳಿಯಲು ಪ್ರಾರಂಭಿಸಿ, ಅವನು ತನ್ನ ಮನೆಗೆ ಬರುವುದು ಅನುಚಿತವೂ ಅಪಮಾನಾಸ್ಪದವೂ ಎಂದು ನಿಶ್ಚೈಸಿದ. ಹೀಗಾಗಿ ಜೀನ್‌ವಾಲ್‌ಜೀನ್ ಪ್ರತಿದಿನವೂ ತನ್ನ ಮನೆಗೆ ಬರಬಹುದೆಂದು ತಾನು ಕೊಟ್ಟಿದ್ದ ಅನುಮತಿಯ ಕುರಿತಾಗಿ ಸ್ವಲ್ಪ ವ್ಯಥೆಪಟ್ಟುಕೊಂಡ.

ಇತ್ತ ಜೀನ್‌ವಾಲ್‌ಜೀನ್ ತನಗೆ ದೊರೆತಿದ್ದ ಅನುಮತಿಯನ್ನು ಉಪಯೋಗಿಸಿಕೊಂಡು ತನ್ನ ಜೀವಿತದ ಸರ್ವಸ್ವವಾಗಿದ್ದ ಕೋಸೆಟ್ಟೆಯನ್ನು ಪ್ರತಿದಿನವೂ ಸಂಜೆಗೆ ಬಂದು ನೋಡಿ ಹೋಗುತ್ತಿದ್ದ. ಇದನ್ನು ಸಹಿಸಲಾರದೆ ಮೇರಿಯಸ್ ಯಾವಾಗಲೂ ಏನಾದರೊಂದು ನೆಪಹೇಳಿಕೊಂಡು, ಜೀನ್‌ವಾಲ್‌ಜೀನ್ ತನ್ನ ಮನೆಗೆ ಬರುವಾಗಲೆಲ್ಲ ಮನೆಯಿಂದ ದೂರವಾಗಿಯೇ ಇರುತ್ತಿದ್ದ.

ಏಳನೆಯ ಸಂಪುಟ

೧. ಕೆಳಗಡೆಯ ಮೂಲೆ ಕೋಣೆ

ಹಿಂದಿನ ಅಧ್ಯಾಯದಲ್ಲಿ ಹೇಳಿದ ಸಂಗತಿಗಳು ನಡೆದ ಮರುದಿನ ಜೀನ್‌ವಾಲ್‌ಜೀನ್ ಮೇರಿಯಸನ ಮನೆಗೆ ಬಂದಾಗ ಬಾಸ್ಕ ಬಂದು, "ಸರ್, ನೀವು ಮಹಡಿಗೆ ಹೋಗಲಿಚ್ಛಿಸುವಿರೋ, ಅಥವಾ ನಿಮಗೆ ಕೆಳಗಿನ ಕೋಣೆಯೇ ಸಾಕೇ?" ಎಂದು ವಿಚಾರಿಸಿದ. ಮೊದಲೇ ನಿಶ್ಚೈಸಲಾಗಿದ್ದ ಒಂದು ಏರ್ಪಾಡಿನ ಕುರಿತು, ಕೇವಲ ಉಪಚಾರಕ್ಕಾಗಿ ಮಾತ್ರ ಹಾಗೆ ಕೇಳುವುದೆಂಬ ಧ್ವನಿ ಬಾಸ್ಕನ ಪ್ರಶ್ನೆಯಲ್ಲಿ ಸ್ಪಷ್ಟವಾಗಿತ್ತು.

ಜೀನ್‌ವಾಲ್‌ಜೀನ್ ನಮ್ರವಾಗಿ, "ಕೆಳಗಿನ ಕೋಣೆ ಸಾಕು," ಅಂದ. ಬಾಸ್ಕ ಅವನನ್ನು ಕರೆದುಕೊಂಡು ಹೋಗಿ, ಮನೆಯ ಮುಂಭಾಗದ ರಸ್ತೆಗೆ ಬಲುಹತ್ತಿರದ ಒಂದು ಮೂಲೆ ಕೋಣೆಯಲ್ಲಿ ಬಿಟ್ಟ.

ಆ ಕೋಣೆಯಲ್ಲಿ ಕಸ, ದೂಳು, ಜೇಡರ ಬಲೆ, ಹಳೆ ಕುಪ್ಪಿಗಳ ರಾಶಿ ಮೊದಲಾದ ಕಶ್ಮಲಗಳೂ ಹರಗಣಗಳೂ ಜಮಾಯಿಸಿದ್ದುವು. ಕೋಣೆಯ ಒಂದು ಕರೆಯಲ್ಲಿ ಗೋಡೆಗೆ ಮುಟ್ಟಿಕೊಂಡು ಮೇಜೂ ಮೇಜಿನ ಎದುರು, ಆಚೆ ಈಚೆ ತುದಿಗಳಲ್ಲಿ ಒಂದೊಂದು ಕುರ್ಚಿಯೂ ಈ ಕುರ್ಚಿಗಳ ಮಧ್ಯೆ (ಕಂಬಳಿಯ ಅಂಶವೆಲ್ಲ ಉದುರಿಹೋಗಿದ್ದ) ಹಾಸಿದ್ದ ರತ್ನಕಂಬಳಿಯೂ ಇದ್ದುವು. ಒಂದು ಕಡೆ ಸ್ವಲ್ಪ ಬೆಂಕಿ ಉರಿಯುತ್ತಿತ್ತು. ಈ ಬೆಂಕಿಯನ್ನೂ ಬಾಕಿ ಏರ್ಪಾಡುಗಳನ್ನೂ ನೋಡಿ, ಬಾಸ್ಕ ಯಾವ ಸ್ಥಳ ಆಗಬಹುದೆಂದು ಕೇಳಿದರೂ ಇದು ಮುಂದಾಗಿಯೇ ತನಗೋಸ್ಕರ ಪ್ರತ್ಯೇಕಿಸಿಡಲಾಗಿತ್ತೆಂದು ಜೀನ್‌ವಾಲ್‌ಜೀನ್ ನಿಶ್ಚೈಸಿಕೊಂಡ.

ಅಲ್ಲಿ ಒಂದು ಕುರ್ಚಿಯಲ್ಲಿ ಕುಳಿತು ಜೀನ್‌ವಾಲ್‌ಜೀನ್ ಯೋಚನಾಮಗ್ನನಾಗಿ ಮೈಮರೆತೇ ಇದ್ದ. ಕೋಸೆಟ್ಟೆ ಚೆನ್ನಾಗಿ ಅಲಂಕರಿಸಿಕೊಂಡು ಬಂದು ಜೀನ್‌ವಾಲ್‌ಜೀನನ ಸಮೀಪವೇ

ಎದುರು ನಿಂತಾಗಲೂ ಅವನಿಗೆ ಎಚ್ಚರವಾಗಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ಜೀನ್‌ವಾಲ್‌ಜೀನ್ ಪ್ರತ್ಯಕ್ಷ ಪ್ರಪಂಚಕ್ಕೆ ಬಂದು, ತನ್ನೆದುರು ನಿಂತಿದ್ದುದು ಅವನ ಮನೋಮಯ ರಾಜ್ಯದ ಕೋಸೆಟ್ಟಿಯೇ ಹೌದೆಂದು ಸ್ವಲ್ಪ ಹೊತ್ತು ಅವಳನ್ನೇ ನೋಡಿ ನಿಶ್ಚೈಸಿದ. ಆಗಲೂ ಅವನ ಕಣ್ಣಿಗೆ ಕಂಡದ್ದು ಅವಳ ರೂಪವಲ್ಲ, ಅವಳ ಅಲಂಕಾರ, ದುಸ್ತುಗಳಲ್ಲ, ಅವಳ ಸುಂದರ, ಸರಳ, ಕೋಮಲ ಅಂತರಂಗ ಮಾತ್ರ. ಇಂದು ಅವನು ಎಂದಿನಂತೆ ಇಲ್ಲವೆಂದು ಕೋಸೆಟ್ಟಿ ತಿಳಿದು, ಅವನನ್ನು ಪೂರ್ವಪರಿಸ್ಥಿತಿಗೆ ತರಬೇಕೆಂದು, ಸ್ವಲ್ಪ ಸಿಟ್ಟುಬಂದವಳಂತೆ ನಟಿಸುತ್ತ, "ಅಪ್ಪಾ! ಏನನ್ನು ಆಲೋಚಿಸುತ್ತಿರುವೆ? ಈ ಹರಕು ಮುರುಕು ಕೋಣೆಯಲ್ಲಿ ನಾನು ನಿನ್ನನ್ನು ನೋಡ ಬೇಕೇ? ನಿನ್ನ ಕ್ರಮಗಳೆಲ್ಲ ಬಲುವಿಚಿತ್ರವಾಗಿ ತೋರುತ್ತವೆ," ಎಂದು ಹೇಳಿದಳು.

ಜೀನ್‌ವಾಲ್‌ಜೀನ್ ಆ ಕೋಣೆಗೆ ತಾನೇ ಚುನಾಯಿಸಿಕೊಂಡು ಬಂದುದೆಂದು ಅವಳ ಅಭಿಪ್ರಾಯವಿತ್ತು. ಅಲ್ಲಿಗೆ ಅವನು ಬಂದಿರಲು ಜೀನ್‌ವಾಲ್‌ಜೀನನಿಗೂ ಕೋಸೆಟ್ಟಿಗೂ ಸಂಬಂಧವಿಲ್ಲದ ಇತರರ ಗುಪ್ತ ಏರ್ಪಾಡು ನಡೆದಿರಬೇಕೆಂದು ತಿಳಿಯುವಷ್ಟು ಸಾಂಸಾರಿಕ ಅಥವಾ ಲೌಕಿಕ ಅನುಭವ ಆಕೆಗಿರಲಿಲ್ಲ.

ಕೋಸೆಟ್ಟಿಯ ಪ್ರಶ್ನೆಗೆ ಜೀನ್‌ವಾಲ್‌ಜೀನ್ ಶಾಂತನಾಗಿ, "ಇಲ್ಲೇ ನನಗೆ ಸ್ಥಳ ಆಗಬೇಕೆಂದು ನಾನೇ ಹೇಳಿದ್ದೇನೆ," ಎಂದ.

"ನಿನ್ನ ಸ್ವಭಾವವನ್ನೆಲ್ಲ ನಾನು ಬಲ್ಲೆ. ನಿನ್ನ ಒರಟುತನಕ್ಕೂ ಮಿತಿಯಿರಬೇಕು. ನಾನು ನಿನ್ನಲ್ಲಿ ಜಗಳವಾಡದೆ ಬಿಡೆ. ಆದರೆ, ನಿನಗೆ ಬುದ್ಧಿಕಲಿಸುವ ಮೊದಲು ನೀನು ನನಗೊಂದು ಮುತ್ತು ಕೊಡಬೇಕು," ಎಂದು ಹೇಳಿ ಅವಳ ಬಲಗೆನ್ನೆಯನ್ನು ಅವನ ಮುಖದ ಹತ್ತಿರವಿಟ್ಟಳು, ಸ್ವಲ್ಪ ನಕ್ಕು ನೋಡಿದಳು, ಜೀನ್‌ವಾಲ್‌ಜೀನ್ ಮಾತ್ರ ಮೊದಲಿನಂತೆಯೇ ಇದ್ದ. ಕೋಸೆಟ್ಟಿ ಪುನಃ ಸಿಟ್ಟುಗೊಂಡವಳಂತೆ ತೋರಿಸಿಕೊಂಡು, "ಮಹಾಶಯಾ, ನಿನ್ನ ಈ ಕ್ರಮ ಯಾವುದನ್ನೂ ನಾನು ಒಪ್ಪುವುದಿಲ್ಲ. ಆದರೆ, ಕ್ರೈಸ್ತನು '. . . ಆಚೆ ಕೆನ್ನೆ ತೋರಿಸು,' ಎಂದು ಉಪದೇಶಿಸಿದುದನ್ನು ಗ್ರಹಿಸಿ, ಇಗೋ, ಈ ಕೆನ್ನೆಯನ್ನು ತೋರಿಸುತ್ತೇನೆ," ಎಂದು ಹೇಳುತ್ತ ಅವಳ ಎಡಗೆನ್ನೆಯನ್ನು ಅವನ ಮುಖದ ಸಮೀಪವಿಟ್ಟಳು. ಆದರೂ ಜೀನ್‌ವಾಲ್‌ಜೀನ್ ಮುತ್ತುಕೊಡಲಿಲ್ಲ, ಮಾತನ್ನೂ ಆಡಲಿಲ್ಲ. ಕೋಸೆಟ್ಟಿ ತನ್ನ ಸೋಲನ್ನು ಪ್ರಕಟಿಸದೆ, ಮೊದಲಿಗಿಂತಲೂ ಸಿಟ್ಟುಗೊಂಡಿರು ವವಳಂತೆ ತೋರಿಸಿಕೊಂಡು, "ಈ ಹೊತ್ತು ನೀನು ಇಲ್ಲೇ ಊಟಮಾಡಬೇಕು. ನಿನ್ನನ್ನು ಹಾಗೆಯೇ ಬಿಡುವ ಹಾಗಿಲ್ಲ," ಅಂದಳು.

"ನನಗೆ ಊಟವಾಗಿದೆ, ಮೇಡಮ್."

"ಏನಿದು ಆಶ್ಚರ್ಯ! ನಾನು ಏಕಾಏಕಿ 'ಮೇಡಮ್' ಆಗಿಬಿಟ್ಟದ್ದು ಹೇಗೆ?"

"ಮದುವೆಯಾಗಿ."

"ಆದರೆ, ತಂದೆಗೂ 'ಮೇಡಮ್' ಆಗಿಬಿಡುತ್ತೇನೇನು? ನಾನು ಕೋಸೆಟ್ಟಿ ಮಾತ್ರ."

"ನನ್ನನ್ನು ನೀವು 'ತಂದೆ' ಎಂದೂ 'ಅಪ್ಪಾ' ಎಂದೂ ಹೇಳಬಾರದು," ಎಂದು ಜೀನ್‌ವಾಲ್‌ಜೀನ್ ಗಂಭೀರ ಸ್ವರದಿಂದ ಹೇಳಿದ.

"ಓ ದೇವರೆ! ನಾನು ನನ್ನ ಅಪ್ಪನಿಂದಲೇ 'ಮೇಡಮ್' ಎಂದು ಕರೆಸಿಕೊಂಡಾಯ್ತು. ನಾನು 'ನೀವು' ಸಹ ಆಗಿಹೋದೆ!" ಎಂದು ಉದ್ಗಾರವೆತ್ತಿದಳು ಕೋಸೆಟ್ಟಿ.

ಆಗ ಜೀನ್‌ವಾಲ್‌ಜೀನ್ ಮೊದಲಿನಂತೆಯೇ, ಶಾಂತನಾಗಿ, ದೃಢಸಂಕಲ್ಪದಿಂದ ಹೇಳು ತ್ತಿರುವವನಂತೆ, "ನನ್ನ ಹೆಸರು ಮಾನ್ಸರ್ ಜೀನ್, ಅಷ್ಟು ಮಾತ್ರ ನೀವು ನನ್ನ ಹೆಸರನ್ನು ಹೇಳಿದರೆ

ಸಾಕು," ಎಂದ.

ಕೋಸೆಟ್ಟಿಗೆ ಆಶ್ಚರ್ಯವಾಯಿತು, ದುಃಖವಾಯಿತು, ಗಾಬರಿಗೊಂಡಳು. ಅವಳಂದಳು, "ಏನನ್ಯಾಯ! ತಂದೆಯನ್ನೇ 'ಅಪ್ಪಾ' ಎಂದನ್ನುವ ಬದಲು 'ಜೀನ್' ಎಂದನ್ನಬೇಕೆ! ಅಪ್ಪನಿಗೆ ಏನಾಗಿದೆ ?"

"ಅದರಲ್ಲೇನಾಶ್ಚರ್ಯವಿದೆ ? ನಿನ್ನ ಹೆಸರೂ ಈಗ ಬದಲಾಗಿದೆಯಷ್ಟೆ—ನೀನು ಮೇಡಮ್ ಮೇರಿಯಸಳಾದ ಹಾಗೆ ನನ್ನ ಹೆಸರನ್ನೂ ಬದಲಾಯಿಸಿಕೊಂಡಿದ್ದೇನೆ."

ಕೋಸೆಟ್ಟಿ ಈ ಯಾವ ತರ್ಕದಿಂದಲೂ ತೃಪ್ತಳಾಗಲಿಲ್ಲ. ತಲೆಯನ್ನು ಅಡ್ಡಡ್ಡ ಆಡಿಸುತ್ತ ಅವನಿಗೆ ಹಠಹಿಡಿದು ಬುದ್ಧಿಕಲಿಸುವವಳಂತೆ, ತುಟಿಯನ್ನು ಹಗುರವಾಗಿ ಕಚ್ಚಿಕೊಂಡು, "ಈ ತರ್ಕವೆಲ್ಲ ನನ್ನಲ್ಲಿ ಸಾಗದು. ಅಪ್ಪಾ! ನಾನು ನಿನ್ನನ್ನು ಎಂದೂ 'ಜೀನ್' ಎಂದು ಕರೆಯೆನು. ನೀನೇನಾದರೂ ನನ್ನನ್ನು 'ಮೇಡಮ್' ಎಂದು ಹೇಳಿನೋಡು, ನಾನು ಮಾಡುವ ಮದ್ದೇ ಬೇರೆ ಉಂಟು! ಈ ಹಾಳು ಕೋಣೆಯಲ್ಲಿ ನೀನು ಕುಳಿತುಕೊಳ್ಳಕೂಡದು. ನಿನ್ನ ಸ್ವಭಾವಕ್ಕೆ ಸರಿಯಾದ ವರು—ಈ ಮನೆಯವರು! ನೀನೂ ಅವರೂ ಜೊತೆ ಸೇರಿ ನನ್ನನ್ನು ಹೀಗೆ ಹಿಂಸಿಸುತ್ತೀರಲ್ಲವೇ? ಇರಲಿ, ನಾನೊಂದು ಪ್ರಶ್ನೆ ಕೇಳುವೆನು. ಅದಕ್ಕೆ ಉತ್ತರಕೊಡು, ನೋಡ್ತೇನೆ!" ಎಂದು ಹೇಳಿ, ಜೀನ್‌ವಾಲ್‌ಜೀನ್ ಏನನ್ನುತ್ತಾನೆಂದು ನಿರೀಕ್ಷಿಸಿದಳು.

"ಕೇಳು, ಪ್ರಶ್ನೆ ಕೇಳು."

"ಪ್ರಶ್ನೆ ಇಷ್ಟೆ—ನನ್ನ ಸುಖಸಂತೋಷಗಳನ್ನು ಕಂಡು ನಿನಗೆ ಹೊಟ್ಟೆಕಿಚ್ಚಾಗಿದೆಯೇ, ಅಪ್ಪಾ?"

ಈ ಪ್ರಶ್ನೆ ಅವನನ್ನು ಬಲುವಾಗಿ ಗಾಸಿಗೊಳಿಸಿತು. ಅವನು ಗದ್ಗದ ಕಂಠದಿಂದ, "ಅಮ್ಮಾ ಕೋಸೆಟ್ಟೀ! ನಿನ್ನ ಸುಖ ಸಂತೋಷವೇ ನನ್ನ ಬದುಕಿರೋಣದರ ಉದ್ದೇಶವಾಗಿತ್ತು. ಮದುವೆ ಯಾಗಿ ನಿನಗೆ ಎಲ್ಲ ವಿಧದ ಸುಖಸಂತೋಷಗಳೂ ದೊರೆತಿವೆ, ಇತ್ತ ನಾನು ಪ್ರಪಂಚದಿಂದ ಮರೆಯಾಗುವ ಕಾಲವೂ ಸಮೀಪವಾಗುತ್ತ ಬಂದಿದೆ. ನಿನ್ನ ಸುಖಕ್ಕೆ ನಾನು ಎಂದೂ ಅಸೂಯೆ ಪಡಲಾರೆ, ಮಗಳೆ," ಎಂದು ಹೇಳುತ್ತ ತನ್ನ ಕಣ್ಣುಗಳನ್ನು ಒರೆಸಿಕೊಂಡ.

"ಅಪ್ಪಾ, ದುಃಖಿಸಬೇಡ. ನಾನು ತಮಾಷೆಗಾಗಿ ಹಾಗೆ ಹೇಳಿಬಿಟ್ಟೆ, ನೀನು ನನ್ನನ್ನು ಕೋಸೆಟ್ಟೀ ಎಂದು ಏಕವಚನದಲ್ಲಿ ಕರೆದದ್ದು ನನಗೆ ಪರಮಾನಂದವಾಯಿತು," ಎಂದು ಹೇಳುತ್ತ ಅವಳು ಜೀನ್‌ವಾಲ್‌ಜೀನನನ್ನು ಅಪ್ಪಿಕೊಂಡಳು. ತನ್ನ ದುಃಖದ ಪರಿಸ್ಥಿತಿ ಹದಗೆಡುವುದೆಂದು ಹೆದರಿ ಜೀನ್‌ವಾಲ್‌ಜೀನ್ ಎದ್ದು ನಿಂತ. ಅವನನ್ನು ಪ್ರೀತಿ, ಸಲಿಗೆಗಳಿಂದ ನಿಲ್ಲಿಸಿಕೊಳ್ಳಬೇಕೆಂದು ಕೋಸೆಟ್ಟಿ ಅವನಿಗೆ ಒತ್ತಿ ನಿಂತುಕೊಂಡು, ಎದ್ದು ನಿಂತದ್ದು ಏಕೆಂದು ಪ್ರಶ್ನಿಸುವಂತೆ, "ಮತ್ತೆ?" ಎಂದು ಕೇಳಿದಳು.

"ಮತ್ತೆ, ಒಂದು ವಿಷಯವಿದೆ ನಿಜ. ನಾನು ನಿಮ್ಮನ್ನು 'ಮೇಡಮ್' ಎಂದು ಕರೆಯುವ ಬದಲು 'ನೀನು' ಎಂದು ಕರೆದು ಬಿಟ್ಟಿದ್ದೇನೆ. ಅದೊಂದು ಅಪರಾಧ. ನಿಮ್ಮ ಗಂಡ ಬಂದನಂತರ ನನ್ನ ತಪ್ಪಿಗೆ ಕ್ಷಮೆ ಬೇಡಿದ್ದೇನೆಂದು ತಿಳಿಸಿ," ಎಂದು ಹೇಳಿ ಜೀನ್‌ವಾಲ್‌ಜೀನ್ ಅಲ್ಲಿಂದ ಹೊರಟೇಹೋದ.

ಈ ಅನರ್ಥಕಾರೀ ಮಾತುಗಳಿಂದ ಕೋಸೆಟ್ಟಿ ಸ್ತಂಭಿತಳಾಗಿ ನಿಂತಲ್ಲೇ ನಿಂತುಬಿಟ್ಟಳು.

೨. ಪ್ರೀತಿ ಹಿಂದೆ ಸರಿಯುತ್ತಿದೆ

ಜೀನ್‌ವಾಲ್‌ಜೀನ್ ಪ್ರತಿ ದಿನವೂ ಕೋಸೆಟ್ಟಿಯ ಮನೆಗೆ ಬರುತ್ತಿದ್ದ. ದಿನಗಳು ಕಳೆದ ಹಾಗೆ, ಹೇಗೋ ಆಗಿ ಜೀನ್‌ವಾಲ್‌ಜೀನ್ ಕೋಸೆಟ್ಟಿಯನ್ನು 'ಮೇಡಮ್' ಎಂದೂ ಕೋಸೆಟ್ಟಿ ಅವನನ್ನು 'ಮಾನ್ಸರ್ ಜೀನ್' ಎಂದೂ ಕರೆಯುವುದು ಅಭ್ಯಾಸಕ್ಕೆ ಬಂತು. ಅವರಿಬ್ಬರ ಭೇಟಿ ಮೊದಲಿನ ಕೋಣೆಯಲ್ಲೇ ನಡೆಯುತ್ತಿತ್ತು. ಆದರೆ ಈಗ ಆ ಕೋಣೆ ಮೊದಲಿಗಿಂತ ಚೊಕ್ಕಟವಾಗಿಯೂ ಪರಿಷ್ಕಾರವಾಗಿಯೂ ಇತ್ತು. ಗಿಲೆನಾರ್ಮಂಡ್ ಮಾತ್ರ ತನ್ನ ಶ್ರೀಮಂತಿಕೆ ಕಾಪಾಡಿಕೊಳ್ಳಲು, 'ಅವರವರ ಯೋಗ್ಯತೆಗೆ ತಕ್ಕಂಥ ವರ್ತನೆ' ಎಂದಂದುಕೊಂಡು, ಜೀನ್‌ವಾಲ್‌ಜೀನನ ಬಗ್ಗೆ ತಾತ್ಸಾರದಿಂದಲೇ ಇದ್ದ. ಅಲ್ಲಿಯ ಆಳುಗಳ ದೃಷ್ಟಿಯಲ್ಲೂ ಜೀನ್‌ವಾಲ್‌ಜೀನ್ ಅಗಣ್ಯನೇ ಆಗಿದ್ದ.

ಮೇರಿಯಸ್ ಮತ್ತು ಕೋಸೆಟ್ಟಿಯರಿಗೆ ಪ್ರಪಂಚವೂ ಸಂಸಾರವೂ ತಮ್ಮಿಬ್ಬರೊಳಗೇ ಮುಗಿದಿದ್ದುವು ಎನ್ನುವಂತೆ ಅವರು ತಂತಮ್ಮ ಪರಸ್ಪರ ವಿಷಯಗಳನ್ನೇ ಮಾತಾಡಿಕೊಳ್ಳುತ್ತಿದ್ದರು. ಅಷ್ಟೇ ಹೊರತು ಮತ್ತೇನನ್ನೂ ಮಾತಾಡಿಕೊಳ್ಳುತ್ತಿರಲಿಲ್ಲ. ಕೋಸೆಟ್ಟಿ ಜೀನ್‌ವಾಲ್‌ಜೀನನ ಜೊತೆಯಲ್ಲಿದ್ದಾಗ ಅವಳು ಹಿಂದಿನ ಪ್ರೇಮದಿಂದಲೇ ಮಾತಾಡುತ್ತಿದ್ದಳು. ಆದರೆ, ಅವಳ ಗಂಡನೊಡನೆ ಎಂದೂ ಎಷ್ಟೂ ಸಹ ಜೀನ್‌ವಾಲ್‌ಜೀನನ ಕುರಿತಾಗಿ ಮಾತಾಡುತ್ತಿರಲಿಲ್ಲ. ಅವಳ ಜೀವನಕ್ಕೆ ಬೇಕಾದ ವಸ್ತು, ಬೆಡಗು, ಭೂಷಣ, ವೈಯಾರ, ಎಲ್ಲವೂ ಮೇರಿಯಸನೇ ಆಗಿದ್ದ. ಅವನೊಬ್ಬನಿದ್ದರೆ ಅವಳಿಗೆ ಮತ್ತೇನೂ ಬೇಕಾಗಿರಲಿಲ್ಲ. ಅವನು ಕೈ ಹಿಡಿದುಕೊಂಡು ಮನ ಬಂದಂತೆ ಹರಟುತ್ತ, ನಿರ್ಜನ ಪ್ರದೇಶಗಳಲ್ಲಿ ಸುತ್ತಾಡುವುದೇ ಅವಳ ಸಕಲ ಸುಖ ಸಂತೋಷ, ಬೆಡಗು, ವೈಯಾರ ಆಗಿದ್ದುವು.

ದಿನಗಳು ಕಳೆದಂತೆ ಜೀನ್‌ವಾಲ್‌ಜೀನ್ ಮೇಲಿನ ಪ್ರೇಮ ಕೋಸೆಟ್ಟಿಯಲ್ಲಿ ಶಿಥಿಲವಾಗುತ್ತ ಬಂದಿತು. ಪ್ರೇಮಪುರಸ್ಸರವಾದ ಅವಳ ಮಾತುಗಳೊಳಗೆ ಹಾಸ್ಯಕುಚೇಷ್ಟೆಗಳು ಬೆರೆಯುತ್ತಿದ್ದುವು. ಅವಳು ತನ್ನ ಕುರಿತಾಗಿ ತೋರಿಸುತ್ತಿದ್ದ ಉಪೇಕ್ಷೆ ನವತಾರುಣ್ಯಕ್ಕೆ ಸ್ವಾಭಾವಿಕವಾದುದೆಂದು ಜೀನ್‌ವಾಲ್‌ಜೀನ್ ಆ ಕುರಿತು ವಿಶೇಷ ಗಮನವೀಯುತ್ತಿರಲಿಲ್ಲ. ಸದ್ಗುಣಗಳಿಗೂ ಪ್ರೇಮಕ್ಕೂ ಮನಸ್ಸನ್ನು ಪರಿಶುದ್ಧಗೊಳಿಸುವ ಶಕ್ತಿಯಿರಬೇಕು. ಈ ಕಾರಣದಿಂದಲೇ ಕೆಲವೊಮ್ಮೆ ಕೋಸೆಟ್ಟಿ ಜೀನ್‌ವಾಲ್‌ಜೀನ್ ಜೊತೆ ಹೆಚ್ಚು ಹೆಚ್ಚು ಕಾಲವಿದ್ದಷ್ಟೂ ಪೂರ್ವದ ಬಾಲಿಕೆಯೇ ಆಗಿಬಿಡುತ್ತಿದ್ದಳು. ಒಂದು ದಿನ ಅವಳು ಇಂಥ ಮಾನಸಿಕ ಪರಿಸ್ಥಿತಿಯಲ್ಲಿದ್ದಾಗ ತಂದೆಯನ್ನು ನೋಡಿ, "ಅಪ್ಪಾ! ನೀನು ನನಗೆ ಒಮ್ಮೆ ತಂದೆಯಾದೆ, ಅನಂತರ ಚಿಕ್ಕಪ್ಪನಾದೆ. ಒಮ್ಮೆ ಮಾನ್ಸರ್ ಫಾಶೆಲೆವೆಂಟನಾದೆ, ಅನಂತರ ಮಾನ್ಸರ್ ಜೀನ್ ಆದೆ. ನಿನ್ನ ಈ ವಿಧದ ಬದಲಾವಣೆಗಳೆಲ್ಲ ನನಗೆ ಆಶ್ಚರ್ಯ ಉಂಟುಮಾಡುತ್ತವೆ. ನನ್ನ ಮೇಲೆ ನಿನ್ನ ಪ್ರೇಮ ಎಷ್ಟಿದೆಯೆಂಬ ಜ್ಞಾನ ನನಗೆ ಚೆನ್ನಾಗಿರುವುದರಿಂದ ಮಾತ್ರ ನಾನು ಈ ಬದಲಾವಣೆಗಳನ್ನು ಸಹಿಸುತ್ತಿದ್ದೇನೆ. ಇಲ್ಲದಿದ್ದರೆ ಹೆದರಿ ಹೋಗಲೇಬೇಕಾಗಿತ್ತು," ಅಂದಳು. ಈ ಮಾತುಗಳನ್ನು ಅಷ್ಟೊಂದು ಸಲಿಗೆಯಿಂದ, ಸರಳತೆಯಿಂದ, ಪ್ರೇಮದಿಂದ ಅವಳಾಡಿದುದರಿಂದ ಅವನಿಗೆ ಹಿಂದೊಮ್ಮೆ ಅವಳು, "ಅಪ್ಪಾ! ಗ್ಯಾಲಿ ಜೈಲು ಅಂದರೇನು ?" ಎಂದು ಕೇಳಿದ್ದು ಜ್ಞಾಪಕಕ್ಕೆ ಬಂತು.

ಇನ್ನೊಂದು ದಿನ ಕೋಸೆಟ್ಟಿ ಜೀನ್‌ವಾಲ್‌ಜೀನನನ್ನು ಮೈಮರೆತು "ಅಪ್ಪಾ" ಎಂದು ಕರೆದಾಗ ಅವನು ತನ್ನನ್ನು 'ಜೀನ್' ಎಂದು ಕರೆಯಬೇಕಿತ್ತೆಂದು ಸೂಚಿಸಿದ. ಆಗ ಕೋಸೆಟ್ಟಿ ಈ

ಅಭಿಪ್ರಾಯಕ್ಕೆ ತನ್ನ ಸಂತೋಷದ ಸಮ್ಮತಿಯನ್ನು ಕೊಡುತ್ತ, "ಹೌದು, ಮಾನ್ಸಿಯರ್ ಜೀನ್ ಆಗಬೇಕಿತ್ತು," ಎಂದು ಅರೆನಗುವಿನಿಂದ ಹೇಳಿಕೊಂಡಳು.

ಆದರೆ, ಜೀನ್‌ವಾಲ್‌ಜೀನ್ ಕೋಸೆಟ್ಟೆಯ ಮಾತನ್ನು ಕೇಳಿ, ಅವಳಿಗೆ ಬೆನ್ನು ಹಾಕಿ, "ಅಯ್ಯೋ ನನ್ನ ವಿಧಿಯೇ !" ಎಂದಂದುಕೊಂಡು ಉಕ್ಕಿಬಂದ ಕಣ್ಣೀರನ್ನು ಒರೆಸಿಕೊಂಡ.

೩. ವರ್ತನೆ ಯಾಂತ್ರಿಕವಾಗುತ್ತಿದೆ

ಹಿಂದೆ ಜೀನ್‌ವಾಲ್‌ಜೀನ್ ಬಾಡಿಗೆಗೆ ತೆಗೆದುಕೊಂಡಿದ್ದ ರೂ'ಪ್ಲಮೆಟಿನ ಮನೆ, ಹೂದೋಟ ಎಲ್ಲವೂ ಮೇರಿಯಸನ ಸ್ವಾಧೀನದಲ್ಲಿದ್ದುವು. ಒಂದು ದಿನ ಮೇರಿಯಸ್ ಮತ್ತು ಕೋಸೆಟ್ಟೆ ಅವರ ಪ್ರೇಮದ ಪ್ರಥಮ ಸಂಭಾಷಣೆ ನಡೆದ ಆ ಸ್ಥಳ ನೋಡಲು ಹೋದರು. ಹಿಂತಿರುಗಿ ಬರುವಾಗ ರಾತ್ರಿಯಾಗಿತ್ತು.

ಆ ಸಂಜೆಗೆ ಜೀನ್‌ವಾಲ್‌ಜೀನ್ ಎಂದಿನಂತೆ ಮೇರಿಯಸನ ಮನೆಗೆ ಬಂದಾಗ ಬಾಸ್ಕ ಹೆಬ್ಬಾಗಿಲಿಗೇ ಬಂದು, "ದೊರೆಸಾನಿಯವರು ಬ್ಯಾರನ್ನರ ಜೊತೆಯಲ್ಲಿ ಅವರ ರೂ'ಪ್ಲಮೆಟಿನ ಉದ್ಯಾನವನಕ್ಕೆ ಹೋಗಿರುತ್ತಾರೆ," ಎಂದು ತಾನಾಗಿಯೇ ತಿಳಿಸಿದ.

ಅದರ ಮರುದಿನ ಜೀನ್‌ವಾಲ್‌ಜೀನ್ ಕೋಸೆಟ್ಟೆಯನ್ನು ನೋಡಲು ಬಂದಾಗ ಇವಳು ತಾನು ಹಿಂದಿನ ದಿನ ಮನೆಯಲ್ಲಿ ಇಲ್ಲದಿದ್ದ ವಿಷಯ ಪ್ರಸ್ತಾವಿಸದೆ ಇತರ ವಿಷಯಗಳನ್ನು ಮಾತ್ರ ಮಾತಾಡಿದಳು. ಕೊನೆಗೆ ಜೀನ್‌ವಾಲ್‌ಜೀನನೇ ಅವಳನ್ನು ವಿಚಾರಿಸುತ್ತ, "ನೀವು ನಿನ್ನೆ ರೂ'ಪ್ಲಮೆಟಿಗೆ ಹೋದದ್ದು ನಡೆದೋ, ಬಂಡಿಯಲ್ಲೋ?" ಎಂದು ಕೇಳಿದ.

"ನಡೆದೇ ಹೋದದ್ದು."

"ವಾಪಾಸು ಬಂದದ್ದು?"

"ಅದೂ ನಡೆದೇ."

ಮೇರಿಯಸ್ ಅನಾವಶ್ಯಕವಾಗಿ ತಾನು ಕಷ್ಟಪಡುತ್ತಿರುವುದಲ್ಲದೆ, ಕೋಸೆಟ್ಟೆಗೂ ಕಷ್ಟಕೊಡುತ್ತಿರುವನೆಂದು ಜೀನ್‌ವಾಲ್‌ಜೀನ್ ಗ್ರಹಿಸಿಕೊಂಡ. "ನೀವೇ ಸ್ವಂತವಾಗಿ ಒಂದು ಬಂಡಿಯನ್ನೇಕೆ ಇಟ್ಟುಕೊಳ್ಳಬಾರದು," ಎಂದು ಕೇಳಿದ.

"ಆ ಸಂಗತಿ ನನಗೆ ಗೊತ್ತಿಲ್ಲ."

"ನಿಮ್ಮ ಕ್ರಮವೇ ಈ ತೆರನಾದುದು. ಇಲ್ಲದಿದ್ದರೆ ಟೌಸೆಂಟಳನ್ನು ಕೆಲಸದಿಂದ ತೆಗೆಯುತ್ತಿದ್ದಿರೇನು? ಅವಳ ಬದಲಿಗಾದರೂ ಯಾರಾದರೂ ಇದ್ದಾರೇನು?"

"ನಿಕೋಲೆಟ್ ಇದ್ದಾಳಲ್ಲ."

"ನಿಮ್ಮ ವೈಯಕ್ತಿಕ ಕೆಲಸಕ್ಕಾಗಿಯೇ ಒಬ್ಬಳಿರಬೇಡವೇ?"

"ಮೇರಿಯಸ್ ಇದ್ದಾನಲ್ಲ?" ಅಂದಳು ಕೋಸೆಟ್ಟೆ.

"ನಿಮಗೆ ಈ ವಿಷಯವೆಲ್ಲ ತಿಳಿಯದು. ನಿಮಗಾಗಿ ಒಂದು ಮನೆ, ಆಳುಗಳು, ಬಂಡಿ, ಒಪೆರಾ, ನಾಟಕ ಮೊದಲಾದವುಗಳಲ್ಲಿ ಕಾದಿಡಲಾದ ಸ್ಥಳಗಳು, ಎಲ್ಲ ಇರಬೇಕು," ಎಂದು ಜೀನ್‌ವಾಲ್‌ಜೀನ್ ಬೋಧಿಸಿದ.

ಒಂದು ದಿನ ಕೋಸೆಟ್ಟೆಯೂ ಜೀನ್‌ವಾಲ್‌ಜೀನನೂ ಸ್ವಲ್ಪ ಹೊತ್ತು ಮಾತಾಡುತ್ತ ಕುಳಿತಿದ್ದಾಗ ಬಾಸ್ಕ ಬಂದು, "ದೊರೆಸಾನಿಯವರು ಊಟಕ್ಕೆ ಬರಬೇಕೆಂದು ಯಜಮಾನರ ಅಪ್ಪಣೆ

ಆಗಿದೆ,'' ಅಂದ. ತಾನು ಹೆಚ್ಚು ಹೊತ್ತು ಅಲ್ಲಿ ಇರಬಾರದೆಂದು ತನಗೆ ತಿಳಿಸಲೋಸ್ಕರ ಹೂಡಿದ ಉಪಾಯ ಇದೆಂದು ಜೀನ್‌ವಾಲ್‌ಜೀನ್ ತಿಳಿಯುತ್ತ ವ್ಯಥೆಪಟ್ಟ.

ಮತ್ತೊಂದು ದಿನ ಜೀನ್‌ವಾಲ್‌ಜೀನ್ ಅವನ ಕೋಣೆಗೆ ಹೋದಾಗ ಅಲ್ಲಿ ಬೆಂಕಿಯೇ ಇರಲಿಲ್ಲ. ಅದನ್ನು ಕಂಡು ಕೋಸೆಟ್ಟಿ, ''ಇದೇನಾಶ್ಚರ್ಯ, ಇಲ್ಲಿ ಬೆಂಕಿ ಏಕಿಲ್ಲ?'' ಎಂದು ಕೇಳಿದಳು.

''ಚಳಿಗಾಲ ಕಳೆದಿದೆಯಷ್ಟೆ. ಇದು ಏಪ್ರಿಲ್ ತಿಂಗಳಲ್ಲವೆ,'' ಅಂದ ಜೀನ್‌ವಾಲ್‌ಜೀನ್.

ಅದರ ಮರುದಿನ ಜೀನ್‌ವಾಲ್‌ಜೀನ್ ಬಂದಾಗ ಕೋಸೆಟ್ಟಿ ಮಾತಾಡುತ್ತ, ''ಮೇರಿಯಸ್ ನನ್ನ ಹತ್ತಿರ ಒಂದು ವಿಶೇಷ ಪ್ರಶ್ನೆ ಕೇಳಿದ,'' ಅಂದಳು. ಅದಕ್ಕೆ ಜೀನ್‌ವಾಲ್‌ಜೀನ್ ''ಏನೂಂತ?'' ಕೇಳಿದ.

''ಅವನು ಹೇಳಿದ, 'ನೋಡು ಕೋಸೆಟ್ಟಿ, ನಿನ್ನ ಹೆಸರಿನಲ್ಲಿ ಬಡ್ಡಿಯಾಗಿ ವರ್ಷಕ್ಕೆ ೨೭,೦೦೦ ಫ್ರ್ಯಾಂಕ್ ಹಣ ಬರುತ್ತಿದೆ. ನನ್ನ ಲೆಕ್ಕದಲ್ಲಿ ಬಡ್ಡಿಯಾಗಿ ೩೦೦೦ ಫ್ರ್ಯಾಂಕ್ ಬರುತ್ತಿದೆ' ಆಗ ನಾನಂದೆ. 'ಒಟ್ಟು ಮೂವತ್ತು ಸಾವಿರ ಆಯ್ತು.' ಮತ್ತೆ ಮೇರಿಯಸ್ ಕೇಳಿದ, 'ಬರೀ ನನ್ನ ೩೦೦೦ ಫ್ರ್ಯಾಂಕಿನಲ್ಲಿ ನಾವು ಬದುಕಲು ಸಾಧ್ಯವಿಲ್ಲವೇ ?' ಎಂದು. ನಾನಂದೆ 'ನೀನೊಬ್ಬನಿದ್ದರೆ ನಮಗೆ ಹಣವೇ ಅಗತ್ಯವಿಲ್ಲ' ಅಂತ.'' ಹೀಗೆ ಹೇಳಿ ಕೋಸೆಟ್ಟಿ ತಾನು ಮೇರಿಯಸನಿಗೆ ಹೇಳಿದ್ದ ಮಾತುಗಳಿಗೆ ಸಂತೋಷಪಟ್ಟುಕೊಂಡು ನಕ್ಕಳು.

ಆ ದಿನ ಜೀನ್‌ವಾಲ್‌ಜೀನ್ ಬಲು ಚಿಂತಾಕ್ರಾಂತನಾಗಿಯೇ ತನ್ನ ಮನೆಯ ಕಡೆಗೆ ಹೋದ. ಒಮ್ಮೆ ಮೈಮರೆತು, ತನ್ನ ಮನೆಯೆಂದು ಇನ್ನೊಬ್ಬರ ಮನೆಗೆ ನುಗ್ಗುವುದರಲ್ಲಿದ್ದ. ತಾನು ಕೊಟ್ಟಿದ್ದ ಹಣ ಅನ್ಯಾಯಾರ್ಜಿತವೆಂದು ಮೇರಿಯಸ್ ಸಂಶಯಪಡುತ್ತ, ಆ ಹಣವನ್ನು ನಿರಾಕರಿಸುವ ಉದ್ದೇಶದಿಂದಲೇ ಕೋಸೆಟ್ಟಿಯೊಡನೆ ಈ ರೀತಿ ಮಾತಾಡಿರಬೇಕೆಂದು ಊಹಿಸಿದ. ಇದಕ್ಕಾಗಿ ಬಲು ದುಃಖಿಸಿದ.

ಅದರ ಮರುದಿನ ಮೇರಿಯಸನ ಮನೆಗೆ ಜೀನ್‌ವಾಲ್‌ಜೀನ್ ಹೋದಾಗ ಅವನಿಗಾಗಿ ಇದ್ದ ಕೋಣೆಯಲ್ಲಿ ಕುರ್ಚಿಗಳೇ ಇರಲಿಲ್ಲ. ಇದನ್ನು ಕಂಡು ಕೋಸೆಟ್ಟಿ ಆಳುಗಳನ್ನು ಗದರಿಸುವುದರಲ್ಲಿ ಇದ್ದಳು. ಅಷ್ಟರಲ್ಲೇ, ''ನಾನು ಈ ಹೊತ್ತು ಹೆಚ್ಚು ವೇಳೆ ಇಲ್ಲಿರುವುದಿಲ್ಲ. ಕುರ್ಚಿಗಳು ಬೇಡವೆಂದು ವಾಪಾಸು ಕಳುಹಿಸಿದ್ದೇನೆ'' ಅಂದ. ಆ ದಿನ ಅವಸರದಿಂದಲೇ ಅಲ್ಲಿಂದ ಹೊರಟು ಹೋದ. ಆಗ 'ಮೇಡಮ್' ಎಂದನ್ನಲು ಹೃದಯ ಒಪ್ಪದೆ, 'ಕೋಸೆಟ್ಟಿ' ಎನ್ನಲು ಧೈರ್ಯ ಸಾಕಾಗದೆ, ಬರೇ ''ನಾನು ಹೋಗುತ್ತೇನೆ'' ಎಂದಷ್ಟೇ ಹೇಳಿ ಹೋಗಿದ್ದ. ಅನಂತರ ಜೀನ್‌ವಾಲ್ ಜೀನ್ ಕೋಸೆಟ್ಟಿಯನ್ನು ನೋಡಲು ಹೋಗುವುದನ್ನೇ ನಿಲ್ಲಿಸಿದ. ನಾಲ್ಕು ದಿನಗಳು ಕಳೆದನಂತರ ಮೇರಿಯಸ್ ಉಪಚಾರಕ್ಕಾಗಿ ಬಾಸ್ಕನನ್ನು ಕಳುಹಿಸಿ ನಾಲ್ಕು ದಿನಗಳ ಗಣನೆ ಅವನಿಗಿಲ್ಲದಿದ್ದವನಂತೆ, ''ನಿನ್ನೆ ಏಕೆ ಬರಲಿಲ್ಲ ?'' ಎಂದು ವಿಚಾರಿಸಿದ.

ತನ್ನ ಪ್ರಜ್ಞೆ ಸರಿಯಿದೆಯೆಂಬುದಷ್ಟನ್ನು ತೋರಿಸಲು ಮಾತ್ರ ಜೀನ್‌ವಾಲ್‌ಜೀನ್, ''ಬರದೇ ಇಂದಿಗೆ ನಾಲ್ಕು ದಿನಗಳಾದುವು. ಒಂದು ಪ್ರಯಾಣದ ನಿಮಿತ್ತ ಬರಲಾಗಲಿಲ್ಲ,'' ಎಂದು ಮಾತ್ರ ಉತ್ತರ ಕಳುಹಿಸಿಕೊಟ್ಟ.

೪. ಮೋಹಪಾಶ ದೇಹನಾಶ

೧೮೩೩ರ ಬೇಸಗೆ ಕಾಲದ ಪ್ರಥಮ ಭಾಗದಲ್ಲಿ ಯಾವತ್ತಾದರೂ ಒಂದು ದಿನ ಸಂಜೆಯಲ್ಲಿ ಮರೆಯಸ್ ರಸ್ತೆಯಲ್ಲಿ ನಿಂತು ನೋಡಿದ್ದಾದರೆ, ಪ್ರತಿ ದಿನವೂ ಎಂಬಂತೆ, ಒಬ್ಬ ವೃದ್ಧ ರ್‍ಯೂ ಆರ್ಮಿನ ಕಡೆಯಿಂದ ಗಿಲೆನಾರ್ಮಂಡನ ಮನೆಯ ಕಡೆಗೆ ಹೋಗುವುದನ್ನು ಕಾಣಬಹುದಿತ್ತು. ಅವನ ತಲೆ ಸಂಪೂರ್ಣ ನರೆತಿತ್ತು. ಒಳ್ಳೆ ದುಸ್ತನ್ನು ನಾಜೂಕಾಗಿ ಧರಿಸಿರುತ್ತಿದ್ದ. ಚಿಂತಾಮಗ್ನನಾಗಿ ನೆಲವನ್ನೇ ನೋಡುತ್ತ ನಡೆಯುತ್ತಿದ್ದ. ಅಪರೂಪಕ್ಕೆ ತಲೆಯೆತ್ತಿ ನಮ್ಮನ್ನು ನೋಡಿದಾಗ, ಅವನ ಕಣ್ಣುಗಳು ನಿಸ್ತೇಜವಾಗಿ, ಆರ್ತತೆಯಿಂದ ಕೊರಗುತ್ತಿರುವಂತೆ ತೋರುತ್ತಿದ್ದುವು. ಆ ವೃದ್ಧ ಯಾವ ನಿರ್ದಿಷ್ಟ ಮನೆಯನ್ನೂ ಅಥವಾ ಸ್ಥಳವನ್ನೂ ಸೇರದೆ, ಗಿಲೆನಾರ್ಮಂಡನ ಮನೆಯವರೆಗೆ ಮಾತ್ರ ಹೋಗಿಬರುತ್ತಿದ್ದ. ಆದರೆ, ಅಲ್ಲಿ ಅವನು ಸ್ವಲ್ಪ ಹೊತ್ತು ಏಕಾಗ್ರತೆಯಿಂದ ಆ ಮನೆಯನ್ನು ನೋಡುತ್ತಿದ್ದಷ್ಟು ಕಾಲ ಅವನ ಕಣ್ಣುಗಳಲ್ಲಿ ಹೊಳಪೂ ಮುಖದಲ್ಲಿ ತೇಜಸ್ಸೂ ಎದ್ದುತೋರುತ್ತಿದ್ದುವು. ಆದರೆ ಮನೆಯನ್ನು ನೋಡಿ, ಮನಸ್ಸಿನೊಳಗಣ ಯಾವುದೋ ಒಂದು ಪ್ರಶ್ನೆಗೆ ಉತ್ತರಕೊಡುವವನಂತೆ ತಲೆಯನ್ನು ಅಡ್ಡಡ್ಡ ಅಲ್ಲಾಡಿಸಿ, "ಬೇಡ" ಎಂದಂತೆ ಮಾಡುತ್ತ ವಾಪಾಸು ಅಸ್ಥಿರ ಪದಗತಿಯಿಂದ, ದುಃಖದ ಭಾರವನ್ನು ಹೊತ್ತು ತರುತ್ತಿದ್ದವನಂತೆ, ತನ್ನ ಮನೆ ಸೇರುತ್ತಿದ್ದ.

ಹೀಗೆ ಕೆಲವು ದಿನಗಳು ಕಳೆದನಂತರ ಪುನಃ ಈ ವೃದ್ಧನನ್ನು ಹಿಂಬಾಲಿಸಿ ಹೋಗಿ ನೋಡಿದ್ದಾದರೆ, ಅವನು ಆಗ ಗಿಲೆನಾರ್ಮಂಡನ ಮನೆಯವರೆಗೂ ಹೋಗುತ್ತಿರಲಿಲ್ಲ. ಆ ಬೀದಿಯ ತನ್ನ ಕೊನೆಯಲ್ಲಿ ಮಾತ್ರ ನಿಂತು, ಗಿಲೆನಾರ್ಮಂಡನ ಮನೆ ಕಡೆ ನೋಡಿ ತನ್ನ ಕಣ್ಣುಗಳಿಂದ ಇಳಿದುಬರುತ್ತಿದ್ದ ನೀರನ್ನು ಒರೆಸಿಕೊಂಡು ಹಿಂದೆ ಸರಿಯುತ್ತಿದ್ದ.

ಇನ್ನೂ ಕೆಲವು ದಿನ ಕಳೆದ ಮೇಲಂತೂ ಗಿಲೆನಾರ್ಮಂಡನ ಬೀದಿಯವರೆಗೂ ಹೋಗದೆ, ತನ್ನ ಮನೆಯೆದುರಿನ ರಸ್ತೆಯಲ್ಲೇ ನಾಲ್ಕಾರು ಮಾರು ನಡೆದು, ಉಕ್ಕಿಬರುತ್ತಿದ್ದ ಕಣ್ಣೀರನ್ನು ತಿಳಿಯದೆ ನುಂಗುತ್ತ ಅದು ಕಹಿಯೆಂದುಕೊಂಡು ಸತತವೂ ನೆಲದಡಿಗೆ ಹೋಗಬೇಕೆಂದೂ ಪ್ರಯತ್ನಪಡುತ್ತಿರುವವನಂತೆ ಬೆನ್ನುಬಗ್ಗಿಸಿಕೊಂಡು ಹಿಂತಿರುಗಿ ಬರುತ್ತಿದ್ದ.

ಕೊನೆಗೆ ಅವನು ದೂರ ನಡೆಯದೆ, ತನ್ನ ಮನೆಯೆದುರಿನ ರಸ್ತೆಯಲ್ಲೇ ನಿಂತು, ಒಂದು ಯಂತ್ರದಂತೆ ತಲೆಯನ್ನು ತಿರುಗಿಸಿ ಸುತ್ತಲೂ ನೋಡಿ, ದುಃಖಿಸಲೂ ತ್ರಾಣವಿಲ್ಲದೆ ನಿಸ್ತೇಜನಾಗಿ, ನಿಶ್ಶಕ್ತನಾಗಿ, ಕಣ್ಣಿನಲ್ಲೂ ನೀರು ಬರದಷ್ಟು ಬತ್ತಿದ್ದ ಕಣ್ಣುಗಳಿಂದ ನೆಲವನ್ನು ನೋಡುತ್ತ, ಶವದಂತೆ ತೋರುತ್ತ ಹಿಂದೆ ಬರುತ್ತಿದ್ದ. ಗಟ್ಟಿಮುಟ್ಟಿನ ಜನ ಅವನು ಆಗಿರಬೇಕೆಂದು ನೋಡಿದಾಗ ತಿಳಿಯಬಹುದಾಗಿತ್ತಾದರೂ ಈಗಿನ ಅವನ ಚಲನೆಯೆಲ್ಲ ಕೀ ಕೊಟ್ಟಿದ್ದ ಗಡಿಯಾರ ಪುನಃ ಕೀಲಿ ಕೊಡದಿದ್ದರೆ ಆಗುತ್ತ ಬರುವ ಪರಿಸ್ಥಿತಿಯಂತೆ ಇತ್ತು. ಅವನ ಸುತ್ತಲೂ ಕೆಲವೊಮ್ಮೆ ಚಿಕ್ಕ ಮಕ್ಕಳು ಬಂದು ಸೇರಿಕೊಂಡು, 'ಒಳ್ಳೆ ಮುದುಕ' ಎಂದಂದುಕೊಂಡು ಆಟವಾಡುವುದೂ ಇತ್ತು. ಆ ಮಕ್ಕಳು ಜೊತೆಯಲ್ಲಿದ್ದಷ್ಟು ಕಾಲ ಅವನ ಕಣ್ಣುಗಳಿಗೆ ಸ್ವಲ್ಪ ಹೊಳಪು ಬರುವುದೂ ಇತ್ತು.

ಎಂಟನೆಯ ಸಂಪುಟ

೧. ದುಃಖಿಗಳ ಬಗ್ಗೆ ಅನುಕಂಪ, ಸುಖಿಗಳ ಬಗ್ಗೆ ಅಭಿಮಾನ ಇರಲಿ

ಸಂತೋಷವೆಂಬುದೊಂದು ಅಮಲು. ಅದು ದೊರಕಿದರೆ ಬದುಕು ಸಾರ್ಥಕವಾಯಿತೆಂದು ಅನೇಕರು ಗ್ರಹಿಸುವರು ಮತ್ತು ಅಂಥವರು ಈ ಒಂದೇ ದೃಷ್ಟಿಯಿಂದ ಅವರ ಎಲ್ಲ ಕಾರ್ಯಗಳನ್ನೂ ಮಾಡುವರು. ನಮ್ಮ ಅಭಿಪ್ರಾಯದಲ್ಲಿ ಇದು ಸರಿಯಲ್ಲ. ಕೇವಲ ಯಾವುದೇ ಬಗೆಯಿಂದ ಗಳಿಸಿದ ಸಂತೋಷವೇ ಮನುಷ್ಯಜೀವನದ ಗುರಿಯಾಗಬಾರದು. ಅವನಿಗೆ ತನ್ನ ಕರ್ತವ್ಯಜ್ಞಾನವಿರಬೇಕು. ತದನುಸಾರವಾಗಿ ಅವನು ಜೀವನ ಸಾಗಿಸಬೇಕು. ಅಂಥ ಮಾರ್ಗದಲ್ಲಿ ದೊರೆಯುವ ಸಂತೋಷವೇ ಜೀವನದ ಗುರಿಯಾಗಬೇಕು.

ಮೇರಿಯಸ್ ಕೋಸೆಟ್ಟೆಯರು ತಾವು ಪರಮಸಂತೋಷ ಪಡೆದಿರುವುದಾಗಿ ಗ್ರಹಿಸಿಕೊಂಡಿದ್ದರು. ಇದರ ಅಮಲಿನಿಂದ ಅವರು ತಮ್ಮ ಕರ್ತವ್ಯಗಳನ್ನು ಮರೆತಿದ್ದರು. ಅವರ ವಿಶಿಷ್ಟ ಕಾರ್ಯ ಗಮನ ಎಲ್ಲವೂ ಈ ಸಂತೋಷದ ಕುರಿತಾಗಿಯೇ ಇತ್ತು. ಆರ್ತರ, ದೀನರ ಕುರಿತಾಗಿ ಅವರಿಗೆ ಯಾವ ಕರುಣೆ, ಅನುಕಂಪ, ಕರ್ತವ್ಯಜ್ಞಾನವೂ ಇರಲಿಲ್ಲ. ಈ ಕಾರಣದಿಂದಲೇ ಜೀನ್ ವಾಲ್‌ಜೀನ್ ಅವರಿಬ್ಬರಿಂದಲೂ ತ್ಯಜಿಸಲ್ಪಟ್ಟಿದ್ದ.

ಕೋಸೆಟ್ಟೆಯ ಕೈಹಿಡಿಯುವ ಮೊದಲು ಮೇರಿಯಸ್ ಮಾನ್ಸರ್ ಫಾಶೆಲೆವೆಂಟರ ಚರಿತ್ರೆಯನ್ನು ವಿಚಾರಿಸದಿದ್ದ ಮೇಲೆ, ಕೈಹಿಡಿದ ಮೇಲಂತೂ ಜೀನ್‌ವಾಲ್‌ಜೀನನ ಚರಿತ್ರೆಯ ಯಾಥಾರ್ಥ್ಯ ತಿಳಿಯುವ ಸಂಭವವೇ ಇರಲಿಲ್ಲ. ಈಗ ಅವನ ಕಾರ್ಯಗಳ ಗುರಿಯೆಲ್ಲ ಜೀನ್ ವಾಲ್‌ಜೀನನನ್ನು ಕೋಸೆಟ್ಟೆಯ ಮನಸ್ಸಿನಿಂದಲೂ ತನ್ನ ಮನೆಯಿಂದಲೂ ಹೊರ ಹಾಕುವ ಕಡೆಯೇ ಇತ್ತು. ಅವನ ಕರ್ತವ್ಯದಕ್ಷತೆ ಎಂಥದೆಂಬುದನ್ನು ವಾಚಕರು ಬಲ್ಲಿರಷ್ಟೆ. ಆ ದಕ್ಷತೆಯಿಂದಲೇ ಇಂದು ಅವನು ಜೀನ್‌ವಾಲ್‌ಜೀನನನ್ನು ದೂರಮಾಡುವ ಕೆಲಸ ನಡೆಸುತ್ತಿದ್ದ. ಈ ಪ್ರಸಂಗದಲ್ಲಿ ಅವನು ಕ್ರೂರತೆಯನ್ನು ಪ್ರತ್ಯಕ್ಷ ಪ್ರಯೋಗಿಸದಿದ್ದರೂ ಕಾಠಿಣ್ಯವನ್ನು ಪರೋಕ್ಷ ಬಳಸುತ್ತಿದ್ದ.

ಜೀನ್‌ವಾಲ್‌ಜೀನ್ ಕೋಸೆಟ್ಟೆಗೆ ಕೊಟ್ಟಿದ್ದ ಹಣ ಒಮ್ಮೆ ಲೆಫಿಟ್ಟೆ ಬ್ಯಾಂಕಿನಲ್ಲಿತ್ತೆಂದೂ ಆ ಹಣವನ್ನು ಇಟ್ಟವನೇ ವಾಪಾಸು ತೆಗೆದಿದ್ದನೆಂದೂ ಮೇರಿಯಸ್ ಲೆಫಿಟ್ಟೆ ಬ್ಯಾಂಕಿನ ಸಂಬಂಧವಾದ ಒಂದು ಕೋರ್ಟ್ ವ್ಯವಹಾರದಲ್ಲಿ ತಿಳಿದುಕೊಂಡಿದ್ದ. ಆದರೆ, ಆ ಹಣಕ್ಕೂ ಜೀನ್ ವಾಲ್‌ಜೀನನಿಗೂ ಸಂಬಂಧ ಹೇಗೆ ಬಂತೆಂಬುದನ್ನು ಮೇರಿಯಸನಿಂದ ತಿಳಿಯಲು ಆಗಲಿಲ್ಲ. ಆದ್ದರಿಂದಲೇ, ಆ ಹಣ ಜೀನ್‌ವಾಲ್‌ಜೀನನದಲ್ಲವೆಂಬ ಭರವಸೆಯಿಲ್ಲದೆ, ಅದರ ಒಂದು ಫ್ರ್ಯಾಂಕನ್ನೂ ಮೇರಿಯಸ್ ಉಪಯೋಗಿಸಲು ತಯಾರಾಗಿರಲಿಲ್ಲ.

ಕೋಸೆಟ್ಟೆ ಮೇರಿಯಸರಿಗೆ ಸ್ವತಂತ್ರ ದೇಹಗಳಿದ್ದರೂ ಮನಸ್ಸಿನ ಮಟ್ಟ ಮೇರಿಯಸನದೇ ಆಗಿತ್ತು. ಕೋಸೆಟ್ಟೆಯ ಆಲೋಚನೆ, ತಿಳಿವಳಿಕೆ ಅರ್ಥಾತ್ ಅವಳ ಮನಸ್ಸೆಲ್ಲ ಮೇರಿಯಸನದೇ ಆಗಿದ್ದುದರಿಂದ, ಅವಳು ಮೇರಿಯಸನನ್ನು ನೆರಳಿನಂತೆ ಹಿಂಬಾಲಿಸುತ್ತಿದ್ದಳು. ಇವನ ಮನಸ್ಸಿನಲ್ಲಿ ಕೇವಲ ನೆರಳಾಗಿ ತೋರಿದ್ದು, ಕೋಸೆಟ್ಟೆಗೆ ಕತ್ತಲೆಯೇ ಆಗಿ ಪರಿಣಮಿಸುತ್ತಿತ್ತು. ಈ ಕ್ರಮದಿಂದಲೇ ಮೇರಿಯಸ್ ತನ್ನ ಮನೆಯಿಂದ ಹೊರಗೆ ಹಾಕಿದವನನ್ನು ಕೋಸೆಟ್ಟೆ ತನ್ನ ಮನಸ್ಸಿನಿಂದಲೇ ಹೊರಗೆ ಹಾಕಿ ನೆಮ್ಮದಿಯಾಗಿದ್ದಳು.

೨. ನಂದುವ ಮೊದಲು

ಗಡಿಯಾರದ ಲೋಲಕ ಸ್ಥಗಿತವಾಗುವ ಮೊದಲು ಸ್ವಲ್ಪ ಅತ್ತಿತ್ತ ತೊನೆಯುವಂತೆ ಒಂದು ದಿನ ಜೀನ್‌ವಾಲ್‌ಜೀನ್ ಹಿಂದಿನ ಅಭ್ಯಾಸಬಲದಿಂದ ತನ್ನ ಮನೆಯಿಂದ ರಸ್ತೆಯ ವರೆಗೂ ತಲಪಿ, ಮುಂದೆ ಹೋಗಲಾರದೆ, ರಸ್ತೆಯಲ್ಲೇ ಸ್ವಲ್ಪ ಹೊತ್ತು ನಿಂತು ಹಿಂದೆ ಬಂದ. ಕೋಣೆಗೆ ನುಗ್ಗುವಾಗ ಕನ್ನಡಿಯಲ್ಲಿ ಅವನ ಮುಖ ಕಂಡಿತು. ಕೋಸೆಟ್ಟೆಯ ಗುಟ್ಟನ್ನು ರಟ್ಟುಮಾಡಿದ್ದ ಕನ್ನಡಿ ಜೀನ್‌ವಾಲ್‌ಜೀನನ ಯಥಾಸ್ಥಿತಿಯನ್ನೂ ಬಯಲು ಮಾಡಿತು. ಕನ್ನಡಿಯಲ್ಲಿ ತನ್ನ ಮುಖ ಕಂಡು, "ಮದುವೆಗೆ ಮೊದಲಿನ ಐವತ್ತರ ಮುಖ ಈ ವರ್ಷದಲ್ಲೇ ಎಂಬತ್ತರಂತಾಗಿದೆ," ಅಂದು ಕೊಂಡು ಕೋಸೆಟ್ಟೆಯ ಮದುವೆಯನ್ನೂ ಅವಳು ದೂರವಾದುದನ್ನೂ ನೆನೆದು, ದುಃಖಿಸುತ್ತ ಅವಳ ಹಳೆ ಲಂಗವನ್ನಪ್ಪಿಕೊಂಡು ಅಳುತ್ತ ಮಲಗಿದ.

ಅವನ ಊಟತಿಂಡಿಗಳನ್ನೆಲ್ಲ ಆ ಮನೆಯ ಪಹರೆಯವನ ಹೆಂಡತಿ ಸಂಬಳಕ್ಕೆ ತಂದುಕೊಡು ತ್ತಿದ್ದಳು. ಅವಳು ಸಂಬಳದ ಚಾರಿಕೆಯಾಗಿದ್ದರೂ ಅವನನ್ನು ಭಕ್ತಿಯಿಂದಲೇ ಕಾಣುತ್ತಿದ್ದಳು. ಜೀನ್‌ವಾಲ್‌ಜೀನನ ದೇಹಸ್ಥಿತಿ ಕಂಡು ಕೆಲಸದವಳು ಹೆದರಿ, ಒಬ್ಬ ವೈದ್ಯರನ್ನು ಕರೆತಂದು ಪರೀಕ್ಷೆ ಮಾಡಿಸಿದಳು. ಅವನಿಗೆ ಮನೋರೋಗ ಮಾತ್ರ ಇದ್ದುದೆಂದು ವೈದ್ಯರು ಅಭಿಪ್ರಾಯ ಪಟ್ಟರು. "ಇದ್ದ ಒಬ್ಬಳೇ ಮಗಳ ಕೈಹಿಡಿದ ಗಂಡ ಕ್ರೂರಿಯಾಗಿರುವುದರ ಪರಿಣಾಮವಿದು," ಎಂದು ಕೆಲಸದವಳು ಅಂದುಕೊಂಡಳು.

ಅವನ ತ್ರಾಣ ದಿನದಿಂದ ದಿನಕ್ಕೆ ಕುಂದುತ್ತ ಬರುತ್ತಿತ್ತು. ವೈದ್ಯರು ಪರೀಕ್ಷೆ ಮಾಡಿಹೋದ ಮರುದಿನ ಅವನು ಕಷ್ಟಪಟ್ಟು ಹಾಸಿಗೆಯಿಂದೆದ್ದು ದುಸ್ತುಮಾಡಿದ. ಆ ಕೆಲಸದ ಶ್ರಮದಿಂದಲೇ ಅವನ ಕಾಲುಗಳು ನಡುಗತೊಡಗಿದುವು. ಹಣೆ ಬೆವರಿತು. ನಿಂತಲ್ಲಿಂದಲೇ ಸ್ಮೃತಿತಪ್ಪಿ ಬೀಳು ವಂತಾದ. ಅಲ್ಲೇ ನೆಲದಲ್ಲಿ ಕುಳಿತ. ಆದರೂ, ಸ್ವಲ್ಪ ಹೊತ್ತಿನಲ್ಲೇ ಹೇಗೋ ಕಷ್ಟಪಟ್ಟು ಎದ್ದು, ಬಿಷಪರು ಕೊಟ್ಟಿದ್ದ ಬೆಳ್ಳಿದೀಪಗಳನ್ನು ಮೇಜಿನ ಮೇಲಿಟ್ಟು ಹಚ್ಚಿದ. ಆ ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣುವಂತೆ ಏಸು ಸ್ವಾಮಿಯ ಪ್ರತಿಮೆಯಿದ್ದ ಒಂದು ಶಿಲುಬೆಯನ್ನು ಎದುರಿಟ್ಟುಕೊಂಡ. ಇಷ್ಟು ಕೆಲಸ ಪೂರೈಸುವಾಗ ಅವನಿಗೆ ಸ್ಮೃತಿ ತಪ್ಪಿತು. ಅನಂತರ ಎಷ್ಟೋ ಹೊತ್ತಿನ ಮೇಲೆ ಸ್ಮೃತಿ ಬಂತು. ಆಗ ತನ್ನ ಪರಿಸ್ಥಿತಿಯ ಅರಿವು ಉಂಟಾಗಿ, ಕೈಯನ್ನು ಹಿಡಿದು ನಾಡಿಪರೀಕ್ಷೆ ಮಾಡಿ ಕೊಂಡ. ಅತೃಪ್ತಿಕರವಾಗಿ ಹೊಡೆಯುತ್ತಿತ್ತು. ಆಗ ಸ್ವಲ್ಪ ನೀರು ಕುಡಿಯಬೇಕೆಂದು ತೋರಿ, ಹೂಜೆ ಎತ್ತಲು ಪ್ರಯತ್ನಿಸಿ, ಅದೂ ಸಾಧ್ಯವಾಗದೆ, ಹೂಜೆಗೆ ಬಾಯಿಯಿಟ್ಟು ಅಲ್ಲಿಂದಲೇ ಎರಡು ಗುಟುಕು ನೀರನ್ನು ಕುಡಿದ. ಅನಂತರ ಸದ್ಯವೇ ತಾನು ಸಾಯಬಹುದೆಂದು ಗ್ರಹಿಸಿ, ಕಾಗದ ತೆಗೆದು ಮೆಲ್ಲ ಮೆಲ್ಲಗೆ ಈ ಮುಂದಿನಂತೆ ಬರೆದಿಟ್ಟ:

"ಕೋಸೆಟ್ಟೇ! ನಿನ್ನನ್ನು ಹೃತ್ಪೂರ್ವಕವಾಗಿ ಆಶೀರ್ವದಿಸುತ್ತೇನೆ. ನೀನೂ ನಿನ್ನ ಪತಿಯೂ ಸುಖ ವಾಗಿ ಬಾಳಿ. ನಾನು ನಿಮ್ಮಿಂದ ದೂರವಿರಬೇಕೆಂದು ನಿನ್ನ ಪತಿ ಮಾಡಿರುವ ಏರ್ಪಾಡು ನ್ಯಾಯ ವಾದುದು. ಅವನು ಬಲು ಯೋಗ್ಯ ಪತಿ. ಅವನನ್ನು ನೀನು ಪ್ರೀತಿಸಿ ಸುಖ ಸಂತೋಷದಿಂದ ನೀವು ಬಾಳಿ ಬದುಕಿ. ನಾನು ಕೊಟ್ಟಿರುವ ಹಣದ ಕುರಿತು ಅವನಿಗೆ ಸ್ವಲ್ಪ ಸಂಶಯವಿರಬೇಕು. ಆ ಹಣವೆಲ್ಲ ನ್ಯಾಯಾರ್ಜಿತವಾದುದೆಂದು ಪುನಃ ದೃಢಪಡಿಸುತ್ತೇನೆ. ಬಳೆ ಕೈಗಾರಿಕೆ ಫ್ರಾನ್ಸಿಗೆ ಹೊಸತು. ನಮ್ಮೂರಿನ ಕಚ್ಚಾಮಾಲುಗಳಿಂದಲೇ—ವಿಶೇಷವಾದ ಮೂಲಧನವಿಲ್ಲದೆಯೇ—ಬಳೆ ಯನ್ನು ತಯಾರಿಸಿ, ಉತ್ತಮ ಮಾಲುಗಳನ್ನು ಗ್ರಾಹಕರಿಗೆ ಕೊಡುತ್ತ, ಕೈಗಾರಿಕೆಯ ಮಾಲೀಕರು

ನ್ಯಾಯವಾದ ಲಾಭವನ್ನು ಸಂಪಾದಿಸಬಹುದು . . . " ಇಷ್ಟು ಬರೆಯುವಾಗ ಅವನ ಕೈಯಿಂದ ಲೇಖನಿ ಬಿತ್ತು. ತನ್ನ ಅಂತ್ಯ ಸಮೀಪಿಸಿತೆಂದು, ಕೋಸೆಟ್ಟೆಯನ್ನು ಸ್ಮರಿಸಿಕೊಂಡ. ಅವಳ ಕಾಲ್ಪನಿಕ ಸ್ವರೂಪವೇ ಅವನಿಗೆ ದಿವ್ಯಜ್ಯೋತಿಯಾಗಿ ತೋರಿ, ಅವನ ಅಂತರಂಗ ಬಹಿರಂಗಗಳು ಆನಂದಿಸುವಂತೆ ಮುಖ ಪ್ರಭಾಯುತವಾಯಿತು. ಆದರೂ ಅವನ ಮನಸ್ಸಿನಲ್ಲಿ ಒಂದು ದುಃಖ ಬಾಧಿಸುತ್ತಿತ್ತು. ಕೋಸೆಟ್ಟೆಯನ್ನು ಕೊನೆಗಳಿಗೆಯಲ್ಲೊಮ್ಮೆಯಾದರೂ ತಾನು ನೋಡುವ ಸಂಭವವಿಲ್ಲವಲ್ಲ ಎಂದು ದುಃಖಿಸಿದ. ಅವನು ಮನಸ್ಸಿನಲ್ಲೇ, "ಆ ಮುದ್ದು ಮುಖದ ದೇವಕನ್ನೆ ಕೋಸೆಟ್ಟೆಯ ದರ್ಶನ ನನಗೆ ಇನ್ನೆಂದಿಗೂ ಆಗದು, ಅವಳ ಮುದ್ದಾದ ಬಾಯಿಯ ಇಂಪಾದ ಮಾತುಗಳನ್ನು ಕೇಳಲಾರೆ, ಹೂವಿನಷ್ಟು ಮೃದುತ್ವವಿರುವ ಅವಳ ಹಸ್ತಗಳನ್ನು ನಾನು ಮುಟ್ಟಲಾರೆ, ಹೂವಿನಷ್ಟು ಪರಿಶುದ್ಧಳಾದ ನನ್ನ ಮುದ್ದು ಕೋಸೆಟ್ಟೆಯನ್ನು ನನಗೆ ಒಮ್ಮೆಯಾದರೂ ದೇವರು ತೋರಿಸಲಾರನೇ!" ಎಂದು ಗ್ರಹಿಸತೊಡಗಿದ.

ಹೀಗೆ ಅವನು ಗ್ರಹಿಸುತ್ತಿದ್ದಾಗ ಅವನ ಕೋಣೆಯ ಕದವನ್ನು ಯಾರೋ ಹೊರಗಿನಿಂದ ತಟ್ಟಿದರು.

೩. ಸತ್ಯಂ ಶಿವಂ ಸುಂದರಂ

ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾವಿಸಿದ ಸಂಗತಿ ನಡೆದ ದಿನ ಸಂಜೆಗೆ ಮನೆ ಆಳು ಬಾಸ್ಕ ಮೇರಿಯಸನಿಗೆ ಒಂದು ಪತ್ರ ತಂದುಕೊಟ್ಟು, ಯಜಮಾನನ ಮುಂದಿನ ಅಪ್ಪಣೆಗೆ ಕಾದು ನಿಂತಿದ್ದ. ಮೇರಿಯಸ್ ಆ ಪತ್ರವನ್ನೋದುವ ಮೊದಲೇ ಅದು ತೆನಾರ್ಡಿಯರನದೆಂದು ನಿಶ್ಚೈಸಿದ. ಆ ಪತ್ರದ ಬರಹ, ಕಾಗದದ ಮಾಸಲು ಬಣ್ಣ, ಅದು ಕಾರುತ್ತಿದ್ದ ಹೊಗೆಸೊಪ್ಪಿನ ವಾಸನೆ, ಎಲ್ಲವೂ ತೆನಾರ್ಡಿಯರನನ್ನೇ ಜ್ಞಾಪಿಸಿಕೊಡುತ್ತಿದ್ದುವು. ಪತ್ರ ಒಕ್ಕಣೆ :

"ಮಾನ್ಯರ್ ಬ್ಯಾರನ್ನರೇ!

ಈ ಪತ್ರದ ಉದ್ದೇಶ ನಮ್ಮ ಉಭಯತ್ರರ ಲಾಭವೇ ಆಗಿದೆ. ಮುಖ್ಯವಾಗಿ, ತಮ್ಮ ಮನೆಯಲ್ಲಿ ತಮ್ಮ ಜೊತೆಯಲ್ಲೇ ಇರುವ ಒಬ್ಬ ಹೀನವ್ಯಕ್ತಿಯ ಕುರಿತು ಮಾತಾಡಬೇಕಾಗಿದೆ. ತಮ್ಮ ಭೇಟಿಯಾದಲ್ಲಿ ಮುಂದಿನ ವಿವರಗಳನ್ನು ವಿಜ್ಞಾಪಿಕೊಳ್ಳುತ್ತೇನೆ.

ಇತಿ ವಿಜ್ಞಾನಶಾಸ್ತ್ರಕಲಾವಿದ ತೆನಾರ್ಡ್."

ಪತ್ರವನ್ನು ಓದಿದ ಬಳಿಕ ಮೇರಿಯಸ್ ಸ್ವಲ್ಪ ಬ್ಯಾಂಕು ನೋಟುಗಳನ್ನು ತನ್ನ ಜೇಬಿನಲ್ಲಿ ತುರುಕಿಕೊಂಡು, ತೆನಾರ್ಡಿಯರನನ್ನು ಒಳಗೆ ಕರೆತರುವಂತೆ ಬಾಸ್ಕನಿಗೆ ಅಪ್ಪಣೆಯಿತ್ತ.

ಬಾಸ್ಕ ತೆನಾರ್ಡಿಯರನನ್ನು ಒಳಗೆ ಕರೆತರುವುದರ ಬದಲು ಮತ್ತೊಬ್ಬನನ್ನು ಕರೆತಂದು ನಿಲ್ಲಿಸಿದ. ಬಂದವನ ಮುಖ, ನಿಲವು, ಅವನು ಮೇರಿಯಸನಿಗೆ ನಮಸ್ಕರಿಸುತ್ತ ವಂದಿಸುವಾಗ ಹೊರಟ ಸ್ವರ ಎಲ್ಲವೂ ಬೇರೊಬ್ಬನದಾಗಿತ್ತು. ಮೇರಿಯಸ್ ಇದರಲ್ಲಿ ಏನೋ ವಂಚನೆ ಇರಬೇಕೆಂದು ಊಹಿಸಿ, "ನಿಮಗೆ ನನ್ನಿಂದೇನಾಗಬೇಕು, ಬೇಗ ತಿಳಿಸಿ," ಎಂದು ಬಿರುಸಾಗಿಯೇ ಮಾತಾಡಿದ.

"ಮಾನ್ಯರ್ ಬ್ಯಾರನ್ನರೇ, ದಕ್ಷಿಣ ಅಮೆರಿಕದಲ್ಲಿ ಲ'ಜೋಯ್ ಎಂಬ ಹಳ್ಳಿಯಿದೆ . . ."

ಅಷ್ಟು ಹೇಳುವಾಗಲೇ ಮೇರಿಯಸನೆಂದ, "ಅದೆಲ್ಲ ಇಲ್ಲಿಗೇನು ಸಂಬಂಧ? ನಿಮಗಾಗ ಬೇಕಾದದ್ದೇನು?"

"ಇಲ್ಲಿ ನಮ್ಮ ವೃತ್ತಿಯಿಂದ ನನ್ನ ಸಂಸಾರ ಸುಖವಾಗಿ ಜೀವಿಸಲು ಅಸಾಧ್ಯವಾಗಿರುವುದರಿಂದ ನಾನೂ ನನ್ನ ಪತ್ನಿಯೂ ಒಬ್ಬಳು ಮಗಳೂ ಆ ಊರಿಗೆ ಹೋಗಿ ನೆಲಸಬೇಕಾಗಿದೆ, ಮತ್ತೆ ....."

"ಅದಕ್ಕೆ ನನ್ನಿಂದಾಗಬೇಕಾದುದೇನು? ಅದನ್ನು ಹೇಳಿ," ಅಂದ ಮೇರಿಯಸ್.

"ತಮಗೆ ಪ್ರಯೋಜನವಿರುವ, ಬಹು ಅಮೂಲ್ಯವಾದ, ಆಧಾರಯುತವಾದ, ನನಗೆ ಮಾತ್ರ ಗೊತ್ತಿರುವ, ಕೆಲವು ವರ್ತಮಾನಗಳನ್ನು ಪ್ರತಿಫಲಕ್ಕಾಗಿ ತಮಗೆ ಮಾರಲು ಬಂದಿದ್ದೇನೆ. ಈ ಪರಸ್ಪರ ಲಾಭದಾಯಕವಾದ ವ್ಯವಾಟದಲ್ಲಿ ನೀವು ಸಹಾಯನೀಡಬೇಕು," ಅಂದ ಆಗಂತುಕ.

"ಪ್ರಯೋಜನದ ವಿಷಯವೇನು, ತಿಳಿಸಿ."

"ಖೂನಿ ಮತ್ತು ದರೋಡೆ ಮಾಡಿರುವ, ಅದೂ ಸದ್ಯವೇ ಮಾಡಿರುವ, ಒಬ್ಬ ವ್ಯಕ್ತಿ ತಮ್ಮ ಮನೆಯಲ್ಲಿ ವಾಸವಾಗಿದ್ದಾನೆ. . ."

"ನಮ್ಮ ಮನೆಯಲ್ಲೇ? ಏನು? ಅವನ ಹೆಸರು?" ಎಂದು ಚಕಿತನಾಗಿ ಮೇರಿಯಸ್ ಕೇಳಿದ.

"ಯಾವುದಕ್ಕೂ ಪ್ರತಿಫಲದ ಮೊಬಲಗನ್ನು ದಯಮಾಡಿ ತಿಳಿಸಿ."

"ಹೆಸರೇನು ತಿಳಿಸಿ, ಮೊದಲು, ಅನಂತರ ಬೇಕಾದರೆ ಪ್ರತಿಫಲ ನಿಶ್ಚೈಸೋಣ, ಇತರ ರುಜುವಾತುಗಳಾದ ಮೇಲೆ," ಅಂದ ಮೇರಿಯಸ್.

"ಹೆಸರು ಜೀನ್‌ವಾಲ್‌ಜೀನ್," ಎಂದು ಬಂದ ವ್ಯಕ್ತಿ ಹೇಳಿದ.

"ಅದು ಗೊತ್ತಿದೆ," ಎಂದು ಮೇರಿಯಸ್ ಉತ್ತರವಿತ್ತ.

"ಅವನು ಗ್ಯಾಲಿ ಜೈಲುವಾಸಿ."

"ಅದೂ ಗೊತ್ತಿದೆ. ಹತ್ತೊಂಬತ್ತು ವರ್ಷ ಜೈಲಿನಲ್ಲಿದ್ದ."

"ಅಷ್ಟೇ ಅಲ್ಲ, ಬ್ಯಾರನ್ನರೇ! ಮೇಡಮ್ ಬ್ಯಾರೆನ್ನರ ಅತುಳೈಶ್ವರ್ಯ ಬಂದದ್ದು ಹೇಗೆಂದೂ ಗೊತ್ತಿದೆ. ಆ ವ್ಯಕ್ತಿಯ ವಂಚನೆ ಅದರಲ್ಲಿದೆ. ನನ್ನ ಪ್ರತಿಫಲ ಕೇವಲ ೨೦,೦೦೦ ಫ್ರ್ಯಾಂಕ್. ನಾನು ಹೇಳಲೇ ಮುಂದೆ?"

"ಆ ವಿಷಯವೂ ಗೊತ್ತಿದೆ."

"ನನಗೆ ಗೊತ್ತಿರುವಷ್ಟು ನಿಮಗೆ ಗೊತ್ತಿರಲು ಕಾರಣವಿಲ್ಲ, ಬ್ಯಾರನ್ನರೇ. ಕೇವಲ ೧೦೦೦ ಫ್ರ್ಯಾಂಕಾದರೂ ಕೊಡುವಿರೇನು ?"

"ವಿಶೇಷ ಮಾತುಗಳಿಂದ ಯಾರಿಗೂ ಲಾಭವಿಲ್ಲ."

"೨೦ ಫ್ರ್ಯಾಂಕನ್ನಾದರೂ ಕೊಡುವಿರೇನು?"

"ಇಂಥ ಪ್ರಯತ್ನಗಳೆಲ್ಲ ನನ್ನಲ್ಲಿ ನಡೆಯದು. ನಿಮ್ಮ ಯೋಗ್ಯತೆ, ಚರಿತ್ರೆಯನ್ನೆಲ್ಲ ನಾನು ಬಲ್ಲೆ. ನೀವು ಮೊಂಟ್‌ಫರ್ಮಿಯಲಿಯ ಹೋಟೇಲುಗಾರರು, ದಿನ ಕೂಲಿ ಜೊಂಡ್ರೆಟೆ, ನಾಟಕ ಕಲಾವಿದ ಫೆಬೆಂಟೌ, ಕವಿ ಗೆನ್‌ಫ್ಲಟ್, ಸ್ಪೈನಿನ ಆಲ್ವರಿಸ್, ಮೇಡಮ್ ಬೆಲಿಸಾರ್ಡ್, ಈಗ ವಿಜ್ಞಾನಶಾಸ್ತ್ರ ಕಲಾವಿದ ತೆನಾರ್ಡ್. ಆದರೆ, ಮೂಲದಲ್ಲಿ ಮಹಾಪಾಪಿ ತೆನಾರ್ಡಿಯರ್," ಹೀಗೆಂದುಕೊಂಡು ೫೦೦ ಫ್ರ್ಯಾಂಕಿನ ಒಂದು ನೋಟನ್ನು ತೆಗೆದು ತೆನಾರ್ಡಿಯರನ ಮುಖಕ್ಕೆ ಬಿಸಾಡಿದ. ಅನಂತರ ಹೇಳಿದ, "ಇನ್ನು ವಿಳಂಬಿಸದೆ ಇಲ್ಲಿಂದ ಹೊರನಡೆಯಿರಿ."

ಆ ವ್ಯಕ್ತಿ ನೋಟನ್ನು ಪರೀಕ್ಷಿಸಿ ನೋಡಿದ. ತಾನು ಕಡಿಮೆ ಪರಿಮಾಣದಲ್ಲಿ ಅಪೇಕ್ಷಿಸಿದಾಗಲೇ, ಸಿಟ್ಟು, ಹೆಚ್ಚು ಹೆಚ್ಚು ಬಂದ ಹಾಗೆ ಹಣವನ್ನು ಹೆಚ್ಚು ಹೆಚ್ಚಾಗಿ ಎಸೆಯುವ ವ್ಯಕ್ತಿಯನ್ನೂ ಪರೀಕ್ಷಿಸಿದ. ತನ್ನ ಗುರುತು ಸಿಕ್ಕಬಾರದೆಂದು ಮಾಡಿಕೊಂಡಿದ್ದ ಉಪಕರಣಗಳನ್ನು ತೆಗೆದು, ತೆನಾರ್ಡಿಯರ್ ಪ್ರತ್ಯಕ್ಷ ತೆನಾರ್ಡಿಯರನಾಗಿಯೇ ಮೇರಿಯಸ್ ಎದುರು ನಿಂತ. ಜೀನ್‌ವಾಲ್

ಜೀನನ ಜೀವನಚರಿತ್ರೆಯ ಕೆಲವಂಶ, ಸುರಂಗದಡಿಯಿಂದ ಜೀನ್‌ವಾಲ್‌ಜೀನ್ ಹೆಣ ಹೊತ್ತು ಕೊಂಡು ಬಂದಿದ್ದ ಸಂದರ್ಭ ಇವನ್ನೆಲ್ಲ ಚಿತ್ರಿಸಿ, ಕಥೆ ಹೆಣೆದು, ತನ್ನ ಬುದ್ಧಿಯಿಂದ ಹಣಸಂಪಾದಿ ಸಲು ಬಂದಾತ ಮೇರಿಯಸನ ಎದುರು, ಇವನು ಸಂಗ್ರಹಿಸಿದ್ದ ಚರಿತ್ರೆಯ ಅನುಭವದ ಎದುರು, ಸೋಲತೊಡಗಿದ. ಹಾಗಾಗಿಯೇ ಸುಲಭದಲ್ಲಿ ಅಲ್ಲಿಂದ ತೊಲಗಬಾರದೆಂದು ನಿಶ್ಚೈಸಿಕೊಂಡ.

ಇತ್ತ ಮೇರಿಯಸನ ಪರಿಸ್ಥಿತಿಯೂ ಅಸ್ತವ್ಯಸ್ತವಾಗಿತ್ತು. ತನ್ನ ತಂದೆಯ ಜೀವರಕ್ಷಕನೇ ಇಂದು ತನ್ನೆದುರು ಬಂದು ನಿಂತಿದ್ದರೂ ಅವನನ್ನು ನೋಡಿದಷ್ಟೂ ಅವನ ಮೇಲೆ ಜುಗುಪ್ಸೆ, ತಾತ್ಸಾರ ಹೆಚ್ಚಾಗುತ್ತಿದ್ದುವು. ತನ್ನ ಸಿಟ್ಟು ತಡೆಯಲಾರದೆ ಹಣವನ್ನೇ ಆದರೂ ತೆನಾರ್ಡಿಯರನ ಮುಖಕ್ಕೆ ಎಸೆಯುತ್ತಿದ್ದ. ತಂದೆಯ ಋಣ ಸಂದಾಯದ ಒಂದು ಸಂದರ್ಭವಲ್ಲದಿದ್ದರೆ ಅವನು ತೆನಾರ್ಡಿಯರನ ಕುರಿತು ಕೈಕೊಳ್ಳುವ ಕಾರ್ಯವೇ ಬೇರೆಯಿತ್ತು. ಈಗ ಅವನೆದುರಿಗಿದ್ದ ದುಃಖ ಇನ್ನೊಂದು ಹೊಸತರದ್ದಾಗಿದ್ದಿತ್ತು. ತಂದೆಯ ಜೀವರಕ್ಷಕ ಎದುರೇ ನಿಂತಿದ್ದರೂ ತನ್ನ ಜೀವರಕ್ಷಕನ ಪತ್ತೆ ಇನ್ನೂ ಆಗಲಿಲ್ಲವಲ್ಲ ಎಂಬುದೇ ಆ ದುಃಖ. ಆದ್ದರಿಂದಲೇ ಈ ಕುಮಾರ್ಗಿ ತೆನಾರ್ಡಿಯರನಿಂದಲೇ ಆದರೂ ತನ್ನ ಜೀವರಕ್ಷಕನ ಗುರುತು ಸಿಕ್ಕಬಹುದೇ ಎಂದು ಮೇರಿ ಯಸನಲ್ಲೊಂದು ಕಿರು ಆಸೆ ಇತ್ತು. ಅದಕ್ಕಾಗಿ ಸ್ವಲ್ಪ ಸೌಮ್ಯವಾಗಿ ತೆನಾರ್ಡಿಯರನನ್ನು ಕುರಿತು, "ಜೀನ್‌ವಾಲ್‌ಜೀನ್ 'ದರೋಡೆಕಾರ ಮತ್ತು ಖೂನಿಗಾರ' ಎಂದು ಹೇಳಿದಿರಲ್ಲ ಅದು ಹೇಗೆಂದು ತಿಳಿಸಿ," ಅಂದ.

"ಖೂನಿಕಾರನಾದುದು ಮೊದಲು, ಮತ್ತೆ ಮಾಡಿದ್ದು ದರೋಡೆ. ಅದನ್ನೆಲ್ಲ ತಿಳಿಸುವೆನು," ಎಂದು ತೆನಾರ್ಡಿಯರ್ ತನ್ನ ಮಾತನ್ನು ಮುಂದುವರಿಸತೊಡಗಿದ. ಆಗ ಮೇರಿಯಸ್, ಮಧ್ಯೆ ಮಾತನ್ನು ನಿಲ್ಲಿಸಿ, "ಅಲ್ಲ, ನೀವು ಹೇಳುವ ಕ್ರಮ ಸರಿಯಲ್ಲ. ದರೋಡೆ ಆದುದು ಮೊದಲು, ಆ ವಿಷಯವನ್ನು ನಾನು ಸ್ವಲ್ಪ ತಿಳಿಸುತ್ತೇನೆ. ನೋಡಿ, ಮಾನ್ಸರ್ ಮೆಡಲೀನ್ ಎಂಬವರೊಬ್ಬರು ಬಳೆಯ ಕಾರ್ಖಾನೆ ತೆರೆದು, ಬಡವರ ಬಂಧುಗಳಾಗಿ, ಪಾಪಿಗಳ ಉದ್ಧಾರಕ್ಕಾಗಿ, ರೋಗಿಗಳ ಚಿಕಿತ್ಸಕರಾಗಿ, ಅನಾಥರ ಆಶ್ರಯದಾತರಾಗಿ, ಎಂ. ಪಟ್ಟಣದ ಗೌರವಾನ್ವಿತ ದಕ್ಷ ಮೇಯರರಾಗಿ, ಕೀರ್ತಿ, ಪ್ರತಿಷ್ಠೆಗಳನ್ನು ಬುದ್ಧಿಪೂರ್ವಕ ತ್ಯಜಿಸಿ, ಬಡವರಂತೆ ದುಡಿಯುತ್ತ ಬದುಕಿ, ಲಕ್ಷಾಂತರ ಫ್ರ್ಯಾಂಕ್ ಹಣ ಸಂಪಾದಿಸಿ, ಊರನ್ನೇ ಅಭಿವೃದ್ಧಿಗೊಳಿಸಿ, ಉಳಿದ ತಮ್ಮ ಹಣವನ್ನು ಲೆಫಿಟ್ಟೆ ಬ್ಯಾಂಕಿನಲ್ಲಿ ಲಕ್ಷಾಂತರವಾಗಿ ಠೇವಣಿ ಇಟ್ಟಿದ್ದರು. ಆದರೆ, ಜೀನ್‌ವಾಲ್‌ಜೀನ್ ಸುಳ್ಳು ದಸ್ಕತು ಮಾಡಿ, ಅಂದರೆ ಮಾನ್ಸರ್ ಮೆಡಲೀನರ ದಸ್ಕತ್ತನ್ನು ತಾನು ಹಾಕಿ, ಲೆಫಿಟ್ಟೆಬ್ಯಾಂಕಿನಿಂದ ಆ ಹಣವನ್ನೆಲ್ಲ ಲಪಟಾಯಿಸಿದ. ಆ ದರೋಡೆಯಾದನಂತರ ಮಾಡಿದ್ದು ಒಂದು ವಿಧದ ಖೂನಿ. ಕ್ರಾಂತಿಕಾರರು ಕೈದು ಮಾಡಿಟ್ಟಿದ್ದ ಇನ್‌ಸ್ಪೆಕ್ಟರ್ ಜೇವರ್ಟರನ್ನು ನನ್ನೆದುರೇ ನಡೆಸಿಕೊಂಡು ಹೋಗಿ ಪಿಸ್ತೂಲಿನಿಂದ ಕೊಂದಿರುವನು. ಇದಕ್ಕೆ ನನ್ನ ಕಿವಿಯೇ ಸಾಕ್ಷಿ. ವಿಷಯಗಳೆಲ್ಲ ಹೀಗಿರುವಾಗ, ಇದಕ್ಕಿಂತ ಹೊಸತೇನಾದರೂ ಇದ್ದರೆ ತಿಳಿಸಿ," ಅಂದ ಮೇರಿಯಸ್.

ತೆನಾರ್ಡಿಯರ್ ಆಗ ಗೆದ್ದವನು ತಾನೇ ಎಂಬಂತೆ ತೋರಿಕೊಂಡು, ಸತ್ಯ ಹೊರತು ಅನ್ಯಥಾ ಏನನ್ನೂ ಹೇಳದಿರುವವನಂತೆ ಬಲು ಗಂಭೀರವಾಗಿ ಹೇಳಿದ, "ಈಗ ತಾವು ಹೇಳಿರುವ ವಿಷಯ ಪೂರ್ಣ ತಪ್ಪು. ತಮ್ಮಂಥ ಬ್ಯಾರನ್ನರನ್ನು 'ಪೂರ್ಣತಪ್ಪು' ಎಂದು ಪ್ರತಿಭಟಿಸಲು ಸಾಧಾರಣ ಧೈರ್ಯ ಸಾಲದು. ನನ್ನಲ್ಲಿರುವ ಬಲವಾದ ಆಧಾರಗಳಿಂದ ನನ್ನ ಮಾತನ್ನು ಪರಿಪೂರ್ಣವಾಗಿ ಸಮರ್ಥಿಸಬಲ್ಲೆ. ನಮ್ಮಂಥವರು ಯಾರ ಮೇಲೂ ಇಲ್ಲದ ಸಲ್ಲದ ಆರೋಪಗಳನ್ನು ಮಾಡ ಕೂಡದು. ಜೀನ್‌ವಾಲ್‌ಜೀನನಂಥವನ ಮೇಲಾದರೂ ಇಲ್ಲದ ಆರೋಪಗಳನ್ನು ಮಾಡಲಾರೆ.

ನನ್ನ ಕಡೆಯ, ಸಾಧಾರವಾದ, ವರ್ತಮಾನ ಹೀಗಿದೆ, ನೋಡಿ ಎಂ. ಪಟ್ಟಣದ ಮೇಯರರೂ ಪೊಲೀಸರ ಬೆದರಿಕೆಯಲ್ಲಿದ್ದರು. ಇದಕ್ಕೆ ಕೋರ್ಟ್ ಋಜುವಾತುಗಳಿವೆ. ಅವರು ಕೋರ್ಟಿನಲ್ಲೇ, ಒಮ್ಮೆ ಕಾಣಿಸಿಕೊಂಡು, ಅನಂತರ, ಮಾಯವಾಗಿರುತ್ತಾರೆ. ಅನಂತರ ಪೊಲೀಸ್ ತನಿಖೆ ನಡೆದು 'ಮೆಡಲೀನ್' ಎಂಬ ಹೆಸರೇ ಕೃತಕವೆಂದೂ ನಡೆಸಿದ ಕಾರ್ಯಭಾರಗಳೆಲ್ಲ ಜೀನ್‌ವಾಲ್‌ಜೀನ ನೆಂದೂ ಸರಕಾರವೇ ಕಂಡುಹಿಡಿದಿದೆ. ಆದ್ದರಿಂದ, ಮೆಡಲೀನ್, ಜೀನ್‌ವಾಲ್‌ಜೀನ್ ಎಂಬ ಭೇದವಿಲ್ಲ. ಮೆಡಲೀನರನ್ನು ಗ್ರಹಿಸಿದರೆ ಅನ್ಯಾಯ ವಿಶೇಷ ನಡೆದದ್ದಿಲ್ಲ. ಮತ್ತೆ, ಜೇವರ್ಟರನ್ನು ಜೀನ್‌ವಾಲ್‌ಜೀನ್ ಕೊಲ್ಲಲಿಲ್ಲ. ಕ್ರಾಂತಿಕಾರರ ಎದುರಿನಿಂದ ಮರೆಗೆ ಕರೆದುಕೊಂಡು ಹೋಗಿ, ಜೀನ್‌ವಾಲ್‌ಜೀನ್ ಜೇವರ್ಟರಿಗೆ ಜೀವದಾನಮಾಡಿ, ಕ್ರಾಂತಿಕಾರರಿಗೆ ನಂಬಿಕೆಯುಂಟಾಗ ಲೋಸ್ಕರ ಪಿಸ್ತೂಲನ್ನು ಹಾರಿಸಿರುವರು. ಜೇವರ್ಟರು ಆತ್ಮಹತ್ಯೆ ಮಾಡಿಕೊಂಡು ಸತ್ತರು. ಅವರು ತಮ್ಮ ಮೇಲಧಿಕಾರಿಗೆ ಸಾಯುವ ಮೊದಲೇ ಬರೆದಿದ್ದ ವರದಿಯಲ್ಲಿ ಈ ಎಲ್ಲ ವಿವರ ಗಳಿವೆ. ಈ ಬಗ್ಗೆ, ಇಲ್ಲಿ ನೋಡಿ," ಎಂದು ಹೇಳಿ ಮಾನ್ಯರ್ ಮೆಡಲೀನರ ಕುರಿತಾಗಿ ವರದಿಯಿದ್ದ ಜುಲೈ ೨೫, ೧೮೨೩ರ 'ಡ್ರಾಪ್ಲ್ಯೂಬ್ಲೇಂಕ್' ಎಂಬ ಪತ್ರಿಕೆಯನ್ನೂ, ಜೇವರ್ಟನ ಅಂತ್ಯದ ಕುರಿತಾಗಿ ವರದಿಯಿದ್ದ ಜೂನ್ ೬, ೧೮೩೨ರ 'ಮಾನಿಟರ್' ಪತ್ರಿಕೆಯನ್ನೂ ಮೇರಿಯಸನಿಗೆ ಕೊಡುತ್ತ ಹೇಳಿದ, "ಒಂದು ಸತ್ಯ ಕಾಪಾಡಲು ಎಷ್ಟೆಲ್ಲ ಸಂಶೋಧನೆ ಮಾಡಿರುತ್ತೇನೆ, ಕೆಲಸ ಮಾಡಿರುತ್ತೇನೆ ಎಂಬುದು ತಮಗೆ ಗೊತ್ತಾಗಬಹುದು."

ಪತ್ರಿಕೆಗಳನ್ನೋದಿ ಮೇರಿಯಸನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಹಠಾತ್ತನೆ ಅವನಿಗೆ ಜೀನ್‌ವಾಲ್‌ಜೀನ್ ಪರಮ ಪಾವನಮೂರ್ತಿಯಾಗಿ ತೋರಿದ. ನರಕದಲ್ಲಿದ್ದವನೇ ಸ್ವರ್ಗ ದಿಂದಿಳಿದು ಬಂದು ತನ್ನನ್ನು ಭ್ರಮೆಗೊಳಿಸಿದ. ಮೇರಿಯಸನಿಗೆ ಆಶ್ಚರ್ಯದ ಜೊತೆ ಆನಂದವೂ ಉಂಟಾಯಿತು. ಅವನ ಮುಖದಲ್ಲಿ ಸಂತೋಷ ಹೊಮ್ಮಿ, ಅವನನ್ನು ತನ್ನ ಬಲೆಯೊಳಗೆ ಬೀಳಿಸಿ ಕೊಳ್ಳಲೋಸ್ಕರ, ತೆನಾರ್ಡಿಯರ್ ತನ್ನ ಮುಂದಿನ ಮಾರ್ಗ ಯೋಚಿಸತೊಡಗಿದ. ಆಗ ಮೇರಿ ಯಸ್ ನಗುತ್ತ, "ನೀವು ಇಷ್ಟೆಲ್ಲ ಹೇಳಿದಿರಲ್ಲ, ಏನಂದ ಹಾಗಾಯ್ತು? ನಿಮ್ಮ ವಿರೋಧಿಯನ್ನು ಕುರೂಪವಾಗಿ ಚಿತ್ರಿಸಲು ಹೊರಟು ಜಾಜ್ವಲ್ಯಮಾನನನ್ನಾಗಿ ಚಿತ್ರಿಸಿದ ಹಾಗಾಗಲಿಲ್ಲವೆ? ನಿಮ್ಮ 'ಖೂನಿ,' 'ದರೋಡೆ' ಎಲ್ಲಿವೆ ?" ಎಂದು ಪ್ರಶ್ನಿಸಿದ.

ತೆನಾರ್ಡಿಯರ್ ಸೋತವನಂತೆ ತೋರಲಿಲ್ಲ. ತನ್ನ ಗೆಲುವಿನಲ್ಲಿ ಅತುಳ ಧೈರ್ಯ ತಳೆದು ಹೇಳತೊಡಗಿದ, "ತಾವು ಕೇಳಬೇಕು, ಬ್ಯಾರನ್ನರೇ. ಜೀನ್‌ವಾಲ್‌ಜೀನ್ ಜೂನ್ ೬, ೧೮೩೨ರ ಸಂಜೆ ಈ ನಗರದ ಕಶ್ಮಲವಾಹಕ ಸುರಂಗದೊಳಗೆ ಒಬ್ಬ ಪರದೇಶದ ಹಣವಂತ ಯುವಕನನ್ನು ಖೂನಿಮಾಡಿ, ಆ ಹೆಣವನ್ನು ಸೀಯನ್ ನದಿಗೆ ಎಸೆಯಲೋಸ್ಕರ, ಸುರಂಗದಲ್ಲೇ ನುಸುಳುತ್ತಿದ್ದ. ಹಣಕ್ಕಾಗಿ ಅಲ್ಲದಿದ್ದರೆ ತನ್ನ ಜೀವದಾಸೆ ಬಿಟ್ಟು ಇನ್ನೊಬ್ಬರ ಹೆಣವನ್ನು ಏಕೆ ತಾನೆ ಅವನು ಸಾಗಿಸಬೇಕಿತ್ತು? ಅವನು ಈ ಖೂನಿಯ ಕುರುಹು ಪೊಲೀಸರಿಗೆ ಸಿಕ್ಕಬಾರದೆಂದು ತನ್ನ ಜೀವ ಉಳಿಸಿಕೊಳ್ಳಲು ಸುರಂಗದೊಳಗೇ, ಅಡಗಿ ಹೆಣ ಸಾಗಿಸಿದ. ಆಗ ನಾನು ಸುರಂಗದ ಬಾಗಿಲಲ್ಲಿದ್ದೆ, ಅವನನ್ನು ನಾನು ಗುರುತು ಹಿಡಿದೆ. ಆ ಹೆಣದ ಕೋಟಿನಿಂದ ತುಂಡು ಬಟ್ಟೆಯನ್ನು, ಮುಂದೆ ಪ್ರಯೋಜನ ಬೀಳಬಹುದೆಂದು, ಆಗಲೇ ನಾನು ಕತ್ತರಿಸಿಟ್ಟಿರುತ್ತೇನೆ. ಅಲ್ಲಿಗೆ ನಾನು ಏಕೆ ಹೋಗಿದ್ದೆ, ಹೇಗೆ ಎಂಬೆಲ್ಲ ಪ್ರಶ್ನೆ ಪ್ರಕೃತ ಅಪ್ರಸಂಗವಾಗಿದೆಯಷ್ಟೆ. ಆ ಬಟ್ಟೆತುಂಡನ್ನು ಬೇಕಾ ದರೆ ಪರೀಕ್ಷಿಸಿ ನೋಡಿ—ಶ್ರೀಮಂತ ಯುವಕನ ಕೋಟಿನ ಬಟ್ಟೆ ಇದು," ಎಂದು ಹೇಳಿ ಅದನ್ನು ಕಾಗದದೊಳಗಿಂದ ಬಿಚ್ಚಿ ಮೇರಿಯಸನಿಗೆ ಕೊಟ್ಟ.

ಮೇರಿಯಸ್ ಅದನ್ನು ಕಂಡು, ಅದರ ಮೇಲಿಂದ ಕಣ್ಣು ತೆಗೆಯದೇ, ತನ್ನ ಕಪಾಟಿನೊಳಗಿದ್ದ ಒಂದು ಕೋಟನ್ನು ತೆಗೆದು ನೆಲದಲ್ಲಿ ಹಾಸಿ, ಅದರಲ್ಲಿ ಆಗಿದ್ದ ಕಂಡಿಗೆ ಆ ತುಂಡನ್ನು ಇಟ್ಟು ನೋಡಿದ. ಅನಂತರ ತೆನಾರ್ಡಿಯರನನ್ನು ನೋಡಿ, "ಸರಿ, ಈ ಹರಕುತುಂಡು ಈ ಕೋಟಿನದೇ ಹೌದು. ಆ ಹೊತ್ತು ಖೂನಿಯಾದವ ಅಂದಿರಲ್ಲ. ಆ ಯುವಕನೇ ನಾನು! ನನ್ನನ್ನು ರಕ್ಷಿಸಿದವನೇ ಜೀನ್‌ವಾಲ್‌ಜೀನ್. ನೀನು ಮಹಾ ಪಾಪಿ, ನರಾಧಮಾ! ಆ ಹೊತ್ತು ಜೋಂಡ್ರೆಟೆಯಾಗಿ ಜೀನ್ ವಾಲ್‌ಜೀನನನ್ನು ಹಿಂಸಿಸಿದ ಕಟುಕ ನೀನಲ್ಲವೇ?" ಎಂದು ತೆನಾರ್ಡಿಯರನ ಮುಖಕ್ಕೆ ೧೦೦೦ ಫ್ರ್ಯಾಂಕ್ ನೋಟುಗಳನ್ನು ಎಸೆದು ಗಡಸು ಧ್ವನಿಯಲ್ಲಿ, "ವಾಟರ್ಲೂ ಯುದ್ಧವೊಂದು ಜರಗ ದಿರುತ್ತಿದ್ದರೆ ನಾನು ನಿನ್ನನ್ನು ಶಿಕ್ಷಿಸದೆ ಬಿಡುತ್ತಿರಲಿಲ್ಲ," ಎಂದು ಹೇಳಿ ಮತ್ತೂ ೧೦೦೦ ಫ್ರ್ಯಾಂಕ್ ನೋಟನ್ನು ಎಸೆದ. ತೆನಾರ್ಡಿಯರ್ ವೃಷ್ಟಿಯಾಗುತ್ತಿದ್ದ ನೋಟುಗಳನ್ನೆಲ್ಲ ಹೆಕ್ಕಿ ತೆಗೆದುಕೊಳ್ಳು ತ್ತಿದ್ದ. ಆಗ ಪುನಃ ಮೇರಿಯಸ್ ಹೇಳಿದ, "ನಿನ್ನ ಹೆಂಡತಿ ಬದುಕಿರುವಳೆಂಬುದು ಸುಳ್ಳು. ನೀನು ಅಮೆರಿಕಕ್ಕೆ ತಲಪಿ, ಈ ಊರು ಪರಿಶುದ್ಧವಾದನಂತರ ಮಾತ್ರ, ನಿನಗೆ ಸಿಕ್ಕುವಂತೆ—ನನ್ನ ತಂದೆಯ ಋಣ ಸಂದಾಯಕ್ಕಾಗಿ ಇನ್ನೂ ೨೦,೦೦೦ ಫ್ರ್ಯಾಂಕ್ ಹಣ ಕೊಡುವ ಏರ್ಪಾಡು ಮಾಡುವೆನು ಮೂರ್ಖ! ಪೋಲಿ! ನನ್ನೆದುರು ನಿಲ್ಲದಿರು—ತೊಲಗು, ಇಲ್ಲಿಂದ."

ತೆನಾರ್ಡಿಯರ್ ಮಾತಾಡದೆ ಹೊರಟು ಹೋದ. ಅವನ ಚರಿತ್ರೆಯನ್ನು ಇಲ್ಲೇ ಮುಗಿಸಿ ಕೈ ತೊಳೆದುಕೊಳ್ಳುವುದು ಉತ್ತಮವೆಂದು ಕಾಣತ್ತದೆ. ತಾಮಸಿಗಳಿಗೆ ತ್ರಾಣಬಂದಂತೆ ಅಧಿಕಾಧಿಕ ತಾಮಸಿಗಳಾಗುತ್ತಾರೆಂಬುದು ನಿಜ. ತೆನಾರ್ಡಿಯರ್ ಅಮೆರಿಕಕ್ಕೆ ಹೋಗಿ, ಮೇರಿಯಸನ ವಾಗ್ದಾನದ ಹಣವನ್ನು ಪೂರಾ ಪಡೆದುಕೊಂಡ. ಈ ಹಣದಿಂದ ತೆನಾರ್ಡಿಯರ್ ಅಲ್ಲಿಯ ಆದಿವಾಸಿಗಳನ್ನು ಬೇಟೆ ಹಿಡಿದು ಯೂರೋಪ್ ಅಮೆರಿಕದೊಳಗಿನ ಗುಲಾಮ ವ್ಯಾಪಾರವನ್ನು ಕುದುರಿಸಿಕೊಂಡ.

ತೆನಾರ್ಡಿಯರನಿಗೂ ಮೇರಿಯಸನಿಗೂ ಈ ರೀತಿ ಮಾತುಗಳು ನಡೆಯುತ್ತಿದ್ದಾಗ ಕೋಸೆಟ್ಟೆಯೂ ಗಿಲೆನಾರ್ಮಂಡನೂ ಉದ್ಯಾನವನದಲ್ಲಿ ತಿರುಗಾಡುತ್ತಿದ್ದರು. ಮೇರಿಯಸ್ ಅತಿ ತ್ವರೆಯಿಂದ ಒಂದು ಜಟಕ ಬರಮಾಡಿ ಅದರಲ್ಲಿ ಕೋಸೆಟ್ಟೆಯನ್ನೂ ಕುಳ್ಳಿರಿಸಿಕೊಂಡು, ರಸ್ತೆ ಯಲ್ಲೇ ಬಂಡಿಯನ್ನು ಓಡಿಸಿದ. ಕೋಸೆಟ್ಟೆ ಸ್ವಲ್ಪ ಗಾಬರಿಯಿಂದಲೂ ಏನೋ ಒಂದು ಇಂಗಿತದ ಕಾರಣವಾಗಿ ಆನಂದದಿಂದಲೂ ಕೇಳಿದಳು, "ಮಾನ್ಸ್ಯರ್ ಜೀನರ ಮನೆಗೆ ತಾನೆ?"

ಅದಕ್ಕೆ ಮೇರಿಯಸ್, "ನಿನ್ನ ತಂದೆಯವರ ಮನೆಗೆ ನಿನ್ನ ಪರಮಪೂಜ್ಯ ತಂದೆಯವರ ಮನೆಗೆ" ಎಂದು ಹೇಳುತ್ತ ತಾನು ಕೋಸೆಟ್ಟೆಗೆ ಬರೆದಿದ್ದ ಪತ್ರವನ್ನು ಈಕೆಗೆ ತಲಪಿಸದೆ ತಾನೇ ತೆಗೆದು ಕೊಂಡು, ತಡೆಗೋಡೆಗೆ ಬಂದು ತನ್ನನ್ನು ರಕ್ಷಿಸಿ, ಮತ್ತು ಮುಂದೆ ನಡೆಸಿದ, ಜೀನ್‌ವಾಲ್‌ಜೀನನ ಪ್ರೇಮಮಯ, ಪೂಜ್ಯ, ಧರ್ಮಯುತ ಕಾರ್ಯಗಳನ್ನು ಹೇಳತೊಡಗಿದ. ಮೇರಿಯಸನ ಈ ತೆರನಾದ ಉದ್ವೇಗ, ದುಃಖ ಪಶ್ಚಾತ್ತಾಪಯುತ ಮಾತು ಉರುಳಿದಂತೆಯೇ ಬಂಡಿಯ ಗಾಲಿಗಳೂ ಭರದಿಂದ ಉರುಳುತ್ತ ಅವರನ್ನು ಜೀನ್‌ವಾಲ್‌ಜೀನನ ಮನೆಯ ಕಡೆಗೆ ಸಾಗಿಸಿದುವು.

೪. ಮೃತ್ಯೋರ್ಮಾ ಅಮೃತಂಗಮಯ

ಕದ ತಟ್ಟಿದ ಸದ್ದು ಕೇಳಿ ಜೀನ್‌ವಾಲ್‌ಜೀನ್ ಕುಗ್ಗಿದ ಕಂಠದಿಂದ, "ಒಳಗೆ ಬನ್ನಿ," ಅಂದ. "ಅಪ್ಪಾ!" ಎಂದಂದುಕೊಂಡು ಕೋಸೆಟ್ಟೆ ಓಡಿಹೋಗಿ ಅವನನ್ನು ಅಪ್ಪಿಕೊಂಡಳು. "ಅಜ್ಜಾ!"

ಎಂದನ್ನುತ್ತ ಮೇರಿಯಸನೂ ಧಾವಿಸಿ ಹೋಗಿ ಮಂಚದ ಬಳಿ ನಿಂತ.

ಜೀನ್‌ವಾಲ್‌ಜೀನನ ಮುಖ ಬಲು ನಿಸ್ತೇಜವಾಗಿತ್ತು. ಅಷ್ಟೇ ಅಲ್ಲ, ಅದು ಸ್ವಲ್ಪ ಕ್ರೂರವಾಗಿಯೂ ಹೆಣದ ಮುಖದಂತೆಯೂ ಕಾಣುತ್ತಿತ್ತು. ಆದರೂ ಅವರಿಬ್ಬರನ್ನೂ ಕಂಡ ಆನಂದದಿಂದ ಅವನ ಕಣ್ಣುಗಳಲ್ಲಿ ಸ್ವಲ್ಪ ಹೊಳಪು ಬಂದಿತು.

ಇಬ್ಬರನ್ನೂ ಏಕಕಾಲದಲ್ಲಿ ಕಂಡು, ಅವರು ಪ್ರೀತಿಯಿಂದ ಕರೆದ ಮಾತು ಕೇಳಿ, "ಅಮ್ಮಾ ಕೋಸೆಟ್ಟೀ ಬಂದೆಯಾ! ನೀವಿಬ್ಬರೂ ನನ್ನನ್ನು ಕ್ಷಮಿಸಬೇಕು. ಕೋಸೆಟ್ಟೀ, ಮಾತಾಡಮ್ಮ! ಸ್ವಲ್ಪ ನಗು. ದೇವರು ನಮ್ಮನ್ನು ಕೈಬಿಟ್ಟನೆಂದು ನಾವು ತಿಳಿಯುವ ತಪ್ಪನ್ನು ತೋರಿಸುವುದಕ್ಕಾಗಿಯೇ ನೀವಿಬ್ಬರೂ ಇಲ್ಲಿಗೆ ಬಂದಿದ್ದೀರಿ. 'ನಾನು ಇನ್ನು ಕೋಸೆಟ್ಟಿಯನ್ನು ನೋಡುವ ಹಾಗಿಲ್ಲ' ಎಂದು ನೀವು ಬರುವುದಕ್ಕೆ ಕೊಂಚ ಮೊದಲು ಗ್ರಹಿಸಿದ್ದೆ. ನನ್ನ ದುಃಖದ ಗ್ರಹಿಕೆ ದೇವರಿಗೆ ಗೊತ್ತಾಗಿರಬೇಕು. 'ಆ ದೇವಕನ್ನೆ ಒಮ್ಮೆ ಅವನನ್ನು ನೋಡಿಬರಲಿ' ಎಂದು ಅವನಂದಿರಬೇಕು, ಕೋಸೆಟ್ಟಿ," ಎಂದು ಮೆಲ್ಲಮೆಲ್ಲಗೆ ಹೇಳಿದ.

ಕೋಸೆಟ್ಟಿ ಅಳುತ್ತಲೇ ಇದ್ದಳು. ಮೇರಿಯಸನ ಕಣ್ಣಿನಲ್ಲಿ ತುಂಬ ನೀರು ತುಂಬಿಕೊಂಡಿತು. ಕೋಸೆಟ್ಟಿ ದುಃಖದ ಭರದಲ್ಲೇ, "ಅಪ್ಪಾ! ನಮಗೆ ತಿಳಿಸದೆ ನೀನು ಇಲ್ಲೇ ಉಳಿದು ಬಿಟ್ಟೆಯಲ್ಲ! ನೀನು ಎಲ್ಲಿಗೋ ದೂರಹೋಗಿರಬೇಕೆಂದು ಗ್ರಹಿಸಿ ನಾವು ಈ ವರೆಗೆ ಸುಮ್ಮನಿದ್ದೆವು. ನಾವು ಈ ದಿನ ಆಕಸ್ಮಾತ್ತಾಗಿ ಬರುವಂತಾಯಿತು," ಎಂದು ಹೇಳಿದಳು.

ಆಗ ಜೀನ್‌ವಾಲ್‌ಜೀನ್ ಹೇಳಿದ, "ಕಳೆದು ಹೋದುದಕ್ಕೆ ನೀವು ಚಿಂತಿಸಬಾರದು. ನನ್ನನ್ನು ಕ್ಷಮಿಸಿ, ದೇವರ ದಯೆ ನನ್ನ ಮೇಲಿದೆಯೆಂದು ನೀವು ತೋರಿಸಿಕೊಟ್ಟದ್ದಕ್ಕೆ ನಿಮಗೆ ಅನೇಕ ವಂದನೆಗಳು."

ಮೇರಿಯಸ್ ಬಲುದುಃಖದಿಂದ ನುಡಿದ, "ಅಜ್ಜಾ! ನೀನು ನಮ್ಮನ್ನು ವಂದಿಸುವುದೇ? ನಮ್ಮಲ್ಲಿ ಕ್ಷಮಾಪಣೆಯನ್ನು ಕೇಳುವುದೇ? ಇದೆಂಥ ಕ್ರಮ! ನಿನ್ನ ಜೀವವನ್ನು ಹಗುರವಾಗಿ ಕಾಣುತ್ತ ಹೆಣದಂತಿದ್ದ ನನ್ನನ್ನು ಸಾಗಿಸಿ ನಮ್ಮ ಮನೆಗೆ ತಲಪಿಸಿದೆ. ಆದರೂ ನೀನು ಏನನ್ನೂ ಅರಿಯದವನಂತೆ ನಟಿಸಿದೆ! ನನ್ನ ಜೀವಕೊಟ್ಟುದರ ಜೊತೆಗೆ ನಿನ್ನ ಜೀವದಂತಿರುವ ಕೋಸೆಟ್ಟಿಯನ್ನೂ ನಿನ್ನ ನ್ಯಾಯಾರ್ಜಿತ ವಿಪುಲೈಶ್ವರ್ಯವನ್ನೂ ನನಗೆ ಕೊಟ್ಟೆ. ಜೇವರ್ಟನನ್ನು ಕೊಂದಂತೆ ನಟಿಸಿ, ಅವನ ಜೀವ ಉಳಿಸಿದೆ. ಮಾನ್ಸ್ಯರ್ ಮೆಡಲೀನರಾಗಿ ದೇಶಸೇವೆ ಮಾಡಿ, ಯಾವ ಕೀರ್ತಿ ಪ್ರತಿಷ್ಠೆ ಸುಖಗಳನ್ನೂ ಅಪೇಕ್ಷಿಸದೆ—ನಮ್ಮ ಅಪರಾಧ ಸಹಸ್ರಗಳನ್ನು ಮನ್ನಿಸಿ—ನೀನೇ ತಪ್ಪಿತಸ್ಥನೆಂದು ಹೃತ್ಪೂರ್ವಕ ಹೇಳುತ್ತಿರುವ ಮಹಾತ್ಮನಾದ ನಿನ್ನ ಕ್ಷಮೆಯನ್ನು ನಾವು ಎಷ್ಟು ಬೇಡಿದರೂ ಸಾಲದು; ನಾವೆಷ್ಟು ಪಶ್ಚಾತ್ತಾಪಪಟ್ಟು, ನಿನ್ನ ಪಾದತಳದಲ್ಲಿ ಪೂಜೆ ನಡೆಸಿದರೂ ಸಾಲದು."

ಅದಕ್ಕೆ ಜೀನ್‌ವಾಲ್‌ಜೀನ್, "ಹಾಗೆ ಮಾಡದೆ ಬೇರೆ ಉಪಾಯವೇ ಇರಲಿಲ್ಲ. ಸಮಾಜದ ಕಟ್ಟುಕಟ್ಟಳೆಗಳನ್ನು ಅರಿತು, ಅನುಭವಿಸಿದ ನನಗೆ ಮಾತ್ರ ನನ್ನ ಹೀನತೆ ಎಷ್ಟೆಂದು ಗೊತ್ತು. ನನ್ನಂಥವರು ನಿಮ್ಮಂಥ ಗೌರವಸ್ಥರ ಜೊತೆಯಲ್ಲಿರುವುದು ಅಯೋಗ್ಯವೂ ಅಶುಭವೂ ಆಗಿದೆ. ನನ್ನ ಚರಿತ್ರೆಯನ್ನು ನಾನು ಪೂರ್ಣವಾಗಿ ನಿಮಗೆ ತಿಳಿಸಿದ್ದ ಪಕ್ಷದಲ್ಲಿ ನೀವು ನನ್ನನ್ನು ಬೇರೆ ಇರಲು ಬಿಡುತ್ತಿರಲಿಲ್ಲ. ಆದರೆ, ಈ ಜನ್ಮದಲ್ಲಿ ಮಾಸಿಹೋಗಲಾರದ ನನ್ನ ಹೀನತ್ವವನ್ನು ನಿಮ್ಮ ಸಂಸಾರದಲ್ಲಿ ಬೆರೆಸಬಾರದೆಂದೇ ನಾನು ನನಗೆ ಸಂಬಂಧಿಸಿದ ವಿಷಯವನ್ನು ಮಾತ್ರ ಗುಟ್ಟಾಗಿ ಇಟ್ಟೆ," ಅಂದ.

ಇಷ್ಟು ಹೊತ್ತಿಗೆ ವೈದ್ಯರು ಬಂದರು. ಅವರು ಜೀನ್‌ವಾಲ್‌ಜೀನನನ್ನು ಪರೀಕ್ಷೆಮಾಡಿ, ಕೋಣೆಯಿಂದ ಹೊರಗೆ ಹೋಗಿ, ಮೇರಿಯಸನ ಕಿವಿಯಲ್ಲಿ ಅಂದರು, "ಆ ಮುದುಕ ನಿಮ್ಮನ್ನು ನೋಡಬೇಕೆಂದು ಹಂಬಲಿಸುತ್ತಿದ್ದಿರಬೇಕು, ನಿಮ್ಮನ್ನು ಈಗ ಕಂಡದ್ದರಿಂದ, ತಾತ್ಕಾಲಿಕವಾಗಿ, ಸ್ವಲ್ಪ ಹುಷಾರಾಗಿರುವಂತೆ ಕಾಣುತ್ತಾರಷ್ಟೆ. ಈಗಿನ ಚೈತನ್ಯ ಹೆಚ್ಚುಕಾಲ ಉಳಿಯಲಾರದು. ಸದ್ಯವೇ ಅದು ನಿಲ್ಲಬಹುದು."

ಮೇರಿಯಸ್ ಕೋಸೆಟ್ಟೆಯರು ವೈದ್ಯರ ಹತ್ತಿರ ಮಾತಾಡುತ್ತಿದ್ದಾಗಲೇ ಜೀನ್‌ವಾಲ್‌ಜೀನ್ ಹಠಾತ್ತನೆ ತನ್ನ ಮಂಚದಿಂದೆದ್ದು ಹೋಗಿ, ಏಸುಕ್ರಿಸ್ತನ ಶಿಲುಬೆಯನ್ನು ಮಂಚದ ಕರೆಯಲ್ಲಿಟ್ಟುಕೊಂಡು ಅದರ ಬಳಿಯೇ ಕುರ್ಚಿಯಲ್ಲಿ ಕುಳಿತ.

"ಅಪ್ಪಾ! ನೀನು ಈಗಲೇ ನಮ್ಮ ಜೊತೆ ನಮ್ಮ ಮನೆಗೆ ಬರಬೇಕು. ನಮ್ಮ ಹೂದೋಟ ಈಗ ಬಲು ರಮ್ಯವಾಗಿದೆ. ನಿನಗೆ ಬೇಕಾದ ಎಲ್ಲ ಅನುಕೂಲತೆಗಳನ್ನು ಮಾಡಿಕೊಡುವೆವು. ಇನ್ನು ಮುಂದೆ ನೀನು ಇಂಥ ಕಷ್ಟವನ್ನು ಅನುಭವಿಸಬಾರದು," ಎಂದು ಕೋಸೆಟ್ಟೆ ಹೇಳಿದಳು.

ಅದಕ್ಕೆ ಜೀನ್‌ವಾಲ್‌ಜೀನ್, "ನನ್ನ ಕಷ್ಟದ ಸಂಗತಿಯೊಂದು ವಿಶೇಷವಲ್ಲ. ಲೋಕದ ಪಾಪಕ್ಕಾಗಿ ತನ್ನ ಜೀವವನ್ನು ಬಲಿದಾನ ಮಾಡಿದ ಆ ಮಹಾತ್ಮನನ್ನು ನೆನೆದರೆ ನಮ್ಮ ಕಷ್ಟವೆಲ್ಲ ಎಷ್ಟರದು? ನಾನು ನಿಮ್ಮ ಮನೆಗೆ ಬರಲಾರೆ. ನನ್ನ ಕಾಲುಗಳು ಈಗಾಗಲೇ ಕೋಡಿಕೊಂಡು ಬರುತ್ತಿವೆ," ಎಂದು ಹೇಳಿ, ಶಿಲುಬೆಯನ್ನು ನೋಡುತ್ತ ಧ್ಯಾನದಲ್ಲಿ ಮಗ್ನನಾದ.

ಕೋಸೆಟ್ಟೆ ಜೀನ್‌ವಾಲ್‌ಜೀನನ ಕೈಹಿಡಿದು ನೋಡಿದಳು. ಅವೂ ತಣ್ಣಗಾಗತೊಡಗಿದ್ದುವು. ಅವಳು ಅವನನ್ನು ಮುಟ್ಟಿದ ಕೂಡಲೇ ಒಂದು ವಿದ್ಯುತ್‌ಪ್ರವಾಹ ಅವನಲ್ಲಿ ಹರಿದಂತೆ ಎಚ್ಚತ್ತ. ಹಾಗೆ ಎಚ್ಚತ್ತ ಕೂಡಲೇ, "ಮಾನ್ಸ್ಯರ್ ಮೇರಿಯಸರೇ, ಇನ್ನು ನೀವು ಕೋಸೆಟ್ಟೆಯ ರಕ್ಷಕರು. ನಿಮ್ಮ ಮದುವೆಗೆ ಮೊದಲು ನಾನು ನಿಮ್ಮನ್ನು ಸ್ವಲ್ಪ ದ್ವೇಷಿಸುತ್ತಿದ್ದೆ. ಈಗ ನೀವಿಬ್ಬರೂ ಒಂದೇ ಜೀವವಾಗಿರುವಿರಿ. ನನಗೂ ನೀವಿಬ್ಬರೂ ಒಂದೇ. ನಿಮಗೆ ನಾನು ಕೊಟ್ಟಿರುವ ಹಣವೆಲ್ಲ ನ್ಯಾಯವಾದ ಸಂಪಾದನೆ. ನೀವು ಆ ಹಣವನ್ನು ಉಪಯೋಗಿಸಿ ಸುಖವಾಗಿ ಬಾಳಬೇಕು," ಎಂದು ಹೇಳಿ ಮೇರಿಯಸ್ ಕೋಸೆಟ್ಟೆಯರು ತನ್ನ ಎಡಬಲದೊಳಗೆ ಕುಳಿತುಕೊಳ್ಳುವಂತೆ ಹೇಳಿದ. ಅನಂತರ ಪುನಃ, ಹೆಚ್ಚು ಸಮಯವಿರದವನಂತೆ ಹೇಳಿದ. "ನನ್ನ ಅಂತ್ಯ ಸಮೀಪಿಸುತ್ತಿದೆ. ಕೆಲವು ಸಂಗತಿಗಳನ್ನು ನಿಮಗೆ ತಿಳಿಸಬೇಕೆಂದಿರುವೆನು. ಕೋಸೆಟ್ಟೆಯನ್ನು ನಾನು ಮೊದಲಬಾರಿಗೆ ನೋಡಿದ್ದು ಮೊಂಟ್‌ಫರ್ಮಿಯಲಿನಲ್ಲಿ—ನಡುರಾತ್ರಿ, ಕೋಡುತ್ತಿದ್ದ ಚಳಿಯಲ್ಲಿ. ಅನಂತರ ಅವಳ ಗೊಂಬೆ. ಕಾಡಿನೊಳಗೆ ಪ್ರಯಾಣ. ಮುಂದೆ ಎದ್ದುತೋರುವ ಚಿತ್ರವೆಂದರೆ ಆ ದಿನ ಕಾನ್ವೆಂಟಿನಲ್ಲಿ. ಲಕ್ಸಂಬರ್ಗಿನ ನಮ್ಮ ತಿರುಗಾಟ. ಆಖೈರು ಚಿತ್ರ ರೂ'ಪ್ಲಮೆಟಿನದ್ದು. ನನಗೆ ಆನಂದದಾಯಕವಾಗಿ ಇವೆ. ಕೋಸೆಟ್ಟೆ ಎದುರೇ ಇಲ್ಲದಿದ್ದಾಗ ಈ ನೆನವರಿಕೆಗಳೆಲ್ಲ ಜೀವಕಳೆಯಿಂದ ನನಗೆ ಎದ್ದು ಕಾಣುವುವು. ಅವಳ ಬಾಲ್ಯದ ದುಸ್ತನ್ನು ಆಲಿಂಗಿಸಿ, ಮುತ್ತಿಟ್ಟು ಸಂತೋಷಿಸುವೆನು. ಅದನ್ನು ಕಾಪಾಡಿ ಬಂದು, ಈಗ ನನ್ನ ಜೊತೆಯಲ್ಲೇ ಮಂಚದ ಮೇಲಿಟ್ಟುಕೊಂಡಿದ್ದೇನೆ. ಈ ನೆನವರಿಕೆಯ ಜೊತೆಯಲ್ಲೊಮ್ಮೆ ತೆನಾರ್ಡಿಯರನನ್ನೂ ಕಾಣುವುದುಂಟು. ಅವನು ಶುದ್ಧ ಬುದ್ಧಿಶೂನ್ಯ. ದೇವರು ಅವನನ್ನು ನಿರ್ಮಾಣಮಾಡಿ ಇರಗೊಟ್ಟ ಮೇಲೆ ನಾವು ಅವನನ್ನು ಕ್ಷಮಿಸಬೇಕು. ಇನ್ನೊಂದು ವಿಷಯ ಹೇಳಬೇಕಾದದ್ದಿದೆ. ಅದು ಕೋಸೆಟ್ಟೆಯ ತಾಯಿಯ ಕುರಿತು. ಅವಳ ಹೆಸರು ಫ್ಯಾಂಟೈನ್. ಅದು ಪರಮಪವಿತ್ರವಾದ ಹೆಸರು. ಅವಳು ಅನುಭವಿಸದಿದ್ದ ಕಷ್ಟವಿಲ್ಲ. ಕೋಸೆಟ್ಟೆಯ ಸುಖಸಂತೋಷಗಳಿಗೆ ಒಂದು ಪ್ರಮಾಣನ್ನು ಕಲ್ಪಿಸಿ

ಹೇಳಬಹುದಾದರೆ ಅಷ್ಟೇ ಪ್ರಮಾಣದಲ್ಲಿ ಫ್ಯಾಂಟೈನಳು ಕಷ್ಟಗಳನ್ನು ಅನುಭವಿಸಿರುವಳು. ಅವಳನ್ನು ಸ್ಮರಿಸಿದಾಗಲೆಲ್ಲ ನೀವು ಭಕ್ತಿಯಿಂದ ನಮಸ್ಕರಿಸಬೇಕು. ಆ ಕಪಾಟಿನಲ್ಲಿ ಐನೂರು ಫ್ರ್ಯಾಂಕುಗಳಿವೆ. ಅದನ್ನೆಲ್ಲ ಬಡವರಿಗೆ ಹಂಚಿಬಿಡಿ. ನಾನು ಸಾಯುವೆನೆಂದು ನೀವು ದುಃಖಿಸಬಾರದು. ಮನುಷ್ಯ ಮರಣಕ್ಕೆ ಅಂಜುವುದಿಲ್ಲ, ತಾನು ಬದುಕಿರಲಾರೆನಲ್ಲ ಎಂದು ಮಾತ್ರ ಅವನು ದುಃಖಿಸುವನು.

"ನನಗೆ ನನ್ನ ಗುರುವಿನ ಪ್ರಭಾಯುತ ರೂಪ ಮಾರ್ಗದರ್ಶಕವಾಗಿ ಮೇಲೆ ನಿಂತಿದೆ. ನಾನು ಹೋಗುವೆನು. ಆ ಮೇಜಿನ ಮೇಲಿರುವ ದೀಪಸ್ತಂಭಗಳನ್ನು ನಿಮಗೆ ಆಶೀರ್ವಾದ ಪೂರ್ವಕವಾಗಿ ಕೊಟ್ಟಿರುವೆನು. ಈ ಅಮೂಲ್ಯ ವಸ್ತುಗಳು ನಿಮ್ಮ ಮನೆಯನ್ನು ಬೆಳಗಲಿ. ಇವುಗಳಿಂದ ನಿಮ್ಮ ಮನೆ ದೇವಮಂದಿರವಾಗಲಿ. ನಾನು ಪರಲೋಕದಿಂದಲೇ ಆದರೂ ಆಗಿಂದಾಗ್ಗೆ ಬಂದು ನಿಮ್ಮನ್ನು ನೋಡುವೆನು. ನನಗಾಗಿ ಆಡಂಬರದ ಗೋರಿ ಕಟ್ಟಿಸಬೇಡಿ. ಶ್ಮಶಾನದ ಒಂದು ಮೂಲೆಯಲ್ಲಿ ಗುರುತಿಗಾಗಿ ಮಾತ್ರ ಒಂದು ಕಲ್ಲು ಇಟ್ಟರೆ ಸಾಕು. ಅಮ್ಮಾ, ಕೋಸೆಟ್ಟೆ! ಕಾನ್ವೆಂಟಿನಲ್ಲಿ ಬೆಳೆದ ನಿನಗೆ ಈ ವಿಷಯದ ತಿಳಿವಳಿಕೆ ಇರಬಹುದು. ಸಂಜೆ ತಂಗಾಳಿ ಬೀಸಿ, ಹೂವಿನ ಪರಿಮಳಕ್ಕಾಗಿ ನೀನು ಒಂಟಿಯಾಗಿ ನಿಂತಿರುವಾಗ ನಾನು ಬಂದು ನಿನ್ನನ್ನು ನೋಡಿ ಆನಂದಿಸಿ ಹೋಗುವೆನು," ಇಷ್ಟು ಹೇಳುತ್ತ ಅವನು ಕೊನೆ ಉಸಿರೆಳೆದ.

ಆ ರಾತ್ರಿ ಆಕಾಶವೆಲ್ಲ ಕರಿಮೋಡಗಳಿಂದ ತುಂಬಿತ್ತು. ಒಂದೇ ಒಂದು ನಕ್ಷತ್ರವಾದರೂ ಮಿನುಗುತ್ತಿರಲಿಲ್ಲ. ಪೃಥ್ವಿ ಆಕಾಶವೆಲ್ಲ ಕತ್ತಲೆಯ ಮಬ್ಬಿನಲ್ಲಿ ಮುಸುಕಿ ಹೋಗಿತ್ತು. ಸಮಸ್ತ ವಿಧದ ಚಲನೆಯೂ ಯಾವುದೋ ಒಂದು ಗಭೀರಪ್ರಸಂಗಕ್ಕಾಗಿ ಸ್ತಬ್ಧವಾಗಿದ್ದಂತೆ ತೋರುತ್ತಿತ್ತು. ಆದರೆ ದೇವದೂತನೊಬ್ಬ ಜೀನ್‌ವಾಲ್‌ಜೀನನನ್ನು ತನ್ನ ತೋಳುಗಳಲ್ಲಿ ಮೃದುವಾಗಿ ಎತ್ತಿಕೊಂಡು ಹಾರಲು ತನ್ನ ರೆಕ್ಕೆಗಳನ್ನು ಬಿಚ್ಚಿಕೊಂಡು ಮೋಡಗಳ ಹಿಂದೆ ಕಾದು ನಿಂತಿದ್ದಿರಬೇಕೆಂಬುದರಲ್ಲಿ ಸಂಶಯವಿಲ್ಲ.

೫. ಇಲ್ಲಿ ಮಲಗಿಹನೊಬ್ಬ . . . . . .

ಪಿರೆ ಲೆಚೈಸ್ ಶ್ಮಶಾನದ ಬಡವರ ವಿಭಾಗದಲ್ಲಿ, ಯಾವ ರಸ್ತೆಗೂ ಅಥವಾ, ಮೆರೆಯುವ ಅಲಂಕಾರ ಗಳುಳ್ಳ ಗೋರಿಗೂ ಸಮೀಪವಲ್ಲದ ಒಂದು ಮೂಲೆಯಲ್ಲಿ, ಬೆಳೆದು ಎದ್ದಿರುವ ಹಸುರು ಹುಲ್ಲಿನ ನಡುವೆ ಅಡಗಿರುವ ಒಂದು ಸಮಾಧಿಯಿದೆ. ಇದಕ್ಕೆ ಹೊದೆಸಿರುವ ಕಲ್ಲು ಒಂಟಿ ಶವವನ್ನು ಮುಚ್ಚುವಷ್ಟು ಮಾತ್ರ ಉದ್ದ, ಅಗಲವುಳ್ಳದ್ದಾಗಿದೆ. ಕಲ್ಲು ಬರೆ ಒರಟು ತರದ್ದು. ಅದರಲ್ಲಿ ಯಾವ ಕೆತ್ತನೆ ಕೆಲಸವೂ ಇಲ್ಲ. ಬೆಳೆದಿರುವ ಎತ್ತರದ ಹುಲ್ಲು ಸಮಾಧಿಯ ಸುತ್ತಲೂ ಆವರಿಸಿರುವುದರಿಂದ, ವಿರಳವಾಗಿಯಾದರೂ ಅತ್ತಕಡೆ ಯಾರೂ ಹೋಗುವುದಿಲ್ಲ. ಬಿಸಿಲು ಬಂದಾಗ ಓತಿಗಳು ಬಂದು ಅಲ್ಲಿ ಆಟವಾಡುವುವು, ಮತ್ತು ಹಕ್ಕಿಗಳು ಹುಲ್ಲಕ್ಕಿ ತಿಂದು ಹಾರಾಡುವುವು.

ಕಲ್ಲಿನ ಮೇಲೆ ಹೆಸರಿಲ್ಲ, ಕವನ ಶ್ಲೋಕಗಳಿಲ್ಲ, ಅದು ಅನಾಮಧೇಯವಾಗಿದೆ. ಕೇವಲ ಕಲ್ಲೇ ಆಗಿ ಉಳಿದಿದೆ. ಅದನ್ನು ಎಲ್ಲರೂ ಮರೆತಂತಿದೆ. ಆದರೂ, ಒಮ್ಮೆ ಅತ್ತಕಡೆ ಹೋಗಿದ್ದವರು ಯಾರೋ ಕಲ್ಲಿನ ಮೇಲೆ ಮುಂದೆ ತೋರುವ ವಾಕ್ಯಗಳನ್ನು ಪೆನ್ಸಿಲಿನಲ್ಲಿ ಬರೆದಿದ್ದರು. ಆ

ಬರಹವೂ ಬಿಸಿಲು ಮಳೆಗಳಿಂದ ವಿವರ್ಣ ಹೊಂದಿ, ಈಗ ಸಂಪೂರ್ಣ ಮಾಯವಾಗಿರಲೂ ಬಹುದು. ಆ ವಾಕ್ಯ ಹೀಗಿತ್ತು:

ಇಲ್ಲಿ ಮಲಗಿಹನೊಬ್ಬನನುಪಮಾಸದೃಶ ಗುಣ-
ವಂತ ಜೀವನದ ದಂದುಗಗಳ ಋಜುಮಾರ್ಗದಿಂ-
ದೆದುರಿಸುತ ಪೀಯೂಷ ಹರಿಸಿಹ ಯಶಃಕಾಯ :
"ಸತ್ಯಂವದ ಧರ್ಮಂಚರ" ಪ್ರತ್ಯಕ್ಷರೂಪ !

ಮೂಕನಾಗಿರಬೇಕೋ ಈ ಜಗದೊಳು
ಜೋಕ್ಯಾಗಿರಬೇಕೋ ||ಪ ||
ಕಾಕು ಕುಹಕರ ಸಂಗ ನೂಕಿರಬೇಕೋ
ಲೋಕೇಶನೊಳಗೇಕಾಗಿರಬೇಕೋ || ಅಪ ||
ಕಚ್ಚುವ ನಾಯಿಯಂತೆ ಬೊಗಳ್ವರೋ
ಹುಚ್ಚರಂದದೊಳಿಹರೋ ಎಚ್ಚರಿಲ್ಲದವರೋ
ಲುಚ್ಚೇರೋ ನಾಚಿಕಿ ತೊರದಿಹರೋ
ಮುಚ್ಚಿದಾ ಸುದ್ದಿಯ ಬಚ್ಚಿಡದಂಥಾ
ಕುತ್ಸಿತ ಮನುಜರನಗಲಿರಬೇಕೋ || ೧ ||
ಲೋಕನುಡಿಯ ಮಾತಾಡುವರೋ
ಕುಹಕ ಬುದ್ಧಿಯ ಜನರೋ
ತಾಕು-ತಗಲು ನುಡಿಯನಾಡ್ವರೋ
ತೂಕನರಿಯದವರೋ
ಸೂಕರ ಮನುಜರ ಸಂಗತಿ ಹಿಂಗಿಸಿ
ಶ್ರೀಕರಬ್ರಹ್ಮತಾನಾಗಿರಬೇಕೋ || ೨ ||
ಅಡಿಗಡಿಗೆ ನುಡಿಯಬೇಕೋ ಗುರುವಿನಾ
ಅಡಿಯ ಪಿಡಿಯಬೇಕೋ
ಕಡುಮದವನಳಿಯಬೇಕೋ ದುರ್ಜನರಾ
ನಡತಿಯ ಬಿಡಬೇಕೋ
ಪೊಡವಿಪ ಶಿಶುನಾಳ ಒಡೆಯನ ಕಂಡು
ಗುಡಿಪುರ ಕಲ್ಮನ ಕೂಡಿರಬೇಕು || ೩ ||


ಶಿಶುನಾಳ ಶರೀಫರ ಈ ಅನುಭಾವೋಕ್ತಿಯ ಸ್ವಾರಸ್ಯವೇ
ಜೀನ್‌ವಾಲ್‌ಜೀನನ ಜೀವನಸಾರಸರ್ವಸ್ವ

ಅತ್ರಿ ಬುಕ್ ಸೆಂಟರ್ ಲಭ್ಯ ಶೀರ್ಷಿಕೆಗಳು ಜನವರಿ ೨೦೦೨

೧. ಅಕ್ಷಮಾಲಾ (ಮಕ್ಕಳ ಕಥೆಗಳು), ಲೇ : ಜಿ. ಎ. ರುಕ್ಮಿಣಿಮಾಲಾ . . . ೧೫
೨. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ, ಲೇ : ಡಿ. ಎನ್. ಶಂಕರಭಟ್ಟ . . . ೧೨೦
೩. ಕಾಡುಪ್ರಾಣಿಗಳ ಜಾಡಿನಲ್ಲಿ, ಲೇ : ಕೆ. ಉಲ್ಲಾಸ ಕಾರಂತ . . . ೪೫
೪. ದುಃಖಾರ್ತರು, ಅನುವಾದ : ಎ. ಪಿ. ಸುಬ್ಬಯ್ಯ . . . ೭೦
೫. ನನ್ನ ಬೆಲ್ಜಿಯಮ್ ಪ್ರವಾಸ, ಲೇ : ಭಾರತೀ ಭಟ್ . . . ೫೦
೬. ನಮ್ಮ ಜಪಾನ್ ಪ್ರವಾಸ, ಲೇ : ಗಂಗಾ ಬಿ. ರಾಜಪುರೋಹಿತ . . . ೬೦
೭. ನೃತ್ಯಲೋಕ, ಲೇ : ಕೆ. ಮುರಲೀಧರರಾವ್ . . . ೩೦೦
೮. ಪುಸ್ತಕ ಮಾರಾಟ ಹೋರಾಟ, ಲೇ : ಜಿ. ಎನ್. ಅಶೋಕವರ್ಧನ . . . ೨೫
೯. ಮಾರಿಷಾ ಕಲ್ಯಾಣ (ಯಕ್ಷಗಾನ ಪ್ರಸಂಗ), ಲೇ : ಅಮೃತ ಸೋಮೇಶ್ವರ . . . ೧೮

ಜಿ. ಟಿ. ನಾರಾಯಣರಾಯರ ಕೃತಿಗಳು

೧. ಆಲ್ಬರ್ಟ್ ಐನ್‌ಸ್ಟೈನ್ : ಮಾನವೀಯ ಮುಖ (ಅನುವಾದ) . . . ೨೭
೨. ಉಲ್ಲೇಖನೀಯ ಐನ್‌ಸ್ಟೈನ್ (ಅನುವಾದ) . . . ೩೦
೩. ಋಷಿವಾಕ್ಯ ವಿಜ್ಞಾನಕಲೆ (ತತ್ತ್ವಶಾಸ್ತ್ರ-ವಿಜ್ಞಾನ ಜಿಜ್ಞಾಸೆ) . . . ೧೫
೪. ಎನ್‌ಸಿಸಿ ದಿನಗಳು (ಅನುಭವಕಥನ) . . . ೫೫
೫. ಐನ್‌ಸ್ಟೈನ್ ಬಾಳಿದರಿಲ್ಲಿ (ವೈಜ್ಞಾನಿಕ ಜೀವನಚರಿತ್ರೆ) . . . ೫೫
೬. ಕೃಷ್ಣವಿವರಗಳು (*Black Holes*) . . . ೩೦
೭. ಕೊಡಗಿನ ಸುಮಗಳು (ಜಾನಪದ ಮೂರಿಯ ಕಥೆಗಳು) . . . ೨೦
೮. ಕೊಪರ್ನಿಕಸ್ ಕ್ರಾಂತಿ (ಖಗೋಳ ವಿಜ್ಞಾನೇತಿಹಾಸ) . . . ೩೦
೯. ಚಂದ್ರಶೇಖರ್ ಪರಿಮಿತಿ (ವಿಶ್ವಭೌತಸ್ಥಿರಾಂಕದ ಆವಿಷ್ಕಾರ) . . . ೧೫
೧೦. ಜಾತಕ ಮತ್ತು ಭವಿಷ್ಯ (ನಾಳೆಯನ್ನು ಇಂದು ಅರಿಯಬಹುದೇ?) . . . ೧೫
೧೧. ಧೂಮಕೇತು (ಅದೃಶ್ಯಲೋಕದ ಅನಾದಿ ಕಾಲದ ಅಪೂರ್ವ ಅತಿಥಿ) . . . ೨೦
೦೨. ನವಕರ್ನಾಟಕ ಕನ್ನಡ ವಿಜ್ಞಾನಪದವಿವರಣ ಕೋಶ (ಪ್ರಸಂ) . . . ೫೦೦
೧೩. ಫರ್ಮಾ ಯಕ್ಷಪ್ರಶ್ನೆ (*Fermat's Last Theorem*—ಸಿದ್ಧವಾಗುತ್ತಿದೆ)
೧೪. ಬಾನಬಯಲಾಟ ಗ್ರಹಣ . . . ೧೦
೧೫. ರಾಮಾನುಜನ್ ಬಾಳಿದರಿಲ್ಲಿ . . . ೨೮
೧೬. ವಿಜ್ಞಾನ ಸಪ್ತರ್ಷಿಗಳು . . . ೩೫
೧೭. ವಿಶ್ವದ ಕಥೆ . . . ೧೮
೧೮. ವೈಜ್ಞಾನಿಕ ಮನೋಧರ್ಮ (*Scientific Temper*) . . . ೫೦
೧೯. ಶ್ರುತಗಾನ (ಕಲೆ, ಕಲಾವಿದರ ಬಗೆಗಿನ ಲೇಖನ ಸಮುಚ್ಚಯ) . . . ೧೨
೨೦. ಸಪ್ತಸಾಗರದಾಚೆಯೆಲ್ಲೋ... (ಚಂದ್ರಶೇಖರ್ ದರ್ಶನ, ಸಂವಾದ) . . . ೬೦
೨೧. ಸವಾಲನ್ನು ಎದುರಿಸುವ ಛಲ (ವ್ಯಕ್ತಿತ್ವ ವಿಕಾಸ) . . . ೩೦
೨೨. ಸುಬ್ರಹ್ಮಣ್ಯನ್ ಚಂದ್ರಶೇಖರ್ (ವಿಜ್ಞಾನ ಜೀವನ ವೃತ್ತಾಂತ) . . . ೫೫
೨೩. ಸೂಪರ್ನೋವಾ (ನಾಕ್ಷತ್ರಿಕಾಸ್ಫೋಟನೆ) . . . ೨೪
೨೪. ಸೂರ್ಯನ ಸಾಮ್ರಾಜ್ಯ . . . ೧೨
೨೫. *Crossing the Dateline* . . . 40
(Meeting with S. Chandrasekhar, Chicago)
೨೬. *Scientific Temper* . . . 15
೨೭. *With the Great Minds* . . . 30
(Ramanujan, Raman, Chandrasekhar, Muralidhara Rao and Suresh)




ವಿಕ್ಟರ್-ಮಾರಿ ಹ್ಯೂಗೊ (೧೮೦೨-೮೫)

ಫ್ರೆಂಚ್ ಕವಿ, ಕಾದಂಬರಿಕಾರ, ನಾಟಕಕರ್ತೃ, ವಿಮರ್ಶಕ ಮತ್ತು ರಾಜಕಾರಣಿ. ಈತನ ಪ್ರಭೆ ಮತ್ತು ಪ್ರಭಾವ ಅಂದಿನಷ್ಟೇ ಇಂದು (೨೦೦೨) ಕೂಡ ಉಜ್ಜ್ವಲ. ಕಾರಣ? ಈ ಸಾಹಿತ್ಯಬ್ರಹ್ಮಗಿರಿ ಮತ್ತು ರಾಗಭಾವ ಕಾವೇರಿ ರಚಿಸಿದ ೪೮ ಬೃಹತ್ಸಂಪುಟಗಳು ಜಗತ್ತಿನ ೪೪ಕ್ಕಿಂತಲೂ ಹೆಚ್ಚಿನ ಭಾಷೆಗಳಿಗೆ ಅನುವಾದಿಸಲ್ಪಟ್ಟಿವೆ. *The Hunchback of Notredame* (೧೮೩೧), *Les Miserables* (೧೮೬೨), *Toilers of the Sea* (೧೮೬೬) ಸದಾ ಪ್ರಸ್ತುತ. "ಇದು ಬರಿ—ಬೆಳಗಲ್ಲೋ ಅಣ್ಣಾ!" ಅಲ್ಲವಿದು ಕಾಲ್ಪನಿಕ ಕಥೆ, ಬದಲು, ಮನುಕುಲದ ವ್ಯಥೆ, ಮೌಲ್ಯಗಳ ಗಾಥೆ.

ಕಾನೂನು ಕಟ್ಟಳೆಗಳನ್ನು ಅಮಾನುಷ ಯಾಂತ್ರಿಕ ದಕ್ಷತೆಯಿಂದ ಚಾಲೂಗೊಳಿಸುವ ಸಮಸ್ತ ಸಾಮಾಜಿಕ ಸನ್ನಿವೇಶಗಳಲ್ಲಿಯೂ ನಿಂದನೆ-ಖಂಡನೆ-ಭರ್ತ್ಸನೆ ಸಹಿತವಾದ ಒಂದು ವಿಕೃತ ಮಾನಸಿಕ ಸ್ಥಿತಿ ಉದ್ಭವಿಸುತ್ತದೆ. ನಾಗರಿಕತೆ-ಅಂಚಿನಾಚೆಗಿನ ನರಕಕೂಪಕ್ಕೆ ತಳ್ಳಲ್ಪಟ್ಟವರ ಮೂಕ ವೇದನೆ ಇದು. ಇಂಥವರ ಎದೆಯಾಳದ ದನಿ, ಮನದುಮ್ಮಳದ ಬನಿ, ಮಾನವೀಯತೆಯ ಗಣಿ, ಮತ್ತು ಬಯಕೆ ಹಂಬಲಗಳ ವಾಣಿ ಹ್ಯೂಗೊವಿರಚಿತ ಮಹಾಕಾದಂಬರಿ *Les Miserables.*

ಅಂತಿಮವಾಗಿ ಜೀವನ ಮೂರು ಸಂಚಾರೀಭಾವಗಳ ಸಂತತ ಕ್ಷೋಭೆ—ಕಾಠಿಣ್ಯ, ದೈನ್ಯ, ಕಾರುಣ್ಯ. ದುರ್ಯೋಧನ-ಕಾಠಿಣ್ಯ, ದ್ರೌಪದೀ-ದೈನ್ಯ, ಶ್ರೀಕೃಷ್ಣ-ಕಾರುಣ್ಯ, ಅಂತೆಯೇ, ಜೇವರ್ಟ್-ಕಾಠಿಣ್ಯ, ಜೀನ್‌ವಾಲ್‌ಜೀನ್-ದೈನ್ಯ, ಬಿಷಪ್-ಕಾರುಣ್ಯ (ಹೊದಿಕೆ ಚಿತ್ರ) ನಿದರ್ಶನಗಳು.

Les Miserables ಸುಮಾರು ೧೨೦೦ ಪುಟಗಳ ವಿಸ್ತಾರಾರ್ಣವ. ಇದನ್ನು ೩೨೦ ಪುಟಗಳ ಕನ್ನಡ-ಅಮೃತಸರೋವರಕ್ಕೆ ಸಾರವಿಳಿಸುವುದರಲ್ಲಿಯೂ ಮೂಲ-ಅನುವಾದಿತಗಳಲ್ಲಿ ವಸ್ತು-ಭಾವ-ಸನ್ನಿವೇಶಗಳ ನಡುವಿನ ಏಕ-ಏಕ ಸಂವಾದಿತ್ವ ಸಾಧಿಸುವುದರಲ್ಲಿಯೂ ಸಮಗ್ರವಾಗಿ ಮೂಲದ ಅಂತಸ್ಸತ್ತ್ವಕ್ಕೆ ಮರುವುಟ್ಟು ಕೊಡುವುದರಲ್ಲಿಯೂ ಎ. ಪಿ. ಸುಬ್ಬಯ್ಯನವರು (೧೯೦೧-೭೭) ಅನನ್ಯ ವೈದುಷ್ಯ, ಅಪಾರ ನಿಷ್ಠೆ ಮತ್ತು ಅಪ್ರತಿಮ ಪ್ರತಿಭೆ ಠೇವಣಿ ಹೂಡಿದ್ದಾರೆ.



ವಿಶ್ವಜ್ಞಾನದ ಸೇವಾಕೇಂದ್ರ
ಅರಿವಿನ ಬೆಳಕನು ಪಸರಿಪ ಚಂದ್ರ
ಪಂಡಿತ ಪಾಮರ ಪ್ರಜ್ಞಾಸಾಂದ್ರ
ಪುಸ್ತಕ ಲೋಕದಲಿದು ದೇವೇಂದ್ರ—

ಅತ್ರಿ ಬುಕ್ ಸೆಂಟರ್ (ಸ್ಥಾಪನೆ ೧೯೭೫)
೪ ಶರಾವತಿ ಕಟ್ಟಡ ಬಲ್ಮಠ ಮಂಗಳೂರು ೫೭೫೦೦೧
ದೂರವಾಣಿ ೦೮೨೪ ೪೨೫೧೬೧, ೪೯೨೩೯೭
e-mail : athreebook@sify.com

ರೂಪಾಯಿ ಎಪ್ಪತ್ತು